



ಶರಣ ವಾಙ್ಮಯದಲ್ಲಿ ಮೊದಲಿನಿಂದಲೂ ತಮ್ಮನ್ನು ಬೇರೂರಿಸಿಕೊಂಡ ಪುರಾಣಿಕರು, ಆ ವಚನಮಾನಸದ ಸಾರಸರ್ವಸ್ವವನ್ನು ಹೀರಿಕೊಂಡು, ಅದನ್ನು ಅರಗಿಸಿಕೊಂಡು ತಮ್ಮ ಸ್ವಾನುಭವದ ಬೀಜಗಳನ್ನಾಗಿ ಮಾಡಿಕೊಂಡು, ತಮ್ಮ ಸಮಕಾಲೀನ ಪ್ರಜ್ಞೆಯನ್ನು ಬಿತ್ತಿ ಬೆಳೆದ ಉದ್ಯಾನವಾಗಿದೆ.

– ಡಾ: ಜಿ.ಎಸ್. ಶಿವರುದ್ರಪ್ಪ

ಪುರಾಣಿಕರ ವಚನಗಳು ತಮ್ಮ ಆಧುನಿಕ ಅನುಭಾವ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಈ ವಚನಗಳಲ್ಲಿ ಅಭಿವ್ಯಕ್ತವಾಗಿರುವ ದುಗುಡ ಕಳಕಳಿಗಳೇ ಬಸವಳಿದ ಬಾಳಿಗೆ ಆಸೆ ಭರವಸೆಗಳನ್ನೂ, ಸಾಂತ್ವನವನ್ನೂ ನೀಡುತ್ತವೆ. ಹೋಲಿಕೆಯನ್ನು ಹೆಚ್ಚು ಬೆಳಸದೆ ಹೇಳುವುದಾದರೆ ಮುಖ್ಯ ಆಧುನಿಕ ವಚನಕಾರರಾದ ಶ್ರೀ ಜಚನಿ ಅವರಲ್ಲಿ ಚನ್ನಬಸವಣ್ಣನ ಪಾರಿಭಾಷಿಕತೆಯಿದೆ; ರಂಗಣ್ಣನವರಲ್ಲಿ ಬಸವಣ್ಣನ ವ್ಯಾವಹಾರಿಕತೆಯಿದೆ; ಪರಮೇಶ್ವರಭಟ್ಟರಲ್ಲಿ ಮಹಾದೇವಿಯಕ್ಕನ ಕಲಾತ್ಮಕತೆಯಿದೆ; ಸಿದ್ಧಯ್ಯ ಪುರಾಣಿಕರಲ್ಲಾದರೋ ಅಲ್ಲಮನ ಅನುಭಾವ ನಿಗೂಢತೆ ಸುಳಿಯುತ್ತದೆ.

– ಡಾ: ಹಾ.ಮಾ. ನಾಯಕ

ತಮ್ಮ 'ವಚನೋದ್ಯಾನ'ದಿಂದಲೇ ಆಧುನಿಕ ವಚನ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದ ಶ್ರೀ ಸಿದ್ಧಯ್ಯ ಪುರಾಣಿಕರು ಅದಕ್ಕೆ 'ನಂದನ'ವನ್ನು ಸೇರಿಸಿ ಆ ಪ್ರಾಂತವನ್ನು ಇನ್ನಷ್ಟು ವಿಸ್ತರಿಸಿದ್ದಾರೆ. ಅದು ಕಾಲಹಾರಕ ವಿಹಾರದ ವಿಶ್ರಾಂತಿ ಧಾಮವಲ್ಲ, ಕಾಲದ ರಹಸ್ಯವನ್ನರಿಯುವ ಜೀವನ ದರ್ಶನದ ಸಂಕ್ರಾಂತಿ ಸ್ಥಳ. ಅಂತರಂಗದ ಬಹಿರಂಗಗಳ ಪರಸ್ಪರ ಸಂಕ್ರಮಣದಿಂದ ಉತ್ಕ್ರಾಂತಿಯನ್ನು ಸಾಧಿಸುವ ಪುಣ್ಯ ಪ್ರತಿಭೆಯನ್ನು ಈ 'ನಂದನ'ದ ಮಂದಮಾರುತ ಹಿತಕರವಾಗಿ ಬೀಸುತ್ತಿದೆ. ಅದರ ಸ್ಪರ್ಶದಿಂದ ಉಂಟಾಗುವುದು ಜೀವನ ವಿಮುಖತೆಯನ್ನುಂಟುಮಾಡುವ ತನ್ಮಯತೆಯ ಮತ್ತಲ್ಲ; ಜಡತೆಯನ್ನು ಹೊಡೆದೋಡಿಸಿ ಜೀವನಶ್ರದ್ಧೆಯನ್ನು ಮೂಡಿಸುವ ಪ್ರಚೋದಕ ಶಕ್ತಿಯಾಗಿದೆ ಇಲ್ಲಿನ ಆಧ್ಯಾತ್ಮ... ಈ ಪ್ರವೃತ್ತಿಪರ ಜೀವನ ಮೌಲ್ಯಗಳನ್ನು ಕಲಾತ್ಮಕವಾಗಿ ನಿರೂಪಿಸುವ ಈ ಕೃತಿ ಇಂದಿನ ವಿಚಾರವಂತ ಯುಗಕ್ಕೆ ಪ್ರಿಯವಾಗುತ್ತದೆಂದು ನಂಬಿದ್ದೇನೆ.

– ಡಾ: ಎಚ್. ತಿಪ್ಪೇರುದ್ರಸ್ವಾಮಿ

ಎಲ್ಲಿ ಕೈ ಹಾಕಿದರೂ ಸೂಕ್ತಿ ಸುಮಗಳು ಸಿಗುತ್ತವೆ ಈ ತೋಟದಲ್ಲಿ. ಒಂದೇ ಒಂದು ಉದಾಹರಣೆ ಸಾಕು; 'ಇತಿಹಾಸ ಓದುವುದು ಇತಿಹಾಸ ನಿರ್ಮಿಸಲೆಂದು, ಇಸ್ವಿಗಳ ನೆನಪಿಡಲು ಅಲ್ಲ'. ಪರಂಪರೆಯ ಸಾರವನ್ನು ದೂರೀಕರಿಸದೆ ಗತ ಇತಿಹಾಸಕ್ಕೆ ವಿದಾಯ ಹೇಳಿ, ಹೊಸ ಇತಿಹಾಸವನ್ನು ನಿರ್ಮಿಸುವ ಕಳಕಳಿ 'ವಚನಾರಾಮ'ದ ರಚನೆಗಳಲ್ಲಿದೆ ಎಂಬುದು ಅದರ ಒಂದು ಮಹತ್ವ.

– ಸಿ.ಪಿ.ಕೆ.

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು

ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ)
ಸಮಗ್ರ ವಚನಗಳು



ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

## ಡಾ. ಸಿದ್ಧಯ್ಯ ಪುರಾಣಿಕರ
## (ಕಾವ್ಯಾನಂದ)

# ಸಮಗ್ರ ವಚನಗಳು



# ಡಾ. ಸಿದ್ಧಯ್ಯ ಪುರಾಣಿಕರ

## (‘ಕಾವ್ಯಾನಂದ’)

# ಸಮಗ್ರ ವಚನಗಳು

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

**Siddaiah Puranikara (Kavyananda) Samagra Vachanagalu,** by Siddaiah Puranika, Published by K.M. Gayitri IAS, Director, Dept. of Kannada and Culture, Kannada Bhavana, J.C. Road. Bengaluru-560002

ಈ ಆವೃತ್ತಿಯ ಹಕ್ಕು : **ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಪ್ರಕಾಶಕರು :

**ಕೆ.ಎಂ. ಗಾಯಿತ್ರಿ,** ಭಾ.ಆ.ಸೇ.
ನಿರ್ದೇಶಕರು
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

| | |
|---|---|
| ಮೊದಲನೆಯ ಮುದ್ರಣ | : ೨೦೦೯ |
| ಎರಡನೆಯ ಮುದ್ರಣ | : ೨೦೨೫ |
| ಪ್ರತಿಗಳು | : ೧೦೦೦ |
| ಪುಟಗಳು | : XX + ೮೩೬ =೮೫೬ |
| ಬೆಲೆ | : ರೂ.೩೨೦/– |

| | |
|---|---|
| First Print | : 2009 |
| Second Print | : 2025 |
| Copies | :1000 |
| Price | : 320/- |
| Pages | : XX + 836= 856 |

ಮುದ್ರಕರು
**ಶ್ರೀ ಐಶ್ವರ್ಯ ಪ್ರಿಂಟ್ಸ್**
ನಂ.೪, ೭ನೇ ಮುಖ್ಯರಸ್ತೆ, ಪಾಪಯ್ಯ ಗಾರ್ಡನ್,
ಬನಶಂಕರಿ ೩ನೇ ಹಂತ, ಬೆಂಗಳೂರು–೫೬೦ ೦೮೫
ಮೊಬೈಲ್ : ೯೯೮೬೨ ೧೦೫೫೮

# ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮತ್ತು ಸಮಗ್ರ ಗದ್ಯದ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆಯಾಗಿ ನಿಂತು ಕನ್ನಡವನ್ನು ಪುನರುಜ್ಜೀವಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ–ಸಂಸ್ಥೆಗಳಿಗೆ ಜೀವ ತುಂಬಿದವರು. ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು ೩೮ ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದ ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಕುವೆಂಪುರವರು ಡಾ. ಸಿದ್ಧಯ್ಯ ಪುರಾಣಿಕರು ಒಬ್ಬ ಅಪರೂಪದ ವ್ಯಕ್ತಿ ಎಂದು ಹೀಗೆ ಹೇಳಿದ್ದಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ – ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲೂ ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆಯೇ ಉಳಿದಿದೆ."

ಈ ಎಲ್ಲಾ ಸಮಗ್ರ ಕೃತಿಗಳನ್ನು ಹೊರತರಲು ಸಹಕರಿಸಿದ ಉಪ ನಿರ್ದೇಶಕರಾದ ಶ್ರೀ ಎನ್. ಕರಿಯಪ್ಪ ಅವರಿಗೆ ಮತ್ತು ಇತರ ಅಧಿಕಾರಿ ಸಿಬ್ಬಂದಿಗೆ, ಕರಡುಪ್ರತಿಯನ್ನು ತಿದ್ದಲು ನೆರವಾದ, ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಈ ಸಂಪುಟಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಐಶ್ವರ್ಯ ಪ್ರಿಂಟರ್ಸ್‌ನ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಲು ಅನುಮತಿ ನೀಡಿದ ಡಾ. ಸಿದ್ಧಯ್ಯ ಪುರಾಣಿಕರ ಪುತ್ರರಾದ ಶ್ರೀ ಪ್ರಸನ್ನಕುಮಾರ ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

– **ಶ್ರೀಮತಿ ಕೆ.ಎಂ. ಗಾಯಿತ್ರಿ** ಭಾ.ಆ.ಸೇ<br>
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br>
ಬೆಂಗಳೂರು

# ಮುನ್ನುಡಿ – ಮೊದಲ ಮುದ್ರಣ

ಡಾ. ಸಿದ್ಧಯ್ಯ ಪುರಾಣಿಕರ ವಚನ ಸಂಪುಟ ಈಗ ನಮ್ಮ ಮುಂದಿದೆ, ಇದರಲ್ಲಿ ವಚನೋದ್ಯಾನ, ವಚನನಂದನ ಹಾಗೂ ವಚನಾರಾಮ ಎಂಬ ಮೂರು ಸಂಪುಟಗಳ ಒಂದು ಸಾವಿರದ ಐದುನೂರಒಂದು ವಚನಗಳಿವೆ.

ವಚನೋದ್ಯಾನವು ಪ್ರಥಮ ಬಾರಿಗೆ ೧೯೭೭ರಲ್ಲಿ ಪ್ರಕಟವಾಗಿದ್ದು ಅದನ್ನು ಶ್ರೀ ತೋಂಟದ ಸಿದ್ಧಲಿಂಗೇಶ್ವರರಿಗೆ ಅರ್ಪಿಸಿದ್ದಾರೆ. ಐದುನೂರ ಇಪ್ಪತ್ತೈದು ವಚನಗಳ ಈ ಸಂಕಲನಕ್ಕೆ ಡಾ. ಹಾ.ಮಾ. ನಾಯಕರು ವಿಸ್ತಾರವಾದ ಮುನ್ನುಡಿ ಬರೆದಿದ್ದಾರೆ.

ವಚನನಂದನವು ೧೯೮೩ರಲ್ಲಿ ಪ್ರಕಟವಾಗಿದ್ದು ಅದನ್ನು ಡಾ. ಶಿವಕುಮಾರ ಸ್ವಾಮಿಗಳಿಗೆ ಅರ್ಪಿಸಲಾಗಿದೆ. ನಾಲ್ಕುನೂರ ಎಪ್ಪತ್ತೈದು ವಚನಗಳ ಈ ಸಂಪುಟಕ್ಕೆ ಡಾ.ಎಚ್. ತಿಪ್ಪೇರುದ್ರಸ್ವಾಮಿಗಳು ಮುನ್ನುಡಿ ಬರೆದಿದ್ದಾರೆ.

ವಚನಾರಾಮವು ೧೯೯೨ರಲ್ಲಿ ಪ್ರಕಟವಾಗಿದ್ದು ಅದನ್ನು ಅಣ್ಣ–ಅಕ್ಕ–ಅಲ್ಲಮರಿಗೆ ಅರ್ಪಿಸಲಾಗಿದೆ. ಡಾ.ಸಿ.ಪಿ.ಕೆ ಅವರು ಇದಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ.

ವಚನೋದ್ಯಾನವು ೧೯೭೭ ಮತ್ತು ೨೦೦೦ದಲ್ಲಿ ಎರಡು ಮುದ್ರಣಗಳನ್ನು ಕಂಡರೆ, ವಚನನಂದನ ೧೯೮೩ ಮತ್ತು ೨೦೦೦ಗಳಲ್ಲಿ ಎರಡು ಮುದ್ರಣಗಳನ್ನು ಕಂಡಿದೆ. ವಚನಾರಾಮವು ೧೯೯೨ರಲ್ಲಿ ಮುದ್ರಣವಾಗಿದ್ದು, ಈಗ ಈ ಮೂರು ಸಂಪುಟಗಳು ಒಂದಾಗಿ ೨೦೦೯ರಲ್ಲಿ ಪ್ರಕಟವಾಗುತ್ತಿರುವುದು ಮಹತ್ವದ ಸಂಗತಿಯಾಗಿದೆ.

ಡಾ. ಸಿದ್ಧಯ್ಯ ಪುರಾಣಿಕರು ಆಧುನಿಕ ವಚನಕಾರರಲ್ಲಿ ಮೊದಲಿಗರೇನಲ್ಲ. ಹರ್ಡೇಕರ್ ಮಂಜಪ್ಪನವರನ್ನು ಬಹುಶಃ ಮೊದಲನೆಯ ಆಧುನಿಕ ವಚನಕಾರರೆನ್ನಬಹುದು. ಜೀರಿಗೆ ಬಸವಲಿಂಗಪ್ಪನವರು ಬರೆದರೆನ್ನಲಾದ ವಚನಗಳು ಕೇವಲ ಐದು. ಅವುಗಳು ಕೂಡ ಬಸವೇಶ್ವರ ಕೀರ್ತನೆಗಳಲ್ಲಿ ಇಪ್ಪತ್ತೇಳನೆ ಕೀರ್ತನೆಯ ಒಳಗೆ ಬರುವ ಐದು ವಚನಗಳಾಗಿವೆ. ಅವರು ಅವುಗಳನ್ನು (ವಚನ) ಎಂದೇ ಹೆಸರಿಸಿದ್ದಾರೆ. ಆದರೆ ಹರ್ಡೇಕರ ಮಂಜಪ್ಪನವರ

ಮೂವತ್ತಕ್ಕೂ ಹೆಚ್ಚಿನ ವಚನಗಳು 'ಜನ ಸೇವಕನ ವಚನ'ಗಳೆಂದೇ ಪ್ರಕಟವಾಗಿದ್ದು ವಚನಸಾಹಿತ್ಯದ ಸ್ಮೃತಿಗಳಿಂದ ಕೂಡಿವೆ. ಇರಲಿ.

ಡಾ. ಸಿದ್ಧಯ್ಯ ಪುರಾಣಿಕರ ಈ ವಚನ ಸಂಪುಟ ಮಹತ್ವದ್ದಾಗಿರುವುದು ಎರಡು ಪ್ರಧಾನ ಅಂಶಗಳಿಂದ. ಒಂದನೆಯದು, ಅವರ ಪ್ರಥಮ ವಚನ ಸಂಕಲನ ಈ ವಚನೋದ್ಯಾನವು ರಾಷ್ಟ್ರೀಯ ಮಟ್ಟದ ಪುರಸ್ಕಾರ ಪಡೆದಿರುವುದು. ಹೀಗೆನ್ನುವಾಗ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದ ಎಸ್.ವಿ. ರಂಗಣ್ಣನವರ 'ರಂಗ ಬಿನ್ನಪ್ಪ'ವನ್ನು ಅಲಕ್ಷಿಸುತ್ತಿಲ್ಲ. ಆದರೆ ವಚನಪ್ರಕಾರ ಹಾಗೂ ಕಾವ್ಯಗುಣ ಈ ಎರಡೂ ದೃಷ್ಟಿಗಳಿಂದ ಸಿದ್ಧಯ್ಯ ಪುರಾಣಿಕರ ವಚನಗಳು ಮೇಲುಗೈ ಪಡೆಯುತ್ತವೆ. ಎರಡನೆಯದಾಗಿ ಕವಿಯಾದ ಸಿದ್ಧಯ್ಯ ಪುರಾಣಿಕರಿಗೆ ವಚನಪ್ರಕಾರ ಅತ್ಯಂತ ಸಹಜಾಭಿವ್ಯಕ್ತಿಯಾಗಿರುವಂತೆ ತೋರುವುದು.

೨

ವಚನಗಳ ರಚನೆಯ ಬಗೆಗೆ ಸಿದ್ಧಯ್ಯ ಪುರಾಣಿಕರೇ ಹೇಳಿರುವ ಈ ಮಾತುಗಳನ್ನು ಗಮನಿಸಿ : "ಎರಡು ದಶಕಗಳ ಆಚೆಗೆ ನಾನು ಮನಸ್ಸಿಲ್ಲದ ಮನಸ್ಸಿನಿಂದ ವಚನಗಳನ್ನು ಬರೆಯಲು ಆರಂಭಿಸಿದಾಗ ನೂರು ವಚನಗಳನ್ನಾದರೂ ಮುಟ್ಟುವೆನೋ ಇಲ್ಲವೋ ಎಂಬ ಶಂಕೆ ನನಗಿದ್ದಿತು." ಕನ್ನಡದ ಪುಣ್ಯ-ಮನಸ್ಸಿಲ್ಲದ ಮನಸ್ಸಿನಿಂದ ಆರಂಭಿಸಿದ ಈ ವಚನ ರಚನೆ ಅವರ ಕವಿಹೃದಯದ ಪುರಾಣಿಕರ ಪ್ರತಿಭೆಗೆ ಹೇಳಿ ಮಾಡಿಸಿದಂತಿದ್ದಿತು. ಹೀಗಾಗಿ ಅವರು ಸಾವಿರದ ಐದುನೂರಒಂದು ವಚನಗಳನ್ನು ರಚಿಸಿದರು.

ಈ ಮೂರು ಸಂಕಲನಗಳಲ್ಲಿ ಮೊದಲನೆ ಮತ್ತು ಮೂರನೆ ಸಂಕಲನಗಳು ಪುರಾಣಿಕರ ಪ್ರತಿಭೆಯ ಕಾರಣವಾಗಿ ಬಹು ಪ್ರಮುಖವೆನಿಸಿವೆ. ವಚನೋದ್ಯಾನದಲ್ಲಿ ಅವರು ಹೇಳಿರುವ ಮಾತುಗಳಲ್ಲಿ ಮುಖ್ಯವಾದುದು: "....ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದಡೆ ಅದು ವಚನವಯ್ಯ ಸ್ವತಂತ್ರಧೀರ ಸಿದ್ಧೇಶ್ವರ." ಹೀಗಾಗಿಯೆ ಅವರ ವಚನತಂತ್ರವೂ ಸಾಕಷ್ಟು ಪ್ರತಿಭಾಪೂರ್ಣವೇ ಆಗಿದೆ. ಉದಾಹರಣೆಗೆ ಕೆಳಗಿನ ವಚನ ಗಮನಿಸಿ :

ವಿದ್ಯೆ ಬಂತು ವಿನಯ ಹೋಯ್ತು
ಬುದ್ಧಿ ಬಂತು ಶ್ರದ್ಧೆ ಹೋಯ್ತು
ಶ್ರದ್ಧೆ ಬಂತು ವಿವೇಚನೆ ಹೋಯ್ತು
ಸಮೃದ್ಧಿ ಬಂತು ಸಂಸ್ಕೃತಿ ಹೋಯ್ತು

ವಿಜ್ಞಾನ ಬಂತು ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು
ದೀರ್ಘಾಯುಷ್ಯ ಬಂತು ಜೀವನಸ್ವಾರಸ್ಯ ಹೋಯ್ತು
ಬೋಧನೆ ಬಂತು ಸಾಧನೆ ಹೋಯ್ತು
ಮಾತು ಬಂತು ಕೃತಿ ಹೋಯ್ತು
ಜಾತಿ ಬಂತು ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ ಸ್ವತಂತ್ರಧೀರ ಸಿದ್ಧೇಶ್ವರ ಹೋದ.

ಕೊನೆಯ ಎರಡು ಸಾಲುಗಳಲ್ಲಿ ಪಡೆದುಕೊಳ್ಳುವ ತಿರುವು ವಚನದ ಶ್ರೇಷ್ಠತೆಗೆ ಕಾರಣವಾದಂತೆಯೇ ಅವರ ಸ್ಫೂರ್ತಿಮೂಲವಾದ ಸ್ವತಂತ್ರ ಸಿದ್ಧೇಶ್ವರನ ಪ್ರಶಂಸೆಯೂ ಆಗಿದೆ. ಹನ್ನೆರಡು ಸಾಲುಗಳ ಈ ವಚನ ಶಿಲ್ಪದಲ್ಲಿ ಸ್ವಲ್ಪ ಶಿಥಿಲತೆಯಾಗಿಲ್ಲವೇ ಅನ್ನಿಸಬಹುದು. ಆದರೆ ಈ ವಚನವನ್ನು ಗಮನಿಸಿ :

ಫಲವಿತ್ತ ರೆಂಬೆ ಬಾಗುತ್ತದೆ
ಗೊನೆ ಹೊತ್ತ ಬಾಳೆ ಬಾಗುತ್ತದೆ
ತೆನೆ ಹೆತ್ತ ದಂಟು ಬಾಗುತ್ತದೆ
ಏನೇನೂ ಇಲ್ಲದುದು
ಬೀಗುತ್ತದೆ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರ.

ಮೊದಲ ಮೂರು ಸಾಲುಗಳ ಎರಡನೆಯ ಪದಗಳು ಇತ್ತ, ಹೊತ್ತ, ಹೆತ್ತ ಇವುಗಳಲ್ಲಿನ ಪ್ರಾಸ ಮತ್ತು ಪದಬಳಕೆಯ ವೈವಿಧ್ಯವನ್ನು ಗಮನಿಸಬೇಕು. ಗಟ್ಟಿಶಿಲ್ಪದ ವಚನವೊಂದು ನಮ್ಮೆದುರು ಸುಳಿಯುತ್ತದೆ.

ಹೂವು ತನ್ನೆದೆಯ ತೆರೆದರೆ
ಅಂದ, ಸುಗಂಧ, ಮಕರಂದಗಳ ಸುಗ್ಗಿ
ಸಿಂಪುಗಳು ತನ್ನೆದೆಯ ತೆರೆದರೆ
ಮುತ್ತುಗಳು ಬರುವವು ನುಗ್ಗಿ
ಹನುಮ ತನ್ನೆದೆಯ ತೆರೆದರೆ

ಸೀತಾರಾಮರ ಚಿತ್ರ
ಇರುಳು ತನ್ನೆದೆಯ ತೆರೆದರೆ ಕೋಟಿ ಕೋಟಿ ನಕ್ಷತ್ರ
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು ನಿಧಿ, ನಿಧಾನ
ನನ್ನೆದೆಯಲ್ಲಿ ನೀನಾದರೂ ಇರಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ

ಇಲ್ಲಿನ ಐನೂರ ಇಪ್ಪತ್ತೈದು ವಚನಗಳ ಗುಣ ಇದೆ ರೀತಿಯದಾಗಿರುವುದರಿಂದ ಡಾ.ಹಾ.ಮಾ.ನಾಯಕರು ತಮ್ಮ ಮುನ್ನುಡಿಯಲ್ಲಿ

"…..ಸಿದ್ಧಯ್ಯ ಪುರಾಣಿಕರಲ್ಲಾದರೋ ಅಲ್ಲಮನ ಅನುಭಾವರ ನಿಗೂಢತೆ ಸುಳಿಯುತ್ತದೆ" ಎಂದು ಪ್ರಶಂಸಿಸಿದ್ದಾರೆ. ಇದಕ್ಕು ಮಿಗಿಲಾಗಿ ಕನ್ನಡಕ್ಕೆ ಪ್ರಥಮವಾಗಿ ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತು ನೀಡುವ ಪ್ರಶಸ್ತಿಗೆ ಪಾತ್ರವಾಗಿ ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸಿತು.

ಅವರ ಎರಡನೆಯ ವಚನ ಸಂಪುಟ 'ವಚನ ನಂದನ'. ಬಹುಶಃ ಮನಸ್ಸಿಲ್ಲದ ಮನಸ್ಸಿನ ರಚನೆಗಳು ಹೆಚ್ಚಿನವು ಎನ್ನಬಹುದೇನೋ. ಇದಕ್ಕೆ ಕಾರಣ ವಚನೋದ್ಯಾನದಲ್ಲಿ ಸೇರಲು ಯೋಗ್ಯವಿಲ್ಲವೆಂದು ಬಂದಿದ್ದ ವಚನಗಳಲ್ಲಿ ಕೆಲವಾದರೂ ಪ್ರಕಟನಾರ್ಹವೆಂದು ತೋರಿದವಂತೆ. "ಅವುಗಳನ್ನು ಪ್ರಕಟಿಸದಿರುವುದೆಂದರೆ ಭ್ರೂಣ ಹತ್ಯೆಗೈದಂತೆ ಎಂದೆನಿಸಿತು. ಆದರೆ ಆದಿಷ್ಟನ್ನೇ ಒಂದು ಸಂಗ್ರಹವಾಗಿ ಪ್ರಕಟಿಸುವುದು ಹೇಗೆ?" ಎಂದು ಅವರಿಗನ್ನಿಸಿ ವಚನ ನಂದನಕ್ಕಾಗಿ ಇನ್ನಷ್ಟು ವಚನಗಳಲ್ಲಿ ಬರೆದು ಸೇರಿಸಿ ಪ್ರಕಟಿಸಿದರಂತೆ.

ವಚನೋದ್ಯಾನಕ್ಕೆ ಹೋಲಿಸಿದರೆ ವಚನ ನಂದನದ ರಚನೆಗಳು ಸ್ವಲ್ಪ ಮಂಕಾಗಿ ಕಾಣಿಸಬಹುದು. ಇಲ್ಲಿನ ರಚನೆಗಳು ವಚನೋದ್ಯಾನದ ರಚನೆಗಳಿಗಿಂತ ಹೆಚ್ಚು ಛಂದೋಬದ್ಧತೆಯತ್ತ ಹೊರಳಬಹುದು. ಆದರೂ ಸಿದ್ಧಯ್ಯ ಪುರಾಣಿಕರ ಪ್ರತಿಭೆಯ ಮಿಂಚು ಮಿಲನವಾಗುತ್ತಲೇ ಹೋಗುವುದನ್ನು ಮರೆಯಲಾಗದು. ಉದಾಹರಣೆಗೆ ಈ ಕೆಲವು ಉಕ್ತಿಗಳನ್ನು ಗಮನಿಸಬಹುದು.

'ತಿಳಿವಿನ ಬಿರು ಬಿಸಿಲು ಕಣ್ಣು ಕುಕ್ಕುತ್ತಿದೆ;
ಒಲವಿನ ತಂಪು ಕನ್ನಡಕ ನೀಡಯ್ಯ'
'ಜನಪ್ರಿಯತೆಯೊಂದನ್ನೆ ಆಧರಿಸಿ ಹಾಲಿಗಿಂತ
ಹೆಂಡವೇ ಮೇಲೆನ್ನಬಹುದೇನಯ್ಯ'
'ಮಠದ ನಗಾರಿಯ ಸದ್ದು ಘಟದ

ಅಂತರ್ವಾಣಿಗಿಂತ ಶ್ರೇಷ್ಠವೇನಯ್ಯ'
'ಒಳಗಿನ ನಿಶ್ಶಬ್ದತೆಯ ನೀಡಿ
ನಿನ್ನ ಸ್ವರ ಕೇಳಿಸಾ?'
'ನಾನೆನ್ನಲು ನಿನ್ನ ಕೊನೆ
ನೀನೆನ್ನಲು ನನ್ನ ಕೊನೆ'
'ದೇಶ ತೊರೆದವರುಂಟು
ಆಶೆ ತೊರೆದವರ ತೋರಾ'
'ನನ್ನ ಹಮ್ಮಿನ ಹಿಮ
ಕರಗುವಂತೆ ಮಾಡಾ'
'ನನ್ನಲ್ಲಿ ನೀನು ಕರಗು
ನಿನ್ನಲ್ಲಿ ನಾನು ಕರಗುವೆ'
'ನೀನಿತ್ತುದನ್ನೆ ನಿನಗರ್ಪಿಸುವೆ
ನೀನೀಯದುದನ್ನು ಎಲ್ಲಿಂದ ತರುವೆ'
'ಅಸಹ್ಯವಾಗಿದ್ದೇನೆ ನಾನೇ ನನಗೆ'
'ನೀನಿತ್ತ ಬನ್ನದ ಮೂಲಕವೇ
ಬರುವೆ ನಿನ್ನ ನೆಲೆಗೆ?'
'ನೀನೊಲಿದರೆ ಬುವಿ ಯಾವ ಲೆಕ್ಕ
ಬಯಲಾವ ಲೆಕ್ಕ, ಬಾನಾವ ಲೆಕ್ಕ'

ಕೆಲವು ಇಂಥ ಚೆನ್ನಾದ ವಚನಗಳೂ ಅಲ್ಲಲ್ಲಿವೆ. ಉದಾಹರಣೆಗೆ ಗಮನಿಸಿ:

ಇಂದೆನ್ನ ಮನದಲ್ಲಿ ರಾಬಿಯಾ ಮಾತನಾಡುತಿದ್ದಾಳೆ;
ಅಕ್ಕಮಹಾದೇವಿ ವಚನಿಸುತ್ತಿದ್ದಾಳೆ
ಮೀರಾ ಹಾಡುತ್ತಲಿದ್ದಾಳೆ;
ಆಂಡಾಳ್ ಅವ್ವೆಯಾರ್ ಭಜಿಸುತ್ತಲಿದ್ದಾರೆ
ತಾಯಿಯ ತನಿವಗೆಯ ಹಾಲಿಗೆ
ಅಕ್ಕನ ಅಕ್ಕರೆಯ ಸಕ್ಕರೆ ಸೇರಿದಂತಹ ಅನುಭವ
ಸ್ವತಂತ್ರಧೀರ ಸಿದ್ಧೇಶ್ವರಾ,

ನಿರಾಕಾರನಾದ ನಿನಗೂ
ಸಾಕಾರನಾಗಿ ಇದನ್ನು
ಸವಿವ ಬಯಕೆಯೆ?

ಜೊತೆಗೆ ಇಲ್ಲಿಯ ಹೆಚ್ಚು ವಚನಗಳು ಲೋಕಮುಖವಾಗಿ ವಿಡಂಬನೆಗೆ ಮೊರೆಹೋದದ್ದು ಉಂಟು.

ಈ ಕೆಲವು ಸಾಲುಗಳನ್ನು ಗಮನಿಸಿ :

‘ಕುರಿಗಳಿಗೂ ಇರಿವ ಶಕ್ತಿ ಬರುತ್ತಿದೆಯೀಗ–
ತೋಳಗಳ ಸದ್ದು ಅಡಗಲೇಬೇಕಿನ್ನು!’
‘ಬದುಕಿಹುದೆ ಚೋದ್ಯ
ಇಲ್ಲಿ ಇಲ್ಲದವರು’
‘ಸಜ್ಜನನಾಗಿ ಹುಟ್ಟಬಾರದಯ್ಯ’
‘ಇಲ್ಲಿ ಸರಕಾರವೇ ಬರಡು ಹಸು,
ಕೊರಡು ಮರ ನೋಡಾ’

ಆದರೆ ಕೊನೆಯ ಸಂಕಲನ ವಚನಾರಾಮಕ್ಕೆ ಬರುತ್ತಿದ್ದಂತೆ ನಿಜಕ್ಕೂ ಆನಂದವಾಗುತ್ತದೆ. ಇಲ್ಲಿನ ವಚನಗಳ ಧ್ವನಿಶಕ್ತಿ ಅದಕ್ಕೆ ಕಾರಣ ಎನ್ನಬಹುದು.

ಇಂದು ಪತ್ರಿಕೆ ಬರಲಿಲ್ಲ;
ಸಾವುಗಳ ಸುದ್ದಿಯನ್ನೋದದೆ
ಜೀವಕ್ಕೆ ಬೇಸರವಾಯಿತು
ಸ್ವತಂತ್ರಧೀರ ಸಿದ್ಧೇಶ್ವರ!

ಇಲ್ಲಿ ಸೂಚಿತವಾಗುವ ಇಂದಿನ ಬದುಕಿನ ದಾರುಣತೆ ವಚನ ರೂಪವಾಗಿ ಮೈದಾಳಿರುವ ರೀತಿ ಅನ್ಯಾದೃಶವಾದದ್ದು. ಬಹುಶಃ ಕವಿತೆಗಳ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಂಡಿದ್ದ ಕೊರತೆಗಳನೇಕವನ್ನು ತುಂಬಿಕೊಂಡಂತಿವೆ ಇಲ್ಲಿಯ ವಚನಗಳು. ಅದನ್ನೆ ಕವಿ ಚೆನ್ನವೀರ ಕಣವಿಯವರು ಸೂಚಿಸಿದ್ದು ಹೀಗಿದೆ :

‘ಕಾವ್ಯ ಪ್ರಯೋಗದಲ್ಲಿ ಅವರು ಇದುವರೆಗೆ ಅನುಭವಿಸಿದ ಅರಕೆಗಳೆಲ್ಲವನ್ನೂ ವಚನೋದ್ಯಾನದ ೫೨೫ ವಚನಗಳಲ್ಲಿ ತುಂಬಿಕೊಡಲು ಪ್ರಯತ್ನಿಸಿ ಯಶಸ್ವಿಯಾಗಿರುವುದಲ್ಲದೆ ವಚನ ಪ್ರಕಾರದ ಹೊಸ ಸಾಧ್ಯತೆಗಳನ್ನು

ತೋರಿಸಿಕೊಡುವಲ್ಲಿಯೂ ತಮ್ಮ ಕಾಣಿಕೆಯನ್ನು ಸಲ್ಲಿಸಿದ್ದಾರೆ.' ಈ ಮಾತು ವಚನಾರಾಮಕ್ಕೂ ಅಷ್ಟೇ ಚೆನ್ನಾಗಿ ಅನ್ವಯವಾಗುತ್ತದೆ.

ಅವರ ವಚನದಲ್ಲಿ ಬರುವ ಈ ಉಕ್ತಿಗಳನ್ನು ಗಮನಿಸಿ :

'ಸ್ವತಂತ್ರಧೀರ ಸಿದ್ಧೇಶ್ವರಾ,
ಈ ವ್ಯರ್ಥಾಲಾಪಕ್ಕೂ ಅರ್ಥ ಬಂದೀತು
ಒಮ್ಮಿಂದೊಮ್ಮೆ'

ನಿಜ ಇಲ್ಲಿನ ಅನೇಕ ವಚನಗಳಿಗೆ ಅರ್ಥ ತುಂಬಿಬಂದಿದೆ ಆ ಕಾರಣವಾಗಿಯೇ ಧನ್ಯತೆ ತುಂಬಿದ ಈ ಮಾತು:

ಅಪರಿಚಿತರ ಮಧ್ಯದಲ್ಲಿ
ಅನಾಥಪ್ರಜ್ಞೆ ಕಾಡುತ್ತಿದ್ದಾಗ
ಯಾರೋ 'ನೀವು ಕಾವ್ಯಾನಂದರಲ್ಲವೆ?'
ಎಂದು ಕೇಳುತ್ತಾರೆ–
ಅನಾಥಪ್ರಜ್ಞೆ ಮಾಯವಾಗುತ್ತದೆ!

ಇಂಥ ಹೆಮ್ಮೆ ಮೂಡಿದ್ದರಿಂದಲೇ ಎಂಬುದಕ್ಕಿಂತ ಇಂಥ ಹೆಮ್ಮೆಗೆ ಕಾರಣವಾಗಿ ಇವರ ಅನೇಕ ವಚನಗಳು ಮೂಡಿವೆ.

'ಒಂದೂ ಪಾಪ ಮಾಡದವರ ತೋರಾ
ಒಂದೂ ಪುಣ್ಯ ಮಾಡದವರ ತೋರಾ
ಸ್ವತಂತ್ರಧೀರ ಸಿದ್ಧೇಶ್ವರಾ'
ಎಂಬ ಸವಾಲು ಹುಟ್ಟುತ್ತದೆ. ಅಷ್ಟೇ ಅಲ್ಲ
ಬರೆಯಲಾರೆ, ಬರೆಯದಿರಲಾರೆ
ಬರೆಯದೆ ಬದುಕಲಾರೆ!
ಬರೆಯಲು ವಿಷಯವೇ ಹೊಳೆಯದಾಗ
ನೀನಿರುವೆಯಲ್ಲ–
ಸ್ವತಂತ್ರಧೀರ ಸಿದ್ಧೇಶ್ವರಾ?

ಎಂಬ ನೆಮ್ಮದಿ ಕೂಡ ಈ ವಚನಗಳ ರಚನೆಗಳ ಹಿಂದಿವೆ. ಈ ಪ್ರಸನ್ನತೆಯ ಕಾರಣವೇ ಈ ಕೆಳಗಿನ ವಚನ :

ಹುಲ್ಲಿನ ಮಕಮಲ್ಲಿನ ಮೇಲೆ
ಹಾಯಾಗಿ ಮಲಗಿರುವ ಹೊಂಬಿಸಿಲು,
ನಿಸ್ತರಂಗ ಸರಸಿಯ ಶಯ್ಯೆಯ ಮೇಲೆ
ನೆಮ್ಮದಿಯಿಂದ ನಿದ್ರಿಸುತ್ತಿರುವ ಬೆಳದಿಂಗಳು,
ಹಿಮದ ಹಾಸಿಗೆ ಮೇಲೆ
ನಿರಾಳವಾಗಿ ಪವಡಿಸಿದ ಮೇಘಜಾಲ,
ನಭದ ನೀಲಿಮೆಯ ನಲ್ಹಾಸಿನಲ್ಲಿ
ಕನಸು ಕಾಣುತ್ತಿರುವ ನಕ್ಷತ್ರಮಾಲೆ
ನಿನ್ನ ಆನಂದ ಸಿಂಧುವಿನ ಬಿಂದುಗಳು
ಸ್ವತಂತ್ರಧೀರ ಸಿದ್ಧೇಶ್ವರ!

ಒಳ್ಳೆಯ ಭಾವಗೀತದಂತಿದೆ ಇದು. ಈ ಕೆಲವು ವಚನಗಳನ್ನು ಗಮನಿಸಿ :

೧. ಮಾವು ಮಲ್ಲಿಗೆಗಳನ್ನು ಕಂಡಾಗಲೆಲ್ಲ
ಪಂಪನನ್ನು ನೆನೆಯತ್ತೇನೆ
ಸಂಪಿಗೆ ಸೇವಂತಿಗೆಗಳನ್ನು ಕಂಡಾಗಲೆಲ್ಲ
ಹರಿಹರನನ್ನು ನೆನೆಯುತ್ತೇನೆ
ಗುಲಾಬಿಗಳನ್ನು ಕಂಡಾಗಲೆಲ್ಲ
ಉಮರ್ ಹಫೀಜರನ್ನು ನೆನೆಯುತ್ತೇನೆ
ಕಲಕೀರವಾಣಿಯನ್ನು ಕಂಡಾಗಲೆಲ್ಲ
ಲಕ್ಷ್ಮೀಶನನ್ನು ನೆನೆಯುತ್ತೇನೆ
ಮಲೆನಾಡನ್ನು ಕಂಡಾಗಲೆಲ್ಲ
ಕುವೆಂಪು ಅವರನ್ನು ನೆನೆಯುತ್ತೇನೆ
ಶ್ರಾವಣ ಬಂದಾಗಲೆಲ್ಲ
ಬೇಂದ್ರೆಯವರನ್ನು ನೆನೆಯುತ್ತೇನೆ
ಸ್ವತಂತ್ರಧೀರ ಸಿದ್ಧೇಶ್ವರಾ
ಏನನ್ನೇ, ಯಾರನ್ನೇ ನೆನೆದರೂ ನಿನ್ನನ್ನೆ ನೆನೆಯುತ್ತೇನೆ

೨. ತಾಯಿ ಮಗುವಿನ ಮೋರೆ ತೊಳೆಯುತ್ತಾಳೆ
ಇಬ್ಬನಿ ಹುಲ್ಲಿನ ಮೋರೆ ತೊಳೆಯುತ್ತದೆ
ಸರಿ ಗಿರಿಯ ಮೋರೆ ತೊಳೆಯುತ್ತದೆ
ಗಾಳಿ ಬಯಲ ಮೋರೆ ತೊಳೆಯುತ್ತದೆ
ನನ್ನ ಮನದ ಮೋರೆ ನೀನು ತೊಳೆಯಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೩. ಹುಲ್ಲು ಇಬ್ಬನಿಯ ಮುಡಿದುಕೊಂಡಿತು,
ಇಬ್ಬನಿ ಹೂಬಿಸಿಲ ಮುಡಿದುಕೊಂಡಿತು,
ತೆರೆ ನೊರೆಯನ್ನು ಮುಡಿದುಕೊಂಡಿತು,
ಹೂವು ಬಟ್ಟೆಯನ್ನು ಮುಡಿದುಕೊಂಡಿತು,
ಬೆಟ್ಟ ಮೋಡವನ್ನು ಮುಡಿದುಕೊಂಡಿತು,
ಮೋಡ ಮಿಂಚನ್ನು ಮುಡಿದುಕೊಂಡಿತು,
ಸ್ವತಂತ್ರಧೀರ ಸಿದ್ಧೇಶ್ವರ
ಬ್ರಹ್ಮಾಂಡಗಳನ್ನು ಮುಡಿದುಕೊಂಡ!

೪. ಏನು ಮಾಡಲೆಂದು ಜಲವನ್ನು ಕೇಳಿದೆ
'ಹರಿ ಎಂದಿತು'
ಅಗ್ನಿಯನ್ನು ಕೇಳಿದೆ-'ಉರಿ' ಎಂದಿತು
ಮುಗಿಯನ್ನು ಕೇಳಿದೆ-'ಸುರಿ' ಎಂದಿತು
ವಾಯುವನ್ನು ಕೇಳಿದೆ-ಚಲಿಸು ಎಂದಿತು
ಪೃಥ್ವಿಯನ್ನು ಕೇಳಿದೆ-ಫಲಿಸು ಎಂದಿತು
ಸ್ವತಂತ್ರಧೀರ ಸಿದ್ಧೇಶ್ವರನ ಕೇಳಿದೆ 'ಬರಿಸು' ಎಂದ.

ಕೇವಲ ನಾಲ್ಕೆ ನಾಲ್ಕು ವಚನಗಳನ್ನು ಮಾದರಿಯಾಗಿ ಆಯ್ದುಕೊಂಡಿದ್ದೇನೆ – ಇಂಥ ಇನ್ನು ಹಲವಾರು ವಚನಗಳಿವೆ 'ವಚನಾರಾಮ'ದ ಸಮೃದ್ಧಿಗೆ. ಮೊದಲ ವಚನ ಕರ್ನಾಟಕದ-ಏಕೆ-ವಿಶ್ವದ ಸಾಂಸ್ಕೃತಿಕ ಲೋಕದ ಮಹಾನುಭಾವರ ಸ್ಮೃತಿಗಳಿಂದ ಸೊಂಪುಗೊಂಡಿದ್ದು ಈ ಎಲ್ಲ ಸೊಗಸಿಗೂ ಕಾರಣ ಸ್ವತಂತ್ರಧೀರ ಸಿದ್ಧೇಶ್ವರನೇ ಎಂಬ ತಿರುವಿನಿಂದ ಇನ್ನಷ್ಟು ಅರ್ಥವತ್ತಾಗುತ್ತದೆ. ಎರಡನೆ ವಚನ

ನಿಸರ್ಗದಲ್ಲಿ ನಡೆಯುವ ಸ್ವಚ್ಛಗೊಳಿಸುವ ಸುಂದರ ಚಿತ್ರವನ್ನು ಒಳಗೊಂಡಿದ್ದು ಇಂಥ ಸ್ವಚ್ಛತೆ ಬದುಕಿನಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ತನ್ನ ಇಷ್ಟದೈವ ತನ್ನನ್ನು ಸ್ವಚ್ಛಗೊಳಿಸಲಿ ಎಂಬ ತಿರುವನ್ನು ಪಡೆಯುತ್ತದೆ.

ಮೂರನೆಯ ವಚನ ಒಂದೊಂದೂ ಒಂದು ಸೌಂದರ್ಯವನ್ನು ಧರಿಸಿ ಚೆಲುವಾಗುವ ಆರು ಸುಂದರ ದೃಷ್ಟಾಂತಗಳಿಂದ ಸಂಪನ್ನವಾಗಿದೆ. ಈ ಸಂಪನ್ನತೆಗೆ ಕೋಡು ಮೂಡಿದಹಾಗಿದೆ-ತನ್ನ ಇಷ್ಟದೈವ ಬ್ರಹ್ಮಾಂಡವನ್ನೆ ಮುಡಿದುಕೊಂಡು ಸಿಂಗಾರಗೊಂಡ ಚಿತ್ರದಿಂದ.

ಇನ್ನು ನಾಲ್ಕನೆಯ ವಚನದ ಸೊಗಸು ಬೇರೆ ಬಗೆಯದು. ಜಲ, ಅಗ್ನಿ, ಮುಗಿಲು, ವಾಯು ಹಾಗೂ ಪೃಥ್ವಿಗಳು ಪಂಚ ಭೂತಗಳು. ಇವುಗಳೊಂದೊಂದೂ ಒಂದೊಂದು ಕಾಯಕದಿಂದ ಸೃಜನಶೀಲವಾದುವುಗಳು. ಆದ್ದರಿಂದಲೇ ಅವುಗಳನ್ನು ಪ್ರಶ್ನಿಸಿದಾಗ ಬರುವ ಉತ್ತರ ಕೂಡ ಅರ್ಥಪೂರ್ಣವಾದುದು. ಆದರೆ ಈ ಪಂಚಭೂತಗಳ ಕರ್ತವ್ಯಗಳನ್ನು ಸೂಚಿಸಿದ ಮೇಲೆ ಇಷ್ಟದೈವದ ಆದೇಶವೇನು ಎಂದರೆ 'ಒಲಿಸು' ಎನ್ನುವುದು ಈ ವಚನದ ಅರ್ಥವನ್ನು ಹೆಚ್ಚಿಸುತ್ತದೆ.

ಇಂಥ ವಚನಗಳಿಂದ ಸಮೃದ್ಧವಾದ ವಚನಾರಾಮ ಕೇವಲ ಶಾಂತಿ, ಸಮೃದ್ಧಿ, ಶ್ರದ್ಧೆಗಳಿಗೇ ಮೀಸಲಾಗದೆ ನಾಡಿನ ವಾಸ್ತವದ ಕಡೆಗೂ ಮುಖ ಮಾಡಿರುವುದು ಅರ್ಥಪೂರ್ಣವಾದುದು. ಈ ವಚನ ಗಮನಿಸಿ :

ಅಮಾಯಕರ ಕಣ್ಣೀರಿನಲ್ಲಿಯೇ ಬೆಳೆಯಬೇಕೆ?
ನಿರ್ದೋಷಿಗಳ ನೆತ್ತರಿನಲ್ಲಿ ಬೆಳೆಯಬೇಕೆ
ಪಂಜಾಬದ ಹೊಂಗೋದಿಯ ಹೊಲಗಳು?
ಪಾಪಭೀರುಗಳ ರಕ್ತದಲ್ಲಿಯೇ ಬೆಳೆಯಬೇಕೆ
ಆಸಾಮಿನ ಚಹಾ ತೋಟಗಳು?
ಸಜ್ಜನರ ಶೋಣಿತದಲ್ಲಿ ಬೆಳೆಯಲೇಬೇಕೆ
ಆಂಧ್ರದ ಬತ್ತದ ಗದ್ದೆಗಳು?
ಇದೆಂಥ ಕರ್ಮಕಾಂಡ ಕೃಪಾಕರಾ,
ನಿಲ್ಲಿಸಿದನ ಕರುಣಾಕರ
ಸ್ವತಂತ್ರಧೀರ ಸಿದ್ಧೇಶ್ವರಾ.

ನಮ್ಮ ನಾಡಿನ ಭಯಾನಕ ವಾಸ್ತವವನ್ನು ಅರ್ಥಪೂರ್ಣವಾಗಿಸಿದೆ ಮೇಲಿನ ವಚನ.

ಈ ವಚನಗಳಲ್ಲಿರುವ ಆತ್ಮನಿರೀಕ್ಷಣೆ ಸೌಂದರ್ಯೋಪಾಸನೆ ಹಾಗೂ ಲೋಕದ ವಾಸ್ತವಗಳತ್ತ ಮುಖಮಾಡಿರುವ ಪುರಾಣಿಕರ ದೃಷ್ಟಿ ವಚನ ಪ್ರಕಾರದ ಮುಕ್ತ ಅಭಿವ್ಯಕ್ತಿಯನ್ನು ಭಾವಗೀತ ಗುಣವನ್ನು ಪಡೆದುಕೊಂಡಿದೆ.

ವಚನ ಸಾಹಿತ್ಯ ಆರಂಭವಾದದ್ದು ಸಾಹಿತ್ಯವಾಗಬೇಕೆನ್ನುವ ಸಾಹಿತ್ಯಿಕ ದೃಷ್ಟಿಯಿಂದಲ್ಲ. ಅದು ಆರಂಭವಾದುದು ಸಮಾನ ಮನೋಧರ್ಮದ ನೂತನ ಸಮಾಜ ನಿರ್ಮಾಣ ಸಂಕಲ್ಪದ ಒಂದು ತುರ್ತಿನಿಂದ; ಅದಕ್ಕೆ ಸಾಹಿತ್ಯ ಪರಂಪರೆಯ ಅರಿವಿದ್ದುದು ಮಾತ್ರವಲ್ಲದೆ ಸೃಜನಶಕ್ತಿಯೂ ಇದ್ದುದು ಕನ್ನಡದ ಪುಣ್ಯ. ವಚನ ಪ್ರಕಾರ ವಿಶ್ವಕ್ಕೇ ವಿಶಿಷ್ಟವೆನ್ನಿಸುವ ಸಿದ್ಧಿಯನ್ನು ಪಡೆಯಿತು. ಸಮಾಜದ ವಿವಿಧ ವೃತ್ತಿಗಳ ಜನ ಸೇರಿ ಒಂದುಗೂಡಿದ್ದರಿಂದ ಭಾಷಿಕ ಸಿದ್ಧಿಯೂ ಅಪೂರ್ವವೆನ್ನಿಸುವಂತಾಯಿತು.

ಆದರೆ ಹನ್ನೆರಡನೆ ಶತಮಾನದ ಸೃಜನ ಶೀಲ ವಚನ ಸೃಷ್ಟಿ ಬಸವಣ್ಣ ಕಲ್ಯಾಣವನ್ನು ಬಿಡಬೇಕಾಗಿ ಬಂದ ನಿದರ್ಶನದಲ್ಲಿ ಹರಿಗಡಿದುಕೊಂಡದ್ದು ಕನ್ನಡದ ದುರ್ದೈವ,. ಮತ್ತಿದನ್ನು ಹದಿನಾರನೆ ಶತಮಾನದಲ್ಲಿ ಯಡೆಯೂರು ಸಿದ್ಧಲಿಂಗ ಸೃಜನಾತ್ಮಕವಾಗಿ ಪುನರುಜ್ಜೀವನಗೊಳಿಸಿದರೂ ಇಲ್ಲಿ ವಚನ ಪ್ರಕಾರ ವೈಯಕ್ತಿಕ ಸಿದ್ಧಿಯಾದುದೇ ಅಲ್ಲದೆ ನೂತನ ಸಮಾಜ ನಿರ್ಮಾಣ ಸಂಕಲ್ಪಕ್ಕಿಂತ ಮಿಗಿಲಾಗಿ ಹನ್ನೆರಡನೆ ಶತಮಾನದ ಧಾರ್ಮಿಕ ಸಂಪತ್ತನ್ನು ಮತ್ತಷ್ಟು ವಿಶದೀಕರಿಸುವುದರಲ್ಲಿ ಮಗ್ನವಾಯಿತು. ವಚನ ಪ್ರಕಾರದ ಬಹುಮುಖ ಸಾಧ್ಯತೆಗಳಿಂದ ವಂಚಿತವಾಯಿತು.

ಎರಡನೆ ಘಟ್ಟದ ವಚನ ಸಾಹಿತ್ಯದ ಪುನರುಜ್ಜೀವವು ಹೀಗೆ ವೈಯಕ್ತಿಕ ಅಭಿವ್ಯಕ್ತಿಯಾಗಿ ಬಲಗೊಳ್ಳುತ್ತ ಬಂದಿದ್ದು ಅದೇ ಪರಂಪರೆ ಮುಂದಿನ ವಚನಕಾರರಲ್ಲೂ ಮುಂದುವರೆಯಿತು. ಇಪ್ಪತ್ತನೆ ಶತಮಾನ ಇದಕ್ಕೆ ಹೊರತಾಗಲಿಲ್ಲ.

ಇಪ್ಪತ್ತನೇ ಶತಮಾನದ ವಚನ ಸಾಹಿತ್ಯ ಹಲವಾರು ಏರಿಳಿತಗಳಿಗೆ ಗುರಿಯಾಯಿತು.

ಒಂದನೆಯದು, ವಚನ ಸಾಹಿತ್ಯವನ್ನು ಆಮುಷ್ಮಿಕ ವಿಚಾರಗಳಿಗೆ ಸೀಮಿತವಾದುದೆಂದು ಕುವೆಂಪು ಬೇಂದ್ರೆಯವರಂಥ ಪ್ರತಿಭಾವಂತರು ಭಾವಿಸಿ ಅಂಕಿತವಿಲ್ಲದೆ ವಚನ ಪ್ರಕಾರವನ್ನು ಬೆಳಸುವ ಯತ್ನ ಮಾಡಿದ್ದರು.

ಆದರೆ ವಚನ ಸಾಹಿತ್ಯದ ಸಮೃದ್ಧಿ ಸತ್ವಗಳಿಗೆ ಮಾರುಹೋದ ಕನ್ನಡದ ಪ್ರತಿಭೆಗಳು ಹನ್ನೆರಡನೆ ಶತಮಾನದ ವಚನ ಸಾಹಿತ್ಯವನ್ನು ಮತ್ತೊಂದು ರೀತಿಯಲ್ಲಿ ಪುನರುಜ್ಜೀವನಗೊಳಿಸುವ ಸಾಹಸಕ್ಕೆ ಕೈಹಾಕಿದವು. ಅಂಥ ಪ್ರತಿಭೆಗಳು ಒಂದು, ಎರಡಲ್ಲ ಎಸ್.ವಿ. ರಂಗಣ್ಣ, ಎಸ್.ವಿ. ಪರಮೇಶ್ವರ ಭಟ್ಟ, ಜ.ಚ.ನಿ, ಮಹದೇವಬಟಾಕಾರ, ಮಾತೆಮಹಾದೇವಿ, ಜಿ. ಶಿವಕುಮಾರಸ್ವಾಮಿ ಗಂಗಾಧರ, ರಾಜಯೋಗೀಂದ್ರಸ್ವಾಮಿ, ವಿಜಯಕುಮಾರ್ ಹೀಗೇ ಈ ಪಟ್ಟಿ ಬೆಳೆಯುತ್ತ

ಹೋಗುತ್ತದೆ. ಈ ಪಂಕ್ತಿಯಲ್ಲಿ ಸಿದ್ಧಯ್ಯ ಪುರಾಣಿಕರ ಪ್ರತಿಭೆ ಬಹು ವಿಶೇಷವಾಗಿ ಇರುವುದು ಯಾರಿಗಾದರೂ ಗೋಚರವಾಗದೆ ಇರದು.

ಆಧುನಿಕ ವಚನಕಾರರಲ್ಲಿ ಸಿದ್ಧಯ್ಯ ಪುರಾಣಿಕರ ಹೆಸರನ್ನು ಪ್ರಧಾನವಾದುದೆಂದು ನಿಸ್ಸಂದೇಹವಾಗಿ ಹೇಳಬಹುದು. ಇವರ ವಚನೋದ್ಯಾನವನ್ನು ಕುರಿತು "ಸಿದ್ಧಯ್ಯ ಪುರಾಣಿಕರ ವಚನೋದ್ಯಾನವಂತು ಈ ಶತಮಾನದ ವಚನ ಸಾಹಿತ್ಯದಲ್ಲೊಂದು ಗೌರೀಶಂಕರವೆಂದು ಹೇಳಬಹುದಾಗಿದೆ" ಎಂದು ನಾಡೋಜ ದೇಜಗೌ. ಹೇಳಿದ್ದಾರೆ.

"ಇಂಥ ಮಾತು ವಚನೋದ್ಯಾನದ ಬಗೆಗಾಗಲಿ ವಚನ ನಂದನ, ವಚನಾರಾಮಗಳ ಬಗೆಗಾಗಲಿ ಅತ್ಯುಕ್ತಿಯಾಗಬಹುದು" ಎಂದು ಸಿ.ಪಿ.ಕೆ ಹೇಳಿದ್ದಾರೆ. ಅವರ ದೃಷ್ಟಿಯಲ್ಲಿ ವಚನೋದ್ಯಾನದ ಮಟ್ಟಕ್ಕೆ ಉಳಿದ ಎರಡು ಸಂಕನಲಗಳ ಗುಣ ಏರಲಾರದು ಎಂಬ ಅಭಿಪ್ರಾಯವಿದ್ದಂತಿದೆ. ಅತ್ಯುಕ್ತಿಯಾಗಬಹುದು ಎಂಬ ಮಾತನ್ನು ಅವರು ವಿರೋಧಿಸಿದಂತೇನೂ ತೋರುವುದಿಲ್ಲ. ಬಲ್ಲ-ಮುಂದೆ ಅವರೆ ಆ ಮಾತು "ಅಸತ್ಯವಲ್ಲ" ಎಂದಿದ್ದಾರೆ. ಅಷ್ಟೇ ಅಲ್ಲ "ಅರ್ವಾಚೀನ ವಚನ ಸಾಹಿತ್ಯದ ಪರಿಧಿ ಪುರಾಣಗಳಿಂದ ನಿಸ್ಸಂದೇಹವಾಗಿ ಹಿಗ್ಗಿದೆ. ಅದು ಒಟ್ಟಿನಲ್ಲಿ ನಮ್ಮ ಸಾಹಿತ್ಯದ ಹಿಗ್ಗು" ಎಂದೂ ವಿಶ್ಲೇಷಿಸಿದ್ದಾರೆ.

ವಾಸ್ತವವಾಗಿ ಪುರಾಣಿಕರು ತಮ್ಮ ಅಂಕಿತವನ್ನು ಸ್ವತಂತ್ರಧೀರ ಸಿದ್ಧೇಶ್ವರ ಎಂದು ಮಾಡಿಕೊಂಡಿರುವುದರ ಹಿಂದೆ ವಚನ ಸಾಹಿತ್ಯದ ಪುನರುಜ್ಜೀವನ ಮಾಡಿದ ಯಡೆಯೂರ ಸಿದ್ಧಲಿಂಗೇಶನ ಸ್ಫೂರ್ತಿ ಕೂಡ ಇದ್ದಂತಿದೆ. ಏಕೆಂದರೆ ಆತನ ಅಂಕಿತ ಶಿವ ಸಿದ್ಧೇಶ್ವರ ಪ್ರಭುವೆ ಎಂದಿದ್ದರೆ, ಪುರಾಣಿಕರ ಅಂಕಿತ ಸ್ವತಂತ್ರಧೀರ ಸಿದ್ಧೇಶ್ವರ ಎಂದಾಗಿರುವುದು ಆಕಸ್ಮಿಕ ಅಲ್ಲ. ಪುರಾಣಿಕರು ತಾವೂ ಅಂಥ ಒಂದು ಪುನರುಜ್ಜೀವನದಲ್ಲಿ ಪಾಲ್ಗೊಂಡವರೆಂಬುದನ್ನು ಸೂಚಿಸುತ್ತಿದ್ದಾರೆಯೆ ಎಂದರೆ ಇಲ್ಲಾ ಎನ್ನುವುದು ಕಷ್ಟ ಎನ್ನಬೇಕಾಗುತ್ತದೆ.

ಈ ಕೃತಿಯನ್ನು ಹೆಮ್ಮೆಯಿಂದ ಪ್ರಕಟಿಸುತ್ತಿರುವವರು ಡಾ. ಸಿದ್ಧಯ್ಯ ಪುರಾಣಿಕರ ಸುಪುತ್ರರಾದ ಪ್ರಸನ್ನ ಪುರಾಣಿಕ ಅವರು. ಇವರು ತಮ್ಮ ತಂದೆಯ ಸಾಂಸ್ಕೃತಿಕ ಸಂಪತ್ತಿನ ಸಂವರ್ಧನೆಯಲ್ಲಿ ತೊಡಗಿಕೊಂಡಿರುವುದು-ಕತೆ ಕಾದಂಬರಿಗಳ ಅಬ್ಬರದ ಕಾಲದಲ್ಲಿ -ವಚನಗಳ ಪ್ರಕಟನೆಗೆ ಸಿದ್ಧವಾಗಿರುವುದು-ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಸಿದ್ಧಯ್ಯ ಪುರಾಣಿಕರ ಸೊಸೆ ಶ್ರೀಮತಿ ಲತಾ ಪುರಾಣಿಕ್‌ರವರು ಬೆಂಬಲವಾಗಿ ನಿಂತಿರುವುದು ಹರ್ಷದಾಯಕವಾದದ್ದು.

**– ಜಿ.ಎಸ್. ಸಿದ್ಧಲಿಂಗಯ್ಯ**

# ಅರ್ಪಣೆ

ಪ್ರಮಥಧರ್ಮದ ಪುನರೋದಯಕ್ಕೆ
ವಚನಸಾಹಿತ್ಯದ ಪುನರುಜ್ಜೀವನಕ್ಕೆ
ಕಾರಣರಾದ
ಎಡೆಯೂರಿನ ಶಿವಯೋಗೀಶ್ವರ
ಕನ್ನಡನಾಡಿನ ಜ್ಞಾನರತ್ನಾಕರ
**ಶ್ರೀ ತೋಂಟದ ಸಿದ್ಧಲಿಂಗೇಶ್ವರರಿಗೆ**
ಭಕ್ತಿಪುರಸ್ಸರವಾಗಿ

# ಪರಿವಿಡಿ


| | | |
|---|---|---|
| **ಪ್ರಕಾಶಕರ ಮಾತು** | | III |
| **ಮುನ್ನುಡಿ** | | V |
| **ಅರ್ಪಣೆ** | | |
| **ವಚನೋದ್ಯಾನ** | ವ.೧–೫೨೫ | ೩ |
| **ವಚನ ನಂದನ** | ವ.೧–೪೭೫ | ೨೮೧ |
| **ವಚನಾರಾಮ** | ವ.೧–೫೨೫ | ೪೮೭ |
| **ಹೊಸ ವಚನಗಳು** | ವ.೧–೧೫೮ | ೬೬೩ |
| **ಟಿಪ್ಪಣಿಗಳು :** | ವಚನೋದ್ಯಾನ | ೭೨೫ |
| **ವಚನಾನುಕ್ರಮಣಿಕೆ** | | |
| | ವಚನೋದ್ಯಾನ | ೭೨೭ |
| | ವಚನ ನಂದನ | ೭೩೭ |
| | ವಚನಾರಾಮ | ೭೪೬ |
| | ಹೊಸ ವಚನಾನುಕ್ರಮಣಿಕೆ | ೭೫೬ |

**ಅನುಬಂಧಗಳು**

| | | |
|---|---|---|
| ಅನುಬಂಧ ೧ | ಪ್ರಕಾಶಕರ ಮಾತು | ೭೬೩ |
| ಅನುಬಂಧ ೨ | ಮುನ್ನುಡಿಗಳು | ೭೬೫ |
| ಅನುಬಂಧ ೩ | ನಿವೇದನೆಗಳು | ೮೧೫ |
| ಅನುಬಂಧ ೪ | ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ | ೮೨೬ |
| ಅನುಬಂಧ ೫ | ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ | ೮೨೮ |
| ಅನುಬಂಧ ೬ | ಭಾರತೀಯ ಭಾಷಾ ಪರಿಷದ್ ವಚನೋದ್ಯಾನ ಕೃತಿಗೆ ಗೌರವ ಪ್ರಶಸ್ತಿ | ೮೩೫ |

# ವಚನೋದ್ಯಾನ

# ವಚನೋದ್ಯಾನ

೧

ನೀನಿಲ್ಲದ ಮುನ್ನ ನಾನಿದ್ದೆನೆಂದು
ನಂಬದಯ್ಯ ನನ್ನ ಮನವು ;
ನಾನಿಲ್ಲದ ಮುನ್ನ ನೀನಿದ್ದೆಯೆಂದು
ನಂಬದಯ್ಯ ನನ್ನ ಮನವು ;
ನಾ ನೀ ಎಂಬ ಉಭಯವಿಲ್ಲದ ಮುನ್ನ
ಏನಿದ್ದುದೆಂಬುದ
ಏನೆಂದೊರೆವೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ !

೨

ನಿನ್ನ ನಾಮಕರಣೋತ್ಸವಕ್ಕೆ
ನೀನೆನ್ನ ಕರೆಸದಿದ್ದರೂ
ನಾನಲ್ಲಿ ಇದ್ದೆನಯ್ಯಾ !
ಮನುಷ್ಯತ್ವ, ಮುಮುಕ್ಷುತ್ವ, ಜಿಜ್ಞಾಸೆ, ಶ್ರದ್ಧೆ, ಶಿವರತಿಯೆಂಬ
ಐವರು ಮುತ್ತೈದೆಯರು
ತೊಟ್ಟಿಲ ತೂಗಿ, ಜೋಗುಳ ಹಾಡಿ,
ನಿನಗೆ ಲಿಂಗವೆಂದು ಹೆಸರಿಟ್ಟಾಗ
ನಾನಲ್ಲಿ ಅಂಗವಾಗಿ ಉಪಸ್ಥಿತನಿದ್ದೆನಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿದ್ದಲ್ಲಿ ನಾನಿದ್ದೆ, ಇದ್ದೇನೆ ;
ನಾನಿದ್ದಲ್ಲಿ ನೀನಿರಲಾರೆಯೇನಯ್ಯಾ?

೩

ನಾನು ಹುಟ್ಟುವ ಮುನ್ನ
ನೀನು ಹೇಗಿದ್ದೆಯಯ್ಯಾ?
ಶಬ್ದ ಹುಟ್ಟದ ಮುನ್ನಿನ ಅರ್ಥದಂತೆ,
ವಾದ್ಯ ಹುಟ್ಟದ ಮುನ್ನಿನ ನಾದದಂತೆ,
ಕುಂಚ ಹುಟ್ಟದ ಮುನ್ನಿನ ಚಿತ್ರದಂತೆ,
ಉಳಿ ಹುಟ್ಟದ ಮುನ್ನಿನ ಶಿಲ್ಪದಂತೆ,
ದೇಹ ಹುಟ್ಟದ ಮುನ್ನಿನ ಪ್ರಾಣದಂತೆ
ಇದ್ದೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಹುಟ್ಟಿದ ಮೇಲೆ ತಾನೆ
ಅರ್ಥಕ್ಕೆ ಶಬ್ದ, ನಾದಕ್ಕೆ ವಾದ್ಯ,
ಚಿತ್ರಕ್ಕೆ ಕುಂಚ, ಶಿಲ್ಪಕ್ಕೆ ಉಳಿ,
ನಿನಗೆ ಭಕ್ತ ದೊರೆತುದು ?

೪

ಬೀಜದ ಬಸಿರಿನ ಮೊಳೆಯದ ಬಳ್ಳಿಯ
ಮೂಡದ ಹೂವಿನ ಕಂಪಿನಂತಿಹೆಯೇನಯ್ಯ?
ನವಿಲಿನ ಮೊಟ್ಟೆಯ ಹೊಟ್ಟೆಯೊಳಡಗಿಹ
ಗರಿಗಳ ಕಣ್ಣಿನ ಬಣ್ಣದಂತಿಹೆಯೇನಯ್ಯ ?
ಅಳಿದ ಚಿತ್ರಕನ ಉದ್ದೇಶಿತ ಚಿತ್ರದ
ಚೆಲುವು ಚಿಮ್ಮಿಸುವ ನಲವಿನಂತಿಹೆಯೇನಯ್ಯ ?
ಬಂಜೆಯ ಸ್ವಪ್ನದಿ ಸುಳಿಯುವ ಕಂದನ
ಮುದ್ದುಮೊಗದ ಮಂದಹಾಸದಂತಿಹೆಯೇನಯ್ಯ ?
ಕಾಣದ ಕಾಮಧೇನುವಿನ ಕರೆಯದ ಹಾಲಿನ
ಕಡೆಯದ ಬೆಣ್ಣೆಯ ಸವಿಯಂತಿಹೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಈಡೇರದ ಆಸೆಗಳ ಚಿತಾಭಸ್ಮದಿ ಬೆಳೆದ
ಹೊಸ ಆಸೆಯ ಕಣ್ಣಿನ ಕಾಂತಿಯಂತಿಹೆಯೇನಯ್ಯ ?

೫

ಎಲ್ಲ ತೋರ್ಕೆಗಳ ಹಿಂದಿರುವ ನಿತ್ಯವೆ,
ಎಲ್ಲ ತಥ್ಯಗಳ ಹಿಂದಿರುವ ಸತ್ಯವೆ,
ಎಲ್ಲ ಪರಿವರ್ತನೆಗಳ ಹಿಂದಿರುವ ಅಪರಿವರ್ತನೀಯವೆ,
ಎಲ್ಲ ವರ್ಣನೆಗಳ ಮೀರಿರುವ ಅವರ್ಣನೀಯವೆ,
ಎಲ್ಲ ವಚನಗಳ ಆಚೆ ಇರುವ ಅನಿರ್ವಚನೀಯವೆ,
ಎಲ್ಲ ಅಳಿಮೆಗಳ ಮೆಟ್ಟಿ ನಿಲ್ಲುವ ಉಳಿಮೆಯೆ,
ಎಲ್ಲ ಗಮ್ಯಗಳ ಗಮ್ಯವಾದ ಅಗಮ್ಯವೆ,
ಎಲ್ಲ ಗೋಚರಗಳಿಗೂ ಗೋಚರಿಸದ ಅಗೋಚರವೆ,
ಎಲ್ಲ ಪ್ರಮಾಣಗಳಿಗೆ ಪ್ರಮಾಣವಾದ ಅಪ್ರಮಾಣವೆ,
ಎಲ್ಲ ಇಂದ್ರಿಯಗಳಿಗೆ ಇಂದ್ರಿಯವಾದ,
ಚೇತನಾಚೇತನಕೆ ಚೇತನವಾದ,
ರಸಕೆ ರಸ, ಚೆಲುವಿಗೆ ಚೆಲುವು, ನನ್ನಿಗೆ ನನ್ನಿಯಾದ
ಸಚ್ಚಿದಾನಂದವೆ,
ಅನಾದಿ ಅನಂತವೆ,
ಏಕಮೇವಾದ್ವಿತೀಯವೆ,
ವಿಶ್ವ ಗೇಹ, ವಿಶ್ವ ದೇಹ, ವಿಶ್ವಾತ್ಮ, ವಿಶ್ವಾತೀತವೆ,
ಸ್ವತಂತ್ರಧೀರ ಸಿದ್ಧೇಶ್ವರವೆ !

೬

ನಿನಗೆ ನಾಮವಿಲ್ಲ–
ಎಲ್ಲ ನಾಮಗಳೂ ನಿನ್ನವೇ ;
ನಿನಗೆ ರೂಪವಿಲ್ಲ–
ಎಲ್ಲ ರೂಪಗಳೂ ನಿನ್ನವೇ ;
ನಿನಗೆ ಬಣ್ಣವಿಲ್ಲ–
ಎಲ್ಲ ಬಣ್ಣಗಳೂ ನಿನ್ನವೇ ;
ನಿನಗೆ ಸ್ವರವಿಲ್ಲ–
ಎಲ್ಲ ಸ್ವರಗಳೂ ನಿನ್ನವೇ ;
ನಿನಗೆ ಶರೀರವಿಲ್ಲ–
ಎಲ್ಲ ಶರೀರಗಳೂ ನಿನ್ನವೇ !
ಇಂದ್ರಿಯ ಗೋಚರ–ಇಂದ್ರಿಯಾತೀತ,
ಜ್ಞೇಯ–ಅಜ್ಞೇಯ–
ಎಲ್ಲ ನೀನೇ, ಎಲ್ಲ ನೀನೇ,

ಉಂಟು ನೀನೇ, ಇಲ್ಲ ನೀನೇ,
ಹೌದು ನೀನೇ, ಅಲ್ಲ ನೀನೇ !
ನೀನಲ್ಲದುದು, ನೀನಿಲ್ಲದುದು
ಇದೆಯೆಂಬುದೇ ಅಜ್ಞಾನ,
ಇಲ್ಲವೆಂಬುದೇ ಸುಜ್ಞಾನ–
ಸ್ವತಂತ್ರಧೀರ ಸಿದ್ಧೇಶ್ವರಾ !

೭

ಹೆಸರಿಲ್ಲದ ನೀನು ಯಾವ ಹೆಸರಿನಿಂದ ಕರೆದರೂ
'ಓ' ಎನ್ನುವಿಯಯ್ಯಾ ;
ಭಾಷೆಯಿಲ್ಲದ ನೀನು ಯಾವ ಭಾಷೆಯಲ್ಲಿ ಮೊರೆಯಿಟ್ಟರೂ
'ಬಾ' ಎನ್ನುವಿಯಯ್ಯಾ;
ವರ್ಣವಿಲ್ಲದ ನೀನು
ಯಾವ ವರ್ಣದವರು ಯಜಿಸಿದರೂ ಒಲಿಯುವಿ ;
ಕುಲವಿಲ್ಲದ ನೀನು
ಯಾವ ಕುಲದವರು ಭಜಿಸಿದರೂ ನಲಿಯುವಿ;
ತೆರಹಿಲ್ಲದ ನೀನು
ಯಾವ ಕುರುಹನ್ನು ಪೂಜಿಸಿದರೂ ಪ್ರೀತನಾಗುವಿ ;
ರೂಪವಿಲ್ಲದ ನೀನು
ಯಾವ ರೂಪದಲ್ಲಿ ಆರಾಧಿಸಿದರೂ ಆನಂದಿಸುವಿ ;
ದಿಕ್ಕಿಲ್ಲದ ನೀನು
ಯಾವ ದಿಕ್ಕಿಗೆ ಮಣಿದರೂ ತಣಿಯುವಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಪೂಜಿಸುವ ಕುರುಹಿನಲ್ಲಿಯೇ ಬೆಳಕಾಗಿ ಬಾರಾ,
ನನ್ನ ಮರಹಿನ ಇರುಹಿನಲ್ಲಿಯೇ ಅರುಹಾಗಿ ತೋರಾ !

## ೮

ನೀನು ಹರಿ, ನೀನು ಹರ,
ನೀನು ಸಿದ್ಧ, ನೀನು ಬುದ್ಧ,
ನೀನು ಯಹ್ವ, ನೀನು ಮಜ್ದ,
ನೀನು ತಾವೊ, ನೀನು ದೇವ,
ನೀನು ಅಲ್ಲಾ, ನೀನು ಎಲ್ಲಾ,
ನೀನು ಸಾರ್ವನಾಮಿಕ, ನೀನು ಅನಾಮಿಕ,
ನೀನು ಸರ್ವಗತ, ನೀನು ಸರ್ವಭರಿತ,
ನೀನು ಅನುಪಮೇಯ, ನೀನು ನಿರಾಮಯ–
ನೀನು ಸ್ವತಂತ್ರಧೀರ ಸಿದ್ಧೇಶ್ವರ !

## ೯

ಹೂವಿಗೆ ಬಣ್ಣವಲ್ಲದೆ
ಕಂಪಿಗೆ ಬಣ್ಣವಿಹುದೇನಯ್ಯ ?
ಹರಳಿಗೆ ತಿಣ್ಣವಲ್ಲದೆ
ಕಿರಣಕ್ಕೆ ತಿಣ್ಣವುಂಟೇನಯ್ಯ ?
ಕುರುಹಿಗೆ ರೂಪವಲ್ಲದೆ
ಅರುಹಿಗೆ ರೂಪವಿರ್ಪುದೇನಯ್ಯ ?
ವಾದ್ಯಕ್ಕೆ ಆಕಾರವಲ್ಲದೆ
ನಾದಕ್ಕೆ ಆಕಾರವಿದೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ನಾಮರೂಪವಲ್ಲದೆ
ನಿನಗೆ ನಾಮ ರೂಪಗಳೆಲ್ಲಿಯವಯ್ಯ ?

## ೧೦

ಗ್ರಹ ಗೋಲಗಳಿಂದಾಚೆ,
ನಕ್ಷತ್ರ ನೀಹಾರಿಕೆಗಳಿಂದಾಚೆ,
ಹಾಲು–ಹಾದಿಗಳಿಂದಾಚೆ,
ಕ್ವಾಸಾರು ಪಲ್ಸಾರುಗಳಿಂದಾಚೆ,
ಕಾಳ–ಧವಳ ರಂಧ್ರಗಳಿಂದಾಚೆ,

ಸ್ಥಲ–ಕಾಲಗಳಿಂದಾಚೆ,
ಆಚೆ...ಆಚೆ...ಆಚೆ–,
ಹಬ್ಬುತ್ತಿದೆ ನಿನ್ನ ಹರಹು !
ಎಲ್ಲಿದೆ ತೆರಹು–
ಸ್ವತಂತ್ರಧೀರ ಸಿದ್ಧೇಶ್ವರನಿಲ್ಲದ ತೆರಹು?

೧೧

ನನ್ನ ತಾಯಿ ಭೂಮಿ,
ನನ್ನ ತಂದೆ ವ್ಯೋಮ ;
ಹುಟ್ಟಿದ ಇವೆರಡಕ್ಕೂ
ಹುಟ್ಟದ ನೀನೇ ತಂದೆ ತಾಯಿಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೧೨

ಬೆಳಗಿನ ಸಾಸಿರ ಸಾಸಿರ ವರುಷ
ನಿನಗೊಂದು ನಿಮಿಷ ;
ಅಳೆಯಬಲ್ಲವರಾರು ನಿನ್ನ ವರುಷ ?
ಗುಣಿಸಬಲ್ಲವರಾರು ನಿನ್ನ ಆಯುಷ್ಯ ?
ಅನಂತ ವಿಶ್ವದ ಪ್ರತಿ ಮೂಲ ಕಣದಲ್ಲಿಯೂ
ನೀನೆ ಮಧ್ಯ ಬಿಂದು –
ಒಂದೊಂದು ಕಣವೂ ಶಕ್ತಿ ಸಿಂಧು !
ಕಾಣಬಲ್ಲವರಾರು ಆ ಎಲ್ಲ ಬಿಂದುಗಳ ಪರಿಧಿಗಳನ್ನು ?
ಅರಿಯಬಲ್ಲವರಾರು ಆ ಎಲ್ಲ ಶಕ್ತಿ–ವಾರಿಧಿಗಳನ್ನು ?
ಪಿಂಡಾಂಡದಿಂದ ಬ್ರಹ್ಮಾಂಡದವರೆವಿಗಿನ
ಎಲ್ಲ ಅಂಡಗಳಲ್ಲಿ
ಉತ್ಪತ್ತಿ – ಸ್ಥಿತಿ – ಲಯಗಳ ದೃಶ್ಯಾದೃಶ್ಯ ಲಾಸ್ಯ !
ಪ್ರೇಕ್ಷಕರಾಗಬಲ್ಲವರಾರು ಆ ಎಲ್ಲ ಲಾಸ್ಯಗಳಿಗೆ ?

ಅನಂತ ಕೋಟಿ ಬ್ರಹ್ಮಾಂಡಗಳೆಲ್ಲ
ನಿರಾಕಾರ ಸಾಗರದಿ ತೇಲುವ ಸಾಕಾರದ ನಡುಗಡ್ಡೆಗಳು !
ಊಹಿಸಬಲ್ಲವರಾರು ನಿನ್ನ ನಿರಾಕಾರದ ವ್ಯಾಪ್ತಿಯನ್ನು ?
ಅರಿದುದಕ್ಕಿಂತ, ಒರೆದುದಕ್ಕಿಂತ, ಬರೆದುದಕ್ಕಿಂತ,
ಊಹಿಸಿ ಭಾವಿಸಿ ಕಲ್ಪಿಸಿದುದಕ್ಕಿಂತ ಅತೀತ ನಿನ್ನ ಅಸ್ತಿತ್ವ–
ಸ್ವತಂತ್ರಧೀರ ಸಿದ್ಧೇಶ್ವರಾ !

೧೩

ಮಧುವಾತದಲ್ಲಿ ನೀನೇ, ಝಂಝಾವಾತದಲ್ಲಿ ನೀನೇ ;
ರಸದಲ್ಲಿ ನೀನೇ, ವಿಷದಲ್ಲಿಯೂ ನೀನೇ ;
ಹುಲ್ಲೆಯಲ್ಲಿ ನೀನೇ, ಹುಲಿಯಲ್ಲಿಯೂ ನೀನೇ ;
ಜೀವದಲ್ಲಿ ನೀನೇ, ಸಾವಿನಲ್ಲಿಯೂ ನೀನೇ ;
ಸಲಹುವ ಮಳೆಯಲ್ಲಿ ನೀನೇ, ಕೊಲ್ಲುವ ಸಿಡಿಲಿನಲ್ಲಿಯೂ ನೀನೇ ;
ಕಡಲಲ್ಲಿ ನೀನೇ, ಬಡಬನಲ್ಲಿಯೂ ನೀನೇ ;
ಆಡುವ ಶಿಖಿಯಲ್ಲಿ ನೀನೇ, ಜ್ವಾಲಾಮುಖಿಯಲ್ಲಿಯೂ ನೀನೇ ;
ಉಮೆಯ ಅಮೃತಸ್ಮಿತ ನೀನೇ, ಕಾಳಿಯ ಕರಾಳ ದಂಷ್ಟ್ರವೂ ನೀನೇ ;
ಪ್ರಳಯರುದ್ರ ನೀನೇ, ಶಿವ–ಶಂಭು–ಶಂಕರನೂ ನೀನೇ ;
ಓ ಶಿವ–ಭಯಂಕರ, ಓ ರುದ್ರ–ಶಂಕರ,
ಓ ಸ್ವತಂತಧೀರ ಸಿದ್ಧೇಶ್ವರ–
ಜಡೆಯೆಡೆಯ ಶಶಿಕಳೆಯ ಸುಧಾರಸವನ್ನಾದರೂ ನೀಡು,
ಗಳ ಬಳಸಿದ ಕಾಳಾಹಿಯ ಘೋರ ವಿಷವನ್ನಾದರೂ ನೀಡು!

೧೪

ಕಣ್ಣು ತೆರೆಯೆ ವಿಶ್ವಲಿಂಗ ದರ್ಶನ,
ಉಸಿರಾಡಿಸೆ ವಾಯುಲಿಂಗ ಸ್ಪರ್ಶನ,
ಹಸಿವಾಗೆ ಅಗ್ನಿಲಿಂಗದ ಅನುಭವ,
ತೃಷೆಯಾಗೆ ಜಲಲಿಂಗದ ಅರಿವು,
ನಿದ್ರೆ ಬಂದೊಡೆ ನೆಲದ ಲಿಂಗದ ನೆನಪು ನೋಡಯ್ಯ !
'ಲಿಂಗ ಮಧ್ಯೇ ಜಗತ್ಸರ್ವಂ' ಎಂಬುದು ನಿಜವಾದರೆ
ಎನ್ನನೇಕೆ ಲಿಂಗವಾಗಿಸಿಲ್ಲವಯ್ಯ ಇನ್ನೂ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೧೫

ನಾನು ನೀನಾಗುವುದು
ನನಗೆ ಸಾಧ್ಯವಾಗಲಿಲ್ಲ ;
ನೀನು ನಾನಾಗುವುದು
ನಿನಗೂ ಸಾಧ್ಯವಾಗಲಿಲ್ಲವೇನಯ್ಯ ?
ನನ್ನಲ್ಲಿರುವ ನಿನ್ನನ್ನು
ಕೆಳಗೊತ್ತಿಹನು ನಾನೆಂಬ ಅಸುರ!
ಅವನನ್ನು ಕೆಳಗೊತ್ತಿ ಮೆಟ್ಟಿ
ನೀನು ನಾನಾಗಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೬

ಎಲ್ಲಲ್ಲಿ, ಎಲ್ಲೆಲ್ಲೂ ನೆಲಸಿಯೂ
ಅಲ್ಲಲ್ಲಿ ವಿಶೇಷವಾಗಿ ವಿರಾಜಿಸುವಿಯೇನಯ್ಯ ?
ಕೆಡುಕಿನಲ್ಲಿ ಕಡಮೆ ವಿರಾಜಿಸಿ
ಒಳಿತಿನಲ್ಲಿ ವಿಶೇಷವಾಗಿ ಪ್ರಕಾಶಿಸುವಿಯೇನಯ್ಯ ?
ಕೆಡುಕಿನಲ್ಲಿಯೂ ಪ್ರಖರವಾಗಿ ಪ್ರದ್ಯೋತಿಸಿ
ಕೆಡುಕೇ ಉಳಿಯದಂತೆ ಮಾಡೆಯೇಕಯ್ಯ ?
ಒಳಿತಿನಂತೆ ಕೆಡುಕೂ ಬೇಕೆ ನಿನಗೆ ?
ಹಾಗಾದರೆ ನನ್ನನೇಕೆ ಒಲ್ಲೆಯಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೧೭

ಹಸಿವೆಯೆತ್ತ, ಅಶನವೆತ್ತ ?
ಎರಡೂ ಸೇರೆ ಸಂತಸವಯ್ಯಾ !
ಕತ್ತಲೆಯೆತ್ತ, ಬೆಳಕೆತ್ತ ?
ಎರಡೂ ಸೇರೆ ಸಂಭ್ರಮವಯ್ಯಾ !
ರೋಗವೆತ್ತ, ಔಷಧವೆತ್ತ ?
ಎರಡೂ ಸೇರೆ ಆರೋಗ್ಯವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೆತ್ತ, ನೀನೆತ್ತ ?
ಇಬ್ಬರೂ ಸೇರೆ ಆನಂದವಯ್ಯಾ !

## ೧೮

ತಂದೆ,
ಜೀವರಾಶಿಗಳ ಹುಟ್ಟಿಸುವ ಮುನ್ನ
ಅವುಗಳಿಗಾಗಿ ಅನ್ನ ಔಷಧಗಳ ಹುಟ್ಟಿಸಿದೆ ಸಸ್ಯ ಸೃಷ್ಟಿಯಲ್ಲಿ ;
        ನೀರು ಹುಟ್ಟಿಸಿದೆ ನದಿ ಸರಸಿ ಚಿಲುಮೆಗಳಲ್ಲಿ ;
        ಖನಿಜ, ತೈಲ, ಅನಿಲಗಳ ಹುಟ್ಟಿಸಿದೆ, ಗಣಿಗಳಲ್ಲಿ :
ನನ್ನ ಹುಟ್ಟಿಸುವ ಮುನ್ನ
        ಹಾಲು ಹುಟ್ಟಿಸಿದೆ ನನ್ನ ತಾಯ ಎದೆಯಲ್ಲಿ !
        ಬೆಂಕಿ ಹುಟ್ಟಿಸುವ ಮುನ್ನ ನೀರು ಹುಟ್ಟಿಸಿದೆ !
        ಸಾವು ಹುಟ್ಟಿಸುವ ಮುನ್ನ ಜೀವ ಹುಟ್ಟಿಸಿದೆ !
ಎಂಥ ಕರುಳಿನ ತಂದೆ ನೀನು,
        ಕರುಣಾ ಸಿಂಧು ನೀನು !
        ನಿನ್ನ ವಾತ್ಸಲ್ಯಮಯ ವ್ಯವಸ್ಥೆಯ
        ಅರ್ಥವನ್ನೇ ಅರಿಯದೆ
        ವ್ಯರ್ಥ ವಿಲಾಪಿಸುತ್ತಿಹೆನಯ್ಯಾ –
                ಸ್ವತಂತ್ರಧೀರ ಸಿದ್ಧೇಶ್ವರಾ !

## ೧೯

ಬಿಳಿ ಬಣ್ಣ ಭಯಕಾರಿ
        ನರರ ಕೂದಲುಗಳಿಗೆ ;
ಹಳದಿ ಹೆದರಿಪ ಬಣ್ಣ
        ಮರಬಳ್ಳಿಯೆಲೆಗಳಿಗೆ ;
ಕೆಟ್ಟ ಕನಸದು ಕಪ್ಪು
        ಬಿಳಿಜೋಳ ತೆನೆಗಳಿಗೆ ;
ಕುಂಕುಮವೆ ಕಾಯಿಲೆಯು
        ನೆಲಗಡಲೆ ಬೆಳೆಗಳಿಗೆ ;
ಹಸಿರು ಹಾವಸೆ ಹೊಲ್ಲ
        ಕೆರೆ ಬಾವಿ ಕೊಳಗಳಿಗೆ ;
ನೀಲಿ ಹಗೆ ನೆತ್ತರಿಗೆ
        ನರ ನಾಡಿಗಳಿಗೆ ;
        ಒಂದೊಂದು ಬಣ್ಣಕೂ ಒಂದೊಂದು ದೋಷ ;
        ಒಂದೊಂದು ಬಣ್ಣವೂ ಒಂದೊಂದಕ್ಕೆ ವಿಷ !

ಬಣ್ಣಗಳ ಚೆಲ್ಲಾಡಿ
ಬಣ್ಣಕ್ಕೆ ಸಿಲುಕದೆ
ಬಣ್ಣನೆಗು ನಿಲುಕದೆ
ನೀನುಳಿದೆಯಲ್ಲ – ಸ್ವತಂತ್ರ ಸಿದ್ಧೇಶ್ವರಾ !

## ೨೦

ನಡೆಯದ ಹಾದಿಯಲ್ಲಿ ಎಡವಿದೆನೆಂದರೆ
ಒಪ್ಪುವುದೆ ಅಯ್ಯಾ ?
ಕಾಣದ ಮುಖದ ಕುಂದನೆಣಿಸಿದರೆ
ಒಪ್ಪುವುದೆ ಅಯ್ಯಾ ?
ಉಣ್ಣದ ಅಡಿಗೆಯ ರುಚಿಯ ಟೀಕಿಸಿದರೆ
ಒಪ್ಪುವುದೆ ಅಯ್ಯ ?
ನೋಡದುದನ್ನು ನೋಡಿದಂತೆ ವರ್ಣಿಸಿದರೆ
ಒಪ್ಪುವುದೆ ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ
ಒಪ್ಪುವುದೆ ಅಯ್ಯಾ ?

## ೨೧

ನೆನೆವರಿಗೆ ನೀನು ಹತ್ತಿರಕ್ಕಿಂತ ಹತ್ತಿರ,
ಮರೆತವರಿಗೆ ನೀನು ದೂರಕ್ಕಿಂತ ದೂರವಯ್ಯ !
ಅರಿತವರಿಗೆ ನೀನು ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತು ;
ಅರಿಯದವರಿಗೆ ನೀನೇ ಮರೀಚಿಕೆಯ
ಜಲದ ಅಲೆಯ ತಲೆಯ ನೊರೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ತನುವಿನ ಕಣ ಕಣದಲ್ಲಿರುವ ನಿನ್ನನೇ
ಮನಕ್ಕೆ ಬರಗೊಡದವರ ಕಂಡು
ಬೆರಗಾದೆನಯ್ಯಾ !

## ೨೨

ತಾಯಿಯಾಗಿ ಕಂಡೆ,
ತಂದೆಯಾಗಿ ಕಂಡೆ,
ಗುರುವಾಗಿ ಕಂಡೆ,
ಅರಿವಾಗಿ ಕಂಡೆ,
ತರುವಾಗಿ, ಗಿರಿಯಾಗಿ, ದರಿಯಾಗಿ ಕಂಡೆ,
ಮಗುವಾಗಿ, ಮಿಗವಾಗಿ, ಖಗವಾಗಿ ಕಂಡೆ,
ಜಲವಾಗಿ, ಸ್ಥಲವಾಗಿ, ವಿಯತ್ತಲವಾಗಿ ಕಂಡೆ !
ಏನೇನಾಗಿ ಕಂಡೆ, ಏನೇನಾಗಿ ಕಾಣಲಿಲ್ಲವಯ್ಯ ನೀನು ?
ಅನಂತ ರೂಪಗಳಲ್ಲಿ ನೀನು ಕಂಡೂ ಕಾಣೆವೆಂಬುದು
ಕಣ್ಣಿದ್ದೂ ಕಾಣದವರ ವಾಣಿಯಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೩

ಎಣ್ಣೆಯಿಲ್ಲದೆ ದೀಪ ಉರಿಯಿತು,
ನೀರಿಲ್ಲದೆ ನದಿಯು ಹರಿಯಿತು,
ಬಳ್ಳಿಯಿಲ್ಲದೆ ಮೊಗ್ಗು ಬಿರಿಯಿತು,
ಮೋಡವಿಲ್ಲದೆ ಮಳೆಯು ಸುರಿಯಿತು,
ಹಸುವಿಲ್ಲದೆ ಹಾಲು ಕರೆಯಿತು,
ಏನೆಂಥ ಬೆರಗು ನೆರೆಯಿತು –
ನೀನೆನ್ನ ಕಣ್ಣು ತೆರೆದಾಗ !
ನೀನು ಕಣ್ಣು ತೆರೆಯದಿದ್ದಾಗ
ಹಗಲೂ ಕತ್ತಲೆ,
ಬೆಳಕೂ ಭ್ರಾಂತಿ,
ತಿಳಿವೂ ಮರವೆ, ಮಬ್ಬಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೪

ಸ್ಥಲದ ತೊಟ್ಟಿಲಲ್ಲಿ ಮಲಗಿರುವ 'ಇಪ್ಪು' ದನ್ನು
ಕಾಲದ ನೂಲಿನಿಂದ ತೂಗುವ 'ಅಪ್ಪು' ದೆಲ್ಲಿ ?
ಜಡದ ಜಡಜದಲ್ಲಿ ಅಡಗಿರುವ
ಅಜಡದ ಅಮಂದ ಸುಗಂಧವೆಲ್ಲಿ ?
ಅಶಿವದ ನರದಿ ಹರಿವ ಶಿವದ ನೆತ್ತರೆಲ್ಲಿ ?
ಅನಿಷ್ಟದ ಉದರದಲ್ಲಿ ಉದಿಸಲಿಹ ಇಷ್ಟದ ಶಿಶುವೆಲ್ಲಿ ?
ವ್ಯಕ್ತದ ವಾಣಿಯಲ್ಲಿ ಅವಿತ ಅವ್ಯಕ್ತದ ಅರ್ಥವೆಲ್ಲಿ ?
ಶ್ರುತದ ಸ್ವರದಲ್ಲಿರುವ ಅಶ್ರುತದ ನಿಸ್ವನವೆಲ್ಲಿ ?
        ಸ್ವತಂತ್ರಧೀರ ಸಿದ್ಧೇಶ್ವರಾ,
        ನನ್ನ ನಶ್ವರತೆಯಲ್ಲಿಹ ನಿನ್ನ ಶಾಶ್ವತತೆಯೆಲ್ಲಿ ?

## ೨೫

ಬೀಜವನ್ನೊಡೆದು ಮೊಳೆಕೆಯನ್ನರಸಿದರೆ ಉಂಟೆ ಅಯ್ಯ ?
ಮೊಳಕೆಯನ್ನು ಮುರಿದು ಸಸಿಯನರಸಿದರೆ ಉಂಟೆ ಅಯ್ಯ ?
ಸಸಿಯ ಕತ್ತರಿಸಿ ಮೊಗ್ಗೆಗಳಸಿದರೆ ಉಂಟೆ ಅಯ್ಯ ?
ಮೊಗ್ಗ ಕಿತ್ತು ಹೂವ ಹುಡುಕಿದರೆ ಉಂಟೆ ಅಯ್ಯ ?
ಪುಷ್ಪವ ಕೊಯ್ದು ಫಲವ ಬಯಸಿದರೆ ಉಂಟೆ ಅಯ್ಯ ?
        ಸ್ವತಂತ್ರಧೀರ ಸಿದ್ಧೇಶ್ವರಾ,
        ನಿನ್ನನುಳಿದು ಜಗಕೆ, ಜೀವನಕೆ
        ಅರ್ಥವನರಸಿದರೆ ಉಂಟೆ ಅಯ್ಯ ?

## ೨೬

ಇಪ್ಪುದರ ಕಪ್ಪೆ ಚಿಪ್ಪಿನಲ್ಲಿ
ಅಪ್ಪುದರ ಸುಪ್ಪಾಣಿಯ ಮುತ್ತು ಮೂಡುತ್ತಲಿದೆಯಂತೆ –
                        ನೋಡುವ ಬನ್ನಿರೆ !
ನಶ್ವರದ ಮೂಸೆಯಲ್ಲಿ
ಶಾಶ್ವತದ ಅದಿರು ಕರಗುತ್ತಲಿದೆಯಂತೆ –
                        ನೋಡುವ ಬನ್ನಿರೆ !

ಮೃಣ್ಮಯದ ಪ್ರಣತಿಯಲ್ಲಿ
ಚಿನ್ಮಯದ ಜ್ಯೋತಿ ಹೊತ್ತುತ್ತಲಿದೆಯಂತೆ–
ನೋಡುವ ಬನ್ನಿರೆ !
ತತ್ಕಾಲದ ಭಿತ್ತಿಯ ಮೇಲೆ
ಅನಂತಕಾಲದ ಚಿತ್ರ ಚಿತ್ರಿತವಾಗುತ್ತಿದೆಯಂತೆ –
ನೋಡುವ ಬನ್ನಿರೆ !
ಸಾಕಾರದ ಮುಕುಲದಲ್ಲಿ
ನಿರಾಕಾರದ ಸೌರಭ ಶೇಖರಿತವಾಗುತ್ತಿದೆಯಂತೆ –
ನೋಡುವ ಬನ್ನಿರೆ !
ಸ್ವತಂತ್ರ ಧೀರ ಸಿದ್ಧೇಶ್ವರನ ಸದ್ಭಕ್ತರ ಹೃದಯದಲ್ಲಿ
ಅಖಿಲಾಂಡಗಳ ಅಂತಃಸತ್ವ ಅರಳುತ್ತಿದೆಯಂತೆ –
ನೋಡುವ ಬನ್ನಿರೆ !

## ೨೭

ಸ್ಥಲದ ಧಾರಾ ಪಾತ್ರೆಯಿಂದ
ಕಾಲ ಬಿಂದುಗಳು ಕಳಚುತ್ತಿವೆ,
ಮತ್ತೆ ಧಾರಾ ಪಾತ್ರೆಯೊಳಕ್ಕೆ ನುಣುಚುತ್ತಿವೆ !
ಒಂದೊಂದು  ಬಿಂದುವಿಗೆ ಒಂದೊಂದು ಪರಿವರ್ತನೆ –
ಒಂದೊಂದು ಯುಗಪ್ರವರ್ತನೆ !
ಹಿಂದು ಇಂದಿನ ಉಪ್ಪು ನೇರಿಳೆ ತಿನ್ನುತ್ತ,
ಇಂದು ಮುಂದಿನ ಮುಲ್‌ಬೆರಿ ತಿನ್ನುತ್ತ,
ಎಂದಿಗೂ ಮುಗಿಯದ ಕಾಲದ ನೂಲನ್ನು ನೂಲುತ್ತಿವೆ ;
ಪ್ರಾಣ–ಮಣಿಗಳನ್ನೊಮ್ಮೆ, ತಲೆಬುರುಡೆಗಳನ್ನೊಮ್ಮೆ
ಪವಣಿಸುತ್ತಿವೆ ;
ಅವುಗಳನ್ನು ಸ್ಥಲದಲ್ಲಿಯೇ ಹೂಳಿ
ಸ್ಥಲದಿಂದಲೇ ಮತ್ತೆ ಪಡೆಯುತ್ತಿವೆ !
ಚಣಗಳ ರೇಶ್ಮೆಯ ಕ್ರೀಡೆಗಳು ಗೂಡು ಕತ್ತರಿಸಿ
ಮತ್ತೆ ಮತ್ತೆ ಮೈದೋರುತ್ತಿವೆ,
ಮತ್ತೆ ಮತ್ತೆ ಗೂಡು ಸೇರುತ್ತಿವೆ !
ಸ್ವತಂತ್ರ ಧೀರ ಸಿದ್ಧೇಶ್ವರಾ,
ಸ್ಥಲ–ಕಾಲ ಯುಗ್ಮದಲಿ, ಲಗ್ನದಲಿ, ಗರ್ಭದಲಿ
ನಿನ್ನ ಸೃಷ್ಟಿ–ಸ್ಥಿತಿ ಸಂಹಾರಲೀಲೆ ಸಾಗುತ್ತಿದೆ
ಅರಿತವರಿಗೂ ಅರ್ಥವಾಗದಂತೆ !

## ೨೮

ಅಂತರಿಕ್ಷದ ಇಂಕ್ಯುಬೇಟರಿನಲ್ಲಿ
ಅನಂತಕೋಟಿ ಅಂಡಗಳು ಕಾಯುತ್ತಿವೆ !
ಅಂಡಮೊಂದರಲ್ಲಿ ಅಗಣಿತ ಜೀವಿಗಳು ಹುಟ್ಟಿ ಸಾಯುತ್ತಿವೆ ;
ಅವುಗಳ ಜೀವನ–ಸಂಗ್ರಾಮದಿಂದ ನಿನ್ನ ತಲೆ ನೋಯುತ್ತಿದೆ!
ಇದೇ ಕಾರಣದಿಂದಲೇ
ಎಣಿಕೆಗೆ ಎಟುಕದ ಇನ್ನುಳಿದ ಅಂಡಗಳಲ್ಲಿ
ನಿಲ್ಲಿಸಿಹೆಯೇನಯ್ಯ ಜೀವಸೃಷ್ಟಿಯನ್ನು ?
ನಿಷ್ಪ್ರಯೋಜಕವೆಂದು ನಿರ್ಣಯಿಸಿ ಬಿಟ್ಟೆಯೇನಯ್ಯ
ಪ್ರಾಣಿ–ಸೃಷ್ಟಿ–ಪ್ರಯೋಗವನ್ನು ?
ನೀನಿನ್ನೂ ಹತಾಶನಾಗಿಲ್ಲವೆಂದೆ ತಂದೆ.
ಶತಮಾನಕ್ಕೊಬ್ಬ ಗಾಂಧಿ, ರವೀಂದ್ರ, ಅರವಿಂದ ಉದಿಸಿದರೂ
ಸಾರ್ಥಕ ನಿನ್ನ ಜೀವ–ಸೃಷ್ಟಿ–ಪ್ರಯೋಗ !
ಹೀಗಿರುವಾಗ,
ಶತಮಹಾಮಾನವರ ಹೆತ್ತ ಶತಮಾನಗಳು
ಹಲವಿರಲು ಖತಿಯೇತಕಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೯

ಸೌರವ್ಯೂಹದಲ್ಲಿ ಗ್ರಹ ಗೋಲಗಳು ಹಲವು –
ಆದರೆ ಜೀವರಾಶಿಗಳಿಗೆ ಜನ್ಮವೀಯುವ ಸೌಭಾಗ್ಯ
ನಿನಗಲ್ಲದೆ ಇನ್ನಾರಿಗಿದೆ ತಾಯೆ, ವಸುಂಧರೆ ?
ಸಮುದ್ರವಸನೇ ದೇವಿ ಪರ್ವತ ಸ್ತನಮಂಡಲೆ
ಮೇಘ ಕುಂಡಲೆ,
ಅಂಡಜ, ಪಿಂಡಜ, ಸ್ವೇದಜ, ಉದ್ಭಿಜಾದಿ
ಚರಾಚರ ಜೀವ ಸೃಷ್ಟಿ
ನಿನ್ನಲ್ಲಾದರೂ ನಡೆದಿರಲಮ್ಮ ಅವಿಚ್ಛಿನ್ನವಾಗಿ !
ನಡೆಯದಿರಲಿ ಪ್ರಳಯಸಿದ್ಧತೆ ಪ್ರಚ್ಛನ್ನವಾಗಿ !

ನಿನ್ನ ಮೈಯ ಮಣ್ಣಿನಿಂದ ಒಬ್ಬ ಗಣಪತಿಯೇಕೆ –
ಚಂದ್ರಪತಿ, ಬುಧಪತಿ, ಗುರುಪತಿ,
ಸಕಲ ಗ್ರಹಪತಿಗಳೂ ಸಮುದ್ಭವಿಸಲಮ್ಮ !
ಸ್ವತಂತ್ರಧೀರ ಸಿದ್ಧೇಶ್ವರನ
ಸದ್ಯಜ್ಞಾತ ಸೃಷ್ಟಿಯಲ್ಲಿ
ನೀನೆ ಆದಿಜನನಿ,
ನೀನೆ ಜೀವ–ಗಂಗೋತ್ರಿ !

೩೦

ಪ್ರಕೃತಿಮಾತೆ, ಪರಾಶಕ್ತಿ ಸ್ವರೂಪೆ,
ನೀನೊಲಿದರೆ,
ಬ್ರಹ್ಮಗಿರಿಯಲ್ಲಿಯೂ ಕಾವೇರಿ ಕನ್ನಿಕೆಯರು ಉದಿಸುವರು ;
ನೀನೊಲಿಯದಿರೆ,
ನೂರಾರು ಅಡಿ ಬೋರು ಮಾಡಿದರೂ ನೀರು ದೊರೆಯದಿರಬಹುದು !
ನೀನಿಚ್ಛೈಸಿದರೆ,
ಹಿಮಗಿರಿಯ ಮಡಿಲಲ್ಲಿಯೇ
ಹಿಮಲಿಂಗ ಮೈದೋರಬಹುದು,
ತಪ್ತಕುಂಡ ತಲೆದೋರಬಹುದು ;
ನೀನಿಚ್ಛೈಸದಿರೆ,
ಬೆಳೆವ ಬಯಲಿನಲ್ಲಿಯೂ ಬರ ಘೂತ್ಕರಿಸಬಹುದು ;
ನೀನು ಮನದಂದರೆ,
ಮರಳ್ಗಾಡಿನಲ್ಲಿಯೂ
ಸುಧಾಮಧುರ ಸಲಿಲ ಸರಸಿ ಸಮುದ್ಭವಿಸಬಹುದು ;
ನೀನು ನೊಂದರೆ,
ಮೆಟ್ಟೂರು ಕನ್ನಂಬಾಡಿ ಕಟ್ಟೆಗಳ
ಹೊಟ್ಟೆಗಳೂ ಬರಿದಾಗಬಹುದು !
ನೀನು ಮನಸ್ಸು ಮಾಡಿದರೆ,
ಮಣ್ಣು ಹೊನ್ನಾಗಬಹುದು,
ಕಲ್ಲು ರನ್ನವಾಗಬಹುದು,
ಹನಿ ಮುತ್ತಾಗಬಹುದು,

ನೆಲ ಜಲವಾಗಬಹುದು,
ಜಲ ನೆಲವಾಗಬಹುದು !
ಹೆಚ್ಚೇನು ತಾಯೆ,
ನಿನ್ನಿಂದ ತಾನೆ ಕಾಣದ ಸ್ವತಂತ್ರಧೀರ ಸಿದ್ಧೇಶ್ವರ
ಕಾಣುವಂತಾದುದು
ಕೋಟಿ ಕೋಟಿ ಗ್ರಹ ಗೋಲಗಳಲ್ಲಿ !

೩೧

ಈ ಮಣ್ಣಿನ ಕಣಕಣವೂ
ಒಮ್ಮಿಲ್ಲೊಮ್ಮೆ ಮೈಯಾಗಿ
ಮತ್ತೆ ಮಣ್ಣಾಗಿರದೇನಯ್ಯ ?
ಈ ಗಾಳಿಯ ಅಲೆ ಅಲೆಗಳೂ
ಒಮ್ಮಿಲ್ಲೊಮ್ಮೆ ಉಸಿರಾಗಿ
ಮತ್ತೆ ಅನಿಲವಾಗಿರವೇನಯ್ಯ ?
ಈ ಜಲದ ಬಿಂದು ಬಿಂದುಗಳೂ
ಒಮ್ಮಿಲ್ಲೊಮ್ಮೆ ಲಾಲಾರಸವಾಗಿ
ಮತ್ತೆ ಜಲವಾಗಿರವೇನಯ್ಯಾ ?
ಈ ಅನಲದ ಕಿಡಿ ಕಿಡಿಗಳೂ
ಒಮ್ಮಿಲ್ಲೊಮ್ಮೆ ಜಠರಾಗ್ನಿಯಾಗಿ
ಮತ್ತೆ ಅನಲವಾಗಿರವೇನಯ್ಯಾ ?
ಈ ಆಕಾಶವೂ
ಘಟದೊಳಗಣ ಆಕಾಶವಾಗುತ್ತ
ಘಟದ ಹೊರಗಣ ಆಕಾಶವಾಗುತ್ತಲೇ ಇಲ್ಲವೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪರಮಾತ್ಮ ಜೀವಾತ್ಮವಾಗಿ
ಮತ್ತೆ ವಿಶ್ವಾತ್ಮದಲ್ಲಿ ಒಡವೆರೆಯದೇಕಯ್ಯ ?

## ೩೨

ಎನಿತು ಸುಂದರ ವಸುಂಧರೆಯ
ಸೃಷ್ಟಿಸಿಹೆಯಯ್ಯಾ ನಮಗಾಗಿ !
ಹಕ್ಕಿ ಚಿಕ್ಕೆಗಳು, ಗಿರಿ ದರಿ ತೊರೆ ಕೆರೆಗಳು,
ಹಸು ಬಸವಗಳು, ಹೊಲ ಗದ್ದೆ ತೋಟ ಪಟ್ಟಿಗಳು –
ಆವುದನು ಬಣ್ಣಿಸುವುದು, ಯಾವುದನು ಬಿಡುವುದು ?
ಕರಿಕೆಯಿಂದ ತಾರಕಿಯವರೆಗೆ
ಕುರೂಪವ ಬದಿಗೊತ್ತಿ ಸುರೂಪದ ಸೂರೆ,
ಕಣಕಗಣಗಳಿಂದ ಅಮೃತದ ಧಾರೆ !
ಈ ಸರ್ವಸುಂದರ ವಸುಂಧರೆಯಲ್ಲಿ
ಅಸುಂದರವಾಗಿರುವುದು ಒಂದೇ ಒಂದು –
ಅದು ನನ್ನ ಮನ ನೋಡಾ !
ಮನದ ಚೆಲುವ ನೀಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೩

ನಿನ್ನ ವಿಶ್ವ ಚಿತ್ರವನ್ನು ನೋಡುತ್ತ ನಿಂತೆ ;
ಭೂವ್ಯೋಮ ವ್ಯೋಮಾತೀತಗಳನ್ನು ವ್ಯಾಪಿಸಿದ
ಅದರ ಭೂಮಾಕೃತಿಗೆ ಬೆರಗಾದೆ ;
ಸಚರಾಚರ ಸೃಷ್ಟಿಯ
ವಿಸ್ಮಯಜನಕ ವೈವಿಧ್ಯಕ್ಕೆ ವಿಭ್ರಮೆಗೊಂಡೆ ;
ನಿತ್ಯ ನವೀನ ರೇಖಾ ವೈಖರಿಗೆ
ವರ್ಣವಿನ್ಯಾಸಕ್ಕೆ ಮಾರುಹೋದೆ !
ಚಿತ್ರದಿಂದ ಚಿತ್ರಕಾರನತ್ತ ಚಿತ್ತ ಹೊರಳಿತು ;
ಚಿತ್ರಕಾಣದಾಯಿತು ; ಚಿತ್ರಕಾರ ಕಾಣುವವನಲ್ಲ !
ಚಿತ್ರಮೂ ಉಳಿಯಲಿಲ್ಲ ; ಚಿತ್ರನೋಡುವ ನಾನೂ ಉಳಿಯಲಿಲ್ಲ ;
ಏನುಳಿದುದೆಂಬುದೂ ತಿಳಿಯಲಿಲ್ಲ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೪

ನಭದ ನೀಲಿಯಲ್ಲಿ ಬೆಳಕಿನ ಚಿತ್ರಗಳ ಬರೆಯುತ್ತಿವೆ
        ಮಿಂಚಿನ ಕುಂಚಗಳಿಂದ ಕಪ್ಪು ಮೋಡಗಳು ;
ಕಾವಳದ ಕುರುಳುಗಳಿಗೆ ಮಿಣುಕು ಬೆಳಕಿನ
        ಮಲ್ಲಿಗೆಯ ಮುಡಿಸುತ್ತಿವೆ ಮಿಂಚು ಹುಳುಗಳು ;
ತರಲ ತರಂಗಗಳ ಮೇಲೆ ಮಿನುಗುವ ಹೆಜ್ಜೆಗಳ ಮೂಡಿಸುತ್ತ
        ನರ್ತಿಸುತ್ತಲಿವೆ ನಕ್ಷತ್ರ ನೀಹಾರಿಕೆಗಳು ;
ಊರ ಅಂಗಣದಲ್ಲಿ ರಶ್ಮಿಗಳ ರಂಗವಲ್ಲಿಯ ರಚಿಸುತ್ತಿವೆ
        ಮನೆಮನೆಗಳಿಂದ ಇಣುಕುತಿಹ ಹಣತೆಗಳು ;
        ಬೇಳುವೆಗೆ ಈಡಾದ ಬಾಳುವೆಯ ಕಾಳಿಮೆಯ ಹಣೆಗೆ
        ರನ್ನತಿಲಕವನಿಡುತ್ತಿವೆ ಮಕ್ಕಳ ಹೊಳೆವ ಕಣ್ಣುಗಳು !
        ನನ್ನೆದೆಯ ಅಂಧ-ಸಾಂದ್ರ-ರುಂದ್ರ ತಮಂಧದಲ್ಲಿಯೂ
                ನಿನ್ನ ಕರುಣೆಯ ಅರುಣ ಕಿರಣಗಳ ಹರಿಸಯ್ಯ,
                        ಸ್ವತಂತ್ರಧೀರ ಸಿದ್ಧೇಶ್ವರಾ !

## ೩೫

ಸೃಷ್ಟಿ ಸೌಂದರ್ಯಕ್ಕೆ ಕಣ್ಣು ಕುರುಡಾಗಿಹವು ;
ನೂರು ಮರಗಳ ನೂರು ಸ್ವರಗಳಿಗೆ ಕಿವಿ ಕಿವುಡಾಗಿಹವು ;
ಬಿಲಿಯದೆ ಬರುವ ಪರಿಮಳಗಳಿಗೆ ಮೂಗು ಎರವಾಗಿಹುದು ;
ಮಲಯಜದ ಮೃದು ಸ್ಪರ್ಶಕ್ಕೆ ತ್ವಚ ಉರುಟಾಗಿಹುದು ;
ಸಾರೋಕ್ತಿ ಸವಿನುಡಿಗಳಿಗೆ ನಾಲಗೆ ನಾಸ್ತಿಯಾಗಿಹುದು ;
ಸದ್ಭಾವನೆಗಳಿಗೆ ಹೃದಯ, ಸುವಿಚಾರಗಳಿಗೆ ಚಿತ್ತ
                ಬತ್ತಿ ಹೋಗಿಹವು !
        ಎಂಥ ಬರಡುತನ, ಕೊರಡುತನ,
                ಉರುಟುತನ, ಒರಟುತನ
                        ಬಂದಿತಯ್ಯ ಬಾಳಿಗೆ !

ಏನನೋದಿದೊಡೇನು,
        ಏನ ಪಡೆದೊಡೇನು–
        ಇದೇ ಶುಷ್ಕತೆ
        ರುಕ್ಷತೆ ರಿಕ್ತತೆಗಳೇನಯ್ಯಾ
                ನಮ್ಮ ಪಾಲಿಗೆ ?
ತಿನ್ನುವ ಅನ್ನ, ಕುಡಿಯುವ ನೀರು,
ಉಸಿರಾಡಿಸುವ ಗಾಳಿಗಳೇ ಮಲಿನವಾಗಿರುವಾಗ
ಏಳಿಗೆಗೆ ಅರ್ಥವೇನಯ್ಯ–
                ಸ್ವತಂತ್ರಧೀರ ಸಿದ್ಧೇಶ್ವರಾ ?

೩೬

ಹೂತ ಕಾಫಿಯ ತೋಟದ ಚೆಲುವು,
ಕಾತ ಕೌಂಗಿನ ತೋಟದ ಚೆಲುವು,
ಫಲಿತ ಕಿತ್ತಳೆ ತೋಟದ ಚೆಲುವು,
ತಳಿತ ಮಾವಿನ ತೋಪಿನ ಚೆಲುವು,
ಬೆಟ್ಟ, ಬನ, ಬಾನು, ಬಯಲುಗಳ ಚೆಲುವು–
        ಎನಿತು ಚೆಲುವುಗಳು ನೀನು ಹುಟ್ಟಿಸಿದ ಸೃಷ್ಟಿಯಲ್ಲಿ ?
ತನುವಿನ ಕುರೂಪ, ಮನದ ಕುರೂಪ,
ನುಡಿಯ ಕುರೂಪ, ನಡೆಯ ಕುರೂಪ,
ಕೊಳೆಗೇರಿಗಳ ಕುರೂಪ, ಹೊಲೆಗೇರಿಗಳ ಕುರೂಪ,
ಆಡಳಿತದ ಕುರೂಪ, ರಾಜಕೀಯದ ಕುರೂಪ,
ಹಿರೋಷಿಮಾ ನಾಗಾಸಾಕಿಗಳ ಕುರೂಪ–
        ಎನಿತು ಕುರೂಪಗಳು ನರರು ನಿರ್ಮಿಸಿದ ನಾಗರಿಕತೆಯಲ್ಲಿ ?
        ನಮ್ಮನೊಮ್ಮೆ ನಿನ್ನ ಸೃಷ್ಟಿಯ ಚೆಲುವಿಗೆ,
        ನಿನ್ನ ಅಸೀಮವಾದ ಒಲವಿಗೆ
        ತಕ್ಕವರನ್ನಾಗಿ ಮಾಡಾ–
                ಸ್ವತಂತ್ರಧೀರ ಸಿದ್ಧೇಶ್ವರಾ !

## ೩೭

ಯಾವುದರಿಂದ ಬೇಸತ್ತರೂ ನಿನ್ನಿಂದ ಬೇಸರಿಯೆ–
ಭೂಮಿತಾಯೆ, ಸೃಷ್ಟಿ ಮಾಯೆ !
ನಿಮಿಷಕ್ಕೊಂದು ನವೀನತೆ ನಿನ್ನಲ್ಲಿ,
ದಿವಸಕ್ಕೊಂದು ನವ ಜನ್ಮ ನಿನಗೆ !
ಕಾಡಹಕ್ಕಿಯಿಂದ ಬಾನ ಚಿಕ್ಕೆಯವರೆಗೆ,
ದೊಡ್ಡಿಯ ಧೇನುವಿನಿಂದ ಕಡಲ ಮೀನಿನವರೆಗೆ,
ಹಳ್ಳಿಯ ಹಳ್ಳದಿಂದ ನೈಲ್, ಗಂಗಾ, ಓಲ್ಗಾಗಳವರೆಗೆ–
ದಿಟ್ಟಿ ಹರಿದತ್ತ ನವಿರೆಬ್ಬಿಸುವ ನೋಟ !
ಒಮ್ಮೆ ಗಾನದಲ್ಲಿ, ಒಮ್ಮೆ ಧ್ಯಾನದಲ್ಲಿ, ಒಮ್ಮೆ ಮೌನದಲ್ಲಿ,
ಒಮ್ಮೆ ಮಾಗಿಯಲ್ಲಿ, ಒಮ್ಮೆ ಸುಗ್ಗಿಯಲ್ಲಿ,
ಮನವ ತಣಿಸುವೆ,
ಮುದವ ಉಣಿಸುವೆ,
ಬಾಳ ಕುಣಿಸುವೆ !
ನಿನ್ನ ಒಡಲಿನಲ್ಲಿ ಉದಿಸಿ,
ನಿನ್ನ ಮಡಿಲಿನಲ್ಲಿ ಬೆಳೆದು,
ನೀನು ಉಡಿಯಕ್ಕಿ ಉಂಡು,
ನೀನು ತೋರಿದುದ ಕಂಡು,
ಮತ್ತೆ ನಿನ್ನ ತೋಳ ತೊಟ್ಟಿಲಲ್ಲಿಯೇ
ಚಿರ ನಿದ್ರೆ ನಮಗೆ–
ಸ್ವತಂತ್ರಧೀರ ಸಿದ್ಧೇಶ್ವರನ ಶಕ್ತಿ ಸ್ವರೂಪಿಣಿಯೆ !

೩೮

ಜಗಜ್ಜನನಿಯ ಉಜ್ವಲ ತನಯೆ, ತಾಯೆ, ಭರತ ಭೂಮಿಯೆ !
ನಿನ್ನ ಬೆಳಕಿನ ಮಗಳ ಮಗನಾಗಿ ಹುಟ್ಟಿದುದೆನ್ನ ಭಾಗ್ಯ !
ಈಗ ಬದುಕಿರುವುದಂತೂ ಪರಮ ಭಾಗ್ಯ !
ಮತ್ತೆ ಬಿಡುಗಡೆ ನಿನ್ನ ತನುವಾಗಿದೆ,
ವಿಜ್ಞಾನ ಸಹಿತ ಜ್ಞಾನ ವದನವಾಗಿದೆ,
ಕರುಣೆ ಕಣ್ಣಾಗಿದೆ, ನನ್ನಿ ಕಿವಿಯಾಗಿದೆ,
ನೀತಿ ನಾಸಿಕವಾಗಿದೆ, ಪ್ರೀತಿ ರಸನೆಯಾಗಿದೆ,
ಅಭಯ ಹಸ್ತವಾಗಿದೆ, ಸರ್ವಹಿತ ಮಸ್ತಕವಾಗಿದೆ,
ಚಾರಿತ್ರ್ಯ ಚರಣವಾಗಿದೆ,
ಶಕ್ತಿ ಸಿಂಹಪೀಠವಾಗಿದೆ !
ನೀನೀಗ ಸಂಕ್ಷಿಪ್ತ ಬ್ರಹ್ಮಾಂಡ !
ಏಳಬಹುದು ಅಂತಃಕಲಹ ಜ್ವಾಲೆಗಳು
ಆಗಾಗ ನಿನ್ನ ಮನೆಯಲ್ಲಿ !
ಬೀಸಬಹುದು ವೈರದ ಬಿರುಗಾಳಿಗಳು
ಆಗಾಗ ಎಡಬಲಗಳಿಂದ, ತಲೆಯ ಮೇಲಿಂದ !
ಆದರಿನ್ನು ನೀನು ಹಿಮಾಲಯದಂತೆ ನಿಶ್ಚಲ,
ಹಿಂದೂ ಸಾಗರದಂತೆ ಅವಿನಾಶಿ !
ಸ್ವತಂತ್ರಧೀರ ಸಿದ್ಧೇಶ್ವರನ ದಯೆಯಿಂದ
ನಿರಂಕುಶ ಮತಿಗಳಾಗಲಿ,
ವಿಶ್ವಜಿತುಗಳಾಗಲಿ,
ಸರ್ವಹಿತ ವ್ರತಿಗಳಾಗಲಿ
ನಿನ್ನ ಮಕ್ಕಳು !
ದಿಗಂತವಿಶ್ರಾಂತವಾಗಲಿ
ನಿನ್ನ ಕೀರ್ತಿ, ಯಶಗಳು !

## ೩೯

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ
ಈ ಸುಂದರ ಸುಮನೋಹರ ವನವನ್ನು
ಜಾತಿ ಉಪಜಾತಿ ಉಪ ಉಪ ಜಾತಿಗಳ
ಕೋತಿಗಳಿಗಾಗಿ ಹುಟ್ಟಿಸಿಹೆಯೇನಯ್ಯಾ ?
ಕೊನರುತ್ತಲೆ ಕಡಿದೊಗೆಯುತ್ತಿವೆ
ಪ್ರತಿಭೆಯ ಕುಡಿಗಳನ್ನು ;
ಅರಳುವ ಮೊದಲೇ ಕಿತ್ತೆಸೆಯುತ್ತಿವೆ
ಸವಿ ಭಾವಗಳ ಹೂಗಳನ್ನು ;
ಹಣ್ಣಾಗುವ ಮೊದಲೇ ಗೀರಿ ತೂರುತ್ತಿವೆ
ಕ್ರತು ಶಕ್ತಿಯ ಕಾಯಿಗಳನ್ನು !
ಬನವಿದು ಬೆಳೆಯುವ ಬಗೆ ಯಾವುದಯ್ಯಾ ?
ಉಳಿಯುವ ಪರಿ ಯಾವುದಯ್ಯಾ ?
ಇವುಗಳನ್ನೆಲ್ಲ ಕರೆದೊಯ್ದು
ಕಡಲಿಗೆ ತಳ್ಳಬಲ್ಲ
ಕಿಂದರಿ ಜೋಗಿಯೊಬ್ಬನ ಕಳಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೦

ಭಾರತವು ಸಂಕ್ಷಿಪ್ತ ಬ್ರಹ್ಮಾಂಡವಾದರೆ
ಕರ್ನಾಟಕವು ಸಂಕ್ಷಿಪ್ತ ಭಾರತ ನೋಡಾ !
ಇಲ್ಲಿ ಇಲ್ಲದುದು ಇನ್ನೆಲ್ಲಿದೆ ತೋರಾ !
ಇಲ್ಲಿಯ ಕಲ್ಲು ರನ್ನ, ಮಣ್ಣು ಹೊನ್ನು, ನೀರು ಸುಧೆ !
ಮಲೆಬಯಲುಗಳ ಬೇಟ, ಕರಾವಳಿಯ ನೋಟ,
ಕೊಡಗಿನ ತೋಟಗಳ ಮೇಲಾಟ,
ಗಿರಿಧಾಮಗಳ ಮಾಟ, ವನ್ಯಪ್ರಾಣಿಗಳ ಚೆನ್ನಾಟ–
ಒಂದೊಂದೂ ಸೊಗಸಿನ ಸುಗ್ಗಿ, ಸೊಬಗಿನ ಸೂರೆ !
ಕನ್ನಡನಾಡಿನಲ್ಲಿ ಜನ್ಮವ ಬೇಡಿಕೊಂಡರೆ
ಎಲ್ಲವನ್ನೂ ಬೇಡಿಕೊಂಡಂತೆ ;
ಕನ್ನಡ ಸಂಸ್ಕೃತಿಯ ಮೈಗೂಡಿಸಿಕೊಂಡರೆ
ಎಲ್ಲವನ್ನೂ ಪಡೆದುಕೊಂಡಂತೆ !

ಮತ್ತೆ ಹುಟ್ಟಿಸುವುದಾದರೆ
ನನ್ನನಿಲ್ಲಿಯೇ ಹುಟ್ಟಿಸು ತಂದೆ !
ನರನಾಗಿ ಅಲ್ಲ–ಸುರಭಿಯಾಗಿ ಹುಟ್ಟಿಸು ;
ಇಟ್ಟರೆ ಸಗಣಿಯಾಗಿ, ತಟ್ಟಿದರೆ ಬೆರಣಿಯಾಗಿ,
ತಟ್ಟದೆ ಹಾಕಿದರೆ ಗೊಬ್ಬರವಾಗಿ
ಈ ನಾಡಿನ ಕೃಷಿಋಷಿಯ ಸೇವಿಸುವಾಸೆ ನನಗೆ ;
ಸುಟ್ಟರೆ ಶ್ರೀ ವಿಭೂತಿಯಾಗಿ
ಈ ನಾಡಿನ ಹರಭಕ್ತರ ಹಣೆಗಳಲ್ಲಿ
ಶೋಭಿಸುವಾಸೆ ನನಗೆ !
ಸುರಭಿಯಾಗಿಸದಿರೆ, ಗಂಧದ ಮರವಾಗಿ ಹುಟ್ಟಿಸು ;
ಅದನ್ನು ಬೆಳೆಸಿ ತುಂಡರಿಸು ;
ಮನೆಗೊಂದು ತುಂಡು ಮುಟ್ಟಿಸು ;
ತೆಯ್ದರೆ ಶ್ರೀಗಂಧವಾಗಿ
ಈ ನಾಡಿನ ಹರಿಭಕ್ತರ ಹಣೆಗಳಲ್ಲಿ
ವಿರಾಜಿಸುವಾಸೆ ನನಗೆ !
ಇದಾಗದಿರೆ, ಬಿದಿರ ಮೆಳೆಯಾಗಿ ಹುಟ್ಟಿಸಿ
ಬಡವರ ಗುಡಿಸಲುಗಳಿಗೆ ಒದಗಿಸು ;
ಮಕ್ಕಳ ಆಟಿಗೆಗಳಾಗಿ ಮಾರ್ಪಡಿಸು ;
ಮುರಲೀ ಪ್ರಿಯರಿಗೆ ಕೊಳಲ ಮಾಡಿಕೊಡು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೧

ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆನ್ನ ಮತ್ತೆ ಹುಟ್ಟಿಸುವುದೇ ಆದರೆ
ಕನ್ನಡಿಗನನ್ನಾಗಿ ಹುಟ್ಟಿಸು,
ಬಸವ ಭಕ್ತನನ್ನಾಗಿ ಹುಟ್ಟಿಸು !
ಇದಾಗದಿದ್ದರೆ, ದೇವತೆಗಳಿಗೆ ಒದಗುವ ಅಮೃತವಾಗಿಸುವುದಕ್ಕಿಂತ
ಬಡವರಿಗೆ ಸಿಕ್ಕುವ ಮಜ್ಜಿಗೆಯನ್ನಾಗಿ ಹುಟ್ಟಿಸು ;
ಇಂದ್ರನ ವೈಭವವನ್ನು ಸಾರುವ ಐರಾವತನನ್ನಾಗಿಸದೆ
ಭಕ್ತರ ಮನೆಯ ಎತ್ತಾಗಿ ಹುಟ್ಟಿಸು ;
ಉಳ್ಳವರಿಗೇ ಒಲಿದೀವ ಸುರತರುವನ್ನಾಗಿಸದೆ
ಇಲ್ಲದವರಿಗೂ ನಲಿದೀವ ಬೋರೆಯ ಮರವಾಗಿ ಹುಟ್ಟಿಸು ;
ಯಮಧರ್ಮನ ಕೋಣವನ್ನಾಗಿಸದೆ
ದತ್ತಾತ್ರೇಯನ ನಾಯಿಯನ್ನಾಗಿ ಹುಟ್ಟಿಸು ;
ಮುತ್ತು ರತ್ನಗಳನ್ನಿಡುವ ಪೆಟ್ಟಿಗೆಯನ್ನಾಗಿಸದೆ
ಹಡಪದ ಅಪ್ಪಣ್ಣನ ಹಸಿಬೆಯಾಗಿ ಹುಟ್ಟಿಸು,
ಕೊನೆ ಮುಟ್ಟಿಸು !

## ೪೨

'ಭಾರತ–ಕರ್ನಾಟಕ'
ಇದು ನನ್ನ ಸಪ್ತಾಕ್ಷರೀ ಮಂತ್ರವಯ್ಯ ;
'ಕನ್ನಡ–ಬಸವ'
ಇದು ನನ್ನ ಷಡಕ್ಷರೀ ಮಂತ್ರವಯ್ಯ ;
'ಸತ್ಯ–ಸೌಂದರ್ಯ'
ಇದು ನನ್ನ ಪಂಚಾಕ್ಷರೀ ಮಂತ್ರವಯ್ಯ
'ಪ್ರೀತಿ–ನೀತಿ'
ಇದು ನನ್ನ ಚತುರಕ್ಷರೀ ಮಂತ್ರವಯ್ಯ ;
'ಜನತೆ'
ಇದು ನನ್ನ ತ್ರ್ಯಕ್ಷರೀ ಮಂತ್ರವಯ್ಯ ;
'ಕಾವ್ಯ'
ಇದು ನನ್ನ ದ್ವ್ಯಕ್ಷರೀ ಮಂತ್ರವಯ್ಯ ;
'ನೀ'
ಇದು ನನ್ನ ಏಕಾಕ್ಷರೀ ಮಂತ್ರವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೪೩

ಭುವಿಯ ಸಪ್ತ ಸೋಜಿಗಗಳನ್ನು ನೋಡಿ
ಬೆರಗಾಗುವವರ ಬರವಿಲ್ಲ–
ಭವದ ಸಪ್ತ ಸೋಜಿಗಗಳತ್ತ
ಚಿತ್ತ ಹೊರಳಲಯ್ಯ !
ಮಣ್ಣಿನಿಂದ ಬಣ್ಣ ಪರಿಮಳಗಳು ಹೊರಹೊಮ್ಮುವ ಸೋಜಿಗ,
ಮೊಟ್ಟೆಯಿಂದ ರೆಕ್ಕೆ ಕೊಕ್ಕುಗಳು ಮೈದೋರುವ ಸೋಜಿಗ,
ಜನನಿಯುದರದಲ್ಲಿ, ಶಿಲೆಯ ಪದರಿನಲ್ಲಿ ಆಹಾರ ಉಸಿರು
ದೊರೆವ ಸೋಜಿಗ,
ಹಮ್ಮಿನುರದಿಂದ ಕಲೆಗಳು ಕೊನರುವ ಸೋಜಿಗ,
ಬಾಳಿನಿಂದ ಬೆಲೆಗಳು ತಲೆದೋರುವ ಸೋಜಿಗ,
ಶಬ್ದದಿಂದ ಅರ್ಥಸರಿತೆ ಸೆಲೆಯೊಡೆವ ಸೋಜಿಗ,
ನನ್ನಲ್ಲಿ ನಿನ್ನ ಇರುಹಿನ ಕುರುಹನರಿವ ಅರುಹು
ಮೂಡುವ ಸೋಜಿಗ–
ಎಂಥ ಸೋಜಿಗಗಳಿವು !
ಸೋಜಿಗಗಳಲ್ಲಿ ಸೋಜಿಗಗಳು !
ಇಂಥ ಸೋಜಿಗಗಳನ್ನು ನೋಡಿಯೂ
ಸೋಜಿಗಗೊಳ್ಳದಿರುವುದೇ ಸೋಜಿಗವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೪೪

‘ಇದೆ, ಇದೆ,’ ಎಂಬುದರ ಬದಿಯಲ್ಲಿಯೇ
‘ಇಲ್ಲ, ಇಲ್ಲ,’ ಎಂಬ ಸೊಲ್ಲು !
‘ಹೌದು, ಹೌದು,’ ಎಂಬುದರ ಹತ್ತಿರದಲ್ಲಿಯೇ
‘ಅಲ್ಲ, ಅಲ್ಲ’ ಎಂಬ ಸೊಲ್ಲು !
‘ಸತ್ಯ, ಸತ್ಯ,’ ಎಂಬುದರ ಸಮೀಪದಲ್ಲಿಯೇ
‘ಸುಳ್ಳು, ಸುಳ್ಳು,’ ಎಂಬ ಸೊಲ್ಲು !
‘ಗಟ್ಟಿ, ಗಟ್ಟಿ’ ಎಂಬುದರ ಪಕ್ಕದಲ್ಲಿಯೇ
‘ಟೊಳ್ಳು, ಟೊಳ್ಳು,’ ಎಂಬ ಸೊಲ್ಲು !
ಇವುಗಳಲ್ಲಿ ಯಾವ ನುಡಿಗೆ ಕಿವಿಗೊಡಲಿ ?
ನಾನಾವ ಸರ್ವಜ್ಞನೆಂದು ತೀರ್ಪು ಕೊಡಲಿ ?
ಅದನಿದನು ನಂಬಿ ಏಕೆ ಕೆಡಲಿ ?
ನನ್ನ ಮನ ನಿನ್ನನೇ ನಂಬಿ ಬಿಡಲಿ–
ಸ್ವತಂತ್ರಧೀರ ಸಿದ್ಧೇಶ್ವರಾ !

೪೫

ನಂಬಲಾರೆ, ನಂಬದಿರಲಾರೆ–
ಮುಂದುಗಾಣದಾಗಿಹೆನಯ್ಯ !
ಒಂದ ನಂಬುವುದರೊಳಗಾಗಿ
ಇನ್ನೊಂದು ಬಂದು ಹಿಂದೂಡುವುದು ಅದನ್ನು !
ಆ ಇನ್ನೊಂದನ್ನು ಮತ್ತೊಂದು,
ಆ ಮತ್ತೊಂದನ್ನು ಮಗುದೊಂದು–
ಒಂದನ್ನೊಂದು ಪದಚ್ಯುತಗೊಳಿಸುತ್ತಲೇ ಇವೆಯಯ್ಯ ಪದೇ ಪದೇ !
ಅದನು ನಂಬಿ, ಇದನು ನಂಬಿ,
ಯಾವ ಯಾವುದನೋ ನಂಬಿ ನಿರಾಶನಾಗಿ
ನಿನ್ನನೇ ನಂಬಿದೆನಯ್ಯಾ ಕೊನೆಗೆ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೬

ನಿನ್ನ ನಂಬದಿರೆ ಸಂಸಾರವೊಂದು ಅಂಬುಧಿಯು,
ನಿನ್ನ ನಂಬಿದರೆ ಅದೇ ಮೇಕೆದಾಟು ನೋಡಯ್ಯ !
ನಿನ್ನ ನಂಬದಿರೆ ವಿಶ್ವವೊಂದು ಪ್ರಶ್ನಾರ್ಥಕ ಚಿಹ್ನೆ,
ನಿನ್ನ ನಂಬಿದರೆ ಅದೇ ತೆರೆದ ಪುಸ್ತಕವಯ್ಯಾ !
ನಿನ್ನ ನಂಬದಿರೆ ಬೆಳಕೂ ಕತ್ತಲೆಯು,
ನಿನ್ನ ನಂಬಿದರೆ ಕತ್ತಲೆಯೂ ಬೆಳಕಯ್ಯಾ !
ನಿನ್ನ ನಂಬದಿರೆ ಬದುಕೆಲ್ಲ ಅರ್ಥಹೀನ ಉಸಿರಾಟ,
ನಿನ್ನ ನಂಬದಿರೆ ಅದೇ ಅರ್ಥದ ನವಿಲಟವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಂಬಿಕೆಯೆ ಹರಿಗೋಲು ನನಗೆ–
ನೀನೆ ಅದರ ಅಂಬಿಗನಯ್ಯ !

## ೪೭

ನಾನು ನಿನ್ನಲ್ಲಿ ನಿಶ್ಚಲ ವಿಶ್ವಾಸವಿರಿಸಿದುದ ಕಂಡು
ನಗುವರಯ್ಯ ನಂಬದವರು !
ನಗುವುದನು ನಿಲ್ಲಿಸಿ ತೋರಿಸಲಿ ಅವರು
ನಿನಗಿಂತ ವಿಶ್ವಾಸಾರ್ಹವಾದುದನು !
ನಿನ್ನನುಳಿದು ನಂಬುವೆನದನು !
ವಿಶ್ವಾಸ ವಧೆ ಸುಲಭ,
ವಿಶ್ವಾಸ ಸುಧೆ ಸುಲಭವೇನಯ್ಯ ?
ವಿಶ್ವಾಸದ ನಾಸಿಕದ ಶ್ವಾಸ ನೀನು,
ವಿಶ್ವಾಸದ ವಿಶ್ವಾಸ ನೀನು !
ನಿನ್ನ ನಂಬಿಹೆನೆನ್ನಲು
ನನಗಾವ ನಾಚಿಕೆಯೂ ಇಲ್ಲ ನೋಡಾ –
ಸ್ವತಂತ್ರಧೀರ ಸಿದ್ಧೇಶ್ವರಾ !

೪೮

ನೀನು ಕರುಣಿಸಿದರೆ
ನಿಮಿಷಾರ್ಧದಲ್ಲಿ ನಿತ್ಯಸತ್ಯದ ದರ್ಶನ ;
ನೀನು ಕರುಣಿಸದಿರೆ
ಜೀವನವೆಲ್ಲ ಮರಳ್ಗಾಡ ಪಯಣ !
ನೀನು ಕರುಣಿಸಿದರೆ
ವಿಶ್ವದ ಕಣಕಣಕ್ಕೂ ಅರ್ಥ ;
ನೀನು ಕರುಣಿಸದಿರೆ
ಇಳೆಯೆಲ್ಲ ಎನಿಸುವುದು ವ್ಯರ್ಥ !
ಕರುಣಿಸು ಕರುಣಿಗಳರಸ, ಕರುಣಿಸು ;
ನನ್ನನರಿದು, ನನ್ನರಿವಿನಿಂದ ನಿನ್ನನರಿದು,
ನಿನ್ನಿಂದ ಎಲ್ಲವನ್ನರಿದು,
ಅರಿವಾಗಿ ಅರಿವ ಬೆರೆದು
ಬಯಲಾಗುವುದನ್ನು ಕರುಣಿಸು –
ಸ್ವತಂತ್ರಧೀರ ಸಿದ್ಧೇಶ್ವರಾ !

೪೯

ನಿನ್ನನರಿಯುವುದಿರಲಿ,
ನನ್ನನೇ ಅರಿಯದೆ
ಕಾಲಕಳೆದೆನಯ್ಯ !
ನನ್ನನರಿತಿದ್ದರೆ
ನಿನ್ನನರಿಯದಿರುತ್ತಿದ್ದೆನೆ ?
ತನ್ನನರಿಯರಿದಾತ
ಇನ್ನೇನನೂ ಅರಿಯನೆಂದಾತ–
ಸ್ವತಂತ್ರಧೀರ ಸಿದ್ಧೇಶ್ವರ !

## ೫೦

ತಾನಿದ್ದರೆ ತಾನೆ ಏನೆಲ್ಲವೂ ?
ತಾನೇ ಇಲ್ಲದಿರೆ ಏನಿದ್ದರೇನಯ್ಯಾ ?
ತಾನಿದ್ದರೇ ತಾರೆ ಶಶಿ ರವಿ ಗಗನ ಜಗಗಳು ;
ತಾನಿದ್ದರೆ ಮಾತ್ರ ಸತ್ಯ ಶಿವ ಸುಂದರಗಳು ;
ತಾನಿದ್ದರಲ್ಲವೆ ವಿದ್ಯೆ, ಕಲೆ, ವಿಜ್ಞಾನ, ವ್ಯವಹಾರಗಳು ?
ತನ್ನಿಂದಲೇ ಕಾಣಬೇಕೇನಾದರೂ,
ತಾನಾಗಿಯೇ ಆಗಬೇಕೇನಾದರೂ !
ತನ್ನನುಳಿದು ನನ್ನಿ ಪಡೆವೆವೆಂಬುದು
ನಿನ್ನನುಳಿದು ತನ್ನ ಪಡೆವೆವೆಂಬುದು
ಹೊಳ್ಳು ತೂರಿದಂತಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೧

ಆಗಬೇಕು, ಆಗಬೇಕು–
ಏನೇನೋ ಆಗದೆ
ತಾನು ತಾನಾಗಬೇಕು !
ನಾಲ್ಕು ಜನರಿಗೆ ಆಗಬೇಕು ;
ಅದಿರು ಅಪರಂಜಿಯಾಗಬೇಕು ;
ಪ್ರಕೃತಿ ಸಂಸ್ಕೃತಿಯಾಗಬೇಕು ;
ಅನ್ನಮಯ ಆನಂದಮಯವಾಗಬೇಕು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನೀನೋ, ನೀನು ನಾನೋ,

ಏನೋ ಆಗಬೇಕು !

೫೨

ಯಾರು ನನ್ನಿಂದ ದೂರಾದರೂ
ನಾನು ನನ್ನಿಂದ ದೂರವಾಗದಂತಿರಿಸಯ್ಯ ;
ಯಾರು ನನ್ನಲ್ಲಿಗೆ ಬಾರದಿದ್ದರೂ
ನಾನು ನನ್ನಲ್ಲಿಗೆ ಬರುವಂತೆ ಕರುಣಿಸಯ್ಯ ;
ಯಾರು ನನ್ನನ್ನು ನಂಬದಿದ್ದರೂ
ನಾನು ನನ್ನನ್ನು ನಂಬುವಂತೆ ಮಾಡಯ್ಯ ;
ಯಾರು ನನ್ನನ್ನು ಅರಿಯದಿದ್ದರೂ
ನಾನು ನನ್ನನ್ನು ಅರಿಯುವಂತೆ ಅನುಗ್ರಹಿಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಾನಾಗಿ ನೀನಾಗುವಂತೆ ಆಶೀರ್ವದಿಸಯ್ಯ !

೫೩

ನಿನ್ನ ಕರೆ ನನಗೆ ಕೇಳಿಸಲಿ, ಕೇಳಿಸದಿರಲಿ–
ನನ್ನ ಮೊರೆ ಮಾತ್ರ ನಿನಗೆ ಕೇಳಿಸುತ್ತಿರಲಯ್ಯ !
ನನ್ನೆರಡು ಕಿವಿ ಮರಗಿವಿಗಳಾಗಬಹುದು,
ಕಣಕಣವೂ ಕಿವಿಯಾಗಿರುವ
ನೀನೆಂತು ಕಿವುಡನಾಗಬಲ್ಲೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರೆ ನನಗೆ ಕೇಳಿಸಲಿ, ಕೇಳಿಸದಿರಲಿ,
ನನ್ನ ಮೊರೆ ಮಾತ್ರ ನಿನಗೆ
ಕೇಳಿಸುತ್ತಿರಲಯ್ಯಾ !

## ೫೪

ನೀನೆನ್ನ ಕರೆಯಲಿಲ್ಲವೆನ್ನಲೆ ? ಎನ್ನೆ !
ನೀನು ಕರೆದೆ, ಮತ್ತೆ ಮತ್ತೆ ಕರೆದೆ :
ಅನಾಥ ಶಿಶುವಿನ ಆಕ್ರೋಶವಾಗಿ ಕರೆದೆ,
ಮಹಾರೋಗಿಯ ನರಳಿಕೆಯಾಗಿ ಕರೆದೆ,
ಪರಿತ್ಯಕ್ತೆಯ ಕಂಬನಿಯಾಗಿ ಕರೆದೆ,
ಬಡವನ ನಿಟ್ಟುಸಿರಾಗಿ ಕರೆದೆ,
ಪತಿತನ, ಪದಹೃತನ ಕ್ರಂದನವಾಗಿ ಕರೆದೆ,
ಭಗ್ನಮಾನವನ ಉದ್ವಿಗ್ನ ಸ್ವರವಾಗಿ ಕರೆದೆ !
ಯಾವ ಸ್ವರದಿಂದ ಕರೆದರೂ ಕಿವಿಗೊಡದ
ಮೊಂಡ ನಾನಯ್ಯ, ಪಾಖಂಡಿ ನಾನಯ್ಯ !
ಸಿರಿಯ ತೇಗಿನಲ್ಲಿ, ಸುಖದ ಕೇಕೆಯಲ್ಲಿ,
ವಿಲಾಸದ ಸಿಳ್ಳಿನಲ್ಲಿ, ಅಧಿಕಾರದ ಅಬ್ಬರದಲ್ಲಿ,
ಬಲದ ಉಲುಹಿನಲ್ಲಿ ಕರೆಯಲು ನಿನಗೆ ಇಷ್ಟವಿಲ್ಲ–
ನಿನಗೆ ಪ್ರಿಯವಾದ ದುಃಖಿತರ ಸ್ವರದಲ್ಲಿ ಕರೆದರೆ
ನನಗೆ ಕೇಳಿಸುವುದಿಲ್ಲ !
ಎಂತಯ್ಯಾ, ಎಂದಯ್ಯಾ –
ನನಗೆ ನಿನ್ನ ಸ್ವರ ಕೇಳಿಸುವುದು ?
ಹೇಗಯ್ಯಾ, ಯಾವಾಗಯ್ಯ–
ನಾನು ನಿನಗೆ ಹತ್ತಿರವಾಗುವುದು,
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೫

ನಾನಿರುವ ತನಕ ನನ್ನ ಎಡಬಲ
        ಹಿಂದು ಮುಂದು ಮೇಲು ಕೆಳಗುಗಳಯ್ಯಾ ;
ನಾನಳಿದು ನೀನುಳಿದಾಗ ಎಲ್ಲಿಯ ಎಡಬಲ,
        ಎಲ್ಲಿಯ ಹಿಂದು ಮುಂದು ಮೇಲು ಕೆಳಗುಗಳಯ್ಯಾ ?
ನಾನಿರುವ ತನಕ ನಿನಗೊಂದು ನಾಮ, ನಿನಗೊಂದು ರೂಪ,
        ನಿನಗೊಂದು ಗುಡಿ, ಗುರುದ್ವಾರ, ಮಸೀದೆ, ಚರ್ಚು ;
ನಾನಳಿದು ನೀನುಳಿದಾಗ ನಿನಗಾವ ನಾಮ, ನಿನಗಾವ ರೂಪ.
        ನಿನಗಾವ ಗುಡಿ, ಗುರುದ್ವಾರ, ಮಸೀದೆ, ಚರ್ಚುಗಳಯ್ಯ ?
ನಾನಿರುವ ತನಕ ನೂರಾರು ಗ್ರಂಥ, ನೂರಾರು ಪಂಥ,
        ನೂರಾರು ಮಂತ್ರ ತಂತ್ರಗಳಯ್ಯ ;
ನಾನಳಿದು ನೀನುಳಿದಾಗ ನಿನಗಾವ ಗ್ರಂಥ, ನಿನಗಾವ ಪಂಥ,
        ನಿನಗಾವ ಮಂತ್ರ ತಂತ್ರಗಳಯ್ಯ ?
                ಸ್ವತಂತ್ರಧೀರ ಸಿದ್ಧೇಶ್ವರಾ,
                ನಾನಳಿದು ನೀನುಳಿದು,
                ನನ್ನ, ಅನ್ಯ, ಭಿನ್ನವೆಂಬುದು
                        ಇಲ್ಲವಾಗಲಯ್ಯಾ !

## ೫೬

ಮುಗಿದ ಮೊಗ್ಗೆ ಬೆಳಗಿನ ಸುಳಿಗಾಳಿಗಾಗಿ ಕಾದಿರುವಂತೆ
        ಕಾದಿಹೆನಯ್ಯ ನಿನ್ನ ಕರುಣಾ–ಶ್ರಾವಣ ಸಮೀರಣಕ್ಕಾಗಿ ;
ಬಿಗಿದ ತಂತಿ ಬಾಜಿಸಬಲ್ಲ ಬೆರಳಿಗಾಗಿ ಕಾದಿರುವಂತೆ
        ಕಾದಿರುವೆನಯ್ಯ ನಿನ್ನ ಕೃಪಾಂಗುಲಿಯ ಮಿಡಿತಕ್ಕಾಗಿ ;
ಸಿಂಗರಿಸಿದ ರಂಗ ಕುಣಿವ ಕಾಲುಗಳಿಗಾಗಿ ಕಾದಿರುವಂತೆ
        ಕಾದಿಹೆನಯ್ಯಾ ನಿನ್ನ ಒಲವಿನ ಲಲಿತಲಾಸ್ಯಕ್ಕಾಗಿ ;
ವರ ಶಿಷ್ಯನ ಕಿವಿ ಗುರುವಚನಕ್ಕಾಗಿ ಕಾದಿರುವಂತೆ
        ಕಾದಿರುವೆನಯ್ಯಾ ನಿನ್ನ ಅಭಯವಾಣಿಯ ಅನುರಣನಕ್ಕಾಗಿ ;
ತೊಟ್ಟಿಲದ ಕೂಸು ತಾಯ ಜೋಗುಳಕ್ಕಾಗಿ ಕಾದಿರುವಂತೆ

ಕಾದಿಹೆನಯ್ಯಾ ನಿನ್ನ ಅಶ್ರುತ ನಕ್ಷತ್ರಗಾನವ ಆಲಿಸಲಿಕ್ಕಾಗಿ !
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ನಿತ್ಯ ನಿರೀಕ್ಷೆಯ, ಚಿರಪ್ರತೀಕ್ಷೆಯ
ಪರೀಕ್ಷೆ ಮುಗಿಯುವುದು ಯಾವಾಗ ?
ನಿನ್ನ ಉಪೇಕ್ಷೆ ಅಪೇಕ್ಷೆಯಾಗುವುದು
ಯಾವಾಗ, ಇನ್ನೂ ಯಾವಾಗ ?

೫೭

ನನ್ನ ನನಸಿನ ನೌಕೆಗೆ
        ನೀನೆ ನಾವಿಕನಾಗಯ್ಯಾ ;
ನನ್ನ ಕನಸಿನ ಪುಷ್ಪಕಕ್ಕೆ
        ನೀನೆ ಚಾಲಕನಾಗಯ್ಯಾ ;
ನನ್ನ ಮನಸಿನ ಬಿಳಿಯಾನೆಗೆ
        ನೀನೆ ಮಾವುತನಾಗಯ್ಯಾ ;
ನನ್ನ ಕಾಮನೆಯ ಕುದುರೆಗೆ
        ನೀನೆ ರಾವುತನಾಗಯ್ಯಾ ;
ನನ್ನ ಕಲ್ಪನೆಯ ಕ್ಷಿಪಣಿಗೆ
        ನೀನೆ ನಿಯಂತ್ರಕನಾಗಯ್ಯಾ ;
ನನ್ನ ತನು–ಮನ–ಪ್ರಾಣ–ಜೀವನ
ಚಿಂತನ ಅಂತರ್ಮಂಥನಗಳಿಗೆ
        ನೀನೆ ಆಧಾರ, ನೀನೆ ಆಶ್ರಯವಾಗಿರಯ್ಯಾ –
        ಸ್ವತಂತ್ರಧೀರ ಸಿದ್ಧೇಶ್ವರಾ !

೫೮

ಯಾರಿಗೆ ಬೇಕಾಗಿ ಏನು ಫಲ ತಂದೆ –
        ನಿನಗೆ ಬೇಕಾಗದನಕ ?
ಯಾರು ಮೆಚ್ಚಿ ಏನು ಪ್ರಯೋಜನ ತಂದೆ –
        ನಿನಗೆ ಮೆಚ್ಚುಗೆಯಾಗದನಕ ?
ಯಾವ ಆಸ್ಥಾನದಲ್ಲಿ ಸ್ಥಾನ ಪಡೆದು ಯಾವ ಲಾಭ ತಂದೆ –

ನಿನ್ನ ವಾತ್ಸಲ್ಯದಾಸ್ಥಾನದಲ್ಲಿ ಸ್ಥಲ ಪಡೆಯದನಕ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾವ ಮತವಿಡಿದು ಏನು ಫಲ ತಂದೆ,
ನಿನ್ನ ಪಥ ತೋರದನಕ ?

೫೯

ನಿನ್ನದು ಅಗಮ್ಯ ಶಕ್ತಿ,
ನನ್ನದು ಅನನ್ಯ ಭಕ್ತಿ !
ನಾನೇನೂ ನಿನ್ನ ಶಕ್ತಿಗಾಗಿ ಹಂಬಲಿಸಿಲ್ಲ ;
ನೀನು ಮಾತ್ರ ನನ್ನ ಭಕ್ತಿಗಾಗಿ ಕಾದಿಹೆಯಂತೆ !
ಹೌದೆ ? ನಿಜವೆ ?
ಇದೊ, ನನ್ನ ಭಕ್ತಿಯ ಭಾಗೀರಥಿ
ನಿನಗಿವಳು ಸತಿ, ನೀನಿವಳ ಪತಿ !
ಎಡೆಗೊಡು ನಿನ್ನ ದಯೆಯ ಜಟಾಜೂಟದಲ್ಲಿ !
ನಿನ್ನ ನೀರಸ ಶಕ್ತಿ
ನನ್ನ ರಸಮಯ ಭಕ್ತಿಯಿಂದ
ಮೃದು ಮಧುರವಾಗಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

೬೦

ನಿನ್ನ ಶಕ್ತಿ ಹಿರಿದೊ, ನನ್ನ ಭಕ್ತಿ ಹಿರಿದೊ–
ಓ ಸರ್ವಶಕ್ತ ?
ನಿನ್ನ ಜ್ಞಾನ ಹಿರಿದೊ, ನನ್ನ ಧ್ಯಾನ ಹಿರಿದೊ–
ಓ ಸರ್ವಜ್ಞ ?
ನಿನ್ನ ವಿಶ್ವತನು ಹಿರಿದೊ, ನನ್ನ ಸಣ್ಣ ಮನ ಹಿರಿದೊ–
ಓ ಸರ್ವಭರಿತ ?
ನೀನಿತ್ತ ಪ್ರಾಣ ಹಿರಿದೊ, ನನ್ನ ನಿರ್ಮಾಣ ಹಿರಿದೊ–
ಓ ಸ್ವತಂತ್ರಧೀರ ಸಿದ್ಧೇಶ್ವರಾ ?

## ೬೧

ನಾನು ಎಚ್ಚರಿದ್ದಾಗ ನೀನು ಮಲಗಿದೆ,
ನಾನು ಮಲಗಿದಾಗ ನೀನು ಎಚ್ಚತ್ತೆ ನೋಡಾ !
ನಾನು ನನಗೆ ಹತ್ತಿರವಾದಾಗ ನಿನಗೆ ದೂರವಾದೆ,
ನಿನಗೆ ಹತ್ತಿರವಾದಾಗ ನನಗೆ ಎರವಾದೆ ನೋಡಾ !
ನನಗೆ ಮಾತನಾಡಲು ಮನಸ್ಸಾದಾಗ ನಿನಗೆ ಮೌನವ್ರತ,
ನಿನಗೆ ಮಾತನಾಡಬೇಕೆನಿಸಿದಾಗ ನನಗೆ ಮೌನವ್ರತ ನೋಡಾ !
ನಾನಿದ್ದಾಗ ನೀನಿರಲಿಲ್ಲ, ನೀನಿದ್ದಾಗ ನಾನಿರಲಿಲ್ಲ,
ಇಬ್ಬರೂ ಕೂಡುವುದೇ ಕೂಡಿ ಬರಲಿಲ್ಲ !
ಇದೆಂಥ ಇಜ್ಜೋಡಿನ ಸಂಸಾರ ಇನಿಯ ?
ಇದೆಂಥ ವಿಪರೀತ ಸತಿಪತಿತ್ವ ಎರೆಯ ?
ಕೂಡಿದರೆ ಸತಿಯನ್ನೇ ಇಲ್ಲವಾಗಿಸುವ
ಪತಿ ನೋಡವ್ವ
ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ !

## ೬೨

ನನಗೆ ಬೇಕಾದುದ ನಾನೇ ಬಾಯಿ ಬಿಟ್ಟು ಕೇಳಬೇಕೆ ?
ನಾನೇ ಕೇಳಬೇಕೆಂಬ ಹಟವೇಕೆ ಹೃದಯೇಶ್ವರ ?
ಸರ್ವಜ್ಞನೆಂದು ಜಂಬ ಕೊಚ್ಚಿಕೊಳ್ಳುವ ನಿನಗೆ ತಿಳಿಯದೆ ?
ಹೃದಯ ಹೃದಯಕ್ಕಾಗಿ ಹಾತೊರೆವುದೆಂಬುದು ಹೊಳೆಯದೆ ?
ನನಗೆ ಬೇಕಾದುದೇ ನಿನಗೂ ಬೇಕೆಂಬುದ ಬಲ್ಲೆ !
ಇಷ್ಟೂ ತಿಳಿಯದಿದ್ದರೆ ನೀನೆಂಥ ನಲ್ಲ, ನಾನೆಂಥ ನಲ್ಲೆ ?
ಇಬ್ಬರೂ ಒಬ್ಬರೊಬ್ಬರಿಗೆ ಹೇಳದೆ ತಬ್ಬಿಬ್ಬಾಗಿದ್ದೇವೆ !
ನನಗೆ ನಾಚಿಕೆ, ನಿನಗೆ ಬಿಗುಮಾನ–ಬಿಂಕ !
ಬಯಕೆಗೆ ಬಾಯ ಎಂಜಲವೇಕೆ ಅಂಟ ಬೇಕಾಳ್ದ ?
ನಯನದ ನುಡಿ, ಮೌನದ ಮಾತು
ಭಾವದ ಭಾಷೆ ಸಾಕು ನೀರ,
ಸ್ವತಂತ್ರಧೀರ ಸಿದ್ಧೇಶ್ವರ !

## ೬೩

ನಿನ್ನ ಅನುಗಹಕ್ಕೆ ನಾನು ಪಾತ್ರನಾಗಬೇಕೆಂದು
ಬೋಧಿಸುತ್ತಿಹರಯ್ಯ ಬಲ್ಲವರು !
ನಾನು ಪಾತ್ರನಾದರೆ ಪಾತ್ರತೆಗೆ ತಕ್ಕ ಫಲ ನನ್ನ ಹಕ್ಕು !
ನಿನ್ನ ಅನುಗ್ರಹವೆಲ್ಲಿ ಬಂತು ಅದರಲ್ಲಿ ?
ನಿನ್ನ ಅನುಗ್ರಹವಿರುವುದು ಅಪಾತ್ರರಿಗಾಗಿ,
ನನ್ನಂಥವರಿಗಾಗಿಯೆನ್ನುವರು ಆರ್ದ್ಯರು !
ನಿನ್ನ ಅನುಗ್ರಹಕ್ಕೂ ಅರ್ಹತೆಗಳ ವಿಧಿಸುವುದೆ–
ಸ್ವತಂತ್ರಧೀರ ಸಿದ್ಧೇಶ್ವರ ?

## ೬೪

ನನ್ನ ತಪ್ಪುಗಳ ತೊರೆ
ನಿನ್ನ ಕ್ಷಮೆಯ ಸಾಗರವನ್ನು ಸೇರಿ
ಬಯಲಾಗಲಯ್ಯ !
ನನ್ನ ದೋಷಗಳ ಕಸ ಕಡ್ಡಿ
ನಿನ್ನ ಅನುಗ್ರಹದ ಅಗ್ಗಿಷ್ಟಿಗೆಯಲ್ಲಿ
ಸುಟ್ಟು ಭಸ್ಮವಾಗಲಯ್ಯ !
ನನ್ನ ಮರವೆಯ ಮಬ್ಬು
ನಿನ್ನ ಕರುಣೆಯ ಕಿರಣ ತಾಕಿ
ಬೆಳಕಾಗಲಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ.
ನನ್ನ ಸೊಮ್ಮಿನ ಹಮ್ಮು,
ಬುದ್ಧಿಯ ಬಿಮ್ಮು
ನಿನ್ನವರ ಸ್ಮರಣೆ ಸ್ಪರ್ಶಿಸಿ
ಸದುವಿನಯವಾಗಲಯ್ಯ !

೬೫

ಹೃದಯದ ಹೆದ್ದಾರಿಯಲ್ಲಿ
ಹೆಜ್ಜೆ ಹೆಜ್ಜೆಗೆ ಹಣ್ಣಿನ ಮರ,
ಕೂಗಳತೆಗೊಂದು ಅರವಟ್ಟಿಗೆ,
ಗಾವುದಕ್ಕೊಂದು ಅನ್ನಸತ್ರವಯ್ಯಾ !
ಬುದ್ದಿಯ ದುರ್ಗಮ ಮಾರ್ಗದಲ್ಲಿಯೋ
ಅನುಮಾನದ ಮುಳ್ಳು ಮರಗಳು,
ತರ್ಕದ ಶುಷ್ಕ ತರುಗಳು,
ಪ್ರಮಾಣದ ತಗ್ಗು ತೆವರುಗಳಯ್ಯಾ !
ಆದರೆ, ಅಲ್ಲಿಯೂ ನಡೆವ
ಇಲ್ಲಿಯೂ ನಡೆವ ಚಪಲ ನನಗೆ !
ಈ ಎರಡೂ ಎಲ್ಲಿಯೋ ಸೇರಿ ಒಂದಾಗುವುವೆಂಬ,
ಒಂದೇ ದಾರಿಯಾಗಿ ಮುಂದುವರಿವುವೆಂಬ
ನಂಬಿಕೆಯಿಂದ ನಡೆದಿದ್ದೇನೆ –
ತಡವರಿಸುತ್ತ, ಎಡವುತ್ತ,
ಕುಂಟುತ್ತ, ಕುಸಿಯುತ್ತ !
ಕುಸಿದು ಕುಕ್ಕರಿಸದಂತೆ
ಕರವಿಡಿದು ಕರೆದೊಯ್ಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೬೬

ಬುದ್ಧಿಯ ಬದರಿಯ ದಾರಿಯಲ್ಲಿ
ಒಮ್ಮೊಮ್ಮೆ ಹಿಮಪಾತ, ಒಮ್ಮೊಮ್ಮೆ ಶಿಖರಪಾತ,
ಹಲವು ಹನ್ನೆರಡು ಅಪಘಾತ !
ಹೃದಯ–ಕೇದಾರದ ಹಾದಿಯಲ್ಲಿ
ಒಮ್ಮೆ ನೆರೆಹಾವಳಿ, ಒಮ್ಮೆ ಬಿರುಗಾಳಿ,
ಅನಿವಾರ್ಯ ವಿಘ್ನಾವಳಿ !
ಮನದ ಮಾನಸ ಸರೋವರದ ಮಾರ್ಗದಲ್ಲಿ
ಪರಕೀಯ ಪ್ರಭಾವಗಳ ಕಾಟ,
ಪ್ರತಿಕೂಲಗಳ ಕೂಟ !
ಸ್ವತಂತ್ರಧೀರ ಸಿದ್ಧೇಶ್ವರಾ, ನಾನು ನಾನಾಗುವ ಪಥದಲ್ಲಿ

ಹಲವು ಉಪಾಧಿಗಳ, ಮನೋವ್ಯಾಧಿಗಳ ಬಾಧೆ !

೬೭

ಸತ್ಯಾನ್ವೇಷಣೆಯ ಹಾದಿಯಲ್ಲಿ ತುಳಿದ
ಮುಳ್ಳೂ ಮಲ್ಲಿಗೆಯೇ !
ಮಿಥ್ಯಾದರಣೆಯ ದಾರಿಯಲ್ಲಿ ತುಳಿದ
ಮಲ್ಲಿಗೆಯೂ ಮುಳ್ಳೇ !
ಸತ್ಯರಕ್ಷಣೆಯ ಹೋರಾಟದಲ್ಲಿ ಪಡೆದ
ಸೋಲೂ ಗೆಲವೇ !
ಮಿಥ್ಯಾನುಮೋದನೆಯ ಕೀಳಾಟದಲ್ಲಿ ಪಡೆದ
ಗೆಲವೂ ಸೋಲೇ !
ನೀನು ಸತ್ಯಸ್ವರೂಪ ಮಾತ್ರವಲ್ಲ,
ಸತ್ಯವೇ ನೀನು, ನೀನೇ ಸತ್ಯ !
ಈ ಸತ್ಯದಲ್ಲಿ ಸೇರಿ ಬಯಲಾಗಲಿ–
ನಾನೆಂಬುವ ಮಿಥ್ಯ,
ಸ್ವತಂತ್ರಧೀರ ಸಿದ್ಧೇಶ್ವರ !

೬೮

ಆ ಹಾದಿ ಈ ಹಾದಿಯೆಂದು
ಬಿತ್ತಲು ಭೂಮಿಯೇ ಉಳಿಯದಂತಾದರೆ ಹೇಗಯ್ಯ ?
ಆ ಬೀದಿ ಈ ಬೀದಿಯೆಂದು
ಮನೆ ಕಟ್ಟಲು ಸ್ಥಳವೇ ಉಳಿಯದಂತಾದರೆ ಹೇಗಯ್ಯ ?
ಆ ವಾದ ಈ ವಾದವೆಂದು
ಮನೆಮಾತಿಗೇ ವೇಳೆ ಉಳಿಯದಂತಾದರೆ ಹೇಗಯ್ಯ ?
ಆ ಬೋಧೆ ಈ ಬೋಧೆಯೆಂದು
ತಿಳಿದಷ್ಟೂ ತಿಳಿಗೆಡುತ್ತ ಹೋದರೆ ಹೇಗಯ್ಯ ?
ದಿನಕ್ಕೊಂದು ಮಡಿಯಲ್ಲಿ ನೆಡಬೇಡವಯ್ಯ
ನಿನ್ನ ಈ ಬಡ ಸಸಿಯನ್ನು !
ದಿನಕ್ಕೊಬ್ಬರ ಕೈಗೆ ಕೊಡಬೇಡವಯ್ಯ
ನಿನ್ನ ಈ ಬಡ ಸಿಸುವನ್ನು !
ನಿನ್ನ ಹಾದಿಯಲ್ಲಿ ನಡೆಸು,
ನಿನ್ನ ಬೋಧೆಯನ್ನು ಕುಡಿಸು
ನನ್ನಿಯೊಂದನೆ ನುಡಿಸು – ಸ್ವತಂತ್ರಧೀರ ಸಿದ್ಧೇಶ್ವರಾ !

೧೯

ಆ ದಾರಿ ಈ ದಾರಿಯಲ್ಲಿ ನೀ ಸಿಕ್ಕದೆ ಹೋಗಬಹುದು–
ಆದರೆ, ಎಲ್ಲ ದಾರಿಗಳೂ ಕೂಡುವಲ್ಲಿ
ಸಿಕ್ಕದಿರುವೆಯೇನಯ್ಯಾ ?
ಆ ತೀರ್ಥ ಈ ತೀರ್ಥದಲ್ಲಿ ನೀ ದೊರೆಯದಿರಬಹುದು–
ಆದರೆ, ವಿಶ್ವಜೀವನ ತೀರ್ಥದಲ್ಲಿ
ದೊರೆಯದಿರುವೆಯೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆ ಗುಡಿ ಈ ಗುಡಿಯಲ್ಲಿ ನಿನ್ನ ಪಡೆಯದಿರಬಹುದು–
ಆದರೆ, ಈ ಒಡಲ ಗುಡಿಯಲ್ಲಿಯೂ
ಪಡೆಯಲಾಗದೇನಯ್ಯಾ ?

೨೦

ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ
ಹರಿಗೋಲು ಉಳಿಯಬಹುದಾಗಲಿ ಗುರಿ ನಿಲುಕದಯ್ಯ ;
ದಾರಿ ಚೆನ್ನಾಗಿದೆಯೆಂದು ತಪ್ಪು ದಾರಿ ತುಳಿದರೆ
ದಾರಿ ಸಾಗಬಹುದಾಗಲಿ ಊರ ಸೇರಲಾಗದಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ಸುಲಭವಾದುದೆಲ್ಲ ಶುಭಕರವಲ್ಲ,
ಕನವಾದುದೆಲ್ಲ ಕಷ್ಟಪರವಲ್ಲವಯ್ಯಾ !

೨೧

ಒಂದೆ ದಾರಿಯಲ್ಲಿ ಮುಂದೆ ನಡೆಯಲೆ ?
ಬಹುದೂರ ಹೋಗುವ ಬಯಕೆಯಿಲ್ಲ !
ನನ್ನ ದಾರಿಯೊಂದನ್ನು ಕೊರೆದುಕೊಳ್ಳಲೆ ?
ತುದಿ ಮೊದಲ ತಿಳಿವ ತವಕವಿಲ್ಲ !
ಎಲ್ಲ ದಾರಿಗಳನೂ ತುಳಿವ ತವಕ,
ಎಲ್ಲ ಬಟ್ಟೆಗಳಲ್ಲಿಯೂ ನಡೆವ ಬಯಕೆ !
ಎಲ್ಲಿಗೆ ಮುಟ್ಟುವೆನೋ ಕೊನೆಗೆ !
ಎಲ್ಲಿಗಾದರೂ ಮುಟ್ಟಿಸು,
ಮುಟ್ಟಿದಲ್ಲಿ ನೀನಿರು –

ಸ್ವತಂತ್ರಧೀರ
ಸಿದ್ಧೇಶ್ವರ !

## ೭೨

ಕಾಲದ ಕಡಲಿನ ಮೇಲೆ
ಸಾವಿನ ಹನಿಗಳು ಸುರಿಯುತ್ತಲಿಹವಯ್ಯ –
ಬಾಳ ಬಾನಿನಿಂದ !
ಮಹಾಜೀವನದ ನದನದಿಗಳಾಗಿ
ಬೆರೆತೂ ಬೇರುಳಿಯಲು,
ಮಹಾಕೃತಿಗಳ ಮಾನಸ ಸರೋವರಗಳಾಗಿ
ಬೆರೆಯದೆಯೆ ಬೇರುಳಿಯಲು
ಸರ್ವರಿಗೆ ಸಾಧ್ಯವೇನಯ್ಯ ?
ಕಾಲದ ಕಡಲಿನ ಸಿಂಪೊಂದರಲ್ಲಿ
ಸ್ವಾತಿಯ ಹನಿಯಾಗಿ ಸೇರುವ
ಸೌಭಾಗ್ಯವೊಂದನೇ ಕರುಣಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೭೩

ಒಂದು ಕೋಹಿನೂರಿಗಾಗಿ
ಹಲವು ಗಣಿಗಳನಗಿದರೂ
ವ್ಯರ್ಥವಲ್ಲವಯ್ಯ ;
ಒಂದು ಹೊಸ ವಿಚಾರಕ್ಕಾಗಿ
ಹಲವು ಹೊತ್ತಗೆಗಳ ಮಗುಚಿದರೂ
ಹಾಳೇನಲ್ಲವಯ್ಯ ;
ಒಬ್ಬ ಸೀತಾದೇವಿಗಾಗಿ
ಮಹಾಯುದ್ಧ ಮಾಡಿದರೂ
ಕೇಡೇನಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನೊಂದು ಕೃಪಾ ಕಟಾಕ್ಷಕ್ಕಾಗಿ
ನೂರು ವರ್ಷ ನವೆದರೂ
ನಷ್ಟವೇನಲ್ಲವಯ್ಯ !

## ೭೪

ಸವೆದು ಹೋದ ನಾಣ್ಯ ಮತ್ತೆ
ಟಂಕಶಾಲೆಗೆ ಮರಳುವಂತೆ,
ಆಯಲಾಗದ ಅಚ್ಚಿನ ಮೊಳೆ ಮತ್ತೆ
ಕರಗುಭಟ್ಟಿಗೆ ಹಿಂದಿರುಗುವಂತೆ,
ಓದಿ ಒಗೆದ ರದ್ದಿ ಮತ್ತೆ
ಕಾಗದದ ಕಾರಖಾನೆಯ ಸೇರುವಂತೆ,
ತೇಲಿ ಬಂದ ನೆನಪು ಮತ್ತೆ
ಸುಪ್ತ ಚೇತನವ ಸೇರುವಂತೆ
ಸಾರಲೆಳಸಿಹೆನಯ್ಯ ನಿನ್ನೆಡೆಯ ನಾನು,
ಸೇರಲೆಳಸಿಹೆನಯ್ಯ ನಿನ್ನಡಿಯ ನಾನು !
ಸಾರಗೊಡು, ಸೇರಗೂಡು,
ದೂರವಿಡದಿರಯ್ಯ – ಸ್ವತಂತ್ರಧೀರ ಸಿದ್ಧೇಶ್ವರಾ !

## ೭೫

ನೆಲದಲ್ಲಿ ಹೋಗದ ನೇಗಿಲಿಗೆ ಬೆಲೆ ಎಲ್ಲಿ ?
ಅನುಭಾವವನ್ನು ಆಶ್ರಯಿಸದ ಅರಿವಿಗೆ ನೆಲೆ ಎಲ್ಲಿ ?
ಕಲ್ಲಿನಲ್ಲಿ ಕಂಡರಿಸಿದ ಒರತೆಗೆ ಸೆಲೆ ಎಲ್ಲಿ ?
ಹೊಲೆಯಲ್ಲಿ ಹುಟ್ಟಿದ ಜೀವಿಗೆ ಹೊಲೆ ಎಲ್ಲಿ ?
ಆಕಾಶದ ಕೊಪ್ಪರಿಗೆಗೆ ಒಲೆ ಎಲ್ಲಿ ?
ಬಯಲ ಮತ್ಸ್ಯವ ಹಿಡಿಯೆ ಬಲೆ ಎಲ್ಲಿ ?
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ನಿರಾಕರಿಸಿ, ನಾನಿರಬಲ್ಲೆನೆಂದರೆ
ಕಡಲ ಬಿಟ್ಟು ಅಲೆ ಎಲ್ಲಿ ?

## ೭೬

ತಂತಿಗಳಲ್ಲಿ ಸುನಾದವಿದೆ–
ಸೋರೆ ದಂಡಿಗೆಗಳಿಗೆ ಬಿಗಿದಾಗ ಮಾತ್ರ ;
ಚರ್ಮದಲ್ಲಿ ಸುನಾದವಿದೆ–
ವಾದ್ಯಗಳ ಮೈಗಳಿಗೆ ಬಿಗಿದಾಗ ಮಾತ್ರ ;
ಬಿಲ್ಲಿನಲ್ಲಿ ಬಾಣ ಬಿಡುವ ಶಕ್ತಿಯಿದೆ–
ನಾರಿಯಿಂದ ಬಿಗಿದಾಗ ಮಾತ್ರ ;
ನನ್ನಲ್ಲಿಯೂ ನಿನ್ನನರಿವ ಶಕ್ತಿಯಿದೆ–

ನಿನ್ನಡಿಗಳಿಗೆ ನನ್ನ ಬಿಗಿದಾಗ ಮಾತ್ರ, ಸ್ವತಂತ್ರಧೀರ ಸಿದ್ಧೇಶ್ವರ !

## ೭೭

ನಾ ಮಾಡುವ ಕೆಲಸದಲ್ಲಿ ನನ್ನ ಕುಳ್ಳಿರಿಸಿದೆ–
ಅದು ಕರ್ಮವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಕಾಯಕವಾಯ್ತು !
ನೆನೆವ ಮನದಲ್ಲಿ ನನ್ನ ಕುಳ್ಳಿರಿಸಿದೆ–
ಅದು ಬಂಧನವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ನಿಜದ ನಂದನವಾಯ್ತು !
ಅರಿವ ಬುದ್ಧಿಯಲ್ಲಿ ನನ್ನ ಕುಳ್ಳಿರಿಸಿದೆ–
ಅದು ಬಾಧಕವಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಸಾಧಕವಾಯ್ತು !
ಬೀಗುವ ಅಹಂಕಾರದಲ್ಲಿ ನನ್ನ ಕುಳ್ಳಿರಿಸಿದೆ–
ಅದು ಅಧೋಗಾಮಿಯಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ಊರ್ಧ್ವಗಾಮಿಯಾಯ್ತು !
ಚಿಂತಿಪ ಚಿತ್ತದಲ್ಲಿ ನನ್ನ ಕುಳ್ಳಿರಿಸಿದೆ–
ಅದು ಸೆರೆಮನೆಯಾಯ್ತು ;
ನಿನ್ನ ಕುಳ್ಳಿರಿಸಿದೆ,
ಅದೇ ನಿನ್ನ ಅರಮನೆಯಾಯ್ತು ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೭೮

ಸ್ವತಂತಧೀರ ಸಿದ್ಧೇಶ್ವರಾ,
ನಿನ್ನ ಸರ್ವಜೀವದಯಾಪಾರಿತ್ವದ ಸಾಮಾನ್ಯ ನಿಯಮಕ್ಕೆ
ನಾನೇ ಅಪವಾದವಾಗದಿರಲಯ್ಯ !
ನಿನ್ನ ದಿವ್ಯ ಸಂಗೀತದ ವಿಶ್ವವಿಸರಣೆಯಲ್ಲಿ
ನಾನೇ ಜೊಳ್ಳು ಗುಳಿಗೆಯ ಜಾಹೀರಾತು ಆಗದಿರಯ್ಯಾ !

ನಿನ್ನ ಚಿದಾನಂದಚಂದ್ರಿಕಾಪ್ರಸರಣದಲ್ಲಿ
ನಾನೇ ಕಗ್ಗವಿಯ ಕತ್ತಲೆಯಾಗಿ ಉಳಿಯದಿರಲಯ್ಯಾ !
ನಿನ್ನ ವಿಶ್ವ ನಿರ್ವಾಚನದ ಚುನಾವಣಾ ಚಿಹ್ನೆಗಳಲ್ಲಿ
ನಾನೇ ಬೇಡಾದ ಜೋಡೆತ್ತುಗಳ ಚಿಹ್ನೆಯಾಗದಿರಲಯ್ಯಾ !
ನಿನ್ನ ಜೀವಕೃಷಿಯ ನೀರಾವರೀ ಯೋಜನೆಯಲ್ಲಿ
ತೇವ ಏರದ ತೆವರು ನಾನಾಗದಿರಲಯ್ಯಾ !
ಜೀವನ ವಿಕಾಸದ ಸುಳಿದೆಗೆವ ಸರಪಳಿಯಲ್ಲಿ
ಮುರಿದ ಗೊಣಸು ನಾನಾಗದಿರಲಯ್ಯ !

## ೭೯

ಷಡ್ರಸಗಳ ರುಚಿಭೇದವನ್ನರಿಯದಿದ್ದರೆ
ನಾಲಗೆಯಲ್ಲಿ ಹುಟ್ಟುಸಟ್ಟುಗಗಳಲ್ಲಿ ಭೇದವಾವುದಯ್ಯಾ ?
ವೀನಸ್ ಪ್ರತಿಮೆ ಮಹಿಷಾಸುರ ವಿಗ್ರಹಗಳ ಭೇದ ತಿಳಿಯದಿದ್ದರೆ
ನೇತ್ರಗಳಲ್ಲಿ ತೂತುಗಳಲ್ಲಿ ವ್ಯತ್ಯಾಸವಾವುದಯ್ಯಾ ?
ಕೋಣನ ಕಿರುಚು, ವೀಣೆಯ ಇಂಚರಗಳ ಭೇದ ಗೋಚರಿಸದಿರೆ
ಕಿವಿ ಮರಗಿವಿಗಳಲ್ಲಿ ಅಂತರವೆಂತಹದಯ್ಯಾ ?
ಇರುವಂತಿಗೆ ಮದುಗುಣಿಕೆಗಳ ವಾಸನೆಯ ವ್ಯತ್ಯಾಸ ವೇದ್ಯವಾಗದಿರೆ
ಮೂಗು ಉದುಗೊಳವಿಗಳಲ್ಲಿ ಭೇದವೇತರದಯ್ಯಾ ?
ಸುಳಿಗಾಳಿ ಬಿರುಗಾಳಿಗಳಲ್ಲಿ ವ್ಯತ್ಯಾಸವೆನಿಸದಿದ್ದರೆ
ತ್ವಚ ತೊಗಟೆಗಳಲ್ಲಿ ಭೇದವಾವುದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂದ್ರಿಯಗಳನರಿತು, ಇಂದ್ರಿಯಗಳಲ್ಲಿಯೇ ಬೆರೆತ
ಇಂದ್ರಿಯಗಳಿಗೆ ಇಂದ್ರಿಯನಾದ
ನಿನ್ನನೇ ಮರೆತರೆ
ನರಕುರಿಗಳಲ್ಲಿ
ಅಂತರವಾವುದಯ್ಯಾ ?

## ೮೦

ಬಗೆಯ ನಗರಿಯ ಕೊಳೆಗೇರಿಗಳನ್ನು ಕಿತ್ತು
ಹೊಸ ವಸತಿಗಳ ಕಟ್ಟಲೆಳಸಿದರೆ
ಮುಷ್ಕರ ಹೂಡುವರಯ್ಯಾ ಮೊದಲಿದ್ದವರು !
ಬುದ್ಧಿಯ ಬೆಂಗಾಡಿನ ಶುಷ್ಕತರುಗಳನ್ನು

ತರಿಯ ಹೋದರೆ ಶಿಕ್ಷೆಯ ಅಂಜಿಕೆ
ತೋರಿಸುವರಯ್ಯಾ ಕಾಡಿನ ಕಾವಲುಗಾರರು !
ಶಾಸ್ತ್ರದ ಮನೆಯ ಜೇಡ ಜಾಲ, ಇಲ್ಲಾಣಗಳನ್ನು
ತೆಗೆವೆವೆನೆ ಬಂಧನದ ಬೆದರಿಕೆ ಹಾಕುವರಯ್ಯಾ
ಸಂಪ್ರದಾಯದ ಸಿಪಾಯಿಗಳು !
ಸಮಾಜ ಸರಕಾರಗಳ ಕೆರೆಯ ಒಂಡು
ನೀರಿನ ಜೊಂಡು ತೆಗೆಯ ಹೋದರೆ
ದಂಡ ಹಾಕುವರಯ್ಯಾ ರೂಢಿಯ ರಕ್ಷಣಾಧಿಕಾರಿಗಳು !
ಬಂಧಿಸಲಿ, ದಂಡಿಸಲಿ, ಶಿಕ್ಷಿಸಲಿ, ಶಿಲುಬೆಗೇರಿಸಲಿ–
ಇದ್ದುದರೊಡನೆ ಒಪ್ಪಂದ ಮಾಡಿಕೊಂಡು
ಹದ್ದಿನ ಬಾಳು ಬಾಳಲಾರೆನಯ್ಯಾ !
ಇರಬಾರದುದರೊಡನೆ ಸೆಣಸುತ್ತ,
ಇರಬೇಕಾದುದಕಾಗಿ ಹೆಣಗುತ್ತ
ಶುದ್ಧ–ಸ್ನಿಗ್ಧ–ಬುದ್ಧಿಯ ಬಾಳು
ಬಾಳುವೆನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

೮೧

ಸ್ಥಿತಪ್ರಜ್ಞನಾಗಲು ಶಪಥವನ್ನೇನೂ ಮಾಡಿಲ್ಲ ;
ಅದು ನನಗೆ ನುಂಗಲಾಗದ ತುತ್ತು ತಂದೆ !
ನನಗಿರುವುದು ಸರಳ, ಸಾಧಾರಣ ಬಯಕೆ,
ಪ್ರಜ್ಞಾಪ್ರಭಾತದಲ್ಲಿ
ಹಕ್ಕಿಯಾಗಿ ಹಾಡುವ ಬಯಕೆ,
ಪ್ರಜ್ಞಾಪ್ರಪಾತದಲ್ಲಿ
ನೊರೆಯಾಗಿ ಹರಿಯುವ ಬಯಕೆ,
ಪ್ರಜ್ಞಾಪ್ರವಾಹದಲ್ಲಿ
ಮೀನಾಗಿ ಈಸುವ ಬಯಕೆ,
ಬಯಕೆ ಸೋತು ನಾಚಿದಾಗ, ಅದರ ಕೆನ್ನೆಯ ಕೆಂಪಾಗುವ ಬಯಕೆ!
ಬಯಕೆಯ ಬೆನ್ನೇರಿ ಬಯಕೆ, ಬಯಕೆಯ ಬೂದಿಯಿಂದ ಹೊಸ ಬಯಕೆ!
ಬಯಕೆಯ ಫೋನಿಕ್ಸ್
ಹುಟ್ಟಿ ಹುಟ್ಟಿ, ಸುಟ್ಟು ಸುಟ್ಟು ಸಾವುದ ನೋಡಿ
ಅಟ್ಟಹಾಸದಿಂದ ನಗುತ್ತಿರುವಿಯೇನಯ್ಯಾ –

ಸ್ವತಂತ್ರಧೀರ ಸಿದ್ಧೇಶ್ವರಾ !

೮೨

ಸಹನಶೀಲತೆಗೊಮ್ಮೆ, ಸೃಜನಶೀಲತೆಗೊಮ್ಮೆ,
ಸುಗುಣಲೋಲತೆಗೊಮ್ಮೆ ಶರಣೆಂದೆ, ತಂದೆ !
ಭಾವಯಾಗಕ್ಕೊಮ್ಮೆ, ಬುದ್ಧಿಯೋಗಕ್ಕೊಮ್ಮೆ,
ಲಿಂಗಭೋಗೋಪಭೋಗಕ್ಕೊಮ್ಮೆ ಮಣಿದೆ, ತಂದೆ !
ಆತ್ಮಮಂಥನಕೊಮ್ಮೆ, ತತ್ತ್ವ ಚಿಂತನಕೊಮ್ಮೆ,
ಸರ್ವಸಾಂತ್ವನಕೊಮ್ಮೆ ಒಲಿದೆ, ವಿಭುವೆ !
ಸತ್ಯಶೋಧನೆಗೊಮ್ಮೆ, ನೀತಿಬೋಧನೆಗೊಮ್ಮೆ,
ಸುಗತಿ ಸಾಧನೆಗೊಮ್ಮೆ ಮನವಿತ್ತೆ, ಪ್ರಭುವೆ !
ಏನು ಏನೋ ತಿಳಿದು,
ಎಲ್ಲೆಲ್ಲಿಯೋ ಸುಳಿದು,
ಏನೇನನೋ ಒಲಿದು,
ಕೊನೆಗೆ ತಂದೆ–
ನಿನ್ನ ಬಳಿಗೆ ಬಂದೆ !
ನೀನೆ ಗುರಿ,
ನೀನೆ ದಾರಿಯೆಂದೆ–
ಸ್ವತಂತ್ರಧೀರ ಸಿದ್ಧೇಶ್ವರಾ !

೮೩

ಲೋಕ ನನ್ನನ್ನು ಮರೆಯಲಿ,
ಇನ್ನೇನನ್ನಾದರೂ ಮರೆಯಲಿ–
ನಿನ್ನನ್ನು ಮರೆಯದಿರಲಿ, ನಿನ್ನನ್ನು ಮರೆಯದಿರಲಿ !
ಜನ ನನ್ನನ್ನು ಜರೆಯಲಿ,
ಇನ್ನೇನನ್ನಾದರೂ ಜರೆಯಲಿ–
ನಿನ್ನನ್ನು ಜರೆಯದಿರಲಿ, ನಿನ್ನನ್ನು ಜರೆಯದಿರಲಿ !
ಜನಾಂಗ ನನ್ನನ್ನು ತೊರೆಯಲಿ,
ಇನ್ನೇನನ್ನಾದರೂ ತೊರೆಯಲಿ–
ನಿನ್ನನ್ನು ತೊರೆಯದಿರಲಿ, ನಿನ್ನನ್ನು ತೊರೆಯದಿರಲಿ !
ಸ್ವತಂತಧೀರ ಸಿದ್ಧೇಶ್ವರಾ,
ಲೋಕ ವಿರೋಧಿಯ

ಲೋಕದವರು ಒಲಿಯಲಿ, ಬಿಡಲಿ–
ಲೋಕೇಶ್ವರನಾದ ನಿನ್ನ ಒಲಿಯಲಯ್ಯಾ !

**೮೪**

ಮೈಯ ರಾಟಿಯ ತಿರುಹಿ
ಮೂಗಿನ ಕದಿರಿನಿಂದ
ಉಸಿರ ನೂಲು ನೂಲುತ್ತಿಹುದಯ್ಯ ಕಾಣದ ಕೈ !
ಆಯುಷ್ಯದ ಕುಕ್ಕಡಿ ತುಂಬುತ್ತ ನಡೆದಿದೆ ;
ತುಂಬುವ ಮೊದಲೇ ಎಳೆ ಹರಿವುದೋ
ಹಂಜಿ ಮುಗಿವುದೋ
ನೀನೇ ಬಲ್ಲೆಯಯ್ಯಾ, ಸ್ವತಂತ್ರಧೀರ ಸಿದ್ಧೇಶ್ವರಾ !

**೮೫**

ನಿನ್ನನರಿವುದೇ ಸ್ವರ್ಗ, ನಿನ್ನ ಮರೆವುದೇ ನರಕ ;
ನಿನ್ನ ನೆನಹೇ ಜೀವನ, ನಿನ್ನ ಮರಹೇ ಮರಣ ;
ನೀನೆಂಬುದೇ ಪುಣ್ಯ, ನಾನೆಂಬುದೇ ಪಾಪ ;
ಎಲ್ಲ ನಿನ್ನಿಂದ ಎಂಬುದೇ ಸತ್ಯ, ನನ್ನಿಂದ ಎಂಬುದೇ ಮಿಥ್ಯ ;
ನನಗಾಗಿ ಮಾಡಿದರೆ ಬಂಧನ, ನಿನಗಾಗಿ, ನಿನ್ನವರಿಗಾಗಿ ಮಾಡಿದರೆ ನಿರ್ಬಂಧನ ;
ನೀನಲ್ಲದಿಲ್ಲವೆಂಬುದೇ ಜ್ಞಾನ, ಇದೆಯೆಂಬುದೇ ಅಜ್ಞಾನ ;
ನಿನ್ನನ್ನು ನಿನಗಾಗಿ ಪ್ರೀತಿಸುವುದು ಭಕ್ತಿ,
ನಿನ್ನನ್ನು ನನಗಾಗಿ ಪ್ರೀತಿಸುವುದು ರಕ್ತಿಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

**೮೬**

ಶಬ್ದ ಪಡೆದುದು ಸ್ವಲ್ಪ,
ಪಡೆಯದಿದ್ದುದು ಬಹಳವಯ್ಯಾ ;
ಅರ್ಥ ತೋರುವುದು ಸ್ವಲ್ಪ,
ತೋರದಿರುವುದು ಬಹಳವಯ್ಯಾ ;
ಜೀವಿ ಅರಿಯುವುದು ಸ್ವಲ್ಪ,
ಅರಿಯದಿರುವುದು ಬಹಳವಯ್ಯಾ ;
ನೀನು ಮಾತ್ರ ಬೇಡುವುದು ಸ್ವಲ್ಪ,
ನೀಡುವುದು ಬಹಳವಯ್ಯಾ –

ಸ್ವತಂತ್ರಧೀರ ಸಿದ್ಧೇಶ್ವರಾ !

**೮೭**

ನರರಿಗೆ ಶರಣು ಹೋದರೆ
ಅದು ದಾಸ್ಯ ;
ನಿನಗೆ ಶರಣು ಹೋದರೆ
ಸ್ವಾತಂತ್ರ್ಯವಯ್ಯಾ ;
ನನ್ನಲ್ಲಿ ನಾನು ನೆಲೆಯೂರಿದರೆ
ಅದು ಬಂಧನ,
ನಿನ್ನಲ್ಲಿ ನೆಲೆಸಿ ಬದುಕಿದರೆ
ಬಿಡುಗಡೆಯಯ್ಯಾ ;
ನನಗಾಗಿ ನಾನು ಆರ್ಜಿಸಿದರೆ
ಅದು ಅಭಿಶಾಪ,
ನಿನಗಾಗಿ, ನಿನ್ನವರಿಗಾಗಿ ಗಳಿಸಿದರೆ
ಅದು ವರದಾನವಯ್ಯಾ ;
ನನ್ನಿಷ್ಟಕ್ಕೆ ನಾನೆಂದರೆ
ಅದು ಅಜ್ಞಾನ,
ನಿನ್ನಿಷ್ಟದಂತೆ ನಾನೆಂದರೆ
ಅದು ಸುಜ್ಞಾನವಯ್ಯಾ ;
ನನಗೆ ತೋರಿದಂತೆ ಬರೆದರೆ
ಅದು ರಚನೆ,
ನೀನು ತೋರಿಸಿದಂತೆ ಬರೆದರೆ
ಅದು ವಚನವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಂದ ನಿನ್ನಲ್ಲಿ ನಿನಗಾಗಿ ಬದುಕಿ
ನಿನ್ನಿಯಾಗುವ ಗುಟ್ಟ ತಿಳಿಸಯ್ಯಾ !

**೮೮**

ತಲೆಯಲ್ಲಿರುವಾಗ ಸುಗಂಧದೆಣ್ಣೆ ಕೂದಲಿಗೆ,
ಕತ್ತರಿಸಿ ಚೆಲ್ಲಿದಾಗ ಕತ್ತೆ ಕೂಡ ಮೂಸವಯ್ಯಾ !

ಮರದಲ್ಲಿರುವಾಗ ಬೆಲೆ ರೆಂಬೆಗೆ,
ಮರವ ತೊರೆದಾಗ ಒಲೆಯೇ ಅದಕ್ಕೆ ನೆಲೆಯಯ್ಯಾ !
ಅಂಬುಧಿಯಲ್ಲಿರುವಾಗ ಅಲೆಗೊಂದು ಚೆಲುವು,
ಅಂಬುಧಿಯ ಹೊರಗೆ ಅಲೆ ಅಲೆಯಬಲ್ಲುದೇನಯ್ಯಾ ?
ಸಮಷ್ಟಿಯಲ್ಲಿರುವಾಗ ವ್ಯಷ್ಟಿಗೆ ಕಳೆ, ಬೆಲೆ,
ಸಮಷ್ಟಿಯನ್ನುಳಿದ ವ್ಯಷ್ಟಿಗೆಲ್ಲಿಯ ತುಷ್ಟಿಯಯ್ಯಾ ?
ಹಿಂಡಿನಲ್ಲಿರುವಾಗ, ಕುಂಜರಕ್ಕೆ ಭೀಮ ಬಲ,
ಹಿಂಡನಗಲಿದ ಹಸ್ತಿಗೆ ಬಲೆ, ಇಲ್ಲವೆ ಬಿಲವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನೊಳಿರೆ ನನಗೆ ಮಾನ್ಯತೆ–
ನಿನ್ನನುಳಿದೆನಗಾವ ಗಣ್ಯತೆಯಯ್ಯಾ !

೮೯

ಹೆಣೆದ ಹೂಗಳು ಹಲವಾದರೂ ಹಾರ ಒಂದೇ,
ಪವಣಿಸಿದ ಮಣಿಗಳು ಹಲವಾದರೂ ದಾರ ಒಂದೇ,
ಹಾಲು ಕರೆದ ಹಸುಗಳ ಬಣ್ಣ ಹಲವಾದರೂ ಕ್ಷೀರ ಒಂದೇ,
ಹೊತ್ತುದು ಹೊನ್ನಾಗಲಿ, ಮಣ್ಣಾಗಲಿ ಭಾರ ಒಂದೇ,
ಕಡಲಿನ ಹೆಸರೇನೇ ಇರಲಿ, ಕ್ಷಾರ ಒಂದೇ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪೂಜಿಸುವ, ಪ್ರಾರ್ಥಿಸುವ, ಯಜಿಸುವ, ಭಜಿಸುವ
ರೀತಿ ನೂರಾದರೂ ಉದ್ಧಾರ ಒಂದೇ !

೯೦

ಬಲೆಯಲ್ಲಿ ಸಿಲುಕಿದ ಮೀನುಗಳಿಗಿಂತ
ಸಿಲುಕದ ಮೀನುಗಳು ಹೆಚ್ಚಿವೆಯಯ್ಯ ಕಡಲಿನಲ್ಲಿ ;
ಶಬ್ದಗಳಿಗೆ ನಿಲುಕಿದ ಜ್ಞಾನ–ವಿಜ್ಞಾನಕ್ಕಿಂತ
ನಿಲುಕದುದು ಹೆಚ್ಚಿದೆಯಯ್ಯ ಪೊಡವಿಯಲ್ಲಿ ;
ದೇಹವಿಟ್ಟವರಿಗಿಂತ, ದೇಹ ತೊಟ್ಟವರಿಗಿಂತ,
ದೇಹ ತೊಡಲಿರುವವರು ಹೆಚ್ಚಿಗಿಹರಯ್ಯ ಭವಿಷ್ಯದ ಒಡಲಿನಲ್ಲಿ;
ಬರೆದ ಚಿತ್ರಗಳಿಗಿಂತ ಬರೆಯದ ಚಿತ್ರಗಳು,
ಕೊರೆದ ಮೂರ್ತಿಗಳಿಗಿಂತ ಕೊರೆಯದ ಮೂರ್ತಿಗಳು,
ಬರೆದ ಕೃತಿಗಳಿಗಿಂತ ಬರೆಯದ ಕೃತಿಗಳು
ಹೆಚ್ಚಿಗಿವೆಯಯ್ಯ ಸಾಧ್ಯತೆಯ ಗರ್ಭದಲ್ಲಿ ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಬಗ್ಗೆ ಅರಿವ ವಿಷಯಗಳಿಗಿಂತ

ಅರಿಯದ ವಿಷಯಗಳು ಹೆಚ್ಚಿವೆಯಯ್ಯ ಜಿಜ್ಞಾಸೆಯ ಉದರದಲ್ಲಿ !

೯೧

ನನ್ನ ಬಾಳಿನ ಬಾನಿನಲ್ಲಿ
ಬುದ್ಧಿಯೇ ಭಾನು, ಶ್ರದ್ಧೆಯೇ ಶಶಿಯಾಗಲಯ್ಯಾ ;
ಶ್ರದ್ಧೆ ಸೂರ್ಯನಾಗಿ ಬುದ್ಧಿ ಚಂದ್ರನಾಗದಿರಲಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೨

ಏನೋ ಅನುಭವವಾಗುತ್ತದೆ ಒಮ್ಮೊಮ್ಮೆ,
ಅರ್ಥವಾಗುವುದಿಲ್ಲ ;
ಏನೇನೋ ಅರ್ಥವಾಗುತ್ತದೆ ಒಮ್ಮೊಮ್ಮೆ,
ಅನುಭವವಾಗುವುದಿಲ್ಲ !
ಅರ್ಥ ಅನುಭವಗಳ
ಸಮರಸೈಕ್ಯ ಮುಹೂರ್ತ
ಬರದೇನಯ್ಯ ಒಮ್ಮೆಯಾದರೂ ?
ಏನೋ ಹೊಳೆದಂತಾಗುತ್ತದೆ ಒಮ್ಮೊಮ್ಮೆ,
ತಿಳಿದಂತಾಗುವುದಿಲ್ಲ ;
ಎಂತೋ ತಿಳಿದಂತಾಗುತ್ತದೆ ಒಮ್ಮೊಮ್ಮೆ,
ಹೊಳೆದಂತಾಗುವುದಿಲ್ಲ !
ಹೊಳೆವು – ತಿಳಿವುಗಳ
ಪ್ರೇಮಪರಿಣಯದ ನಲ್ಗಳಿಗೆ
ಬಾರದೇನಯ್ಯ ಒಮ್ಮೆಯಾದರೂ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಬಾನಿನಲ್ಲಿ
ಏಕ ಕಾಲಕ್ಕೆ ಬೆಳಗರೇನಯ್ಯ
ಬುದ್ಧಿಯ ರವಿ ಬಗೆಯ ಶಶಿ
ಒಮ್ಮೆಯಾದರೂ ?

೯೩

ನೆನಪಿನ ನೆಲದಲ್ಲಿ ಹೂತ ಹೂಳಲುಗಳ
ಅಗಿದು ತೆಗೆಯಲೆ,

ಹೊಸ ನೆನಪುಗಳ ಹೊಲಗದ್ದೆಗಳನ್ನು
ಬಿತ್ತಿ ಬೆಳೆಯಲೆ ?
ಮರಹಿನ ಮರುಭೂಮಿಯಲ್ಲಿ
ಓಯಸಿಸ್ ಹುಡುಕುತ್ತ ಹೊರಡಲೆ,
ಅರಿವಿನ ಎಚ್ಚರದ ತೊರೆಯಲ್ಲಿ
ಈಸು ಬೀಳಲೆ ?
ಅಸಾಧ್ಯದ ಶಿಖರಾರೋಹಣಕ್ಕೆ ಯತ್ನಿಸಲೆ,
ಸಾಧ್ಯದ ತಪ್ಪಲಿನಲ್ಲಿಯೇ ಸುತ್ತಿ ಸುಳಿಯಲೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಾನಾಗುವಂತೆ ಹವಣಿಸಲೆ,
ನಾನು ನೀನಾಗಲು ಹಂಬಲಿಸಲೆ ?

೯೪

ಇದಿರು ಕಾಣುವವರೆಗೆ
ಕುರುಹಿಗೆ ಕೈಮುಗಿದೆ ;
ಕಾಣದಾದಾಗ
ನನಗೆ ನಾ ನಮಸ್ಕರಿಸಿದೆ–
ಸ್ವತಂತ್ರಧೀರ ಸಿದ್ಧೇಶ್ವರಾ !

೯೫

ಬದುಕುವಾಸೆಯನಿತೇ ಘನ ಮರಣಭೀತಿ,
ಸ್ವಸುಖದಾಸೆಯನಿತೇ ಗಾಢ ಒಲಿದವರ ಪ್ರೀತಿ,
ನಿಂತ ಎತ್ತರದಷ್ಟೇ ದೂರ ನೋಟದ ಹರಹು,
ಆಸಕ್ತಿಯಷ್ಟೇ ಅಗಲ ಅರಿವವನ ಅರುಹು,
ಮಾಡಿದನಿತೂ ಹಿರಿದು ಮಾಡುವ ಶಕ್ತಿ,
ಬೇಡಿದನಿತೂ ಕಿರಿದು ಮಾಡಿದ ಭಕ್ತಿ,
ನೋಡಿದನಿತೂ ಹೊಸತು ನಿಜವಾದ ಚೆಲುವು,
ಕೂಡಿದನಿತೂ ಹೆಚ್ಚು ನಿಜವಾದ ಒಲವು,
ಬಚ್ಚಿಟ್ಟನಿತೂ ವ್ಯರ್ಥ ವಿತ್ತ, ಹೊತ್ತಗೆ,
ಬಳಸಿದಷ್ಟೂ ಬೆಳಸು ಬಾಳ ಬುತ್ತಿಗೆ –
ಸ್ವತಂತ್ರಧೀರ ಸಿದ್ಧೇಶ್ವರಾ,
ನಿಲುಕಿದಷ್ಟೂ ಆಚೆ ನಿನ್ನ ನಿಲವು,

ಸೋತನಿತೂ ಗೆಲ್ಲಲಿದೆ ನನ್ನ ಒಲವು !

೯೬

ಅಪರಾಧೀ ಅಂತಃಸಾಕ್ಷಿಯಿರೆ
ಕಾಯವೇ ಕಾರಾಗಾರ,
ಇಲ್ಲದಿರೆ, ಶರೀರವೇ ಶ್ರೀಗಿರಿ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೭

ಸಂಸ್ಕರಿಸಿದಂತೆ ಬುದ್ಧಿ, ಸಾಧನೆಯಂತೆ ಸಿದ್ಧಿ,
ದುಡಿವ ದುಡ್ಡಿನನಿತು ಆಯ, ಪ್ರಾರಂಭದಂತೆ ಮುಕ್ತಾಯ,
ಬಿತ್ತಿದಂತೆ ಬೆಳೆ, ಬಯಸಿದಂತೆ ಬಾಳು,
ಭೂಮಿಯಂತೆ ಜಲ, ಮರದಂತೆ ಫಲ,
ಕಟ್ಟಿದಂತೆ ಬುತ್ತಿ, ಬೆಳೆಸಿದಂತೆ ನೆತ್ತಿ,
ಮನಸಿನಂತೆ ಮಾರ್ಗ, ಕಲ್ಪಿಸಿದಂತೆ ಸ್ವರ್ಗ,
ಹಾಲಿನಂತೆ ಹವ್ಯ, ಕಾಣ್ಕೆಯಂತೆ ಕಾವ್ಯ,
ಮುತ್ತಿನಂತೆ ಮಾಲೆ, ಗುರುವಿನಂತೆ ಶಾಲೆ,
ವಿಷಯದಂತೆ ವಾದ, ಅರ್ಥವಿಸಿದಂತೆ ವೇದ,
ಅಗತ್ಯದಂತೆ ಆಸೆ, ಬಳಸಿದಂತೆ ಭಾಷೆ,
ನಾಗರಿಕರಂತೆ ಸರಕಾರ, ಗುರಿಯಂತೆ ಗುರಿಕಾರ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಂತೆ ನಾನು, ನನ್ನಂತೆ ನೀನು !

೯೮

ತೆರೆಯೊಂದರಿಂದ ತೊರೆಯಾಗದು ನಿಜ ;
ಆದರೆ, ತೆರೆಯಿಲ್ಲದ ತೊರೆಯೂ ಉಂಟೇನಯ್ಯಾ ?
ತೊರೆಯಲ್ಲಿ ಮಾತ್ರ ತೆರೆಗೆ ಅಸ್ತಿತ್ವ,
ತೆರೆಯಿಂದ ತೊರೆಗೆ ವಹನತ್ವ,
ಎರಡರೊಳೂ ಎರಡೂ ಇವೆ – ದ್ವಿತ್ವ ಏಕತ್ವ !
ನಾನೆ ತೆರೆ, ನೀನೆ ತೊರೆ,
ಸ್ವತಂತ್ರಧೀರ ಸಿದ್ಧೇಶ್ವರಾ !

೯೯

ಜೀವನ ಮರಣಗಳ ನಡುವಣ ಅಂತರ
ಒಂದು ಉಸಿರು ;
ಸ್ಮೃತಿ ವಿಸ್ಮೃತಿಗಳ ನಡುವಣ ಅಂತರ
ಒಂದು ನೆನಹು ;
ಭೂತ ಭವಿತವ್ಯಗಳ ನಡುವಣ ಅಂತರ
ಒಂದು ನಿಮಿಷ ;
ಸುರೂಪ ಕುರೂಪಗಳ ನಡುವಣ ಅಂತರ
ಒಂದು ನೋಟ ;
ಅಲ್ಪಕೃತಿ ಮಹಾಕೃತಿಗಳ ನಡುವಣ ಅಂತರ
ಒಂದು ಕಾಣ್ಕೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನಿನ್ನ ನಡುವಣ ಅಂತರ
ಒಂದು ಅಹಮಿಕೆ !

೧೦೦

ವಿದ್ಯೆ ಬಂತು, ವಿನಯ ಹೋಯ್ತು ;
ಬುದ್ಧಿ ಬಂತು, ಶ್ರದ್ಧೆ ಹೋಯ್ತು ;
ಶ್ರದ್ಧೆ ಬಂತು, ವಿವೇಚನೆ ಹೋಯ್ತು ;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು ;
ವಿಜ್ಞಾನ ಬಂತು, ಸಮಾಧಾನ ಹೋಯ್ತು ;
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು ;
ದೀರ್ಘಾಯುಷ್ಯ ಬಂತು, ಜೀವನ ಸ್ವಾರಸ್ಯ ಹೋಯ್ತು ;
ಬೋಧನೆ ಬಂತು, ಸಾಧನೆ ಹೋಯ್ತು ;
ಮಾತು ಬಂತು, ಕೃತಿಯು ಹೋಯ್ತು ;
ಜಾತಿ ಬಂತು, ಪ್ರೀತಿ ಹೋಯ್ತು ;
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು ;
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರಧೀರ ಸಿದ್ಧೇಶ್ವರ ಹೋದ !

## ೧೦೧

ಹೆಣವಾದ ಮೇಲೆ ಹೋಗಲಿ,
ಬದುಕಿರುವಾಗಲೂ
ಒಂದು ಅಡಿಕೆಗೆ ಕೊಳ್ಳುವವರಿಲ್ಲವಯ್ಯ ಎನ್ನನ್ನು !
ಇಂಥ ನನ್ನನೇ ಕೊಟ್ಟು
ನಿನ್ನನೇ ಕೊಳ್ಳುವೆನಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೦೨

ಹಲವು ಮಸಿಗಳ ಹೀರಿ ಹಣ್ಣಾದ
ಒತ್ತು ಕರಡು ನಾನಯ್ಯ !
ನಿನ್ನಡಿಯ ಮುದ್ರೆ ಧರಿಸೆ
ಎಡೆಯೂ ಇಲ್ಲ, ದೃಢವೂ ಇಲ್ಲ ಇಲ್ಲಿ !
ಹಲವು ಬಣ್ಣಗಳ ನುಂಗಿಯೂ ಬಣ್ಣಗೆಟ್ಟ
ಈ ಬಡ ಒತ್ತು ಕರಡು
ಹರಳಯ್ಯನ ತೊಡೆಯ ಚರ್ಮವಾಗಬಲ್ಲುದೇನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ ?

## ೧೦೩

ಇಂದ್ರಿಯದಿಂದ ಇಂದ್ರಿಯಕ್ಕೆ ಹರಿದಾಡುವ
ಮನದ ಪಾದರಸವೇ,
ಮುಟ್ಟಿದರೆ ಉರುಳುವ
ತಟ್ಟಿದರೆ ಹೊರಳುವ
ಚಿವುಟಿದರೆ ಕೆರಳುವ
ನಿಲುಕಿದರೆ ಸಿಲುಕದ ಪಾದರಸವೇ–
ಸ್ವತಂತ್ರಧೀರ ಸಿದ್ಧೇಶ್ವರನ
ಸಹಸ್ರನಾಮಗಳ ಸಹಸ್ರ ಪುಟ ಹಾಕಿ
ಸಹಸ್ರ ಪುಟಿ ಭಸ್ಮವ ಮಾಡಿ
ನಿನ್ನ ಸೇವಿಸುವೆ–
ನಿನ್ನಿಂದಲೇ ನಿನ್ನ ಜೈಸುವೆ !

## ೧೦೪

ಕವನಕ್ಕೆ ಕಾರಣ ನಾನು ತಾನೆಂದು
ಕಾಗದ ಮಸಿ ಕಡಿದಾಡಿದರೆ
ನಗದೇನು ಮಾಡುವನು ಕವಿ ?
ಮೂರ್ತಿಯ ರೂವಾರಿ ನಾನು ತಾನೆಂದು
ಕಲ್ಲು ಉಳಿ ಕಾದಾಡಿದರೆ
ನಗದೇನು ಮಾಡುವನು ಶಿಲ್ಪಿ ?
ಚಿತ್ರಕ್ಕೆ ಕರ್ತೃ ನಾನು ತಾನೆಂದು
ಬಣ್ಣ ಕುಂಚ ಬಡಿದಾಡಿದರೆ
ನಗದೇನು ಮಾಡುವನು ಚಿತ್ರಕಾರ ?
ಜಗದಾಗುಹೋಗುಗಳಿಗೆ ಕಾರಣ ನಾನು ತಾನೆಂದು
ಜಡ ಮತಿಗಳು ಹೊಡೆದಾಡಿದರೆ
ನಗದೇನು ಮಾಡುವನು ಸ್ವತಂತ್ರಧೀರ ಸಿದ್ಧೇಶ್ವರ ?

## ೧೦೫

ಕಿರಿಯ ನದಿ ಶರಾವತಿ ಕಾಳಿಗಳು; ಆದರೆ,
ಅವು ನೀಡಿರುವ ನೀಡಲಿರುವ ವಿದ್ಯುಚ್ಛಕ್ತಿ ಕಿರಿದೇನಯ್ಯಾ ?
ಕಿರಿಯ ವಿಮಾನ 'ನ್ಯಾಟ್'; ಆದರೆ,
ಅದರ ಯುದ್ಧೋಪಯೋಗಿತ್ವ ಕಿರಿದೇನಯ್ಯಾ ?
ಕಿರಿಯ ಆಳು ಲಾಲಬಹಾದ್ದೂರಜಿ; ಆದರೆ,
ಅವರ ಶೀಲ–ಶಕ್ತಿ ಕಿರಿದೇನಯ್ಯಾ ?
ಕಿರಿಯ ಉಪನಿಷತ್ತು ಈಶೋಪನಿಷತ್ತು; ಆದರೆ,
ಅದರ ಅರ್ಥ–ಪ್ರಪಂಚ ಕಿರಿದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಿರಿಯರಲ್ಲಿ ಕಿರಿಯ ನಾನು–
ಕಿರಿತನವೇ ನಾನು! ಆದರೆ,
ನಿನ್ನತನಕ್ಕೆ ನೆಲೆಯಾದ

ನನ್ನತನ ಕಿರಿದೇನಯ್ಯಾ ?

೧೦೬

ಜಡವು ಅಜಡತೆಯನ್ನು ಪಡೆವ ಪ್ರಮಾಣದಲ್ಲಿಯೇ
ಚೇತನಕ್ಕೆ ಸಮೀಪವಾಗುವುದಯ್ಯ ;
ಚೇತನವು ಚಿಂತನವನ್ನು ಪಡೆವ ಪ್ರಮಾಣದಲ್ಲಿಯೇ
ಚಿದ್ವಿಲಾಸಕ್ಕೆ ಸಮೀಪವಾಗುವುದಯ್ಯ ;
ಚಿದ್ವಿಲಾಸವು ಅನುಭಾವಕ್ಕೆ ಒಲಿದ ಪ್ರಮಾಣದಲ್ಲಿಯೇ
ಆನಂದಕ್ಕೆ ಹತ್ತಿರವಾಗುವುದಯ್ಯ ;
ನನ್ನತನ ತನ್ನತನ ಅಳವಡಿಸಿಕೊಂಡಷ್ಟೂ
ನಿನ್ನತನಕ್ಕೆ ಹತ್ತಿರವಾಗುವುದಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೧೦೭

ಅದಿರಿನಲ್ಲಿ ಚಿನ್ನದೊಡನೆ ಮಣ್ಣಿದೆಯೆಂದು
ಅಲ್ಲಗಳೆಯಬಹುದೆ ಅದನ್ನು ?
ಹಣ್ಣಿನಲ್ಲಿ ರಸದೊಡನೆ ಗೊರಟು ಸಿಪ್ಪೆಗಳಿವೆಯೆಂದು
ಬೀಳುಗಳೆಯಬಹುದೆ ಅದನ್ನು ?
ಸ್ವತಂತ್ರಧೀರ ಸಿದ್ಧೇಶ್ವರಾ, ಹಲವು ದೋಷಗಳಿವೆಯೆಂದು
ಉಪೇಕ್ಷಿಸಬಹುದೆ ನೀನು ನನ್ನನ್ನು ?

೧೦೮

ಕತ್ತಲೆ ಗಾಢವಾದಷ್ಟೂ ಬೆಳಕಿನ ಗಾಡಿ ಹೆಚ್ಚುವುದಯ್ಯಾ ;
ಮೋಡ ಕಪ್ಪಾದಷ್ಟೂ ಅಪ್ಪುವಿನ ಅಂಶ ಹೆಚ್ಚುವುದಯ್ಯ ;
ಚಂದನ ಧವಳಿಮೆ ಹೆಚ್ಚಿದಷ್ಟೂ ನಭದ ನೀಲಿಮೆ ಹೆಚ್ಚುವುದಯ್ಯ ;
ರೆಪ್ಪೆಯ ಕಪ್ಪು ಹೆಚ್ಚಿದಷ್ಟೂ ಕಂಗಳ ಕಳೆ ಹೆಚ್ಚುವುದಯ್ಯ ;
ಹಸಿವೆ ಹೆಚ್ಚಿದಷ್ಟೂ ಅಶನದ ರುಚಿ ಹೆಚ್ಚುವುದಯ್ಯ ;
ದಾಸ್ಯ ಹೆಚ್ಚಿದಷ್ಟೂ ಬಿಡುಗಡೆಯ ಬೆಲೆ ಹೆಚ್ಚುವುದಯ್ಯ ;
ಅಪಘಾತಗಳು ಹೆಚ್ಚಿದಷ್ಟೂ ಸಂಚಾರ ಸಂಹಿತೆಯ ಮಹತ್ವ
ಹೆಚ್ಚುವುದಯ್ಯ ;
ಅರಾಜಕತೆ ಹೆಚ್ಚಿದಷ್ಟೂ ಅನುಶಾಸನದ ಹಿರಿಮೆ ಹೆಚ್ಚುವುದಯ್ಯ ;
ಮೋಸ ಹೆಚ್ಚಿದಷ್ಟೂ ಪ್ರಾಮಾಣಿಕತೆಯ ಗರಿಮೆ ಹೆಚ್ಚುವುದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ, ನನ್ನ ತಪ್ಪು ಹೆಚ್ಚಿದಷ್ಟೂ
ನಿನ್ನ ಕ್ಷಮೆ ಹೆಚ್ಚಲಯ್ಯ !

## ೧೦೯

ಮಗು ಮೈ ಮಣ್ಣು ಮಾಡಿಕೊಂಡಿದೆಯೆಂದು
ತಾಯಿ ತಿರಸ್ಕರಿಸುವಳೇನಯ್ಯ ?
ತೊಳೆದು ಮುತ್ತಿಡುವಳಯ್ಯ !
ಶಿಷ್ಯ ತಪ್ಪು ಬರೆದನೆಂದು
ಗುರು ತಿರಸ್ಕರಿಸುವನೇನಯ್ಯ ?
ತಿದ್ದಿ ಸರಿಪಡಿಸುವನಯ್ಯ !
ಸಸಿ ಡೊಂಕಾಗಿ ಬೆಳೆಯಿತೆಂದು
ತೋಟಿಗ ತಿರಸ್ಕರಿಸುವನೇನಯ್ಯ ?
ಸೆಡೆ ಕಟ್ಟಿ ಸಸಿನಗೊಳಿಸುವನಯ್ಯ !
ಪ್ರಯೋಗ ವಿಫಲವಾಯಿತೆಂದು ವಿಜ್ಞಾನಿ
ಪಯೋಗಶಾಲೆಯನ್ನೇ ತಿರಸ್ಕರಿಸುವನೇನಯ್ಯ ?
ಹೊಸ ಪ್ರಯೋಗ ಹೂಡುವನಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ, ನಾನು ಕೆಟ್ಟೆನೆಂದು
ನೀನು ಸಿಟ್ಟಾಗಬಹುದೇನಯ್ಯ ?
ತಿದ್ದಿ ಉದ್ಧರಿಸಯ್ಯ !

## ೧೧೦

ಗಂಡ ಬಯಸಿದುದನ್ನೇ ಹೆಂಡತಿ ಹೇಳದೆಯೆ ಮಾಡಿದಾಗ
ಆ ಅಡುಗೆಯ ರುಚಿಯೆಷ್ಟು ? !
ಸತಿ ಬಯಸಿದುದನ್ನೇ ಪತಿ ಹೇಳದೆಯೆ ತಂದಾಗ
ಆ ಒಡವೆಯ ಅಮೂಲ್ಯತೆಯೆಷ್ಟು ? !
ಕವಿ ಕೋರಿದ ಶಬ್ದವೇ ಹಾರಿ ಬಂದ ಹಾಳೆಯಲ್ಲಿ ಸಿಕ್ಕಾಗ
ಆ ಪದವೀವ ಮುದವೆನಿತು ? !
ಶಿಲ್ಪಿ ಬಯಸಿದ ಶಿಲೆಯೇ ಪಯತ್ನವಿಲ್ಲದೆಯೆ ಪದತಲದಿ ಸಿಕ್ಕಾಗ
ಆ ಶಿಲೆಯ ಬೆಲೆಯೆನಿತು ? !
ಬೇಕೆನಿಸಿದ್ದ ವಸ್ತುವೇ ಮುಯ್ಯವಾಗಿ ಬಂದಾಗ
ಆ ಮುಯ್ಯದ ಮೇಲ್ಮೆಯೆನಿತು ? !
ಸ್ವತಂತಧೀರ ಸಿದ್ಧೇಶ್ವರಾ,
ನಾ ಬೇಡುವ ಮುನ್ನವೆ ನೀ ಕರುಣಿಸಿದಾಗ
ಆ ಕರುಣೆಯ ಪರಮತೆಯೆನಿತು ? !

## ೧೧೧

ನೀನು ಕೊಡಲಿಚ್ಛಿಸಿದಾಗ ತಡೆಯಬಲ್ಲವರ ಕಾಣೆ ;
ಹಾರುವುವು ಅಡ್ಡಬರುವ ಅಡ್ಡಿಯ ಗುಡ್ಡಗಳು ಕಡ್ಡಿಯಂತೆ ;
ನಿನಗೆ ಕೊಡಲಿಷ್ಟವಿಲ್ಲದಾಗ ಕೊಡಬಲ್ಲವರ ಕಾಣೆ ;
ಮುಗ್ಗರಿಸುವುವು ಪ್ರಯತ್ನ–ಪುಂಗವಗಳು ತಗ್ಗು ಒಗ್ಗಾಲಿಗಳಿಲ್ಲದೆಯೆ !
ಕೊಡು, ಬಿಡು, ಕೈ ಬಿಡಬೇಡವಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೧೨

ನೀನು ಕಾಯಲೆಳಸಿದರೆ ಕೊಲ್ಲುವವರಾರಯ್ಯ ?
ನೀನು ಕೊಲ್ಲಬಯಸಿದರೆ ಕಾಯುವವರಾರಯ್ಯ ?
ನೀನು ಎತ್ತಿ ಹಿಡಿದರೆ ಇಳಿಸುವವರಾರಯ್ಯ ?
ನೀನು ಕೆಳಗೊತ್ತಿದರೆ ಮೇಲೆತ್ತುವವರಾರಯ್ಯ ?
ನೀನು ಕ್ಷಮಿಸಿದರೆ ಶಿಕ್ಷಿಸುವವರಾರಯ್ಯ ?
ನೀನು ಶಿಕ್ಷಿಸಲೆಳಸಿದರೆ ರಕ್ಷಿಸುವವರಾರಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ, ರಕ್ಷಿಸು, ಇಲ್ಲವೆ ಶಿಕ್ಷಿಸು–
ಕೃಪಾಕಟಾಕ್ಷದಿಂದ ವೀಕ್ಷಿಸಯ್ಯಾ !

## ೧೧೩

ಪ್ರಪಂಚದ ಆಹಾರವನ್ನೆಲ್ಲ ಉಣಿಸಿದರೂ
ಹಿಂಗದ ಹಸಿವೆಯಿಂದ ಬಳಲುತ್ತಿಹೆನಯ್ಯ !
ಪಂಚನದಿಗಳ ನೀರೆಲ್ಲವನ್ನೂ ಕುಡಿಸಿದರೂ
ಆರದ ನೀರಡಿಕೆಯಿಂದ ಅಳಲುತ್ತಿಹೆನಯ್ಯ !
ಸಪ್ತ ಶರಧಿಗಳ ನೀರ ಧಾರಾಕಾರವಾಗಿ ಸುರಿದರೂ
ನಂದದ ಬೆಂಕಿಯಿಂದ ನರಳುತ್ತಿಹೆನಯ್ಯ !
ಸಾವಿರ ಸೂರ್ಯರು ಒಮ್ಮೆಗೇ ಉದಿಸಿದರೂ
ತೊಲಗದ ತಮದಿಂದ ತೊಳಲುತ್ತಿಹೆನಯ್ಯ !
ನೀನೊಮ್ಮೆ ಒಲಿದರೆ ಸಾಕು–
ಓಡುವುವು ಹಿಂಗದ ಹಸಿವೆ, ಆರದ ನೀರಡಿಕೆ,
ನಂದದ ಬೆಂಕಿ, ತೊಲಗದ ತಮಗಳು !
ಒಮ್ಮೆ ಒಲಿಯಯ್ಯಾ, ಒಂದೇ ಸಲ ಒಲಿಯಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೧೪

ಸಾವಿರ ಸಾವಿರ ಸಿಹಿ ನೀರಿನ ಹೊಳೆ ಹಳ್ಳಗಳು ಸೇರಿದರೂ
ಒಡಲ ಉಪ್ಪನ್ನು ಬಿಡದ ಕಡಲಿನಂತಾದುದಯ್ಯ
ನನ್ನ ಮನ !
ಲಕ್ಷ ಲಕ್ಷ ನಕ್ಷತ್ರಗಳು ಮಿನುಗಿದರೂ
ಕಾಳಿಮೆಯನ್ನು ಕಳೆದುಕೊಳ್ಳದ ಕರಾಳ ರಾತ್ರಿಯಂತಾದುದಯ್ಯ
ನನ್ನ ಬುದ್ಧಿ ;
ಹಗಲಿರುಳು ಹಿಮದ ಹೊದಿಕೆಯಲ್ಲಿದ್ದರೂ
ನೆನೆದು ಮೃದುವಾಗದ ಹಿಮಗಿರಿ ಶಿಖರದಂತಾದುದಯ್ಯ
ನನ್ನ ಅಹಂಕಾರ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಆಯುಷ್ಯವನ್ನೆಲ್ಲ ಅರ್ಚನೆಯಲ್ಲಿ ಕಳೆದರೂ
ಅಳಿಯಾಸೆ ತೊಲಗದ ಅರ್ಚಕನಂತಾದುದಯ್ಯ
ನನ್ನ ಚಿತ್ತ !

## ೧೧೫

ಕಡು ಹಸಿದು
ಕಳ್ಳಿಯ ಕುಡಿ ಕಡಿದಂತಾಯಿತ್ತಯ್ಯ
ಎನ್ನ ಯುಕ್ತಿ !
ಮುಖವ ಭಂಗಿಸಲು
ಮೂಗು ಕೊಯ್ದು ಕೊಂಡಂತಾಯಿತ್ತಯ್ಯ
ನನ್ನ ಶಕ್ತಿ !
ನೀರಡಿಸಿ ಬಾಯಾರಿ
ಸುಣ್ಣದ ನೀರನ್ನು ಕುಡಿದಂತಾಯಿತ್ತಯ್ಯ
ನನ್ನ ಭಕ್ತಿ !
ಬಾಗಿಲವ ಮುಚ್ಚಿ
ಕಳ್ಳಗಿಂಡಿಯ ಹುಡುಕಿದಂತಾಯಿತ್ತಯ್ಯ
ನನ್ನ ವಿರಕ್ತಿ !
ಸ್ವತಂತ್ರಧೀರ ಸಿದ್ಧೇಶ್ವರಾ,
ಕದಿಯುವುದ ತಪ್ಪಿಸಲೆಂದು
ಕೈಯ ಕಡಿದುಕೊಂಡಂತಾದುದಯ್ಯ

ನನ್ನ ಮುಕ್ತಿ !

೧೧೬

ಹಲವು ಕಸಿಗಳ ಹೊಂದಿ ಬೆಳೆದ ಮನಸಿನ ಮರವು
ಸುಗಂಧ–ದುರ್ಗಂಧ–ನಿರ್ಗಂಧ ಕುಸುಮಗಳ
ಒಮ್ಮೆಗೇ ಬಿಟ್ಟರೆ ಸೋಜಿಗವೆಲ್ಲಿಯದಯ್ಯ ?
ಹಲವು ಬಣ್ಣದ ಗಾಜ ಪಡೆದ ಬುದ್ಧಿಯ ದೀಪ
ಬಹು ಬಣ್ಣಗಳ ಬೆಳಕ ಬೀರಿದರೆ
ಬೆರಗೆಲ್ಲಿಯದಯ್ಯ ?
ಹಲವು ರೂಪಗಳ ಹೆರುವ ಅಹಂಕಾರದ ಊಸರವಳ್ಳಿ
ಹೊತ್ತಿಗೊಂದು ಪರಿಯಾಗಿ ಕಾಣಿಸಿಕೊಂಡರೆ
ಅಚ್ಚರಿಯೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹಲವು ಪದರಿನ ಚಿತ್ತ
ಪದರು ಪದರಿಗೆ
ಬೇರೆ ಚಿತವನೆ ತೋರಿದರೆ
ವಿಚಿತ್ರವೆಲ್ಲಿಯದಯ್ಯ ?

೧೧೭

ನಾನು ನೆಯ್ದ ಬಲೆಯಲ್ಲಿ ನಾನೇ ಸಿಲುಕುವುದಾದರೆ
ಆ ಬಲೆಯ ನೆಯ್ಯದಿರುವುದೇ ಮೇಲಯ್ಯ !
ನಾನು ನಿರ್ಮಿಸಿದ ಸಿದ್ಧಾಂತ–ಪಂಜರದಲ್ಲಿ ನಾನೇ ಬಂಧಿತನಾಗುವುದಾದರೆ
ಆ ಪಂಜರವ ನಿರ್ಮಿಸದಿರುವುದೇ ಲೇಸಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಹಮ್ಮಿನ ಭಕ್ತಿ–ಜ್ಞಾನ–ವೈರಾಗ್ಯಗಳು
ನನ್ನನೇ ಕಟ್ಟಿ ಕೆಡಹುವುದಾದರೆ
ಇವುಗಳಿಗೆ ಒಳಗಾಗದಿರುವುದೇ ಒಳಿತಯ್ಯ !

## ೧೧೮

ಕ್ರೀಡೆಯಿಲ್ಲದ ಜೀವನ ಕೀಡೆ ತಿಂದ ಹಣ್ಣಯ್ಯ ;
ಪ್ರೀತಿಯಿಲ್ಲದ ಜೀವನ ನಾತವಿಲ್ಲದ ಹೂವಯ್ಯ ;
ಗುರಿಯಿಲ್ಲದ ಜೀವನ ಗರಿಯಿಲ್ಲದ ಹಕ್ಕಿಯಯ್ಯ ;
ಶೀಲವಿಲ್ಲದ ಜೀವನ ಶೀರ್ಣಮೂಲ ತರುಮರವಯ್ಯ ;
ಸ್ನೇಹವಿಲ್ಲದ ಜೀವನ ಸ್ನೇಹವಿಲ್ಲದ ಸೊಡರಯ್ಯ ;
ವಿನೋದವಿಲ್ಲದ ಜೀವನ ಸುನಾದವಿಲ್ಲದ ಸನಾದಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮರೆತ ಜೀವನ ನೀರು ಬರತ ಸರೋವರವಯ್ಯ !

## ೧೧೯

ಹಸುಗೂಸುಗಳ ನಸು ನಗೆ
ಶಿಶು ಚೋರರಿಗೆ
ಹಿಡಿಸುವುದೇನಯ್ಯ ?
ಶಿಲಾಲಿಪಿಗಳ ಮಹತ್ವ
ಇತಿಹಾಸ ವಿರೋಧಿಗೆ
ತಿಳಿವುದೇನಯ್ಯ ?
ಓರಫಿಯಸನ ಸಂಗೀತದ ಸವಿ
ಔರಂಗಜೇಬರಂಥವರಿಗೆ
ಸೊಗಸುವುದೇನಯ್ಯ ?
ಪಳೆಯುಳಿಕೆಗಳ ಬೆಲೆ
ಅಗಿವ ಗುದ್ದಲಿಗೆ
ವೇದ್ಯವಾಗುವುದೇನಯ್ಯ ?
ಹಾಕಿದ ಕಡಲೆಯ ರುಚಿ
ಹಗೇವಿಗೆ ಗೊತ್ತಾಗುವುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೆನೆವುದರ ತನಿಯು
ನಿನ್ನನೇ ಒಪ್ಪದವರಿಗೆ ಅರ್ಥವಾಗುವುದೇನಯ್ಯಾ ?

## ೧೨೦

ಬಲೆ ಚೆಲುವಾದುದೆಂದು ಸಿಲುಕಿಕೊಂಡರೆ
ಕೊಲುವುದಲ್ಲದೆ ಬದುಕಿಸಬಲ್ಲುದೇನಯ್ಯ ?
ಬೆಂಕಿ ಮನೆಯದೆಂದು ಮುಟ್ಟಿದರೆ
ಸುಡುವುದಲ್ಲದೆ ಸುಖವೀಯಬಲ್ಲುದೇನಯ್ಯ ?
ವಜ್ರ ಬೆಲೆಯುಳ್ಳುದೆಂದು ನುಂಗಿದರೆ
ಹೊಟ್ಟೆ ಮುರಿವುದಲ್ಲದೆ
ರಕ್ತವಾಗಬಲ್ಲುದೇನಯ್ಯ ?
ನಂಜು ಪುಕ್ಕಟೆ ಸಿಕ್ಕಿತೆಂದು ಕುಡಿದರೆ
ಅಂಗಕ್ಕೆ ಅಪಾಯವಲ್ಲದೆ
ಆಪ್ಯಾಯನವಾಗಬಲ್ಲದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಕಣ್ಣಿಗೆ ಕಾಣೆಯೆಂದು ನಿನ್ನ ನಿರಾಕರಿಸಿದರೆ
ನಿರಾಕರಿಸಿದವರಿಗೆ ಗ್ಲಾನಿಯಲ್ಲದೆ
ನಿನಗೆ ಹಾನಿಯೆಲ್ಲಿಯದಯ್ಯ ?

## ೧೨೧

ಕೆರದ ಖರ್ಚು ಉಳಿಸಲು
ಕಾಲುಗಳನ್ನೇ ಕತ್ತರಿಸಿಕೊಂಡವರು
ಉಂಟೇನಯ್ಯ ?
ಮಂಜನದ ವೆಚ್ಚ ಉಳಿಸಲು
ಹಲ್ಲುಗಳನ್ನೇ ಕಿತ್ತೊಗೆದವರು
ಉಂಟೇನಯ್ಯ ?
ವೈದ್ಯರ ಶುಲ್ಕ ಉಳಿಸಲು
ವ್ಯಾಧಿಯನ್ನೇ ಅಪ್ಪಿಕೊಂಡವರು
ಉಂಟೇನಯ್ಯ ?
ತಿಗಣೆಯ ಕಾಟ ತಪ್ಪಿಸಿಕೊಳ್ಳಲು
ಮನೆಗೇ ಬೆಂಕಿ ಹಚ್ಚಿದವರು
ಉಂಟೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿಲ್ಲವೆಂದು ಸಾಧಿಸಲು
ತಾನಿಲ್ಲವೆಂದು ವಾದಿಸುವವರೂ
ಉಂಟೇನಯ್ಯ ?

## ೧೨೨

ಬಿರುಗಾಳಿ ಬಿಟ್ಟಾಗ
ಕಿಟಕಿ ಮುಚ್ಚಿಕೊಂಡಾಕ್ಷಣ
ಗಾಳಿಗೇ ಗಡೀಪಾರು ಮಾಡಿದರೆನ್ನಬಹುದೇನಯ್ಯ ?
ಮರಮಳೆ ಸುರಿವಾಗ
ಬೆಳಕಿಂಡಿ ಬಂದಾದುವೆಂದು
ಬೆಳಕಿಗೇ ಬಹಿಷ್ಕಾರ ಹಾಕಿದರೆನ್ನಬಹುದೇನಯ್ಯ ?
ಅಜೀರ್ಣವಾದಾಗ
ಉಪವಾಸ ಮಾಡಿದ ಮಾತ್ರಕ್ಕೆ
ಆಹಾರಕ್ಕೆ ಅಪ್ಪಣೆಕೊಟ್ಟರೆನ್ನಬಹುದೇನಯ್ಯ ?
ಜ್ವರ ಬಂದಾಗ ಸ್ನಾನ ಬಿಟ್ಟೊಡನೆ
ಸ್ನಾನ ಗೃಹಕ್ಕೆ ಬೀಗ ಬಿದ್ದಿತೆನ್ನಬಹುದೇನಯ್ಯ ?
ಸಿಟ್ಟು ಬಂದಾಗ ಪೆಟ್ಟು ಹಾಕಿದ ಮಾತ್ರಕ್ಕೆ
ಮಕ್ಕಳನ್ನೇ ಮನೆ ಬಿಡಿಸಿದರೆನ್ನಬಹುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆಸ್ತಿಕತೆಯ ಆದಿತ್ಯನಿಗೆ
ನಾಸ್ತಿಕತೆಯ ಗ್ರಹಣ ಹಿಡಿದಾಕ್ಷಣ
ನೀನೇ ನಾಸ್ತಿಯಾದೆಯೆನ್ನಬಹುದೇನಯ್ಯ ?

## ೧೨೩

ಮುನಿವವನು ಮುನಿಯಾಗಬಲ್ಲನೆ ?
ಅತಿ ಕಾಮಿ ಯತಿಯಾಗಬಲ್ಲನೆ ?
ಹುಸಿವವ ಋಷಿಯಾಗಬಲ್ಲನೆ ?
ಕರಣಗಳ ಗುಲಾಮ ಶರಣನಾಗಬಲ್ಲನೆ ?
ಕನಕದ ದಾಸ ಕನಕದಾಸನಾಗಬಲ್ಲನೆ ?
ಹಂತಕ ಸಂತನಾಗಬಲ್ಲನೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನೇ ನಂಬದವ
ನೀನಾಗಬಲ್ಲನೆ ?
ಈ ಎಲ್ಲವೂ ಆಗಬಹುದು
ನಿನ್ನತ್ತ ಹೊರಳಿದಾಗ !

## ೧೨೪

ಆರೋಗ್ಯ ಬೇಕು, ಆರೋಗ್ಯ ಸೂತ್ರಗಳ ಪಾಲನೆ ಬೇಡ ;
ಸಂಸಾರ ಸುಖ ಬೇಕು, ಸಂಸಾರದ ಹೊಣೆ ಬೇಡ ;
ಅಧಿಕಾರ ಬೇಕು, ಕರ್ತವ್ಯ ನಿರ್ವಹಣೆ ಬೇಡ ;
ಜನರ ಮತಗಳು ಬೇಕು, ಜನಹಿತ ಸಾಧನೆ ಬೇಡ ;
ಶಾಸನದ ರಕ್ಷೆ ಬೇಕು, ಶಾಸನದ ರಕ್ಷಣೆ ಬೇಡ ;
ವಿಶ್ವವಿದ್ಯಾಲಯದ ಪದವಿ ಬೇಕು, ಅಧ್ಯಯನ ಬೇಡ ;
ಧರ್ಮ ನೀಡುವ ಫಲ ಬೇಕು, ಧರ್ಮಾಚರಣೆ ಬೇಡ ;
ಸಮಾಜವೀವ ಸುಖಗಳು ಬೇಕು, ಸಮಾಜ ಸೇವೆ ಬೇಡ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನೀಡುವ ದಾನಗಳು ಬೇಕು,
ನೀನು ಬೇಡ ನಿನ್ನನೊಲ್ಲದವರಿಗೆ !

## ೧೨೫

ಮಣ್ಣಿನ ವಾಸನೆ ಬೇಕು, ಮಣ್ಣಿನಿಂದಲೇ ಮೂಡುವ
ಮಲ್ಲಿಗೆಯ ವಾಸನೆ ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಹೆಣ್ಣು ನೀಡುವ ರತಿ ಸುಖಬೇಕು, ಹೆಣ್ಣಿನಲ್ಲಿಯೇ ಹುದುಗಿರುವ
ತಾಯಿತನ ಹಣ್ಣಾಗುವುದು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಹೊನ್ನು ತರುವ ಸುಖ ಸೌಕರ್ಯಗಳು ಬೇಕು, ಅದ ಪಡೆಯಲು ಪಡುವ
ಶ್ರಮಸಾಹಸಗಳು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಅನ್ನ ಪ್ರಾಣಗಳು ಬೇಕು, ಅವುಗಳಲ್ಲಿ ವಿಕಸಿಸುವ
ಮನ, ವಿಜ್ಞಾನ, ಆನಂದಗಳು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೀವ ದಾನಗಳು ಬೇಕು,
ನೀನು ಬೇಡವೆನ್ನುವವರಿಗೆ
ಏನೆನ್ನಬೇಕಯ್ಯ ?

## ೧೨೬

ಮೋಹದ ದಾಹ
ಭೋಗದ ಮೃಗಜಲದಿಂದ ಹಿಂಗೀತೇನಯ್ಯ ?
ಆಶೆಯ ಅಗ್ನಿ
ಪ್ರಾಪ್ತಿಯ ಸೌದೆಯಿಂದ ಆರೀತೇನಯ್ಯ ?
ಹಮ್ಮಿನ ಹಿಮವು
ಹೊಗಳಿಕೆಯ ಕುಳಿರ್ಗಾಳಿಯಿಂದ ಕರಗೀತೇನಯ್ಯ ?
ಸೊಮ್ಮಿನ ಕೊಂಡಿ
ದೈನ್ಯದ ನಿಟ್ಟುಸಿರಿನಿಂದ ಮುರಿದೀತೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಭವದ ಬೇರು ಭವನ ಆಶ್ರಯಿಸದೆ ಹರಿದೀತೇನಯ್ಯ ?

## ೧೨೭

ಪ್ರವೀಣನ ಕೈಯಲ್ಲಿ ಪಾಷಾಣವೂ ಮೇಣ,
ಕೈಲಾಗದವನ ಕೈಯಲ್ಲಿ ಮೇಣವೂ ಪಾಷಾಣವಯ್ಯ !
ಮೋಳಿಗೆಯ ಮಾರಯ್ಯನ ಕೈಯಲ್ಲಿ ಕಾಷ್ಠವೂ ಕನಕ,
ಕುಶೀಲನ ಕೈಯಲ್ಲಿ ಕನಕವೂ ಕಾಷ್ಠವಯ್ಯ !
ಗಾಂಧೀಜಿಯ ಕೈಯಲ್ಲಿ ಕೈರಾಟಿಯೂ ಸುದರ್ಶನಚಕ್ರ,
ಸಂಭಾಜಿಯ ಕೈಯಲ್ಲಿ ಭವಾನೀ ಖಡ್ಗವೂ ಮುರಿದ ಮುದ್ಗರವಯ್ಯ !
ಬುದ್ಧ ಬಸವರ ಕೈಯಲ್ಲಿ ಜನವಾಣಿಯೂ ದೇವವಾಣಿ,
ಹೃದಯಹೀನರ ಕೈಯಲ್ಲಿ ದೇವವಾಣಿಯೂ ದೈತ್ಯವಾಣಿಯಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಂಬಿದವರಿಗೆ
ಹರಿಗೋಲೂ ಹಡಗುಪಡೆ,
ನಿನ್ನ ನಂಬದವರಿಗೆ
ಹಡಗುಪಡೆಯೂ
ಹರಿಗೋಲಯ್ಯ !

## ೧೨೮

ಅಸ್ತಿತ್ವದ ಅಭ್ರಕಕ್ಕೆ ಹಲವು ಪದರುಗಳು,
ಮನದ ಪೀತಾಂಬರಕ್ಕೆ ಹಲವು ಮಡಿಕೆಗಳು,
ಅನುಭವದ ಮಂದಿರಕ್ಕೆ ಹಲವು ಬಾಗಿಲುಗಳು,
ಮಾತಿನ ಮಂಟಪಕ್ಕೆ ಹಲವು ಕಂಬಗಳು,
ಪ್ರೀತಿಯ ಪುಷ್ಪಕ್ಕೆ ಹಲವು ಪಕಳೆಗಳು,
        ಬಿಡಿಯಾಗಿ ನೋಡು,
        ಇಡಿಯಾಗಿ ನೋಡು,
        ನೇರವಾಗಿ ನೋಡು,
        ಓರೆಯಾಗಿ ನೋಡು,
        ಆಂಶಿಕ ಅಂದ ನೋಡು,
        ಒಟ್ಟಂದ ನೋಡು !
ಎಲ್ಲದರೊಳೂ ಸಿಕ್ಕುವುದು
        ಸ್ವತಂತ್ರಧೀರ ಸಿದ್ಧೇಶ್ವರನ ಜಾಡು !

## ೧೨೯

ನೀತಿಯಲ್ಲಿ ಕಾತ ನಿಯಮದ ಹಣ್ಣಿನಲ್ಲಿ
ಪ್ರೀತಿಯ ರಸ ತುಂಬಿದ್ದರೆ ಲೇಸಯ್ಯ ;
ನಾದದಲ್ಲಿ ಹೊರಟ ನವನೀತಕ್ಕೆ
ಶ್ರುತಿಯ ಸಕ್ಕರೆ ಸೇರಿದರೆ ಸೊಗಸಯ್ಯ ;
ಬುದ್ಧಿಯಲ್ಲಿ ಬೆಳೆವ ಜ್ಞಾನ-ವಿಜ್ಞಾನದಲ್ಲಿ
ಭಾವನೆಯ ಮೆರುಗು ಬೆರೆತಿರೆ ಸೊಬಗಯ್ಯ ;
ವಿಚಾರದ ವೀಳ್ಯದೆಲೆಯಲ್ಲಿ
ಅನುಭವದ ಅಡಿಕೆ-ಸುಣ್ಣ ರುಚಿಯಯ್ಯ ;
ವಿದ್ಯೆಯ ನಾಭಿಯಲ್ಲಿ
ವಿವೇಕದ ಕಸ್ತೂರಿ ಕರಲೇಸಯ್ಯ ;
        ಸ್ವತಂತ್ರಧೀರ ಸಿದ್ಧೇಶ್ವರಾ,
        ನನ್ನದೆಂಬುದರಲ್ಲಿ ನಿನ್ನದೆಂಬುದು ನಿಲಲು
                ಲೇಸಿನಲಿ ಲೇಸಯ್ಯ !

## ೧೩೦

ಪ್ರಕಾಶದ ಗಂಡನಿಗೆ ಪ್ರಭೆಯ ಹೆಂಡತಿ ದೊರೆತರೆ
ಪ್ರಮಾದವೇನಯ್ಯ ?
ಬೆಲ್ಲದ ಬೊಂಬೆಗೆ ಸಕ್ಕರೆಯ ಸೀರೆ ಸಿಕ್ಕರೆ
ಹಾನಿಯೇನಯ್ಯ ?
ಅಕ್ಷಯ ಪಾತ್ರೆಯಲ್ಲಿ ಅಮೃತವನ್ನೆರೆದರೆ
ಅಪರಾಧವೇನಯ್ಯ ?
ಸಾಹಿತ್ಯದ ಹಾಲಿನಲ್ಲಿ ಸಂಗೀತದ ಜೇನು ಸೇರಿದರೆ
ನಷ್ಟವೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೃಣ್ಮಯದ ಹಣತೆಯಲ್ಲಿ
ಚಿನ್ಮಯದ ಜ್ಯೋತಿ ಹೊತ್ತಿದರೆ
ತಪ್ಪೇನಯ್ಯ ?

## ೧೩೧

ಸಂಶಯಗಳ ಸಂತೆಯಲ್ಲಿ
ವಿಶ್ವಾಸದ ಸರಕು ಕೊಳ್ಳ ಹೋಗಿ
ಸಂಶಯಾಕುಲನಾಗಿಯೇ ಹಿಂದಿರುಗಿದೆನಯ್ಯ !
ಅತ್ತ ಸಂಶಯ, ಇತ್ತ ಸಂಶಯ,
ಸುತ್ತಲೂ ಸಂಶಯ !
ಸಂಶಯ ಸಂಶಯವೆಂದು
ಸಂಶಯದ ಬಗೆಗೇ
ಸಂಶಯ ಬಂದುಬಿಟ್ಟಿದೆಯಯ್ಯ !
ಮನದ ಮರದಿ ಕುಳಿತ
ಸಾವಿರ ಸಂಶಯ ಪಕ್ಷಿಗಳಿಗೆ
'ನಿನ್ನ ನಂಬಿದೆ'ನೆಂಬ
ಒಂದು ಹಾರೆ–ಮದ್ದು ಸಾಲದೆ,
ಸ್ವತಂತ್ರಧೀರ ಸಿದ್ಧೇಶ್ವರಾ ?

## ೧೩೨

ಅಜ್ಞ ಯುಗ ಹೋಯ್ತು,
ಯಜ್ಞಯುಗ ಹೋಯ್ತು,
ಪ್ರಾಜ್ಞ ಯುಗ ಹೋಯ್ತು
ಧರ್ಮಯುಗ ದಾನ ಯುಗಗಳೂ ಹೋದುವು !
ಮಾನವತಾಯುಗವೂ ಹೋಗುತ್ತಿರುವಂತಿದೆ–
ಕಂಪ್ಯೂಟರ್–ಮಾನವರ ಅವಿರ್ಭಾವದೊಡನೆ !
ಯಾವ ಯುಗ ಬರಲಿದೆಯೋ ಮುಂದೆ ?!
ಸಂದೇಹ ಸಂದೋಹದಲ್ಲಿ ಸಿಕ್ಕಿ
ಅಕ್ಕಸಬಡುತ್ತಿಹೆವಯ್ಯ !
ಕಾಯಯ್ಯ, ಕಾಯಯ್ಯ,
ವಿಶ್ವಾಸದ ಊರುಗೋಲನೀಯಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೩೩

ಸಂಶಯದ ಹೊಲದಿ ನಿಂತ
ಬುದ್ಧಿಯ ಬೆದರಿನಂತೆ ಬದುಕಿರುವೆನಯ್ಯ !
ಸಂಕೀರ್ಣತೆಯ ಅಡೆಯಲ್ಲಿ ಕೊಳೆವ
ಮಿಡಿಗಾಯಿಯಂತೆ ಜೀವಿಸಿಹೆನಯ್ಯ !
ಅತೃಪ್ತಿಯ ತಿರುಗಣಿಗೆ ಸಿಕ್ಕ
ತರಗೆಲೆಯಂತೆ ಪರಿಭ್ರಮಿಸುತ್ತಲಿಹೆನಯ್ಯ !
ಅಶ್ರದ್ಧೆಯ ಬಲೆಗೆ ಸಿಕ್ಕ
ಈ ಇರವಿನ ಎರಳೆ
ಮರವಿನ ಸರಳಿಗೆ
ಬಲಿಯಾದಂತೆ ಕಾಯಯ್ಯ–ರಕ್ಷಣೆಯನೀಯಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೩೪

ವೃಕ್ಷ ಫಲಭರಿತವಾಗಿದ್ದರೆ
ಪಕ್ಷಿಗಳಿಗಾವ ಕೊರತೆಯಯ್ಯ ?
ಲತೆಯ ತುಂಬ ಹೂವಿದ್ದರೆ
ದುಂಬಿಗಳಿಗಾವ ಬರವಯ್ಯ ?
ಸಕ್ಕರೆ ಸೂರೆಯಾಗಿದ್ದರೆ
ಇರುವೆಗಳಿಗಾವ ಅರಕೆಯಯ್ಯ ?
ಸಿರಿ, ಅಧಿಕಾರ ಇದ್ದರೆ
ಹೊಗಳುವವರಿಗಾವ ಅಭಾವವಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಉಳ್ಳವರಿಗೆ ಎಲ್ಲರೂ, ಎಲ್ಲವೂ ಉಂಟು–
ಇಲ್ಲದವರಿಗೆ ಮಾತ್ರ ನೀನೊಬ್ಬನೇ ಅಯ್ಯ !
ಇಲ್ಲದವರ ಕೈಬಿಡದಿರಯ್ಯ

## ೧೩೫

ತೊಟ್ಟಿಲಲ್ಲಿರುವ ಹಸುಗೂಸಿಗೂ
ತನ್ನ ತಾಯಿಯೊಬ್ಬಳಿಹಳೆಂಬ ತಿಳಿವಳಿಕೆಯಿರುವಂತೆ,
ಹಟ್ಟಿಯೊಳಗಣ ಕುರಿಮರಿಗೂ
ಕಾಯ್ವ ಕುರುಬನೊಬ್ಬನಿಹನೆಂಬ ತಿಳಿವಳಿಕೆಯಿರುವಂತೆ
ನೀನು ನನಗಿರುವಿಯೆಂಬ ತಿಳಿವಳಿಕೆ ನನಗೆ !
ಕೈ ಕೆಲಸದಲ್ಲಿದ್ದರೂ
ತಾಯಿಯ ಮನ ತೊಟ್ಟಿಲದ ಕಂದನಲ್ಲಿರುವಂತೆ
ಸೃಷ್ಟಿಕಾರ್ಯ ನಿರತನಾಗಿಯೂ ನೀನು
ನನ್ನ ಯೋಗಕ್ಷೇಮರತನೆಂಬ ನಂಬಿಕೆ ನನಗೆ !
ಈ ತಿಳಿವಳಿಕೆ, ಈ ನಂಬಿಕೆ
ಹುಸಿಯಾಗದಂತೆಸಗಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೩೬

ಅಚ್ಚುಕಟ್ಟನ್ನು ಉಳುವವರು
ಇಳಿಮೇಡಿನ ಉಪಕಾರ ಸ್ಮರಿಸುವರೇನಯ್ಯ ?
ರೇಶಿಮೆಯ ವಸನ ಉಡುವವರು
ಇಪ್ಪನೇರಿಳೆಯ ನೆರವನ್ನು ನೆನೆವರೇನಯ್ಯ ?
ಮುತ್ತಿನ ಸರವ ತೊಡುವವರು
ಸಿಂಪಿನ ಸಹಾಯ ಸ್ಮರಿಸುವರೇನಯ್ಯ ?
ಕೃತ್ರಿಮ ರೇತನ ಪಡೆದ ಹಸು
ದೂರದ ಹೋರಿಯ ಆಭಾರ ಮನ್ನಿಸುವುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಸುವಿತ್ತ, ಉಸಿರಿತ್ತ, ಅಶನವಿತ್ತ,
ಎಲ್ಲ ಇತ್ತ ನಿನ್ನನೇ
ಪಶು ನಾನು ನೆನೆಯದಿರೆ
ಮುನಿಯದಿರಯ್ಯ !
ಕರು ಕೊಂಬಿನಿಂದ ಇರಿದರೂ
ಕರೆದು ಹಾಲೂಡುವ ಹಸುವಿನಂತೆ
ಒಲಿದು ಸಲಹು, ತಿದ್ದಿ ಉದ್ಧರಿಸು !

## ೧೩೭

ವ್ಯಾಧಿ ಪ್ರಬಲವಿದ್ದಷ್ಟೂ
ವೈದ್ಯನ ಅನುಭವ ಹೆಚ್ಚುವುದಯ್ಯ ;
ಪ್ರಕರಣ ಜಟಿಲವಿದ್ದಷ್ಟೂ
ನ್ಯಾಯವಾದಿಯ ವಾದಪಟುತ್ವ ಹೆಚ್ಚುವುದಯ್ಯ ;
ತಾಂತ್ರಿಕ ವಿಘ್ನ ವಿಪುಲವಿರುವಷ್ಟೂ
ಯಂತ್ರಜ್ಞನ ತಂತ್ರಜ್ಞಾನ ಕುದುರುವುದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ತಪ್ಪುಗಳು ಹೆಚ್ಚಿದಷ್ಟೂ
ನಿನ್ನ ಉದ್ಧಾರ ಬುದ್ಧಿ ಹೆಚ್ಚಲಯ್ಯ !

೧೩೮

ಸಮಯವಿದ್ದಾಗ ಸಾಧನ ಸಾಮಗ್ರಿಯಿಲ್ಲ,
ಸಾಧನ ಸಂಪತ್ತಿದ್ದಾಗ ಸಮಯವಿಲ್ಲ !
ಎರಡೂ ಇದ್ದಾಗ ಚಿತ್ತಸ್ವಾಸ್ಥ್ಯವಿಲ್ಲ,
ಉತ್ಸಾಹವಿಲ್ಲ, ಉತ್ಸ್ಫೂರ್ತಿಯಿಲ್ಲ !
ನನ್ನ ಬೆಳಗುಗಳೆಲ್ಲ ಬರಡಾಗಬೇಕೇನಯ್ಯ ;
ನನ್ನ ಹಗಲುಗಳೆಲ್ಲ ಧಗೆ, ಸಂಜೆಗಳೆಲ್ಲ
ಬಂಜೆಯಾಗಬೇಕೇನಯ್ಯ ?
ನನ್ನ ಬಾಳ ಬಾಗಿಲಿಗೆ ಬರುವ ನಿಮಿಷಗಳು
ಚೆಲುವಿನ ಕನಸುಗಳನ್ನು,
ನನ್ನಿಯ ನನಸುಗಳನ್ನು,
ಶರಣರ ಮನಸುಗಳನ್ನು
ಹೊತ್ತು ತರಲಯ್ಯ,
ಸಚ್ಚಿದಾನಂದವ
ಹೆತ್ತು ಮರಳಲಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

೧೩೯

ಎತ್ತರಕ್ಕೆ ಏರಿದಂತೆ
ವಿಸ್ತಾರಗೊಳ್ಳುವ ದಿಗಂತದಂತೆ,
ಕಾಲ ಕಳೆದಂತೆ
ಕಳೆಗೊಳ್ಳುವ ನೈಜ ಪ್ರೇಮದಂತೆ,
ಜೀವಿಸಿದಷ್ಟೂ ಜ್ವಲಂತವಾಗುವ
ಜೀವನದರ್ಶನದಂತೆ,
ಸವಿದನಿತೂ ಸೊಬಗು ಹೆಚ್ಚುವ
ಅಮರ ಸೌಂದರ್ಯದಂತೆ,
ಅರ್ಥವಿಸಿದನಿತೂ ಅಗಾಧವೆನಿಸುವ
ಮಹಾವಾಕ್ಯಗಳಂತೆ
ನಿನ್ನ ನೆನೆದನಿತೂ ನಿರ್ಮಲವಾಗಲಯ್ಯ ನನ್ನ ಬಾಳು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೦

ಉಸುಕಿನ ಹಳುಕುಗಳನ್ನು ಆಕರ್ಷಿಸದಿದ್ದರೆ
ಅಪಮಾನವಾವುದಯ್ಯ ಅಯಸ್ಕಾಂತಕ್ಕೆ ?
ಬೋಕಿಯನ್ನು ಬಂಗಾರ ಮಾಡದಿದ್ದರೆ
ಅಪಕೀರ್ತಿ ಯಾವುದಯ್ಯ ಪರುಷಮಣಿಗೆ ?
ಮೃಗಶಿರದ ಹನಿಯನ್ನು ಮುತ್ತಾಗಿಸದಿದ್ದರೆ
ಮಾನಹಾನಿ ಯಾವುದಯ್ಯ ಸಮುದ್ರದ ಸಿಂಪಿಗೆ ?
ಪಕ್ಕದ ಬೊಬ್ಬುಳಿಯ ಮುಳ್ಳುಗಳ ಕಳೆಯದಿದ್ದರೆ
ಕುಂದಾವುದಯ್ಯ ಚಂದನದ ತರುವಿಗೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಕುನ್ನಿತನವನ್ನು ನಿವಾರಿಸದಿದ್ದರೆ
ಊಣೆಯೆಲ್ಲಿಯದಯ್ಯ ನಿನ್ನ ಕೃಪೆಗೆ ?

## ೧೪೧

ಕಳಚಲಯ್ಯ ಹಾವಿನ ಪರೆಯಂತೆ
ಒಂದೊಂದಾಗಿ ಬಿಗಿದ ಬಂಧನಗಳು ;
ಆಗಲಯ್ಯ ಅವೇ ಅನಿಬದ್ಧತೆಯ
ಅಗ್ಗಿಷ್ಟಿಕೆಗೆ ಇಂಧನಗಳು !
ಕಾಣುವ ಬಂಧನಗಳು,
ಕಾಣದ ಬಂಧನಗಳು,
ಮನೋಹರ ಬಂಧನಗಳು,
ಮಡಿವಂತಿಕೆಯ ಬಂಧನಗಳು,
ಸೂಕ್ಷ್ಮಾತಿಸೂಕ್ಷ್ಮ ತೀಕ್ಷ್ಣ ಬಂಧನಗಳು–
ಎಲ್ಲವೂ ಕಳಚಿ ಮುಕ್ತವಾಗಲಿ ಮೈಮನಗಳು !
ಸ್ವತಂತ್ರಧೀರ ಸಿದ್ಧೇಶ್ವರ
ಸ್ವತಂತ್ರರಿಗೆ ಮಾತ್ರ ಲಭ್ಯ,
ಪರತಂತ್ರರಿಗೆ ಅಲಭ್ಯ !

## ೧೪೨

ನನ್ನ ತಂತಿಗಳ ಹರಿದವನೂ ನೀನೇ,
ನನಗೆ ಹರಿದ ತಂತಿಯ
ತಂಬೂರಿಯೆನ್ನುವವನೂ ನೀನೇ !
ಹೊಸ ತಂತಿಗಳ ಹಾಕಬಲ್ಲೆ ನೀನು,
ಹೊಸ ಹಾಡುಗಳ ಹಾಡಬಲ್ಲೆ ನಾನು,
ಏಕೆ ಹಾಕಲೊಲ್ಲೆಯಯ್ಯಾ ?
ಸಸ್ವನಗಾನ ಕೇಳಿಯಾಯ್ತು,
ನಿಃಸ್ವನಗಾನ ಕೇಳಲಾಸೆಯೆನ್ನುವಿಯಾ ?
ಹಾಡುತ್ತಲೇ ಇರುವೆ ಕೇಳದ ಹಾಡನ್ನು
ಕೇಳಿಸದೇನಯ್ಯ,
ಕೇಳಿಸದೇಕಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೩

ನನ್ನ ಬಾಳಿನ ಮಗ್ಗದ ಹಾಸು ಹೊಕ್ಕುಗಳಲ್ಲಿ
ನಾನೇ ನೂತ ಎಳೆಗಳಿರಲಾರವು ;
ಆದರೆ, ಅವುಗಳಿಗೆ ನನಗೆ ಬೇಕಾದ ಬಣ್ಣ ಹಾಕಿ,
ನನಗಿಷ್ಟವೆನಿಸುವ ಬಟ್ಟೆಗಳನ್ನು
ನೆಯ್ದುಕೊಳ್ಳಬಲ್ಲೆನಯ್ಯಾ !
ಎಳೆ ಹರಿಯಬಹುದು,
ಮಗ್ಗ ಮುರಿಯಬಹುದು,
ನೆಯ್ದುದನು ಕೀಟ ಕೊರೆಯಬಹುದು !
ಏನಾದರೂ ಬಟ್ಟೆಯಿದ ನೆಯ್ಯದೆ ಬಿಡೆನಯ್ಯಾ !
ನೆಯ್ದ ವಸ್ತ್ರ ಜೇಡರದಾಸನ,
ಕಬೀರದಾಸನ
ದಿವ್ಯಾಂಬರವಾಗದಾಗಲಿ,
ನಿನ್ನವರ ಕಾಲೊರೆಸುವ
ಅರಿವೆಯಾದರೂ ಆಗಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೪

ಹೂವಿನಲ್ಲಿ ಮಧುವಾಗುವ, ಹಣ್ಣಿನಲ್ಲಿ ರಸವಾಗುವ,
ಕಬ್ಬಿನಲ್ಲಿ ಸಿಹಿಯಾಗುವ ಸುಕೃತ ನನ್ನದಾಗಲಿಲ್ಲ ;
ಹಸಿದವರಿಗೆ ಅನ್ನವಾಗುವ, ಕುರುಡರಿಗೆ ಕಣ್ಣಾಗುವ,
ಹೊಲಗದ್ದೆಗಳ ಮಣ್ಣಾಗುವ ಪುಣ್ಯ ನನ್ನದಾಗಲಿಲ್ಲ ;
ಶಿಲ್ಪಿಯ ಉಳಿಯಾಗುವ, ಚಿತ್ರಕಾರನ ಕುಂಚವಾಗುವ,
ಕವಿಯ ಲೇಖನಿಯಾಗುವ ಸೈಪು ನನ್ನದಾಗಲಿಲ್ಲ ;
ರೋಗಿಗೆ ಮದ್ದಾಗುವ, ಮಗುವಿನ ಮುದ್ದಾಗುವ,
ಬುದ್ಧನ ಭಿಕ್ಷಾಪಾತ್ರೆಯಾಗುವ ಭಾಗ್ಯ ನನ್ನದಾಗಲಿಲ್ಲ !
ನಿನ್ನ ದಾರಿಯ ಹುಲ್ಲಾಗುವ,
ನಿನ್ನ ಕಟ್ಟೆಯ ಕಲ್ಲಾಗುವ,
ನಿನ್ನ ಶರಣರ ಚರಣಗಳಿಗೆ
ಚೆಮ್ಮಾವುಗೆಯಾಗುವ ಸೌಭಾಗ್ಯವನ್ನಾದರೂ
ಕರುಣಿಸಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೫

ನಾಲ್ಕುನೂರು ಕೋಟಿ ನಟನಟಿಯರ
ನರಕುಲ ನಾಟಕದಲ್ಲಿ
ನನಗಿದೇ ಪಾತ್ರ ಬೇಕೆಂಬ
ಹಟ ಹಿಡಿಯೆನಯ್ಯ, ನಾನು !
ನನ್ನ ಪಾತ್ರವಾವುದೆಂಬುದ ನಿರ್ಧರಿಸುವವ ನೀನು !
ರಂಗದ ಮೇಲಿನ ಪಾತ್ರ,
ರಂಗದ ಹಿಂದಿನ ಪಾತ್ರ,
ಪರದೆ ಎಳೆಯುವ ಪಾತ್ರ,
ಪೀಠೋಪಕರಣವಿರಿಸುವ ಪಾತ್ರ,
ಕರಪತ್ರ ಹಂಚುವ ಪಾತ್ರ,
ಕಸಗುಡಿಸುವ ಪಾತ್ರ, –
ಯಾವ ಪಾತ್ರವಾದರೂ ಸರಿಯೆ,
ನಿನ್ನ ಕೃಪೆಗೆ ಪಾತ್ರನಾದರೆ ಸಾಕಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೬

ನನ್ನ ಅಸ್ತಿತ್ವದ ಶಿಖರಕ್ಕೆ ಸಾಸಿರ ಸಾಸಿರ ಮೆಟ್ಟಲುಗಳು –
ಮೊದಲ ಮೆಟ್ಟಲಿನಲ್ಲಿಯೇ ಕುಳಿತು
ಮೇನೆಯ ದಾರಿ ಕಾಯುತ್ತಲಿಹೆನಯ್ಯ,
ಮೇಲೆತ್ತುವ ಹಸ್ತದ ನಿರೀಕ್ಷೆಯಲ್ಲಿಹೆನಯ್ಯ,
ಮೇಲೊಯ್ಯುವ ಯಂತ್ರದ ಪ್ರತೀಕ್ಷೆಯಲ್ಲಿಹೆನಯ್ಯ !
ನನ್ನ ಮನದ ಮನೆಗೆ ನೂರಾರು ಕೋಣೆಗಳು –
ಮೊದಲ ಕೋಣೆಯಲ್ಲಿಯೇ ಕುಳಿತು
ಬೀಗದ ಕೈ ಹುಡುಕುತ್ತಲಿಹೆನಯ್ಯ,
ಮೇಣಬತ್ತಿ ಅರಸುತ್ತಲಿಹೆನಯ್ಯ,
ದೀಪದ ಕಡ್ಡಿ ಕೆದಕುತ್ತಲಿಹೆನಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಎದೆಯ ಹಲವು ಪದರುಗಳಲ್ಲಿ
ಮೊದಲ ಪದರಿನಲ್ಲಿಯೇ
ಉರುಳಿ ಹೊರಳುತ್ತಲಿಹೆನಯ್ಯ,
ಸುತ್ತಿ ಸುಳಿಯುತ್ತಲಿಹೆನಯ್ಯ,
ಅಲೆದು ಬಳಲುತ್ತಲಿಹೆನಯ್ಯ !

## ೧೪೭

ನಾನು ಕಳೆದ ಐವತ್ತು ವತ್ಸರಗಳಲ್ಲಿ
ಹಸಿವೆ, ತೃಷೆ, ವಿಷಯ, ಆಸೆ,
ಆಮಿಷಗಳಿಗಾಗಿ ವರುಷ ವರುಷ,
ವಿರಾಮ, ವಿನೋದ, ಆಮೋದ,
ವಿಲಾಸ, ವಿಹಾರಗಳಿಗಾಗಿ ವರುಷ ವರುಷ,
ಮೋಜು, ಮೆರವಣಿಗೆ, ಹರಟೆ,
ಆತ್ಮಸ್ತುತಿ, ಪರನಿಂದೆಗಳಿಗಾಗಿ ಮಾಸ ಮಾಸ,
ಸುವಿಚಾರ, ಸದಾಚಾರ, ಸತ್ಕೃತಿಗಳಿಗಾಗಿ ದಿವಸ ದಿವಸ,
ನಿನಗಾಗಿ ಕಳೆದ ಕಾಲ ಮಾತ್ರ ನಿಮಿಷ ನಿಮಿಷವಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೪೮

ನಿತ್ಯ ಹಲವು ಹನ್ನೆರಡು ಜನರ
ಹಲವು ಸಲ ಕಾಣುವೆ – ಓ ಜೀವಿ,
ನಿನ್ನ ನೀನೇ ಕಾಣುವೆಯಾ ಒಮ್ಮೆಯಾದರೂ ?
ದಿನದಿನವೂ ಇಣಿಕಿ ಹಣಿಕಿ ನೋಡುವೆ ಅನ್ಯರ ಬಾಳಿನೊಳಕ್ಕೆ,
ನಿನ್ನ ಬದುಕ ಬೆದಕಿ ನೋಡಿದೆಯಾ ಒಮ್ಮೆಯಾದರೂ ?
ಅನ್ಯರ ಹೃದಯೇಂಗಿತವನ್ನರಿಯಲು
ಹಾತೊರೆವೆ, ಹವಣಿಸುವೆ, ಹಲ್ಲಣಿಸುವೆ –
ನಿನ್ನೆದೆಯನರಿತುಕೊಳ್ಳಲು ಹಾರೈಸಿದೆಯಾ ಒಮ್ಮೆಯಾದರೂ ?
'ಇವನಾರು, ಇವನಾರು, ಇವನಾರು?' ಎಂದು ನೀನು ಕೇಳದ ದಿನವಿಲ್ಲ –
'ನಾನಾರು ?' ಎಂದು ಆರಯ್ದೆಯಾ ಒಮ್ಮೆಯಾದರೂ ?
ಅವರಿವರ ಅವಗುಣಗಳನ್ನು ಎತ್ತಿ ತೋರಿಸುವೆ ನಿತ್ಯ,
ನಿನ್ನ ದುರ್ಗುಣಗಳತ್ತ ದೃಷ್ಟಿ ಹಾಯಿಸಿದೆಯಾ ಒಮ್ಮೆಯಾದರೂ?
ನೀನು ಸ್ವತಂತ್ರಧೀರ ಸಿದ್ಧೇಶ್ವರನ
ದಾನವುಣ್ಣದ ದಿನವಿಲ್ಲ –
ಅವನ ನೀ ನಿಜವಾಗಿ ನಂಬಿದೆಯಾ ಒಮ್ಮೆಯಾದರೂ?

## ೧೪೯

ಬೆಳೆ ಒಕ್ಕಾಲು, ಬೇಲಿ ಮುಕ್ಕಾಲು –
ಎಂಬಂತಾಯಿತ್ತಯ್ಯ ಎನ್ನ ಬಾಳು !
ಭದ್ರತೆಗಾಗಿ ಶ್ರಮಿಸಿದೆ –
ಬೆಳವಣಿಗೆಯೇ ಬಲಿಯಾಯ್ತು ಅತಿ ಭದ್ರತೆಗೆ !
ಭದ್ರತೆಗಾಗಿ ಬಳಸಿದುದು ಬಂಧನವಾಗಬೇಕೆ ?
ಬೆಳವಣಿಗೆಗಿಂತ ಭದ್ರತೆಯೇ ಮುಖ್ಯವೆನಿಸಬೇಕೆ ?
ಅದ್ರಿಯ ಭದ್ರತೆಯ ಶಂಕಿಸುವವರಾರು ?
ಆದರೆ, ಅದರ ಶಿಲೆಯ ಮೇಲಿಟ್ಟ ಬೀಜ ಮೊಳೆಯಬಲ್ಲುದೇನಯ್ಯ ?
ಕಲ್ಲು ಕರಗಿ ಮಣ್ಣಾದರೆ ಮಾತ್ರ
ಬೀಜ ಮೊಳೆತು ಸಸಿ ಬೆಳೆವುದಯ್ಯ,
ಕಲ್ಲಾದ ನನ್ನ ಮನ ಕರಗಿ
ನಿನ್ನ ಭಕ್ತರ ಕಾಲಡಿಯ ಮಣ್ಣಾಗಲಯ್ಯ !
ಆ ಮಡಿಯಾದ ಮಣ್ಣಿನಲ್ಲಿಯೇ ನನ್ನ ಬಾಳ ಬೆಳೆ ಬೆಳೆಯಲಯ್ಯ –
ನಿನ್ನ ಒಲವಿನ ಬೇಲಿಯೊಳಗೆ, ಸ್ವತಂತ್ರಧೀರ ಸಿದ್ಧೇಶ್ವರಾ.

## ೧೫೦

ಕೈಮುಚ್ಚಿ ಒಳಗೇನಿದೆಯೆಂದು ಕೇಳುವವರಂತೆ
ಅಣು ರೇಣು ತೃಣಕಾಷ್ಠಗಳಲ್ಲಿ ರಹಸ್ಯಗಳನ್ನಿರಿಸಿ
'ಒಳಗೇನು ? ಒಳಗೇನು ?' ಎಂದು ಕೇಳುತ್ತಿರುವೆ !
ನನಗೆ ತಿಳಿಯದೆಂದು ನೀನು ಹೇಳದಿರಯ್ಯ,
ಹೇಳಿದರೆ ಆಟ ಮುಗಿದಂತಯ್ಯ – ಸ್ವತಂತ್ರಧೀರ ಸಿದ್ಧೇಶ್ವರಾ
!

## ೧೫೧

ರಸನಿಮಿಷ ವಿಷನಿಮಿಷಗಳ ನಡುವೆ
ಆಟೋಟಗಳ ಸ್ಪರ್ಧೆ ನಡೆದಿದೆ,
ನನ್ನ ಜೀವನದ ಕೀಡಾಂಗಣದಲ್ಲಿ !
ಒಮ್ಮೆ ರಸನಿಮಿಷಗಳ ಮೇಲುಗೈ,
ಒಮ್ಮೆ ವಿಷನಿಮಿಷಗಳ ಪ್ರಾಬಲ್ಯ !
ಯಾರು ಗೆದ್ದರೇನು ಕ್ರೀಡಾಂಗಣಕ್ಕೆ ?
ಅದಕ್ಕಾವ ದುಕ್ಕ, ಧಕ್ಕೆ ?
ಎರಡರ ಪದಘಟ್ಟಣೆಗಳಿಗೂ
ಗಟ್ಟಿಯಾಗಿರುವುದದರ ಧರ್ಮ,
ನೀನೆ ಬಲ್ಲೆ ಈ ಆಟೋಟಗಳ ಮರ್ಮ !
ಯಾರನ್ನಾದರೂ ಗೆಲ್ಲಿಸು,
ಯಾರನ್ನಾದರೂ ಸೋಲಿಸು –
ಈ ಕ್ರೀಡಾಂಗಣವನ್ನಷ್ಟು ಗಟ್ಟಿಯಾಗಿರಿಸು,
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೫೨

ಅವರಿವರು ಪ್ರೀತರಾಗಲೆಂದು
ಅದನಿದನು ನುಡಿದಾಯಿತು,
ಎಂತೆಂತೋ ನಡೆದಾಯಿತು !
ಮಡಿವ ಮುನ್ನ ಒಮ್ಮೆ,
ಒಮ್ಮೆಯೇ ಒಮ್ಮೆ
ನೀನು ಪ್ರೀತನಾಗುವ ಹಾಗೆ ನುಡಿಸಯ್ಯ,
ನೀನು ಮೆಚ್ಚುವ ಹಾಗೆ ನಡೆಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೫೩

ಎನಗಾರೂ ಇಲ್ಲವೆಂದಾಗ
ಯಾರಿಂದಲೋ ನೆರವು ನೀಡಿಸಿದೆ ;
ಎನಗೇನೂ ಇಲ್ಲವೆಂದಾಗ
ಎಲ್ಲಿಂದಲೋ ಸಹಾಯ ಒದಗಿಸಿದೆ ;
ಎನಗೇನೂ ತೋಚದೆಂದಾಗ
ಎನಗರಿಯದಂತೆಯೇ ದಾರಿ ತೋರಿಸಿದೆ ;
'ಇನ್ನೆಂತೋ' ಎಂದಾಗ
ಎಂತೆಂತೋ ಪಾರುಗಾಣಿಸಿದೆ !
ಅಂತೆಯೇ, 'ಸರ್ವವೂ ಎನ್ನಿಂದ' ಎಂದಾಗ
ಗರ್ವಹರಣ ಮಾಡಿ
'ಓರ್ವನೇ ಸ್ವತಂತ್ರಧೀರ ಸಿದ್ಧೇಶ್ವರ'
ಎಂಬ ಪಾಠ ಕಲಿಸಯ್ಯ !

## ೧೫೪

ಮಾನವೇತಿಹಾಸದಲ್ಲಿ
ನಡೆಯದಷ್ಟು ಯುದ್ಧಗಳು
ನನ್ನೊಳಗೆ ನಡೆದಿವೆಯಯ್ಯಾ !
ಸಹರಾದಲ್ಲಿ
ಬೀಸದಷ್ಟು ಬಿರುಗಾಳಿಗಳು
ನನ್ನೊಳಗೆ ಬೀಸಿವೆಯಯ್ಯಾ !
ಸಪ್ತಸಾಗರಗಳಲ್ಲಿ
ಘಟಿಸದಷ್ಟು ಅಪಘಾತಗಳು
ನನ್ನೊಳಗೆ ಘಟಿಸಿವೆಯಯ್ಯಾ !
ಅಂತರಿಕ್ಷದಲ್ಲಿ
ಆಗದಷ್ಟು ಉಲ್ಕಾಪಾತಗಳು
ನನ್ನೊಳಗೆ ಆಗಿವೆಯಯ್ಯಾ !
ಹೀಗಿದ್ದೂ, ಹೇಗೆ ನನ್ನನ್ನುಳಿಸಿ
ಬಾಳಿಸಿಕೊಂಡು ಬಂದಿಹೆಯೊ !
ನೀ ಬಾಳಿಸುವ ಬಗೆಗೆ ಬೆರಗಾದೆನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೫೫

ಹೊರಗು ಪದೇ ಪದೇ ಬದಲಾಗುತ್ತಿದ್ದರೂ
ಬದಲಾಗದ ಒಳಗು ನನ್ನದಾಗಿರಲಯ್ಯ ;
ಬಾಳ ಕಡಲಿನ ಮೇಲೆ
ಬೊಬ್ಬಿರಿವ ತೆರೆಗಳ ಅಬ್ಬರವಿದ್ದರೂ
ಕೆಳಗೆ, ಒಳಗೆ ನಿಸ್ತರಂಗ ನೀರವತೆ ನೆಲೆಸಿರಲಯ್ಯ ;
ಬದುಕಿನ ಹೋರಾಟವು
ಸ್ಪರ್ಧೆ ಈರ್ಷ್ಯೆಗಳ ಬೆಂಕಿ–ಬೆಟ್ಟವಾದರೂ
ಬಾಳಿನ ಬೆಲೆಗಳು ಬೂದಿಯಾಗದಿರಲಯ್ಯ !
ಬೂದಿಯಾದರೂ ಘಟ್ಟಿ ಮಾಡಿ ಸುಟ್ಟು
ವಿಭೂತಿಯನ್ನಾಗಿಸುವ ಕಲೆ ನನ್ನದಾಗಲಯ್ಯ !
ಬೂದಿ ಬೂದಿಯಾಗಿಯೇ ಉಳಿದು
ಕತ್ತೆಗಳಿಗೆ ಕ್ರೀಡಾಂಗಣವಾಗದಿರಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೫೬

ಅಂದವು ಇನ್ನೂ ಅಂದವಾಗಲು ಆಶಿಸಿದರೆ ಸರಿ,
ಕುರೂಪವು ಇನ್ನೂ ಕುರೂಪವಾಗಲು ಬಯಸಿದರೆ
ಹೇಗಯ್ಯ ?
ಮಧುರವು ಇನ್ನೂ ಮಧುರವಾಗಲು ಮನದಂದರೆ ಸರಿ,
ಕಟುವು ಕಟುತರವಾಗಲು ಹಾರೈಸಿದರೆ
ಹೇಗಯ್ಯ ?
ಶಿವವು ಶಿವತರವಾಗಲು ತವಕಿಸಿದರೆ ಸರಿ,
ಅಶಿವವು ಅಶಿವತರವಾಗಲು
ಹಾತೊರೆದರೆ ಹೇಗಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನರನು ನರೋತ್ತಮನಾಗಲು ಹೆಣಗಿದರೆ ಸರಿ,
ನರನು ವಾನರನಾಗಲು
ಹವಣಿಸಿದರೆ ಹೇಗಯ್ಯ ?

## ೧೫೭

ವಿಜ್ಞಾನಿಯ ಬುದ್ಧಿ,
ತತ್ತ್ವಜ್ಞಾನಿಯ ಮನ,
ಕವಿಯ ಹೃದಯವ ಕರುಣಿಸಯ್ಯ !
ದುಡಿತದ ಬಟ್ಟಲು,
ತಿಳಿವಿನ ಹಾಲು,
ಒಲವಿನ ಸಕ್ಕರೆಯ ದಯಪಾಲಿಸಯ್ಯ !
ನಯದ ನೌಕೆ,
ನಂಬಿಕೆಯ ಹುಟ್ಟು,
ದಿಟದ ದಿಕ್ಸೂಚಿಯ ಅನುಗ್ರಹಿಸಯ್ಯ !
ಛಲದ ಕುದುರೆ,
ಹದುಳದ ಹಲ್ಲಣ,
ವಿವೇಕದ ಕಡಿವಾಣವ ಕೊಡಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನುಡಿಗೆ ನಿನ್ನ ಅರ್ಥ,
ನಿನ್ನ ಧ್ವನಿಯ ನೀಡಯ್ಯ !

## ೧೫೮

ಹೂವು ತಮ್ಮೆದೆಯ ತೆರೆದರೆ
ಅಂದ, ಸುಗಂಧ, ಮಕರಂದಗಳ ಸುಗ್ಗಿ ;
ಸಿಂಪುಗಳು ತಮ್ಮೆದೆಯ ತೆರೆದರೆ
ಮುತ್ತುಗಳು ಬರುವುವು ನುಗ್ಗಿ ;
ಹನುಮ ತನ್ನೆದೆಯ ತೆರೆದರೆ
ಸೀತಾರಾಮರ ಚಿತ್ರ ;
ಇರುಳು ತನ್ನೆದೆಯ ತೆರೆದರೆ
ಕೋಟಿ ಕೋಟಿ ನಕ್ಷತ್ರ !
ಎಲ್ಲರೆದೆಗಳಲ್ಲಿ ಒಂದಿಲ್ಲೊಂದು
ನಿಧಿ, ನಿಧಾನ –
ನಿನ್ನ ವರಪ್ರದಾನ !
ನನ್ನೆದೆಯಲ್ಲಿ
ನೀನಾದರೂ ಇರಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೫೯

ಹೊತ್ತಿನ ಹುತ್ತದ ಹಾವುಗಳನ್ನೇ
ಕತ್ತಿನ ಮಾಲೆಯನ್ನಾಗಿ ಮಾಡಿಕೊಳ್ಳುವ
ಕಲೆಯ ಕಲಿಸಯ್ಯಾ ;
ವಿಧಿಯ ಮದಹಸ್ತಿಯ ಚರ್ಮವನ್ನೇ
ಉಡುವ ವಸ್ತ್ರವನ್ನಾಗಿಸುವ
ಕುಶಲತೆಯ ಕಲಿಸಯ್ಯ ;
ಕರ್ಮದ ಕೊಲ್ಲುವ ಶಿಲುಬೆಯನ್ನೇ
ಕೈಯ ಶೂಲವನ್ನಾಗಿಸಿಕೊಳ್ಳುವ
ಕಸಬನು ಕಲಿಸಯ್ಯ ;
ಕಾಮದ ಗರಗಸವಳ್ಳಿಯನ್ನೇ
ಬೂದಿ ಮಾಡಿ ಬಳಿದುಕೊಳ್ಳುವ
ಬಗೆಯ ತಿಳಿಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕಿನ ವಿಷವನ್ನೇ
ಬಾಳಿನ ರಸವನ್ನಾಗಿಸುವ
ರಸಾಯನಶಾಸ್ತ್ರವ ಕಲಿಸಯ್ಯ ;

## ೧೬೦

ನಿನ್ನ ಮಗ್ಗದ ಲಾಳಿಯಾಗುವ ಭಾಗ್ಯವಿಲ್ಲದಿದ್ದರೆ ಹೋಗಲಿ,
ಅದರ ಹರಿಯದ ಎಳೆಯಾಗುವ
ಹಿಗ್ಗನ್ನಾದರೂ ಕರುಣಿಸಯ್ಯ ;
ನಿನ್ನ ಕಣದ ಮೇಟಿಯಾಗುವ ಮೇಲ್ಮೆಯಿಲ್ಲದಿದ್ದರೆ ಹೋಗಲಿ,
ಅದರ ಹಂತಿಯ ಹಗ್ಗವಾಗುವ
ಹಿಗ್ಗನ್ನಾದರೂ ದಯಪಾಲಿಸಯ್ಯ ;
ನಿನ್ನ ತಿದಿಯ ಉಸಿರಾಗುವ ಹಿರಿಮೆಯಿಲ್ಲದಿದ್ದರೆ ಹೋಗಲಿ,
ಅದರ ಕುಲುಮೆಯ ಇದ್ದಿಲಾಗುವ
ಅಗ್ಗಳಿಕೆಯನ್ನಾದರೂ ಅನುಗ್ರಹಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಂದಿರದ ನಂದಾದೀಪವಾಗುವ ಗರಿಮೆಯಿಲ್ಲದಿರೆ ಹೋಗಲಿ,
ಅದರ ಪೊರಕೆಯಾಗುವ ಪುಣ್ಯವನ್ನಾದರೂ ನೀಡಯ್ಯ !

## ೧೬೧

ದಿನ ದಿನ ಗುಡಿಸಿಯೂ ದಿನ ದಿನ ಕಸ
ಈ ಮನೆಯಲ್ಲಿ ;
ದಿನ ದಿನ ಉಣಿಸಿಯೂ ದಿನ ದಿನ ಹಸಿವೆ
ಈ ತನುವಿನಲ್ಲಿ ;
ದಿನ ದಿನ ಹಿಗ್ಗು, ದಿನ ದಿನ ಕುಗ್ಗು
ಈ ಮನದಲ್ಲಿ ;
ದಿನ ದಿನ ಗಳಿಕೆ, ದಿನ ದಿನ ದುರಾಶೆ
ಈ ಧನದಲ್ಲಿ ;
ಮತ್ತೆ ಮತ್ತೆ ಮಾಗಿ, ಮತ್ತೆ ಮತ್ತೆ ಸುಗ್ಗಿ
ಈ ವನದಲ್ಲಿ !
ಹಂಬಲದ ಹೊಂಬಿಸಿಲು ನಿರಾಶೆಯ ಬಿರುಬಿಸಿಲಾಗಿ,
ಮತ್ತೆ ಹಾರೈಕೆಯ ಹೂಬಿಸಿಲಾಗುವುದು
ಈ ಗಗನದಲ್ಲಿ ;
ಈ ಅಂತವಿಲ್ಲದ ವಿರೋಧಾಭಾಸದ,
ಕೊನೆಯಿಲ್ಲದ ಕಣ್ಣುಮುಚ್ಚಾಲೆಯ
ಪರಮರಹಸ್ಯವೇನು ಹೇಳಾ ಸ್ವತಂತ್ರಧೀರ ಸಿದ್ಧೇಶ್ವರಾ !

## ೧೬೨

ಶಿಖರಗಳ ಸಾಲುಗಳನ್ನೊಮ್ಮೆ, ಮೋಡಗಳ ಮಾಲೆಗಳನ್ನೊಮ್ಮೆ,
ತರಂಗಗಳ ಲೀಲೆಗಳನ್ನೊಮ್ಮೆ ನೋಡಿ ನಂದಿಸುವೆ ;
ಮಸಣದ ಜ್ವಾಲೆಗಳನ್ನೊಮ್ಮೆ, ಹಸಿವೆಯ ಶೂಲಗಳನ್ನೊಮ್ಮೆ,
ಕ್ಲೇಶಗಳ ಕ್ಷ್ವೇಳಗಳನ್ನೊಮ್ಮೆ ನೋಡಿ ನೊಂದುಕೊಳ್ಳುವೆ !
ಹೂಗಳ ಹಾಸವನ್ನೊಮ್ಮೆ, ಶಿಶುಗಳ ಉಲ್ಲಾಸವನ್ನೊಮ್ಮೆ,
ಕಲೆಯ ಕೈಲಾಸವನ್ನೊಮ್ಮೆ ನೋಡಿ ನಲಿಯುವೆ ;
ರೋಗಿಯ ಆಕ್ರೋಶವನ್ನೊಮ್ಮೆ, ದುಗುಡದ ವಿಶ್ವಾಸವನ್ನೊಮ್ಮೆ,
ಅನಾಥರ ನಿಟ್ಟುಸಿರನ್ನೊಮ್ಮೆ ಕಂಡು ಕಳವಳಿಸುವೆ ;
ಉಪವನಕ್ಕೆ ಅನತಿದೂರದಲ್ಲಿಯೇ ಮಸಣ,
ಆಸ್ಪತ್ರೆಯ ಒಂದೆಡೆಯಲ್ಲಿ ಶಿಶು ಜನನ, ಇನ್ನೊಂದೆಡೆಯಲ್ಲಿ ಮರಣ!
ಇತ್ತ ಮಾಂಗಲ್ಯ ಧಾರಣ, ಅತ್ತ ಸೆದಿಗೆಯ ನಿರ್ಮಾಣ !
ನಗುತ್ತ ಅಳಬೇಕೋ ಅಳುತ್ತ ನಗಬೇಕೋ ನಾನರಿಯೆ ತಂದೆ!
ಕಾಯಕದ ವರದ ಹಸ್ತವಿದೆ ಮುಂದೆ ; ನಂಬಿರುವೆನು ಅದನೊಂದೆ!
ಮಾಡುವೆನದನೆ ನಿನಗಾಗಿ ನಿನ್ನಿಂದೆ,
ನಿನಗಾಗಿ ನಿನ್ನಿಂದೆ – ಸ್ವತಂತ್ರಧೀರ ಸಿದ್ಧೇಶ್ವರಾ !

## ೧೬೩

'ಯಾರು ನಿನ್ನ ನಾಯಕ ? ಯಾರು ನಿನ್ನ ನಾಯಕ ?'
ಎಂದು ಕೇಳುವರಯ್ಯ ಕೇಳಲೆಂದೇ ಹುಟ್ಟಿದವರು !
ಹೇಳುವೆನಿಂದು ಉತ್ತರವನವರಿಗೆ ;
ಕಾಯಕವೆ ನನ್ನ ನಾಯಕ,
ನೀನು ಕಾಯಕದ ನಾಯಕ, ಸ್ವತಂತ್ರಧೀರ ಸಿದ್ಧೇಶ್ವರಾ !

## ೧೬೪

ನುಡಿಸಲು ಬಾರದ ನರ
ಗಾನಕ್ಕೆ ಬದಲಾಗಿ ಅಧ್ವಾನವ ಪಡೆದರೆ
ಅದು ವೀಣೆಯ ತಪ್ಪೆ ?
ವರ್ಣವಿನ್ಯಾಸವರಿಯದ ಮನುಜ
ಚಿತ್ರಕ್ಕೆ ಪ್ರತಿಯಾಗಿ ವಿಚಿತ್ರವ ಪಡೆದರೆ
ಅದು ಕುಂಚದ ತಪ್ಪೆ ?
ಸಹೃದಯತೆಯಿಲ್ಲದೆ ವಿಮರ್ಶಕ
ರಸಕ್ಕೆ ಎರವಾಗಿ ಕಸವ ಕಂಡರೆ
ಅದು ಕವಿಯ ತಪ್ಪೆ ?
ಶುಭಮತಿಯಿಲ್ಲದ ಸಮಾಜ
ಹಿತಕ್ಕೆ ಬಳಸದೆ ಅಹಿತಕ್ಕೆ ಬಳಸಿದರೆ
ಅದು ವಿಜ್ಞಾನದ ತಪ್ಪೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕಲು ಬರದ ಮೂಳ
ಬಾಳಿನಲ್ಲಿ ಗೋಳನೇ ಕಂಡರೆ
ಅದು ಬಾಳಿನ ತಪ್ಪೆ ?

## ೧೬೫

ಮೌನದ ವೀಣೆಗೆ ಮಾತಿನ ತಂತಿಯೇಕಯ್ಯ ?
ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯ ?
ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯ ?
ನಲ್ಮೆಯ ತಕ್ಕಡಿಗೆ ಆಣೆಯ ಕಾಣಿಯೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಹದ ಬದುಕಿಗೆ
ಪರದ ನಿಕಷವೇಕಯ್ಯ ?

## ೧೬೬

ಗೋಲ ಗುಮ್ಮಟವೂ ಅಲ್ಲ, ಗೋಳ ಗುಮ್ಮಟವೂ ಅಲ್ಲ,
ಕೇಳೀ ಗುಮ್ಮಟವಯ್ಯ ಬಾಳು ;
ನುಡಿದುದನೆ ಪಡಿನುಡಿವ ಜಡ ಗುಮ್ಮಟವಲ್ಲ,
ನವ್ಯಧ್ವನಿ ನವೀನ ಕೃತಿಗಳ
ಕಮ್ಮಟವಯ್ಯ ಬಾಳು ;
ಸತ್ತವರ ಸುಂದರ ಸ್ಮಾರಕ ಮಾತ್ರವಲ್ಲ,
ಇದ್ದವರ ಉದ್ಧಾರ–ಮಠವಯ್ಯ ಬಾಳು ;
ಸಿರಿ, ಶ್ರಮ, ಸುಖಗಳ ತ್ರಿಪುಟಿ ಮಾತ್ರವಲ್ಲ,
ಶೀಲ, ಸೃಜನ, ಸಂಸ್ಕೃತಿಗಳ
ಸುವರ್ಣಸಂಪುಟವಯ್ಯ ಬಾಳು ;
ಕೀರ್ತಿವಾರ್ತೆಯ ಚಟ ಮಾತ್ರವಲ್ಲ,
ಮರಣವನ್ನು ಮೀರಬೇಕೆಂಬ ಹಟವಯ್ಯ ಬಾಳು ;
ಹೊಟ್ಟೆ ಬಟ್ಟೆಯ, ಅರ್ಥ ಕಾಮದ ಕಾಟ ಮಾತ್ರವಲ್ಲ,
ಹೊಲಬಿನ ಹೋರಾಟ,
ಹದುಳದ ಹೂದೋಟವಯ್ಯ ಬಾಳು !
ಸ್ವತಂತ್ರಧೀರ ಸಿದ್ಧೇಶ್ವರನ
ಶಿವಸೃಷ್ಟಿಯಲ್ಲಿ
ಹಳತು ಹೊಸತುಗಳ ಮೇಲಾಟವಯ್ಯ ಬಾಳು !

## ೧೬೭

ಬಾಳ ಬಂಡಿಗೆ ಬುದ್ಧಿ ಭಾವಗಳೆರಡು ಗಾಲಿಗಳು,
ಶೀಲವೇ ಕೀಲವಯ್ಯ ;
ಬಾಳ ಹಕ್ಕಿಗೆ ಅರ್ಥ ಕಾಮಗಳೆರಡು ರೆಕ್ಕೆಗಳು,
ಧರ್ಮವೇ ಧಾರಣಶಕ್ತಿಯಯ್ಯ ;
ಬಾಳ ಹಣತೆಗೆ ರೀತಿ ನೀತಿಗಳೇ ಎಣ್ಣೆ ಬತ್ತಿಗಳು,
ಪ್ರೀತಿಯೇ ಜ್ಯೋತಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಹಣ್ಣಿನಲ್ಲಿ ಶಕ್ತಿ ರಕ್ತಿಗಳೇ ಬೀಜ ಸಿಪ್ಪೆಗಳು,
ಭಕ್ತಿಯೇ ಮಧುರ ರಸವಯ್ಯ !

## ೧೬೮

ಬಿತ್ತುವಾಗೊಂದು ಹಿಗ್ಗು,
        ಬೆಳೆಯುವಾಗೊಂದು ಹಿಗ್ಗು,
ಬೆಳೆಯ ಕಾಯುವಾಗೊಂದು ಹಿಗ್ಗು,
        ಬೆಳೆಯ ಕುಯ್ಯುವಾಗೊಂದು ಹಿಗ್ಗು,
ರಾಶಿ ಮಾಡುವಾಗೊಂದು ಹಿಗ್ಗು,
        ಆಯ ಕೊಡುವಾಗೊಂದು ಹಿಗ್ಗು,
ಉಳಿದುದ ಉಣ್ಣುವಾಗೊಂದು ಹಿಗ್ಗು !
        ಬರೆಯುವಾಗೊಂದು ಹಿಗ್ಗು,
ಓದುವಾಗೊಂದು ಹಿಗ್ಗು,
        ಓದಿಸಿ ಕೇಳುವಾಗೊಂದು ಹಿಗ್ಗು,
ಬೋಧಿಸಿ ಹೇಳುವಾಗೊಂದು ಹಿಗ್ಗು,
        ಶೋಧಿಸಿ ಪ್ರಕಟಿಸುವಾಗೊಂದು ಹಿಗ್ಗು,
ತಿಳಿದವರು ಹಿಗ್ಗಿಸಿದಷ್ಟೂ ಹಿಗ್ಗುವುದಯ್ಯ ಹಿಗ್ಗು ;
        ತಿಳಿಯದವರು ಕುಗ್ಗಿಸಿದಷ್ಟೂ ಕುಗ್ಗುವುದಯ್ಯ ಹಿಗ್ಗು !
ತಿಳಿದು ನಡೆದರೆ ಗಳಿಗೆ ಗಳಿಗೆಯೂ ರಸದ ತಳಿಗೆ,
ತಿಳಿಯದೆ ನಡೆದರೆ ಗಳಿಗೆ ಗಳಿಗೆಯೂ ವಿಷದ ಗುಳಿಗೆಯಯ್ಯಾ –
                ಸ್ವತಂತ್ರಧೀರ ಸಿದ್ಧೇಶ್ವರಾ !

## ೧೬೯

ಗುರಿಯ ಹಕ್ಕಿಯ ಗರಿಗಳನ್ನು ಕಿತ್ತೆನಯ್ಯ
        ಕ್ಷಣಿಕ ವಿನೋದಕ್ಕಾಗಿ ;
ಕಣಸಿನ ಕುಸುಮದ ಎಸಳುಗಳನ್ನು ಹರಿದೆನಯ್ಯ
        ನಿಮಿಷದ ಆಮೋದಕ್ಕಾಗಿ ;
ವಿಶ್ವಾಸದ ಕೊಡೆಯ ಕಡ್ಡಿಗಳನ್ನು ಮುರಿದೆನಯ್ಯ
        ಹುಸಿ ಪ್ರಮೋದಕ್ಕಾಗಿ ;
ಪ್ರೀತಿಯ ಪೀತಾಂಬರದ ಎಳೆಗಳನ್ನು ಸೆಳೆದೆನಯ್ಯ
        ಸುಳ್ಳು ಉಲ್ಲಾಸಕ್ಕಾಗಿ ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಹೊತ್ತಗೆಯ ಹಾಳೆಗಳನ್ನು ಹಾಳು ಮಾಡಿದೆನಯ್ಯ
        ಹಾಳು ಹವ್ಯಾಸಕ್ಕಾಗಿ !

## ೧೭೦

ಬದುಕಿನ ಬೆಲೆಯನ್ನು ಸಲ್ಲಿಸಬೇಕು ;
ಬಿಡುಗಡೆಯ ಬೆಲೆಯನ್ನು ಸಲ್ಲಿಸಬೇಕು ;
ಒಲವಿನ ಬೆಲೆಯನ್ನು ಸಲ್ಲಿಸಬೇಕು ;
ಚೆಲುವಿನ ಬೆಲೆಯನ್ನು ಸಲ್ಲಿಸಬೇಕು ;
ಪ್ರಗತಿಯ ಬೆಲೆಯನ್ನು ಸಲ್ಲಿಸಬೇಕು ;
ಎಲ್ಲದರ ಬೆಲೆಯನ್ನೂ ಸಲ್ಲಿಸ ಬೇಕಿಲ್ಲಿ !
ಒಮ್ಮೆ ಬೆವರಿನ ಬೆಲೆ, ಒಮ್ಮೆ ಬವರದ ಬೆಲೆ,
ಒಮ್ಮೆ ಕಣ್ಣೀರಿನ ಬೆಲೆ, ಒಮ್ಮೆ ಕೆನ್ನೀರಿನ ಬೆಲೆ,
ಒಮ್ಮೆ ಸಹನೆಯ, ಸಂಯಮದ, ಸ್ವಾರ್ಥತ್ಯಾಗದ,
ಸೇವಾಯೋಗದ ಬೆಲೆ–
ಒಂದಿಲ್ಲೊಂದು ಬೆಲೆಯ
ಸಲ್ಲಿಸಿದವರೇ ಸಲ್ಲುವರಯ್ಯ
ಇಲ್ಲಿಯೂ, ಅಲ್ಲಿಯೂ, ಎಲ್ಲೆಲ್ಲಿಯೂ !
"ಸಲ್ಲಿಸು, ಸಲ್ಲು ; ಸಲ್ಲು, ಗೆಲ್ಲು !"
ಇದು ಸ್ವತಂತ್ರಧೀರ ಸಿದ್ಧೇಶ್ವರನ ಸೊಲ್ಲು !

## ೧೭೧

ನವಿಲು ತೀರ್ಥದ ಹೇರೊಡಲು ತುಂಬಿತು ;
ಪಂಪಾಕ್ಷೇತ್ರದ ಪೆರ್ಮಡಿಲು ತುಂಬಿತು ;
ಬಾಖ್ರಾ–ನಂಗಾಲಿನ ಮರಿ ಕಡಲು ತುಂಬಿತು ;
ಈ ಬಾಳ ಕಿರಿಗೊಡ ಮಾತ್ರ, ಬರಿದಾಗಿಯೇ ಉಳಿಯಿತಯ್ಯ !
ಆಗಾಗ ಅರ್ಧ ತುಂಬಿ ತುಳುಕಿ ತಲ್ಲಣಗೊಳಿಸಿತಯ್ಯ !
ಬರಿಗೊಡವ ತಾಳಿಕೊಳ್ಳಬಹುದು,
ಅರೆಗೊಡವ ತಾಳಲಾಗದಯ್ಯ !
ಪೂರ್ಣ ತುಂಬಿಸು,
ಇಲ್ಲವೆ ಬರಿದಾಗಿ ಉಳಿಸು
ನಿನ್ನಿಷ್ಟದಂತೆ !
ಆದರೆ, ಕೊಡ ಮಾತ್ರ ನಿನ್ನದೆಂದೆನಿಸಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೭೨

ಒಂಬತ್ತು ಬಾಗಿಲಗಳಿಗೂ ಕದವಿಲ್ಲ,
ಕೀಲಿಯಿಲ್ಲ –
ಆದರೂ ರತ್ನ ಕಳವಾಗಿ ಹೋಗಿಲ್ಲ
ಇದುವರೆಗೂ !
ಅದು ಕಳವಾಗುವಾಗ ಕಾಯ್ವ ತಳವಾರ ಹುಟ್ಟಿಲ್ಲ ಇನ್ನುವರೆಗೂ !
ಅದನು ಕಾಯುವ ಕಾಣದ ಕಾವಲುಗಾರನ ಕಣ್ಣು ತಪ್ಪಿಸಿ
ಅದನು ಕದ್ದವರು ಹುಟ್ಟಿಲ್ಲ
ಇಲ್ಲಿಯವರೆಗೂ !
ಅದರ ಬೆಲೆ ಕಟ್ಟುವವರೂ ಬಂದಿಲ್ಲ
ಇಂದಿನವರೆಗೂ !
ಇರುವಾಗ ಅದರ ಬೆಲೆ ಬಲ್ಲವರು ಬಹಳಿಲ್ಲ ;
ಕಳವಾದ ಮೇಲೆ ಹುಡುಕಲು
ಕಳಕೊಂಡವರೆ ಉಳಿವುದಿಲ್ಲ !
ನೀ ಕೊಟ್ಟ ಈ ಅನರ್ಘ್ಯ ರತ್ನ
ನಿನ್ನವರಿಗೇ ತೊಡವಾಗಲಯ್ಯ,
ನಿನ್ನ ಮಕ್ಕಳಿಗೆ ಅಡವಾಗಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೭೩

ಲಾಭದ ಲೋಭಿಗಳಿಂದ
ಗಂಗಾಜಲವನ್ನು ಕೊಳ್ಳುವುದಕ್ಕಿಂತ
ಗಂಗಾನದಿಯನ್ನೇ ಆಶ್ರಯಿಸುವುದು ಒಳಿತಯ್ಯ ;
ಆಶೆಯ ದಾಸರಿಂದ
ಧರ್ಮದ ಮರ್ಮ ತಿಳಿವುದಕ್ಕಿಂತ
ಧರ್ಮಕ್ಕೆ ಮೊರೆ ಹೋಗುವುದು ಮೇಲಯ್ಯ ;
ಧುರೀಣರೆಂಬವರಿಂದ
ದೇಶಭಕ್ತಿಯ ಕಲಿವುದಕ್ಕಿಂತ
ದೇಶವನ್ನೇ ಆಶಯಿಸುವುದು ಶ್ರೇಯಸ್ಕರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿ ಸುಲಿಗೆಯ ಸತ್ರ ನಡೆಸುವರಿಗಿಂತ
ನಿನ್ನನ್ನೇ ಆಶ್ರಯಿಸುವುದು ಲೇಸಿನಲ್ಲಿ ಲೇಸಯ್ಯ !

## ೧೭೪

ವಾರಾಂಗನೆಯ ಕೊರಳ
ನೀಲಮಣಿಯಾಗುವುದಕ್ಕಿಂತ
ಗರತಿಯ ಕೊರಳ ಕರ್ಮಣಿಯಾಗುವುದು ಮೇಲಯ್ಯ ;
ಮಿಹಿರಕುಲನ ಮನೆಯ
ಆನೆಯಾಗುವುದಕ್ಕಿಂತ
ಧರ್ಮವ್ಯಾಧನ ಮನೆಯ
ನಾಯಿಯಾಗುವುದು ಲೇಸಯ್ಯ ;
ವಾಲ್ಪೋಲನ ಸಂಪುಟದ
ಸಚಿವನಾಗುವುದಕ್ಕಿಂತ
ವಾಷಿಂಗ್ಟನ್ನನ ಮನೆಯ
ಪಹರಿಯಾಗುವುದು ಚೆನ್ನವಯ್ಯ ;
ಜಾರನ ಅರಮನೆಯ
ಪಾರುಪತ್ಯಗಾರನಾಗುವುದಕ್ಕಿಂತ
ಲೆನಿನ್ನನ ಮನೆಯ
ಬಾಣಸಿಯಾಗುವುದು ವಿಹಿತವಯ್ಯ ;
ದಾನವೇಂದ್ರನ ಯುವರಾಜನಾಗುವುದಕ್ಕಿಂತ
ಶ್ರೀರಾಮಚಂದ್ರನ
ಪಾದುಕೆಗಳಾಗುವುದು ಶ್ರೇಯಸ್ಕರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನುಳಿದು ಮಾಡುವ ಯಜ್ಞದ
ಯಜಮಾನನಾಗುವುದಕ್ಕಿಂತ
ನಿನ್ನ ತಳೆದು ಕಸಗುಡಿಸುವ
ಜಲಗಾರನಾಗುವುದು ಕರಲೇಸಯ್ಯ !

## ೧೭೫

ಅಪ್ರಮಾಣಿಕ ವಿಶ್ವಾಸಕ್ಕಿಂತ ಪ್ರಾಮಾಣಿಕ ಸಂಶಯವೇ ಶ್ರೇಷ್ಠವಯ್ಯ ;
ಕೃತ್ರಿಮ ಸ್ನೇಹಕ್ಕಿಂತ ವೈಚಾರಿಕ ವೈರವೇ ಲೇಸಯ್ಯ ;
ಸುಳ್ಳಿನ ಗೆಲವಿಗಿಂತ ಸತ್ಯದ ಸೋಲೇ ಶ್ರೇಯಸ್ಕರವಯ್ಯ ;
ಹೊಲ್ಲದ ಹೊಗಳಿಕೆಗಿಂತ ಸಲ್ಲುವ ಟೀಕೆಯೇ ಸ್ವಾಗತಾರ್ಹವಯ್ಯ ;
ನಿನ್ನ ಮರೆದು ಪಡೆವ ಸುಖಕ್ಕಿಂತ
ನಿನ್ನನರಿದು ಪಡುವ ದುಃಖವೇ ಮೇಲಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ !

## ೧೭೬

ಹಸಿ ಬಿಸಿಯ ಗಣಿಸುವುದೆ ಹಸಿವೆ ?
ಸ್ವಾದು ಸವುಳನೆಣಿಸುವುದೆ ತೃಷೆ ?
ಹಾಸಿಗೆಗೀಸಿಗೆಯ ಕಾಯುವುದೆ ಕಾಮ ?
ಕಾಲಾಕಾಲವ ಲೆಕ್ಕಿಸುವುದೆ ಕ್ರೋಧ ?
ಅನ್ಯರ ತನ್ನವರ ಗಮನಿಸುವುದೆ ಲೋಭ ?
ಮಾನಾಪಮಾನಗಳ ಲಕ್ಷಿಸುವುದೆ ಮೋಹ ?
ಮನೆ ಮಠಗಳ ಮನ್ನಿಸುವುದೆ ಮದ ?
ಲಿಂಗ ವಯಗಳ ಈಕ್ಷಿಸುವುದೆ ಮತ್ಸರ ?
ಇತಿಮಿತಿಗಳ ಅವಲೋಕಿಸುವುದೆ ಅತ್ಯಾಸೆ ?
ಉಚಿತಾನುಚಿತವ ವಿವೇಚಿಸುವುದೆ ಜಿಪುಣತನ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ, ನಿನ್ನವರನೊಲಿವುದೆ ಪತಿತಮನ ?

## ೧೭೭

ಗುರುತ್ವಾಕರ್ಷಣ ಶಕ್ತಿಯಿದೆಯೆಂಬುದನ್ನು
ಸಿದ್ಧಗೊಳಿಸಲು
ನಾನೇ ಮರದಿಂದ ಬೀಳಬೇಕಿಲ್ಲ ;
ರಕ್ತ ಸಂಚರಣ ಸಿದ್ಧಾಂತವನ್ನು
ಸ್ಥಿರೀಕರಿಸಲು
ನನ್ನ ನರಗಳನ್ನೇ ಹರಿದು ತೋರಬೇಕಿಲ್ಲ ;
ವಿಷದ ಮಾರಕತೆಯನ್ನು
ದೃಢೀಕರಿಸಲು
ನಾನೇ ವಿಷಪಾಶನ ಮಾಡಬೇಕಿಲ್ಲ ;
ದುರ್ಗುಣಗಳ ದುಷ್ಫಲಗಳನ್ನು
ದರ್ಶಿಸಲು
ನಾನೇ ದುರ್ಗುಣಿಯಾಗಬೇಕಿಲ್ಲ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿಲ್ಲವೆಂದು ಸಾಧಿಸಲು
ನಾನೆಂಬುದನ್ನೇ ನಿರಾಕರಿಸಬೇಕಿಲ್ಲ !

## ೧೭೮

ನಿಯಮಗಳಂತೆ ಆಡದ ಆಟದಲ್ಲಿ
ಆನಂದವಾವುದಯ್ಯ ?
ಮನಸ್ಸಿಲ್ಲದ ಮದುವೆಯಲ್ಲಿ
ಮುದವಾವುದಯ್ಯ ?
ಮತಿಯೊಪ್ಪದ ಮತದಲ್ಲಿ
ಹಿತವಾವುದಯ್ಯ ?
ಮೃದುವಚನರಹಿತ ದಾನದಲ್ಲಿ
ಮೇಲ್ಮೆಯೆಲ್ಲಿಯದಯ್ಯ ?
ತಾಯಿಯಿಲ್ಲದ ಮನೆಯಲ್ಲಿ ?
ವಾತ್ಸಲ್ಯವೆಲ್ಲಿಯದಯ್ಯ ?
ಮಕ್ಕಳಿಲ್ಲದ ಮನೆಯಲ್ಲಿ
ಉಕ್ಕಂದವೆಲ್ಲಿಯದಯ್ಯ ?
ಕೂಡಿ ಹೆಜ್ಜೆಯಿಡದ ಕವಾಯತಿನಲ್ಲಿ
ಅಂದವೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಜ್ಜೆಯೊಡನೆ ಒಂದಾಗದ ಹೆಜ್ಜೆಯಲ್ಲಿ,
ನಿನ್ನ ಉದ್ದೇಶವನ್ನನುಸರಿಸದ ಉದ್ಯೋಗದಲ್ಲಿ,
ಅಭ್ಯುದಯ ನಿಃಶ್ರೇಯಸಗಳೆಲ್ಲಿಯವಯ್ಯ ?

## ೧೭೯

ನಿನ್ನ ತಿಗರಿಗೆ ಮಣ್ಣು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಭಟ್ಟಿಗೆ ಅದಿರು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಗರಗಸಕ್ಕೆ ಮುಂಡಿಗೆ ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಸಬಳಕ್ಕೆ ಸಾಣೆ ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಗಾಣಕ್ಕೆ ಕಬ್ಬು ಮಾಡಿಕೊಳ್ಳಯ್ಯ ನನ್ನನ್ನು ;
ನಿನ್ನ ಹಂತಿಗೆ ತೆನೆ ಮಾಡಿಕೊಳ್ಳಯ್ಯ ನನ್ನನ್ನು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಉದ್ದೇಶಕ್ಕೆ ತಕ್ಕ
ಉಪಕರಣ ಮಾಡಿಕೊಳ್ಳಯ್ಯ ನನ್ನನ್ನು

## ೧೮೦

ಕಣ್ಣು ಕಾಣಬಲ್ಲುದಲ್ಲದೆ
ಕೇಳಲರಿಯದಯ್ಯ ;
ಕಿವಿ ಕೇಳಬಲ್ಲುದಲ್ಲದೆ ಕಾಣಲರಿಯದಯ್ಯ ;
ನಾಲಗೆ ರುಚಿಸಬಲ್ಲುದಲ್ಲದೆ
ಮೂಸಲರಿಯದಯ್ಯ ;
ನಾಸಿಕ ವಾಸಿಸಬಲ್ಲದಲ್ಲದೆ
ರುಚಿಸಲರಿಯದಯ್ಯ ;
ತ್ವಚವು ಸ್ಪರ್ಶಿಸಬಲ್ಲುದಲ್ಲದೆ
ದರ್ಶಿಸಲರಿಯದಯ್ಯ ;
ಒಂದೊಂದು ಇಂದ್ರಿಯಕ್ಕೆ
ಒಂದೊಂದು ಶಕ್ತಿ,
ಒಂದೊಂದರಲ್ಲಿಯೇ ರಕ್ತಿ.
ಎಲ್ಲ ಇಂದ್ರಿಯಗಳ ಮುಖದಲ್ಲಿದ್ದು
ಎಲ್ಲವನ್ನೂ ಕೇಳುವ, ನೋಡುವ,
ರುಚಿಸುವ, ವಾಸಿಸುವ, ಸ್ಪರ್ಶಿಸುವ
ನಿನ್ನನೇ ಅರಿಯದೆ
ಕಾಲ ಕಳೆದೆನಯ್ಯ
ಇಂದ್ರಿಯ ಲೋಲುಪ ನಾನು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೮೧

ನಿನ್ನ ಬರವಿನ ಮುನ್ನೆಚ್ಚರಿಕೆಯನ್ನೀವ
ರಾಡರ್ ಆಗಲಯ್ಯ ನನ್ನ ಹೃದಯ ;
ನಿನ್ನ ಅಡಿಯ ಅಯಸ್ಕಾಂತಕ್ಕೆ ಅಂಟಿಕೊಳ್ಳುವ
ಲೋಹಚೂರ್ಣವಾಗಲಯ್ಯ ನನ್ನ ಜೀರ್ಣಶೀರ್ಣಮನ ;
ನಿನ್ನ ಸಂಕಲ್ಪದ ಸಂಕೇತದ ಸುತ್ತು ಸುತ್ತುವ
ಕ್ಷಿಪಣಿಯಾಗಲಯ್ಯ ನನ್ನ ತನು ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಪ್ರಯೋಗಶಾಲೆಯಲ್ಲೊಂದು
ಟೆಸ್ಟ್ ಟ್ಯೂಬ್ ಆಗಲಯ್ಯ ನನ್ನ ಜೀವನ !

## ೧೮೨

ಖಂಡಾಂತರ ಯಾತ್ರೆ ಕೈಕೊಳ್ಳುವ
ಕ್ರೌಂಚಗಳ ಗಗನಪಥವನ್ನು
ಗುರುತಿಸಬಹುದು,
ಆದರೆ, ದೇಶಾಂತರಕ್ಕೆ ಹೊರಡುವ
ಕಥೆ, ಕೃತಿಗಳ ಭೂಪಥವನ್ನು
ಗುರುತಿಸುವುದು ಕಠಿಣವಯ್ಯ ;
ಸಾಗರದಿಂದ ಸಾಗರಕ್ಕೆ ಸಾಗುವ
ಜಲಚರ ಪ್ರಾಣಿಗಳ ಜಲಪಥವನ್ನು
ಗುರುತಿಸಬಹುದು,
ಜನಾಂಗದಿಂದ ಜನಾಂಗಕ್ಕೆ ಹರಡುವ
ಜಾನಿಕೆ ಗೇನಿಕೆಗಳ ಅಗೋಚರ ಪಥವನ್ನು
ಗುರುತಿಸುವುದು ಕಷ್ಟವಯ್ಯ ;
ಭೂಗರ್ಭದ ಲಾವಾರಸದ
ದುರ್ಗಮ್ಯ ಮಾರ್ಗವನ್ನೂ
ಹೇಗೋ ಗುರುತಿಸಬಹುದು,
ಮನದಲ್ಲಿಯೇ ಹರಿದಾಡುವ ಹಳವಂಡಗಳ
ಹಾದಿಯನ್ನು ಗುರುತಿಸುವುದು ದುಷ್ಕರವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೆಲ–ನೀರು–ನಭ–ಬಾಹ್ಯಾಕಾಶಗಳ
ನೂರುಸಾವಿರ ದಾರಿಗಳನ್ನು ತೋರು, ಬಿಡು–
ಮೈಯೆಲ್ಲ ವ್ಯಾಪಿಸಿರುವ ನಿನ್ನನ್ನು
ಮನಕ್ಕೆ ತರುವ ದಾರಿಯನ್ನು ಮಾತ್ರ
ತಪ್ಪದೆ ತೋರಯ್ಯ.

## ೧೮೩

'ನನ್ನ ನಿನ್ನ ನಡುವೆ ಅದೆಷ್ಟು ಅಂತರ !'
ಎಂದು ಉದ್ಗರಿಸುವಿಯಾ ?
ನನ್ನ ನನ್ನತನದ ನಡುವಿನ ಅಂತರ
ಇದಕ್ಕೂ ಹಿರಿದು !
ನನ್ನ ನನ್ನತನದ ನಡುವಣ ಅಂತರ ಹೋದರೆ
ನನ್ನ, ನಿನ್ನ ನಡುವಣ ಅಂತರವೂ ಅಳಿವುದಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೮೪

ಸಾಸಿರ ಸಾಸಿರ ರೋಮ-ರಂಧ್ರ-ದ್ವಾರಗಳಲ್ಲಿ ಕುಳಿತು
        ಕಾತರತೆಯಿಂದ ಕಾದಿದೆಯಯ್ಯ ಪ್ರಾಣ ;
ನಿಮಿಷ ನಿಮಿಷದ ಮುಂದೆ ನಿರೀಕ್ಷೆಯ ಪಕ್ಷಿಯಾಗಿ
        ರೆಕ್ಕೆ ಬಡಿಯುತ್ತಲಿದೆಯಯ್ಯ ಮನ ;
ಕೋಟಿ ಕೋಟಿ ಕಿರಣ ಕುಸುಮಗಳ ದಳದಳಗಳಲ್ಲಿ
        ದುಂಬಿಯಾಗಿ ಅರಸುತ್ತಲಿದೆಯಯ್ಯ ಚಿತ್ತ ;
ಸ್ಥಲದ ಜಲಧಿಯ ಮೀನು ಮೊಸಳೆಗಳಲ್ಲಿ
        ಉಸಿರಾಗಿ ಚಲಿಸಲೆಳಸುತ್ತಿದೆಯಯ್ಯ ಅಹಂಕಾರ ;
ಅಣುವಿನೊಡಲಿನ ಪರಮಾಣುಪುಂಜದ
        ರಹಸ್ಯಲೀಲೆಗಳಲ್ಲಿ
        ರಮಿಸ ಬಯಸಿದೆಯಯ್ಯ ಬುದ್ಧಿ ;
        ಈ ಒಡಲ ಕಡಲಿನಲ್ಲಿ
        ಕಡೆಗೋಲಿಲ್ಲದೆ ಕಡೆಯುತ್ತಿವೆ
        ಬಿಡುವಿಲ್ಲದಂತೆ
        ಏನೇನೋ ನಾನಾ ವಿಧವಾಗಿ !
ವಿಷ ಹುಟ್ಟಿದರೆ
        ದಕ್ಕಿಸಿಕೊಳ್ಳುವ ಶಕ್ತಿ ಕೊಡು,
ಅಮೃತ ಹುಟ್ಟಿದರೆ
        ಸೊಕ್ಕಿ ಬೀಗದ ಸನ್ಮತಿಯ ಕೊಡು-
                ಸ್ವತಂತ್ರಧೀರ ಸಿದ್ಧೇಶ್ವರಾ !

## ೧೮೫

ಫಲವಿತ್ತ ರೆಂಬೆ ಬಾಗುತ್ತದೆ,
ಗೊನೆ ಹೊತ್ತ ಬಾಳೆ ಬಾಗುತ್ತದೆ,
ತೆನೆ ಹೆತ್ತ ದಂಟು ಬಾಗುತ್ತದೆ,
ಏನೇನೋ ಇಲ್ಲದುದು
        ಬೀಗುತ್ತದೆ ನೋಡಾ-
                ಸ್ವತಂತ್ರಧೀರ ಸಿದ್ಧೇಶ್ವರಾ !

## ೧೮೬

ಸಂಜೆ ಮುಂಜಾವುಗಳು ನೀಡುವ
ಅಪರಂಜಿಯುಡುಗೆ
ಸ್ಥಿರವಲ್ಲ ಬುವಿಗೆ, ಬಾನಿಗೆ ;
ಮಳೆಗಾಲವೀವ ನೆರೆ
ಸ್ಥಿರವಲ್ಲ ತೊರೆಗಳಿಗೆ ಝರಿಗಳಿಗೆ ;
ವಸಂತವೀವ ಚಿಗುರು, ಹೊಗರು
ಸ್ಥಿರವಲ್ಲ ತರುಗಳಿಗೆ, ಲತೆಗಳಿಗೆ ;
ಮಾಗಿಯೀವ ಬೋಳು, ಬೋಡು
ಸ್ಥಿರವಲ್ಲ ಬನಗಳಿಗೆ, ಉಪವನಗಳಿಗೆ ;
ಶೈಶವ ಸ್ಥಿರವಲ್ಲ, ಬಾಲ್ಯ ಸ್ಥಿರವಲ್ಲ,
ಯೌವನ ಸ್ಥಿರವಲ್ಲ–
ಜೀವನವೇ ಸ್ಥಿರವಲ್ಲ ಜೀವಿಗಳಿಗೆ !
ಸ್ಥಿರತೆ ಯಾವ ವರ ?
ಅಸ್ಥಿರತೆ ಯಾವ ಶಾಪ ?
ಸ್ಥಿರತೆ ಬಂಧನ, ಅಸ್ಥಿರತೆ ನಂದನ ನನಗೆ !
ಸ್ಥಿರತೆಯೂ ಬೇಡ,
ಸ್ಥಾವರತೆಯೂ ಬೇಡ !
ನೀನೊಬ್ಬ ಸ್ಥಿರ, ಅಜರ,
ಅಮರನಾಗಿದ್ದರೆ ಸಾಲದೆ ?
ಅಮರತೆಯ ತಾಳಿಕೊಳ್ಳುವ
ಶಕ್ತಿ ನಿನಗೆ ಮಾತ್ರ !
ನನಗೆ ಅಸಹ್ಯ ಅಮರತೆಯ
ಆಜೀವ ಶಿಕ್ಷೆ ಬೇಡವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೮೭

'ಯಾವುದೂ ಸ್ಥಿರವಲ್ಲ !'
ಎಂದು ಉಸಿರ್ಗರೆವುದು ತರವಲ್ಲ ;
ಸ್ಥಿರ, ಅಸ್ಥಿರ,
ಎರಡೂ ಹರನ ವರ ;
ಎರಡರಲ್ಲೂ ಒಂದೇ ಸ್ವರ ; 'ಸ್ವತಂತ್ರಧೀರ ಸಿದ್ಧೇಶ್ವರ'

## ೧೮೮

ನಿನ್ನೆ ಮೊನ್ನೆಯವರೆಗೆ
ನಿಜವೆಂದು ನಂಬಿದುದು
ಇಂದು ಸಂದೇಹಕ್ಕೆ ಇನ್ನೊಂದು ಹೆಸರು ;
ನಿನ್ನೆ ಮೊನ್ನೆಯವರೆಗೆ
ಔಷಧವೆಂದು ವಿಶ್ವಾಸಿಸಿದುದು
ಇಂದು ವಿಷವೆಂದು ಕಸವೆಂದು ಪರಿಗಣಿತ ;
ನಿನ್ನೆ ಮೊನ್ನೆಯವರೆಗೆ
ತತ್ತ್ವಜ್ಞಾನವೆಂದು ತಿಳಿದುದು
ಇಂದು ಸಾಮಾನ್ಯಕ್ಕೂ ಸಾಮಾನ್ಯಜ್ಞಾನ ;
ನಿನ್ನೆ ಮೊನ್ನೆಯವರೆಗೆ
ನವನವೀನವೆನಿಸಿದುದು
ಇಂದು ಹಳದು, ಹಳಸಿದುದು, ಹಾಳು !
ಒಮ್ಮೆ ಎಲ್ಲ ಹೊಸತು,
ಮತ್ತೊಮ್ಮೆ ಎಲ್ಲ ಹಳತು ;
ನೀನು ಮಾತ್ರ ಹಳಬರಿಗೆ ಹಳಬ,
ಹೊಸಬರಲ್ಲಿ ಹೊಸಬ,
ನಿರಂತರಕ್ಕೆ ನಿರಂತರ,
ಚಿರಂತನಕ್ಕೆ ಚಿರಂತನ
ಅಜ, ಅಜರ, ಅಮರ, ಪರಾತ್ಪರ–
ಸ್ವತಂತ್ರಧೀರ ಸಿದ್ಧೇಶ್ವರ !

## ೧೮೯

ಆದಿಯಿದ್ದರೆ ತಾನೆ ಅಂತ್ಯವಿರುವುದು ?
ಆದಿಯೇ ಇಲ್ಲದಿರೆ ಅಂತ್ಯವೆಲ್ಲಿಯದಯ್ಯಾ ?
ಮೂರ್ತವಾದುದಕೆ ತಾನೆ ಪ್ರಳಯವಿರುವುದು ?
ಮೂರ್ತವೇ ಅಲ್ಲದುದಕೆ ಪ್ರಳಯವೆಲ್ಲಿಯದಯ್ಯಾ ?
ನಾಮವಿದ್ದುದಕೆ ತಾನೆ ಸೀಮೆಯಿರುವುದು ?
ನಾಮವೇ ಇರದುದಕೆ ಸೀಮೆಯಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅರಿವಿಗೆಟಕುವುದಕ್ಕೆ ತಾನೆ ಪರಿಧಿಯಿರುವುದು ?
ಅರಿವಿಗೇ ನಿಲುಕದ ನಿನಗೆ ಪರಿಧಿ ಯಾವುದಯ್ಯಾ ?

## ೧೯೦

ರಾಗ–ದ್ವೇಷಗಳ ನಡುವೆ ಹಗ್ಗ–ಹೋರಾಟ !
ಅದೊಮ್ಮೆ ಗೆದ್ದರೆ ಇದೊಮ್ಮೆ ಬೀಳುತ್ತದೆ,
ಅದು ಒಮ್ಮೆ ಬಿದ್ದರೆ ಇದು ಒಮ್ಮೆ ಏಳುತ್ತದೆ !
ಒಂದರ ಏಳು ಬೀಳಿನಲ್ಲಿ ಇನ್ನೊಂದರ ಅಂಗವಿದೆ,
ಹೊರಗೆ ಪರಸ್ಪರ ವಿರೋಧಿಯಾಗಿ ತೋರಿದರೂ
ಒಳಗೆ ಸೂಕ್ಷ್ಮತಮ ಸಂಗವಿದೆ !
ರಾಗವೇ ಇಲ್ಲದಿರೆ ದ್ವೇಷವೆಲ್ಲಿಯದು ?
ದ್ವೇಷವೇ ಇಲ್ಲದಿರೆ ರೋಷವೆಲ್ಲಿಯದು ?
ರೋಷವೇ ಇಲ್ಲದಿರೆ ಬುದ್ಧಿನಾಶವೆಲ್ಲಿಯದು ?
ಬುದ್ಧಿನಾಶವೇ ಇಲ್ಲದಿರೆ ಆತ್ಮನ ಹ್ರಾಸವೆಲ್ಲಿಯದು ?
ರಾಗವೂ ಬೇಡ, ದ್ವೇಷವೂ ಬೇಡ,
ವಿರಾಗವೂ ಬೇಡ,
ಯೋಗ ಯಾಗವೂ ಬೇಡ,
ನಿನ್ನಲ್ಲಿ ಅನುರಾಗವ ಕರುಣಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೯೧

ನಿನ್ನ ಜ್ಞಾನ ದೊರೆಯದಿದ್ದರೆ ಹೋಗಲಿ,
ನಿನ್ನ ಧ್ಯಾನವಿದೆಯಯ್ಯ ನನಗೆ ;
ನಿನ್ನ ಧ್ಯಾನ ಸಾಧಿಸದಿದ್ದರೆ ಹೋಗಲಿ,
ನಿನ್ನವರ ಊಳಿಗವಿದೆಯಯ್ಯ ನನಗೆ ;
ನಿನ್ನವರ ಊಳಿಗ ಸಿಕ್ಕದಿದ್ದರೆ,
ದಕ್ಕದಿದ್ದರೆ ಹೋಗಲಿ,
ಅವರಡಿಯ ಹುಡಿಯಿದೆಯಯ್ಯ ನನಗೆ ;
ಅವರಡಿಯ ಹುಡಿಯನ್ನೂ ಪಡೆಯಲಾಗದಿದ್ದರೆ
ನಾನೆ ಹುಡಿಯಾಗುವೆನಯ್ಯ
ಅವರಡಿಯ ಕೆಳಗೆ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೯೨

ಆಶೆಯ ನೆರಳು ನಿರಾಶೆ,
ಆಶೆಯೇ ಇಲ್ಲದಿರೆ
ನಿರಾಶೆ ಎಲ್ಲಿಯದಯ್ಯ ?
ಸುಖದ ಹಂಬಲದಲ್ಲಿ ದುಃಖದ ಸೆಲೆ,
ಸುಖದ ಹಂಬಲವೇ ಇಲ್ಲದಿರೆ
ದುಃಖವೆಲ್ಲಿಯದಯ್ಯ ?
ಲಾಭದ ಲೋಭದಲ್ಲಿ ಹಾನಿಯ ಕೊನರು,
ಲಾಭದ ಲೋಭವೇ ಇಲ್ಲದಿರೆ
ಹಾನಿಯೆಲ್ಲಿಯದಯ್ಯ ?
'ಬೇಕಿ'ನ ಜೋಕಾಲಿಯಲ್ಲಿ 'ಬೇಡ'ದ ಜೀಕು,
ಬೇಕೆಂಬುದೇ ಇಲ್ಲದಿರೆ
ಬೇಡವೆಂಬುದೆಲ್ಲಿಯಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೆಂಬುದಿರುವಾಗ
ನೀನೆಂಬ ಪರಿಕಲ್ಪನೆ,
ನಾನೆಂಬುದೇ ಇಲ್ಲವಾದಾಗ
ನೀನೆಂಬರಾರಯ್ಯ ?

## ೧೯೩

ಹಣ ಕೊಳ್ಳಲಾಗದುದೂ ಇದೆಯಯ್ಯ
ನಿನ್ನ ಸೃಷ್ಟಿಯಲ್ಲಿ ;
ಯಂತ್ರ ಮಾಡಲರಿಯದುದೂ ಇದೆಯಯ್ಯ
ನಿನ್ನ ಲೋಕದಲ್ಲಿ ;
ಜ್ಞಾನ-ವಿಜ್ಞಾನ ತಿಳಿಯಲಾಗದುದೂ ಇದೆಯಯ್ಯ
ನಿನ್ನ ವಿಶ್ವದಲ್ಲಿ ;
ಸಮೃದ್ಧಿ ನೀಡಲಾಗದುದೂ ಇದೆಯಯ್ಯ
ನಿನ್ನ ಜಗತ್ತಿನಲ್ಲಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮರಣ ಗೆಲಲಾಗದುದೂ ಇದೆಯಯ್ಯ
ನಿನ್ನ ಪ್ರಪಂಚದಲ್ಲಿ !

## ೧೯೪

ಅಲೆಮಾರಿ ಮನಕ್ಕೆ ನೆಲೆಯೂರಿ ನಿಲ್ಲಲು
ನಿನ್ನ ಮನನದ ಮನೆಯನ್ನು ಕೊಡಯ್ಯಾ ;
ಹೆಪ್ಪುಗಟ್ಟಿದ ಮನಕ್ಕೆ ಹರಿವ ಚೇತನ ಬರಲು
ನಿನ್ನ ತ್ರಿಶೂಲದ ತಿವಿತವ ನೀಡಯ್ಯಾ !
ಸೀಳಿ ಹೋಳಾದ ಮನಕ್ಕೆ ಹೊಂದಿ ಒಂದಾದ ಸ್ಥಿತಿ ತರಲು
ನಿನ್ನ ಒಲವಿನ ವಜ್ರದಂಟು ದಯಪಾಲಿಸಯ್ಯಾ ;
ಬಂಧನಕ್ಕೆ ಸಿಲುಕಿ ಸುಂದಾದ ಮನದ ನಿರ್ಬಂಧನಕ್ಕೆ
ನಿನ್ನ ಅಗ್ನಿನೇತ್ರದ ಶಾಖಮಯೂಖವ ಕರುಣಿಸಯ್ಯಾ !
ಶಂಕೆಯಿಂದ ಮಂಕಾದ ನೋಟದ ಕೊಂಕಳಿಯಲು
ನಿನ್ನ ಕೋಟಿಕೋಟಿ ಬ್ರಹ್ಮಾಂಡಗಳ ಕಾಣ್ಕೆಯನ್ನೀಯಯ್ಯಾ ;
ಹರಿದು ಹರಡಿದ ದೃಷ್ಟಿಯ ಬರಡು ನೀಗಿಸಲು
ಇಷ್ಟದಲ್ಲಿಯೆ ನೆಟ್ಟ ದಿಟ್ಟಿ ದಯಪಾಲಿಸಯ್ಯಾ !
ಎಲ್ಲವನ್ನೂ ಒಮ್ಮೆ ಬಿಡಿಯಾಗಿ, ಒಮ್ಮೆ ಇಡಿಯಾಗಿ ನೋಡಿ
ಅಣುರಚನೆಯಲ್ಲಿಹುದೇ ಬ್ರಹ್ಮಾಂಡನಿಚಯದಲ್ಲಿಹುದೆಂಬ
ಪ್ರಜ್ಞೆಯನೆ ಅನುಗ್ರಹಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರ !

## ೧೯೫

ನೆಟ್ಟು ಕಡಿದಂತೆ ಬೆಟ್ಟಗಳನ್ನು ಕಷ್ಟವಿಲ್ಲದೆ ಕಡಿಯಬಹುದೀಗ,
ಆದರೆ ಅಜ್ಞಾನ–ಗ್ರಂಥಿಗಳನ್ನು ಕಡಿಯುವುದು
ಅಷ್ಟು ಸುಲಭವೇನಯ್ಯ ?
ಓಲ್ಗಾ, ಗಂಗಾ, ಮಿಸಿಸಿಪಿ, ಹೋ ಆಂಗ್ ಹೋಗಳಿಗೂ
ಕಟ್ಟೆ ಕಟ್ಟಬಹುದು –
ಆದರೆ ಕಣ್ಣೀರಿಗೆ ಕಟ್ಟೆ ಕಟ್ಟುವುದು ಸುಲಭ ಸಾಧ್ಯವೇನಯ್ಯ ?
ಲಕ್ಷ ಲಕ್ಷ ನಕ್ಷತ್ರಗಳ ವಿಸ್ತಾರವನ್ನೂ ಒಮ್ಮಿಲ್ಲೊಮ್ಮೆ ಅಳೆಯಬಹುದು,
ಆದರೆ ಅಂತರಂಗದ ಆಳ ಅಗಲಗಳನ್ನಳೆವುದು ಸುಲಭವೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಂದಾದ ಏನೆಲ್ಲವನ್ನೂ ಅರಿಯಬಹುದು,
ಆದರೆ ನಿನ್ನನ್ನೇ ಅರಿವುದು ಸುಲಭವೇನಯ್ಯ ?

## ೧೯೬

ಹೆಪ್ಪಿನ ಮಜ್ಜಿಗೆಗೆ
ಹೆಮ್ಮೆಯ ಕೋಡು ಮೂಡಿದರೆ
ಹಾಲು ಕರೆದ ಹಸುವಿಗಿಂತ
ಹಿರಿದಾಗಬಲ್ಲುದೇನಯ್ಯ ?
ಉಪ್ಪಿನ ಉರದಲ್ಲಿ
ಹಮ್ಮು ಕಚಕುಳಿ ಇಟ್ಟರೆ
ಬೆರೆಸಿಕೊಂಡ ಹಿಟ್ಟಿಗಿಂತ
ಹಿರಿದಾಗಬಲ್ಲುದೇನಯ್ಯ ?
ಶಂಖದ ಒಡಲಿನಲ್ಲಿ
ಬಿಮ್ಮಿನ ತಿದಿ ಊದಿದರೆ
ಶರಧಿಗಿಂತ ಹಿರಿದಾಗಬಲ್ಲುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನೋಲೈಸುವ ಸ್ಥಲಕಾಲಗಳು
ನಿನಗಿಂತ ಹಿರಿದಾಗಬಲ್ಲುವೇನಯ್ಯ ?

## ೧೯೭

ಬರ್ಲಿನ್-ಗೋಡೆಯನ್ನು ಕಟ್ಟಿ
ನಗರವನ್ನು ಒಡೆದರಾಗಲಿ
ಜರ್ಮನ್-ಜನಾಂಗವನ್ನು ಒಡೆದರೇನಯ್ಯಾ ?
ಚೀಣಾ-ಗೋಡೆಯನ್ನು ಕಟ್ಟಿ
ಇನ್ನೇನ ತಡೆದರೂ
ವಿಚಾರ-ವಾಹಿನಿಯನ್ನು ತಡೆಯಲಾದೀತೇನಯ್ಯಾ ?
ಸಾಗರಗಳ ದಿಗ್ಬಂಧನ ಗೈದು
ಸರಕುಗಳ ಸಾಗಾಟ ತಡೆಯಬಹುದಾಗಲಿ
ಆಶೋತ್ತರಗಳ ಓಡಾಟವನ್ನು ತಡೆಯಬಹುದೇನಯ್ಯಾ ?
ಹರಡುವ ಗಂಧಕ್ಕೆ ಗಡಿಗಳನ್ನು ಹಾಕುವ ಹವ್ಯಾಸ,
ಹಬ್ಬುವ ಬೆಳಕಿಗೆ ಬಂಧನಗಳನ್ನು ಬಿಗಿವ ಹವ್ಯಾಸ,
ಚೆಲ್ಲವರಿವ ಒಲವಿಗೆ ಎಲ್ಲೆಗಳನ್ನು ರಚಿಸುವ ಹವ್ಯಾಸ,
ನಿನ್ನ ಕರುಣೆಗೆ ಗೋಡೆಗಳನ್ನು ಕಟ್ಟುವ ಹವ್ಯಾಸ
ಹಾಸ್ಯಾಸ್ಪದ ಹವ್ಯಾಸಗಳಲ್ಲವೇನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ ?

## ೧೯೮

ಸುರಿವ ಮಳೆ ಅಷ್ಟೇ ನಮ್ಮ ಮನೆಯ ಮೇಲೆ,
ಮಂದಿಯ ಮನೆಯ ಮೇಲೆ,
ಆದರೆ, ದೃಷ್ಟಿಭ್ರಾಂತಿಯಿಂದ
ಮಂದಿಯ ಮನೆಯ ಮೇಲೆಯೇ ಹೆಚ್ಚೆಂದು ಭ್ರಮಿಸುತ್ತೇವೆ !
ಇರುವ ಸುಖದುಃಖ ಅಷ್ಟೇ
ಇಲ್ಲಿಯೂ, ಅಲ್ಲಿಯೂ, ಎಲ್ಲೆಲ್ಲಿಯೂ–
ಆದರೆ, ನಮಗಿಂತ ಅನ್ಯರು ಸುಖಿಯೆಂದು
ಕರುಬಿ ಕೊರಗುತ್ತೇವೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆ ಅಷ್ಟೇ ಎಲ್ಲರ ಮೇಲೆ
ಭಿನ್ನ ಭಿನ್ನ ರೂಪಗಳಲ್ಲಿ –
ಆದರೂ, ಅವರಿವರ ಮೇಲೆ ಹೆಚ್ಚೆಂದು
ತಲೆಹರಟೆ ಕೊಚ್ಚುತ್ತೇವೆ !

## ೧೯೯

ವೈದುಷ್ಯ ವಣಿಕ–
ತರದಿರು ನಿನ್ನ ತಲೆಯ ಇಲ್ಲಣವನ್ನಿಲ್ಲಿ,
ಕಲಿಯೆ ಬಾ ಒಲಿದೆದೆಯ ತಿಲ್ಲಾಣವನ್ನಿಲ್ಲಿ ;
ನಾಟ್ಯಶಾಸ್ತ್ರವಲ್ಲ,
ನಾಟ್ಯವಾಗಿ ಬಾ ಇಲ್ಲಿ ;
ಕಾವ್ಯಮೀಮಾಂಸೆಯಲ್ಲ,
ಕಾವ್ಯವಾಗಿ ಬಾ ಇಲ್ಲಿ ;
ಆಶ್ವಾಸನವಲ್ಲ,
ಆಚರಣವಾಗಿ ಬಾ ಇಲ್ಲಿ ;
ಪ್ರವಚನವಲ್ಲ,
ಅನುಷ್ಠಾನವಾಗಿ ಬಾ ಇಲ್ಲಿ ;
ಬೋಧನೆಯಲ್ಲ,
ಆರಾಧನೆಯಾಗಿ ಬಾ ಇಲ್ಲಿ ;
ಇದು ಸ್ವತಂತ್ರಧೀರ ಸಿದ್ಧೇಶ್ವರನ ಸಾನ್ನಿಧ್ಯ –
ಪೂಜಾರಿಯಾಗಿ ಅಲ್ಲ,
ಭಕ್ತನಾಗಿ ಬಾ ಇಲ್ಲಿ !

## ೨೦೦

ಮೈಲಿಗಲ್ಲು ಮಾರ್ಗದರ್ಶನ ಮಾಡಬಹುದಾಗಲಿ
ನಿನ್ನ ಸಹಚರನಾಗಬಲ್ಲುದೆ, ಮಾನವ ?
ಮರ ನೆರಳು ನೀಡಬಹುದಾಗಲಿ
ಕೊಡೆಯಾಗಿ ನಿನ್ನೊಡನೆ
ನಡೆಯಬಲ್ಲುದೆ, ಮಾನವ ?
ನಿರ್ಲ್ದಾಣದವರೆಗೆ ಕಳಿಸಬಂದವರು
'ಸುಖಾಸ್ತೇಪಂಥಾನಃ' ಎಂದು ಹೇಳಿ
ಹಿಂದಿರುಗುವರಾಗಲಿ
ನಿನ್ನ ಹಿಂದೆ ಬರುವರೆ, ಮಾನವ ?
ಬರಬಲ್ಲುದು ಧರ್ಮ ನಿನ್ನೊಡನೆ ನಾಯಿಯಾಗಿ !
ಬರಬಲ್ಲುವು ಒಳಿತು ಸೈಪುಗಳು ನಿನ್ನ ನೆರಳಾಗಿ !
ಬರದವರಿಗಾಗಿ ಬಾಯ್ಬಿಟ್ಟು,
ಬರುವವರ ಬಿಟ್ಟುಕೊಟ್ಟು,
ಕೆಟ್ಟೆನೆಂದು ಕುಟ್ಟಿಕೊಂಡು ಅಳದಿರು ಮಾನವ !
ನಿನ್ನೊಳೇ ಇರುವವನು,
ಸ್ಮರಿಸಿದಾಗ ಬರುವವನು.
ಮರೆದಾಗಲೂ ಪೊರೆವವನು
ಸ್ವತಂತ್ರಧೀರ ಸಿದ್ಧೇಶ್ವರನೆಂದು ನಂಬು !

## ೨೦೧

ಹಳರೆಕ್ಕೆ ಕಳಚಿದುವು, ಹೊಸ ರೆಕ್ಕೆ ಕೊನರಿದುವು,
ಹಕ್ಕಿ ಮಾತ್ರ ಮೊದಲಿನದೇ ಅಯ್ಯ ;
ಹಣ್ಣೆಲೆಗಳು ಉದುರಿದುವು, ಹಸಿರೆಲೆಗಳು ಚಿಗುರಿದುವು,
ಮರ ಮಾತ್ರ ಮೊದಲಿನದೇ ಅಯ್ಯ ;
ಹಳ ನೀರು ಹೋಯಿತು, ಹೊಸ ನೀರು ಬಂದಿತು,
ಹಳ್ಳ ಮಾತ್ರ ಮೊದಲಿನದೇ ಅಯ್ಯ ;
ನಿನ್ನ ಹೆಸರಿನಲ್ಲಿ ಹಳ, ಹೊಸ ಗ್ರಂಥ ಪಂಥಗಳೂ,
ವೇದಾಂತ ಸಿದ್ಧಾಂತ ರಾದ್ಧಾಂತಗಳೂ ಹುಟ್ಟಿದುವು–
ನೀನು ಮಾತ್ರ ಮೊದಲಿಗ,
ಮೂಲಿಗರಲ್ಲಿ ಮೂಲಿಗನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೦೨

ಎವರೆಷ್ಟನು ಏರುವ, ಅಂತರಿಕ್ಷಕ್ಕೆ ಹಾರುವ,
        ಬಾಹ್ಯಾಕಾಶವನ್ನು ಮೀರುವ ಭರದಲ್ಲಿ
        ಭೂಮಿಯ ಮೇಲೆ ಬದುಕುವುದೇ ಗೌಣವಾಯಿತೇನಯ್ಯಾ ?
ಕೃಷಿಯ ಯಾಂತ್ರೀಕರಣ, ಕೈಗಾರಿಕೆಯ ಯಾಂತ್ರೀಕರಣ,
        ಮನೆಮನೆಯ ಯಾಂತ್ರೀಕರಣದ ಉಬ್ಬಿನಲ್ಲಿ
        ಮಾನವೀಕರಣಕ್ಕೇ ಮಹತ್ವವಿಲ್ಲದಾಯಿತೇನಯ್ಯಾ ?
ಅಣುವಿನ ವಿಭಜನೆ, ಮನದ ವಿಶ್ಲೇಷಣೆ,
        ಕುಟುಂಬ ಯೋಜನೆಗಳ ಅಬ್ಬರದಲ್ಲಿ
        ಸ್ನೇಹ ಸಂಯೋಜನೆಗೇ ಸಮಯವಿಲ್ಲದಾಯಿತೇನಯ್ಯಾ ?
                ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ರೂಪಗಳ ನಾನಾ ವಾದ ವಿವಾದಗಳಲ್ಲಿ
        ನಿನಗೇ ಸ್ಥಾನವಿಲ್ಲದಾಯಿತೇನಯ್ಯಾ ?

## ೨೦೩

'ನವೀಕರಣ, ನವೀಕರಣ'ವೆಂದು
        ನಲುಗುತ್ತಲಿಹರಯ್ಯ ನವಯುವಕರು ;
'ಮಾ ನವೀಕರಣ, ಮಾ ನವೀಕರಣ'ವೆಂದು
        ಯಾರೆನ್ನುವರು ?
        ನಾನಂತೂ ಎನ್ನಲಾರೆ !
ಆದರೆ, 'ಮಾನವೀಕರಣ, ಮಾನವೀಕರಣ'ವೆಂದು
                        ಎನ್ನದಿರಲಾರೆ !
ನವೀಕರಣದೊಡನೆ
        ಮಾನವೀಕರಣವೂ ಸಾಗಿದರೆ ಸರಿ,
        ಇಲ್ಲದಿದ್ದರೆ ಬಲು ಬರಿ !
ನನ್ನ ದೇಶದಲ್ಲಿ ಇವೆರಡೂ
        ಒಟ್ಟಿಗೆ ನಡೆಯುವಂತೆ ಮಾಡಾ,
        ಸ್ವತಂತ್ರಧೀರ ಸಿದ್ಧೇಶ್ವರಾ !

## ೨೦೪

ಎಗ್ಗ ಉರುಲು ಹಾಕಿಕೊಂಡನೆಂದು
ಹಗ್ಗಕ್ಕೆ ಶಿಕ್ಷೆ ವಿಧಿಸುವುದೆ ?
ಶಲಭ ಸುಟ್ಟುಕೊಂಡು ಸತ್ತಿತೆಂದು
ದೀಪಕ್ಕೆ ದಂಡ ಹಾಕುವುದೆ ?
ಉಂಡುದು ಅಜೀರ್ಣವಾಯಿತೆಂದು
ಬಾಣಸಿಯನ್ನು ಬಂಧಿಸುವುದೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿಯೇ
ನಡೆಯಬಾರದುದೆಲ್ಲ ನಡೆವುದೆಂದು
ನಿನಗೇ ಬಹಿಷ್ಕಾರ ಹಾಕುವುದೆ ?

## ೨೦೫

ಜಲದಲ್ಲಿ ಮೀನು ಚಲಿಸುವುದು
ಬದುಕಲೆಂದಲ್ಲದೆ
ಜಲಕ್ರೀಡೆಗಾಗಿ ಅಲ್ಲವಯ್ಯ ;
ಉಪ್ಪಾರನು ಬುನಾದಿ ತೋಡುವುದು
ಕೂಲಿಗಾಗಿಯಲ್ಲದೆ
ಭೂಗರ್ಭಶೋಧನೆಗಾಗಿ ಅಲ್ಲವಯ್ಯ ;
ಅಂಬಿಗನು ಹರಿಗೋಲು ಹಾಕುವುದು
ಹೊಟ್ಟೆಗಾಗಿಯಲ್ಲದೆ
ನೌಕಾವಿಹಾರಕ್ಕಾಗಿ ಅಲ್ಲವಯ್ಯ ;
ಹಾವಾಡಿಗನು ಹಾವು ಸಾಕುವುದು
ಜೀವನೋಪಾಯಕ್ಕಾಗಿಯಲ್ಲದೆ
ಜೀವದಯೆಗಾಗಿ ಅಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನಿನ್ನ ನೆನೆವುದು
ನನ್ನ ಧನ್ಯತೆಗಾಗಿಯಲ್ಲದೆ
ನಿನ್ನ ಮಾನ್ಯತೆಗಾಗಿ ಅಲ್ಲವಯ್ಯ

!

## ೨೦೬

ಪಾಪಿ ನಡೆದನೆಂದು ತಾಪಗೊಳ್ಳುವುದೆ,
ಪುಣ್ಯವಂತ ನಡೆದನೆಂದು ಪ್ರಮುದಿತವಾಗುವುದೆ ದಾರಿ ?
ಕಾಗೆ ಕುಳಿತಿತೆಂದು ಕೊರಗುವುದೆ,
ಕೋಗಿಲೆ ಕುಳಿತಿತೆಂದು ಹರ್ಷಿಸುವುದೆ ಮರ ?
ಸೂಳೆ ಮಿಂದಳೆಂದು ಸಿಡಿಮಿಡಿಗೊಳ್ಳುವುದೆ,
ಗರತಿ ಮಿಂದಳೆಂದು ಹಿರಿಹಿರಿ ಹಿಗ್ಗುವುದೆ ತೊರೆ ?
ತನ್ನ ಬೆಳಕಿನಲ್ಲಿ ಖೊಟ್ಟಿನೋಟು ಹುಟ್ಟಿತೆಂದು ಸಿಟ್ಟಾಗುವುದೆ,
ಬೈಬಲ್, ಭಗವದ್ಗೀತೆ, ಬಸವ ವಚನ ಓದಿದರೆಂದು
ಉಲ್ಲಾಸಗೊಳ್ಳುವುದೆ ಸೊಡರು ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾವು ನುತಿಸಿದರೆ ನೀನು ಹಿಗ್ಗುವೆ,
ಇಲ್ಲದಿದ್ದರೆ ಕುಗ್ಗುವಿಯೆಂಬುದು
ಕಗ್ಗತನವಯ್ಯ !

## ೨೦೭

ಹಸುವಿಗೆ ಹತ್ತಿಯ ಕಾಳು ತಿನ್ನಿಸುವುದು
ಹೆಚ್ಚು ಹಾಲು ಕೊಡಲೆಂದಲ್ಲದೆ
ಹಸುವಿನ ಮೇಲಣ ಮರುಕದಿಂದಲ್ಲವಯ್ಯ ;
ಹಣ್ಣಿನ ತೋಟಕ್ಕೆ ಬೇಲಿಯಿಕ್ಕುವುದು
ಹಣ್ಣು ಉಳಿಯಲೆಂದಲ್ಲದೆ
ಮರಗಳ ಮೇಲಣ ಮಮತೆಯಿಂದಲ್ಲವಯ್ಯ ;
ಮಾನವರೆಲ್ಲ ಮಾಡುವುದು
ಕೊನೆಯ ವಿಶ್ಲೇಷಣೆಯಲ್ಲಿ
ಬಹುತೇಕ ತಮಗಾಗಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ನಿನ್ನ ನೆನೆವುದು
ನಿನಗಾಗಿಯಲ್ಲ, ನನಗಾಗಿಯಯ್ಯ !

## ೨೦೮

ಹೊಯ್ವ ಕೈ ಬಳಲುವುದಲ್ಲದೆ
ಹೊಡೆವ ಕೊಡತಿ ಬಳಲುವುದೆ ಅಯ್ಯ ?
ಕಾಯ್ವ ಕೃಷಿಕ ಬಳಲುವನಲ್ಲದೆ
ಕೆಯ್ವೊಲ ಬಳಲುವುದೆ ಅಯ್ಯ ?
ನಡೆವ ಕಾಲು ಬಳಲುವುದಲ್ಲದೆ
ನಡೆದ ಹಾದಿ ಬಳಲುವುದೆ ಅಯ್ಯ ?
ಪಡೆವ ಮಾನವ ಬಳಲುವನಲ್ಲದೆ
ಕೊಡುವ ಸ್ವತಂತ್ರಧೀರ ಸಿದ್ಧೇಶ್ವರ ಬಳಲುವನೆ ಅಯ್ಯ ?

## ೨೦೯

ಎಲ್ಲ ನಿನ್ನ ದಾನ,
ಒಪ್ಪಿದೆನಯ್ಯ !
ಆದರೆ, ಈ ನಿನ್ನ ದಾನ ಬೇಡುತ್ತಿದೆ
ಮತ್ತೊಂದು ದಾನವ
ಸಮುದ್ರ ಸ್ನಾನದಂತೆ !
ಈ ನಿನ್ನ ವಾಹನ ಬೇಡುತ್ತಿದೆ
ಮತ್ತೊಂದು ವಾಹನ
ಚಂದ್ರಯಾನ ವಾಹನದಂತೆ !
ಆ ಇನ್ನೊಂದು ದಾನವಾವುದೆಂಬುದನು
ಅರಿತು ಬೇಡಿಕೊಳ್ಳುವ,
ಆ ಇನ್ನೊಂದು ವಾಹನವಾವುದೆಂಬುದನು
ತಿಳಿದು ಕೇಳಿಕೊಳ್ಳುವ
ಕಜ್ಜದಲಿ ಶ್ರದ್ಧೆಯನ್ನು ನೀಡು,
ಕಜ್ಜಕ್ಕೆ ತಕ್ಕ ಬುದ್ಧಿಯನ್ನು ನೀಡು,
ಅಂತ್ಯದಲಿ ಸಿದ್ಧಿಯನ್ನು ನೀಡು !
ಸಿದ್ಧಿ ಸಿಕ್ಕದಿದ್ದರೆ ಹೋಗಲಿ,
ಕಜ್ಜ ಕೊಡುವ
ಮನಶ್ಶುದ್ಧಿಯನ್ನು ನೀಡು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೧೦

ಹೊರಗಿನ ಕತ್ತಲೆ ಚೆದುರಿದಾಗ
ಒಳಗಿನ ಕತ್ತಲೆ,
ಒಳಗಿನ ಕತ್ತಲೆ ಕರಗಿದಾಗ
ಹೊರಗಿನ ಕತ್ತಲೆ !
ಒಳ–ಹೊರಗು ಒಮ್ಮೆಗೇ ಬೆಳಗುವ ಕಾಲ
ಬರಲಾರದೇನಯ್ಯ ಒಮ್ಮೆಯಾದರೂ ?
ತನುವಿಗೆ ಹಿತವೆನಿಸಿದಾಗ
ಮನದಲ್ಲೇನೋ ಉದ್ವಿಗ್ನತೆ,
ಮನಕ್ಕೆ ನೆಮ್ಮದಿಯೆನಿಸಿದಾಗ
ತನುವಿಗೆಂಥದೋ ಅಸ್ವಸ್ಥತೆ !
ತನುಮನಗಳ ಸಮಸುಖ
ಸಾಧ್ಯವಾಗದೇನಯ್ಯಾ
ಇನ್ನಾದರೂ ?
ಒಂದಿದ್ದಾಗ ಇನ್ನೊಂದಿಲ್ಲದ ವ್ಯಥೆ,
ಇದ್ದಾಗೊಂದು ವ್ಯಥೆ,
ಇಲ್ಲದಿದ್ದಾಗೊಂದು ವ್ಯಥೆ
ಇದೇ ಜೀವನದ ಕಥೆಯೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೧೧

ಹಕ್ಕಿಯ ಹಾರಾಟ
ಪಕ್ಕದ ಬಲದಿಂದಲೋ ಪ್ರಾಣದ ಬಲದಿಂದಲೊ ?
ಬೀಜದ ಮೊಳೆತ
ಭೂಮಿಯ ಬಲದಿಂದಲೋ ನೀರಿನ ಬಲದಿಂದಲೊ ?
ನೋಡುವವನ ನೋಟ
ಕಣ್ಣಿನ ಬಲದಿಂದಲೋ ಬೆಳಕಿನ ಬಲದಿಂದಲೊ ?
ಬಾಳಿನ ಸಾರ್ಥಕತೆ
ಬುದ್ಧಿಯ ಬಲದಿಂದಲೋ ಭಾವನೆಯ ಬಲದಿಂದಲೊ ?
ಎರಡರ ಬಲದಿಂದಲೆಂದಾತ
ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ !

## ೨೧೨

ಲೋಕದಲ್ಲಿ ಜ್ಞಾನ ವಿಜ್ಞಾನ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ಅಜ್ಞಾನವೂ ಬೆಳೆಯುತ್ತಲಿದೆಯಯ್ಯಾ !
ಜಗದಲ್ಲಿ ಶಕ್ತಿ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ಅಶಕ್ತಿಯೂ ಬೆಳೆಯುತ್ತಲಿದೆಯಯ್ಯಾ !
ಪ್ರಪಂಚದಲ್ಲಿ ಐಶ್ವರ್ಯ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ದಾರಿದ್ರ್ಯವೂ ಬೆಳೆಯುತ್ತಲಿದೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕ್ಷಮೆ ಬೆಳೆಯುತ್ತಿರುವ ಪ್ರಮಾಣದಲ್ಲಿಯೇ
ನನ್ನ ತಪ್ಪುಗಳೂ ಬೆಳೆಯುತ್ತಿವೆಯಯ್ಯಾ !

## ೨೧೩

ವಿಜ್ಞಾನವನ್ನೇ ಅಧರಾರಣಿ ಮಾಡಿ
ತತ್ತ್ವಜ್ಞಾನವನ್ನೇ ಉತ್ತರಾರಣಿ ಮಾಡಿ
ಅಂತರ್ಮಂಥನದ ಅಭ್ಯಾಸದಿಂದ
ಹೊತ್ತಿಸಲು ಕಲಿಸಯ್ಯ ಚಿದಗ್ನಿಯ
ಆ ಅಗ್ನಿಗೇ,
"ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್
ವಿಶ್ವಾನಿ ದೇವ ವಯುನಾನಿ ವಿದ್ವಾನ್
ಯುಯೋಧ್ಯಸ್ಮಜ್ಜುಹುರಾಣಮೇನೋ
ಭೂಮಿಷ್ಠಾಂ ತೇ ನಯ ಉಕ್ತಿಂ ವಿಧೇಯ"
ಎಂದು ಪ್ರಾರ್ಥಿಸುವೆ !
ಆ ಅಗ್ನಿಯಲ್ಲಿ ಸುಡಲಿ ಅಂಧ ಶ್ರದ್ಧೆಗಳೆಲ್ಲ ;
ಆ ಅಗ್ನಿಯಿಂದ ಬರಲಿ ಶುದ್ಧಿ ಸಿದ್ಧಿಗಳೆಲ್ಲ ;
ಆ ಅಗ್ನಿಯಿಂದಲೇ ಅನುಭವದಡುಗೆಯ ಮಾಡಿ
ಅದನುಂಡು, ಉಣ್ಣಿಸಿ
ನಿಜಾನಂದವ ಪಡೆಯಲು ಕಲಿಸಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೧೪

ಗರಿ ನನಗೆ ಹೊರೆಯೆಂದರೆ
ಹಾರಬಹುದೆ ಹಕ್ಕಿ ?
ಕತ್ತಲೆ ನನಗೆ ಕಹಿಯೆಂದರೆ
ಮೂಡಬಲ್ಲುದೆ ಚುಕ್ಕಿ ?
ಕೇಶ ನನಗೆ ಭಾರವೆಂದರೆ
ಹೆಣೆಯಬಹುದೆ ಹೆಳಲ ?
ಊದುವುದು ನನಗೆ ತಲೆನೋವೆಂದರೆ
ನುಡಿಸಬಹುದೆ ಕೊಳಲ ?
ಅಗಿಯುವುದು ನನಗೆ ಆಗದೆಂದರೆ
ತಿನ್ನಬಹುದೆ ರೊಟ್ಟಿಯ ?
ಅರಲು ನನಗೆ ಸೇರದೆಂದರೆ
ಮಾಡಬಹುದೆ ಮಿಟ್ಟಿಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಾಧನೆ ನನಗೆ ನೀಗದೆಂದರೆ
ಪಡೆಯಬಹುದೆ ಸಿದ್ಧಿಯ ?

## ೨೧೫

ಜೀವನದ ವನದಲ್ಲಿ ಪರಿಣತಿಯ ಪುಷ್ಪ ಅರಳಲಯ್ಯ ;
ಪರಿಣತಿಯ ಪುಷ್ಪದಿಂದ ಪ್ರತಿಭೆಯ ಪರಿಮಳ ಹೊರಡಲಯ್ಯ ;
ಪ್ರತಿಭೆಯ ಸ್ಫಟಿಕದ ಘಟದಲ್ಲಿ
ಚಾರಿತ್ರ್ಯ–ಜ್ಯೋತಿ ಪ್ರಕಾಶಿಸಲಯ್ಯ ;
ಸಚ್ಚಾರಿತ್ರ್ಯದ ಸಿಂಪಿನಲ್ಲಿ ಸದ್ಧ್ಯೇಯರತಿಯ
ಮುತ್ತು ಮೂಡಲಯ್ಯ ;
ಸದ್ಧ್ಯೇಯರತಿಯ ಕೆಚ್ಚಲಿನಿಂದ
ಸಾಧನೆಯ ಹಾಲು ಸುರಿಯಲಯ್ಯ ;
ಸಾಧನೆಯ ಹಾಲು ತ್ರಿವಿಧ ತಪದಲ್ಲಿ ಕಾಯ್ದು
ಹಮ್ಮಳಿವಿನ ಹೆಪ್ಪಿನಿಂದ ಹೆತ್ತು,
ಸ್ವಾನುಭವದ ಕಡೆಗೋಲಿನಿಂದ ಮಥಿತವಾಗಿ
ಸಿದ್ಧಿಯ ಬೆಣ್ಣೆಯಾಗಿ ಹೊರಹೊಮ್ಮಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೧೬

ಜೋಳಿಗೆಯ ಹಿಡಿದುಕೊಂಡೇ ಹುಟ್ಟಿದೆ –
ಇಂದಿಗೂ ಜೋಳಿಗೆ ತಪ್ಪಿಲ್ಲ,
ಜೋಳಿಗೆಯದೇನೂ ತಪ್ಪಿಲ್ಲ !
ಅರಿವೆಯ ಜೋಳಿಗೆ ಹೋಗಿ
ಅರಿವಿನ ಜೋಳಿಗೆ ಬಂದಿದೆ ;
ತುಂಬುವ ಜೋಳಿಗೆ ಹೋಗಿ
ತುಂಬದ ಜೋಳಿಗೆ ಬಂದಿದೆ !
ಈ ಜೋಳಿಗೆಯ ಹಿಡಿದು ತಿರುಗಿದೆ,
ತಿರೆಯ ಅರಿವಿನ ದೊರೆಗಳ ಮನೆ ಮನೆಗೆ ;
ಒಡ್ಡಿದೆ ಬರಿ ಜೋಳಿಗೆಯ ಅವರೆದುರಿಗೆ !
ನೀಡಿದರವರು ಬೇಡಿದುದ, ಬೇಡದುದ !
ಓಡಿ ಬಂದೆ ಮನೆಗೆ ನೋಡುವಾತುರದಿಂದ,
ತೆರೆದೆ ಜೋಳಿಗೆ ಉಕ್ಕುವ ತವಕದಿಂದ !
ನೋಡಿದೆ...ಕೋಡಿದೆ...ಬಾಡಿದೆ !
ಬರಿದೋ ಬರಿದು ಜೋಳಿಗೆ !
ಆಗ ತಿಳಿಯಿತು,
ಇದು ಹರುಕು ಜೋಳಿಗೆಯೆಂಬುದು !
ಮೊದಲೇ ತುಂಬದ ಜೋಳಿಗೆ,
ಸಾಲದುದಕ್ಕೆ ತೂತು ಬಿದ್ದ ಜೋಳಿಗೆ !
ಹೊಲಿದುಕೊಳ್ಳಬೇಕೀ ಹರಿದ ಜೋಳಿಗೆಯನ್ನು !
ಹೊಲಿದುಕೊಳ್ಳದೆ ಹಲವರ ಬೇಡಿ ಫಲವೇನು ?
ಅವರು ನೀಡಿ ಫಲವೇನು ?
ಇದನು ಹೊಲಿದುಕೊಳ್ಳಲು
ಶ್ರದ್ಧೆಯ ಸೂಜಿ
ಶುದ್ಧಿಯ ದಾರವ ನೀಡಾ,
ಎಲ್ಲ ನೀಡುವ ಸ್ವತಂತ್ರಧೀರ ಸಿದ್ಧೇಶ್ವರಾ !

## ೨೧೭

ನಾಟಕದ ಸೀತೆಯೇ ನಿಜವಾದ ಸೀತೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಬಾಳು !
ತೆರೆಯ ಮೇಲಿನ ತವಸಿಯೇ ವಿರತಿಯ ಒರತೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಬದುಕು !
ಸ್ವತಂತ್ರಧೀರ ಸಿದ್ಧೇಶ್ವರಾ,
ನೆರಳೇ ವಸ್ತು, ಕನಸೇ ನನಸು,
ಹಗ್ಗವೇ ಹಾವು, ಮಾತೇ ಕೃತಿ,
ಹೊಳೆದದ್ದೆ ಚಿನ್ನ, ಮಿಂಚಿದ್ದೆ ರನ್ನ,
ಬೆಳ್ಳಗಿದ್ದುದೆ ಹಾಲು, ಬಯಕೆಯೇ ಪೂರೈಕೆಯೆಂದು
ಭ್ರಮಿಸಿದಂತೆ ಆಯಿತ್ತಯ್ಯ ಎನ್ನ ಇರವು !

## ೨೧೮

ಹಿಂದೆ ಪ್ರಾಯದ ಪೆಂಪೆ ಪೆಂಪಾಗಿದ್ದಿತು,
ಇಂದು ಅಭಿಪ್ರಾಯದ ಪೆಂಪೆ, ಪೆಂಪಾಗಿದೆಯಯ್ಯ !
'ನನ್ನ ಅಭಿಪ್ರಾಯದಲ್ಲಿ,' ಎಂದೇ ಮಾತಿಗಾರಂಭ,
ಮುಂದೆ ನಡೆವುದೆಲ್ಲ ಮಾತಿನ ವ್ಯಾಪಾರ, ಮಾತಿನ ಆರಂಭ !
ಮಾತನೆ ಬಿತ್ತಿ, ಮಾತನೆ ಬೆಳೆದು,
ಮಾತಿನ ಎತ್ತುಗಳ ಕಟ್ಟಿ,
ಮಾತಿನ ತೆನೆಗಳ ತುಳಿಸಿ,
ಮಾತನೆ ತೂರಿ, ಮಾತಿನ ರಾಶಿ ಮಾಡಿಟ್ಟುಕೊಂಡರೆ
ಯಾತಕ್ಕೆ ಬರುವುದಯ್ಯ ?
ಕೃತಿಗೆ ಮಾತಿನ ಕ್ಲೊರೋಫಾರ್ಮ್
ಕೊಡುವುದು ಸಾಕಿನ್ನು,
ಮಾತಿಗೆ ಕೃತಿಯ ಆ್ಯನೆಸ್ತೀಸಿಯಾ
ಕೊಡಲು ಕಲಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೧೯

ವ್ಯಾಸಂಗಕ್ಕೆ ಸಮಯವಿಲ್ಲ, ಸತ್ಸಂಗಕ್ಕೆ ಸಮಯವಿಲ್ಲ,
ನಾಡು, ನುಡಿ, ನಾಡಿಗರ ಸೇವೆಗೆ ಸಮಯವಿಲ್ಲ !
ಇನ್ನುಳಿದುದಕ್ಕೆ ಎಂತಾದರೂ ಸಮಯ ಸಿಕ್ಕುವುದಯ್ಯ !
ಜೂಜಿಗೆ, ಜಿದ್ದಿಗೆ, ಚಾಡಿಗೆ, ಕೇಡಿಗೆ, ನಿಂದೆಗೆ, ಸಿಂದಿಗೆ–
ಎಲ್ಲ ದುರ್ವ್ಯಸನ ದುರ್ವ್ಯಾಪಾರಗಳಿಗೂ ಸಮಯವಿದೆ,
ನಿನ್ನ ಮಕ್ಕಳಿಗೆ ಆಗಿ, ಒಳಿತಿಗೆ ಬಾಗಿ,
ಸತ್ಕರ್ಮದಲ್ಲಿ ಮಾಗಿ
ನಿನ್ನೆಡೆಗೆ ಸಾಗಲು ಸಮಯವಿಲ್ಲವಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೨೦

ಸಭೆ, ಸಮಿತಿ, ಸಂಘ, ಸಮ್ಮೇಳನ, ಸಮಾರಂಭಗಳಲ್ಲಿ ಸೇರಿ ನೋಡಿದೆ,
ಒಂಟಿತನದ ಅನುಭವ ಅಂಟಿತ್ತು ಅಲ್ಲಿಯೂ ;
ಉಪಾಹಾರಗೃಹ, ನಾಟ್ಯನಿಲಯ, ಚಿತ್ರಮಂದಿರಗಳಿಗೆ ಹೋಗಿ ನೋಡಿದೆ,
ಅನಾಥ ಪ್ರಜ್ಞೆ ಬೆನ್ನಟ್ಟಿ ಬಂದಿತ್ತು ಅಲ್ಲಿಗೂ ;
ಮಠ, ಮಂದಿರ, ಆಶ್ರಮ, ಧ್ಯಾನಧಾಮಗಳಿಗೆ ಎಡತಾಕಿ ನೋಡಿದೆ,
ಭಗ್ನ–ವ್ಯಗ್ರ–ವಿಭಕ್ತ ವ್ಯಕ್ತಿತ್ವ ಕಾಡಿತ್ತು ಅಲ್ಲಿಯೂ ;
ಸಂತೆ, ಪೇಟೆ, ಪ್ರದರ್ಶನಗಳಲ್ಲಿ ಅಲೆದಾಡಿ ನೋಡಿದೆ,
ಏನನ್ನೋ ಕಳೆದುಕೊಂಡ ಅನುಭವ ಪೀಡಿಸಿತ್ತು ಅಲ್ಲಿಯೂ ;
ವಾಚನಾಲಯ, ವ್ಯಾಸಂಗಗೋಷ್ಠಿ, ವಿಚಾರ ಸಂಕಿರಣಗಳಿಗೆ ಹೋಗಿ ನೋಡಿದೆ,
ಸಕಲ ಸಂದೇಹಗಳ ಸಂದೋಹ ನೆರೆದಿತ್ತು ಅಲ್ಲಿಯೂ ;
ಕಾರ್ಯಾಲಯ, ಕಾರ್ಯಾಗಾರ, ಕ್ಲಬ್ಬುಗಳಲ್ಲಿ ಸುತ್ತಾಡಿ ನೋಡಿದೆ,
ಆತ್ಮಹಂತಕ ಯಾಂತ್ರಿಕತೆ ಬಾಧಿಸಿತ್ತು ಅಲ್ಲಿಯೂ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನೀಡಿದುದು ಸತ್ಯಸುಂದರ ಶಿವಗಳನ್ನು,
ನಾನು ಪಡೆದುದು ಅವುಗಳ ಶವಗಳನ್ನು !
ಈ ಭವವಾದರೂ ಸತ್ಯಸುಂದರ ಶಿವ–ಸಂಭವವಾಗುವಂತೆ
ಕರುಣಿಸಾ ; ಕರುಣೆಗಳರಸಾ !

## ೨೨೧

'ವಿಭಕ್ತದಲ್ಲಿಯೂ ಅವಿಭಕ್ತವನ್ನು ಅರಸು,' ಎಂದೆ –
ಅವಿಭಕ್ತದಲ್ಲಿಯೂ ವಿಭಕ್ತವನ್ನು ಅರಸುತ್ತ ನಡೆದಿದ್ದೇನೆ ;
'ದಾನವನಲ್ಲಿಯೂ ಮಾನವನನ್ನು ಕಾಣು,' ಎಂದೆ–
ಮಾನವನಲ್ಲಿಯೂ ದಾನವನನ್ನೇ ಹುಡುಕುತ್ತ ಹೊರಟಿದ್ದೇನೆ, ;
'ಕಾಮದೊಳಗಣ ಪ್ರೇಮವನ್ನು ಪಡೆ,' ಎಂದೆ–
ಪ್ರೇಮದಲ್ಲಿಯೂ ಕಾಮವನ್ನೇ ಕಾಣುತ್ತ ನಡೆದಿದ್ದೇನೆ ;
'ಈ ಲೋಕದಲ್ಲಿಯೇ ನಾಕವನ್ನು ನಿರ್ಮಿಸು,' ಎಂದೆ–
ನಾಕವನ್ನೇ ನರಕವಾಗಿಸುತ್ತ ನಡೆದಿದ್ದೇನೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
'ಲೇಸೆನಿಸಿಕೊಂಡು ಮೂರು ದಿನ ಬದುಕು,' ಎಂದೆ–
ಲೇಸಿಲ್ಲದೆ ನೂರು ವರ್ಷ ಬದುಕಲು ಹವಣಿಸುತ್ತಿದ್ದೇನೆ !

## ೨೨೨

ಈ ಶರೀರದಲ್ಲಿ ಎಂಥೆಂಥ ಶಕ್ತಿ ಸಾಗರಗಳನ್ನಿರಿಸಿಹೆಯಯ್ಯ !
ಅಲ್ಪ ಸಂತೋಷಿಯಾಗಿ ಅತ್ಯಲ್ಪದಿಂದಲೇ ತೃಪ್ತನಾದೆ ನಾನು !
ಇರುವ ಶಕ್ತಿ ಕೇಂದ್ರಗಳನ್ನೆಲ್ಲ ಸಂಪೂರ್ಣ ಉಪಯೋಗಿಸುವುದಿರಲಿ,
ಸಾಸಿರದಲ್ಲೊಂದರ ಸಾಸಿರ ಪಾಲಿನಲ್ಲಿ ಒಂದನ್ನು ಉಪಯೋಗಿಸಿಕೊಂಡಿದ್ದರೂ
ಅತಿಮಾನವನಾಗುತ್ತಿದ್ದೆ ನಾನು !
ಅಲ್ಪ ಸಂತೋಷವೇ ಆದರ್ಶವಾದರೆ
ಅತಿಮಾನವತೆಯ ಪ್ರಣಾಲಿಕೆ ಉನ್ಮಾದದ ಬಡಬಡಿಕೆ ;
ಒರತೆಗೆ ಬಲೆಯೊಡ್ಡಿ ತಿಮಿಂಗಿಲವ ಹಿಡಿಯಲಾದೀತೇನಯ್ಯ?
ಸುಣ್ಣದ ಕಲ್ಲು ಸಂಗ್ರಹಿಸಿ ಸೇತುಬಂಧ ಗೈಯಲಾದೀತೇನಯ್ಯ ?
ರವದಿಯನ್ನೇರಿ ಜಲಧಿಯನ್ನು ದಾಟಲಾದೀತೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೨೩

ಮಗು ಮಗುವಾಗಿಯೇ ಉಳಿಯಲೆನ್ನುತ್ತಾಳೆ ತಾಯಿ,
ಮಗು ಬೆಳೆದು ಯುವಕನಾಗುತ್ತದೆ ;
ಯುವಕ ಪತಿ ಯುವಕನಾಗಿಯೇ ಉಳಿಯಲೆನ್ನುತ್ತಾಳೆ ಸತಿ,
ಯುವಕ ಬೆಳೆದು ಮುದುಕನಾಗುತ್ತಾನೆ ;
'ಮುದುಕನಾದರೇನು, ಬದುಕಬೇಕು ಇನ್ನೂ' ಎನ್ನುತ್ತಾನೆ ಮುದುಕ,
ಮುದುಕ ಮಡಿದು ಕುಣಪವಾಗುತ್ತಾನೆ !
ಯಾರನ್ನೂ ಏನನ್ನೂ ಇರುವಂತೆ ಉಳಿಯಗೊಡುವುದಿಲ್ಲ ನೀನು !
ನೀನು ವಿವರ್ತನಲೋಲ, ಪರಿವರ್ತನಶೀಲ !
ಯಾವ ಉದ್ದೇಶಕ್ಕಾಗಿ ಈ ರೂಪಾಂತರ,
ಸ್ಥಿತ್ಯಂತರ, ಅವಸ್ಥಾಂತರಗಳಯ್ಯ ?
ನಿರುದ್ದೇಶವೆ ಉದ್ದೇಶವೆ, ಗುರಿಯಿಲ್ಲದಿಹುದೆ ಗುರಿಯೆ ?
ಇರಲಾರದಯ್ಯ, ಇಂತಿರಲಾರದಯ್ಯ !
ಗುರುವಾಗಿ ಗುರಿಯ ತೋರು,
ಚರನಾಗಿ ಗುರಿಯತ್ತ ಸಾಗಲು ಚೇತನ ನೀಡು,
ಹರನಾಗಿ, ತಮೋಹರನಾಗಿ, ಶಿವೇತರಹರನಾಗಿ,
ಬೆಳಕಿನ ಬಾಳ, ಸಾವಲ್ಲದ ಸಾವ ಕರುಣಿಸು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೨೪

ನಿಮಿಷ ನಿಮಿಷವೂ ನಿನಗೆ ನಿಕಷ, ನಿನ್ನ ದೌರ್ಬಲ್ಯದಲ್ಲಿ ಅದಕ್ಕೆ ಅವಕಾಶ !
ಒಂದು ನಿಮಿಷವೂ ಅಲಕ್ಷ್ಯದಿಂದಿರಬೇಡ,
ಲಕ್ಷ ಕೆಲಸವಿದ್ದರೂ ಲಕ್ಷ್ಯದಲ್ಲಿ ಲಕ್ಷ್ಯವಿಲ್ಲದಿರಬೇಡ !
ನಿಮಿಷದ ಅಲಕ್ಷ್ಯ ವರುಷಗಳ ಸಾಧನೆಗೆ ಸಮಾಧಿಯಾದೀತು ;
ಹಿಂದಕ್ಕೆಳೆಯುವ ಉಪಾಧಿಯಾದೀತು !
ಸ್ವತಂತ್ರಧೀರ ಸಿದ್ಧೇಶ್ವರನ ಆಣೆ ನಿನಗೆ–
ಚಣಚಣವೂ ಪಣತೊಟ್ಟು ಮುಂದುವರಿ,
ಸದಾ ಕಣ್ಣೆದುರಿಗಿರಲಿ ಗುರಿ !

## ೨೨೫

ಹೂಗಳ ಹಾಸವನ್ನು ಕಂಡು ಅಳು ಬರುತ್ತದೆನಗೆ,
ಇಬ್ಬನಿಯ ಕಂಬನಿಗಳನ್ನು ಕಂಡು ನಗು ಬರುತ್ತದೆನಗೆ !
ವಿಚಿತ್ರ ವ್ಯಕ್ತಿಯಾಗಿಹೆನಯ್ಯ, ನಾನು !
ನಿನ್ನ ಹೊಗಳುವವರನ್ನು ಕಂಡರೆ ಅಳು ಬರುತ್ತದೆ,
ನಿನ್ನ ತೆಗಳುವವರನ್ನು ಕಂಡರೆ ನಗೆ ಬರುತ್ತದೆ !
ವಿಲಕ್ಷಣ ಪ್ರಾಣಿಯಾಗಿಹೆನಯ್ಯ, ನಾನು !
ನನ್ನ ಬಗ್ಗೆ ನನಗೇ ಅಳು ಬರುತ್ತಿದೆ,
ನನ್ನ ಬಗ್ಗೆ ನನಗೇ ನಗು ಬರುತ್ತಿದೆ,
ನನಗೇ ಸಮಸ್ಯೆಯಾಗಿರುವೆನಯ್ಯ, ನಾನು !
ನನಗೂ ಸಮಸ್ಯೆಯಾಗದೆ, ನಿನಗೂ ಸಮಸ್ಯೆಯಾಗದೆ,
ಸರ್ವರಿಗೂ ಸಮ್ಮುದಪ್ರದ ಸಹವರ್ತಿಯನ್ನಾಗಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೨೬

ಸದ್ಯಸ್ತೃಪ್ತಿಯೇ ಗುರಿಯಾದರೆ ಸಣ್ಣ ಸಾಧನೆಗಳೇ ಗತಿಯಯ್ಯ ;
ಕ್ಷಿಪ್ರ ಫಲಾಕಾಂಕ್ಷೆಯೇ ಗಮ್ಯವಾದರೆ
ಚಪ್ಪರ ಬದನೆಯನ್ನೇ ಚಪ್ಪರಿಸಬೇಕಯ್ಯ ;
ನವಮಾಸಕ್ಕೆ ಮೊದಲೇ ಮಗುವ ಬೇಡಿದರೆ
ಹಲಿವುಳಿಕೆಯೇ ಗಳಿಕೆಯಯ್ಯ ;
ಮಿಡಿಯ ಹರಿದು ಅಡೆಗೆ ಹಾಕಿದರೆ
ಪಡೆವುದು ಹಣ್ಣಲ್ಲ, ಕಾಯಿಯೂ ಅಲ್ಲವಯ್ಯ ;
ಬಲಿವ ಮುನ್ನ ಭತ್ತ ಕುಟ್ಟಿದರೆ
ಹಿಟ್ಟೂ ಇಲ್ಲ, ಹೊಟ್ಟೂ ಇಲ್ಲವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಧಿಡೀರ್ ಗತಿಯ ಮತಿಯ ಬಿಡಿಸಿ
ದೃಢ ನಿಷ್ಠೆಯ ನೀಡಾ !
ಮೂರುಸಲ ಬನ್ನಿಯ ಮರ ಸುತ್ತಿ
ಹೊಟ್ಟೆ ಮುಟ್ಟಿ ನೋಡಿಕೊಂಡ
ಬಂಜೆಯಂತಾಗದಿರಲಯ್ಯ ನನ್ನ ಸಾಧನೆ !

## ೨೨೭

ತಾನು ಮಧುಹೀರಿದ ಪುಷ್ಪವು
ಫಲಿಸುವಂತೆ ಮಾಡಿ ಹೋಗುತ್ತದೆ ಮಧುಮಕ್ಷಿಕ ;
ತಾನು ಕಚ್ಚಿದ ಶರೀರದ
ಮಹಾರೋಗ ಹೋಗುವಂತೆ ಮಾಡುತ್ತದೆ ತಕ್ಷಕ ;
ತಾನು ಸಾಕಿದ ಮರಿಯ
ಕೋಗಿಲೆಯಾಗಿಸುತ್ತದೆ ಕಾಗೆ ;
ತನ್ನ ನಂಬಿದ ಕ್ರೀಡೆಯ
ದುಂಬಿಯಾಗಿಸುತ್ತದೆ ತುಂಬಿ ;
ತಾನು ಸೇರಿದ ಮಣ್ಣಿನ
ಕಸುವು ಹೆಚ್ಚಿಸುತ್ತದೆ ಎರೆಹುಳ !
ಮತಿವಂತ ಮಾನವನಾಗಿ ಹುಟ್ಟಿ ನಾನು
ಪಥಬಿಟ್ಟು ಗತಿಗೆಟ್ಟು ಹೋದರೆ
ಹಾವು ಹುಳುಗಳಿಗಿಂತ ಹೇಯನಲ್ಲವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೨೮

ಚಂದನದ ಅಂದಣದಲ್ಲಿ ಹೆಂಡದ ಹರವಿಯನ್ನಿಟ್ಟು
ಮೆರೆಸಿದಂತಾಯಿತ್ತಯ್ಯ ಎನ್ನ ಬಾಳು !
ಬೆಳ್ಳಿಯ ಬಟ್ಟಲದಲ್ಲಿ ಉಳ್ಳಿಯ ರಸ ತುಂಬಿ
ಕುಡಿದಂತಾಯಿತ್ತಯ್ಯ, ಎನ್ನ ಬದುಕು !
ನಿರ್ಜನ ವಿಪಿನಮಧ್ಯದಲ್ಲಿ ಗಂಧದೆಣ್ಣೆಯ ದೀಪ
ಉರಿಸಿದಂತಾಯಿತ್ತಯ್ಯ ಎನ್ನ ಇರವು !
ಸ್ವತಂತ್ರಧೀರ ಸಿದ್ಧೇಶ್ವರಾ,
ಶವಕ್ಕೆ ಮಾಡಿದ ಶೃಂಗಾರವಾದಂತಾಯಿತ್ತಯ್ಯ ಎನ್ನ ಜೀವನ !

## ೨೨೯

ಇದುವರೆಗಿನ ಬಾಳು ಹಾಳಾಯಿತೆಂದು ಹಳಹಳಿಸುತ್ತ
ಇನ್ನುಳಿದ ಬಾಳನ್ನೂ ಹಾಳುಮಾಡಿಕೊಳ್ಳೆನಯ್ಯಾ !
ಇದುವರೆಗಿನ ಹಾರೈಕೆಗಳು ಪೂರೈಕೆಗಳಾಗಲಿಲ್ಲವೆಂದು
ಮುಂದೆ ಹಾರೈಸುವುದನ್ನೇ ತೊರೆದು ಬಿಡೆನಯ್ಯಾ !
ಹಾಳಾದ ಬಾಳಿನ ಹಾಳು ಮಣ್ಣಿನಲ್ಲಿಯೇ
ಹಣ್ಣಾಗದ ಹಾರೈಕೆಗಳ ಗೊರಟೆಗಳನ್ನೂರಿ
ಕೃತಕೃತ್ಯತೆಯ ಕೈತೋಟವನ್ನು ಬೆಳೆಸುವೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೩೦

ಪರಿಪೂರ್ಣ ನಾನಾಗಬಲ್ಲನೆ ?
ಪರಿಪೂರ್ಣ ನೀನೊಬ್ಬನೇ, ಅಯ್ಯ ;
ಪರಿಪೂರ್ಣನಾಗದಿದ್ದರೂ
ಪರಿಪಕ್ವನ ಮಾಡಯ್ಯ, ತಂದೆ !
ನಿನ್ನ ನೆಲ, ಜಲ, ಗಾಳಿ, ಧೂಳಿ, ಬಿಸಿಲು ಮಳೆಗಳಲ್ಲಿ ಮಾಗಿಸಿ
ಪರಿಪಕ್ವ ಫಲವಾಗಿಸಯ್ಯ, ಈ ಕಸುಗಾಯಿಯನ್ನು !
ಕಸುಕು ಉಳಿಯದಂತೆ, ರಸ ಹುಳಿಯದಂತೆ,
ಸಿಪ್ಪೆ ಕೊಳೆಯದಂತೆ, ಹುಳ ಮೊಳೆಯದಂತೆ,
ತಿಂದವರು ತೊಂದರೆಗೊಳಗಾಗದಂತೆ
ಹದುಳದ ಕಳಿತ ಹಣ್ಣಾಗಿಸಯ್ಯ ಈ ಜೀವದ ಕಾಯಿಯನ್ನು !
ಒತ್ತಿ ಹಣ್ಣು ಮಾಡುವುದು ಬೇಡ,
ತಪನವಿತ್ತು ಹಣ್ಣು ಮಾಡಿದನು ;
ಹಣ್ಣಾದ ಮೇಲೆ ನೀನಾದರೂ ಸೇವಿಸು,
ನಿನ್ನವರಿಗಾದರೂ ಕೊಡು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೩೧

ಎಲ್ಲ ನಿನ್ನನ್ನು ಅವಲಂಬಿಸಿದೆಯೆಂದು ನಂಬಿ ನಡೆಯುವೆ,
ಎಲ್ಲ ನನ್ನನ್ನು ಅವಲಂಬಿಸಿದೆಯೆಂದು ನಂಬಿ ದುಡಿಯುವೆ ;
ಮೊಳೆಸುವವ, ಬೆಳೆಸುವವ ನೀನೇ ಎಂದು ನಂಬಿ ಬಿತ್ತುವೆ,
ಒಕ್ಕುವವ, ಪಡೆಯುವವ ನಾನೇ ಎಂದು ನಂಬಿ ಸಾಗು ಮಾಡುವೆ ;
'ಈಗಲೋ, ಇನ್ನಾವಾಗಲೋ ಸಾವು' ಎಂದು ಬಾಗುವೆ ನಿನ್ನಡಿಗೆ,
ನಾನು ಚಿರಂಜೀವಿಯೆಂಬಂತೆ ಸದಾಸಿದ್ಧನಿರುವೆ ಬಾಳ ಗರಡಿಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೇ ಎಲ್ಲ, ನಿನ್ನಿಂದಲೇ ಎಲ್ಲ–ಎಂದು ನಂಬಿ ಬದುಕುವೆ,
ನನ್ನಲ್ಲಿ ನೀನು, ನಿನ್ನಲ್ಲಿ ನಾನು–ಎಂದು ನಂಬಿ ಬೆದಕುವೆ !

## ೨೩೨

ದಿನದಿನವೂ ಹಲವು ಹನ್ನೆರಡು ಪರಾಭವಗಳನ್ನು ಅನುಭವಿಸಿಯೂ
ಅಜಿತ ನಾನಯ್ಯ, ಅಜೇಯ ನಾನಯ್ಯ !
ದಿನದಿನವೂ ಹಾನಿ ಗ್ಲಾನಿಗಳಿಗೆ ಒಳಗಾಗಿಯೂ
ಅವ್ಯಯ ನಾನಯ್ಯ, ಅಕ್ಷಯ ನಾನಯ್ಯ !
ದಿನದಿನವೂ ವಯಸ್ಸಾಗುತ್ತ ನಡೆದಿದ್ದರೂ
ಅಜರ ನಾನಯ್ಯ, ಅಕ್ಷರ ನಾನಯ್ಯ !
ನಿನ್ನ ಕಡಲಿನ ಮೇಲೆ ನಾನು
ತೋರ್ಕೆಯ ತೆರೆಯಾಗಿ ಮೂಡಿ,
ಸುತ್ತಿ ಸುಳಿದು, ಚಲಿಸಿ ಅಲೆದು,
ಹೊಯ್ದಾಡಿ, ಹಾಯ್ದಾಡಿ, ಹೊಡೆದಾಡಿ,
ಹೊಡಕರಿಸಿ ಮರೆಯಾಗಬಲ್ಲೆನಾಗಲಿ
ಒರೆಸಿ ಹೋಗೆನಯ್ಯ ನಶಿಸಿ ಹೋಗೆನಯ್ಯ–
ಸ್ವತಂತ್ರಧೀರ ಸಿದ್ದೇಶ್ವರಾ !

## ೨೩೩

ತುಕ್ಕು ಹಿಡಿದು ಉಳಿವುದಕ್ಕಿಂತ
ತಿಕ್ಕಿ ಬಳಸಿ ಅಳಿವುದು ಮೇಲಯ್ಯ ;
ಹುಳು ಹತ್ತಿ ಕೊಳೆವುದಕ್ಕಿಂತ
ಮಣ್ಣ ಬೆರೆತು ಮೊಳೆವುದು ಮೇಲಯ್ಯ ;
ಇಟ್ಟು, ನುಸಿ ಮುಟ್ಟಿ ನಶಿಸುವುದಕ್ಕಿಂತ
ತೊಟ್ಟು ಉಟ್ಟು ಹರಿಯುವುದು ಮೇಲಯ್ಯ ;
ಉಂಡು ಮಲಗಿ ಬೊಜ್ಜು ಬೆಳೆಸುವುದಕ್ಕಿಂತ
ಮಾಡಿ ಮಾಡಿ ಮಡಿವುದು ಮೇಲಯ್ಯ ;
ಓದಿ, ಬೋಧಿಸಿ, ವಾದಿಸುವುದಕ್ಕಿಂತ
ಅರಿತು, ಆಚರಿಸಿ, ಆದರ್ಶವಾಗುವುದು ಮೇಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಣಿಯನೆಣಿಸಿ ದಣಿವುದಕ್ಕಿಂತ
ಜನರ ತಣಿಸಿ ಕುಣಿವುದು ಮೇಲಯ್ಯ !

## ೨೩೪

ಇಂದು ಬಂದು ಮುಂದೆ ನಿಂತಿದೆ–
ಸ್ವಾಗತಿಸಿದ, ಸಾರ್ಥಕಗೊಳಿಸಿದ !
ಹಿಂದಿನ ಮುಂದಿನ ದಂದುಗದಲ್ಲಿ ಮುಂದುಗಾಣದೆ
ಇಂದನ್ನು ಕಳೆದುಕೊಳ್ಳದಿರು !
ನಿನ್ನೆ ಏನನೂ ಮಾಡಲಿಲ್ಲವೆಂದು ಹಳಹಳಿಸುವವ–
ನಾಳೆಗೇನು ಮಾಡಲಿಯೆಂದು ತಳಮಳಿಸುವವ–
ಒಂದೇ ನಡೆಯದ ನಾಣ್ಯದ ಎರಡು ಮುಖಗಳು !
ಈ ಎರಡೂ ದೌರ್ಬಲ್ಯಗಳನ್ನು ಗೆಲ್ಲು,
ಚಿರವರ್ತಮಾನದಲ್ಲಿ ಮಾಡುತ್ತ ನಿಲ್ಲು !
ಈ ದಿನವಲ್ಲ, ಈ ಕ್ಷಣ ಮಿಗಿಲೆಂದು ನಂಬು,
ಕ್ಷಣ ಕ್ಷಣದಲ್ಲಿ ನಿನ್ನದೇನಾದರೂ ತುಂಬು !
ಸ್ವತಂತ್ರಧೀರ ಸಿದ್ಧೇಶ್ವರನ ಒಲಿಸಲು ಇದೇ ನೇರ ದಾರಿ !

## ೨೩೫

ಬದುಕು, ಜೀವಿ, ಬದುಕು !
ಬದುಕುವ ಬಯಕೆಯೇ ಬತ್ತಿಹೋದ ಹಾಗೆನಿಸಿದರೂ ಬದುಕು !
ಬದುಕು ನಿರಾಧಾರವಾಗಿ, ಭಾರವಾಗಿ, ಘೋರವೆಂದೆನಿಸಿದರೂ ಬದುಕು !
ಕುತ್ತುಗಳ ತುತ್ತ ನುಂಗಿ ಬದುಕು,
ನಿರಾಶೆಗಳ ನಂಜನೀಂಟಿ ಬದುಕು,
ಸೋಲುಗಳ ಹಾಸಿ ಹೊದೆದು ಬದುಕು,
ಸಾಲಗಳ ಹೊತ್ತು ಬದುಕು, ಸತ್ತು ಸತ್ತು ಬದುಕು,
ಬದುಕಲು ಕಾರಣಗೀರಣ ಬೇಕಿಲ್ಲ, ಬದುಕು !
ಬದುಕಲು ಯಾರ ಅನುಮತಿ ಅಪ್ಪಣೆಯೂ ಬೇಕಿಲ್ಲ, ಬದುಕು !
"ಏನಾಶೇ ಬಹವೋ ದೋಷಾಃ
ಜೀವನ್ಭದ್ರಾಣಿ ಪಶ್ಯತಿ !" ಬದುಕು,
ಏನಾದರೂ ಮಾಡಿ, ಎಂತಾದರೂ ಬದುಕು !
ಸ್ವತಂತ್ರಧೀರ ಸಿದ್ಧೇಶ್ವರ ಬದುಕಲೆಂದೇ ಹುಟ್ಟಿಸಿದ್ದಾನೆ ನಿನ್ನ,
ಇದುಕಾರಣ ಬದುಕಲೇಬೇಕು ನೀನು !
ಬದುಕು, ಬದುಕಗೊಡು ; ಬದುಕಗೊಡು, ಬದುಕು !

## ೨೩೬

ಒಳ್ಳೆಯ ಜೀವನಕ್ಕಿಂತ ಒಳ್ಳೆಯ ತತ್ವವನರಿಯೆನಯ್ಯ ;
ಒಳ್ಳೆಯ ನಡತೆಗಿಂತ ಒಳ್ಳೆಯ ಮತವನರಿಯೆನಯ್ಯ ;
ಒಳ್ಳೆಯ ನುಡಿಗಿಂತ ಒಳ್ಳೆಯ ಹಿತವನರಿಯೆನಯ್ಯ ;
ಸತ್ಯದಿಂದ ಬೇರೆ ಶಿವವ,
ಶಿವದಿಂದ ಬೇರೆ ಸುಂದರವ,
ಸುಂದರವನುಳಿದ ಆನಂದವನರಿಯೆನಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನನುಳಿದ ನಿಜವ,
ನಿಜಕು ಮಿಗಿಲಾದ ಧರ್ಮವ, ನಾನರಿಯೆನಯ್ಯಾ !

## ೨೩೭

ಯಾವ ಕಲ್ಲನು ಕೊಟ್ಟರೂ
ಕೆತ್ತುವನು ಮೂರ್ತಿಯ ಶಿಲ್ಪಿ –
ಆದರೆ, ಶಿಲೆ ಒಳ್ಳೆಯದಿದ್ದಷ್ಟೂ ಶಿಲ್ಪ ಶ್ರೇಷ್ಠವಪ್ಪುದಯ್ಯ ;
ಹಾಳು ಗೋಡೆಯ ಮೇಲೆ ಬರೆಯೆಂದರೂ
ಬರೆಯುವನು ಚಿತ್ರವ ಚಿತ್ರಕಾರ–
ಆದರೆ, ಭಿತ್ತಿ ಉತ್ತಮವಿದ್ದಷ್ಟೂ ಚಿತ್ರ ಉತ್ತಮವಪ್ಪುದಯ್ಯ ;
ಯಾವ ವಿಷಯವ ಕೊಟ್ಟರೂ
ಕವಿತೆ ಬರೆಯಬಲ್ಲ ಕವಿ–
ಆದರೆ, ಮೆಚ್ಚಿಗೆಯ ವಿಷಯವಿದ್ದರೆ ಹೆಚ್ಚುವುದಯ್ಯ ಕವಿತೆಯ ಕಳೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹಾಗೆ, ಹೀಗೆ, ಹೇಗೋ ಬದುಕಿದರೂ ಸಾಗುವುದು ಬಾಳು–
ಆದರೆ, ಗುರಿ ಘನವಾದಷ್ಟೂ ಅದರ ಗರಿಮೆ ಹೆಚ್ಚುವುದಯ್ಯ !

## ೨೩೮

ಏನು ಪಡೆದೆವೆಂಬುದು ಮುಖ್ಯವಲ್ಲ,
ಹೇಗೆ ದುಡಿದೆವೆಂಬುದು ಮುಖ್ಯವಯ್ಯ ;
ಏನ ನುಡಿದೆವೆಂಬುದು ಮುಖ್ಯವಲ್ಲ,
ಹೇಗೆ ನಡೆದೆವೆಂಬುದು ಮುಖ್ಯವಯ್ಯ ;
ಏನು ಗಳಿಸಿದೆವೆಂಬುದು ಮುಖ್ಯವಲ್ಲ,
ಹೇಗೆ ಬಳಸಿದೆವೆಂಬುದು ಮುಖ್ಯವಯ್ಯ ;
ಏನ ಕೇಳಿದೆವು, ಹೇಳಿದೆವೆಂಬುದು ಮುಖ್ಯವಲ್ಲ,
ಹೇಗೆ ಬಾಳಿದೆವೆಂಬುದು ಮುಖ್ಯವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನ ಗೆದ್ದೆವೆಂಬುದು ಮುಖ್ಯವಲ್ಲ,
ಏನಾಗಿದ್ದೇವೆಂಬುದು ಮುಖ್ಯವಯ್ಯ !

## ೨೩೯

ಕುಕ್ಕದಿರೆ ಕಡಿಯದಿರೆ ಕೊಕ್ಕಿಗೆ ಬೆಲೆಯಾವುದಯ್ಯಾ ?
ನೆಕ್ಕದಿರೆ ನುಡಿಯದಿರೆ ನಾಲಗೆಗೆ ಬೆಲೆಯಾವುದಯ್ಯಾ ?
ಹಿಕ್ಕದಿರೆ, ಹೆಡಸು ಹೆಕ್ಕದಿರೆ ಹಣಿಗೆಗೆ ಬೆಲೆಯಾವುದಯ್ಯಾ ?
ರಸವಂತಿಕೆಯೂ ಇಲ್ಲ, ಗೇಯತೆಯೂ ಇಲ್ಲದಿರೆ
ಕವಿತೆಗೆ ಬೆಲೆ ಯಾವುದಯ್ಯಾ ?
ಆರೋಗ್ಯಕ್ಕೂ ಇಲ್ಲ, ಆನಂದಕ್ಕೂ ಇಲ್ಲದಿರೆ
ಆಟಕ್ಕೆ ಬೆಲೆಯಾವುದಯ್ಯಾ ?
ಉದರ ಪೋಷಣೆಗೂ ಇಲ್ಲ, ಹೃದಯ ವಿಕಸನಕ್ಕೂ ಇಲ್ಲದಿರೆ
ಶಿಕ್ಷಣಕ್ಕೆ ಬೆಲೆ ಯಾವುದಯ್ಯಾ ?
ತನಗೂ ಇಲ್ಲ, ಅನ್ಯರಿಗೂ ಸಲ್ಲದಿರೆ
ಸಂಪತ್ತಿಗೆ ಬೆಲೆ ಯಾವುದಯ್ಯಾ ?
ವ್ಯಷ್ಟಿಯ ಅಭ್ಯುದಯಕ್ಕೂ ಇಲ್ಲ, ಸಮಷ್ಟಿಯ ಸುಸ್ಥಿತಿಗೂ ಸಲ್ಲದಿರೆ
ಸರಕಾರಕ್ಕೆ ಬೆಲೆಯಾವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾಡಿನೇಳ್ಗೆಗೂ ಇಲ್ಲ, ನುಡಿಯ ಮೇಲ್ಮೆಗೂ ಸಲ್ಲದಿರೆ
ಜೀವನಕ್ಕೆ ಬೆಲೆಯಾವುದಯ್ಯಾ ?

## ೨೪೦

ಎಷ್ಟೆಂದರೂ ನೀನು ಮನೆಯ ಕುಂಡದಲ್ಲಿ ಬೆಳೆದ ಬಳ್ಳಿ –
ಬನದ ನೆಲದಲ್ಲಿ ಬೆಳೆದ ವಲ್ಲರಿಯಲ್ಲ,
ನಿನ್ನ ಹೂಗಳು ನಿನ್ನವೋ? ಇಲ್ಲವೆ,
ಅನ್ಯರು ಚಿತ್ರೀಕರಣಕ್ಕಾಗಿ ತಂದಿರಿಸಿದ ಹಾಳೆಯ ಹೂವೊ?
ಹೂವಿದ್ದೂ ಹೂವಲ್ಲ, ಹೂವಿಗೂ ಕಂಪಿಲ್ಲ,
ಹಾಸವಿಲ್ಲ, ಉಲ್ಲಾಸವಿಲ್ಲ, ಸುವಿಲಾಸವಿಲ್ಲ!
ಇವು ಹಣ್ಣಾಗುವ ಹೂಗಳೂ ಅಲ್ಲ,
ಚೆಲುವಿಗೆ ಕಣ್ಣಾಗುವ ಹೂಗಳೂ ಅಲ್ಲ,
ಬರಿಯ ಬಣ್ಣದ ಹೂಗಳೆಂದಾತ ಸ್ವತಂತ್ರಧೀರ ಸಿದ್ಧೇಶ್ವರ!

## ೨೪೧

ಗದ್ಯದಲ್ಲಿ ಬರೆಯಬಹುದಾದುದನ್ನು
ಪದ್ಯದಲ್ಲಿ ಬರೆಯುವುದು ಪೆದ್ದತನವಯ್ಯಾ ;
ಏಕಾಂತದಲ್ಲಿ ಮಾಡಬೇಕಾದುದನ್ನು
ಲೋಕಾಂತದಲ್ಲಿ ಮಾಡುವುದು ಮೊದ್ದುತನವಯ್ಯಾ ;
ಮೌನಿಯಾಗಿರಬೇಕಾದ ಹೊತ್ತಿನಲ್ಲಿ
ಮಾತಾಳಿಯಾಗುವುದು ಮಂಕುತನವಯ್ಯಾ ;
ತಕ್ಕ ಕಾಲದಲ್ಲಿ ತಗದ ಕಜ್ಜವನ್ನೂ, ತಗದ ಕಾಲದಲ್ಲಿ ತಕ್ಕ ಕಜ್ಜವನ್ನೂ
ಗೈಯುವುದು ಗಾಂಪತನವಯ್ಯಾ ;
ಅಳಬೇಕಾದಾಗ ನಗುವುದೂ, ನಗಬೇಕಾದಾಗ ಅಳುವುದೂ
ಮರುಳತನವಯ್ಯಾ ;
ಹಮ್ಮಿಣಿ ಬಿಗಿ ಹಿಡಿಯಬೇಕಾದಾಗ ಸಡಿಲು ಬಿಡುವುದೂ,
ಸಡಿಲು ಬಿಡಬೇಕಾದಾಗ ಬಿಗಿ ಹಿಡಿವುದೂ ಬೆಪ್ಪತನವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೆಲಸ ಮಾಡುತ್ತಲೇ ಮಾಡಬಹುದಾದ ನಿನ್ನ ಸ್ಮರಣೆಯನ್ನು
ಕೆಲಸ ನಿಲ್ಲಿಸಿ ಮಾಡುವುದು ಗಾವಿಲತನವಯ್ಯಾ !

## ೨೪೨

ಕಾಯಕದಲ್ಲಿ ಕೈಗಳು, ನಿನ್ನಲ್ಲಿ ಮನ ಮಗ್ನವಾದ ಬಳಿಕ
ಮಾರನೇಗೈಯ್ವನಯ್ಯಾ, ಸೈತಾನನೇಗೈಯ್ವನಯ್ಯಾ,
ಆಹಿಮನ್ನನೇನು ಮಾಡುವನಯ್ಯಾ,
ಮಾಯೆಯೇನು ಮಾಡುವುದಯ್ಯಾ, ಮೋಹವೇನು ಮಾಡುವುದಯ್ಯಾ,
ಕಾಲ–ಕರ್ಮ–ವಿಧಿ–ನಿಯತಿಗಳೇನ ಮಾಡುವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಯವು ಕಾಯಕದಲ್ಲಿ ನಿರತವಾಗಿರುವಂತೆ,
ಮನ ನಿನ್ನಿಂದ ಭರಿತವಾಗಿರುವಂತೆ
ಕರುಣಿಸಾ, ಕರುಣಿಗಳರಸಾ !

## ೨೪೩

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳು ಕೆಲಸಬೊಗಸೆಗಳನ್ನು ಬಿಟ್ಟು
ನಿನ್ನ ನುತಿಸುತ್ತ ಕುಣಿಯಬೇಕೆನ್ನುವಿಯಂತೆ,
ಮೂಗು ಹಿಡಿದು, ಮಣಿಯನೆಣಿಸಿ ದಣಿಯಬೇಕೆನ್ನುವಿಯಂತೆ,
ಧೂಪ ಉರಿಸಿ, ದೀಪ ಬೆಳಗಿ ತಣಿಯಬೇಕೆನ್ನುವಿಯಂತೆ–
ನಿಜವೆ ? ಹೌದೆ ? ನಾನಂಬೆನಿದನು !
ಮಕ್ಕಳನ್ನೇ ಕೆಲಸಗೇಡಿಗಳನ್ನಾಗಿ,
ಮೈಗಳ್ಳರನ್ನಾಗಿ, ಮುಗ್ಗುಲುಗೇಡಿಗಳನ್ನಾಗಿ
ಮಾಡುವ ತಂದೆ ನೀನಾಗಿರಲಾರೆ !
ಯಾವ ಬಿಕನಾಸಿ ಪಾರಂಭಿಸಿದನೋ ಈ ಪೀಕಲಾಟವನ್ನು,
ಮೌಢ್ಯದ ಮೇಲಾಟವನ್ನು, ಅಂಧತೆಯ ಪೈಪೋಟಿಯನ್ನು !
ಮಂಥರತೆಗೆ ಮರುಳಾಗದೆ
ವಿಶ್ವವಿಕಾಸರಥಕ್ಕೆ ಹೆಗಲುಗೊಡುವ,
ಜೀವನಪರಿಪೂರ್ಣತೆಯ ಹೋರಾಟಕ್ಕಿಳಿವ,
ಜೀವರಾಶಿಗಳ ಲೇಸಿಗಾಗಿ ಹೆಣಗುವ
ಸಾಹಸ, ಶ್ರದ್ಧೆ, ಶಕ್ತಿಗಳ ನೀಡಯ್ಯಾ
ತಂದೆಗೆ ತಕ್ಕ ಮಗನ ಮಾಡಯ್ಯಾ !

## ೨೪೪

ವಿಕೃತಿಗೆ ಕಲೆಯ ಆಕೃತಿಯಿತ್ತರೆ ಸಂಸ್ಕೃತಿಯಾಗಬಲ್ಲುದೇನಯ್ಯಾ ?
ಕುಕರ್ಮಕ್ಕೆ ಧರ್ಮದ ಬಣ್ಣ ಬಳಿದರೆ ಸತ್ಕರ್ಮವಾಗಬಲ್ಲುದೇನಯ್ಯಾ ?
ಸುಲಿಗೆಗೆ ಶಾಸನದ ಮುಖವಾಡ ಹಾಕಿದರೆ ನ್ಯಾಯಸಮ್ಮತವಾಗಬಲ್ಲದೇನಯ್ಯಾ ?
ಅನೀತಿಗೆ ಪ್ರೀತಿಯೆಂದು ಕರೆದಾಕ್ಷಣ ಪರಿಪೂತವಾಗಬಲ್ಲುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೌಢ್ಯಕ್ಕೆ, ಮನದ ಜಾಡ್ಯಕ್ಕೆ ಶಾಸ್ತ್ರಾಧಾರ ಒದಗಿಸಿದರೆ
ಜೀವನದೇವತೆಗೆ ನೈವೇದ್ಯವಾಗಬಲ್ಲುದೇನಯ್ಯಾ ?

## ೨೪೫

ನಿನ್ನ ನೆರಳಿನಲ್ಲಿಯೇ ಬೆಳೆಸಿ ಬಾಡಿಸದಿರಯ್ಯ ಈ ಬಾಳ ಬಳ್ಳಿಯನ್ನು !
ಬಿಸಿಲು ಮಳೆಗಳಲ್ಲಿಯೇ ಬೆಳೆದು ನಳನಳಿಸುವಂತೆ ಮಾಡಿದನ್ನು !
ನೀನು ಕುಣಿಸಿದಂತೆ ಕುಣಿವ
ಸೂತ್ರದ ಬೊಂಬೆಯಾಗದಿರಲಯ್ಯ ಈ ಬಾಳು–
ಬೀಳುತ್ತ, ಏಳುತ್ತ, ಹೋರುತ್ತ, ಏರುತ್ತ,
ಕಾಲಕರ್ಮಗಳ ಮೀರುತ್ತ ಮುನ್ನಡೆವ
ಸಾಹಸ–ಶಿಶು, ಛಲದಬಾಲ, ಹೆಬ್ಬಯಕೆಯ ಯುವಕನಾಗಲಿದು !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕೃಪೆಯ ಹಂಗನೇ ಹಾಸಿ, ಹಂಗನೇ ಹೊದೆದು,
ಹಂಗನೇ ಸವಿದು ಭಂಗಬಡುವ ಬಾಳಾಗದಿರಲಿದು–
ಇರಿದರೂ, ತರಿದರೂ, ತುರಿದರೂ, ಹುರಿದರೂ
'ದೇಹಿ'ಯೆನ್ನದ ದಿಟ್ಟ ಗಟ್ಟಿ ಎಟ್ಟಿ ಬಾಳಾಗಲಯ್ಯ ಇದು !

## ೨೪೬

ಚಂದನದೊಲು ನನ್ನ ಕಲಂಕ ನನಗಿರಲಿ,
ತನಿವಗೆಯ ತಂಪು ಮಂದಿಗಿರಲಿ ;
ಗುಲಾಬಿಯೊಲು ನನ್ನ ಮುಳ್ಳು ನನಗಿರಲಿ,
ತನಿಗಂಪು ಮಂದಿಗಿರಲಿ ;
ಮರದವೊಲು ಮಂದಾಗ್ನಿ ನನಗಿರಲಿ,
ಪತ್ರ ಪುಷ್ಪ ಫಲ ಮಂದಿಗಿರಲಿ ;
ಸರಸಿಯೊಲು ಬೇರು ಬಳ್ಳಿಯ ತೊಡಕು ನನಗಿರಲಿ,
ಕಮಲ ಕುಮುದಗಳು ಮಂದಿಗಿರಲಿ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಂತೆ ಸುಡುವ ನಂಜು ನನಗಿರಲಿ,
ಅಮೃತ ಮಂದಿಗಿರಲಯ್ಯಾ !

## ೨೪೭

ಮೈದಾಸನ ಹಸ್ತದಿಂದ ದೂರವಿರಿಸಯ್ಯ ನನ್ನನ್ನು –
ಸುವರ್ಣಮೂರ್ತಿಯಾಗಿ ಅಲ್ಲ, ಮಾನವನಾಗಿ ಬದುಕುವಾಸೆ ನನಗೆ ;
ಪುಷ್ಪಕ, ಐರಾವತಗಳಿಂದ ದೂರವಿರಿಸಯ್ಯ ತಂದೆ–
ಇದೇ ಲೋಕದಲ್ಲಿಯೇ ಜೀವಿಸುವಾಸೆ ನನಗೆ ;
ಅಪ್ಸರೆಯರಿಂದ ಅತಿದೂರವಿರಿಸಯ್ಯ ತಂದೆ–
ಕೈ ಹಿಡಿದ ಮಡದಿಯೊಡನೆ ಕಾಲ ಕಳೆವಾಸೆ ನನಗೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಿಂಹಾಸನ, ಮಣಿಮುಕುಟ, ದಂಡ, ಕಮಂಡಲು,
ಹಾವುಗೆ ಗದ್ದುಗೆಗಳಿಂದ ದೂರವಿರಿಸಯ್ಯ –
ಸಾಮಾನ್ಯ ಮಾನವನಾಗಿ ಬಾಳುವಾಸೆ ನನಗೆ !

## ೨೪೮

ಮರುಹುಟ್ಟನಳಿಪ ಮೋಕ್ಷವೆನಗೆ ಬೇಡವಯ್ಯ,
ಮತ್ತೆ ಈ ಪವಿತ್ರ ಭಾರತದಲ್ಲಿ ಹುಟ್ಟುವಾಸೆ ನನಗೆ !
ಕಾಯಕ ತಪ್ಪಿಸುವ ಧ್ಯಾನಮೌನಾದಿಗಳು ಬೇಕಿಲ್ಲವಯ್ಯ ನನಗೆ –
ಕಾಯಕ ಮಾಡುತ್ತಲೇ ಕೊನೆಯುಸಿರು ಬಿಡುವ ಬಯಕೆ ನನಗೆ !
ಪರೋಪಜೀವಿತ್ವದ ಪ್ರತೀಕಗಳಾದ ಪದವಿ ಪೀಠಗಳು
ಬೇಡವಯ್ಯ ನನಗೆ –
ದುಡಿದುಣ್ಣುವ ಮಹಾಪದವಿ, ಪರಮ ಪೀಠವನ್ನು ಪಡೆವಾಸೆ ನನಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ಆ ಲೋಕದ ಆಸೆಯಿಂದ,
ಈ ಲೋಕವ ಮರೆವುದು ಬೇಕಿಲ್ಲ ನನಗೆ –
ಈ ಲೋಕವನ್ನೇ ನಾಕವಾಗಿಸುವ
ಮಹಾಮಣಿಹದಲ್ಲಿ ಪಾಲುಗೊಳ್ಳುವಾಸೆ ನನಗೆ !

## ೨೪೯

ನನ್ನ ನೋವಿನ ಕೆನೆಯನ್ನು
ನಿನ್ನ ನಾಮದ ಮಂಥಾನದಿಂದ ಕಡೆದು
ನೆಲವಿನ ನವನೀತವ ಪಡೆವೆನಯ್ಯ !
ನನ್ನ ಇರುಹಿನ ಒರಳಿನಲ್ಲಿ
ಮರಹಿನ ನೆಲ್ಲನು ಸುರುವಿ
ನಿನ್ನ ನೆನಹಿನ ಒನಕೆಯಿಂದ ಕುಟ್ಟಿ
ಅರುಹಿನ ಅಕ್ಕಿಯ ಪಡೆವೆನಯ್ಯ !
ನನ್ನ ಬದುಕಿನ ಬೀಸುಕಲ್ಲಿನಲ್ಲಿ
ಬಿದಿಯ ಬರಗನು ಹಾಕಿ
ನಿನ್ನ ಹೆಸರನೇ ಹಾಡುತ್ತ ಬೀಸಿ
ತುಷ್ಟಿಯ ಪಿಷ್ಟವ ಪಡೆವೆನಯ್ಯ !
ನನ್ನ ಬಾಳಿನ ಕಣದಲ್ಲಿ
ನನ್ನ ಕರ್ಮದ ತೆನೆಗಳ ಹರಹಿ
ನಿನ್ನ ಸ್ಮರಣೆಯ ಮೇಟಿಗೆ
'ನೀನು, ನಿನ್ನದು' ಎಂಬ ಎತ್ತುಗಳ ಕಟ್ಟಿ ತುಳಿಸಿ
ಧರ್ಮದ ರಾಶಿ ಮಾಡಿಕೊಳ್ಳುವೆನಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೦

ಅರಿವು ಮರೆವುಗಳ ಮಧ್ಯದ ಮರಳುಗಾಡಿನಲ್ಲಿ
ಮೃಗಜಲವನರಸುತ್ತ ಅಲೆಯುತ್ತಿಹೆನಯ್ಯ ;
ಹುಟ್ಟಿನ ಹಣತೆಯ ಅರೆಬೆಳಕಿನಲ್ಲಿ
ಅಜರತೆಯ ಮಾಯಾಮೃಗದ ಬೆಂಬತ್ತಿ ಸುತ್ತುತ್ತಿಹೆನಯ್ಯ ;
ತನುವಿನ ತೆಪ್ಪವನ್ನೇರಿ ಕಾಲದ ಕಡಲನ್ನೀಸಲು
ಹುಸಿ ಹಂಬಲಗಳ ಹುಟ್ಟು ಹಾಕುತ್ತಿಹೆನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಆಯುಷ್ಯದ ಚಿಪ್ಪನ್ನು ಹಿಡಿದು
ಅನಾದಿ ಅನಂತವ ಅಳೆಯಲು ಆರಂಭಿಸಿಹೆನಯ್ಯ !

## ೨೫೧

ಹಾಜರಿ ಹಾಕುತ್ತಲೆ ಓಡಿಹೋಗುವ ಬಾಲಕನಂತೆ ನಲವು,
ಹಾಜರಿದ್ದು ಕಲಿಯುವ ಬಾಲಕನಂತೆ ನೋವು–
ಜೀವನದ ಪಾಠಶಾಲೆಯಲ್ಲಿ ;
ನೋವಿನ ತೆರೆಯ ಮೊಗದಲ್ಲಿ ನಗೆಯ ನೊರೆ
ಬಾಳಿನ ಹೊನಲಿನಲ್ಲಿ ;
ನೋವಿನ ಹಾವಿಗೆ ನಲವಿನ ಪರೆ
ಬದುಕಿನ ಹುತ್ತದಲ್ಲಿ ;
ನೋವಿನ ಬಟ್ಟಲಿನಲ್ಲಿ ನಲವಿನ ಮದಿರೆ
ಜೀವನದ ಮೇಜವಾನಿಯಲ್ಲಿ !
ನಾಣ್ಯದ ಒಂದು ಮುಖ ಬೇಕು,
ಇನ್ನೊಂದು ಬೇಡವೆಂದರೆ ಹೇಗಯ್ಯ ?
ನೋವು–ನಲವಿನ ನೆಳಲು ಬೆಳಕಿನಾಟದಲ್ಲಿಯೇ
ನೆಮ್ಮದಿ ಪಡೆವ ಪರಿ ಕಲಿಸಯ್ಯ – ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೨

ಇನ್ನೇನೋ ಇಲ್ಲದೆ ಬದುಕ ಬಲ್ಲೆ,
ನೋವಿಲ್ಲದೆ ಬದುಕಲಾರೆನಯ್ಯಾ !
ಕೂರ್ಪರನಗಲಿದ ನೋವು, ಗುರಿಯ ಮುಟ್ಟದ ನೋವು,
ಆಸೆ ಅರಳದ ನೋವು, ಒಲವು ಫಲಿಸದ ನೋವು,
ನಿನ್ನನರಿಯದ ನೋವು, ನನ್ನ ಮರೆಯದ ನೋವು
ಒಂದೊಂದೂ ಊಟೆಯಯ್ಯ ಜೀವನದ ಝರಿಗೆ !
ಬಾಳು ಎಚ್ಚರಗೊಳ್ಳುವುದಯ್ಯ ನೋವಿನ ಕರೆಗೆ !
ನೋವೆ ನಾವೆಯಯ್ಯ ಬದುಕಿನ ತೊರೆಗೆ !
ನೋವಿನ ಹೂವಿನ ಮಧುವಿಗೆ
ಮಧುಕರನಾಗುವ ಭಾಗ್ಯವ ಕರುಣಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೩

ಕುಗ್ಗೆನ್ನ ಹೃದಯವ ಹಿಗ್ಗಿಸಿತಯ್ಯ ಹೆಚ್ಚಿನ ಹಿಗ್ಗಿಗಾಗಿ ;
ಕುಗ್ಗೆನ್ನ ಬಗೆಯ ಹೊಲವ ಹರಗಿ ಬಿತ್ತಿತಯ್ಯ ಹೊಸ ಸುಗ್ಗಿಗಾಗಿ ;
ಕುಗ್ಗೆನ್ನ ಮನದ ತೆನೆ ಸುಟ್ಟಿತಯ್ಯ ಸವಿಬೆಳಸಿಗಾಗಿ ;
ಕುಗ್ಗೆನ್ನ ಕಂಕಿ–ಹೊಲ ಉರಿಸಿತಯ್ಯ ಹೊಸ ಹುಲುಸಿಗಾಗಿ !
ಕುಗ್ಗುಲಗ್ಗೆಯಿಟ್ಟಾಗಲೇ
ಜೀವ–ಕೋಟೆಯಲ್ಲಿ ಜಾಗೃತ ಯೋಧರು,
ಇಲ್ಲದಿರೆ, ಕೋಟೆಯೇ ಕುಂಭಕರ್ಣನಯ್ಯ !
ಕುಗ್ಗಿನಿಂದ ಸಹನಶಕ್ತಿಯ ವಿಕಾಸ,
ಸಹನಶಕ್ತಿಯ ವಿಕಾಸದಿಂದ ಶೀಲ–ಪ್ರಕಾಶ,
ಶೀಲ–ಪ್ರಕಾಶದಿಂದ ಸದ್ಭಾಗ್ಯ–ವಿಲಾಸ,
ಅಭ್ಯುದಯ ನಿಃಶ್ರೇಯಸ !
ಕುಗ್ಗಿನ ಮೊಗ್ಗೆಯಲ್ಲಿ ಹಿಗ್ಗಿನ ಪರಿಮಳವ
ಪಡೆವ ಫಲ ನನ್ನದಾಗಿರಲಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೪

ಬಾ ದುಃಖವೆ, ನನ್ನ ಸುಖವಾಗು ನೀನು ;
ಬಾ ನಿರಾಶೆಯೆ, ನನ್ನ ಆಶೆಯಾಗು ನೀನು ;
ಬಾ ಹಾನಿಯೇ, ನನ್ನ ಲಾಭವಾಗು ನೀನು ;
ಬಾ ಅಪಕೀರ್ತಿಯೆ, ನನ್ನ ಕೀರ್ತಿಯಾಗು ನೀನು ;
ಬಾ ತೆಗಳಿಕೆಯೆ, ನನ್ನ ಹೊಗಳಿಕೆಯಾಗು ನೀನು !
ಸ್ವತಂತ್ರಧೀರ ಸಿದ್ಧೇಶ್ವರನ ನಂಬಿದ ನನಗೆ
ಬೇಕಾವುದು, ಬೇಡವಾವುದು ?
ಇಷ್ಟವಾವುದು, ಅನಿಷ್ಟವಾವುದು?

## ೨೫೫

ನನಗಿಷ್ಟು ದುಃಖವಿತ್ತೆಯೆಂದು ದುಃಖವಿಲ್ಲವಯ್ಯ ನನಗೆ –
ನನ್ನ ದುಃಖವ ನೋಡಿ ನಿನಗೆ ದುಃಖವಾದೀತೆಂದು
ದುಃಖಿಸುವೆನಯ್ಯ !
ನಾನು ಒರಟು, ನಾನು ಗೊರಟು,
ಹೇಗೋ ಸಹಿಸಬಲ್ಲೆನಯ್ಯ ದುಃಖವನ್ನು !
ನೀನು ಕರುಣಾಕರ, ಭಕ್ತವತ್ಸಲ,
ನನ್ನ ದುಃಖವ ನೋಡಿ
ನೀನು ಹೇಗೆ ಸಹಿಸುವಿಯೆಂಬುದೇ
ಯಾತನೆ ಮೂಡಿಸುವ ಯೋಚನೆಯಯ್ಯ ನನಗೆ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೬

ಮೃಗಜಲದಲ್ಲಿ ಮೀನು ಹಿಡಿದವರುಂಟೆ ?
ಚಿತ್ರದ ಕಡಲ ಮುಳುಗಿ ಮುತ್ತು ತಂದವರುಂಟೆ ?
ಕನಸಿನಲ್ಲಿ ಕಂಡ ನದಿಯ ಕಟ್ಟಿ
ನೀರಾವರಿ ಮಾಡಿದವರುಂಟೆ ?
ಮಳೆಬಿಲ್ಲಿನ ಬಣ್ಣಗಳಿಂದ
ಚಿತ್ರವ ಬರೆದವರುಂಟೆ ?
ಕನ್ನಡಿಯೊಳಗಣ ಗಂಟಿನಿಂದ
ವ್ಯಾಪಾರವ ಮಾಡಿದವರುಂಟೆ ?
ಕಲ್ಪನೆಯ ಕೆಳದಿಯ ಕೂಡಿ
ಮಕ್ಕಳ ಹಡೆದವರುಂಟೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸುಖ ದುಃಖಗಳ ಹಾಸು ಹೊಕ್ಕುಗಳಿಲ್ಲದೆ
ಬಾಳ ಬಟ್ಟೆ ನೆಯ್ದವರುಂಟೆ ?

## ೨೫೭

ನಾಣ್ಯವಿಲ್ಲದೆ ಮಾನ್ಯರಾದವರಿರಬಹುದು ;
ರೂಪಿಲ್ಲದೆ ಗಣ್ಯರಾದವರಿರಬಹುದು ;
ಧರ್ಮವಿಲ್ಲದೆ ಧನ್ಯರಾದವರಿರಬಹುದು ;
ಗುಣವಿಲ್ಲದೆ ಘನತೆಯ ಪಡೆದವರಿದ್ದರೆ ತೋರಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೮

ನಾನು ಆಡುವುದೇ ಆಡುವುದು ನನ್ನ ಬಗ್ಗೆ ;
ನಾನು ಬೇಡುವುದೇ ಹಾಡುವುದು ನನ್ನ ವಿಷಯಕ್ಕೆ ;
ನಾನು ಮಾಡುವುದೇ ಮಾಡುವುದು ನನ್ನನ್ನು ;
ನಾನು ನೀಡುವುದೇ ಮೂಡಿಸುವುದು ನನ್ನನ್ನು ;
ನಾನು ಭಾವಿಸುವುದೇ ರೂಪಿಸುವುದು ನನ್ನ ಜೀವನವ ;
ನಾನು ಬಯಸುವುದೇ ನಿರ್ಧರಿಸುವುದು ನನ್ನತನವ ;
ನಾನು ನಂಬಿದುದೇ ನಿರ್ಣಯಿಸುವುದು ನನ್ನ ಮತಿ, ಗತಿಯ !
ಇದು ಕಾರಣ, ಅಲ್ಲವಾದುದ,
ಹೊಲ್ಲವಾದುದ, ಖುಲ್ಲವಾದುದ
ಆಡದಂತೆ, ಬೇಡದಂತೆ,
ಮಾಡದಂತೆ, ನೀಡದಂತೆ
ನೀನೆನ್ನನಿರಿಸಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೫೯

ನಿನಗೆ ನಾನು ಶರಣು ಹೋಗದ ಮುನ್ನ ನಡೆದುದೇನೇ ಇರಲಿ,
ನಿನ್ನ ನಂಬಿದ ಮೇಲೂ ನನ್ನ ಜೀವನ
ಅನಿರೀಕ್ಷಿತಗಳ ಅಪ್ಪಳಿಕೆಗೆ ಸಿಕ್ಕ ನೌಕೆಯಾಗಬಹುದೇನಯ್ಯಾ ?
ಅನಿಶ್ಚಿತತೆಯ ಚಕತೀರ್ಥದಲ್ಲಿ ಸಿಕ್ಕ
ತರಗೆಲೆಯಂತಾಗಬೇಕೇನಯ್ಯಾ ?
ಅವಿಶ್ವಾಸದ ತುಳಿತಕ್ಕೆ ಸಿಕ್ಕ ತೃಣವಾಗಬೇಕೇನಯ್ಯಾ ?
ಅಕಸ್ಮಾತ್ತುಗಳ ಧೃತರಾಷ್ಟ್ರಾಲಿಂಗನಕ್ಕೆ ಸಿಕ್ಕ
ಭೀಮ-ಪ್ರತಿಮೆಯಾಗಬೇಕೇನಯ್ಯಾ ?
ದ್ವಂದ್ವಗಳ ಧರ್ಮಸಂಕಟಗಳ ರಣರಂಗವಾಗಬೇಕೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇವೆಲ್ಲ ಇನ್ನೂ ಇವೆಯಾಗಿ
ನಾನಿನ್ನೂ ನಿನ್ನನ್ನು ನಿಜವಾಗಿ ನಂಬಿಲ್ಲವಯ್ಯಾ !

## ೨೬೦

ನೀನೇನೋ ಹಿರಿದಪ್ಪ ಅಂಗಡಿಯನಿಕ್ಕಿ ಕುಳಿತಿರುವೆ,
ಆದರೆ ನಾನಲ್ಲಿಗೆ ಗ್ರಾಹಕನಾಗಿ ಬರಲಾರೆನಯ್ಯಾ !
ನನ್ನ ಕಲಬೆರಕೆಯ ಸರಕು ಅಲ್ಲಿ ಸಲ್ಲದೆಂಬ ಸಂಕೋಚ,
ನಿನ್ನ ಸರಕಿಗೆ ತೆರಲು ನೀನೊಪ್ಪುವ ನಾಣ್ಯ
ನನ್ನಲ್ಲಿಲ್ಲವೆಂಬ ನಾಚಿಕೆ !
ನಿತ್ಯ ಹೊರಡುವೆ ನಿನ್ನ ಅಂಗಡಿಯತ್ತ,
ನಿತ್ಯ ಮರಳುವೆ ಅರ್ಧದಾರಿಯಿಂದಲೇ !
ಒಂದನ್ನು ಕೊಟ್ಟು ನಿನ್ನ ಅಂಗಡಿಯ ಏನೆಲ್ಲವನ್ನೂ-
ಕೊನೆಗೆ ನಿನ್ನನ್ನೂ ಕೊಳ್ಳಬಹುದು !
ಆದರೆ, ಅದನ್ನು ಕೊಡಲು ಸಿದ್ಧನಾಗದ ಸಿದ್ಧಯ್ಯ
ಆವ ಮುಖದಿಂದ ನಿನ್ನ ಅಂಗಡಿಯತ್ತ ಬರಬಲ್ಲನಯ್ಯಾ -
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೧

ನಿನ್ನ ಉದ್ದರಿ ಖಾತೆಯಲ್ಲಿ ನನ್ನ ಹೆಸರೇ ಮೊದಲ ಪುಟದಲ್ಲಿ !
ಉಳಿದವರು ಅಷ್ಟಿಷ್ಟು ಬಾಕಿ ಮುಟ್ಟಿಸಿದರೂ
ನಾನು ಒಂದು ಪೈಸೆಯನ್ನೂ ಪಾವತಿ ಮಾಡಿಲ್ಲವಯ್ಯ !
ಬಡ್ಡಿ ಕೇಳದ ದೊಡ್ಡ ಮನಸ್ಸಿನ ಸೆಟ್ಟಿ ನೀನು,
ಬಡ್ಡಿ ಹಾಕಿದ್ದರೆ ಏನಾಗುತ್ತಿತ್ತೋ ನನ್ನ ಪಾಡು !
ಏಸು ಜನ್ಮ ಬರಿ ಬಡ್ಡಿಗಾಗಿಯೇ ದುಡಿಯಬೇಕಾಗುತ್ತಿತ್ತೋ ;
ಉದ್ದರಿ ವಸೂಲಿಗಾಗಿ ನನ್ನನ್ನು ಕಾಡುವ, ಪೀಡಿಸುವ,
ಕೊಳ್ಳುವ, ಮಾರುವ ಕೌಶಿಕ ನಕ್ಷತ್ರಕ ವೀರಬಾಹುಕರ ಕಳಿಸಯ್ಯ,
ಬಾಕೀದಾರನಾಗಿ ಸಾವುದ ತಪ್ಪಿಸಯ್ಯಾ !
ಅವರ ಕಾಲಗುಣದಿಂದಲಾದರೂ
ನಿನ್ನ ಕಾಲೆಡೆಯಲ್ಲಿ ಸ್ಥಳ ಸಿಕ್ಕಲಿ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೨

ಈ ಕಾಯಿ ನೆಟ್ಟಗಿದೆಯೆ, ಕೆಟ್ಟಿದೆಯೆ ?
ಮೇಲಿನ ಜುಬ್ಬರ ಕರಟ ಗಟ್ಟಿಯಾಗಿಯೇ ಇವೆ,
ಆದರೆ, ಒಳಗಿನ ನೀರು ಕೆಟ್ಟಿದೆ,
ಒಳಗೆ ಕೊಬ್ಬರಿ ಕೊಳೆತು ನಾರುತ್ತಿದೆ !
ನುಡಿಸಿದರೆ 'ಟೊಕ್ ಟೊಕ್' ಸದ್ದು !
ಸೀಳಿದೆಯೆ ಎಲ್ಲಿಯೋ ಬಿದ್ದು ?
ಈ ಕಾಯಿ ಗಟ್ಟಿಯಿದ್ದೂ ನೆಟ್ಟಗಿಲ್ಲ !
ಈ ಇನ್ನೊಂದು ಕಾಯಿ ನೆಟ್ಟಗಿದೆಯೆ, ಕೆಟ್ಟಿದೆಯೆ ?
ಮೇಲಿನ ಕರಿ ಜುಬ್ಬರ, ಎಲುವಿನ ಕರಟ ಗಟ್ಟಿಯಾಗಿಯೇ ಇವೆ,
ಆದರೆ, ಒಳಗಿನ ಕೆನ್ನೀರು ಕೆಟ್ಟಿದೆ,
ಮಜ್ಜೆಯ ಕೊಬ್ಬರಿ ಕೊಳೆತು ನಾರುತ್ತಿದೆ !
ನುಡಿಸಿದರೆ 'ಠಕ್ ಠಕ್' ಸದ್ದು !
ಇರಬಹುದೆ ಇದಕ್ಕೆ ಮದ್ದು ?
ಈ ಕಾಯಿಯೂ ಗಟ್ಟಿಯಿದ್ದೂ ನೆಟ್ಟಗಿಲ್ಲ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೩

ಮಾತುಮಾತಿಗೆ ನಿನ್ನ ಹೆಸರ ಬಳಸಿಕೊಳ್ಳುವೆನಯ್ಯಾ
ನನ್ನ ಲಾಭಕ್ಕಾಗಿ ;
ಮಾತುಮಾತಿಗೆ ಬಡವರ ಹೆಸರ ಬಳಸಿಕೊಳ್ಳುವೆನಯ್ಯಾ
ನನ್ನ ಸ್ವಾರ್ಥಕ್ಕಾಗಿ ;
ಮಾತುಮಾತಿಗೆ ಶಾಸ್ತ್ರ ಸಮಾಜಗಳ ಮಾತು ಎತ್ತುವೆನಯ್ಯಾ
ನನ್ನ ಸುಖಕ್ಕಾಗಿ ;
ಮಾತುಮಾತಿಗೆ ದೇಶ ಧರ್ಮಗಳ ದುರುಪಯೋಗಿಸಿಕೊಳ್ವೆನಯ್ಯಾ
ನನ್ನ ಹಿತಕ್ಕಾಗಿ !
ನನ್ನ ದುರುಪಯೋಗಕ್ಕೆ ಒಳಗಾಗದ
ವಿಷಯ, ವಸ್ತು, ವ್ಯಕ್ತಿಯಿದ್ದರೆ ತೋರಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೪

ಸಾಯುವವರೆಗೂ ಶಾಸ್ತ್ರ ಹೇಳಿದರೇನು–
ಸುಳ್ಳು ಹೇಳುವುದ ಬಿಡಲಿಲ್ಲ ಶಾಸ್ತ್ರಿಗಳ ಬಾಯಿ ;
ಸಾಯುವವರೆಗೆ ಪೂಜೆ ಮಾಡಿದೊಡೇನು–
ಭಕ್ತರ ಬೋಳಿಸುವುದ ಬಿಡಲಿಲ್ಲ ಪೂಜಾರಿಯ ಕೈ ;
ಹಲವು ಅರಸೊತ್ತಿಗೆಗಳು ಬಂದು ಹೋದರೇನು,
ಹಳ್ಳಿಗರ ಕೂಗ ಕೇಳಿರಲಿಲ್ಲ ಡಿಳ್ಳಿಯ ಕಿವಿ ;
ಹಲವು ವರ್ಗಾವರ್ಗಿಗಳು ನಡೆದಿದ್ದರೇನು,
ಶ್ರೀಸಾಮಾನ್ಯರ ದುಃಸ್ಥಿತಿಯ ಕಾಣಬೇಕಿದೆ ಅಧಿಕಾರಿಯ ಕಣ್ಣು ;
ಹಲವು ಸಲ ನಗರಾಧ್ಯಕ್ಷನಾದೊಡೇನು,
ಕೊಳೆಗೇರಿಗಳ ಹೊಲಸುನಾತವ ಅರಿಯಬೇಕಿದೆ
ಪ್ರಥಮಪೌರನ ಮೂಗು !
ಸ್ವತಂತ್ರಧೀರ ಸಿದ್ಧೇಶ್ವರಾ,
ಅಮೀಬಾ ಅರಿವಿನ ಜನ್ಮ ಪಡೆದೊಡೇನು,
ಮೂಲವಿಕಾರಗಳ ಮರೆಯಬೇಕಿನ್ನೂ ನಾನು !

## ೨೬೫

ಈ ಹೊತ್ತಗೆ ಹಲವು ಆವೃತ್ತಿಗಳ ಕಂಡರೂ
ಮೂಲ ಆವೃತ್ತಿಯ ತಪ್ಪುಗಳ ತಿದ್ದುಪಡಿಯಾಗಲೇ ಇಲ್ಲ !
ಈ ಮನೆ ಹಲವು ಸಲ ಬಿದ್ದು ಹಲವು ಸಲ ಮತ್ತೆ ಕಟ್ಟಿದರೂ
ಮೂಲ ನಕ್ಷೆಯ ತಪ್ಪು ಸರಿಪಡಲೇ ಇಲ್ಲ !
ಈ ಮರ ಮತ್ತೆ ಮತ್ತೆ ಬಿದ್ದು ಮತ್ತೆ ಮತ್ತೆ ಚಿಗಿತರೂ
ಮೂಲ ಬೀಜದ ಕಹಿಯು ಸಿಹಿಯಾಗಲೇ ಇಲ್ಲ !
ಈ ಚಿತ್ರ ಹಲವು ಸಲ ಮಾಸಿ ಹಲವು ಸಲ ಬಣ್ಣದುಂಬಿದರೂ
ಮೂಲರೇಖಾವಿನ್ಯಾಸದೋಷ ದೂರಾಗಲೇ ಇಲ್ಲ !
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಜೀವಿ ಅಗಣಿತ ಜನ್ಮಗಳನ್ನೆತ್ತಿದ್ದರೂ
ಮೂಲ ಸ್ವಭಾವ ಬದಲಾಗಲೇ ಇಲ್ಲ !
ನೀನೊಲಿದಲ್ಲದೆ ಇದು ಸಾಧ್ಯವಿಲ್ಲ !
ಒಲಿದು ಬದಲಿಸಿ ಬದುಕಿಗೆ ಬೆಲೆ ಬರಿಸಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೬

ಬದುಕುವುದು ಬಹು ಸುಲಭ, ಬಾಳುವುದೇ ಕಠಿಣವಯ್ಯಾ ;
ನರನಾಗುವುದು ಸುಕರ, ಮಾನವನಾಗುವುದೇ ದುಷ್ಕರವಯ್ಯಾ ;
ಗೃಹ ಕಟ್ಟುವುದು ಕಷ್ಟವೇನಲ್ಲ, ಗೃಹಸ್ಥನಾಗುವುದು ಕಷ್ಟಕರವಯ್ಯಾ ;
ಮದುವೆಯಾಗುವುದು ಮೋಜಿನ ವಿಷಯ,
ಸಂಸಾರ ಸಾಗಿಸುವುದು ಗೋಜಿನ ವಿಷಯವಯ್ಯಾ ;
ಸುಖಿಸುವುದೇನೋ ಸುಲಭ, ಆನಂದಿಸುವುದು ಅಪರೂಪವಯ್ಯಾ ;
ತಿನ್ನುವುದು ಬಲು ಹಗುರು, ಉಣ್ಣುವುದು ಹಗುರಲ್ಲವಯ್ಯಾ ;
ಉಪಕಾರ ಮಾಡುವುದು ಅರಿದೇನಲ್ಲ, ಉಪಕಾರ ಸ್ಮರಿಸುವುದು ವಿರಳವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ಜಪಿಸುವುದು ಬಹು ಸುಲಭ,
ನಿನ್ನ ಒಲವ ಗಳಿಸುವುದು ಬಹು ಕಠಿಣವಯ್ಯಾ !
ನೀನೇ ಒಲಿದು ಸಲಹಯ್ಯಾ !

## ೨೬೭

ಕರೆದರೆ ಬರುವುದೇನಯ್ಯಾ
ಕಳೆದ ಹೊತ್ತು ?
ಕರೆದರೆ ಬರುವುದೇನಯ್ಯಾ
ಬರಡಾವಿನಿಂದ ಹಾಲು ?
ಕರೆದರೆ 'ಓ' ಎನ್ನುವುವೇನಯ್ಯಾ
ಕಿರುಕುಳ ದೈವಂಗಳು ?
ಕರೆದರೆ ಕರೆಯುವುದು ಬರಲಿರುವ ಹೊತ್ತನ್ನು ;
ಕರೆದರೆ ಕರೆಯುವುದು ಕರು ಹಾಕಿದ ಗೋವನ್ನು ;
ಕರೆದರೆ ಕರೆಯುವುದು ಸ್ವತಂತ್ರಧೀರ ಸಿದ್ಧೇಶ್ವರನನ್ನು !

## ೨೬೮

ನೀರಿಲ್ಲದ ಮೋಡ, ಹಣ್ಣು ಕೊಡದ ಗಿಡ, ನೆರೆ ತಡೆಯದ ದಡ–
ಇದ್ದರೇನೋ ಶಿವ ಶಿವಾ, ಇರದಿದ್ದರೇನೋ ಶಿವ ಶಿವಾ !
ಸುಂದರ ಮುಖವಿಲ್ಲದ ಸುಂದರ ಶರೀರ,
ರಮಣೀಯಾರ್ಥವಿಲ್ಲದ ರಮಣೀಯ ಶಬ್ದಪರಿವಾರ,
ಜನರ ಹಿತ ಸಾಧಿಸದ ಬಣಗು ಸರಕಾರ–
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ !
ಉಣ್ಣಲು ಇಲ್ಲದ ಅಮೃತಾಹಾರ,
ಉಡಲು ಒದಗದ ಪೀತಾಂಬರ,
ತೊಡಲು ಬಾರದ ಹಾರ ಕೇಯೂರ–
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ !
ಬುದ್ಧಿ ವಿರಹಿತ ಶ್ರದ್ಧೆ,
ಪತಿಯೆ ಇಲ್ಲದ ಪ್ರಬುದ್ಧೆ,
ನಿನ್ನನರಿಯದ ವಿದ್ಯೆ–
ಇದ್ದರೇನೋ ಶಿವಶಿವಾ, ಇರದಿದ್ದರೇನೋ ಶಿವಶಿವಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೬೯

ಪಾರ್ಥೇನಿಯಂ ಪಾಥೇಯವಾಗಬಲ್ಲುದೇನಯ್ಯಾ ?
ಆಕ್ಟೋಪಸ್ ಅತಿಥೇಯವಾಗಬಲ್ಲುದೇನಯ್ಯಾ ?
ನೀರೋನ ನೀತಿ ಉಪಾದೇಯವಾಗಬಲ್ಲುದೇನಯ್ಯಾ ?
ಪೃಥ್ವೀವಲ್ಲಭರಿಗೆ ಪ್ರಜಾಪ್ರಭುತ್ವ,
ಪುರೋಹಿತಶಾಹಿಗೆ ಸಮತಾ ತತ್ತ್ವ
ಜೀನನಿಗೆ ದಾನ, ಹೀನನಿಗೆ ನಕ್ಷತ್ರಗಾನ,
ದೀನನಿಗೆ ತತ್ತ್ವಜ್ಞಾನ ಅನುಪ್ರೇಯವೆನಿಸಬಹುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಣ್ಣಿಗೇ ಮಣ್ಣೆರಚುವ ಉಪಾಯ
ಶ್ರೇಯವೆನಿಸಬಲ್ಲುದೇನಯ್ಯಾ ?

## ೨೭೦

ನಾಮಪದದ ವೈರಿ ವಿಶೇಷಣ,
ಕವಿತೆಯ ವೈರಿ ವ್ಯಾಕರಣ,
ರಮಣೀಯತೆಯ ವೈರಿ ವಿವರಣೆ,
ಸ್ವಂತಿಕೆಯ ವೈರಿ ಅನುಕರಣೆ,
ಬೆಳವಣಿಗೆಯ ವೈರಿ ಭದ್ರತೆ,
ಉನ್ನತಿಯ ವೈರಿ ಕ್ಷುದ್ರತೆ,
ಒಲವಿನ ವೈರಿ ಸಂಶಯ,
ಚೆಲುವಿನ ವೈರಿ ಅತಿಪರಿಚಯ,
ವಿದ್ಯೆಯ ವೈರಿ ಅಹಂಕಾರ,
ಸಿದ್ಧಿಯ ವೈರಿ ಮಮಕಾರ–
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ವೈರಿ ನಾನೇ, ನನಗೆ ವೈರಿ ನಾನೇ !

## ೨೭೧

ವಿಲಾಯತಿಯ ಎಮ್ಮೆಯಾದೊಡೇನು,
ಅದು ತಿನ್ನುವುದು ಹುಲ್ಲನೇ ;
ವಾರಾಣಸಿಯ ಬೆಕ್ಕಾದರೇನು,
ಅದು ತಿನ್ನುವುದು ಇಲಿಯನ್ನೇ ;
ಮಂತ್ರಿಣಿಯ ತಲೆಯ ಹೇನಾದರೇನು,
ಅದು ತಿನ್ನುವುದು ಹೆಡಸನ್ನೇ ;
ಶ್ವೇತಭವನದ ಸೊಣಗವಾದೊಡೇನು,
ಅದು ತಿನ್ನುವುದು ಅಡಗನ್ನೇ ;
ಮಾನಸಸರೋವರದ ಕಪ್ಪೆಯಾದರೇನು,
ಅದು ತಿನ್ನುವುದು ಹುಳುವನ್ನೇ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬುದ್ಧ ಬಸವ ಬಾಪೂಜಿಯರ
ದೇಶದಲ್ಲಿ ವಾಸಿಸಿದ್ದರೇನು–
ನಾನು ಮೆಚ್ಚಿರುವುದು ನಾಯಿತನವನ್ನೇ !

## ೨೭೨

ಎಲ್ಲ ಪ್ರಾಣಿಗಳಿಗೂ ಒಂದೊಂದು ಪ್ರಾಣಿಗುಣ,
ನನಗೇಕೆ ಇನಿತೊಂದು ಪಶುಗುಣಗಳನ್ನು ಇತ್ತಿಹೆಯಯ್ಯಾ ?
ವಿಷಯದ ಹಸಿರ ಮೆಲ್ಲುವಾಗ ಹಸು–ಹುಲ್ಲೆ–ಮೇಕೆ,
ಕಾಮದ ಬೂದಿಯಲ್ಲಿ ಹೊರಳುವಾಗ ಕತ್ತೆ ನಾನಯ್ಯಾ !
ಒಡೆಯ ನುಡಿದಾಗೊಮ್ಮೆ ಕೌಲೆತ್ತು ನಾನು,
ಆಮಿಷದ ಎಲುಬನಗಿದಾಗ ನಾಯಿ ನಾನಯ್ಯಾ !
ಮದವೇರಿದಾಗ ಮದ್ದಾನೆ,
ಕುಟಿಲಧ್ಯಾನದಲ್ಲಿರುವಾಗ ಬಕ,
ತಳತಂತ್ರಕ್ಕಿಳಿದಾಗ ನರಿ,
ಕದ್ದು ಕುಡಿವಾಗ ಬೆಕ್ಕು,
ಕಚ್ಚುವಾಗ ಹಾವು, ಕುಟುಕುವಾಗ ಚೇಳು,
ಕುಕ್ಕುವಾಗ ಹದ್ದು, ಹಸಿದಾಗ ತೋಳ,
ದೂಷಕನಾದಾಗ ಮೂಷಕ,

ಶೋಷಕನಾದಾಗ ಕೀಟಕ,
ಮನದ ಕೈಗೊಂಬೆಯಾದಾಗ ಮರ್ಕಟ !
ಎನಿತೊಂದು ಪಶುತನಗಳ, ಪಶುಗುಣಗಳ ಮೊಟ್ಟೆ ನಾನು !
ಇವುಗಳಲ್ಲಿ ಒಂದೊಂದರಿಂದಲೂ ಕೆಟ್ಟೆ ನಾನು !
ನನ್ನ ಪಶುತನ ನಿನ್ನ ಪಶುಪತಿತನದಲ್ಲಿ
ಕರಗಿ ಹೋಗಲಯ್ಯ, ತಂದೆ !
ನನ್ನ ಪ್ರಾಣಿಗುಣಗಳೆಲ್ಲ ನಿನ್ನ ಕಲ್ಯಾಣ ಗುಣಗಳಲ್ಲಿ
ಮಿಂದು ಮಡಿಯಾಗಿ
ತೊಡಕಾಗದೆ ತೊಡವಾಗಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೭೩

ಮನದಲ್ಲಿ ಹುಟ್ಟುವ ಹೊಲಸು
ಮನದಲ್ಲಿಯೇ ತೊಳೆದು ಅಳಿದು ಹೋದರೆ ಕ್ಷೇಮವಯ್ಯ !
ಮೊದಲು ಮನವನ್ನು ಹೊಲಸುಗೊಳಿಸಿ,
ಆಮೇಲೆ ರಸನೆಯನ್ನು, ಮಾತನ್ನು ಹೊಲಸುಗೊಳಿಸಿ,
ಕೇಳುವವರ ಕಿವಿಗಳನ್ನು ಕಲುಷಿತಗೊಳಿಸಿ,
ಕೃತಿಗಿಳಿದಾಗ ಕಾಯವನ್ನೆಲ್ಲ ಕಿಲ್ಬಿಷಗೊಳಿಸುವುದಕ್ಕಿಂತ
ಹುಟ್ಟಿದಲ್ಲಿಯೇ ಸುಟ್ಟು ಹೋಗುವುದು ಶ್ರೇಯಸ್ಕರವಯ್ಯ !
ನನ್ನ ಮನದಿ ಹೊಲಸು ಮೂಡುತ್ತಲೇ
ನಿನ್ನ ನೆನಹು ಅಗ್ಗವಣಿಯಾಗಿ ಸುರಿದು
ತೊಳೆದು ಮಡಿ ಮಾಡಲಯ್ಯ ಅದನ್ನು !
ಒಲೆಯ ಬೂದಿ ಒಲೆಯಲ್ಲಾದರೂ ಇರಲಿ,
ತಿಪ್ಪೆಯನ್ನಾದರೂ ಸೇರಲಿ,
ಹಾರಿ ಮನೆಯನ್ನೆಲ್ಲ ಮಲಿನಗೊಳಿಸದಿರಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೭೪

ಮನದ ಸರಸಿಯ
ತರಂಗಸಂಗೀತದಲ್ಲೊಂದು ಸೊಗಸು,
ಅದರ ನಿಸ್ತರಂಗ ನೀರವತೆಯಲ್ಲೊಂದು ಸೊಬಗಯ್ಯ !
ನೀರು ನಿರ್ಮಲವಾಗಿದ್ದರೆ ಸಾಕು–
ತೆರೆಯೆದ್ದರೂ ಸರಿಯೆ, ಇರದಿದ್ದರೂ ಸರಿಯೆ !
ನೀರು ಕೆಡುವ ಲಕ್ಷಣ ತೋರುತ್ತಲೆ
ನಿನ್ನ ನೆನಹು ಕ್ಲೋರಿನ್ನಾಗಿ
ಸೇರಿ ಶೋಧಿಸಲಯ್ಯ, ಶುದ್ಧೀಕರಿಸಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೭೫

ಉಣಿಸಿ ತಿನಿಸಿ ಹಸಿವೆ ಹೆಚ್ಚಿಸುವ
ಕಾಮದಿಂದೆನ್ನ ಕಾಪಾಡಯ್ಯ, ತಂದೆ ;
ನನ್ನನೇ ನನಗೆ ಆಹಾರವಾಗಿಸುವ
ಕ್ರೋಧದಿಂದೆನ್ನ ಕಾಯಯ್ಯಾ ತಂದೆ ;
ಗಳಿಸಿದಷ್ಟೂ ಬಡವನನ್ನಾಗಿಸುವ
ಲೋಭದಿಂದೆನ್ನ ರಕ್ಷಿಸಯ್ಯ, ತಂದೆ ;
ಕಣ್ಣಿದ್ದೂ ಕುರುಡನನ್ನಾಗಿಸುವ
ಮೋಹದಿಂದೆನ್ನ ದೂರವಿರಿಸಯ್ಯ, ತಂದೆ ;
ನನ್ನ ಪತನಕ್ಕೆ ನನ್ನಿಂದಲೇ ಪಥ ಮಾಡಿಸುವ
ಮದದಿಂದೆನ್ನ ಪಾರುಮಾಡಯ್ಯ, ತಂದೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಹೆಣವಾಗುವ ಮೊದಲೇ ನನ್ನ ಕುಣಿ ತೋಡುವ
ಮತ್ಸರದಿಂದೆನ್ನ ಮುಕ್ತಗೊಳಿಸಯ್ಯ, ತಂದೆ !

## ೨೭೬

ಚಂದನ ಮೇಲೆ ಕಾಲು, ಭೂಮಿಯ ಮೇಲೆ ಮನ,
ಭೂಮಿಯ ಮೇಲೆ ಕಾಲು, ಚಂದನ ಮೇಲೆ ಮನ ;
ಅಲ್ಲಿಗೆ ಹೋದಾಗ ಇಲ್ಲಿಯ ಆಸೆ, ಇಲ್ಲಿರುವಾಗ ಅಲ್ಲಿಯ ಆಸೆ ;
ಇದೆಂಥ ತಿರುವುಮುರುವಯ್ಯ ಮನುಜನ ಮನಸ್ಸಿಗೆ ?
ಅಲೆಯುವ ಮನವ ಕಟ್ಟಿ ಹಾಕುವುದೆ ?
ಅಲೆಯ ಬಿಟ್ಟು ನೆಲೆಗೆ ತಲುಪಿಸುವುದೆ ?
ಮನವೇ ಇಲ್ಲದಂತೆ ಮಾಡುವುದೆ ?
ಮನವಿಲ್ಲದ ಮಾನವ ಮೊಟ್ಟೆಯಿಲ್ಲದ ಆಮ್ಲೆಟ್ಟು,
ಡೆನ್ಮಾರ್ಕದ ರಾಜಕುಮಾರನಿಲ್ಲದ ಹ್ಯಾಮ್ಲೆಟ್ಟು ಅಲ್ಲವೇನಯ್ಯಾ ?
ಈ ತುಡುಗು ದನದ ಕೊರಳಿಗೆ ಗುದ್ದಿ ಕಟ್ಟಿ,
ಅಲೆಯಲು ಬರುವಂತೆ ಉದ್ದ ಹಗ್ಗ ಕಟ್ಟಿ,
ಗುರಿಯ ಗೂಟಕ್ಕೆ ಬಿಗಿದರೆ ಸಾಲದೇನಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೭೭

ಪಂಜರದಲ್ಲಿರುವ ಈ ಪಂಚವರ್ಣದ ಪಕ್ಷಿಗೆ
ಆಗಾಗ ಹಾರಾಡುವ ಸ್ವಾತಂತ್ರ್ಯ ;
ಆಮೇಲೆ ಪಂಜರದಲ್ಲಿ ಪಾರತಂತ್ರ್ಯ !
ಇದೇ ಅದರ ಕೊರಗಿಗೆ ಕಾರಣ,
ಇದೇ ಅದರ ಬದುಕಿನ ಹೂರಣ !
ಪಂಜರದಲ್ಲಿಯೇ ಉಳಿದು
ಪೆವ್ಲೊಫನ ಪಕ್ಷಿಯಾಗುವಂತಿಲ್ಲ.
ವನದ ಗಿಳಿಯಾಗಿ ಹಾರಿ ಸ್ವಚ್ಛಂದತೆಗೆ ಸಾಕ್ಷಿಯಾಗುವಂತಿಲ್ಲ !
ಈ ಅತಂತ್ರತೆ ಸ್ವತಂತ್ರತೆಗಳ ಕಲಸು ಮೇಲೋಗರವನ್ನೇ
ಉಂಡು ಬದುಕೆನ್ನುವಿಯೇನಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೭೮

ಮರ ಮೇಲಕ್ಕೆ ಬೆಳೆದು ಬೇರು ಆಳಕ್ಕೆ ಇಳಿದರೆ ಸರಿ,
    ಬೇರು ಮೇಲಕ್ಕೆ ಬೆಳೆದು ಮರ ಕೆಳಗಿಳಿಯಬಹುದೇನಯ್ಯಾ ?
ನೀರಿನ ಖಜಾನೆ ಮೇಲಿದ್ದು ನಲ್ಲಿಗಳು ಕೆಳಗಿದ್ದರೆ ಸರಿ,
    ನಲ್ಲಿಗಳು ಮೇಲಿದ್ದು ಖಜಾನೆ ಕೆಳಗಿಳಿದರೆ ಹೇಗಯ್ಯಾ ?
ಕುಡಿಕೆ ನೆಲದ ಮೇಲುಳಿದು ಬಿರುಸು ಬಾಣ ಮೇಲಕ್ಕೆ ಹಾರಿದರೆ ಸರಿ,
    ಬಿರುಸು ನೆಲದೊಳಗಿಳಿದು ಕುಡಿಕೆ ಮೇಲಕ್ಕೆ ಹಾರಿದರೆ ಹೇಗಯ್ಯಾ ?
ಫ್ಯಾನು ಮೇಲಿದ್ದು ಗಾಳಿ ಕೆಳಗೆ ಬೀಸಿದರೆ ಸರಿ,
    ಫ್ಯಾನು ಕೆಳಗಿದ್ದು ಗಾಳಿ ಮೇಲಕ್ಕೆ ಬೀಸಿದರೆಂತಯ್ಯಾ ?
        ಸ್ವತಂತ್ರಧೀರ ಸಿದ್ಧೇಶ್ವರಾ,
    "ಮನೋಮಯಃ ಪ್ರಾಣ ಶರೀರ ನೇತಾ" ಇದ್ದರೆ ಸರಿ,
    "ಶರೀರಮಯಃ ಪ್ರಾಣಮನ ನೇತಾ" ಆದರೆ ಎಂತಯ್ಯಾ ?

## ೨೭೯

ಗಾಂಪರೂ ಮಾರಿಕೊಳ್ಳುವುದಿಲ್ಲ
        ತಕ್ಕ ಬೆಲೆ ಬರದೆ ತಮ್ಮದೆಂಬುವುದನ್ನು,
ನೀನೂ ಹಲವು ಪೇಟೆ ಅಲೆಯುವೆ,
ಮಾರುಕಟ್ಟೆಯಿಂದ ಮಾರುಕಟ್ಟೆಗೆ ಅಂಡಲೆವೆ–
        ನಿನ್ನ ಹುಲ್ಲುಕಡ್ಡಿಗೂ ಕ್ರಯದೊರೆಯಲೆಂದು.
ಆದರೆ, ಎಲ್ಲಕ್ಕೂ ಆಧಾರವಾದ, ಅಮೂಲ್ಯವಾದ
        ನಿನ್ನನೇ ಮಾರಿಕೊಳ್ಳುವೆ ಬಿಡಿಕಾಸನ್ನೂ ಬೇಡದೆ–
ಸಿಕ್ಕು ಸಿಕ್ಕವರಿಗೆ, ಠಕ್ಕ ಗುರುಗಳಿಗೆ, ಕಪಟ ಸಂನ್ಯಾಸಿಗಳಿಗೆ,
        ಕುಟಿಲ ನಾಯಕರಿಗೆ, ಒಳಗಿನ ವೈರಿಗಳಿಗೆ !
ಎಲ್ಲದಕ್ಕೂ ಬೆಲೆಯಿದೆ, ನಿನಗೇ ಬೆಲೆಯಿಲ್ಲವೆ ?
        ನಿನ್ನ ಬೆಲೆ ನಿನಗೇ ಗೊತ್ತಿಲ್ಲವೆ ?

ಯೇ ಗುಲಾಮಸ್ತ್ ಅಕಲೋ ತದಬೀರಾತೊ ಹೋಷ್,
ತೂ ಚರಾ ಈ ಖೇಷ್ ರಾ ಅರ್ಜಾಂ ಫರೋಷ್ ?
ಎಂದು ಎಂದಿನಿಂದ ಕೇಳುತ್ತಲಿದ್ದಾನೆ ರೂಮಿ,
ಕೇಳಿದರೆ ತಾನೆ ಕಿವಿಯಿದ್ದೂ ಕಿವುಡ ಆಸಾಮಿ ?
ಯಾವ ಜೀವಿಗೂ ನೀಡದ
ಬುದ್ಧಿ, ಉಪಾಯ, ಜ್ಞಾನಗಳನ್ನು
ನಿನಗೆ ಕೊಟ್ಟು ಕೆಟ್ಟೆನೆನ್ನುತ್ತಿದ್ದಾನೆ.
ಸ್ವತಂತ್ರಧೀರ ಸಿದ್ಧೇಶ್ವರ !
ಏನುತ್ತರ ಹೇಳುವಿ ಹೇಳು,
ವೇಳೆಯಾಯಿತು ಏಳು,
ಬೆಳಕಿನ ಬಾಳನ್ನು ಬಾಳು !

## ೨೮೦

ಭಸ್ಮ ಬಳಿದೊಡಿಲ್ಲ, ಗಂಧ ತಳೆದೊಡಿಲ್ಲ, ಗಡ್ಡ ಬೆಳೆದೊಡಿಲ್ಲ,
ಶಿಲುಬೆ ಧರಿಸಿದೊಡಿಲ್ಲ, ಮುದ್ರೆ ಮೆರೆದೊಡಿಲ್ಲ,
ಬಾಹ್ಯ ಚಿಹ್ನೆಗಳಿಂದ ಭಕ್ತರಾದವರುಂಟೆ ?
ಬೂದಿ ಬಳಿದ ಮಾತ್ರಕ್ಕೆ ವಿರಕ್ತರಾದವರುಂಟೆ ?
ಬಳಸಲು ಬಾರದ ಆಯುಧ ಹಿಡಿದು ಶಕ್ತರಾದವರುಂಟೆ ?
ಮುಂಡನ ಮಾಡಿಸಿಕೊಂಡು ಅನಾಸಕ್ತರಾದವರುಂಟೆ ?
ಬರಿ ತನುವ ತೊಳೆದು ಮುಕ್ತರಾದವರುಂಟೆ ?
ವೇಷಗಾರಿಕೆ, ಮೋಸಗಾರಿಕೆ ಬೇರಲ್ಲ :
ಒಳಗ ತೊಳೆಯದೆ ದಾರಿ ಬೇರಿಲ್ಲ ;
ಅಂತರಂಗ ಶುದ್ಧವಾದರೆ ಗುರಿ ದೂರಿಲ್ಲ :
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ !

## ೨೮೧

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆ ಕಾರಣವಾಗಿ ನನ್ನ ಮನ
ಶುಭಭಾವನೆಗಳ ಹೂಬುಟ್ಟಿಯಾಗಿರಲಯ್ಯಾ,
ಕೀಳುಭಾವನೆಗಳ ಕಸದ ಬುಟ್ಟಿಯಾಗದಿರಲಯ್ಯಾ ;
ಸುವಿಚಾರಗಳ ರತ್ನ ಮೌಕ್ತಿಕದಚ್ಚು ಆಗಿರಲಯ್ಯಾ,
ಕುವಿಚಾರಗಳ ಕಲಗಚ್ಚು ಆಗದಿರಲಯ್ಯಾ ;
ಸದ್ವೃತ್ತಿಗಳ ತಲಕಾವೇರಿ ಆಗಿರಲಯ್ಯಾ,
ದುರ್ವೃತ್ತಿಗಳ ಹೊಲೆಗೇರಿಯಾಗದಿರಲಯ್ಯಾ ;
ಪವಿತ್ರ ಪ್ರೇರಣೆಗಳ ಮಡಿವಳಗುಂಡವಾಗಿರಲಯ್ಯಾ ;
ಪಾಪಮಯ ಪಿಪಾಸೆಗಳ ಪಾಪಿಕೊಂಡ ಆಗದಿರಲಯ್ಯಾ ;
ಬುದ್ಧಿಮೂಲ ಶ್ರದ್ಧೆಯ ದಿವ್ಯ ವಸನವಾಗಿರಲಯ್ಯಾ,
ಹಸಿಬಿಸಿ ನಂಬಿಕೆಗಳ ಮಸಿಯರಿವೆಯಾಗದಿರಲಯ್ಯಾ ;
ವಿವೇಕ ವೈಚಾರಿಕತೆಗಳ ವಾಲೀಭಾಂಡಾರವಾಗಿರಲಯ್ಯಾ,
ಪತಿತ ಪ್ರಜ್ಞೆಯ ಪ್ಯಾಂಡೋರಳ ಪೆಟ್ಟಿಗೆಯಾಗದಿರಲಯ್ಯಾ !

## ೨೮೨

ಮನದ ಮಗುವನ್ನು ಮಲಗಿಸಲು
ನಿನ್ನ ನಾಮದ ತೊಟ್ಟಿಲವ ನೀಡಯ್ಯಾ ;
ಮನದ ಮಗುವಿಗೆ ನಿದ್ದೆ ಬರಿಸಲು
ನಿನ್ನ ಕಥೆಯ ಜೋಗುಳವ ಕಲಿಸಯ್ಯಾ ;
ಮನದ ಮಗುವಿನ ಹಸಿವೆ ಹಿಂಗಿಸಲು
ನಿನ್ನ ದಯೆಯ ಹಾಲನ್ನು ದಯಪಾಲಿಸಯ್ಯಾ ;
ಮನದ ಮಗುವಿನ ಕಾಯಿಲೆ ಕಳೆಯಲು
ನಿನ್ನ ಪ್ರಸಾದದ ಮದ್ದ ಕರುಣಿಸಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮನದ ಮಗು
ನಿನ್ನ ಮನೆಯ ಮಗನಾಗಿ ಬೆಳೆಯಲಯ್ಯಾ !

## ೨೮೩

ಹೊಸ ಮಾವಿನ ಹೂವಿನ ಗೊಂಚಲುಗಳಲ್ಲಿ
ಈಗಲೀಗ ಮಿಡಿಗಾಯಿ ಮೂಡುತ್ತಲಿವೆ !
ಹಸಿರಿನಿಂದೊಗೆದ ನಸುಬಿಳಿಯ ಹೂವುಗಳಲ್ಲಿ
ಮತ್ತೆ ಹಸಿರಾಗಿ ಮೂಡಿರುವ ಮಿಡಿಗಾಯಗಳಿವು
ಮಾಗಿ ಹಣ್ಣಾದಾಗ ಬಂಗಾರದ ಬಣ್ಣ ರಸಕ್ಕೆ, ಸಿಪ್ಪೆಗೆ ;
ರಸ ಸೀಪಿದ ಮೇಲೆ ಸಿಪ್ಪೆ ಗೊರಟೆಗಳು ತಿಪ್ಪೆಗೆ !
ರಸವನ್ನುಳಿಸಿಕೊಂಡು
ಎಸೆಯುವುದು ಉಳಿದುದನತ್ತ ಬಾಳು !
ರಸವಂತಿಕೆಯೇ ಬಾಳು ;
ನೀರಸತೆಯೇ ಹಾಳು ;
ಶುಷ್ಕತೆ ಋಕ್ಷತೆಗಳೇ ಬೀಳು !
ನನ್ನ ಮನದ ಮಾಮರದ ಮಿಡಿಗಾಯಿಗಳು
ಮಾಗಿ, ಹಣ್ಣಾಗಿ, ಬಂಗಾರದ ಬಣ್ಣವಾಗಿ,
ಬಾಗಿ, ನಿನ್ನವರ ರಸನೆಗೆ ಸವಿರಸವಾಗುವಂತೆ
ಎಸಗಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

## ೨೮೪

ಬೆಟ್ಟಕ್ಕೆ ಬೇಗೆ ಹತ್ತಿದರೇನು–
ಭಸ್ಮವಾಗುವುದು ಕಾಡು ಮಾತ್ರ ;
ಬೆಟ್ಟದ ಮೇಲೆ ಬಿರುಗಾಳಿ ಬೀಸಿದರೇನು–
ಹಾರಿ ಹೋಗುವುದು ಹುಡಿ ಮಾತ್ರ ;
ಬೆಟ್ಟದ ಮೇಲೆ ಮರ ಮಳೆ ಹೊಯ್ದರೇನು–
ಹರಿದು ಹೋಗುವುದು ಮಣ್ಣು ಮಾತ್ರ ;
ಬೆಟ್ಟದ ಮೇಲೆ ಹಿಮ ಬಿದ್ದೊಡೇನು–
ಮಂಜುಗಟ್ಟುವುದು ಮರಳು ಮಾತ್ರ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬೆಟ್ಟದಷ್ಟು ಕಷ್ಟಗಳು ಮೇಲ್ವಾಯ್ದರೂ
ಬೆಟ್ಟದಂತೆ ಅಚಲವಾಗಿರುವ ಗಟ್ಟಿತನವ,
ಬೆಟ್ಟದ ಮುಡಿಯ ನಿರ್ಮಲತನವ,
ಅಲ್ಲಿಂದ ಕಾಣುವ ಹರಹಿನ ನೋಟವ
ಕರುಣಿಸಯ್ಯಾ !

## ೨೮೫

ಅಲ್ಲಿ ಬರ, ಇಲ್ಲಿ ಬರ, ಎಲ್ಲಿಲ್ಲ ಬರ ?
ಕೆಲಸದ ಬರ, ಕಾಳಿನ ಬರ, ಕಣಿಕೆಯ ಬರ, ಕುಡಿವ ನೀರಿಗೂ ಬರ !
    ಹೊರಗೆ ಅನಾವೃಷ್ಟಿ, ಅತಿವೃಷ್ಟಿ ತಂದಿರುವ ಭೌತಿಕ ಬರ,
    ಒಳಗೆ ಅಸಂಯಮ, ಅಸಹನೆ, ಅತಿರೇಕಗಳು ತಂದ ಆತ್ಮಿಕ ಬರ !
    ಪ್ರೀತಿಯ ಬರ, ನೀತಿಯ ಬರ, ರೀತಿಯ ಬರ,
    ಆತ್ಮೌಪಮ್ಯದ ಬರ, ಸಾತ್ವಿಕತೆಯ ಬರ, ಸಹಾನುಭೂತಿಯ ಬರ !
    ಒಂದು ಬರವಿಲ್ಲದಲ್ಲಿ ಇನ್ನೊಂದು ಬರದ ಅಧಿಕಾರ,
    ಒಮ್ಮೊಮ್ಮೆ ಎರಡೂ ಬರಗಳ ಸಮ್ಮಿಶ್ರ ಸರಕಾರ !
        ಒಳಹೊರಗಿನ ಬರಗಳನೊಮ್ಮೆಗೇ
        ಭಂಗಿಸುವ, ಹಿಂಗಿಸುವ ಪಾಂಗು ತಿಳಿಸಯ್ಯಾ,
        ಗುಂಗು ಹಿಡಿಸಯ್ಯ, ಚೇಗು ಬರಿಸಯ್ಯಾ–
            ಸ್ವತಂತ್ರಧೀರ ಸಿದ್ಧೇಶ್ವರಾ !

## ೨೮೬

ಎದೆಯ ಹಿಗ್ಗು ಹಾಡಹಚ್ಚಲು ಹಾಡುತ್ತದೆ ಹಕ್ಕಿ ;
ನನಗೆ ಹಿಗ್ಗು ಹೆಚ್ಚಲೆಂದು ಹಾಡುವೆನು ನಾನು !
ಎದೆಯ ಹಿಗ್ಗು ಕುಣಿಯ ಹಚ್ಚಲು ಕುಣಿಯುತ್ತದೆ ನವಿಲು ;
ನನಗೆ ಹಿಗ್ಗು ಹೆಚ್ಚಲೆಂದು ಕುಣಿಯುವೆನು ನಾನು !
ಎದೆಯ ಹಿಗ್ಗು ಎಸಳ ಬಿಚ್ಚಲು ಅರಳುತ್ತದೆ ಹೂವು ;
ನನಗೆ ಹಿಗ್ಗು ಹೆಚ್ಚಲೆಂದು ಬಾಯ್ದೆರೆವೆ ನಾನು !
    ತಮ್ಮ ಹಿಗ್ಗನು ಹಂಚುವ ಅವೆಲ್ಲಿ,
    ನನ್ನ ಹಿಗ್ಗಿಗೂ ವಂಚಿತನಾಗಿರುವ ನಾನೆಲ್ಲಿ ?
    ಒಳಗೆ ಹಿಗ್ಗಿ ಹೊರಗೆ ಹಿಗ್ಗು ಹಂಚಲು,
    ಒಳಗೆ ಅರಳಿ ಹೊರಗೆ ಪರಿಮಳ ಹರಿಸಲು,
    ಒಳಗೆ ಮಾಗಿ ಹೊರಗೆ ಸವಿ ಸೂಸಲು
    ಕಲಿಸಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

## ೨೮೭

ನನ್ನ ನುಡಿ ನನ್ನಿಗೆ ಮೀಸಲಾಗಲಿ,
ನನ್ನ ನಡೆ ಲೇಸಿಗೆ ಮೀಸಲಾಗಲಿ,
ನನ್ನ ನಿಷ್ಠೆ ಕರ್ತವ್ಯಕ್ಕೆ ಮೀಸಲಾಗಲಿ,
ನನ್ನ ನಲ್ಮೆ ಸಕಲ ಜೀವಿಗಳಿಗೆ ಮೀಸಲಾಗಲಿ,
ನನ್ನ ತನು ನಾಡು ನುಡಿಗಳ ಊಳಿಗಕ್ಕೆ ಮೀಸಲಾಗಲಿ,
ನನ್ನ ಧನ ನಿನ್ನವರ ದಾಸೋಹಕ್ಕೆ ಮೀಸಲಾಗಲಿ,
ನನ್ನ ಮನ ಜೀವನ ನಿನಗೆ ಮೀಸಲಾಗಲಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೮೮

ಪಂಜದಲ್ಲಿದ್ದೇ ಹತ್ತೂ ನಿಟ್ಟಿಗೆ
ಹಾರಿಬರುವ ಹಕ್ಕಿಯೆ,
ನಿನ್ನನ್ನು ನಾನಾವ ಅಂಕೆಯಲ್ಲಿ ಇರಿಸಲಿ ?
ಉಸಿರಿನ ಅಂಕೆಯಲ್ಲಿ ಇರಿಸಲೆ ?
ನಿನಗಿಂತ ಚಪಲ, ಚಟಿಲ, ಚಂಚಲವದು !
ಧ್ಯಾನಧಾರಣಾದಿಗಳಲ್ಲಿರಿಸಲೆ ?
ನನಗೆ ನಿಲುಕದ ಸಾಧನಗಳವು !
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ನೋಟಕೂಟವ ಗಳಿಸಿ,
ನಿನ್ನ ನಿಲಿಸುವೆ ನೋಡಾ
ಪಕ್ಕವಿಲ್ಲದ ಹಕ್ಕಿಯೆ !

## ೨೮೯

ಬಯಸುವುದು ಜೀವಗುಣ,
ಬಯಸದಿರುವುದು ದೇವಗುಣವೇನಯ್ಯಾ ?
ಬಯಸನೆ ದೇವ, ಉತ್ಪತ್ತಿ ಸ್ಥಿತಿ-ಲಯಗಳನ್ನು ?
ಬಯಸನೆ ಲೋಕಕಲ್ಯಾಣವನ್ನು ?
ಬಯಸನೆ ಸದ್ಭಕ್ತಗಾನವನ್ನು ?
ತನಗಾಗಿ ಬಯಸಿದರೆ ಜೀವಗುಣ,
ಎಲ್ಲರಿಗಾಗಿ ಬಯಸಿದರೆ ದೇವಗುಣವೆಂಬೆನಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೦

ನನಗಾಗಿ ಏನನೂ ಬಯಸಲಾರದೆಂಬ ಸಂಕಲ್ಪ, ಶಪಥ
ಸಡಲಿದುದು ಯಾವುದೋ ವಿಷಗಳಿಗೆಯಲ್ಲೊಮ್ಮೆ-
ಒಂದೆ ನಿಮಿಷದಿ ಇಲ್ಲದಾಯ್ತು ವರುಷಗಳ ಹೆಮ್ಮೆ !
ಬಯಕೆಯ ಬೀಜವಿದ ಮೊಳೆಯಗೊಟ್ಟರೆ
ಬೆಳೆದು ಬೊಬ್ಬುಳಿ-ಬನವಾದೀತೆಂದು
ಮೊಳೆವ ಮೊದಲೇ ಕೊಳೆಸಿಬಿಟ್ಟೆ -
ಮಣ್ಣೊಡನೆ ಮಣ್ಣಾಗಲು ಕಳಿಸಿಬಿಟ್ಟೆ-
ಕೈಮೀರುವ ಮೊದಲೇ ಎಚ್ಚರಿಕೆ ಕೊಟ್ಟೆ !
ಎಂಥ ಕರುಣಾಮಯನು ನೀನು !
ನಿಮಿಷಕ್ಕೆ ನೂರ್ಕೋಟಿ ಪ್ರಮಾದಗಳು
ಪೃಥ್ವಿಯಲ್ಲಿ ಘಟಿಸುತ್ತಿದ್ದರೂ
ಈ ಅನಾಮಿಕನ ಅಧಃಪತನಕ್ಕೆ ಅಡ್ಡಬರಲು
ಸಮಯ ಸಿಕ್ಕಿತು ನಿನಗೆ !
ಅದೂ ಅಪ್ರಾರ್ಥಿತವಾಗಿ !
ಉಸಿರಿಗೊಮ್ಮೆ ಶರಣೆಂಬೆ ನಿನಗೆ ಇದಕಾಗಿ !
ಇನ್ನು ಸಿಲುಕೆನಯ್ಯಾ ಬಯಕೆಯ ಬಲೆಯಲ್ಲಿ ;
ಇನ್ನು ಮರೆಯೆನಯ್ಯಾ, "ಬಯಸಿ ಬಂದುದು
ಅಂಗಭೋಗ, ಬಯಸದೆ ಬಂದುದು ಲಿಂಗಭೋಗ"
ಎಂಬ ಮಹಾ ವಾಕ್ಯವನು !
ಮತ್ತೆ ತಪ್ಪಿದೆನಾದೊಡೆ ತಲೆದಂಡ-
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೧

ಬಿಡಿಯು ಇಡಿಯ ಅಡಿಯಲ್ಲಿ ದುಡಿದರೆ ಮಾತ್ರ
ಬಿಡಿಗೂ ಹಿತ, ಇಡಿಗೂ ಹಿತ ;
ಇಲ್ಲದಿದ್ದರೆ ಅನಾಹುತವಯ್ಯಾ !
ಸಮಗ್ರ ಶರೀರಕ್ಕಾಗಿ ಸತ್ತು ಬದುಕದ ಜೀವಕಣಗಳು
ಏಡಿ ಹುಣ್ಣಾಗಿ ಬೆಳೆದು
ತಮ್ಮನ್ನೂ, ಇಡಿಯ ದೇಹವನ್ನೂ
ಕೇಡಿಗೆ ಈಡುಮಾಡುವಂತೆ,
ಸಮಾಜದಿಂದ ಸಿಡಿದು ನಿಂತು
ಸಮಾಜಕ್ಕೆ ಕೆಡುಕು ತರುವ
ಕಾಳಮತಿಯಿಂದೆನ್ನ ದೂರವಿರಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೨

ಇನ್ನೊಬ್ಬರ ಕೈಯ ತುತ್ತ ಕಸಿದು ತಿನ್ನುವುದಕ್ಕಿಂತ
ಹಸಿದಿರುವುದೇ ಅಸನವಯ್ಯಾ ;
ಇನ್ನೊಬ್ಬರ ಹೆಸರ ಕೆಡಿಸಿ ಹೆಸರಾಗುವುದಕ್ಕಿಂತ
ಹೆಸರಿಲ್ಲದಿರುವುದೇ ಸಸಿನವಯ್ಯಾ ;
ಇನ್ನೊಬ್ಬರ ತುಳಿದು ಮುಂದೆ ಹೋಗುವುದಕ್ಕಿಂತ
ಹಿಂದೆ ಉಳಿದಿರುವುದೇ ಹಸನವಯ್ಯಾ !
ಅನ್ಯರ ಹಿತದಲ್ಲಿ ಅವಿತ
ತನ್ನ ಹಿತವನ್ನು ಅರಿಯದವ
ತನ್ನ ಹಿತವಾವುದೆಂಬುದನ್ನೇ ತಿಳಿಯದ
ತಿಳಿವಿನ ಹಗೆಯಯ್ಯಾ – ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೩

ಈ ವಿಶಾಲ ವಿಶ್ವದಲ್ಲಿ ನಾನೊಬ್ಬನೇ ಬದುಕಿಲ್ಲ–
ನನ್ನೊಬ್ಬನಿಗಾಗಿಯೇ ಈ ಲೋಕವಿಲ್ಲ !
ನಾನು ಒಂಟಿಯಾಗಿ ಬದುಕುವಂತಿಲ್ಲ,
ನಾಲ್ವರಿಗಂಟಿಕೊಳ್ಳದೆ ಜೀವಿಸುವಂತಿಲ್ಲ,
ಲಕ್ಷಜನ ಅಪ್ರತ್ಯಕ್ಷವಾಗಿ ದುಡಿಯದೆ
ನನಗೆ ಬೇಕಾದುದೆಲ್ಲವ ಪಡೆಯುವಂತಿಲ್ಲ !
'ಜಗತ್ತಿರುವುದು ನನಗಾಗಿ', ಎಂದು ಎನ್ನುವವರೆನ್ನಲಿ–
'ನಾನು ಜಗತ್ತಿಗಾಗಿ', ಎಂದೆನಿಸಯ್ಯ ಎನ್ನಿಂದ ;
'ದೇಶವಿರುವುದು ನನಗಾಗಿ', ಎಂದು ಎನ್ನುವವರೆನ್ನಲಿ–
'ನಾನು ದೇಶಕ್ಕಾಗಿ,' ಎಂದೆನ್ನಿಸಯ್ಯ ನನ್ನಿಂದ ;
'ಎಲ್ಲರೂ ನನಗಾಗಿ,' ಎಂದು ಉಬ್ಬಿ ಕೊಬ್ಬದೆ,
'ನಾನೆಲ್ಲರಿಗಾಗಿ,' ಎಂದು ಆನಂದಿಸುವಂತೆ ಮಾಡಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೪

ಹೂ ಹೆತ್ತ ಬಳ್ಳಿಯ
ಬಾಣಂತಿತನ ಮಾಡುವವರಾರಯ್ಯ ?
ಫಲ ತೆತ್ತ ಮರದ
ಆಭಾರ ಮನ್ನಿಸುವವರಾರಯ್ಯ ?
ಬೆಳಕಿತ್ತ ದೀಪಕ್ಕೆ
ಮಾನಪತ್ರ ಕೊಡುವರಾರಯ್ಯ ?
ತೆನೆ ಹೊತ್ತ ದಂಟಿಗೆ
ಬಿರುದು ಬಾವಲಿ ಕೊಡುವರಾರಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂದಿನ ನಮ್ಮ ನೆಮ್ಮದಿಗೆ ಕಾರಣರಾದ
ಲಕ್ಷಲಕ್ಷ ಅಜ್ಞಾತ ಉಪಕಾರಿಗಳ
ಉಪಕಾರ ಸ್ಮರಿಸುವರಾರಯ್ಯಾ ?

## ೨೯೫

ಅರಬ್ಬೀ ಸಮುದ್ರದಿಂದ ಅಟ್ಲಾಂಟಿಕ್ ಸಾಗರದತ್ತತ್ತ ಜಲ ಒಂದೇ–
ಸಾಗರ, ಉಪಸಾಗರ, ಆಖಾತಾದಿ ಅನೇಕ ನಾಮಗಳು
ವ್ಯವಹಾರ ಸೌಕರ್ಯಕ್ಕಾಗಿ ಮಾತ್ರ ;
ಖಂಡ ಖಂಡಗಳಲ್ಲಿರುವ ದೇಶ ಪ್ರದೇಶಗಳಲ್ಲಿ ನೆಲ ಒಂದೇ–
ಸಾಮ್ರಾಜ್ಯ, ರಾಜ್ಯ, ಪ್ರಾಂತ ಮುಂತಾದ ಹೆಸರುಗಳು
ಆಳುವವರ, ಆಡಳಿತದ ಸೌಲಭ್ಯಕ್ಕಾಗಿ ಮಾತ್ರ ;
ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ
ಮಾನವನ ಆಶೋತ್ತರಗಳು ಒಂದೇ–
ಬೇರೆ ಬೇರೆ ಭಾಷೆ ಉಪ ಭಾಷೆಗಳು
ಅಭಿವ್ಯಕ್ತಿಯ ಅನುಕೂಲಕ್ಕಾಗಿ ಮಾತ್ರ ;
ಇದು ಕಾರಣ, ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲ ದೇಶಗಳ, ಎಲ್ಲ ಭಾಷೆಗಳ,
ಎಲ್ಲ ವರ್ಗಗಳ, ಎಲ್ಲ ವರ್ಣಗಳ,
ಎಲ್ಲ ಮತಗಳ, ಎಲ್ಲ ಪಂಥ ಪಥಗಳ
ಎಲ್ಲ ಜನರನ್ನು ನನ್ನವರೆನ್ನುವ,
ನನ್ನವರಂತೆಯೇ ಪ್ರೀತಿಸುವ ಹೃದಯವನ್ನು ನೀಡಾ !

## ೨೯೬

ಹೃದಯರಸ ಬತ್ತಿದರೆ ಬಾಡುವುದಯ್ಯಾ ಮಾನವತೆಯ ಲತೆ ;
ಹೃದಯರಸ ಇಂಗಿದರೆ ಹಿಂಗುವುವಯ್ಯಾ ಮಾನವ ಸಂಬಂಧಗಳು ;
ಹೃದಯರಸ ಹೊಂದದಿರೆ ಕಂದಿ ಕುಂದುವುವಯ್ಯಾ ಕಲೆ, ಶಾಸ್ತ್ರ,
ವಿಜ್ಞಾನ, ವ್ಯವಹಾರಗಳು ;
"ಹೃದಿ ಅಯಂ, ಹೃದಿ ಅಯಂ,' ಎಂದು
ನೀನೇನೋ ನಿನದಿಸುತ್ತಲೇ ಇರುವಿ–
ಹೃದಯ ದೇಗುಲವೇ ಹಾಳು ಬಿದ್ದಿರುವಾಗ
'ಅಯಂ, ವಯಂ, ಯೂಯಂ' ಎಲ್ಲ ಶೂನ್ಯವಲ್ಲವೇನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ ?

## ೨೯೭

ಪ್ರೀತಿಸುವ ಹೃದಯವೊಂದಿದ್ದರೆ ಎಲ್ಲ ಇದ್ದ ಹಾಗೆ–
ಅದಿಲ್ಲದಿರೆ ಎಲ್ಲ ಇದ್ದೂ ಇಲ್ಲದಂತಯ್ಯಾ !
ಸತ್ಯದರ್ಶನ ಸ್ನಿಗ್ಧ ಹೃದಯದ ಮೂಲಕ,
ಶಿವದ ಸಂಪಾದನೆ ಶುದ್ಧ ಹೃದಯದ ಮೂಲಕ,
ಸುಂದರದ ಸಾಧನೆ ಸಮೃದ್ಧ ಹೃದಯದ ಮೂಲಕ,
ಧರ್ಮ ಪರಿಪಾಲನೆ ಪಬುದ್ಧ ಹೃದಯದ ಮೂಲಕ,
ಶಾಸನ ಸರಕಾರಗಳ ಸಫಲತೆ ಸನ್ನದ್ಧ ಹೃದಯಗಳ ಮೂಲಕ,
ಜೀವನದ ಸಾರ್ಥಕತೆಯೇ ಸದುಹೃದಯದಿಂದಯ್ಯಾ !
ಗುರಿಗಳಲ್ಲಿ ಗುರಿ ಸಹೃದಯರ ಸೃಷ್ಟಿ ;
ಸಾಧನಗಳಲ್ಲಿ ಸಾಧನ ಹೃದಯದ ದೃಷ್ಟಿ !
ಸಿರಿವಂತಿಕೆಯನ್ನು ನೀಡು, ಬಿಡು–
ಹೃದಯವಂತಿಕೆಯನ್ನು ಬಿಡದೆ ಕೊಡು,
ಸ್ವತಂತ್ರಧೀರ ಸಿದ್ಧೇಶ್ವರಾ !

## ೨೯೮

ತೆಂಗಿನ ಜುಬ್ಬರದಂಥ ಕೂದಲುಗಳನ್ನು
ಹಸ್ತಿದಂತದ ಹಣಿಗೆಯಿಂದ ಹಿಕ್ಕಿ ಫಲವೇನಯ್ಯಾ ?
ಇಲ್ಲಣದಂತಹ ಮುಖಕ್ಕೆ
ಶ್ರೀಗಂಧದ ಹುಡಿ ಹೂಸಿ ಪಯೋಜನವೇನಯ್ಯಾ ?
ಒಂಟೆಯ ಅಂಕ ಡೊಂಕ ಡುಬ್ಬಕ್ಕೆ
ಜರದ ಜೂಲು ಹೊದಿಸಿ ಸಾರ್ಥಕತೆ ಯಾವುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹೃದಯಹೀನತೆಗೆ
ಧರ್ಮದ ಲಾಂಛನ ಹೊದಿಸೆ ಹದುಳವಾವುದಯ್ಯಾ ?

## ೨೯೯

ಊರ ಮುಂದೆ ಹೊಳೆ ಹರಿದಾಕ್ಷಣ
ಊರವರೆಲ್ಲ ನಿತ್ಯಸ್ನಾನಿಗಳು,
ಈಸಬಲ್ಲವರೇನಯ್ಯಾ ?
ಊರಲ್ಲಿ ನೂರು ದೇವಾಲಯಗಳಿವೆಯೆಂದು
ಊರವರೆಲ್ಲ ದೈವಭಕ್ತರು,
ಧರ್ಮಾತ್ಮರೇನಯ್ಯಾ ?
ಊರಲ್ಲಿ ಓಣಿ ಓಣಿಗೆ ಶಾಲೆಯಿದೆಯೆಂದು
ಊರವರೆಲ್ಲ ನೈಜ ವಿದ್ಯಾವಂತರಿರುವರೇನಯ್ಯಾ ?
ಊರಲ್ಲಿ ಎಲ್ಲ ತರದ ಆಸ್ಪತ್ರೆಗಳಿದ್ದಾಕ್ಷಣ
ಊರವರೆಲ್ಲ, ಆರೋಗ್ಯವಂತರು,
ನಿರೋಗಿಗಳೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶರೀರ ಸಜೀವವಿದ್ದಾಕ್ಷಣ
ಅಲ್ಲಿ ಮಾನವತೆಯೂ ಜೀವಂತವಿದೆಯೆನ್ನಬಹುದೇನಯ್ಯಾ ?
ದೇಹ ಜೀವಂತವಿದ್ದೂ
ದಯೆ ಸತ್ತಿರಬಹುದಯ್ಯಾ,
ಹೃದಯ ಬತ್ತಿರಬಹುದಯ್ಯಾ,
ಮಾನವತೆ ಮೃತವಾಗಿರಬಹುದಯ್ಯಾ !

## ೩೦೦

ನಗೆಯ ಉಗಮದ ಮೇಲೆ ಮಹಾ ಪ್ರಬಂಧವೊಂದನ್ನು
ಬರೆಯುತ್ತ ಬರೆಯುತ್ತ ನಗುವುದನ್ನೇ ಕಳೆದುಕೊಂಡನಯ್ಯಾ ;
ಪ್ರೀತಿಯ ಮೂಲದ ಬಗ್ಗೆ ಶೋಧಿಸುತ್ತ, ಶೋಧಿಸುತ್ತ
ಪ್ರೀತಿಸುವುದನ್ನೇ ಕಳೆದುಕೊಂಡೆನಯ್ಯಾ ;
ಸುಖದ ಸೆಲೆಗಳನ್ನು ಅಗಿದಗಿದು ನೋಡುತ್ತ ನೋಡುತ್ತ,
ಸುಖದ ಹುಟ್ಟುದಾಣವನ್ನೇ ಕಳೆದುಕೊಂಡೆನಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವತೆಯ ಬಗ್ಗೆ ಮಾತಾಡಿ ಮಾತಾಡಿ
ಮಾನವತೆಯನ್ನೇ ಕಳೆದುಕೊಂಡೆನಯ್ಯಾ !

## ೩೦೧

ಬೇರುಳಿಸಿ ಕಡಿದ ಗಿಡ ಚಿಗಿಯಬಹುದು ಮತ್ತೆ,
ಬೇರ್ವೆರೆಸಿ ಕಿತ್ತ ಗಿಡ ಚಿಗಿಯಬಹುದೇನಯ್ಯಾ ?
ಸಂರಕ್ಷಿತ ಬೀಜ ಮೊಳೆಯಬಹುದಾಗಲಿ
ಹುಳು ತಿಂದ ಬೀಜ ಮೊಳೆಯಬಹುದೇನಯ್ಯಾ ?
ಸೆಲೆಯಿದ್ದ ಭಾವಿ ತುಂಬಬಹುದು ಮತ್ತೆ,
ಹಾಳು ಬಿದ್ದ ಬಾವಿ ತುಂಬಬಹುದೇನಯ್ಯಾ ?
ಉಸಿರಿದ್ದ ರೋಗಿ ಗುಣವಾಗಬಹುದಾಗಲಿ
ಉಸಿರಳಿದ ರೋಗಿ ವಾಸಿಯಾಗಬಲ್ಲನೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವತ್ವ ಉಳಿದ ನರ ನರೋತ್ತಮನಾಗಬಹುದಾಗಲಿ
ಅಮಾನುಷನು ಅತಿ ಮಾನವನಾಗಬಲ್ಲನೇನಯ್ಯ –
ನಿನ್ನ ಕೃಪೆಯಿಲ್ಲದೆ ?

## ೩೦೨

ಸಿರಿಯ ಸರಿ ಹಸುಗೆ, ಹೃದಯ ಹೃದಯಗಳ ಬೆಸುಗೆ,
ಬರಲಯ್ಯಾ ಭುವನಕ್ಕೆ ಒಲವಿನೊಸಗೆ !
ಕಳೆದು ಹೋದ ವಿಶ್ವಾಸ, ನೈಜ ಮನುಜತೆಯ ನಿಶ್ವಾಸ,
ಮರಳಲಯ್ಯಾ ಮನುಕುಲಕ್ಕೆ ನಂಬಿಕೆಯ ಉಲ್ಲಾಸ !
ಬಳಸಿಯೂ ಕರಗದ ಗಂಟು ನರರ ನರರ ನಂಟು,
ತಿರುಗಲಯ್ಯಾ ತಿರೆಗೆ ಕರುಳು ಕರುಳಿನ ಅಂಟು !
ಅವಿಶ್ವಾಸದ ಅಮಾವಾಸ್ಯೆಯಲ್ಲಿಯೇ
ವಿಶ್ವಾಸದ ಚಂದ್ರ ಮೂಡಲಿ ;
ಮನುಜನೆದೆಯ ಮಾಗಿಯಲ್ಲಿಯೇ
ಮಾನವ್ಯದ ಸುಗ್ಗಿ ಬರಲಿ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿ
ಮಾನವತೆಯ ಮಂಗಳದ ರಂಗವಾಗಲಿ !

## ೩೦೩

ಆಗ,
'ಅಹಿಂಸಾ ಪರಮೋಧರ್ಮಃ,'
'ಸತ್ಯಾನ್ನಾಸ್ತಿ ಪರೋಧರ್ಮಃ,' ಇತ್ಯಾದಿ ;
ಈಗ,
'ನ ಮಾನುಷಾತ್ ಪರೋಧರ್ಮಃ,'
ನಿಜ, ಮನುಷ್ಯರೇ ಇಲ್ಲವಾದರೆ
ಧರ್ಮ ಯಾರಿಗಾಗಿ ?
ಮನುಷ್ಯತ್ವವೇ ಧರ್ಮ,
ಮನುಷ್ಯರಿಗಾಗಿ ಧರ್ಮ !
ಮಾನವರಿಂದ, ಮಾನವರಿಗಾಗಿ,
ಮಾನವ ಧರ್ಮ ಮೂಡಿ
ಮೇಲೆತ್ತಲಯ್ಯಾ ಮಾನವರನ್ನು –
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೦೪

ವಿಜಯಗಳಲ್ಲಿ ವಿಜಯ ಮನೋವಿಜಯ,
ಪರಿವರ್ತನೆಗಳಲ್ಲಿ ಹಿರಿದು ಹೃದಯಪರಿವರ್ತನೆ,
ಕ್ರಾಂತಿಗಳಲ್ಲಿ ಹಿರಿದು ವಿಚಾರಕ್ರಾಂತಿ,
ಕಲೆಗಳಲ್ಲಿ ಹಿರಿದು ಜೀವನಕಲೆ,
ಭಾಷೆಗಳಲ್ಲಿ ಹಿರಿದು ಮಾತೃಭಾಷೆ,
ಭೂಮಿಗಳಲ್ಲಿ ಹಿರಿದು ಮಾತೃಭೂಮಿ,
ಹೃದಯಗಳಲ್ಲಿ ಹಿರಿದು ಮಾತೃಹೃದಯ,
ಶಕ್ತಿಗಳಲ್ಲಿ ಹಿರಿದು ಆತ್ಮಶಕ್ತಿ,
ಮುಕ್ತಿಗಳಲ್ಲಿ ಹಿರಿದು ಜೀವನ್ಮುಕ್ತಿ,
ಸ್ವತಂತ್ರಧೀರ ಸಿದ್ಧೇಶ್ವರಾ,
ಮತಗಳಲ್ಲಿ ಹಿರಿದು ಮನುಜಮತ !

## ೩೦೫

ಮೂಗು ಚುಚ್ಚಿಸಿಕೊಳ್ಳಲು ಮನಸ್ಸಿಲ್ಲದಿದ್ದರೆ
ಮೂಗುತಿಯ ಹಂಬಲವೇಕಯ್ಯ ?
ಉಳಿಯ ಮುಟ್ಟಲು ಮನಸ್ಸಿಲ್ಲದಿದ್ದರೆ
ಮೂರ್ತಿಯಾಗುವ ಹಂಬಲವೇತಕಯ್ಯ ?
ತೇಜಾಬಿನ ಗೋಜು ಬೇಡವೆಂದರೆ
ಅಪರಂಜಿಯಾಗುವ ಅಭೀಪ್ಸೆಯೇಕಯ್ಯ ?
ಸುತ್ತಿಗೆಯ ಪೆಟ್ಟುಗಳ ಸಹಿಸೆನೆಂದರೆ
ಅಲಗು ಆಗುವ ಅಭಿಲಾಷೆಯೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳಿಗೆ ಆಗಲು ಆಗದೆಂದರೆ
ನೀನಾಗುವ ಹಂಬಲವೇಕಯ್ಯ ?

## ೩೦೬

ಜಗತ್ತಿನಲ್ಲಿ ಜಾತಿಗಳು ಸಾವಿರ ಸಾವಿರ ಇವೆಯಂತೆ,
ನನ್ನ ದೇಶದಲ್ಲಿಯೇ ಸುಮಾರು ಮೂರು ಸಾವಿರ ಇವೆಯಂತೆ !
ಆರೈದು ನೋಡಿದರೆ ಎರಡೇ ಜಾತಿಗಳಯ್ಯಾ ಜಗದಲ್ಲಿ !
ಸ್ತ್ರೀ ಪುರುಷರೆಂಬ, ಕರಿಯ–ಬಿಳಿಯರೆಂಬ,
ಆಸ್ತಿಕ–ನಾಸ್ತಿಕರೆಂಬ, ಪೌರ್ವಾತ್ಯ–ಪಾಶ್ಚಿಮಾತ್ಯರೆಂಬ,
ಸ್ಪೃಶ್ಯಾಸ್ಪೃಶ್ಯರೆಂಬ, ಕುಲಜ–ಕುಲಹೀನರೆಂಬ,
ಭವಿ–ಭಕ್ತರೆಂಬ, ಮುಸ್ಲಿಂ–ಕಾಫಿರರೆಂಬ,
ಕ್ರಿಶ್ಚಿಯನ್–ಇನ್ಫಿಡೆಲರೆಂಬ ಎರಡು ಜಾತಿಗಳಲ್ಲ–
ಒಳ್ಳೆಯವರು ಕೆಟ್ಟವರೆಂಬ
ಎರಡೇ ಜಾತಿ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೦೭

ನಿಜದ ಗುಡಿಯಲ್ಲಿ ಪೂಜೆ ಮಾಡುವವರು
ನಿನ್ನ ನೈಜ ಮಕ್ಕಳೆಂಬೆನಯ್ಯಾ ;
ಪ್ರೇಮದ ಇಗರ್ಜಿಯಲ್ಲಿ ಪ್ರಾರ್ಥನೆ ಮಾಡುವವರು
ನಿನ್ನ ಪ್ರೀತಿಯ ಮಕ್ಕಳೆಂಬೆನಯ್ಯಾ ;
ಮೈತ್ರಿಯ ಮಸೀದಿಯಲ್ಲಿ ನಮಾಜು ಮಾಡುವವರು
ನಿನ್ನ ಮಮತೆಯ ಮಕ್ಕಳೆಂಬೆನಯ್ಯ ;
ವಿವೇಕದ ವಿಹಾರದಲ್ಲಿ ಧ್ಯಾನ ಮಾಡುವವರು
ನಿನ್ನ ವಾತ್ಸಲ್ಯದ ಮಕ್ಕಳೆಂಬೆನಯ್ಯ ;
ಲೇಸಿನ ಬಸದಿಯಲ್ಲಿ ತಪವ ಗೈವವರು
ನಿನ್ನ ಮೀಸಲು ಮಕ್ಕಳೆಂಬೆನಯ್ಯಾ ;
ಗರಿಮೆಯ ಗುರುದ್ವಾರದಲ್ಲಿ ಗ್ರಂಥ ಪಠಿಸುವವರು
ನಿನ್ನ ಕರುಳಿನ ಮಕ್ಕಳೆಂಬೆನಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳ ಹೃದಯದಲ್ಲಿ ನಿನ್ನ ಕಾಣುವವರ
ನೀನೇ ಎಂಬೆನಯ್ಯಾ !

## ೩೦೮

ಹೊಳೆಗಟ್ಟು ಮುಟ್ಟುವವರೆಗೆ ಹಲವು ಮುಖ ಹೊಲದ ನೀರಿಗೆ–
ಹೊಳೆಗಟ್ಟ ಮುಟ್ಟಿದ ಮೇಲೆ ಏಕಮುಖವಯ್ಯಾ ;
ಹೆಳಲು ಮುಟ್ಟುವವರೆಗೆ ಹಲವೆಡೆಗಳ ಕೂದಲುಗಳು,
ಹೆಳಲು ಸೇರಿದ ಮೇಲೆ ಒಂದೆಡೆಯ ಕೂದಲುಗಳಯ್ಯ ;
ಹಣ್ಣಾಗುವವರೆಗೆ ಹಲವು ಪಕಳೆಗಳು ಹೂಗಳಿಗೆ–
ಹಣ್ಣಾದ ಮೇಲೆ ಅನೇಕ ಏಕವಾಗುವುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನರಿಯುವ ಮೊದಲು ಹಲವು ಮತ, ಹಲವು ಪಥ ;
ನಿನ್ನನರಿದ ಮೇಲೆ ಒಂದೆ ಮತ, ಒಂದೆ ಪಥವಯ್ಯಾ ;

೩೦೯

ತಜ್ಞತೆಯು ಬೆಳೆಯುತ್ತಿರುವಂತೆಯೇ
ಕೃತಜ್ಞತೆಯು ಅಳಿಯುತ್ತಿದೆಯಯ್ಯಾ ;
ವ್ಯಕ್ತಿಗೌರವ ಹೆಚ್ಚುತ್ತಿರುವಂತೆಯೇ
ಪರಸ್ಪರ ಗೌರವ ಕ್ಷಯಿಸುತ್ತಿದೆಯಯ್ಯಾ ;
ಸಿರಿಸಂಪದಗಳು ವರ್ಧಿಸುತ್ತಿರುವಂತೆಯೇ
ಶಾಂತಿ ಸಂತೃಪ್ತಿಗಳು ಲುಪ್ತವಾಗುತ್ತಲಿವೆಯಯ್ಯಾ ;
ಮಾಹಿತಿಯು ಸಮೃದ್ಧವಾಗುತ್ತಿರುವಂತೆಯೇ
ಸನ್ಮತಿಯು ಬಡವಾಗುತ್ತಿದೆಯಯ್ಯಾ !
ಗಾತಕ್ಕೆ ಪಾತತೆಯ ಬಲಿ,
ಅಗಲಕ್ಕೆ ಆಳದ ಬಲಿ,
ಆಳಕ್ಕೆ ಎತ್ತರದ ಬಲಿ,
ಎತ್ತರಕ್ಕೆ ಬಿತ್ತರದ ಬಲಿ,
ನಿರ್ಜೀವಕ್ಕೆ ಜೀವದ ಬಲಿ,
ಬಾಳದುದಕ್ಕೆ ಬಾಳಿನ ಬಲಿ !
ಮಾನವ ಮಾಡುತ್ತಿರುವುದು ಮಾನವನಿಗೇ ತಿರುಗುಪ್ಪು,
ಮಾನವ ಬೇಡುತ್ತಿರುವುದು ಒಪ್ಪು,
ಪಡೆಯುತ್ತಿರುವುದು ತಪ್ಪು !
ಹೌಹಾರಿದ್ದಾನೆ ಮಾನವ–
ದುರುಪಯೋಗಿಸಿ ನಿನ್ನ ದಾನವ !
ತನಗೆ ತಾನೇ ಅಲರ್ಜಿಯಾಗಿದ್ದಾನೆ !
ತನಗೆ ತಾನೇ ಮೂಕ ಅರ್ಜಿಯಾಗಿದ್ದಾನೆ !
ಸ್ವತಂತಧೀರ ಸಿದ್ಧೇಶ್ವರಾ,
ಇದುವರೆಗೆ ಏನೇನೋ ದಾನಗಳನ್ನಿತ್ತಿರುವೆ,
ಇಂದು ನೀಡು ನಮಗೆ–ನರರಿಗೆ
ಮಾನವರಾಗುವ ಮಹಾದಾನವನ್ನು !

## ೩೧೦

ಮನುಜನ ಕಣ್ಣಿಗೆ ಮನುಜ
ಮನುಜನಾಗಿಯೇ ಕಾಣಿಸುವುದು
ಅದೆಷ್ಟು ಕರಕಷ್ಟವಯ್ಯಾ !
ಎಲ್ಲರೂ ಅವನನ್ನು ನೋಡುವುದು
ತಮ್ಮ ವಿಶಿಷ್ಟ ದೃಷ್ಟಿಯಿಂದಲೇ !
ವೈದ್ಯನ ದೃಷ್ಟಿಯಲ್ಲಿ ಅವನು ರೋಗಿ ಮಾತ್ರ,
ವಕೀಲನ ದೃಷ್ಟಿಯಲ್ಲಿ ಕಕ್ಷಿಗಾರ ಮಾತ್ರ,
ಜೇಲರನ ದೃಷ್ಟಿಯಲ್ಲಿ ಕೈದಿ ಮಾತ್ರ,
ವ್ಯಾಪಾರಿಯ ದೃಷ್ಟಿಯಲ್ಲಿ ಗಿರಾಕಿ ಮಾತ್ರ,
ಬಾಬಾಗಳ ದೃಷ್ಟಿಯಲ್ಲಿ ಪರಾಕಿ ಮಾತ,
ರಾಜಕಾರಣಿಯ ದೃಷ್ಟಿಯಲ್ಲಿ ಓಟು ಮಾತ್ರ,
ಬೆಲೆವೆಣ್ಣಿನ ದೃಷ್ಟಿಯಲ್ಲಿ ನೋಟು ಮಾತ್ರ,
ಕಂಡಕ್ಟರನ ದೃಷ್ಟಿಯಲ್ಲಿ ಟಿಕೆಟ್ಟು ಮಾತ್ರ,
ಬ್ಯಾಂಕರನ ದೃಷ್ಟಿಯಲ್ಲಿ ಡಿಪಾಜಿಟ್ ಮಾತ್ರ,
ಶಿಕ್ಷಕನ ದೃಷ್ಟಿಯಲ್ಲಿ ಹಾಜರಿ ವಹಿಯ ಅಂಕಿ ಮಾತ್ರ,
ಅಂಚೆಯವನ ದೃಷ್ಟಿಯಲ್ಲಿ ಗೃಹಸಂಖ್ಯೆ ಮಾತ್ರ !
ನಿನ್ನ ದೃಷ್ಟಿಯಲ್ಲಾದರೂ ನಾವು
ಮನುಷ್ಯರಾಗಿ ಕಾಣುತ್ತಿಹೆವೇನಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೧೧

ಬಾನವರನ್ನಾಗಿ ಮಾಡಿ ಬಾನಿಗೇರಿಸದಿರು,
ದಾನವರನ್ನಾಗಿ ಮಾಡಿ ರಸಾತಳಕ್ಕೆ ಕಳಿಸದಿರು,
ಮಾನವರನ್ನಾಗಿ ಮಾಡಿ ಇದೇ ಸುಂದರ ಜಗತ್ತಿನಲ್ಲಿಯೇ
ಉಳಿಸಿ ಬೆಳೆಸಿ ಬೆಳಗಿಸಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೧೨

ಪುಷ್ಪ ಸುಂದರವೋ, ಪರ್ಣ ಸುಂದರವಿಲ್ಲ ;
ಪರ್ಣ ಸುಂದರವೋ, ಪುಷ್ಪ ಸುಂದರವಿಲ್ಲ ;
ಪರ್ಣಪುಷ್ಪಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ವದನ ಸುಂದರವೋ, ಗುಣ ಸುಂದರವಿಲ್ಲ ;
ಗುಣ ಸುಂದರವೋ, ವದನ ಸುಂದರವಿಲ್ಲ ;
ವದನ ಗುಣಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ನುಡಿ ಸುಂದರವೋ, ನಡೆ ಸುಂದರವಿಲ್ಲ ;
ನಡೆ ಸುಂದರವೋ, ನುಡಿ ಸುಂದರವಿಲ್ಲ ;
ನಡೆ ನುಡಿಗಳೆರಡೂ ಸುಂದರವಾಗಿರುವುದು ವಿರಳವಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸತ್ಯ-ಶಿವ-ಸುಂದರನಿದ್ದೂ
ನಿನ್ನ ಮಕ್ಕಳಲ್ಲೇಕೆ ಇವು ವಿರಳವಯ್ಯಾ ?

## ೩೧೩

ಎಂಥ ಶ್ರೇಷ್ಠ ಬೀಜವಿದ್ದೊಡೇನು,
ಮಣ್ಣಿನಲ್ಲಿ ಬೆರೆತು ಬೆಳೆದಾಗ ಮಾತ್ರ ಬೆಲೆಯದಕ್ಕೆ ;
ಎಂಥ ಫಲವತ್ತಾದ ನೆಲವಿದ್ದೊಡೇನು,
ಬೀಜ ಬಿದ್ದು ಬೆಳೆದಾಗ ಮಾತ್ರ ಬೆಲೆಯದಕ್ಕೆ ;
ಎಂಥ ಉದಾತ್ತ ತತ್ತ್ವವಿದ್ದೊಡೇನು,
ವ್ಯಕ್ತಿಗಳ ಬದುಕಿನಲ್ಲಿ ಬೆರೆತಾಗ ಮಾತ್ರ ಬೆಲೆಯದಕ್ಕೆ ;
ತತ್ತ್ವಗಳ ಬರವಿಲ್ಲ ಇಲ್ಲಿ,
ತತ್ತ್ವಕ್ಕೆ ತೊತ್ತಾಗುವವರ ಬರವಿದೆ !
ತತ್ತ್ವ ತತ್ತ್ವ ಎನ್ನುತ್ತಲೇ
ತತ್ತ್ವಹತ್ಯೆಗೈವವರ ಕಂಡಾಗ
ನಿನಗೆ ಜಿಗುಪ್ಸೆಯೋ ಕನಿಕರವೋ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೧೪

ಭೂಮಿ ಬೇಕಾದಷ್ಟು ಫಲವತ್ತಾಗಿದೆ,
    ಮಳೆ ಸಾಕಷ್ಟಿಲ್ಲ ;
ಮಳೆ ಸಾಕುಸಾಕೆನ್ನುವಷ್ಟಿದೆ,
    ಭೂಮಿ ಬೆಳೆವುದಿಲ್ಲ !
ಬುದ್ಧಿ ಬೇಕಾದಷ್ಟಿದೆ,
    ಹೃದಯ ಸೊನ್ನೆ !
ಹೃದಯ ಶ್ರೀಮಂತವಾಗಿದೆ,
    ಬುದ್ಧಿಗೆ ದಾರಿದ್ರ್ಯ !
    ಮೈ ಗಟ್ಟಿಯಿರುವಲ್ಲಿ ಮನ ಟೊಳ್ಳು,
    ಮನ ಗಟ್ಟಿಯಿರುವಲ್ಲಿ ಮೈ ಪೊಳ್ಳು !
    ಒಲವು ಉಳ್ಳವರಲ್ಲಿ ಬಲವಿಲ್ಲ,
    ಬಲವಿದ್ದವರಲ್ಲಿ ಒಲವಿಲ್ಲ,
    ಸಿರಿಯಿರುವವರಿಗೆ ಗುರಿಯಿಲ್ಲ,
    ಗುರಿಯುಳ್ಳವರಿಗೆ ಸಿರಿಯಿಲ್ಲ !
    ಒಂದಿದ್ದರೊಂದಿಲ್ಲ,
    ಹಲ್ಲಿದ್ದವನಿಗೆ ಕಡಲೆಯಿಲ್ಲ,
    ಕಡಲೆಯಿದ್ದವನಿಗೆ ಹಲ್ಲಿಲ್ಲ !
    ಏನಿದೀ ಇಜ್ಜೋಡು ?
    ಏನು ಮನುಕುಲದ ಪಾಡು ?
    ಯುಗಯುಗ ಕಳೆದರೂ
        ಒಂದೇ ಹಾಡು !
    ಆದರೂ ಹತಾಶವಾಗಿಲ್ಲ ಮನುಜಮತಿ,
        ಅಲುಗಿಲ್ಲ ಅದರ ಧೃತಿ !
    ಬಲ–ಒಲವು, ಅಧಿಕಾರ–ನ್ಯಾಯ, ಗುರಿ–ಸಿರಿ,
    ಶಿವಶಕ್ತಿಗಳ ಸಮ್ಮಿಳನಕ್ಕಾಗಿ
    ಹೋರುತ್ತಲೇ ಇದೆ. ಈ ಹೋರಾಟದಲ್ಲಿಯೇ ಸುಧೆ,
        ಸ್ವತಂತ್ರಧೀರ ಸಿದ್ಧೇಶ್ವರಾ !

೩೧೫

ಹೋಳಿಯ ಹಾಡುಗಳಲ್ಲಿ ಅವಾಚ್ಯ ಶಬ್ದಗಳಿದ್ದರೆ
ಆಕ್ಷೇಪಿಸುವವರಿಲ್ಲ–
ಮಹಾಕಾವ್ಯದಲ್ಲಿ ಒಂದೇ ಒಂದು ಅನುಚಿತ ಪದವಿದ್ದರೂ
ಎತ್ತಿ ತೋರುವರಯ್ಯಾ !
ಕಳ್ಳನ ಕಳ್ಳತನವ, ಸುಳ್ಳನ ಸುಳ್ಳತನವ,
ಖುಲ್ಲನ ಖುಲ್ಲತನವ ಕಣ್ಣೆತ್ತಿ ನೋಡದವರೂ
ಒಳ್ಳಿದನ ಅಲ್ಪಪ್ರಮಾದ ಕಂಡರೂ
ಕಣ್ಣು ಕೆಂಪಗೆ ಮಾಡುವರಯ್ಯಾ !
ಅಧಃಪಾತವನ್ನು ಕಂಡು ಮರುಗದವರೂ
ಆದರ್ಶ–ಪಾತವನ್ನು ಕಂಡು ಕೊರಗುವರಯ್ಯಾ !
ಆದರ್ಶ–ಪಾತಕ್ಕಾಗಿ ಕೊರಗಿದರೆ ಸಾಲದು,
ಆದರ್ಶ–ರಕ್ಷಣೆಗಾಗಿ ಹೋರಾಡುವವರ,
ಆದರ್ಶ ಸಾಧನೆಯಲ್ಲಿ ಸಂಕಷ್ಟಗಳನ್ನು ಸಹಿಸುವವರ,
ಸಂಕ್ಲೇಶಗಳಲ್ಲಿ ದಹಿಸಿಯೂ
ಆದರ್ಶದ ಪಕ್ಷ ವಹಿಸುವವರ
ಎಲ್ಲೆಲ್ಲೂ ಹುಟ್ಟಿಸಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

೩೧೬

ಹಿತ್ತಾಳೆ ಕಿಲುಬು ಬಿಡುವುದೆಂದು
ಚಿನ್ನವೂ ಕಿಲುಬು ಬಿಟ್ಟರೆ ಹೇಗಯ್ಯ ?
ಕಬ್ಬಿಣ ತುಕ್ಕು ಹಿಡಿಯುವುದೆಂದು
ವಜ್ರಕ್ಕೂ ತುಕ್ಕು ಹಿಡಿದರೆ ಹೇಗಯ್ಯ ?
ಬೇರೆ ಕಟ್ಟಿಗೆಗೆ ಗೊರಲೆ ಹತ್ತುವುದೆಂದು
ತೇಗಿಗೂ ಗೊರಲೆ ಹತ್ತಿದರೆ ಹೇಗಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ದಡ್ಡರು ಅಡ್ಡಹಾದಿ ಹಿಡಿಯುವರೆಂದು
ದೊಡ್ಡವರೂ ಅಡ್ಡಹಾದಿ ಹಿಡಿದರೆ ಹೇಗಯ್ಯ?

## ೩೧೭

ಕೆಲವರು ಸ್ವತಂತ್ರರಾಗಿರಲೆಂದು
        ಬಹುಜನರು ಬಂಧನದಲ್ಲಿಯೇ ಬಳಲಬೇಕೇನಯ್ಯಾ ?
ಕೆಲವರು ಒಡೆಯರಾಗಿರಲೆಂದು
        ಬಹುಜನರು ಬಡವರಾಗಿಯೇ ಅಳಲಬೇಕೇನಯ್ಯಾ ?
ಕೆಲವರು ಅರಿವಿನ ದೊರೆಗಳಾಗಿರಬೇಕೆಂದು
        ಬಹುಜನರು ಮರಹಿನ ಕುರಿಗಳಾಗಿಯೇ ಉಳಿಯಬೇಕೇನಯ್ಯಾ
ಕೆಲವರು ಶ್ರೇಷ್ಠರೆನಿಸಿ ಮೆರೆಯಲೆಂದು
        ಬಹುಜನರು ಕನಿಷ್ಠರಾಗಿಯೇ ಕೊಳೆಯಬೇಕೇನಯ್ಯಾ ?
'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬುದು
ಕನಸಿನ ಕಲ್ಪವೃಕ್ಷವಾಗಿಯೇ ಬೆಳೆಯಬೇಕೇನಯ್ಯಾ ?
                ಹೇಳಯ್ಯ, ಹೇಳಯ್ಯ–
                ಎಂದು ನಿನ್ನ ಸೃಷ್ಟಿಯಲ್ಲಿ
                ವಿಷಮತೆಯ ವಿಷದ ಬಳ್ಳಿ
                ಅಳಿದು ಸಮತೆಯ ಅಮೃತದ ವಲ್ಲರಿ
                ಬೆಳೆವುದು ಹೇಳಯ್ಯ – ಸ್ವತಂತ್ರಧೀರ ಸಿದ್ಧೇಶ್ವರಾ !

## ೩೧೮

ಉಂಡುದಕ್ಕಿಂತ ಉಳಿಸಿದ ಎಂಜಲು ಹೆಚ್ಚು
        ಉಳ್ಳ ಕೆಲವರ ಬೆಳ್ಳಿ ತಟ್ಟೆಗಳಲ್ಲಿ ;
ಬಳಿದು ತಂದ ಎಂಜಲವೇ ಪರಮ ಪ್ರಸಾದ
        ಅಸಂಖ್ಯ ಅಭಾಗಿಗಳ ಮಣ್ಣ ಮಿಟ್ಟೆಗಳಲ್ಲಿ !
ಏನ ಕೊಂಡರೆ ಹಸಿವೆಯಾದೀತೆಂಬ ಹಳವಂಡ ಕೆಲವರಿಗೆ,
'ಏನ ತಿನ್ನಲಿ ಹಸಿವೆ ಹಿಂಗಿಸಲು ?' ಎಂಬ ಚಿಂತೆ ಬಹುಜನರಿಗೆ !
        ಅಜೀರ್ಣವಾಗಿ ಆಸ್ಪತ್ರೆಗೆ ಹೋಗುವವರು ಕೆಲವರು,
        ಹಸಿವೆಯಿಂದ ಕುಸಿದು ಆಸ್ಪತ್ರೆ ಸೇರುವವರು ಬಹುಜನರು !
'ಹಸಿವೆಯೇ ಇಲ್ಲ' ವೆನ್ನುವವರಿಗೆ ಮೈಮುರಿದು ದುಡಿಯಲು ಕಲಿಸಿ
        'ಹಸಿವೆಯೇ ಹಿಂಗ'ದೆನ್ನುವವರಿಗೆ ಅಶನವನ್ನು ನೀಡಾ–
                ಸ್ವತಂತ್ರಧೀರ ಸಿದ್ಧೇಶ್ವರಾ !

೩೧೯

ನೀನು ಬಡವರ ಒಡೆಯ,
ದೀನರ ದೇವ, ದಲಿತರ ತಂದೆ!
ಬಡವರಿಗೂ ದೊರೆವ ಕಾಡಪತ್ರಿ,
ತುಂಬೆಯ ಹೂ ಪ್ರಿಯ ನಿನಗೆ ;
ಕಣ್ಣಪ್ಪನ ಅಡಗೋ, ಚೆನ್ನಯ್ಯನ ಅಂಬಲಿಯೋ
ಆರೋಗಣೆ ನಿನಗೆ ;
ಒಲೆಯ ಬೂದಿಯೋ, ಬಿಲಿಯದ ಭಸ್ಮವೋ
ಅನುಲೇಪನ ನಿನಗೆ !
ಎಂಥ ದೀನ ಬಂಧು ನೀನು–
ಬಡವರಿಗೂ ಬೇಗ ದೊರೆಯಲೆಂದು
ಗಿಡ ಮೂಲಿಕೆಗಳಲ್ಲಿ ಮದ್ದನಿರಿಸಿದೆ ;
ಅಣಬೆ, ಅತ್ತಿ, ನುಗ್ಗೆ, ನೆಲ್ಲಿ, ಜಾಲಿಗಳಲ್ಲಿ
ಪೌಷ್ಟಿಕಾಂಶಗಳನಿರಿಸಿದೆ ;
ಶಿವದಾನ ಸೊಪ್ಪುಗಳಲ್ಲಿ, ನೇರಿಳೆ ಪೇರಲಗಳಲ್ಲಿ
ಪೋಷಣಾಂಶಗಳನಿರಿಸಿದೆ ;
ಸಾಮಾನ್ಯದಲ್ಲಿ ಅಸಾಮಾನ್ಯವನಿರಿಸಿದೆ !
ಅಸಾಮಾನ್ಯರೆನಿಸಿಕೊಳ್ಳುವವರ
ಸಾಮಾನ್ಯ ನಡವಳಿಕೆಗಳ
ನೋಡಿ ನೋಡಿ ರೋಸಿಹೋಗಿದ್ದೇವೆ ;
ಈಗ ಸಾಮಾನ್ಯರಲ್ಲಿಯ
ಅಸಾಮಾನ್ಯಶಕ್ತಿಯ
ಪ್ರಕಟಿಸಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

೩೨೦

ಬೆಟ್ಟದ ಮುಡಿಯ ಮೇಲೆ, ಉತ್ತುಂಗ ಮಹಡಿಗಳ ಮೇಲೆ ಮಾತ್ರ
ಹೂಬಿಸಿಲ, ಹೊಂಬಿಸಿಲ ಹರಡಿ ಹಿಗ್ಗದಿರು ಹೊಂಗದಿರ !
ಕೊಳೆಗೇರಿಗಳ ಕತ್ತಲೆ ಕವಿದ ಕುಟೀರಗಳ ಮೇಲೂ
ಹೊನ್ನ ಹೊತ್ತರೆಯ ಬರಿಸು ;
ಹಳ್ಳಿಹಳ್ಳಿಯ ಸಂದಿಗೊಂದಿಗಳ ಗುಡಿಸಲುಗಳ ಮೇಲೂ
ಬಂಗಾರ ಬೆಳಕ ಹರಿಸು !
ಉಳ್ಳವರ ಕೈಗೊಂಬೆಯಾಗದೆ
ಇಲ್ಲದವರ ಆಧಾರವಾಗು ದಿವಾಕರ !
ನೆನಪಿಡು, ಸ್ವತಂತ್ರಧೀರ ಸಿದ್ಧೇಶ್ವರ ಪ್ರೀತನಾಗುವುದು
ಹಣಹದ್ದುಗಳ ಹೊಂಜೊಡರಿನಿಂದಲ್ಲ–
ಬಡಭಕ್ತರ ಮಣ್ಣ ಹಣತೆಯಿಂದ

೩೨೧

ದುರಾಚಾರಿಯಾದ ಪಂಡಿತನಿಗಿಂತ
ಸದಾಚಾರಿಯಾದ ಪಾಮರನೇ ಮೇಲಯ್ಯ ;
ನಿಷ್ಕ್ರಿಯನಾದ ಜ್ಞಾನಿಗಿಂತ
ಸಕ್ರಿಯನಾದ ಸಾಮಾನ್ಯನೇ ಶ್ರೇಷ್ಠನಯ್ಯ ;
ಹರಿದು ತಿನ್ನುವ ಬಲ್ಲಿದನಿಗಿಂತ
ಹಂಚಿ ಉಣ್ಣುವ ಬಡವನೇ ಲೇಸಯ್ಯ ;
ಸಣ್ಣತನದ ಸಾಹಿತಿಗಿಂತ
ದೊಡ್ಡತನದ ಓದುಗನೇ ವಂದ್ಯನಯ್ಯ ;
ಭೂಭಾರಿ ಕಾಷಾಯಧಾರಿಗಿಂತ
ಪರೋಪಕಾರಿ ಸಂಸಾರಿಯೇ ಹಿರಿಯನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪಥಗೆಟ್ಟ ಪ್ರಧಾನಿಗಿಂತ
ನೀತಿ ನಿಷ್ಠ ಮತದಾರರೇ ಮೇಲಯ್ಯ !

೩೨೨

ಮಾನವರ ಹೊಟ್ಟೆ ತುಂಬಲು
ಹೆಜ್ಜೆ ಹೆಜ್ಜೆಗೆ ಆಹಾರವಿರಿಸಿರುವೆಯಯ್ಯ
ಹಲವಾರು ರೂಪಗಳಲ್ಲಿ ;
ಕಾಳುಕಡ್ಡಿಗಳೋ, ಕಂದಮೂಲಗಳೋ, ಕಾಯಿ ಪಲ್ಯಗಳೋ,
ಹಾಲು ಹಣ್ಣುಗಳೋ, ಮೊಟ್ಟೆ ಮಾಂಸಗಳೋ–
ಎಷ್ಟುತರದ ಆಹಾರಗಳು ಒಂದಿಷ್ಟು ಹೊಟ್ಟೆಗಾಗಿ !
ಪಶುಪಕ್ಷಿಗಳಿಗಿಲ್ಲದ ಈ ಆಹಾರ ವೈವಿಧ್ಯ,
ಈ ಅಪಾರ ಆಹಾರ ಸಮೃದ್ಧಿ ಮಾನವನಿಗೆ !
ಹೀಗಿದ್ದೂ ಈ ಲೋಕದ ಅರ್ಧದಷ್ಟು ಮಾನವರು
ಅರ್ಧ ಹೊಟ್ಟೆಯುಂಡೇ ಬದುಕಿದ್ದಾರೆ !
ಎಂಥ ನಾಚಿಕೆಗೇಡು ನರಕುಲಕ್ಕೆ !
ಕಲಿತಿಲ್ಲ ನಾವು ಹಂಚಿಕೊಂಡು ಉಣ್ಣುವುದಕ್ಕೆ !
ಮತಿಪಡೆದ ಮಾನವನ
ಮತಿಗೇಡಿತನ ನೋಡಿ
ನಗುತಿಹೆಯೇನಯ್ಯಾ, ಸ್ವತಂತ್ರಧೀರ ಸಿದ್ಧೇಶ್ವರಾ ?

೩೨೩

ಸರಪಳಿಯ ಬಲ ಅದರ ಅತಿ ದುರ್ಬಲ ಗೊಣಸಿನಷ್ಟೇ ;
ಸಮಾಜದ ಬಲ ಅದರ ಅತಿ ದುರ್ಬಲ ವರ್ಗದಷ್ಟೇ !
ಹಡಗಕ್ಕೆ ಎಲ್ಲಿ ತೂತು ಬಿದ್ದರೇನು, ಎಲ್ಲೆಲ್ಲಿಯೂ ನೀರು !
ಸಮಾಜದಲ್ಲಿ ಯಾರು ದಲಿತ–ದುರ್ಬಲರಾದರೇನು, ಎಲ್ಲರಿಗೂ ಅಸಡ್ಡಾಳು!
ಕೇರಿಯ ಬೆಂಕಿ
ಊರಿನ ಬೆಂಕಿಯಾಗದೆ
ಆರಿಸದಿದ್ದರೆ ?
ಮೇಲು ಕೀಳೆಂಬ, ಬಡವ ಬಲ್ಲಿದರೆಂಬ
ಭೇದವ ಗಣಿಸುವುದೆ ಸುಡುವಗ್ನಿ ?
ಕಾಂತಿಯ ಅಗ್ನಿಗೆ ಸೌದೆಯಾಗುವ ಮುನ್ನ
ಒಡಲ ಅಗ್ನಿಗೆ ಅನ್ನವಾಗಿರೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ !

## ೩೨೪

ಸಂಗಹಿಸಿದೆ ಸಂಗ್ರಹಿಸಿದೆ, ಸಂಗ್ರಹಿಸಿದೆ–
ಸಕಲೈಶ್ವರ್ಯಗಳ ಸಂಗ್ರಹಿಸಿದೆ ಜೀವಿ,
ಧರಿಸಿ ಖಾಕಿ, ಖಾದಿ, ಕಾವಿ !
ಈಗ ಸಂಪತ್ತೇ ವಿಪತ್ತಾಗತೊಡಗಿದೆಯೇನು ?
ಒಳಗೊಳಗೇ ಹೆದರಿ ಕುದಿದು ಕೋಟಲೆಗೊಳ್ಳುತ್ತಿಹೆಯೇನು ?
ದಕ್ಕದ ಅನ್ನವನ್ನು ಕಕ್ಕುವ ಹಾಗೆ
ಹೆಚ್ಚಿನ ಸಂಪದವ ಇಲ್ಲದವರಿಗಿಕ್ಕು ;
ಇಲ್ಲದಿರೆ ಅದೇ ಆಗುವುದು ನುಂಗಿದ ದಕ್ಕು !
"ಪಾನೀ ಬಾಢೇ ನಾವ್ ಮೇಂ
ಘರ ಮೇಂ ಬಾಢೇ ದಾಮ್,
ದೋನೋಂ ಹಾಥ್ ಉಲೀಥೇ
ಯಹೀ ಸಯಾನೀ ಕಾಮ್"
ಎಂಬುದ ಮರೆಯದಿರು ಜೀವಿ !
ಮರೆತರೆ, ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ,
ಸಾವಿಲ್ಲದೆಯೇ ಸಾಯುವಿ !

## ೩೨೫

ಮದ್ದಿನ ಮನೆಯನ್ನು ಕಾಯಲು
ಕಿಡಿಯ ಕಾವಲುಗಾರನನ್ನು ಇರಿಸುವುದೆ, ಅಯ್ಯ ?
ಕುರಿಗಳನ್ನು ಕಾಪಾಡಲು
ತೋಳಗಳನ್ನು ನಿಯಮಿಸುವುದೆ, ಅಯ್ಯ ?
ಇಲಿಗಳ ಪಾಲನೆಗಾಗಿ
ಬೆಕ್ಕುಗಳನಿಕ್ಕುವುದೆ, ಅಯ್ಯ ?
ಕಪ್ಪೆಗಳ ಪೋಷಣೆಯನ್ನು
ಕಾಳೋರಗಗಳಿಗೆ ಒಪ್ಪಿಸುವುದೇ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮೂಕ ಜನತೆಯ ಆಗುಹೋಗುಗಳನ್ನು
ಸುಲಿಗೆಗಾರರ ಕೈಗೆ ಕೊಡುವುದೆ, ಅಯ್ಯ ?

## ೩೨೬

ಮುತ್ತು ಅರಸಿಯ ಕೊರಳ ಹಾರ ಸೇರುತ್ತದೆ,
ಅರಸನ ಕಿರೀಟ ಕುಂಡಲ ಸಾರುತ್ತದೆ–
ಆದರೆ, ಮುತ್ತನಿತ್ತ ಸಿಂಪು ಮಾತ್ರ
ಇದ್ದಲ್ಲಿಯೇ ಒದ್ದಾಡುತ್ತದೆ !
ಹೂವು ದೇವದೇವೋತ್ತಮನ ಗುಡಿ ಸೇರುತ್ತದೆ,
ದಿವ್ಯ ಸುಂದರಿಯರ ಮುಡಿ ಸೇರುತ್ತದೆ,
ಆದರೆ, ಹೂವನಿತ್ತ ಬಳ್ಳಿ ಮಾತ್ರ
ಇದ್ದಲ್ಲಿಯೇ ಕೋಡಿ ಬಾಡುತ್ತದೆ !
ಕಸ್ತೂರಿ ಅರಮನೆ ಸೇರುತ್ತದೆ, ಗುರುಮನೆ ಸೇರುತ್ತದೆ,
ಸಾಮಂತ ಶ್ರೀಮಂತರ ಧವಳ ಸೌಧಗಳನ್ನು ಸೇರುತ್ತದೆ,
ಆದರೆ, ಕಸ್ತೂರಿ ಕೊಟ್ಟ ಮೃಗ ಮಾತ್ರ
ಕಾಡುಪಾಲಾಗಿಯೇ ಉಳಿಯುತ್ತದೆ !
ಹತ್ತಿ ವಸ್ತ್ರವಾಗಿ, ಗೋಧಿ ಬಿಸ್ಕತ್ತಾಗಿ, ಕಡಲೆ ಪುಟಾಣಿಯಾಗಿ,
ರೈತ ಬೆಳೆದುದೆಲ್ಲ ಏನೇನೋ ಆಗಿ ಎಲ್ಲೆಲ್ಲಿಗೋ ಹೋಗುತ್ತದೆ,
ಆದರೆ, ಬೆಳೆದ ರೈತ ಮಾತ್ರ ಇದ್ದಲ್ಲಿಯೇ ಕೊಳೆಯುತ್ತಾನೆ !
ಅದಿರು ಉಕ್ಕಾಗಿ, ತಾಮ್ರವಾಗಿ, ತವರಾಗಿ, ಬೆಳ್ಳಿ ಬಂಗಾರವಾಗಿ
ಏನೇನೋ ಆಗಿ ಉಳ್ಳವರ ಮನೆ ಸೇರುತ್ತದೆ,
ಆದರೆ, ಗಣಿ ಗಿರಣಿಗಳ ಕಾರ್ಮಿಕ ಮಾತ್ರ ಇದ್ದಂತೆಯೇ ಉಳಿಯುತ್ತಾನೆ!
ಕಲಿತವ ಅವಕಾಶ ಪಡೆದು
ಪರಮೋಚ್ಚ ಪದವಿಗೇರುತ್ತಾನೆ,
ಆದರೆ, ಕಲಿಸಿದವ ಮಾತ್ರ ಹಿಡಿಕಾಸಿನಲ್ಲಿಯೇ
ಹುಲುಬಾಳು ಹೊರೆಯುತ್ತಾನೆ !
ಇದು ನ್ಯಾಯವೇನಯ್ಯಾ ?
ಇದು ನ್ಯಾಯವೆಂದರೆ
ಅನ್ಯಾಯವಿನ್ನಾವುದಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೨೭

ಸ್ವತಂತ್ರಧೀರ ಸಿದ್ಧೇಶ್ವರಾ,
ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು,
ಹೆಂಡ ಮಾರುವವರು ಲಕ್ಷಾಧೀಶರಾಗಬೇಕು–
ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ ?
ದುಡಿವವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ,
ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ ?
ಮಾನವೋದ್ಧಾರಕರಿಗೆ ವಿಷದ ಬಟ್ಟಲು, ಗುಂಡು,
ಮಾನವೋತ್ಪೀಡಕರಿಗೆ ಸುಖಸಂಪದ–
ಇದೇ ನಿನ್ನ ನೀತಿ ನಿಯಮವೇನಯ್ಯಾ ?
ಇರಲಾರದು, ಇರಬಾರದು !
ಇದ್ದರೆ ಇದರ ತಪ್ಪು ಯಾರದು ?
ನಿನ್ನ ಹೆಸರಿನಲ್ಲಿ ಇಷ್ಟು ದಿನ ಇವು ಬದುಕಿದುದೇ ತಪ್ಪು,
ನಿನ್ನ ಹೆಸರಿಗೆ ಇವುಗಳಿಂದ ಕಪ್ಪು,
ಇನ್ನಾದರೂ ಒಪ್ಪು !
ನೀನು ಒಪ್ಪು, ಬಿಡು, ನಾವು ಮಾತ್ರ
'ಶಿವಮಯ ಶಕ್ತಿ, ಶಕ್ತಿಮಯ ಶಿವ'ದ ಗುರಿಯ,
ಸರ್ವರಿಗೆ ಸಮಾನಾವಕಾಶದ ಗುರಿಯ,
ಸರ್ವೋದ್ಧಾರದ, ಸರ್ವಜನಸುಖದ ಗುರಿಯ
ಮುಟ್ಟಿಯೇ ತೀರುವೆವು,
ನಾವು ನಮ್ಮನೇ ಮೀರುವೆವು !

## ೩೨೮

ಸರ್ವೋದ್ಧಾರದ ವಿಚಾರಗಳ ಪ್ರಚಾರವೇ ಪುಣ್ಯ,
ಶೋಷಕ–ಪೋಷಕ ವಿಚಾರಗಳ ಪಸಾರವೇ ಪಾಪ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೨೯

ದೊಡ್ಡದನ್ನು ಮಾಡಲು ಬರುವುದಿಲ್ಲ,
ಸಣ್ಣದನ್ನು ಮಾಡಲು ಮನಸ್ಸಿಲ್ಲ–
        ಬರಿದಾಗಿ ಹೋಯಿತಯ್ಯ ಬದುಕು !
ತನಗೂ ತಿಳಿಯಲಿಲ್ಲ,
ತಿಳಿದವರು ಹೇಳಿದರೂ ಕೇಳಲಿಲ್ಲ–
ಮೌಢ್ಯವನ್ನೇ ಬಳಸಿದುದಾಯ್ತಯ್ಯ ಅದಕು, ಇದಕು, ಎದಕು !
ತಾನೂ ಸುಖಿಸಲಿಲ್ಲ, ಅನ್ಯರಿಗೂ ಸುಖಿಸಗೊಡಲಿಲ್ಲ–
ವ್ಯರ್ಥವಾಗಿ ಹೋಯಿತಯ್ಯ ಸಿರಿ–ಸಂಪತ್ತು !
ದುಷ್ಟ ಶಿಕ್ಷಣವನ್ನೂ ಮಾಡಲಿಲ್ಲ,
ಶಿಷ್ಟರಕ್ಷಣವನ್ನೂ ಮಾಡಲಿಲ್ಲ–
ಕೆಲಸಕ್ಕೆ ಬಾರದಾಯಿತ್ತಯ್ಯ ಸತ್ತೆ, ಹುಕೂಮತ್ತು !
        ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
        ಏನಿಲ್ಲ ಎಲ್ಲರೂ ನಲ್–ಬಾಳಲು ?
        ಎಲ್ಲ ಇದೆ, ಎಲ್ಲ ಇದೆ, ಎಲ್ಲ ಇದ್ದೂ
        ನಮ್ಮಲ್ಲಿಯೇ ಏನೋ ಇಲ್ಲವಾಗಿ
        ಎಲ್ಲ ಹೊಲ್ಲವಾಗಿಹುದಯ್ಯ !

## ೩೩೦

ಕೊಬ್ಬರಿಯನ್ನು ಕಳೆದುಕೊಂಡು
ಕರಟಕ್ಕಾಗಿ ಕಚ್ಚಾಡುವವರ ಕಂಡು
        ಕನಿಕರಿಸುತ್ತಿಹೆಯೇನಯ್ಯಾ ?
ಕಬ್ಬನ್ನು ಕಳೆದುಕೊಂಡು
ಸಿಪ್ಪೆ ಸೋಗೆಗಳಿಗಾಗಿ ಕಿತ್ತಾಡುವವರ ಕಂಡು
        ಮರುಗುತ್ತಿಹೆಯೇನಯ್ಯಾ ?
ಜೇನನ್ನು ಕಳೆದುಕೊಂಡು ಮೇಣಕ್ಕಾಗಿ
ಧರ್ಮವನ್ನು ಕಳೆದುಕೊಂಡು ಭಸ್ಮಬೊಟ್ಟುಗಳಿಗಾಗಿ,
ಮನುಷ್ಯತ್ವವನ್ನು ಕಳೆದುಕೊಂಡು ಸೊತ್ತುಗಳಿಗಾಗಿ
        ಕಡಿದಾಡುವವರ ಕಂಡು
        ಕಂಬನಿದುಂಬಿಹೆಯೇನಯ್ಯಾ–ಸ್ವತಂತ್ರಧೀರ ಸಿದ್ಧೇಶ್ವರಾ ?

೩೩೧

ವಿದ್ಯೆಯನ್ನು ಮುಚ್ಚಿಟ್ಟು ಮುಚ್ಚಿಟ್ಟು
ವಿದ್ಯಾವಿಹೀನರ ಮಾಡಿದೆವಯ್ಯ ಬಹುಜನಸಮಾಜವನ್ನು ;
ದುಡಿವವರನ್ನು ಅಡಿಗೊತ್ತಿ ಅಡಿಗೊತ್ತಿ
ಬಡವರನ್ನಾಗಿ ಮಾಡಿದೆವಯ್ಯ ಬಹುಸಂಖ್ಯೆಯ ಶ್ರಮಿಕರನ್ನು ;
ಆದಿ ಜನರನ್ನೇ ಹೊರಗಿಟ್ಟು ಹೊರಗಿಟ್ಟು
ದಲಿತರನ್ನಾಗಿ ಮಾಡಿದೆವಯ್ಯ ದೇವರ ಮಕ್ಕಳನ್ನು ;
ಅಬಲೆಯರನ್ನು ಅದುಮಿಟ್ಟು ಅದುಮಿಟ್ಟು
ಅಸಹಾಯಕರನ್ನಾಗಿ ಮಾಡಿದೆವಯ್ಯ ಅಕ್ಕತಂಗಿಯರನ್ನು ;
ಉಳುವವರನ್ನು ಕೆಳಗೊತ್ತಿ ಕೆಳಗೊತ್ತಿ
ಬಲಹೀನರನ್ನಾಗಿ ಮಾಡಿದೆವಯ್ಯ ಬೇಸಾಯಗಾರರನ್ನು ;
ಓದಿಸುವವರನ್ನು ಉದಾಸೀನ ಮಾಡಿ ಮಾಡಿ
ಅಲಕ್ಷಿತರನ್ನಾಗಿ ಮಾಡಿದೆವಯ್ಯ ನಮ್ಮ ಶಿಕ್ಷಕರನ್ನು !
ಇವರೆಲ್ಲರ ದಾರಿದ್ರ್ಯವ ಹೊತ್ತು ನಿಂತಿದೆ
ಕೆಲವೇ ಕೆಲವರ ಸಿರಿವಂತಿಕೆಯ ಸೌಧ !
ಇವರೆಲ್ಲರ ಅಜ್ಞಾನವ ಎತ್ತಿ ನಿಂತಿದೆ
ಕೆಲವೇ ಕೆಲವರ ಜ್ಞಾನವಂತಿಕೆಯ ಸದ್ಮ !
ತಲೆಕೆಳಗಾದ ಪಿರಮಿಡ್ಡು ಈ ಸಮಾಜ !
ಬಿರುಗಾಳಿಗೆ ಉರುಳಿ ಬೀಳುವ ಮುನ್ನ
ನಿಡುಬುಡದ ಮೇಲೆ ನಿಲ್ಲಿಸಯ್ಯ ಇದನು–
ಸ್ವತಂತ್ರಧೀರ ಸಿದ್ಧೇಶ್ವರಾ !

೩೩೨

ಸರಕಾರ ದರೋಡೆಕಾರನಾದಾಗ
ನೌಕರರು ನರಭಕ್ಷಕರಾಗದಿರುವರೇನಯ್ಯ ?
ಸಚಿವರೇ ಸುಲಿಗೆಗಾರರಾದಾಗ
ಆಪ್ತ ಸಹಾಯಕರು ಡಕಾಯಿತರಾಗರೇನಯ್ಯ ?
ಪೋಷಕರೇ ಶೋಷಕರಾದಾಗ
ಆಶ್ರಿತರು ಜೀವನ್ಮೃತರಾಗರೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಮಾಜವೇ ಸಮಜವಾದಾಗ
ವ್ಯಕ್ತಿ ಪಶುವಾದರೆ ಆಶ್ಚರ್ಯವೇನಯ್ಯ ?

## ೩೩೩

ದೇಶವನ್ನು ಛಿದ್ರಿಸುವ ಯಾರನ್ನೂ
    ನಾಯಕನೆಂದು ಒಪ್ಪೆನಯ್ಯಾ ನಾನು ;
ದೇಹ–ಧಾರಿಯಾದ ಯಾರನ್ನೂ
    ಭಗವಾನನೆಂದು ಒಪ್ಪೆನಯ್ಯಾ ನಾನು ;
ಅಹಂಕಾರಿಯಾದ ಯಾರನ್ನೂ
    ಜ್ಞಾನಿಯೆಂದು ಒಪ್ಪೆನಯ್ಯಾ ನಾನು ;
ಅಂಧಶ್ರದ್ಧೆ ಬಿಡದ ಯಾರನ್ನೂ
    ವಿಜ್ಞಾನಿಯೆಂದು ಒಪ್ಪೆನಯ್ಯಾ ನಾನು ;
ನಿನ್ನ ಮಕ್ಕಳಲ್ಲಿ ಭೇದ ಬಗೆಯುವ ಯಾರನ್ನೂ
    ಭಕ್ತನೆಂದು ಒಪ್ಪೆನಯ್ಯಾ ನಾನು ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಸಮಾಜವನ್ನು ಒಡೆಯುವ ಯಾರನ್ನೂ
    ಗುರುವೆಂದು ಒಪ್ಪೆನಯ್ಯಾ ನಾನು !

## ೩೩೪

ಮೂರು ಮೂರು ತಾಸು ಭಾಷಣ ಬಿಗಿವವರಿಗಿಂತ
ಊರ ದಾರಿಯ ಮುಳ್ಳು ತೆಗೆವವರಿಗೆ ತಲೆಬಾಗುವೆನಯ್ಯಾ ನಾನು ;
ಮೂರು ಹೊತ್ತು ಮಾರುದ್ದ ಪೂಜೆ ಮಾಡುವವರಿಗಿಂತ
ಮೂರು ನಿಮಿಷ ರೋಗಿಯ ಶುಶ್ರೂಷೆ ಮಾಡುವರಿಗೆ ಮಣಿವೆನಯ್ಯ ನಾನು ;
ಹೊಸ ಹೊಸ ಹಸಿಬಿಸಿ ಶಾಸನ ರಚಿಸುವವರಿಗಿಂತ
ಹಸಿದವರಿಗೆ ಅಶನವಿಕ್ಕುವವರಿಗೆ ವಂದಿಸುವೆನಯ್ಯ ನಾನು ;
ಗುಡಿ ಗುಂಡಾರ ಮಠ ಮಹಲುಗಳ ಕಟ್ಟಿಸುವವರಿಗಲ್ಲ,
ಬಡವರಿಗೆ ಗುಡಿಸಲು ಕೊಡುವರಿಗೆ ಕೈಮುಗಿವೆನಯ್ಯ ನಾನು ;
ವೇದಾಗಮಗಳಿಗೆ ಭಾಷ್ಯ ಬರೆಯುವವರಿಗಿಂತ
ನಿರಕ್ಷರರಿಗೆ ಅಕ್ಷರ ಕಲಿಸುವವರಿಗೆ ಕೈ ಜೋಡಿಸುವೆನಯ್ಯ ನಾನು ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಹೆಸರು ಹೇಳಿ ಬದುಕುವವರಿಗಲ್ಲ,
ಹಸುಳೆ ಹೆಂಗಳೆಯರ ಏಳಿಗೆಗೆ ಯತ್ನಿಸುವರಿಗೆ
ನಮೋ ನಮೋ ಎಂಬೆನಯ್ಯ ನಾನು !

## ೨೨೫

ಸಿಂಹಾಸನದ ಮೇಲಿನ ಶಕ್ತಿಯ ಕಂಡರು,
ಸಿಂಹಾಸನದ ಹಿಂದಿನ ಶಕ್ತಿಯ ಕಂಡರು,
ಸಿಂಹಾಸನದ ಕೆಳಗಣ ಜನಶಕ್ತಿಯನ್ನೇ ಕಾಣರಯ್ಯ ಕೆಲವು ಇತಿಹಾಸಕಾರರು;
ಅಣುವಿನೊಳಗಣ ಶಕ್ತಿಯ ಕಂಡರು,
ಮಹತ್ತಿನೊಳಗಣ ಶಕ್ತಿಯ ಕಂಡರು,
ಮನದೊಳಗಣ ಮಹಾಶಕ್ತಿಯನ್ನೇ ಕಾಣರಯ್ಯ ಕೆಲವು ವಿಜ್ಞಾನಿಗಳು;
ಸಂಸಾರದೊಳಗಣ ಬಂಧನಗಳನ್ನು ಕಂಡರು,
ಕರ್ಮದೊಳಗಣ ಬಂಧನಗಳನ್ನು ಕಂಡರು,
ಬುದ್ಧಿಯೊಳಗಣ ಬಂಧನಗಳನ್ನೇ ಕಾಣರಯ್ಯ ಕೆಲವು ಬುದ್ಧಿಜೀವಿಗಳು;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾತಿನ ಶಕ್ತಿಯನ್ನು ಕಂಡರು,
ರೀತಿಯ ಶಕ್ತಿಯನ್ನು ಕಂಡರು,
ಪ್ರೀತಿ ಸಹಾನುಭೂತಿಯ ಶಕ್ತಿಯನ್ನು
ಇನ್ನಷ್ಟು ಕಾಣಲಯ್ಯ ಮಾನವರು !

## ೨೨೬

ಯಾವ ಕಲ್ಲಾದರೂ ರತ್ನವನ್ನೊಡೆಯಬಹುದು,
ಆದರೆ, ಎಲ್ಲ ಕಲ್ಲೂ ರತ್ನವಾಗಬಹುದೇನಯ್ಯ ?
ಶಲಭ ಬಾವುಲಿಗಳೂ ದೀಪವನ್ನಾರಿಸಬಲ್ಲುವು,
ಆದರೆ, ಅವೇ ದೀಪ ಹೊತ್ತಿಸಬಲ್ಲುವೇನಯ್ಯ ?
ಯಾವ ದೊಣ್ಣೆಯಾದರೂ ಮಡಕೆಯನ್ನೊಡೆಯಬಲ್ಲದು,
ಆದರೆ, ಅದೇ ಮಡಕೆಯ ಮಾಡಬಲ್ಲುದೇನಯ್ಯ ?
ಯಾವ ಕೈಯಾದರೂ ಹೂವ ಕಿತ್ತುಕೊಳ್ಳಬಲ್ಲುದು,
ಆದರೆ, ಯಾವ ಕೈಯಿಂದ ಹೂವ ಹುಟ್ಟಿಸಲಾಗುವುದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸೃಷ್ಟಿಸಿದುದ ಕೆಡಿಸಬಲ್ಲವರಿಗೆ ಕೊರತೆಯಿಲ್ಲ,
ಕೆಟ್ಟುದನ್ನು ಸರಿಪಡಿಸುವವರ ಹೆಚ್ಚಿಸಯ್ಯ !

## ೩೩೭

ಮೇಣದ ಹುಟ್ಟು ಮಾಡಿದರೂ ಬಿಡರು,
ಸಿಗುರಿನ ಕವಚ ತೊಟ್ಟರೂ ಬಿಡರು,
ನಾರಿನ ಹೊದಿಕೆ ಹೊತ್ತರೂ ಬಿಡರು,
ಕೆಚ್ಚಲಿನ ರಕ್ಷಣೆ ಪಡೆದರೂ ಬಿಡರು,
ಏನ ಮಾಡಿದರೂ ಎಲ್ಲಿದ್ದರೂ ಬಿಡರು–
ಸೃಷ್ಟಿಯೊಳಗಣ ಸವಿಯ ಸೂರೆಗೊಳ್ಳುವುದನ್ನು ನರರು !
ಸೃಷ್ಟಿಗೊಂಡಿಹ ಸವಿಯನೇನೋ ಸವೆಯೆ ಸವಿಯುವರು–
ಸೃಷ್ಟಿಸುವರೆ ತಾವು ಸಹ ಹೊಸ ಸವಿಯನು ?
ಇದ್ದ ಸವಿಯ ಸವಿದು,
ಹೊಸ ಸವಿಯ ಹುಟ್ಟಿಸದವರು
ಅಡ್ಡಾಡುವ ಶವಗಳೆಂದಾತ–
ಸ್ವತಂತ್ರಧೀರ ಸಿದ್ಧೇಶ್ವರ !

## ೩೩೮

ಹುಲಿಯ ಚರ್ಮದ ಮೇಲೆ ಕುಳಿತಾಕ್ಷಣ
ಹುಲಿಯ ಮೇಲೆ ಸವಾರಿ ಮಾಡಿದಂತಾಯಿತೇನಯ್ಯ ?
ಕಾಮನ ಚಿತ್ರ ದಹಿಸಿದ ಮಾತ್ರಕ್ಕೆ
ಕಾಮವ ಸುಟ್ಟು ಬೊಟ್ಟಿಟ್ಟ ಹಾಗಾಯಿತೇನಯ್ಯ ?
ಕಾಷಾಯಾಂಬರ ಧರಿಸಿದೊಡನೆ
ಮನಃಕಷಾಯಗಳು ಮಾಯವಾಗುವುವೇನಯ್ಯ ?
ಗೊತ್ತುವಳಿ ಸ್ವೀಕರಿಸಿದಾಕ್ಷಣ
ಕೃತಿಯ ಫಲ ಕರತಲಾಮಲಕವಪ್ಪುದೇನಯ್ಯ ?
ಪೂರ್ಣಕ್ರಾಂತಿಯ ಪಣ ತೊಟ್ಟುಬಿಟ್ಟರೆ
ಸಮಗ್ರ ಕ್ರಾಂತಿ ಸಫಲವಾಗಿ ಬಿಡುವುದೇನಯ್ಯ ?
'ಗರೀಬೀ ಹಟಾವ್' ಎಂದು ಘೋಷಿಸಿದಾಕ್ಷಣ
ಬರ, ಬಡತನಗಳು ಬಯಲಾಗುವುವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೩೯

ಪರಿವರ್ತನೆ, ಪರಿವರ್ತನೆ, ಪರಿವರ್ತನೆಯೆಂದು
ಪರಿತಪಿಸುತ್ತಲಿಹರಯ್ಯ ಪರಿಣತರನೇಕರು !
ಪರಿವರ್ತನೆ ನಿಸರ್ಗದ ನಿಯಮ,
ಜೀವನಾಯನ, ಕಾಲದ ಪ್ರಥಮ ಲಕ್ಷಣ,
ಅಪರಿವರ್ತನೀಯ ಪರಿವರ್ತನೆಯ
ಆವರ್ತನ, ಪುನರಾವರ್ತನ !
'ಬಹುಜನ ಹಿತಾಯ ಬಹುಜನ ಸುಖಾಯ'
ಪರಿವರ್ತನೆಯನ್ನು ಪ್ರತಿಪಾದಿಸುವವರು
ಬಹುಜನರಿಗಾವ ಅವಕಾಶವನ್ನೀವರಯ್ಯ
ಪರಿವರ್ತನೆಯ ಪ್ರವರ್ತಕರಾಗಲು,
ಪರಿವರ್ತನೆಯ ಫಲ ಪಡೆಯಲು ?
ಬಹುಜನರ ಹೆಸರಿನಲ್ಲಿ ಕೆಲವರ ಹಿತಸಾಧನೆಯ
ಕಾರಸ್ಥಾನವಲ್ಲವೆ
ಪಟ್ಟಭದ್ರ ಹಿತಗಳ ಪರಿವರ್ತನೆಯ ಪ್ರತಿಪಾದನೆ ?
ಹೃದಯ ಪರಿವರ್ತನೆ ಹೊಂದದವರ
ಪರಿವರ್ತನೆಯ ಪ್ರಲಾಪ
ಬಹುಜನರ ವಂಚಿಸುವ
ಕಾರ್ಯಕಲಾಪವಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೪೦

ಬಿದ್ದುದು ತಪ್ಪಲ್ಲ,
ಬಿದ್ದಲ್ಲಿಯೇ ಬಿದ್ದಿರುವುದು ತಪ್ಪಯ್ಯ ;
ಬಡವನಾಗಿ ಹುಟ್ಟಿದುದು ತಪ್ಪಲ್ಲ,
ಬಡವನಾಗಿಯೇ ಉಳಿಯುವುದು ತಪ್ಪಯ್ಯ ;
ಅಜ್ಞಾನಿಯಾಗಿ ಮೈದಾಳಿದುದು ತಪ್ಪಲ್ಲ,
ಅಜ್ಞಾನಿಯಾಗಿಯೇ ಉಳಿಯುವುದು ತಪ್ಪಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಿತನಾಗಿ ಜನಿಸಿದುದು ತಪ್ಪಲ್ಲ,
ಶೋಷಿತನಾಗಿಯೇ ಉಳಿಯುವುದು ತಪ್ಪಯ್ಯ !

## ೩೪೧

ತೋಳ ನಿರ್ಧರಿಸಿದ ನೀತಿ
ಕುರಿಗೆ ವರವಾಗಬಲ್ಲುದೇನಯ್ಯಾ ?
ಹುಲಿ ಹಮ್ಮಿದ ರೀತಿ
ಹುಲ್ಲೆಗೆ ಹಿತಕರವಾಗಬಲ್ಲುದೇನಯ್ಯಾ ?
ಬೆಕ್ಕು ನಟಿಸುವ ಪ್ರೀತಿ
ಇಲಿಗೆ ಆಪ್ಯಾಯನವಾಗುವುದೆಂತಯ್ಯಾ ?
ಹಾವು ಹೂಡಿದ ನಿಯತಿ
ಕಪ್ಪೆಗೆ ಕಲ್ಯಾಣಕರವಾದೀತೇನಯ್ಯಾ ?
ಕಟುಕ ರಚಿಸಿದ ಕಟ್ಟು ಕಟ್ಟಳೆಗಳು
ಹಸುವಿಗೆ ಹಸಾದವೆನಿಸಬಹುದೇನಯ್ಯಾ ?
ಕಳ್ಳರ, ಕೊಳ್ಳೆಗಾರರ ನಿಯಮಾವಳಿ
ಒಳ್ಳಿದರಿಗೆ ಒಪ್ಪಿತವಾಗಬಲ್ಲುವೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಕರು ರಚಿಸಿದ ಶಾಸ್ತ್ರ–ಶಾಸನ–ಸಂವಿಧಾನಗಳು
ಶೋಷಿತರಿಗೆ ಸುಖದವಾಗಬಲ್ಲುವೇನಯ್ಯಾ ?

## ೩೪೨

ಹೊರಲಾಗದ ಕಲ್ಲನಿಳಿಸಿ ಹೊರಲಾಗದ ಬಂಗಾರದ ಗಟ್ಟಿ ಇರಿಸಿದರೆ
ಹೊರುವ ತಲೆಗಾವ ಸೌಕರ್ಯವಯ್ಯಾ ?
ಕಾಣಿಸದ ಗಾಜಿನ ಕನ್ನಡಕ ತೆಗೆದು
ಕುರುಡುಗೊಳಿಸುವ ರನ್ನದ ಕನ್ನಡಕವಿರಿಸಿದರೆ
ನೋಡುವ ಕಣ್ಣುಗಳಿಗಾವ ಸಹಕಾರವಯ್ಯಾ ?
ಕಬ್ಬಿಣದ ಬೇಡಿಗಳ ಕಡಿದು ಬೆಳ್ಳಿಯ ಹಗ್ಗ ಬಿಗಿದರೆ
ಮಾಡುವ ಕೈಗಳಿಗೆ ಅದಾವ ಉಪಕಾರವಯ್ಯಾ ?
ಒತ್ತುವ ಪಾದರಕ್ಷೆ ಬಿಡಿಸಿ ನಡುವ ಮುಳ್ಳಾವಿಗೆ ತೊಡಿಸಿದರೆ
ನಡೆದ ಕಾಲುಗಳಿಗೆ ಅದೆಂಥ ಸೌಲಭ್ಯವಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜಾತಿ ವ್ಯವಸ್ಥೆಯನ್ನುಳಿಸಿ ಸಮಾನತೆಯ ಘೋಷಿಸಿದರೆ
ವಿಷಮತೆಗೆ ಆಹುತಿಯಾದವರಿಗೆ ಅದಾವ ಲಾಭವಯ್ಯಾ ?

## ೩೪೩

ಭಕ್ತಹಿತಾರ್ಥವಾಗಿ ಇದುವರೆಗೆ
ಏನೇನೋ ಅವತಾರಗಳನ್ನು ಎತ್ತಿರುವೆಯಂತೆ–
ಈಗ ಹೊಸ ಅವತಾರಗಳನ್ನು ತಳೆದು ಇಳಿಯಯ್ಯಾ !
ಹಸಿದವರ ಮುಂದೆ ರೊಟ್ಟಿಯಾಗಿ ಅವತರಿಸು,
ಶೋಷಿತರ ಮುಂದೆ ವಿಮೋಚನೆಯಾಗಿ ಅವತರಿಸು,
ದಾಸ್ಯದಲ್ಲಿರುವವರೆದುರು ಸ್ವಾತಂತ್ರ್ಯವಾಗಿ ಅವತರಿಸು,
ವಾಸಿಯಾಗದ ರೋಗಿಗಳೆದುರು ವಾಸಿಗೊಳಿಪ ಭೈಷಜ್ಯವಾಗಿ ಅವತರಿಸು,
ನಿರಕ್ಷರಿಗಳೆದೆಯಲ್ಲಿ ವಿದ್ಯೆಯ ಅಮೃತವಾಗಿ ಅವತರಿಸು,
ಇನ್ನೂ ಸ್ಪೃಶ್ಯರೆನಿಸದವರಂತರಂಗದಲ್ಲಿ ಪಾವಿತ್ರ್ಯವಾಗಿ
ಪ್ರಾದುರ್ಭವಿಸು,
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಹಾರಕ್ಕಾಗಿ ತೊಟ್ಟ ಅವತಾರಗಳು ಸಾಕು,
ಸರ್ವೋದ್ಧಾರಕ್ಕಾಗಿ ಹೊಸ ಅವತಾರಗಳ ತಳೆಯಯ್ಯಾ !

## ೩೪೪

ಎಲುವಿನ ಗೂಡುಗಳಲ್ಲಿ
ನಲವಿನ ನೆತ್ತರ ಚಿಮ್ಮಿಸಬಲ್ಲವರ ತೋರಾ ;
ನಿಟ್ಟುಸಿರಿನ ಬಸಿರಿನಿಂದ
ನಲ್ಲುಸಿರಿನ ಪರಿಮಳವ ಬರಿಸಬಲ್ಲವರ ತೋರಾ ;
ವರ್ಣಾಂಧಕಾರದ ಒಡಲಿನಿಂದ
ವಿಶ್ವಪ್ರೇಮದ ಪ್ರತಿಭೆಯ ಬರಿಸಬಲ್ಲವರ ತೋರಾ ;
ನಿರ್ಗತಿಕರ ಗುಡಿಸಲಲ್ಲಿ
ನೋಬೆಲ್ ಪಾರಿತೋಷಕ ಪಡೆವವರ ರೂಪಿಸಬಲ್ಲವರ ತೋರಾ ;
ಅಬಲತೆಯ ಬಾಳೆಯಲ್ಲಿ
ಕುಲಿಶ ಸುದರ್ಶನಗಳ ಗೊನೆಯ ಕೊನರಿಸುವವರ ತೋರಾ ;
ಅನಾರೋಗ್ಯದ ಗಣಿಯಿಂದ
ಅಖಂಡಾರೋಗ್ಯದ ಚಿನ್ನ ತೆಗೆಯುವವರ ತೋರಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜನಮನದಲ್ಲಿ ನಿದ್ರಿಸುತ್ತಿರುವ
ಮಹಾಘನವನೆಚ್ಚರಿಸಬಲ್ಲವರ ತೋರಾ !

೩೪೫

ಹೆಂಡದ ಹರವಿಯನ್ನು ಪೂಜಿಸುವವರು ಹಲವರುಂಟು,
ಹಾಲಿನ ಹರವಿಯನ್ನು ಗೌರವಿಸುವವರ ಹೆಚ್ಚಿಸಯ್ಯಾ ;
ಹಣಕ್ಕೆ ಅಡ್ಡಬೀಳುವವರಿಗೆ ಕೊರತೆಯಿಲ್ಲ,
ಗುಣಕ್ಕೆ ಮಣಿಯುವವರನ್ನು ಹೆಚ್ಚಿಸಯ್ಯಾ ;
ಸತ್ತಾಧಾರಿಗಳನ್ನು ಸತ್ಕರಿಸುವವರ ಸಂಖ್ಯೆ ಸಣ್ಣದಿಲ್ಲ,
ಸಾತ್ವಿಕತೆಯನ್ನು ಸತ್ಕರಿಸುವವರ ಹೆಚ್ಚಿಸಯ್ಯಾ ;
ಗೆದ್ದ ಎತ್ತಿನ ಬಾಲ ಹಿಡಿವವರು ಸಾಕಷ್ಟಿದ್ದಾರೆ,
ಬಿದ್ದ ಎತ್ತಿನ ಆರೈಕೆ ಮಾಡುವವರ ಹೆಚ್ಚಿಸಯ್ಯಾ ;
ಕೂಡಿದವರನ್ನು ಅಗಲಿಸುವವರ ಬರವಿಲ್ಲ,
ಅಗಲಿದವರನ್ನು ಕೂಡಿಸುವವರ ಹೆಚ್ಚಿಸಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಉಳ್ಳವರನ್ನು ಓಲೈಸುವವರು ಬೇಕಾದಷ್ಟಿದ್ದಾರೆ,
ಇಲ್ಲದವರಿಗೆ ಉಳುಬಾಳು ಒದಗಿಸುವವರ ಹೆಚ್ಚಿಸಯ್ಯಾ !

೩೪೬

ಮನೆ ಕಾಯುವ ನಾಯಿಯನ್ನು ಹೊರಗಿರಿಸಿ
ಕದ್ದು ಕುಡಿಯುವ ಬೆಕ್ಕನ್ನು ಒಳಗಿರಿಸಿಕೊಂಡೆವಯ್ಯಾ ;
ದುಡಿದಿಕ್ಕುವ ಬಡವರನ್ನು ಅಡಿಗೊತ್ತಿ
ದೋಚಿ ಉರಿವವರ ಹೊತ್ತು ಮೆರೆಸುವೆವಯ್ಯಾ ;
ಕಡು ನಿಷ್ಠೆಯ ಬಡಭಕ್ತರಿಗೆ ಇಲ್ಲೆನಿಸಿ
ಕಾಸು ಸುರಿವ ಲಂಡರಿಗೆ ದೇವದರ್ಶನ ಮಾಡಿಸುವಯ್ಯಾ ;
ಕಲಾ ತಪಸ್ವಿಗಳನ್ನು ಕಡೆಗಣಿಸಿ
ಕಲೆಯ ವ್ಯಭಿಚಾರ ನಡೆಸುವವರ ತಲೆಯಮೇಲಿರಿಸಿಕೊಳ್ವೆವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಮೆಚ್ಚಿದವರ ತುಚ್ಛೀಕರಿಸಿ
ಸಿರಿ ಹೆಚ್ಚಿದವರ ಮೊಚ್ಚೆ ಒರೆಸುವೆವಯ್ಯಾ !

## ೩೪೭

ಚಂದನವಾದರೆ ತೆಯ್ಯಿಸಿಕೊಂಬ ತೊಂದರೆಯೆಂದು
ಈಚಲ ಮರವಾಗುವುದೇ ಲೇಸೆನ್ನಬಹುದೇನಯ್ಯ ?
ಚಿನ್ನವಾದರೆ ಒರಸಿಕೊಂಬ ಕಿರುಕುಳವೆಂದು
ಹಿತ್ತಾಳೆಯಾಗುವುದೇ ವಾಸಿಯೆನ್ನಬಹುದೇನಯ್ಯಾ ?
ಕಬ್ಬಾದರೆ ನುರಿಸಿಕೊಂಬ ಕೋಟಲೆಯೆಂದು
ಕಂಟಿಯಾಗುವುದೇ ಚೆನ್ನವೆನ್ನಬಹುದೇನಯ್ಯ ?
ಕದಳಿಯಾದೊಡೆ ಕೊಯ್ಸಿಕೊಂಬ ಕ್ಲೇಶವೆಂದು
ಕತ್ತಾಳೆಯಾಗುವುದೇ ಮೇಲೆನ್ನಬಹುದೇನಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ರಾಮ ಧರ್ಮಜರಾದರೆ ವನವಾಸ ತಪ್ಪಿದ್ದಲ್ಲವೆಂದು
ಚೆಂಗೀಜ ತೈಮೂರರಾಗುವುದೇ ಒಳಿತೆನ್ನಬಹುದೇನಯ್ಯಾ ?

## ೩೪೮

ದುಷ್ಟರ ಭ್ರಷ್ಟರ ದಾಸನಾಗಿ ಮೃಷ್ಟಾನ್ನ ಸವಿವುದಕ್ಕಿಂತ
ಸಜ್ಜನರ ಸೇವಿಸಿ ಮಜ್ಜಿಗೆ ಅಂಬಲಿ ಉಂಬುದು ಲೇಸಯ್ಯ ;
ಕಟುಕರ ಅಂಗಡಿಯ ನಾಯಾಗಿ ಕೊಳೆತ ಪಲ ಅಗಿವುದಕ್ಕಿಂತ
ಮರದ ಗಿಳಿಯಾಗಿ ಫಲ ಭುಂಜಿಸುವುದು ಲೇಸಯ್ಯ ;
ದಾಸ್ಯದ ಉಪ್ಪರಿಗೆಯಲ್ಲಿದ್ದು ಸಿರಿಯ ಕೊಪ್ಪರಿಗೆ ಭೋಗಿಸುವುದಕ್ಕಿಂತ
ಬಿಡುಗಡೆಯ ಗುಡಿಸಲಲ್ಲಿ ರೊಟ್ಟಿ–ಚೆಟ್ನಿ ತಿನ್ನುವುದು ಲೇಸಯ್ಯ ;
ಮಾನಹೀನರಾಗಿ ನೂರು ವರ್ಷ ಬದುಕುವುದಕ್ಕಿಂತ
ಮಾನಧನರಾಗಿ ಮೂರುದಿನ ಬದುಕುವುದು ಲೇಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪರಾವಲಂಬಿಯಾಗಿ ರಿಣಗೂಳು ತಿನ್ನುವುದಕ್ಕಿಂತ
ಸ್ವಾವಲಂಬಿಯಾಗಿ ಕಂದಮೂಲ ತಿನ್ನುವುದು ಲೇಸಯ್ಯ !

## ೩೪೯

ಹೊರುವವರು ಗಟ್ಟಿ ಇದ್ದರೆ
ಹೇರುವವರಿಗಾವ ಕೊರತೆಯಯ್ಯಾ ?
ಮೋಸಗೊಳ್ಳುವವರು ಸಾಕಷ್ಟಿದ್ದರೆ
ಮೋಸಗೊಳಿಸುವವರಿಗಾವ ಕೊರತೆಯಯ್ಯಾ ?
ಸುಲಿಗೆಗೊಳ್ಳುವವರು ತುಂಬ ಇದ್ದರೆ
ಸುಲಿಗೆ ಮಾಡುವವರಿಗಾವ ಕೊರತೆಯಯ್ಯಾ ?
ಲಂಚ ಕೊಡುವವರು ಬಹಳವಾದರೆ
ಲಂಚ ಕೊಳ್ಳುವವರಿಗಾವ ಕೊರತೆಯಯ್ಯಾ ?
ಬೀದಿಯ ರತಿಯರು ಹೆಚ್ಚಿದರೆ
ಬೀದಿಯ ಕಾಮಣ್ಣರಿಗಾವ ಕೊರತೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಷ್ಟಕ್ಕೆ ಒದಗುವವರದೇ ಕೊರತೆ,
ಊಟಕ್ಕೆ ಒದಗುವವರಿಗಾವ ಕೊರತೆಯಯ್ಯಾ ?

## ೩೫೦

ಮುಖಂಡರೇ ಶಿಖಂಡಿಗಳಾದರೆ
ಹಿಂಬಾಲಕರು ಇನ್ನೇನಾಗಬೇಕಯ್ಯ ?
ಶ್ರೇಷ್ಠರೇ ಕನಿಷ್ಠರಾದರೆ
ಕನಿಷ್ಠರು ಮತ್ತೇನಾಗಬೇಕಯ್ಯ ?
ರಕ್ಷಕರೇ ಭಕ್ಷಕರಾದರೆ
ರಾಕ್ಷಸರು ಎಲ್ಲಿಗೆ ಮುಟ್ಟಬೇಕಯ್ಯ ?
ಶಿಕ್ಷಕರೇ ಸೆರೆಗುಡುಕರಾದರೆ
ವಿದ್ಯಾರ್ಥಿಗಳು ಇನ್ನೆಲ್ಲಿಗೆ ತಲುಪಬೇಕಯ್ಯ ?
ಸೂರ್ಯನ ಶಾಖವೇ ೯೮ ಡಿಗಿಗಳಿಗಿಳಿದರೆ
ಮಾನವನ ಶಾಖ ಎಲ್ಲಿಗಿಳಿಯಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಭಕ್ತರೇ ಭುಕ್ತಾರರಾದರೆ
ಭೋಗವಾದಿಗಳೆತ್ತ ಹೋಗಬೇಕಯ್ಯ ?

೩೫೧

ಅಧಿಕಾರದ ಅಂತಸ್ತು ಮೇಲೇರಿದಂತೆ
ನೈತಿಕ ಮಟ್ಟ ಮೇಲೇರದಿರುವುದೇ
ಮಾನವ ಕ್ಲೇಶಗಳ ಮೂಲಕಾರಣವಯ್ಯ ;
ಸುಖ ಸಮೃದ್ಧಿಗಳು ಬೆಳೆದಂತೆ
ಸತ್ಕೃತಿ ಸಂಸ್ಕೃತಿಗಳು ಬೆಳೆಯದಿರುವುದೇ
ಬಾಳಿನ ಬಳಲಿಕೆಯ ಮುಖ್ಯ ಆಕರವಯ್ಯ ;
ವಿದ್ಯಾ ಬುದ್ಧಿಗಳು ವೃದ್ಧಿಹೊಂದಿದ ಪ್ರಮಾಣದಲ್ಲಿ
ಹೃದಯವಿಶುದ್ಧಿ ವರ್ಧಿಸದಿರುವುದೇ
ನಾಗರಿಕತೆಯ ನಿಷ್ಫಲತೆಯ ಪ್ರಮುಖ ಕಾರಣವಯ್ಯ ;
ಕಲಿತ ವಿದ್ಯೆ, ದೊರೆತ ಕೆಲಸಗಳ
ನಡುವಣ ವಿರಸ ದಾಂಪತ್ಯವೇ
ಇರವಿನ ಉರುಟುತನಕ್ಕೆ ಸೆಲೆಯಾಗಿಹುದಯ್ಯ ;
ಶಾಸನಗಳು ಹೆಚ್ಚಿದಂತೆಲ್ಲ
ಪ್ರಶಾಸನಪ್ರಾವೀಣ್ಯ ಹೆಚ್ಚದಿರುವುದೇ
ಅಸ್ತವ್ಯಸ್ತತೆಗಳ ಉಗಮಸ್ಥಾನವಯ್ಯ ;
ನಾಯಕರ ಆಶ್ವಾಸನಗಳಲ್ಲಿ
ಜನರ ವಿಶ್ವಾಸವಿಲ್ಲವಾದುದೇ
ಜನತಂತ್ರದ ವಿಫಲತೆಯ ಉದ್ಗಮಸ್ಥಾನವಯ್ಯ ;
ಸ್ವತಂತಧೀರ ಸಿದ್ಧೇಶ್ವರಾ,
ಏನೇನನೋ ಯಾರಾರನೋ
ನಂಬಿ ಕೆಟ್ಟುದುದೆ
ಯಾರಲ್ಲಿಯೂ ಯಾತರಲ್ಲಿಯೂ
ನಂಬಿಕೆ ಉಳಿಯದುದಕ್ಕೆ ಕಾರಣವಾಗಿದೆಯಯ್ಯ !

## ೩೫೨

ಕಲ್ಲ ದೋಣಿಯಲ್ಲಿ ಕಡಲ ದಾಟಿದವರುಂಟೆ ಅಯ್ಯ ?
ಆಕಾಶದೀಪದಲ್ಲಿ ಅಂತರಿಕ್ಷಯಾತ್ರೆ ಮಾಡಿದವರುಂಟೆ ಅಯ್ಯ ?
ಎತ್ತಿನ ಬಂಡಿಯಲ್ಲಿ ದಕ್ಷಿಣೋತ್ತರ ಧ್ರುವಗಳ ಮುಟ್ಟಿದವರುಂಟೆ, ಅಯ್ಯ ?
ಇಂಚುಪಟ್ಟಿಯಿಂದ ಹಿಮಗಿರಿಯ ಉದ್ದಗಲ ಅಳೆದವರುಂಟೆ, ಅಯ್ಯ ?
ಒಡ್ಡಿ ಒಚ್ಚಿಗಳಿಂದ ನಕ್ಷತ್ರಗಳ ಲೆಕ್ಕ ಮಾಡಿದವರುಂಟೆ, ಅಯ್ಯ ?
ತಕ್ಕಡಿ ಹಿಡಿದು ತಿರೆಯ ತೂಗಿದವರುಂಟೆ, ಅಯ್ಯ ?
ತಾನೋದಿದ ಪುಸ್ತಕಗಳ ಆಧಾರದಿಂದ ಎಲ್ಲ ಭಾಷೆಗಳ
ಎಲ್ಲ ಪುಸ್ತಕಗಳ ಗಣಿಸಿದವರುಂಟೆ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀಲಿನಕ್ಷೆಗಳ, ಆಶ್ವಾಸನಗಳ ಆಧಾರದಿಂದ
ಬಡವರ ಹಸಿವೆಯನ್ನು ಹಿಂಗಿಸಿದವರುಂಟೆ, ಅಯ್ಯ ?

## ೩೫೩

ಸತ್ತ ಸಿಂಹಕ್ಕಿಂತ
ಜೀವಂತ ನಾಯಿ ಲೇಸಯ್ಯ ;
ಹೊತ್ತಿಗೆ ಒದಗದ ಮುತ್ತಿನ ಸತ್ತಿಗೆಗಿಂತ
ಹೊತ್ತಿಗಾದ ಮುತ್ತಲ ಎಲೆ ಮೇಲಯ್ಯ ;
ತಿಳಿಯದ ತಾವಿನಲ್ಲಿ ಹೂಳಿದ ನಿಧಾನಕ್ಕಿಂತ
ಕೈಯೊಳಿರುವ ಗದ್ಯಾಣ ಹೆಚ್ಚಿನದಯ್ಯಾ,
ತಲೆಯಲ್ಲುಳಿದ ವೇದೋಪನಿಷತ್ತುಗಳಿಗಿಂತ
ಕೃತಿಯಲ್ಲಿಳಿದ ಗರತಿಯ ಹಾಡು ಹಿತಕರವಯ್ಯಾ ;
ಪೂಜಾಸಾಮಗ್ರಿಗಳಲ್ಲಿ ಉಳಿದ ಡಾಂಭಿಕ ಅರ್ಚನೆಗಿಂತ
ಮನದಲ್ಲಿ ಇಳಿದ ಮೌನ ಭಕ್ತಿ ಮೇಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಚುನಾವಣಾ ಘೋಷಣೆಗಳಲ್ಲಿ ಉಳಿದ ಆಶ್ವಾಸನಗಳಿಗಿಂತ
ನೆರೆಯವರು ನೀಡಿದ ಶಿವದಾನ ಶ್ರೇಷ್ಠವಯ್ಯಾ !

## ೩೫೪

ಒಲವೇ ಬೆಳಕು, ಒಲವರವೇ ಕತ್ತಲೆಯಯ್ಯ ;
ರಸಿಕತೆಯೇ ಹುಣ್ಣಿಮೆ, ಅರಸಿಕತೆಯೇ ಅಮಾವಾಸ್ಯೆಯಯ್ಯ ;
ಸುರುಚಿಯೇ ವರ, ಕುರುಚಿಯೇ ಅಭಿಶಾಪವಯ್ಯ ;
ಜನ ಹಿತವೇ ಪುಣ್ಯ, ಜನ ಶೋಷಣೆಯೇ ಪಾಪವಯ್ಯ ;
ಸಂಯಮವೇ ಶಕ್ತಿ, ಶೈಥಿಲ್ಯವೇ ದೌರ್ಬಲ್ಯವಯ್ಯ ;
ಪಾವಿತ್ರ್ಯವೇ ನಂದನ, ಮಾಲಿನ್ಯವೇ ಮಸಣವಯ್ಯ ;
ಮಾನವೀಯತೆಯೇ ಮಾರ್ಗ, ಅಮಾನುಷತೆಯೇ ದುರಿತದ ದುರ್ಗವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
'ತಾನು ಎಲ್ಲರಿಗಾಗಿ' ಎನ್ನುವುದೇ ಧರ್ಮ,
'ಎಲ್ಲರೂ ತನಗಾಗಿ' ಎನ್ನುವುದೇ ಅಧರ್ಮವಯ್ಯ !

## ೩೫೫

ಕಂಬನಿಯ ಕಂಡು ಕರಗದ ಹೃದಯ
ಕಷ್ಟವ ಕಂಡು ಮರುಗದ ಮನ
ಹೆರದ ಹೆಣ್ಣು, ತಿನಬರದ ಹಣ್ಣು, ಹಸಿಯಿರದ ಮಣ್ಣುಗಳಯ್ಯಾ ;
ಸೇವೆಯಲ್ಲಿ ಸಾರ್ಥಕವಾಗದ ಪ್ರೇಮ,
ಕೃತಿಯಾಗಿ ಕಂಗೊಳಿಸದ ಆಶ್ವಾಸನ,
ನಡೆಯದ ನಾಣ್ಯ, ಕಾದದ ಸೈನ್ಯ,
ಆಡಿನ ಕೊರಳ ಸ್ತನ್ಯವಯ್ಯಾ !
ಬಾಳಿಗೆ ಬಲವಾಗದ, ಚೆಲುವಾಗದ ಜ್ಞಾನ,
ಮನುಕುಲಕ್ಕೆ ಮಂಗಲವಾಗದ ವಿಜ್ಞಾನ
ಹಯನಿಲ್ಲದ ಧೇನು, ಜಲವಿರಹಿತ ಮೀನು,
ಕಳ್ಳಿಗಿಟ್ಟ ಜೇನಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

೩೫೬

ಅರಮನೆಯಲ್ಲಿದ್ದೊಡೇನು, ಗುರುಮನೆಯಲ್ಲಿದ್ದೊಡೇನು,
ತಿಗಣೆ ತಿಗಣೆಯೇ ;
ಪ್ರೇತವನದಲ್ಲಿದ್ದರೇನು, ಪ್ರಮದವನದಲ್ಲಿದ್ದರೇನು,
ಜಿಗಣೆ ಜಿಗಣೆಯೇ ;
ಕಾಶಿಯಲ್ಲಿದ್ದರೇನು, ರಾಮೇಶ್ವರದಲ್ಲಿದ್ದರೇನು,
ಕಾಗೆ ಕಾಗೆಯೇ ;
ಹಳ್ಳಿಯಲ್ಲಿದ್ದರೇನು, ಡಿಳ್ಳಿಯಲ್ಲಿದ್ದರೇನು,
ಗೂಗೆ ಗೂಗೆಯೇ ;
ಮಂದಿರದಲ್ಲಿದ್ದರೇನು, ಮಸೀದಿಯಲ್ಲಿದ್ದರೇನು,
ಮೂಷಕ ಮೂಷಕವೇ ;
ಪಂಡಿತರಲ್ಲಿದ್ದರೇನು, ಪಾಮರರಲ್ಲಿದ್ದರೇನು,
ದೂಷಕ ದೂಷಕನೇ ;
ತಂತ್ರಿಯಾದೊಡೇನು, ಮಂತ್ರಿಯಾದೊಡೇನು,
ಕೆಡುಕ ಕೆಡುಕನೇ ;
ಸ್ವಾಮ್ಯವಾದಿಯಾದರೇನು, ಸಾಮ್ಯವಾದಿಯಾದರೇನು ;
ಕುಡುಕ ಕುಡುಕನೇ ;
ಸಂಸಾರಿಯಾದರೇನು, ಸಂನ್ಯಾಸಿಯಾದರೇನು,
ಕಾಮುಕ ಕಾಮುಕನೇ ;
ಕರಿಯನಾದರೇನು, ಬಿಳಿಯನಾದರೇನು,
ಸಾಧಕ ಸಾಧಕನೇ ;
ಯಾರು ರಾಜನಾದರೇನು, ಯಾರು ರಾಣಿಯಾದರೇನು
ಕೃಷಿಕ ಕೃಷಿಕನೇ ;
ಯಾವ ವ್ಯವಸ್ಥೆ ಬಂದರೇನು, ಯಾವುದು ಹೋದರೇನು,
ಕಾರ್ಮಿಕ ಕಾರ್ಮಿಕನೇ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಪುಢಾರಿಯಾದರೇನು, ಪಂಡಾ ಆದರೇನು, ಪೆಂಢಾರಿಯಾದರೇನು,
ಶೋಷಕ ಶೋಷಕನೇ !

## ೩೫೭

ಮಹಿಮೆ ಮಹಿಮೆಗೆ ಮಣಿದರೆ ಅಲ್ಪತೆ ಅಲ್ಪತೆಗೆ ಒಲಿವುದಯ್ಯ ;
ಗಿಳಿ ಮಾವಿಗೆ ಒಲಿದರೆ ಕಾಗೆ ಬೇವಿಗೆ ಒಲಿವುದಯ್ಯ ;
ಅಳಿ ಸುವಾಸನೆಗೆ ಒಲಿದರೆ ನೊಣ ಹೇಸಿಗೆಗೆ ಒಲಿವುದಯ್ಯ ;
ಸಾಧ್ವಿ ಸತೀತ್ವಕ್ಕೆ ಒಲಿದರೆ ಪತಿತೆ ವೇಶ್ಯಾವೃತ್ತಿಗೆ ಒಲಿವಳಯ್ಯ ;
ಪ್ರತಿಭೆ ನವ ನಿರ್ಮಾಣಕ್ಕೆ ಒಲಿದರೆ ಈರ್ಷ್ಯೆ ಚಾರಿತ್ರ್ಯವಧೆಗೆ
ಒಲಿವುದಯ್ಯ ;
ಒಲವು ಸೋತು ಗೆಲ್ಲಲು ಬಯಸಿದರೆ
ಬಲವು ಗೆದ್ದು ಸೋಲಲು ಹಂಬಲಿಸುವುದಯ್ಯ ;
ಆರ್ಪು ಅಳಿಸಿ ಆಳಲು ಆಶಿಸಿದರೆ
ಕೂರ್ಪು ನಗಿಸಿ ಅಳಿಯಲೂ ಹಿಂದೆಗೆಯದಯ್ಯ ;
ಕುಜನ ಕೆಡಿಸಿ ಸುಲಿದು ಸುಖಿಸಿದರೆ
ಸುಜನ ಕಟ್ಟಿ, ಕೊಟ್ಟು ನಂದಿಸುವನಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ –
ಮಾನವತೆ ಹಂಚಿ ಉಣ್ಣಲು ಹವಣಿಸಿದರೆ
ದಾನವತೆ ಹರಿದು ತಿನ್ನಲು ಹಾತೊರೆವುದಯ್ಯಾ !

## ೩೫೮

ಅನ್ಯಾಯವು ಸಿಂಹಾಸನವೇರಿರುವಲ್ಲಿ
ನ್ಯಾಯದ ಮಾತನ್ನಾಡುವವನೇ ನಾಯಿ ಕಂಡಯ್ಯ !
ಅಜ್ಞಾನವು ಆಡಳಿತ ನಡೆಸುತ್ತಿರುವಲ್ಲಿ
ಜ್ಞಾನದ ಸುದ್ದಿ ಎತ್ತುವವನೇ ಪೆದ್ದ ಕಂಡಯ್ಯ !
ಅನಾಚಾರದ ಅರಸೊತ್ತಿಗೆಯಿರುವಲ್ಲಿ
ಸದಾಚಾರದ ಬಗ್ಗೆ ಪಸ್ತಾಪಿಸುವವನೇ ಮೊದ್ದ ಕಂಡಯ್ಯ !
ನಗ್ನತೆಯೇ ನಾಗರಿಕತೆಯಾಗಿರುವಲ್ಲಿ
ಬಟ್ಟೆಯ ಬಗ್ಗೆ ನುಡಿವವನೇ ಮಡ್ಡ ಕಂಡಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ, ಶೋಷಣೆಯೇ ಶಾಸ್ತ್ರವಾಗಿರುವಲ್ಲಿ
ಶೋಷಿತರ ಪಕ್ಷ ವಹಿಸುವವನೇ ಹಸಿ ದಡ್ಡ ಕಂಡಯ್ಯ !

೩೫೯

ಗುಡ್ಡದಷ್ಟು ಪುಸ್ತಕಗಳನ್ನು ಓದಿ
ಕಡ್ಡಿಯಷ್ಟೂ ಕೆಲಸ ಮಾಡದಿದ್ದರೆ
ಪುಸ್ತಕದ ಕಪಾಟಿಗಿಂತ ಕಡೆಯಲ್ಲವೆ ಅವನು ?
ಊರಿಗೊಂದು ವಾಗ್ದಾನ ಮಾಡಿ
ನೂರಕ್ಕೊಂದನ್ನೂ ನೆರವೇರಿಸದಿದ್ದರೆ
ಡಂಗುರ ಹೊಡೆವನಿಗಿಂತ ಕಡೆಯಲ್ಲವೆ ಅವನು ?
ಭದ್ರವಾದುದನ್ನೆಲ್ಲ ಛಿದ್ರಿಸುತ್ತ
ಗಟ್ಟಿ ಯಾವುದನ್ನೂ ಮಾಡದಿರೆ
ಮೂಷಕನಿಗಿಂತ ಕಡೆಯಲ್ಲವೆ ಅವನು ?
ದೋಷಗಳನ್ನು ಮಾತ್ರ ದೊಡ್ಡವಾಗಿಸಿ ತೋರಿ
ಲೇಸುಗಳ ಲವಲೇಶವನ್ನೂ ಮನ್ನಿಸದಿರೆ
ದೂಷಕನಿಗಿಂತ ಕಡೆಯಲ್ಲವೆ ಅವನು ?
ಅಂತರರಾಷ್ಟ್ರೀಯ ವೇದಿಕೆಗಳಿಂದ
ವಿಶ್ವಬಂಧುತ್ವವನ್ನು ಉಪದೇಶಿಸಿ
ಮನೆಯ ಜನರಲ್ಲಿಯೇ ಜಗಳ ಹುಟ್ಟಿಸಿದರೆ
ಠಕ್ಕರಿಗಿಂತ ಕಡೆಯಲ್ಲವೆ ಅವನು ?
ವಿಜ್ಞಾನಿಯೆಂದು ಜಂಬ ಕೊಚ್ಚಿಕೊಂಡು
ಬೆಕ್ಕು ಅಡ್ಡ ಹಾಯುತ್ತಲೆ ಗಕ್ಕನೆ ನಿಂತರೆ
ಮಡ್ಡರಿಗಿಂತ ಕಡೆಯಲ್ಲವೆ ಅವನು ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಡವರ ಪ್ರತಿನಿಧಿಯೆಂದು ಬಡಾಯಿ ಕೊಚ್ಚುತ್ತ
ಸಿರಿವಂತರೇ ನಾಚುವಂತೆ ಮೆರೆದರೆ
ಕಳ್ಳರಿಗಿಂತ ಕಡೆಯಲ್ಲವೆ ಅವನು ?

## ೩೬೦

ಅದಮ್–ಈವ್ರರಿಗೆ ಅದಾವ ಕೊರತೆಯಿದ್ದಿತಯ್ಯ ಸ್ವರ್ಗದಲ್ಲಿ–
ನಿಷಿದ್ಧ ಫಲದಿಂದ ಪ್ರಲೋಭಿತರಾಗಲು ?
ರಾವಣನ ರಾಣೀವಾಸದಲ್ಲಿ ಅದೆಂಥ ರೂಪರಾಶಿ ಇರಲಿಲ್ಲವಯ್ಯ–
ಸೀತೆಗೆ ಮನಸೋತು ಸಾವನ್ನಪ್ಪಲು ?
ಕೌರವನ ಬೊಕ್ಕಸದಲ್ಲಿ ಅದಾವ ಚಿನ್ನರನ್ನಗಳಿರಲಿಲ್ಲವಯ್ಯ –
ಪಾಂಡವರ ರಾಜಸೂಯವನ್ನು ಕರುಬಲು ?
ಚೀಣದ ಹೂಣರಿಗೆ ಅದೆಲ್ಲಿ ನೆಲದ ಕೊರತೆಯಿದ್ದಿತಯ್ಯ –
ಸ್ನೇಹಪರ ಭಾರತದ ಗಡಿಗಳಲ್ಲಿ ನುಗ್ಗಲು ?
ಹಣ್ಣು–ಹೆಣ್ಣು–ಹೊನ್ನು–ಮಣ್ಣುಗಳು ನಿಮಿತ್ತ ಮಾತ್ರ !
ಅವುಗಳ ಹೀಯಾಳಿಸಲೇಕಯ್ಯ ?
ಮಾನವನ ಮನದ ಹೀನತನಕ್ಕೆ, ಶ್ವಾನತನಕ್ಕೆ,
ಸೂಕರತನಕ್ಕೆ ತಡೆ ಹಾಕುವುದ ಕಲಿ, ಕಲಿಸು –
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ !

## ೩೬೧

ಕದ್ದು ಹೂಗಳ ತಂದು ಪೂಜಿಸುವರು ಕೆಲವರು ನಿನ್ನನ್ನು ;
ಕದ್ದು ಕಾಸುಗಳ ತಂದು ಕರ್ಪೂರ ಉರಿಸುವರು
ಹಲವರು ನಿನ್ನ ಮುಂದೆ ;
ಲಂಚದ ಹಣದಿಂದ ಪಂಚಾಮೃತವ ತರುವರಾರೋ,
ಕಾಳಸಂತೆಯ ಹಣದಿಂದ ಪಲ್ಲಕ್ಕಿ ಕೊಡಿಸುವರಾರೋ,
ಖೊಟ್ಟಿ ಪರ್ಮಿಟ್ಟಿನ ಹಣದಿಂದ ಗೋಪುರ ಕಟ್ಟಿಸುವವರಾರೋ,
ಕಂಟ್ರೋಲಿನ ಕಾಂಚಾಣದಿಂದ ಕಳಸವಿಡಿಸುವರಾರೋ,
ಕಲಬೆರಕೆಯ ಸಂಪಾದನೆಯಿಂದ ಪ್ರಸಾದ ಹಂಚುವರಾರೋ,
ಮೋಸದ ಧನದಿಂದ ಧರ್ಮಶಾಲೆ ಕಟ್ಟಿಸುವವರಾರೋ –
ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು
ಕದ್ದು ನಗುತ್ತಿರುವಿಯೇನಯ್ಯಾ ?
ನಕ್ಕರೆ ಸಾಲದು, ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೬೨

ಹಸಿರಿಲ್ಲದಲ್ಲಿ ಹಸಿರು ಹುಟ್ಟಿಸುವುದು ಮಾನವ ಗುಣ,
ಹಸಿರಿದ್ದಲ್ಲಿ ಮೆದ್ದು ಮಲಗುವುದು ಪಶುಗುಣವಯ್ಯ ;
ಕೆಟ್ಟುದ ಸರಿಪಡಿಸುವುದು ಮಾನವ ಗುಣ,
ಸರಿಯಿದ್ದುದನ್ನೂ ಕೆಡಿಸುವುದು ದಾನವ ಗುಣವಯ್ಯ ;
ಕಸದಲ್ಲಿಯೇ ರಸ ಹುಟ್ಟಿಸುವುದು ಮಾನವ ಗುಣ,
ರಸವನ್ನೂ ವಿಷವನ್ನಾಗಿಸುವುದು ಅಸುರೀ ಗುಣವಯ್ಯ ;
ಅರಿಯದವರನ್ನೂ ಆದರಿಸುವುದು ಮಾನವ ಗುಣ,
ಅರಿತವರನ್ನೂ ಅನಾದರಿಸುವುದು ಅಮಾನುಷ ಗುಣವಯ್ಯ ;
ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಮಾನವ ಗುಣ,
ಉಪಕಾರಿಗೇ ಅಪಕಾರವೆಸಗುವುದು ಪಿಶಾಚಿ ಗುಣವಯ್ಯ ;
ಮಲಗಿದ್ದರೆ ಕುಳಿತು, ಕುಳಿತಿದ್ದರೆ ಎದ್ದು ನಿಂತು
ಬಂದವರಿಗೆ ಸ್ಥಳ ನೀಡುವುದು ಮಾನವ ಗುಣ,
ಇನ್ನೊಬ್ಬರ ಸ್ಥಳವನ್ನೂ ಆಕ್ರಮಿಸಿ
ಕಾಲು ಚಾಚಿ ಮಲಗುವುದು ನಿಶಾಚರ ಗುಣವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ದುಃಖಿತರ ಕಂಬನಿ ತೊಡೆವುದು ಮಾನವ ಗುಣ,
ಸುಖಿಗಳಿಗೂ ಕಂಬನಿ ಬರಿಸುವುದು ರಾಕ್ಷಸ ಗುಣವಯ್ಯ !

## ೩೬೩

ಕಡೆದರೆ ಬೆಣ್ಣೆ, ಕಟೆದರೆ ಮೂರ್ತಿ,
ಒಕ್ಕಿದರೆ ಕಾಳು, ಹಿಕ್ಕಿದರೆ ಕೇಶಗಳಯ್ಯ ;
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ,
ನೆಟ್ಟರೆ ಸಸಿ, ಇಟ್ಟರೆ ಒಡವೆಗಳಯ್ಯ ;
ಉರಿದರೆ ದೀಪ, ಉರಿಸಿದರೆ ಧೂಪ,
ತೆಯ್ದರೆ ಗಂಧ, ನೆಯ್ದರೆ ವಸ್ತ್ರವಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ತಾಳಿದರೆ ಬಾಳು, ದುಡಿದರೆ ಪಾಲು,
ಕೀಳೊಪ್ಪೆ ಮೇಲು, ಕೊಡದಿಹುದೆ ಹಾಳು ಕಂಡಯ್ಯ

### ೩೬೪

ಒಳಿತನ್ನು ಮಾಡಿದವರಿಗೆ ಒಳಿತನ್ನು ಮಾಡುವವ ಮಾನವ,
ಒಳಿತನ್ನು ಮಾಡದವರಿಗೂ ಒಳಿತನ್ನು ಮಾಡುವವ ಮಹಾಮಾನವ,
ಕೆಡುಕನ್ನು ಮಾಡಿದವರಿಗೂ ಒಳಿತನ್ನು ಮಾಡುವವ
ದೇವ ಮಾನವ ನೋಡಯ್ಯಾ !
ಕೆಡುಕನ್ನು ಮಾಡಿದವರಿಗೆ ಕೆಡುಕನ್ನು ಮಾಡುವವ ನರ,
ಕೆಡುಕನ್ನು ಮಾಡದವರಿಗೂ ಕೆಡುಕನ್ನು ಮಾಡುವವ ಅಸುರ,
ಒಳಿತನ್ನು ಮಾಡಿದವರಿಗೂ ಕೆಡುಕನ್ನು ಮಾಡುವವ
ನಿಶಾಚರ ನೋಡಯ್ಯಾ !
ಪ್ರೀತಿಸಿದವರನ್ನು ಪ್ರೀತಿಸುವವ ಮಾನವ,
ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ,
ದ್ವೇಷಿಸುವವರನ್ನೂ ಪ್ರೀತಿಸುವವ ದೇವ ಮಾನವ ನೋಡಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸುಖವಿತ್ತಾಗ ನಿನ್ನನ್ನು ಸ್ಮರಿಸುವವ ನರ,
ನೀನು ಸುಖವಿತ್ತಾಗಲೂ ಸ್ಮರಿಸದವ ಅಸುರ,
ನೀನು ಎಲ್ಲ ಇತ್ತಾಗಲೂ ನಿಂದಿಸುವವ ನಿಶಾಚರ ನೋಡಯ್ಯಾ !

### ೩೬೫

ಹಾವಿಗೂ ದೇವತ್ವವನ್ನಿತ್ತ ಭಾವುಕತೆಯೊಂದೆಡೆಗೆ,
ಮಾನವನಿಗೂ ವಿಕಾರಗಳ ವಿಷ ಉಣ್ಣಿಸುತ್ತಿರುವ ಸಭ್ಯತೆಯಿನ್ನೊಂದೆಡೆಗೆ !
ಗೋವಿನ ಕಥೆ ಪಾವನ ಚರಿತೆಯಾದುದೊಂದೆಡೆಗೆ,
ಮನುಕುಲದ ಕಥೆಯೇ ಕೀಳ್ಮೆಯ ಸರಿತೆಯಾದುದು
ಇನ್ನೊಂದೆಡೆಗೆ !
‘ಪಾಪಿಗಳ ಒಡಲೊಳಿಹ ಪರಮಾತ್ಮ’ನನ್ನು ಕಂಡುದು ಒಂದೆಡೆಗೆ,
ಪುಣ್ಯಾತ್ಮರ ಒಡಲಿನಲ್ಲಿಯೂ ಪಾಪವನ್ನೇ ಹುಡುಕುತ್ತಿಹುದು
ಇನ್ನೊಂದೆಡೆಗೆ !
ಕಟುಕನ ಮನೆಯೂ ಧರ್ಮಧಾಮವಾದುದೊಂದೆಡೆಗೆ,
ಮಠ ಮಂದಿರಗಳೂ ಅನೀತಿಯ ಆಗರಗಳಾದುದು
ಬೇರೊಂದೆಡೆಗೆ !

ಸಾಮಾನ್ಯರಲ್ಲಿಯೂ ನಿರ್ಮಾಲ್ಯ ನರ್ತಿಸುತ್ತಿರುವುದೊಂದೆಡೆಗೆ,
ಅಸಾಮಾನ್ಯರಲ್ಲಿಯೂ ಮಾಲಿನ್ಯ ತಾಂಡವವಾಡುತ್ತಿಹುದು
ಇನ್ನೊಂದೆಡೆಗೆ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರು ಸಹ ಎತ್ತದೆ
ನನ್ನಿ-ನಲ್ಮೆ-ನ್ಯಾಯಗಳಿಗಾಗಿ
ಬದುಕುವವರೊಂದೆಡೆಗೆ -
ನಿನ್ನ ಹೆಸರಿನಲ್ಲಿಯೇ
ಹುಸಿ, ಸುಲಿಗೆ ಅನ್ಯಾಯಗಳ
ಆಚರಿಸುವವರಿನ್ನೊಂದೆಡೆಗೆ

## ೩೬೬

ಕರವೀರ, ಮುತ್ತಲ, ಬೂರುಗ, ಬೂಗನ್‌ವಿಲಿಯ-
ಗಾಢ ವರ್ಣದ ಹೂಗಳಲ್ಲಿ ಗಂಧ ವಿರಳವಯ್ಯ ;
ಗಂಧವಿರುವ ಹೂಗಳಲ್ಲಿ ಫಲಿಸುವ ಹೂ ವಿರಳವಯ್ಯ ;
ಫಲಿಸಿದಾಕ್ಷಣ ಫಲಿಸಿದುದೆಲ್ಲ ಸಿಹಿಯಿರದಯ್ಯ ;
ಸಿಹಿಯಾಗಿದ್ದುದೆಲ್ಲ ಹಿತಕರವೆಂದು ಹೇಳಲಾಗದಯ್ಯ ;
ಹಿತಕರವಾದುದೆಲ್ಲ ಪ್ರಿಯಕರವಲ್ಲ,
ಪ್ರಿಯಕರವಾದುದೆಲ್ಲ ಆರೋಗ್ಯಕರವಾದುದೇನಲ್ಲವಯ್ಯ !
ಅಂತೆಯೇ, ಹುಟ್ಟಿದವರೆಲ್ಲ ಕೆಟ್ಟವರಲ್ಲ,
ಒಪ್ಪವಾಗಿ ಕಾಣುವರೆಲ್ಲ ಒಳ್ಳೆಯವರಲ್ಲ !
ನಿನ್ನ ಭಜಿಸುತ್ತ ಕುಣಿವವರಲ್ಲಿ ಕುಜನರಿರಬಹುದು,
ನಾಸ್ತಿಕರಲ್ಲಿಯೂ ನಿಜಮಾನವರಿರಬಹುದಯ್ಯ -
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೬೭

ಮತ್ತೇರಿಸುವ ಮದವೂ ಮದ್ಯ,
ಸುಲಿಗೆಯ ಸಿಹಿ ತಿಂಡಿಯೂ ಮಾಂಸ,
ನುಡಿದಂತೆ ನಡೆಯದಿಹುದೇ ವ್ಯಭಿಚಾರವಯ್ಯಾ !
ಆಲಸ್ಯವೂ ಅಫೀಮು, ಅವಜ್ಞೆಯೂ ಹಷಿಷು,
ಅಲಕ್ಷ್ಯ ಅಸಹನೆಗಳೇ ಭಂಗ್ ಗಾಂಜಾಗಳಯ್ಯಾ !
ದುಡಿಯದೆ ಪಡೆಯುವುದೂ ತುಡುಗು,
ನಂಬದೆ ನುಡಿಯುವುದೂ ಸುಳ್ಳು,
ಪಾಪವನ್ನು ತಡೆಯದಿಹುದೂ ಪಾಪವಯ್ಯಾ !
ತೇಜೋವಧೆಯೂ ವಧೆ, ಅನರ್ಹ ಸ್ತುತಿಯೂ ನಿಂದೆ,
ಜುಲುಮೆಯ ಅಹಿಂಸೆಯೂ ಹಿಂಸೆಯಯ್ಯಾ !
ರೋಷವೂ ಬೆಂಕಿ, ದ್ವೇಷವೂ ವಿಷ,
ಮೋಸವೂ ಅಮಾನುಷತೆಯಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ಆಶೆಯೂ ಪಾಶ, ನಿರಾಶೆಯೂ ನಾಸ್ತಿಕತೆಯಯ್ಯಾ !

## ೩೬೮

ಬೇಲಿ ಮುಳ್ಳಿನ ಆಶ್ರಯವನ್ನಿತ್ತರೂ
ಬಳ್ಳಿ ಪುಷ್ಪದ ಪುರಸ್ಕಾರವನ್ನೀಯುವಂತೆ,
ತುಳಿದ ಕಾಲಿಗೇ ಹುಲ್ಲು ಇಬ್ಬನಿಯ ತಂಪ ತಳೆವಂತೆ,
ಕಡಿದ ಕೊಡಲಿಗೇ ಗಂಧದ ಮರ ನರುಗಂಪ ಬಳಿವಂತೆ
ಕೇಡುಕಿಗೆ ಪ್ರತಿಯಾಗಿ ಒಳಿತನೇ ನೀಡುವರಯ್ಯ – ನಿನ್ನ ಶರಣರು !
ಹಾಲೆರೆದ ಕೈಗೇ ಹಾವು ವಿಷವನೂಡುವಂತೆ,
ನೀರೆರೆದ ಕೈಗೇ ಕಂಟಿ ಮುಳ್ಳ ನೀಡುವಂತೆ,
ಮೈತೊಳೆದ ನೀರಿಗೇ ಹಿತ್ತಾಳೆ ಕಿಲುಬು ಕೊಡುವಂತೆ
ಒಳಿತಿಗೆ ಪ್ರತಿಯಾಗಿ ಕೇಡುಕನೆ ಈವರಯ್ಯ –
ದುಷ್ಟರು, ದುರ್ಜನರು !
ಕೆಡುವ ಕಾಯದೊಳಿದ್ದೂ ಕೇಡುಕ ಸಾಧಿಸುವವರು
ಒಡೆದ ಮಡಕೆಯ ನೆಮ್ಮಿ ಕಡಗುವ ಜಡದಂತೆ
ಜಡರಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ !

## ೩೬೯

ಅಕ್ಷರಗಳಿಗೆ ಅರ್ಥ ಬರುವುದು
ಅವು ವಸ್ತುವೊಂದಕ್ಕೆ ಅನ್ವಯಿಸಿದಾಗ ;
ಸೊನ್ನೆಗಳಿಗೆ ಬೆಲೆ ಬರುವುದು
ಅವು ಅಂಕಿಯೊಂದನ್ನು ಆಶ್ರಯಿಸಿದಾಗ ;
ರೇಖೆಗಳಿಗೆ ರೂಪ ಬರುವುದು
ಅವು ಆಕೃತಿಯೊಂದನ್ನು ರೂಪಿಸಿದಾಗ ;
ಸಂಜ್ಞೆಗಳಿಗೆ ಸಾರ್ಥಕ್ಯ ಬರುವುದು
ಅವು ಸೂತ್ರವೊಂದಕ್ಕೆ ಸಂಬಂಧಿಸಿದಾಗ ;
ಬೆಳಕಿನ ಕಿರಣಗಳಿಗೆ ಬೆಳಕು ಬರುವುದು
ಅವು ಭೌತವಸ್ತುವೊಂದಕ್ಕೆ ತಾಗಿದಾಗ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವಿಗೆ ಗೌರವ ಬರುವುದು
ಒಳಿತಿಗೆ ಅಂಟಿ, ಒಳಿತಿಗಾಗಿ ಬದುಕಿದಾಗ.

## ೩೭೦

ಸಂಶಯ ಸಮುದ್ರದಲ್ಲಿ ಮುಳುಗಿ
ಶ್ರದ್ಧೆಯ ಸುಪ್ಪಾಣಿಯ ಮುತ್ತನ್ನು
ಅರಸಿ ತಂದವರುಂಟು ;
ನಂಬಿಕೆಯ ಅಂಬುಧಿಯಲ್ಲಿ ಮುಳುಗಿಯೂ
ಸಂಶಯದ ಒಡಕು ಸಿಂಪನ್ನು
ಬಳಿದು ತಂದವರೂ ಉಂಟಯ್ಯ ;
ಅತೃಪ್ತಿಯ ಆಳಕ್ಕಿಳಿದು
ತೃಪ್ತಿಯ ತವನಿಧಿಯನ್ನು
ಪಡೆದು ತಂದವರುಂಟು ;
ತೃಪ್ತಿಯ ಗಣಿಯನ್ನೇ ಅಗಿದು
ಅತೃಪ್ತಿಯ ಒಣ ಮಣ್ಣನ್ನೇ
ತುಂಬಿ ತಂದವರೂ ಉಂಟಯ್ಯ ;

ಸದ್ದುಗದ್ದಲಗಳ ಸಂತೆಯಲ್ಲಿಯೇ ಕದಡಿದರೂ ಕಲಕದ ಶಾಂತಿಯನ್ನು
ಸಂಪಾದಿಸಿದವರೂ ಉಂಟು ;
ಪ್ರಶಾಂತಿನಿಲಯದಲ್ಲಿದ್ದೂ ಅಶಾಂತಿಯ ಅಪ್ಪಳಿಕೆಗಳಿಗೆ
ಗುರಿಯಾದವರೂ ಉಂಟಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಶ್ರೀಗಂಧ ಕಸ್ತೂರಿಗಳ ಹೂಸಿ
ಲೇಸುಗಾಣದೇ ಗಾಸಿಯಾಗಿ ಹೋದವರುಂಟು ;
ಪಲ, ಎಂಜಲು ಫಲಗಳನ್ನರ್ಪಿಸಿ
ಸದ್ಗತಿಯ ಸಾಧಿಸಿದವರೂ ಉಂಟಯ್ಯ !

## ೩೭೧

ಅಜೀರ್ಣಕ್ಕೆ ಕಾರಣ
ಅಂಬಲಿಯಾದರೇನು, ಅಮೃತವಾದರೇನು–
ಫಲಿತಾಂಶ ಒಂದೇ ಅಯ್ಯ ;
ವಿವಾಹದ ವಿಫಲತೆಗೆ ಕಾರಣ
ಗಂಡನಾದರೇನು, ಹೆಂಡತಿಯಾದರೇನು–
ಪರಿಣಾಮ ಒಂದೇ ಅಯ್ಯ ;
ಜೀವನದಲ್ಲಿ ಜಿಗುಪ್ಸೆಗೆ ಕಾರಣ
ಬಡತನವಾದರೇನು, ಒಡೆತನವಾದರೇನು–
ಫಲಶ್ರುತಿ ಒಂದೇ ಅಯ್ಯ ;
ಕಲಹ ಕೋಲಾಹಲಕ್ಕೆ ಕಾರಣ
ಮನಸ್ತಾಪವಾದರೇನು, ಪ್ರೇಮ ಸಂಶಯವಾದರೇನು–
ಪಡೆಯುವ ಫಲ ಒಂದೇ ಅಯ್ಯ ;
ಸಚಿವ ಸಂಪುಟದ ಪತನಕ್ಕೆ ಕಾರಣ
ಸಚಿವರಾದರೇನು, ಶಾಸನಕಾರರಾದರೇನು–
ಪತನ ಮಾತ್ರ ಒಂದೇ ಅಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ, ನರನ ಪಶುತನಕ್ಕೆ ಕಾರಣ
ಧರ್ಮಾಂಧತೆಯಾದೊಡೇನು, ದೇಶಾಂಧತೆಯಾದೊಡೇನು,
ಭಾಷಾಂಧತೆಯಾದೊಡೇನು, ವರ್ಣಾಂಧತೆಯಾದೊಡೇನು,
ಪಶುತನ ಒಂದೇ ಅಯ್ಯ !

## ೩೭೨

ಸೋಲನ್ನೇ ಗೆಲವನ್ನಾಗಿ ಮಾರ್ಪಡಿಸಿಕೊಂಡರು ಕೆಲವರು,
ಗೆಲವನ್ನೂ ಸೋಲನ್ನಾಗಿ ಪರಿವರ್ತಿಸಿಕೊಂಡರಯ್ಯ ಹಲವರು ;
ದುಃಖವನ್ನು ಸುಖವನ್ನಾಗಿ ಬದಲಿಸಿಕೊಂಡರು ಕೆಲವರು,
ಸುಖವನ್ನೇ ದುಃಖಕ್ಕೆ ತಿರುಗಿಸಿಕೊಂಡರಯ್ಯ ಹಲವರು ;
ಹಿಂಸೆಯನ್ನು ಅಹಿಂಸೆಗೆ ತಿರಿಚಿದರು ಕೆಲವರು,
ಅಹಿಂಸೆಯನ್ನೂ ಹಿಂಸೆಗೆ ರೂಪಾಂತರಿಸಿದರಯ್ಯ ಹಲವರು ;
ಕತ್ತಲೆಯನ್ನು ಬೆಳಕಿನಿಂದ ಬೆಳಗಿಸಿದರು ಕೆಲವರು,
ಕತ್ತಲೆಯಾಗಿ ಬೆಳಕನ್ನೂ ಕಬಳಿಸಿದರಯ್ಯ ಹಲವರು ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವನನ್ನು ದೇವಮಾನವನನ್ನಾಗಿ ಮಾರ್ಪಡಿಸಿದರು ಹಲವರು,
ಮಾನವವನ್ನೂ ಅಮಾನವನನ್ನಾಗಿ ಮಾಡಿದರಯ್ಯ ಕೆಲವರು !

## ೩೭೩

ಮಹಾನಗರದಲ್ಲಿ ನೋಡಲು ಸಿಕ್ಕದುದು
ಹಾಳುಹಳ್ಳಿಯೊಂದರಲ್ಲಿ ಸಿಕ್ಕಬಹುದಯ್ಯಾ ;
ಸಮುದ್ರದಲ್ಲಿ ಸಿಕ್ಕದ ಸ್ವಾದಿಷ್ಟತೆ
ಒರತೆಯ ನೀರಿನಲ್ಲಿ ಸಿಕ್ಕುವುದಯ್ಯಾ ;
ಶಂಖದಲ್ಲಿ ಸಿಕ್ಕದ ಸುಪ್ರಾಣಿಯ ಮುತ್ತು
ಸಿಂಪಿನಲ್ಲಿ ಸಿಕ್ಕುವುದಯ್ಯಾ ;
ಚಂಪೂಕಾವ್ಯದಲ್ಲಿ ಸಿಕ್ಕದ ರಸೋತ್ಕರ್ಷ
ಹಳ್ಳಿಯ ಹಾಡುಗಳಲ್ಲಿ ಸಿಕ್ಕುವುದಯ್ಯಾ ;
ಅರಮನೆಯಲ್ಲಿ ಅಲಭ್ಯವೆನಿಸುವ ನ್ಯಾಯನಿಷ್ಠೆ
ಚಾವಡಿಯೊಂದರಲ್ಲಿ ಲಭಿಸಬಹುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಗುರುಮನೆಯಲ್ಲಿ ದೊರೆಯದ ಧರ್ಮರತಿ
ಗುಡಿಸಲಿನಲ್ಲಿ ದೊರೆಯಬಹುದಯ್ಯಾ !

## ೩೭೪

ಬಣ್ಣ ಒಂದೇ ಇದ್ದರೆ
ಗುಣವೂ ಒಂದೇ ಎಂದು
ಹೇಳಬಹುದೆ ಅಯ್ಯ ?
ಬಣ್ಣ ಚೆನ್ನಾಗಿದ್ದ ಮಾತ್ರಕ್ಕೆ
ಗುಣವೂ ಚೆನ್ನಾಗಿದೆಯೆಂದು
ತೀರ್ಮಾನಿಸಿ ಬಿಡಬಹುದೆ ಅಯ್ಯ ?
ಬಣ್ಣ ಚೆನ್ನಾಗಿರದಿರೆ
ಗುಣವೂ ಚೆನ್ನಾಗಿಲ್ಲವೆಂದು
ಸಾರಿಬಿಡಬಹುದೆ ಅಯ್ಯ ?
ಚಿನ್ನದಲ್ಲಿರದೆ ಚುಚ್ಚುವ ಗುಣ ?
ಕಾರ್ಬೊನ್ನಿನಲ್ಲಿರದೆ ಕಾಯುವ ಗುಣ ?
ನಿಗ್ರೋನಲ್ಲಿರದೆ ಮಾನವ ಗುಣ ?
ಬಿಳಿಯನಲ್ಲಿರದೆ ಬರ್ಬರ ಗುಣ ?
ಕಪ್ಪಿನಲ್ಲಿರದೆ ಕಂಪು ?
ಕೆಂಪಿನಲ್ಲಿರದೆ ಕಟುತೆ ?
ಹಳದಿಯಲ್ಲಿರದೆ ಪಾಂಡು ?
ಬಿಳಿಯಲ್ಲಿರದೆ ತೊನ್ನು ?
ನೀಲದಲ್ಲಿರದೆ ವಿಷ ?
ಹಸುರಾಗಿರದೆ ಹಾವಸೆ ?
ಬಣ್ಣಕ್ಕೆ ಬೆಲೆ
ಗುಣದ ಕೊಲೆಯಿರುವಲ್ಲಿ
ಇನ್ನಾವ ರಾಜ್ಯವೇ ಇರಬಹುದು,
ನಿನ್ನ ರಾಜ್ಯ ಇರಲಾರದಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

೩೭೫

ಒಳ್ಳೆಯ ಹೊಲದಲ್ಲಿ ಬಿತ್ತಿದರೂ
ಜಳ್ಳು ಬೀಜ ಮೊಳೆಯದ ಬೀಜವೇ,
ಕಲ್ಲು ಸಂದಿಯಲ್ಲಿ ಬಂದು ಬಿದ್ದಿದ್ದರೂ
ಒಳ್ಳೆಯ ಬೀಜ ಬೆಳೆಯುವ ಬೀಜವೇ ;
ಗೀರ್ವಾಣ ಗ್ರೀಕ್ ಭಾಷೆಗಳಲ್ಲಿದ್ದರೂ
ಕ್ಷುಲ್ಲಕ ವಿಚಾರ ಕ್ಷುಲ್ಲಕ ವಿಚಾರವೇ,
ಕೋಲಾಮಿ, ಕೊರವಂಜಿಯರ ನುಡಿಯಲ್ಲಿದ್ದರೂ
ಒಳ್ಳೆಯ ವಿಚಾರ ಒಳ್ಳೆಯ ವಿಚಾರವೇ ;
ಲೋಕಸಭೆಯಲ್ಲಿ ಕೇಳಿಸಿದರೂ
ಕೀಳ್ನುಡಿಯು ಕೀಳ್ನುಡಿಯೇ,
ಗ್ರಾಮಪಂಚಾಯತಿಯಲ್ಲಿ ಕೇಳಿದರೂ
ಒಳ್ನುಡಿಯು ಒಳ್ನುಡಿಯೇ ;
ಪರಮೋಚ್ಚ ಪ್ರಶಸ್ತಿಯನ್ನು ಪಡೆದಿದ್ದರೂ
ಲಘು ಕೃತಿಯು ಲಘು ಕೃತಿಯೇ,
ಅವಜ್ಞೆ ಅವಹೇಳನೆಗಳಿಗೆ ಗುರಿಯಾಗಿದ್ದರೂ
ಮಹತ್ಕೃತಿಯು ಮಹತ್ಕೃತಿಯೇ ;
ಹರುಕು ಚಿಂದಿಯಲ್ಲಿದ್ದರೂ
ಸ್ಫುರದ್ರೂಪವು ಸ್ಫುರದ್ರೂಪವೆ,
ದಿವ್ಯ ದುಕೂಲದಲ್ಲಿದ್ದರೂ
ಕುರೂಪವು ಕುರೂಪವೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮೈ ತೊಳೆದೂ ಮನ ಕೊಳೆಯಾಗಿರುವವರ
ಪೂಜೆಯೂ ಪೂಜೆಯೇ,
ಮೈ ಕೊಳೆಯಾಗಿದ್ದರೂ ಮನ ತಿಳಿಯಾಗಿರುವವರ
ಕೈಕೂಲಿ ಹಮಾಲಿಯೂ ಪೂಜೆಯೆ !

## ೩೭೬

ಬಿಳಿಯ ಬಟ್ಟೆಗೇ ಕಪ್ಪು ಕಲೆಯ ಭಯ,
        ಕರಿಯ ಬಟ್ಟೆಗಾವ ಭಯವಯ್ಯಾ ?
ಕೋಗಿಲೆಗೇ ಮಾಗಿಯ ಭಯ,
        ಕಾಗೆಗೆ ಯಾವ ಭಯವಯ್ಯಾ ?
ಒಳ್ಳಿದರಿಗೇ ಕತ್ತಲೆಯ ಭಯ,
        ಕಳ್ಳರಿಗೆಲ್ಲಿಯ ಭಯವಯ್ಯಾ ?
ಹದಿಬದೆಗೇ ಹಿಸುಣರ ಭಯ,
        ಬೆಲೆವೆಣ್ಣಿಗೆ ಅದಾವ ಭಯವಯ್ಯಾ ?
ಮಾನವಂತನಿಗೇ ಮಾನಹಾನಿಯ ಭಯ,
        ಮಾನಗೇಡಿಗಳಿಗೆ ಯಾವ ಭಯವಯ್ಯಾ ?
ಭಕ್ತರಿಗೇ ಭವಾವಳಿಯ ಭಯ,
        ರಕ್ತರಿಗೆಲ್ಲಿಯ ಭಯವಯ್ಯಾ ?
        ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮಾತ್ಮನಿಗೇ ಧರ್ಮಚ್ಯುತಿಯ ಭಯ,
ಅಧರ್ಮಿಗೆ ಅದಾವ ಭಯವಯ್ಯಾ ?

## ೩೭೭

ಕಂಪ್ಯೂಟರ್ ಮಾನವನೊಂದು ಕಡೆಗೆ,
ಕೃತ್ರಿಮ ಜೀನ್ಸ್ ಮಾನವನಿನ್ನೊಂದು ಕಡೆಗೆ
        ನೀ ಹುಟ್ಟಿಸಿದ, ಹುಟ್ಟಿಸುವ ಮಾನವರಿಗೆ
                ಸವಾಲು ತೂರಿ ನಿಂತಿದ್ದಾರೆ !
ಸಂಕರ ಧಾನ್ಯ, ಸಂಕರ ಪುಷ್ಪ, ಸಂಕರ ಫಲಗಳು ಬಂದಿವೆ,
ಸಂಕರ ತಳಿಯೂ ಬರಲಿದೆಯೇನಯ್ಯಾ ?
ಬಂದರೆ ಅದರ ಇತಿಮಿತಿಗಳೇನಯ್ಯಾ ?
        ಮತಿ ಮಂಕಾಗಿದೆಯಯ್ಯಾ !
ನಿನ್ನನುಳಿದ ಮತಿಯ ಪ್ರಗತಿ
ಪ್ರಚ್ಛನ್ನ ದುರ್ಗತಿಯೇನಯ್ಯಾ–ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೭೮

ಕೊಲೆ ತಪ್ಪಿಸಲು ನೆರವಾದರೆ ಕತ್ತಲೆಯೂ ಹಿತಕಾರಿ,
ಕೊಳ್ಳೆ ಹೊಡೆಯಲು ನೆರವಾದರೆ ಬೆಳಕೂ ಅಹಿತಕಾರಿಯಯ್ಯ ;
ಅಸು ಉಳಿಸಲು ನೆರವಾದರೆ ಹುಸಿಯೂ ಪುಣ್ಯ,
ವಿಷವಿಕ್ಕಲು ನೆರವಾದರೆ ನನ್ನಿಯೂ ಪಾಪವಯ್ಯ ;
ದುಡಿದುಣ್ಣಲು ನೆರವಾದರೆ ಕರ್ಮವೂ ಪೂಜೆ,
ದುಡಿಯದೆ ಹೊಡೆಯಲು ಕಲಿಸೆ ಧರ್ಮವೂ ದರೋಡೆಯಯ್ಯ ;
ಬಾಳ ಬೆಳಗಲು ನೆರವಾದರೆ ಬಿಜ್ಜೆಯೇ ಬಜ್ಜರ,
ಬಾಳಿಗೇ ಕಾವಳ ತರುವ ಶಿಕ್ಷಣವೂ ರಾಕ್ಷಸಿಯಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ವಿಕಾಸಕ್ಕೆ ದಾರಿ ಮಾಡುವ ವಿನಾಶವೂ ಪಚ್ಛನ್ನ ವರ,
ವಿನಾಶಕ್ಕೆ ಕರೆದೊಯ್ವ ವಿಕಾಸವೂ ಶಾಪವಯ್ಯಾ !

## ೩೭೯

ಏನಿದೇನಿದೇನಿದಯ್ಯ–
ಗೆಲವಿನ ಸೋಲು, ಸೋಲಿನ ಗೆಲವು,
ಸಿರಿಯ ಬಡತನ, ಬಡತನದ ಒಡೆತನ,
ಸಮೃದ್ಧಿಯ ಕೊರತೆ, ಕೊರತೆಯ ಸಿರಿವಂತಿಕೆ ?
ಇದೇನು ವಿಲಕ್ಷಣವಯ್ಯ–
ಸೇವೆಯ ಸ್ವಾರ್ಥ, ಸ್ವಾರ್ಥದ ಸೇವೆ,
ತ್ಯಾಗದ ಲೋಭ, ಲೋಭದ ತ್ಯಾಗ,
ಪ್ರೇಮದ ದ್ವೇಷ, ದ್ವೇಷದ ಪ್ರೇಮ ?
ಹೂವೆಂದು ಎತ್ತಿದುದು ಹಾವಾಗುವುದು,
ಬೆಲ್ಲವೆಂದು ಬಗೆದುದು ಬೇವಾಗುವುದು,
ಶೂಲವೆಂದು ತಿಳಿದುದು ಮಾಲೆಯಾಗುವುದು
ನಿನ್ನ ವಿನೋದಪ್ರಿಯತೆಯ ಕುರುಹೋ
ನಮ್ಮ ಸೀಮಿತ ಮತಿಯ ಮರಹೊ–
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೮೦

ಅರಿಯದೆ ಮಾಡಿದ ಪಾಪಕ್ಕಿಂತ
ಅರಿದರಿದೂ ಮಾಡಿದ ಪಾಪ ಹೀನತರವಾದುದಯ್ಯಾ ;
ಹಸಿವೆಗಾಗಿ ಮಾಡಿದ ಪಾತಕಕ್ಕಿಂತ
ಹೆಸರಿಗಾಗಿ ಮಾಡಿದ ಪಾತಕ ಹೇಯತರವಾದುದಯ್ಯಾ ;
ಒತ್ತಾಯಕ್ಕೊಳಗಾಗಿ ಮಾಡಿದ ಅಪರಾಧಕ್ಕಿಂತ
ಆಸೆಯ ಒತ್ತಡಕ್ಕೆ ಒಳಗಾಗಿ ಮಾಡಿದ ಅಪರಾಧ
ಅಧಮತರವಾದುದಯ್ಯಾ ;
ಮತ್ತಿನಲ್ಲಿದ್ದಾಗ ಮಾಡಿದ ಹಿಂಸೆಗಿಂತ
ಎಚ್ಚತ್ತಿರುವಾಗ ಮಾಡಿದ ಹಿಂಸೆ ಕ್ರೂರತರವಾದುದಯ್ಯಾ ;
ಆತ್ಮರಕ್ಷಣೆಗಾಗಿ ಮಾಡಿದ ಅಕೃತ್ಯಕ್ಕಿಂತ
ಸ್ವಾರ್ಥಸಾಧನೆಗಾಗಿ ಮಾಡಿದ ದುಷ್ಕೃತ್ಯ ಘೋರತರವಾದುದಯ್ಯಾ ;
ವಿದೇಶೀಯರ ದಬ್ಬಾಳಿಕೆಗಿಂತ
ಸ್ವದೇಶೀಯರ ದುರಾಡಳಿತ ದುಷ್ಟತರವಾದುದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಹೆಸರಿನಲ್ಲಿ ನಾನು ಮಾಡಿದ ಮೋಸಕ್ಕಿಂತ
ನಿನ್ನ ಹೆಸರಿನಲ್ಲಿ ಮಾಡಿದ ಮೋಸ ತುಚ್ಛತರವಾದುದಯ್ಯ !

## ೩೮೧

ಒಳಿತನೆಸಗುವ ಒಬ್ಬನಿಗೆದುರಾಗಿ
ಕೆಡುಕು ಮಾಡುವ ಕೆಲವರು ;
ದುಡಿದು ಉಣಿಸುವ ಒಬ್ಬನ ಸುತ್ತು
ಕಿತ್ತು ತಿನ್ನುವವರು ಹಲವರು ;
ಹಿಗ್ಗ ಹುಟ್ಟಿಸುವ ಒಬ್ಬನಿಗೆ ಪತಿಯಾಗಿ
ಕುಗ್ಗ ಹರಡುವವರು ಹಲವರು ;
ಸ್ವಚ್ಛತೆಯನುಳಿಸುವ ಒಬ್ಬನ ಬಳಸಿ
ಹೊಲಸು ಚೆಲ್ಲುವವರು ಹಲವರು ;
ಜಗಳ ಬಿಡಿಸುವ ಒಬ್ಬನ ಪಕ್ಕದಲ್ಲಿಯೇ
ಜಗಳ ಹಚ್ಚುವವರು ಹಲವರು ;
ಸ್ವತಂತ್ರಧೀರ ಸಿದ್ಧೇಶ್ವರಾ, ನಿನ್ನ ಸೃಷ್ಟಿಯಲ್ಲಿ
ಗಾಯಗಳ ಮಾಯಿಸುವವ ಒಬ್ಬನಾದರೆ
ಗಾಯಗೊಳಿಸುವವರು ಅನೇಕರು !

## ೩೮೨

ಇಟ್ಟಿಗೆ ಕಟ್ಟಿಗೆಗಳನ್ನು ಕೊಂಡಾಕ್ಷಣ
ಮನೆಯಾಯಿತೇನಯ್ಯಾ ?
ಹಿಟ್ಟು ಬೇಳೆ ಸಂಗ್ರಹಿಸಿದಾಕ್ಷಣ
ಅಡುಗೆಯಾಯಿತೇನಯ್ಯಾ ?
ಶಬ್ದಗಳ ಸರಪಳಿ ಹೆಣೆದಾಕ್ಷಣ
ಸಾಹಿತ್ಯವಾಯಿತೇನಯ್ಯಾ ?
ಮಣಿಗಳನ್ನು ಎಣಿಸಿದಾಕ್ಷಣ
ಜಪವಾಯಿತೇನಯ್ಯಾ ?
ತನುವ ದಂಡಿಸಿದಾಕ್ಷಣ
ತಪವಾಯಿತೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನವರಿಗೆ ತನುಮನಧನವ ಸವೆಸದೆ
ನಿನ್ನ ನೆನೆದಾಕ್ಷಣ ಭಕ್ತಿಯಾಯಿತೇನಯ್ಯಾ ?

## ೩೮೩

ಮಾಡುವವರಿಂದ ಕೆಲಸಕ್ಕೆ ಕಿಮ್ಮತ್ತು ಬರಬೇಕಲ್ಲದೆ
ಕೆಲಸದಿಂದ ಮಾಡುವವರಿಗೆ ಮೌಲ್ಯವೆಂದರೆ ಹೇಗಯ್ಯ ?
ಕೃಷ್ಣನಿಂದ ಗೋವಳತೆಗೆ, ಕ್ರೈಸ್ತನಿಂದ ಕುರಿಸಾಕಣೆಗೆ,
ಮಹಮ್ಮದನಿಂದ ವ್ಯಾಪಾರಕ್ಕೆ, ಬಸವನಿಂದ ಕರಣಿಕತನಕ್ಕೆ,
ಜೇಡರದಾಸ ಕಬೀರದಾಸರಿಂದ ನೇಕಾರಿಕೆಗೆ,
ಕಕ್ಕಯ್ಯ ಹರಳಯ್ಯ ಧೂಳಯ್ಯರಿಂದ ಚರ್ಮಕರ್ಮಕ್ಕೆ,
ಗಾಂಧೀಜಿಯಿಂದ ನೂಲುಗಾರಿಕೆಗೆ ಬರಲಿಲ್ಲವೆ ಬೆಲೆ ?
ಮಾಡುವ ಕೆಲಸವಾವುದಾದರೇನು,
ಮಾಡುವರಲ್ಲಿ ಮೇಲ್ಮೆಯಿದ್ದರೆ ಆ ಕೆಲಸಕ್ಕೂ ಹಿರಿಮೆ,
ಇಲ್ಲದಿರೆ ಹಿರಿಯದೆಂದ ಕೆಲಸಮೂ ಕಿರಿಯದಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ ;

## ೩೮೪

ಜ್ವರದಿಂದ ನಾಲಗೆ, ಕಾಮಾಲೆಯಿಂದ ಕಣ್ಣು,
ತದ್ದಿನಿಂದ ತ್ವಚ, ಉನ್ಮಾದದಿಂದ ಮಿದುಳು,
ಲೋಭದಿಂದ ಕೈ, ಚಾಡಿಯಿಂದ ಕಿವಿ,
ಕ್ಲೈಬ್ಯದಿಂದ ಹೃದಯ, ದೌರ್ಬಲ್ಯದಿಂದ ಮನ
ತಮ್ಮ ನೈಜ ಗುಣಗಳನ್ನು ಕಳೆದುಕೊಂಡರೆ
ತಪ್ಪು ಅವುಗಳದೇನಯ್ಯಾ ?
ತಪ್ಪು ತನ್ನದಿದ್ದರೂ ಅನ್ಯರ ತಲೆಗದನ್ನು ಕಟ್ಟಲು
ಎಷ್ಟೊಂದು ಕುಯುಕ್ತಿಗಳು ಕುತಂತ್ರಗಳು ನರಕುಲದಲ್ಲಿ ?
ಅನವರತ ಅನ್ಯತ್ರತೆಗಳನ್ನು ಅರಸುವುದರಲ್ಲಿಯೇ
ಕಳೆವ ಕಾಲವನ್ನು ಒಳಗ ತೊಳೆಯಲು ಕಳೆದರೆ
ನಳನಳಿಸುವ ಸಿವದ ಬೆಳೆ ಬರದೆ ಅಲ್ಲಿ –
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೮೫

ಹಣ ಹರಟುತ್ತಿರುವಾಗ
ಗುಣ ತೆಪ್ಪಗಿರದೆ ಇನ್ನೇನ ಮಾಡುವುದಯ್ಯಾ ?
ಸುಳ್ಳು ತಮ್ಮಟೆ ಹೊಡೆಯುತ್ತಿರುವಾಗ
ಸತ್ಯ ಸುಮ್ಮನಿರದೆ ಇನ್ನೇನ ಮಾಡುವುದಯ್ಯಾ ?
ಮೋಸ ಕೇಕೆ ಹಾಕುತ್ತಿರುವಾಗ
ವಿಶ್ವಾಸ ಮೌನ ವಹಿಸದೆ ಮತ್ತೇನ ಮಾಡುವುದಯ್ಯಾ ?
ಮಾತು ಬೊಬ್ಬೆಯಿಕ್ಕಿ ಅಬ್ಬರಿಸುತ್ತಿರುವಾಗ
ಕೃತಿ ಕಂಗೆಡದೆ ಪೆರತೇನ ಮಾಡಬಲ್ಲುದಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪ್ರಚಾರ ಅಯೋಗ್ಯತೆಗೆ ಪಟ್ಟಗಟ್ಟುತ್ತಿರುವಾಗ
ಯೋಗ್ಯತೆ ಬಾಯಿ ಮುಚ್ಚಿರದೆ ಮತ್ತೇನ ಮಾಡಬಲ್ಲುದಯ್ಯಾ ?

## ೩೮೭

ಹಣ್ಣು ಸಿಹಿಯಾಗಿದ್ದರೆ ಸಾಲದೆ–
ಬೇರುಗಳೂ ಸಿಹಿಯಾಗಿರಬೇಕೆಂಬ ಹಟವೇತಕಯ್ಯ ?
ಹೂವುಗಳು ಸುಗಂಧಯುತವಾಗಿದ್ದರೆ ಸಾಲದೆ,
ಕಾಂಡ ಕಂಟಕಗಳೂ ಕಂಪಿನಿಂದ ಕೂಡಿರಬೇಕೆಂಬ ಛಲವೇತಕಯ್ಯ ?
ಹಾಸಿಗೆ ಮೃದುವಾಗಿದ್ದರೆ ಸಾಲದೆ,
ಮಂಚವೂ ಮೃದುವಾಗಿರಬೇಕೆಂಬ ಹಂಬಲವೇತಕಯ್ಯ ?
ಮನೆ ಬೆಳಕಾಗಿದ್ದರೆ ಸಾಲದೆ,
ಮಾಳಿಗೆಯೂ ಬೆಳಕಾಗಿರಬೇಕೆಂಬ ಬಯಕೆಯೇತಕಯ್ಯ ?
ಕೊಟ್ಟಿಗೆ ಶುಚಿಯಾಗಿದ್ದರೆ ಸಾಲದೆ,
ತಿಪ್ಪೆಯೂ ಶುಚಿಯಾಗಿರಬೇಕೆಂಬ ಹವ್ಯಾಸವೇತಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕು ಬಂಗಾರವಾಗಿದ್ದರೆ ಸಾಲದೆ,
ಸಮಾಧಿಯೂ ಸುವರ್ಣದ್ದಾಗಬೇಕೆಂಬ ಹುಚ್ಚೇತಕಯ್ಯ ?

## ೩೮೭

ಆಲದ ಮರದಂತೆ ಹೊರಲಾರದಷ್ಟು ಹಣ್ಣು ಬಿಟ್ಟು ಫಲವೇನು ?
ತಿನ್ನಲು ತಿರುಳಿಲ್ಲ, ಕುಡಿಯಲು ರಸವಿಲ್ಲ !
ಹೊನ್ನವರೆಯಂತೆ ಹೊರಲಾರದಷ್ಟು ಹೂ ಬಿಟ್ಟು ಫಲವೇನು ?
    ಮುಡಿಯಲು ಮನವಿಲ್ಲ, ಮೂಸಲು ವಾಸನೆಯಿಲ್ಲ !
ತಾಳದ ಮರದಂತೆ ನೀಳವಾಗಿ ಬೆಳೆದು ಫಲವೇನು ?
    ಕೊರೆದರೆ ತೊಲೆಯಿಲ್ಲ, ನೆಟ್ಟರೆ ಕಂಬವಲ್ಲ !
    ಸ್ವತಂತ್ರಧೀರ ಸಿದ್ಧೇಶ್ವರಾ,
    ಟೇಪ್‌ರೆಕಾರ್ಡರಿನಂತೆ ಹೊರಲಾರದಷ್ಟು
        ಹೊತ್ತಗೆಗಳ ಗಹಿಸಿ ಫಲವೇನು ?
        ತನಗೆ ತಿಳಿವಾಗಲಿಲ್ಲ,
        ಅನ್ಯರಿಗೆ ಉಪಯೋಗವಿಲ್ಲ !

## ೩೮೮

ಗುಂಪು ಗುಂಪಾಗಿ ಬೆಳೆದರೂ
ಗುಂಪುಗಾರಿಕೆಯ ಗಾಂಪತನವಿಲ್ಲ
ಗುಂಪು ಮರಗಳಲ್ಲಿ ;
ಒಂದರ ಬಾಹು ಇನ್ನೊಂದರ ಹೆಗಲಮೇಲೆ,
ಒಂದರ ಹಸ್ತ ಇನ್ನೊಂದರ ಹಸ್ತದಲ್ಲಿ,
ಒಂದರ ನೆರಳು ಇನ್ನೊಂದರ ನೆರಳಿನಲ್ಲಿ.
ಎಲ್ಲ ಸಮರಸ–ಇಲ್ಲ ವಿರಸ !
ನರರಲ್ಲೇಕೆ ಗುಂಪುಗಾರಿಕೆ
ವಿರಸ ವಿರೋಧ ವಿಷಮತೆಗಳು
ಚಿಮ್ಮಿ ಹೊಮ್ಮುತ್ತಿರಬೇಕಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೮೯

ಎಲ್ಲರೂ ಎಲ್ಲರ ಮೇಲೆ ರೊಚ್ಚಿಗೆದ್ದಿದ್ದಾರೆ !
ಯಾತಕ್ಕಾಗಿ ಈ ರೊಚ್ಚು, ಏನು ಕಾರಣ ಈ ಕೆರಳಿಕೆ ?
ನಾನರಿಯೆನಯ್ಯಾ, ನೀನೆ ಒರೆಯಯ್ಯಾ !
ನೆಚ್ಚು ನಷ್ಟವಾದಾಗ ರೊಚ್ಚಿನದೇ ರಾಜ್ಯಭಾರವೇನಯ್ಯಾ ?
ಎದೆಯ ಮೆಚ್ಚು ಮಾಯವಾಗಿ
ಹೊಟ್ಟೆಯ ಕಿಚ್ಚು ಕಿಡಿಗೆದರಿದರೆ
ಹುಚ್ಚರ ಆಸ್ಪತ್ರೆಯಾಗದೇನಯ್ಯಾ ಜಗವೆಲ್ಲ ?
ಮಚ್ಚರದ ಮತ್ತಿನಲ್ಲಿರುವ ನಮ್ಮನ್ನು ಎಚ್ಚರಗೊಳಿಸಿ
ಅಚ್ಚ ನನ್ನಿ–ನಲ್ಮೆ–ನ್ಯಾಯಗಳ ದಾರಿಯಲ್ಲಿ
ನಯದೊಡನೆ ನಡೆಸಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೩೯೦

ಮನೆಯ ಸಿರಿವಂತಿಕೆ
ನಾಗರಿಕತೆಯ ಪ್ರತೀಕ,
ಮನದ ಸಿರಿವಂತಿಕೆ
ಸಂಸ್ಕೃತಿಯ ಸಂಕೇತವಯ್ಯ.
ನಡಿಗೆ ನಾಗರಿಕತೆ, ನೃತ್ಯ ಸಂಸ್ಕೃತಿ,
ಮಾತು ನಾಗರಿಕತೆ, ಗೀತೆ ಸಂಸ್ಕೃತಿ,
ಬಣ್ಣ ನಾಗರಿಕತೆ, ಚಿತ್ರ ಸಂಸ್ಕೃತಿ,
ಶಿಲೆ ನಾಗರಿಕತೆ, ಶಿಲ್ಪ ಸಂಸ್ಕೃತಿ,
ಸ್ವತಂತ್ರಧೀರ ಸಿದ್ಧೇಶ್ವರಾ
ಕರ್ಮ ನಾಗರಿಕತೆ, ಕಾಯಕ ಸಂಸ್ಕೃತಿಯಯ್ಯಾ !

## ೩೯೧

ತಾಪವನ್ನು ತಾಳಿಕೊಳ್ಳುವುದೇ ತಪ,
ಗುರಿಯನ್ನು ನೆನೆದುಕೊಳ್ಳುವುದೇ ಜಪ,
ಸಹನೆಯನ್ನು ಕಳೆದುಕೊಳ್ಳದಿಹುದೇ ಸಮತೆ,
ಸಮತೆಯ ಸ್ಥಿರೀಕರಣವೇ ಸಮಾಧಿ,
ಆಗು ಹೋಗುಗಳಿಂದ
ಬೆಂಡಾಗದಿಹುದೇ ಯೋಗ ಕಾಣಿ ಭೋ !
ಸ್ವತಂತ್ರಧೀರ ಸಿದ್ಧೇಶ್ವರನು
ಹುಟ್ಟಿಸಿದಲ್ಲಿ ಹುಟ್ಟಿ,
ಇಟ್ಟಂತೆ ಇದ್ದು,
ಕೊಟ್ಟುದ ಮೆದ್ದು, ಕೊಡದಿಹುದ ಗೆದ್ದು,
ಮಾಡಿಯೂ ಮಾಡದೊಲು,
ಭೋಗಿಸಿಯೂ ಭೋಗಿಸದೊಲು ಇದ್ದು,
ಇದ್ದೂ ಹೊದ್ದದಂತಿಹುದೆ
ಪರಮಾರ್ಥ ಕಾಣಿ ಭೋ !

### ೩೯೨

ಸತ್ಕಾರ್ಯಕ್ಕೆ ಪ್ರೇರಣೆ ನೀಡುವುದೇ ಸುವಿಚಾರ,
ಉಳಿದುದೆಲ್ಲ ಅವಿಚಾರ ಕಾಣಿರೋ !
ಸತ್ಕಾರ್ಯದಲ್ಲಿ ನಿರತನಾಗಿರುವುದೇ ಸದಾಚಾರ,
ಉಳಿದುದೆಲ್ಲ ಶುಷ್ಕಾಚಾರ ಕಾಣಿರೋ !
ಕರ್ತವ್ಯವೇ ದೇವರು,
ಸತ್ಕರ್ಮವೇ ಪೂಜೆ,
ತ್ಯಾಗ ಸೇವೆಗಳೇ ಜಪತಪ ಸಮಾಧಿ ಕಾಣಿರೋ !
ಸ್ವತಂತ್ರಧೀರ ಸಿದ್ಧೇಶ್ವರನೊಲಿಯಲು
ಮಾಡದಂತೆ ಮಾಡುತ್ತ,
ನೀಡದಂತೆ ನೀಡುತ್ತ,
ಬೇಡದಂತೆ ಬಾಳುವುದೇ ದಾರಿ ಕಾಣಿರೋ !

### ೩೯೩

ಋಷಿಪ್ರತಿಭೆ ಸರ್ವಭೂತಾನುಕಂಪೆಯೊಡನೆ ಕೂಡಿದಾಗ
ರಾಮಾಯಣ ಮಹಾಕಾವ್ಯದ ಉದಯ ;
ಭೂಪತಿಯ ಸಂಪದಕ್ಕೆ ಅಮರ ಪ್ರೇಮದ ಪ್ರೇರಣೆ ದೊರೆತಾಗ
ಮಹಾ ಕಲಾಕೃತಿ ತಾಜಮಹಲಿನ ಜನನ ;
ಯಂತ್ರರ್ಷಿ–ಪರಿಣತಿಗೆ ಸೌಂದರ್ಯ ಸ್ವಪ್ನ ಬಿದ್ದಾಗ
ವೃಂದಾವನ ನಂದನದ ನಿರ್ಮಾಣ ;
ಮಹಾತ್ಮಾಜೀಗೆ ದಾಸ್ಯೋದ್ಭೂತ ಅಧೋಗತಿಯ ಕರಾಳ ಚಿತ್ರ ಕಂಡಾಗ
ಭಾರತ ಸ್ವಾತಂತ್ರ್ಯದ ಅವತರಣ ;
ವಿಜ್ಞಾನಜ್ಯೋತಿಗೆ ವಿಶ್ವದರ್ಶನ ದೀಪ್ತಿ ಸೇರಿದಾಗ
ಸಾಪೇಕ್ಷವಾದದ ಸಮಾಗಮನ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರನ ಹವಣಿಕೆ ಹರನ ಹೂಡಿಕೆಗೆ ಒಳಗಾದಾಗ
ಶರಣಜೀವನದ ಉನ್ಮೀಲನ !

೩೯೪

ಬಹುಪಾಲು ಸಭೆ ಸಮ್ಮೇಳನಗಳ ನಭದಲ್ಲಿ
ಮಾತಿನ ಮೋಡ ಕವಿದು,
ಗೊತ್ತುವಳಿಗಳ ಗುಡುಗು,
ತಿದ್ದುಪಡಿಗಳ ಮಿಂಚು,
ಖಂಡನ ಮಂಡನಗಳ ಸಿಡಿಲು ತೋರಿದುವಾಗಲಿ
ಕೃತಿಯ ಮಳೆ ಸುರಿಯಲಿಲ್ಲವಯ್ಯ !
ಬಹುಪಾಲು ಸಂಘ ಸಂಸ್ಥೆಗಳ ಸರೋವರದಲ್ಲಿ
ಒಟಗುಡುವ ಕಪ್ಪೆ, ಕುಟಿಲ ಧ್ಯಾನದ ಬಕ,
ಹುಸಿ ಕಂಬನಿಯ ಮೊಸಳೆ,
ಒಂದನೊಂದು ನುಂಗುವ ಮೀನುಗಳು
ಮೈದೋರಿದುವಾಗಲಿ
ಆತ್ಮಕಮಲಗಳು ಅರಳಲಿಲ್ಲವಯ್ಯ !
ಬಹುಪಾಲು ಪಕ್ಷ ಪಂಗಡಗಳ ಗೊಂಡಾರಣ್ಯದಲ್ಲಿ
ಮುರಿದು ತಿನ್ನುವ ಮೃಗಗಳು,
ಹರಿದು ತಿನ್ನುವ ಖಗಗಳು ಮನೆಮಾಡಿದುವಾಗಲಿ
ನಲಿವ ನವಿಲು, ನುಡಿವ ಗಿಳಿ,
ಹಾಡುವ ಹಕ್ಕಿಗಳು ನೆಲೆಸಲಿಲ್ಲವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ಬಹುಪಾಲು ಗುಡಿ–ಗುರುದ್ವಾರ–ಇಗರ್ಜಿ–ಮಠ–ಮಸೀದೆಗಳಲ್ಲಿ
ಸದ್ದು–ಗದ್ದಲ–ಗೊಂದಲಗಳು
ಗುದ್ದಾಡಿ ಗುದುಮುರಿಗೆ ಹಾಕಿದುವಾಗಲಿ
ಎದ್ದು ಕಾಣಲಿಲ್ಲವಯ್ಯ ನೀನಲ್ಲಿ !
ಎದ್ದೋಡಿ ಹೋದೆಯೇನು ಅಲ್ಲಿಂದ ?

೩೯೫

ಅಂಗುಲಿಮಾಲಾನಲ್ಲಿ ಮೃತವಾಗಿರದಿದ್ದ ಮಾನವತೆ
ಭಂಗಿಗಳಲ್ಲಿ ಇಂಗಿಹೋಗಿರದಯ್ಯ ;
ದಶಶಿರನಲ್ಲಿ ನಶಿಸಿಹೋಗದ ಸಂಯಮನ
ಜನರ ಪ್ರತಿನಿಧಿಗಳಲ್ಲಿ ಲುಪ್ತವಾಗಬಾರದಯ್ಯ ;
ದುರ್ಯೋಧನನಲ್ಲಿ ನಷ್ಟವಾಗದಿದ್ದ ಭ್ರಾತೃಪ್ರೇಮ
ಹೆಗಲುಮನೆಯವರಲ್ಲಿ ಮುಗಿದಿರದಯ್ಯ ;
ಚೆಂಗೀಜನಲ್ಲಿ ಬತ್ತಿರದ ಪುತ್ರವಾತ್ಸಲ್ಯ
ಹಿಪ್ಪಿಗಳಲ್ಲಿ ಬರತು ಹೋಗಿರಲಾರದಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಅರ್ಥಕಾಮಗಳೆ ಪರಮಾರ್ಥವೆನ್ನುವವರಲ್ಲಿ
ಇಲ್ಲವಾಗದ ಜನಕಲ್ಯಾಣೇಚ್ಛೆ
ನಿನ್ನ ಭಕ್ತರಲ್ಲಿ ಇಲ್ಲವಾಗಬಾರದಯ್ಯ !

೩೯೬

ತಮ್ಮ ವಿಲಾಸಕ್ಕಾಗಿ ತಾಸಿಗೆ ಸಾಸಿರ ಪೋಲು ಮಾಡುವ ಲೋಲುಪ ಮಾಲೀಕರು
ತಮಗೆ ಕನಕಾಭಿಷೇಕ ಮಾಡಿಸುವ ಕಾರ್ಮಿಕರಿಗೆ
ಅಗತ್ಯ–ಆಧಾರಿತ ವೇತನವನ್ನೇಕೆ ಕೊಡಬಾರದಯ್ಯಾ ?
ಸತ್ತೆಯಲ್ಲಿರುವವರ ಮೇಲೆ ರೊಕ್ಕದ ಮಳೆಯನ್ನೇ ಸುರಿಸುವ ಸಿರಿವಂತರು
ದುರ್ಬಲರನ್ನು, ದುಃಖಿತರನ್ನು ದೂರವಿಡುವರೇಕಯ್ಯಾ ?
ಸೈನ್ಯ–ಶಸ್ತ್ರಾಸ್ತ್ರಗಳಿಗೆ ಸಿಂಹಪಾಲು ನೀಡುವ ಸರಕಾರಗಳು
ಬಡವರ ಒಡಲಿಗೆ ಹಿಡಿ ಅನ್ನ ಒದಗಿಸಲೂ ಹಿಂದೆಗೆವರೇಕಯ್ಯಾ ?
ತಮ್ಮ ಅಧಿಕಾರಕ್ಕೆ ವಯೋಮಿತಿಯೇ ಇರಕೂಡದೆನ್ನುವವರು
ಬಡಶಿಕ್ಷಕರ ವಯೋಮಿತಿಯನ್ನೇಕೆ ಇಳಿಸುವರಯ್ಯಾ ?
ಎಷ್ಟು ಅಧಿಕಾರ ದೊರೆತರೂ ಇನ್ನಷ್ಟು ಬೇಕೆಂದು ಬಾಯ್ಬಿಡುವ ವರಿಷ್ಠರು
ಕನಿಷ್ಠರ ಕನಿಷ್ಠಾಧಿಕಾರಗಳಿಗೂ ಕರುಬುವರೇಕಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ತಮಗೆ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಸ್ವಾಚ್ಛಂದ್ಯವನ್ನೂ ಬೇಡುವವರು
ಮತದಾರರ, ಶ್ರೀಸಾಮಾನ್ಯರ ಮೂಲ ಹಕ್ಕುಗಳಿಗೇ ದಾಳಿ ತರುವರೇಕಯ್ಯಾ ?

## ೩೯೭

ಕಳೆದುಕೊಂಡಿರುವುದು
ಒಂದು ಕಡೆಯಲ್ಲಿ,
ಹುಡುಕುತ್ತಿರುವುದು
ಇನ್ನೊಂದೆಡೆಯಲ್ಲಿ ;
ಬಯಸುತ್ತಿರುವುದು ಒಂದು,
ಪಡೆಯುತ್ತಿರುವುದು ಇನ್ನೊಂದು ;
ಸೇರ ಬಯಸಿದ ಊರು ಒಂದು,
ತುಳಿಯುತ್ತಿರುವ ದಾರಿ ಇನ್ನೊಂದು ;
ತಿನ್ನಲೆಳಸಿದ ಹಣ್ಣು ಒಂದು,
ಊರುತ್ತಿರುವ ಬೀಜ ಇನ್ನೊಂದು ;
ಬಯಸಿದುದು ಸುಖ,
ಒಕ್ಕಿದುದು ದುಃಖ ;
ಹಾರೈಸಿದುದು ಸ್ನೇಹ,
ದೊರೆಯುತ್ತಿರುವುದು ದ್ವೇಷ !
ತಿರುವುಮುರುವಿನ ತೊರೆ ಈ ತಿರೆ !
ಅತ್ತ ಈಸಿದರೆ ಇತ್ತ ಒತ್ತುವ,
ಇತ್ತ ಈಸಿದರೆ ಅತ್ತ ಒತ್ತುವ ತೊರೆ !
ಚಂಡಿಯ ಗಂಡರಾದರೆ ಮಾತ್ರ
ಒಂದು ಬಯಸಿದರೆ ಇನ್ನೊಂದು ನೀಡುವ
ಈ ಲೋಕದಲ್ಲಿ ಪಾರಾಗುವುದು ಸಾಧ್ಯವೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ ?

## ೩೯೮

ಮನೆ ತುಂಬ ಮುಸುರೆ ಚೆಲ್ಲಿ
ನೊಣ ಓಡಿಸಲು ಓಡಾಡುವುದಕ್ಕಿಂತ
ಮನೆ ಸ್ವಚ್ಛವಾಗಿರಿಸುವುದೇ ಮೇಲಯ್ಯ ;
ಅಂಗಳ ತುಂಬ ಕೆಸರು ಕೆಡಹಿ
ಆಸರಗೋಲು ಹುಡುಕುವುದಕ್ಕಿಂತ
ಕೆಸರು ಬೀಳದಂತೆಸಗುವುದೇ ಲೇಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಮಾಜ ಹದಗೆಡುವವರೆಗೆ ಸುಮ್ಮನಿದ್ದು ಆಮೇಲೆ
'ಕ್ರಾಂತಿ, ಕ್ರಾಂತಿ'ಯೆಂದು ಕಿರುಚುವುದಕ್ಕಿಂತ
ಸಮಾಜವನ್ನು ಸದಾ ಸರಿಪಡಿಸುತ್ತಲಿರುವುದೇ
ಶ್ರೇಯಸ್ಕರವಯ್ಯಾ !

## ೩೯೯

ನಟನಟಿಯರ ದಾಂಪತ್ಯ–
ಅದೊಂದು ಆಕಸ್ಮಿಕ ಘಟನೆ, ಬರಿ ನಟನೆ !
ರಸ, ಭಾವ, ಧ್ವನಿ, ಧ್ಯೇಯಗಳಿಲ್ಲದ ಸಾಹಿತ್ಯ–
ಅದೊಂದು ವೃಥಾಯಾಸ, ವ್ಯರ್ಥ ರಚನೆ !
ಕಸ ಕಳೆಯದೆ, ಹಸಿ ನೋಡದೆ ಎಸಗುವ ಕೃಷಿಕೃತ್ಯ–
ಅದೊಂದು ಪಾಳ್ಗಜ್ಜ, ನಿರರ್ಥಕ ಶ್ರಮ !
ಅಂತೆಯೇ, ಭಕ್ತಿಯಿಲ್ಲದ ಪೂಜೆ, ನಿಷ್ಠೆಯಿಲ್ಲದ ಧ್ಯಾನ,
ಶಾಂತಿಯಿಲ್ಲದ ಮೌನ, ಶಂಕೆಯಳಿಸದ ಜ್ಞಾನ,
ಚಿತ್ತ ತೊಳೆಯದ ಸ್ನಾನ, ತೃಷ್ಣೆಯಳಿಸದ ಪಾನ,
ಶ್ರದ್ಧೆಯಿಲ್ಲದ ಜಪ, ಶುದ್ಧಿಯಿಲ್ಲದ ತಪ,
ವಿಶ್ವಾಸವಿಲ್ಲದ ವ್ರತನೇಮಾದಿಗಳು
ಕಾಳಿಲ್ಲದ ತೆನೆ, ಕಾಯ್ಗಳಿಲ್ಲದ ಗೊನೆ,
ಅಂದಗಂಧಗಳಿಲ್ಲದ ನನೆಗಳಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೦೦

ಏಸು ಕಾಲ ಕಳೆದರೇನು,
ಏಸುವಿನಂಥವರು ಏಸು ಜನ ಹುಟ್ಟಬಲ್ಲರಯ್ಯ ?
ದೇಶ ಕಾಲಗಳ ಸೋಸಿದರೆ ಉಳಿಯುವರು
ಸಾಸಿರಕ್ಕೆ ಮಿಗದ ಮೀಸಲು ಮಾನವರು !
ಉಳಿದವರು ?
ಚಂದ್ರನ ಉದಯಕ್ಕಾಗಿ ಆಹುತಿಯಾದ ನಕ್ಷತ್ರಗಳು,
ವಸಂತನ ಆಗಮನಕ್ಕಾಗಿ ಉದುರಿದ ಪಾಂಡು ಪತ್ರಗಳು,
ಮೊನಾಲಿಸಾದ ಮೂಡಿಕೆಗೆ ಮುನ್ನ
ಬರೆದು ಹರಿದ, ಮರೆಯಾದ ಕರಡು ಚಿತ್ರಗಳು,
ಸ್ವತಂತ್ರಧೀರ ಸಿದ್ಧೇಶ್ವರನ ಕಂಡುಕೊಳ್ಳುವ ಮುನ್ನ
ಪೂಜೆಗೊಂಡು ಫರಾರಿಯಾದ
ತೆತ್ತೀಸಕೋಟಿ ದೇವರ್ಕಳು !

## ೪೦೧

ಸಮಯ ಸಾಧಕರಿಗೆ ಅನುಕೂಲ ಸಮಯವೇ ಶಿವಸಮಯ,
ದೇಹಾರಾಧಕರಿಗೆ ಹೊಸಬಟ್ಟೆಯೇ ಬಾಳ ಬಟ್ಟೆಯಯ್ಯಾ !
ಕೂಳ ಬಕ್ಕರ ಕಂಗಳಿಗೆ ಆಹಾರವೇ ದೇಹಾರ,
ಹಿಂಸಾರಭಸಮತಿಗೆ ಹ್ಯಾನಿಬಾಲನೇ ಹೆಮ್ಮೆಯ ಹೆಗ್ಗಡೆಯಯ್ಯಾ !
ಕಾಮುಕನ ಕಂಗಳಿಗೆ ಕಂಡವಳೇ ರಂಭೆ ಊರ್ವಶಿ,
ಕಡುಜಿಪುಣನಿಗೋ ಹಮ್ಮಿಣಿಯೇ ಹೆದ್ದೈವವಯ್ಯಾ !
ಸೋಮಾರಿಗೆ ಶಯ್ಯಾಗೃಹವೇ ಸ್ವರ್ಗ,
ಹಗರಣಿಗರಿಗೆ ಹಾದರದ ಕಥೆಗಳೇ ಪರಮಾದರದ ಚರಿತೆಗಳಯ್ಯಾ !
ಲಾಭಗುಳಿಗೆ ರಕ್ತ ಶೋಷಣೆಯೇ ರಾಷ್ಟ್ರಭಕ್ತಿ,
ಶೋಷಕನಿಗೋ ಸುಲಿಗೆಯೇ ಸಮಾರಾಧನೆಯಯ್ಯಾ !
        ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮದ ದಲ್ಲಾಳಿಗಳಿಗೋ ದೇವದೇವಿಯರೆ ಸರಕು–ಸರಂಜಾಮು,
ದೇಶಭಕ್ತಿಯ ವ್ಯಾಪಾರಿಗಳಿಗೆ ಜನರೆ ಜೀನಸುಗಳಯ್ಯಾ !

## ೪೦೨

ಸುಳ್ಳಿನಿಂದ ದೊರೆವುದು ಸುಳ್ಳುಸುಖವೆಂಬುದು ಸುಳ್ಳೇನಯ್ಯಾ ?
        ಮಂಜಿನ ನೀರಿನಿಂದ
        ನೀರಾವರೀ ಯೋಜನೆ ಸಾಧ್ಯವೇನಯ್ಯಾ ?
        ಹರಿನಾಳಿಗೆಯ ನೀರಿನಿಂದ
        ಹೈಡ್ರಾಲಿಕ್ ಶಕ್ತಿ ಸಂಭವನೀಯವೇನಯ್ಯಾ ?
        ಆಕಾಶಬುಟ್ಟಿ ಅಪ್ಲೋಲೋ ೧೨ ಆಗಬಹುದೇನಯ್ಯಾ ?
                ಸ್ವತಂತ್ರಧೀರ ಸಿದ್ಧೇಶ್ವರಾ,
        ಸಟೆಯು ದಿಟವನ್ನಪ್ಪಿ ದಿಟವಾಗದೆ
        ದಿಟಪುಟ ಸುಖವನೀಯಬಲ್ಲುದೇನಯ್ಯಾ ?

## ೪೦೩

ಬೆಳೆದಂತೆ ಕೂದಲುಗಳ ಉಳಿಸುವುದಾದರೆ
ಕ್ಷೌರಿಕನೇಕಿರಬೇಕಯ್ಯ ?
ಬೆಳೆದಂತೆ ಗಿಡಬಳ್ಳಿಗಳ ಬಿಡುವುದಾದರೆ
'ಮಾಲಿ'ಯೇತಕ್ಕೆ ಬೇಕಯ್ಯ ?
ನೇಯ್ದಂತೆ ಬಟ್ಟೆ ಸುತ್ತಿಕೊಳ್ಳುವುದಾದರೆ
ಸಿಂಪಿಗನೇಕೆ ಬೇಕಯ್ಯ ?
ಬಂದಂತೆ ಕಾಳು ಕಡಿಗಳ ತಿನ್ನುವುದಾದರೆ
ಬಾಣಸಿಯೇಕೆ ಬೇಕಯ್ಯಾ ?
ಸನ್ನೆಯಿಂದ ಸಂಸಾರ ಸಾಗಿಸುವುದಾದರೆ
ಭಾಷೆಯೇಕೆ ಬೇಕಯ್ಯ ?
ಬಾಯಿಗೆ ಬಂದಂತೆ ಕಿರುಚುವುದಾದರೆ
ಸಂಗೀತವೇಕೆ ಬೇಕಯ್ಯ ?
ಕಾಲಿಗೆ ಬಂದಂತೆ ಕುಣಿಯುವುದಾದರೆ
ನಾಟ್ಯಶಾಸ್ತ್ರವೇಕೆ ಬೇಕಯ್ಯ ?
ಕಂಡಂತೆ ಚೆಂಡೆಸೆಯುವುದಾದರೆ
ಕ್ರೀಡಾನಿಯಮಗಳೇಕೆ ಬೇಕಯ್ಯ ?
ತೋಚಿದಂತೆ ಗೀಚುವುದಾದರೆ
ಕಾವ್ಯಮೀಮಾಂಸೆಯೇಕೆ ಬೇಕಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹುಟ್ಟಿದಂತೆ ಬೆಳೆಯುವುದಾದರೆ
ನನ್ನಿ, ನಲ್ಮೆ, ನಯ, ನೀತಿ, ನ್ಯಾಯಗಳೇಕೆ ಬೇಕಯ್ಯಾ ?
ನೀನೇಕೆ ಬೇಕಯ್ಯ, ನಿನ್ನವರೇಕೆ ಬೇಕಯ್ಯ ?

## ೪೦೪

ಸಾಹಿತ್ಯದಲ್ಲಿ ಶಾಸ್ತ್ರವಿರಬಹುದು,
ಆದರೆ, ಶಾಸ್ತ್ರವೇ ಸಾಹಿತ್ಯವಾಗಬಹುದೇನಯ್ಯಾ?
ಧರ್ಮದಲ್ಲಿ ಅಸಂಗತವಾದುದಿರಬಹುದು,
ಆದರೆ, ಅಸಂಗತತೆಯೇ ಧರ್ಮವಾಗಬಹುದೇನಯ್ಯಾ?
ವಿಜ್ಞಾನದಲ್ಲಿಯೂ ಅಂಧಶ್ರದ್ಧೆ ಇರಬಹುದು,
ಆದರೆ, ಅಂಧಶ್ರದ್ಧೆಯೇ ವಿಜ್ಞಾನವಾಗಬಹುದೇನಯ್ಯಾ?
ಚಂದನಲ್ಲಿ ಕಲಂಕವಿರಬಹುದು,
ಆದರೆ, ಕಲಂಕವೇ ಚಂದನಾಗಬಹುದೇನಯ್ಯಾ?
ಕಾಳಿನಲ್ಲಿ ನುಸಿ, ತಲೆಯಲ್ಲಿ ಹೇನು, ಅನ್ನದಲ್ಲಿ ಹರಳು ಇರಬಹುದು,
ಆದರೆ, ನುಸಿಯೇ ಕಾಳು, ಹೇನೇ ತಲೆ, ಹರಳೇ ಅನ್ನವಾಗಬಹುದೇನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವನದಲ್ಲಿ ಕಶ್ಮಲವಿರಬಹುದು,
ಆದರೆ, ಕಶ್ಮಲವೇ ಜೀವನವಾಗಬಹುದೇನಯ್ಯಾ?

## ೪೦೫

ವಸ್ತುಗಳ ಸೊಟ್ಟು ಡೊಂಕುಗಳನ್ನು ತಿದ್ದಲು ಉಳಿ, ಬಾಚಿ, ಚಾಣ, ಸುತ್ತಿಗೆಗಳು,
ಆಸ್ತಿಗಳ ಒಡೆಯರ ವಕತೆಗಳನ್ನು ತಿದ್ದಲು ಏನಯ್ಯ?
ವಸ್ತ್ರಗಳ ಮಡಿಕೆ ಮುದುಡಿಕೆಗಳನ್ನು ಸರಿಪಡಿಸಲು ಇಸ್ತ್ರಿಪೆಟ್ಟಿಗೆ,
ಶಾಸ್ತ್ರಗಳ ತಿರುವುಮುರುವುಗಳನ್ನು ಸರಿಪಡಿಸಲು ಏನಯ್ಯಾ?
ಮೈಯ ಗಾಯಗಳ ಮಾಯಿಸಲು ಮುಲಾಮುಗಳು, ಮದ್ದುಗಳು,
ಮನದ ಗಾಯಗಳನ್ನು ಮಾಯಿಸಲು ಏನಯ್ಯಾ?
ಉದರದ ಅಜೀರ್ಣವನ್ನು ಕಳೆಯಲು ಮಾತ್ರೆ ಮಿಶ್ರಣಗಳು–
ಓದಿನ ಅಜೀರ್ಣವನ್ನು ಕಳೆಯಲು ಏನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀರಿನ ಗೊಡಗನ್ನು ಕಳೆಯಲು ಫಿಲ್ಟರ್, ಸ್ಫಟಿಕ, ಕ್ಲೋರೀನುಗಳು–
ಅಂತರಂಗದ ಅಂತರಗಂಗೆಯ ಕಳೆಯಲು ಏನಯ್ಯಾ?

## ೪೦೬

ಅಸ್ಥಿಗಳ ಅಜರತೆಗಿಂತ ಅಕ್ಷಿಗಳ ನಶ್ವರತೆ
ಕೀಳೆನ್ನಬಹುದೇನಯ್ಯಾ?
ಅದ್ರಿಗಳ ಅಚಲತೆಗಿಂತ ಸಮುದ್ರಗಳ ಚಂಚಲತೆ
ಕೀಳೆನ್ನಬಹುದೇನಯ್ಯಾ?
ಸಿಂಹಗರ್ಜನೆಗಿಂತ ಪಕ್ಷಿಕೂಜನ
ಕೀಳೆನ್ನಬಹುದೇನಯ್ಯಾ ?
ಪಾರದರ್ಶಕ ದೂರದರ್ಶಕಕ್ಕಿಂತ ಸೂಕ್ಷ್ಮದರ್ಶಕ ಯಂತ್ರ
ಕೀಳೆನ್ನಬಹುದೇನಯ್ಯಾ ?
ವಜ್ರದ ಕಠಿಣತೆಗಿಂತ ಕುಸುಮ ಕೋಮಲತೆ
ಕೀಳೆನ್ನಬಹುದೇನಯ್ಯಾ ?
ಮಹಾದ್ವಾರಕ್ಕಿಂತ ಗರ್ಭಗುಡಿಯ ಕಿರಿಯದ್ವಾರ
ಕೀಳೆನ್ನಬಹುದೇನಯ್ಯಾ ?
ಹನುಮ ತಂದ ಹೆಬ್ಬೆಟ್ಟಕ್ಕಿಂತ ಅಳಿಲು ಉದುರಿಸಿದ ಮಳಲು
ಕೀಳೆನ್ನಬಹುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಪೃಥ್ವಿಯ ವಿಜಯಕ್ಕಿಂತ ಆತ್ಮವಿಜಯ
ಕೀಳೆನ್ನಬಹುದೇನಯ್ಯಾ ?

## ೪೦೭

ನದಿಯೆ ಬತ್ತಿರುವಾಗ
ನೀರ್‌-ಬೀಳು ಎಲ್ಲಿಯದಯ್ಯಾ?
ನೀರ್‌-ಬೀಳೆ ನಿಂತಿರುವಾಗ
ವಿದ್ಯುದುತ್ಪಾದನೆ ಎಲ್ಲಿಯದಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾನವ್ಯವೇ ಮೃತವಾದಾಗ
ನಲ್‌-ಬಾಳು ಎಲ್ಲಿಯದಯ್ಯಾ?

## ೪೦೮

ಕುಳಿತವರಿಂದ ಕುರ್ಚಿಗೆ ಕಿಮ್ಮತ್ತು ಬರಬೇಕಲ್ಲದೆ
ಕುರ್ಚಿಯಿಂದ ಕುಳಿತವರಿಗೆ ಕಿಮ್ಮತ್ತು ಬಂದರೆ ಹೇಗಯ್ಯ?
ತೊಟ್ಟವರಿಂದ ಉಟ್ಟುದಕ್ಕೆ ಬೆಲೆ ಬರಬೇಕಲ್ಲದೆ
ಬಟ್ಟೆಯಿಂದ ಉಟ್ಟವರಿಗೆ ಬೆಲೆ ಬಂದರೆ ಹೇಗಯ್ಯ?
ಕೂಸಿನಿಂದ ತೊಟ್ಟಿಲಕ್ಕೆ ಶ್ರೇಷ್ಠತೆ ಬರಬೇಕಲ್ಲದೆ
ತೊಟ್ಟಿಲಿನಿಂದ ಕೂಸಿಗೆ ಶ್ರೇಷ್ಠತೆ ಬಂದರೆ ಹೇಗಯ್ಯ?
ಇರುವವರಿಂದ ಮನೆಗೆ ಮನ್ನಣೆ ಬರಬೇಕಲ್ಲದೆ
ಮನೆಯಿಂದ ಇರುವವರಿಗೆ ಮನ್ನಣೆ ಬಂದರೆ ಹೇಗಯ್ಯ ?
ಚಿತ್ರದಿಂದ ಕಾಗದಕ್ಕೆ ಕೀರ್ತಿ ಬಂದರೆ ಸರಿ,
ಕಾಗದದಿಂದ ಚಿತ್ರಕ್ಕೆ ಕೀರ್ತಿ ಬಂದರೆ ಹೇಗಯ್ಯ?
ಚೇತನದಿಂದ ಜಡಕ್ಕೆ ಮಾನ್ಯತೆ ಬಂದರೆ ಸರಿ,
ಜಡದಿಂದ ಚೇತನಕ್ಕೆ ಮಾನ್ಯತೆ ಬಂದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಜನಿಂದ ಹುಟ್ಟಿಗೆ ಘನತೆ ಬಂದರೆ ಸರಿ,
ಹುಟ್ಟಿನಿಂದ ಮನುಜನಿಗೆ ಘನತೆ ಬಂದರೆ ಹೇಗಯ್ಯ?

## ೪೦೯

ಕನಸಿನ ವೈರಿಯೊಡನೆ
ನನಸಿನಲ್ಲಿ ಕಾದುವುದೆಂತಯ್ಯ?
ಕಲ್ಪನೆಯ ಕೆಳದಿಯ ಕೈಯನ್ನು
ಹಂದರದಲ್ಲಿ ಹಿಡಿಯುವುದೆಂತಯ್ಯ?
ಇಲ್ಲದ ಕುದುರೆಯ ಜೂಜನ್ನು
ಗೆಲ್ಲುವ ಪರಿ ಎಂತಯ್ಯ?
ಗಗನಕುಸುಮಗಳ ಭಟ್ಟಿಯಿಳಿಸಿ
ಗಂಧದೆಣ್ಣೆ ತೆಗೆಯುವುದೆಂತಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಜತ್ವವನ್ನು ಮೊದಲು ಪಡೆಯದೆ
ದೇವತ್ವವನ್ನು ಪಡೆಯುವುದೆಂತಯ್ಯ?

## ೪೧೦

ಎಲ್ಲವೂ ಸರಿಯೆಂದು ಹೇಳಿ ನುಸುಳಿ ಪಾರಾಗುವುದೆ,
ಇದೇ ಸರಿಯೆಂದು ಪಟ್ಟು ಹಿಡಿದು ಪೆಟ್ಟು ತಿನ್ನುವುದೆ ?
ಎಲ್ಲರೂ ನನ್ನವರೆಂದು ಸಾರಿ
ಯಾರಿಗೇನೂ ಮಾಡದೆ ಜಾರಿಕೊಳ್ಳುವುದೆ,
ಕೆಲವರಾದರೂ ತನ್ನವರೆಂದು
ಅವರಿಗಾಗಿ ಮಾಡಿ ಮಡಿಯುವುದೆ ?
ವಿಶ್ವವೇ ನನ್ನದೆಂದು ಇರುವ ಮನೆಯನ್ನೇ ಹಾಳುಗೆಡಹುವುದೆ,
ಇರುವ ಮನೆಯನ್ನೇ ಚೊಕ್ಕಟವಾಗಿಟ್ಟುಕೊಂಡು
ವಿಶ್ವವ ಮರೆಯುವುದೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮರುಹುಟ್ಟು ಇದೆಯೆಂದು ಈ ಹುಟ್ಟನ್ನು ಕಡೆಗಣಿಸುವುದೆ,
ಈ ಹುಟ್ಟಿನ ಹುಟ್ಟಿನಲ್ಲಿಯೇ ಜೇನು ತುಂಬಿ
ಮರುಹುಟ್ಟನ್ನು ಮರೆಯುವುದೆ?

## ೪೧೧

ಹಲವು ಗೆಳೆಯರನ್ನು ಗಳಿಸಿಕೊಂಡೆನೆಂಬ ಹೆಮ್ಮೆ ನಿನಗೆ–
ಆದರೆ, ನಿನಗೆ ನೀ ಗೆಳೆಯನಾದೆಯಾ ಒಮ್ಮೆಯಾದರೂ, ಓ ಜೀವಿ ?
ಅವರಿವರು ಹಗೆಗಳಾದರೆಂದು ಹಲ್ಲು ಕಡಿಯುವೆ ಹಗಲೆಲ್ಲ–
ಆದರೆ, ನಿನಗೆ ನೀನೇ ಹಗೆಯಾದುದೆಷ್ಟುಸಲವೆಂದು
ಲೆಕ್ಕ ಮಾಡಿದೆಯಾ ಒಮ್ಮೆಯಾದರೂ, ಓ ಜೀವಿ ?
ಅವರಿವರು ಮೋಸ ಮಾಡಿದರೆಂದು ರೋಸಿ ನುಡಿಯುವೆ ನಿತ್ಯ–
ಆದರೆ, ನಿನಗೆ ನೀ ಮೋಸಗೊಳಿಸಿದುದು ಏಸು ಸಲವೆಂದು
ಎಣಿಸಿದೆಯಾ ಒಮ್ಮೆಯಾದರೂ, ಓ ಜೀವಿ ?
ನಿನ್ನ ಬನ್ನಗಳಿಗೆ ಅನ್ಯರು ಕಾರಣರೆಂದು ಕಿನಿಸುವಿ ಪ್ರತಿದಿನ–
ಆದರೆ, ನಿನ್ನ ಬಹುಪಾಲು ಬವಣೆಗಳಿಗೆ ನೀನೇ ಕಾರಣನೆಂಬುದ
ಜಾನಿಸಿದೆಯಾ ಒಮ್ಮೆಯಾದರೂ, ಓ ಜೀವಿ ?
ಸ್ವತಂತ್ರಧೀರ ಸಿದ್ಧೇಶ್ವರನ ಸಾಕ್ಷಿಯಾಗಿ ಹೇಳುವೆ,
ನಿನ್ನ ಉನ್ನತಿ–ಅವನತಿ ನಿನ್ನ ಕೈಯಲ್ಲಿಯೇ ಜೀವಿ !

## ೪೧೨

ನರೆಗೂದಲಿಗೆ ಕಪ್ಪು ಸವರಿ, ಗಲ್ಲದ ತೆರೆಗಳಿಗೆ ಕ್ರೀಮು ಬಳಿದು
ಅರಿಯದವರಿಂದ ಮುಪ್ಪನ್ನು ಮುಚ್ಚಿಡಬಹುದು–
ಆದರೆ, ನಿನ್ನಿಂದಲೂ ಬಚ್ಚಿಡಬಲ್ಲೆಯಾ ಗೆಳೆಯ ?
ವಿಜ್ಞಾನ ತಂತಜ್ಞಾನಗಳ ನೆರವಿನಿಂದ
ಪೋಲೀಸರ ಕಣ್ಣು ತಪ್ಪಿಸಿ ಗುನ್ಹೆಗೈಯಬಹುದು–
ಆದರೆ, ನಿನ್ನ ಕಣ್ಣು ತಪ್ಪಿಸಿಯೂ ಅಪರಾಧವೆಸಗಬಲ್ಲೆಯಾ ಕೆಳೆಯ ?
ವಿಮರ್ಶಕರ ಕಣ್ಣು ತಪ್ಪಿಸಿ ಕೃತಿಚೌರ್ಯ ಮಾಡಬಹುದು–
ಆದರೆ, ನಿನ್ನ ಕಣ್ಣು ತಪ್ಪಿಸಿಯೂ ಕದಿಯಬಲ್ಲೆಯಾ ಮಿತ್ರ?
ನಿನ್ನ ಕಣ್ಣು ತಪ್ಪಿಸಿದರೂ ಕಣಕಣವೂ ಕಣ್ಣಾಗಿರುವ
ಸ್ವತಂತ್ರಧೀರ ಸಿದ್ಧೇಶ್ವರನ ಕಣ್ಣು ತಪ್ಪಿಸಬಲ್ಲೆಯಾ ಪ್ರಿಯಸಖ?

## ೪೧೩

ಇಲ್ಲಿ ಗುಡಿಗೆ ಬರುವವರೆಲ್ಲ ಭಕ್ತರಲ್ಲ,
ಶಾಲೆ ಸೇರುವವರೆಲ್ಲ ವಿದ್ಯಾರ್ಥಿಗಳಲ್ಲ,
ಶಸ್ತ್ರ ಹಿಡಿದವರೆಲ್ಲ ಶೂರರಲ್ಲ,
ಶಾಸ್ತ್ರ ಕಲಿತವರೆಲ್ಲ ಶಾಂತರಲ್ಲ,
ಗಡ್ಡ ಬಿಟ್ಟವರೆಲ್ಲ ಮುಸಲ್ಮಾನರಲ್ಲ,
ಶಿಲುಬೆ ಧರಿಸಿದವರೆಲ್ಲ ಕ್ರೈಸ್ತರಲ್ಲ,
ಲಿಂಗ ಧರಿಸಿದವರೆಲ್ಲ ಲಿಂಗಾಯತರಲ್ಲ,
ಜನಿವಾರ ಹಾಕಿದವರೆಲ್ಲ ಬ್ರಾಹ್ಮಣರಲ್ಲ,
ಪದವಿ ಪಡೆದವರೆಲ್ಲ ಪ್ರಬುದ್ಧರಲ್ಲ,
ಸ್ನಾನ ಮಾಡಿದವರೆಲ್ಲ ಶುದ್ಧರಲ್ಲ,
ಚರ್ಚೆ ಮಾಡುವವರೆಲ್ಲ ಸಾಕ್ರೆಟೀಸ್ ಅಲ್ಲ,
ರಾಜಕಾರಣದಲ್ಲಿರುವವರೆಲ್ಲ ಜಯಪ್ರಕಾಶ ಅಲ್ಲ,
ಸ್ವತಂತ್ರಧೀರ ಸಿದ್ಧೇಶ್ವರಾ,
'ಅಹಂ ಬ್ರಹ್ಮಾಸ್ಮಿ' ಎನ್ನುವವರೆಲ್ಲ ಅದ್ವೈತಿಗಳಲ್ಲ !

೪೧೪

ಮಾತು ಸೋತಾಗ ಮೌನ ಮಾತಾಡೀತು,
ಮೌನ ಸೋತಾಗ ಮುಂದೇನಯ್ಯಾ?
ಶಬ್ದ ಸೋತಾಗ ಅರ್ಥ ಸಹಕರಿಸೀತು,
ಅರ್ಥ ಸೋತಾಗ ಮುಂದೇನಯ್ಯಾ?
ತರ್ಕ ಸೋತಾಗ ತತ್ತ್ವ ಕೈಹಿಡಿದೀತು,
ತತ್ತ್ವ ಸೋತಾಗ ಮುಂದೇನಯ್ಯಾ?
ಅನುಭವ ಸೋತಾಗ ಅನುಭಾವ ಆಶ್ರಯ ನೀಡಿತು,
ಅನುಭಾವ ಸೋತಾಗ ಮುಂದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಸೋತಾಗ ನಿನ್ನವರು ನೆರವಾದರು,
ನಿನ್ನವರೇ ಸೋತರೆ ಮುಂದೇನಯ್ಯಾ ?

೪೧೫

ಸಮುದ್ರವೇ ನೀರಡಿಕೆಯೆಂದರೆ
ಅದಕ್ಕೆ ನೀರು ಕುಡಿಸುವವರಾರಯ್ಯಾ ?
ಹಿಮಾದ್ರಿಯೇ ನನಗೆ ನೆಗಡಿಯೆಂದರೆ
ಅದರ ಮೂಗನೊರಸುವವರಾರಯ್ಯಾ ?
ಸೂರ್ಯನೇ ನನಗೆ ಸೆಕೆಯೆಂದರೆ
ಅವನಿಗೆ ಗಾಳಿ ಹಾಕುವವರಾರಯ್ಯಾ?
ಚಂದ್ರನೇ ನನಗೆ ಚಳಿಯೆಂದರೆ
ಅವನಿಗೆ ಕಂಬಳಿ ಹೊದಿಸುವವರಾರಯ್ಯಾ ?
ನೆಲವೇ ನನಗೆ ಹಸಿವೆಯೆಂದರೆ
ಅದಕ್ಕೆ ಅಶನವೀಯುವವರಾರಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಹಾತ್ಮರಿಗೇ ಮನ್ನಣೆಯ ದಾಹ ಅಂಟಿದರೆ
ಅದನ್ನು ನಿವಾರಿಸುವವರು ಯಾರಯ್ಯಾ ?

## ೪೧೬

ಹಣ ಕೊಂಡ ಅನರ್ಹ ಕೀರ್ತಿಗಿಂತ
ಗುಣ ಗಳಿಸಿದ ಅಕೀರ್ತಿಯೇ ಮೇಲಯ್ಯ ;
ಪಚಾರ ತಂದ ಸಲ್ಲದ ಖ್ಯಾತಿಗಿಂತ
ಸೇವೆಗೆ ಸಂದ ಅಖ್ಯಾತಿಯೇ ಮೇಲಯ್ಯ ;
ಅಧಿಕಾರ ಕಸಿದುಕೊಳ್ಳುವ ಅಪಾತ್ರ ಮನ್ನಣೆಗಿಂತ
ಸತ್ಪಾತ್ರತೆಗೆ ಸಿಕ್ಕುವ ಅಮನ್ನಣೆಯೇ ಮೇಲಯ್ಯ ;
ಕೀರ್ತಿಗಾಗಿ ಅರ್ಹತೆಯ ವಧೆ, ಗುಣದ ಕೊಲೆ,
ಚಾರಿತ್ರ್ಯದ ಹನನ, ಶೀಲದ ಸಮಾಧಿಯಾಗದಿರಲಯ್ಯಾ !
ಸಂಸ್ಕೃತಿಸುಮಗಳು ಸೂಸುವ ಸೌರಭವಾಗಿ,
ಚಾರಿತ್ರ್ಯ–ಜ್ಯೋತಿ ಬೀರುವ ಬೆಳಕಾಗಿ,
ಪರಿಣತಿಯ ಪಭೆ, ಸೇವಾರತಿಯ ಸೊಂಪು,
ಪಾವನ ಜೀವನದ ಪರಾಗವಾಗಿ,
ಯಶ, ಖ್ಯಾತಿ, ಮನ್ನಣೆಗಳು ಬಾಳಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೧೭

ಮೇಲೆ ಕುಳಿತವರನ್ನು ಕೆಳಗಿಳಿಸಬಹುದಾಗಲಿ
ಕೆಳಗೆ ಕುಳಿತವರನ್ನು ಕೆಳಗಿಳಿಸುವುದೆಂತಯ್ಯ ?
ಮುಂದೆ ಕುಳಿತವರನ್ನು ಹಿಂದೆ ಸರಿಸಬಹುದಾಗಲಿ
ಹಿಂದೆ ಕುಳಿತವರನ್ನು ಹಿಂದೆ ಸರಿಸುವುದೆಂತಯ್ಯ ?
ಮಾತುಗುಳಿಯನ್ನು ಸುಮ್ಮನಿರಿಸಬಹುದಾಗಲಿ
ಮೌನಿಯನ್ನು ಸುಮ್ಮನಿರಿಸುವುದೆಂತಯ್ಯ ?
ನಿದ್ರೆ ಹತ್ತಿದವರನ್ನು ಎಚ್ಚರಿಸಬಹುದಾಗಲಿ
ಎಚ್ಚರಿರುವವರನ್ನು ಎಚ್ಚರಿಸುವುದೆಂತಯ್ಯ ?
ಒಡೆಯರನ್ನು ವರಮಾನ ತೆರಿಗೆಯಿಂದ ಅಂಜಿಸಬಹುದಾಗಲಿ
ಬಡವರನ್ನು ಅದರಿಂದ ಬೆದರಿಸುವುದೆಂತಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮರೆದವರನ್ನು ಅರಿವಿಗೆ ತರಬಹುದಾಗಲಿ
ಅರಿತೂ ಜಾರಿದವರನ್ನು ದಾರಿಗೆ ತರುವುದೆಂತಯ್ಯ ?

## ೪೧೮

ಮುನ್ನುಡಿ ಓದಿ ವಾದಿಸಿದನೊಬ್ಬ,
ಸಾದರ ಸ್ವೀಕಾರವನ್ನೋದಿ ವಾದಿಸಿದನಿನ್ನೊಬ್ಬ–
ಇಬ್ಬರೂ ಮೂಲಗ್ರಂಥವನ್ನು ಓದದವರೇ !
ಕಿಂವದಂತಿಗಳನ್ನು ಕೇಳಿ ನಂಬಿದನೊಬ್ಬ,
ಕನಸಿನಲ್ಲಿ ಕಂಡು ನಂಬಿದನೊಬ್ಬ–
ಇಬ್ಬರೂ ಪ್ರತ್ಯಕ್ಷ ಕಾಣದವರೇ, ಪ್ರಮಾಣಿಸಿ ನೋಡದವರೇ !
ಮಂದಿ ಮಾಡಿದರೆಂದು ಮಾಡಿದನೊಬ್ಬ,
ಹಿಂದಿನಿಂದ ಬಂದುದೆಂದು ಮಾಡಿದನಿನ್ನೊಬ್ಬ–
ಇಬ್ಬರೂ ಸ್ವಂತ ವಿಚಾರಿಸಿ, ವಿಮರ್ಶಿಸಿ ಮಾಡದವರೇ !
ತಿಳಿದೂ ಮನಸ್ಸಿಲ್ಲದೆ ಮಾಡಿ ಕೆಟ್ಟನೊಬ್ಬ,
ತಿಳಿಯದೆಯೆ ಮನಸ್ಸಿಟ್ಟು ಮಾಡಿ ಕೆಟ್ಟನಿನ್ನೊಬ್ಬ–
ಇಬ್ಬರೂ ಮಾಡಿ ಕೆಟ್ಟವರೇ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಸ್ವೀಕರಿಸಿ ನಿನ್ನ ಮಕ್ಕಳ ತಿರಸ್ಕರಿಸಿ ಕೆಟ್ಟನೊಬ್ಬ,
ನಿನ್ನ ಮಕ್ಕಳ ಸ್ವೀಕರಿಸಿ ನಿನ್ನ ನಿರಾಕರಿಸಿ ಕೆಟ್ಟನಿನ್ನೊಬ್ಬ–
ಇಬ್ಬರೂ ವಿಫಲರೇ !

## ೪೧೯

ಪುರುಷತ್ವಹೀನನ ಬ್ರಹ್ಮಚರ್ಯ, ಪೌರುಷಶೂನ್ಯನ ಅಹಿಂಸೆ.
ಅಜೀರ್ಣರೋಗಿಯ ಮಿತಾಹಾರ,
ವೃದ್ಧ ವೇಶ್ಯೆಯ ಪಾತಿವತ್ಯ ಪ್ರತಿಪಾದನೆ,
ಮುದುಕನ ಸಂತಾನ ನಿರೋಧ ಪ್ರಚಾರ,
ದರಿದ್ರನ ಧನದಾಶೆಯ ಖಂಡನ,
ಹೇಡಿಯ ಕ್ಷಮಾಗುಣದ ಮಂಡನ,
ಅಕ್ಷರ ಶತ್ರುವಿನ ವೈದುಷ್ಯಾಹಂಕಾರ ನಿರಸನವಾದ,
ಅಂಧಕನ ನೇತ್ರಚಾಪಲ್ಯವರ್ಜನ ಬೋಧೆ–
ಇವೆಲ್ಲ ಯಾವ ಲೆಕ್ಕಕ್ಕೆ ಬರುವುವಯ್ಯ?
ಇವುಗಳಿಂದ ಯಾರಿಗೆ ಲಾಭವಯ್ಯ ?
ಬರಲಿ ಬಲವಾನರ ಬ್ರಹ್ಮಚರ್ಯ ಅಹಿಂಸಾದಿಗಳು,
ಶಕ್ತಿಶಾಲಿಯ ಕ್ಷಮಾಗುಣವಾದಿಗಳು !
ಶಕ್ತಿಯಿದ್ದೂ ರಕ್ತಿಯನ್ನು ನಿಯಂತ್ರಿಸುವವನೇ
ಮುಕ್ತನೆಂದಾತ ನಮ್ಮ ಸ್ವತಂತ್ರಧೀರ ಸಿದ್ಧೇಶ್ವರಾ !

## ೪೨೦

ಸೆರೆ ಕುಡಿವುದನ್ನು ಮಿತಿಯಲ್ಲಿರಿಸಿಕೊಳ್ಳುವೆನೆನ್ನುವವನು ಮತಿಗೇಡಿ ;
ಮೈಗೆ ನೀರೆರೆದು ಮನದ ಬೆಂಕಿ ಆರಿಸಿಕೊಂಬೆನೆಂಬವನು ಹುಂಬ ;
ಶಠತೆಯನ್ನು ಸಾಮದಾನಗಳಿಂದ ಸಂತೈಸುವೆನೆಂಬವನು ಶುಂಭ ;
ಕಾಮಕ್ಕೆ ಒಳಗಾಗಿಯೂ ವಿವೇಕವನ್ನುಳಿಸಿಕೊಂಬೆನೆಂಬವನು ನಿಶ್ಶುಂಭ!
“ಹೃದಯ ತೃಣಕುಟೀರೇ
ದೀಪ್ಯಮಾನ ಸ್ಮರಾಗ್ನಿ
ಉಚಿತಮನುಚಿತಂ ವಾ
ವೇತ್ತಿನೋ ಪಂಡಿತೋಪಿ” ಎಂದುದಾಗಿ,
ಕಾಮದ ಕಳ್ಳ ಹುದುಲಿನಲ್ಲಿ ಸಿಕ್ಕವನು
ಕೈಕಾಲು ಬಡಿದಷ್ಟೂ
ಕೆಳಗಿಳಿಯನೇನಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೨೧

ಬದನಿಕೆಯು ಶೋಷಕ ಬೇರೆ ತರು ಮರಗಳಿಗೆ,
ಅದೇ ಪೋಷಕ ಗಂಧದ ಮರಕ್ಕೆ ;
ನೀರು ವೈರಿ ಮಣ್ಣ ಹೆಂಟೆಗೆ,
ಅದೇ ಸಹಕಾರಿ ಸಿಮೆಂಟಿಗೆ ;
ಲೆಪ್ಪ ವಿಕಾರಿ ಉಳಿದ ವಸ್ತುಗಳಿಗೆ,
ಅದೇ ಉಪಕಾರಿ ಕನ್ನಡಿಗೆ ;
ತೇಜಾಬು ಸಿಂಹಸ್ವಪ್ನ ಸೀಸಕ್ಕೆ,
ಅದೇ ಅಪೇಕ್ಷಣೀಯ ಸುವರ್ಣಕ್ಕೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಸಾರ ಬಾಧಕ ಅಳಿಮನದವರಿಗೆ,
ಅದೇ ಸಾಧಕ ನಿನ್ನವರಿಗೆ

!

## ೪೨೨

ಕೊಯ್ಯುವರೆಂದು ತೆನೆ ಬಿಡದೆ ಶಾಳಿ,
ಗೊನೆ ಬಿಡದೆ ಬಾಳೆ,
ನನೆ ಬಿಡದೆ ಬಳ್ಳಿ ?
ಒಯ್ಯುವರೆಂದು ಗಳಪದೆ ಗಿಳಿ,
ಕುಣಿಯದೆ ನವಿಲು,
ಜಿಗಿಯದೆ ಚಿಗರಿ ?
ಕಲ್ಲಿಡುವರೆಂದು ಫಲ ಬಿಡದೆ ಮರ,
ಗೂಡಿಡದೆ ಜೇನುಹುಳ,
ಬಚ್ಚು ಕಟ್ಟದೆ ಹಕ್ಕಿ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬೀಗಳೆವರೆಂದು ಬರೆಯನೆ ಕವಿ,
ಬೋಧಿಸನೆ ಪವಾದಿ,
ಹಿಂದೆಗೆವನೆ ಸತ್ಯವಾದಿ ?

## ೪೨೩

ಮುಟ್ಟಿದರೆ ಮೃತ್ಯುವನೆ ಬರಿಸುವ ವಿದ್ಯುತ್ತನೇ ಧರಿಸಿ
ಝುಗಝುಗಿಸಿ ನಗುವುವಯ್ಯ ತಾಮ್ರದ ತಂತಿಗಳು ;
ನೆಟ್ಟರೆ ನೆತ್ತರನೆ ಹರಿಸುವ ಸೂಜಿಗಳನೆ ಸಹಿಸಿ
ಸಿಹಿ ಸುರಿಸಿ ಹಾಡುವುವಯ್ಯ ಗಾನದೋಸೆಗಳು ;
ಟ್ರ್ಯಾಕ್ಟರಿನ, ಬುಲ್‌ಡೋಝರಿನ ಹಲ್ಲಿನ ಗಾಯ ತಳೆದೇ ಬೆಳೆದು
ನಳನಳಿಸಿ ನಲಿವುವಯ್ಯ ಹೊಲ ಗದ್ದೆಗಳು ;
ವಿಧಿಯ ಉಪಟಳ, ಕಾಲನ ಕಿರುಕುಳ, ಕುಜನ ನಿಂದೆ,
ಸ್ವಜನ ಪೀಡೆಗಳಿಗೆ ಈಡಾಗಿಯೂ ಕೇಡನೆಸಗದೆ
ಲೇಸನೇ ಮಾಡುವರಯ್ಯ ಸುಜನರು ;
ಸ್ವತಂತ್ರಧೀರ ಸಿದ್ಧೇಶ್ವರನು ಒಡ್ಡುವ
ಅಗ್ನಿಪರೀಕ್ಷೆಗಳಿಗೆ ಒಳಗಾಗಿಯೂ
ದೇಹಿಯೆನ್ನರಯ್ಯ, ಪಾಹಿಯೆನ್ನರಯ್ಯ, ತ್ರಾಹಿಯೆನ್ನರಯ್ಯ ಶರಣರು !

## ೪೨೪

ಮತ್ತ ವಾರಣ ಕೆಣಕಿದರೆ ಕನಲಿ ಮೇಲ್ವಾಯ್ವುದಲ್ಲದೆ
ನೊಣ ಕೆಣಕಿದರೆ ಮೇಲೆರಗುವುದೆ ಕೇಸರಿ ?
ಸರ್ಪವು ದರ್ಪ ತೋರಿದರೆ ಮೇಲೆ ಬೀಳ್ವುದಲ್ಲದೆ
ಮಳೆ ಹುಳು ಮೂದಲಿಸಿದರೆ ಮೇಲೆರಗುವುದೆ ಗರುಡ ?
ಹಡಗ ತಡವಿದರೆ ಹೊಡೆದುರುಳಿಸುವುದಲ್ಲದೆ
ಕಡ್ಡಿ ಕಚಕುಳಿಯಿಟ್ಟರೆ ಅಪ್ಪಳಿಸುವುದೆ ತಿಮಿಂಗಿಲು ?
ನಿನ್ನ ಶರಣರು ಮುನಿದರೆ ಮಾತ್ರ
ಗಡುಗುಟ್ಟಿ ನಡುಗುವನಲ್ಲದೆ
ಕುಜನರು ಕಿನಿಸಿದರೆಂದು
ಕಂಪಿಸುವನೆ ನಿನ್ನ ನಿಜಭಕ್ತ,
ಸ್ವತಂತ್ರಧೀರ ಸಿದ್ಧೇಶ್ವರಾ ?

## ೪೨೫

ಸೂರ್ಯ ಬರುವಾಗ ಸದ್ದಿಲ್ಲ, ಗದ್ದಲವಿಲ್ಲ,
ಸಿಡಿಲು ಬರುವಾಗ ಕಿವಿಗಡಚಿಕ್ಕುವುವಯ್ಯಾ ;
ಶಶಿ ಬರುವಾಗ ತುಸುವೂ ತೊಂದರೆಯಿಲ್ಲ
ಮಿಂಚು ಹೊಯ್ವಾಗ ಕಣ್ಣು ಕುಕ್ಕುವುದಯ್ಯಾ ;
ಸುಗ್ಗಿ ಬರುವಾಗ ಸ್ವಲ್ಪಮೂ ಕೋಟಲೆಯಿಲ್ಲ,
ಮಾಗಿ ಬರುವಾಗ ತರಗೆಲೆ–ಸರಿ, ಮರ್ಮರ ಸ್ವರವಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಲ್ಲವರು ಇರುವಲ್ಲಿ ಎಳ್ಳನಿತೂ ಸೊರಹಿಲ್ಲ,
ಗಾಂಪರಿರುವಲ್ಲಿ ರಂಪ ಬಹಳವಯ್ಯಾ !

## ೪೨೬

ಬುದ್ಧಿಯ ಬಳ್ಳಿ ಬಿಟ್ಟ ಸಂಶಯದ ಹೂವಿನಲ್ಲಿ
ಶಾಂತಿಯ ಸುಗಂಧ ದೊರಕುವುದೆ ಅಯ್ಯ ?
ಮನದ ಮರದ ಮರವೆಯ ಚಿಗುರಿನಲ್ಲಿ
ತಿಳಿವಿನ ತನಿರಸ ದೊರೆಯುವುದೆ ಅಯ್ಯ ?
ಕಾಯದ ಕತ್ತಲೆಗೆ ಕೊನರಿದ ಕುಡಿಗಳಲ್ಲಿ
ತೃಪ್ತಿಯ ಬೆಳಕು ಸಿಕ್ಕುವುದೆ, ಅಯ್ಯ ?
ವಾಚ್ಯದ ಬಿದಿರಿನ ಬೇರಿನ ರಸದಲ್ಲಿ
ಸೂಚ್ಯದ ಸವಿಯು ಸಿಕ್ಕುವುದೆ, ಅಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಲ್ಪರ ಜಲ್ಪದ ಹುಚ್ಚಾಪಟ್ಟೆಯಲ್ಲಿ
ಬಲ್ಲವರ ಸೊಲ್ಲುಗಳ ಬೆಲ್ಲ,
ಶರಣರ ಸೂಳ್ನುಡಿಗಳ ಸಕ್ಕರೆ ಸಿಕ್ಕುವುವೆ, ಅಯ್ಯ ?

## ೪೨೭

ಹೊಸರಾಜ್ಯಸ್ಥಾಪಕ
ಹಳ ನಾಣ್ಯಗಳನ್ನೇ ಕರಗಿಸಿ ತನ್ನ ಮುದ್ರೆಯೊತ್ತಿದ,
ಹೊಸ ನಾಣ್ಯಗಳೆಂದು ತೂರಿದ ;
ಹೊಸ ಧರ್ಮಸ್ಥಾಪಕ
ಹಳ ತತ್ತ್ವಗಳನ್ನೇ ತಿರಿಚಿ ತನ್ನ ಮುದ್ರೆಯೊತ್ತಿದ,
ಹೊಸ ಧರ್ಮವೆಂದು ಸಾರಿದ ;
ಹೊಸ ವಿಚಾರಪವರ್ತಕ
ಹಳ ವಿಚಾರಗಳನ್ನೇ ಹೊಸತುಗೊಳಿಸಿ ತನ್ನ ಮುದ್ರೆಯೊತ್ತಿದ,
ಹೊಸ ವಿಚಾರಗಳೆಂದು ಬೀರಿದ !
ಹೊಸತನದ ಹುಚ್ಚು ಮೆಚ್ಚತಕ್ಕುದೇ–
ಆದರೆ ಹೊಸದಾವುದಿದೆಯಯ್ಯ ನಿನ್ನ ಮುಂದೆ ?
ಹೊಸದೇನನ್ನಾದರೂ ನೀಡಯ್ಯ ತಂದೆ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೨೮

ಹಳೆ ಮರದ ಚಿಗುರು, 'ನಾನು ನವ, ನಾನು ನವ' ಎಂದಿತು,
ಬೊಡ್ಡೆ ಕೇಳಿ ನಕ್ಕಿತು ;
ಹೊಳೆಯ ಹೊಸ ನೀರು 'ನಾನು ನವ, ನಾನು ನವ' ಎಂದಿತು,
ಕಡಲು ಕೇಳಿ ನಕ್ಕಿತು ;
ಕಾರ ಹೊಸ ಮೋಡ 'ನಾನು ನವ, ನಾನು ನವ' ಎಂದಿತು,
ಬಾನು ಕೇಳಿ ನಕ್ಕಿತು ;
ಕವಿಯ ಹೊಸ ಕವನ 'ನಾನು ನವ, ನಾನು ನವ' ಎಂದಿತು,
ಕಾಲ ಕೇಳಿ ನಕ್ಕಿತು ;
ತೊಟ್ಟಿಲದ ಹೊಸ ಕೂಸು 'ನಾನು ನವ, ನಾನು ನವ' ಎಂದಿತು,
ಸ್ವತಂತ್ರಧೀರ ಸಿದ್ಧೇಶ್ವರ ಕೇಳಿ ನಕ್ಕ !

## ೪೨೯

ಏನಿದೇನಿದೇನಯ್ಯ–
ಹಳತನದ ಹೂವಿನಲ್ಲಿಯೇ ಹುಟ್ಟಿದ ಹೊಸತನದ ಕಂಪು
ದೆಸೆದೆಸೆಗೆ ಪಸರಿಸಿದುದ ಕಂಡೆ ;
ಹಳೆಯ ಕಿನ್ನರಿಯಲ್ಲಿಯೇ ಹೊಮ್ಮಿದ ಹೊಸ ಗಾನ
ನಾಲ್ಕೂ ನಿಟ್ಟಿಗೆ ಹರಿದಾಡಿದುದ ಕಂಡೆ ;
ಹಳೆಯ ಶಬ್ದಗಳಲ್ಲಿಯೇ ಸೂಸಿದ ಹೊಸ ಅರ್ಥ
ಬುದ್ಧಿಭಾವಗಳಿಗೆ ಹೊಸ ಚೆಲುವು ಚೇತನಗಳನಿತ್ತುದ ಕಂಡೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹಳೆಯ ಜಗತ್ತು ಹೊಸ ಪ್ರವಾದಿಯೊಬ್ಬನಿಂದ
ಆಗಿನ ಮಟ್ಟಿಗಾದರೂ ಹೊಸದಾದುದ ಕಂಡೆ !

## ೪೩೦

ಇಂದು ಯುಗಾದಿಯೋ ಯುಗಾಂತವೋ ?
ಯುಗಾದಿಯಾದರೆ ಎಂಥ ಯುಗದ ಆದಿಯಯ್ಯಾ ?
ಯುಗಾಂತವಾದರೆ ಎಂಥ ಯುಗದ ಅಂತವಯ್ಯಾ ?
ಒಂದರ ಆದಿಯೇ ಇನ್ನೊಂದರ ಅಂತ,
ಒಂದರ ಮರಣದಲ್ಲಿ ಇನ್ನೊಂದರ ಜನನ !
ಅಸು ಬಿಟ್ಟುದರಿಂದಲೇ ಹುಟ್ಟಿದ
ಅಸು ತೊಟ್ಟುದು
ಹೊಸದೆನಿಸುವುದೇ ಚೋದ್ಯವಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೩೧

ವಿಜ್ಞಾನಿಯೆ, ನೀನು ಮನಸ್ಸು ಮಾಡಿದರೆ
ಅನಾರೋಗ್ಯಕರ ಆವಿಗಳಿಂದಲೇ ರಸಗೊಬ್ಬರ ತಯಾರಿಸಬಲ್ಲೆ,
ಶಿಲೀಂಧ್ರಗಳಿಂದಲೇ ಪ್ರಾಣ–ಪ್ರದ ಔಷಧ ಸಿದ್ಧಗೊಳಿಸಬಲ್ಲೆ,
ಅಭಾವವನ್ನೇ ಸಮೃದ್ಧಿಯನ್ನಾಗಿ ಮಾರ್ಪಡಿಸಬಲ್ಲೆ,
ಕಲ್ಲನ್ನೂ ರೊಟ್ಟಿಯನ್ನಾಗಿ ರೂಪಾಂತರಿಸಬಲ್ಲೆ !
ಹೀಗಿದ್ದೂ, ಮಾರಣಹೋಮಕ್ಕೆ ಆಜ್ಯವನ್ನೇಕೆ ಎರೆಯಬೇಕಯ್ಯ ನೀನು ?
ಬದುಕಿಸಬಲ್ಲ ವಿಜ್ಞಾನವನ್ನು ಕೊಲ್ಲಲೆಂದೇಕೆ,
ಬೆಳೆಸುತ್ತಿಹೆ, ಬಳಸುತ್ತಿಹೆಯಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ ಹೇಳುವೆ–
ನಿನ್ನ ಸನ್ಮತಿಯಲ್ಲಿ ಸಕಲರ ಸುಗತಿ,
ನಿನ್ನ ದುರ್ಮತಿಯಲ್ಲಿ ಸಕಲ ಸಂಹೃತಿಯಯ್ಯಾ !

## ೪೩೨

ಹೆಣ್ಣೆ, ನೀನು ಸಹನೆಯಲ್ಲಿ ಪೃಥ್ವಿ,
ಕ್ಷಮೆಯಲ್ಲಿ ಜಲ,
ಕರುಣೆಯಲ್ಲಿ ಆಕಾಶ,
ಆಶಯವೀಯುವಲ್ಲಿ ವಾಯು,
ಆದರೆ, ಹತ್ತಿರಿದ್ದಾಗ ತಂಪೆರಚಿ, ದೂರವಿದ್ದಾಗ ಸುಡುವ ಬೆಂಕಿ!
ಆ ಸುಡುವ ಬೆಂಕಿ ಅದೆಷ್ಟು ಸುಖಕರ !
ಮಿಲನದ ಮಾಧುರ್ಯಕ್ಕೆ ಪ್ರಚ್ಛನ್ನ ವರ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ನಿನ್ನಿಂದ ಕಳೆ
ಗಂಡಿನ ಬಾಳಿಗೆ,
ನೀನೆ ಮಧುರದ ಮಳೆ
ಬದುಕಿನ ಬೆಳೆಗೆ !

## ೪೩೩

ಹೂವಿನ ಗಂಧ ಹಾರಿ ಹೋಗಬಹುದಾಗಲಿ
ಗಂಧದ ಮರದ ಗಂಧ ಹಾರಿ ಹೋಗುವುದೇನಯ್ಯಾ ?
ಎಣ್ಣೆಯ ದೀಪ ಆರಿ ಹೋಗಬಹುದಾಗಲಿ
ರತ್ನದ ದೀಪ ಆರಿಹೋಗುವುದೇನಯ್ಯಾ ?
ಬಳಿದ ಬಣ್ಣ ತೊಳೆದು ಹೋಗಬಹುದಾಗಲಿ
ಮೈ ತಳೆದ ಬಣ್ಣ ತೊಳೆದುಹೋಗುವುದೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶ್ರೇಷ್ಠ ಕೃತಿಕಾರನ ಜೀವನ ಮುಗಿದು ಹೋಗಬಹುದಾಗಲಿ

೪೩೪

ಅರ್ಥ ಅಕ್ಷರಗಳ ಬೆಳಗುವಂತೆ,
ಆರ್ಥ ಸಂಸಾರವ ಬೆಳಗುವಂತೆ,
ಪ್ರೀತಿ  ಬಾಳನ್ನೇ ಬೆಳಗುವಂತೆ,
ನೀತಿ ನರರ ಸಂಬಂಧಗಳ ಬೆಳಗುವಂತೆ,
ವಿಶ್ವಾಸ ವ್ಯವಹಾರಗಳ ಬೆಳಗುವಂತೆ,
ಧೈರ್ಯ ಶೌರ್ಯವನ್ನು ಬೆಳಗುವಂತೆ,
ವಿನಯ ವಿದ್ಯೆಯನ್ನು ಬೆಳಗುವಂತೆ,
ದಾನ ಧನಿಕರನ್ನು ಬೆಳಗುವಂತೆ,
ಕ್ಷಮೆ ವೀರರನ್ನು ಬೆಳಗುವಂತೆ
ಶಿಸ್ತು ಸೈನಿಕರನ್ನು ಬೆಳಗುವಂತೆ,
ದಕ್ಷತೆ ಪ್ರಾಮಾಣಿಕತೆ ಆಡಳಿತವನ್ನು ಬೆಳಗುವಂತೆ,
ಜನ ಸೇವೆ ಸರಕಾರವನ್ನು ಬೆಳಗುವಂತೆ,
ನಿನ್ನ ಕೃಪೆ ಜನರ ಕೃತಿಗಳನ್ನು ಬೆಳಗಲಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೩೫

ಇತಿಹಾಸವೆ,
ನೀನು ಪುನರಾವರ್ತನಶೀಲೆಯಂತೆ,
ಪರಾಕ್ರಮಾನುಕೂಲೆಯಂತೆ,
ಮಹದ್ಘಟನೆಗಳ ಮಾಲೆಯಂತೆ,
ಅನುಭವದ ಪಾಠಶಾಲೆಯಂತೆ !
ಇರಬಹುದು !
ಆದರೆ ಇತಿಹಾಸವೆ,
ಹಿಂದೆ ಆಗದಿದ್ದುದು ಮುಂದೆ ಆಗದೆಂಬ
ಮಂದಮತಿಯ ಮಾಣು ;
ಸಾಮಾನ್ಯರ ಅಸಾಮಾನ್ಯ ಶಕ್ತಿ
ನಿನ್ನೆದೆಯಮೇಲೆಯೇ ನರ್ತಿಸುತ್ತಿಹುದ ಕಾಣು ;
ಆಗು ಸಾಮಾನ್ಯತಾ–ಗಿರಿಧರಗೋಪಾಲನ
ಕರದ ಮಧುರ ಸುಂದರ ವೇಣು ;
ಆಗದಿರು ಬಡಬಗ್ಗರ ಕೊರಳ ನೇಣು ;
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ–
ನೀನಾಗು ಹೊತ್ತಿನ ಹುಟ್ಟಿನಲ್ಲಿ
ಜನಜೀವನದ ಜೇನು !

## ೪೩೬

ತೂಗಿ ಕಟ್ಟುವುದೆ ಈಸುಗುಂಬಳದ ಬೆಲೆಯ ?
ಅಳೆದು ಕಟ್ಟುವುದೆ ವಜ್ರ ವೈಢೂರ್ಯಗಳ ಬೆಲೆಯ ?
ಎಣಿಸಿ ಕಟ್ಟುವುದೆ ಕಲಾಕೃತಿಗಳ ಬೆಲೆಯ ?
ವಸ್ತುವಿಗೆ ಸರಿಯಾದ ಒರೆಗಲ್ಲು ಬೇಡವೆ ?
ಪದಾರ್ಥಕ್ಕೆ ತಕ್ಕ ಪರೀಕ್ಷೆ ಬೇಡವೆ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀನಸುಗಳ ಬೆಲೆ ಕಟ್ಟಿದಂತೆ
ಜನರ ಬೆಲೆ ಕಟ್ಟಿದರೆ ಹೇಗಯ್ಯಾ ?

## ೪೩೭

ಪ್ರೀತಿಸುವವರನ್ನು ಪಡೆಯುವುದು ಕಠಿಣ
ಅದಕ್ಕೂ ಕಠಿಣ–ಕೆಡದಂತೆ ಪ್ರೀತಿಯ ಕಾಯ್ದುಕೊಂಡು ಹೋಗುವುದು;
ಅತ್ಯುನ್ನತಿಗೆ ಏರುವುದು ಕಠಿಣ,
ಅದಕ್ಕೂ ಕಠಿಣ– ಏರಿ ಅಲ್ಲಿಯೇ ಉಳಿಯುವುದು ;
ಆದರ್ಶಮೊಂದ ಆಯ್ದುಕೊಳ್ಳುವುದು ಕಠಿಣ,
ಅದಕ್ಕೂ ಕಠಿಣ–ಅದರಂತೆ ಆಚರಿಸುವುದು ;
ಕವಿತೆಯ ಸಮರ್ಪಕ ವ್ಯಾಖ್ಯೆ ನೀಡುವುದು ಕಠಿಣ,
ಅದಕ್ಕೂ ಕಠಿಣ–ಅದರಂತೆ ಕವಿತೆ ಬರೆಯುವುದು ;
ಸತ್ಕೀರ್ತಿಯನ್ನು ಗಳಿಸುವುದು ಕಠಿಣ,
ಅದಕ್ಕೂ ಕಠಿಣ–ಗಳಿಸಿದುದನ್ನು ಉಳಿಸಿಕೊಳ್ಳುವುದು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿಜಮಾನವನಾಗುವುದು ಕಠಿಣ,
ಅದಕ್ಕೂ ಕಠಿಣ, ನಿಜಮಾನವನಾಗಿ ಕೊನೆಯವರೆಗೂ ಉಳಿಯುವುದು !

## ೪೩೮

ಮುಂದುವರಿವುದೆಂದರೇನಯ್ಯ?
ಪೂರ್ವಕ್ಕೆ ಮುಖವಾಗಿ ನಿಂತವರು ಪೂರ್ವದತ್ತ ಹೋಗುವುದೇ
ಮುಂದುವರಿವುದರ ಮರ್ಮವೆನ್ನುತ್ತಾರೆ;
ಪಶ್ಚಿಮಕ್ಕೆದುರಾಗಿ ನಿಂತವರು ಪಶ್ಚಿಮದತ್ತ ಸಾಗುವುದೇ
ಮುಂದುವರಿವುದರ ಲಕ್ಷಣವೆನ್ನುತ್ತಾರೆ !
ಯಾವ ದಿಕ್ಕಿಗೆ ಹೋದರೇನಯ್ಯ–
ಒಳಗೆ ತುಕ್ಕು ಹಿಡಿದಿರುವನ್ನಕ್ಕ ?
ಇದ್ದಲ್ಲಿಯೇ ಪ್ರಬುದ್ಧಮತಿ ಶುದ್ಧಚೇತನವಾಗಬಲ್ಲವರಿಗೆ
ಆ ದಿಕ್ಕು ಈ ದಿಕ್ಕು ಎಲ್ಲ ದಿಕ್ಕು
ಒಂದೇ ಅಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ !

## ೪೩೯

ಋತುವ ತೋರುವ ಮತವು ಯಾವುದಾದರೇನು?
ಗುರಿಗೆ ಸೇರಿಸುವ ಪಥವು ಯಾವುದಾದರೇನು?
ಮೌಢ್ಯದ ಗ್ರಂಥಿಯನ್ನು ಬಿಚ್ಚುವ ಗ್ರಂಥ ಯಾವುದಾದರೇನು?
ಬಂಧುತ್ವವನ್ನು ಬೆಳೆಸುವ ಪಂಥ ಯಾವುದಾದರೇನು?
ಮನವ ಘನಗೊಳಿಸುವ ಮಂತ್ರ ಯಾವುದಾದರೇನು?
ಉದ್ಯೋಗಗಳ ಹೆಚ್ಚಿಸುವ ತಂತ್ರ ಯಾವುದಾದರೇನು?
ಮೈಗೆ ಒಪ್ಪುವ ವೇಷ ಯಾವುದಾದರೇನು?
ಜನಕ್ಕೆ ಒದಗುವ ಕೋಶ ಯಾವುದಾದರೇನು?
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವನಕ್ಕೆ ಸವಿ ಬೆಳಕುಗಳನ್ನು ಬರಿಸುವ
ಜೀವನ ದರ್ಶನ ಯಾವುದಾದರೇನು ?

## ೪೪೦

ಕರುಣೆಯೇ ಕಾಶಿ, ದಯೆಯೇ ಗಯೆ,
ಕನಿಕರವೇ ಕಾಂಚಿ ಕೇದಾರಗಳಯ್ಯಾ;
ಪ್ರೀತಿ ಜ್ಯೋತಿರ್ಲಿಂಗ, ಮಮತೆ ಮಕ್ಕಾ ಮದೀನಾ,
ಭ್ರಾತೃತ್ವವೇ ಬೆತ್ಲೆಹೇಮ್ ಕಂಡಯ್ಯಾ ;
ಕಲ್ಯಾಣವೇ ಕಲ್ಯಾಣ, ಔದಾರ್ಯವೇ ಉಡುಪಿ,
ಸದ್ಗುಣಗಳೇ ಶೃಂಗೇರಿ ಶ್ರವಣಬೆಳಗೊಳಗಳಯ್ಯಾ ;
ಶುದ್ಧಾಂತರಂಗವೇ ಗಂಗೆ, ಯಮುನೆ, ತುಂಗಭದ್ರೆ,
ಪಾವನತೆ ಕಾವೇರಿ, ನಿರ್ಮಲತೆ ನರ್ಮದೆ,
ಶುಭ್ರಶೀಲವೆ ಕೃಷ್ಣೆ ಗೋದಾವರಿಗಳಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ,
ಸದ್ಭಾವ, ಸತ್ಕರ್ಮಗಳಿದ್ದೆಡೆಯೊಳೇ ಸದ್ಧರ್ಮವಯ್ಯಾ !

## ೪೪೧

ಬಾಲ್ಯದ ನಿರ್ಮಾಲ್ಯ ಯೌವನಕ್ಕಿಲ್ಲ,
ಯೌವನದ ಉತ್ಸಾಹ ವಾರ್ಧಕ್ಯಕ್ಕಿಲ್ಲ,
ವಾರ್ಧಕ್ಯದ ಅನುಭವ ಯೌವನಕ್ಕಿಲ್ಲ,
ವೃದ್ಧಾಪ್ಯದ ವಿವೇಖ ವಾರ್ಧಕ್ಯಕ್ಕಿಲ್ಲ,
ಒಂದರ ವೈಶೇಷ್ಯ ಇನ್ನೊಂದಕ್ಕಿಲ್ಲ
ಒಂದೇ ಜೀವನದಲ್ಲಿ !
ಒಮ್ಮೆಯಾದರೂ ಬಾಲ್ಯದ ನಿರ್ಮಾಲ್ಯ
ಯೌವನದ ಉದಮದದೊಡನೆ ಬೆರೆಯಬಾರದೇನಯ್ಯಾ?
ಒಮ್ಮೆಯಾದರೂ ಯೌವನದ ಉತ್ಸಾಹ
ವಾರ್ಧಕ್ಯದ ಅನುಭವದೊಡನೆ ಬೆರೆಯಬಾರದೇನಯ್ಯಾ?
ಒಮ್ಮೆಯಾದರೂ ವೃದ್ಧಾಪ್ಯದ ವಿವೇಕ
ಯೌವನದ ಉತ್ಸಾಹದೊಡನೆ ಬೆರೆಯಬಾರದೇನಯ್ಯಾ?
ಬೆರೆದರೆ ಎಂಥ ಬೆರಗುಗೊಳಿಸುವ ಬಾಳದಾದೀತು !
ಇಂಥ ಜೀವನದ ಸೃಷ್ಟಿಯಾದರೆ ದೃಷ್ಟಿಯಾದೀತೆಂದು
ಈ ವಿಚಿತ್ರ ವ್ಯವಸ್ಥೆಯನ್ನು ಮಾಡಿರುವಿಯೇನಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ ?

## ೪೪೨

ಜೇನಿನ ತಾಣವನ್ನು ಕಾಣುವಷ್ಟರಲ್ಲಿ
ಜೇನು ಮುಗಿದು ಹುಟ್ಟು ಮಾತ್ರ ಉಳಿದಿದ್ದುದಯ್ಯಾ ;
ಮುತ್ತಿನ ನೆಲೆಯ ಗೊತ್ತುಹಚ್ಚುವುದರೊಳಗಾಗಿ
ಮುತ್ತು ಮುಗಿದು ಸಿಂಪು ಮಾತ್ರ ಉಳಿದಿದ್ದುವಯ್ಯಾ;
ಹೊನ್ನಿನ ಗಣಿಯ ಗುರುತಿಸುವುದರೊಳಗಾಗಿ
ಹೊನ್ನು ಮುಗಿದು ಮಣ್ಣು ಮಾತ್ರ ಉಳಿದಿದ್ದುದಯ್ಯಾ;
ಸ್ವತಂತಧೀರ ಸಿದ್ಧೇಶ್ವರಾ,
ಜೀವನದ ಗೊತ್ತುಗುರಿ ಅರ್ಥವಾಗುವಷ್ಟರಲ್ಲಿ
ಜೀವನ ಮುಗಿದು ಮರಣ ಮುಂದಿದ್ದುದಯ್ಯಾ !

## ೪೪೩

ಓಟುಗಳ ಬೆಲೆ ಬೆಳೆಯುತ್ತಿದೆ,
ನೋಟುಗಳ ಬೆಲೆ ಇಳಿಯುತ್ತಿದೆಯಯ್ಯಾ ;
ಎಲ್ಲವೂ ತುಟ್ಟಿಯಾಗುತ್ತಿದೆ,
ಮನುಜ ಮಾತ್ರ ಅಗ್ಗವಾಗುತ್ತಲಿಹನಯ್ಯಾ;
ಭೂಮ್ಯಾಕಾಶಗಳ ನಡುವಣ ಅಂತರ
ಕಡಮೆಯಾಗುತ್ತಿವೆ.
ಮನುಜ ಮನುಜರ ನಡುವಣ ಅಂತರ
ಹೆಚ್ಚುತ್ತಿದೆಯಯ್ಯಾ ;
ಜ್ಞಾನ-ವಿಜ್ಞಾನಗಳು ಹೆಚ್ಚುತ್ತಿವೆ,
ಪ್ರೀತಿ ವಿಶ್ವಾಸಗಳು ಕಡಮೆಯಾಗುತ್ತಿವೆಯಯ್ಯಾ ;
ಕಲೆ ಸಾಹಿತ್ಯಗಳ ವ್ಯಾಪ್ತಿ ಹೆಚ್ಚುತ್ತಿದೆ,
ಅವುಗಳ ಗುಣ ಘನತೆ
ಕಡಮೆಯಾಗುತ್ತಿವೆಯಯ್ಯಾ ;
ಉಣ್ಣುವ ಬಾಯಿಗಳು ಹೆಚ್ಚುತ್ತಿವೆ,
ದುಡಿಯುವ ಕೈಗಳು
ಕಡಮೆಯಾಗುತ್ತಿವೆಯಯ್ಯಾ ;
ನಗರ ವಿಸ್ತರಣೆಗಳು ಹೆಚ್ಚುತ್ತಿವೆ,
ಬಗೆಯ ವಿಸ್ತರಣೆಗಳು
ಕಡಮೆಯಾಗುತ್ತಿವೆಯಯ್ಯಾ ;
ಊರೂರಿಗೆ ಯೋಜನೆಗಳು ಹೆಚ್ಚುತ್ತಿವೆ,
ಮನಮನಗಳ ಸಂಯೋಜನೆಗಳು
ಕಡಮೆಯಾಗುತ್ತಿವೆಯಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊರಗೆ ಸಿರಿ ಹೆಚ್ಚಿದಷ್ಟೂ
ಒಳಗೆ ಬಡತನ ಬೆಳೆಯುತ್ತಿವೆಯಯ್ಯಾ !

## ೪೪೪

ಕತ್ತಲೆಯನ್ನು ಕಡೆದರೆ
ಬೆಳಕಿನ ಬೆಣ್ಣೆ ಬರಬಹುದೆ ? ಬಾರದಯ್ಯಾ!
ತಾಮಸವನ್ನು ತಳಿಸಿದರೆ
ತಿಳಿವಿನ ತಂಡುಲ ಬರುವುದೆ ? ಬಾರದಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನೊಲುಮೆಯ ಗಳಿಸದೆ ಗೈದ ಸಾಧನೆಗೆ
ಸಿದ್ಧಿಶ್ರೀ ದೊರೆಯಬಹುದೆ ? ದೊರೆಯದಯ್ಯಾ !

## ೪೪೫

ತತ್ತ್ವರಹಿತ ರಾಜಕಾರಣ,
ಶ್ರಮರಹಿತ ಸಂಪತ್ತು,
ನೀತಿಹೀನ ವ್ಯಾಪಾರ,
ಶೀಲಶೂನ್ಯ ಶಿಕ್ಷಣ,
ಮನಸ್ಸಾಕ್ಷಿಯಿಲ್ಲದ ಭೋಗ,
ಮನುಷ್ಯತ್ವ ವಿರಹಿತ ವಿಜ್ಞಾನ,
ತ್ಯಾಗವಿಹೀನ ಪೂಜನ–
ಏನೇನು ಈ ದೇಶದಲ್ಲಿ ಬರಬಾರದೆಂದು
ಹೆಣಗಿ ಹೆಣಗಿ ಬಲಿಯಾದೆಯೋ
ಆ ಅನಿಷ್ಟಗಳೆಲ್ಲ ಬಂದಿವೆಯಿಲ್ಲಿ ಬಾಪೂಜಿ !
ವಿಷಮತೆಯ ವಿಷವೃಕ್ಷ ಕಡಿದಷ್ಟೂ ಕೊನರುತ್ತಿದೆ,
ಅಸ್ಪೃಶ್ಯತೆಯ ನಂಜಿನ ಬೆಳೆ ಕತ್ತರಿಸಿದನಿತೂ ಚಿಗುರುತ್ತಿದೆ,
ಬಡತನದ ರಕ್ತಬೀಜ ತುಂಡರಿಸಿದಷ್ಟೂ ಉದ್ದಂಡನಾಗುತ್ತಿದ್ದಾನೆ !
ನೀ ತೋರಿದ ದಾರಿಯಿಂದ ದೂರವಾದಷ್ಟೂ
ಅಧೋಗತಿಗೆ ಹತ್ತಿರವಾಗುತ್ತಿದ್ದೇವೆ !
ಸ್ವತಂತಧೀರ ಸಿದ್ಧೇಶ್ವರಾ,
ಭಾರತ ಮತ್ತೆ ಬಾಪೂಜಿಯ ದಾರಿಗೆ
ಬರುವಂತೆ ಮಾಡಾ, ತಂದೆ !

## ೪೪೬

ಪ್ರೀತಿ ಮಾರ್ಗ, ನೀತಿ ಮಾರ್ಗ, ಸತ್ಯ ಮಾರ್ಗ, ಸ್ನೇಹ ಮಾರ್ಗ,
ವಿನಯ ಮಾರ್ಗ, ನ್ಯಾಯ ಮಾರ್ಗ, ಪಂಚಶೀಲ ಮಾರ್ಗ–
ಇಂದು ಎಲ್ಲ ಸದ್ಗುಣಗಳೂ ಮಾರ್ಗಫಲಕಗಳನ್ನು ಆಶ್ರಯಿಸಿವೆಯಯ್ಯಾ !
ಮನದಲ್ಲಿ, ಮನೆಯಲ್ಲಿ ಸ್ಥಳವಿಲ್ಲವೆಂದು
ಬೀದಿಪಾಲು ಮಾಡಿರುವೆವಯ್ಯಾ ಸುಗುಣ ಸಂತತಿಯನ್ನು !
ಮೊದಲು ನಿನ್ನ ತಲೆಗೆ ಕಟ್ಟಿ ಹಿಗ್ಗುತ್ತಿದ್ದೆವು, ಕಲ್ಯಾಣಗುಣಗಳನ್ನು–
ಈಗ ಬೀದಿಗಳಿಗೆ ಅಟ್ಟಿ ಹರ್ಷಿಸುತ್ತಿಹೆವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೪೭

ಭ್ರಷ್ಟಾಚಾರವೇ ಶಿಷ್ಟಾಚಾರದ ವೇಷ ತೊಟ್ಟಿದೆ,
ಶೀಲಶೂನ್ಯತೆಯೇ ಸಭ್ಯತೆಯ ಉಡುಪು ಉಟ್ಟಿದೆ,
ಶೋಷಣೆಯೇ ಸಾಮ್ಯವಾದದ ಸೋಗು ಹಾಕಿದೆ,
ಮೋಸವೇ ಲೇಸಿನ ಆಭಾಸ ಹುಟ್ಟಿಸಿದೆ,
ಸಟೆಯೇ ದಿಟದ ಲಾಂಛನ ಧರಿಸಿದೆ,
ಹುಸಿ ಪ್ರಚಾರ ಕಸಕ್ಕೆ ಕಸವರದ ಸ್ಥಾನ ಕೊಟ್ಟಿದೆ,
ಜಾತೀಯತೆ ರಾಷ್ಟ್ರೀಯತೆಗೆ ಸೆದಿಗೆ ಸಿದ್ಧಗೊಳಿಸುತ್ತಿದೆ,
ಸ್ವೈರವೃತ್ತಿ ಸ್ವಾತಂತ್ರ್ಯದ ಸಮಾಧಿ ಕಟ್ಟುತ್ತಿದೆ,
ಮಾಂಸವು ಮಾನಸವನ್ನು ಅದುಮಿಬಿಟ್ಟಿದೆ,
ವಿಕಾರ ವಿಚಾರದ ತಲೆಯನ್ನೇ ಕುಟ್ಟಿದೆ,
ದುರ್ನೀತಿ ನೀತಿ ಪ್ರೀತಿಗಳ ಎದೆಯನ್ನೇ ಮೆಟ್ಟಿದೆ !
ಇದು ಬಿಡುಗಡೆಯ ಹೊಲದ ಬೆಳಸು,
ಇದಾಗದಿರಲಿ ದೇಶವಾಸಿಗಳಿಗೆ ವಿಷದ ಉಣಿಸು !
ಸ್ವತಂತ್ರಧೀರ ಸಿದ್ಧೇಶ್ವರಾ,
ಇದು ಮಾರಕವಾಗುವ ಮುನ್ನ ಕಳೆ ಕಿತ್ತು ಬೆಳೆ ಉಳಿಸು ;
ಅವನತಿಯ ಗೊಬ್ಬರದಿಂದಲೇ ಉನ್ನತಿಯ ಸಿರಿಬೆಳೆಯ ಬೆಳೆಸು !

## ೪೪೮

ಭಾರತಕ್ಕೆ ಬಹಳಷ್ಟು ‘ಬಾಬಾ’ಗಳನ್ನು ಕೊಟ್ಟಿರುವೆ,
ಈಗ ಸಾಕಷ್ಟು ‘ಭಾಭಾ’ಗಳನ್ನು ಕೊಡಯ್ಯಾ ;
ಬಹಳಷ್ಟು ತಾತಾ ಎಂಬ ‘ತಾತಾ’ಗಳನ್ನು ಕೊಟ್ಟಿರುವೆ,
ಈಗ ಸಾಕಷ್ಟು ‘ಟಾಟಾ’ರನ್ನು ಕೊಡಯ್ಯಾ ;
ಬ್ರಹ್ಮ ಜ್ಞಾನಿಗಳ ಜೊತೆಗೆ ವಿಜ್ಞಾನಿಗಳನ್ನು,
ಮಂತ್ರ ದಷ್ಟಾರರ ಜೊತೆಗೆ ಯಂತ್ರ–ತಂತ್ರ ಬ್ರಹ್ಮರನ್ನು ಸೃಷ್ಟಿಸಿಲ್ಲಿ !
ಇಲ್ಲಿಯ ನೆಲ, ಜಲ, ಅನಿಲ, ತೈಲ–ಸೌರಶಕ್ತಿಗಳ, ಖನಿಜಗಳ ಬಳಸಿ
    ಬಡತನದ ಅದಿರಿನಿಂದಲೇ ಸಿರಿಸೌಖ್ಯಗಳ ಸುವರ್ಣ ಸೃಜಿಪ
    ರಸಸಿದ್ಧರ ಹುಟ್ಟಿಸಿಲ್ಲಿ–ಸ್ವತಂತ್ರಧೀರ ಸಿದ್ಧೇಶ್ವರಾ !

## ೪೪೯

ಬುದ್ಧಿಜೀವಿಗಳು ನಿರಾಶಾನಿಬದ್ಧ ಜೀವಿಗಳಾಗಿದ್ದಾರೆ,
ಅಪ್ರಬುದ್ಧ ಜೀವಿಗಳು ಗುರಿಗಮ್ಯಗಳಿಲ್ಲದ ಕ್ರುದ್ಧ ಜೀವಿಗಳಾಗಿದ್ದಾರೆ,
ಶ್ರಮಜೀವಿಗಳು ಮುಷ್ಕರ ಮಾತ್ರಕ್ಕೆ ಸನ್ನದ್ಧ ಜೀವಿಗಳಾಗಿದ್ದಾರೆ.
ಕೃಷಿ ಜೀವಿಗಳು ಸಾಲ ಕಡಗಳಲ್ಲಿ ಮಾತ್ರ ಸಮೃದ್ಧ ಜೀವಿಗಳಾಗಿದ್ದಾರೆ,
ಸೇವಾ ಜೀವಿಗಳು ಲಂಚ ವಂಚನೆಗಳಲ್ಲಿ ಪ್ರಸಿದ್ಧ ಜೀವಿಗಳಾಗಿದ್ದಾರೆ.
ರಾಜಕೀಯ ಜೀವಿಗಳು ರಕ್ತಶೋಷಣೆಯಲ್ಲಿ ಸಿದ್ಧಜೀವಿಗಳಾಗಿದ್ದಾರೆ,
ವಾಣಿಜ್ಯಜೀವಿಗಳು ಕಾಳಸಂತೆಯಲ್ಲಿ ಪ್ರಬುದ್ಧ ಜೀವಿಗಳಾಗಿದ್ದಾರೆ !
    ಇನ್ನುಳಿದವರು ಪರೋಪಜೀವಿಗಳು,
    ಪಾದೋಪಜೀವಿಗಳು, ಪದಕೋಪಜೀವಿಗಳು,
    ಘೋಷಣೋಪಜೀವಿಗಳು ಘರ್ಷಣೋಪಜೀವಿಗಳು !
        ಎಂತಯ್ಯಾ ಭಾರತ ಬಲಾಢ್ಯವಾಗುವುದು ?
        ಎಂತಯ್ಯಾ ಈ ದೇಶ ಸಮೃದ್ಧವಾಗುವುದು ?
        ಎಚ್ಚರಿಸು ಎಲ್ಲರೆದೆಗಳಲ್ಲಿ ಉಚ್ಚ ಭಾವನೆಗಳನು,
        ಉಚ್ಚರಿಸು ಎಲ್ಲರ ಕಿವಿಗಳಲ್ಲಿ ಕರ್ತವ್ಯ ಮಂತ್ರವನ್ನು,
        ನೀಡು ಕೋಟಿ ಕೋಟಿ ಕರಗಳಿಗೆ ಕಾರ್ಯೋತ್ಸಾಹವನ್ನು !
    ನೋಡಾಗ, ಕೇಡಿನಿಂದಲೇ ಕೋಡಿವರಿವ
    ಒಳಿತಿನ ಮಹಾ ಪ್ರವಾಹವನ್ನು – ಸ್ವತಂತ್ರಧೀರ ಸಿದ್ಧೇಶ್ವರಾ!

## ೪೫೦

ಅಬಲೆಯರ ಅಶ್ರುಗಳಲ್ಲಿಯೇ ನೀನು ಬರೆದಿಹೆಯಯ್ಯ
        ರಾಜ್ಯ ಸಾಮ್ರಾಜ್ಯಗಳ ವಿನಾಶ ಗಾಥೆಯನ್ನು ;
ಸಜ್ಜನರ ಬಾಷ್ಪಗಳಲ್ಲಿಯೇ ಬರೆದಿಹೆಯಯ್ಯಾ
        ದುರ್ಜನರ ಹಂಸಗೀತೆಯನ್ನು ;
ಬಡವರ ಕಂಬನಿಗಳಲ್ಲಿಯೇ ಬರೆದಿಹೆಯಯ್ಯಾ
        ಒಡೆಯರ ಪತನದ ಕಥೆಯನ್ನು ;
ದುಡಿವವರ ಬೆವರಿನ ಹನಿಗಳಲ್ಲಿಯೇ ಬರೆದಿಹೆಯಯ್ಯಾ
        ಪಡೆವವರ ಪೀಡಾಸ್ಮೃತಿಯನ್ನು ;
        ಸ್ವತಂತ್ರಧೀರ ಸಿದ್ಧೇಶ್ವರಾ,
        ಇಂದೆನ್ನ ನೆತ್ತರಿನಲ್ಲಿಯೇ ಬರೆಯಯ್ಯಾ
        ಭಾರತದ ಉತ್ಥಾನಚರಿತೆಯನ್ನು !

## ೪೫೧

ಭಾರತದ ಭವಿತವ್ಯವನ್ನು ಕುರಿತು ಚಿಂತಿಸುವವನೆ,
ಮೊದಲು ನಿನ್ನ ಕರ್ತವ್ಯದ ಬಗ್ಗೆ ಯೋಚಿಸು !
ಅವರಿವರು ಮಾಡಿದುದು ಸರಿಯಲ್ಲವೆಂದು ಸಾಧಿಸುವವನೆ,
ಸರಿಯಾದುದನ್ನೊಮ್ಮೆ ಮಾಡಿ ತೋರಿಸು !
ಕೆಟ್ಟುದಕ್ಕೆಲ್ಲ ಅವರಿವರು ಹೊಣೆಗಾರರೆಂದು ಹೇಳುವವನೆ,
ಒಳ್ಳೆಯದನ್ನು ಒಮ್ಮೆಯಾದರೂ ಮಾಡಿ ತೋರಿಸು !
        ಸ್ವತಂತ್ರಧೀರ ಸಿದ್ಧೇಶ್ವರನ ಹೆಸರಿನಲ್ಲಿ ಸವಾಲು ನಿನಗೆ–
        ಹಳಬರ ಹಾಳು ಮಾಡಿದರೆಂದು ಹೇಳಿ ತೃಪ್ತನಾಗದೆ
        ಹೊಸಬ ನೀನು ಏನಾದರೂ ಎದ್ದು ಕಾಣುವುದನ್ನು
                ಮಾಡಿ ತೋರಿಸು !

## ೪೫೨

ಸ್ವಂತ ಚಿಂತನೆಗಂಜಿ, ಸ್ವನಿರ್ಣಯಕ್ಕೆ ಹಿಂಜರಿದು,
ಯಾರನಾದರೂ ನಂಬಿ ನಿಶ್ಚಿಂತರಾಗಿರುವ ನಿರ್ಮಾನುಷತೆ
ತೊಲಗಲಯ್ಯಾ ಈ ದೇಶದಿಂದ !
ಯಾರಮೇಲೆಯೋ ಭಾರ ಹಾಕಿ, ಹೊಣೆಗಾರಿಕೆಗೆ ನೇಣು ಹಾಕಿ,
ಹೆರವರೆಂಜಲಿನಿಂದ ಹೊಟ್ಟೆಹೊರೆವ
ಹೇಡಿತನ ಹೋಗಲಯ್ಯಾ ಈ ದೇಶದಿಂದ !
ಭಿಕ್ಷೆ ನೀಡಿದವರಿಗೇ ಬೋಧೆ ಮಾಡುವ,
ಕೊಟ್ಟ ದಾನದಲ್ಲಿಯೇ ಹುಳುಕು ಹುಡುಕುವ,
ನೀಡಿದ ಆತಿಥ್ಯದಲ್ಲಿಯೇ ದೋಷವರಸುವ,
ಮಾಡಿದವರಿಗೇ ಮೂದಲಿಸುವ,
ಎಲ್ಲದಕ್ಕೂ ಒಂದಿಲ್ಲೊಂದು ಹೆಸರಿಡುವ, ಹೀನತನ
ಮರೆಯಾಗಲಯ್ಯಾ ಈ ದೇಶದಿಂದ, ಸ್ವತಂತ್ರಧೀರ ಸಿದ್ಧೇಶ್ವರಾ !

## ೪೫೩

ಈ ದೇಶದಲ್ಲಿ ಪ್ರತಿಭಾ ಸಂಹಾರವಾಗುತ್ತಿರುವಷ್ಟು
ಇನ್ನಾವ ದೇಶದಲ್ಲಿ ಆಗುತ್ತಿದೆಯಯ್ಯಾ ?
ಗುರುಗಳಿಂದ ಶಿಷ್ಯರ ಪ್ರತಿಭಾಸಂಹಾರ,
ವರಿಷ್ಠ ಅಧಿಕಾರಿಗಳಿಂದ ಕನಿಷ್ಠ ಅಧಿಕಾರಿಗಳ ಪ್ರತಿಭಾಸಂಹಾರ,
ಮಾಲೀಕರಿಂದ ಕಾರ್ಮಿಕರ ಪ್ರತಿಭಾಸಂಹಾರ,
ಹಿರಿಯರಿಂದ ಕಿರಿಯರ, ಅತ್ತೆಯಿಂದ ಸೊಸೆಯ,
ಮೇಲಿನವರಿಂದ ಕೆಳಗಿನವರ ಪ್ರತಿಭಾಸಂಹಾರ !
ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ,
ವರ್ಣದ ಹೆಸರಿನಲ್ಲಿ, ವರ್ಗದ ಹೆಸರಿನಲ್ಲಿ
ಭಾಷೆಯ ಹೆಸರಿನಲ್ಲಿ, ಪ್ರದೇಶದ ಹೆಸರಿನಲ್ಲಿ,
ಲಿಂಗ ವಯಗಳ ಹೆಸರಿನಲ್ಲಿ, ಪಕ್ಷಪಂಥಗಳ ಹೆಸರಿನಲ್ಲಿ,
ನಡೆದಿದೆ ನಿರಂತರ ಪ್ರತಿಭಾಸಂಹಾರ !
ಈ ಪ್ರತಿಭಾಸಂಹಾರಕ್ಕೆ, ತಜ್ಜನ್ಯ ಪ್ರತಿಭಾ ಪಲಾಯನಕ್ಕೆ
ಅಡ್ಡಿ ಮಾಡಾ, ಅಡ್ಡಬಾರಾ–ಸ್ವತಂತ್ರಧೀರ ಸಿದ್ಧೇಶ್ವರಾ!

೪೫೪

ಮಂತ್ರಿಗಳ ಮನೆಗೆ ಎಡತಾಕುವ ಸ್ವಾಮಿಗಳು ಕೆಲವರು,
ರಾಜಕಾರಣಿಗಳ ಬಾಲ ಹಿಡಿದು ತಿರುಗುವ ಬುದ್ಧಿಜೀವಿಗಳು ಹಲವರು,
ನಟನಟಿಯರ ಬೆಂಬತ್ತಿ ಅಲೆವ ನವಯುವಕರು ಅನೇಕರು,
ಶಾಸನಕಾರರಿಗೆ ಕೊಡೆಹಿಡಿದು ನಡೆವ ಸರಕಾರದ ಅಧಿಕಾರಿಗಳು
ಸಾಕಷ್ಟು ಜನರು !
ಇಂಥ ಅಧಃಪಾತವನ್ನು ಈ ಹಿಂದೆ
ನೋಡಿದ್ದೆಯೇನಯ್ಯಾ ನೀನಾದರೂ ?
ನಿನಗೂ ನಮ್ಮ ಅಧೋಗತಿಯಲ್ಲಿಯೇ ಆಸಕ್ತಿಯೇನು ಈಗ ?
ಈ ಅವನತಿಯ ಅಧ್ಯಾಯ ಮುಗಿಯಲಿ ಬೇಗ !
ನೆಲಕ್ಕೆ ಬಿದ್ದೇ ಮೇಲಕ್ಕೆ ಪುಟಿಯಬೇಕೇನು ಪ್ರಗತಿಯ ಚೆಂಡು ?
ತಳಕ್ಕೆ ಇಳಿದೇ ಎತ್ತುವವರ ಕಾಯಬೇಕೇನು ಗುರಿಯ ಗುಂಡು ?
ಕೆಳಗೆ ನೂಕಿರುವ ನೀನೇ ಮೇಲೆತ್ತು ತಂದೆ,
ಮೇಲೆತ್ತು ಇಂದೆ, ಶರಣು ಬಂದೆ, ಸ್ವತಂತ್ರಧೀರ ಸಿದ್ಧೇಶ್ವರಾ !

೪೫೫

ಇಳೆಯ ಕಾಳವೆಲ್ಲ ದಾಳಿಯಿಟ್ಟರೂ
ಒಂದು ಪುಟ್ಟ ದೀಪವ ಆರಿಸಲಾರದಯ್ಯಾ ;
ಖಳಚತುಷ್ಟಯ ಮತ್ತೆ ಮತ್ತೆ ಹುಟ್ಟಿಬಂದರೂ
ಸಕಲದಾಸ್ಯವನಿಲ್ಲಿ ಸ್ಥಾಪಿಸಲಾರದಯ್ಯಾ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೈಕಾಲುಗಳಿಗೆ ಕೋಳ ತೊಡಿಸಿ
ಸ್ವಾತಂತ್ರ್ಯದ ದಮನವನ್ನಿಲ್ಲಿ ಸಾಧಿಸಲಾಗದಯ್ಯಾ !

೪೫೬

ಓ ಸ್ವಾತಂತ್ರ್ಯವೆ,
ಪರಮಾತ್ಮನಾತ್ಮವೆ,
ಬದುಕಿನ ಹೆಡೆಯ ರತ್ನವೆ
ಸೃಷ್ಟಿಗಿಹ ಅರ್ಥವೆ,
ನಿನ್ನ ಪ್ರಾಪ್ತಿ ಜೀವನ, ನಿನ್ನ ಲುಪ್ತಿ ಮರಣ ;
ನಿನ್ನ ಒಪ್ಪು ಒಳಿತು, ನಿನ್ನ ತಪ್ಪು ಕೆಡುಕು ;
ನಿನ್ನ ಹಾಸ ವಿಕಾಸ, ನಿನ್ನ ರೋಷ ವಿನಾಶ ;
ನಿನ್ನ ಮಿತಿಯಲ್ಲಿ ಹಿತ, ಅತಿಯಲ್ಲಿ ಅಹಿತ ;
ನಿನ್ನ ಸದುಪಯೋಗ ಸ್ವರ್ಗ, ನಿನ್ನ ದುರುಪಯೋಗ ನರಕ ;
ಎಚ್ಚರಿರುವವರಿಗೆ ನೀನು ವರದಾನ, ಗೊರಕೆ ಹೊಡೆವರಿಗೆ ಬರಿಶೂನ್ಯ !
ಉಪ್ಪವಡಿಸು ಅರುವತ್ತು ಕೋಟಿ ಭಾರತೀಯರ ಎದೆಗಳಲ್ಲಿ ;
ಸೃಜನಶೀಲತೆಗೆ, ಶ್ರಮನಿಷ್ಠೆಗೆ ಸಂವೇದನೆಯ ನೀಡು,
ಸಮೃದ್ಧ ಸುಸಂಸ್ಕೃತ ಜೀವನಕ್ಕೆ ಸುಪ್ರೇರಣೆಯನ್ನು ನೀಡು,
ಸ್ನೇಹ ಸಹಕಾರ ಸಹೋದರತೆ ಸಹೃದಯತೆಗಳಿಗೆ
ಪ್ರಬಲ ಪ್ರಚೋದನೆಯನ್ನು ನೀಡು !
ಮೃತಸಂಜೀವಿನಿಯಾಗು, ಸಹಜೀವನವಾಹಿನಿಯಾಗು,
ಸಾಹಸೋತ್ತೇಜಿನಿಯಾಗು, ಸ್ವರಾಜ್ಯಗೇಹಿನಿಯಾಗು,
ಮೇಲು ಮೇಲಿನ ಗತಿಗೆ ಮೆಟ್ಟಿಲಾಗು,
ಸಂಸ್ಕೃತಿಶಿಶುವಿನ ತೊಟ್ಟಿಲಾಗು,
ಅರಿವಿನ ಅಮೃತದ ಬಟ್ಟಲಾಗು,
ಸ್ವತಂತ್ರಧೀರ ಸಿದ್ಧೇಶ್ವರನ,
ಸಂಕಲ್ಪಗಳ ಸಂಪೂರ್ತಿಸಾಧನವಾಗು !

೪೫೭

ಲೋಕಸಭೆಯಿಂದ ಗ್ರಾಮಸಭೆಗಳವರೆಗೆ
ಹಿಂದೆಂದೂ ಇಲ್ಲದಷ್ಟು ಅಧಿಕಾರದ ವಿಕೇಂದ್ರೀಕರಣವಾಗುತ್ತಿದೆಯಯ್ಯ
ಭಾರತದಲ್ಲಿ ಇಂದು :
ಶಾಸನ ರಚಿಸುವ ಅಧಿಕಾರ, ಕರ ಹೇರುವ ಅಧಿಕಾರ,
ದಂಡ ವಿಧಿಸುವ ಅಧಿಕಾರ, ವಿಧಾನ ಬದಲಿಸುವ ಅಧಿಕಾರ,
ಆಯ್ಕೆಗೆ ನಿಲ್ಲುವ ಅಧಿಕಾರ, ಮತ ನೀಡುವ ಅಧಿಕಾರ,
ಅಭಿಪ್ರಾಯ ತಿಳಿಸುವ ಅಧಿಕಾರ, ಎಲ್ಲ ಟೀಕಿಸುವ ಅಧಿಕಾರ,
ಸಂಘಟಿಸುವ, ಸಂಘೋಷಿಸುವ, ಸಂಘರ್ಷಿಸುವ ಅಧಿಕಾರ,
ಘೇರಾಯಿಸುವ, ಗುಲ್ಲೆಬ್ಬಿಸುವ, ಕಲ್ಲೆಸೆವ, ಕೊಳ್ಳಿಯಿಡುವ,
ಕೆಸರು ತೂರುವ ಅಧಿಕಾರ–
ಏನೇನೋ ಅಧಿಕಾರಗಳು ಎಲ್ಲರಿಗೆ ದೊರೆತರೂ
ನೈತಿಕ ಅಧಿಕಾರದ ಆಧಾರ ತಪ್ಪಿ
ಥೊಪ್ಪನೆ ಕೆಡೆದಿಹವಯ್ಯಾ ಈ ಎಲ್ಲ ಅಧಿಕಾರಗಳೂ !
ಸ್ವತಂತ್ರಧೀರ ಸಿದ್ಧೇಶ್ವರಾ, ನೈತಿಕ ಅಧಿಕಾರ ನೆಮ್ಮದ ಇತರ ಅಧಿಕಾರಗಳು
ಮರಳ ಮೇಲೆ ಕಟ್ಟಿದ ಬುರುಗಿನ ಮನೆಗಳಯ್ಯಾ !

೪೫೮

ಕೊಟ್ಟ ಹಣ ಕರಗಿತು, ಕಟ್ಟಿಕೊಟ್ಟ ಮನೆ ಬಿದ್ದಿತು,
ಇತ್ತ ಬಟ್ಟೆ ಹರಿಯಿತು, ಪಟ್ಟೆಯ ಮೇಲೆ ಕೊಟ್ಟ ಹೊಲ ಮಾರಿಹೋಯಿತು,
ಬಿಟ್ಟ ಕಾಯಿಲೆ ಮತ್ತೆ ಬಂದಿತು, ಕೆಟ್ಟ ಚಟಗಳು ಮತ್ತೆ ಮೈದೋರಿದುವು,
ಸುಖೀರಾಜ್ಯ ಸ್ವಪ್ನರಾಜ್ಯವಾಗಿಯೇ ಉಳಿಯಿತು ಭಾರತದಲ್ಲಿ !
ಗುಣದ ಮೇಲಲ್ಲ–ಋಣದ ಮೇಲೆ ಕಟ್ಟಿಹ,
ಸ್ವಾವಲಂಬನೆಯಲ್ಲಿ ಅಲ್ಲ–ಪರಾವಲಂಬನೆಯಲ್ಲಿ ಹುಟ್ಟಿಹ,
ಕಾಯಕದಲ್ಲಿ ಅಲ್ಲ–ಯಾಚನೆಯಲ್ಲಿ ಬೇರು ಬಿಟ್ಟಿಹ,
ಸಾಹಸದಲ್ಲಿ ಅಲ್ಲ–ಸೋಮಾರಿತನದಲ್ಲಿ ವಿಶ್ವಾಸವಿಟ್ಟಿಹ,
ಆಶ್ವಾಸನಗಳನ್ನೇ ಉಟ್ಟು, ಆಶ್ವಾಸನಗಳನ್ನೇ ತೊಟ್ಟಿಹ,
ರೊಟ್ಟಿ ಬೇಡಿದವರ ಕೈಗೆ ಕಲ್ಲು ಕೊಟ್ಟಿಹ
ಸುಖೀರಾಜ್ಯ ದುಃಖೀರಾಜ್ಯವಾಗಿ ಮಾರ್ಪಟ್ಟರೆ
ಆಶ್ಚರ್ಯವಾವುದಯ್ಯಾ–ಸ್ವತಂತ್ರಧೀರ ಸಿದ್ಧೇಶ್ವರಾ ?

### ೪೫೯

ಹಣದುಬ್ಬರದ ಅಬ್ಬರದಲ್ಲಿ ತಬ್ಬಿಬ್ಬಾಗಿಹರಯ್ಯಾ ತಬ್ಬಲಿ ಮಾನವರು !
ಬೆಲೆಯೇರಿಕೆಯ ಬಲೆಯಲ್ಲಿ ಸಿಲುಕಿ ವಿಲಿವಿಲಿ ಒದ್ದಾಡುತ್ತಿಹರಯ್ಯಾ,
ಬೇಡಿದುದೆಲ್ಲದರ ಕೊರೆವ ಕೊರೆತಕ್ಕೆ ಸಿಕ್ಕು ಅಕ್ಕಸಬಡುತ್ತಿಹರಯ್ಯಾ,
ಕೊಂಡುದೆಲ್ಲದರಲ್ಲಿ ಕಾಣುವ ಕಲಬೆರಕೆಯಿಂದ ಕಕ್ಕಾವಿಕ್ಕಿಯಾಗಿಹರಯ್ಯಾ,
ನಿರುದ್ಯೋಗದ ವಿತಂಡ ತಾಂಡವದಿಂದ ಕಂಗೆಟ್ಟಿಹರಯ್ಯಾ
ಈ ದೇಶದ ದುರ್ಬಲರು, ದಲಿತರು, ಬಡವರು !
ನಿರುದ್ಯೋಗ ಹಣದುಬ್ಬರಗಳು ಹಸೆಗೆ ನಿಂತರೆ ಹೇಗಯ್ಯಾ ?
ಕೊರತೆ ಕಲಬೆರಕೆಗಳು ಉಡುಕಿ ಮಾಡಿಕೊಂಡರೆ ಹೇಗಯ್ಯಾ ?
ಲಂಚ-ಕಾಳಸಂತೆಗಳು ಕೈಕುಲುಕಿದರೆ ಹೇಗಯ್ಯಾ ?
ಧರ್ಮಗುರು-ಅಧಿಕಾರಿಗಳು ದುರ್ವ್ಯವಹಾರಕ್ಕಿಳಿದರೆ ದಾರಿ ಯಾವುದಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕಂಬಿ ತಪ್ಪಿದ ಈ ಉಗಿ ಬಂಡಿಯನ್ನು,
ದೀಪಸ್ತಂಭ ದಿಕ್ಸೂಚಿ ಕಳೆದುಕೊಂಡ ಈ ಹಡಗನ್ನು,
ನಿಯಂತ್ರಕಯಂತ್ರ ನಷ್ಟವಾದ ಈ ಕ್ಷಿಪಣಿಯನ್ನು
ನೀನೆ ಕಾಯಿ, ನೀನೆ ಕಾಯಿ, ನೀನೆ ಕಾಯಿ !

### ೪೬೦

ಟಿಪ್ಪಣಿ ಪುಸ್ತಕ ಕಳೆದರೂ ಪಾಠ ಹೇಳಬಲ್ಲ ಪ್ರಾಧ್ಯಾಪಕರ,
ಪರೀಕ್ಷಾಪದ್ಧತಿ ರದ್ದಾದರೂ ಜಿದ್ದಿನಿಂದ ಓದುವ ವಿದ್ಯಾರ್ಥಿಗಳ,
ವಿರೋಧಿಪಕ್ಷದವರನ್ನಾರಿಸಿದ ಕ್ಷೇತ್ರಗಳಲ್ಲಿಯೂ ಆಸಕ್ತಿಯಿಂದ ದುಡಿವ ಮಂತ್ರಿಗಳ,
ಮೇಲಧಿಕಾರಿ ಪ್ರವಾಸದಲ್ಲಿದ್ದರೂ ದಕ್ಷತೆಯಿಂದ ಕೆಲಸ ಮಾಡುವ ಕರ್ಮಚಾರಿಗಳ,
ಕೊರತೆಯಿದ್ದಾಗಲೂ ಕಡಿಮೆ ಲಾಭಕ್ಕೆ ಮಾರುವ ವರ್ತಕರ,
ಸಕಾರಣವಿದ್ದಾಗಲೂ ಸಂಪು ಹೂಡದೆ ಸಂಧಾನ ಬಯಸುವ ಕಾರ್ಮಿಕರ,
ಕೇಳುವ ಮೊದಲೇ ಕಾರ್ಮಿಕರ ಪಾಲು ಸಲ್ಲಿಸುವ ಮಾಲೀಕರ,
ಹರಿಜನ ಗಿರಿಜನರು ಬಂದರೂ ಪರಮಾದರದಿಂದ ಪೂಜೆ ಮಾಡಿಸುವ ಅರ್ಚಕರ,
ಸಾಲ ಸಿಕ್ಕುತ್ತಿದ್ದರೂ ಸ್ವಾವಲಂಬನ ತ್ಯಜಿಸದ ಕೃಷಿಕರ,
ಮುಳ್ಳಹಾಸಿಗೆಯೆನಿಸಿದರೂ ಬಿಡುಗಡೆಯನ್ನೇ ಆರಾಧಿಸುವ ನಾಡಿಗರ,
ಅಧಿಕಾರ ಪಡೆಯಲು ಮುಂದಾಗುವಂತೆ ಅಗತ್ಯಬಿದ್ದಾಗ
ಅಧಿಕಾರ ಬಿಡಲೂ ಮುಂದಾಗುವ ನಾಯಕರ
ಬಳಗವನ್ನೇ ಬೆಳೆಸುತ್ತ ಹೋಗಯ್ಯಾ ಭಾರತದಲ್ಲಿ-ಸ್ವತಂತ್ರಧೀರ ಸಿದ್ಧೇಶ್ವರಾ !

## ೪೬೧

ವೀತರಾಗತೆಯ ಬಾಹುಬಲಿಯ ಕೊರಳಿಗೆ
ರಣ ರಮಣಿ ಮಾಲೆ ಹಾಕಲಯ್ಯ–
    ವೈರದ ಮೇಲೆ ಕ್ಷಮೆಯ ವಿಜಯಕ್ಕಾಗಿ ;
ಅಧ್ಯಾತ್ಮದ ಅಲ್ಲಮನ ಕೈಗೆ
    ವಿಜ್ಞಾನದ ಮೃದಂಗ ಬರಲಯ್ಯ–
    ಮನದ ಮುಂದಣ ಆಶೆ ಮಾಯೆಯ ಪರಾಭವಕ್ಕಾಗಿ ;
ಬಸವ ವಿದ್ಯಾರಣ್ಯರ ಪಾವನ ಪದಗಳಿಗೆ
    ಮಂತ್ರಿಪದ ಮುತ್ತಿಡಲಯ್ಯ–
    ಸರ್ವಕಲ್ಯಾಣದ ಸಮಷ್ಟಿಯೋಗಕ್ಕಾಗಿ;
ಲೌಕಿಕದ ಸೀನಪ್ಪನಾಯಕನಿಗೆ
    ಅಷ್ಟೈಶ್ವರ್ಯ ಒದಗಲಯ್ಯ–
    ಅಲೌಕಿಕದ ಪವಿತ್ರ ಯಾಗಕ್ಕಾಗಿ ;
    ಸ್ವತಂತ್ರಧೀರ ಸಿದ್ಧೇಶ್ವರಾ,
    ಭಾರತೀಯತೆಯ ಭರತೇಶನಿಗೆ ಸಾರ್ವಭೌಮಶಕ್ತಿ ದಕ್ಕಲಯ್ಯ–
    ಭೋಗ ಯೋಗ ಸಮನ್ವಯಕ್ಕಾಗಿ !

## ೪೬೨

ಭಾರತೀಯರು ಮನಸ್ಸು ಮಾಡಿದರೆ
ಭಾರತಕ್ಕೆ ಜಗದ್ಗುರು ಪಟ್ಟ ಕಟ್ಟಬಲ್ಲರಯ್ಯಾ ;
ಭಾರತೀಯರು ನಿಷ್ಠೆಯಿಂದ ದುಡಿದರೆ
ಪ್ರಗತಿಯ ಗೌರೀಶಂಕರವ ಮುಟ್ಟಬಲ್ಲರಯ್ಯಾ ;
ಭಾರತೀಯರು ಬಂಧು ಭಾವದಿಂದ ಒಂದಾಗಿದ್ದರೆ
ಎಂಥ ವೈರಿಯ ಎದೆಯನ್ನೂ ಮೆಟ್ಟಬಲ್ಲರಯ್ಯಾ ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತೀಯರು ಭಾರತೀಯತೆಯ ಸಿತಚ್ಛತ್ರಛಾಯೆಯಲ್ಲಿ ಭಾರತೀಯರಾಗಿ ಬೆಳೆದು
ಸರ್ವಶುಭಂಕರರಾಗಿ, ಅರಿಭಯಂಕರರಾಗಿ ತೊಳಗಿ ಬೆಳಗುತ್ತಿರಲಯ್ಯಾ !

## ೪೬೩

ಶಿಕ್ಷಣದ ಸಾರ್ವತ್ರೀಕರಣವಾಗಲಿ, ಆದರೆ
ಅದರ ಸಾಧಾರಣೀಕರಣವಾಗದಿರಲಯ್ಯ ;
ಶಿಕ್ಷಣ ಸಂಸ್ಥೆಗಳು ಜನಜಂಗುಳಿಯಿಂದ ದೂರವಿರಲಿ, ಆದರೆ
ಶಿಕ್ಷಣ ಜನ ಜೀವನಕ್ಕೆ ಹತ್ತಿರ ಉಳಿಯಲಯ್ಯ ;
ಶಿಕ್ಷಣಕ್ಕೆ ಸಾಸಿರ ಸಾಸಿರ ಮೊಗಗಳು ಮೂಡಲಿ, ಆದರೆ
ಅದರ ಆತ್ಮ ಒಂದೇ ಆಗಿರಲಯ್ಯ ;
ಶಿಕ್ಷಣಕ್ಕೆ ಸಹಾಯ ಸೌಕರ್ಯಗಳು ಹೆಚ್ಚಲಿ, ಆದರೆ
ಶಿಕ್ಷಣಕ್ಕೆ ಸಂಕೋಲೆಗಳು ಹುಟ್ಟದಿರಲಯ್ಯ ;
ಶಿಕ್ಷಣ ಸರ್ವರ ಸೊತ್ತಾಗಿ ಬೆಳೆಯಲಿ, ಆದರೆ
ಸರ್ವಾಧಿಕಾರಿಯ ತೊತ್ತಾಗಿ ನರಳದಿರಲಯ್ಯ ;
ಶಿಕ್ಷಣ ಒತ್ತಾಯದ ಹೊರೆಯಾಗದಿರಲಿ, ಆದರೆ
ಸ್ವಾತಂತ್ರ್ಯದ ಸಿರಿಯಾಗಿ ಮೆರೆಯಲಯ್ಯ ;
ಶಿಕ್ಷಣ ಖಾರಭೂಮಿ, ಊಷರಭೂಮಿಯಾಗದಿರಲಿ,
ಮಡಿಹೊಲ, ಭರಖೋಲಿ ಭೂಮಿಯಾಗಲಯ್ಯ ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಶಿಕ್ಷಣ ನಮ್ಮ ಕಣ್ಣೂ ಆಗಲಿ, ಕಾಲೂ ಆಗಲಿ,
ಪ್ರಗತಿ ಪಥಮೂ ಜೀವನ ರಥಮೂ ಸ್ಯೆಪಿನ ಶಪಥಮೂ ಆಗಲಯ್ಯ !

## ೪೬೪

ಶಾಖೋಪಶಾಖೆಗಳಾಗಿ ಹಬ್ಬಿಹರಡುತ್ತಿವೆ ಜ್ಞಾನ ವಿಜ್ಞಾನಗಳು,
ಈ ಶಾಖೆಗಳಿಗೊಂದು ಬೊಡ್ಡೆ ಬೇಡವೆ ?
ಬೊಡ್ಡೆಯ ಬುಡಕ್ಕೆ ಬೇರುಗಳು ಬೇಡವೆ ?
'ನೇದಮಮೂಲಂ, ತಸ್ಯ ಕ್ವಮೂಲ?'
ಯಾರು ವಿಚಾರಿಸಬೇಕಿದನು–
ವಿಶ್ವವಿದ್ಯಾಲಯಗಳೇ ಸುಸ್ತು ಹೊಡೆದರೆ,
ಪ್ರಾಧ್ಯಾಪಕರೇ ಪಚ್ಚನ್ನ ರಾಜಕಾರಣಿಗಳಾದರೆ,
ವಿದ್ಯಾರ್ಥಿಗಳು ಗೊಂದಲುಣಿಗಳಾದರೆ ?
ನನ್ನ ಮಟ್ಟಿಗೆ ಮಾತ
ನೀನೆ ಬೊಡ್ಡೆ, ನೀನೆ ಬೇರು–
ಸ್ವತಂತ್ರಧೀರ ಸಿದ್ಧೇಶ್ವರಾ !

೪೬೫

ಕನ್ನಡನಾಡಿನ ಕೋಡುಗಲ್ಲುಗಳು
ಚಾವುಂಡರಾಯನ ಬರವ ಕಾಯುತ್ತಿವೆಯಯ್ಯಾ ;
ಕನ್ನಡ ನುಡಿಯ ಸಾಧ್ಯವಾಗಿರದ ಸಾಧ್ಯತೆಗಳು
ಬಸವಣ್ಣನ ಬರವ ಕಾಯುತ್ತಿವೆಯಯ್ಯಾ ;
ಕನ್ನಡ ನಾಡಿನ ತಾಳಗರಿಗಳು
ಕುಮಾರವ್ಯಾಸನ ಕಂಠಪತ್ರಕ್ಕಾಗಿ ಕಾದಿವೆಯಯ್ಯಾ ;
ಈ ನಾಡಿನ ನದಿ ನದ ಪ್ರಪಾತಗಳು
ವಿಶ್ವೇಶ್ವರಯ್ಯರ ದಾರಿ ಕಾಯುತ್ತಿವೆಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ನಾಡಿನ ಬಿದಿರು ಕೊಳಲಾಗಲು, ಸೋರೆ ವೀಣೆಯಾಗಲು,
ಕಡ್ಡಿ ಕುಂಚವಾಗಲು, ಉಕ್ಕು ಉಳಿಯಾಗಲು,
ಮಣ್ಣು ಅನ್ನವಾಗಲು, ಹತ್ತಿ ವಸ್ತ್ರವಾಗಲು,
ಪ್ರಕೃತಿ ಸಂಸ್ಕೃತಿಯಾಗಲು ಕಾದಿವೆಯಯ್ಯಾ !

೪೬೬

ಕನ್ನಡಿಗರ ಕಂಡರೆ ಕನ್ನಡಿಗರಂತೆ,
ಮರಾಠಿಗರ ಕಂಡರೆ ಮರಾಠಿಗರಂತೆ,
ತಿಗುಳ ತೆಲುಗರ ಕಂಡರೆ ತಿಗುಳ ತೆಲುಗರಂತೆ,
ಅವರವರ ಕಂಡರೆ ಅವರವರಂತೆ !
ವೇಷವನು ಬದಲಿಸುವಂತೆ
ಭಾಷೆಯನು ಬದಲಿಸುವ
ಮೋಸಗಾರರ ಕಂಡು
ಹೇಸಿತ್ತಯ್ಯ ಎನ್ನ ಮನ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೬೭

ಶೇಷಣ್ಣನವರ ವೀಣಾ ವಿತಾನ,
ಚೌಡಯ್ಯನವರ ಪಿಟೀಲು ವಾದನ,
ಮಲ್ಲಿಕಾರ್ಜುನ ಗಂಗೂಬಾಯಿಯರ ಗಾಯನ,
ವೆಂಕಟಪ್ಪ ಹೆಬ್ಬಾರ ಮಿಣಜಗಿಯರ ಚಿತ್ರನಂದನ,
ವರದಾಚಾರ್ಯ ಪೀರ ವೀರಣ್ಣರ ಅಭಿನಯ ನಿಕೇತನ,
ಕುವೆಂಪು ಬೇಂದ್ರೆಯರ ಕವನೋದ್ಯಾನ,
ಹಿರಿಯಣ್ಣ ತಾರಾನಾಥ ಡಿವಿಜಿ ತತ್ತ್ವ ಚಿಂತನ,
ಬಿ.ಎಂ.ಶ್ರೀ. ಅನಕೃ ಮಂಜಪ್ಪ ಮಾಸ್ತಿಯರ ವ್ಯಾಖ್ಯಾನ ರಸಾಯನ,
ಕಾರಂತರ ಯಕ್ಷಗಾನ ನವೀಕರಣ,
ಕೈಲಾಸಂ ಸಂಸ ಶ್ರೀರಂಗರ ನಾಟಕಾಯತನ,
ನರಸಿಂಹಾಚಾರ್ಯ ಹಳಕಟ್ಟಿ ಗೋವಿಂದ ಪೈ ಸಂಶೋಧನ,
ವಿಶ್ವೇಶ್ವರಯ್ಯನವರ ರಾಷ್ಟ್ರನಿರ್ಮಾಣ–
ಎಂಥ ಮುಂಬಲವಯ್ಯ ಕರುನಾಡ ಮರುಹುಟ್ಟಿಗೆ ?
ಎಂಥ ಬೆಂಬಲವಯ್ಯ ಕನ್ನಡದಿ ಹೊಸ ದೃಷ್ಟಿಗೆ ?
ಎಂಥ ಸಾಕ್ಷಿಯಿವಯ್ಯ ಕನ್ನಡರ ಹೊಸ ಸೃಷ್ಟಿಗೆ ?
ಕನ್ನಡವು ವಿಶ್ವಜ್ಞಾನ ವಿಜ್ಞಾನಕ್ಕೆ
ಕನ್ನಡಿಯಾಗುವಂತೆಸಗಯ್ಯಾ,
ಕನ್ನಡ ಜೊನ್ನದ ಜೇನುಹೊಳೆ ಹರಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೬೮

ಯಾವ ವಿಶ್ವಾಸ ಹೋದರೂ ಆತ್ಮವಿಶ್ವಾಸ ಹೋಗದಿರಲಯ್ಯ ;
ಅಷ್ಟೈಶ್ವರ್ಯ ಹೋದರೆ ಹೋಗಲಿ, ಧೈರ್ಯ ಹೋಗದಿರಲಯ್ಯ ;
ಬಲ ಉಡುಗಿದರೆ ಉಡುಗಲಿ, ಛಲ ಉಡುಗದಿರಲಯ್ಯ ;
ಕೀರ್ತಿ ಮಸುಳಿಸಿದರೆ ಮಸುಳಿಸಲಿ, ಸ್ಫೂರ್ತಿ ಮಸುಳಿಸದಿರಲಯ್ಯ ;
ಮೈಯ ಶೃಂಗಾರ ಮರೆಯಾದರೆ ಆಗಲಿ, ಮನದ ಬಂಗಾರ ಬಯಲಾಗದಿರಲಯ್ಯ;
ಅಲಗು ಸೋತರೆ ಸೋಲಲಿ, ಗಲಗು ಸೋಲದಿರಲಯ್ಯ ;
ಕರ್ಣರಥ ಕುಸಿದರೆ ಕುಸಿಯಲಿ, ಮನೋರಥ ಕುಸಿಯದಿರಲಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಬೀಡು ಅಳಿದರೆ ಅಳಿಯಲಿ,
ನನ್ನ ನಾಡು ಎಂದೆಂದಿಗೂ ಉಳಿದಿರಲಯ್ಯಾ !

## ೪೬೯

ಹುಟ್ಟಿ ಬೆಳೆದ ಹಳ್ಳಿ ಮಲಪಭಾ ಜಲಾಶಯದಿ ಮುಳುಗಿತೆಂದು
ಮರುಗುತಿಹ ಮನುಜರಿರ, ಮರೆಯದಿರಿ–
ಇದೆಲ್ಲ ನೋವ್ವಾ ಜಲಪಳಯ,
ಇದು ಸಮೃದ್ಧಿಯ ಶುಭೋದಯ !
ಹುಟ್ಟಿ ಬೆಳೆದ ಹಳ್ಳಿಯ ತೊರೆದು
ಹೊಸ ಹಳ್ಳಿಗೆ ಹೋಗಬೇಕಾಯಿತೆಂದು
ಕಸಿವಿಸಿಗೊಂಡು ಕೈಹೊಸೆವ ಬಂಧು,
ನಂಬು ಈ ಹೊಸ ಹಳ್ಳಿಯಿಂದಲೇ ನಿನ್ನ ಭಾಗ್ಯದ ಬಳ್ಳಿ
ಕುಡಿಯೊಡೆದು ಚೆಲ್ಲವರಿಯಲಿದೆಯೆಂದು !
ಹುಟ್ಟಿ ಬೆಳೆದ ಮನೆಯ ತ್ಯಜಿಸಿ
ಹೊಸಮನೆಯ ಸೃಜಿಸಬೇಕಾಯಿತೆಂದು
ಶೋಕಿಸುತ್ತಿಹ ಸ್ನೇಹಿತ, ಮರೆಯದಿರು,
ಇಲ್ಲಿ ಯಾವ ಮನೆಯೂ ಶಾಶ್ವತವಲ್ಲ !
ಹಿಂದೆನಿತು ಹಳ್ಳಿಗಳಲ್ಲಿ ಹುಟ್ಟಿದೆಯೊ,
ಎನಿತು ಮನೆಗಳನು ಕಟ್ಟಿಹೆಯೊ
ಎನಿತು ಮನೆಗಳನ್ನು ಬಿಟ್ಟಿಹೆಯೊ,
ಮುಂದೆ ಕಟ್ಟಿ ಬಿಡಲಿಹೆಯೊ !
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಎಲ್ಲ ಹಳ್ಳಿ ನಿನ್ನ ಹಳ್ಳಿ,
ಎಲ್ಲ ಮನೆ ನಿನ್ನ ಮನೆ,
ಎಲ್ಲ ಜನ ನಿನ್ನ ಜನ !
ನೀನೆಲ್ಲರಲ್ಲಿ, ಎಲ್ಲರೂ ನಿನ್ನಲ್ಲಿ !

## ೪೭೦

ಹೂವನೂ ಬಿಡದ, ಹಣ್ಣನೂ ಕೊಡದ ಗಿಡ
ನಿಷ್ಪ್ರಯೋಜಕವೆನ್ನುವವರುಂಟು, ನಾನೆನ್ನೆನಯ್ಯ ;
ಅದರ ಬೇರುಗಳಲ್ಲಿ ಘೋರವ್ಯಾಧಿಯೊಂದಕ್ಕೆ ಔಷಧವಿರಬಹುದು,
ಅದರ ಬೊಡ್ಡೆಗಳಲ್ಲಿ ಗಡ್ಡೆಗೆಣಸುಗಳಲ್ಲಿಲ್ಲದ ಆಹಾರಸತ್ವವಿರಬಹುದು,
ಅದರ ಎಲೆಗಳಲ್ಲಿ ಕಾರ್ಬೊನ್ನನ್ನು ಹೊನ್ನನ್ನಾಗಿ ಮಾರ್ಪಡಿಸುವ
ರಾಸಾಯನಿಕತೆ ಇರಬಹುದು ;
ನಿಷ್ಪ್ರಯೋಜಕವಾವುದಯ್ಯ ನಿನ್ನ ಸೃಷ್ಟಿಯಲ್ಲಿ ?
ಪ್ರತಿ ವಸ್ತುವಿನ ಪ್ರಯೋಜಕತೆಯನ್ನು
ಅರಿವುದರಲ್ಲಿಯೇ
ನರನ ಬಾಳಿನ ಪ್ರಯೋಜಕತೆ !
ಇಂತಿರಲು ಯಾರನ್ನು ದೂರವಿರಿಸುವುದು ?
“ಪರಿ ಪ್ರಭುಹಿ ಸಂಗ್ರಹೀ
ಸಕಲ ವಸ್ತುಲಾ ಠೇವಿತೀ ;
ಗುಣಾ ನ ಮ್ಹಣತಾ ಉಣಾ
ಅಧಿಕ ಆದರೇ ಸೇವಿತೀ” ಎಂದುದಾಗಿ,
ಬಂದುದೆಲ್ಲ ನನ್ನ ಬಳಿಯಿರಲಿ,
ಬಂದವರೆಲ್ಲ ನನ್ನ ಬಳಿಯಿರಲಿ,
ನಾನೆಲ್ಲರ ಬಳಿ ಇರಲಿ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೭೧

ನನ್ನ ದೋಷ–ದುರ್ಗಣಗಳನ್ನು ನಿನಗರ್ಪಿಸಿದರೆ
ನನಗೆ ನಿಜಪದವನ್ನು ನೀಡಲು ನೀನು
ಸಿದ್ಧನಾಗಿಯೇ ಇರುವಿಯಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ !
ಆದರೆ ನನ್ನ ದೋಷ–ದುರ್ಗುಣಗಳ ಬಗ್ಗೆ ನನಗೇ ಮೋಹ !
ಅವುಗಳನ್ನು ಸಮರ್ಥಿಸಿಕೊಳ್ಳುವಲ್ಲಿಯೇ ನನಗೆ ಸಂತೃಪ್ತಿ !
ಅನ್ಯರಲ್ಲಿ, ಮಾನ್ಯರಲ್ಲಿಯೂ ಅವು ಇವೆಯೆಂದು
ಸಿದ್ಧಗೊಳಿಸುವುದರಲ್ಲಿಯೇ ನನಗೆ ಆಸಕ್ತಿ !
ಮಾನವೀಯತೆ ದೃಢಪಡಲು ಒಂದೆರಡು ದೋಷ ದುರ್ಗುಣಗಳಾದರೂ
ಇರುವುದು ಅನಿವಾರ್ಯವೆಂಬುದೇ ನನ್ನ ವಾದ !
ನೀನು ಪಾಪಿಗಳ ಉದ್ಧಾರಕ್ಕಾಗಿಯೇ ಇರುವಿ,
ನಾನು ಎಳ್ಳಷ್ಟೂ ಪಾಪ ಮಾಡದಿದ್ದರೆ
ನಿನಗೆ ಕೆಲಸವಿಲ್ಲದಂತಾಗುವುದೆಂಬುದೇ ನನ್ನ ಅಂತರ್ಬೋಧ!
ಮಾಡಬಾರದುದೆಲ್ಲವ ಮಾಡಿ
ಕೊನೆಗೆ ನಿನಗೆ 'ಪಾಹಿ, ತ್ರಾಹಿ' ಎಂದರಾಯಿತು–
ಮಾಡಿದುದೆಲ್ಲ ಮಾಫಿಯೆಂಬುದೇ ನನ್ನ ಮೀಮಾಂಸೆ !
ಅಂತೂ ನಿರಾತಂಕವಾಗಿ ನಡೆದಿದೆ
ಕತ್ತಲೆಯನ್ನೇ ಬೆಳಕೆಂದು ಭ್ರಮಿಸುವ ಬಾಳಿನ ಪಯಣ !
ಎಂದಿದಕ್ಕೆ ಹೊಸ ಹಸ ತಿರುವು ಬರುವುದೋ,
ಎಂದಿದರ ಮುಂದೆ ನಣ್ಬು–ನಿಕ್ಕುವಗಳ ದಾರಿ ತೆರೆವುದೋ
ನೀನೆ ಬಲ್ಲೆ, ನೀನೆ ಬಲ್ಲೆ !
ನೀನು ಕರುಣಿಸಿದರೆ
ಎಲ್ಲಿ ಸಾಧ್ಯಾಸಾಧ್ಯತೆಗಳ ಎಲ್ಲೆ ?
ನೀನು ದಯೆ ತೋರಿದರೆ
ಮೂಡಬಹುದು ನಾಕ ಇದರಲ್ಲೆ !

## ೪೭೨

ಇನ್ನೇನ ಮಾಡದಿದ್ದರೂ
ಸಂಯಮಿಯನ್ನಾಗಿ ಮಾಡಯ್ಯ ಎನ್ನನ್ನು !
ಸಂಯಮವಿಲ್ಲದ ಪ್ರೇಮ ಕಾಮ,
ಸಂಯಮವಿಲ್ಲದ ಭೋಗ ರೋಗ,
ಸಂಯಮವಿಲ್ಲದ ದಾನ ದುಂದು,
ಸಂಯಮವಿಲ್ಲದ ಮಾತು ಮಾರಿ,
ಸಂಯಮವಿಲ್ಲದ ಸ್ವಾತಂತ್ರ್ಯ ಸ್ವೈರವೃತ್ತಿ,
ಸಂಯಮವಿಲ್ಲದ ಬರವಣಿಗೆ ಉರವಣಿಗೆ,
ಸಂಯಮವಿಲ್ಲದ ಸದ್ಗುಣವೂ ದುರ್ಗುಣ !
ಅಡಕವಿಲ್ಲದಲ್ಲಿ ಕೆಡುಕು, ತೊಡಕು !
"ಒರು ಮೈಯುಳಾ ಮೈ
ಪೋಲೈನ್ದಡಕ್ಕ ಲಾಟ್ರಿನ್
ಎರು ಮೈಮು ಮೇಮಾಪ್ಪುಡೈತ್ತು" ಎಂದುದಾಗಿ
ಇನ್ನೇನ ಮಾಡದಿದ್ದರೂ
ಸಂಯಮಿಯನ್ನು ಮಾಡಯ್ಯ ನನ್ನನ್ನು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೭೩

ನೀರೆರೆದವನಿಗೂ ಕಡಿಯಬಂದವನಿಗೂ
ಭೇದವೆಣಿಸದೆ ಹಣ್ಣು ನೆರಳು ನೀಡುವ ಮರದ ಬುದ್ಧಿ ಬರಲಯ್ಯ ನನಗೆ !
ನೀರುಣಿಸಿದವನಿಗೂ, ಕಡಿಯ ಬಂದವನಿಗೂ
ಮುಳ್ಳನೇ ಕೊಡುವ ಕಂಟಿಯ ಬುದ್ಧಿ ಬಾರದಿರಲಯ್ಯ ನನಗೆ !
    ನೆರವು ನೀಡದವರಿಗೂ ನೆರವು ನೀಡುವುದಿರಲಿ,
    ನೆರವು ನೀಡಿದವರಿಗೆ ನೆರವು ನೀಡುವುದಿರಲಿ
    ನೆರವು ನೀಡಿದವರಿಗೇ ಕೆಡುಕು ಮಾಡುವ
        ದುಷ್ಟಬುದ್ಧಿ ಬಾರದಿರಲಯ್ಯ ನನಗೆ !
        ಸ್ವತಂತ್ರಧೀರ ಸಿದ್ಧೇಶ್ವರಾ,
        ಸಹಾಯ ಮಾಡಲು ಸಾಧ್ಯವಾಗದಿದ್ದರೆ
        ಸುಮ್ಮನಿರುವುದನ್ನಾದರೂ ಕಲಿಸಯ್ಯಾ ನನಗೆ !

### ೪೭೪

‘ನಿನ್ನ ಹಕ್ಕು ಬಿಟ್ಟುಕೊಡು,’ ಎಂದರೆ ಬಿಟ್ಟುಕೊಡಬಲ್ಲೆ–
ಆದರೆ, ನನ್ನ ಕರ್ತವ್ಯವನ್ನು ಮಾತ್ರ ಬಿಟ್ಟುಕೊಡೆನಯ್ಯಾ ;
‘ಕರ್ಮದ ಫಲವ ತ್ಯಜಿಸು,’ ಎಂದರೆ ತ್ಯಜಿಸಬಲ್ಲೆ–
ಆದರೆ, ಕರ್ಮವನ್ನೇ ತ್ಯಜಿಸಲಾರೆನಯ್ಯಾ ;
‘ಸಂಸಾರದಲ್ಲಿ ಇರು,’ ಎಂದರೆ ಇರಬಲ್ಲೆ–
ಆದರೆ, ನನ್ನಲ್ಲಿ ಸಂಸಾರವ ಇರಿಸಿಕೊಳ್ಳಲಾರೆನಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
‘ಕೆಸರನ್ನು ತೊಳೆದುಕೊ,’ ಎಂದರೆ ತೊಳೆದುಕೊಳ್ಳಬಲ್ಲೆ–
ಆದರೆ, ಕೆಸರನ್ನೇ ತೊಳೆಯಲಾರೆನಯ್ಯಾ!

### ೪೭೫

ಉಪ್ಪಿನಕಾಯಿ ರುಚಿಯೆಂದು
ಅದನ್ನೇ ಉಣ್ಣಲಾಗುವುದೇನಯ್ಯಾ ?
ರತಿಸಮಯದ ವಿವಸ್ತ್ರತೆ ಮೋಹಕವೆಂದು
ಹಾಡು ಹಗಲೇ ನಗ್ನತೆ ಶ್ಲಾಘ್ಯವೇನಯ್ಯಾ ?
ಕಾಳಗದಲ್ಲಿ ಕೊಲೆ ಕ್ಷಮ್ಯವೆಂದು
ಬಾಳಿನುದ್ದಕ್ಕೂ ವಧೆ ವಿಧಿಯೇನಯ್ಯಾ ?
ಮಾತಿಗಿಂತ ಮೌನ ಮೇಲೆಂದು
ಜೀವನವೆಲ್ಲ ಮೌನವಾಗಬೇಕೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಲ್ಲಿ ಅಮೃತ ದೊರೆಯಲಿದೆಯೆಂದು
ಇಲ್ಲಿಯ ಅಂಬಲಿಯ ತೊರೆಯಲಹುದೇನಯ್ಯಾ ?

## ೪೭೬

ದೊಡ್ಡ ದೊಡ್ಡ ಮಾತುಗಳನ್ನಾಡಿ ದೊಡ್ಡವನಾಗಬೇಕೆಂಬ
ದಡ್ಡತನ ಆವರಿಸದಿರಲಯ್ಯ ನನ್ನನ್ನು ;
ದೊಡ್ಡವರನ್ನು ಬೈದು ಬೈದು ದೊಡ್ಡವನೆನಿಸಿಕೊಳ್ಳಬೇಕೆಂಬ
ಮಡ್ಡತನ ಮುಸುಕದಿರಲಯ್ಯಾ, ನನ್ನನ್ನು ;
ದುಡ್ಡಿನ ಬಲದಿಂದ, ದಿಡ್ಡಿ ಬಾಗಿಲಿನಿಂದ, ಅಡ್ಡದಾರಿಯಿಂದ,
ದೊಡ್ಡ ದೊಣ್ಣೆ ಹಿಡಿದು, ದೊಡ್ಡ ಜಿಗಣೆಯಾಗಿ ದೊಡ್ಡವನಾಗಬೇಕೆಂಬ
ಹೆಡ್ಡತನ ಹೊದ್ದದಿರಲಯ್ಯ ನನ್ನನ್ನು ;
ದೊಡ್ಡಮನದಿಂದ ದೊಡ್ಡತನ,
ದೊಡ್ಡಗುಣದಿಂದ ದೊಡ್ಡತನ,
ದೊಡ್ಡಕಾರ್ಯಗಳಿಂದ ದೊಡ್ಡತನವೆಂಬುದ ತಿಳಿಸಿ,
ಮರವೆಯಿಂದುಳಿಸಿ, ಮನವ ತಿಳಿಗೊಳಿಸಿ ಬೆಳೆಸಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೭೭

ಐದು ಹೆಡೆಗಳ ಹಾವ ಹಿಡಿದಿಹುದಯ್ಯ
ಮನದ ಮುಂಗುಲಿ !
ಮುಂಗುಲಿಯ ಕಡಿತಕ್ಕೆ ಕೆರಳಿ, ಹೊಡಮರಳಿ
ಕಚ್ಚುತಿದೆ ಹಾವು ಮುಂಗುಲಿಯ !
ಹಾವಿನ ವಿಷ ಮುಂಗುಲಿಯ ಮೈಯಲ್ಲಿ,
ಮುಂಗುಲಿ ಗೈದ ಗಾಯದ ನೋವು ಹಾವಿನ ಮೈಯಲ್ಲಿ !
ಯಾವುದು ಉಳಿವುದೋ ಯಾವುದು ಅಳಿವುದೋ !
ಸಹಜೀವನ ಇಲ್ಲವೆ ಸಹಮರಣ–
ಇದೇ ಗತಿಯೇನಯ್ಯಾ ಎರಡಕ್ಕೂ ?
ಇಲ್ಲವೇನಯ್ಯ ಉಪಾಯ– ಇಳಿಸಲು ಎರಡರ ಸೊಕ್ಕೂ ?
ಎರಡರ ಹಲ್ಲುಗಳನೂ ಮುರಿದು
ಎರಡಕ್ಕೂ ಸಹಜೀವನ ಸುಖವ
ಕೊಡಲಾರೆಯೇನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೭೮

ವಿಷಯವ ಬಿತ್ತಿ ನಿರ್ವಿಷಯವ ಬೆಳೆವ
ಬೇಸಾಯವ ಕಲಿಸಯ್ಯ ;
ಆಸಕ್ತಿಯ ಮಾರಿ ಅನಾಸಕ್ತಿಯ ಕೊಳ್ಳುವ
ವ್ಯಾಪಾರವ ಕಲಿಸಯ್ಯ ;
ಕರ್ಮದ ಕಬ್ಬು ನುರಿಸಿ ಧರ್ಮದ ಸಕ್ಕರೆ ಪಡೆವ
ಕೈಗಾರಿಕೆಯ ಕಲಿಸಯ್ಯ ;
ಅಲ್ಪವನು ಆಧರಿಸಿ ಭೂಮವನು ಕಟ್ಟುವ
ಉಪ್ಪಾರಿಕೆಯ ಕಲಿಸಯ್ಯ ;
ಮೃಣ್ಮಯವ ಬಡಿದು ಚಿನ್ಮಯವ ಹಡೆವ
ಕುಂಬಾರಿಕೆಯ ಕಲಿಸಯ್ಯ ;
ವ್ಯಕ್ತವನು ಬಳಸಿ ಅವ್ಯಕ್ತವನು ಅಭಿವ್ಯಕ್ತಗೊಳಿಪ
ಕಲೆಗಾರಿಕೆಯ ಕಲಿಸಯ್ಯ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಾತಿನ ಮಗ್ಗದಲ್ಲಿ ಜ್ಯೋತಿಯ ಕಿರಣಗಳ ನೆಯ್ವ
ನೇಕಾರಿಕೆಯ ಕಲಿಸಯ್ಯ !

## ೪೭೯

ಹಕ್ಕಿಯ ಗೂಡೊಂದು ಕಲಾಕೃತಿ, ಹಾವಿನ ಬೀಡೊಂದು ಕಲಾಕೃತಿ,
ಜೇಡನ ಬಲೆಯೊಂದು ಕಲಾಕೃತಿ, ಜೇನಿನ ಹುಟ್ಟೊಂದು ಕಲಾಕೃತಿ,
ನಿನ್ನ ಪ್ರತಿಯೊಂದು ಕೃತಿಯೂ ಕಲಾಕೃತಿಯಯ್ಯಾ !
ನನ್ನ ಒಂದು ಕೃತಿಯಾದರೂ ಕಲಾಕೃತಿಯಾಗುವಂತೆ,
ಅದು ಕಲಾಕೃತಿಯಾಗಿ ಹೊಮ್ಮಿದಾಗ
ಹೆಮ್ಮೆ, ಹಮ್ಮು, ಬಿಮ್ಮುಗಳು ನನ್ನನ್ನು
ಆವರಿಸದಂತೆ ಅನುಗ್ರಹಿಸಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

೪೮೦

ಇದೆಂಥ ಮನೆಯಲ್ಲಿ ಇರಿಸಿಹೆಯಯ್ಯಾ ಎನ್ನನ್ನು ?
ಈ ಮನಸೋಲನಂಥ ಮನೆಯಲ್ಲಿರಿಸಿ
ಮೋಜು ನೋಡುತ್ತಿಹೆಯೇನಯ್ಯಾ ?
ಒಂದು ಕೋಣೆಯ ಕತ್ತಲೆ ನುಗ್ಗಿ
ಇನ್ನೊಂದು ಕೋಣೆಯ ಬೆಳಕನ್ನು
ಕತ್ತಲೆಯಾಗಿಸಿಬಿಡುತ್ತದೆ !
ಆ ಇನ್ನೊಂದರ ಕತ್ತಲೆ ನುಗ್ಗಿ
ಮತ್ತೊಂದು ಕೋಣೆಯ ಬೆಳಕನ್ನು
ಕತ್ತಲೆಯಾಗಿಸುತ್ತದೆ !
ಹೀಗೆ ಸಾಗುತ್ತಿದೆ ಕತ್ತಲೆಯ ಚೈತ್ರಯಾತ್ರೆ !
ಹೀಗೆಯೇ ಒಂದು ಕೋಣೆಯ ಬೆಳಕು ನುಗ್ಗಿ
ಇನ್ನೊಂದರ ಕತ್ತಲೆಯನ್ನು ಬೆಳಗಿಸುತ್ತ
ಬೆಳಕಿನ ವಿಜಯಯಾತ್ರೆ ಸಾಗದೇಕಯ್ಯ ?
ನೀನೇನಾದರೂ ನಿನ್ನ 'ಜ್ಯೋತಿಷಾಂ ಜ್ಯೋತಿ'ಯನ್ನು
ಹೊತ್ತಿಸಿದರೆ ಮಾತ್ರ
ಎಲ್ಲ ಕೋಣೆಗಳಿಗೂ ಒಮ್ಮೆಗೇ ಬೆಳಕು ಬರಬಹುದು,
ಎಲ್ಲ ಕೊಣೆಗಳ ಕತ್ತಲೆಯೂ ಬೆಳಕಾಗಬಹುದು !
ಪ್ರಣತಿ ಸಿದ್ಧವಿದೆ,
ಎಣ್ಣೆ ಎರೆದಾಗಿದೆ,
ಬತ್ತಿ ಎಳೆದಾಗಿದೆ–
ನಿನ್ನ ದೀಪಶಿಖೆಯನ್ನೊಮ್ಮೆ,
ಒಮ್ಮೆಯೇ ಒಮ್ಮೆ
ಮುಟ್ಟಿಸಿ ಬೆಳಕಿನ ಬಳಗ ಹುಟ್ಟಿಸಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೮೧

ಗತಕಾಲವೆ, ನಿನ್ನ ನ್ನು ಪ್ರೀತಿಸಬಲ್ಲೆ–ಪೂಜಿಸಲಾರೆ ನಾನು ;
ವರ್ತಮಾನವೆ, ನಿನ್ನನ್ನು ಆದರಿಸಬಲ್ಲೆ–ಅರ್ಚಿಸಲಾರೆ ನಾನು ;
ಭವಿಷ್ಯತ್ತೆ, ನಿನ್ನನ್ನು ಸ್ವಾಗತಿಸಬಲ್ಲೆ–ಸಮಾರಾಧಿಸೆ ನಾನು ;
ಕಾಲವೆ ನಿನ್ನ ಕೆಳೆ ಬೇಕು, ಆಳಿಕೆ ಬೇಡ ನನಗೆ !
ನಿನ್ನ ಪ್ರವಾಹ ಕೊಂಡೊಯ್ದತ್ತ ತೇಲಲು
ಸತ್ತ ಮೀನೇನಲ್ಲ ನಾನು !
ನಿನಗೆ ಬೇಕಾದತ್ತ ನೀನೆಳೆ, ನನಗೆ ಬೇಕಾದತ್ತ ನಾನೀಸುವೆ !
ಪುರಂದರೋಪದೇಶಪ್ರಭಾವದಿಂದ ಈಸುವೆ, ಇದ್ದು ಜೈಸುವೆ!
'ಕಾಲೊ ಜಗದ್ಭಕ್ಷಕಃ' ಎಂದು ಎಚ್ಚರಿಸುವಿಯೇನು?
'ತಮಾರೋಹಂತಿ ಕವಯಃ' ಎಂದು ಉತ್ತರಿಸಲೆ ನಾನು ?
ಬೇಡ, ನೀನೂ ಸ್ವತಂತ್ರಧೀರ ಸಿದ್ಧೇಶ್ವರನ ಸ್ವಯಂಸೇವಕ,
ನಾನೂ ಅವನ ಪಾದಾರಾಧಕ,
ಏಕೆ ನಮ್ಮಿಬ್ಬರಲಿ ಸೆಣಸಿನ, ಕಿನಿಸಿನ ಕಂದಕ ?

## ೪೮೨

ನಿನ್ನೊಡನೆ ಮುನ್ನಡೆಯ ಬಲ್ಲೆ,
ನಿನ್ನ ಬಿಟ್ಟು ಹಿನ್ನಡೆಯಲೂ ಬಲ್ಲೆ, ಕಾಲ !
ನಾನು ಮನಸ್ಸು ಮಾಡಿದರೆ
ಅಜಾತ ಕಾಲದ ಅಜ್ಞಾತದೊಡನೆ ಮಾತಾಡಬಲ್ಲೆ,
ಇತಿಹಾಸಪೂರ್ವಕಾಲದ ಆದಿಮಾನವನೊಡನೆ ಆಟವಾಡಬಲ್ಲೆ,
ಅಮೀಬಾದ ಕನಸುಗಳೊಡನೆ ಕೇಳಿಯಾಡಲೂ ಬಲ್ಲೆ !
ನಿನಗಿದೆ ಬೇಡವಾದಾಗಲೂ ಮುನ್ನಡೆವ ಬಂಧನ,
ನನಗಿದೆ ಸ್ವೇಚ್ಛಾವಿಹಾರ ಸ್ವಾತಂತ್ರ್ಯ–
ಸ್ವತಂತ್ರಧೀರ ಸಿದ್ಧೇಶ್ವರನ ಕರುಣದಿಂದ !

## ೪೮೩

ಆತ್ಮೌಪಮ್ಯವನ್ನು ಅನ್ವೇಷಿಸಿದ ಮಹರ್ಷಿ,
ಗುರುತ್ವಾಕರ್ಷಣವನ್ನು ಗುರುತಿಸಿದ ವಿಜ್ಞಾನಿ–
ಇಬ್ಬರೂ ವಂದ್ಯರೆನಗೆ ;
ಅಹಿಂಸೆಯನ್ನು ಬೋಧಿಸಿದ ಪ್ರವಾದಿ,
ವಿದ್ಯುಚ್ಛಕ್ತಿಯನ್ನು ಶೋಧಿಸಿದ ವಿಜ್ಞಾನಿ–
ಇಬ್ಬರೂನತಿಯೋಗ್ಯರೆನಗೆ;
ವಿಶ್ವದ ಏಕತ್ವವನ್ನು ಮಂಡಿಸಿದ ದಾರ್ಶನಿಕ,
ಶಕ್ತಿಯ ನಾನಾತ್ವವನ್ನು ನಿದರ್ಶಿಸಿದ ವಿಜ್ಞಾನಿ–
ಇಬ್ಬರೂ ಮಾನ್ಯರೆನಗೆ ;
ಮನದ ನಿಗೂಢ ರಹಸ್ಯಗಳನ್ನು ಕಂಡ ಮನಶ್ಶಾಸ್ತ್ರಿ,
ತನುವಿನ ಕಣಕಣಗಳನ್ನು ಭೇದಿಸಿ ಶೋಧಿಸಿದ ವೈದ್ಯವಿದ್ಯಾಧರ–
ಇಬ್ಬರೂ ಗಣ್ಯರೆನಗೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭೂಗೋಲ ಖಗೋಲಗಳ ರಹಸ್ಯಭಂಡಾರಗಳ
ಮುದ್ರೆಗಳನ್ನೊಡೆದವರೆಲ್ಲ ವರೇಣ್ಯರೆನಗೆ !

## ೪೮೪

ಇಂದು ಹುಟ್ಟಿಹ ಸಾಸಿರ ಸಾಸಿರ ಕೂಸುಗಳಿಗೆ ಸ್ವಾಗತ ;
ಇಂದು ಇಹಲೋಕ ಬಿಟ್ಟಿಹ ಸಾಸಿರ ಸಾಸಿರ ಜೀವಿಗಳಿಗೆ ಶ್ರದ್ಧಾಂಜಲಿ ;
ಇಂದು ಹಸೆಗೆ ನಿಂದ ಸಾಸಿರ ಸಾಸಿರ ವಧೂವರರಿಗೆ ಶುಭಾಶಯಗಳು ;
ಇಂದು ಆಸ್ಪತ್ರೆಗೆ ಸೇರಿದ ಸಾಸಿರ ಸಾಸಿರ ರೋಗಿಗಳಿಗೆ ಸಹಾನುಭೂತಿ ;
ಇಂದು ಸೆರೆಮನೆ ಸೇರಿದ ಸಾಸಿರ ಸಾಸಿರ ನಿರಪರಾಧಿಗಳಿಗಾಗಿ ಕಂಬನಿ ;
ಇಂದು ತಬ್ಬಲಿಗಳಾದ ಸಾಸಿರ ಸಾಸಿರ ಶಿಶುಬಾಲರಿಗಾಗಿ ನಿಟ್ಟುಸಿರು ;
ಇಂದಿನ ಒಡಲಿನಲ್ಲಿರುವ ಹಿಂದಿನ ಮುಂದಿನ
ನಗುವ ನರಳುವ ಜೀವಿಗಳಿಗೆಲ್ಲ
ಇಂದೆ ಶರಣೆಂಬೆನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೮೫

ಹೊಗಳಿದರು ಹಲವರೆಂದು ತೆಗಳಿದರು ಕೆಲವರೆನ್ನ ;
ಇದು ಕಾರಣ, ಹೊಗಳಿದವರೇ ಹೊಣೆಗಾರರೆನ್ನ ತೆಗಳಿಕೆಗೆ !
ದಯವಿಟ್ಟು ಹೊಗಳದಿರಿ, ದಮ್ಮಯ್ಯ !
ಹೊಗಳುವ ನೀವು ನನ್ನ ಗುಣಶೀಕರಗಳ ಮುಂದೆ
ಪಾರದರ್ಶಕವನ್ನಿರಿಸುವಿರಿ ;
ತೆಗಳುವವರು ನನ್ನ ದೋಷಗಳ ಮುಂದೆ
ಸೂಕ್ಷ್ಮದರ್ಶಕವನ್ನಿರಿಸುವರು.
ಎರಡರಲ್ಲಿಯೂ ವಿಶ್ವಾಸವಿಲ್ಲ ನನಗೆ ;
ಆದರೂ ಇಬ್ಬರಿಗೂ ನಮಸ್ಕಾರಗಳು !
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೊಮ್ಮೆ, ಒಮ್ಮೆಯೇ ಒಮ್ಮೆ ಅಹುದೆಂದರೆ ಸಾಕು ನನಗೆ !

## ೪೮೬

ಇದ್ದಲಿನ ಎದೆಯಲ್ಲಿ ನಿದಿಪ ವಜ್ರಕ್ಕೆ
ಉಜ್ಜುಗೊರಡಿನ ಅಂಜಿಕೆಯೆಲ್ಲಿಯದಯ್ಯ ?
ಕವಿಯ ಮನದಲ್ಲಿಯೇ ತೊನೆವ ಕವನಕ್ಕೆ
ವಿಮರ್ಶಕರ ಹೆದರಿಕೆಯೆಲ್ಲಿಯದಯ್ಯ ?
ಕಲ್ಲಿನಲ್ಲಿ ಅಡಗಿಹ ಕಟೆಯದ ಕೋಳಿಗೆ
ಕಟುಕನ ಚೂರಿಯ ಭಯವೆಲ್ಲಿಯದಯ್ಯ ?
ಬೀಜರೂಪದಲ್ಲಿರುವ ಗಿಡ ಮರ ಕಂಟಿಗಳಿಗೆ
ಕೊಡಲಿಯ ಬಾಯ ಭೀತಿಯೆಲ್ಲಿಯದಯ್ಯ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನೇ ನಂಬಿ,
ನಿನ್ನ ನಂಬಿಕೆಯ ವಜ್ರರಕ್ಷೆಯಲ್ಲಿರುವ ನನಗೆ
ಅನ್ಯರ ಅವಿಶ್ವಾಸ ಹೊಗಳಿಕೆ ತೆಗಳಿಕೆಗಳ
ಬೆದರಿಕೆಯೆಲ್ಲಿಯದಯ್ಯಾ ?

## ೪೮೭

ಆಸ್ಥಾನದ ಆಸೆ ತಾನಸೇನನಿಗಲ್ಲದೆ
ಗುರು ಹರಿದಾಸರಿಗಲ್ಲವಯ್ಯ,
ಶ್ರೀನಾಥನಿಗಲ್ಲದೆ ಪೋತನನಿಗಲ್ಲವಯ್ಯ !
ಕೈಲಾಸದ ಆಸೆ ಕರಿಕಾಲಚೋಳನಿಗಲ್ಲದೆ
ಮಾದಾರ ಚೆನ್ನಯ್ಯನಿಗಲ್ಲವಯ್ಯ,
ಚೇರಮನಿಗಲ್ಲದೆ ಕಾರಿಕಾಲಮ್ಮೆಗಲ್ಲವಯ್ಯ !
ಹೆಸರಿನ ಆಸೆ ಹಸಿ ಬಿಸಿ ರಿಸಿಗಲ್ಲದೆ
ಸೇವಾತಪಸ್ವಿಗಲ್ಲವಯ್ಯ,
ಕೃಷಿಋಷಿಗಲ್ಲವಯ್ಯ !
ಫಲದ ಆಸೆ ರಾಜಕಾರಣಿಗಲ್ಲದೆ
ರಾಷ್ಟ್ರಭಕ್ತನಿಗಲ್ಲವಯ್ಯ,
ತ್ಯಾಗಯುಕ್ತನಿಗಲ್ಲವಯ್ಯ !
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊಗಳಿಕೆಯ ಆಸೆ ನನ್ನಂಥ ಹುಸಿ ಭಕ್ತನಿಗಲ್ಲದೆ
ಬಸವಣ್ಣನಿಗಲ್ಲವಯ್ಯಾ !

## ೪೮೮

ಅರ್ಧ ರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ
ಬುದ್ಧರಾಗುವರೇನಯ್ಯಾ ?
ಸಂನ್ಯಾಸವ ಸ್ವೀಕರಿಸಿದವರೆಲ್ಲ
ಶಂಕರಾಚಾರ್ಯರಾಗುವರೇನಯ್ಯಾ ?
ಉಪನಯನವ ನಿರಾಕರಿಸಿದವರೆಲ್ಲ
ಬಸವಣ್ಣನಾಗುವರೇನಯ್ಯಾ ?
ಶಾಸನಗಳ ಉಲ್ಲಂಘಿಸಿದವರೆಲ್ಲ
ಗಾಂಧೀಜಿ ಆಗುವರೇನಯ್ಯಾ ?
ಅಧಿಕಾರವ ನಿರಾಕರಿಸಿದವರೆಲ್ಲ ಅಥಣಿಯ ಶಿವಯೋಗಿಗಳು,
ಮಠಾಧಿಪತಿಗಳೆಲ್ಲ ಮೃತ್ಯುಂಜಯ ಶಿವಯೋಗಿಗಳಾಗುವರೇನಯ್ಯಾ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರ ಬಳಸುವರೆಲ್ಲ
ನೀನಾಗುವರೇನಯ್ಯಾ ?

## ೪೮೯

ನಿಷ್ಠೆ ಪ್ರಬಲಿಸದೆ ಅನುಷ್ಠಾನಕ್ಕೆ ಬರದು ಮತತತ್ತ್ವವಾವುದೂ,
ನಿಷ್ಠೆ ಬಲಿಯೆ ಅಸಹಿಷ್ಣುತೆ ಅಂಕುರಿಸುವ ಭಯವಯ್ಯ ಅನ್ಯಮತಗಳ ಬಗ್ಗೆ ;
ನಿನ್ನ ನಾಮಮೊಂದನು ನಂಬಿ ನಿತ್ಯ ನೆನೆಯದಿರೆ ನಾಮಜಪಫಲವಿಲ್ಲ,
ನಾಮಮೊಂದನೆ ನಂಬೆ ಉಳಿದ ನಾಮಗಳ ಅನಾದರಿಪ ಭಯವಯ್ಯಾ ;
ನಿನ್ನ ರೂಪಮೊಂದನೆ ನೆಚ್ಚಿ ನಿಚ್ಚ ಅರ್ಚಿಸದಿರೆ ಉಚ್ಚಗತಿಯಿಲ್ಲ,
ರೂಪಮೊಂದನೆ ಮೆಚ್ಚೆ ಉಳಿದ ರೂಪಗಳ ತುಚ್ಛೀಕರಣದ ಭಯವಯ್ಯಾ ;
ಒಂದೆ ಮತವನು, ಒಂದೆ ನಾಮವನು, ಒಂದೆ ರೂಪವನು ನಂಬಿಯೂ
ಎಲ್ಲ ಮತಗಳು ನಿನ್ನ ಮತಗಳು, ಎಲ್ಲ ರೂಪಗಳು ನಿನ್ನ ರೂಪಗಳು,
ಎಲ್ಲ ನಾಮಗಳು ನಿನ್ನ ನಾಮಗಳು– ಎಂಬ ನಂಬಿಕೆಯ ಬೆಳೆಸಿ
ಸ್ವಮತನಿಷ್ಠೆ ಪರಮತಸಹಿಷ್ಣುತೆಯ,
ಏಕನಾಮ ರೂಪ ನಿಷ್ಠೆ ಸರ್ವನಾಮ ರೂಪ ಸಹಿಷ್ಣುತೆಯ
ಕಲಿಸಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ !

## ೪೯೦

ಹಿಂದಿನ ಹಿರಿಯ ಕೃತಿಗಳನ್ನು ಓದಲಿಕ್ಕಾಗಲಿಲ್ಲ,
ಇಂದಿನ ಉದ್ಘ ಕೃತಿಗಳನ್ನೆಲ್ಲ ಓದುವುದಾಗಿಲ್ಲ,
ಮುಂಬರುವ ಮಹತ್ಕೃತಿಗಳನ್ನು ಓದುವ ಹಾಗಿಲ್ಲ !
ನಾನು ದುರ್ದೈವಿಯೋ ನೀನು ನಿರ್ದಯಿಯೋ ?
ಓದುವ ಅವಕಾಶವನ್ನೀಯಲು
ನಿನಗೆ ಮನಸ್ಸಿಲ್ಲದಿದ್ದರೆ
ಓದುವ ಆಸೆಯನ್ನಾದರೂ ಏಕೆ ಕೊಟ್ಟೆ ನನಗೆ ?
ಈ ಅತೃಪ್ತ ಅಭಿಲಾಷೆ,
ಅತುಷ್ಟ ಪಠನ ಪಿಪಾಸೆ,
ಅಸಫಲ ಪ್ರಕಾಶಾಪೇಕ್ಷೆಗಳೇ ನಿನಗೆ ಇಷ್ಟವೆ ?
ನಿನಗೆ ಇಷ್ಟವಿದ್ದರೆ
ನನಗೆ ನಷ್ಟವಾದರೂ ಸರಿಯೆ,
ನಿನ್ನ ಇಷ್ಟ ನೆರವೇರಲಯ್ಯ –
ಸ್ವತಂತ್ರಧೀರ ಸಿದ್ಧೇಶ್ವರಾ !

# ೪೯೧

ಸುಖದೊಡನೆ ಸರಸವಾಡುವಾಗಿನ
ದುಃಖವನ್ನು ಅನುಭವಿಸಿದೆ ;
ದುಃಖದೊಡನೆ ಹೋರಾಡುವಾಗಿನ
ಸುಖವನ್ನು ಅನುಭವಿಸಿದೆ ;
ಸುಖದುಃಖಗಳ ಸುದ್ದಿಯನ್ನೇ ಮರೆತಾಗಿನ
ಆನಂದವನ್ನೂ ಅನುಭವಿಸಿದೆ ;
ಗೆಲವನ್ನು ದಕ್ಕಿಸಿಕೊಳ್ಳುವಾಗಿನ
ದುಕ್ಕವನ್ನು ಅನುಭವಿಸಿದೆ ;
ಸೋಲಿನೊಡನೆ ಸೆಣಸುವಾಗಿನ
ಸೊಗವನ್ನು ಅನುಭವಿಸಿದೆ ;
ಸೋಲು ಗೆಲವುಗಳನ್ನು ಮೀರಿದಾಗಿನ
ಮನಃಪ್ರಸಾದವನ್ನೂ ಅನುಭವಿಸಿದೆ ;
ಸಿರಿಯ ಸೆರೆಯಲ್ಲಿ ಸವೆದೆ,
ಬಡತನದ ಸೈಪನ್ನು ಸವಿದೆ,
ಸ್ತುತಿಯ ನಂಜನ್ನು ಗುಟುಕರಿಸಿದೆ,
ನಿಂದೆಯ ತನಿಯನ್ನು ಮುಕ್ಕಳಿಸಿದೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ಸೇವಾಜೀವನದ
ಶಿಕ್ಷೆಯನ್ನೂ
ಮುಗಿಸಲಿಹೆನಯ್ಯ
ಅನತಿ ದೂರದಲ್ಲಿ !

## ೪೯೨

ಶೈಶವ ಬಾಲ್ಯಗಳ ಸುಸಿಲಾಟವನ್ನು ನೋಡಿದೆ,
ಬಾಲ್ಯ ತಾರುಣ್ಯಗಳ ಕಣ್ಣುಮುಚ್ಚಾಲೆಯನ್ನು ನೋಡಿದೆ,
ತಾರುಣ್ಯ ವಾರ್ಧಕ್ಯಗಳ ಕಬಡ್ಡಿಯನ್ನು ಕಂಡೆ,
ತೆರಳುವ ಮಾಗಿ ಮರಳುವ ಸುಗ್ಗಿಗಳ ಸರಿಗಮವನ್ನು ಕೇಳಿದೆ,
ಭೂತ ವರ್ತಮಾನಗಳ ಬೀಳ್ಕೊಡುಗೆಯನ್ನು ನೋಡಿದೆ,
ನೋವು ನಲಿವುಗಳ ನೆರಳುಬೆಳಕಿನಾಟವನ್ನು ಕಂಡೆ,
ವಾರ್ಧಕ್ಯ ವೃದ್ಧಾಪ್ಯಗಳ ಕಿವಿಮಾತುಗಳನ್ನು,
ಮುಪ್ಪು ಸಾವುಗಳನ್ನು ಪಿಸುಮಾತುಗಳನ್ನಷ್ಟು ಕೇಳುವುದುಳಿದಿದೆ !
ಅದಕ್ಕೆ ಮೊದಲು, ಇನ್ನೂ ನೋಡಬೇಕಾದುದನ್ನೆಲ್ಲ ನೋಡಿಸು,
ಕೇಳಬೇಕಾದುದನ್ನೆಲ್ಲ ಕೇಳಿಸು,
ತಿಳಿಯಬೇಕಾದುದನ್ನೆಲ್ಲ ತಿಳಿಸು,
ಮಾಡಬೇಕಾದುದನ್ನೆಲ್ಲ ಮಾಡಿಸು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೯೩

ಇಕಾರಸನ ಕನಸು ನನಸಾಗಲು
ರೈಟ್ ಬಂಧುಗಳು ಬರುವವರೆಗೆ ಕಾಯಬೇಕಾಯಿತಯ್ಯ ;
ಕಣಾದನ ಕನಸು ವಿಶ್ವಮಾನ್ಯವಾಗಲು
ಕೋಪರ್ನಿಕಸ್ ಬರುವವರೆಗೆ ಕಾಯಬೇಕಾಯಿತಯ್ಯ ;
ಉಪನಿಷದುಷಿಗಳ ಕಾಣ್ಕೆ ಒಪ್ಪಿತವಾಗಲು
ಜಗದೀಶಚಂದ್ರಬೋಸ್ ಬರುವವರೆಗೆ ಕಾಯಬೇಕಾಯಿತಯ್ಯ ;
ಮಹಾವೀರರ ಅಹಿಂಸೆಯ ಅದ್ಭುತ ಶಕ್ತಿ ಸಿದ್ಧವಾಗಲು
ಬಾಪೂಜಿ ಬರುವವರೆಗೆ ಕಾಯಬೇಕಾಯಿತಯ್ಯ ;
    ಸ್ವತಂತ್ರಧೀರ ಸಿದ್ಧೇಶ್ವರಾ,
    ನನ್ನಲ್ಲಿ ನೀನು ಪ್ರಕಟವಾಗಲು
    ಆಯುಷ್ಯವೆಲ್ಲ ಪರಿತಪಿಸಿದರೂ ಸಾಲದಯ್ಯಾ !

## ೪೯೪

ನಿನಗೆ ಸೃಷ್ಟಿಕಾವ್ಯ ಬರೆವ ಬಯಕೆಯಾದಾಗ
ಲೆಕ್ಕಣಿಕೆ ಮಾಡಿಕೊಳ್ಳಯ್ಯಾ ನನ್ನನ್ನು ;
ನಿನಗೆ ನಾದಲೀಲೆ ಬೇಕೆನಿಸಿದಾಗ
ಕೊಳಲ ಮಾಡಿಕೊಳ್ಳಯ್ಯಾ ನನ್ನನ್ನು ;
ನೀನು ಚಿತ್ರ ಬರೆಯಲು ಬಗೆದಾಗ
ಕುಂಚ ಮಾಡಿಕೊಳ್ಳಯ್ಯಾ ನನ್ನನ್ನು ;
ನಿನಗೆ ಕುಣಿವ ಚಪಲವಾದಾಗ
ಕಾಲ್ಗೆಜ್ಜೆ ಮಾಡಿಕೊಳ್ಳಯ್ಯಾ ನನ್ನನ್ನು ;
``O mon doux Seignuer,
Apprends moi a etro
Ton instrument d'amour''
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಿಚ್ಛೆಗೆ ತಕ್ಕ ಉಪಕರಣ ಮಾಡಿಕೊಳ್ಳಯ್ಯಾ ನನ್ನನ್ನು !

## ೪೯೫

ನಿನ್ನ ಶರಣರ ಅಲಿಖಿತ ವಚನಗಳ ಧ್ವನಿವೀಚಿಗಳನ್ನು ಗ್ರಹಿಸುವ
ಗ್ರಾಹಕವಾಗಲಯ್ಯ ನನ್ನ ಕಿವಿ ;
ನಿನ್ನ ಶರಣರ ಅವ್ಯಕ್ತ ಆಕೃತಿಗಳನ್ನು ದರ್ಶಿಸುವ
ದೂರದರ್ಶನವಾಗಲಯ್ಯ ನನ್ನ ಕಣ್ಣು ;
ನಿನ್ನ ಶರಣರ ಅಪ್ರಕಟಿತ ವಿಚಾರಸುಮಗಳ
ಸೌರಭವನ್ನರಿವ ಗಂಧ ಗ್ರಾಹಿಯಾಗಲಯ್ಯ ನನ್ನ ನಾಸಿಕ ;
ನಿನ್ನ ಶರಣರ ಅನುಕ್ತ ಉಕ್ತಿಗಳ
ಧ್ವನಿಮುದ್ರಿಕೆಯಾಗಲಯ್ಯ ನನ್ನ ರಸನೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಯಲ ಬೆರೆತ ನಿನ್ನ ಶರಣರ
ಉಸಿರ ಅಲೆಗಳನ್ನರಿವ
ಕುಶಲಿಯಾಗಲಯ್ಯ ನನ್ನ ತ್ವಚ !

## ೪೯೬

ಮಾತಿನ ಬಸಿರೆ ಭಾವಶಿಶುವಿನ ಭಾರದಿಂದ ಬಸವಳಿದಿದ್ದಾಳೆ !
ಬೇನೆ ಪ್ರಾರಂಭವಾಗಿ ಬಹಳ ದಿನಗಳುರುಳಿವೆ–
ಹೆರಿಗೆಯೇಕೆ ಆಗದವ್ವಾ ಇನ್ನೂ ?
ಮದ್ದುಗಿದ್ದು ಕುಡಿಸೋಣವೆ ?
ಬೇಡ, ಹೆರಿಗೆಗೆ ಬದಲು ಹಲಿವುಳಿಕೆಯಾದೀತು !
ಶಸ್ತ್ರ ಶಲಾಕೆ ಬೇಡ, ಗಿಡಮೂಲಿಕೆ ಬೇಡ,
ಒಳಗೇ ತಿಣುಕುವ ಶಕ್ತಿ ವಿಕಸಿಸಲಿ ;
ಮಗುವಿನ ಮೊಗ ನೋಡಬೇಕೆಂಬ
ತಾಯ್ತನದ ತವಕ ಪ್ರಬಲಿಸಲಿ !
ಸ್ವತಂತ್ರಧೀರ ಸಿದ್ಧೇಶ್ವರನ ದಯದಿಂದ
ಸಹಜ ಸುಖಪ್ರಸವವೇ ಆದೀತು !

## ೪೯೭

ನಿನ್ನ ಪ್ರೇರಣೆಯ ಪುಂಗಿಯ ಸ್ವರಕ್ಕೆ
ನನ್ನ ನುಡಿಯ ಹೇಳಿಗೆಯಿಂದೆದ್ದು
ಹೆಡೆಯಾಡಲಯ್ಯ ಅರ್ಥನಾಗರ !
ಉಗುಳದಿರಲಿ ಅದು ಅನರ್ಥಗರಲವ !
ಆಗಲಯ್ಯ ಅದು ಸಮಾಜ ಶಿವನ ಆಭರಣ !
ದೋಷದ ಮೂಷಕನನ್ನು ನುಂಗಿ
ನೀಡಲಯ್ಯ ಲೇಸಿನ ಭಾಸುರ ರತ್ನವ!
ಪೌನಃಪುನ್ಯದ ಪರೆಯ ಕಳಚಿ
ತೋರಲಯ್ಯ ಹೊಸತಿನ ಹೊಗರನು !
ಒಮ್ಮೆಯಾದರೂ ಆಗಲಯ್ಯ
ಬೆನಕನ ಹೊಟ್ಟೆಯ ಕಟ್ಟಲು ಹುರಿ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೯೮

ಡಾಕ್ಟರರೇ ಅಸಾಧ್ಯವೆಂದ ವ್ಯಾಧಿಯನ್ನು
ಕಂಪೌಂಡರನು ವಾಸಿಗೊಳಿಸುವೆನೆಂಬಂತೆ,
ಪಾಣಿನಿಯೇ ಪರಿಹರಿಸದ ವ್ಯಾಕರಣ ಸಮಸ್ಯೆಗಳನ್ನು
ನಾಣಿಲಿಯ ಬಗೆಹರಿಸುವೆನೆಂದು ಗಳಹಿದಂತೆ,
ಆದಿಶಂಕರ, ಅಲ್ಲಮಪ್ರಭು, ಅರವಿಂದರು ಒರೆಯದ ಅಧ್ಯಾತ್ಮರಹಸ್ಯಗಳನ್ನು
ಅರೆಮರುಳ ಒರೆವೆನೆಂದು ಪರದಾಡುವಂತೆ,
ನ್ಯೂಟನ್ ಐನ್‌ಸ್ಟನ್ನರೂ ಬಿಡಿಸದ ವಿಜ್ಞಾನದ ಸಿಕ್ಕುಗಳನ್ನು
ಷಾರ್ಲಟನ್ನರು ಬಿಡಿಸುವೆವೆಂದು ಬಡಿವಾರ ಕೊಚ್ಚುವಂತೆ,
ಕೌಟಿಲ್ಯ ಪ್ಲೇಟೋ ಅರಿಯದ ರಾಜ್ಯಶಾಸ್ತ್ರ ಸೂತ್ರಗಳನ್ನು
ಹಳದಿ ಪತ್ರಿಕೆಯ ವರದಿಗಾರ ಅರಿತಿಹೆನೆಂದ ಸೊರಹುವಂತೆ
ಏನೇನೋ ಗೀಚುತ್ತ ಪೇಚಾಡುತ್ತಲಿಹೆನಯ್ಯಾ !
ನಿನ್ನ ನಾಮ ರವಿಕಿರಣ ನನ್ನ
ಬರಹದೊಳಗಣ ಮರಹಿನ ಕತ್ತಲೆಗೆ !
ಇದೇ ಧೈರ್ಯದಿಂದಲೇ ಬರೆವುದ ತೊರೆದಿಲ್ಲವಯ್ಯಾ –
ಸ್ವತಂತ್ರಧೀರ ಸಿದ್ಧೇಶ್ವರಾ !

## ೪೯೯

ಅಡಕಿಲ ಗಡಿಗೆಗಳ ಬುಡಕ್ಕೇ ಬಡಿಗೆ ಬೀಸಿದಂತಾಯಿತ್ತಯ್ಯ–
ನಿನ್ನ ಅಳಿಯ ಅಲ್ಲಮನ ವಚನಗಳನ್ನು ಇನ್ನೊಮ್ಮೆ ಓದಿದಾಗ !
"ವಚನ ರಚನೆಯ ರಂಜನೆಯ ಲೀಲೆಯನಾಡುವರು
ಗುಹೇಶ್ವರನಿಪ್ಪ ಗುಪ್ತವೆಂತೆಂದರಿಯರು !"
ನಾ ಬರೆದುದೆಲ್ಲ ರಂಜನೆಯ ಲೀಲೆಯಾಯಿತ್ತಲ್ಲದೆ
ಎಲ್ಲಿಯೂ ಮಾತು ಜ್ಯೋತಿರ್ಲಿಂಗವಾಗಲಿಲ್ಲವಯ್ಯಾ !
ನಿಜ, "ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ ?
ಕಾಮಿಸಿ, ಕಲ್ಪಿಸಿ, ಭಾವಿಸಿದಡೆ ಅದೇ ಭಂಗ !
ಭಾವಿಸುವ ಭಾವನೆಗಿಂತ ಸಾವುದೇ ಲೇಸು ಗುಹೇಶ್ವರ !"
ಇದನೋದಿ, "ಭಾವದ ಗುಸುಟು ಅದು ತಾನೆ ನಾಚಿ ನಿಂದಿತ್ತು !"
ಇನ್ನಾದರೂ, ಒಮ್ಮೆಯಾದರೂ "ನನ್ನ ನಾನರಿದು
ನುಡಿಯೆಲ್ಲ ಪರತತ್ತ್ವ" ವಾಗುವ ವರವ ಕರುಣಿಸಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೦

ಸಮವಸ್ತ್ರಗಳಲ್ಲೊಂದು ಸೊಗಸಿದ್ದರೆ
ಬಗೆಬಗೆಯ ಬಟ್ಟೆಗಳಲ್ಲೊಂದು ಸೊಬಗು ;
ಹಾಕಿ ಬೆಳೆಸಿದ ಉಪವನದಲ್ಲೊಂದು ಅಂದವಿದ್ದರೆ
ಸಿಕ್ಕಂತೆ ಬೆಳೆದ ಕಾಡಿನಲ್ಲೊಂದು ಚೆಂದ ;
ಸಾಕಿ ಬೆಳೆಸಿದ ಮನೆ ಗಿಳಿಯಲ್ಲೊಂದು ಮೋಡಿಯಿದ್ದರೆ
ಪಂಜರಕ್ಕೆ ಸಿಲುಕದ ವನ ಗಿಳಿಯಲ್ಲೊಂದು ಗಾಡಿ ;
ಏಕಾಂತದ ಪೂಜೆಯಲ್ಲೊಂದು ಮೋಡಿಯಿದ್ದರೆ
ಸಾಮೂಹಿಕ ನಮಾಜಿನಲ್ಲೊಂದು ಹಿರಿಮೆ ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಹಾಪುರುಷರ ವಾಗ್ವೈಭವದಲ್ಲೊಂದು ಪೆಂಪಿದ್ದರೆ
ನಿನ್ನ ಈ ಕಂದನ ಕಲಭಾಷೆಯಲ್ಲೊಂದು ಇಂಪಿರದೆ ?

## ೫೦೧

ತಾನು ಸುಟ್ಟುಕೊಟ್ಟ ರೊಟ್ಟಿಯ ತುಣುಕನ್ನೇ
ಮಗು ಮುರಿದು ತನ್ನ ಬಾಯೊಳಿಟ್ಟಾಗ
    ತಾಯಿಗೆಷ್ಟು ಹಿಗ್ಗು !?
ತಾನೇ ಜಾತ್ರೆಗೆಂದಿತ್ತ ರೊಕ್ಕದಲ್ಲಿಯೇ
ಮಗ ಉಳಿತಾಯ ಮಾಡಿ ಮರಳಿಕೊಟ್ಟಾಗ
    ತಂದೆಗೆಷ್ಟು ಹರುಷ !?
ತಾನು ಬಡಿದು ಕಲಿಸಿದುದನ್ನೇ
ಶಿಷ್ಯ ತನಗೊಪ್ಪಿಸಿದಾಗ
    ಗುರುವಿಗೆನಿತು ಆನಂದ !?
    ಸ್ವತಂತ್ರಧೀರ ಸಿದ್ಧೇಶ್ವರಾ,
    ನೀ ಪ್ರೇರಿಸಿದುದನ್ನೇ ನಾನು ಬರೆದಾಗ
    ನಿನಗೆ ಕುಗ್ಗೋ ಹಿಗ್ಗೋ?

## ೫೦೨

ಸ್ಫುರಿಸಿದಾಗ ಲಿಖಿಸಲಾಗದೆ
ವಿಸ್ಮರಿಸಿ ಹೋದ ವಚನಗಳೆ–
ನನ್ನ ಉಪೇಕ್ಷೆಯನ್ನು ಲಕ್ಷಿಸದೆ
ಇನ್ನೊಮ್ಮೆ ಬನ್ನಿ, ದಯವಿಟ್ಟು ಬನ್ನಿ !
ನೀವು ಬರುವ ದಾರಿಯನ್ನು ತೋರಿದರೆ
ನನ್ನ ನೋಟಗಳ ಬಿತ್ತುವೆ ಅದರುದ್ದಕ್ಕೂ !
ಆ ಹಾದಿಯಲ್ಲಿ ನಿಮ್ಮ ಹೆಜ್ಜೆಗಳು ಮೂಡಿದರೆ
ಮಜ್ಜನ ಮಾಡಿಸುವೆನವಕೆ ನನ್ನ ಕಂಬನಿಗಳಿಂದ !
ನಿಮಗೆ ಗೊತ್ತಿಲ್ಲವೆ ನಾನು ಪರಾಧೀನನೆಂಬುದು,
ಸಮಯವಿಹೀನನೆಂಬುದು, ದೀನನೆಂಬುದು ?
ನನ್ನ ತಪ್ಪನ್ನು ಮರೆತು ಬನ್ನಿ,
ಜೀವಿ, ಜೀವನ, ಜಗ, ಜಗದೀಶ್ವರನ ಕುರಿತು ಬನ್ನಿ,
ಜೀವ ಜೀವಾಳದಲಿ ಬೆರೆತು ಬನ್ನಿ,
ಸ್ವತಂತಧೀರ ಸಿದ್ಧೇಶ್ವರ ವಚನಗಳೇ, ಮತ್ತೆ ಬನ್ನಿ !
ಸ್ವತ್ವ ಕೆರಳಿಸಿ ಬನ್ನಿ, ಸತ್ವ ಅರಳಿಸಿ ಬನ್ನಿ,
ಚಿತ್ತ ಅಲರಿಸಿ ಬನ್ನಿ, ಮುತ್ತು ಉರುಳಿಸಿ ಬನ್ನಿ,
ಬನ್ನಿ, ಬನ್ನಿ, ಬನ್ನಿ !

## ೫೦೩

ತಿಳಿವಿನ ಹೊಳಲಿನ
ಬೀದಿ ಬೀದಿಯ ಸಗಣಿಯ ಶೇಖರಿಸಿ
ನಿನ್ನ ಶರಣರ ಮನೆಗಳ ಗಂಜಳ ಬೆರೆಸಿ,
ಈ ಬೆರಣಿಗಳ ಬಡಿದಿಟ್ಟಿಹೆನಯ್ಯ !
ಇವು ನಿನ್ನವರ ಒಲೆಗಳಿಗೆ
ಉರುವಲವಾಗುವಂತೆ ಕರುಣಿಸಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೪

ಇನ್ನೂ ಎರಡು ತುತ್ತು ಉಣ್ಣುವಂತಿರುವಾಗಲೇ
ಊಟ ಮುಗಿಸಬೇಕಯ್ಯ ;
ಇನ್ನೂ ಎರಡು ದಿನ ಇರಲಿ ಎನ್ನುವಾಗಲೇ
ಅತಿಥಿತನ ಮುಗಿಸಬೇಕಯ್ಯ ;
'ಇನ್ನೊಮ್ಮೆ ಆರಿಸಿ ಬರಲಿ' ಎಂಬಾಗಲೇ
ಚುನಾವಣೆಗೆ ಶರಣು ಹೊಡೆಯಬೇಕಯ್ಯ ;
'ಇನ್ನಷ್ಟು ದಿನ ಉಳಿದಿರಲಿ' ಎನ್ನುತ್ತಿರುವಾಗಲೇ
ಅಧಿಕಾರಕ್ಕೆ ಕೈಮುಗಿಯಬೇಕಯ್ಯ ;
'ಇನ್ನೂ ಎರಡು ಪುಸ್ತಕ ಬರೆಯಲಿ' ಎನ್ನವಾಗಲೇ
ಬರೆವಣಿಗೆಗೆ ಎಳ್ಳು ನೀರು ಬಿಡಬೇಕಯ್ಯ ;
ಇನ್ನೂ ಈ ದೇಹ ದುಡಿಯುತ್ತಿರುವಾಗಲೇ
ನಿನ್ನಡಿಗೆ ಮುಡಿಪಾಗಬೇಕಯ್ಯ– ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೫

ಬದುಕಿಸಲಾರದುದು
ಬದುಕಿದೆಯೆಂದು
ಹೇಗೆ ಹೇಳುವುದಯ್ಯ ?
'ಬದುಕು, ಬದುಕಗೊಡು,'
ಎಂಬುದಲ್ಲ ಬದುಕಿನ ಸೂತ್ರ ;
'ಬದುಕಿಸು, ಬದುಕು,' ಎಂಬುದೇ
ಸುವರ್ಣಸೂತ್ರವಯ್ಯ ;
``Because I live, ye shall live also,''
ಎಂದೆನ್ನಿಸದಿರಯ್ಯ ;
``Because you live, I shall also live,''
ಎಂದೆನ್ನಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೬

ಭಕ್ತಾಗ್ರೇಸರಾ, ಕವೀಶ್ವರಾ, ಹರೀಶ್ವರಾ–
‘ಪೋಗೆನೆ ಪೋಪ, ಬಾರೆನಲು ಬರ್ಪ....’
ಸೇವಾವೃತ್ತಿಯನ್ನು ಎಷ್ಟು ಬೇಗ ಕೊಡಹಿ
ಬಿಡುಗಡೆಯನ್ನು ಪಡೆದೆಯಯ್ಯಾ ನೀನು ?
ಮೂರು ದಶಕಗಳು ಮುಗಿದರೂ
ಮುಗಿಯದಿದೆಯೆನ್ನ ಸೇವಾವೃತ್ತಿ ;
ಹೋಯಿತದರಲ್ಲಿ ಇದ್ದ ಸತ್ವವೆಲ್ಲ ಬತ್ತಿ !
ಈಗುಳಿದಿಹುದು ಕಬ್ಬಲ್ಲ, ಹಿಪ್ಪೆ ;
ಗೊರಟ, ಕರಟ, ಚರಟ, ಸಿಪ್ಪೆ ;
ನಿನ್ನ ನೈತಿಕ ಧೈರ್ಯದ
ನೂರರಲ್ಲೊಂದು ಪಾಲು ನನ್ನೊಳಿದ್ದಿದ್ದರೆ...?
ಇದ್ದಿದ್ದರೆ...ದಿದ್ದರೆ....ದ್ದರೆ...ರೆ!
ಹೊಟ್ಟೆಗೆ ದಾಸರಾದವರಲ್ಲಿ ದಿಟ್ಟತನವಿರಬಹುದೆ ?
ಸಂಬಳಕ್ಕೆ ಮಾರಿಹೋದವರಲ್ಲಿ ಗಟ್ಟಿತನವಿರಬಲ್ಲುದೆ ?
ಒತ್ತೆಯಿಟ್ಟ ಒಡವೆ, ಅಡವಿಟ್ಟ ಸರಕು,
ಒಡನೆ ದೊರೆಯದ ಇಡುಗಂಟಾಗಿ
ಇನ್ನೆಷ್ಟು ದಿನ ದೇಕಲಯ್ಯಾ–
ಹುಲುಬಾಳು ನೂಕಲಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ?

## ೫೦೭

ಅರೆಮತ್ತಿನಲ್ಲಿಯೇ ಅರುವತ್ತು ವರುಷಗಳು ಕಳೆದುವಯ್ಯಾ !
ನಿನ್ನ ಅರುಳು ದೊರೆಯದೆ ಹುರುಳು ದೊರೆವುದೆಂತು ?
ಹುರುಳು ತಿರುಳಿಲ್ಲದ ಈ ಮರುಳು ಬಾಳಿನಲ್ಲಿ
ಹುಡುಕಿದರೂ ಸಿಕ್ಕವು ಹದ ಹದುಳಗಳು,
ಹೊಲಬು ಹೊನಹುಗಳು !
ನೀನಿಂದು ಒಲಿದೆಯೋ, ಇಂದಿನಿಂದಲೆ ಹೊಸ ಬಾಳು ನನಗೆ !
ಇಲ್ಲದಿರೆ ಇಲ್ಲಮೆಯೆ ಎಲ್ಲ ಕೊನೆಗೆ !
ಇಂದೆ ಒಲಿ, ಇಂದೆ, ಒಲಿ, ಈಗಲೇ ಒಲಿ–
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೮

ಆಯುಷ್ಯವೆಲ್ಲ ಅನಾರೋಗ್ಯವನ್ನು ಸಹಿಸಿದೆ,
ಬೆಂಕಿಯಲ್ಲದ ಬೆಂಕಿಯಲ್ಲಿ ದಹಿಸಿದೆ,
ಅನಾರೋಗ್ಯವೂ ನಿನ್ನ ದಾನವೆಂದು ಗ್ರಹಿಸಿದೆ,
ನೀನಿತ್ತ ಕಾಯಕವನ್ನು ಕೈಲಾದನಿತು ನಿರ್ವಹಿಸಿದೆ !
ಇನ್ನೇನ ಮಾಡಲಾಪೆನಯ್ಯಾ ನಾನು ?
ಓದುವ ಹುಚ್ಚನ್ನಿತ್ತು ಬಿಡುವಿಲ್ಲದಂತೆ ಮಾಡಿದೆ ;
ಬರೆವ ಹುಚ್ಚನ್ನಿತ್ತು ಹೊತ್ತು ಸಿಕ್ಕದಂತೆ ಮಾಡಿದೆ ;
ಸೇವೆಯ ಹುಚ್ಚನ್ನಿತ್ತು ಸ್ವಾಸ್ಥ್ಯವಿಲ್ಲದಂತೆ ಮಾಡಿದೆ !
ನಿನಗೇ ಇಷ್ಟವಿಲ್ಲದಿರೆ ನನಗಾವ ನಷ್ಟ ?
ಸಾಧನೆಗೆ ಸಾಧ್ಯತೆ ಇಲ್ಲವಾದುದೇ ಕರಕಷ್ಟ !
ಒಂದು ಮಾತ್ರ ಸ್ಪಷ್ಟ ;
ನೀನಿತ್ತುದರಲ್ಲಿಯೇ ನಾನು ತುಷ್ಟ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೦೯

ಈ ಬಗೆಯ ಬಾನುಲಿಯಲ್ಲಿ ಸುಮಧುರ ಸಂಗೀತ ಒಮ್ಮೊಮ್ಮೆ ;
ಜಾಹೀರಾತು, ನಿರರ್ಥಕ ಮಾತು, ತೀತೀ ತೂತೂ ಇನ್ನೊಮ್ಮೆ !
ಗ್ರಾಹಕದ ಯಾವ ಬಿರಡೆಯನ್ನು ತಿರುಗಿಸಿದರೂ ಇಂಚರದ ಸಂಚಾರ ಒಮ್ಮೊಮ್ಮೆ,
ಎಲ್ಲ ಬಿರಡೆಗಳನ್ನು ತಿರುಗಿಸಿಯೂ ಸವಿಗೆ ಸಂಚಕಾರ ಇನ್ನೊಮ್ಮೆ !
ಅದನು ತಿರುಗಿಸಿ, ಇದನು ತಿರುಗಿಸಿ
ಗರ ಗರ ಗರ ಸ್ವರ ಕೇಳಿ ತಲೆ ಗಿರ ಗಿರ ಗಿರ ತಿರುಗಿದಾಗ
ಸ್ವತಂತಧೀರ ಸಿದ್ಧೇಶ್ವರ,
'ಸ್ವತಂತ್ರಧೀರ ಸಿದ್ಧೇಶ್ವರ' ಎಂಬ ಸ್ವರ
ಕಿವಿಗೆ ಬಿದ್ದು ಶಾಂತನಾಗುವೆನಯ್ಯಾ,
ನಿಶ್ಚಿಂತನಾಗುವೆನಯ್ಯಾ,
ಜೀವಂತನಾಗುವೆನಯ್ಯಾ !

## ೫೧೦

ಲೇಸೆನಿಸಿಕೊಂಡು ಒಂದು ದಿನ ಬದುಕಿದರೂ ಸಾಕೆಂದೆ,
ಓ ತಂದೆ, ಬಡವರ ಬಂಧು ಬಸವೇಶ್ವರಾ !
ಲೇಸಿನ ಲವಲೇಶಮೂ ಇಲ್ಲದೆ ಬದುಕಿದ್ದೇನೆ,
ಲೇಸಿನ ವಾಸನೆ ಕೂಡ ಬಡಿಯದಂತೆ ಬದುಕಿದ್ದೇನೆ,
ಲೇಸಿಗೆ ಹೇಸಿಗೆಯೆನಿಸುವಂತೆ ಬದುಕಿದ್ದೇನೆ–
ಅರ್ಧ ಶತಮಾನಕ್ಕೂ ಮಿಕ್ಕಿ,
ಲೇಸು ಅಳುತಿದೆ ಬಿಕ್ಕಿ ಬಿಕ್ಕಿ !
ನಿನ್ನ ವಚನಗಳನ್ನು ಓದಿದಾಗೊಮ್ಮೆ
ನನಗೆ ನಾನೇ ಅಸಹ್ಯವೆನಿಸುತ್ತೇನೆ,
ಲೇಸಿಗೆ ಬಾಗಿ ಬಾಳಲು ಸಂಕಲ್ಪಿಸುತ್ತೇನೆ,
ಪಣ ತೊಡುತ್ತೇನೆ,
ಆಣೆಯಿಟ್ಟುಕೊಳ್ಳುತ್ತೇನೆ,
ಮತ್ತೆ ನಾಯಬಾಲವಾಗುತ್ತೇನೆ!
ಈಶನ ಮೀಸಲಪ್ಪ ಭಕ್ತ ಬಸವಣ್ಣ,
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚುವಂತೆ
ಲೇಸನೇ ಹಾಸಿ, ಲೇಸನೇ ಹೊದೆದು,
ಲೇಸನೆ ಉಂಡು, ಲೇಸನೇ ಉಸಿರಾಡಿಸಿ
ಲೇಸಾಗಿ ಬಿಡುವ ಬಗೆಯ ಕಲಿಸಯ್ಯ,
ಕಲಿಸಿ ಬಾಳಿಸಿ ಬೆಳಗಿಸಯ್ಯಾ !

## ೫೧೧

ನನಗೆ ಬಯಸದೆ ಬಂದ ಪದವಿಗಳೆಲ್ಲ
ನಿನ್ನ ಕರುಣೆಯ ಕುರುಹಲ್ಲದೆ
ನನ್ನ ಘನತೆಯ ಗುರುತಲ್ಲ ತಂದೆ !
ಹಿಡಿ ಮಣ್ಣಿನಲ್ಲಿ ಕಿಡಿಯೊಂದನಿರಿಸಿ ಕಳಿಸಿದೆ–
ಕಿಡಿ ಪುಟಗೊಂಡು ಅಗ್ನಿಯಾಗಿ,
ಈಗ ಬೆಳಕಾಗಲು ಹಾರೈಸುತ್ತಿದೆಯಯ್ಯಾ!
ಬೆಳಕಿಗೆ ಬೆಳಕಾದ ನೀನೇ
ಬೆಳಕಾಗಿಸಯ್ಯ ಇದನು–ಸ್ವತಂತ್ರಧೀರ ಸಿದ್ಧೇಶ್ವರಾ!

## ೫೧೨

ಮೂರೇ ಮೂರು ದುಸ್ಸಹ ದೃಶ್ಯಗಳನ್ನು ನೋಡಿ
ಅರಮನೆ, ರೂಪವತಿ ಸತಿ, ಸಿರಿಮೊಗದ ಮಗ–
ಎಲ್ಲರನ್ನೂ, ಎಲ್ಲವನ್ನೂ ತೊರೆದು ಹೊರಬಿದ್ದೆ ಬುದ್ಧದೇವ !
ಸಾವಿರ ಸಾವಿರ ಕರಾಳ ದೃಶ್ಯಗಳನ್ನು ನೋಡಿಯೂ
ಹಿಡಿ ಸಂಬಳದ ಕೆಲಸಮೊಂದ ಬಿಡಲಾಗದ ಹೇಡಿ ನಾನು !
ಒಳಗಿದ್ದು ಹೋರಾಡುವ ಧೈರ್ಯವಿಲ್ಲ,
ಹೊರಬಿದ್ದು ಶುದ್ಧವಾಗುವ ಸ್ಥೈರ್ಯವಿಲ್ಲ,
ಅತ್ತೂ ಇಲ್ಲ, ಇತ್ತೂ ಇಲ್ಲ,
ಎತ್ತೋ ಹೊರಟಿಹೆನಯ್ಯ
ಗೊತ್ತು ಗುರಿಯಿಲ್ಲದೆ !
'ಸಂಘಂ ಶರಣಂ ಗಚ್ಛಾಮಿ,' ಎಂಬೆನೆ?
ಸಂಘವೇ ಉಳಿದಿಲ್ಲ !
'ಧರ್ಮಂ ಶರಣಂ ಗಚ್ಛಾಮಿ,' ಎಂಬೆನೆಯ್ಯಾ!
ಧರ್ಮವೆಂಬುದೇ ತಿಳಿದಿಲ್ಲ !
'ಬುದ್ಧಂ ಶರಣಂ ಗಚ್ಛಾಮಿ,' ಎಂಬೆನಯ್ಯಾ !
ಸ್ವತಂತ್ರಧೀರ ಸಿದ್ಧೇಶ್ವರನೆ
ಗೊತ್ತುಗುರಿ ಗುರು ದಾರಿಯೆಂದು
ನಂಬಿ ನಡೆವೆನಯ್ಯಾ !

## ೫೧೩

ಉರಿವ ಜಲಜನಕ, ಉರಿಸುವ ಆಮ್ಲಜನಕ–
ಎರಡೂ ಸೇರೆ ನಂದಿಸುವ ನೀರಾಯಿತ್ತು ;
ಉರಿವ ಕರ್ಮ, ಉರಿಸುವ ಜ್ಞಾನ–
ಎರಡೂ ಸೇರೆ ಬದುಕಿಸುವ ಭಕ್ತಿಯಾಯಿತ್ತಯ್ಯ !
ಕುರುಡು ಭಕ್ತಿಯಲ್ಲ,
ಕುರುಡುಗೊಳಿಸುವ ಭಕ್ತಿಯಲ್ಲ–
ಬದುಕಿನ ಬರಡನಳಿಸುವ ಭಕ್ತಿ,
ಪಶ್ಯಂತಿ ಭಕ್ತಿ!
ಇಂಥ ಭಕ್ತಿಯನೆ ನೀಡಿ
ಮುಕ್ತಿಯ ಬಿಸಾಡಾಚೆಗೆ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೫೧೪

ಪದವೀದಾನ ಸಮಾರಂಭಕ್ಕೆ ಕರೆದಿರುವರಯ್ಯ–
ಮತ್ತೊಂದು ಪದವಿಯ ಕೊಡುವರಂತೆ!
ನಿನ್ನ ಪದಭಕ್ತನಾಗಿಹುದೆ ಪರಮಪದವಿ ನನಗೆ–
ಮತ್ತೇತಕಯ್ಯ ಮತ್ತೊಂದು ಪದವಿ ?
ಮಾದಾರ ಚೆನ್ನಯ್ಯನ ಮನೆಯ ಮಗನ
ಊಳಿಗದವನೆಂಬ ಪದವಿ ಸಾಲದೆ ?
ಡೋಹರ ಕಕ್ಕಯ್ಯನ ಕಿಂಕರರ ಕಿಂಕರರ
ಕಿಂಕರನೆಂಬ ಪದವಿ ಸಾಲದೆ ?
ಶರಣ ಹರಳಯ್ಯನ ಲೆಂಕರ ಲೆಂಕರ
ಲೆಂಕನೆಂಬ ಪದವಿ ಸಾಲದೆ ?
ಶಿವನಾಗಮಯ್ಯ ಶ್ವಪಚಯ್ಯರ ದಾಸರ ದಾಸರ
ದಾಸನೆಂಬ ಪದವಿ ಸಾಲದೆ ?
ಮತ್ತೇಕೆ ಕೊಡುವರೋ ಮತ್ತೊಂದು ಪದವಿಯನು,
ಹೊಸದೊಂದು ಉಪಾಧಿಯನು !
ಬಯಸದೆ ಬಂದ ಲಿಂಗಭೋಗವಿದ
ಬಿಡುವಂತೆಯೂ ಇಲ್ಲ, ಹಿಡಿಯುವಂತೆಯೂ ಇಲ್ಲ !
ನನ್ನ ಮೂಲಕ ನಿನ್ನವರಿಗೆ ಸಲ್ಲಿಸಿದನು–
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೧೫

ನೀರಿನಲ್ಲಿ ಈಸುವುದು ಮೇಲೋ,
ಹರಿಗೋಲಿನಲ್ಲಿ ತೇಲುವುದು ಮೇಲೋ ?
ಗಿಡದಲ್ಲಿ ಗೂಡು ಕಟ್ಟುವುದು ಮೇಲೋ,
ಗಗನದಲ್ಲಿ ಹಾರಾಡುವುದು ಮೇಲೋ ?
ಚೆಲುವಿನೊಡನೆ ಚೆಲ್ಲಾಟ ಮೇಲೋ
ಕರ್ತವ್ಯದೊಡನೆ ಕುಸ್ತಿ ಮೇಲೋ ?
ಅರಿತು ಮರೆಯುವುದು ಮೇಲೋ
ಮರೆತು ಅರಿಯುವುದು ಮೇಲೋ ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಮಾಡುವ ಭಕ್ತಿ ಮೇಲೋ
ನೀನು ನೀಡುವ ಮುಕ್ತಿ ಮೇಲೋ ?

೫೧೬

ಬಂದು ಬಾಗಿಲ ತೆರೆಯುವುದರೊಳಗಾಗಿ
ಹೋಗಿ ಬಿಡುವ ನೀನು
ಬಂದು ಬಾಗಿಲ ತಟ್ಟುವಿಯಾದರೂ ಏಕೆ ?
ನಿದ್ರೆ ತಿಳಿವ ಮುನ್ನವೇ ಎದ್ದು
ಕದ್ದು ಹೋಗುವ ನೀನು
ಸದ್ದು ಕೇಳುವ ಹಾಗೆ ನಡೆವೆಯಾದರೂ ಏಕೆ ?
ಏನ ಮಾತನಾಡುವುದೆಂದು ಜಾನಿಸುವಷ್ಟರಲ್ಲಿ
ಮಾಯವಾಗಿ ಬಿಡುವ ನೀನು
ಮುಸುಕಿನಾಚೆ ನಿಂತು ಪಿಸುಗುಟ್ಟುವಿಯೇಕೆ ?
ಕಾಣುವ ತವಕದಿಂದ ಕಣ್ಣೊರೆಸಿಕೊಳ್ಳುವಷ್ಟರಲ್ಲಿ
ಕಾಣೆಯಾಗಿಬಿಡುವ ನೀನು
ಕನಸಿನಲ್ಲಿ ಅಲೆದ ಹಾಗೆ ಸುಳಿದುಹೋಗುವಿಯೇಕೆ ?
ಏನಾದರೂ ಬೇಡಬಹುದೆಂಬ
ಭಯವೆ ನಿನಗೆ ?
ಏನಾದರೂ ತೋಡಿಕೊಳ್ಳಬಹುದೆಂಬ
ಭೀತಿಯೆ ನಿನಗೆ ?
ಭಯ ಬೇಡ, ಭೀತಿ ಬೇಡ,
ಏನನೂ ಬೇಡೆ, ಯಾತಕ್ಕೂ ಕಾಡೆ,
ಯಾವುದನ್ನೂ ತೋಡಿಕೊಳ್ಳೆನಯ್ಯಾ !
ನೋಡಿ, ನಲಿವೆ ! ಅಷ್ಟೆ !
ಒಂದೇ ಸಲ, ಒಂದೇ ಕ್ಷಣ
ಕಾಣಿಸಿಕೊಳ್ಳಾ,
ಸ್ವತಂತ್ರಧೀರ ಸಿದ್ಧೇಶ್ವರಾ !

## ೫೧೭

ಸ್ವತಂತ್ರಧೀರ ಸಿದ್ಧೇಶ್ವರ, ಪ್ರಿಯಕರ,
        ನೀನೂ ಹಲವು ದಾರಿಯಿಂದ ಬಂದೆ,
        ನಾನೂ ಹಲವು ದಾರಿಯಿಂದ ಬಂದೆ,
        ಆದರೆ, ಸಂಕೇತ ಸ್ಥಾನದಲ್ಲಿ
                ಒಮ್ಮೆ ನೀನಿರಲಿಲ್ಲ–
                ಒಮ್ಮೆ ನಾನಿರಲಿಲ್ಲ !
                ನಿನಗೂ ಮಿಲನದ ಬಯಕೆ,
                ನನಗೂ ಮಿಲನದ ಬಯಕೆ,
        ಆದರೆ, ನನ್ನ ಬಯಕೆ ನಿನ್ನ ಬಯಕೆ
                ಒಮ್ಮೆಯೂ ಒಂದಾಗಲಿಲ್ಲ,
                ಮದುವೆಯ ಬದುಕು ಚೆಂದಾಗಲಿಲ್ಲ !
        ಹೀಗೆಯೇ ಸಮಾನಾಂತರ ರೇಖೆಗಳಂತೆ
                ಸಾಗಲೇನಯ್ಯ ಸತಿಪತಿ ಸಂಬಂಧ ?
                ಸಾಕಾಯ್ತು ಬರಿ ಬ್ರಹ್ಮಗಂಟಿನ ಬಂಧ,
                        ಬೇಕಿನ್ನು ಬಾಹು ಬಂಧ !

## ೫೧೮

ನನ್ನ ನಯನಗಳು ನೀರಡಿಸಿವೆ ನಲ್ಲ–
ನಿನ್ನ ಅಮೃತ ಹಾಸವ ಬೀರಿ, ತೋರಿ ತಣಿಸು ;
ನನ್ನ ಅಂಗಾಂಗಗಳು ಹಸಿದಿವೆ ನೀರ–
ಸರ್ವಾಂಗಾಲಿಂಗನ ನೀಡಿ ಸಂತೃಪ್ತಗೊಳಿಸು ;
ನನ್ನ ಅಧರಗಳು ಅರತು ಬರತಿವೆ ಚೆನ್ನ–
ನಿನ್ನ ಸವಿಮುತ್ತಿನ ಜೇನನೆರೆದು ಸಾಂತ್ವನಗೊಳಿಸು :
ನನ್ನ ಕರ್ಣಗಳು ಕಾತರಿಸಿವೆ ಮನದನ್ನ –
ನಿನ್ನ ಸುಸಿಲ ಪಿಸುನುಡಿಗಳಿಂದ ಸಂತವಿಡು ;
ಎನ್ನ ಸರ್ವಾಂಗಗಳು ನಿನ್ನ ಸವಿ ಸೋಂಕಿಗಾಗಿ ಕಾದು ಕಾದಿವೆ
        ನನ್ನ ರನ್ನ ಸ್ವತಂತ್ರಧೀರ ಸಿದ್ಧೇಶ್ವರಾ,
        ಸುಧಾವರ್ಷವಾಗಿ ಸುರಿ, ಸಂಜೀವಿನೀಸ್ಪರ್ಶವಾಗಿ ಇಳಿ–
                ಅವುಗಳ ಮೇಲೆ !

೫೧೯

ಸಿಂಗರಿಸಿಕೊಂಡುದೇನೋ ಸರಿ, ಮದವಳಿಗೆ–
ದೂರವಿಲ್ಲ ಮಾಂಗಲ್ಯಧಾರಣೆಯ ಗಳಿಗೆ !
ಆದರೆ, ಬರುವನೇ ಮದವಳಿಗ ಅಷ್ಟರೊಳಗೆ,
ಧಾವಿಸುವನೇ ನಿನ್ನ ಬಳಿಗೆ ?
ದಾರಿಯುದ್ದಕ್ಕೂ ಮರಮಳೆಯಂತೆ,
ಕೆರೆಕಟ್ಟೆಗಳೆಲ್ಲ ಒಡೆದು ದಾರಿಯೆಲ್ಲ ನೀರೇ ನೀರಂತೆ,
ಸೇತುವೆಗಳು ಕುಸಿದು ವಾಹನ ಸಂಚಾರ ಸ್ಥಗಿತವಂತೆ,
ವಿಮಾನ ಸಹ ಹಾರುವುದೂ ಇಳಿವುದೂ ಅಸಾಧ್ಯವಂತೆ !
ಸಿಂಗರಿಸಿಕೊಂಡೇನೋ ನಿಂತೆ,
ನಿಂತಂತೆ 'ಬರುವನೋ ಬಾರನೋ' ಎಂಬ ಚಿಂತೆ !
ಚಿಂತಿಸದಿರು ಮದವಳಿಗೆ–
ಮೊದಲು ನಿನ್ನ ಸೊಬಗು ಸಿಂಗರದ ಮದವಳಿಗೆ !
ಮರೆ ಉಡುಪು ಒಡವೆಗಳ,
ಬಿಡು ಪಸದನದ ಗೊಡವೆಗಳ !
ಮದವಳಿಗನಲ್ಲಿಯೇ ಮನ ನೆಟ್ಟು ಹೋಗಲಿ,
ನಾನೆಂಬ ಭಾವನೆ ಬಿಟ್ಟು ಹೋಗಲಿ,
ರೂಪ ಶೃಂಗಾರಗಳ ಹಮ್ಮು ಸುಟ್ಟು ಹೋಗಲಿ !
ಆಗ ಬಂದೇ ಬರುವನು ಮದವಳಿಗ–
ಅಡ್ಡ ನಿಂತರೂ ಅಡ್ಡಿಗಳ ಬಳಗ !
ಸ್ವತಂತ್ರಧೀರ ಸಿದ್ಧೇಶ್ವರನ ದಯದಿಂದ
ನೂರು ವಿಘ್ನಗಳ ಮೀರಿ,
ಹಾರಿ, ತೂರಿ, ಸಾರಿ ಬರುವನವ ಮದವಳಿಗೆ–
ಮೊದಲು ನಿನ್ನ ಸೊಬಗು ಸಿಂಗರಗಳ ಮದವಳಿಗೆ !

## ೫೨೦

ನಲ್ಲನ ನಲ್ಮೆಯನ್ನೆಂತು ಗಳಿಸುವುದೆಂದು
ಕಿಂಕುರ್ವಾಣತೆಗೀಡಾಗಿರುವೆಯಾ, ಕೆಳದಿ ?
        ಕೇಳು, ಕಿವಿಗೊಟ್ಟು ಕೇಳು–
ಅನಂಗ ಸಂಗದಿಂದಲ್ಲ, ಆಲಿಂಗನ ಚುಂಬನಗಳಿಂದಲ್ಲ,
ಸೊಬಗು ಸಿಂಗಾರಗಳಿಂದಲ್ಲ, ಸರಸಸಲ್ಲಾಪಗಳಿಂದಲ್ಲ,
ಒನಪು ಒಯ್ಯಾರಗಳಿಂದಲ್ಲ, ಬಿಂಕ ಬಿನ್ನಾಣಗಳಿಂದಲ್ಲ–
        ಇವೆಲ್ಲ ಸೋತು ಶರಣಾಗತವಾದಾಗ
        ಕಂಗಳ ಸಿಂಪಿನಿಂದೊಗೆವ ಕಂಬನಿಯ ಮುತ್ತುಗಳನ್ನರ್ಪಿಸು,
ಸೆರೆ ಬಿಗಿದ ಕೊರಳಿನಿಂದುದಿಸುವ ಗದಗದಿಕೆಗಳನ್ನು ಸಮರ್ಪಿಸು,
        ನಿದ್ರಾವಿಹೀನ ಮಧ್ಯರಾತ್ರಿಯ
        ನಿಟ್ಟುಸಿರುಗಳ ನೈವೇದ್ಯವನ್ನರ್ಪಿಸು !
ಆಗ ಸ್ವತಂತ್ರಧೀರ ಸಿದ್ಧೇಶ್ವರನೊಲಿಯದಿರಲಾರ !

## ೫೨೧

ನಿನಗೆ ವಿಧುರನಾಗುವ ಭಯವಿದ್ದರೂ ಇರಬಹುದು,
ನನಗೆ ಮಾತ್ರ ವಿಧವೆಯಾಗುವ ಭಯವಿಲ್ಲ ನಲ್ಲ !
ನನಗೆ ಮುತ್ತೈದೆಯ ಮರಣ ನಿಶ್ಚಿತ !
ನಿನಗೋ, ನಿಮಿಷ ನಿಮಿಷಕೂ ನೂರು ಸಲ ವಿಧುರತ್ವ,
        ನಿಮಿಷ ನಿಮಿಷಕೂ ನೂರು ಸಲ ಮರುಮದುವೆ!
        ಹುಟ್ಟಿದ, ಹುಟ್ಟುವ ಹೆಣ್ಣು ಗಂಡುಗಳ ಗಂಡನಾಗಿಯೂ
        ಅವಿಚ್ಛಿನ್ನ ದಾಂಪತ್ಯಸುಖದಿಂದ
                ವಂಚಿತನಾದ ನಿನಗೆ
                ನನ್ನ ಕನಿಕರದ ಕಾಣಿಕೆ–
                ಸ್ವತಂತ್ರಧೀರ ಸಿದ್ಧೇಶ್ವರಾ !

## ೫೨೨

ಇದುವರೆಗೆ ಯಾಂತ್ರಿಕವಾಗಿ
        ನಿನ್ನ ಪೂಜೆ ಮಾಡಿದೆ :
ನಲ್ಲಿಯ ನೀರು, ಪೇಟೆಯ ಹೂವು,
        ಅಂಗಡಿಯ ಅಗರುಬತ್ತಿ,
ಕಾಳಸಂತೆಯ ಕಾಳಿನ ನೈವೇದ್ಯಗಳಿಂದ !
        ಇಂದೆನ್ನ ಕಲಮಲದ ಕಂಬನಿಗಳಿಂದಲೇ
                ನಿನಗೆ ಅಭಿಷೇಕ,
ಅನಿಮಿಷ ನಯನಗಳೇ ಕುಸುಮಗಳು,
ಬಿಸಿಯುಸಿರೇ ಧೂಪ ಧೂಮ್ರ,
ಗದಗದಿಕೆಗಳೇ ಮಂತ್ರಗಳು,
ಸಂಪೂರ್ಣ ಶರಣಾಗತಿಯೇ ನೈವೇದ್ಯವಯ್ಯ !
ಇದುವರೆಗೆ ಪೂಜೆ ಮಾಡಿದೆ,
ಇಂದು ಪೂಜೆ ನಾನಾದೆ,
        ಸ್ವತಂತ್ರಧೀರ ಸಿದ್ಧೇಶ್ವರಾ !

೫೨೩

'ಯಾರು ಬಂದವರು ?'
ಎಂದು ಕೇಳಿದರೇನಣ್ಣ?
ಭೇಟಿಯ ಚೀಟಿಯ ಅಚ್ಚು ಹಾಕಿಸಿಲ್ಲ,
ದೊಡ್ಡವರ ಶಿಫಾರಸುಪತ್ರ ತಂದಿಲ್ಲ,
ಹುಂಡಿಯಲ್ಲಿ ಹಾಕಲು ಹಣದ ಚೀಲ ತಂದಿಲ್ಲ,
ನನ್ನ ಹೆಸರಿಗಂತೂ ಬೆಲೆಯಿಲ್ಲ!
ಹೋಗಿ ಹೇಳು,
ಮಾದಾರ ಚೆನ್ನಯ್ಯನ ಮನೆಯ ಮಗ
ಬಂದಿಹನೆಂದು ಹೇಳು ;
ಡೋಹರ ಕಕ್ಕಯ್ಯನ ಡಿಂಗರಿಗ
ಬಂದಿಹನೆಂದು ಹೇಳು ;
ಹರಳಯ್ಯನ ಕರುಣದ ಕಂದ
ಬಂದಿಹನೆಂದು ಹೇಳು ;
ಅಲ್ಲಮ ಅಕ್ಕಮಹಾದೇವಿಯರ
ಅಡಿಯಾಳು ಬಂದಿಹನೆಂದು ಹೇಳು !
'ಸರ್ವರೂ ಸಂಗಸ್ವರೂಪರು,
ನಾನೊಬ್ಬನೇ ಭಕ್ತ'ನೆಂದ
ಬಸವನ ಭಕ್ತ ಬಂದಿಹನೆಂದು ಹೇಳು !
ಬರಹೇಳಬಹುದು ಒಳಗೆ,
ಬರಗೊಡಬಹುದು ಬಳಿಗೆ !

೫೨೪

ಎಲ್ಲ ತನುಗಳ ಮನೆಗಳ ಒಳಗಡೆಗೆ
ನಿನ್ನ ಕರುಣೆಯ ಕಿರಣ ಪ್ರವೇಶಿಸಲಿ ;
ಎಲ್ಲ ಮನಗಳ ಕಟ್ಟೆ ಕೆರೆಗಳಿಗೆ
ನಿನ್ನ ಒಲವಿನ ಹೊನಲು ಪ್ರವಹಿಸಲಿ ;
ಎಲ್ಲ ಮಸ್ತಕಗಳ ಮಡಿಹೊಲಗಳಲ್ಲಿ
ನಿನ್ನ ಭಕ್ತಿಯ ಬೀಜಾರೋಪಣವಾಗಲಿ ;
ಎಲ್ಲ ಹಸ್ತಗಳ ಕೆಲಸ ಕಾರ್ಯಗಳಲ್ಲಿ
ನಿನ್ನ ಪೂಜೆಯ ಪುಣ್ಯ ಪ್ರಕರ್ಷಿಸಲಿ ;
ಎಲ್ಲ ನಾಸಿಕಗಳಲ್ಲಿ
ನಿನ್ನ ನೆನಹು ಉಸಿರಾಗಲಿ ;
ಎಲ್ಲ ಕರ್ಣಗಳಲ್ಲಿ
ನಿನ್ನ ಕರೆ ಕೇಳುವ ಶಕ್ತಿ ಬರಲಿ ;
ಎಲ್ಲ ಅಕ್ಷಿಗಳಲ್ಲಿ
ನಿನ್ನ ವೀಕ್ಷಣಾಕಾಂಕ್ಷೆ ಬೆಳಕಾಗಲಿ ;
ಎಲ್ಲೆಡೆಯೊಳಿರುವ ನೀನು
ಎಲ್ಲರೊಳು ದಿವ್ಯ ಪ್ರೇರಣೆಯಾಗಿ
ನನ್ನಿ, ನಲ್ಮೆ, ಚೆಲುವು, ನಲವುಗಳ
ಸುಗ್ಗಿಯನೆ ಬರಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೫೨೫

ಈ ವನವನ್ನು ಹೊಕ್ಕ ಈ ಪವನ
ಯಾವ ಯಾವ ತರುಗಳ ಕೈಕುಲಕಿ, ಯಾವ ಯಾವ ಲತೆಗಳ ಮೈದಡವಿ,
ಯಾವ ಯಾವ ಹೂಗಳಿಗೆ ಮುತ್ತಿಟ್ಟು, ಯಾವ ಯಾವ ಸರಸಿಗಳಲ್ಲಿ ತೆರೆಯೆಬ್ಬಿಸಿ,
        ಕೊನೆಗೆ ಎಲ್ಲಿಗೆ ಹೋಯಿತೋ ಕಾಣೆ !
ಈ ಪರ್ವತವನ್ನು ಪ್ರವೇಶಿಸಿದ ಈ ಧ್ವನಿ
        ಯಾವ ಯಾವ ಗುಹೆಗಳಲ್ಲಿ ಪ್ರತಿಧ್ವನಿಸಿ,
        ಯಾವ ಯಾವ ದರಿಕಂದರಗಳಲ್ಲಿ ಸಂಚರಿಸಿ,
        ಯಾವ ಯಾವ ಕುಂಜಗಳಲ್ಲಿ ಗುಂಜಿಸಿ
        ಕೊನೆಗೆ ಎಲ್ಲಿ ಲೀನವಾಯಿತೋ ಕಾಣೆ !
ಅಂತರಂಗದ ಅಂಚೆಮನೆಯಿಂದ ಹಂಚಿಕೆಯಾಗುತ್ತಿರುವ
        ಈ ವಿಳಾಸವಿಲ್ಲದ ಓಲೆಗಳು
        ಕೊನೆಗೆ ಯಾರಿಗೆ ತಲುಪುವುವೋ ನಾನರಿಯೆ !
ಹೃದಯ ಮಂದಿರದ ಅಂತರಾಳದಲ್ಲಿ
        ನಡೆದ ಈ ತೀರ್ಥವಿತರಣೆ
        ಕೊನೆಗೆ ಯಾರಾರ ಕರಗಳ ಸೇರುವುದೋ ನಾನರಿಯೆ !
                ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಮತಿಯನ್ನು ಹೊಕ್ಕ ಈ ಜಿಜ್ಞಾಸೆ
                ಆರಾರ ಬಾಳನ್ನು ತಾಕಿ,
                ಆರಾರ ಜೀವನದಲ್ಲಿ ಜೀಕಿ
                ಆರಾರನ್ನು ಸಂಶಯಕ್ಕೆ ನೂಕಿ
                ಕೊನೆಗೆಲ್ಲಿ ಪರ್ಯವಾಸನ ಹೊಂದುವುದೋ ಕಾಣೆ !

# ವಚನ ನಂದನ

# ವಚನ ನಂದನ

೧

ಮೊದಲಿಲ್ಲದ, ತುದಿಯಿಲ್ಲದ, ಬದಿಯಿಲ್ಲದ ಘನವೆ,
ಹೆಸರಿಲ್ಲದ, ದೆಸೆಯಿಲ್ಲದ, ಮೃಷೆಯಿಲ್ಲದ ಚೇತನವೆ,
ಅಳವಿಲ್ಲದ, ಆಳಿವಿಲ್ಲದ, ಹಳಿವಿಲ್ಲದ ಚೆಲುವೆ,
ಕ್ಷತಿಯಿಲ್ಲದ, ಖತಿಯಿಲ್ಲದ, ಮಿತಿಯಿಲ್ಲದ ಬಲವೆ,
ಎಣೆಯಿಲ್ಲದ, ಜನಿಯಿಲ್ಲದ, ಕೊನೆಯಿಲ್ಲದ ಒಲವೆ–
ನಿತ್ಯ ವರ್ತಮಾನವೆ,
ನಿರಂತರ ಸೃಷ್ಟಿ–ಸ್ಥಿತಿ–ಲಯವೆ,
ಆಹಾರವೆ, ನಿದ್ರೆಯೆ, ಭಯವೆ,
ಜೀವವೆ, ಸಾವೆ, ಸ್ವತಂತ್ರಧೀರ ಸಿದ್ಧೇಶ್ವರನವೆ!

೨

ಮೊದಲಿಲ್ಲದ, ತುದಿಯಿಲ್ಲದ ಅವ್ಯಕ್ತವೆ,
ಎಲ್ಲೆಲ್ಲೂ ಉಕ್ತವಾಗುತಿಹ ಅನುಕ್ತವೆ,
ವಿಭಕ್ತದಲ್ಲಿಯೂ ನಿಹಿತವಾಗಿಹ ಅವಿಭಕ್ತವೆ,
ಬಂಧನಗಳಲ್ಲಿಯೂ ಸ್ವಚ್ಛಂದವಾಗಿಹ ವಿಮುಕ್ತವೆ,
ಬುಡವಿಲ್ಲದ, ನಡುವಿಲ್ಲದ, ಕಡೆಯಿಲ್ಲದ ಎಲ್ಲೆಡೆಯೆ,
ಸಮೀಪವೆ, ದೂರವೆ, ದುರೂಹವೆ,
ಪ್ರತೀತಿಯೆ, ಅತೀತವೆ, ಅನಾಗತವೆ,
ಶತ್ರುವೇ, ಅಶ್ರುತವೆ, ಅನಾಹತವೆ,
    ಸ್ವತಂತ್ರಧೀರ ಸಿದ್ಧೇಶ್ವರಾಭಿದ
    ಅಜಾತವೆ, ಅದ್ವಯವೆ, ಅತ್ಯತಿಷ್ಠದ್ದಶಾಂಗುಲವೆ!

೩

ಅದ್ವಿತೀಯ ನೀನೊಬ್ಬನೇ ಅಲ್ಲವಯ್ಯ;
ನಿನ್ನ ಮಕ್ಕಳಲ್ಲಿ ಒಬ್ಬೊಬ್ಬನೂ ಅದ್ವಿತೀಯ!
ಒಬ್ಬನಂತೆ ಇನ್ನೊಬ್ಬನಿರುವನೆ
ಪ್ರಥಮ ದ್ವಿತೀಯನೆಂದು ವರ್ಗೀಕರಿಸಲು?
ಎಲ್ಲರಲ್ಲಿಯೂ ಒಂದೊಂದು ವಿಶೇಷವನ್ನಿರಿಸಿ,
ಎಲ್ಲರನ್ನೂ ಅದ್ವಿತೀಯವಾಗಿ ಮಾಡಿಯೂ
ಏಕಮೇವಾದ್ವಿತೀಯನಾಗಿ ಉಳಿದ
ನಿನ್ನ ಪರಿಗೆ ಬೆರಗಾದೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೪

ಭಕ್ತಕಾಯ ಮಮಕಾಯವೆಂದು
ನೀನೆಂದೆಯಾ ತಂದೆ?
ನಿಜ, ಭಕ್ತಕಾಯ ನಿನ್ನ ಕಾಯ,
ಭಕ್ತನೇತ್ರ ನಿನ್ನ ನೇತ್ರ,
ಭಕ್ತಶ್ರೋತ್ರ ನಿನ್ನ ಶ್ರೋತ್ರ,
ಭಕ್ತಪಾಣಿ ನಿನ್ನ ಪಾಣಿ,
ಭಕ್ತವಾಣಿ ನಿನ್ನ ವಾಣಿ,
ಭಕ್ತಪಾದ ನಿನ್ನ ಪಾದ,
ಭಕ್ತರ ಒಲವು ನಿನ್ನೊಲವು!
ನನ್ನನ್ನು ನಿನ್ನ ಭಕ್ತರ ಭಕ್ತರ
ಭಕ್ತನ ಮಾಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೫

ತಂದೆ ಸಿಟ್ಟಿಗೆದ್ದರೆ ತಾಯಿಯ ಸೆರಗಿದೆ,
ತಾಯಿ ಸಿಟ್ಟಿಗೆದ್ದರೆ ತಂದೆಯ ಹೆಗಲಿದೆ;
ನನಗೀಗ ನೀನೆ ತಂದೆ, ನೀನೆ ತಾಯಿ–
ನೀನೇ ಸಿಟ್ಟಿಗೆದ್ದರೆ ನಾನೆಲ್ಲಿಗೆ ಹೋಗಲಯ್ಯ,
ಯಾರ ಆಶ್ರಯ ಪಡೆಯಲಯ್ಯ?
ತಿಳಿವಿನ ತಂದೆಯಾಗಿ ತಬ್ಬು,

ಕರುಳಿನ ತಾಯಿಯಾಗಿ ಅಪ್ಪು-
ಸ್ವತಂತ್ರಧೀರ ಸಿದ್ಧೇಶ್ವರಾ!

೬

ಅಲ್ಲಿ ನೀನು, ಇಲ್ಲಿ ನೀನು,
ಎಲ್ಲೆಲ್ಲಿಯೂ ನೀನಿರುವಾಗ
ನನ್ನೊಳಗಣ ನಿನ್ನನರಿಯಲು
ನಿನ್ನನೇಕೆ ಅವಲಂಬಿಸಬೇಕೆಂದು
ಕೇಳುವರಯ್ಯ ಪ್ರಜ್ಞಾವಾದಿಗಳು!
ಏನುತ್ತರ ಕೊಡಲಿ ಅವರಿಗೆ?
ಚಿತ್ರದ ದೀಪವ ನೋಡಲು
ಮತ್ತೊಂದು ನಿಜ ದೀಪ ಬೇಡವೆ?
ಸತ್ತಿನೊಳಗಣ ಸ್ವತಂತ್ರಧೀರ ಸಿದ್ಧೇಶ್ವರನನರಿಯಲು
ಅವನ ದಯೆಯ ದೀಪ ಬೇಡವೆ?

೭

ನನ್ನ ಇರುವಿನ ನೀರಡಿಕೆ ನಿವಾರಿಸಲು ಸಾಕು
ನಿನ್ನ ಕೃಪಾಕಟಾಕ್ಷದ ಬಗರಿಗೆಯ ಬೊಗಸೆ ಸಿಹಿನೀರು;
ನಿನ್ನ ಗುಹ್ಯಾದ್ಗುಹ್ಯ ಜ್ಞಾನದ
ಉಪ್ಪುಕಡಲನೇನ ಮಾಡಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೮

ದಾರಿ ತಪ್ಪಿದ ಒಬ್ಬೊಬ್ಬ ಮಗನ ಅಕೃತ್ಯಗಳಿಂದ
ಅತ್ಯುನ್ನತ ಅಧಿಕಾರ ಕಳೆದುಕೊಂಡವರ
ಕಣ್ಣಾರೆ ಕಂಡೆವು, ಇದೇ ದೇಶದಲ್ಲಿಯೇ!
ನಿನಗೆ ಒಬ್ಬಿಬ್ಬರಲ್ಲ-
ಕೋಟಿ ಕೋಟಿ ದಾರಿ ತಪ್ಪಿದ ಮಕ್ಕಳು!
ಹೀಗಿದ್ದೂ ಹೇಗೆ ನಿನ್ನ ಗದ್ದುಗೆಯನ್ನು
ಭದ್ರವಾಗಿ ಉಳಿಸಿಕೊಂಡಿಹೆಯಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೯

ಬಿದಿರಿಗೆ ಹೂವಾದುದೇ ಕೊನೆ,
ಚಿಟ್ಟೆಗೆ ಮೊಟ್ಟೆಯಿಟ್ಟುದೇ ಕೊನೆ,
ಅರಿವಿಗೆ ಅರಿದೆನೆಂಬುದೇ ಕೊನೆ,
ಸ್ವತಂತ್ರಧೀರ ಸಿದ್ಧೇಶ್ವರಾ,
    ನಾನೆನ್ನಲು ನಿನ್ನ ಕೊನೆ,
        ನೀನೆನ್ನಲು ನನ್ನ ಕೊನೆ!

೧೦

ತೋರುವುದೆಲ್ಲ ತೋರು ಬೆರಳು
ನಿನ್ನ ಸರ್ವಾಂತರ್ಯಾಮಿತ್ವಕ್ಕೆ;
ತೋರ್ಕೆಯಾಚೆಯದು ಸೊಲ್ಲಿಸುವ ಸನ್ನೆ
ನಿನ್ನ ಗಹನಗಭೀರ ಆಗಮ್ಯತ್ವಕ್ಕೆ;
ಆಗು ಹೋಗುಗಳೆಲ್ಲ ಕೂಗಿ ಹೇಳುತಿವೆ
ನಿನ್ನ ಸರ್ವಸ್ವಾಮಿತ್ವವನ್ನು;
ಸಚರಾಚರವೆಲ್ಲ ಸಾರಿ ಹೇಳುತಿದೆ
ನಿನ್ನ ಸರ್ವಜ್ಞತ್ವವನ್ನು!
ಹೀಗಿದ್ದೂ, ನಿನ್ನ ನಂಬದವ ನಿರ್ಭಾಗ್ಯ-
ಸ್ವಂತಂತ್ರಧೀರ ಸಿದ್ಧೇಶ್ವರಾ!

೧೧

ನಂಬಿ ಕರೆದರೆ ಓ ಎಂಬ ಶಿವನು;
    ನಂಬಿದ್ದವಯರು ಕರೆದರೆ ಓ ಎಂದೆ ನೀನು!
ಕರೆದ ನಂಬಿಯರು ಕಾಲ್ದೆಗೆದರೂ
    ಬರುವರೆಂದೇ ನಂಬಿ,
    ಕಂಗಳ ಲಿಂಗದಲ್ಲಿ ತುಂಬಿ,
    ಲಿಂಗವ ಕಂಗಳಲ್ಲಿ ತುಂಬಿ-
    ಅಂಗಾಂಗಗಳಲ್ಲಿ ತುಂಬಿ
    ಕುಳಿತುಬಿಟ್ಟೆ ನೀನು!
ವಾಲ್ಮೀಕವ ವಿಸರ್ಜಿಸಿ ಹೊರಬಂದ ರವಿಯಂತೆ
ಹುತ್ತದಿಂದ ಹೊರಬಿದ್ದು ಜಗಸ್ತುತ್ಯನಾದೆ!

ನಂಬಿಯರು ಧನ್ಯರಾದರು,
ತುಂಬೆಗೆ ಮಾನ್ಯತೆ ಬಂದಿತು,
ನಂಬಿ ಮೊರೆ ಹೊಕ್ಕವರ
ಇಚ್ಛಾಪಾತ್ರೆ ತುಂಬುತಿವೆ!
ಕೇಳಿದ ಕಿವಿಗಳು
ಷಟ್ಸ್ಥಲಜ್ಞಾನಸಾರಾಮೃತದಿಂದ ತುಂಬಿದುವು;
ನಾಡು
ಶಿವಭಕ್ತರಿಂದ, ಶಿವಕವಿಗಳಿಂದ,
ಶಿವಾನುಭವಿಗಳಿಂದ ತುಂಬಿತು!
ತೋಂಟದ ಸಿದ್ಧಲಿಂಗೇಶ್ವರಾ,
ನನಗೆ ಸ್ವತಂತ್ರಧೀರ ಸಿದ್ಧೇಶ್ವರ ಬೇರಲ್ಲ–
ನೀನು ಬೇರಲ್ಲ!

೧೨

ಎಂದಿನಿಂದಲೂ ಇರುವ ಅಸ್ತಿತ್ವವೆ,
ಎಂದೆಂದಿಗೂ ಉಳಿವ ಪರತತ್ತ್ವ
ಹಿಂದಿಂದು ಮುಂದುಗಳ ಮೀರಿರುವ ಪರಾತ್ಪರವೆ,
ಸ್ಥಲವೆ, ಸ್ಥಲಾತೀತವೆ,
ಕಾಲವೆ, ಕಾಲಾತೀತವೆ, ಕಲಕಾಲವೆ, ಕಾಲಕಾಲವೆ,
ಕಾರಣವೆ, ಕಾರ್ಯವೆ, ಕಾರಣಾತೀತವೆ,
ಸೃಜನವೆ, ಸಂಗೋಪನವೆ, ಸಂಹಾರವೆ,
ಸ್ವತಂತ್ರಧೀರ ಸಿದ್ಧೇಶ್ವರವೆ!

೧೩

ಒಂದೊಂದು ಬೆಟ್ಟಕ್ಕೂ ಒಂದೊಂದು ಎತ್ತರದ ಶಿಖರ,
ಆದರೆ, ಒಂದೇ ಒಂದು ಗೌರೀಶಂಕರ!
ಎರಡು ಹಳ್ಳ ಕೂಡಿದರೂ ಅಲ್ಲೊಂದು ಸಂಗಮ,
ಆದರೆ, ಒಂದೇ ಒಂದು ಕೂಡಲಸಂಗಮ!
ಊರೂರಿಗೂ ಗುಡಿ ಮಸೀದಿ ಇಗರ್ಜಿಗಳು,
ಆದರೆ, ಅಲ್ಲೆಲ್ಲ ಒಬ್ಬನೇ ಒಬ್ಬ
ಸ್ವತಂತ್ರಧೀರ ಸಿದ್ಧೇಶ್ವರ!

೧೪

ನಂಬಿ ಕರೆದರೆ ಓ ಎನ್ನುವಿಯಂತೆ–
ನಂಬಿದ ನನಗೇಕೆ ಓ ಎನ್ನದಿರುವಿಯಯ್ಯ?
ನಾನೇ ನಿಜವಾಗಿ ನಂಬಿಲ್ಲವೆಂದೆ?
ನನ್ನ ಕರೆ ನಿನಗೆ ಕೇಳಿಸುತ್ತಿಲ್ಲವೆಂದೆ?
ನಿನ್ನ 'ಓ' ಎಂಬ ಸ್ವರವೇ ನನಗೆ ಕೇಳಿಸುತ್ತಿಲ್ಲವೆಂದೆ?
ಇರಬಹುದು–
ಈ ಕಿವಿಗಳು ಮರಗಿವಿಗಳಾಗಿರಬಹುದು–
ಮರವೆಯಿಂದ ಮರವಟ್ಟು ಮರವಟ್ಟು!
ಇಲ್ಲವೆ,
ತಿರೆಯ ಲೆಕ್ಕವಿಲ್ಲದ ಕರ್ಕಶಸ್ವರಗಳಲ್ಲಿ
    ನಿನ್ನ ಸ್ವರ ನನಗೆ ಕೇಳಿಸದಿರಬಹುದು!
    ಮರಗಿವಿಯಾಗಿದ್ದರೆ ಕಿವಿಹಿಂಡಿ,
    ಹೊರಗಿನ ಸದ್ದುಗದ್ದಲ ಹೆಚ್ಚಿದ್ದರೆ
    ಒಳಗಿನ ನಿಶ್ಶಬ್ದತೆಯ ನೀಡಿ
        ನಿನ್ನ ಸ್ವರ ಕೇಳಿಸಾ–
        ಸ್ವತಂತ್ರಧೀರ ಸಿದ್ಧೇಶ್ವರಾ!

೧೫

ಕರು ಮರೆತರೂ
ತುರು ಮರೆಯದಂತೆ
  ನಾ ನಿನ್ನ ಮರೆತರೂ
  ನೀನೆನ್ನ ಮರೆಯದಿರಯ್ಯ–
        ಸ್ವತಂತ್ರಧೀರ ಸಿದ್ಧೇಶ್ವರಾ!

೧೬

ತಾನೆ ಗುರು, ತಾನೆ ಲಿಂಗ, ತಾನೆ ಜಂಗಮ–
  ತನ್ನನುಳಿದು ಗುರು–ಲಿಂಗ–ಜಂಗಮವದೇವುದಯ್ಯ?
ತನಗೆ ತಾ ಗುರುವಾಗದವನಿಗೆ
  ಗುರು ದೊರಕಿ ಫಲವೇನು?
ತಾನೇ ಲಿಂಗವಾಗದವನಿಗೆ
  ಲಿಂಗ ದೊರಕಿ ಫಲವೇನು?

ತಾನೆ ಜಂಗಮವಾಗದವನಿಗೆ
ಜಂಗಮ ದೊರಕಿ ಫಲವೇನು?
ತಾನೆ ಗುರು-ಲಿಂಗ-ಜಂಗಮವಾಗಿ
ಗುರುಲಿಂಗಜಂಗಮವನೊಲಿಪ
ಗುಟ್ಟತೋರಾ-ಸ್ವತಂತ್ರಧೀರ ಸಿದ್ಧೇಶ್ವರಾ!

೧೭

ಏನೇನೋ ಆಗಬೇಕೆಂದೆ-
ಏನಾದೆನೋ ಆಗಲಿಲ್ಲವೋ
ನಾನು ನಾನಂತೂ ಆಗಲಿಲ್ಲವಯ್ಯ!
ಎಲ್ಲರವನೂ ಆಗಬೇಕೆಂದೆ-
ಯಾರವನಾದೆನೋ, ಯಾರವನಾಗಲಿಲ್ಲವೋ
ನಿನ್ನವನಂತೂ ಆಗಲಿಲ್ಲವಯ್ಯ!
ಎಲ್ಲ ಮತಗಳ ತಿಳಿಯಬೇಕೆಂದೆ
ಎಲ್ಲ ಪಥಗಳ ತುಳಿಯಬೇಕೆಂದೆ,
ಯಾವ ಮತ ತಿಳಿದೆನೋ,
ಯಾರ ಪಥ ತುಳಿದೆನೋ-
ನಿನ್ನ ಮತವನ್ನಂತೂ ತಿಳಿಯಲಿಲ್ಲವಯ್ಯ-
ನಿನ್ನ ಪಥವನ್ನಂತೂ ತುಳಿಯಲಿಲ್ಲವಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ!

೧೮

ಮಗನಿಗೆ ಧೈರ್ಯ ಬರಲೆಂದು
ಕತ್ತಲೆಯಲ್ಲಿ ಅವನ ಕಳಿಸಿ
ತಾನೂ ತುಸು ಹಿಂದೆ ಹಿಂಬಾಲಿಸುವ
ತಂದೆಯಂತಯ್ಯ, ನೀನು!
ಮರವೆಯ, ಮಾಯೆಯ, ಮಿಥ್ಯೆಯ,
ಭ್ರಮೆಯ, ನಿರಾಶೆಯ, ಸಂದೇಹದ
ಕತ್ತಲೆಯಲ್ಲಿ ನಮ್ಮನ್ನು ಕಳಿಸಿ
ಕಾಯುವ ಕಾಣದ ಕೈಯಾಗಿ
ವಾಯುಮಂಡಲದಲ್ಲಿಯೇ ಹಿಂಬಾಲಿಸುವೆ !

ನೀನು ತಂದೆ ಮಾತ್ರವಲ್ಲ,
ತಂದೆ ತಂದೆಯರ ತಂದೆ-
ತಂದೆತನಕ್ಕೇ ತಂದೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೯

ಮರಕ್ಕೆ ತಾಯಿ-ಬೇರನ್ನು,
ಹೊಳೆಗೆ ತಾಯಿ ಮರಳನ್ನು,
ನರರಿಗೆ ತಾಯ ಕರುಳನ್ನು ನೀಡಿರುವ
    ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೊಮ್ಮೆ ತಾಯರೂಪ ತೊಟ್ಟು ಬಾರಾ!
ಬೇರೆ ರೂಪದಲ್ಲಿ ಬಂದರೆ
ಬೇಗ ಗುರುತಿಸಲಾರೆ,
ತಾಯಿಯಾಗಿ ತೋರಾ !

೨೦

ಕಡಲಿನ ಒಡಲಿನಲ್ಲಿ
ಎಡೆಬಿಡದೆ ಹುಡುಕುತ್ತಿಹ
ಬೆಡಗಿನ ಅನಿಮಿಷಗಳೆ,
    ನೀವೂ ನೋಡಿಲ್ಲವೆ, ನೀವೂ ನೋಡಿಲ್ಲವೆ?
ಸಂಜೆಯ ಗಂಗೆಗೆ
ಇರುಳ ಯಮುನೆ ಬೆರೆತ
ಕೂಡುಹೊನಲಿನ ಗಾಡಿಯಲೆಗಳೆ,
    ನೀವೂ ನೋಡಿಲ್ಲವೆ, ನೀವೂ ನೋಡಿಲ್ಲವೆ?
ಬಯಲ ನೆತ್ತಿಯ ಮೇಲೆ
ನಲಿದು ನರ್ತಿಸುತ್ತಲಿಹ
ಮೇಘ ಮಯೂರಗಳೆ,
    ನೀವೂ ನೋಡಿಲ್ಲವೆ, ನೀವೂ ನೋಡಿಲ್ಲವೆ?
ಮುಗಿಲ ಎರೆಹೊಲದ
ಒಡೆದ ಹತ್ತಿಯ ತೊಳೆಗಳೆ
ತೊಳಗುವ ತಾರೆಗಳೆ,
    ನೀವೂ ನೋಡಿಲ್ಲವೆ, ನೀವೂ ನೋಡಿಲ್ಲವೆ?

ಸ್ವತಂತ್ರಧೀರ ಸಿದ್ಧೇಶ್ವರನ ನೋಡಿಲ್ಲವೆ?
    ನೀವೂ ನೋಡಿಲ್ಲವೆ?

೨೧

ಇಷ್ಟಲಿಂಗವಾಗಿ ಎನ್ನ ಕರಸ್ಥಲವನಿಂಬುಗೊಂಡು
    ನಿನ್ನ ಸದ್ರೂಪವ ತೋರಿದೆ;
ಪ್ರಾಣಲಿಂಗವಾಗಿ ಎನ್ನ ಉರಸ್ಥಲವನಿಂಬುಗೊಂಡು
    ನಿನ್ನ ಚಿದ್ರೂಪವ ತೋರಿದೆ,
ಭಾವಲಿಂಗವಾಗಿ ಎನ್ನ ಶಿರಸ್ಥಲವನಿಂಬುಗೊಂಡು
    ನಿನ್ನ ಆನಂದರೂಪವ ತೋರಿದೆ!
    ಇನ್ನು ಅನತಿ ದೂರದಲ್ಲಿ
    ಈ ರೂಪವೇ ಆರೂಪವಾಗಲಿದೆಯಾಗಿ
    ಇನ್ನಾವ ರೂಪಗಳನ್ನೂ
    ನೋಡುವ ಆಸೆ ಉಳಿದಿಲ್ಲವಯ್ಯ
        ಸ್ವತಂತ್ರಧೀರ ಸಿದ್ಧೇಶ್ವರಾ!

೨೨

ಒಲವಿದ್ದಾಗ ಬೈಗಳೂ ಬಾವನ್ನದುಸಿರು,
ಒಲವಿಲ್ಲದಾಗ ಮೆಚ್ಚಿಗೆಯ ಮಾತುಗಳೂ ಕೆಸರು!
ಮೊದಲೆನ್ನ ತೊದಲೂ ಪ್ರಿಯವಾಗಿದ್ದ ನಿನಗೆ
ಈಗಿನ ಒಪ್ಪವಿಟ್ಟ ವಚನಗಳೂ ಅಪ್ರಿಯವಾಗಿವೆ!
'ಅಯ್ಯಾ, ಅಯ್ಯಾ' ಎಂದು ಒರಲುತ್ತಿದ್ದುದೇ ಸರಿ,
'ಅಣೋರಣೀಯಾನ್' ಎಂದು ಬಣ್ಣಿಸಿದುದೆ ಬಿರಿಯೇನಯ್ಯ?
ಅರಿವು ಒಲವಿನ ಉರುಲಾಗದಂತೆ,
ಒಲವು ಅರಿವಿನ ಸೊಡರಿನ ಎಣ್ಣೆಬತ್ತಿಯಾಗುವಂತೆ
    ಕರುಣಿಸಿ ಕಾಯಯ್ಯ–
        ಸ್ವತಂತ್ರಧೀರ ಸಿದ್ಧೇಶ್ವರಾ!

೨೩

ಒಂದೆ ಕವಿತೆಯನ್ನು ಬರೆದು ಅಮರರಾದವರುಂಟು,
ಹಲವು ಕಾವ್ಯಗಳ ಬರೆದು ಅಜ್ಞಾತರಾದವರೂ ಉಂಟಯ್ಯ;
ಒಂದೆ ಪ್ರತಿಮೆಯನ್ನು ಕೆತ್ತಿ ಅಜರರಾದವರುಂಟು,

ನೂರು ಮೂರ್ತಿಗಳ ಕಂಡರಿಸಿಯೂ ಮರೆತು
ಹೋದವರುಂಟಯ್ಯ;
ಒಂದೆ ರಾಗದಲ್ಲಿ ಸಿದ್ಧಿ ಪಡೆದು ಪ್ರಸಿದ್ಧರಾದವರುಂಟು,
ಎಲ್ಲ ರಾಗಗಳ ಬಲ್ಲವರಾಗಿಯೂ ಸೊಲ್ಲಿಲ್ಲದಾದವರೂ ಉಂಟಯ್ಯ;
ಒಂದೆ ಚಿತ್ರವನಿತ್ತು ಚರಿತ್ರಾರ್ಹರಾದವರುಂಟು
ಭಿತ್ತಿ ಭಿತ್ತಿಗಳ ಚಿತ್ರಗಳಿಂದ ತುಂಬಿಯೂ ಅಸ್ತರಾದವರುಂಟಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಒಂದೆ ವಚನವ ಉಸುರಿ ವಂಧ್ಯರಾದವರುಂಟು,
ನೂರಾರು ವಚನಗಳ ರಚಿಸಿಯೂ ನನ್ನಂತೆ ವಂಧ್ಯರಾದವರೂ
ಉಂಟಯ್ಯ

೨೪

ಅದು ನಿಜ, ಇದು ನಿಜವೆಂದು ತಲೆಕೆಡಿಸಿಕೊಂಡೆ ಇದುವರೆಗೆ,
ನಿಜವೊಂದೇ ಉಳಿಯುವುದು ಕೊನೆಗೆ
ಸ್ವತಂತ್ರಧೀರ ಸಿದ್ಧೇಶ್ವರನೆಂಬ ನಿಜ.
ನಿಜಗಳಲ್ಲಿ ನಿಜ!

೨೫

ನಾಲಗೆಯ ತುದಿಯಲ್ಲಿದ್ದೂ
ಹೃದಯಕ್ಕೆ ಇಳಿಯದ
ಆಸ್ತಿಕವಾದವನ್ನೂ ಕಂಡೆ,
ನಾಲಗೆ ಮೇಲೆ ನಲಿದೂ
ಎದೆಯಾಳಕ್ಕೆ ಇಳಿಯದ
ನಾಸ್ತಿಕವಾದವನ್ನೂ ಕಂಡೆ!
ವಾದಗಳೊಡನೇಕೆ ವಾದ ಮಾಡಲಿ?
ನಿನ್ನೊಡನೆ ಹೃದಯಸಂವಾದ ಸಾಕು–
ಸ್ವತಂತ್ರಧೀರ ಸಿದ್ಧೇಶ್ವರ!

೨೬

ತಿಳಿವಿನ ಬಿರುಬಿಸಿಲು ಕಣ್ಣು ಕುಕ್ಕುತ್ತಿದೆ,
ಒಲವಿನ ತಂಪು ಕನ್ನಡಕ ನೀಡಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ!

೨೭

'ನಿನ್ನ ನೀ ತಿಳಿ', ಒಂದೊರೆದರು ಆತ್ಮಜ್ಞಾನಿಗಳು;
'ನೀನೆಂಬುದ ನೀ ಅಳಿ', ಎಂದ ಸ್ವತಂತ್ರಧೀರ ಸಿದ್ಧೇಶ್ವರ!

೨೮

ನಿನ್ನೊಳಗೆ ನನ್ನನ್ನಾದರೂ ಕರೆದುಕೋ,
ನನ್ನೊಳಗೆ ನೀನಾದರೂ ಬಾ!
ಏಕೆ ಮೀನಮೇಷ, ಸ್ವತಂತ್ರಧೀರ ಸಿದ್ಧೇಶ್ವರ?

೨೯

ಅನುಗ್ರಹಿಸುವ ಅಪೇಕ್ಷೆಯಿದ್ದರೆ
ನನಗೆ ನೀನೆಂಬ ಅರಿವು ಇರುವಾಗಲೇ ಅನುಗ್ರಹಿಸು!
ನಾ ನೀನೆಂಬುದೇ ಅಳಿದಾಗ
ಅನುಗ್ರಹಿಸಿಕೊಳ್ಳಲು ನಾನಾರು?
ಅನುಗ್ರಹಿಸಲು ನೀನಾರು–
ಸ್ವತಂತ್ರಧೀರ ಸಿದ್ಧೇಶ್ವರ?

೩೦

ನಿನ್ನನ್ನು ಮೆಚ್ಚಿ ಗೈದುದೆಲ್ಲ ಒಪ್ಪು,
ನನ್ನನ್ನು ಮಾತ್ರ ನೆಚ್ಚಿ ಗೈದುದು ತಪ್ಪು ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೧

ತಂದೆಯನ್ನಾದರೂ ತೊರೆ,
ತಾಯಿಯನ್ನಾದರೂ ತೊರೆ,
ಬಂಧುವನ್ನಾದರೂ ತೊರೆ
ಬಳಗವನ್ನಾದರೂ ತೊರೆ,
ಮನೆಮಾರು ಸಿರಿಸೊತ್ತು–
ಏನೆಲ್ಲವನ್ನೂ ತೊರೆ!
ಆದರೆ, ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ–
ತೊರೆಯದಿರು ಗುರುವ,
ತೊರೆಯದಿರು ಗುರಿಯ,

ತೊರೆಯದಿರು ದಿಟವ,
ತೊರೆಯದಿರು ಗೆಲುವೆನೆಂಬ ಹಟವ!

೩೨

ನಿನ್ನ ಹೆಸರಿನಲ್ಲಿ
ಉಪ್ಪು ಬಿಟ್ಟವರುಂಟು,
ಸೊಪ್ಪು ಬಿಟ್ಟವರುಂಟು,
ತುಪ್ಪ ಬಿಟ್ಟವರುಂಟು–
ತಪ್ಪು ಬಿಟ್ಟವರ ತೋರಾ!
ನಿನಗಾಗಿ
ಕೇಶ ತೊರೆದವರುಂಟು,
ವೇಷ ತೊರೆದವರುಂಟು,
ದೇಶ ತೊರೆದವರುಂಟು,
ಆಶೆ ತೊರೆದವರ ತೋರಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೩

ಬೆಕ್ಕಿನ ಕನಸಿನ ತುಂಬ ಇಲಿಗಳೇ,
ಕೊಕ್ಕರೆಯ ಕನಸಿನ ತುಂಬ ಮೀನುಗಳೇ,
ತೋಳನ ಕನಸಿನ ತುಂಬ ಕುರಿಗಳೇ,
ಗಿಡುಗನ ಕನಸಿನ ತುಂಬ ಹಕ್ಕಿಗಳೇ,
ಹಾವಿನ ಕನಸಿನ ತುಂಬ ಕಪ್ಪೆಗಳೇ,
ಹುಲಿಯ ಕನಸಿನ ತುಂಬ ಹಸುಗಳೇ!
ಮನುಜನ ಕನಸಿನಲ್ಲೋ,
ಕುರಿ ಕೋಳಿ ಹಸು ಹಂದಿ ಮೀನುಗಳಷ್ಟೇ ಅಲ್ಲ,
ಹೊನ್ನು ಹೆಣ್ಣು ಮಣ್ಣುಗಳೂ ತುಂಬಿವೆ!
ಇನ್ನೂ ಏನೇನೋ ತುಂಬಿವೆ!
ನಿನ್ನ ಕನಸಿನ ತುಂಬ
ನಮ್ಮ ವಿಕೃತ ಕಾಮನೆಗಳ
ಕರಾಳ ಆಕೃತಿಗಳೇ ಇರಬಹುದಲ್ಲವೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೩೪

ಜನಪ್ರಿಯತೆಯೊಂದನ್ನೇ ಆಧರಿಸಿ
ಹಾಲಿಗಿಂತ ಹೆಂಡವೇ ಮೇಲೆನ್ನಬಹುದೇನಯ್ಯ?
ಬೇಡಿಕೆಯೊಂದನ್ನೇ ಅನುಲಕ್ಷಿಸಿ
ಪತ್ರಿ ತುಳಸಿಗಳಿಗಿಂತ
ಹೊಗೆಸೊಪ್ಪು ಹಿರಿದೆನ್ನಬಹುದೇನಯ್ಯ?
ಪ್ರಚಾರವೊಂದನ್ನೇ ಪರಿಗಣಿಸಿ
ಮಹತ್ಕೃತಿಗಿಂತ ಮಾತಿನ ಚಮತ್ಕೃತಿ
ಶ್ರೇಷ್ಠವೆನ್ನಬಹುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಹ್ಯಾಡಂಬರವನ್ನೇ ಗಮನಿಸಿ
ಬಡವನ ದುಡಿಮೆಗಿಂತ ಶ್ರೀಗಳ ಪೂಜೆ
ಪಾವನತರವೆನ್ನಬಹುದೇನಯ್ಯ?

## ೩೫

ಗೋಪುರದ ತುದಿಯ ಗೊಂಬೆ
ಗರ್ಭಗುಡಿಯ ಮೂರ್ತಿಗಿಂತಲೂ ಶ್ರೇಷ್ಠವೇನಯ್ಯ?
ಅರಮನೆಯ ಚಿನ್ನದ ಕಳಸ
ಸಿಂಹಾಸನದ ಶ್ವೇತಛತ್ರಕ್ಕಿಂತಲೂ ಶ್ರೇಷ್ಠವೇನಯ್ಯ?
ಝುಗ ಝುಗಿಸುವ ರತ್ನಹಾರ
ಮಂಗಳಸೂತ್ರಕ್ಕಿಂತಲೂ ಶ್ರೇಷ್ಠವಾದುದೇನಯ್ಯಾ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಠದ ನಗಾರಿಯ ಸದ್ದು
ಘಟದ ಅಂತರ್ವಾಣಿಗಿಂತ ಶ್ರೇಷ್ಠವೇನಯ್ಯ?

## ೩೬

ಒಮ್ಮೆ ಹಾಲಾಹಾಲವ ಕುಡಿದೆನೆಂದು
    ಬೀಗದಿರು ನಂಜುಂಡ!
ನೀ ಕುಡಿಯದೆ ಬಿಟ್ಟಿರುವ
    ನಂಜುಗಳೆಷ್ಟೆಂಬುದನ್ನು ನೆನೆ, ನೀಲಕಂಠ!
    ನರರ ನುಡಿಯ ನಂಜು, ಒಡಲ ನಂಜು,

ಕೇಡು ಮತಿಯ ನಂಜು
ಮೂಢ ರೂಢಿಗಳ ನಂಜು,
ಅವರು ಗಾಳಿಯಲ್ಲಿ ಬೆರಸುತ್ತಿಹ,
ನೀರಿನಲ್ಲಿ ಸೇರಿಸುತ್ತಿಹ ನಂಜು–
ಎಷ್ಟು ನಂಜುಗಳಿವೆ ನೀ ಕುಡಿಯಬೇಕೆಂದರೆ?
ಯಾಕೆ ಕುಡಿದಿಲ್ಲ? ಏನು ತೊಂದರೆ?
ನಿನಗೂ ಭಯ ಹುಟ್ಟಿಸುವ ನಂಜುಗಳೇನಿವು–
ಸ್ವತಂತ್ರಧೀರ ಸಿದ್ಧೇಶ್ವರ?

### ೩೭

ಒಂದೇ ಬಳ್ಳಿಯಲ್ಲಿ ಹಲವು ಬಣ್ಣದ ಹೂವುಗಳು,
ಒಂದೇ ಬಗೆಯಲ್ಲಿ ಬಗೆ ಬಗೆಯ ಭಾವಗಳು,
ಒಂದೇ ಬಾಳಿನಲ್ಲಿ ನೂರಾರು ನೋವುಗಳು,
ಸಾಯುವ ಮುನ್ನವೇ ಸಾವಿರಾರು ಸಾವುಗಳು,
ಒಂದೇ ಕೊಡಲಿಗೆ ಎನಿತೊಂದು ಕಾವುಗಳು,
ಒಂದೇ ಮೊಟ್ಟೆಗೆ ಎಷ್ಟೊಂದು ಕಾವುಗಳು,
ಸ್ವತಂತ್ರಧೀರ ಸಿದ್ಧೇಶ್ವರಾ,
ಹೊತ್ತಿನ ಹುತ್ತದಲ್ಲಿ ಏಸೊಂದು ಹಾವುಗಳು!

### ೩೮

ಪರಿಮಳ ಸುರಿವ ಅರಳಿನಲ್ಲಿಯೂ
ಮೂಸಿದ ಮೂಗಿಗೆ ಪಿನಸಿಯ ಕಾಟ ತರುವ ಕೀಟವಿರಬಹುದು;
ಚಿತ್ರದಂತೆ ಚಿತ್ತಸೆಳೆವ ಪತ್ರದಲ್ಲಿಯೂ
ಮುಟ್ಟಿದ ಕೈಗೆ ತುರಿಕೆ ತರುವ ಸುಂಕವಿರಬಹುದು;
ಉಣ್ಣಲು ಅಮೃತೋಪಮವೆನಿಸಿದ್ದರಲ್ಲಿಯೂ
ಉದರದಲ್ಲಿ ವಿಷವಾಗುವ ವಸ್ತುವಿರಬಹುದು;
ಮುದ್ದಿಸಿದ ಮಧುರಾಧರಗಳಲ್ಲಿಯೂ
ರೋಗೋತ್ಪಾದಕ ಏಕಾಣುಜೀವಿಗಳಿರಬಹುದು–
ಎಲ್ಲೆಲ್ಲಿ ಏನೇನನಿರಿಸಿಹೆಯಯ್ಯ?
ಯಾರ ಉದ್ದೇಶಕ್ಕಾಗಿ ಇರಿಸಿಹೆಯಯ್ಯ?
ನೀನಿರಿಸಿಹ ಪರಿಗೆ ಬೆರಗಾದೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೯

ಸರಸಿ ನಿಸ್ತರಂಗವಾಗಬಲ್ಲುದಾಗಲಿ
ಶರಧಿ ನಿಸ್ತರಂಗವಾಗುವುದೆಂದರೇನಯ್ಯ?
ತನ್ನ ಕಣ್ಣಿಗೆ ಕಾಣುವನಿತು ನಭ ನಿರಭ್ರವಾಗಿರಬಹುದಾಗಲಿ
ಸಮಗ್ರ ಅಂಬರವೇ ನಿರಭ್ರವಾಗುವುದೆಂದರೇನಯ್ಯ?
ನನ್ನ ಕಣ್ಣು ನಾನು ಮುಚ್ಚಬಲ್ಲೆನಾಗಲಿ
ಜಗದ ಕಣ್ಣು ಮುಚ್ಚುವೆನೆಂದರೇನಯ್ಯ?
ನನ್ನ ರೇಡಿಯೋದ ಬಾಯಿ ನಾನು ಮುಚ್ಚಬಲ್ಲೆನಾಗಲಿ
ಭುವಿಯ ಬಾನುಲಿ ಕೇಂದ್ರಗಳ ಬಾಯಿ ಮುಚ್ಚುವೆ–
ನೆಂದರೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಟೆಲಿಪ್ರಿಂಟರಿನ ಕಿವಿ ಮುಚ್ಚಬಲ್ಲೆನಾಗಲಿ
ಜಗದ ಜನರ ಕಿವಿ ಮುಚ್ಚುವೆನೆಂದರೇನಯ್ಯ?

## ೪೦

ದೇಶ ವಿದೇಶಗಳಲ್ಲಿ
ಈ ದೇಹದ ಒಂದೊಂದು ಅಂಗವನ್ನೇ
ಆಯುಷ್ಯದುದ್ದಕ್ಕೂ ಅಭ್ಯಸಿಸುತ್ತಿರುವ
ವೈದ್ಯರು ಲೆಕ್ಕವಿಲ್ಲದಷ್ಟು ಇದ್ದಾರೆ;
ಆದರೆ ಯಾವ ಅವಯವದ ಬಗ್ಗೆ
ಇದು ಕೊನೆಯ ಮಾತೆಂದು
ಯಾರು ಹೇಳಿದ್ದಾರೆ?
ಮಾನವನ ಮತಿಯ ಮಿತಿ ಇಷ್ಟಿರುವಾಗ
ನಿನ್ನ ಅನಂತ ವಿಶ್ವದ ಆದ್ಯಂತವನು
ಅರಿಯಬಲ್ಲವರಾರಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೧

ಒಂದರಿಂದ ಮಹಾ ಪ್ರಾರ್ಧದವರೆಗಿನ
ಅಂಕಿಗಳ ಕಂಡುಹಿಡಿದವ ಹೆಚ್ಚೋ,
ಸೊನ್ನೆಯನ್ನು ಕಂಡುಹಿಡಿದವ ಹೆಚ್ಚೋ?
ದಶಮಾಂಶ ಪದ್ಧತಿಯ ಪ್ರಾರಂಭಿಸಿದವ ಹೆಚ್ಚೋ,

ಜ್ಯಾಮಿತಿಯ ಸೂತ್ರಗಳ ಪ್ರವರ್ತಿಸಿದವ ಹೆಚ್ಚೊ?
ಬೀಜಗಣಿತದ ಮೊದಲಿಗ ಹೆಚ್ಚೊ?
ಅಣು ವಿಜ್ಞಾನದ ಮೂಲಿಗ ಹೆಚ್ಚೊ?
ಅವರು ಹೆಚ್ಚು ಇವರು ಹೆಚ್ಚೆಂಬುದು ಹುಚ್ಚು-
ಮಾನವನ ವಿಜಿಗೀಷುಮತಿ ಹೆಚ್ಚು;
ಪ್ರತಿಭೆ ಪ್ರಯತ್ನ ಪರಿಶ್ರಮಗಳು ಹೆಚ್ಚು;
ಸ್ವತಂತ್ರಧೀರ ಸಿದ್ಧೇಶ್ವರನ ದಯೆ ಹೆಚ್ಚು!

೪೨

ನಿನ್ನ ನೋಡದ ಮುನ್ನ
ನನ್ನೂರ ತಿಟ್ಟೇ
ಪೆರ್ಬೆಟ್ಟವೆನಿಸಿದ್ದಿತು ನನಗೆ,
ಹಿಮಗಿರಿಯೆ;
ನಿನ್ನ ಕಾಣದ ಮುನ್ನ
ನನ್ನೂರ ಪಾಚಿ ತುಂಬಿದ ಕುಂಟೆಯೇ
ಪ್ಯಾಸಿಫಿಕ್ ಎನಿಸಿದ್ದಿತೆನಗೆ,
ಸಾಗರಸಂಗಮವೆ;
ನಿಮ್ಮನರಿಯದ ಮುನ್ನ
ನಾನು ಹರಟಿದುದೇ
ನಿಜದ ನಿಧಿಯೆನಿಸಿತ್ತೆನಗೆ,
ದ್ರಷ್ಟಾರ ಕುಲವೆ;
ನಿನ್ನ ತಿಳಿಯದ ಮುನ್ನ
ಕಾಲುಬೀದಿಯೇ
ಹಾಲು-ಹಾದಿಯೆನಿಸಿತ್ತೆನಗೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೪೩

ಉತ್ಸಾಹವೇ ಆಸ್ತಿಕತೆ,
ನಿರಾಶೆಯೇ ನಾಸ್ತಿಕತೆ ನೋಡಾ!
ನೀನಿರುವಿಯೆಂದು ನಂಬಿದವನು
ನಿರಾಶನಾಗಬಲ್ಲನೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೪೪

ಇಂದೆನ್ನ ಮನದಲ್ಲಿ ರಾಬಿಯಾ ಮಾತನಾಡುತ್ತಿದ್ದಾಳೆ;
ಅಕ್ಕಮಹಾದೇವಿ ವಚನಿಸುತ್ತಲಿದ್ದಾಳೆ;
ಮೀರಾ ಹಾಡುತ್ತಲಿದ್ದಾಳೆ;
ಅಂಡಾಳ್ ಅವ್ವೆಯ್ಯಾರ್ ಭಜಿಸುತ್ತಲಿದ್ದಾರೆ!
ತಾಯಿಯ ತನಿವಗೆಯ ಹಾಲಿಗೆ
ಅಕ್ಕನ ಅಕ್ಕರೆಯ ಸಕ್ಕರೆ ಸೇರಿದಂತಹ ಅನುಭವ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿರಾಕಾರನಾದ ನಿನಗೂ
ಸಾಕಾರನಾಗಿ ಇದನ್ನು
ಸವಿವ ಬಯಕೆಯೆ?

೪೫

ಗಂಡಿನೆದೆಯಲ್ಲಿರದೆ ಹೆಣ್ಣಿನ ಅಂಶ?
ಹೆಣ್ಣಿನ ಮನದಲ್ಲಿರದೆ ಗಂಡಿನ ಅಂಶ?
ಇದು ಇರಬೇಕಾದುದೇ!
ಆದರೆ, ಇರಬೇಕಾದಷ್ಟು ಇರದೆ
ಇರಬಾರದಷ್ಟು ಇದ್ದರೆ ಕಷ್ಟ ನೋಡಾ!
ಪ್ರತಿಯೊಬ್ಬ ಪುರುಷನೂ ಅರ್ಧನಾರಿ,
ಪ್ರತಿಯೊಬ್ಬ ಅಂಗನೆಯೂ ಅರ್ಧಪುರುಷ!
ನಿನ್ನ ಮುಂದೆ ಮಾತ್ರ
ಇಬ್ಬರೂ ಸತಿಯರಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ !

೪೬

ನಗರೋದ್ಯಾನದಲ್ಲಿದ್ದರೆ ಮಾತ್ರ ಹೂ ಬಿಡುವೆ,
ಬಡವರ ಗುಡಿಸಲ ಬಳಿ ಬಿಡೆನೆನ್ನುವುದೆ ಬಳ್ಳಿ?
ಬಹು-ಮಹಡಿ-ಭವನಗಳಲ್ಲಿ ಮಾತ್ರ ಬೆಳಕು ಕೊಡುವೆ,
ಬಡವಿಯ ಜೋಪಡಿಯಲ್ಲಿ ಕೊಡೆನೆನ್ನುವುದೆ ಸೊಡರು?
ಹಂಸತೂಲಿಕಾತಲ್ಪದಲ್ಲಿ ಹೊರಳುವವರ ಮೈ ಮಾತ್ರ ತೊಳೆವೆ,
ಅರಲುಗಷ್ಟದವರ ಮೈ ತೊಳೆಯೆನೆನ್ನುವುದೆ ನೀರು?
ಸೆಂಟು, ಸಿಂಪಡಿಸಿಕೊಂಡವರ ಮೇಲೆ ಮಾತ್ರ ಸುಳಿವೆ,

ಬೆವರುನಾತದವರ ಮೇಲೆ ಸುಳಿಯೆನೆನ್ನುವುದೆ ಗಾಳಿ?
ಸಿರಿವಂತರ ಸಂತಾನ ಕಲಿತರೆ ಮಾತ್ರ ಅಮೃತವಾಗುವೆ,
ದಿಕ್ಕಿಲ್ಲದವರ ಮಕ್ಕಳು ಕಲಿತರೆ ವಿಷವಾಗುವೆನೆನ್ನುವುದೆ ವಿದ್ಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಹುಂಡಿ ತುಂಬುವವರಿಗೆ ಮಾತ್ರ ಮೀಸಲು ನನ್ನ ಕರುಣೆ,
ಬರಿಗೈಭಕ್ತರಿಗಿಲ್ಲವೆನ್ನುವಿಯಾ ನೀನು?

**೪೭**

ಈ ನೆಲ ನಿಶ್ಚಲ, ಜಲ ಚಂಚಲ;
ಈ ನಭ ನಿಶ್ಚಲ, ಅಭ್ರ ಚಂಚಲ;
ಈ ಬಯಲು ನಿಶ್ಚಲ, ಗಾಳಿ ಚಂಚಲ;
ಶಿಲೆ ನಿಶ್ಚಲ, ಅದು ಕೊಡುವ ಕಿಡಿ ಚಂಚಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನಿಶ್ಚಲ,
ನಾನು ಚಂಚಲ!

**೪೮**

ಮುಂಬೆಳಗಿನಲ್ಲಿ
ಕೆಟ್ಟ ಕನಸು ಕಂಡು ಕಂಗೆಟ್ಟಾಗ
ಬೆಳಗಿನ ಹಕ್ಕಿ-ಹಾಡಾಗಿ ಸಂತವಿಡುವೆ;
ಮುಂಜಾವಿನ
ದುರ್ಘಟನೆಗಳು ನಂಜಾಗಿ ಸುಡುವಾಗ
ಕಂದನ ಮಂದಹಾಸವಾಗಿ ಬಂದು ಶಾಂತಿ ಕೊಡುವೆ;
ಅಪರಾಹ್ನದ
ವೈಪರೀತ್ಯಗಳಿಂದ ಕಳವಳಿಸುತ್ತಿರುವಾಗ
ಮಾತೃವಾತ್ಸಲ್ಯವಾಗಿ ಮೈದಡವಿ ಮನ ತಣಿಸುವೆ;
ಮಧ್ಯಾಹ್ನದ
ಭಗ್ನತೆಗಳಿಂದ ಬಸವಳಿದಾಗ
ಅನಿರೀಕ್ಷಿತ ವಲಯದ ಅನುಕಂಪೆಯಾಗಿ ತಂಪುಣಿಸುವೆ,
ಸಂಜೆಯ
ಸೋಲುಗಳು ಶೂಲವಾಗಿ ತಿವಿವಾಗ
ಸ್ನೇಹದ ಹಸ್ತವಾಗಿ ಬಂದು ಎತ್ತಿ ಹಿಡಿವೆ;

ಇರುಳ
    ತಳಮಳಗಳು ಬಳಸಿ ಬೆಂಬತ್ತಿದಾಗ
    ಸತಿಯ ಅಪ್ಪುಗೆಯಾಗಿ ಸ್ಥೈರಣೆಯ ಕೊಡುವೆ;
        ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ಸಹಾಯದ ಸಾಂತ್ವನದ ಅಗತ್ಯವಿರುವಾಗಲೆಲ್ಲ
ಯಾರಾರ ರೂಪದಲ್ಲಿಯೋ ನೀನೆನ್ನ ಪೊರೆವೆ–
        ಆದರೂ, ನಿನ್ನನ್ನೇ ನಾನು ಮರೆವೆ!

೪೯

ಉಪವನದ ತರುಲತೆಗಳೆ,
ಹಲವು ಸಲ ನಿಮ್ಮನ್ನು ಒಟ್ಟಾರೆ ನೋಡಿ,
ಯಾಂತ್ರಿಕವಾಗಿ ಸುಳಿದಾಡಿ
ಹಿಗ್ಗದ ಹಾಗೆ ಮಾಡಿ
    ಹಿಂದಿರುಗಿದ್ದೇನೆ!
ಆದರೆ, ಒಮ್ಮೆಯೂ ನಿಮ್ಮಬಳಿಗೆ ಬಂದು
ಅಕ್ಕರೆಯಲಿ  ನಿಂದು
    ಗೆಳೆತನ ಬೆಳೆಸಲಿಲ್ಲ!
ನಿಮ್ಮ ಹೆಸರು ಸಹ ತಿಳಿದುಕೊಳ್ಳಲಿಲ್ಲ!
ಇದಕ್ಕೆಲ್ಲಿದೆ ಅವಕಾಶ–
    ಈ ಅವಸರದ ಬಾಳಿನಲ್ಲಿ?
ಮಾಲಿ ಬೆಳೆಸಿದ ಉಪವನ ನೋಡಿ
    ಹುಸಿ ಹಿಗ್ಗನ್ನು ತೋರುವುದು,
ದಾಯಿ ಬೆಳೆಸಿದ ಮಗುವ ಮುದ್ದಿಸಿ
    ತಾಯ್ತಂದೆತನ ಮೆರೆಯುವುದು,
ಮಾಣಿ ಬಡಿಸಿದ ಅಡಿಗೆ ನುಂಗಿ,
    ಕೈ ತೊಳೆದುಕೊಳ್ಳುವುದು,
ಕೊನೆಗೆ ನಗರಸಭೆಯ ವಾಹನದಲ್ಲಿ
    ಸುಡುಗಾಡಿಗೆ ತೆರಳುವುದು!
ಇದು ಬಾಳಲ್ಲ, ಬಾಳಿನ ಅಣಕ!
ಇದರ ಹೊರಗು ಆಕರ್ಷಕ,
    ಒಳಗು ಭಯಾನಕ!

ಎಲ್ಲ ವಾತ್ಸಲ್ಯಗಳಿಗೆ ಎರವಾದ ನಮಗೆ
ನಿನ್ನ ವಾತ್ಸಲ್ಯವಾದರೂ ಇರಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೫೦

ನಂಬಿದವರು ಕೈಕೊಟ್ಟಂತೆಲ್ಲ
ನಂಬಿಕೆ ಹೆಚ್ಚುತ್ತಲೇ ಇದೆಯಯ್ಯ, ನಿನ್ನಲ್ಲಿ!
ಪ್ರತಿಫಲ ಬೇಡುವ ನಂಬಿಕೆ ಮಾಗಿ
ಏನನ್ನೂ ಬೇಡದ ನಂಬಿಕೆಯಾಗಿ
ಉಸಿರಿನ ಉಸಿರಾಗಿದೆಯೀಗ!
ನಾ ನಿನ್ನ ನಂಬಿದುದರಿಂದ
ನಿನಗೇನಾಗಬೇಕಿದೆ?
ನಿನ್ನ ನಂಬಿದ ಮೇಲೆ ನನಗೆ
ಮತ್ತೇನು ಬೇಕಿದೆ?
ನಂಬಿದುದಕೆ ನಂಬಿದುದೆ ಫಲ,
ಅದೇ ನನಗೀಗ ಬಾಳಬಲ-
ಸ್ವತಂತ್ರಧೀರ ಸಿದ್ಧೇಶ್ವರ!

೫೧

ಲೆಕ್ಕವಿಲ್ಲದಷ್ಟು ಅಲೆಗಳು ಏಳುತ್ತ ಬೀಳುತ್ತ
ಒಂದು ಹೊನಲಿಗೆ ವಹನತೆಯನ್ನೀಯಬೇಕು;
ಲೆಕ್ಕವಿಲ್ಲದಷ್ಟು ಪರ್ಣ ಪುಷ್ಪಗಳು ಉದಿಸುತ್ತ ಉದುರುತ್ತ
ಒಂದು ಬಳ್ಳಿಯ ಬದುಕಿಗೆ ಬೆಲೆ ನೀಡಬೇಕು;
ಲೆಕ್ಕವಿಲ್ಲದಷ್ಟು ಜೀರಿಗಳು ದುಡಿಯುತ್ತ ಮಡಿಯುತ್ತ
ಒಬ್ಬ ವ್ಯಕ್ತಿಗೆ ಸಿರಿ, ಪದವಿ, ಅಧಿಕಾರ ನೀಡಬೇಕು!
ಇದರ ಅಂತರಾರ್ಥವ ನಾನರಿಯೆ,
ಆದರೆ, ನನ್ನ ಬಾಳಿನ
ಲೆಕ್ಕವಿಲ್ಲದಷ್ಟು ಬಂಜೆ ಚಣಗಳು
ನಿನ್ನ ಕರುಣೆಯ ಕ್ಷಣಕ್ಕೆ
ದಾರಿ ಮಾಡಿಯಾವೆಂಬ
ಆಸೆಯನ್ನು ತೊರೆಯದಿರುವೆ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೫೨

ಅದು, ಇದು ನನ್ನದು–
ಎಂದುಕೊಂಡಿದ್ದೆ ಇದುವರೆಗೆ;
ಈಗ, ನನ್ನದಾವುದೂ ಇಲ್ಲ; ಅಲ್ಲ
ನನ್ನದಾವುದಲ್ಲ?
ಅವರು, ಇವರು
ನನ್ನವರೆಂದುಕೊಂಡಿದ್ದೆ ಇದುವರೆಗೆ;
ಈಗ, ನನ್ನವರಾರೂ ಇಲ್ಲ! ಅಲ್ಲ–
ನನ್ನವರಾರಲ್ಲ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಉರ್ವಿಯನ್ನೇ,
ಸರ್ವರನ್ನು ಪ್ರೀತಿಸಬಲ್ಲ ಹೃದಯವನ್ನೇ
ನನಗಿತ್ತಿರುವಾಗ
ಅದು ಇದು ಮಾತ್ರ ನನ್ನದೆಂದು,
ಅವರಿವರು ಮಾತ್ರ ನನ್ನವರೆಂದು
ಏಕೆ ಅನ್ನಲಿ?

## ೫೩

ಬಿಟ್ಟ ಬಾಣಕ್ಕೆ ವಕ್ರಗತಿಯುಂಟೇನಯ್ಯ?
ಇದ್ದರದು ಗುರಿ ತಾಗಬಲ್ಲುದೇನಯ್ಯ?
ನಿನ್ನ ಸೇರಲು ನೇರದಾರಿ ಇರುವಾಗ
ಗಾರುಡ, ಪವಾಡ, ಮೋಡಿ ಮೊದಲಾದ
    ವಕ್ರವೀಥಿ ಹಿಡಿವವ
ನಿನ್ನ ಸೇರಬಲ್ಲನೇನಯ್ಯ–
    ಸ್ವತಂತ್ರಧೀರ ಸಿದ್ಧೇಶ್ವರಾ?

## ೫೪

ನನ್ನ ಪ್ರಶ್ನೆ ನಿಚ್ಚಳವಾಗಿದ್ದರೆ
ನಿನ್ನ ಉತ್ತರವೂ ನಿಚ್ಚಳವಾಗಿರುತ್ತಿತ್ತೇನೋ.
ಆದರೆ, ಪ್ರಶ್ನೆಯೇನೆಂಬುದನ್ನು
ನಿರ್ಧರಿಸುವಷ್ಟರಲ್ಲಿಯೇ
ನನಗಿತ್ತ ಸಮಯ ಮುಗಿದು
ಬೇರೊಬ್ಬರ ಸರದಿ ಬಂದುದಯ್ಯ!

ಅವಸರದಲ್ಲಿ ನಾನೇನ ಕೇಳಿದೆನೋ,
ನೀನೇನ ಹೇಳಿದೆಯೋ,
ಏನೊಂದೂ ತಿಳಿಯದಾಗಿದೆಯಯ್ಯ!
ಕೇಳಬೇಕೆಂಬ ಪ್ರಶ್ನೆಯೇ ಖಚಿತವಾಗಿಲ್ಲ,
ಪಡೆಯಲೆಳಸಿದ ಉತ್ತರವೆಂತು ನಿಚಿತವಾಗುವುದಯ್ಯ?
ಪ್ರಶ್ನೆಯೂ ನೀನೇ,
ಉತ್ತರವೂ ನೀನೇ–
        ಸ್ವತಂತ್ರಧೀರ ಸಿದ್ಧೇಶ್ವರಾ!

೫೫

ತಾನೇ ವೈದ್ಯನಾಗಿದ್ದೊಡೇನು,
ತನ್ನ ವ್ಯಾಧಿಗೆ ಮದ್ದನೀಯಲು
ಇನ್ನೊಬ್ಬ ವೈದ್ಯ ಬೇಕು ನೋಡಾ!
ನೀನೇ ನಾನಾಗಿದ್ದೊಡೇನು,
ನನ್ನ ಜೀವನರಥದ ಸಾರಥಿ
ನೀನಾಗಬೇಕು ನೋಡಾ,
        ಸ್ವತಂತ್ರಧೀರ ಸಿದ್ಧೇಶ್ವರಾ!

೫೬

ಈ ಮನೆ ಹಾಳಾಗಿದೆ, ನಿಜ;
ಆದರೆ ಮನೆಯ ಪಕ್ಕದ ಮರ ಹಾಳಾಗಿಲ್ಲವಯ್ಯ!
ಅದಿನ್ನೂ ವಸಂತಕ್ಕೊಮ್ಮೆ
ಹೊಸ ಜನ್ಮಪಡೆಯುತ್ತಲೇ ಇದೆ,
ಸಸಿಗಳನ್ನು, ಕಸಿಗಳನ್ನು ಕೊಡುತ್ತಲೇ ಇದೆ!
ಇನ್ನೂ ಅದರ ಹೂಗಳಿಗೆ ಅಳಿಗಳು,
ಹಣ್ಣುಗಳಿಗೆ ಗಿಳಿಗಳು,
ಚಿಗುರಿಗೆ ಕೋಗಿಲೆಗಳು,
ಗೂಡುಗಳಿಗೆ ಹಕ್ಕಿಗಳು,
ನೆರಳಿಗೆ ಹಳ್ಳಿಗರು
ಬರುತ್ತಲೇ ಇದ್ದಾರೆ!
ನಾನು ಕಟ್ಟಿದುದು ಹಾಳಾಗಬಹುದು,
ನೀನು ನಿರ್ಮಿಸಿದುದು ನಾಶವಾದೀತೇನಯ್ಯ–
      ಸ್ವತಂತ್ರಧೀರ ಸಿದ್ಧೇಶ್ವರಾ?

೫೭

ಮರ ಕಡಿದ ತಪ್ಪ ಕೊಡಲಿಯ ಮೇಲೆ ಹೊರಿಸಿ
ಕಡಿದ ಕೈಯ ಕ್ಷಮಿಸುವುದೇ, ಅಯ್ಯ?
ಕನ್ನ ಹಾಕಿದ ತಪ್ಪ ಕನ್ನಗಟ್ಟಿಗೆಯ ಮೇಲೆ ಹೊರಿಸಿ
ಕಳ್ಳನನ್ನು ಕ್ಷಮಿಸುವುದೇ, ಅಯ್ಯ?
ಗಲ್ಲಿಗೇರಿಸಿದ ತಪ್ಪ ಗಲ್ಲಿನ ತಲೆಗೆ ಕಟ್ಟಿ
ಗಲ್ಲಿಗೇರಿಸಿದವನ ಕ್ಷಮಿಸುವುದೇ ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾ ಮಾಡಿದ ಪಾತಕಗಳ ನಿನ್ನ ತಲೆಗೆ ಕಟ್ಟಿ
ನಾನು ಪಾರಾಗಬಲ್ಲೆನೆ, ಅಯ್ಯ?

೫೮

ಮನದ ಮೇಲೆ ನೀನೇ ಮೂಡಿಸಿದ ಗಾಯಗಳು
ಇರುಳಿನಲ್ಲಿ ನೆತ್ತರು ಮೊಗ್ಗುಗಳಾಗಿ ಮಾರ್ಪಟ್ಟು
ಬೆಳಗಿನಲ್ಲಿ ನೆನಿಕೆಯ ನನೆಗಳಾಗಿ ಅರಳಿ
ನರುಗಂಪು ಸೂಸುತ್ತಿವೆ ನೋಡಾ!
ನಿನ್ನ ಮುಳ್ಳುಗಳು ಮೂಡಿಸುವ
ಗಾಯಗಳ ಭಯವೆನಗಿಲ್ಲ,
ನಿನ್ನ ಹೂವುಗಳು ನೀಡುವ
ಗಾಯಗಳದೇ ಭಯವಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೫೯

ಯಾರಿಂದಲೋ ಕಾಡಿಸಿದೆ, ಪೀಡಿಸಿದೆ,
ಯಾರಿಂದಲೋ ಕಾಪಾಡಿಸಿದೆಯಯ್ಯ;
ಯಾರಿಂದಲೋ ಏಡಿಸಿದೆ, ಛೇಡಿಸಿದೆ-
ಯಾರಿಂದಲೋ ಕೊಂಡಾಡಿಸಿದೆಯಯ್ಯ!
ಯಾರಿಂದ ಯಾರಿಗೆ
ಏನ ಮಾಡಿಸಬೇಕೋ ಮಾಡಿಸುವಿ,
ಏನ ಕೊಡಿಸಬೇಕೋ ಕೊಡಿಸುವಿ!
ನಿನ್ನ ವ್ಯವಸ್ಥೆಯನ್ನು ಅರಿಯದ ನಾನು
ಇಲ್ಲದ ಅವಸ್ಥೆಗೆ ಒಳಗಾದರೆ

ನೀನೇನ ಮಾಡುವಿಯಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

೬೦

ನೋಟವೊಂದರಿಂದ
ನೂರು ಕವಿತೆಗಳಿಗೆ ಪ್ರೇರಣೆ ಪಡೆದೆ-
ಆದರೂ ಒಂದನ್ನೂ ಬರೆಯದೆ ಹೋದೆ!
ಬೇಟವೊಂದರಿಂದ
ನೂರು ಕವಿತೆಗಳಿಗೆ ಸ್ಫೂರ್ತಿ ಪಡೆದೆ-
ಆದರೂ ಒಂದನ್ನೂ ಬರೆಯದೆ ಹೋದೆ!
ಮಾಟವೊಂದರಿಂದ
ನೂರು ವಚನಗಳಿಗೆ ಪ್ರಚೋದನೆ ಪಡೆದೆ-
ಆದರೂ ಒಂದನ್ನೂ ಬರೆಯದೆ ಹೋದೆ!
ಹೀಗಿದ್ದೂ, ಬಹಳ ಬರೆದಿರುವೆನೆಂಬ ಬಿಮ್ಮು ನನಗೆ!
ಹೆಚ್ಚು ಹೇಳಿರುವೆನೆಂಬ ಹಮ್ಮು ನನಗೆ!
ಕಾಳಿದಾಸ, ಹೋಮರ್, ಷೇಕ್ಸ್‌ಪಿಯರರು ಬರೆದುದೇ
ಬದುಕಿನ ಸಿಂಧುವಿನ ಬಿಂದುವಿಗೂ ಸರಿಯಿರದಿರುವಾಗ
ನಾನು ಬರೆದುದು ಅದೆಷ್ಟು ಅಲ್ಲ,
ಅದೆಂಥ ಅಲ್ಪ-
ಎಂಬುದರ
ಅರಿವನೆನಗೆ ನೀಡಿ
ನನ್ನ ಹಮ್ಮಿನ ಹಿಮ
ಕರಗುವಂತೆ ಮಾಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೬೧

ಮರದ ಮೇಲೆ
ಸಾವಿರ ಸಾವಿರ ಹಕ್ಕಿಗಳ ಸದ್ದಿದ್ದರೂ
ಕೆಳಗೆ
ಬೇರುಗಳು ಸದ್ದಿಲ್ಲದೆ ಸಾರ ಹೀರಿ
ಮರದ ಮೈಯಲ್ಲೆಲ್ಲ ಹರಿಸುತ್ತಲೇ ಇರುತ್ತವೆ;
ಮನೆಯ ತುಂಬ
ಗದ್ದಲ ಗಡಿಬಿಡಿಗಳಿದ್ದರೂ

ಮನೆಯ ದೀಪ
ಸದ್ದು ಗದ್ದಲ ಗಡಿಬಿಡಿಗಳಿಲ್ಲದೆ
ಬೆಳಕು ಬೀರುತ್ತಲೇ ಇರುತ್ತದೆ;
ಇಂದ್ರಿಯಗಳ
ಚಾಪಲ್ಯ ಚಾಂಚಲ್ಯಗಳೇನಿದ್ದರೂ
ಹೃದಯ ಮಾತ್ರ
ಏಕನಿಷ್ಠೆಯಿಂದ, ಕರ್ತವ್ಯಪ್ರಜ್ಞೆಯೊಡನೆ
ಸ್ನಾಯುಗಳಿಗೆ ಶೋಣಿತ ಒದಗಿಸುತ್ತಲೇ ಇರುತ್ತದೆ!
ನನಗೂ
ಜಗದ ಜಂಜಾಟಗಳಲ್ಲಿಯೂ
ನೀರವವಾಗಿ ನಿನ್ನ ನೆನೆಯುತ್ತ
ನೀನಿತ್ತ ಕಾಯಕವ ನಿರ್ವಹಿಸುವ
ನಯಜ್ಞತೆಯ ನೀಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೬೨

ಆದಿಮೌನದ
ಮಾತಿನ ರೆಂಬೆಗಳು
ತರತರದ ಹಣ್ಣು ಬಿಟ್ಟರೂ
ಸವಿಯೊಂದೇ;
ಆದಿರೂಪದ
ಆಕಾರಗಳು ಅಸಂಖ್ಯವಾದರೂ
ಅವುಗಳ ಸ್ಥಿತಿ ಲಯಗಳ
ಸೂತ್ರವೊಂದೇ;
ಆದಿಕಾಮದ
ಅವತಾರಗಳು ಅನೇಕವಾದರೂ
ಅವುಗಳ ತೃಪ್ತಿಯರಿಯದ
ತೃಷ್ಣೆಯೊಂದೇ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮರೂಪಗಳ ಬಗ್ಗೆ
ವಾದ ವಿವಾದಗಳೇನಿದ್ದರೂ
ನಿನ್ನ ಅಪಾರ ಅಚಿಂತ್ಯ ಕರುಣೆಯೊಂದೇ!

೬೩

ಕಾಲವೆ, ನಿನ್ನ ಚಣಗಳು ಹೆಚ್ಚೋ,
ಸ್ಥಲವೆ, ನಿನ್ನ ಕಣಗಳು ಹೆಚ್ಚೋ?
ಅಣು ಚಣಗಳ ಪರಿಣಯ,
ಜೀವಾಣುಗಳ ಉದಯ,
ಸ್ಥಲಕಾಲಗಳನ್ನೂ ಮೀರಿ ನಿಲ್ಲುವ
ಮಹಾಮಾನವರ ದಿಗ್ವಿಜಯ!
ಪರಮಾಣು ಪರಮಾಣುಗಳಲ್ಲಿ
ಅದ್ಭುತಗಳ ಉದ್ಭವ;
ಚಣಚಣಗಳಲ್ಲಿ
ಮಹದ್ಘಟನೆಗಳ ಸಂಭವ!
ನಿನ್ನ ಸೃಷ್ಟಿ ವಿಸ್ಮಯಕರ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೪

ತಂದೆಯೇ,
ನಿನ್ನ ಮಕ್ಕಳೆಲ್ಲರಿಗೆ
ನನ್ನ ಮನೆಯಲ್ಲಿ ಸ್ಥಳವೀಯಲಾರೆ,
ನನ್ನ ಮನದಲ್ಲಿ ಸ್ಥಳವೀಯಬಲ್ಲೆ;
ಅಂಥ ಮನವ ನೀಡಾ!
ನಿನ್ನ ಮಕ್ಕಳೆಲ್ಲರಿಗೆ
ನನ್ನ ಧನದಲ್ಲಿ ಪಾಲು ಒದಗಿಸಲಾರೆ,
ನನ್ನ ಪ್ರೀತಿಯಲ್ಲಿ ಪಾಲು ಕೊಡಬಲ್ಲೆ;
ಅಂಥ ಪ್ರೀತಿಯ ಹೃದಯವನ್ನು ನೀಡಾ!
ತಂದೆ ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ತನುವ ದುಡಿಸಿ ನಿನ್ನ ಮಕ್ಕಳೆಲ್ಲರ ತಣಿಸಲಾರೆ,
ಅವರೆಲ್ಲರಿಗಾಗಿ ಪ್ರಾರ್ಥನಾ ಮಂದಿರ ಮಾಡಬಲ್ಲೆನದನು
ಇಂಥ ದೇಗುಲವಾಗುವಂತೆ
ಈ ದೇಹವನ್ನು ಪ್ರೇರಿಸಾ!

೬೫

ಕೊನೆಗೊಮ್ಮೆ ಕಂಡೆನಯ್ಯ ನಿನ್ನನ್ನು!
ಮಠಮಂದಿರಗಳಲ್ಲಿ ಅಲ್ಲ,

ಇಗರ್ಜಿ ಮಸೀದಿಗಳಲ್ಲಿ ಅಲ್ಲ,
ವಿಹಾರ ಬಸದಿಗಳಲ್ಲಿ ಅಲ್ಲ,
ಕ್ಷೇತ್ರ ತೀರ್ಥಗಳಲ್ಲಿ ಅಲ್ಲ–
ಬಡವನ ದೃಢಮನದ ದುಡಿಮೆಯಲ್ಲಿ,
ದುಃಖಿತರ ಕಂಬನಿ ತೊಡೆವರಲ್ಲಿ,
ನಿಜಭಕ್ತರ ನೀರವ ಪ್ರಾರ್ಥನೆಯಲ್ಲಿ,
ತಾಯಿಯ ಪರಿಶುದ್ಧ ಪ್ರೀತಿಯಲ್ಲಿ,
ಮಗುವಿಗೆ ನಗೆ, ನಯನ ದೀಧಿತಿಯಲ್ಲಿ,
ಶ್ರೀಸಾಮಾನ್ಯರ ನಿರ್ಮಲ ನೀತಿಯಲ್ಲಿ,
ಪತಿತರೆದೆಯಲ್ಲಿಯೂ ಬೆಳಗುವ
ಸದ್ಭಾವ ಜ್ಯೋತಿಯಲ್ಲಿ,
ನಿರ್ಗತಿಕರಿಗೆ ನಿರ್ಗತಿಕರು ನೆರವಾಗುವ
ನಿರುಪಮ ರೀತಿಯಲ್ಲಿ,
ನಿನ್ನನ್ನು ನಿಜವಾಗಿ ನಂಬಿದವರ
ನಿಶ್ಚಿಂತೆ, ನಿರ್ಭೀತಿಯಲ್ಲಿ,
ಸ್ವಾರ್ಥವನ್ನು ಮೆಟ್ಟಿ ನಿಲ್ಲುವ
ಪಾವನ ಸಹಾನುಭೂತಿಯಲ್ಲಿ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೬

ಮಠವಿರಲಿ, ಮಂದಿರವಿರಲಿ, ಮಸೀದಿಯಿರಲಿ,
ನಿನ್ನ ಧಾಮವೆಂದು ಇನ್ನೇನೇ ಇರಲಿ–
ಎಲ್ಲ ಕಲ್ಲು ಮಣ್ಣಿನ ಕಟ್ಟಡಗಳೇ!
ನಿಜಭಕ್ತಿಯ ಶಕ್ತಿ ಅವುಗಳಲ್ಲಿ ಸೇರಿದರೆ
ಆ ಕಲ್ಲು ಮಣ್ಣುಗಳೂ ಕಲ್ಪಲತೆಗಳು,
ಕಳ್ಳಭಕ್ತಿಯ ಕುಯುಕ್ತಿ ಬರೆ
ಆ ಕಲ್ಲು ಮಣ್ಣುಗಳೇ ನಮ್ಮಮನಸೇರಿದಂತೆ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೭

ಏಪ್ರಿಲಿನ ಮಲರಿಸುವ ಮಳೆಗಾಗಿ ಕಾದಿರುವ
ಕಾಫಿಯ ತೋಟದಂತೆ ಕಾದಿರುವೆನಯ್ಯ–

ನಿನ್ನ ಕೃಪಾವೃಷ್ಟಿಗಾಗಿ!
ನಿನ್ನ ಕರುಣೆಯ ಮರಣ ಕರುಣಿಸಿದನೋ,
ಬಗೆ ಬನವೆಲ್ಲ ಕುಸುಮಿತ,
ಜೀವನವೆಲ್ಲ ಸುರಭಿತ!
ನನ್ನೆದೆಯ ಸೌತೆ ಹೊಲದ
ಒಂದು ಕಾಯಿ ಹಣ್ಣಾಗಲೆಂದು ಕಾದಿಹೆನಯ್ಯ–
ಒಂದು ಕಾಯಿ ಹಣ್ಣಾಯಿತೋ,
ಹೊಲದಲ್ಲೆಲ್ಲ ಸೌತೆ ಹಣ್ಣುಗಳ ಹೊಂಬೆಳಕು!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕೃಪಾಕಟಾಕ್ಷ ವೀಕ್ಷಣೆಯ ಕ್ಷಣವೊಂದಕ್ಕಾಗಿ
ಕಾದಿಹಳೆನ್ನ ಸಾಧನೆಯ ಶಬರಿ!

೬೮

ಹೊಳೆಯ ಬದಿಗೆ ಬಾವಿ ತೋಡಿದರೆ
ಉಪ್ಪುನೀರು ಬಿದ್ದಂತೆ
ನಿನಗೆ ತೀರ ಸಮೀಪದಲ್ಲಿದ್ದೂ
ಹುಳಿ ಹಣ್ಣಾಗಿಯೇ
ಉಳಿದಿಹೆನಯ್ಯ ನಾನು!
ಈ ಹುಳಿ ನಿನ್ನ ಆರೋಗಣೆಗಲ್ಲದಿದ್ದರೂ
ನಿನ್ನ ಬಡಭಕ್ತರ ಅಂಬಲಿಗೆ
ಆಮ್ರವಾಗುವಂತಾದರೂ ಮಾಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೯

ನಿನಗಾಗಿ ಎರಡು ಬೆಳಕಿನ ಮನೆಗಳ ಬಿಟ್ಟುಕೊಟ್ಟೆ–
ನೀನಲ್ಲಿ ಇರಲೊಲ್ಲೆ;
ನಿನಗಾಗಿಯೇ ಕಲ್ಲುಗಾರೆಗಳಿಲ್ಲದ ಮಠ ಅರ್ಪಿಸಿದೆ–
ನೀನಲ್ಲಿಗೆ ಬರಲೊಲ್ಲೆ;
ನಿನಗೋಸುಗವೇ ಅನುಭವಗಮ್ಯ ಮಂಟಪ ಮುಡುಪಾಗಿಸಿದೆ–
ನೀನಲ್ಲಿಗೆ ಐತರಲೊಲ್ಲೆ!
ನಾನೇ ಬರಬೇಕೆಂದರೆ
ಬಾಯಿಬಿಟ್ಟು ಕರೆಯಲೊಲ್ಲೆ!

ನಾವಿಬ್ಬರೂ ಸಂಧಿಸಿ ಒಂದಾಗುವ
        ಪರಿಯ ತೋರಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೭೦

ಇದೀಗ ನನ್ನ ಕಲ್ಪನೆ
ವ್ಯೋಮ ವ್ಯೋಮಾತೀತಗಳನ್ನು ಸುತ್ತಿ
ಹೊರಟ ಸ್ಥಳಕ್ಕೆ ಹಿಂದಿರುಗಿತು;
ಇದೀಗ ಮಧುರ ಸ್ಮೃತಿಯೊಂದು
ತ್ರೇತಾ ದ್ವಾಪರಗಳಲ್ಲಿ ಸಂಚರಿಸಿ
        ಕಲಿಯುಗಕ್ಕೆ ಮರಳಿತು!
ಅದು ಎಲ್ಲಿಂದ ಹೊರಟಿತು,
ಎಲ್ಲಿಗೆ ಹಿಂದಿರುಗಿತು?
ನನ್ನಿಂದಲೆ, ನನ್ನೊಳಗಿರುವ ನಿನ್ನಿಂದಲೆ?
ನನ್ನಲ್ಲಿಗೆಯೆ ನನ್ನೊಳಿರುವ ನಿನ್ನಲ್ಲಿಗೆಯೆ,
        ಸ್ವತಂತ್ರಧೀರ ಸಿದ್ಧೇಶ್ವರಾ?

೭೧

ಇನ್ನಾರಿಗೂ ಇಲ್ಲದಂಥ ಗಂಡ
        ನನಗೇ ಇಹನೆಂದು
ನಾನೆಲ್ಲಿ ಹೇಳಿದೆ ಗೆಳತಿ?
ನನ್ನ ಗಂಡ, ನಿನ್ನ ಗಂಡ, ಎಲ್ಲರ ಗಂಡ
ಒಬ್ಬನೇ ಇರುವಾಗ ಯಾಕಿಂತು ಕೇಳುತ್ತೀ?
ಈ ಗಂಡನ ಗರಿಮೆಯೇ ಇದು–
        ಎಲ್ಲರ ಹೆಂಡಿರ ಗಂಡ,
        ಎಲ್ಲರ ಗಂಡರ ಗಂಡ,
        ಕಣ್ಗೆ ಕಾಣದ ಗಂಡ,
        ಕೈಗೆ ಸಿಲುಕದ ಗಂಡ,
ಊಹೆ ಕಲ್ಪನೆಗೆ ನಿಲುಕದ ಗಂಡ,
ನನ್ನ ತನುವನೇ ತನು ಮಾಡಿಕೊಂಡ,
ನನ್ನ ಮನವನೇ ಮನ ಮಾಡಿಕೊಂಡ
        ನನ್ನಲ್ಲಿ ಇದ್ದೇ
ನನ್ನ ತನ್ನಲ್ಲಿ ಬಚ್ಚಿಟ್ಟುಕೊಂಡ ಗಂಡ!
ಎಂಥ ಬೆರಗುಗೊಳಿಸುವ,

ಅರಿಯ ಹಚ್ಚುವ,
ಮರೆ ಹಚ್ಚುವ ಗಂಡ
ಈ ಸ್ವತಂತ್ರಧೀರ ಸಿದ್ಧೇಶ್ವರಾ?

## ೭೨

'ನಾನು ಬರೆದುದರಲ್ಲಿ ನಿನಗೆ ಪ್ರಿಯವಾವುದು'
ಎಂದು ಎನ್ನನೇಕೆ ಕೇಳುವೆ ನಲ್ಲ?
ಓದಿಹೆನೆ, ಓದ ಬಲ್ಲೆನೆ ನೀನು ಬರೆದುದನೆಲ್ಲ?
ನಕ್ಷತ್ರಗಳ ಅಕ್ಷರಗಳಲ್ಲಿ,
ವಿವಿಧ ಪುಷ್ಪಗಳ ವರ್ಣಮಾಲೆಯಲ್ಲಿ,
ಕಣಕಣಗಳ, ಚಣಚಣಗಳ ಲಲಿತಲಿಪಿಯಲ್ಲಿ-
ನೀ ಬರೆದುದಕ್ಕೆ ಲೆಕ್ಕವುಂಟೆ
ಭೂ-ವ್ಯೋಮ-ವ್ಯೋಮಾತೀತಗಳಲ್ಲಿ?
ಎವೆ ತೆರೆದು ಎವೆ ಮುಚ್ಚುವುದರೊಳಗಾಗಿ
ಕೋಟಿ ಕೋಟಿ ಜೀವಿಗಳ ಜೀವನವೃತ್ತ ಬರೆವೆ,
ಕೋಟಿ ಕೋಟಿ ಬೀಜಗಳ ಉದ್ಭವ-ಗೀತೆ ಬರೆವೆ,
ಕೋಟಿ ಕೋಟಿ ಅಂಡಗಳ ಪಿಂಡೋತ್ಪತ್ತಿರಗಳೆ ಬರೆವೆ!
ಶಿಲೆಯಲ್ಲಿ, ಎಲೆಯಲ್ಲಿ, ಜಲದಲ್ಲಿ, ನೆಲದಲ್ಲಿ,
ಬಾನು, ಬಯಲು, ಬಯಲಾಚೆಯಲ್ಲಿ
ಬರೆಯುತ್ತಲೇ ಇರುವೆ!
ಇದೆಲ್ಲವನ್ನೂ ಓದಬಲ್ಲ ಬಲ್ಲಿದರು
ಇದುವರೆವಿಗೂ ಹುಟ್ಟಿಲ್ಲ!
ನನ್ನ ಪಾಡೇನು?
ಆದರೂ, ಓದಿದನಿತರ ಆಧಾರದಿಂದ ಒರೆವೆನಿಂತು;
ನಿನ್ನ ಬೆರಳುಗಳೆನ್ನ ಕುರುಳುಗಳಲ್ಲಿ ಬರೆದುದು,
ನಿನ್ನ ತುಟಿಗಳು ನನ್ನ ಕೆನ್ನೆಯ ಮೇಲೆ ಬರೆದುದು
ಅತ್ಯಂತ ಪ್ರಿಯ ನನಗೆ!
ನೀನೆ ಪ್ರಿಯ ನನಗೆ-
ಸ್ವತಂತ್ರಧೀರ ಸಿದ್ಧೇಶ್ವರಾ !

## ೭೩

ಕತ್ತಲೆಯಲ್ಲಿ ಕದ್ದು ಬಂದು ಹೋಗಲು
ನೀನೇನಲ್ಲ ಜಾರ, ಚೋರ-
ನೀನಿಹೆ ಒಪ್ಪಿ ಕೈಹಿಡಿದ ನೀರ,

ನಾನಿಹೆ ನಿನ್ನ ಕೊರಳ ಹಾರ!
ನಿಸ್ಸಂಕೋಚವಾಗಿ ಬಾ, ಪ್ರಿಯಕರ!
ಇಂದಿದೀಗ ಪೂರ್ಣೇಂದು ಉದಿಸಿದ್ದಾನೆ,
ಅಣುರೇಣು ತೃಣಕಾಷ್ಠಗಳ ಮದಿಸಿದ್ದಾನೆ,
ಹೃದಯ ಹೃದಯಗಳ ಮೇಲೆ
ಪ್ರಣಯಮಧು ಹನಿಸಿದ್ದಾನೆ, ಹರಿಸಿದ್ದಾನೆ-
ಈಗ ಬರದೆ ಇನ್ನಾವಾಗ ಬರುವಿ, ದೊರೆಯೆ?
ಇಂದು ದೊರೆಯದಿರೆ ಇನ್ನೆಂದೂ ದೊರೆಯೆ!
ಇಂದೇ ಆಗಲಿ ಸವಿಕೂಟಗಳ ಸೂರೆ!
ನನ್ನಲ್ಲಿ ನೀನು ಕರಗು,
ನಿನ್ನಲ್ಲಿ ನಾನು ಕರಗುವೆ,
ಸ್ವತಂತ್ರಧೀರ ಸಿದ್ಧೇಶ್ವರ!

೭೪

ನಿನ್ನನ್ನು ಕೂಡಿ ಇರುವುದೂ ಕಷ್ಟ,
ಅಗಲಿ ಇರುವುದೂ ಕಷ್ಟ-ಎನ್ನರಸ!
ಕೂಡಿದರೆ ಎನ್ನ ಕಣ ಕಣವೂ
ಕರಗಿ ನೀರಾಗುತ್ತಿರುವಂಥ ಭಾವ,
ಆಗಲಿದರೆ ರೋಮ ರೋಮವೂ
ಜ್ವಾಲೆಯಾಗಿ ಉರಿವಂಥ ಅನುಭವ!
ನನ್ನನಿನ್ನು ಇಲ್ಲವಾಗಿಸು,
ಇಲ್ಲವಾಗಿಸು ಎಲ್ಲವಾಗಿಸು ಪ್ರಿಯಕರ
ಸ್ವತಂತ್ರಧೀರ ಸಿದ್ಧೇಶ್ವರ!

೭೫

ಕಾಲ ನೂಲುತ್ತಿದೆ ಚಣಗಣಗಳಿಂದ ಯುಗಗಳನ್ನು;
ಸ್ಥಲ ನೆಯ್ಯುತ್ತಿದೆ ಕಣಗಳಿಂದ ಜಗಗಳನ್ನು;
ಎರಡೂ ಕ್ರಿಯೆಗಳಲ್ಲಿ ನಿನ್ನ ಶಕ್ತಿಯ ಸ್ಪಂದನ,
ಸಾರ್ವಕಾಲಿಕ, ಸಾರ್ವದೇಶಿಕ ಸಂವೇದನ!
ಚಲಿಸಿ ಚಲಿಸಿ ಚಲನಶೂನ್ಯವಾಗುವುದು,
ನಿದ್ರಿಸಿ ನಿದ್ರಿಸಿ ಜಾಗರಣಗೊಳ್ಳುವುದು!

ನಡೆದೇ ಇದೆ ನಿರಂತರ,
ಇದೇ ನಿಜ ಚಿರಂತನ–
ಸ್ವತಂತ್ರಧೀರ ಸಿದ್ಧೇಶ್ವರ!

## ೭೬

ಆಣೆಕಲ್ಲುಗಳು ಬೀಳುವಷ್ಟು ಧಾರಾಳವಾಗಿ
ಸಿಡಿಲುಗಳು ಬೀಳುವುದಿಲ್ಲ–
ಇದು ನಿನ್ನ ದಯೆ!
ಹಸುಗಳು ಹುಟ್ಟುವಷ್ಟು ಧಾರಾಳವಾಗಿ
ಹುಲಿಗಳು ಹುಟ್ಟುವುದಿಲ್ಲ–
ಇದು ನಿನ್ನ ದಯೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಉಳಿಸುವ ಶಕ್ತಿಗಳಷ್ಟು ಧಾರಾಳವಾಗಿ
ಅಳಿಸುವ ಶಕ್ತಿಗಳು ಉದಿಸದಿರೆ
ಅದು ನಿನ್ನ ದಯೆಗಳಲ್ಲಿ ದಯೆ!

## ೭೭

ಈ ಬದುಕಿನ ದೋಣಿಯಲ್ಲಿ
ಕುಳಿತುಕೊಳ್ಳಬೇಕು;
ದುಡಿದದ್ದನ್ನೆಲ್ಲ ಕೊಟ್ಟು
ಟಿಕೆಟ್ಟು ಕೊಳ್ಳಬೇಕು;
ಆದರೂ, ಇಂಥಲ್ಲಿಗೇ ಕೊಂಡೊಯ್ಯೆಂದು
ಕೇಳದಿರಬೇಕು!
ಪಾಪ, ಅದಕ್ಕೂ ಗೊತ್ತಿಲ್ಲ–
ಅದನ್ನು ನಡೆಸುವ ಅಂಬಿಗನಾರೆಂಬುದು!
ಸ್ವತಂತ್ರಧೀರ ಸಿದ್ಧೇಶ್ವರನೆ
ಅಂಬಿಗನೆಂದು ನಂಬಿಬಿಟ್ಟರೆ
ಉದ್ಭವಿಸುವುದೇ ಇಲ್ಲ ಪ್ರಶ್ನೆ?–
ಎಲ್ಲಿಗೆ ಹೋಗಬೇಕೆಂಬುದು!

## ೭೮

ಪೆಟ್ಟಿನ ಮೇಲೆ ಪೆಟ್ಟು,
ಗಾಯದ ಮೇಲೆ ಗಾಯ,

ಬರೆಯ ಮೇಲೆ ಬರೆ
ಯಾಕಿಷ್ಟು ಕೋಪ
ನನ್ನ ಮೇಲೆ ದೊರೆ?
ನನ್ನ ಗಾಯಗಳ ಬಾಯಿಗಳಿಂದಲೂ
ನಿನ್ನ ನಾಮಸ್ಮರಣೆ;
ನನ್ನ ಬಾಸುಂಡೆಗಳ ಬಾಯಿಗಳಿಂದಲೂ
ನಿನ್ನ ಪ್ರಾರ್ಥನೆ!
ರಕ್ಷಣೆಗಾಗಿಯಲ್ಲ-
ಕ್ಷಮೆಯ ಭಿಕ್ಷೆಗಾಗಿ,
ಸ್ವತಂತ್ರಧೀರ ಸಿದ್ಧೇಶ್ವರಾ!

೭೯

ನಾನೇನೂ ನಿನ್ನನ್ನು ಬೇಡಿ ಹುಟ್ಟಿಲ್ಲ;
ನೀನೂ ನನ್ನನ್ನು ಕೇಳಿ ಜೀವ ಸೆಳೆದುಕೊಳ್ಳುವುದಿಲ್ಲ!
ನಿನಗೆ ನನ್ನ ಭಿಡೆಯಲ್ಲಿ,
ನನಗೆ ನನ್ನ ಭಿಡೆಯಲ್ಲಿ?
ಆದರೂ, ನೀನೆನ್ನ
ಉಸಿರುಸಿರಿಗೆ ಅಸುವಾಗದಿದ್ದರೆ
ನನಗೆ ಜೀವನವೆಲ್ಲಿ-
ಸ್ವತಂತ್ರಧೀರ ಸಿದ್ಧೇಶ್ವರ?

೮೦

ಇಂದೆನ್ನ ಬಿಸಿ ಬಿಸಿ ಭಾಷ್ಪಗಳಿಂದಲೇ ಅಭಿಷೇಕ ನಿನಗೆ;
ನನ್ನ ಸುಟ್ಟ ಬಯಕೆಗಳ ಭಸ್ಮೋದ್ಧೂಳನ ನಿನಗೆ;
ನನ್ನ ಮನದ ಗಾಯಗಳ ಮೊಲ್ಲೆ ಮಲ್ಲಿಗೆಗಳ ಅಲಂಕಾರ ನಿನಗೆ;
ನನ್ನ ನಿಟ್ಟುಸಿರುಗಳ ಧೂಪ ಧ್ರೂಮ ನಿನಗೆ;
ನನ್ನ ಭಗ್ನ ಸ್ವಪ್ನಗಳ ನೈವೇದ್ಯ ನಿನಗೆ;
ನನ್ನ ನಿರಾಶೆಗಳ ತಾಂಬೂಲ ನಿನಗೆ!
ನೀನಿತ್ತುದನ್ನೇ ನಿನಗರ್ಪಿಸುವೆ!
ನೀನೀಯದುದನ್ನು ಎಲ್ಲಿಂದ ತರುವೆ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೮೧

ಕಂಬನಿಗಳೆ,
ಸೆರಗೊಡ್ಡಿ ಬೇಡಿಕೊಳ್ಳುವೆ ನಿಮ್ಮನ್ನು,
ಏಕೆ ಸುರಿದಿರೆಂಬುದ
ಯಾರಿಗೂ ಹೇಳಬೇಡಿರಿ;
ನಿಟ್ಟುಸಿರುಗಳೆ,
ನಿಮ್ಮಲ್ಲಿ ನಮ್ರ ನಿವೇದನೆ ನನ್ನದು,
ಏಕೆ ಹೊರಹೊಮ್ಮಿದಿರೆಂಬುದ
ಯಾರಿಗೂ ಹೇಳಬೇಡಿರಿ!
ಸ್ವತಂತ್ರಧೀರ ಸಿದ್ಧೇಶ್ವರನೇ
ನಿಮ್ಮನಿತ್ತಿಹನಾಗಿ
ನೀವೇನ ಹೇಳಿದರೂ
ಅವನ ದೂರಿದಂತೆ!

## ೮೨

ನನ್ನ ಕಣ್ಣೀರನೊರೆಸಲು ಬೇರಾರೂ ಬೇಕಿಲ್ಲ–
ನಾನೇ ಒರೆಸಿಕೊಳ್ಳುವೆನಯ್ಯ!
ದುಃಖದ ಕಣ್ಣೀರು ಉಕ್ಕಿದಲ್ಲಿಯೇ
ಆನಂದದ ಅಶ್ರು ಹರಿದಾವು;
ಬೆಂಕಿಯ ಮಳೆ ಬಂದ ಸ್ಥಳದಿಂದಲೇ
ಜೇನಿನ ಮಳೆಗಳು ಸುರಿದಾವು!
ಸ್ವತಂತ್ರಧೀರ ಸಿದ್ಧೇಶ್ವರಾ,
ಒಮ್ಮೆಯೂ ಕಂಬನಿಗರೆಯದವರಾರಾದರೂ ಇದ್ದರೆ
ಅವರೆನ್ನ ಕಂಬನಿ ತೊಡೆಯಲಿ;
ಇಲ್ಲದಿರೆ ಈ ಕೆಲಸ ನನಗೇ ಬಿಡಲಿ!

## ೮೩

ನನ್ನ ಬನ್ನದ ಬಟ್ಟಲವಿಂದು
ತುಂಬಿ ತುಳುಕುತ್ತಲಿದೆ!
ಬರಿದಾಗಿದ್ದಾಗ,
ಅರೆಯಾಗಿದ್ದಾಗ
ಕೊರೆಯಾಗಿದ್ದಿತದರ ಚೆಲುವು!

ತುಂಬಿ ಹರಿವ ಬಟ್ಟಲಕ್ಕೀಗ
ತುಂಬು ಚೆಲುವು!
ಅದನ್ನು ಕಾಣುವ
ಭಾಗ್ಯವನ್ನೆನಗಿತ್ತೆ!
ಇದೇನು ಸಣ್ಣ ಅನುಗ್ರಹವೆ-
ಸ್ವತಂತ್ರಧೀರ ಸಿದ್ಧೇಶ್ವರ?

**೮೪**

ನಿರಾಶೆಯ ಬೆನ್ನೇರಿ ಬರುತ್ತಿಹ ನಿರಾಶೆಗಳಿಂದ,
ನಿಟ್ಟುಸಿರ ಹೆಗಲೇರಿ ಬರುತ್ತಿರುವ ನಿಟ್ಟುಸಿರುಗಳಿಂದ,
ಉಮ್ಮಳದ, ತಳಮಳದ, ಕಳವಳದ,
ಕಾತರದ, ಕಸಿವಿಸಿಯ, ಕಕವಕದ ಕಕ್ಕುರಿಯಿಂದ
ಕಕ್ಕಾವಿಕ್ಕಿಯಾಗಿರುವೆನಯ್ಯ!
ಕಚಪಿಚಿ ಕುಣಿಯುತ್ತಿವೆ ಇವು ನನ್ನನಡರಿ-
ಒಡೆಯರು ಕುಣಿವಂತೆ ಬಡವರ ಹೊಟ್ಟೆಗಳನ್ನೇರಿ!
ನೀನು ಕರುಣಿಸಿದರೆ
ಇವುಗಳ ನಿಶಾಚರ ನಾಟ್ಯ
ಲಲಿತಲಾಸ್ಯವಾಗದೆ-
ಸ್ವತಂತ್ರಧೀರ ಸಿದ್ಧೇಶ್ವರಾ?

**೮೫**

ಹಿಂದೆ,
ನನ್ನದೆನ್ನುವ ಎಲ್ಲದರ ಬಗೆಗೂ
ಅಳತೆಯಿಲ್ಲದ ಅಭಿಮಾನವಿದ್ದಿತು ನನಗೆ!
ಇಂದು,
ಅಸಹ್ಯವಾಗಿದ್ದೇನೆ ನಾನೇ ನನಗೆ!
ಯಾಕೆ ತಂದೆ,
ನಿನಗೆ ಶರಣು ಬಂದೆನೆಂದೆ?
ನಿನಗೆ ತಕ್ಕ ಮಗನನ್ನಾಗಿ ಮಾಡುವಿಯೆಂದು
ನಂಬಿ ನಿನ್ನ ಬಳಿಗೆ ಬಂದರೆ
ನಾನೆಂದರೆ ನನಗೇ ಜಿಗುಪ್ಸೆಯಾಗುವಂತೆ ಮಾಡುವುದೆ?
ಇದೆಂಥ ವಾತ್ಸಲ್ಯದ ವರವಯ್ಯ?

ಇದು ನಿನಗೆ ತರವೆ, ಅಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

## ೮೬

ನನ್ನ ಗುಂಡಿಗೆಯ ಗಟ್ಟಿತನವನ್ನು ಪರೀಕ್ಷಿಸಲು
ಇಷ್ಟೊಂದು ಕಷ್ಟನಷ್ಟಗಳ ಅಗ್ಗಿಷ್ಟಿಕೆಯಲ್ಲಿ
ಮತ್ತೆ ಮತ್ತೆ ಸುಟ್ಟು ನೋಡುತ್ತಲಿಹೆಯಾ ಅದನ್ನು?
ಎಷ್ಟು ಸಲ ಪರೀಕ್ಷಿಸಿದ್ದನ್ನೇ
ಪುನಃ ಪುನಃ ಪರೀಕ್ಷಿಸಬೇಕೆಂದಿರುವೆ ತಂದೆ?
ನಿನ್ನ ಪರೀಕ್ಷೆಗಳಿಗೇ ಅಗ್ಗಪಾಡು ತಂದೆ!
ನಿನ್ನ ಮೈಗೆ ಬಡಿದುಕೊಳ್ಳಲು
ಇದರ ಬೂದಿಯೇ ಬೇಕಿದ್ದರೆ
ಸುಡು ತಂದೆ, ಸುಡು ಸಾಕಾಗುವವರೆಗೆ;
ಅದು ಸಹಸ್ರಪುಟಿ ಭಸ್ಮವಾಗುವವರೆಗೆ!
ನಿನ್ನ ಶಕ್ತಿಯಿರುವುದೇ ಅಲ್ಲಿಯವರೆಗೆ!
ಅಲ್ಲವೆ, ಸ್ವತಂತ್ರಧೀರ ಸಿದ್ಧೇಶ್ವರ?

## ೮೭

ಸ್ವತಂತ್ರಧೀರ ಸಿದ್ಧೇಶ್ವರ,
ಸ್ವತಂತ್ರಧೀರ ಸಿದ್ಧೇಶ್ವರ,
ಸ್ವತಂತ್ರಧೀರ ಸಿದ್ಧೇಶ್ವರ–
ಕೇಳಿಸದೆ ನನ್ನ ಆರ್ತಸ್ವರ?
ನನ್ನ ಸ್ನಾಯುಗಳ ಸಜೀವ ತಂತ್ರಿಗಳು ಮಿಡಿಯುತ್ತಿವೆ,
ನನ್ನ ಕರುಳುಗಳ ಸುರುಳಿ ತಂತಿಗಳು ನುಡಿಯುತ್ತಿವೆ,
ನನ್ನ ರಕ್ತದ ಕಣಕಣವೂ ತುಡಿಯುತ್ತಿವೆ;
ಕೇಳಿಸದೆ ನಿನಗೆ
ಆ ಅಸಂಖ್ಯ ತಂತ್ರೀ ಶೋಕ ಸ್ವರ?
ಪರಮಾಣುಗಳೆಲ್ಲ ಕಿವಿಯಾಗಿಯೂ
ನೀನು ಬಧಿರ?

## ೮೮

"ನಿನ್ನ ನರಳಿಕೆಗಳಿಂದಲೇ ನಿನ್ನ ಒಳಗಿನ ಅರಳಿಕೆ,
ನಿನ್ನ ಬಿಕ್ಕಳಿಕೆಗಳಿಂದಲೇ ನಿನ್ನ ಹೆಗ್ಗಳಿಕೆ"–

ಇದು ನಿನ್ನ ತೀರ್ಮಾನವೆ, ತಂದೆ?
ಕೊಡು-ನರಳಿಸುವ ನೋವುಗಳ,
ಬಿಕ್ಕು ತರಿಸುವ ಬೇನೆಗಳ!
ಬೇನೆಗಳ ದಾರ ಮಾಡಿ,
ನೋವುಗಳ ಹೂವು ಪವಣಿಸಿ
ನಿನ್ನ ಕೊರಳಿಗೆ ಹಾರ ಹೆಣೆಯುವೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೮೯

ವೃಂದಾವನದಲ್ಲಿ ವಿಹರಿಸಿದರೂ ಮರೆಯದ
ವ್ಯಥೆಯೊಂದು ಕತಕತನೆ ಕುದಿಯುತ್ತಿದೆ ಒಳಗೆ!
ಅಲ್ಪರಿದರೂ ಬಾರದಿದೆ ಶಾಂತಿ ಬಳಿಗೆ!
ನುಂಗು ನಿನ್ನ ಪಾಲಿನ ನಂಜಿನ ಗುಳಿಗೆ;
ಬೆಳೆಸು ಬನ್ನದೊಡನೆಯೇ ನೀನು ಸಲಿಗೆ!
ಸಿಲುಕದವರಾರು ಬನ್ನದ ಬಲೆಗೆ?
ಬನ್ನವೇ ಶಿಲ್ಪಿ ಬದುಕಿನ ಶಿಲೆಗೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿತ್ತ ಬನ್ನದ ಮೂಲಕವೇ
ಬರುವೆ ನಿನ್ನ ನೆಲೆಗೆ!

೯೦

ನಿನ್ನ ಧ್ಯಾನದ ದಿವ್ಯೌಷಧ ನನಗಿರಲು
ಮನೋಗಂಡಗಳ ಮಕರ ನಕ್ರಗಳ ಭಯವೆನಗಿರದಯ್ಯ;
ನಿನ್ನ ಕರುಣೆಯ ಕಾಪು ನನಗಿರಲು
ಸ್ವಾನುರಕ್ತಿ, ಸ್ವ-ಪರ ಪೀಡಾಸಕ್ತಿಗಳ ಭೀತಿಯೆನಗಿರದಯ್ಯ;
ನಿನ್ನ ನಾಮದ ದುಮುಕು-ಕೊಡೆ ನನಗಿರೆ
ಯಾವ ಸುಪ್ತ-ಚೇತನ ಪ್ರಪಾತಕ್ಕೂ ಹಾರಿ ಪಾರಾಗಬಲ್ಲೆನಯ್ಯ;
ನಿನ್ನ ಅಭಯದ ಮರು-ಪಯಣ-ವಾಹನ ನನಗಿರೆ
ಎಂಥ ರಕ್ತಿಯ ರಾಕೆಟ್ಟನ್ನೇರಿಯೂ ಮರಳಬಲ್ಲೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಚಾಲನೆಯ ಚುಕ್ಕಾಣಿಯಿರೆ
ಒಡಲ ಹಡಗನ್ನೇರಿ ಬಾಳ ಕಡಲನ್ನು ದಾಟಬಲ್ಲೆನಯ್ಯ!

೯೧

ಈ ಇಂದ್ರಿಯಗಳ ಅಶ್ವಗಳನ್ನು
ತಡಿಕಡಿವಾಣಗಳಿಲ್ಲದೆಯೆ ಏರಿ
ಅವುಗಳ ಸೊಕ್ಕಡಗುವವರೆಗೆ
ನಿಟ್ಟೋಡಿಸುವ ಗಟ್ಟಿತನ ನನ್ನದಲ್ಲ!
ಅವುಗಳಿಗೆ ಮೊದಲು
    ನಿನ್ನ ನೆನಹಿನ ತೋಬರಿ ಕಟ್ಟುವೆ;
    ತೋಬರಿ ಬರಿದಾದ ಮೇಲೆ ಕಡಿವಾಣ ಹಾಕಿ
ಬೆನ್ನಿಗೆ ನಿನ್ನ ತಿಳಿವಿನ ತಡಿ ಬಗಿಯುವೆ
ಆಮೇಲೆ ಏರಿ ಜಪದ ರಿಕಾಪಿನಲ್ಲಿ ಕಾಲಿರಿಸಿ,
ಚಚ್ಚರದ ಚಬಕದಿಂದ ಚಾಟಿಸುತ್ತ,
ಚರ್ಯೆಯ ಚಪ್ಪರಣೆ ಗೈಯುತ್ತ
ಸ್ವತಂತ್ರಧೀರ ಸಿದ್ಧೇಶ್ವರನತ್ತ ಸಾಗುವೆ!

೯೨

ನಿನ್ನ ನಂಬಿಕೆಯ ಸಿಂಬಿಯನ್ನು ತಲೆಗಿಟ್ಟುಕೊಂಡು
    ಬದುಕಿನ ಭಾರವನ್ನು ಹೊರಲು ಕಲಿತೆನಯ್ಯ;
ನಿನ್ನ ಎಚ್ಚರದ ಹಿಲಾಲನ್ನು ಹಿಡಿದುಕೊಂಡು
    ಬದುಕಿನ ಭೀಮಾರಣ್ಯದಲ್ಲಿ ಹಾದಿ ಹುಡುಕಿಕೊಂಡೆನಯ್ಯ
ನಿನ್ನ ಕರುಣೆಯ ಈಸುಗಾಯಿಯನ್ನು ಕಟ್ಟಿಕೊಂಡು
    ಇರವಿನ ಅಂಬುಧಿಯನ್ನು ಈಸುತ್ತಲಿಹೆನಯ್ಯ!
        ಸ್ವತಂತ್ರಧೀರ ಸಿದ್ಧೇಶ್ವರಾ,
        ನೀನೊಲಿದರೆ ಬುವಿ ಯಾವ ಲೆಕ್ಕ,
        ಬಯಲಾವ ಲೆಕ್ಕ, ಬಾನಾವ ಲೆಕ್ಕ?

೯೩

ಏನನೋ ಕಳೆದುಕೊಂಡಿರುವೆನೆಂಬ ಕಳವಳ
    ನಿನ್ನ ನೆನಹು ಕರಿಗೊಂಡು ಕರಗಿದುದಯ್ಯ;
ಎಲ್ಲಿಯೋ ತಪ್ಪಿದೆನೆಂಬ ಅಪರಾಧೀಭಾವ
    ನಿನ್ನಲ್ಲಿ ನಂಬಿಕೆ ಬಲಿತು ಬಯಲಾದುದಯ್ಯ;
ಏನೋ ದೊರೆಯಬೇಕಾದುದು ದೊರೆಯಲಿಲ್ಲೆಂಬ ಕೊರಗು
  ನೀನು ದೊರೆತರೆ ಸಾಕೆಂಬ ಹಂಬಲದಲ್ಲಿ

ಹಬೆಯಾಗಿ ಹಾರಿ ಹೋಯಿತಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರೋ ಹಳಿದರು,
ಯಾರೋ ಹಾನಿಗೈದರು,
ಯಾರೋ ಹಿಂಸಿಸಿದರೆಂಬ ಖತಿಯು
ನೀನೇ ಗತಿಯೆಂಬ ಶರಣಾಗತಿಯಲ್ಲಿ
ಲಯವಾದುದಯ್ಯ?

೯೪

ನಗರವೀಥಿಗಳಲ್ಲಿ
ಅಗಣಿತ ವಿದ್ಯುದ್ದೀಪಗಳಿದ್ದೇನಯ್ಯ-
ನನ್ನ ಮನೆಯಲ್ಲಿ ಮೇಣಬತ್ತಿಯೂ ಇರದಿದ್ದರೆ?
ಧರ್ಮದರ್ಶನಗಳ ದಿವ್ಯನಗರಗಳಲ್ಲಿ
ದೇದೀಪ್ಯಮಾನ ದೀಪಗಳಿದ್ದೇನಯ್ಯ-
ನನ್ನ ಬದುಕಿನ ಮುರುಕು ಗುಡಿಸಲಿನಲ್ಲಿ
ಒಡಕು ಹಣತೆಯೂ ಉರಿಯದಿದ್ದರೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲೆಲ್ಲಿಯೂ ನೀನು ಪ್ರೇಮ ಪ್ರಕಾಶವಾಗಿ
ಪಸರಿಸಿ ಪ್ರಯೋಜನವೇನಯ್ಯ-
ನಿನ್ನ ಕಿರಣವೊಂದು
ನನ್ನೆದೆಯ ಕಗ್ಗವಿಯ ಬೆಳಗದಿದ್ದರೆ?

೯೫

ಈ ಜೀವನದ ನಾವೆಯ
ಹುಟ್ಟು ಮಾತ್ರ ನನ್ನ ಕೈಯಲ್ಲಿ
ಅದನ್ನೆಳೆವ ಗಾಳಿಯ ಗೂಳಿಯ
ಮುಗದಾಣ ನಿನ್ನ ಕೈಯಲ್ಲಿ!
ಕೆಳಗೆ ನಿನ್ನ ನೀರು,
ಮೇಲೆ ನಿನ್ನ ಗಾಳಿ,
ಮಧ್ಯೆ ಮಧ್ಯೆ ಮಳೆ ಮಂಜುಗಳ ದಾಳಿ!
ನಡುವೆ ನಾವೆ ಒಡೆದರೆ
ಹುಟ್ಟು ತಡೆಯಬಲ್ಲುದೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೯೬

ಬೆಳಕಿನ ವರ್ಷಗಳಾಚೆಯ ಗೋಲದ
ಕಣವೊಂದು ಸೇರಿರದೆ ನನ್ನ ಮೈಯಲ್ಲಿ?
ಸಾವಿರ ವರ್ಷಗಳಾಚೆಯ ಪಂಪನ
ಸೊಲ್ಲೊಂದು ಸೇರಿರದೆ ನನ್ನ ಶಬ್ದಸಂಗ್ರಹದಲ್ಲಿ?
ಶತಶತಮಾನಗಳಾಚೆಯ ಮನನಿಕರ್ನೋರ್ವನ
ಚಿಂತನರೇಷೆ ಸೇರಿರದೆ ನನ್ನ ವಿಚಾರಗಳಲ್ಲಿ?
ಆದಿಮಾನವನ ಅತೃಪ್ತ ಅಭಿಲಾಷೆಗಳ
ನಿಟ್ಟುಸಿರಿರದೆ ನನ್ನುಸಿರಿನಲ್ಲಿ?
ಅಮೀಬಾ ಅನುಭವಿಸಿರಬಹುದಾದ
ಯಾತನೆ ಸೇರಿರದೆ ನನ್ನ ಬಸಿರಿನಲ್ಲಿ
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಅನಾದಿಯಿದ್ದೂ ನನ್ನ ಬಳಿಯ ಬುನಾದಿ-
ನೀನು ಸೇರಿರೆಯಾ ನನ್ನ ತನುಮನಪ್ರಾಣಗಳಲ್ಲಿ?

೯೭

ಅಣು ಪರಮಾಣುಗಳು ಅಧ್ಯಯನ ಯೋಗ್ಯ,
ಕ್ರಿಮಿ ಕೀಟಗಳು ಅಧ್ಯಯನ ಯೋಗ್ಯ,
ರೋಗ ರುಜಿನ ರೋಗಾಣುಗಳೂ ಅಧ್ಯಯನ ಯೋಗ್ಯ,
ನೆಲ ಬಯಲ ಬಾನುಗಳ ಏನೆಲ್ಲವೂ ಅಧ್ಯಯನ ಯೋಗ್ಯ,
ನನ್ನ ನಿನ್ನ ಸಂಬಂಧ ಅಧ್ಯಯನ ಯೋಗ್ಯವಲ್ಲವೇನು
ಸ್ವತಂತ್ರಧೀರ ಸಿದ್ಧೇಶ್ವರಾ?

೯೮

ಯಾವ ಕಾರಮುಗಿಲಿನ ಗರ್ಜನೆಯ ಕೇಳಿದೆ
ಭಾವಮಯೂರವೆ,
ಇದ್ದಕ್ಕಿದ್ದಂತೆ ನರ್ತಿಸತೊಡಗಿರುವೆ?
ಯಾವ ವಸಂತಾಗಮನದ ಸಿಹಿ ಸುದ್ದಿ ಕೇಳಿದೆ
ಬಗೆಯ ಕೋಗಿಲೆಯೆ,
ಒಮ್ಮೆಗೇ ಹಿಗ್ಗಿ ಬಗ್ಗಿಸತೊಡಗಿರುವೆ?
ಸುಳಿವ ಗಾಳಿಯಲ್ಲೆಲ್ಲ,
ಶ್ವಾಸ ಶ್ವಾಸದಲ್ಲೆಲ್ಲ

ಸ್ವತಂತ್ರಧೀರ ಸಿದ್ಧೇಶ್ವರನಿರುವಾಗ
ಯಾವ ನಿಮಿತ್ತವೇಕೆ ಬೇಕು-
ಕುಣಿದಾಡಲು, ಹಾಡಲು?

೯೯

ಇದೇನು ಪಸರಿಸುತ್ತಿದೆ ಮನದೊಳಿಂದು-
ಸಾಂಧ್ಯಗಗನದಲ್ಲಿ ಸ್ವರ್ಣಿಮೆ ಪಸರಿಸುವಂತೆ?
ಇದೇನು ಹರಡುತ್ತಲಿದೆ ಬಗೆಯ ಬನದೊಳಿಂದು-
ಪ್ರಭಾತದ ಮಧುವಾತದಲ್ಲಿ ಪರಿಮಳ ಹರಡುವಂತೆ?
ಇದೇನು ಹಬ್ಬುತ್ತಲಿದೆ ನೆನಹಿನಲ್ಲಿಂದು-
ಮಬ್ಬ ಸರಿಸುತ್ತ ಚಂದ್ರಿಕೆಯು ಹಬ್ಬುವಂತೆ?
ಇದೇನು ತುಂಬುತ್ತಲಿದೆ ತಿಳಿವಿನಲ್ಲಿಂದು-
ತಾಯ ಸ್ತನಗಳಲ್ಲಿ ಹಾಲು ತುಂಬುವಂತೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರು ಏನೇನ ಹಸುರಿಸದಯ್ಯ-
ಏನೇನ ಪಸರಿಸದಯ್ಯ-
ನಂಬಿ ನೆನೆವರಲ್ಲಿ!

೧೦೦

ಮೇಲೆ ಬಾನಿನಲ್ಲಿ
ಕಾರ್ಬೊನ್ನಿನಿಂದ ಹೊಳೆವ ಹೊನ್ನಿನವರೆಗೆ
ಹಲವು ಬಣ್ಣಗಳ ತಳೆದು
ಕುರಿ ಹಿಂಡಿನಂತೆ, ಬೇಟೆ ನಾಯಿಗಳಂತೆ,
ಕರಿ ತುರಗಗಳಂತೆ, ಕರೆವ ಸುರಭಿಗಳಂತೆ,
ಗದ್ದರಿಪ ಕೇಸರಿಗಳಂತೆ
ಬಂದು ಬಂದು ಬಯಲಾಗುವ ಮೋಡಗಳು!
ಒಳಗೆ ಬಗೆಯ ಬಾನಿನಲ್ಲಿ
ಚಿಂತನೆ ಚಂದ್ರಿಕೆಯೊಮ್ಮೆ,
ಕಲ್ಪನೆಯ ಕಾಮನಬಿಲ್ಲೊಮ್ಮೆ,
ಭಾವನೆಯ ಬಂಗಾರ ಮೋಡಗಳೊಮ್ಮೆ,
ವಿಕಾರಗಳ ಕಾರ್ಮೋಡಗಳೊಮ್ಮೆ,
ದ್ವೇಷ ರೋಷಗಳ ಗುಡುಗು ಸಿಡಿಲುಗಳೊಮ್ಮೆ,
ಕೊನೆಗೆ ಏನೂ ತೋಚದ ಶೂನ್ಯವೊಮ್ಮೆ!

ಸ್ವತಂತ್ರಧೀರ ಸಿದ್ಧೇಶ್ವರನಿಗೆ ಹೊಂದಿ
ಇವುಗಳಿಗೆ ಅರ್ಥ,
ಇಲ್ಲದಿರೆ ವ್ಯರ್ಥ!

೧೦೧

ಇಲ್ಲಿ ಸಿದ್ಧಲಿಂಗನಿಗೆ ತುಂಬೆ ಹೂಗಳ ಪೂಜೆ,
ಅಲ್ಲಿ ಬಯಲ ಲಿಂಗಕ್ಕೆ ಬೆಳ್ಳಕ್ಕಿ-ಹೂಗಳ ಪೂಜೆ,
ಮೇಘಲಿಂಗಕ್ಕೆ ಕಿರಣಕುಸುಮಗಳ ಪೂಜೆ,
ಆಕಾಶಲಿಂಗಕ್ಕೆ ನಕ್ಷತ್ರ-ಪುಷ್ಪಗಳ ಪೂಜೆ,
ಜಲಲಿಂಗಕ್ಕೆ ಮತ್ಸ್ಯ ಸುಮಗಳ ಪೂಜೆ,
ನೆಲಲಿಂಗಕ್ಕೆ ಹಸುಗೂಸುಗಳ ನಗೆ-ಹೂಗಳ ಪೂಜೆ-
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ನನ್ನ ನಯನಗಳ ಪೂಜೆ!

೧೦೨

ನನ್ನ ಅಂತರಂಗದ ಮೇಲೆ ನರ್ತಿಸಲು
ನಿರಾಕಾರ ನಟರಾಜನಾಗಿ ಬಾ ;
ನನ್ನ ಮನದ ವನದ ಕುಂಜ ಕುಂಜಗಳಲ್ಲಿ ಕೊಳಲೂದಲು
ಅಶರೀರ ಮುರಲೀಧರನಾಗಿ ಬಾ;
ನನ್ನೆದೆಯ ಮೇಲೆ ಬೀಜಾಕ್ಷರಗಳನ್ನು ಬರೆಯಲು
ಬಯಲ ಬ್ರಹ್ಮನಾಗಿ ಬಾ;
ನನ್ನ ಇರವಿಗೆ ವಾತ್ಸಲ್ಯರಸವನ್ನೆರೆಯಲು
ನಿಜ ಭಾವ ಗೌರಿ, ಸದ್ಬುದ್ಧಿ ಶಾರದೆಯಾಗಿ ಬಾ;
ಎಲ್ಲ ರೂಪಗಳಲ್ಲಿ ಬಾ,
ಎಲ್ಲ ಎಲ್ಲವಾಗಿ ಬಾ,
ಎಲ್ಲ ಕಾಲದಲ್ಲಿ ಬಾ,
ಬಾ, ಬಾ, ಬಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೦೩

ಎಂದೋ ಕೇಳಿದ ನಲ್ನುಡಿಯೊಂದು
ಇಂದು ನರ್ತಿಸುತ್ತಲಿದೆ ನೆನಪಿನ ನೃತ್ಯಶಾಲೆಯಲ್ಲಿ!

ಎಂದೋ ಕಂಡಿದ್ದ ನಲ್ನೋಟವೊಂದು
ಇಂದು ದೀಪಾರತಿಯಾಗಿದೆ ಮನದ ಮಂದಿರದಲ್ಲಿ!
ಎಂದೋ ಪಡೆದಿದ್ದ ನಲ್ಮುತ್ತೊಂದು
ಇಂದು ಪೊಂಪುಳಿಯ ಪೀತಾಂಬರವಾಗಿದೆ ಮೈಯಲ್ಲಿ!
ಎಂದೋ, ಎಂದೋ, ಎಂದೋ ನಡೆದುದು
ನೆರವಿಗೆ ಬಂತು ಇಂತು;
ನಿತ್ಯ ನೆನೆದರೂ ನೀನು ಒಲಿಯುವುದು,
ಎಂದೋ, ಎಂದೋ, ಎಂದೋ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೧೦೪

ಬಿದಿಯ ಬೀಸುಕಲ್ಲಿನಲ್ಲಿ
ಜೀವಿಗಳ ಮುಕ್ಕು ಹಾಕುತ್ತ
ಸಾವಿನ ಸುವ್ವಾಲೆಯನ್ನು ಹಾಡುತ್ತ
ಬೀಸುತ್ತಿಹರಾರಯ್ಯ?
ಮನದ ಮೂಸೆಯಲ್ಲಿ
ಆಸೆಯ ಲೋಹ ಕಾಸಿ
ನಿರಾಶೆಯ ಅಡಿಗಲ್ಲು ಮೇಲಿಟ್ಟು
ಹಣಿಯುತ್ತಿಹರಾರಯ್ಯ?
ಬಾಳಿನ ಗಾಣದಲ್ಲಿ
ಕನಸುಗಳ ಕಬ್ಬ ನುರಿಸಿ
ನೋವಿನ ಸಕ್ಕರೆಯ ಮಾಡಿ
ಹಂಚುತ್ತಿಹರಾರಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಪ್ಪುದರ ಕೊಪ್ಪರಿಗೆಯಲ್ಲಿ
ಅಪ್ಪುದರ ಅರಳುಗಳ ಹುರಿದು
ಬಪ್ಪವರಿಗೆಲ್ಲ ತಿನ್ನಿಸುತ್ತಿಹರಾರಯ್ಯ?

### ೧೦೫

ಈ ಮಾನವ-ವೃಕ್ಷವು
ಊರ್ಧ್ವಮೂಲಗಳಿಂದ
ವಿಶ್ವಜ್ಞಾನ ಸಾರವ ಹೀರಿ

ಅಧಶ್ಶಾಖೆಗಳಿಂದ
ಅಮೃತಫಲಗಳ ನೀಡುವಂತೆ ಮಾಡಯ್ಯ!
ಇಲ್ಲದಿರೆ, ಮೇಲೆ ಬೇರುಗಳನಿರಿಸಿ,
ಕೆಳಗೆ ಶಾಖೆಗಳ ಬೆಳೆಸಿ ಫಲವೇನು–
        ಸ್ವತಂತ್ರಧೀರ ಸಿದ್ಧೇಶ್ವರಾ?

## ೧೦೬

ವೈರಿಗಳ ವಿನಾಶಕ್ಕೆ ಕೋವಿ ಫಿರಂಗಿಗಳೇಕೆ ಬೇಕಯ್ಯ–
ನನಗೆ ವೈರಿಗಳೇ ಇಲ್ಲವೆಂದರೆ ಸಾಲದೆ?
ಆಗದವರ ನೀಗಿಕೊಳ್ಳಲು ಅಲಗು ಹಿಡಿಯಲೇಕಯ್ಯ–
        ಆಗದವರಿಗೂ ಆಗಿಬಿಟ್ಟರೆ ಸಾಲದೆ?
ಸ್ವತಂತ್ರಧೀರ ಸಿದ್ಧೇಶ್ವರನ
ನಿರಾಕರಿಸುವವರ ನಿರಾಕರಿಸಲೇಕೆ–
ನೀವೇ ಸ್ವತಂತ್ರಧೀರ ಸಿದ್ಧೇಶ್ವರ, ಎಂದರೆ ಸಾಲದೆ?

## ೧೦೭

ಆಡಲು ಬಳಸುವುದುಂಟೆ
        ಪರಮಾಣು ಇಂಧನವ?
ಉಣಲು ಉಪಯೋಗಿಸುವರೆ
        ಬಂಗಾರದುಂಡೆಗಳ?
ಕುಡಿಯೆ ಉಪಯೋಗಿಸುವರೆ
        ಛಾರೋದಕವನಿಲ್ಲಿ?
ಓದಲಿಕೆ ಉಪಯೋಗಿಸುವರೆ
        ಲೇಸರಿನ ಬೆಳಕ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಣೆಗೆ ಬಳಸಲೇಬೇಕೆ
        ನಿನ್ನ ಹೆಸರ?

## ೧೦೮

ನನ್ನ ಒಳಗನ್ನು ಬೆಳಗಿದ ಇಂದಿನ ಈ ಬೆಳಗು
ಮಲ್ಲಿಗೆಯ ಅಟ್ಟಹಾಸದ ಮೊಳಗು!
ಮನೆಯ ಬಾಗಿಲಿಗೆ ಮಳೆವನಿ–ಮಲ್ಲಿಗೆ,

ಮುಂದಿನ ಗಿರಿಗೆ ಮಂಜು-ಮಲ್ಲಿಗೆ,
ತೊರೆಯ ತೆರೆಗೆ ನೊರೆ-ಮಲ್ಲಿಗೆ,
ತಿರೆಯ ಹಸುರಿಗೆ ಇಬ್ಬನಿ-ಮಲ್ಲಿಗೆ,
ಉತ್ಫುಲ್ಲ ವದನಕ್ಕೆ ನಗೆ-ಮಲ್ಲಿಗೆ,
ಉಲ್ಲಸಿತ ಮನಕ್ಕೆ ಸೊಗ-ಮಲ್ಲಿಗೆ,
ಈಗ ಉಸಿರಿದ ಮಾತೂ ಸೊಲ್ಲು-ಮಲ್ಲಿಗೆ!
ಸ್ವತಂತ್ರಧೀರ ಸಿದ್ಧೇಶ್ವರನಿಲ್ಲವೆನ್ನುವವರಿಗೆ
        ಉತ್ತರ ಈ ವಿಧವಿಧದ ಮಲ್ಲಿಗೆ!
ಇಂದು ಮಲ್ಲಿಗೆಯ ಮೂಲಕವೇ
        ನಾನು ನಿನ್ನಲ್ಲಿಗೆ!

## ೧೧೯

ಸಂಪಿಗೆಯ ಕಂಪು ಮಾತ್ರ ಸೇರದಂತೆ ದುಂಬಿಗೆ!
ಆದರೆ ಯಾವ ಕಂಪೂ ಸೇರದಯ್ಯ ಕೆಲವು ದುರ್ಗಂಧಪ್ರಿಯ
ನರರಿಗೆ!
ಹುಳಿ ಹೆಂಡದ ಹಡಿಕೆ ನಾತವೂ ಹಿಡಿಸೀತು ಇವರಿಗೆ,
ಮಲ್ಲಿಗೆ ಸಂಪಿಗೆಗಳ ಸುಗಂಧವೆಂದರೆ ತಲೆನೋವು ಇಂಥವರಿಗೆ!
ಸುಗಂದಧೆಣ್ಣೆಗಳ ಮೇಲೆ ಸುರುವಿಕೊಳ್ಳುವ ಇನ್ನು ಹಲವರಿಗೆ
ಚಾರಿತ್ರ್ಯದ, ಪಾವಿತ್ರ್ಯದ ಪರಿಮಳವೆಂದರೆ ವಾಕರಿಕೆ!
                ಸ್ವತಂತ್ರಧೀರ ಸಿದ್ಧೇಶ್ವರಾ,
ನಮ್ಮ ಬಾಳಿನ ಒಳ ಹೊರಗುಗಳು ಮಗಮಗಿಸಲೆಂದು
                ಹೊರಗೆ ಶತದಳ ಕಮಲ
ಒಳಗೆ ಆತ್ಮಕಮಲಗಳನ್ನಿರಿಸಿದೆ ನೀನು!
ಆದರೂ ಒಂದಿಲ್ಲೊಂದು ದುರ್ಗಂಧಕ್ಕೆ ಒಳಗಾಗಿ
ಸುಗಂಧಕ್ಕೆ ಹೊರಗಾಗಿಯೇ ಬಾಳುವೆನಯ್ಯ ನಾನು!

## ೧೧೦

ಅಂಗೈಯಗಲದ ಕಾಗದದಲ್ಲಿ
        ಭೂಮಂಡಲದ ನಕ್ಷೆ ಬರದೇನಯ್ಯ?
ಪ್ಲ್ಯಾನೆಟೋರಿಯಮ್ಮಿನಲ್ಲಿ
        ನಕ್ಷತ್ರ ಮಂಡಲ ತೋರದೇನಯ್ಯ?
ದೂರದರ್ಶನದಲ್ಲಿ

ದೇಶವಿದೇಶಗಳು ಕಾಣವೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬ್ರಹ್ಮಾಂಡದಲ್ಲಿರುವುದೆಲ್ಲ
ಪಿಂಡಾಂಡದಲ್ಲಿರದೇನಯ್ಯ?

೧೧೧

ನೀನು ಗಂಧವತಿಯೆಂದೇ,
ಹೂಗಳಲ್ಲಿ ಸುಗಂಧವಿದೆ;
ನೀನು ರಸವಂತಿಯೆಂದೇ
ಹಣ್ಣುಗಳಲ್ಲಿ ಸಿಹಿರಸವಿದೆ;
ನೀನು ಅನ್ನಪೂರ್ಣೆಯೆಂದೇ
ಎಲ್ಲರೆಡೆಗಳಲ್ಲಿ ಅನ್ನವಿದೆ!
ನಿನ್ನಲ್ಲಿ ಏನಿಲ್ಲವಮ್ಮ?
ನಿನ್ನಲ್ಲಿ ಇಲ್ಲದುದ
ಬೇಡಿದರೆ ಬಂದೀತೇನಮ್ಮ ಭೂಮಿತಾಯಿ?
ನಿನ್ನ ಒಡಲಿಂದ ಬಂದೆ,
ನಿನ್ನ ತೊಡೆಯ ಮೇಲೆ ಬೆಳೆದೆ,
ನಿನ್ನ ಮಡಿಲಲ್ಲಿ ಅಡಗುವೆ ಕೊನೆಗೆ!
ಎಂದಿಗೂ ಸುಳ್ಳಾಗದ ಸತ್ಯವಿದು-
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ!

೧೧೨

ಒಂದೊಂದು ತರದ ಹಕ್ಕಿಯ
ಒಂದೊಂದು ಗರಿ ಸಂಗ್ರಹಿಸಿದರೂ
ಒಂದು ಬೆಟ್ಟವಾಗಬಹುದಯ್ಯ!
ಒಂದೊಂದು ಬಗೆಯ ಮೃಗದ
ಒಂದೊಂದು ಉಗುರು ಶೇಖರಿಸಿದರೂ
ಒಂದು ಘಟ್ಟವಾಗಬಹುದಯ್ಯ!
ಒಂದೊಂದು ವಿಧದ ಕೀಟದ
ಒಂದೊಂದು ಪಕ್ಕ ಕ್ರೋಢೀಕರಿಸಿದರೂ
ಒಂದು ತಿಟ್ಟಾಗಬಹುದಯ್ಯ!
ನಿನ್ನ ಜೀವಸೃಷ್ಟಿಯೇ ಇಷ್ಟು ಅದ್ಭುತವಾದುದು,

ಸಸ್ಯ ಸೃಷ್ಟಿಯಂತೂ ಸೋಜಿಗಗಳಲ್ಲಿ ಸೋಜಿಗವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೧೩

ತಾರೆಗಳಿಂದ ತರಗೆಲೆಗಳವರೆಗೆ
ಅಗಣಿತ ವಸ್ತುಗಳು ಉದುರುತ್ತಲೇ ಇರುತ್ತವೆ!
ಆಗಸದ ಸಿಡಿಲುಗಳಿಂದ ಮಾನವರ ಸುರಂಗಗಳವರೆಗೆ
ಏನೇನೋ ಸಿಡಿಯುತ್ತಲೇ ಇರುತ್ತವೆ!
ಬೆಟ್ಟಗಳ ಬಂಡೆಗಳಿಂದ ಕಡಲ ಸಿಂಪುಗಳವರೆಗೆ
ಏನೇನೋ ಒಡೆಯುತ್ತಲೇ ಇರುತ್ತವೆ!
ಅಂದೆ ಹುಟ್ಟಿದ ಕೂಸಿನಿಂದ ಶತಾಯುಗಳವರೆಗೆ
ಏನೇನೋ ಮಡಿಯುತ್ತಲೇ ಇರುತ್ತವೆ!
ಆದರೂ ಅರೆಯಾಗದ ಅಕ್ಷಯಸೃಷ್ಟಿ ನಿನ್ನದು;
ಹುಟ್ಟೂ ನಿನ್ನದು, ಸಾವೂ ನಿನ್ನದು–
ಸ್ವತಂತ್ರಧೀರ ಸಿದ್ಧೇಶ್ವರ!

೧೧೪

ಡ್ಯಾಂಟೇಯ ನರಕಕ್ಕೂ ಮಿಲ್ಟನನ ಸ್ವರ್ಗಕ್ಕೂ
ವಿವರಗಳು ದೊರಕಿದುದು ಈ ಲೋಕದಲ್ಲಿಯೇ;
ಹತ್ತು ಆದೇಶಗಳ, ದೇವರ ರಾಜ್ಯದ,
ಸತ್ಯ ಅಹಿಂಸೆಗಳ, ತ್ರಿವಿಧ ತಪಗಳ,
ಕಾಯಕ ನಿರ್ವಾಣಗಳ ಕಲ್ಪನೆಗಳು
ಹೊಳೆದುದೂ ಈ ಲೋಕದವರಲ್ಲಿಯೆ!
ಏನನ್ನು ಕಂಡರೂ ಈ ಲೋಕದಲ್ಲಿಯೇ ಕಾಣಬೇಕು;
ಏನನ್ನು ಪಡೆದರೂ ಈ ಲೋಕದವರಿಂದಲೇ ಪಡೆಯಬೇಕು!
ನಾನ್ಯಃ ಪಂಥಾಃ ಅಯನಾಯ ವಿದ್ಯತೇ–
ಸ್ವತಂತ್ರಧೀರ ಸಿದ್ಧೇಶ್ವರನಾಣೆ!

೧೧೫

ಈ ಹಸುವಿನ ಹಾಲು ನನ್ನ ಹಸಿವೆಗೆ ಸಾಕು–
ಆದರೂ ಕಾಲ್ಪನಿಕ ಕಾಮಧೇನುವಿಗಾಗಿ ಕಾತರ ನನಗೆ;
ಆ ಮಾಮರ ನಿಜವಾಗಿಯೂ ದೇವರ ವರ–
ಆದರೂ ಕಾಲ್ಪನಿಕ ಕಲ್ಪವೃಕ್ಷಕ್ಕಾಗಿ ಆತುರ ನನಗೆ;

ಈ ಸಾರಸ ಸರಸರಿಗೆ ಸಂತಸದ ಸೆಲೆ–
ಆದರೂ ಕಾಲ್ಪನಿಕ ಹಂಸಕ್ಕಾಗಿ ಹಂಬಲ ನನಗೆ;
ಕೈಹಿಡಿದ ಸತಿ ರತಿಯೆ ಸರಿ–
ಆದರೂ ಕನಸಿನ ಹುಡುಗಿಗಾಗಿ ಹಳವಂಡ ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಈ ವಸುಂಧರೆ ಸೌಂದರ್ಯದ ತೊರೆ–
ಆದರೂ ಕಾಲ್ಪನಿಕ ಸ್ವರ್ಗಕ್ಕಾಗಿ ಹಪಹಪಿ ನನಗೆ!

## ೧೧೬

ನೋಡ ನೋಡುತ್ತ ನನ್ನ ಮನೆ
ಲೋಕದ ಮನೆಯ ಅಣ್ವಂಶವೆನಿಸಿದ ಅನುಭವ,
ಲೋಕದ ಮನೆ ವಿಶ್ವದ ಮನೆಯ ರೇಣುವೊಂದೆನಿಸಿದ ಅನುಭವ,
ವಿಶ್ವದ ಮನೆ ವಿಶ್ವಾತೀತದ ಮನೆಯ ಕಣವೊಂದೆನಿಸಿದ ಅನುಭವ,
ವಿಶ್ವಾತೀತದ ಮನೆಯನ್ನು ಗುಡಿಸಿದ ಶಕ್ತಿ
ಕಸವನ್ನೆಸೆಯಲು
ಅದರ ಅಣುರೇಣು ಕಣಗಳೆಲ್ಲ
ಗ್ರಹ ತಾರೆ ಉಲ್ಕೆ ನೀಹಾರಿಕೆಗಳಾದುವು–
ಎಂಬಂತಹ ಅನುಭವ–
ಏನದ್ಭುತ ಅನುಭವ,
ಅತ್ಯಗಾಧ ಅನುಭವ!
ಈ ಅನುಭವಕ್ಕಾಗಿಯೇ ಅಲೆದದ್ದು ಭವ ಭವ
ಭವ, ಅಭವ, ಶಿವ, ಪರಮಶಿವ–
ಸ್ವತಂತ್ರಧೀರ ಸಿದ್ಧೇಶ್ವರ!

## ೧೧೭

ಹಸುಗೂಸು ಹಸಿದಿರಬಹುದು–
ಏಳಗೊಡು, ಏಳಬಿಡು ತಾಯೆ !
ಮಿಸುಗುತ್ತಲೇ ಹೊಸ ಜೋಗುಳ ಹಾಡಿ
ಮತ್ತೆ ಮಲಗಿಸಬೇಡ, ಮಾಯೆ !
ಯುಗ ಯುಗಗಳಿಂದ ಮಲಗಿದೆ ಕೂಸು–
ಬರಲಿ ಅದಕ್ಕೆ ಎಚ್ಚರ ಇನಿಸು !
ನಿನ್ನ ಅರಿವಿನ ಎದೆಹಾಲನ್ನು

ಅದಕ್ಕೊಮ್ಮೆ ಕುಡಿಸು;
ತಂದೆ ಸ್ವತಂತ್ರಧೀರ ಸಿದ್ಧೇಶ್ವರನ ಮುಖ
ಅದಕ್ಕೊಮ್ಮೆ ಕಾಣಿಸು !

### ೧೧೮

ನಾನು ಮಗುವಾಗಿದ್ದಾಗ
ಮಾತನಾಡಿದರೂ
ನನ್ನ ನಗು-ಅಳುಗಳಿಂದಲೇ
ನನಗೆ ಬೇಕಾದುದ ಗ್ರಹಿಸಿ
ನನಗೆ ಒದಗಿಸುತ್ತಿದ್ದೆ-
ನಾನೇ ಬಾಯಿಬಿಟ್ಟು ಬೇಡದೆಯೆ !
ಈಗ ಎಷ್ಟು ವಾಚಾಳಿಯಾಗಿದ್ದೇನೆ,
ಎಷ್ಟು ನಾಚಿಕೆ ಬಿಟ್ಟು ಬೇಡುತ್ತಿದ್ದೇನೆ-
ಆದರೂ ನಿರುತ್ತರೆ ನೀನೀಗ !
ಮಾತು ಕಲಿತುದೆ ತಪ್ಪಾಯಿತೆ?
ಬೇಡಲಿ ಕಲಿತುದೆ ಬೆಪ್ಪಾಯಿತೆ?
ಮತ್ತೆ ಮುಗ್ಧ ಮಗುವಾದರೆ ತಪ್ಪು ಒಪ್ಪಾದೀತೆ ?
ಮಗುವಾಗಗೊಡು ನನ್ನ
ಬಹಳ ಬೆಳೆದಿರುವ ನಾಲಗೆಯ !
ಸ್ವತಂತ್ರಧೀರ ಸಿದ್ಧೇಶ್ವರ ನೆನೆದು
ಮತ್ತೆ ಮಗುವಾಗುವೆ;
ತಾಯಿಯನ್ನು ಆಕರ್ಷಿಸುವ
ಹೂ-ನಗೆಯಾಗುವೆ !

### ೧೧೯

ಎಂಜಲಾಗುವುದೆಂದು ಅಂಜಿ
ಮಗುವಿಗೆ ಮೊಲೆ ಕುಡಿಸದಿರುವಳೆ ತಾಯಿ ?
ಮೈಲಿಗೆಯ ಭಯದಿಂದ
ಬಾಯನೊರೆಸಳೆ ಸೆರಗಿನಿಂದ ?
ಮಡಿ, ಮೈಲಿಗೆ, ಸೂತಕಾದಿಗಳೆಲ್ಲ
ಲೌಕಿಕಸ್ತರದಲ್ಲಿ,
ಪ್ರೀತಿಯ ಪಾತಳಿಯಲ್ಲಿ ಅಲ್ಲ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ !

## ೧೨೦

ನಾನು ಕೆಡಿಸಿದುದನ್ನು ನೀನು ಸರಿಪಡಿಸುವೆ,
ನಾನು ಕಡಿದುದನ್ನು ನೀನು ಕೊನರಿಸುವೆ,
ನಾನು ಸುಟ್ಟುದನ್ನು ಮತ್ತೆ ಹುಟ್ಟಿಸುವೆ
ನಿಸರ್ಗಮಾತೆ!
ನಾನು ತುಳಿಯುತ್ತ ನಡೆದಲ್ಲಿಯೇ
ಮೊಳೆಯುತ್ತದೆ ನಿನ್ನ ಸಸ್ಯಶ್ರೀ !
ತಾಯಿ ಮಣ್ಣಾಗಿ ಕಳೇಬರವನ್ನು ಸ್ವೀಕರಿಸಿ
ಅದರ ಮಣ್ಣಿನಲ್ಲಿಯೇ ಮಲರಿಸುವೆ
ಹೊಸ ಜೀವ-ಕುಸುಮವನ್ನು!
ಸಹನೆ, ಕ್ಷಮೆ, ಕರುಣೆ ನೀನು-
ಕೆಟ್ಟವರಿಗೂ ಕಾಮಧೇನು!
ನಿನ್ನ ನಿರ್ವ್ಯಾಜ ಕರುಣೆ ಕೈ ಹಿಡಿದು ನಡೆಸಲೆನ್ನ
ಸ್ವತಂತ್ರಧೀರ ಸಿದ್ಧೇಶ್ವರನ ಸನ್ನಿಧಿಗೆ!

## ೧೨೧

ಹೂವಿಲ್ಲದೆ ಕಾಯಾಗುವ ಆಲವಿದೆ,
ಕಾಯಾಗದೆ ಉಪ್ಪಿನಕಾಯಾಗುವ ಕಳಲೆಯಿದೆ,
ಬೀಜವಿಲ್ಲದೆ ಫಲ ನೀಡುವ ಬಾಳೆಯಿದೆ,
ಸೆಲೆಯಿಲ್ಲದೆ ಸಲಿಲವೀವ ನಾರಿಕೇಳವಿದೆ-
ಏನಿಲ್ಲ ನಿನ್ನ ಸೃಷ್ಟಿಯಲ್ಲಿ?
ನಮಗೇ ಬದುಕುವುದು ತಿಳಿದಿಲ್ಲ ತುಷ್ಟಿಯಲ್ಲಿ!
ಅಂತವಿಲ್ಲದ ಆಶೆ,
ತೃಪ್ತಿಯರಿಯದ ತೃಷೆ,
ಭ್ರಮೆಗೆ ಎಳೆವ ಮೃಷೆ
ತಂದಿಹವೆಮಗೆ ದುರ್ದೆಶೆ-
ಸ್ವತಂತ್ರಧೀರ ಸಿದ್ಧೇಶ್ವರ!

## ೧೨೨

ಅದರ ಆಯುಮಾನದಲ್ಲಿ ಒಂದೆ ಆಲದಮರ
ಬಿಡುವ ಹಣ್ಣುಗಳೆಷ್ಟು, ಕೊಡುವ ಬೀಜಗಳೆಷ್ಟು?
ಆ ಎಲ್ಲ ಬೀಜಗಳೂ ಮರವಾದರೆ ತಿರೆ ತುಂಬದೇನಯ್ಯ?

ಬೀಜಗಳೆಲ್ಲ ಮರವಾದರೆ,
ಅಂಡಗಳೆಲ್ಲ ಪಕ್ಷಿಗಳಾದರೆ,
ಅಂಡಾಣು-ವೀರ್ಯಾಣುಗಳೆಲ್ಲ ಜೀವಿಗಳಾದರೆ
ಸ್ವೇದವೆಲ್ಲ ಸ್ವೇದಜಗಳಾಗಿಬಿಟ್ಟರೆ
ಅವುಗಳಿಗೆ ಸ್ಥಳ ಸಾಲಬಲ್ಲುದೆ
ಈ ಸಣ್ಣದಾಗುತ್ತ ಹೊರಟಿರುವ ಲೋಕದಲ್ಲಿ?
ಇವುಗಳಲ್ಲಿ ಎಷ್ಟು ಉಳಿಸಬೇಕೋ ಉಳಿಸುವಿ!
ಎಷ್ಟು ಅಳಿಸಬೇಕೋ ಅಳಿಸುವಿ!
ಇದರ ಗುಟ್ಟ ಇನ್ನೆಂದಿಗೆ ತಿಳಿಸುವಿ-
        ಸ್ವತಂತ್ರಧೀರ ಸಿದ್ಧೇಶ್ವರ?

## ೧೨೩

ನಿನ್ನ ಸಕಲ ಸಂಪದ್ಭರಿತ ಸೃಷ್ಟಿಯಲ್ಲಿ
ಏನಿಲ್ಲ, ತಂದೆ, ಏನಿಲ್ಲ?
ಎಲ್ಲ ಇದೆ; ಆದರೆ ಒಂದಿಲ್ಲ;
ಹಲ್ಲಿದ್ದವನಿಗೆ ಕಡಲೆಯಿಲ್ಲ;
ಕಡಲೆಯಿದ್ದವನಿಗೆ ಹಲ್ಲಿಲ್ಲ;
ಬಲವುಳ್ಳವನಲ್ಲಿ ಒಲವಿಲ್ಲ;
ಒಲವಿದ್ದವನಲ್ಲಿ ಬಲವಿಲ್ಲ;
ಸಿರಿಯಿದ್ದವನಿಗೆ ಗುರಿಯಿಲ್ಲ;
ಗುರಿಯಿದ್ದವನಿಗೆ ಸಿರಿಯಿಲ್ಲ;
ಹಸಿವೆಯಿದ್ದವನಿಗೆ ಅನ್ನವಿಲ್ಲ
ಅನ್ನವಿದ್ದವನಿಗೆ ಹಸಿವೆಯಿಲ್ಲ!
        ಒಂದಿದ್ದರೊಂದಿಲ್ಲ,
ಹೀಗಾಗಿ ಎಲ್ಲವೂ ವ್ಯರ್ಥವಲ್ಲ!
ಏಕೆ ಹೀಗೆ? ನಗದಿರುವ ಹಾಗೆ-
ಸ್ವತಂತ್ರಧೀರ ಸಿದ್ಧೇಶ್ವರ!

## ೧೨೪

ಬಣ್ಣ ಪರಿಮಳಗಳ ನೀನೆ ಭೂಮಿಯಲ್ಲಿ ಬಿತ್ತಿ
        ಹೂವು ಬೆಳೆದುಕೊಳ್ಳಿರೆನ್ನುವೆ;
ಸವಿ ಸ್ವಾದಗಳ ಮೇದಿನಿಯೊಳು ಬಿತ್ತಿ

ಹಣ್ಣು ಬೆಳೆದುಕೊಳ್ಳಿರೆನ್ನುವೆ;
ಅದಿರು ಪದರುಗಳ ನೆಲದ ಉದರದಲ್ಲಿ ಬಿತ್ತಿ
ಬೆಳ್ಳಿ ಬಂಗಾರಗಳ ಪಡೆದುಕೊಳ್ಳಿರೆನ್ನುವೆ;
ಅಮೃತ ವಿಷಗಳ ಕಡಲ ಒಡಲಿನಲ್ಲಿ ಬಿತ್ತಿ
ಅಮೃತವೊಂದನೆ ಕಡೆದುಕೊಳ್ಳಿರೆನ್ನುವೆ;
ಬಾಳ ಬಸಿರಿನಲ್ಲಿ ಸೋಲು-ಗೆಲವುಗಳ ಬಿತ್ತಿ
ಗೆಲವು-ಬೆಳೆಯನೇ ಬೆಳೆದುಕೊಳ್ಳಿರೆನ್ನುವೆ;
ಮೈಯ ಮರೆಯೊಳಗೆ ಮಾನಸದ ಸಸಿನೆಟ್ಟು
ಸುಪ್ರಮಾನಸವನೂ ಬೆಳೆಯಿರೆಂಬೆ!
ನೀ ಬಿತ್ತುವ ಭೇದಕ್ಕೆ ಬೆರಗಾಗಿಹೆ ನಾನು-
ನಾ ಬೆಳೆಯುವ ಭೇದಕ್ಕೆ ಬೆರಗಾಗಬೇಕಿದೆ ನೀನು,
ಸ್ವತಂತ್ರಧೀರ ಸಿದ್ಧೇಶ್ವರ!

## ೧೨೫

ಹಿಂಡು ಹಿಂಡಾಗಿ ಹಾರಿ ಬರುತ್ತಿದ್ದುವು ಗಿಳಿಗಳು ಮೊದಲು;
ಮನೆಮನೆಯ ಕಂಬಿಗಳ ಮೇಲೆ ಕುಣಿಯುತ್ತಿದ್ದವು ನವಿಲು;
ಈಗ ಗಿಳಿ ನವಿಲುಗಳನ್ನೇಕೆ,
ಗುಬ್ಬಿ ಕಾಗೆಗಳನ್ನೂ ಕಾಣಲೂ
ಪ್ರಾಣಿಸಂಗ್ರಹಾಲಯಗಳಿಗೆ ಹೋಗಬೇಕು;
ವನ್ಯಪ್ರಾಣಿಗಳಿಗಾಗಿ ಸರ್ಕಸ್ಸಿಗೇ ಶರಣು ಹೋಗಬೇಕು!
(ಅಲ್ಲಿಯೂ ಅಕಸ್ಮಾತ್ ಸುಟ್ಟು ಸಾಯಬೇಕು!)
ಅಭಯಾರಣ್ಯಗಳಲ್ಲಿಯೇ ವನ್ಯ ಪ್ರಾಣಿಗಳಿಗೆ ಇಳಿಗಾಲ,
ಇಲ್ಲ ಪಶು ಪಕ್ಷಿಗಳಿಗೆ ಉಳಿಗಾಲ,
ಎಷ್ಟೊಂದು ಜೀವ ಸೃಷ್ಟಿಗಳಿಗೆ ಅಳಿಗಾಲ!
ಬರುವುದೇ ಕೊನೆಗೆ ನರಕುಲಕ್ಕೇ ಕೊನೆಗಾಲ?
ನಷ್ಟಗೊಳಿಸುತ್ತ ಸುತ್ತಲಿನ ಜೀವಜಾಲ,
ಆಗುವನೆ ಮನುಷ್ಯ ತನಗೆ ಶೂಲ?
ಅರಿಯಲಿನ್ನಾದರೂ ಅವನು,
ಸ್ವತಂತ್ರಧೀರ ಸಿದ್ಧೇಶ್ವರನ
ಸಚರಾಚರ ಸೃಷ್ಟಿಯ ಉದ್ದೇಶ, ಮೂಲ?

## ೧೨೬

ಕಾಮನನ್ನೇ ಸುಡುವ ಹಬ್ಬದಲ್ಲಿ
ಕಾಮ ಪ್ರಚೋದನೆಯ ಹಾಡುಗಳು,
ಕಾಮ ಕೆರಳಿಸುವ ಕುಚೇಷ್ಟೆಗಳು!
ಈ ಲೋಕದ ವ್ಯವಹಾರಗಳೇ ಹೀಗೆ!
ಆಡುವುದು ಶಾಂತಿಯ ನಾಟಕ–
ಪಕ್ಕದ ಪರದೆಗಳ ಹಿಂದೆ ಯುದ್ಧೋತ್ಸುಕರ ಕಂಟಕ!
ಕೊಡದ ಕಂಠದಲ್ಲಿ ಹಾಲು,
ಕೆಳಗೆ ಹಾಲಾಹಲ!
ಹೇಳುವುದು ವೇದ,
ಹಾಕುವುದು ಗಾಳ!
ಎಲ್ಲೆಲ್ಲೂ ಸ್ವತಂತ್ರತೆ, ಸಮಾನತೆ, ಸಹೋದರತೆಗಳ ಕೂಗು–
ಬೆನ್ನ ಹಿಂದೆಯೇ ದೋಚಿ ತಿಂದುದರ ತೇಗು!
ಎಂತ ಕುಟಿಲ ಕುಹಕದ, ಕಪಟ ಕುತ್ಸಿತದ
ಜಗದಗಲದ ಜಾಲ ಹರಡಿಹೆಯಯ್ಯ!
ಯಾವ ಉದ್ದೇಶಕ್ಕಾಗಿ ಈ ಬುವಿಯಗಲದ ಬಲೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೧೨೭

ಒಂದೊಂದು ಅವಿಷ್ಕಾರವನ್ನೂ ಒಂದೊಂದು ಇಟ್ಟಿಗೆ ಮಾಡಿ
ವಿಜ್ಞಾನ ಕಟ್ಟಿದೆ ತನ್ನ ಬಂಧುರ ಮಂದಿರವನ್ನು!
ಬಹು ಸುಂದರ ಈ ಮಂದಿರ–
ಎಂದೂ ಮುಗಿಯದ ಮಂದಿರ,
ಮುಗಿಯದಷ್ಟರಲ್ಲಿಯೇ ಮನೋಹರವೆನಿಪ ಮಂದಿರ.
ಆದರೆ ಮೂರ್ತಿಯಿಲ್ಲದ ಮಂದಿರ!
ಮೂರ್ತಿಯೊಂದ ಪ್ರತಿಷ್ಠಾಪಿಸಬೇಕೆಂದರೆ
ಮೂರ್ತಿಯೇ ಇಲ್ಲ ವಿಜ್ಞಾನದ ಬಳಿಯಲ್ಲಿ!
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಮೂರ್ತಗೊಂಡರೆ
ಎಂಥ, ಅಪೂರ್ವ, ಎಂಥ ಅದ್ಭುತ ಮಂದಿರವಾದೀತು
ಈ ವಿಜ್ಞಾನದ ಮನೋಜ್ಞ ಮಂದಿರ?

## ೧೨೮

ಬಿತ್ತುವ ಬಿತ್ತು ಬದಲಾದರೇನು,
ಬಿತ್ತಿದ ಭೂಮಿ ಬದಲಾಗುವುದೇನಯ್ಯ?
ನೀರಿನ ನಾಲೆನಲ್ಲಿ ಬದಲಾದರೇನು,
ನೀರಿನ ಸಾರ ಬದಲಾಗುವುದೇನಯ್ಯ?
ಬಳಸುವ ಇಂಧನ ಬದಲಾದರೇನು,
ಬೆಂಕಿಯ ಗುಣ ಬದಲಾಗುವುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬದುಕುವ ಬಗೆ ಬದಲಾದರೇನು,
ಬಾಳಿನ ಬುಡ, ಬದುಕಿನ ಬುನಾದಿ
ಬದಲಾಗುವುದೇನಯ್ಯ?

## ೧೨೯

ನಿನ್ನ ಉದ್ದೇಶ ಅರ್ಥವಾದರೆ ನನಗೆ-
ಅರ್ಥ ಬರದೆ ನನ್ನ ಬಾಳಿಗೆ,
ಸ್ವತಂತ್ರಧೀರ ಸಿದ್ಧೇಶ್ವರ?

## ೧೩೦

ಏನಾಗಬೇಕೆಂದಿದ್ದೆ, ಏನಾದೆ ಕೊನೆಗೆ?
ತದ್ರೂಪವೇನಲ್ಲ ಪ್ರತಿಧ್ವನಿ ಜೀವಧ್ವನಿಗೆ-
ಸ್ವತಂತ್ರಧೀರ ಸಿದ್ಧೇಶ್ವರ!

## ೧೩೧

ಪಂಪನ ಬಗ್ಗೆ ಬರೆದವರಿಗಿಂತ
ಪಂಪ ದೊಡ್ಡವನು ನೋಡಾ!
ಬದುಕಿನ ಬಗ್ಗೆ ಬರೆದವರಿಗಿಂತ
ಬದುಕು ದೊಡ್ಡದು ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೩೨

ಹಾಗೆ ಬದುಕಬೇಕು,
ಹೀಗೆ ಬದುಕಬೇಕು-

ಎಂದು ಹೇಳುವವರ ಬರವಿಲ್ಲ
ತಾವು ಹೇಳಿದಂತೆ
ತಾವೇ ಬದುಕುವವರ ತೋರಾ!
ಹಾಗೆ ಬರೆಯಬೇಕು,
ಹೀಗೆ ಬರೆಯಬೇಕು–
ಎಂದು ಹೇಳುವವರ ಕೊರತೆಯಿಲ್ಲ;
ತಾವು ಹೇಳಿದಂತೆ ತಾವೇ ಬರೆಯುವವರ ತೋರಾ !
ಸ್ವತಂತ್ರಧೀರ ಸಿದ್ಧೇಶ್ವರಾ,
ಸತ್ತ ಮೇಲೆ ಸ್ವರ್ಗಕ್ಕೆ ಕಳಿಸುವೆವೆನ್ನುವರ ಅಭಾವವಿಲ್ಲ,
ಈ ಲೋಕವನ್ನೇ ನಾಕ ಮಾಡಬಲ್ಲವರ ತೋರಾ!

೧೩೩

"ಕೂಡಿ ನಡೆ, ಕೂಡಿ ನುಡಿ,
ಕೂಡಿ ಬದುಕು," ಎಂದೆ–
ಯಾರನ್ನು ಕೂಡಿ, ತಂದೆ?
ಕೂಡಲು ಸಿದ್ಧರಿದ್ದವರಾರು?
ಕೂಡಲೊಲ್ಲದವರೊಡನೆ
ಕೂಡಿ ನಡೆವುದೆಂತಯ್ಯ?
ಕೂಡಿ ನುಡಿವುದೆಂತಯ್ಯ?
ಕೂಡಿಸುವ ಸೂತ್ರವೇ ನಮಗೆ ಹೊಳೆದಿಲ್ಲವೊ,
ಕೂಡುವ ಬುದ್ಧಿಯೇ ನಮ್ಮಲ್ಲಿ ಬೆಳೆದಿಲ್ಲವೊ?
ನಿನ್ನೊಡನೆ ನುಡಿದು,
ನಿನ್ನನ್ನು ಕೂಡುವುದನ್ನಾದರೂ ಕಲಿಸು–
ಸ್ವತಂತ್ರಧೀರ ಸಿದ್ಧೇಶ್ವರ!

೧೩೪

ಗುರುವಿಲ್ಲದೆ ಅರಿವಿನ ಚಕ್ರವ್ಯೂಹವ ಹೊಕ್ಕ
ಜಿಜ್ಞಾಸೆಯ ಅಭಿಮನ್ಯುಗಳು
ಗರ್ವ ದುರ್ಯೋಧನ,
ಸಂಶಯ ಶಕುನಿ,
ಅನಿರ್ಣಯ ಕರ್ಣರಿಗೆ
ಆಹುತಿಯಾಗುವುದು ಆಶ್ಚರ್ಯವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

## ೧೩೫

ಈ ನಿನ್ನ ಸಾಗರಗಳಲ್ಲಿ
ನರರಿನ್ನೂ ಶೋಧಿಸುವ ನಿಧಿಗಳಿವೆ;
ಈ ನಿನ್ನ ಧರೆಯಲ್ಲಿ
ಇನ್ನೂ ಹೊರಬೀಳದ ನಿಧಾನಗಳಿವೆ;
ಈ ನಿನ್ನ ವ್ಯೋಮದಲ್ಲಿ
ಇನ್ನೂ ಹುಡುಕದ ಗ್ರಹಗೋಲಗಳಿವೆ;
ಈ ಬದುಕಿನಲ್ಲಿ
ಇನ್ನೂ ಸಾಧಿಸದಿರುವ ಸಾಧ್ಯತೆಗಳಿವೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಇನ್ನೂ ನಿನ್ನ ಸೃಷ್ಟಿಕಾರ್ಯಕ್ಕೆ ಸಮರ್ಥನೆಯಿದೆ!

## ೧೩೬

ವಿಭಕ್ತ ವ್ಯಕ್ತಿತ್ವವೊಂದು ಒಡೆದ ಬೀಜ,
ಅದಾವ ಬದುಕಿನ ಭೂಮಿಯಲ್ಲಿ ಬೆಳೆದೀತಯ್ಯ?
ಸಂಕೀರ್ಣ ವ್ಯಕ್ತಿತ್ವವೊಂದು ಸಂಕರಬೀಜ,
ಹೆಚ್ಚು ಇಳುವರಿ ಕೊಡಬಲ್ಲುದಾಗಲಿ
ಸ್ವಾದ ತಡೆತಗಳ ನೀಡಬಲ್ಲುದೇನಯ್ಯ?
ನಿರ್ಬಂಧಿತ ವ್ಯಕ್ತಿತ್ವವೊಂದು ಹುಳುಕು ಬೀಜ,
ಕೊಳೆಯಬಲ್ಲುದಾಗಲಿ ಮೊಳೆಯಬಲ್ಲುದೇನಯ್ಯ?
ಆತ್ಮಪ್ರತ್ಯಯ ರಹಿತ ವ್ಯಕ್ತಿತ್ವವೊಂದು ಲೊಡ್ಡು ಬೀಜ,
ಗೊಬ್ಬರವಾಗಬಹುದಾಗಲಿ ಹಾಲ್ದೆನೆಯಾಗಬಲ್ಲುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸ್ವತಂತ್ರಧೀರ ವ್ಯಕ್ತಿತ್ವದ
ಗಟ್ಟಿಬೀಜ ಮಾಡಯ್ಯ ನನ್ನನಿನ್ನು?

## ೧೩೭

ಬಿದ್ದ ಕನಸುಗಳೆಲ್ಲ ನಿಜವಾಗುವುವೆ?
ಬಿದ್ದ ಬೀಜಗಳೆಲ್ಲ ಭೋಜ್ಯವಾಗುವುವೆ?
ಸುದ್ದಿಯಾದುದೆಲ್ಲ ಸತ್ಯವೆ?
ಪ್ರಸಿದ್ಧಿವಾದುದೆಲ್ಲ ನಿತ್ಯವೆ?
ತೋಚಿದುದೆಲ್ಲ ಶ್ರುತಿಯೆ?

ಗೀಚಿದುದೆಲ್ಲ ಕೃತಿಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂದ್ರಿಯಗಳು ಗ್ರಹಿಸಿದುದು ಮಾತ್ರ ಜ್ಞಾನವೆ,
ನೀನು ಪ್ರೇರಿಸಿದುದು ಅಜ್ಞಾನವೆ?

೧೩೮

ಸಾವಿರ ಸಾವಿರ ಮುಂಡಿಗೆಗಳ
ತೇಲುವ ಸ್ವಾತಂತ್ರ್ಯವ ನಷ್ಟಗೊಳಿಸಿ
ಸೃಷ್ಟಿಗೊಂಡ ಹಡಗವೆ,
ನಿನಗಾದರೂ ದೊರೆಯಿತೆ
ಸ್ವೇಚ್ಛೆಯಿಂದ ಸಂಚರಿಸುವ ಸ್ವಾತಂತ್ರ್ಯ?
ಯಂತ್ರ ಎಳೆದತ್ತ,
ಯಂತ್ರವಾಹಕ ಸೆಳೆದತ್ತ ಸಾಗುವ
ಈ ಯಾಂತ್ರಿಕ ಜೀವನಕ್ಕಾಗಿ
ಎಷ್ಟು ಮುಂಡಿಗೆಗಳ ಸ್ವಾತಂತ್ರ್ಯ ಹರಣ ಮಾಡಿದೆ?
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಬಂಧಿಸುವವರೂ
ಬಂಧಿತರಾಗುವರು ಕೊನೆಗೆ!

೧೩೯

ಬದುಕಿಸಬಲ್ಲ ಶಕ್ತಿಗಳ ವಿಕಾಸ
ಆಮೆಗತಿಯಿಂದ ಸಾಗಿದೆ,
ಕೊಲ್ಲಬಲ್ಲ ಶಕ್ತಿಗಳ ಸಂವರ್ಧನೆ
ಗರುಡಗತಿಯಿಂದ ನಡೆದಿದೆ!
ಆಹಾರದ ಉತ್ಪಾದನೆಗೆ ಇತಿಮಿತಿಗಳುಂಟು,
ಜನಸಂಖ್ಯೆಯ ಆಸ್ಫೋಟಕ್ಕೆ ಮಿತಿಯಿಲ್ಲ!
ಸಂಗಡಿಸುವ ಶಕ್ತಿಗಳು ಸೀಮಿತ,
ವಿಂಗಡಿಸುವ ಶಕ್ತಿಗಳು ಅಪರಿಮಿತ!
ಇದು ಹೀಗೆಯೇ ಮುಂದುವರಿದರೆ
ಮುಂದೇನು ತಂದೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೧೪೦

ಕಾಗದವು ಒಂದೇ–
ಚಿತ್ರಗಾರನ ಕೈಗೆ ಸಿಕ್ಕರೆ ಚಿತ್ರವಾಗುತ್ತದೆ,
ಪ್ರೇಮಿಯ ಕೈಗೆ ಸಿಕ್ಕರೆ ಪ್ರೇಮಪತ್ರವಾಗುತ್ತದೆ,
ಕವಿಯ ಕೈಗೆ ಸಿಕ್ಕರೆ ಪದ್ಯವಾಗುತ್ತದೆ,
ಪೆದ್ದನ ಕೈಗೆ ಸಿಕ್ಕರೆ ರದ್ದಿಯಾಗುತ್ತದೆ,
ಮಗುವಿನ ಕೈಗೆ ಸಿಕ್ಕರೆ ಮುದ್ದೆಯಾಗುತ್ತದೆ;
ನರಜನ್ಮ ಒಂದೇ–
ಭೋಗಿಯಾದರೆ ಅವ ವಿಷಯಾಸಕ್ತ,
ವೀತರಾಗನಾದರೆ ವಿರಕ್ತ,
ಹೆಣ್ಣು ಹೊನ್ನು ಮಣ್ಣಿನೊಳಗಾದರೆ ಅನುರಕ್ತ,
ನಿನಗೆ ಒಳಗಾದರೆ ಭಕ್ತ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೪೧

ಸೆರೆಮನೆಯಲ್ಲಿಯೂ ಸ್ವಾತಂತ್ರ್ಯಗೀತೆ ಹಾಡಿದವರುಂಟು,
ಸ್ವರಾಜ್ಯ ಮಂದಿರದಲ್ಲಿಯೂ ದಾಸ್ಯಗಾಥೆಯನೆ ವಾಚಿಸಿದವರೂ
ಉಂಟು;
ಅರಮನೆಯಲ್ಲಿದ್ದೂ ಮನದ ಬಡತನದಿಂದ ಬಳಲಿದವರುಂಟು,
ಮುರುಕು ಮನೆಯಲ್ಲಿದ್ದೂ ಮನದ ಸಿರಿತನ ಮೆರೆದವರೂ ಉಂಟು;
ಮಲೆಯ ಮೇಲಿದ್ದೂ ಮೊಲೆಯ ಧ್ಯಾನ ಮಾಡಿದವರುಂಟು,
ಸಂಸಾರದಲ್ಲಿದ್ದೂ ಉಂಡು ಉಪವಾಸಿ
ಬಳಸಿ ಬ್ರಹ್ಮಚಾರಿಗಳಾದವರೂ ಉಂಟು;
ಗರ್ಭಗುಡಿಯಲ್ಲಿದ್ದೂ ನಾಸ್ತಿಕ ಪೂಜಾರಿಯಾದವರುಂಟು,
ಮಾಂಸ ಮಾರುತ್ತಲೂ ಆಸ್ತಿಕಸಿಖಾಮಣಿಗಳಾದವರೂ ಉಂಟು;
ಜಾಗೃತಿ ಆಯೋಗದಲ್ಲಿಯೂ ಲಂಚಬುಡುಕರುಂಟು,
ರಾಜ್ಯ ಬೊಕ್ಕಸಗಳಲ್ಲಿದ್ದೂ ಪರಮ ಪ್ರಾಮಾಣಿಕರೂ ಉಂಟು;
ಸ್ವತಂತ್ರಧೀರ ಸಿದ್ಧೇಶ್ವರಾ,
ಪಾಪ ಪುಣ್ಯ ನಿರ್ಣಯಕಾರರಲ್ಲಿಯೂ ಪಾತಕಿಗಳುಂಟು,
ಪಾಪಾತ್ಮರೆನಿಸಿಕೊಂಡವರಲ್ಲಿಯೂ ಪುಣ್ಯಾತ್ಮರುಂಟು ನೋಡಾ!

## ೧೪೨

ಹೊನ್ನೊಂದಿದ್ದರೆ
ಮಣ್ಣು ಹೆಣ್ಣುಗಳೆರಡೂ ದೊರೆವುವಾಗಿ
ಹೊನ್ನೇ ಹೆಚ್ಚೆಂಬರು ಹಲವರು;
ಹೊನ್ನು ಹೆಣ್ಣುಗಳೆರಡೂ
ಮಣ್ಣಿನಿಂದ ಮೈದೋರುವುವಾಗಿ
ಮಣ್ಣೇ ಹೆಚ್ಚೆಂಬರು ಇನ್ನು ಹಲವರು;
ಜೀವ-ಬೀಜದ ಬಿತ್ತಿಗೆಗೆ ಹೆಣ್ಣೇ ಮಣ್ಣು,
ಹೆಣ್ಣಿನ ಸಿಂಗಾರಕ್ಕಾಗಿಯೇ ಹುಟ್ಟಿದುದು ಹೊನ್ನು-
ಇದು ಕಾರಣ, ಹೆಣ್ಣೇ ಹೆಚ್ಚೆಂಬರು ಇನ್ನು ಹಲವರು!
ಸ್ವತಂತ್ರಧೀರ ಸಿದ್ಧೇಶ್ವರಾ,
ಇವು ಮೂರೂ ನಿನ್ನ ವರವೆಂದರಿದು,
        ಅನ್ಯರವನ್ನುಳಿದು,
        ತನ್ನವನ್ನು ಭೋಗಿಸಿ
        ನಿರ್ವಿಷಯಿಯಾಗಿರುವವರೇ
                ಹೆಚ್ಚೆಂಬರು ನಿನ್ನವರು;

## ೧೪೩

ಹೆಣ್ಣು ಬಿಡು, ಹೊನ್ನು ಬಿಡು, ಮಣ್ಣು ಬಿಡು, ಮನೆಯ ಬಿಡು,
ಮಡದಿ ಬಿಡು, ಬಿಡದಿ ಬಿಡು, ಅದನ್ನು ಬಿಡು, ಇದನ್ನು ಬಿಡು,
        ಏನೇನ ಬಿಡಹೇಳುವರಯ್ಯ
        ಈ ಬೆನ್ನ ಬಿಡದ ಬೈರಾಗಿಗಳು?
ಈ ಎಲ್ಲವನ್ನೂ ಬಿಡು ಎನ್ನುವ ಬದಲು
        'ಜೀವ ಬಿಡು' ಎಂದುಬಿಡಬಾರದೆ?
ನಿನ್ನ ಅಡಿಗಳನ್ನು ಬಿಡದಿದ್ದರೆ ಸಾಕು-
        ಇವಾವನೂ ಬಿಡಬೇಕಿಲ್ಲವಯ್ಯ-
            ಸ್ವತಂತ್ರಧೀರ ಸಿದ್ಧೇಶ್ವರ!

## ೧೪೪

ಮದುವೆಯಾದವರಿಗಿಂತ
ಆಗದವರಲ್ಲಿ ಕಾಮ ಹೆಚ್ಚು;
ಕೈಲಾಗುವವರಿಗಿಂತ

ಕೈಲಾಗದವರಲ್ಲಿ ಕ್ರೋಧ ಹೆಚ್ಚು;
ದುಡಿದು ಗಳಿಸಿದವರಿಗಿಂತ
ದುಡಿಯದೆ ಪಡೆದವರಲ್ಲಿ ಲೋಭ ಹೆಚ್ಚು;
ಸಂಸಾರ ಸ್ವೀಕರಿಸಿದವರಿಗಿಂತ
ಸ್ವೀಕರಿಸದವರಲ್ಲಿ ಮೋಹ ಹೆಚ್ಚು;
ಸರಿಯಾಗಿ ತಿಳಿದುಕೊಂಡವರಿಗಿಂತ
ತಿಳಿದುಕೊಳ್ಳದವರಲ್ಲಿ ಮದ ಹೆಚ್ಚು;
ವಿಭಿನ್ನ ಉದ್ಯೋಗಿಗಳಿಗಿಂತ
ಸಮಾನೋದ್ಯೋಗಿಗಳಲ್ಲಿ ಮತ್ಸರ ಹೆಚ್ಚು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೆರೆ ನಂಬಿದವರಿಗಿಂತ
ಅರೆ ನಂಬಿದವರಲ್ಲಿ ಆಡಂಬರ ಹೆಚ್ಚು!

೧೪೫

ಕಾಮವೆ, ಮಿತಿಯಲ್ಲಿ ಹಿತ, ಅತಿಯಲ್ಲಿ ಅಹಿತ ನೀನು;
ಕ್ರೋಧವೆ, ಉಗುಳಿದರೆ ವಿಷ, ನುಂಗಿದರೆ ರಸ ನೀನು;
ಲೋಭವೆ, ಒಳಿತಿಗಂಟೆ ಲಾಭ, ಕೆಡುಕಿಗಂಟೆ ಹಾನಿ ನೀನು;
ಮೋಹವೆ, ಸಮಷ್ಟಿಗಾಗಿರೆ ವರ, ವ್ಯಷ್ಟಿಗಾಗಿರೆ ಶಾಪ ನೀನು;
ಮದವೆ, ಅಶುಭವೆದುರಿಸೆ ಶುಭ, ಶುಭವನೆದುರಿಸೆ ಅಶುಭ
ನೀನು;
ಮತ್ಸರವೆ ಅಶಿವಕ್ಕಾಗಿ ಇರೆ ಲೇಸು, ಶಿವಕ್ಕಾಗಿ ಇರೆ ಹೇಸಿ
ನೀನು!
ನೀವೆಲ್ಲರೂ ಅರಿಗಳೂ ಅಹುದು, ಸಹಕಾರಿಗಳೂ
ಅಹುದು!
ನಿಮ್ಮನ್ನು ಅರಿಗಳನ್ನಾಗಿಸದೆ ಸಹಕಾರಿಗಳನ್ನಾಗಿಸಿಕೊಳ್ಳುವ
ಸದ್ಬುದ್ಧಿಯನ್ನೇ ಸ್ವತಂತ್ರಧೀರ ಸಿದ್ಧೇಶ್ವರನು
ಸರ್ವರಿಗೂ ನೀಡಲಿ!

೧೪೬

ರಾಜಕಾರಣಕ್ಕೂ ನೀತಿಗೂ ಸಂಬಂಧವಿಲ್ಲ;
ಅರ್ಥಶಾಸ್ತ್ರಕ್ಕೂ ನೀತಿಗೂ ಸಂಬಂಧವಿಲ್ಲ;
ಕಲೆಗೂ ನೀತಿಗೂ ಸಂಬಂಧವಿಲ್ಲ;

ವಿಜ್ಞಾನಕ್ಕೂ ನೀತಿಗೂ ಸಂಬಂಧವಿಲ್ಲ;
So, ನನಗೂ ನೀತಿಗೂ ಸಂಬಂಧವಿಲ್ಲ!
ಈ ನೀತಿಯೆಂಬುದು
ಯಾರಿಗಾಗಿ ಇದೆಯಯ್ಯ,
        ಸ್ವತಂತ್ರಧೀರ ಸಿದ್ಧೇಶ್ವರ?

### ೧೪೭

ಸಪ್ತ ಮಹಾಪಾತಕಗಳ
        ಪಟ್ಟಿ ಮಾಡಿದ್ದರು ಹಿಂದೆ-
                ಬಹಳ ಹಿಂದೆ;
ಅದಕ್ಕೆ ಒಂದೆರಡನ್ನು
        ಸೇರಿಸಿದರು ಮುಂದೆ;
ಇಂದಿನ ಪಾತಕಗಳ
        ಪಟ್ಟಿ ಮಾಡುವವರಾರಯ್ಯ-
                ಸ್ವತಂತ್ರಧೀರ ಸಿದ್ಧೇಶ್ವರ?

### ೧೪೮

'ಅಯ್ಯೋ ಪಾಪಿ' ಎಂಬುದೆ ಪಾಪ,
'ಅಯ್ಯೋ ಪಾಪ' ಎಂಬುದೆ ಪುಣ್ಯ ನೋಡಯ್ಯ-
                ಸ್ವತಂತ್ರಧೀರ ಸಿದ್ಧೇಶ್ವರ!

### ೧೪೯

ಚಿತ್ತಕ್ಕೆ ದಾಸನಾಗುವುದು ಭೋಗ,
ಚಿತ್ತವನ್ನು ದಾಸನಾಗಿಸಿಕೊಳ್ಳುವುದು ಯೋಗ ನೋಡಾ,
        ಸ್ವತಂತ್ರಧೀರ ಸಿದ್ಧೇಶ್ವರಾ!

### ೧೫೦

ಕಾರಣದಿಂದ ಕಾರ್ಯ ಮೈದೋರಿದರೆ ಅದು ಸೃಷ್ಟಿ,
ಕಾರ್ಯ ಕಾರಣಕ್ಕೆ ಹಿಂದಿರುಗಿದರೆ ಅದು ಲಯ ನೋಡಾ,
                ಸ್ವತಂತ್ರಧೀರ ಸಿದ್ಧೇಶ್ವರಾ!

೧೫೧

ಧರ್ಮವನ್ನು ಬೆಳಗಬಲ್ಲುದು ದರ್ಶನ,
ದರ್ಶನವನ್ನು ಬದುಕಿಸಬಲ್ಲುದು ಧರ್ಮ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೨

ಬರಹಗಾರ ಬದುಕನ್ನೇ ಬಣ್ಣಿಸಬೇಕೆಂದು
ಎಲ್ಲರೂ ಒರೆಯುತ್ತಾರೆ;
ಬರಹಗಾರನೂ ಬದುಕಬೇಕೆಂಬುದನ್ನು
ಬಹುಜನರು ಮರೆಯುತ್ತಾರೆ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೩

ಅಗಸನ ಕತ್ತೆಗಳ ಒದೆತಗಳಿಗಿಂತ
ಕಲಿತ ಕತ್ತೆಗಳ ಲತ್ತೆಗಳು
ಹೆಚ್ಚು ನೋವನೀವುವು ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೪

ತಲೆಗೊಮ್ಮೆ ಆದ್ಯತೆ,
ಎದೆಗೊಮ್ಮೆ ಆದ್ಯತೆ,
ಹೊಟ್ಟೆಗೊಮ್ಮೆ ಆದ್ಯತೆ,
ಹೊಕ್ಕುಳ ಕೆಳಭಾಗಕ್ಕೊಮ್ಮೆ ಆದ್ಯತೆ–
ಒಟ್ಟು ದೇಹಕ್ಕೆ, ನಿನ್ನ ಗೇಹಕ್ಕೆ,
ಜಂಗಮದೇಗುಲಕ್ಕೆ
ಆದ್ಯತೆಯೇ ಇಲ್ಲವೇನಯ್ಯ?
ತಲೆ, ಎದೆ, ಹೊಟ್ಟೆ, ಕಿಬ್ಬೊಟ್ಟೆಗಳ
ಸಮವಾಯ ಸಮನ್ವಯಗಳ
ಸಾಧ್ಯತೆಯೇ ಇಲ್ಲವೇನಯ್ಯ?
ಒಂದೇ ದೇಹದಲ್ಲಿ
ಇವೆಲ್ಲವನ್ನೂ ಇರಿಸಿರುವ ನೀನು
ಇಲ್ಲವೆನ್ನಲಾರೆ!

ನಮಗೇ ಇವುಗಳ ಸಮನ್ವಯ ನೀಡುವ
ಸರ್ವಾಂಗ ಸಮಾಹಿತ ಜೀವನ ಬೇಡವಾದರೆ
ನೀನೇನ ಮಾಡುವಿಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

೧೫೫

ನನ್ನ ಆತ್ಮ ಸತ್ತಿದೆಯೆಂದು ಸಾರಿ
ನನಗೆ ಆತ್ಮಬೋಧೆ ಮಾಡಲು ಬಂದಿಹ ಬಂಧುವೆ,
ನನ್ನ ದೇಹವಿನ್ನೂ ಬದುಕಿದೆಯಲ್ಲ–
ಅದಕ್ಕೇನ ಮಾಡಬಲ್ಲೆ, ಮೊದಲು ಹೇಳು!
ಅದಕ್ಕೆ ಆಶನವುಣಿಸ ಬಲ್ಲೆಯಾ?
ವಸನ ತೊಡಿಸ ಬಲ್ಲೆಯಾ?
ಭಿಷಜ ಕುಡಿಸ ಬಲ್ಲೆಯಾ?
ಅದಕ್ಕಂಟಿರುವ ಜಾತಿಯ ಜಿಡ್ಡ ಬಿಡಿಸಬಲ್ಲೆಯಾ?
ಆತ್ಮದಿಂದ ಆರಂಭಿಸಿ ದೇಹಕ್ಕೆ ಬರಬೇಡ;
ದೇಹದಿಂದ ಆರಂಭಿಸಿ,
ದೇಹವನೆ ದೇಗುಲಗೊಳಿಸಿ,
ಸ್ವತಂತ್ರಧೀರ ಸಿದ್ಧೇಶ್ವರನ
ಸೇರಲು ಅದನೆ ಸಾಧನ ಮಾಡಾ!

೧೫೬

ನೀರುಗಳಲ್ಲೆಲ್ಲ ತಿರುನೀರು ತಲಕಾವೇರಿಯ ನೀರು;
ಅದಕ್ಕೂ ಪವಿತ್ರವಾದುದು ಹೂವಿನೆದೆಯ ನೀರು;
ಅದಕ್ಕೂ ಪವಿತ್ರವಾದುದು ದುಡಿವ ಬಡವನ ಬೆವರ ನೀರು;
ಅದಕ್ಕೂ ಪವಿತ್ರವಾದುದು ದುಃಖಿತರ ಕಣ್ಣೀರು;
ಅದಕ್ಕೂ ಪವಿತ್ರವಾದುದು ದುಃಖಿತರ ಕಂಡು ಉಕ್ಕುವ
ಕರುಣೆಯ ಕಂಬನಿ ನೀರು;
ಅದಕ್ಕೂ ಪವಿತ್ರವಾದುದು ಪರೋತ್ಕರ್ಷವ ಕಂಡು
ಉದಿಸುವ ಆನಂದದ ಕಣ್ಣೀರು!
ಇದಕ್ಕಿಂತ ಪವಿತ್ರ ತೀರ್ಥವದಾವುದಯ್ಯ?
ಇರವಿಗೆ ಇದಕ್ಕಿಂತ ಒಳ್ಳೆಯ ಅರ್ಥ ಅದಾವುದಯ್ಯ?
ಮೊಸಳೆ ಕಣ್ಣೀರು, ಗ್ಲಿಸರಿನ್ ಕಣ್ಣೀರು,

ಹುಸಿ ಕಣ್ಣೀರುಗಳೇ ಹೆಚ್ಚಿರುವಾಗ
ಈ ಪವಿತ್ರ ತೀರ್ಥವನ್ನೆಲ್ಲಿ ಹುಡುಕಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೧೫೭

ಎತ್ತರಕ್ಕೆ ಬೆಳೆಯಲಾರದ ಮರ
ಎತ್ತರದ ಮರಗಳ ಕತ್ತರಿಸಿ
ತನ್ನನೆತ್ತರಗೊಳಿಸಲು ಪ್ರಾರ್ಥಿಸುವುದೇ?
ಹೊಳೆಯಾಗದ ಹಳ್ಳ
ಹೊಳೆಯ ಎಡಬಲಗಳ ಹೂಳಿ
ಕಿರಿದು ಮಾಡಿರೆಂದು ಕರಕರೆಯ ಮಾಡುವುದೆ?
ದೂರದಲ್ಲಿದ್ದುದರಿಂದ ಕಿರಿದಾಗಿ ತೋರುವ ತಾರಗೆ
ತನ್ನ ತಿರೆಗೆ ಹತ್ತಿರ ಸೆಳೆದು
ತೋರವಾಗಿಸಿರೆಂದು ಕೋರುವುದೆ?
ಮಾನವನಿಗೇಕೆ ಇಂಥ ಹಪಹಪಿಯಿರಬೇಕಯ್ಯ?
ಮೇಲೇರುವವರ ಕಾಲು ಹಿಡಿದೆಳೆಯದೆ,
ತಾವೂ ಮೇಲೇರಬೇಕೆಂಬ ಛಲವನ್ನು
ಅವರಿಗೆ ನೀಡಾ-ಸ್ವತಂತ್ರಧೀರ ಸಿದ್ಧೇಶ್ವರಾ!

೧೫೮

ಹೊಸ ಹೊಸ ವಾಹನಗಳಲ್ಲಿ ಬಂದರೆ
ಹಾದಿಗಾವ ಹಿಗ್ಗಯ್ಯ?
ಬರಿಗಾಲಿನಲ್ಲಿ ತಿರುಗುವವರು ಬಂದರೆ
ಅದಕ್ಕಾವ ಕುಗ್ಗಯ್ಯ?
ತಗ್ಗು ಬೀಳುವಂತೆ ತುಳಿಯದಿದ್ದರೆ ಸಾಕು;
ಬೇರೆ ದಾರಿಕಾರರಿಗೂ
ದಾರಿಯಿದು ಬೇಕೆಂಬ ಅರಿವಿದ್ದರೆ ಸಾಕು;
ಬದಿಯ ಸಾಲುಮರಗಳನ್ನು ಕಡಿಯದಿದ್ದರೆ ಸಾಕು;
ಈ ಪರೋಪಕಾರಿ ದಾರಿಯ ಮೇಲೆಯೇ
ಕೊಲೆ ಸುಲಿಗೆಗಳು ನಡೆಯದಿದ್ದರೆ ಸಾಕು;
ನಿನ್ನ ಬಳಿಗೆ ಒಯ್ಯುವ ದಾರಿಯ
ಮರೆಯದಿದ್ದರೆ ಸಾಕು-
ಸ್ವತಂತ್ರಧೀರ ಸಿದ್ಧೇಶ್ವರ!

## ೧೫೯

ಹಾಗೆ ಹಾರಿದರೆ ಚೆನ್ನ,
ಹೀಗೆ ಹಾರಿದರೆ ಚೆನ್ನವೆಂದು
ಕಾಗೆ ಪ್ರಯೋಗ ಮಾಡುತ್ತಲೇ ಇದೆ-
ನೇರವಾಗಿ ಹಾರಿ ಹೋಗಿ
ಹಂಸ ಗುರಿ ತಲುಪಿದೆ!
ಅತ್ತ ಹಬ್ಬಿದರೆ ಲೇಸು,
ಇತ್ತ ಹರಡಿದರೆ ಲೇಸೆಂದು
ಹೊರಳುತ್ತಲೇ ಇವೆ ಮುಳ್ಳುಬಳ್ಳಿಗಳು-
ನೇರವಾಗಿ ಬೆಳೆದು ಬಾನ ಮುದ್ದಿಸುತ್ತಿವೆ
ತೇಗು ತೆಂಗು ಕೌಂಗುಗಳು!
ವಕ್ರತೆಗೆ ತ್ರಿವಿಕ್ರಮತೆ ಸಾಧ್ಯವೆ?
ಸಣ್ಣತನಕ್ಕೆ ಸಾಗರೋಲ್ಲಂಘನ ಸಾಧ್ಯವೆ?
ಋಜುತೆ ಭೂಮತೆಗಳಲ್ಲಿ ನೆಚ್ಚ ನೀಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೬೦

ಹಳೆಯ ಕಾಲದ ಅತ್ತೆಯ ಆರ್ಭಟ,
ಹೊಸ ಕಾಲದ ಸೊಸೆಯ ಆರ್ಭಟ
ಕೇಳಲಾಗದಯ್ಯ!
ಹಳೆಯ ಕಾಲದ ಹೆಂಡತಿಯ ಕಷ್ಟ,
ಹೊಸ ಕಾಲದ ಗಂಡನ ಕಷ್ಟ
ತಾಳಲಾಗದಯ್ಯ!
ಹಳೆಯ ಕಾಲದ ಶಿಷ್ಯನ ಗೋಳು,
ಹೊಸ ಕಾಲದ ಗುರುವಿನ ಗೋಳು
ಹೇಳಲಾಗದಯ್ಯ!
ಹಳೆಯ ಕಾಲದ ಗುಮಾಸ್ತರ ಬವಣೆ,
ಹೊಸ ಕಾಲದ ಅಧಿಕಾರಿಗಳ ಬವಣೆ
ಹೇಳಲಾಗದಯ್ಯ!
ಹಳೆಯಕಾಲದ ಸಭಿಕರ ಪಾಡು,
ಹೊಸ ಕಾಲದ ಭಾಷಣಕಾರರ ಪಾಡು
ಹೇಳಲಾಗದಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

## ೧೬೧

ನಡೆವ ಭೂಮಿ ಕೆಟ್ಟಿದೆ,
ಕುಡಿವ ನೀರು ಕೆಟ್ಟಿದೆ,
ಉಸಿರಾಡಿಸುವ ಗಾಳಿ ಕೆಟ್ಟಿದೆ–
ಮನುಷ್ಯನೇ ಕೆಟ್ಟ ಮೇಲೆ
ಇವು ಕೆಟ್ಟುದಾವ ಚೋದ್ಯವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೧೬೨

ಕಾಮಜೀವನ ಹೇಗಾದರೇನು,
ಮದುವೆ ಮಾಡಿಬಿಟ್ಟರೆ ಸಾಕು–
ಎಂಬರು ಕೆಲವರು;
ಮದುವೆಯಾಗದಿದ್ದರೇನು,
ಕಾಮಜೀವನ ಸೊಗಸಾಗಿದ್ದರೆ ಸಾಕು–
ಎನ್ನುವರು ಇನ್ನು ಕೆಲವರು;
ಕಾಮಜೀವನವನ್ನೂ ಸೊಗಸಾಗಿಸಬಲ್ಲ
ಮದುವೆಯೇ ಮೇಲೆಂಬರಯ್ಯ–
ನಿನ್ನವರು!
ಭಕ್ಕರಿ ಇರದಿದ್ದರೇನು,
ಬಿಡುಗಡೆಯಿದ್ದರೆ ಸಾಕು–
ಎಂಬರು ಕೆಲವರು;
ಬಿಡುಗಡೆ ಇರದಿದ್ದರೇನು,
ಭಕ್ಕರಿ ಇದ್ದರೆ ಸಾಕು–
ಎನ್ನುವರು ಇನ್ನು ಕೆಲವರು;
ಭಕ್ಕರಿ ಬಿಡುಗಡೆಗಳೆರಡೂ
ಬಾಳಿನ ಶ್ವಾಸೋಚ್ಛ್ವಾಸವೆಂಬರಯ್ಯ–
ನಿನ್ನವರು, ಸ್ವತಂತ್ರಧೀರ ಸಿದ್ಧೇಶ್ವರಾ!

## ೧೬೩

ನೀರ–ಕ್ಷೀರ ವಿವೇಕ ಒಂದಕ್ಕೆ,
ಪಕ್ವಾಪಕ್ವ ವಿವೇಕ ಒಂದಕ್ಕೆ,
ಮಧುರಾಮಧುರ ವಿವೇಕ ಒಂದಕ್ಕೆ,

ಕಾಲಾಕಾಲ ವಿವೇಕ ಒಂದಕ್ಕೆ–
ಪಶು ಪಕ್ಷಿಗಳಲ್ಲಿ ಸಹ ಒಂದಿಲ್ಲೊಂದು ವಿವೇಕ!
ನರನಾಗಿಯೂ ಹಿತಾಹಿತ ವಿವೇಕವಿಲ್ಲದವ
ಪಶುಪಕ್ಷಿಗಳಿಗಿಂತ ಕಡೆಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೬೪

ವಿವಿಧ ತಜ್ಞರ ವರದಿಗಳ ಮುಂದಿಟ್ಟುಕೊಂಡು
ರೋಗನಿದಾನ ಮಾಡಲರಿಯದ ವೈದ್ಯನಂತಾಗಿಹೆನಯ್ಯ!
ಸಕಲ ಸಾಕ್ಷ್ಯ ಪುರಾವೆಗಳನ್ನು ಮುಂದಿರಿಸಿಕೊಂಡು
ನ್ಯಾಯ ನಿರ್ಣಯ ಮಾಡಲರಿಯದ ನ್ಯಾಯಾಧೀಶ
ನಂತಾಗಿಹೆನಯ್ಯ!
ಕವಿಯ ಬಗ್ಗೆ ಎಲ್ಲ ಮಾಹಿತಿ ಸಂಗ್ರಹಿಸಿ
ಕಾವ್ಯದ ಬೆಲೆಕಟ್ಟಲರಿಯದ ವಿಮರ್ಶಕನಂತಾಗಿಹೆನಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ!
ನಿನ್ನ ಬಗ್ಗೆ ಗ್ರಂಥಗಳ ರಾಶಿ ಸಂಪಾದಿಸಿಕೊಂಡು
ನಿನ್ನನ್ನೇ ಅರಿಯಲಾರದ ಅಜ್ಞನಾಗಿಹೆನಯ್ಯ!

## ೧೬೫

ರೋಗನಿದಾನ ಬಲ್ಲವನಿಗೆ ಔಷಧ ಗೊತ್ತಿಲ್ಲ,
ಔಷಧ ಗೊತ್ತಿರುವವನಿಗೆ ರೋಗ ತಿಳಿವುದಿಲ್ಲ,
ಕೂಡಿ ಕೆಲಸ ಮಾಡಲು ಇಬ್ಬರಿಗೂ ಮನಸ್ಸಿಲ್ಲ!
ಆವಿಷ್ಕರಿಸುವವನಿಗೆ ಅನುಷ್ಠಾನ ತಂತ್ರ ಗೊತ್ತಿಲ್ಲ,
ಅನುಷ್ಠಾನ ಗರಿಷ್ಠನಿಗೆ ಸಾಧ್ಯವಿಲ್ಲ,
ಕೂಡಿ ಕೆಲಸ ಮಾಡಲು ಇಬ್ಬರಿಗೂ ಮನಸ್ಸಿಲ್ಲ!
ಗುರಿ ಗೊತ್ತಿರುವವನಿಗೆ ದಾರಿ ಗೊತ್ತಿಲ್ಲ;
ದಾರಿ ಬಲ್ಲವನಿಗೆ ಗುರಿ ಗೊತ್ತಿಲ್ಲ;
ಸಹಕರಿಸಿ ಗುರಿ ಮುಟ್ಟಲು ಇಬ್ಬರಿಗೂ ಮನಸ್ಸಿಲ್ಲ!
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಇಜ್ಜೋಡಿನ ಅರ್ಥ ಬಲ್ಲವನೆ ಬಲ್ಲ!

## ೧೬೬

ದೊರೆಯ ದರ್ಪವನ್ನು ಹೇಗೋ ಸೈರಿಸಬಹುದು,
ದ್ವಾರಪಾಲಕನ ದರ್ಪವನ್ನು ಸಹಿಸುವುದೇ ಕಷ್ಟವಯ್ಯ;
ಜ್ಞಾನಿಯ ಹಮ್ಮುಬಿಮ್ಮುಗಳನ್ನು ಹೇಗೋ ಸೈರಿಸಬಹುದು,
ಅಜ್ಞಾನಿಯ ಅಹಂಕಾರವನ್ನು ಸಹಿಸುವುದೇ ಕಷ್ಟವಯ್ಯ;
ಸಹೃದಯನು ದೋಷ ತೋರಿದರೆ ತಾಳಬಹುದಯ್ಯ,
ಕ್ಷುದ್ರನ ಛಿದ್ರಾನ್ವೇಷಣವನ್ನು ತಾಳುವುದೇ ಕಷ್ಟವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ನಿಜಭಕ್ತರು ಝುಂಕಿಸಿದರೆ ಹೇಗೋ ತಾಳಬಹುದು.
ಉನ್ಮತ್ತರು ಜರೆದರೆ ತಾಳುವುದು ಕಷ್ಟವಯ್ಯ!

## ೧೬೭

ಮಧ್ಯದಲ್ಲಿ ಪ್ರವೇಶಿಸಿ ಉಳಿಸಿಕೊಳ್ಳುವರ ಗಳಿಸಿಕೊಂಡೇ
ಎದುರಾಳಿಯ ಮೇಲೆ ಏರಿ ಹೋಗುವರು;
ಜಾಮೀನು ಕೊಟ್ಟು ಬಿಡಿಸಿಕೊಳ್ಳುವರ ಹುಡುಕಿಕೊಂಡೇ
ಸತ್ಯಾಗ್ರಹ, ಶಾಸನೋಲ್ಲಂಘನಗಳಿಗಿಳಿಯುವರು;
ನೆಪ ಹುಡುಕಿ ಹಣ್ಣಿನರಸ ಕುಡಿಸುವವರ ಕಟ್ಟಿಕೊಂಡೇ
ಆಮರಣ ಉಪವಾಸ ಪ್ರಾರಂಭಿಸುವರು;
ಪೆಟ್ಟು ಹತ್ತದಂತೆ ಪಟ್ಟು ಉಪಯೋಗಿಸುವ ಆಶ್ವಾಸನ ಪಡೆದೇ
ಕುಸ್ತಿಯ ಕಣಕ್ಕೆ ಇಳಿಯುವರು;
ಸ್ವತಂತ್ರಧೀರ ಸಿದ್ಧೇಶ್ವರಾ,
ದಾನವಿತ್ತ ಮೊತ್ತ ಹತ್ತು ಪಟ್ಟಾಗಿ
ಹಿಂದಿರುಗುವ ಹಿಕ್ಮತ್ತು ಮಾಡಿಯೇ
ದಾನವೀಯುವರು–ದಂಭಾಚಾರ ದುರಂಧರರು!

## ೧೬೮

ಇಲ್ಲಿ ಹುಟ್ಟುವವರ ಲೆಕ್ಕವಿಡುತ್ತಾರೆ.
ಸಾಯುವವರ ಲೆಕ್ಕವಿಡುತ್ತಾರೆ.
ಬದುಕಿರುವವರದು ಯಾವ ಲೆಕ್ಕವಯ್ಯ?
ಜನನ ಮರಣಗಳಿಗೇ ಮೀಸಲಾದ ವಹಿಯಲ್ಲಿ
ಜೀವನಕ್ಕೆಲ್ಲಿ ಸ್ಥಳವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೧೬೯

ಇಲ್ಲಿ ಆದ್ಯತೆ ಇರಬೇಕಾದುದು
ಈಗ ಬದುಕಿರುವವರಿಗೆ!
ನಾಳೆ ಹುಟ್ಟುವವರಿಗಲ್ಲ,
ನಿನ್ನೆ ಸತ್ತವರಿಗಲ್ಲ,
ಈಗ ಬದುಕಿರುವವರಿಗೆ!
ಈಗ ಬದುಕಿರುವವರ
ಎಲ್ಲ ಬಗೆಯ ಏಳಿಗೆಯೇ
ಎಲ್ಲರ ಗುರಿಯಾಗಿರಲಿ!
ನಿನ್ನೆ ಸತ್ತವರಿಗಾಗಿ
ದುಂದುವೆಚ್ಚ ಮಾಡುವ ಪೆಚ್ಚರು
ಇಂದಿನವರಿಗಾಗಿ ವೆಚ್ಚಮಾಡುವ ಇಚ್ಛೆಯಿರದಿರೆ
ಮುಂದೆ ಹುಟ್ಟುವವರಿಗಾದರೂ ಉಳಿಸಲಿ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೭೦

ಬದುಕಬೇಕೆಂಬುದು ಅದೆಷ್ಟು ಇಷ್ಟವಾದುದು,
ಬದುಕುವುದು ಅದೆಷ್ಟು ಕಷ್ಟವಾದುದು–
ಸ್ವತಂತ್ರಧೀರ ಸಿದ್ಧೇಶ್ವರ!

## ೧೭೧

ಮೂಗನ್ನೇ ಹರಿಯುವಷ್ಟು
ಮೂಗುತಿ ಭಾರವಾಗಿದ್ದರೆ ಹೇಗಯ್ಯ?
ಮೂಗುತಿಯಿರುವುದು ಮೂಗಿಗಾಗಿ,
ಮೂಗು ಮೂಗುತಿಗಾಗಿ ಅಲ್ಲ!
ಎಲ್ಲ ಇರುವುದು ಬದುಕಿಗಾಗಿ,
ಬದುಕು ಅದಕಾಗಿ, ಇದಕಾಗಿ ಅಲ್ಲ!
ಬದುಕಿನ ಬೆನ್ನು ಮುರಿವ ಭಾರ
ಯಾವುದೇ ಇರಲಿ
ಅದು ತ್ಯಾಜ್ಯವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೭೨

ಮೊದಲು ಹುಟ್ಟಿದುದು ಭಾಷೆ,
ತರುವಾಯ ಹುಟ್ಟಿದುದು ವ್ಯಾಕರಣ–
ಆದರೂ ವ್ಯಾಕರಣವೇ ಭಾಷೆಯನ್ನು ಬಂಧಿಸಿದೆಯಯ್ಯ!
ಮೊದಲು ಹುಟ್ಟಿದವ ಮನುಜ,
ತರುವಾಯ ಹುಟ್ಟಿದುದು ಮತ–
ಆದರೂ ಮತವೇ ಮನುಜನನ್ನು ಬಂಧಿಸಿದೆಯಯ್ಯ!
ಮೊದಲು ಹುಟ್ಟಿದುದು ಸಮಾಜ,
ತರುವಾಯ ಹುಟ್ಟಿದುದು ಸರಕಾರ–
ಆದರೂ ಸರಕಾರವೇ ಸಮಾಜವನ್ನು ಬಂಧಿಸಿದೆಯಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಹುಟ್ಟಿದುದೇ ಹುಟ್ಟಿಸಿದುದನ್ನು ಕಟ್ಟಿಹಾಕುವ
ಪರಿಗೆ ಬೆರಗಾದೆನಯ್ಯಾ!
ನಾವು ಹುಟ್ಟಿಸಿದ್ದನ್ನು ನಾವೇ ಕಟ್ಟಿ ಆಳುವ
ತೆರನ ತಿಳಿಸಿ ಬದುಕಿಸಯ್ಯಾ!

## ೧೭೩

ಮೂಗಿನ ತುಂಬ ನಸ್ಯ ತುಂಬುವವ
ಬಾಯಿ ತುಂಬ ತಂಬಾಕು ತುಂಬುವವನಿಗೆ ಅಸಹ್ಯ;
ಬಾಯಿ ತುಂಬ ತಂಬಾಕು ತುಂಬುವವ
ಬೀಡಿ ಸೇದಿ ಹೊಗೆ ಬಿಡುವವನಿಗೆ ಅಸಹ್ಯ;
ತಂಬಾಕದ ವಾಸನೆಯೇ ತಡೆಯದವರಿಗೆ
ಈ ಮೂವರೂ ಅಸಹ್ಯ!
ಒಬ್ಬನಿಗೆ ರಸವೆನಿಸಿದುದು ಇನ್ನೊಬ್ಬನಿಗೆ ವಿಷ,
ಒಬ್ಬನಿಗೆ ಕಸವರವೆನಿಸಿದುದು ಇನ್ನೊಬ್ಬನಿಗೆ ಕಸ!
ಅನಿವಾರ್ಯ ಅಸಹ್ಯದೊಡನೆ ಸಹವಾಸ!
ಇದನರಿತು, ಸಹಿಸು ಸ್ವಭಾವ ವೈವಿಧ್ಯವ,
ರುಚಿ ವೈಚಿತ್ರ್ಯವ!
ವೈಪರೀತ್ಯಕ್ಕೆಡೆಗುಡದ ವೈವಿಧ್ಯ,
ವೈಲಕ್ಷಣ್ಯಕ್ಕೆಡಗುಡದ ವೈಚಿತ್ರ್ಯ
ಸಹನೀಯ, ಸ್ಪೃಹಣೀಯ–
ಸ್ವತಂತ್ರಧೀರ ಸಿದ್ಧೇಶ್ವರ!

## ೧೭೪

ಬಿತ್ತಿನಂತೆಯೇ, ಬತ್ತಿದಂತೆಯೇ
ಬೆಳೆಯುತ್ತದೆ ಇಳೆಯ ನೆಲ;
ಇದೆಂಥ ನೆಲವಯ್ಯ ನರನ ಹುಟ್ಟಿನ ನೆಲ?!
ಒಳ್ಳೆಯದನ್ನು ಬಿತ್ತಿದರೆ ಒಳ್ಳೆಯದನ್ನು ಬೆಳೆಯುತ್ತದೆ,
ಕೆಟ್ಟದ್ದನ್ನೂ ಬೆಳೆಯುತ್ತದೆ;
ಕೆಟ್ಟದ್ದನ್ನು ಬಿತ್ತಿದರೆ ಕೆಟ್ಟದ್ದನ್ನೂ ಬೆಳೆಯುತ್ತದೆ,
ಒಳ್ಳೆಯದನ್ನೂ ಬೆಳೆಯುತ್ತದೆ!
ಯಾವ ಸಲ ಏನನ್ನು ಬೆಳೆದೀತೆಂದು ಹೇಳಲಾಗದು!
ಬೆಳೆದುದು ಬೆಳೆದಂತೆಯೇ
ಉಳಿವುದೆಂದೂ ಹೇಳಲಾಗದು!
ತಿರುಗುಮುರುಗು ತಳಿ
ನರನ ಬಳಿ!
ಇದ ಬಳಿ–
ಬಳಿದು ಹಸನುಗೊಳಿಸುವ,
ಹದವ ತಿಳಿಸು
ಸ್ವತಂತ್ರಧೀರ ಸಿದ್ಧೇಶ್ವರ!

## ೧೭೫

ನನ್ನಿಯನೆ ನುಡಿವ ಬಾಯಿ ದೇವರ ಗುಡಿ,
ಹುಸಿಯನೇ ಹೊಮ್ಮಿಸುವ ಬಾಯಿ ಕಕ್ಕಸವು ಕಾಣಾ!
ಕರೆದು ಕೊಡುವ ಕೈಯೆ ಕಲ್ಪವೃಕ್ಷ,
ಕಸಿದು ಕೊಳ್ಳುವ ಕೈಯು ಗರಗಸವು ನೋಡಾ!
ಲೇಸನೇ ಕಾಣುವ ಕಣ್ಣೆ ಕಾಮಧೇನು,
ದೋಷವನೆ ಹುಡುಕುವ ಕಣ್ಣು ಹುಣ್ಣು ನೋಡಾ!
ಶಿವನನಾಲಿಪ ಕಿವಿಯೆ ಅವಿಮುಕ್ತ ಕ್ಷೇತ್ರ,
ಚಾಡಿ ಕೇಳುವ ಕಿವಿಯೆ ಚರಂಡಿ ನೋಡಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ಪಾವಿತ್ರ್ಯ ಪರಿಮಳ ಪ್ರಿಯ ನಾಸಿಕವು ನಾಸಿಕ, ಕಾಶಿ–
ದುರಿತದುರ್ಗಂಧ ಪ್ರಿಯ ಮೂಗು ತಿಪ್ಪೆ ನೋಡಾ!

## ೧೭೬

ಕಾಣುವುದನ್ನು ಮಾತ್ರ ಕಂಡುಂಡ ಕಣ್ಣುಗಳಿವು
ಕಾಣದುದನ್ನಿನ್ನೂ ಕಾಣಲೇ ಇಲ್ಲವಯ್ಯ!
ಕೇಳಿದುದನ್ನೇ ಕೇಳುತ್ತ ಬಂದ ಕಿವಿಗಳಿವು
ಕೇಳದುದನ್ನಿನ್ನೂ ಕೇಳಲೇ ಇಲ್ಲವಯ್ಯ!
ವಾಸಿಸಿದುದನ್ನೇ ವಾಸಿಸಿದ ನಾಸಿಕವಿದು
ವಾಸನಾತೀತವನ್ನಿನ್ನೂ ವಾಸಿಸಲೇ ಇಲ್ಲವಯ್ಯ!
ಮುಟ್ಟಬಲ್ಲುದನ್ನೇ ಮುಟ್ಟುತ್ತ ಬಂದಿರುವ ತ್ವಚವಿದು
ಮುಟ್ಟಲಾಗದುದನ್ನಿನ್ನೂ ಮುಟ್ಟಲೇ ಇಲ್ಲವಯ್ಯ!
ಅಧರಕ್ಕೆ ಸಿಹಿಯಾದುದನ್ನೇ ಸೇವಿಸಿದ ರಸನೆಯಿದು
ಉದರಕ್ಕೆ ಸಿಹಿಯಾದುದನ್ನು ಆಶಿಸಲೇ ಇಲ್ಲವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಬರಿ ತೋರ್ಕೆಗೆ ತೆಕ್ಕೆ ಬಿದ್ದ ದೇಹಿ
ತೋರ್ಕೆಯಾಚೆಗೆ ಮೋರೆ ಚಾಚಲೇ ಇಲ್ಲವಯ್ಯ!

## ೧೭೭

ಬೀಜ ಪರಿವರ್ತನೆ ಬಂದಿತು;
ಫಲ ಪರಿವರ್ತನೆ ಬಂದಿತು;
ಲಿಂಗಪರಿವರ್ತನೆಯೂ ಬಂದಿತು–
ಹೃದಯ ಪರಿವರ್ತನೆ ಮಾತ್ರ ಬರಲಿಲ್ಲವಯ್ಯ!
ಬದಲಿ ಹೃದಯಗಳು ಬಂದುವು;
ಜೋಡಿ ಹೃದಯಗಳು ಬಂದುವು;
ಜಂಟಿ ಹೃದಯಗಳು ಬಂದುವು–
ಹೃದಯವಂತಿಕೆಯ ಹರಿಕಾರನಾಗಿ
ಹೃದಯ ಪರಿವರ್ತನೆ ಬರಲಿಲ್ಲವಯ್ಯ!
ಈ ಪರಿವರ್ತನೆಯಿಲ್ಲದ ಉಳಿದ ಪರಿವರ್ತನೆಗಳು
ಪರಿವರ್ತನೆಗಳಿಗಾಗಿ ಪರಿವರ್ತನೆಗಳಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೭೮

ಜೇನು ಹುಳುಗಳೆ,
ನೀವು ರಾಣಿ ನೊಣವನ್ನು ಉಂಟುಮಾಡುವಂತೆ

ಮಹಾಮಾನವರನ್ನು ರೂಪಿಸಲಾರೆವೆ ನಾವು?
ದುಂಬಿಗಳೆ,
ನೀವು ಕೀಟವನ್ನೇ ಭ್ರಮರವಾಗಿಸುವಂತೆ
ಕೆಟ್ಟವರನ್ನೂ ಉತ್ತಮರನ್ನಾಗಿಸಲಾರೆವೆ ನಾವು?
ಕಾಗೆಗಳೆ,
ನೀವು ಪರಪುಟ್ಟಗಳ ಹುಟ್ಟಿಸುವಂತೆ
ಅನಾಥರನ್ನೇ ಗಣನಾಥರ ಮಾಡಲಾರೆವೆ ನಾವು?
ಸ್ವತಂತ್ರಧೀರ ಸಿದ್ಧೇಶ್ವರ ಸಂಜಾತ
ಮಾನವರು ಮನಸ್ಸು ಮಾಡಬೇಕು–ಅಷ್ಟೇ!

## ೧೭೯

ವರ್ತುಳಪಥದಲ್ಲಿ ವರ್ಷಗಟ್ಟಲೆ ತಿರುಗಿದರೇನು–
ಮತ್ತೆ ಮತ್ತೆ ಹೊರಟ ಸ್ಥಳಕ್ಕೇ ಹಿಂದಿರುಗಬೇಕು!
ಗೊತ್ತು ಗುರಿಯಿಲ್ಲದೆ ಜೆಟ್ ವಿಮಾನವೇರಿ ಹಾರಿದರೇನು–
ಸುತ್ತಿ ಸುತ್ತಿ ಹಾರಿದ ಸ್ಥಳಕ್ಕೇ ಹಿಂದಿರುಗಬೇಕು!
ಗಾಣವ ಸುತ್ತುವ ಕೋಣನಂತೆ ಸತ್ತ ಸಂಪ್ರದಾಯಗಳ
ಪ್ರದಕ್ಷಿಣೆ ಮಾಡಿದರೇನು
ಇದ್ದಲ್ಲಿಯೇ ಇದ್ದು ಒದ್ದಾಡಬೇಕು,
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೮೦

ಎತ್ತೆತ್ತಲೋ ಸುತ್ತಿ ಬಂದಿತು ಈ ಸುತ್ತೋಲೆ!
ಇದನ್ನು ಮನ್ನಿಸುವುದಿರಲಿ,
ಇದನ್ನು ಸ್ವೀಕರಿಸುವವರೂ ಸಿಕ್ಕಲಿಲ್ಲವಯ್ಯ!
ಇದರ ಮೇಲೆ ಯಾವ ಮೊಹರಿದೆ?
ಯಾರ ಲಾಂಛನವಿದೆ, ಒಕ್ಕಣಿಕೆಯಿದೆ?
ಯಾವ ಸಂಕೇತವಿದೆ?
ಯಾವ ಧ್ಯೇಯವಾಕ್ಯವಿದೆ?
ಏನೂ ಇಲ್ಲವೆ?
ಯಾರು ಮನ್ನಿಸಬೇಕಿದ?
ಸ್ವತಂತ್ರಧೀರ ಸಿದ್ಧೇಶ್ವರನ ಮುದ್ರೆ ಬಿದ್ದಾಗ
ಗೆದ್ದು ಬಂದೀತು ಮುಟ್ಟಿದವರೆದೆಗಳ!

೧೮೧

ಒಂದೊಂದು ಜೀವಿಗೂ ಒಂದೊಂದು ವೈರಿ ಜೀವಿಯಿದೆ;
ಒಂದೊಂದು ಗಿಡಬಳ್ಳಿಗೂ ಒಂದೊಂದು ಪರೋಪಜೀವಿಯಿದೆ;
ಒಂದೊಂದು ಬೆಳೆಗೂ ಒಂದೊಂದು ಕಳೆ, ಕೀಟ, ಕಾಯಿಲೆಯಿದೆ;
ಒಂದೊಂದೂ ವಾಹನಕ್ಕೂ ಒಂದೊಂದು ಬಗೆಯ ಅಪಘಾತವಿದೆ-
ಮನುಷ್ಯನಿಗಾದರೋ
ವೈರಿಜೀವಿ, ಪರೋಪಜೀವಿ,
ಕೀಟ-ಕಾಯಿಲೆ, ಅಪಘಾತ-
ಎಲ್ಲ ಇವೆ!
ಸಾಲದುದಕ್ಕೆ ತನಗೆ ತಾನೇ ವೈರಿ,
ತನಗೆ ತಾನೇ ಮಾರಿ!
ಇಷ್ಟಿದ್ದೂ ಪರಪೀಡೆಗೆಳಸುವ,
ಪರ ಕ್ಲೇಶಗಳ ಕಂಡು ಸಂತೋಷಿಸುವ,
ಪರೋತ್ಕರ್ಷವನ್ನು ನೋಡಿ ಮತ್ಸರಿಸುವ,
ಪರರ ಕೀರ್ತಿಯನ್ನು ಕೇಳಿ ಕರುಬುವ,
ಪರಧನವನ್ನು ಲೋಭಿಸುವ,
ಪರಸ್ತ್ರೀಯರನ್ನು ಕಾಮಿಸುವನಿವ!
ಯಾವ ಹುಚ್ಚು ಕೆಚ್ಚಿನಿಂದಿವನು
ಪೆಚ್ಚನಂತೆ ವರ್ತಿಸುತ್ತಿಹನಯ್ಯ
ಸ್ವತಂತ್ರಧೀರ ಸಿದ್ಧೇಶ್ವರ?

೧೮೨

ಲೋಹದಲ್ಲಿ ಕಿಡಿ, ಕಲ್ಲಿನಲ್ಲಿ ಕಿಡಿ, ಕಾಷ್ಠದಲ್ಲಿ ಕಿಡಿ,
ನೆಲದಲ್ಲಿ ಕಿಡಿ, ಜಲದಲ್ಲಿ ಕಿಡಿ, ಮೋಡದಲ್ಲಿ ಕಿಡಿ,
ಒಂದೇ ಉರಿಲಿಂಗದ ವಿಸ್ಫುಲಿಂಗಗಳೇ ಎತ್ತೆತ್ತಲೂ-
ಜೀವ ಬದುಕಿದೆ ಕಿಡಿ ಬಳಸಿದರೂ ಸುತ್ತಲೂ!
ಜೀವಿ ಕಿಡಿಕಿಡಿಯಾಗದಿರೆ
ಕಿಡಿಯ ಕಡಲಿನ ಮೀನಾಗಿಯೇ ಬದುಕಬಹುದು?
ಜೀವಿಯೊಡಲ ಕಿಚ್ಚು ಕಿಡಿಗೆದರಿದರೆ?
ಸಿಕ್ಕುದೆಲ್ಲ ಸುಟ್ಟು ಕರಿಕಾಗುವುದು!
ಜೀವಿಯ ಕ್ರೋಧಾಗ್ನಿ ಕೆರಳದಿರೆ
ಯಾವ ಅಗ್ನಿ ಏನ ಮಾಡುವದಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ?

## ೧೮೩

ಹುಲಿ ತಾನು ಖಂಡ ತಿನ್ನಲಿ, ರಕ್ತ ಕುಡಿಯಲಿ;
ಆದರೆ ಹುಲ್ಲೆಯೂ ಹುಲ್ಲನುಳಿದು ಮಾಂಸ ತಿನ್ನಬೇಕೆನ್ನದಿರಲಿ!
ಹುಲ್ಲೆಗೆಲ್ಲಿದೆ ಶಕ್ತಿ-ಹುಲಿಗೆ ಹುಲ್ಲು ತಿನ್ನೆನ್ನಲು?
ಬಲಶಾಲಿಗಳು ಬಲಹೀನರ ಮೇಲೆ
ತಮ್ಮ ನಂಬಿಕೆ, ನಡೆವಳಿಕೆಗಳ ಹೇರದಿದ್ದರೆ ಸಾಕು-
ಇಷ್ಟಾದರೂ ಔದಾರ್ಯ ಅವರಲ್ಲಿರಬೇಕು!
ಬಲ್ಲಂತೆ ಬದುಕಿಕೊಳ್ಳುವರು
ಬಲಹೀನರಾದವರು!
ಅವರಿಗೆ ತಮ್ಮಿಚ್ಛೆಯಂತೆ ಬದುಕಗೊಡಿಸಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೮೪

ಜೀವ ಹಾರಿದ ದೇಹಗಳಿಗೆ
ಬೆಂಕಿ ಇಕ್ಕಿ ಭಕ್ಷಿಸುವ ಸುಡುಗಾಡೆ,
ಜೀವವಿರುವ ದೇಹಗಳನ್ನೇ
ಬೆಂಕಿಯಿಲ್ಲದೆಯೆ ಸುಡುವ ಸಮಾಜಕ್ಕಿಂತ
ನೀನೇ ಮೇಲು!
ನಿನ್ನಲ್ಲಿರುವುದು ಒಂದೇ ಒಂದು ಬೆಂಕಿ,
ಸಮಾಜದಲ್ಲಿ ಸಾವಿರಾರು ಬೆಂಕಿ!
ನಾಲಗೆ ಚಾಚಿ ನೆಕ್ಕುವ
ಸಮಾಜದ ನೂರು ಬೆಂಕಿಗಳಿಂದ ರೋಸಿ
ನಿನ್ನ ಬೆಂಕಿಗೇ ಬೀಳ ಬಯಸಿದರೆ
ಅದೂ ದಂಡನಾರ್ಹ ಅಪರಾಧ ಈ ಸಮಾಜದಲ್ಲಿ!
ಉಳ್ಳವರ ಬೆಂಕಿಗೆ ಉರುವಲವಾಗಿಯೇ
ಉಳಿದಿರಬೇಕು ಈ ಕ್ರೂರ ಘೋರ ಸಮಾಜದಲ್ಲಿ-
ಸ್ವತಂತ್ರಧೀರ ಸಿದ್ಧೇಶ್ವರ!

## ೧೮೫

ತಿಳಿಯಲೆಂದು ತಪಿಸಿದರೂ ತಿಳಿಯದುದು
ಯಾವುದೋ ಅಮೃತಗಳಿಗೆಯಲ್ಲಿ ಹೊಳೆದಾಗ,
ಬಣ್ಣಿಸಲು ಹೆಣಗಿದರೂ ಬಣ್ಣಿಸಲಾಗದ ಅದು

ಯಾವುದೋ ಓಘದಲ್ಲಿ ಮಾತಿನ ಮೈತಳೆದಾಗ,
ಮಾತಾಗಿ ಮೂಡಿದುದು ಕಿವಿಗೆ ಸವಿಯಾಗಿ,
ಜ್ಯೋತಿಯಾಗಿ ಒಳಗನ್ನು ಬೆಳಗಿದಾಗ
ಕಂಬನಿಯಲ್ಲಿ ಕುದ್ದ ಬನ್ನದ ಅನ್ನವೂ
ಅಮೃತವಾದುದ ಅನುಭವಿಸಿದೆ-
ಸ್ವತಂತ್ರಧೀರ ಸಿದ್ಧೇಶ್ವರ!

೧೮೬

ಮೂರ್ತಿಯಾಗುವುದು ಉಳಿಯಿಂದ,
ಕೊಡತಿಯಿಂದಲ್ಲ;
ಚಿತ್ರವಾಗುವುದು ಕುಂಚದಿಂದ,
ಪೊರಕೆಯಿಂದಲ್ಲ;
ಕವಿತೆಯಾಗುವುದು ಗಲಗಿನಿಂದ,
ಅಲಗಿನಿಂದಲ್ಲ;
ಎಂಥ ಶಿಲ್ಪಿ, ಚಿತ್ರಕಾರ, ಕವಿಯಿದ್ದೊಡೇನು,
ಕೊಡತಿ, ಪೊರಕೆ, ಕತ್ತಿಗಳನ್ನಿತ್ತು
ಕಂಡರಿಸು, ಕುಸುರಿಸು, ಕವನಿಸು-
ಎಂದರೆ ಆಗುವುದೆ ಅಯ್ಯ?
ತಕ್ಕ ಉಪಕರಣ, ಯುಕ್ತ ಅವಕಾಶ,
ದೊರೆತಾಗ ಕಲಾವಿಲಾಸ-
ಸ್ವತಂತ್ರಧೀರ ಸಿದ್ಧೇಶ್ವರ!

೧೮೭

ಅರಗಿನ ಮನೆಯಿಂದಲೂ ಪಾರಾದರು ಪಾಂಡವರು,
ಅರಮನೆಗಳಂಥ ಭವನಗಳಲ್ಲಿದ್ದೂ
ಉರಿಯಿಲ್ಲದೆ ಉರಿಯುತ್ತಿದ್ದಾರೆ ಇಂದಿನ ಸಿರಿವಂತರು!
ಸಿರಿಯು ಹೆಚ್ಚಿದಂತೆ ಉರಿಯೂ ಹೆಚ್ಚಿದೆ;
ಅಮೃತದ ತೇಗಿನಲ್ಲಿಯೇ ಅತೃಪ್ತಿಯ ರೊಚ್ಚೆಯಿದೆ!
ರೇಷ್ಮೆಯ ವಸನದ ಕೆಳಗೆ
ರಕ್ತದ ಒತ್ತಡದಿಂದ ಬಳಲುವ ಮೈ;
ಅತ್ತರು ಮೆತ್ತಿದ ಆ ಮೈಯ ಒಳಗೆ
ಕತಕತನೆ ಕುದಿವ ಮನದ ಥಕ ಥೈ!

ಹಣದ ಹೆಣವ ಕಾಯುತ್ತ ಕಾಯುತ್ತ
ನಿದ್ದೆಗೆ ಸೋಡ ಚೀಟಿ!
ನಿದ್ದೆಯಿಲ್ಲದೆ ನರಳುವ ಎಚ್ಚರಕ್ಕೆ
ನಿದ್ದೆಗುಳಿಗೆ, ಸುರೆಗಳ ಭೇಟಿ!
ಸ್ವತಂತ್ರಧೀರ ಸಿದ್ಧೇಶ್ವರನ
ಬಹುಸಂಖ್ಯಾತ ಬಡಮಕ್ಕಳಿಗೆ ಇಲ್ಲೆನಿಸಿ
ಹೊಡೆದ ಹಣ ಹೊಡೆಯುತ್ತಿದೆ
ಪಡೆದವರನ್ನೀಗ!

## ೧೮೮

ಅರ್ಥ ಕೈಯೊಳಗಿಲ್ಲ?
ವ್ಯರ್ಥ ಜೀವನವೆಲ್ಲ!
ಅರ್ಥ ಎಲ್ಲರಿಗಿಲ್ಲ!
ಅರ್ಥವಿಲ್ಲ ಆ ಅರ್ಥವ್ಯವಸ್ಥೆಗೆ!
ಯಾವ ಅರ್ಥಶಾಸ್ತ್ರ
ಏನ ಹೇಳಿದರೇನು,
ಆರ್ತರಿಗಾಗದ ಅರ್ಥ
ಶೋಷಣೆಯ ಶಸ್ತ್ರ!
ಸರ್ವರಿಗಾಗುವ ಅರ್ಥ
ಸರ್ವೋನ್ನತಿಯ ಅಸ್ತ್ರ!
ಸರ್ವಾರ್ಥಸಾಧಕ ಅರ್ಥದ ಉತ್ಪತ್ತಿ
ಸದರ್ಥಪೂರ್ಣ ವಿತರಣೆಗಳ
ಹದನ ತಿಳಿಸಯ್ಯ,
ಸರ್ವರ ಉಳಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೮೯

ಹಿಂದಿನ ಬೆಲೆಗಳ ಬೂದಿಯಲ್ಲಿ
ಇಂದಿನ ಬೆಲೆಗಳು ಚಿಗಿಯುತ್ತಿವೆ–
ಬಿತ್ತರಿಸಲೆ ಸ್ವತಂತ್ರಧೀರ ಸಿದ್ಧೇಶ್ವರ?
ಅನಾಚಾರವೇ ಸ್ವರ್ಗ, ಆಚಾರವೇ ನರಕ;
ಎಲವೊ ಎಂಬುದೆ ಸ್ವರ್ಗ, ಅಯ್ಯಾ ಎಂಬುದೆ ನರಕ;

ಮಿಥ್ಯವ ನುಡಿವುದೇ ದೇವಲೋಕ;
ಸತ್ಯವ ನುಡಿವುದೇ ಮರ್ತ್ಯಲೋಕ;
ದಕ್ಕಿದುದೆಲ್ಲ ಪುಣ್ಯ, ಕಕ್ಕಿದುದೇ ಪಾಪ;
ಸ್ವಾರ್ಥವೇ ಪರಮಾರ್ಥ, ಪರಹಿತವೆ, ಅನರ್ಥ!
ಅಪಹಾರವೇ ಸದ್ವ್ರತ, ಅಪರಿಗ್ರಹವೇ ಅಸಂಗತ;
ಸುಖಜೀವನ ಸಾಮಾನ್ಯ ಚಿಂತನಗಳೇ ಗುರಿ,
ಸಾದಾ ಜೀವನ ಉನ್ನತ ಚಿಂತನಗಳೇ ಅರಿ;
ಪರದಾರಗಮನವೇ ಸಭ್ಯತೆ,
ಸ್ವದಾರರತಿ ಅನಾಗರಿಕತೆ;
ಹೆಂಡ ಹಷಿಷುಗಳೇ ರಸ,
ಹಾಲು ಹಣ್ಣುಗಳೇ ವಿಷ;
ವಿತ್ತವೇ ಸತ್ಯ, ಭೋಗವೇ ಶಿವ, ನಗ್ನವೇ ಸುಂದರ!

೧೯೦

ಕಚ್ಚಿ ವಿಷವೇರಿಸುವ ಹಾವೆ,
ಕಚ್ಚದೆ ವಿಷವೇರಿಸುವ ಮನುಜನ ಬಗ್ಗೆ ಎಚ್ಚರಿಕೆ!
ಕಡಿದು ಕೊಲ್ಲುವ ವ್ಯಾಘ್ರವೆ,
ಕಡಿಯದೆ ಕೊಲ್ಲುವ ಮನುಷ್ಯನ ಬಗ್ಗೆ ಎಚ್ಚರಿಕೆ!
ಮಾನವರಿಗೆ ಮಾನ ತರುವ ಮಾತೇನಲ್ಲವಿದು-
ಆದರೂ, ತನ್ನ ಉಪಕಾರಿಗಳನ್ನೇ ಕೊಲ್ಲುವ
ಮಾನವನ ಬಗ್ಗೆ ಮಾನವನೇ,
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ, ಎಚ್ಚರಿಕೆ!

೧೯೧

ಮಡಿ-ಮೈಲಿಗೆ, ಮಡಿ-ಮೈಲಿಗೆಯೆನ್ನದೆ
ಒಂದಡಿಯನ್ನೂ ಮುಂದಿಡದವರಿದ್ದಾರೆ!
ಅಡಿಗಡಿಗೆ ಇದೇ ನುಡಿ-
ಮೈಲಿಗೆ-ಮಡಿ, ಮೈಲಿಗೆ-ಮಡಿ!
ಮಡಿ ಯಾವುದಯ್ಯ, ಮೈಲಿಗೆ ಯಾವುದಯ್ಯ?
ಸುವಿಚಾರ ಮಡಿ, ಕುವಿಚಾರ ಮೈಲಿಗೆ;
ಸದಾಚಾರ ಮಡಿ, ದುರಾಚಾರ ಮೈಲಿಗೆ;
ಒಳ್ನುಡಿ ಮಡಿ, ಕೀಳ್ನುಡಿ ಮೈಲಿಗೆ;

ಸತ್ಸಂಗ ಮಡಿ, ದುಸ್ಸಂಗ ಮೈಲಿಗೆ;
ಪರಹಿತ ಮಡಿ, ಪರಪೀಡನೆ ಮೈಲಿಗೆ;
ಬದುಕು ಹಸನಗೊಳಿಸುವುದೆಲ್ಲ ಮಡಿ,
ಹೊಲಸುಗೊಳಿಸುವುದೆಲ್ಲ ಮೈಲಿಗೆ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೯೨

ವ್ಯಸನವೇ ಮಸಣ, ನಿರ್ವ್ಯಸನವೇ ನಂದನ;
ವಿಷಯವೇ ವಿಷ, ನಿರ್ವಿಷಯವೇ ರಸ;
ಅಸಹನೆಯೇ ನರಕ, ಸಹನೆಯೇ ನಾಕ;
ಮಿಥ್ಯೆಯೇ ಅಧರ್ಮ, ಸತ್ಯವೇ ಸದ್ಧರ್ಮ;
ಕುಮತಿಯೇ ಕುರುಕ್ಷೇತ್ರ, ಸುಮತಿಯೇ ಅವಿಮುಕ್ತಕ್ಷೇತ್ರ;
ದ್ವೇಷವೇ ಮರಣ, ಪ್ರೇಮವೇ ಜೀವನ;
ಎಲ್ಲರಿಗೊಂದೆ ಇರುವುದು ನ್ಯಾಯ,
ಒಬ್ಬರಿಗೊಂದು ಇನ್ನೊಬ್ಬರಿಗೊಂದು ಅನ್ಯಾಯ;
ವಂಚಿಸಿ ಉಣ್ಣುವುದೇ ರಕ್ತಿ, ಹಂಚಿ ಉಣ್ಣುವುದೇ ಭಕ್ತಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲ ನಿನ್ನಿಂದ ಎನ್ನುವುದೇ ಸುಜ್ಞಾನ,
ಎಲ್ಲ ನನ್ನಿಂದ ಎನ್ನುವುದೇ ಅಜ್ಞಾನ!

೧೯೩

ದಾರಿ ಹುಡುಕುವ ಹೆಮ್ಮೆಯೇ ಹೆಮ್ಮೆಯಾಗಿತ್ತು ಹಿಂದೆ;
ದಾರಿ ಮಸಕು ಮಸಕಾಗಿ ತೋರುತ್ತಿದೆಯೀಗ–
ಮತಿಯ ಮಿಣುಕು ಬೆಳಕಿನಲ್ಲಿ!
ಬೇರೆ ದಾರಿಗಳೂ ಇರಬಹುದು,
ಬೇರೆ ದಾರಿಗಳ ತೋರುವವರೂ ಬರಬಹುದು!
ದಾರಿಗಳ ಬರವಿಲ್ಲವೀಗ–
ದಾರಿಕಾರರ ಬರವಿದೆ!
ಹೊಸ ಹಾದಿ ಹುಡುಕುವುದ ತುಸು ನಿಲ್ಲಿಸಿ,
ದೊರೆತ ದಾರಿಯಲ್ಲಿ ನಡೆದು ನೋಡುವ
ಕೆಚ್ಚ ಕರುಣಿಸಯ್ಯ!

ನಡೆವ ದಾರಿಯೇ ನಿಶ್ಚಿತವಾಗದಿರೆ
ಪಯಣದ ಪಣವ ಗೆಲ್ಲುವುದು ಯಾವಾಗ-
ಸ್ವತಂತ್ರಧೀರ ಸಿದ್ಧೇಶ್ವರ?

೧೯೪

ಹೂವಿನ ಪಕಳೆಗಳ ಹರಿದೊಗೆದು
ಹೂ ಹುಡುಕಿದ್ದ ಹುಡುಗ ಬುದ್ಧಿ
ಅಂತರಂಗದ ಅರವಿಂದದ ದಳಗಳ ಕಿತ್ತೆಸೆದು
ಒಳಗಿನ ಅಲರ ಅರಸುತ್ತಿದೆ, ಪ್ರಬುದ್ಧನಾಗಿ!
ಎಳೆತನದ ವಿಧ್ವಂಸಕ ವೃತ್ತಿ
ಬಲಿತಾಗ ಭೀಕರ ಪ್ರವೃತ್ತಿ!
ಎಳೆತನದ ಕೇಡಿತನವು
ಬಾಲಲೀಲೆಯೆಂದು ಬೆಂಬಲಿಸುವವರು
ಎಳೆಯ ಮುಳ್ಳು ಮೃದುವೆಂದು ಮುದ್ದಿಸುವ
ಪೆದ್ದರಂತಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ!

೧೯೫

ನೋಡಿ ಹಿಗ್ಗಬೇಕಾದ ಶಿಲ್ಪಕಲಾಕೃತಿಗಳನ್ನು
ಒಡೆದು ವಿನೋದಿಸುವವರಿದ್ದಾರೆ!
ಭಿತ್ತಿಗೆ ಅಂಟಿಸಿ ಆನಂದಿಸಬೇಕಾದ ಚಿತ್ರಗಳನ್ನು
ಕತ್ತರಿಸಿ ಕೆಡಿಸಿ ಸುಖಿಸುವವರಿದ್ದಾರೆ!
ಮುಡಿದು ಮುದಗೊಳ್ಳಬೇಕಾದ ಮಲ್ಲಿಗೆಗಳನ್ನು
ಹರಿಹರಿದು ಹಿರಿಹಿರಿ ಹಿಗ್ಗುವವರಿದ್ದಾರೆ!
ಹಸಿದವರಿಗಿಕ್ಕಬೇಕಾದ ಹೆಚ್ಚಿನ ಅನ್ನವನ್ನು
ಕಸಗೂಡಿಸಿ ಖುಷಿ ಪಡುವವರಿದ್ದಾರೆ!
ಬಾಲ್ಯದ ವಕ್ರತೆಗಳ ತಿದ್ದದಿದ್ದರೆ
ಮುಂದಿನ ವಿಕೃತಿಗಳಿಗೆ ಸಿದ್ಧರಿರಬೇಕಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೯೬

ಬಾಯಿಯಿಂದಲೂ ಉಸಿರಾಡಿಸಬಹುದು,
ಆದರೆ ನಾಸಿಕದಂತೆ ವಾಸನೆಗಳ ಕಂಡುಹಿಡಿಯಬಹುದೇನಯ್ಯ?

ಭಕ್ಕರಿಯೊಂದರಿಂದಲೇ ಬದುಕಬಹುದು,
ಆದರೆ ಬಿಡುಗಡೆ ನೀಡುವ ಬದುಕಿನ ವಿಲಾಸವ
ಪಡೆಯಬಹುದೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ?

## ೧೯೭

ಗಾಳಿ ಮೊದಲ ಅಗತ್ಯ,
ನೀರು ಎರಡನೆಯ ಅಗತ್ಯ,
ಅನ್ನ ಮೂರನೆಯ ಅಗತ್ಯ,
ಬೆಂಕಿ ನಾಲ್ಕನೆಯ ಅಗತ್ಯ,
ಇನ್ನೂ ಏನೇನೋ ಅಗತ್ಯಗಳು!
ಬೆಳಕು ಕೊನೆಯ ಅಗತ್ಯವೆಂದಾದರೂ
ಒಪ್ಪಿರಯ್ಯ!
ಬದುಕುವುದು ಅನ್ನ ನೀರಿನಿಂದಾದರೂ
ಬಾಳುವುದು ಬೆಳಕಿನಿಂದ;
ಬೆಳಕಿನ ಬಾಳೇ ಚಂದ!
ಬೆಳಕಾಗಿ, ಬೆಳಕಿನ ಬೆಳಕು
ಸ್ವತಂತ್ರಧೀರ ಸಿದ್ಧೇಶ್ವರನ
ಅಪ್ಪಿರಯ್ಯ!

## ೧೯೮

ನೂರು ನೌಕೆಗಳಿವೆ ವಿಹಾರಕ್ಕೆ ಇಲ್ಲಿ-
ಎಲ್ಲ ನೌಕೆಗಳ ಏಕಕಾಲಕ್ಕೆ ಏರಬಲ್ಲೆಯ ನೀನು?
ಆರಿಸಿಕೊಳ್ಳಲೇ ಬೇಕು ನೌಕೆಯೊಂದನು!
ಆರಿಸಿಕೋ, ಆರಯ್ದು ಆರಿಸಿಕೋ;
ನೌಕೆಯ ಸೊಬಗು ಸಿಂಗಾರಗಳನ್ನಷ್ಟೇ ನೋಡಬೇಡ;
ಕೈಯೊಳಿರುವ ಕಾಸನ್ನೂ ನೋಡದಿರ ಬೇಡ!
ಅದಕ್ಕೆ ತಕ್ಕ ನೌಕೆಯೊಂದನ್ನು ಆಯ್ದುಕೋ;
ಅದೇ ನೌಕೆಗಳ ರಾಣಿಯೆಂದು ತಿಳಿದುಕೋ;
ಅದರಲ್ಲಿಯೇ ಉಲ್ಲಾಸದಿಂದ ವಿಹರಿಸು;
ಕೇಕೆ ಹಾಕು, ಹಾಡು, ನಲಿ, ನಲಿಸು!
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚುವುದು ನಿನ್ನ ನೌಕೆಯನ್ನಲ್ಲ-
ನಿನ್ನ ಉತ್ಸಾಹ, ಉಲ್ಲಾಸಗಳನ್ನು!

## ೧೯೯

ಮೊಗ್ಗೆ ಮೊಗ್ಗೆಯಾಗಿಯೇ ಉದುರಿದರೆ
ಅದಕ್ಕೆ ಹಿಗ್ಗಿ ಹೂವಾದ ಹಿಗ್ಗಿಲ್ಲ,
ನಮಗೆ ಕಂಪು ಕುಡಿದ ಹಿಗ್ಗಿಲ್ಲ!
ಮೊಟ್ಟೆ ಮೊಟ್ಟೆಯಾಗಿಯೇ ಕೊಳೆತರೆ
ಅದಕ್ಕೆ ಹಕ್ಕಿಯಾಗಿ ರೆಕ್ಕೆ ಬೀಸಿದ ಹಿಗ್ಗಿಲ್ಲ,
ನಮಗೆ ಹಕ್ಕಿಯ ಹಾಡ ಕೇಳುವ ಹಿಗ್ಗಿಲ್ಲ!
ಸ್ವಪರ ಸಂತಸ ಸ್ವಾತ್ಮವಿಕಸನದಿಂದ,
ಸ್ವಶಕ್ತಿ ಪ್ರಕಾಶನದಿಂದ,
ಸ್ವತಂತ್ರಧೀರ ಸಿದ್ಧೇಶ್ವರನ ಸಂದೇಶವಿದು;
“ಹಿಗ್ಗು, ಹಿಗ್ಗಿಸು; ಅರಳು, ಅರಳಿಸು”!

## ೨೦೦

ಬಾನೆ ಬರಿದಾಗಿರುವಾಗ
ಮಳೆಯ ಬೇಡಿದರುಂಟೇನಯ್ಯ?
ಬನವೆ ಸುಟ್ಟು ಬೂದಿಯಾದಾಗ
ಜೇನು ಬಯಸಿದರುಂಟೇನು?
ಕೆರೆಯೆ ಬತ್ತಿ ಒಣಗಿರುವಾಗ
ಮೀನ ಕೇಳಿದರುಂಟೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮನವೆ ಹಳಸಿ ಹೋಗಿರುವಾಗ
ಘನವ ಬಯಸಿದರುಂಟೇನಯ್ಯ?

## ೨೦೧

ಮಣ್ಣಿಲ್ಲದ ಮೂರ್ತಿಗಳನ್ನು ಮಾಡುವುದು ಮನಸ್ಸು;
ಬಣ್ಣವಿಲ್ಲದೆ ಚಿತ್ರಗಳನ್ನು ಮೂಡಿಸುವುದು ಮನಸ್ಸು;
ಶೂನ್ಯದಲ್ಲಿಯೇ ಪೂರ್ಣವನ್ನು ರೂಢಿಸುವುದು ಮನಸ್ಸು;
ಸೃಷ್ಟಿಕರ್ತನನ್ನೇ ಸೆರೆ ಹಿಡಿಯುವುದು ಮನಸ್ಸು!
ಮನಸ್ಸು ಎಚ್ಚರಿದ್ದಾಗ ಎಲ್ಲ ತೇಜಸ್ಸು,
ಮನಸ್ಸು ಮಲಗಿದ್ದಾಗ ಎಲ್ಲ ತಮಸ್ಸು!
ಮನಸ್ಸೇ ಮನುಷ್ಯ
ಸ್ವತಂತ್ರಧೀರ ಸಿದ್ಧೇಶ್ವರ!

## ೨೦೨

ಬೆಳಗುತ್ತಲೇ
ಪುಷ್ಪ-ಪಾದೋದಕಕ್ಕಾಗಿ
ಪರಾಗ-ಪ್ರಸಾದಕ್ಕಾಗಿ
ಹೊರಡುತ್ತವೆ ತುಂಬಿಗಳು!
ಕೀಟ ಸಿಕ್ಕರೂ
ದುಂಬಿಗಳನ್ನಾಗಿ ಪರಿವರ್ತಿಸುತ್ತವೆ ಪರಮೆಗಳು;
ಹೊಟ್ಟೆ ತುಂಬಿಕೊಳ್ಳುತ್ತಲೇ ಹಾಡು ತುಂಬುತ್ತವೆ ಗಾಳಿಯಲ್ಲಿ!
ಪುಷ್ಪದಿಂದ ಪುಷ್ಪಕ್ಕೆ ಪರಾಗಾಂತರಗೊಳಿಸಿ
ಫಲಿಸದುದು ಫಲಿಸುವಂತೆ ಮಾಡುತ್ತವೆ ತುಂಬಿಗಳು!
ಎಂಥ ತುಂಬು ಬಾಳು ನರನ ಬಾಳು
ತುಂಬಿಯ ಬಾಳಿಗಿಂತ ಕೀಳು-
ಸ್ವತಂತ್ರಧೀರ ಸಿದ್ಧೇಶ್ವರ!

## ೨೦೩

ಒಳಗೆ ನೀರಿದ್ದೂ ಹೊರಗೆ ಕರಗದೆ
ಸೀಯಾಳ ಉಳಿಸುವುವಯ್ಯ-
ನಾರಿಕೇಳಗಳು ನಮಗಾಗಿ!
ಸೀಯಾಳ ನಮಗೊದಗದಿರೆ,
ನಾವು ಸೀಯಾಳಕ್ಕೊದಗದಿರೆ
ಗಿಟಕುಗಳಾಗಿ ಇದ್ದಲ್ಲಿಗೇ ಐತರುವುವಯ್ಯ-
ಹೆರೆಮಣೆಯ ಹುಡುಕುತ್ತ!
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಪರಹಿತವ್ರತದ ತೆಂಗುಗಳೆತ್ತ,
ಪ್ರಾರ್ಥನೆಯಲ್ಲಿಯೂ ಸ್ವಾರ್ಥವನ್ನೇ ತುಂಬುವ ನಾನೆತ್ತ?

## ೨೦೪

ಸಿಪ್ಪೆ ತೆಗೆದು ಶೇಂಗಾ ಬೀಜ ಬಿತ್ತಿದರೂ
ಸಿಪ್ಪೆ ತೊಟ್ಟೇ ಹುಟ್ಟುತ್ತದೆ!
ಇದೆಂಥ ಸಹವರ್ತಿ ನಿಷ್ಠೆಯಯ್ಯಾ?
ಅರಳೆ ತೆಗೆದೇ ಹತ್ತಿಯ ಬೀಜ ಬಿತ್ತಿದರೂ
ಅರಳೆ ಧರಿಸಿಯೇ ಬೆಳೆದು ನಿಲ್ಲುತ್ತದೆ!

ಇದೆಂಥ ಅನ್ಯೋನ್ಯತೆಯಯ್ಯ!
ಒಂದೇ ಹೊಟ್ಟೆಯಲ್ಲಿ ಹುಟ್ಟಿದವರಲ್ಲಿಯೂ ದುರ್ಲಭವಿವು;
ಒಂದೇ ಮಾಲಿಗೆಯ ಕೆಳಗೆ ಬೆಳೆದವರಲ್ಲಿಯೂ ವಿರಳವಿವು!
ನರ ಅರಿವಿನ ಜನ್ಮ ಪಡೆದುದು?
ಕೂಡಿ ಬಾಳಲೆಂದೊ, ಕಚ್ಚಾಡಿ ಸಾಯಲೆಂದೊ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೦೫

ಬೇರುಗಳು ಭೂತಕಾಲ,
ವೃಕ್ಷ ವರ್ತಮಾನಕಾಲ
ಬಿಡಲಿಹ ಹೂ–ಕಾಯಿ–ಹಣ್ಣುಗಳು
ಭವಿಷ್ಯತ್ಕಾಲ ನೋಡಾ!
ತನು ಭೌತವಾದಿ,
ಮನ ಪ್ರಜ್ಞಾವಾದಿ,
ಹೃದಯ ಮಾನವತಾವಾದಿ ನೋಡಾ!
ಬಯಸಿದರೆ ಭೋಗ,
ಬಯಸದಿರೆ ವಿರಾಗ,
ತ್ಯಾಗಸಹಿತ ಭೋಗ ಯೋಗ ನೋಡಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನುಳಿದರೆ ರಕ್ತಿ,
ನಿನ್ನನೊಲಿದರೆ ಭಕ್ತಿ,
ಭಕ್ತಿ ಕರಿಗೊಂಡುದೇ ಮುಕ್ತಿ ನೋಡಾ!

## ೨೦೬

ಮನಸ್ಸಿನ ದಾಸ್ಯ ಮಾಯವಾದಾಗ
ಪರಿಸ್ಥಿತಿಯ ದಾಸ್ಯ ಮುಗಿದಂತೆ;
ಅಂಧಾನುಸರಣೆ ಅಸ್ತವಾದಾಗ
ವ್ಯವಸ್ಥೆಯ ಕೋಟೆ ಬಿರಿದಂತೆ;
ಸ್ವತಂತ್ರ ವಿಚಾರಶಕ್ತಿ ವಿಕಸಿಸಿದಾಗ
ಯಥಾಸ್ಥಿತಿವಾದ ಮೊಂಡೆಯೂರಿದಂತೆ;
ಆತ್ಮೋನ್ನತಿಯ ಆಕಾಂಕ್ಷೆ ಉತ್ಕಟವಾದಾಗ
ಕರ್ಮದ ಕಂತೆ ಕರಗಿದಂತೆ;

ಸ್ವಶಕ್ತಿಯಲ್ಲಿ ವಿಶ್ವಾಸ ಹುಟ್ಟಿದಾಗ
ವ್ಯಕ್ತಿಪೂಜೆಯ ಬುಡ ಅದುರಿದಂತೆ;
ಕಾಲಕಾಲ, ಮಹಾಕಾಲ ಸ್ವತಂತ್ರಧೀರ ಸಿದ್ಧೇಶ್ವರನ
ಆಶ್ರಯಿಸಿದಾಗ
ಕಾಲನ ಕಟ್ಟುಕಟ್ಟಳೆ ಮುರಿದಂತೆ!

## ೨೦೭

ಕೆಳಗೆ ಬೇರುಗಳು ಅನೇಕ,
ಮೇಲೆ ಶಾಖೆಗಳು ಅನೇಕ,
ಮಧ್ಯದಲ್ಲಿ ಬೊಡ್ಡೆ ಒಂದೇ ಅಯ್ಯ ಮರಕ್ಕೆ;
ಬದುಕಿನ ಬೇರುಗಳು ಅನೇಕ,
ಬದುಕುವರ ಕಾರುಬಾರುಗಳು ಅನೇಕ,
ಬದುಕಿನ ಹೂರಣ ಒಂದೇ ಅಯ್ಯ, ಒಟ್ಟು ನೋಟಕ್ಕೆ,
ಸ್ವತಂತ್ರಧೀರ ಸಿದ್ಧೇಶ್ವರ!

## ೨೦೮

ಮನ ಒಡೆಯದ ಮುನ್ನ
ಮನೆ ಒಡೆದುದುಂಟೇನಯ್ಯ?
ಶೀಲ ಕೆಡುವ ಮುನ್ನ
ಸದ್ಭಾಗ್ಯ ಕೆಡೆದುದುಂಟೇನಯ್ಯ?
ಸಾಲ ಮಾಡುವ ಮುನ್ನ
ಸ್ನೇಹ ಆರಿದುದುಂಟೇನಯ್ಯ?
ಖಟ್ಲೆ ತುಂಬದ ಮುನ್ನ
ಚಟ್ಟವೇರಿದುದುಂಟೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅಹಂಕಾರ ತಲೆದೋರದ ಮುನ್ನ
ಅಧಃಪಾತ ಮೈದೋರಿದುದುಂಟೇನಯ್ಯ?

## ೨೦೯

ಅರ್ಬುದ-ಭಕ್ತಿಯ ಭಗ್ನ ಶರೀರ ಪಂಜರದಲ್ಲಿಯೂ
ಹಟದಿಂದ ಉಳಿದು ಪಟಪಟನೆ ರೆಕ್ಕೆ ಬಡಿವೆ-
ಬಾಲರ ಸುಕೋಮಲ ಶರೀರಗಳಿಂದಲೂ
ಹೇಳದೆ ಕೇಳದೆ ಹಾರಿಹೋಗುವೆ, ಪ್ರಾಣಪಕ್ಷಿಯೆ!

ಹಿಡಿದು ತಂದ ಹಕ್ಕಿಯೇನಲ್ಲ ನೀನು,
ಸವುಡು ಸಿಕ್ಕುತ್ತಲೆ ಹಾರಿ ಪರಾರಿಯಾಗಲು!
ಒಡಲಿನಲ್ಲಿಯೇ ಉದಿಸಿ,
ಒಡಲನ್ನೇ ಒಡಲಾಗಿಸಿಕೊಂಡು,
ಆ ಒಡಲಿಗೇ ತಿಳಿಸದೆ ಪಲಾಯನ ಮಾಡುವುದೆ?
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ-
ಏಕೆ ನೀನು ಎಡೆಯಿತ್ತ ಒಡಲಿಗಿಂತ
ಒಡಹುಟ್ಟಿದ ಸಾವಿನ ಮಾತಿಗೇ
ಮೊದಲು ಕಿವಿಗೊಡುವಿಯೆಂಬುದ!

೨೧೦

ನಾನು ಈ ದೇಹವಿಡುವ ಮುನ್ನವೇ
ನಾನು ನಂಬಿದುವೆಲ್ಲ ಜೀವ ಬಿಡುತ್ತಿವೆ!
ನಿತ್ಯ ಒಂದು ನಂಬಿಕೆಯ ಅಂತ್ಯಸಂಸ್ಕಾರ,
ಬಂಗಾರವೆಂದುಕೊಂಡುದು ಅಂಗಾರ!
ಯಾವ ವಿಶ್ವಾಸ ಸತ್ತು ಹೋದರೂ
ಒಂದು ವಿಶ್ವಾಸ-
ನನ್ನಲ್ಲಿ ವಿಶ್ವಾಸ,
ಅದಕ್ಕೆ ಆಧಾರವಾಗಿ
ನಿನ್ನಲ್ಲಿ ವಿಶ್ವಾಸ
ಅಳಿಯದಿರಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೧೧

ವಿಷದ ಗುಳಿಗೆಗೆ
ಸಕ್ಕರೆಯ ಒಪ್ಪ ಹಾಕಿ ಕೊಟ್ಟರೆ
ಕೊಲ್ಲದಿರುವುದೇನಯ್ಯ?
ವಿನಾಶಕ ವಿಚಾರಗಳಿಗೆ
ಆಕರ್ಷಕ ವೇಷ ತೊಡಿಸಿದರೆ
ವಿಧಾಯಕವಾಗಬಲ್ಲುವೇನಯ್ಯ?
ಸದ್ವಿಚಾರಗಳಿಂದಲೇ ಸತ್ಕೃತಿ,
ಸತ್ಕೃತಿಗಳಿಂದಲೇ ಸಂಸ್ಕೃತಿ,
ಸಂಸ್ಕೃತಿಯಿಂದ ಸಮುನ್ನತಿ
ಸ್ವತಂತ್ರಧೀರ ಸಿದ್ಧೇಶ್ವರ!

## ೨೧೨

“ಮಾನವ ಜೀವನದಲ್ಲಿ
ಏನಿದೆ ಏನಿದೆ, ಏನಿದೆ?”
ಎಂದು ಕೇಳುವವರೇ–
ಮಾನವ ಜೀವನದಲ್ಲಿ ಏನಿಲ್ಲ–ಹೇಳಿರಿ!
ಸ್ವತಂತ್ರಧೀರ ಸಿದ್ಧೇಶ್ವರನೇ ಇಲ್ಲವೆ ಅದರಲ್ಲಿ?

## ೨೧೩

ಏನೊಂದೂ ಹೇಳದೆಯೆ
ಬಹಳಷ್ಟು ಹೇಳುವವರುಂಟು;
ಬಹಳ ಬಹಳ ಹೇಳಿಯೂ
ಏನನ್ನೂ ಹೇಳದವರೂ ಉಂಟಯ್ಯ!
ಉಪದೇಶ ಮಾಡಿದವರುಂಟು,
ಉಪದೇಶವಾದವರುಂಟು;
ಪೂಜೆ ಮಾಡಿದವರುಂಟು,
ಪೂಜೆಯೇ ತಾವಾದವರೂ ಉಂಟು;
ನುಡಿದು ಸೂತಕಿಗಳಾದವರುಂಟು,
ನಡೆಯೇ ನುಡಿಯಾದವರೂ ಉಂಟಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಭಕ್ತಿಯ ಬಗ್ಗೆ ಭಾಷಣ ಬಿಗಿದವರುಂಟು,
ಭಕ್ತಿಯೇ ತಾವಾದವರೂ ಉಂಟಯ್ಯ!

## ೨೧೪

ರೋಗಿಯಾಗಿ ಇರುವಾಗಿನ ಆರೈಕೆ–
ನಿರೋಗಿಯಾಗಿರುವಾಗ ಇರದೆಂದು
ರೋಗವೇ ಲೇಸೆನ್ನಬಹುದೇನಯ್ಯ?
ಎಚ್ಚರದಪ್ಪಿದಾಗಿನ ನಿಶ್ಚಿಂತತೆ
ಎಚ್ಚರವಿರುವಾಗ ಇರದೆಂದು
ಎಚ್ಚರಗೇಡಿತನವೇ ಮೆಚ್ಚೆನ್ನಬಹುದೇನಯ್ಯ?
ಸೆರೆಮನೆಯಲ್ಲಿರುವಾಗಿನ ನಿರುಂಬಳತೆ
ಬಿಡುಗಡೆ ದೊರೆತಾಗ ಇರದೆಂದು

ಸೆರೆಮನೆಯೇ ಶ್ರೇಷ್ಠವೆನ್ನಬಹುದೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರ?

## ೨೧೫

ಮತಮಂದಿರಗಳ ನಗಾರಿ ಸಹಿತ
'ಧನಂ, ಧನಂ, ಧನಂ' ಎಂದೇ ನುಡಿಯುತ್ತದೆ!
ನರರ ಮನ 'ಧನಂ, ಧನಂ, ಧನಂ'
ಎಂದು ಮಿಡಿದರೆ ಆಶ್ಚರ್ಯವಾವುದಯ್ಯ?
'ಧನಂ, ಧನಂ, ಧನಂ' ಎಂದು ತುಡಿವುದು ತಪ್ಪಲ್ಲ–
ಆದರೆ 'ಧನಂ, ಧನಂ, ಧನಂ' ಎಂಬುದರ ಜೊತೆಗೆ
'ಜನಂ, ಜನಂ, ಜನಂ' ಎಂಬುದೂ ಇರಬೇಕಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ ಇಂತಲ್ಲದೊಲ್ಲನಯ್ಯ!

## ೨೧೬

ಒಂದಿಲ್ಲೊಂದು ಕೊರತೆ
ಕೊರೆಯುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ಆಶಾದೀಪ
ಉರಿಯುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ಸದ್ಗುಣ
ಮಿನುಗುತ್ತಿರುತ್ತದೆ ಎಲ್ಲರಲ್ಲಿಯೂ;
ಒಂದಿಲ್ಲೊಂದು ದುರ್ಗುಣ
ಜಿನುಗುತ್ತಿರುತ್ತದೆ ಎಲ್ಲರಲ್ಲಿಯೂ.
ಒಂದೂ ಸುಗುಣವಿಲ್ಲದವ ಮನುಷ್ಯನೇ ಅಲ್ಲ,
ಒಂದೂ ದುರ್ಗುಣವಿಲ್ಲದವ ಮನುಷ್ಯನಲ್ಲ–
ನೀನೇ, ಸ್ವತಂತ್ರಧೀರ ಸಿದ್ಧೇಶ್ವರ!

## ೨೧೭

ಪ್ರಜನಿತ ಶಿಶುಗಳಿಗೆ ಅಶನವಿಲ್ಲ,
ಪ್ರನಾಳಿಕಾ ಶಿಶುಗಳ ಹುಟ್ಟಿಸುತ್ತಿಹರಯ್ಯ!
ನಿಜಮಾನವರೇ ನಿರುದ್ಯೋಗಿಗಳಾಗಿರುವಾಗ
ಕಂಪ್ಯೂಟರ್ ಮಾನವರ ಸೃಷ್ಟಿಸುತ್ತಿಹರಯ್ಯ!
ಇದ್ದ ಶಾಸನಗಳನ್ನೇ ಜಾರಿಗೊಳಿಸುವರಿಲ್ಲ,

ಹೊಸ ಹೊಸ ಶಾಸನಗಳ ಹೊಸೆಯುತ್ತಲಿಹರಯ್ಯ!
ಇದ್ದ ಇಲಾಖೆಗಳಿಗೇ ಸಾಕಷ್ಟು ಕೆಲಸವಿಲ್ಲ,
ಹೊಸ ಹೊಸ ಇಲಾಖೆಗಳ ಪ್ರಾರಂಭಿಸುತ್ತಿಹರಯ್ಯ!
        ಸ್ವತಂತ್ರಧೀರ ಸಿದ್ಧೇಶ್ವರಾ,
ಇರುವ ಮಾರಕಾಸ್ತ್ರಗಳೇ
ಮನುಕುಲವ ಹಲವು ಸಲ ಸುಡಲು ಸಾಕಿರುವಾಗ
ಮತ್ತೂ ಮಾರಕಾಸ್ತ್ರಗಳ ತಯಾರಿಸುತ್ತಿಹರಯ್ಯ!

## ೨೧೮

ರೂಕ್ಷ ಭೂಮಿಯಲ್ಲಿ ನಿಂತ
ಶುಷ್ಕ ತರು ನಾನಯ್ಯ!
ನೂರು ಬೇರುಗಳಿದ್ದೂ
ಸಾರ ದೊರೆಯುತ್ತಿರುವುದು
ಒಂದೆರಡರಿಂದ ಮಾತ್ರ!
ಸ್ಥಗಿತ ಬೇರೆ ಬೇರುಗಳ ಪಾತ್ರ!
ನಿನ್ನ ದಯೆ ಸರಿಯಾಗಿ ಸುರಿದರೆ
ಮೂಲ ಮೂಲವೂ ನೀರೆತ್ತುವ ಗಾಳಿಯಂತ್ರ-
ಸ್ವತಂತ್ರಧೀರ ಸಿದ್ಧೇಶ್ವರ!

## ೨೧೯

ಕಂಬನಿಗಳು ಹೇಳಿದ ವ್ಯಥೆಯ ಕಥೆಗಳನ್ನು ಕೇಳಿದೆ;
ನಿಟ್ಟುಸಿರುಗಳು ಹೇಳಿದ ವ್ಯಾಕುಲದ ಗಾಥೆಗಳನ್ನು ಕೇಳಿದೆ;
ನಿರಾಶೆಗಳು ಉಸಿರಿದ ವ್ಯಗ್ರತೆಯ ಗೀತೆಗಳನ್ನು ಕೇಳಿದೆ:
ಕೇಳಿ ನಾನೂ ಕಂಬನಿದುಂಬಿದೆ, ನಿಟ್ಟುಸಿರಿಟ್ಟೆ, ನಿರಾಶೆಗೊಂಡೆ!
ಕಂಬನಿಗೆ ಪ್ರತಿಯಾಗಿ ಕಂಬನಿ ಸುರಿಸಿ,
ನಿಟ್ಟುಸಿರಿಗೆದುರಾಗಿ ನಿಟ್ಟುಸಿರಿಟ್ಟು,
ನಿರಾಶೆಗೆ ಪ್ರತಿಕ್ರಿಯೆಯಾಗಿ ನಿರಾಶೆಗೊಂಡರೆ ಸಾಕೇನಯ್ಯ?
ದುಃಖಾಶ್ರು ಸುಖಾಶ್ರುವಾಗುವಂತೆ,
ನಿಟ್ಟುಸಿರು ನಲವಿನ ಉಸಿರಾಗುವಂತೆ,
ನಿರಾಶೆ ಆಶಾವಿಲಾಸವಾಗುವಂತೆ
ಮಾಡುವ ಕೆಯ್ವಾಡ ನೀಡಾ-
        ಸ್ವತಂತ್ರಧೀರ ಸಿದ್ಧೇಶ್ವರಾ!

## ೨೨೦

ಎಲ್ಲರೂ ಕೃಷ್ಣ ಭಕ್ತರಾಗಲಿಲ್ಲ;
ಎಲ್ಲರೂ ಕ್ರಿಸ್ತ ಭಕ್ತರಾಗಲಿಲ್ಲ;
ಎಲ್ಲರೂ ಬುದ್ಧ-ಬಸವ ಭಕ್ತರಾಗಲಿಲ್ಲ;
ಎಲ್ಲರೂ ಮಹಾವೀರ-ಮಹಮ್ಮದ ಭಕ್ತರಾಗಲಿಲ್ಲ;
ಆದರೆ,
ಎಲ್ಲರೂ ಬಾಟಲಿ ಭಕ್ತರಾಗುತ್ತ
ನಡೆದಿಹರು ನೋಡಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೨೧

ಮಾವಿನ ಬೀಜ
ಬೇವಿನ ಫಲವಿತ್ತುದನಾರೂ ಕಾಣಲಿಲ್ಲ-
ಇದೆಂಥ ಬೀಜವಯ್ಯ ನರನ ಬೀಜ?!
ಇದು ಎಂಥ ಫಲ ಕೊಟ್ಟೀತೆಂಬುದ
ಯಾರೂ ಮುಂಗಾಣಲಿಲ್ಲ!
ನಿನಗಾದರೂ
ಮೊದಲೇ ತಿಳಿದಿರುತ್ತದೇನಯ್ಯ-
        ಸ್ವತಂತ್ರಧೀರ ಸಿದ್ಧೇಶ್ವರ?

## ೨೨೨

ಹಿಂದಿನ ಭವ್ಯ ದೇಗುಲಗಳು
        ಬಿದ್ದು ಹೋಗುತ್ತಿದ್ದರೂ
ಇಂದಿನ ನವ್ಯದೇಗುಲಗಳ
        ಕಟ್ಟಿಸುತ್ತಿಹರಯ್ಯ, ಹೊಟ್ಟೆತುಂಬಿದವರು!
ಇದ್ದ ವಿದ್ಯಾಲಯಗಳು
        ನಿದ್ದೆ ಮಾಡುತ್ತಿದ್ದರೂ
ಹೊಸ ವಿದ್ಯಾಲಯಗಳ
        ತೆರೆಯುತ್ತಿಹರಯ್ಯ, ಹಣವಿದ್ದವರು!
ಸ್ಥಾಪಿತ ಸಾಮರ್ಥ್ಯವ
        ಬಳಸಿಕೊಳ್ಳಲಾಗದಿದ್ದರೂ

ಹೊಸ ಕಾರ್ಯಾಗಾರಗಳ
ತೆರೆಯುತ್ತಿಹರಯ್ಯ, ಹಮ್ಮಿಣಿ ದೊರೆಗಳು!
ಸ್ವತಂತ್ರಧೀರ ಸಿದ್ಧೇಶ್ವರಾ,
ಇದ್ದ ಮತಗಳು
ಗತಿಗೆಟ್ಟು ಹೋಗಿದ್ದರೂ
ಹೊಸ ಮತಗಳ
ಹುಟ್ಟು ಹಾಕುತ್ತಿಹರಯ್ಯ ಕಳ್ಳ ಬಾಬಾಗಳು!

**೨೨೩**

ದೊಡ್ಡವರೆನ್ನಿಸಿಕೊಂಡ ಕೆಲವರ
ಸಣ್ಣತನ ನೋಡಿ ನೋಡಿ ಸಾಕಾಯಿತು!
ಸಣ್ಣವರಲ್ಲಿಯ ದೊಡ್ಡತನವನ್ನು
ಗುರುತಿಸಲಾರದ ನಾವು
ನಕಲಿ ದೊಡ್ಡವರ ಸಣ್ಣತನಕ್ಕೆ
ಆಹುತಿಯಾಗುತ್ತಲಿರುವೆವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

**೨೨೪**

ನಗೆಗೆ ಕಚಕುಳಿಯಿಡುವ
ಸೊಗವಿರಲಿ, ಇಲ್ಲದಿರಲಿ–
ನಕ್ಕುಬಿಡು!
ಅತ್ತು ಹೊತ್ತುಗಳೆವುದಕಿಂತ,
ಆಕಳಿಸುತ್ತ ಕಳೆವುದಕಿಂತ
ನಗುತ್ತ ದಿವಸಗಳ ನಿಮಿಷಗಳ ಮಾಡುವುದು ಮೇಲು!
ಇದು ಕಾರಣ ನಕ್ಕುಬಿಡು!
ನಿನ್ನನಳಿಸಲೆಂದೇ
ಹಲವು ಶಕ್ತಿಗಳು ಹೊಂಚು ಹಾಕಿದರೂ,
ಹಲವು ಹಗೆಗಳು ಸಂಚು ಹೂಡಿದರೂ,
ಅವರ ಹಗೆ ಅವರಿಗೇ ಧಗೆಯಾಗುವ ಹಾಗೆ
ನಕ್ಕುಬಿಡು!
ನಿನ್ನ ನಂಬಿಕೆಗಳಿಗೆ
ಹುಂಬ ಹಂಬಲಗಳೆಂದು ಹೆಸರಿಟ್ಟು,
ನಿನ್ನ ಹೆಸರಿಗೇ ಕೆಸರಿಟ್ಟು ಕುಣಿದರೂ
ನಕ್ಕುಬಿಡು!

ಸ್ವತಂತ್ರಧೀರ ಸಿದ್ಧೇಶ್ವರನಿದ್ದಾನೆ,
ಬದುಕು ಬೆದರಿಸಿದರೂ ನಕ್ಕುಬಿಡು,
ಸಾವು ಹೆದರಿಸಿದರೂ ನಕ್ಕುಬಿಡು!

### ೨೨೫

ಬೇಸಿಗೆಗೆ ಸರಿಯಾಗಿ ಬೀಸಣಿಗೆ ಬಂದಿದೆ-
ಬಾಳದ ಬೇರಿನ ಬೀಸಣಿಗೆ!
ಹೆಸರು ಬಾಳದ ಬೇರಾದರೂ
ಬಾಳಿಸುವ ಬೇರಿದು
ಸುಡುವ ಬಿಸಿಲಿನಲ್ಲಿ!
ಇತರರನ್ನು ಬಾಳಿಸುವುದಿರಲಿ,
ತಾವೇ ಸರಿಯಾಗಿ ಬಾಳಲಾರದವರ
ಬರಡು ಸಮಾಜದಲ್ಲಿ
ನಮ್ಮನ್ನು ಬಾಳಿಸ ಬಂದಿರುವ
ಬಾಳದ ಬೇರಿಗೆ
ನಮೋ ನಮೋ ಎಂಬೆನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

### ೨೨೬

ಒಳಿತು ಉರಿವ ಅಗ್ನಿಯಾದರೆ
ಕೆಡುಕು ಸೌದೆಯಾದೀತು,
ಒಳಿತು ಮರದೊಳಗಣ ಮಂದಾಗ್ನಿಯಾದರೆ ಹೇಗಯ್ಯ?
ಮರ ಮರಗಳ ಮಥನಿಸಿ
ಉರಿವಗ್ನಿಯ ಪುಟಗೊಳಿಸುವಂತೆ
ಒಳಿತು ಕೆಡಕುಗಳ ಮಥನಿಸಿ,
ಕೆಡುಕು ಕೆಡಕುಗಳ ಮಥನಿಸಿ,
ಕೊನೆಗೆ ಒಳಿತು ಒಳಿತನ್ನೇ ಮಥನಿಸಿ
ಒಳಿತಿನ ಮಂದಾಗ್ನಿ!
ಉರಿವ ಅಗ್ನಿಯಾಗುವಂತೆ ಮಾಡಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

## ೨೨೭

ಕಾಯಿಲೆ ಬರದ ಕಾಯವೇ ಇಲ್ಲವೆಂದು
        ಆರೋಗ್ಯವೆಂಬುದೇ ಭ್ರಮೆಯೆನ್ನಬಹುದೇನಯ್ಯ?
ಬರಗಾಲ ಬರದ ಭೂಭಾಗವೇ ಇಲ್ಲವೆಂದು
        ಭೂಮಿಯ ಫಲವತ್ತತೆಯೇ ಭ್ರಮೆಯೆನ್ನಬಹುದೇನಯ್ಯ?
ಮೋಡ ಮುಸುಕಿದ ರವಿ ಶಶಿ ತಾರೆಗಳು ತೋರವೆಂದು
        ರವಿ ಶಶಿ ತಾರೆಗಳ ಇರವೇ ಭ್ರಮೆಯೆನ್ನಬಹುದೇನಯ್ಯ?
                ಸ್ವತಂತ್ರಧೀರ ಸಿದ್ಧೇಶ್ವರಾ,
ಈಗ ಕೆಡುಕಿನ ಕೈ ಮೇಲಾಗಿದೆಯೆಂದು
ಒಳಿತಿನ ಅಸ್ತಿತ್ವವೇ ಭ್ರಮೆಯೆನ್ನಬಹುದೇನಯ್ಯ?

## ೨೨೮

ಧರ್ಮಯುದ್ಧ, ಜಿಹಾದ್, ಕ್ರುಸೇಡ್–
ಎಲ್ಲ ಶುದ್ಧ ಮೋಸವಯ್ಯ!
ಸರ್ವಯುದ್ಧಗಳೂ ಸ್ವಾರ್ಥಕ್ಕಾಗಿ ನಡೆದುವೇ!
ಮಣ್ಣಿಗಾಗಿ ಮಹಾಭಾರತ ಯುದ್ಧ,
ಹೆಣ್ಣಿಗಾಗಿ ರಾಮಾಯಣ ಯುದ್ಧ, ಟ್ರೋಜನ್ ಯುದ್ಧ,
ಎಣ್ಣೆಗಾಗಿ ಮಧ್ಯಏಷ್ಯಾ ಯುದ್ಧ,
ಅಫೀಮಿಗಾಗಿ ಚೀಣಾ ಯುದ್ಧ,
ವ್ಯಾಪಾರ, ಪೇಟೆ–ವಿಸ್ತರಣೆಗಳಿಗಾಗಿ ಇನ್ನುಳಿದ ಯುದ್ಧಗಳು
ಎಲ್ಲ ಸ್ವಾರ್ಥಪಿಶಾಚಿಯ ಸಂತೃಪ್ತಿಗಾಗಿ;
ನಿನ್ನ ಹೆಸರಿನಲ್ಲಿ ನಡೆದುವೂ ನಗ್ನ ಸ್ವಾರ್ಥಕ್ಕಾಗಿ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೨೯

'ಹಲವೆಡೆಯ ಹಕ್ಕಿಗಳು ಹೆಮ್ಮರವೊಂದರಲ್ಲಿ ಸೇರಿ
ತುಸುಹೊತ್ತು ಚಿಲಿಪಿಲಿ ಸ್ವರಗೈದು
ಮತ್ತೆ ಚೆದುರಿ ಹೋದಂತೆ ಈ ಸಂಸಾರ' ಎಂಬರಯ್ಯ ಹಿಂದಿನವರು!
ಹಕ್ಕಿಗಳ ಹೆಸರು ಕೆಡಿಸುವ ಹೋಲಿಕೆಯಿದು!
ಇರುವಷ್ಟು ಸಮಯ ಸವಿಯಾಗಿ ಹಾಡುತ್ತವೆ;
ಇದ್ದಷ್ಟು ಹಣ್ಣುಗಳ ಗುದ್ದಾಡದೆ ಸವಿಯುತ್ತವೆ;

ವಿರೋಧವಿಲ್ಲದೆ ಕೂಡಿ, ಕಲಹವಿಲ್ಲದೆ ಆಡಿ,
ಮಾದರಿ ಗೆಳತನ ಮಾಡಿ ಹೋಗುತ್ತವೆ ಹಕ್ಕಿಗಳು!
ಇಂಥ ಹಕ್ಕಿಗಳಿಗೆ ಹೋಲಿಸುವುದೆ
ಕಾದಾಡುವ, ಕಚ್ಚಾಡುವ, ಕಿತ್ತುತಿನ್ನುವ ನರರ–
ಸ್ವತಂತ್ರಧೀರ ಸಿದ್ಧೇಶ್ವರ?

೨೩೦

ಚೆಲುವಿನ ಸ್ಪರ್ಧೆ ನಡೆದರೆ ಯಾರು ಗೆಲ್ಲಬಹುದು?
ಚಿಟ್ಟೆಯೆ, ನವಿಲೆ, ಹರಿಣವೆ, ಹೆಣ್ಣೆ, ಹೂವೆ?
ಹೊರಗಿನ ಚೆಲುವನ್ನು ಮಾತ್ರ ಗಮನಿಸಿದರೆ
ಹೆಣ್ಣು ಹೂವುಗಳೇ ಗೆಲ್ಲಬಹುದು;
ಒಳಗಿನ ಚೆಲುವನ್ನು ಗಣಿಸಿದರೆ
ಯಾರು ಗೆಲ್ಲುವರೆಂಬುದ ಯಾರು ಹೇಳಬೇಕಯ್ಯ?
ಹೆಣ್ಣು ಮೊದಲ ಸಲ ತಾಯಿಯಾದಾಗ,
ತಿಂಗಳ ಕಂದನ ಎತ್ತಿಕೊಂಡು ನಗುತ್ತ ನಿಂತಾಗ
ಎರಡೂ ಚೆಲುವುಗಳಲ್ಲಿಯೂ
ಅವಳೇ ಗೆಲ್ಲಬಹುದು ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೩೧

ಹಾರಾಡುವ ಹೂವುಗಳು
ಈ ಚೆಲುವ ಚಿಟ್ಟುಗಳು;
ಚಲನರಹಿತ ಚೆಲುವ ಚಿಟ್ಟೆಗಳು
ಈ ಅಂದ ಚೆಂದದ ಹೂಗಳು;
ಹಸುಗೂಸಿನ ಹವಳದುಟಿಗಳ
ಹೂ ನಗೆಯು ನೋಡಿದಾಗ
ಈ ಎರಡೂ ನಾಚಿದುವು ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೩೨

'ಸತಿ' ತಪ್ಪಿದರೂ ಚಿತೆ ತಪ್ಪಲಿಲ್ಲ–
ಈ ದೇಶದಲ್ಲಿ ಸತಿಗೆ!
ಮುಗಿಯದ ಪಯಣ ಅವಳದು

ಚಿತೆಯಿಂದ ಚಿತೆಗೆ!
ಆಗ ಸಹಗಮನದ ಚಿತೆ,
ಈಗ ವರದಕ್ಷಿಣೆಯ ಚಿತೆ,
ಬಲಾತ್ಕಾರಗಳ ಚಿತೆ,
ಶೀಲಹರಣಗಳ ಚಿತೆ!
ಕೊನೆಗೂ ಹೆಣ್ಣಿನ ಬಾಳು
ಕಣ್ಣೀರಿನ ಕಥೆ!
ಹೆಣ್ಣು ಈ ದೇಶವನ್ನು
ಆಳುತ್ತಿರುವಾಗಲೇ ಈ ಗತಿ:
ಮನೆಗೊಬ್ಬ ಪಂಚಾಗ್ನಿಮಧ್ಯದ ಪಾರ್ವತಿ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸ್ತ್ರೀಯರ ಈ ಉಗ್ರತಪದಿಂದಲಾದರೂ
ಪುರುಷರಿಗೆ ಬರಲಿ ಸನ್ಮತಿ!

## ೨೩೩

ಸಹಗಮನ ಮಾಡಿ ಸುಟ್ಟು ಹೋಗುವುದನ್ನು ತಪ್ಪಿಸಿ
ಕಾಮದ ಕಿಚ್ಚಿನಲ್ಲಿ ಸುಟ್ಟು ಸುಣ್ಣವಾಗುವ
'ಸದ್ಗತಿ'ಯನೇ ಸತಿಗೆ ನೀಡಿದ ಮತಿಯ ಮೆಚ್ಚಲೆ?
ಅವಳು ಮಿಂಡನನ್ನಾದರೂ ಮಾಡಿಕೊಳ್ಳಲಿ,
ಇನ್ನೊಬ್ಬ ಗಂಡನನ್ನು ನೋಡಿಕೊಳ್ಳುವುದು ಬೇಡ-
ಎಂಬ ಲಂಡ ಬುದ್ಧಿಯ ಶ್ಲಾಘಿಸಲೆ?
ಜ್ಞಾನ ಪ್ರೇಮಗಳಂತೆ
ಕಾಮವೂ ನಿನ್ನ ವರ;
ನಿನ್ನವರ
ಸರ್ವರ
ಬಾಳಿಗಾಧಾರ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೩೪

ಮದುವೆಯಾಗುವವರೆಗೆ ಮಗ,
ಆಮೇಲೆ ಹೆಂಡತಿಯ ಗುಲಾಮನೆಂಬುದು ಗೊತ್ತಿದ್ದೂ
ದುಂಬಾಲು ಬಿದ್ದು ಮಗನ ಮದುವೆ ಮಾಡುತ್ತಾಳೆ ತಾಯಿ-

ಸೊಸೆ ಬಂದು ಮಗನ ಕಸಿದುಕೊಂಡಾಳುವಾಗ ಬಿಡುತ್ತಾಳೆ
ಬಾಯಿ!
ತನ್ನ ತಂದೆ ತಾಯಂದಿರಿಗೇ ತನ್ನ ಗಂಡ ತಿರುಗಿ ಬೀಳುವಂತೆ
ಮಾಡುತ್ತಾಳೆ ಸತಿ;
ಮುಂದೆ ತನ್ನ ಮಕ್ಕಳೇ ತನಗೆ ತಿರುಗಿ ಬಿದ್ದಾಗ ಆಗುತ್ತಾಳೆ
ಜೋಗಿತಿ!
ಅತ್ತೆಯ ಮೇಲೆ ಕತ್ತಿ ಹಿರಿದು ನಿಲ್ಲುತ್ತಾಳೆ ಸೊಸೆ;-
ಮುಂದೆ ತನ್ನ ಸೊಸೆ ದಂಗೆಯೆದ್ದಾಗ
ಬೊಬ್ಬಿಡುತ್ತಾಳೆ ಬಿರಿವಂತೆ ದೆಸೆ!
ತಾನು ಮಗನಾಗಿದ್ದಾಗ ತೋರಿದ ಅವಿಧೇಯತೆಯನ್ನೇ
ತಾನು ತಂದೆಯಾದಾಗ ತೋರಿದ್ದ ಅವಿನಯವನ್ನೇ
ತಾನು ಅತ್ತೆಯಾದಾಗ ಪಡೆಯುತ್ತಾಳೆ ಹೆಂಗಸು!
ಮಾನವ ಸಂಬಂಧಗಳೇ ಹೀಗೆ:
ಮಾಡಿದ್ದುಣ್ಣೋ ಮಹಾರಾಯಾ!
ನೀನು ಸರ್ವರೊಡನೆ ಸರಿಯಾಗಿದ್ದರೆ
ನಿನಗೇತರ ಭಯ?
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಪ್ರೀತಿಯಿಂದ ಪ್ರೀತಿ,
ದ್ವೇಷದಿಂದ ದ್ವೇಷದ ಉದಯ!

೨೩೫

ನಾಲ್ಕು ಗೋಡೆಗಳ ನಡುವೆ
ಎಂಥ ಉಲ್ಲಾಸಗಳು ಉಸಿರಾಡಿಸುತ್ತವೆ!
ನಾಲ್ಕು ಗೋಡೆಗಳ ನಡುವೆ
ಎಂಥ ನಿರಾಶೆಗಳು ನಿಟ್ಟುಸಿರಿಡುತ್ತವೆ!
ನಾಲ್ಕು ಗೋಡೆಗಳ ನಡುವೆ
ಸ್ವರ್ಗವಿರಬಹುದು, ನರಕವಿರಬಹುದು
ತನಿವಗೆಯ ತಾಯಿ, ಒಲವೆ ರೂಪಾದ ಸತಿಯಿದ್ದರೆ
ನಾಲ್ಕು ಗೋಡೆಗಳ ನಡುವೆ
ಸ್ವತಂತ್ರಧೀರ ಸಿದ್ಧೇಶ್ವರನೇ ಇರಬಹುದು!

## ೨೩೬

ಒಡೆಯರಿಗೆ ಒದಗುವ ಅಮೃತಾನ್ನಕ್ಕಿಂತ
        ಬಡವರಿಗೆ ದೊರೆವ ಹಿಟ್ಟು ಶ್ರೇಷ್ಠವಯ್ಯ!
ಪಂಚತಾರಾ ಹೋಟೆಲುಗಳ ಪಕ್ವಾನ್ನಗಳಿಗಿಂತ
        ಗುಡಿಸಲುಗಳ ಗಂಜಿ ಉತ್ಕೃಷ್ಟವಯ್ಯ!
ಹಸಿದ ಹೊಟ್ಟೆಯೇ ಹೋಮ ಕುಂಡ,
        ಅದಕ್ಕೆ ಎರೆದ ಮಜ್ಜಿಗೆಯೂ ಆಜ್ಯ;
ಹೋಮ ಹವನಗಳಿಗೆ ಸುರಿವ ತುಪ್ಪಕ್ಕಿಂತ
        ಹಸಿದ ಹೊಟ್ಟೆಗಿತ್ತ ಹಳಸಿದನ್ನ ಪೂಜ್ಯ!
        ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿಮಗೆ:
              ಬೆಂಕಿಗೆ ಹೊಯ್ಯುವ ತುಪ್ಪವ,
                ಕಲ್ಲಿಗೆರೆಯುವ ಹಾಲ,
                ಕಾಗೆಗಿಕ್ಕುವ ಅನ್ನವ
ಹಸಿದವರಿಗೆ ನೀಡಿ ಧನ್ಯರಾಗಿರಯ್ಯ!

## ೨೩೭

ಯಾವ ಸ್ವರ ಅತ್ಯಂತ ಮಧುರ?
ತಾಯಿ ಮಗುವನ್ನು ಕರೆವ ಸ್ವರವೆ?
ಮಗು ತಾಯಿಯನ್ನು ಕರೆವ ಸ್ವರವೆ?
ನೀರೆ ನೀರನನ್ನು ಕರೆವ ಸ್ವರವೆ?
ನೀರ ನೀರೆಯನ್ನು ಕರೆವ ಸ್ವರವೆ?
ವಸಂತಕಾಲದ ಕೋಗಿಲೆಯ ಸ್ವರವೆ?
ಅಲ್ಲಲ್ಲ; ಎಲ್ಲರೂ ಕೈ ಬಿಟ್ಟಾಗ,
                ತನ್ನವರೂ ಕೈ ಕೊಟ್ಟಾಗ,
ತನಗೆ ಯಾರೂ ಇಲ್ಲವೆಂಬ ಕೊರಗು
        ಕಾರಂಜಿಯಾಗಿ ಪುಟಿದಾಗ
        'ನಾನಿದ್ದೇನೆ', ಎಂದು ಸಂತೈಸುವ ಸ್ವರ
        ಸ್ವರಗಳಲ್ಲೆಲ್ಲ ಅತಿ ಮಧುರ ನೋಡಾ–
        ಸ್ವತಂತ್ರಧೀರ ಸಿದ್ಧೇಶ್ವರಾ?

## ೨೩೮

ಪ್ರತಿನಿತ್ಯ ಸಾವಿರ ಸಾವಿರ ಪುಸ್ತಕಗಳು ಪ್ರಕಟವಾದರೂ
ಪ್ರಪಂಚದ ಕೋಟಿ ಕೋಟಿ ಜನ ನಿರಕ್ಷರಿಗಳಾಗಿಯೇ
ಉಳಿಯಬೇಕೇನಯ್ಯ?
ಎಂದಿಲ್ಲದ ಸಿರಿಸಮೃದ್ಧಿಗಳ ಮಧ್ಯದಲ್ಲಿಯೇ
ಭುವಿಯ ಬಹುಸಂಖ್ಯಾತರು ಬಡವರಾಗಿಯೇ
ಕೊಳೆಯಬೇಕೇನಯ್ಯ?
ವಿಜ್ಞಾನ ತಂತ್ರಜ್ಞಾನಗಳ ಉಚ್ಛ್ರಾಯ ಕಾಲದಲ್ಲಿಯೂ
ನರಲೋಕದ ನೂರ್ಕೋಟಿ ಜನ ನಿರುದ್ಯೋಗಿಗಳಾಗಿಯೇ
ತೊಳಲಬೇಕೇನಯ್ಯ?
ಜೀವ-ರಕ್ಷಕ ಔಷಧಿಗಳ ಅತಿವೃಷ್ಟಿ ನಡೆದಿರುವಾಗಲೂ
ದಲಿತ ದುರ್ಬಲರು ಅನಾರೋಗ್ಯದಲ್ಲಿಯೇ ಬಳಲಬೇಕೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿತ್ತ ನಿಧಿ ನಿಧಾನಗಳೆಲ್ಲ ಸುಲಿಗೆಗಾರರ ಪಾಲಾಗಿ
ಬೆವರು, ಬಾಷ್ಪ, ಬೇನೆಗಳು ಮಾತ್ರ
ಶೋಷಿತರಿಗುಳಿಯಬೇಕೇನಯ್ಯ?

## ೨೩೯

ಇದು ಹಾಳು ಬಾವಿಯೇನಲ್ಲ ಗೆಳೆಯ-
ಒಂದು ತೆಗೆವ ಗಂಡುತನವಿದ್ದರೆ ತೆಗೆದು ನೋಡು,
ಒಳಗಿನ್ನೂ ಸೆಲೆಗಳು ಬದುಕಿವೆ!
ಬೇಗೆ-ಗಿಚ್ಚು ಬೊಡ್ಡೆರೆಂಬೆಗಳನ್ನು ಸುಟ್ಟಿದ್ದರೂ
ಇದು ಸರ್ವನಾಶವಾದ ಕಾಡೇನಲ್ಲ ಕೆಳೆಯ-
ನೆಲದೊಳಿನ್ನೂ ಬೇರುಗಳು ಭದ್ರವಾಗಿವೆ!
ಕಣ್ಣಾಡಿಸಿದ ಕಡೆಗೆಲ್ಲ
ದುಷ್ಟ ಭ್ರಷ್ಟರೇ ದೃಷ್ಟಿಗೋಚರವಾಗುತ್ತಿದ್ದರೂ
ಇದು ಮೃತವಾದ ಮನುಕುಲವೇನಲ್ಲ ನೇಹಿಗ-
ಮೂಲ ಮಾನವತೆಯಿನ್ನೂ ಸುಪ್ತಾವಸ್ಥೆಯಲ್ಲಿದೆ-
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಿಸಿ
ಆದಷ್ಟು ಅದನ್ನು ಅರಳಿಸಲು
ಅನುವರಿತು ಅಣಿಯಾಗು!

## ೨೪೦

ಸಸ್ಯಾಹಾರಿ ಪ್ರಾಣಿಗಳುಂಟು,
ಮಾಂಸಾಹಾರಿ ಸಸ್ಯಗಳುಂಟು,
ಸಸ್ಯಮಾಂಸಗಳೆರಡನ್ನೂ ಬಕ್ಕರಿಸುವ
ನರರೂ ಉಂಟಯ್ಯ!
ನೆಲದ ಮೇಲೆ ಬದುಕುವ ಜೀವಿಗಳುಂಟು,
ಜಲದೊಳಗೆ ಬದುಕುವ ಜೀವಿಗಳುಂಟು,
ನೆಲಜಲಗಳೆರಡರಲ್ಲೂ ಬದುಕುವ
ಜೀವಿಗಳೂ ಉಂಟಯ್ಯ!
ನೆಲದ ಮೇಲೆ ನಡೆವ, ಜಲದಲ್ಲಿ ಈಸುವ,
ನಭದಲ್ಲಿ ಹಾರುವ ಜೀವಿಗಳುಂಟು,
ಹೋರಿನಲ್ಲಿ, ಹುತ್ತದಲ್ಲಿ, ಹುಟ್ಟಿನಲ್ಲಿ
ಗೂಡಿನಲ್ಲಿ, ಬೀಡಿನಲ್ಲಿ, ನೀಡದಲ್ಲಿ
ಬದುಕುವ ಜೀವಿಗಳೂ ಉಂಟಯ್ಯ!
ಈ ವೈವಿಧ್ಯ
ಜೀವನದ ದೇವತೆಗೆ ನೈವೇದ್ಯ!
ಕಾಲನಿಗೆ ವಿಭಿನ್ನ ರುಚಿಗಳ ಖಾದ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

## ೨೪೧

ಈ ಉಪವನದ ಗಿಡಬಳ್ಳಿಗಳ ಸಾಕುವುದು
ಅಷ್ಟು ಕಷ್ಟವೇನಲ್ಲವಯ್ಯ;
ತಳದ ಹಸಲೆಯ ಪಾಲನೆಯೇ ಕರಕಷ್ಟವಯ್ಯ!
ಗಿಡಬಳ್ಳಿ ಚಿಗಿತಿದ್ದು
ಈ ಹಸಲೆ ಒಣಗಿದ್ದರೆ
ಉಪವನ ಭಣ ಭಣ!
ಈ ಜನವನದ ಗಿಡಬಳ್ಳಿಗಳಾದ
ಉಳ್ಳವರ ಪಾಲನೆ ಕಷ್ಟವೇ ಅಲ್ಲ;
ಬುಡದ ಹಸಲೆಯಾದ
ಬಡವರ ಪೋಷಣೆಯೇ ಕರಕಷ್ಟವಯ್ಯ!
ಉಳ್ಳವರ ಗಿಡಬಳ್ಳಿ ಕೊನರಿದ್ದು
ಬುಡದ ಬಡವರ ಹಸಲೆ ಒಣಗಿದ್ದರೆ

ಜನವನ ರಣ ರಣ–
ಸ್ವತಂತ್ರಧೀರ ಸಿದ್ಧೇಶ್ವರ!

೨೪೨

ಗೋವಿನ ಮುಖದ ವ್ಯಾಘ್ರಗಳಿವೆ;
ಹುಲಿಯಾಗ ಬಯಸಿ ಮೈಸುಟ್ಟುಕೊಂಡ ನರಿಗಳಿವೆ;
ಅತ್ತ ಕತ್ತೆಯೂ ಅಲ್ಲದ, ಇತ್ತ ಕುದುರೆಯೂ ಅಲ್ಲದ
ಹೇಸರಗತ್ತೆಗಳಿವೆ;
ಕಚ್ಚುವ ಕೆಚ್ಚಿಲ್ಲದ ಬೊಗಳೆ ನಾಯಿಗಳಿವೆ;
ಕುರಿಮಂದೆಗಳಿವೆ, ಕುರಿಕಾಯುವೆವೆಂಬ ತೋಳಗಳಿವೆ;
ಹುಚ್ಚೆದ್ದು ಹಾಯ್ದು ನೆಮ್ಮದಿಯಮರ ಉರುಳಿಸುವ
ಕೋಣಗಳಿವೆ;
ಮೀನಿಲ್ಲದಾಗ ಧ್ಯಾನಕ್ಕೆ ಕುಳಿತು ಮೀನು ಕಾಣುತ್ತಲೆ
ಕಬಳಿಸುವ ಬಕಪಕ್ಷಿಗಳಿವೆ;
ಕರುಳಿನ ಕಮಲಗಳ ಕಿತ್ತೆಸೆವ ಆನೆಗಳಿವೆ,
ಹುಸಿಗಂಬನಿ ಸುರಿವ ಮೊಸಳೆಗಳಿವೆ,
ಕಚ್ಚದೆ ವಿಷವೇರಿಸುವ ಕರ್ಕೋಟಕಗಳಿವೆ,
ಕಾಲು ಹಿಡಿದೆಳೆದರೂ ಕುರ್ಚಿಗಳ ಬಿಡದ ಕರಡಿಗಳಿವೆ,
ಎಂಥ ವಿಲಕ್ಷಣ ಪ್ರಾಣಿಶಾಲೆಯಯ್ಯ, ಇದು?
ನೀನು ನಿರ್ಮಿಸಿದ ಈ ಪ್ರಾಣಿಶಾಲೆಯ ಮುಂದೆ
ನಾವು ನೆಲೆಗೊಳಿಸಿರುವುವು
ಜುಜಬಿ ಪ್ರಾಣಿಶಾಲೆಗಳಲ್ಲವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

೨೪೩

ಪ್ರಪಂಚದ ಪ್ರಾಣಿಕೋಟಿಯಲ್ಲಿ
ಅಂತಿಮವಾಗಿ ಬಂದ ಮಾನವ
ಅಂಕೆಯಲ್ಲಿರಿಸಿಕೊಂಡು ಆಳುತ್ತಲಿದ್ದಾನೆ
ಎಲ್ಲ ಪ್ರಾಣಿಗಳನ್ನು!
ಆದರೆ ಇರಿಸಿಕೊಳ್ಳಲಾರದಾಗಿದ್ದಾನೆ ಅಂಕೆಯಲ್ಲಿ ತನ್ನನಿನ್ನು!
ಮೊದಲು ಬಂದುದೇ ತುದಿಯವರೆಗೆ ಉಳಿದು
ಕೊನೆಗೆ ಬಂದವನೇ ಮೊದಲು ಹೋಗುವನೆ?
ಯಾರು ಬಲ್ಲರು?

ಹಾಯಾಗಿ ಇರಲು ಒಲ್ಲರು ಈ ನರರು!
ಹೊಟ್ಟೆಗಿಲ್ಲದವರಿಗೆ ಇಲ್ಲೆನಿಸಿ
ರಾಕೆಟ್ಟುಗಳಿಗೆ ಹಣ ಹಾಕುತ್ತಿದ್ದಾರೆ!
ವಸುಧೆಯೆಲ್ಲ ವೆಸೂವಿಯಸ್ ಈಗ!
ಸತ್ವರಜಗಳನ್ನಾಳುವುದು ತಮಸ್ಸೀಗ!
ಏನಿದೆಯೋ ಸ್ವತಂತ್ರಧೀರ ಸಿದ್ಧೇಶ್ವರನ
ರಹಸ್ಯ ವೀಣೆಯ ರಾಗ!

## ೨೪೪

ನಾನೀಗ ಬರೆಯುತ್ತಿರುವಂತೆಯೇ
ಎಷ್ಟು ಕೋಟಿ ಬೀಜಗಳು
ಮೊಳೆಯಲು ತಳಮಳಿಸುತ್ತಿವೆಯೋ, ಮಣ್ಣಿನಲ್ಲಿ!
ಎಷ್ಟು ಕೋಟಿ ಬೀಜಗಳು
ಹಸಿಯಿಲ್ಲದೆಯೋ, ಹುಳುತಿಂದೋ
ಹಾಳಾಗಿ ಹೋಗುತ್ತಿವೆಯೋ!
ಎಷ್ಟು ಜೀವಿಗಳು ಹಸೆಗೆ ನಿಲ್ಲುತ್ತಿರುವರೋ
ಎಷ್ಟು ಜೀವಿಗಳು ಮಡಿದು ಮಸಣಕ್ಕೆ ಹೊರಟಿಹರೋ!
ಕಟ್ಟುತ್ತಿರುವವರೆಷ್ಟೋ, ಕೆಡಿಸುತ್ತಿರುವವರೆಷ್ಟೋ,
ಆಳುತ್ತಿರುವವರೆಷ್ಟೋ, ನಗುತ್ತಿರುವವರೆಷ್ಟೋ!
ಪರಿಭಾವನೆಗೆ ನಿಲುಕದ
ಪರಮಾದ್ಭುತದ ಪ್ರತೀಕ–
ಸ್ವತಂತ್ರಧೀರ ಸಿದ್ಧೇಶ್ವರನ ಲೋಕ!

## ೨೪೫

ಇಲ್ಲಿ ಹೊಲಸಿನ ಅಸ್ತಿತ್ವವನ್ನು ಒಪ್ಪಿಯೂ
ಹೊಲಸಿಗೇ ಅಡ್ಡಬೀಳಲಾರೆನಯ್ಯ, ನಾನು;
ಇಲ್ಲಿ ಕೆಡುಕಿನ ಕೈವಾಡವನ್ನು ಒಪ್ಪಿಯೂ
ಕೆಡುಕಿಗೇ ಕೈಯೊಡ್ಡಲಾರೆನಯ್ಯ ನಾನು;
ಇಲ್ಲಿ ಬದುಕಿನ ಅರ್ಥಹೀನತೆಯನ್ನು ಒಪ್ಪಿಯೂ
ಅರ್ಥಶೂನ್ಯತೆಯೇ 'ಶೂನ್ಯಸಂಪಾದನೆ'ಯೆನ್ನೆನಯ್ಯ, ನಾನು!
ಸ್ವತಂತ್ರಧೀರ ಸಿದ್ಧೇಶ್ವರಾ,
ಇಲ್ಲಿ ವಾಸ್ತವತೆಯ ಪಾರಮ್ಯವನ್ನು ಒಪ್ಪಿಯೂ
ಅದರಾಚೆಗಿರಬಹುದಾದುದನ್ನು ನಿರಾಕರಿಸೆನಯ್ಯ, ನಾನು!

## ೨೪೬

ಕಾಯಿ
ಹೆತ್ತಮರಕ್ಕೆ ಹತ್ತಿಕೊಂಡೇ ಹಣ್ಣಾದರೆ
ಅದರ ಸವಿ ಹೆಚ್ಚು-
ಆದರೆ, ಅವರಿವರು ಕುಯ್ದು ಒಯ್ದಾರೆಂದು
ಹರಿದು ಮನೆಗೆ ತಂದು ಹಣ್ಣು ಮಾಡಿಕೊಳ್ಳುವೆವಯ್ಯ!
ಗಿಳಿ
ವನದಲ್ಲಿ ಗಳಪಿದರೆ ಬಲು ಮುದ್ದು-
ಆದರೆ, ನಮ್ಮಗಿಳಿಯೆಂದೆನಿಸಲು
ಹಿಡಿದು ತಂದು ಪಂಜರದಲ್ಲಿಡುವೆವಯ್ಯ!
ಹೂವು
ಬಿಟ್ಟ ಬಳ್ಳಿಯಲ್ಲಿ ನಗುತ್ತಿದ್ದರೆ ಅದರ ಸೊಬಗು ಹೆಚ್ಚು-
ಆದರೆ, ನಮ್ಮಹೂವೆಂದೆನಿಸಲು!
ಬಿಡಿಸಿ ತಂದು ಮುಡಿದುಕೊಳ್ಳುವೆವಯ್ಯ!
ಇದ್ದಲ್ಲಿ ಇದ್ದರೆ ಎಲ್ಲರದು-
ಆದರೆ, ಯಾರ ಕೈಗಾದರೂ ಸಿಕ್ಕಿದರೆ,
        ಅವರಿಗದು ದಕ್ಕಿದರೆ
        ಅದು ಕೇವಲ ಅವರದು!
        ಎಲ್ಲವೂ ನಿನ್ನದಿರುವಾಗ
ಎಲ್ಲರಿಗೂ ಸಲ್ಲದಂತಾದುದೇ ಸೋಜಿಗ-
        ಸ್ವತಂತ್ರಧೀರ ಸಿದ್ಧೇಶ್ವರಾ!

## ೨೪೭

ಆಡಿ ಹಿಗ್ಗುವವರು ಹಲವು ಜನರಾದರೆ
ನೋಡಿ ಹಿಗ್ಗುವವರು ಸಹಸ್ರ ಸಹಸ್ರ ಜನ;
ಬಾನುಲಿಯಲ್ಲಿ ಕೇಳಿ ಹಿಗ್ಗುವವರು ಲಕ್ಷ ಲಕ್ಷ ಜನ:
ಪತ್ರಿಕೆಗಳಲ್ಲಿ ಓದಿ ಹಿಗ್ಗುವವರು ಕೋಟಿ ಕೋಟಿ ಜನ!
ಎಲ್ಲಿಯೋ ಹುಟ್ಟುವ ಹಿಗ್ಗಿನ ಅಲೆ
ಹಿಗ್ಗುತ್ತ ಹಿಗ್ಗುತ್ತ ಕೋಟಿ ಜನರ ಮುಟ್ಟುವಂತೆ
ಎಲ್ಲಿಯೇ ಹುಟ್ಟಲಿ, ಯಾರಿಂದಲೇ ಹುಟ್ಟಲಿ,

ಹಿಗ್ಗು ಎಲ್ಲರ ಮನೆಮನೆಗೆ, ಮನಮನಕ್ಕೆ ಮುಟ್ಟಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೪೮

ತಿನ್ನುವ ಬಾಯಿಯೇ ಎಲ್ಲ ತರಲೆಗಳ ತಾಯಿ-
ದುಡಿಯುವ ಕೈಯಲ್ಲ!
ದೋಚಿ ತಿನ್ನುವವರೇ ತಿಂದದ್ದು ಸಾಲದೆಂದು
ಬೊಬ್ಬೆ ಹೊಡೆವವರು,
ಸದ್ದಿಲ್ಲದೆ, ಸುದ್ದಿ ಮಾಡದೆ ದುಡಿವ ಬಡವರಲ್ಲ!
ಸಮಾಜ ಪುರುಷನ ಹೃದಯವಾಗಿ
ಎಲ್ಲ ನರಗಳಿಗೆ ನೆತ್ತರು ನೀಡುವವರು ಅವರು;
ಅವರ ಬಾಯ ತುತ್ತನ್ನೇ ಕಸಿದು ತಿಂದು
ಅವರಿಗೆ ಮೊದಲೇ ಶಂಖ ಹೊಡೆವವರು
ಹೃದಯಹೀನ ಶೋಷಕರು!
ಹೃದಯವೇ ನಿಂತು ಹೋದರೆ ಹೇಗೆಂಬ ವಿಚಾರ
ಇನ್ನಾದರೂ ಬರಲಯ್ಯ ಈ ಅವಿವೇಕಿಗಳಿಗೆ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೪೯

ಬಾ, ಬಾ ಬದಲಾವಣೆಯ ಬಿರುಗಾಳಿ-
ಇದ್ದುದೆಲ್ಲದರ ಮೇಲೆ ಮಾಡಿ ಬಿರುಸಿನ ದಾಳಿ!
ಉರುಳಿಸುವುದೇ ಆದರೆ
ಹಳೆಯ ಹೆಮ್ಮರಗಳನ್ನೆಲ್ಲ ಉರುಳಿಸು-
ಅವುಗಳ ಬೇರುಗಳನಷ್ಟೇ ಸಡಿಲಿಸಿ ಬಿಡಬೇಡ!
ಅಕಸ್ಮಾತ್ ಅವು ನಿರಪರಾಧಿಗಳ ಮೇಲೆ ಬಿದ್ದಾವು,
ನಿರ್ಗತಿಕರನ್ನೇ ಕೊಂದಾವು!
ನಿನ್ನ ಸ್ವಲ್ಪ ಸಮಯದ ಶಕ್ತಿ
ಏನನ್ನೂ ಉರುಳಿಸದೆ,
ಧೂಳನ್ನು ಮಾತ್ರ ಎಬ್ಬಿಸಿ ಮಾಯವಾಗದಿರಲಿ!
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ!

## ೨೫೦

ಮುಗ್ಧರು ಮಾಡುವ ಭೂತಾರಾಧನೆಗಿಂತ
ವಿದಗ್ಧರು ಮಾಡುವ ಭೂತಾರಾಧನೆ ಹಾಸ್ಯಾಸ್ಪದವಯ್ಯ!
ವರ್ತಮಾನದ ಬಗ್ಗೆ ವಿಚಾರಿಸಲು,
ಭವಿತವ್ಯದ ಬಗ್ಗೆ ಚಿಂತಿಸಲು,
ಸಮಯವೇ ಉಳಿಯದಂತೆ
ಭೂತಕಾಲದ ಆರಾಧನೆ ಮಾಡುವುದು
ಭೂತಾರಾಧನೆಯಲ್ಲವೇನಯ್ಯ?
ಅಪ್ರಬುದ್ಧರು ಪೂಜಿಸುವ ಭೂತಗಳ ಭೀತಿಯಿಲ್ಲೆನಗೆ,
ಪ್ರಬುದ್ಧರೆನಿಸಿಕೊಂಡವರ ಮಿದುಳನ್ನೇ ಹಿಡಿದು ಹಿಂಡುತ್ತಿರುವ
ಭೂತದ ಭೂತದ ಬಗ್ಗೆ ಭಯಭೀತನಯ್ಯ, ನಾನು!
ಇದರ ಉಡದ ಹಿಡಿತದಿಂದ ಬಿಡುಗಡೆಯ ನೀಡಿ,
ಭೂತ–ವರ್ತಮಾನ–ಭವಿಷ್ಯಗಳನ್ನು
ವಿವೇಕದ ಒರೆಗಲ್ಲಿಗೆ ಹಚ್ಚುವ
ಛಲವ, ಬಲವ ನನಗೆ ನೀಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ!

## ೨೫೧

ಭೂತದ ಪಾತಾಳಗಂಗೆಯಲ್ಲಿ
ಭವಿತವ್ಯದ ಆಕಾಶಗಂಗೆಗೇರುವ
ಸಾಧನ ಸಂಪತ್ತು ಹುಡುಕುತ್ತಲಿಹೆನಯ್ಯ;
ವರ್ತಮಾನದ ವರ್ತುಳದಲ್ಲಿ
ಅನಂತ ಕಾಲದ ಕೇಂದ್ರಬಿಂದುವನ್ನು
ಅರಸುತ್ತಲಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭವಿತವ್ಯದ ಬರಿದಿನಲ್ಲಿ
ತತ್ಕಾಲದ ಆಶೋತ್ತರಗಳ
ಕಾಮನ ಬಿಲ್ಲನ್ನು ಕಾಣಲೆಳಸಿಹೆನಯ್ಯ!

## ೨೫೨

ಬುದ್ಧ ಬಸವರು ಮನೆಬಿಟ್ಟ ಗಳಿಗೆ,
ಏಸು ಶಿಲುಬೆಗೇರಿದ ಗಳಿಗೆ,
ಸಾಕ್ರೆಟೀಸ್ ವಿಷ ಕುಡಿದ ಗಳಿಗೆ,
ಪೈಗಂಬರರು ದೇವವಾಣಿ ಕೇಳಿದ ಗಳಿಗೆ,
ಹರಳಯ್ಯ ಮಧುವರಸರ ಮಕ್ಕಳು ಹಸೆಗೆ ನಿಂದ ಗಳಿಗೆ,
ಆರ್ಕಿಮಿಡಿಸ್ ತುಂಬಿದ ತೊಟ್ಟಿಯಲ್ಲಿ ಮುಳುಗಿದ ಗಳಿಗೆ,
ನ್ಯೂಟನ್ ಬೀಳುವ ಹಣ್ಣನ್ನು ಕಂಡ ಗಳಿಗೆ,
ನರೇಂದ್ರ ಪರಮಹಂಸರನ್ನು ಕಂಡ ಗಳಿಗೆ,
ಗಾಂಧೀಜಿ ಕಾಂಗ್ರೆಸ್ಸಿನ ಕರ್ಣಧಾರತ್ವ ವಹಿಸಿದ ಗಳಿಗೆ–
ಇಂಥ ಗಳಿಗೆ
ಶತಮಾನಗಳಿಗೆ
ಸಾಟಿ ನೋಡಾ!
ಮಾನವನ ಮೇಲ್ಮೆ ಮೆರೆದುದು,
ಭಾಗ್ಯದ್ವಾರ ತೆರೆದುದು
ಇಂಥ ಗಳಿಗೆಗಳಲ್ಲಿ–
ಪಾನಿಪತ್ತು ಪರ್ಲ್‌ಹಾರ್ಬರ್ ಹಿರೋಷಿಮಾಗಳಲ್ಲಿ ಅಲ್ಲ–
ಸ್ವತಂತ್ರಧೀರ ಸಿದ್ಧೇಶ್ವರ ಬಲ್ಲ!

## ೨೫೩

ನಿನ್ನೆ ಕಡೆದ ಮಜ್ಜಿಗೆ
ಇಂದು ಕಾಸಿದ ಹಾಲಿಗೆ ಹೆಪ್ಪು:
ಮುನ್ನಿನವರ ಅನುಭವ
ಇಂದಿನವರ ಅನ್ನಕ್ಕೆ ಉಪ್ಪು!
ಮುನ್ನಿನವರ ಮನ್ನಿಸದವನು
ನಾಳಿನವರ ಬಗ್ಗೆ ಚಿಂತಿಸಬಲ್ಲನೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೨೫೪

ಓ ಕಾಲ, ನಿನ್ನ ಕಂಕಾಲದಲ್ಲಿ
ನಾವು ತುಂಬುವ ರಕ್ತ ರಕ್ತಿ ಶಕ್ತಿಗಳೇ ಸಂಜೀವಿನಿ,
ನಮ್ಮಉಸಿರೇ ನಿನ್ನ ಜೀವನಾಧಾರ–

ಮಾಡದಿರು ನಮ್ಮನ್ನೇ ಅಸ್ಥಿಪಂಜರ!
ನಮ್ಮಲ್ಲಿ ಬಹುಜನರ ಬಂಧನದಲ್ಲಿಟ್ಟು,
ಬಡತನದಲ್ಲಿ ಸುಟ್ಟು–
ನೀನೆಂಥ ಜೀವನ ಪಡೆವೆ–ಸತ್ವಗೆಟ್ಟು
ಜಗದ್ಭಕ್ಷಕನೆಂಬುದು ನಿನ್ನ ಬಿರುದು–
ನಮ್ಮನ್ನು ಮಾತ್ರ ಭಕ್ಷಿಸದಿರು, ನರರಾಕ್ಷಸರ ಮರೆದು!
ಭಕ್ಷಿಸು ನರಭಕ್ಷಕರ ಹುರಿದು, ಹುರಿದು!
ಸಂಪ್ರೀತನಾಗುವ ಸ್ವತಂತ್ರಧೀರ ಸಿದ್ಧೇಶ್ವರ,
ನೀ ಶಿಕ್ಷಿಸೆ ದುಷ್ಟರ, ಶಿಷ್ಟರ ಪೊರೆದು!

೨೫೫

ಇದು ಹಗಲೆನ್ನಲೆ?
ಇನ್ನರ್ಧ ಜಗದಲ್ಲೀಗ ರಾತ್ರಿ!
ಇದು ರಾತ್ರಿಯೆನ್ನಲೆ?
ಇನ್ನರ್ಧ ಜಗದಲ್ಲೀಗ ಹಗಲು!
ಹಗಲಿರುಳೂ
ಹಗಲಿರುಳುಗಳ ರಾಟಾಳ
ಇದು ಕಾಲದ ಜೀವಾಳ!
ಬೆಳೆಸುವ, ಅಳಿಸುವ,
ಕೊನರಿಸುವ, ಕೊಳೆಸುವ,
ಹೊಸದಾಗಿಸುವ, ಹಳೆಯದಾಗಿಸುವ,
ಕಟ್ಟುವ ಕೆಡಿಸುವ,
ಹುಟ್ಟಿಸುವ, ಸಾಯಿಸುವ
ಕಾಲದ ಒಂದು ಕಣ್ಣು ಕರ್ರಗೆ,
ಇನ್ನೊಂದು ಬೆಳ್ಳಗೆ!
ಇದು ನಮ್ಮಪಾರ್ಶ್ವ ದೃಷ್ಟಿಗೆ,
ಅಲ್ಲ ನಿನಗೆ–
ಸ್ವತಂತ್ರಧೀರ ಸಿದ್ಧೇಶ್ವರ!

೨೫೬

ನಿನ್ನೆ ಮಾಗಿದ ಹಣ್ಣಿನಲ್ಲಿ
ಇಂದಿಗೆ ಆಹಾರ

ನಾಳೆಗೆ ಬೀಜವಿರುವಂತೆ
ಹಿಂದಿನ ಇತಿಹಾಸದಲ್ಲಿಯೂ
        ಇರದೇನಯ್ಯ?
ರಸವ ಹೀರಿ
ಸಿಪ್ಪೆಯನೆಸೆದು
ಬೀಜವನುಳಿಸಿಕೊಳ್ಳುವ
ಹದನನರಿತಿದ್ದರೆ
ಇಂದು ಮುಂದುಗಳಿಗೆ ಕಂದ ಮೂಲವಯ್ಯ ಹಿಂದು-
        ಸ್ವತಂತ್ರಧೀರ ಸಿದ್ಧೇಶ್ವರಾ!

೨೫೭

ತಲೆಮಾರಿಗೊಮ್ಮೆ ತಲೆ ಮಾರುವುದೆ-
ತಲೆಮಾರಿಗೆ ತಿರುಗುವುದೆ?
ತಲೆ ಮಾರಲು ತಲೆಗೆ ಬೆಲೆ
        ಯಾರು ಕಟ್ಟಿಹರಯ್ಯ?
ತಲೆಮಾರಿಗೆ ತಿರುಗಲು
ನರನೂ ನೇಗಿಲವೇನಯ್ಯ?
ತಲೆತಲಾಂತರದಿಂದ
ತಲೆಕೂಳು ಬೆಳೆಯುತ್ತ ಬಂದಿರುವುದೇ
ಜೀವ-ಕುಲದ ತಲೆ, ಮಾನವನ ಮೇಲ್ಮೆ-
ತಲೆಗೆಟ್ಟು ತಲೆ ಮಾರುವುದಲ್ಲ,
        ತಲೆಮಾರಿಗೆ ಹಿಂದಿರುಗುವುದಲ್ಲ!
        ತಲೆ ಮಾರಲೇ ಬೇಕೆನಿಸಿದರೆ
ನಿನಗೆ ಮಾರುವೆ-
    ಕೊಳ್ಳಬಲ್ಲೆಯೇನಯ್ಯ,
        ಸ್ವತಂತ್ರಧೀರ ಸಿದ್ಧೇಶ್ವರಾ?

೨೫೮

ಈ ಕಾಲಕ್ಕಿಂತ ಕಳೆದ ಕಾಲವೇ ಚೆನ್ನಿತ್ತು-ಎನ್ನುವವರು
ಎಲ್ಲ ಕಾಲದಲ್ಲಿಯೂ ಇದೇ ಹಾಡನ್ನೇ ಹಾಡುವರಯ್ಯ!
ಹೀಗೆ ಹಾಡುವವರು ಹಾಡುತ್ತಲೇ ಹೋಗುವರು,
ಕೈಲಾದುದ ಮಾಡುವವರು ಮಾಡುತ್ತಲೇ ಹೋಗುವರಯ್ಯ-
        ಸ್ವತಂತ್ರಧೀರ ಸಿದ್ಧೇಶ್ವರ!

೨೫೯

ನನ್ನ ತನುವಿಗೀಗ ವೃದ್ಧಾಪ್ಯ, ಆದರೆ
ನನ್ನ ಮನಕ್ಕಿನ್ನೂ ನವಯೌವನವಯ್ಯ!
ನನ್ನ ತಲೆಗೂದಲಿಗೀಗ ನರೆ, ಆದರೆ
ನನ್ನ ಅರಿವಿಗಿನ್ನೂ ಶೈಶವವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಕಾಲಸಾಗರದಲ್ಲಿ ಯುಗ-ಯಾತ್ರಿ ಭೈತ್ರ ನಾನು, ಆದರೆ
ಇಲ್ಲಿ ನನ್ನ ಇರವು ಮಾತ್ರ ನಶ್ವರವಯ್ಯ!

೨೬೦

ಕಾಲ ತಿದ್ದಿದವರ ಕೊರತೆಯಿಲ್ಲ,
ಕಾಲವನ್ನು ತಿದ್ದುವವರ ತೋರಾ!
ಕಾಲದ ಕಾಲಿಗೆ ಬಿದ್ದವರ ಬರವಿಲ್ಲ,
ಕಾಲವನ್ನು ಗೆದ್ದವರ ತೋರಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೬೧

ಭಾರತದ ಭವ್ಯ ದಿವ್ಯ ದೇಗುಲಕ್ಕೆ
ಹಿಮಗಿರಿಯೇ 'ಮಹತೋ ಮಹೀಯಾನ್' ಗೋಪುರ,
ಉತ್ತುಂಗ ಶೃಂಗಗಳೇ ಸಾಲು ಕಳಸಗಳು!
ಸಂಜೆ ಮುಂಜಾವಿನಲ್ಲಿ ಸ್ವರ್ಣ ಕಳಸಗಳಾಗಿ,
ಬಿಸಿಲು ಬೆಳ್ದಿಂಗಳಲ್ಲಿ ರಜತ ಕಳಸಗಳಾಗಿ,
ಹತ್ತಿರ ಹೋದವರಿಗೆ ಹಿಮ ಕಳಸಗಳಾಗಿ
ಕಂಗೊಳಿಸುವ ಈ ಶೃಂಗ-ಕಲಶಗಳು
ಸಾರುತ್ತಿವೆ ಪ್ರಪಂಚಕ್ಕೆ-
ಔನ್ನತ್ಯ ಸಂಹಿತೆಯ,
ಪಾವಿತ್ರ್ಯ ಸಂದೇಶವ,
ಅವಿನಾಶಿತ್ವದ ಅಂತರ್ವಾಣಿಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೬೨

ಎಣ್ಣೆ ಬತ್ತಿಗಳದೀಪಗಳಿದ್ದಾಗ
ದೀಪವಾರಿಸಲು ಸುಳಿಗಾಳಿಯಾಗಿ
ಬೇಗೆ ಹೆಚ್ಚಿಸಲು ಬಿರುಗಾಳಿಯಾಗಿ ಬರುತ್ತಿದ್ದ ಅನಿಲವೆ,
ಈಗ ವಿದ್ಯುದ್ದೀಪಗಳು ಬಂದಿವೆಯಾಗಿ
ದೀಪವಾರಿಸಲೂ ಬಿರುಗಾಳಿಯಾಗಿ ಬರಬೇಕು,
ಬೇಗೆ ಬಲಿಸಲೂ ಬಿರುಗಾಳಿಯಾಗಿ ಬರಬೇಕು ನೀನು!
ಇದಕ್ಕೆ ಸಂವಾದಿಯಾಗಿಯೋ ಏನೋ-
ಬದುಕಿನಲ್ಲಿಯೂ ಬಿರುಗಾಳಿಗಳೇ ಬಹಳವೀಗ!
ಮಾತು ಮಾತಿಗೂ ಕಾವೇರಿದ ಭಾವಗಳ ಬಿರುಗಾಳಿಗಳು,
ಹೆಜ್ಜೆ ಹೆಜ್ಜೆಗೆ ದ್ವೇಷದ, ತ್ವೇಷದ, ರೋಷ ಆಕ್ರೋಶಗಳು
ಬಿರುಗಾಳಿಗಳು!
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ಯಮುನಾ ತೀರದ ಮೃದುಸಮೀರದ-
ಕಾವೇರೀ ತೀರದ ಬಾವನ್ನದುಸುರಿನ
ಪರಮ ಪಾವನ ಭರತಭೂಮಿಯಲ್ಲಿ
ಸದ್ಭಾವ ಶುಭಕೃತಿಗಳ ಕಾವೇರಿ
'ಸೂರಿಜನ ಹರ್ಷವಿಸ್ತಾರಿ' ಯಾಗಿ
ಹರಿಯುತ್ತಿರಲಯ್ಯ!

## ೨೬೩

'ಈ ದೇಶದ ಹಸುವಿಗಿಂತ,
ಆ ದೇಶದ ಹಂದಿ ಮುದ್ದು', ಎನ್ನುವವರಿದ್ದಾರೆ;
'ಬೇರೆ ದೇಶದ ಹಸುವಿಗಿಂತ
ಈ ದೇಶದ ಹಂದಿಯೆ ಹೆಚ್ಚು' ಎನ್ನುವವರಿದ್ದಾರೆ;
ನಾನಾದರೋ 'ಈ ದೇಶದ್ದಾಗಲಿ,
ಇನ್ನಾವ ದೇಶದ್ದೇ ಆಗಲಿ,
ಹಸು ಹಸುವಿಗೆ ಸಮ-

ಹಂದಿ ಹಂದಿಗೆ ಹೊಯಿಕೆಯ್'
        ಎಂದೆನ್ನುವೆ ನೋಡಾ
            ಸ್ವತಂತ್ರಧೀರ ಸಿದ್ಧೇಶ್ವರ!

## ೨೬೪

ಐದುನೂರು ಕಿರೀಟಧಾರಿ ಕಳ್ಳರ ಕೊನೆಗಾಣಿಸಿ
ಐದುನೂರು ಸಾವಿರ ಕಳ್ಳರನ್ನು ಹುಟ್ಟಿಸಿ ಕೊಂಡೆವಯ್ಯ;
ಸಾವಿರ ಸಾವಿರ ಕೋತಿಗಳನ್ನು ಹಡಗ ಹತ್ತಿಸಿ ಕಳಿಸಿ
ಕೋಟಿ ಕೋತಿಗಳನ್ನು ನಮ್ಮಲ್ಲಿಯೇ ಸೃಷ್ಟಿಸಿಕೊಂಡೆವಯ್ಯ;
ಬಿಳಿಯ ಬ್ಯೂರಾಕ್ರೆಟರನ್ನು ಭಾರತದಿಂದ ತೊಲಗಿಸಿ
ಕಪ್ಪು ಬ್ಯೂರಾಕ್ರೆಟರ ಶನಿಸಂತಾನವನ್ನು ಪಡೆದುಕೊಂಡೆವಯ್ಯ;
        ಮನೆಯ ಬಡತನವನ್ನು ಕಳೆಯ ಹೋಗಿ
ಮನದ ಬಡತನವನ್ನು ತಂದುಕೊಂಡೆವಯ್ಯ;
        ಬೆನಕನ ಮಾಡಹೋಗಿ ಬೇತಾಳವ,
ಹನುಮನ ಮಾಡಹೋಗಿ ಹಿಮಮಾನವನ
        ಮಾಡಿಕೊಂಡೆವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರ
ನಿನ್ನನುಳಿದು ಹೊನ್ನ ಬೆಳೆಸ ಹೊರಟು
ಬನ್ನಗಳನ್ನೇ ಬೆಳೆದುಕೊಂಡೆವಯ್ಯ!

## ೨೬೫

ಮುಕ್ತಿ ಮುಕ್ತಿ ಎನ್ನುತ್ತಲೇ
ಮುವ್ವತ್ತು ಶತಮಾನಗಳ ಕಳೆದೆವಯ್ಯ!
ಯಾವುದರಿಂದ ಮುಕ್ತಿ?
ಈ ಜಗತ್ತಿನಿಂದಲೇ?
ಇನ್ನಾವ ಜಗತ್ತು ಇದಕ್ಕೂ ಚೆನ್ನಾಗಿದೆ?
ಈ ಜೀವನದಿಂದಲೇ?
ಜೀವನಕ್ಕೂ ಶ್ರೇಷ್ಠ ಇನ್ನಾವುದಿದೆ?
ಇಂಥ ಅಯುಕ್ತ ಮುಕ್ತಿ ಬೇಡವಯ್ಯ, ನನಗೆ!
ಮನೋ ವಿಕಾರಗಳಿಂದ,
ಇಂದ್ರಿಯ ಚಾಪಲ್ಯಗಳಿಂದ,
ಅನರ್ಹ ಅಪೇಕ್ಷೆಗಳಿಂದ,

ದುಡಿಯದೆ ಪಡೆವ ದುರಾಶೆಯಿಂದ
ಮುಕ್ತಿಯನ್ನು ನೀಡೆನಗೆ–
ಅದೇ ಸಾಕೆನಗೆ,
ಸ್ವತಂತ್ರಧೀರ ಸಿದ್ಧೇಶ್ವರ!

**೨೬೬**

ಸ್ವದೇಶ ಸ್ವರ್ಗ,
ಸ್ವಭಾಷೆ ಸ್ವರ್ಗ,
ಸ್ವಧರ್ಮ ಸ್ವರ್ಗ,
ಸ್ವಾತಂತ್ರ್ಯ ಸ್ವರ್ಗ,
ಸ್ವಾವಲಂಬನ ಸ್ವರ್ಗ,
ಸ್ವಕಾಯಕ ಸ್ವರ್ಗ,
ಸ್ವಾನುಭವ ಸ್ವರ್ಗ–
ಇವಿಲ್ಲದುದು ನರಕ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ!

**೨೬೭**

ಪ್ರತಿಯೊಂದು ಪ್ರಶ್ನೆಗೂ
ಉತ್ತರದಿಂದಲೇ ಉತ್ತರ ಬರಬೇಕೇನು?
ದಕ್ಷಿಣದ ದಾಕ್ಷಿಣ್ಯಪರರು
ದಕ್ಷಿಣೆ ಕೊಡಲು ಮಾತ್ರ ತಕ್ಕವರೇನು?
ನಮ್ಮ ರಾಷ್ಟ್ರಜೀವನದ
ಸಮುದ್ರ ಪರ್ಯಟನದಲ್ಲ
ಉತ್ತರವೆ ಉತ್ತರಕಾಟವೇನು–
ಸ್ವತಂತ್ರಧೀರ ಸಿದ್ಧೇಶ್ವರ?

**೨೬೮**

ಸಂಸ್ಕೃತಕ್ಕೆ ಜನಿವಾರ ಹಾಕುವ,
ಕನ್ನಡಕ್ಕೆ ಶಿವದಾರ ತೊಡಿಸುವ,
ಉರ್ದೂ ಭಾಷೆಗೆ ಗಡ್ಡ ಬಿಡಿಸುವ,
ತಮಿಳಿಗೆ ಕರಿಯಂಚಿನ ಪಂಚೆ,
ಮರಾಠಿಗೆ ಭಗವಾ ಝೇಂಡಾ,

ಹಿಂದಿಗೆ ಅಶೋಕಚಕ್ರ–
ಇನ್ನುಳಿದ ಭಾಷೆಗಳಿಗೆ
ಇನ್ನೇನನ್ನೋ ಜೋಡಿಸುವ
ಮಡ್ಡತನ ಮಾಯವಾಗಲಯ್ಯ ಭಾರತದಿಂದ!
ಭಾಷೆಯಿರುವುದು ಸಂಗಡಿಸಲು,
ವಿಂಗಡಿಸಲಲ್ಲ;
ಬದುಕಿಸಲು,
ಸಾಯಿಸಲಲ್ಲ–
ಸ್ವತಂತ್ರಧೀರ ಸಿದ್ಧೇಶ್ವರ ಬಲ್ಲ!

## ೨೬೯

ನನ್ನ ಧರ್ಮದ ತಿರುಳನ್ನೇ ನಾನು ಅರಗಿಸಿಕೊಂಡರೆ
ಎಲ್ಲ ಧರ್ಮಗಳ ಹುರುಳನ್ನೂ ಅಳವಡಿಸಿಕೊಂಡಂತೆ;
ಆಗ ಅನ್ಯರೂ ತನ್ನವರು,
ಇಲ್ಲದಿರೆ, ತನ್ನವರೂ ಅನ್ಯರು!
ಅನ್ಯಧರ್ಮಗಳ ಬಗ್ಗೆ ಅಸಹನೆ ಉಳಿದಿರುವುದೇ
ತನ್ನ ಧರ್ಮದ ತಿರುಳ ತಿಳಿಯದಿರುವುದಕ್ಕೆ ಸಾಕ್ಷಿ,
ಸ್ವತಂತ್ರಧೀರ ಸಿದ್ಧೇಶ್ವರ!

## ೨೭೦

ನಮ್ಮ ಧರ್ಮದಂತೆ ಸರ್ವರೂ ಶಿವಾಂಶಿಕರೆನ್ನುವರು–
ಆದರೆ, ಸರ್ವರೂ ಸಮಾನರೆನ್ನಲು ಸಿದ್ಧರಿಲ್ಲ!
ಇವರೆಂಥ ಧಾರ್ಮಿಕರಯ್ಯ?
ಪರಮಾತ್ಮ ಪಿತೃತ್ವ, ಮಾನವನ ಭ್ರಾತೃತ್ವವೇ ನಮ್ಮಧರ್ಮದ
ಜೀವಾಳವೆಂಬರು–
ಆದರೆ ಕರಿಯರಿಗೆ ಸರಿಪಾಲು ಸಲ್ಲಿಸಲು ಸಿದ್ಧರಿಲ್ಲ!
ಇವರೆಂಥ ಧಾರ್ಮಿಕರಯ್ಯ?
ನಮ್ಮಪ್ರವಾದಿ ಹಿಂದಿನ ಪ್ರವಾದಿಗಳೆಲ್ಲರ ಮನ್ನಿಸುವನೆಂಬರು–
ಆದರೆ ತಮ್ಮ ಮತಕ್ಕೆ ಸೇರದವರ ಇವರು ಸೇರರು!
ಇವರೆಂಥ ಧಾರ್ಮಿಕರಯ್ಯ?
ತಂತಮ್ಮ ಧರ್ಮ ತತ್ವಗಳಿಗೇ
ಮರ್ಮಾಘಾತ ಮಾಡುತ್ತಿರುವ ಇವರು

ಧರ್ಮಿಗಳೋ ಅಧರ್ಮಿಗಳೋ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೬೧

ಹತ್ತಿಯ ಕಟ್ಟಿಗೆಗಳನ್ನು ಹೊತ್ತಿಸಿ
ಹಡುಗುಗಳ ನಡೆಸಲಾಗುವುದೇನಯ್ಯ?
ರೆಪ್ಪೆಯ ಕೂದಲುಗಳ ಕೂಡಿಸಿ
ಸಹ್ಯಾದ್ರಿಗೆ ಕಂಬಳಿ ನೆಯ್ಯಲಾದೀತೇನಯ್ಯ?
ಗುಬ್ಬಿ ಬೆಳಸಿಗಳ ಒಕ್ಕಿ
ಕುಂಭಮೇಳಕ್ಕೆ ಕೂಳು ಹಾಕಬಹುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕೈಲಾಗದವರ ಬರಿಮಾತುಗಳ ಬಳಸಿಕೊಂಡು
ರಾಷ್ಟ್ರೋದಯದ ರಾಜಮಾರ್ಗ ರಚಿಸಬಹುದೇನಯ್ಯ?

## ೨೬೨

ಬೇಲಿ ಬೆಳೆಯ ಕಾಯಬಲ್ಲುದಾಗಲಿ
ಬೆಳೆಯೇ ತಾನಾಗಲಾರದಯ್ಯ!
ಗಾಣ ಎಣ್ಣೆಯ ಹಿಂಡಬಲ್ಲುದಾಗಲಿ
ಎಣ್ಣೆಯೇ ತಾನಾಗಲಾರದಯ್ಯ!
ಆಡುವ ಸೋರೆ ಅನ್ನ ಮಾಡಬಲ್ಲುದಾಗಲಿ
ಅನ್ನವೇ ತಾನಾಗಲಾರದಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಮ್ಮನೀಲಿ ನಕ್ಷೆಗಳು ಆಶೆ ಹುಟ್ಟಿಸಬಲ್ಲುವಾಗಲಿ
ಸಾಧನೆಯ ಕಾಶಿ ತಾವಾಗಲಾರವಯ್ಯ!

## ೨೬೩

ಒಮ್ಮೆ ಹುಟ್ಟಿನ ಕಟ್ಟಿನ ಬಲದಿಂದ ಬದುಕಿದೆ;
ಒಮ್ಮೆ ವರ್ಣದ ವ್ಯಾಖ್ಯೆಯ ಬಲದಿಂದ ಬದುಕಿದೆ;
ಒಮ್ಮೆ ಕರ್ಮದ, ಶಾಸ್ತ್ರದ, ರೂಢಿಯ ಬಲದಿಂದ ಬದುಕಿದೆ
ಈಗ ಈ ಬಲಗಳ ಜೊತೆಗೆ
ರಾಜಕೀಯ ರಕ್ಕಸರ ಬಲದಿಂದಲೂ ಬಲಗೊಂಡು ಬದುಕುತ್ತಿಹೆ-
ಎಲೆ ಜಾತೀಯತೆಯ ಭೂತವೆ!

ನಿನ್ನ ಭೂತಚೇಷ್ಟೆಗೆ ಬಲಿಯಾದ ಭಾರತೀಯರಿಗೆ ಲೆಕ್ಕವಿದೆಯೆ?
ನಿನ್ನ ಕಾಲ್ತುಳಿತಕ್ಕೆ ಸಿಕ್ಕಿ ನುಗ್ಗಾಗದ ನಿರಪರಾಧಿಗಳಿಗೆ
ಎಣಿಕೆಯಿದೆಯೆ?
ನಿನ್ನ ಪಿಶಾಚಿತನಕ್ಕೆ ಎಣೆಯಿದೆಯೆ?
ನಿನ್ನ ನಿಶಾಚರತನಕ್ಕೆ ಕೊನೆಯಿದೆಯೆ?
ಸ್ವತಂತ್ರಧೀರ ಸಿದ್ಧೇಶ್ವರನ ಸಮಕ್ಷಮದಲ್ಲಿ
ನಿನ್ನನ್ನು ಸಜೀವ ಸುಡುವುದನ್ನು
ನೋಡುವಾಸೆ ನನಗೆ!

೨೭೪

ಸ್ವಾತಂತ್ರ್ಯಯೋಧರ ಶಿಬಿರಗಳಾಗಿ
ಶೋಭಿಸಿದ ಸ್ಥಳಗಳಲ್ಲಿಂದು
ತುಚ್ಛತಮ ಸ್ವಾರ್ಥದ ಸ್ವೇಚ್ಛಾ ತಾಂಡವ!
ಅರಮನೆಗಳಾಗಿ ಮೆರೆದ ಭವನಗಳಲ್ಲಿಂದು
ಕುಡುಕರೆದುರಿಗೆ ಬೆಲೆವೆಣ್ಗಳ ನಗ್ನ ನೃತ್ಯ!
ಕೆಲವು ಗುರುಮನೆಗಳಲ್ಲಿಯೂ
ತಾಮಸ ಜೀವನದ ನಿಶಾಚರ ನಾಟ್ಯ!
ಇಂದೀ ದೇಶ ಆಜೀಯನ್ ಕೊಟ್ಟಿಗೆ!
ಇದರೊಳಕ್ಕೆ
ವಿವೇಕದ ಆಲ್ಫಿಯಸ್ ಹರಿಸಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೭೫

ಪ್ರಜಾತಂತ್ರದ ಅಡ್ಡಣಿಗೆಗೆ
ಶಾಸಕಾಂಗ ಕಾರ್ಯಾಂಗ ನ್ಯಾಯಂಗಗಳೇ
ಮೂರು ಕಾಲುಗಳಯ್ಯ;
ಇವುಗಳಲ್ಲಿ ಯಾವುದೊಂದು ಮುರಿದರೂ
ಮುಕ್ಕಾದ ಮುಕ್ಕಾಲಿ ನೆಲಕ್ಕೆ ಉರುಳುವುದಯ್ಯ!
ಇದರ ಮೂರೂ ಕಾಲುಗಳನ್ನೂ ಗಟ್ಟಿಯಾಗಿ ಉಳಿಸಿ,
ಮೂರಕ್ಕೂ ಸಮಾನ ಗಮನವನ್ನು ಸಲ್ಲಿಸಿ,
ಪ್ರಜಾಪ್ರಭುತ್ವದ ತ್ರಿಪದಿಗೆಯ ಮೇಲೆ,
ದೇಶದ ಧ್ಯೇಯಾದರ್ಶಗಳ ತಟ್ಟೆಯಿಟ್ಟು

ಸಕಲ ಸದ್ಗತಿಯ ಸವಿಗೂಳನುಣ್ಣುವ
ಹದನ ತಿಳಿಸಯ್ಯ, ಹದುಳ ಬೆಳೆಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೨೭೬

ಅಲ್ಲಿ ಕ್ಷಿಪಣಿ, ಇಲ್ಲಿ ಕ್ಷಪಣಿ;
ಅಲ್ಲಿ ಸಮೃದ್ಧಿ-ಸಿರಿ, ಇಲ್ಲಿ ಹಸಿವೆಯ ಉರಿ;
ಅಲ್ಲಿ ವಿಜ್ಞಾನ-ತಂತ್ರಜ್ಞಾನ, ಇಲ್ಲಿ ಸ್ಥಳಪುರಾಣ ಪಾರಾಯಣ;
ಅಲ್ಲಿ ಸಮಯವೇ ನಿಧಿ-ನಿಧಾನ, ಇಲ್ಲಿ ಸಮಯ ಸಂಹಾರವೇ
ಅಧ್ಯವಸಾನ;
ಅಲ್ಲಿ ಕಾಯಕದ ಅನುಷ್ಠಾನ, ಇಲ್ಲಿ ಕಾಯಕವನ್ನು ಕುರಿತು
ಪ್ರವಚನ;
ಅಲ್ಲಿ ಮಾನವನಿಗಾಗಿ ಮಾನವನ ಸಮ್ಮಾನ,
ಇಲ್ಲಿ ದೇವ-ಧರ್ಮಗಳ ಹೆಸರಿನಲ್ಲಿ ಮಾನವನ ಅವಹೇಳನ!
ಇಲ್ಲಿಗೆ ಅಲ್ಲಿಯ ಲಲಿತ ಲೌಕಿಕತೆ ಬಂದು,
ಅಲ್ಲಿಗೆ ಇಲ್ಲಿಯ ಯೋಗಶ್ರೀ ಹೋಗಿ
ಎಲ್ಲರಿಗೂ ತುಂಬುಬಾಳು ಬರುವಂತೆ ಮಾಡಾ
ಸ್ವತಂತ್ರಧೀರ ಸಿದ್ಧೇಶ್ವರಾ!

೨೭೭

ರಾಷ್ಟ್ರದ ವರಮಾನದಲ್ಲಿ
ಮುಕ್ಕಾಲಿಗೂ ಮಿಕ್ಕಿದಷ್ಟನ್ನು
ಸೈನಿಕ, ಆರಕ್ಷಕ, ಶಾಸಕ, ಸರಕಾರಿ ನೌಕರರಿಗೆ ಖರ್ಚುಮಾಡಿ
ಕಲ್ಯಾಣ ರಾಜ್ಯವನ್ನು ಕಟ್ಟುವ ಭರವ ನೋಡಾ!
ಕಟ್ಟುವೆವೆನ್ನುವವರುಂಟು,
ಅದನ್ನು ನಂಬುವವರಿಗೂ ಲೆಕ್ಕವಿಲ್ಲ ನೋಡಾ!
ಹಲವು ಸಲ ಮೋಸ ಹೋಗಿಯೂ
ಮತ್ತೆ ಮತ್ತೆ ಮೋಸ ಹೋಗುವ
ನರಗುರಿಗಳು ಹೆಚ್ಚಿಹರೆಂದೇ
ಮುಂದುವರಿದಿದೆ ಮೋಸ ಈ ದೇಶದಲ್ಲಿ!
ಮಿಡುಕುತ್ತಿಹರು ಬಹುಜನರು ಮೋಸದ ಪಾಶದಲ್ಲಿ!
ಎಂದು ಮುಗಿವುದೋ ಈ ಮೋಸ-

ಈ ದೇಶದ ದುರ್ದೈವ ವಿಲಾಸ,
ಸ್ವತಂತ್ರಧೀರ ಸಿದ್ಧೇಶ್ವರಾ?

೨೭೮

ಪ್ರಜಾಪ್ರಭುತ್ವ ಬಂದರೇನಂತೆ-
ಪ್ರಜಾಪ್ರಭುದ್ಧತ್ವ ಬರಲಿಲ್ಲವಯ್ಯ!
ಕುರಿಗಾಹಿಗಳು ಬದಲಾದರೂ
ಕುರಿಗಳು ಬದಲಾಗಲಿಲ್ಲ!
ತೋಳಗಳ ಗುರುತಿಸಲು ಕಲಿಯಲಿಲ್ಲ!
ತಮ್ಮನ್ನು ಬಡತನದಲ್ಲಿಟ್ಟವರನ್ನೇ
ತಮ್ಮಪಾಲಿನ ದೇವರೆಂದು ತಿಳಿವ ಬಡವರನ್ನು,
ತಮ್ಮನ್ನು ನಿರಕ್ಷರಿಗಳನ್ನಾಗಿ ಉಳಿಸಿದವರನ್ನೇ
ತಮ್ಮವಿಮೋಚಕರೆಂದು ನಂಬಿರುವ ನಿರಕ್ಷರಿಗಳನ್ನು,
ತಮ್ಮನ್ನು ನಿರುದ್ಯೋಗಿಗಳನ್ನಾಗಿ ಮಾಡಿದವರನ್ನೇ
ತಮ್ಮ ಉದ್ಧಾರಕನೆಂದು ನಂಬಿರುವ ನಿರುದ್ಯೋಗಿಗಳನ್ನು
ಕಂಡು ಕನಿಕರಿಸುತ್ತಿಹೆ!
ಇನ್ನೇನ ಮಾಡಬಲ್ಲೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

೨೭೯

ಹಿಂದೆ ಜನಾಧಿಪರ ಸುತ್ತು ವಂದಿ ಮಾಗಧರಿದ್ದಂತೆ
ಇಂದು ಜನನಾಯಕರ ಸುತ್ತಲೂ ಹೊಗಳುಭಟ್ಟರು ನೋಡಾ!
ಆಳಿಕೆ ಬದಲಾದರೂ ಆಳುತನ ತೊಲಗಲಿಲ್ಲ;
ಭಟ್ಟಂಗಿತನ, ಬಾಲಬಡಿಕತನ ನಿಲ್ಲಲಿಲ್ಲ!
ಮಹದ್ ವ್ಯಕ್ತಿತ್ವಕ್ಕೆ ಮಣಿವುದು ತಪ್ಪಲ್ಲ-
ಆದರೆ ಅನ್ಯಾಯ ಮಾರ್ಗ ಅನರ್ಹ ಪ್ರಚಾರಗಳು ರೂಪಿಸಿದ
ಸಗಣಿಯ ಬೆನಕಗಳಿಗೆ
ಶರಣಾಗತರಾಗಬೇಕೇನಯ್ಯ?
ಹೆಂಡದ ತೀರ್ಥ, ಹಣದ ಪ್ರಸಾದ ಸಿಕ್ಕುವುವೆಂದರೆ
ಸಗಣಿಯ ಬೆನಕಗಳಿಗೇಕೆ-
ಅಮೇಧ್ಯದ ಮೂರ್ತಿಗಳ ಮುಂದೂ
ದಿಂಡುರುಳಲು ಹೇಸದ ಭಂಡರು
ಇಲ್ಲಿರುವರಯ್ಯ-ಸ್ವತಂತ್ರಧೀರ ಸಿದ್ಧೇಶ್ವರಾ!

## ೨೮೦

ಮೊನ್ನೆ ಮೊನ್ನೆ ಬಾಯ್ಗೆ ಬಂದಂತೆ ಬೈದವರ
ಇಂದು ಬಾಯ್ತುಂಬ ಹೊಗಳುತ್ತಿಹರಯ್ಯ;
ಮೊನ್ನೆ ಮೊನ್ನೆ ಗಂಟಲ ಹರಿವಂತೆ ಪರಾಕಿಸಿದವರ
ಇಂದು ತೆಗಳುತ್ತಿಹರಯ್ಯ!
ಬೈದರೆ ತಮ್ಮ ಬೇಳೆ ಬೇಯುತ್ತಿದ್ದರೆ ಬೈಯುತ್ತಾರೆ;
ಹೊಗಳಿದರೆ ಹೋಳಿಗೆ ತುಪ್ಪದಲ್ಲಿ ಬೀಳುತ್ತಿದ್ದರೆ ಹೊಗಳುತ್ತಾರೆ!
ಇವರ ಹೊಗಳಿಕೆ ಹೇಯ, ತೆಗಳಿಕೆ ತುಚ್ಛ;
ಎರಡಕ್ಕೂ ಹಚ್ಚಬೇಕು ಕಿಚ್ಚ!
ಎಷ್ಟು ಜನ ಸಮಯಸಾಧಕರು,
ಅಷಾಢಭೂತಿಗಳು, ಮುಖವಾಡಧಾರಿಗಳು,
ಕುಟಿಲರು, ಕಪಟಿಗಳು, ಕಾರಸ್ಥಾನಿಗಳು,
ಕಾಟುಗರು, ಕೆತ್ತುಗರು, ಬೂಟಕರು, ನಾಟಕರು ಈ ದೇಶದಲ್ಲಿ!
ಈ ಸಂಖ್ಯೆಯಲ್ಲಿ ಇವರಿರುವುದು ಇನ್ನಾವ ದೇಶದಲ್ಲಿ–
ಸ್ವತಂತ್ರಧೀರ ಸಿದ್ಧೇಶ್ವರ?

## ೨೮೧

ಶಾಸನ ರಚಿಸುವವರೇ ಶಾಸನ ಉಲ್ಲಂಘಿಸುವವರೀಗ!
ಎಷ್ಟು ಹೆಚ್ಚು ಶಾಸನಗಳನ್ನು ಉಲ್ಲಂಘಿಸುವನೋ
ಅಷ್ಟು ದೊಡ್ಡ ನಾಯಕನವನೀಗ!
ನಾಯಕತ್ವದ ನಿರ್ಣಯಕ್ಕೆ ಈಗ ಇದೇ ಮಾನದಂಡ;
ಒಂದೂ ಶಾಸನ ಮುರಿಯದ ಸಭ್ಯನೇ ಷಂಡ!
ತಾನೂ ಶಾಸನಗಳ ಉಲ್ಲಂಘಿಸಿ
ಉಲ್ಲಂಘಿಸುವ ಹಿಂಬಾಲಕರನ್ನು ರಕ್ಷಿಸುವವ ಪುಢಾರಿ!
ಮೊದಲು ಪೆಂಡಾರಿ, ಈಗ ಪುಢಾರಿ
ಈ ಪುಢಾರಿಗಳ ಪಿಡುಗಿನಿಂದ
ನಮ್ಮನೆಂದು ಪಾರುಮಾಡುವಿಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೮೨

ಲಂಚ ಪಾಪವಲ್ಲ, ಕುಟಿಲ ಸಂಚು ಪಾಪವಲ್ಲ,
ವಂಚನೆ ಪಾಪವಲ್ಲ, ವ್ಯಭಿಚಾರ ಪಾಪವಲ್ಲ,

ಶೋಷಣೆ ಪಾಪವಲ್ಲ, ಪಕ್ಷಾಂತರ ಪಾಪವಲ್ಲ–
ರಾಜಕಾರಣದಲ್ಲಿ ಯಾವುದೂ ಪಾಪವಲ್ಲವಯ್ಯ!
ಸಾಮಾನ್ಯರು ಈ ತಪ್ಪು ಮಾಡಿದರೆ ಶಿಕ್ಷೆ–
ರಾಜಕಾರಣಿಗಳು ಮಾಡಿದರೆ ಭದ್ರ ರಕ್ಷೆ!
ನಿನ್ನಲ್ಲಿಯೂ ಇವರಿಗೆ ಇಲ್ಲವೆ ಶಿಕ್ಷೆ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೮೩

'ತತ್ತ್ವಮಸಿ'ಯೆಂದು ಘೋಷಿಸಿದ ಈ ದೇಶದಲ್ಲಿ
ಇನ್ನೂ ಅಸ್ಪೃಶ್ಯತೆಯ ಘೋಷಿಸುತ್ತಿರುವ ತಲೆತಿರುಕರು;
'ವಿಶ್ವಭಾರತಿ'ಯ ಭವ್ಯ ಕಲ್ಪನೆ ನೀಡಿದ ರಾಷ್ಟ್ರದಲ್ಲಿ
ಇನ್ನೂ ಆ 'ಸ್ತಾನ' ಈ 'ಸ್ತಾನ'ಗಳನ್ನು ಕೇಳುತ್ತಿರುವ
ಮನೆಮುರುಕರು;
'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಸಾರಿದ ಈ ಭೂಮಿಯಲ್ಲಿ
ಇನ್ನೂ ಮತದಿಂದ ಮತಕ್ಕೆ ಜಿಗಿವ ಮತಿಗೇಡಿಗಳು;
'ಆ ಜಲಧಿಯನೆ ಜಿಗಿದ ಹನುಮ' ಹುಟ್ಟಿದ ಈ ನೆಲದಲ್ಲಿ
ಪಕ್ಷದಿಂದ ಪಕ್ಷಕ್ಕೆ ಹಾರುವ ಮಾನವ–ಮರ್ಕಟಗಳು;
'ಸಂಸ್ಕೃತದೊಳಿನ್ನೇನು' ಎಂದು ಕೇಳಿದ ನಾಡಿನಲ್ಲಿಯೇ
ಇಂಗ್ಲೀಷಿನ ಪಾದಪೂಜೆ ಮಾಡುತ್ತಿರುವ ಮಾನಗೇಡಿಗಳು;
ಸ್ವತಂತ್ರಧೀರ ಸಿದ್ಧೇಶ್ವರ,
'ಓಂ ದೇವಾಯ ಜನ್ಮನೇ' ಎಂದು ಪ್ರಾರ್ಥಿಸಿದ ಈ
ಭರತಾವನಿಯಲ್ಲಿಯೇ
ದೇವನಾಂ ಪ್ರಿಯರ ದರಬಾರ ನೋಡಾ!

## ೨೮೪

ಒಬ್ಬ ನೀರೋನಿಂದ ರೋಮ ನಗರದ
ರೋಮ ರೋಮ ತಲ್ಲಣಿಸಿತು–
ಭಾರತದಲ್ಲಿಂದು ಊರೂರಿಗೂ ನೀರೋಗಳಯ್ಯ!
ಒಬ್ಬ ಶಿಖಂಡಿಯಿಂದ ಅತ್ಯುನ್ನತಿಯ ಅಮರಸಿಂಧೂದ್ಭವನ
ಕೊನೆಯಾಯಿತು–
ಇಂದಿಲ್ಲಿ ಪಂಚಾಯತಿಗಳಿಂದ ಪಾರ್ಲಿಮೆಂಟಿನವರೆಗೆ
ಶಿಖಂಡಿಗಳು ಸಿಕ್ಕುವರಯ್ಯ!

ಒಬ್ಬ ತೊಘಲಖನಿಂದ ಈ ದೇಶವೆಲ್ಲ ಅಸ್ತವ್ಯಸ್ತವಾಗಿದ್ದಿತು-
ಈಗ ತೊಘಲಖರಿಲ್ಲದ ಸ್ಥಳವಾವುದಯ್ಯ?
ಹಿಂದೆ ಘೋರಾರಣ್ಯಗಳಲ್ಲಿ ಮಾತ್ರ ದರೋಡೆಗಾರರಿದ್ದರು-
ಈಗ ಓಣಿ ಓಣಿಗೆ ದರೋಡೆಗಾರರಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ವಿಶ್ವತೋಪಾದನೆಂಬುದು ನಿಜವಾದರೆ
ತುಳಿಯಯ್ಯ ಒಮ್ಮೆಗೆ ಇವರನ್ನೆಲ್ಲಾ!

## ೨೮೫

ಕಟ್ಟಿರುವೆಗಳು ಮುತ್ತಿರುವ ಬೆಲ್ಲದಚ್ಚು
ಸಂಕಷ್ಟಗಳು ಸುತ್ತಿರುವ ಭಾರತದ ಬಿಡುಗಡೆಯಿಂದು!
ಹೇಗೆ ಆಗಸ್ಟ್ ಹದಿನೈದರ ಹಬ್ಬವನ್ನಾಚರಿಸಲಿ?
ಹೊರಬಿದ್ದು ಯಾವ ಮುಖ ತೋರಿಸಲಿ?
ಯಾವ ಬಾಯಿಂದ ರಾಷ್ಟ್ರಗೀತೆ ಹಾಡಲಿ?
ಬಿಡುಗಡೆಯ ಇಂದಿನ ದುರವಸ್ಥೆಗೆ
ನಾನೂ ನನ್ನ ಮಟ್ಟಿಗೆ ಹೊಣೆಗಾರ-
ಎಲ್ಲರೊಡನೆ ನಾನೂ ತಪ್ಪುಗಾರ!
ಎಲ್ಲರೊಡನೆ ನನ್ನ ಹೆಸರೂ ಕೆಟ್ಟಿದೆ,
ನನ್ನ ಮುಖವೂ ಕಪ್ಪಿಟ್ಟಿದೆ!
ಯಾವ ಉಲ್ಲಾಸದೊಡನೆ
ರಾಜಭವನದ ಉಪಾಹಾರಕ್ಕೆ ಹೋಗಲಿ?
ನಿರಾಹಾರಿಗಳು ಕೋಟಿ ಕೋಟಿ ಇರುವಾಗ
ನಾನೆಂತು ರಾಜೋಪಹಾರ ಸ್ವೀಕರಿಸಲಿ?
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ತೊರೆದೆನಿಂದು
ಗರೀಬರ ಗೇಲಿಯಂತಿರುವ
ಉಳ್ಳವರ ಅಟ್ಟಹಾಸದ
ಉಪಾಹಾರ ಸಮಾರಂಭಗಳನ್ನು!

## ೨೮೬

ದಾಸ್ಯಕೂಪಕ್ಕೆ ಬೀಳಲು
ಯಾವ ಸಿದ್ಧತೆಯೂ ಬೇಕಿಲ್ಲ;

ಸ್ವಾತಂತ್ರ್ಯದ ಸ್ವರ್ಗಕ್ಕೇರಲು
ಅಪಾರ ಸಿದ್ಧತೆ ಬೇಕಯ್ಯ!
ಅಲ್ಲಿಯೇ ಉಳಿದಿರಲು
ದಿನದಿನದ ದುಡಿತ,
ಅನವರತ ಜಾಗೃತಿ ಬೇಕಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೮೭

ಈ ದೇಶದ ಭವಿತವ್ಯವನ್ನು
ಯಾರ ಕೈಯಲ್ಲಿ ಇಟ್ಟಿಹೆಯಯ್ಯ,
ಯಾರ ಕಾಪಿಗೆ ಕೊಟ್ಟಿಹೆಯಯ್ಯ?
ಹಿಂದಿನ ಪೀಳಿಗೆ ಕೊಳೆತು ನಾರುತ್ತಿದೆ;
ಇಂದಿನ ಪೀಳಿಗೆ ಹಳಸಿ ಸೋರುತ್ತಿದೆ;
ಮುಂದಿನ ಇನ್ನೊಂದು ಪೀಳಿಗೆಯೂ
ಇದಾಗಲೇ ಬಾದು ಆಗಿದೆಯಯ್ಯ!
ಅದರ ಮುಂದಿನ ಪೀಳಿಗೆಯ
ಭವಿಷ್ಯ ಬರೆಯಬಲ್ಲವರಾರು?
ಆಸೆಯಿಂದ, ಮಸಿಯಿಂದ, ಕೃಷಿಯಿಂದ,
ಉದ್ಯೋಗ, ಉದ್ಯಮ, ಶ್ರಮ, ಸಂಶೋಧನೆಗಳಿಂದ
ಭಾರತದ ಭವಿತವ್ಯ ರೂಪಿಸುವವರ ಹೆಚ್ಚಿಸು
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೮೮

ಸುತ್ತಲೂ ಸೂರೆಯಾಗಿರುವ ಸೌರಶಕ್ತಿಯ ಬಳಸಿಕೊಳ್ಳದೆ
ಅಬ್ಜಗಟ್ಟಲೆ ಉತ್ಪಾದನಾ ನಷ್ಟ ಸಹಿಸುತ್ತಿಹೆವಯ್ಯ;
ಎತ್ತಲೂ ಕೆಲಸವಿಲ್ಲದೆ ಕೊಳೆಯುತ್ತಿಹ ಮಾನವಶಕ್ತಿಯ ಬಳಸಿ
ಕೊಳ್ಳದೆ
ಕೋಟ್ಯನುಕೋಟಿ ಮಾನವ ದಿನಗಳ ಕಳೆದುಕೊಳ್ಳುತ್ತಿಹೆವಯ್ಯ;
ಎತ್ತೆತ್ತಲೂ ಸಿಕ್ಕುವ ನಿರಕ್ಷರಿಗಳಿಗೆ ವಿದ್ಯೆ ಕಲಿಸಲಾಗದೆ
ಅಳತೆಗೆ ಸಿಕ್ಕದ ಮಾನವಮತಿಹಾನಿಯನ್ನು ಸಹಿಸುತ್ತಿಹೆವಯ್ಯ!
ನಾವು ಸಹಿಸುತ್ತಿರುವ ನಷ್ಟವೆಷ್ಟೆಂಬುದ
ನೀನಾದರೂ ಲೆಕ್ಕಮಾಡಬಲ್ಲೆಯೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

## ೨೮೯

ಎಲ್ಲರ ವಿಶ್ವಾಸ, ತನ್ನ ಆತ್ಮವಿಶ್ವಾಸ–
ಎರಡನ್ನೂ ಕಳಕೊಂಡ ಸರಕಾರಕ್ಕೆ
ಅಶ್ರುವಾಯು, ಕೋವಿಗಳ ವಿಶ್ವಾಸವೇ ವಿಶ್ವಾಸ;
ಮದ್ದು ಗುಂಡುಗಳ ಧೈರ್ಯವೇ ಧೈರ್ಯ!
ಕೋಟಿ ಕೋಟಿ ಜನರು ಕೊಟ್ಟ ಮ್ಯಾಂಡೇಟ್ಟನ್ನು,
ಇಟ್ಟ ವಿಶ್ವಾಸವನ್ನು ನುಚ್ಚುನುರಿ ಮಾಡಿ
ಪೋಲಿಸರ ರಕ್ಷಣೆಯಲ್ಲಿ,
ಬುಲೆಟ್–ಪ್ರೂಫ್ ಕಾರುಗಳಲ್ಲಿ–
ಅವುಗಳಲ್ಲಿಯೂ ನೆಚ್ಚಿಗೆಯಿಲ್ಲದೆ
ಹೆಲಿಕಾಪ್ಟರಿನಲ್ಲಿ ಓಡಾಡುವ
ಪ್ರಜಾಮಂತ್ರಿಗಳ ಪೀಕಲಾಟ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೯೦

ನಮ್ಮ ಖಾಸಗಿ ಜೀವನ ನೋಡಬೇಡಿರಿ,
ನಮ್ಮ ಸಾರ್ವಜನಿಕ ಜೀವನ ಮಾತ್ರ ನೋಡಿರಿ,
ಎನ್ನುವ ಮಂತ್ರಿ ಮಹಾಶಯರೇ–
ನಿಮ್ಮ ಸಾರ್ವಜನಿಕ ಜೀವನ ಮುಗಿಯುವುದು ಯಾವಾಗ,
ನಿಮ್ಮ ಖಾಸಗಿ ಜೀವನ ಪ್ರಾರಂಭವಾಗುವುದು
ಯಾವಾಗ
ದಯವಿಟ್ಟು ತಿಳಿಸುವಿರಾ?
ನಿಮ್ಮದರಬಾರು ಮೊದಲಾಗುವುದೇ ಮಧ್ಯರಾತ್ರಿಯ ಮೇಲೆ,
ನಿಮ್ಮ ಕಾರ್ಯಕೇಂದ್ರಗಳಲ್ಲೆಲ್ಲ ಹಣ ಹೆಂಡ ಹೆಣ್ಣುಗಳ ಲೀಲೆ!
ಸ್ವತಂತ್ರಧೀರ ಸಿದ್ಧೇಶ್ವರ,
ಇಂಥ ಸಂತತಿಯ ನಿಯಂತ್ರಿಸಬಲ್ಲ
ಜನನ ನಿಯಂತ್ರಣಾಧಿಕಾರಿಗಳ ಕಳಿಸಯ್ಯ!

## ೨೯೧

ಆರ್ಥಿಕ ಕ್ಷೇತ್ರದ ಹಣಹದ್ದುಗಳು
ರಾಜಕೀಯ ಕ್ಷೇತ್ರದ ರಣಹದ್ದುಗಳು
ಭಾರತದ ಭಾಗ್ಯವಿಮಾನಗಳ ಬಡಿದುರುಳಿಸುತ್ತಿವೆಯಯ್ಯ!

ನೌಕರಶಾಹಿಯ ಗಿಡಗಗಳು
ಪುರೋಹಿತಶಾಹಿಯ ಶರಭಗಳು
ದುರ್ಬಲರ ಕುಕ್ಕಿ ಮುಕ್ಕುತ್ತಲಿವೆಯಯ್ಯ!
ಎತ್ತಲೂ ಕೋರೆ ಮಸೆಯುತ್ತಿರುವ ಕ್ರೂರ ವರಾಹಗಳೇ,
ಸುತ್ತಲೂ ನಖದಂಷ್ಟ್ರಹೊಸೆಯುತ್ತಿರುವ ಘೋರವ್ಯಾಘ್ರಗಳೆ!
ಎಂಥ ದೇಶವಿದು
ಎಂಥ ನರಪಶುಗಳ ಆವಾಸವಾಯಿತ್ತಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೯೨

ಹಣವಿದೆಯೆಂದು
ಅಧಿಕಾರ ಕೊಳ್ಳುತ್ತಲಿದ್ದಾರೆ;
ಅಧಿಕಾರವಿದೆಯೆಂದು
ಹಣ ಕೊಳ್ಳೆಹೊಡೆಯುತ್ತಿದ್ದಾರೆ!
ಹಣ–ಅಧಿಕಾರ, ಅಧಿಕಾರ–ಹಣ,
ಇವುಗಳ ಮೇಲಾಟದಲ್ಲಿ ದೇಶವಾಯ್ತು ಹೆಣ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೯೩

ಇಂದು ಸಮಸ್ತ ಹಿಂದೂಸ್ತಾನವೇ
ಹಿರಿಯ ಹರಾಜುಖಾನೆ!
ಎಲ್ಲರೂ, ಎಲ್ಲರೂ ಹರಾಜಿಗಿಲ್ಲಿ–
ಏನೂ ಸಿಕ್ಕದು ಮುಲಾಜಿಗಿಲ್ಲಿ!
ರಾಷ್ಟ್ರಪತಿಯ ಅಂತಃಸಾಕ್ಷಿ ಹರಾಜಿಗಿದೆ,
ಪ್ರಧಾನಿ ಪ್ರಸಾದ ಹರಾಜಿಗಿದೆ,
ಮಂತ್ರಿಗಳ ರುಜುವಾತುಗಳು ಹರಾಜಿಗಿವೆ,
ಶಾಸನಕಾರನ ಸಿಫಾರಸುಗಳು ಹರಾಜಿಗಿವೆ,
ಅಧಿಕಾರಿಗಳ ಆಜ್ಞೆಗಳು ಹರಾಜಿಗಿವೆ,
ನ್ಯಾಯಾಲಯಗಳ ತೀರ್ಪುಗಳು ಹರಾಜಿಗಿವೆ,
ಜನರ ಮಾನಪತ್ರಗಳು ಹರಾಜಿಗಿವೆ,
ಶಿಶುವಿಹಾರದಿಂದ ವಿಶ್ವವಿದ್ಯಾಲಯದವರೆಗೆ
ಪ್ರವೇಶಗಳು ಹರಾಜಿಗಿವೆ,

ಲೋಕಸೇವಾ ಆಯೋಗದ
        ನೇಮಕಾತಿಗಳು ಹರಾಜಿಗಿವೆ!
ಎಲ್ಲಕ್ಕೂ ಸರಕಾರಿ ಸವಾಲು,
ಇದು ಓಪೆನ್-ಟು-ಆಲ್ ಲಿಲಾವು!
ಏಕ್ ಬಾರ್, ದೋ ಬಾರ್, ತೀನ್ ಬಾರ್-
'ಬಿಡ್' ಬೆಸಸು,
ಸ್ವತಂತ್ರಧೀರ ಸಿದ್ಧೇಶ್ವರ!

೨೯೪

ಪ್ರಜಾಸತ್ತೆಯ ದಿವಾಳಿ,
ರಾಜಕಾರಣದ ದಿವಾಳಿ
ಆಡಳಿತದ ದಿವಾಳಿ,
ಶಾಸನ ಸಭೆಗಳ ದಿವಾಳಿ,
ನ್ಯಾಯಾಲಯಗಳ ದಿವಾಳಿ,
ಶಿಕ್ಷಣ-ಸಹಕಾರಕ್ಷೇತ್ರಗಳ ದಿವಾಳಿ,
ಸರ್ವವಲಯಗಳಲ್ಲಿಯೂ ದಿವಾಳಿ!
ಈ ದಿವಾಳಿಗಳೆಲ್ಲ
ನೈತಿಕ ದಿವಾಳಿಯ ಶನಿಸಂತಾನ ನೋಡಾ-
                ಸ್ವತಂತ್ರಧೀರ ಸಿದ್ಧೇಶ್ವರಾ!

೨೯೫

ಕಾಲ ಕ್ರಮದಲ್ಲಿ ಕೆಟ್ಟ ಅರ್ಥ ಪಡೆದ
ಒಳ್ಳೆಯ ಶಬ್ದಗಳು ಯಾವ ದೇಶದಲ್ಲಿಲ್ಲ?
ನಮ್ಮದೇಶದಲ್ಲಿ ಮಾತ್ರ
ಇಂಥವುಗಳಿಗೆ ಲೆಕ್ಕವೇ ಇಲ್ಲ!
ದೇವರು, ಧರ್ಮ, ದಾನ, ದೇಶಭಕ್ತಿ, ಸತ್ಯ, ಅಹಿಂಸೆ,
                    ಸರ್ವೋದಯ-
ಇಲ್ಲಿ ಹೊಲೆ ಬಳಕೆಗೆ ಒಳಗಾಗದ
ಶಬ್ದವಾವುದಾದರೂ ಉಳಿದಿದೆಯೇನಯ್ಯ?
ಲಂಚ, ಸುಲಿಗೆ, ವ್ಯಭಿಚಾರ, ಕುಡಿತ ಮೊದಲಾದುವು
        ಗೌರವಾಸ್ಪದವಾಗುತ್ತ
ಇವು ಗೌರವಹೀನವಾಗುತ್ತ ನಡೆದಿರುವುದು

ದುರಂತಗಳಲ್ಲಿ ದುರಂತವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೯೬

‘ಅಕ್ಷರಗಳಲ್ಲಿ ಅಕಾರ ನಾನು’
ಎಂದಿರುವೆಯಂತೆ ನೀನು;
ಅಂತೆಯೇ, ಅಕಾರವೊಂದನ್ನೇ
ನಂಬಿರುವೆವು ನಾವು!
ಒಳ್ಳೆಯದೆನ್ನುವ ಎಲ್ಲದಕ್ಕೂ–
ಧರ್ಮ, ನೀತಿ, ನ್ಯಾಯ, ಶಾಂತಿ, ಸತ್ಯ ಇತ್ಯಾದಿ ಎಲ್ಲವಕ್ಕೂ
ಹಿಂದೆ ‘ಅ’ ಸೇರಿಸುತ್ತ ಹೊರಟಿಹೆವು!
ಯಾರು ಅಳಿಸಬಲ್ಲವರು
ಈ ಅಕಾರಗಳನ್ನು–
ಅವು ಸೃಷ್ಟಿಸಿಹ ವಿಕಾರಗಳನ್ನು,
ಸ್ವತಂತ್ರಧೀರ ಸಿದ್ಧೇಶ್ವರ?

## ೨೯೭

“ಈ ಮಂತ್ರಿ ಕಚ್ಚೆಹರುಕ” ಎಂದರೆ
“ಪಾಪ, ಅವನೂ ಗಂಡಸಲ್ಲವೆ?” ಎಂದು ಉತ್ತರಿಸುವರಯ್ಯ;
“ಈ ಮಂತ್ರಿ ಲಂಚಬಡುಕ” ಎಂದರೆ
“ಪಾಪ, ಬಹಳ ಖರ್ಚಿನ ಸ್ಥಾನವಿದು” ಎಂದು
ಸಮರ್ಥಿಸುವರಯ್ಯ;
“ಈ ಮಂತ್ರಿ ಕುಡುಕ” ಎಂದರೆ
“ದುಡಿದು ಸುಸ್ತಾದಾಗ ಕುಡಿದರಾವ ತಪ್ಪು?” ಎಂದು
ಕೇಳುವರಯ್ಯ;
“ಈಮಂತ್ರಿ ಕೊಲೆಗಡುಕ” ಎಂದರೆ,
“ಪಾಪ, ಹಗೆಗಳು ಹೆಚ್ಚು ಅವನಿಗೆ” ಎಂದು
ಅನುಮೋದಿಸುವರಯ್ಯ! ಒಟ್ಟಿನಲ್ಲಿ, ಮಂತ್ರಿ ತಪ್ಪು
ಮಾಡುವುದೇ ಸಾಧ್ಯವಿಲ್ಲ–
ಒಪ್ಪು ಅವನು ಮಾಡುವುದೆಲ್ಲ!
ಹೀಗೆನ್ನುವ ಹೊಗಳುಭಟ್ಟರೇ ಸುತ್ತಲೂ ಇರುವಾಗ
ಮದ್ಯ ಕುಡಿದ, ಚೇಳು ಕಡಿದ

ಮರ್ಕಟರಾಗರೇನಯ್ಯ; ಮಂತ್ರಿಗಳು,
ಸ್ವತಂತ್ರಧೀರ ಸಿದ್ಧೇಶ್ವರ?

## ೨೯೮

ಅಂತುಳೆ ವಿಶ್ವಸ್ಥ ನಿಧಿಗಳ ದುರ್ವಿಧಿ ಬಂದಿದೆ ದೇಶಕ್ಕೆ:
ಬಿಳಿಯ ಆನೆಗಳ ಮುತ್ತಿಗೆ ಸಾರ್ವಜನಿಕ ಕೋಶಕ್ಕೆ;
ರಾಷ್ಟ್ರದ ಆದಾಯದ ಬಹುಪಾಲು ಪ್ರಜಾತಂತ್ರದ ವೇಷಕ್ಕೆ:
ಜಾತ್ಯತೀತತೆಯ ನಾಮಕರಣ ಜಾತೀಯ ದ್ವೇಷಕ್ಕೆ:
ಸುಖೀರಾಜ್ಯದ ಅವಕುಂಠನ ನಿರಂತರ ಕ್ಲೇಶಕ್ಕೆ;
ರಾಷ್ಟ್ರೀಯತೆಯ ಮುಖವಾಡ ಆಳುವವರ ಮೋಸಕ್ಕೆ;
ಸ್ವತಂತ್ರ ಭಾರತದ ಖಳಚತುಷ್ಟಯರಾದ
ಸ್ವಾರ್ಥಿ ರಾಜಕಾರಣಿಗಳು, ಶೋಷಕ ಬಂಡವಾಳಿಗರು,
ಭ್ರಷ್ಟ ಅಧಿಕಾರಿಗಳು, ವಂಚಕ ವ್ಯಾಪಾರಿಗಳು
ಬಿಡುಗಡೆಯ ಕಾಳನೊಕ್ಕಿಕೊಂಡು
ಬಿಟ್ಟಿಹರು ತುಡುಗು ದನಗಳ ಬೂಸಾಕ್ಕೆ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೯೯

ಯಾವುದನ್ನೂ ಬುಡದಿಂದ ಮೇಲಕ್ಕೆ ಕಟ್ಟುವರು, ಬಲ್ಲವರು;
ಮೇಲಿನಿಂದ ಕೆಳಕ್ಕೆ ಕಟ್ಟ ಹೊರಟಿಹರಯ್ಯ, ಯೋಜನಾ
ಬೃಹಸ್ಪತಿಗಳು!
ಜಲಾಶಯಗಳಿಂದ ಹೊಲಗದ್ದೆಗಳಿಗೆ ನೀರು ಹರಿವುದು
ನೈಸರ್ಗಿಕವಾದುದು,
ಹೊಲಗದ್ದೆಗಳ ನೀರೂ ಜಲಾಶಯಕ್ಕೆ ಹರಿಯಲೆನ್ನುವರಯ್ಯ,
ಕೇಂದ್ರೀಕರಣವಾದಿಗಳು!
ವ್ಯಕ್ತಿವ್ಯಕ್ತಿಯ ವಿಕಾಸವೇ ಸರಕಾರದ ಗುರಿಯೆಂದಿದ್ದರು,
ಮಾನವತಾವಾದಿಗಳು,
ಸರಕಾರದ ವಿಕಾಸವೇ ವ್ಯಕ್ತಿಯ ಗುರಿಯಾಗಬೇಕೆನ್ನುವರಯ್ಯ,
ಸತ್ತಾವಾದಿಗಳು–
ಸ್ವತಂತ್ರಧೀರ ಸಿದ್ಧೇಶ್ವರ!

೩೦೦

ರೋಗ ನಿವಾರಕ ಶಕ್ತಿಯಿದ್ದರೆ ಮಾತ್ರ ಅದು ಔಷಧ,
ರೋಗ ವಿವರ್ಧಕವಾದುದೂ ಔಷಧವೇನಯ್ಯ?
ಅಂಧಶ್ರದ್ಧೆಗಳನ್ನು ಅಳಿಸಿದರೆ ಮಾತ್ರ ಅದು ಜ್ಞಾನ,
ಅಂಧಶ್ರದ್ಧೆಗಳನ್ನು ಬೆಳಸುವುದೂ ಜ್ಞಾನವೇನಯ್ಯ?
ಬಂಧನಗಳನ್ನು ಹರಿಯುವುದು ಮಾತ್ರ ಬಿಡುಗಡೆ,
ಬಂಧನಗಳನ್ನು ಬಲಿಸುವುದೂ ಬಿಡುಗಡೆಯೇನಯ್ಯ?
ವಿಷಮತೆಗಳನ್ನು ಕಳೆಯುವುದು ಮಾತ್ರ ಸಾಮ್ಯವಾದ,
ವಿಷಮತೆಗಳನ್ನು ಹೆಚ್ಚಿಸುವುದೂ ಸಾಮ್ಯವಾದವೇನಯ್ಯ??
ಸ್ವತಂತ್ರಧೀರ ಸಿದ್ಧೇಶ್ವರಾ,
ಬಡವರನ್ನು ಬದುಕಿಸುವುದು ಮಾತ್ರ ಸರಕಾರ,
ಬಡವರನ್ನು ಕೊಲ್ಲುವುದೂ ಸರಕಾರವೇನಯ್ಯ?

೩೦೧

ಗೋವಿನ ಪೂಜೆ ಮಾಡಿಯಾರು,
ಹಾಲಿಗೆ ಹಾಲನ್ನು ಎರೆದಾರು,
ಇರುವೆಗೆ ಸಕ್ಕರೆ ಹಾಕಿಯಾರು,
ಕಲ್ಲಿಗೆ ಎಡೆಯನ್ನು ಹಿಡಿದಾರು,
ಬೆಂಕಿಗೆ ತುಪ್ಪವನ್ನು ಸುರಿದಾರು,
ನಿರ್ಜೀವಕ್ಕೆ ಜೀವದ ಬಲಿಯನ್ನಾದರೂ ಕೊಟ್ಟಾರು–
ಹಸಿದ ಜೀವಿಗಳಿಗೆ ಅಶನವೀಯರಯ್ಯ
ಡಾಂಭಿಕ ಧರ್ಮಾನುಯಾಯಿಗಳು!
ಹರನನ್ನೇ ತಿರುಕನನ್ನಾಗಿಸಿ ತಿರಿಕೆ ತಿನ್ನಿಸಿದವರು,
ಹರಿಯನ್ನೇ ಹಂದಿಯಾಗಿಸಿ ನರಕ ತಿನ್ನಿಸಿದವರು
ನರರಿಗೆ ನೆರವಾಗುವರೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

೩೦೨

ಭಿಕ್ಷೆ ನೀಡಿ ಬದುಕಲು ನಾಚಿಕೆಯಿಲ್ಲ,
ಭಟ್ಟಂಗಿಗಳಾಗಿ ಬದುಕಲು ನಾಚಿಕೆಯಿಲ್ಲ,
ಪಂಚಾಂಗ ಹೇಳಿ, ಸುಳ್ಳುಸಾಕ್ಷಿ ಹೇಳಿ ಬದುಕಲು ನಾಚಿಕೆಯಿಲ್ಲ,
ಚಂದಾ ತಿಂದು, ಸಾರ್ವಜನಿಕಹಣ ಸ್ವಾಹಾಮಾಡಿ

ಬದುಕಲು ನಾಚಿಕೆಯಿಲ್ಲ,
ಶೋಷಣೆಯ ರಕ್ತ ಕುಡಿದು,
ಮೋಸದ ಮಾಂಸ ಭಕ್ಷಿಸಿ,
ಸ್ನೇಹದ ಕರುಳ ಕಬಳಿಸಿ
ಬದುಕಲು ನಾಚಿಕೆಯಿಲ್ಲ,
ದುಡಿದುಣ್ಣಲು ನಾಚಿಕೆಯಯ್ಯ
ಸ್ವಘೋಷಿತ ಶ್ರೇಷ್ಠಕುಲದವರಿಗೆ!
ಶತಶತಮಾನಗಳಿಂದ ಸುಲಿಗೆ ತಿಂದು ಬದುಕಿದವರು
ಶ್ರಮದಿಂದ ಬದುಕಲು
ಸುಲಭವಾಗಿ ಸಿದ್ಧರಾಗುವರೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೦೩

ರಕ್ತಶೋಷಣೆಯ ರಾಜಕಾರಣದ ತಲೆಗೆ
ರಾಷ್ಟ್ರೀಯತೆಯ ಗಾಂಧೀ ಟೋಪಿ
ಎಷ್ಟು ಚೆನ್ನಾಗಿ ಇಟ್ಟಿದ್ದಾರೆ!
ಹಗಲುದರೋಡೆಯ ಹರಾಮಖೋರ ಮೈಯ್ಗೆ
ಸಮಾಜವಾದದ ನೆಹರೂ ಜುಬ್ಬ
ಎಷ್ಟು ಚೆನ್ನಾಗಿ ತೊಟ್ಟಿದ್ದಾರೆ!
ಕಳ್ಳಹಾದರದ ಕರಾಳ ಜಂಘೆಗಳಿಗೆ
ಬಲಿದಾನದ ಬೋಸ್ ಪಂಚೆ
ಎಷ್ಟು ಚೆನ್ನಾಗಿ ಉಟ್ಟಿದ್ದಾರೆ!
ಇಂಗ್ಲೀಷ್ ಮೋಹದ ಗುಲಾಮ ಕಾಲುಗಳಲ್ಲಿ
ಸ್ವದೇಶ ಭಕ್ತಿಯ ತಿಲಕ ಮೊಚ್ಚೆ
ಎಷ್ಟು ಚೆನ್ನಾಗಿ ಮೆಟ್ಟಿದ್ದಾರೆ!
ನಿನ್ನನ್ನಾದರೂ ಈ ಪಿಡುಗು ಪುಢಾರಿಗಳು
ಸುಲಿಯದೆ ಬಿಟ್ಟಿದ್ದಾರೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೦೪

ಮೊದಲು ಸಂಸ್ಥಾನಗಳ ರಾಜರಿದ್ದರು;
ಜೊತೆ ಜೊತೆಗೆ ಉದ್ಯಮ ವಾಪಾರಗಳ ರಾಜರು ಬಂದರು;

ಎಣ್ಣೆ ರಾಜರು, ತಂಬಾಕು ರಾಜರು, ಕಂತ್ರಾಟ ರಾಜರೂ
ಬಂದರು;
ಈಗ ಮಂತ್ರಿ ರಾಜರು, ಎಂ.ಪಿ. ರಾಜರು, ಎಂ.ಎಲ್.ಎ ರಾಜರು,
ಐ.ಎ.ಎಸ್. ರಾಜರು, ಐ.ಪಿ.ಎಸ್. ರಾಜರು,
ಹೆಂಡದ ರಾಜರು, ಹೂಚ್ ರಾಜರು, ಹಷಿಷ್ ರಾಜರು,
ಕಳ್ಳಸಾಗಣೆ, ಕಾಳಸಂತೆ, ಕಲಬೆರಕೆಗಳ ರಾಜರು!
ಎಷ್ಟು ತರದ ರಾಜರು, ಎಷ್ಟು ಸಂಖ್ಯೆಯ ರಾಜರು!
ಅಬ್ಬಾ, ಇವರ ಅರ್ಭಟವೇ!
ದೇಶವೆಲ್ಲ ಅಟ್ಟವಾಗಿದೆ
ಇವರ ನಿಶಾಚರ ನಾಟ್ಯಕ್ಕೆ!
ಅಟ್ಟ ಮುರಿವ ಮೊದಲೇ
ಅಟ್ಟಯ್ಯ ಇವರ ಅಂಡಮಾನಕ್ಕೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೦೫

ವಾಚನಾಲಯ, ಪ್ರಯೋಗಾಲಯ, ಕ್ರೀಡಾಂಗಣಗಳಲ್ಲಿ
ಕಾಣಿಸಬೇಕಾದ ನಮ್ಮನವಯುವಕರು
ಸುರಾಲಯ, ಕ್ಯಾಬರೆ ನಿಲಯ, ಜೂಜು ಮನೆಗಳಲ್ಲಿ
ಕುಣಿದು ಕುಪ್ಪಳಿಸುತ್ತಿಹರಯ್ಯ!
ಹಳ್ಳಿಗಳ ಚಾವಡಿಗಳಲ್ಲಿ, ನಗರದ ಕೊಳೆಗೇರಿಗಳಲ್ಲಿ
ಕಾಣಿಸಬೇಕಾದ ನಮ್ಮಶಾಸಕರು, ಸಚಿವರು
ಪಂಚತಾರಾ ಹೋಟೆಲ್ಲುಗಳಲ್ಲಿ, ವಿಲಾಸಭವನಗಳಲ್ಲಿ
ಚಕ್ಕಂದವಾಡುತ್ತ ಉಕ್ಕಂದದಲ್ಲಿಹರಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಕಕ್ಕಯ್ಯ ಚೆನ್ನಯ್ಯ ಹರಳಯ್ಯರ ವಂಶಜರ ಕುಟೀರಗಳಲ್ಲಿ
ಕಾಣಬೇಕಾದ ನಮ್ಮಗುರುವಿರಕ್ತರು
ಅಡ್ಡಪಲ್ಲಕ್ಕಿಗಳಲ್ಲಿ ಮೆರೆಯುತ್ತ,
ತಮಸ್ಸಿನತ್ತ ಸರಿಯುತ್ತಿಹರಯ್ಯ!

## ೩೦೬

ಸತ್ಕಾರ್ಯಕ್ಕೆ ಸರ್ವ ವಿಘ್ನಗಳನ್ನೂ ಒಡ್ಡಿ
ಅದು ಸಫಲವಾದಾಗ
ಅಗ್ರತಾಂಬೂಲ ಕೇಳುವ ಅಗ್ರಣಿಗಳಿದ್ದಾರೆ;
ತಾವೂ ಮಾಡದೆ
ಮಾಡುವವರಿಗೂ ಮಾಡಗೊಡದೆ
ಮಾಡಲಿಲ್ಲವೆಂದು ಏಡಿಸುವ
ಕೇಡು ಮತಿಗಳಿದ್ದಾರೆ;
ಮಾಡಿದರೆ ಮಾಡಿದೆಯೇಕೆಂಬ,
ಮಾಡದಿರೆ ಮಾಡಲಿಲ್ಲೇಕೆಂಬ
ಮೂಢ ಮತಿಗಳಿದ್ದಾರೆ;
ಸಹಕರಿಸದಿದ್ದರೆ ಹೋಗಲಿ,
ಸುಮ್ಮನಿರುವ ಸೌಜನ್ಯವನ್ನೂ ತೋರದ
ಕಾಕ ಮತಿಗಳಿದ್ದಾರೆ;
ಕೆಡುಕರಿಗೆ ಮತಕೊಟ್ಟು
ಒಳಿತನ್ನು ಬಯಸುವ
ಮಂದ ಮತಿಗಳಿದ್ದಾರೆ;
ಒಳ್ಳೆಯದನ್ನು ಆಡುವವರು,
ಒಳ್ಳೆಯದನ್ನು ಮಾಡುವವರು
ವಿರಳ ನೋಡಾ–ಸ್ವತಂತ್ರಧೀರ ಸಿದ್ಧೇಶ್ವರ!

## ೩೦೭

ಇಲ್ಲಿ ಪ್ರಜೆಗಳ ಪರಮಾಧಿಕಾರ
ಎಲ್ಲಿದೆ, ಎಲ್ಲಿದೆ?
ಸಮಾನಾವಕಾಶ ಸಾಮಾಜಿಕ ನ್ಯಾಯಗಳು
ಎಲ್ಲಿವೆ, ಎಲ್ಲಿವೆ?
ಗ್ರಾಮ ಸ್ವರಾಜ್ಯ ಗ್ರಾಮೋದಯಗಳು
ಎಲ್ಲಿವೆ, ಎಲ್ಲಿವೆ?
ಅಂತ್ಯೋದಯ ದಲಿತೋದಯಗಳು
ಎಲ್ಲಿವೆ, ಎಲ್ಲಿವೆ?
"ಪುಸ್ತಕಗಳಲ್ಲಿ", ಕೆಲವರ

ಮಸ್ತಕಗಳಲ್ಲಿ” ಎಂದಾತ
ಸ್ವತಂತ್ರಧೀರ ಸಿದ್ಧೇಶ್ವರ!

### ೩೦೮

ಈ ದೇಶದ ಬಡತನದ ಬಗ್ಗೆ ಭಾಷಣ ಬಿಗಿವವನೆ,
ಒಬ್ಬ ಬಡವನಿಗಾದರೂ ಆಗಿ ತೋರಿಸು!
ಈ ದೇಶದ ನಿರಕ್ಷರತೆಯ ಬಗ್ಗೆ ಲೇಖನ ಬರೆವವನೆ,
ಒಬ್ಬ ನಿರಕ್ಷರಿಗಾದರೂ ಅಕ್ಷರ ಕಲಿಸಿ ತೋರಿಸು!
ಈ ದೇಶದ ನಿರುದ್ಯೋಗದ ಬಗ್ಗೆ ಬಡಬಡಿಸುವವನೆ,
ಒಬ್ಬ ನಿರುದ್ಯೋಗಿಗಾದರೂ ಕೆಲಸ ಕೊಟ್ಟು ತೋರಿಸು!
ಎಲ್ಲರೂ ಮೈಕೈ ಮುಟ್ಟಗೊಡದ
ಕುಸ್ತಿಯನ್ನೇ ಆಡಿ ಹೋಗದಿರಿ!
ಕತ್ತಲೆ ಕತ್ತಲೆಯೆಂದು ಕೂಗಿ
ಮೇಣಬತ್ತಿಯೊಂದನ್ನೂ ಹಚ್ಚದೆ ಹೋಗದಿರಿ
ಸ್ವತಂತ್ರಧೀರ ಸಿದ್ಧೇಶ್ವರನಿಗೆ
ಮಾತಿನ ಪೂಜೆಯನ್ನೇ ಮಾಡಿ ಹೋಗದಿರಿ!

### ೩೦೯

ಶೋಷಿತರೆ, ದುರ್ಬಲರೆ, ದಲಿತರೆ–
ದಂಗೆ ಏಳಿರಿ, ದಂಗೆ ಏಳಿರಿ
ಢೋಂಗಿ ಗುರುಗಳ ವಿರುದ್ಧ!
ದಂಗೆ ಏಳಿರಿ, ದಂಗೆ ಏಳಿರಿ
ಢಕ್ಕುಳಿ ದೇಶಭಕ್ತರ ವಿರುದ್ಧ!
ದಂಗೆ ಏಳಿರಿ, ದಂಗೆ ಏಳಿರಿ
ನಿಮ್ಮ ನೆತ್ತರಿನ ಜಿಗಣೆಗಳ ವಿರುದ್ಧ,
ಸಕಲ ಸುಲಿಗೆಗಾರರ ವಿರುದ್ಧ!
ದಂಗೆ ಏಳಿರಿ, ದಂಗೆ ಏಳಿರಿ
ಭ್ರಷ್ಟ ಅಧಿಕಾರಿ, ಕರ್ಮಚಾರಿಗಳ ವಿರುದ್ಧ;
ಎಂಜಲುಣಿ ಬುದ್ಧಿಜೀವಿಗಳ ವಿರುದ್ಧ!
ಶತಾಬ್ದಿಗಳು ಕಳೆದರೂ ಸದ್ಬುದ್ಧಿ ಬಾರದಿವರಿಗೆ!
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿಮಗೆ–

ದಂಗೆ ಏಳಿರಿ, ದಂಗೆ ಏಳಿರಿ–
ಎಲ್ಲ ದುಷ್ಟಕೂಟಗಳ ವಿರುದ್ಧ!

೩೧೦

ಗುಡಿಸಲುಗಳಿಗೆ ಬಾಯಿ ಬಂದಿದೆಯೀಗ,
ಅನ್ಯಾಯದ ಬಾಯಿ ಮುಚ್ಚಲೇ ಬೇಕಿನ್ನು!
ಬರಿ ಹೊಟ್ಟೆಗಳ ಸಿಟ್ಟು ರಟ್ಟೆಗಿಳಿಯುತ್ತಿದೆಯೀಗ–
ಬುಲೆಟ್ಟುಗಳ ಸೊಕ್ಕು ಇಳಿಯಲೇ ಬೇಕಿನ್ನು!
ಎಲುವುಗೂಡುಗಳಿಂದ ವಿಲಯಾಗ್ನಿ ಸಿಡಿಯಲಿದೆ–
ಬಲದ ಕೋಟೆಗಳೆಲ್ಲ ಭಸ್ಮವಾಗಲೇ ಬೇಕಿನ್ನು!
        ಸ್ವತಂತ್ರಧೀರ ಸಿದ್ಧೇಶ್ವರ,
ಕುರಿಗಳಿಗೂ ಇರಿವ ಶಕ್ತಿ ಬರುತ್ತಿದೆಯೀಗ–
        ತೋಳಗಳ ಸದ್ದು ಅಡಗಲೇಬೇಕಿನ್ನು!

೩೧೧

ಇಲ್ಲಿ ಯಾರಾರ ನಂಬಿ ಕೆಟ್ಟೆ
ಯಾರಾರ ನಂಬಿ ಕೆಡಲಿಲ್ಲ ನೀನು, ಬಡವಾ?
ಹುಟ್ಟಲಿಲ್ಲ ಕೊನೆಗೂ
ನಿನಗೆ ಕೊಟ್ಟ ಮಾತ ನಡಸುವ ಭಡವಾ!
ಸುರರು ಕೈಕೊಟ್ಟರು,
ಭೂಸುರರು ಕೈಕೊಟ್ಟರು,
ಅರಸರು ಕೈಕೊಟ್ಟರು
ಸಾಮಂತರು, ಶ್ರೀಮಂತರು,
        ಧೀಮಂತರು ಕೈಕೊಟ್ಟರು ನಿನಗೆ!
ನೀನೆ ಆರಿಸಿದವರು,
ನೀನೆ ಏರಿಸಿದವರು,
ನೀನೆ ಹೊತ್ತು ಮೆರೆಸಿದವರು,
ನೀನೆ ಸಂಬಳವಿತ್ತು ಸಲಹಿದವರು
        ಕೈಕೊಟ್ಟವರು ನಿನಗೆ!
ನೀನೇನಾದರೂ ಹಸಿದು ಹುಯಿಲಿಟ್ಟಾಗ
        "ಹೆಚ್ಚು ದುಡಿಯಿರಿ,
        ಹೆಚ್ಚು ಪಡೆಯಿರಿ"

ಎಂದು ಕರೆಕೊಟ್ಟರು ನಿನಗೆ-
ಗಾಯದ ಮೇಲೆ ಬರೆ ಕೊಟ್ಟರು ನಿನಗೆ!
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ಹೇಳುವ ನಿನಗೆ ಬಡವ:
ಅವರಿವರೆನ್ನದೆ
ಎಲ್ಲ ಬಡವರ ಸಂಘಟನೆಯಲ್ಲಿಯೇ
ಬಡವರ ಶಕ್ತಿ;
ಬಡವರ ಶಕ್ತಿಯಲ್ಲಿಯೇ
ಬಡವರ ಮುಕ್ತಿ!

೩೧೨

ಗೌಳಿಗನ ಹಾಲು, ರೈತನ ಮಾಲು-
ಯಾರ ಪಾಲು?
ಪಡೆದವರಿಗೆ ಮುಕ್ಕಾಲು, ದುಡಿದವನಿಗೆ ಒಕ್ಕಾಲು-
ನರಕ ಬಡವರ ಬಾಳು!
ಒಡೆತನದ ಉರುಲು-
ಬಡತನದ ಹುದುಲು-
ಬದುಕಿಹುದೆ ಚೋದ್ಯ
ಇಲ್ಲಿ ಇಲ್ಲದವರು!

೩೧೩

ಸಿನಿಕತನಕ್ಕೆ ಪಟ್ಟಕಟ್ಟಿರುವಲ್ಲಿ
ಮನುಜತೆಯ ಮಾತನಾಡುವುದೇ
ಮೂಢತನವಯ್ಯ!
ಪೋಲೀಸರ ಗೋಲಿಬಾರಿನಿಂದ
ನೂರಾರು ಜನ ಸತ್ತರೆಂಬ ಸುದ್ದಿ ಹೇಳಿದರೆ
ಬುದ್ಧಿ ಹೇಳಿದನೊಬ್ಬ ಸಿನಿಕ-
ಮಾಡಿ ಮಾನವತೆಯ ಅಣಕ:
"ಪೋಲೀಸರ ಗುಂಡುಗಳಿಂದ ಸಾಯದಿದ್ದರೆ
ಹಸಿವೆಯಿಂದ ಸಾಯುತ್ತಿದ್ದರು ಆ ಬಡಪಾಯಿಗಳು!
ಹಸಿದು ಹೊರಳಾಡಿ ಸಾಯುವುದಕ್ಕಿಂತ
ಗುಂಡಿನಿಂದ ನಿಮಿಷಾರ್ಧದಲ್ಲಿ ಸಾವುದು ಮೇಲಲ್ಲವೆ?

ಯಾರಿಗೆ ಗೊತ್ತು–
        ಹಸಿವೆಯಿಂದ ಸಾಯದಿದ್ದರೆ
        ರೋಗಗಳಿಗೆ ತುತ್ತಾಗಿ,
ಔಷಧೋಪಚಾರವಿಲ್ಲದೆ ನರಳಿ ನರಳಿ
ಸಾಯುತ್ತಿದ್ದರೇನೋ!
ಹಾಗೆ ಸಾವುದಕ್ಕಿಂತ ಹೀಗೆ ಸಾವುದು ಲೇಸಲ್ಲವೆ?
ಯಾರು ಬಲ್ಲರು–
        ರೋಗದಿಂದ ಸಾಯದಿದ್ದರೆ
        ಚಂಡಮಾರುತಕ್ಕೋ,
        ನೆರೆ ಹಾವಳಿಗೋ,
        ಭೂಕಂಪ ಜ್ವಾಲಾಮುಖಿಗಳಿಗೋ,
        ಮತೀಯ ದಂಗೆಗಳಿಗೋ,
        ರಸ್ತೆ ಅಪಘಾತಗಳಿಗೋ,
        ರೈಲು ಉರುಳಿಯೋ,
        ಬಸ್ಸು ಮಗುಚಿಯೋ,
        ಮಾರಕ ಪೇಯ ಕುಡಿದೋ,
        ವಿಷಮಿಶ್ರಿತ ಆಹಾರ ತಿಂದೋ,
                ಸಾಯುತ್ತಿದ್ದರವರು!
ಭಾರತದಲ್ಲಿ,
ಸಾಯಲು ಸಿದ್ಧರಾಗಿಯೇ ಬದುಕಬೇಕು ಬಡವರು!
ಎಂಥ ಸಾವಿಗೆ ತುತ್ತಾಗುವರೆಂಬುದು
        ಅವರವರ ಅದೃಷ್ಟ!"
ಬೆಪ್ಪಾದೆ ಈ ಬುದ್ಧಿವಾದ ಕೇಳಿ–
        ಸ್ವತಂತ್ರಧೀರ ಸಿದ್ಧೇಶ್ವರಾ!

### ೩೧೪

ಈ ದೇಶದಲ್ಲಿ ಕಲ್ಲಾಗಿ ಹುಟ್ಟುವುದೇ ಕ್ಷೇಮವಯ್ಯ–
        ಒಂದಿಲ್ಲೊಂದು ಗುಡಿಯ ಮೂರ್ತಿಯಾಗಬಹುದು!
ಈ ದೇಶದಲ್ಲಿ ನೀರಾಗಿ ಜನಿಸುವುದೇ ಮೇಲಯ್ಯ–
        ಒಂದಿಲ್ಲೊಂದು ಶಂಖದಲ್ಲಿ ತೀರ್ಥವಾಗಬಹುದು!
ಈ ದೇಶದಲ್ಲಿ ಕತ್ತರಿಯಾಗಿ ಹುಟ್ಟುವುದೇ ಲೇಸಯ್ಯ–
        ಒಬ್ಬಿಲ್ಲೊಬ್ಬ ಸಭ್ಯಚೋರನ ಜೇಬು ಅಲಂಕರಿಸಬಹುದು!

ಈ ದೇಶದಲ್ಲಿ ಕತ್ತೆಯಾಗಿ ಹುಟ್ಟುವುದೇ ಭಾಗ್ಯವಯ್ಯ-
ಒಮ್ಮೆಲ್ಲೊಮ್ಮೆ ಮುಖಂಡನಾಗಿ ಮೆರೆಯಬಹುದು!
ಈ ದೇಶದಲ್ಲಿ ಇನ್ನೇನಾದರೂ ಆಗಿ ಹುಟ್ಟಬೇಕು-
ಸಜ್ಜನನಾಗಿ ಹುಟ್ಟಬಾರದಯ್ಯ,
ಸ್ವತಂತ್ರಧೀರ ಸಿದ್ಧೇಶ್ವರ!

೩೧೫

ಎಂದಿಲ್ಲದಷ್ಟು ಬಹುಮತ
ಇಂದು ನಮ್ಮ ಆಳುವ ಪಕ್ಷಕ್ಕೆ-
ಆದರೂ ನಿಲುಗಡೆಯಿಲ್ಲ ಭಿಕ್ಷಕ್ಕೆ,
ಲಕ್ಷೋಪಲಕ್ಷಕ್ಕೆ!
ಈ ದೇಶ ಭಿಕ್ಷೆ ಬೇಡದ, ಸಾಲ ಪಡೆಯದ
ಗೇಣುದ್ದ ಚೋಟಗಲಂದ
ದೇಶವಾವುದಾದರೂ ಇದೆಯೇನಯ್ಯ?
ಈ ದೇಶದಲ್ಲಿ ಖಾತ್ರಿಯಾಗಿ ಹುಟ್ಟುವ,
ಬೇಡವೆಂದರೂ ಹುಟ್ಟುವ,
ಬಂಪರ್ ಬೆಳೆಯಾಗಿ ಹುಟ್ಟುವ,
ಮಕ್ಕಳೆಲ್ಲ ಹೊರಲಾರದಷ್ಟು, ತೆರಲಾರದಷ್ಟು
ಸಾಲ ಹೊತ್ತುಕೊಂಡೇ ಹುಟ್ಟಬೇಕು!
ಆದರೂ ಇನ್ನೂ ಬೇಕು, ಇನ್ನೂ ಬೇಕು!
ಅವುಗಳ ಹೊಟ್ಟೆಗಿಡಲು
ಇನ್ನಷ್ಟು ಸಾಲಕ್ಕೆ ಅರ್ಜಿ ಹಾಕು!
ಒತ್ತೆಯಾಳುಗಳನ್ನು ಬಿಡಿಸ ಹೊರಟವರು
ಎಪ್ಪತ್ತುಕೋಟಿ ಭಾರತೀಯರನ್ನು
ಒತ್ತೆಯಾಳುಗಳ ಮಾಡುವರೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೧೬

ಶೋಷಣೆಗೆ ಪೋಷಣೆಯ ರಕ್ಷೆ,
ಸುಲಿಗೆಗೆ ಶಾಸನದ ರಕ್ಷೆ,
ಲೂಟಿಗೆ ಸರಕಾರದ ರಕ್ಷೆ,
ದರೋಡೆಗೆ ಧರ್ಮದ ರಕ್ಷೆ,

ಪಾಪಕ್ಕೆ ಪ್ರಚಾರದ ರಕ್ಷೆ ಸಿಕ್ಕುವುದಯ್ಯ!
ಉಳ್ಳವರಿಗೆ ಎಲ್ಲೆಲ್ಲಿಯೂ ರಕ್ಷೆ,
ಇಲ್ಲದವರಿಗಾವ ರಕ್ಷೆಯಯ್ಯ?
ದೀನರಿಗಾರು ರಕ್ಷೆ, ದಲಿತರಿಗಾರು ರಕ್ಷೆ?
ಬಡವರಿಗೆ ಬಡವರೇ ರಕ್ಷೆ,
ದುಡಿವರಿಗೆ ದುಡಿವರೇ ರಕ್ಷೆಯೆಂಬೆಯೇನಯ್ಯ?
ಅವರವರಿಗೆ ಅವರವರೇ ರಕ್ಷೆಯಾದರೆ
ನೀನಾರಿಗೆ ರಕ್ಷೆಯಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೧೭

ಬರ್ಬರರು ಬೆಳೆಸಿದ ಬರ್ಬೂರ ವನದಲ್ಲಿ
ಕಹಿಕಾಯಿ ಮೇಯುವ ಮೇಕೆ ಕುರಿಗಳು,
ಈ ಮೂಕ ಜನರು!
ಇವು ಇಲ್ಲಿ ಮೇಯುತ್ತಿರುವಂತೆ
ಅಲ್ಲಿ ಮಸಾಲೆ ಅರೆಯುತ್ತಿರುವರವರು!
ಕುರಿಗಳ ಕೇಳಿ ಮಸಾಲೆ ಅರೆವರುಂಟೆ?
ಕುರಿಗಳಿಗೂ ಕೇಳುವ ಹಕ್ಕುಂಟೆ?
ಇವರ ಹೇರೊಡಲ ತುಂಬುವುದಕ್ಕಿಂತ
ಕುರಿಗಳಿಗೆ ಧನ್ಯತೆ ಬೇರುಂಟೆ?
ಮುಳ್ಳಿನ ಮರಗಳ ಬೀಜಗಾಯಿ ಮೆಲುಕಿಸಿ,
ಒಡೆಯರ ಹೊಲಗಳಲ್ಲಿ ಹಿಕ್ಕೆ ಹಾಕಿ,
ಅಡಗಾಗಿ ಅವರ ಒಡಲ ಸೇರುವುದೆ
ಎಂದೆಂದಿಗೂ ಇವುಗಳ ಗತಿಯೇನಯ್ಯ?
ಹೀಗಿದ್ದರೆ ಏಕೆ ಅವುಗಳ ಹುಟ್ಟಿಸುವೆಯಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೧೮

ಎಲ್ಲ ದೊರೆಯುತ್ತಿದ್ದಾಗ ಕೈಯಲ್ಲಿ ಕಾಸಿರಲಿಲ್ಲ,
ಕೈಗೆ ಕಾಸು ಬಂದಿದೆಯೀಗ, ಯಾವುದೂ ದೊರೆಯುತ್ತಿಲ್ಲ!
ಕಾಸಿಗೆ ಕೊಳ್ಳುವ ಶಕ್ತಿಯಿಲ್ಲ,
ನ್ಯಾಯ ಬೆಲೆಗೆ ಏನೂ ದೊರೆಯುತ್ತಿಲ್ಲ!

ತುಟ್ಟಿಭತ್ಯದ ಪ್ರಕಟನೆಗೆ ಮುನ್ನವೇ
ತುಟ್ಟಿಯಾಗಿ ಬಿಡುತ್ತವೆ ಜಿನಸುಗಳು!
ಬೆಂಕಿಯಿಲ್ಲದೆಯೆ ಸುಡುತ್ತಿವೆ
ಬಡವರನ್ನು ಬೆಲೆಯೇರಿಕೆಗಳು!
ಸುಡಬಾರದೆ ಬಡವರ ಒಡಲ ಬೆಂಕಿ
ಈ ಸ್ವಾರ್ಥಮೂಲ, ಶೋಷಣಶೀಲ
ಅರ್ಥವ್ಯವಸ್ಥೆಯನ್ನು,
ಅದನ್ನು ರಕ್ಷಿಪ ರಾಜ್ಯವ್ಯವಸ್ಥೆಯನ್ನು-
ಸ್ವತಂತ್ರಧೀರ ಸಿದ್ಧೇಶ್ವರ?

೩೧೯

ಇಲ್ಲಿ ಕಾಳಸಂತೆಯೇ ಕಾಮಧೇನು-
ಕೇಳಿದುದನ್ನೆಲ್ಲ ಕೊಡುತ್ತದೆ!
ಇಲ್ಲಿ ಕಳ್ಳಪೇಟೆಯೇ ಕಲ್ಪವೃಕ್ಷ-
ಬೇಡಿದುದನ್ನೆಲ್ಲ ನೀಡುತ್ತದೆ!
ಇಲ್ಲಿ ಸರಕಾರವೇ ಬರಡುಹಸು,
ಕೊರಡುಮರ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೨೦

ಅರ್ಥಕಾಮಗಳೆ ದೇವದೇವಿಯರಿಂದು;
ಸ್ವಾರ್ಥವೇ ಪೂಜಾರಿ, ಭೋಗವೇ ಪೂಜೆ,
ಮೋಸ, ಶೋಷಣೆ, ವಂಚನೆಗಳೇ
ಧೂಪ, ದೀಪ, ಪತ್ರ-ಪುಷ್ಪಗಳು;
ಈರ್ಷ್ಯೆ ವೈಷಮ್ಯಗಳೇ ಗಂಧ ಅಕ್ಷತೆಗಳು,
ಮನುಷ್ಯತ್ವವೇ ಆಹುತಿ,
ಪಶುತ್ವವೇ ಪ್ರಸಾದ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೨೧

ಯಶಸ್ಸಿನ ಮಾತ್ರೆಗಳು ಬಂದಿವೆಯಂತೆ,
ಸಂಧಿಸಾಧಕತೆಯ ಅಂಗಡಿಯಲ್ಲಿ;
ವ್ಯವಹಾರ ವೈದ್ಯರನ್ನು ಕೇಳಿಕೊಳ್ಳಬೇಕಂತೆ!

ಸತ್ಕಾರ ಸಮಾರಂಭಗಳ ರಾಯಲ್ ಸೆಲ್ಯೂಟಿನಲ್ಲಿ
ಮುಖಸ್ತುತಿಯ ಸೋಡಾ ಸೇರಿಸಿ,
ಕಪಟನಿಷ್ಠೆಯ ಮಂಜುಗಡ್ಡೆಯಿರಿಸಿ,
ಮೊದಲು ಕುಡಿಯಲು ಕೊಡುವರಂತೆ!
ಆಮೇಲೆ,
        ಮಾನಪತ್ರದ ಮಾತ್ರೆಯನ್ನು
        ಲಂಚದ ಜೇನುತುಪ್ಪದಲ್ಲಿ ಬೆರೆಸಿ,
        ಹೇಮಾಂಗಿನಿಯರಿಂದ ಹಾರಹಾಕಿಸಿ
                ಕೊಡಿಸುವರಂತೆ;
                ಯಶಸ್ಸು ಕಟ್ಟಿಟ್ಟ ಬುತ್ತಿಯಂತೆ!
        ಇದರ ಮುಂದೆ
                ಸ್ವತಂತ್ರಧೀರ ಸಿದ್ಧೇಶ್ವರನೂ ಸಪ್ಪೆಯಂತೆ!

## ೩೨೨

ಎಲ್ಲರ ಕನಿಷ್ಠತಮ ಅಗತ್ಯಗಳು ಪೂರೈಸುವವರೆಗೆ
        ಉಳ್ಳವರ ವಿಲಾಸಗಳಿಗೆ ಕಡಿವಾಣ ಹಾಕಿರಿ;
ಮನೆಗೊಂದು ಕೆಲಸ ಸಿಕ್ಕುವವರೆಗೆ
        ಒಂದೇ ಮನೆಯವರಿಗೆ ಎರಡು ಕೆಲಸ ಕೊಡ ಬೇಡಿರಿ;
ಹಳ್ಳಿಗರಿಗೆ ಮಣ್ಣಿನ ಮನೆಗಳಾದರೂ ದೊರೆಯುವವರೆಗೆ
        ಪಟ್ಟಣಿಗರ ಬಹು ಮಹಡಿ ಭವನಗಳ ಮೇಲೆ ಬ್ರೇಕು ಹಾಕಿರಿ;
ಪ್ರಾಥಮಿಕ ಶಾಲೆಗಳೆಲ್ಲ ಸ್ವಯಂಪೂರ್ಣವಾಗುವವರೆಗೆ
        ಹೊಸ ವಿಶ್ವವಿದ್ಯಾಲಯಗಳ ತೆರೆಯುವುದ ನಿಲ್ಲಿಸಿರಿ;
ಹತ್ತು ಹಳ್ಳಿಗೊಂದಾದರೂ ಪೂರ್ಣಾಸ್ಪತ್ರೆ ದೊರೆವವರೆಗೆ
        ಶಹರುಗಳಿಗೆ ಆಸ್ಪತ್ರೆಗಳ ಮೇಲೆ ಆಸ್ಪತ್ರೆ ಕೊಡಬೇಡಿರಿ;
ಕೊಡುವ ಕಟ್ಟುವ ಅಧಿಕಾರವುಳ್ಳವರೇ,
        ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿಮಗೆ-
ಅಂತ್ಯೋದಯ, ದಲಿತೋದಯಗಳು ಕೈಗೂಡುವವರೆಗೆ
        ಶ್ರೇಷ್ಠೋದಯದ ಸೊಲ್ಲು ನಿಲ್ಲಿಸಿರಿ!

## ೩೨೩

ಅರಮನೆಗಳಿವೆ, ಗುರುಮನೆಗಳಿವೆ,
ಸಿರಿಮನೆಗಳಿವೆ, ಸೆರೆಮನೆಗಳಿವೆ-

ಇವೆಲ್ಲವನ್ನೂ ಕಟ್ಟಿದವರಿಗೇ ಮನೆ ಇಲ್ಲ!
ಚೀನಾಂಬರವಿದೆ, ಪೀತಾಂಬರವಿದೆ,
ಸ್ವದೇಶೀ ಬಟ್ಟೆಗಳಿವೆ, ಕೈಮಗ್ಗದ ಬಟ್ಟೆಗಳಿವೆ-
ಇವೆಲ್ಲವನ್ನು ನೆಯ್ದವರಿಗೆ ಮೈತುಂಬ ಬಟ್ಟೆ ಇಲ್ಲ!
ಗೋಧಿಯ ಪಕ್ವಾನ್ನಗಳಿವೆ, ಅಕ್ಕಿಯ ಪಕ್ವಾನ್ನಗಳಿವೆ,
ರಾಗಿ ಜೋಳಗಳ ಭಕ್ಷ್ಯ ಭೋಜ್ಯಗಳಿವೆ-
ಇವೆಲ್ಲವನ್ನು ಬೆಳೆದವರಿಗೇ ಹೊಟ್ಟೆತುಂಬ ಊಟವಿಲ್ಲ!
ಈ ಅವ್ಯವಸ್ಥೆಯ ಅರ್ಥವ್ಯವಸ್ಥೆ,
ಎಲ್ಲಿಯವರೆಗೆ, ಓ, ಎಲ್ಲಿಯವರೆಗೆ-
ಸ್ವತಂತ್ರಧೀರ ಸಿದ್ಧೇಶ್ವರಾ?

**೩೨೪**

ತ್ರಿದೋಷ ಪರಿಹಾರಕ್ಕೆಂದೇ
ತ್ರಿಫಲಗಳನ್ನಿತ್ತಿಹೆಯಂತೆ;
ತ್ರಿವಿಧ ಮಲ ನಿವಾರಣೆಗಾಗಿಯೇ
ತ್ರಿವಿಧ ದೀಕ್ಷೆಗಳಿವೆಯಂತೆ;
ತ್ರಿವರ್ಗ ಶುದ್ಧಿಗಾಗಿಯೇ
ತ್ರಿವಿಧ ದಾಸೋಹವಂತೆ;
ತ್ರಿಜನಾಂಗ ಸಂಗಮಕ್ಕಾಗಿಯೇ
ತ್ರಿವರ್ಣ ಧ್ವಜವಂತೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೆಚ್ಚಿನ ಈ ಭರತ ಭೂಮಿಯಲ್ಲಿ
ತ್ರಿವಿಧ ಪ್ರಗತಿಗಾಗಿ
ತ್ರಿವಿಧ ಕ್ರಾಂತಿಯ ಬರಿಸಾ!

**೩೨೫**

ಒಂದು ಕಿಚ್ಚಿನ ಕವಿತೆ ಓದುತ್ತಲೇ
ಕ್ರಾಂತಿ ಕಿಡಿಗೆದರುವುದೆಂದು ಭ್ರಮಿಸಿರುವ ಕವಿಗಳು,
ಒಂದು ರೊಚ್ಚಿನ ಭಾಷಣ ಬಿಗಿಯುತ್ತಲೇ
ಕ್ರಾಂತಿ ಕೈಗೂಡುವುದೆಂದು ಭ್ರಮಿಸಿರುವ ರಾಜಕಾರಣಿಗಳು,
ಒಂದು ಕೆಚ್ಚಿನ ಗೊತ್ತುವಳಿ ಸ್ವೀಕರಿಸುತ್ತಲೇ
ಕ್ರಾಂತಿ ಬಳಿಸಾರುವುದೆಂದು ಭ್ರಮಿಸಿರುವ ಸುಧಾರಕರು

ಕ್ರಾಂತಿಯೆಂದರೇನೆಂಬುದ
ಅರಿತಿಹರೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ.

೩೨೬

ಮರಗಳನ್ನು ಕಡಿದು ಕಡಿದು
ಕಾಡುಗಳ ಬರಿದು ಮಾಡಿದೆವು;
ಅಗಿದಗಿದು ಅದಿರು ತೆಗೆದು
ಗಣಿಗಳ ಬರಿದು ಮಾಡಿದೆವು;
ಮೀನು ಏಡಿಗಳ ಎಳೆದೆಳೆದು ತಂದು
ಕಡಲಂಚುಗಳ ಬರಿದು ಮಾಡಿದೆವು;
ಸಾಲಗಳ ತಂದು ತಂದು ತಿಂದು
ದೇಶವನೆ ಬರಿದು ಮಾಡಿದೆವು;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಾಳ ಬೆಲೆಗಳನ್ನೆಲ್ಲ ಕೊಂದು ತಿಂದು
ಬದುಕನ್ನೇ ಬರಿದು ಮಾಡಿದೆವು!

೩೨೭

ನನ್ನ ಕೊಡಲಿ ಕಡಿಯದ ವನಗಳಿನ್ನೂ ಇವೆ;
ನನ್ನ ಗುದ್ದಲಿ ಅಗಿಯದ ಗಣಿಗಳಿನ್ನೂ ಇವೆ;
ನನ್ನ ಕೊಳೆನೀರು ಕಲುಷಿತಗೊಳಿಸದ ಹೊಳೆಗಳಿನ್ನೂ ಇವೆ;
ನನ್ನ ಗಿರಣಿ ತಿಂದು ತೇಗದ ಮೆಳೆಗಳಿನ್ನೂ ಇವೆ;
ನನ್ನ ಸ್ವಾರ್ಥ ಸುಟ್ಟಳಿಸದ ಮನೆಗಳಿನ್ನೂ ಇವೆ;
ನನ್ನ ಕವಡು ಕಹಿಗೊಳಿಸದ ಮನಗಳಿನ್ನೂ ಇವೆ-
ಇವು ಇವೆಯಾಗಿ,
ಈ ದೇಶಕ್ಕಿನ್ನೂ ಆಶೆಯಿದೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೨೮

ಈಗ ವಿದ್ಯಾಲಯಗಳೇ ಕಾರಖಾನೆಗಳು,
ವಿದ್ಯಾರ್ಥಿಗಳೇ ಕಚ್ಚಾ ಮಾಲು,
ಶಿಕ್ಷಕರೇ ಕೆಲಸದ ಆಳು,

ವಿದ್ಯಾಧಿಕಾರಿಗಳೇ ಕಲ್ಲಿದ್ದಲು,
ಕಾರಕೂನರೇ ಸಿದ್ಧಮಾಲು ನೋಡಾ!
ಮಾನವ-ನಿರ್ಮಾಣ ಕ್ರಿಯೆಯೂ
ಯಾಂತ್ರೀಕೃತವಾದರೆ
ಚೇತನವೆ ಜಡವಾಗದೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೨೯

ತಕ್ಕ ನೆಲ, ತಕ್ಕಷ್ಟು ನೀರು ಗೊಬ್ಬರ ಸಿಕ್ಕರೆ
ಹತ್ತಿಯ ಗಿಡವೂ ಅತ್ತಿಯ ಮರದೆತ್ತರಕ್ಕೆ ಬೆಳೆಯದೇನಯ್ಯ?
ತಕ್ಕ ಪರಿಸರ, ಸೂಕ್ತ ಶಿಕ್ಷಣ, ಯುಕ್ತ ಅವಕಾಶಗಳು ದೊರೆತರೆ
ರೈತನ ಮಗ ರಾಯರ ಮಗನ ಮೀರಿ ಬೆಳೆಯನೆ, ಅಯ್ಯ?
ವಿದ್ಯಾಭ್ಯಾಸಕ್ಕೆ ಸಯಾಜಿರಾವ್ ಗಾಯಕವಾಡ,
ಅವಕಾಶಕ್ಕೆ ಸಿದ್ಧಪ್ಪ ಕಂಬಳಿ ಸಿಕ್ಕರೆ
ಆದಿ ಜನರಲ್ಲಿಯೂ ಅಂಬೇಡ್ಕರರು ಉದಿಸರೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರನು ಅನುಗ್ರಹಿಸಿದರೆ
ಹಳ್ಳಿಯ ಮಗ ಡಿಳ್ಳಿಯ ಗಾದಿ ಏರನೇನಯ್ಯ?

೩೩೦

ಜನ್ಮದಿಂದ ಮೇಲು ಕೀಳು ಸಾಧಿಸಲು
'ವರ್ಣ'ದ ಉಪಯೋಗ, ಇಲ್ಲಿ;
ಬಣ್ಣದಿಂದ ಮೇಲು ಕೀಳು ಸಾಧಿಸಲು
'ವರ್ಣ'ದ ಉಪಯೋಗ, ಅಲ್ಲಿ!
ಎಲ್ಲರಿಗೂ 'ವರ್ಣಗಳ' ಕಲಿಸಿಬಿಟ್ಟರೆ
ವರ್ಣಪೂತನಿಯ ಪ್ರಾಣ ಹೀರರೆ
ವರ್ಣವಾದಕ್ಕೆ ಆಹುತಿಯಾಗಿರುವ ಅಬಲರು-
ಸ್ವತಂತ್ರಧೀರ ಸಿದ್ಧೇಶ್ವರಾ!

೩೩೧

ಎಸೆದ ಪತ್ರಾವಳಿಗಳಲ್ಲಿ ಉಳಿದುದ ಬಳಿದುಕೊಳ್ಳುವವರ ಕಂಡೆ,
ಕಸದ ತೊಟ್ಟಿಗಳಲ್ಲಿ ಅನ್ನದ ಅಗುಳುಗಳ ಆಯುವವರ ಕಂಡೆ,
ಎಂಜಲನ್ನಕ್ಕಾಗಿ ನಾಯಿಗಳೊಡನೆ ಜಗಳಾಡುವವರ ಕಂಡೆ,

ಹಸಿವೆ ಹಿಂಗಿಸಲು ಮೈಯ ಮಾರುವವರ ಕಂಡೆ,
ಸಾಕಲಾಗದೆ ಕೂಸುಗಳ ಮೋರಿಗೆ ತೂರುವವರ ಕಂಡೆ,
ಎಂಥೆಂಥ ದುಸ್ಸಹ ದೃಶ್ಯಗಳ ನೋಡುತ್ತ,
ತಿಂದುದು ಮೈಗೆ ಹತ್ತದಾದುದ ಅನುಭವಿಸುತ್ತ
ಭಂಡ ಬಾಳಿದ ಬದುಕ ಬೇಕು, ತಂದೆ!
ಈ ನರಕವ ಕಂಡೂ ಕಣ್ಮುಚ್ಚಿಕೊಂಡು,
ಈ ಕ್ರಂದನವನ್ನು ಕೇಳಿಯೂ ಕಿವಿ ಮುಚ್ಚಿಕೊಂಡು,
ಅನ್ಯಾಯಿಗಳಾರೆಂದು ತಿಳಿದೂ ಬಾಯ್ಮುಚ್ಚಿಕೊಂಡು
ಬದುಕೆನ್ನುವಿಯೇನಯ್ಯ?
ಹಾಗೆನ್ನಲಾರೆ ನೀನು!
ಈ ಅಧಃಪಾತಕ್ಕೆ ಕಾರಣವಾಗಿರುವ
ಜಾತಿ–ವೃತ್ತಿ–ಅರ್ಥವ್ಯವಸ್ಥೆಯನ್ನು ಹುಗಿಯಲು
ತಗ್ಗು ತೆಗೆವಲ್ಲಿ ನನಗೂ ಪಾಲು ನೀಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೩೨

ದೇವಾಜ್ಞೆಯಿದೆಂದು ದರ್ಪದಿಂದ ಸಾರಿ,
ಅಪೌರುಷೇಯವಿದೆಂದು ಸಾಧಿಸಿ,
ಅನುಲ್ಲಂಘನೀಯವೆಂದು ವಾದಿಸಿ,
ಕರ್ಮದ ಕಣಿ ಹೇಳಿ, ಧರ್ಮಶಾಸ್ತ್ರದ ಆಣೆಯಿಟ್ಟು,
ಶಾಸನಗಳ ಬೆದರಿಕೆ ಹಾಕಿ, ಸೆರೆಮನೆಗಳ ಹೆದರಿಕೆ ತೋರಿಸಿ
ಇನ್ನು ಬಹಳ ದಿನ ವಂಚಿಸಲಾರಿರಿ ಬಡವರನ್ನು!
ಕಾಯವಿನ್ನು ಇವು ಬಹಳ ದಿನ ಒಡೆಯರನ್ನು!
ಕಾಲ ಮಿಂಚುವ ಮುನ್ನ,
ಜನಮನದ ಜ್ವಾಲಾಮುಖಿ ಸಿಡಿಯದ ಮುನ್ನ,
ಸಾಮಾನ್ಯರ ಸೈರಣೆಯ ಕಟ್ಟೆ ಒಡೆಯದ ಮುನ್ನ
ಒಡೆಯರು ಸಲ್ಲಿಸಲಿ ಬಡವರ ಪಾಲ;
ತೆರೆಸದಿರಲಿ ಸ್ವತಂತ್ರಧೀರ ಸಿದ್ಧೇಶ್ವರನ ಫಾಲ!

೩೩೩

ಆನೆಗೆ ತಿನ್ನುವ ಹಲ್ಲು, ತೋರುವ ಹಲ್ಲು ಬೇರೆ ಬೇರೆ;
ಇವರ ಮಾತಿನ ಒಳ–ಹೊರ ಅರ್ಥಗಳೂ ಬೇರೆ ಬೇರೆ!
ಹೊರಗಿನ ಅರ್ಥ ಹಾರ, ಒಳಗಿರುವುದು ಕೋಳ;

ಹೊರಗಿನ ಅರ್ಥ ಕುರಿ, ಒಳಗಿನರ್ಥ ತೋಳ!
ಮಾತಿನ ಕಲೆ ಮೋಸದ ಬಲೆ ಇವರ ಕೈಯಲ್ಲಿ–
ಸ್ವತಂತ್ರಧೀರ ಸಿದ್ಧೇಶ್ವರ!

## ೩೩೪

ಹುಸಿಯ ಹುಟ್ಟು ಬೆಳವಣಿಗೆಗಳ
ಸ್ಪಷ್ಟ ಚಿತ್ರವನ್ನಿತ್ತಿರುವ ಚನ್ನಬಸವಣ್ಣ,
ನೀನಿಂದು ಇದ್ದಿದ್ದರೆ ಹೇಳುತ್ತಿದ್ದೆ–
'ಹುಸಿ ಹುಟ್ಟುವುದು ರಾಜಕಾರಣಿಗಳಲ್ಲಿ,
ಬೆಳೆಯುವುದು ಅವರ ಪತ್ರಿಕೆಗಳಲ್ಲಿ,
ಹೂ ಬಿಡುವುದು ಬಾನುಲಿ, ದೂರದರ್ಶನಗಳಲ್ಲಿ,
ಫಲ ಕೊಡುವುದು ಗೋಲಿಬಾರುಗಳಲ್ಲಿ', ಎಂದು!
ಹಳೆಯ ಹುಸಿಗಳಿಗೆ ಹೊಸ ಹುಸಿಗಳು ಸೇರಿ
ನಾವು ನಂಬಿದುದನೆಲ್ಲ ಹುಸಿಗೊಳಿಸಿವೆ,
ನಮ್ಮಬಿಡುಗಡೆಯನ್ನು ಹುಸಿಗೊಳಿಸಿವೆ,
ಹತ್ತುಗಡೆಯನ್ನು ಹುಸಿಗೊಳಿಸಿವೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಪರಮಸತ್ಯ,
ನಿನ್ನ ನರಕುಲದಲ್ಲೇಕೆ ಇಷ್ಟು ಮಿಥ್ಯ?

## ೩೩೫

ಕಪ್ಪೆ ನೊಣವನ್ನು ನುಂಗುತ್ತದೆ,
ಹಾವು ಕಪ್ಪೆಯನ್ನು ನುಂಗುತ್ತದೆ,
ಗರುಡ ಸರ್ಪವನ್ನು ಭಂಗಿಸುತ್ತದೆ–
ಎತ್ತ ನೋಡಿದರೂ ಒಂದನೊಂದು
ಕೊಂದು ತಿನ್ನುವ ದೃಶ್ಯಗಳೇ!
ಹೊಟ್ಟೆಗಳಿಗಾಗಿ ಕೊಲ್ಲುವ ಈ ದೃಶ್ಯಗಳಿಗಿಂತ
ಬೆಲೆ ಹೆಚ್ಚಿಸಿ ನಿಧಾನವಾಗಿ ಬಡವರನ್ನು ಕೊಲ್ಲುವ,
ಹೆಚ್ಚು ದುಡಿಸಿ ಶ್ರಮಿಕರನ್ನು ಕ್ರಮಕ್ರಮವಾಗಿ ಕೊಲ್ಲುವ,
ಬಾಲ ಕಾರ್ಮಿಕರನ್ನು ಹಂತಹಂತವಾಗಿ ಕೊಲ್ಲುವ
ಕರಾಳ ದೃಶ್ಯಗಳು ಬಹು ಘೋರವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ!

## ೩೩೬

ಅತ್ಯಾಚಾರಗಳ ಹೆಚ್ಚುಗೆ ಕಂಗೆಡಿಸದಷ್ಟು
ಅವುಗಳನ್ನು ಉಪೇಕ್ಷಿಸುವ ನಪುಂಸಕ ನಾಗರಿಕರನ್ನ
ಕಂಗೆಡಿಸಿಹರಯ್ಯ!
ಎಂಥ ಪಾಶವೀ ಕೃತ್ಯಗಳು ಕಣ್ಣಿಗೆ ಬಿದ್ದರೂ
ಅದೇ ಷಂಡ ಔದಾಸೀನ್ಯ,
ಅದೇ ಸ್ತ್ರೈಣ ಸಂವೇಗಶೂನ್ಯತೆ,
ಅದೇ ಹೇಡಿ ಪ್ರತಿಭಟನಾ ಹೀನತೆಗಳು!
ಹಡಗದ ಚುಕ್ಕಾಣಿ ಕುಡಿದವರ ಕೈಸೇರಿದುದು ಗೊತ್ತಿದ್ದೂ
ತಾವು ಕುಡಿದು ಮಲಗುವ ಕಡಲ ಪಯಣಿಗರಂತೆ
ದೇಶ ಹೊತ್ತಿ ಉರಿಯುತ್ತಿದ್ದರೂ
ಔದಾಸೀನ್ಯ ಉಸುಬಿನಲ್ಲಿ
ಮುಖ ಮರೆಸಿಕೊಳ್ಳುವುವಯ್ಯ
ಈ ಉಷ್ಟ್ರಪಕ್ಷಿಗಳು–
ಸ್ವತಂತ್ರಧೀರ ಸಿದ್ಧೇಶ್ವರ!

## ೩೩೭

ಸಾಧನ ಸಾಧ್ಯ
ಎರಡೂ ಶುದ್ಧವಿರಬೇಕೆಂದರು ಗಾಂಧೀಜಿ;
ಸಾಧ್ಯ ಶುದ್ಧವಿದ್ದರೆ ಸಾಕು,
ಸಾಧನವು ಶುದ್ಧವಿರಲೇಬೇಕಿಲ್ಲವೆಂದ ಮಾರ್ಕ್ಸ್;
ಸಾಧ್ಯವೂ ಶುದ್ಧವಿರಬೇಕಿಲ್ಲ,
ಸಾಧನವೂ ಶುದ್ಧವಿರಬೇಕಿಲ್ಲವೆಂದ ಇಂದಿನ ರಾಜಕಾರಣಿ!
ಸ್ವಾರ್ಥಸಾಧನೆಯಾದರೆ ಸಾಲದೆ,
ಸಾಧನ ಸಾಧ್ಯಗಳ ಗೊಡವೆಯೇಕೆ?
ಸ್ವಯಂಪೂರ್ಣತೆ ದೇಶದ್ದಲ್ಲ,
ಸ್ವಂತದ್ದಾದರೆ ಸಾಕು;
ಬಡತನದ ನಿವಾರಣೆ ದೇಶದ್ದಲ್ಲ.
ಸ್ವಂತದ್ದಾದರೆ ಸಾಕು;
ವಸತಿ ಸಮಸ್ಯೆ ಗೃಹಹೀನರದಲ್ಲ,
ಸ್ವಂತದ್ದು ಪರಿಹಾರಗೊಂಡರೆ ಸಾಕು;

ಆಹಾರ ಸಮಸ್ಯೆ ನಿರ್ಗತಿಕರದಲ್ಲ,
        ತನ್ನದು ನಿವಾರಣೆಯಾದರೆ ಸಾಕು!
ಸ್ವಂತದ ಸುಖವೇ ಸಾಧ್ಯ,
ಸ್ವಾರ್ಥ ನಿಷ್ಠೆಯೇ ಸಾಧನ ಇವನಿಗೆ,
        ಸ್ವತಂತ್ರಧೀರ ಸಿದ್ಧೇಶ್ವರ!

## ೩೩೮

ಮನೆಯ ಹೊರಗೆ ಖಾದೀ ವಸ್ತ್ರಗಳಲ್ಲಿ ಓಡಾಟ,
ಮನೆಯ ಒಳಗೆ ವಿದೇಶೀ ವಸ್ತುಗಳ ಮೇಲಾಟ !
ಮಠದ ಹೊರಗೆ ಕಾಷಾಯ ವಸ್ತ್ರಗಳಲ್ಲಿ ಸಂಚಾರ,
ಮಠದ ಒಳಗೆ ಕೌಪೀನಕ್ಕೇ ಸಂಚಕಾರ !
ಹೊರಗೆ ಸ್ವದೇಶಿ,
ಒಳಗೆ ವಿದೇಶಿ;
ಹೊರಗೆ ಕಾಷಾಯ,
ಒಳಗೆ ಸರ್ವದೇಶಿ!
ಇದು ಆಷಾಢಭೂತಿಗಳ ಕಾಶಿ,
ಮುಖವಾಡದವರ ವಾರಣಾಸಿ!
ಮಾತಿನಲ್ಲಿ ತತ್ತ್ವ ಮಸಿ,
ಕೃತಿಯಲ್ಲಿ ಕಪ್ಪು ಮಸಿ!
        ಸ್ವತಂತ್ರಧೀರ ಸಿದ್ಧೇಶ್ವರಾ,
ಇಲ್ಲಿ ಓಣಿಗೊಬ್ಬ ಸಂನ್ಯಾಸಿ,
ಸಂನ್ಯಾಸಿಗೊಬ್ಬ ಊರ್ವಶಿ!

## ೩೩೯

ಮೊದಲು ಜ್ಞಾನಕ್ಕೆ ಮಾನವಿದ್ದಿತು,
        ಈಗ ಪಾನಕ್ಕೆ ಮಾನ !
ಮೊದಲು ಶೀಲಕ್ಕೆ ಮೊದಲ ಮಣೆ,
        ಈಗದಕ್ಕೆ ಕೊನೆಯ ಸ್ಥಾನ !
ಮೊದಲು ಗುಣಕ್ಕೆ ಗೌರವ,
        ಈಗ ಹಣಕ್ಕೆ ಸಿಂಹಾಸನ !

ಮೊದಲು ಶ್ರೇಷ್ಠವೆನಿಸಿದ್ದುವೆಲ್ಲ ಈಗ ಕನಿಷ್ಠ;
ಈಗ ಶ್ರೇಷ್ಠ ಆವುವೆಂದು ಹೇಳುವುದು ಕಷ್ಟ;
ಅವರವರಿಗೆ ಇಷ್ಟವಾದುದೇ ಅವರವರಿಗೆ ಶ್ರೇಷ್ಠ;
ಇಷ್ಟವಾಗದುದು ನಿಕೃಷ್ಟ
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೂ ಇದರಿಂದಲೇ ತುಷ್ಟ?

## ೩೪೦

ಹಾಳೂರ ಮನೆಗಳಲ್ಲಿ
ಹೆಗ್ಗಣಗಳದೇ ರಾಜ್ಯಭಾರವಯ್ಯ!
ಹಾಳುಬಿದ್ದ ಕಾಡಿನ ಮೇಲೆ
ಕೋತಿಗಳದೇ ಕಾರಭಾರವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಅಜ್ಞ ಅಮಾತ್ಯರ ಆಳ್ವಿಕೆಯಲ್ಲಿ
ಆಪ್ತ ಸಹಾಯಕರದೇ ಅಧಿಕಾರವಯ್ಯ!

## ೩೪೧

ಬಾಗಿಲಿಗೆ ಬಂದ ಬಡವರನ್ನು ಬೈದು ಕಳಿಸಿ
ಬೇಡಿದಷ್ಟು ಬೆಲೆಕೊಟ್ಟು ಬಡವನ ಚಿತ್ರ ಕೊಂಡವರ ಕಂಡೆ,
ಬಡತನವನ್ನೇ ಚಿತ್ರೀಕರಿಸಿ ಬಡವರ ಬಿಡಿಕಾಸುಗಳನ್ನು
ಸುಲಿದು ಸೆಳೆದು ಸೊಕ್ಕಿದವರ ಕಂಡೆ;
'ಗರೀಬಿ ಹಟಾವ್' ಎಂದು ಕೂಗಿ ಕೂಗಿ
ಗರೀಬರ ಪ್ರಾಣವನ್ನೇ ಹಿಂಡಿ ಕುಡಿದವರ ಕಂಡೆ;
ಬಡತನವನ್ನೇ ವೈಭವೀಕರಿಸಿ
ಬಡವರ ಹೊಟ್ಟೆಯ ಮೇಲೆ ಹೊಡೆದ ಬೈರಾಗಿಗಳ ಕಂಡೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರನ್ನೂ ಹೊಲೆಗೆಡಿಸಿ
ನಿನ್ನ ಬಡಭಕ್ತರ ಲೂಟಿ ಮಾಡುವ ಗುರುಗಳನ್ನು ಕಂಡೆ!

## ೩೪೨

ಇನ್ನೊಂದು ಕ್ಷಣಕ್ಕೆ ಸಾಯಲಿರುವ ರೋಗಿಯನ್ನೂ
ಗುಣಪಡಿಸುವೆನೆನ್ನುತ್ತಾನೆ ಹಣಹದ್ದಿನಂಥ ವೈದ್ಯ;

ಸೋಲು ಸ್ವತಸ್ಸಿದ್ಧವಿದ್ದರೂ ಗೆದ್ದುಕೊಡುವೆನೆನ್ನುತ್ತಾನೆ
ಧನಕ್ಕೆ ದಾಸನಾದ ನ್ಯಾಯವಾದಿ;
ಸೀರೆ ನಾರಿನದಿದ್ದರೂ ರೇಷ್ಮೆಯದೆನ್ನುತ್ತಾನೆ
ಸಿರಿಯ ಸನ್ನಿ ಹೊಡೆದ ವ್ಯಾಪಾರಿ;
ತನ್ನ ಆಶನಕ್ಕೇ ಗತಿಯಿಲ್ಲದಿದ್ದರೂ
ಕೈತೋರಿದವರಿಗೆ ಭೋಗ ಭಾಗ್ಯಗಳ ಭರವಸೆ ನೀಡುತ್ತಾನೆ
ದುಗ್ಗಾಣಿಯೇ ಸಗ್ಗವೆನ್ನುವ ಜ್ಯೋತಿಷಿ;
ತನಗೆ ಊರಶಾಲೆಯ ದಾರಿ ಗೊತ್ತಿಲ್ಲದಿದ್ದರೂ
ಕೈಲಾಸದ ದಾರಿ ತೋರುವೆನೆನ್ನುತ್ತಾನೆ-
ಕಾಸೇ ಕೈಲಾಸವೆನ್ನುವ ಗೋಸಾಯಿ!
ಸ್ವತಂತ್ರಧೀರ ಸಿದ್ಧೇಶ್ವರಾ,
ಧನದ ದುರಾಶೆಯ ಮೋಜೆಸ್ ಸರ್ಪ
ಸರ್ವರ ಸರ್ವಸದ್ಗುಣಗಳನ್ನೂ ನುಂಗುತ್ತಲಿದೆಯಯ್ಯ!

**೩೪೩**

ದುಮ್ಮಾನವನ್ನೂ ಸುಮ್ಮಾನದಂತೆಯೇ ಸ್ವೀಕರಿಸಿದರು ಹಿಂದೆ,
ಸುಮ್ಮಾನವನ್ನೂ ದುಮ್ಮಾನದಂತೆ ಅನುಭವಿಸುತ್ತಿಹರಯ್ಯ ಇಂದು!
ಕೊರತೆಗಳನ್ನೂ ಸೊಗದ ಒರತೆಗಳ ತೆರದಲ್ಲಿ ಅಂಗೀಕರಿಸಿದರು ಹಿಂದೆ,
ಸಮೃದ್ಧಿಯನ್ನೂ ಜುಲುಮೆಯ ರಾಮರಾಮವೆಂಬಂತೆ
ಸವಿಯುತ್ತಿಹರಯ್ಯ ಇಂದು!
ದಿನದಿನದ ದಾಳಿಗಳನ್ನೂ ತಾಳಿಕೊಂಡು ಬಾಳುತ್ತಿದ್ದರು ಹಿಂದೆ,
ಮಾರಕಾಸ್ತ್ರಗಳ ಕೋಟೆ ಕಟ್ಟಿಕೊಂಡೂ ಭಯಭೀತರಯ್ಯ ಇಂದು!
ಬರೆಯಲು ಕಾಗದವಿಲ್ಲದಿದ್ದರೂ ಅಮರ ಕೃತಿಗಳ ರಚಿಸಿದರು ಹಿಂದೆ,
ಕಾಲಿಟ್ಟ ಕಡೆಯಲ್ಲೆಲ್ಲ ಕಾಗದವಿದ್ದರೂ ಅಚಿರ ಕೃತಿಗಳೇ ಹೆಚ್ಚಯ್ಯ
ಇಂದು!
ಸ್ವತಂತ್ರಧೀರ ಸಿದ್ಧೇಶ್ವರಾ,
ಭೌತಿಕ ಪ್ರಗತಿ ಜೈವಿಕ ಪ್ರಗತಿಗೆ
ವಿರೋಧಿಯೆಂಬುದು ನಿಜವೇನಯ್ಯ?

**೩೪೪**

ಇಲ್ಲಿ ಚತುರಂಗ ಬಲಕ್ಕಿಂತಲೂ
ಪಂಚಾಂಗಬಲ ಪ್ರಬಲವಾಗಿದ್ದಿತು ಹಿಂದೆ,

ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳೆಲ್ಲ
ಪಂಚಾಂಗಕ್ಕಧೀನವಯ್ಯ ಇಂದು!
ಮಡಿ ಪಂಚೆಗಳ ಹರಡಿ
ಗುಡಿ ರಕ್ಷಿಸಿಕೊಳ್ಳಲು ಹೆಣಗಿದ ಹೆಡ್ಡರು
ಗುಣಿಸಿದ ಪಂಚಾಂಗ ಗೆದ್ದಲಾಗಬೇಕೆ
ಭಾರತದ ಭಾಗ್ಯ ವೃಕ್ಷಕ್ಕೆ?
ಎಳೆಯ ಬಿಡುಗಡೆಗೆ ಎಂಥ ಶಿಕ್ಷೆ-
ಸ್ವತಂತ್ರಧೀರ ಸಿದ್ಧೇಶ್ವರ?

## ೩೪೫

ಮುಂದಾಗುವುದ ಇಂದೇ ಹೇಳುವೆನೆಂಬ ಭವಿಷ್ಯಕಾರ,
ಗಳಿಸಿಕೋ ಮೊದಲು ನಿನ್ನ ಅಕ್ಕಿಬೇಳೆ ಉಪ್ಪು ಖಾರ!
ಇಲ್ಲಿ ಮಾರದು ನಿನ್ನ ಸುಳ್ಳಿನ ಸರಕು,
ನೀನೇ ತಿನ್ನುತ್ತಿರುವಾಗ ಕರುಕು
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ-
ಬಿಡು ನನ್ನ ಬೀದಿ,
ಹಿಡಿ ಮಂತ್ರಿಗಳ ಮನೆಯ ಹಾದಿ!
'ಮುಂದೇನು? ಮುಂದೇನು? ಮುಂದೇನು?'
ಎಂದು ಕುತೂಹಲವೇ ನನ್ನ ಬಾಳಿನ ಸುಧಾನಿಧಿ!
ಅದೂ ಇಲ್ಲವಾದರೆ ಬದುಕೊಂದು ತಿದಿ!

## ೩೪೬

ಕಾಲು ತೊಳೆಸಿಕೊಳ್ಳುತ್ತಿರುವವರಿಂದಲೇ
ಕಾಲು ತೊಳೆಸಿಕೊಳ್ಳುತ್ತ
ಕೈ ತಟ್ಟಿ ಕುಣಿಯುತ್ತಿಹವಯ್ಯ
ಕುರುಡು ನಂಬಿಕೆಗಳು,
ಅಂಥ ಆಚರಣೆಗಳು!
ಇವುಗಳ ಹೆಜ್ಜೆಯೊಡನೆ ಹೆಜ್ಜೆ ಕೂಡಿಸಿ
ಕಣ್ಮುಚ್ಚಿ ಕುಣಿಯುತ್ತಿವೆ
ಜನಿವಾರ, ಶಿವದಾರ, ಶಿಲುಬೆ, ಗಡ್ಡ ಚೆಂಡಿಕೆಗಳು!
ಕಣ್ಣಿದ್ದೂ ಕುರುಡರು, ಕಿವಿಯಿದ್ದೂ ಕಿವುಡರು,
ಬಾಯಿದ್ದೂ ಮೂಕರು, ಮಿದುಳಿದ್ದೂ ಮೂರ್ಖರು,

ಬದುಕಿದ್ದೂ ಸತ್ತಂತಿರುವವರೇ ಹೆಚ್ಚಿರುವ ಈ ದೇಶದಲ್ಲಿ
ಕುರುಡು ನಂಬಿಕೆಗಳದೇ ರಾಜ್ಯವಾದರೆ
ಅದಾವ ಚೋದ್ಯವಯ್ಯ-ಸ್ವತಂತ್ರಧೀರ ಸಿದ್ಧೇಶ್ವರ?

**೩೪೭**

ಇದೊ,
ಚೋರ ಬಾಜಾರಿನವರು ಹಾರ ಹಿಡಿದು ಓಡುತ್ತಲಿದ್ದಾರೆ-
ಯಾರೋ ಮಂತ್ರಿಗಳು ಬರುತ್ತಿರಬೇಕು!
ಅಕೊ,
ಯುವಕರು ಪುಷ್ಪಗುಚ್ಛ ಹಿಡಿದು ನುಗ್ಗುತ್ತಲಿದ್ದಾರೆ-
ಯಾವಳೋ ಮಿನುಗುತಾರೆ ಬರುತ್ತಿರಬೇಕು!
ಅಲ್ಲಿ,
ಡೊಳ್ಳು ಹೊಟ್ಟೆಯ ಧನಿಕರು ದಕ್ಷಿಣೆ ಹಿಡಿದು ಧಾವಿಸುತ್ತಲಿದ್ದಾರೆ-
ಯಾವನೋ 'ಭಗವಾನ್' ಬರುತ್ತಿರಬೇಕು!
ಇದೇನು,
ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲರೂ ಕಂಬಿ ಕಿತ್ತು ಕಾಲ್ದೆಗೆಯುತ್ತಲಿದ್ದಾರೆ-
ಯಾವನೋ ಹಸಿದವ ಬರುತ್ತಿರಬೇಕು!

**೩೪೮**

ಪಂಥವೊಂದಕ್ಕೆ ನಂಟನುಂಟುಮಾಡಿಕೊಂಡಾಗ
ವಿಜ್ಞಾನದ ಆತ್ಮಹತ್ಯೆ;
ಗ್ರಂಥವೊಂದಕ್ಕೆ ಅಂಟಿಕೊಂಡಾಗ
ಜ್ಞಾನದ ಆತ್ಮಹತ್ಯೆ;
ಮತವೊಂದಕ್ಕೆ ಮಾರಿಕೊಂಡಾಗ
ಮತಿಯ ಆತ್ಮಹತ್ಯೆ;
ವ್ಯಕ್ತಿಯೊಬ್ಬನ ಪೂಜೆ ಪ್ರಾರಂಭವಾದಾಗ
ಸ್ವಾತಂತ್ರ್ಯದ ಆತ್ಮಹತ್ಯೆ;
ಪವಾಡ, ಪೊಳ್ಳು ಆಶ್ವಾಸನೆಗಳನ್ನು ನಂಬಿದಾಗ
ಜನತೆಯ ಆತ್ಮಹತ್ಯೆ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೪೯

ಮತ್ತೆ ಬರುತ್ತಿಹಳು ತಂದೆ–
ಹಣತೆ–ಹಬ್ಬದ ಹೆಸರಿನ ಹಣದ ಹೆಣ್ಣು!
        ಬಹು–ಮಹಡಿ–ಭವನಗಳ ಮೇಲೆಯೇ ಇವಳ ಕಣ್ಣು!
ಈ ಸಲವೂ ಬರುವಳಿವಳು
        ಅದೇ ಕೊರತೆಯ ಕರಿಸೀರೆಯುಟ್ಟು,
        ಕಲಬೆರಕೆಯ ಕರಾಳ ಕುಪ್ಪಸ ತೊಟ್ಟು,
        ಬೆಲೆ ಏರಿಕೆಯ ರಕ್ತ ಸಿಕ್ತ ಬೊಟ್ಟಿಟ್ಟು!
ಕಾದಿರುವಂತಿದೆ ಈ ಸಲ ಇವಳಿಗೆ–
        ಚವರಿಗೆ ಬದಲಾಗಿ ಪೊರಕೆಯ ಸೇವೆ,
        ಪಂಚಾರತಿಗೆ ಬದಲಾಗಿ ಪಾಪಾಸಿನ ಪೂಜೆ,
        ಹೋಳಿಗೆಗೆ ಬದಲಾಗಿ ಹಳಸಿದಂಬಲಿಯ ನೈವೇದ್ಯ!
ಹಣದ ಹೆಣ್ಣೆ,
        ಬಡವರ ಹೆಣಗಳ ತಿನ್ನುವ ಡಾಕಿನಿಯಾಗದಿರು–
                ಬಡವರ ಪಾಲಿನ ಭಾಗ್ಯಲಲಕ್ಷ್ಮಿಯಾಗು!
        ಕ್ರೂರ ಧನಿಕರ ಕಿಂಕರಿಯಾಗದೆ ಜನಶಂಕರಿಯಾಗಿ
                ಸ್ವತಂತ್ರಧೀರ ಸಿದ್ಧೇಶ್ವರನ ಕಂಕರಿಯಾಗು!

## ೩೫೦

ಸರ್ವರಿಗೂ ಸಾರ್ಥಕ ಜೀವನ ನೀಡಬಲ್ಲ ಅರ್ಥಶಾಸ್ತ್ರ
ಆಗಿರುವುದಿಂದು ಸ್ವಾರ್ಥಶಾಸ್ತ್ರ, ಅನರ್ಥಶಾಸ್ತ್ರ!
ವಿಷಮತೆಗಳ ಸೃಷ್ಟಿಯಲ್ಲಿಯೇ ಇದರ ಪ್ರಧಾನ ಪಾತ್ರ!
        ಇಂದಿದರ ಉಸಿರುಸಿರೂ ಅಪವಿತ್ರ!
ದುಡಿದವರ ಬೆವರು ರಕ್ತಗಳೇ
        ಇದರ ಕಮ್ಮಟದಲ್ಲಿ ನಾಣ್ಯಗಳಾಗುವುವು;
        ಅವರ ಚರ್ಮಗಳೇ ಅಲ್ಲಿ ನೋಟುಗಳಾಗುವುವು!
                ಸ್ವತಂತ್ರಧೀರ ಸಿದ್ಧೇಶ್ವರಾ,
                ಮಕ್ಕಳ ಬಿಕ್ಕಳಿಕೆಗಳಲ್ಲಿ ನಕ್ಕು ನಲಿವ
                ಈ ಅರ್ಥಶಾಸ್ತ್ರ ಘೋರ ಶಸ್ತ್ರವಯ್ಯ!

## ೩೫೧

ಒಡೆಯರ ಲಾಭದ ಲೋಭಕ್ಕೆ
ಕಡಿವಾಣ ಹಾಕಬೇಕೆಂಬ ದುಡಿವವರ ಆಲೋಚನೆ,
'ಸಮ ವೊ ಪ್ರಪಾ, ಸಹ ಅನ್ನಭಾಗಃ'
ಎಂಬ ಆರ್ಷೇಯ ಆಲೋಚನೆ,
ಜಾತೀಯ ಭೂತ ಭಸ್ಮೀಭೂತವಾಗಬೇಕೆಂಬ
ಅಂಬೇಡಕರ್ ನಾಯಕರ್ ಆಲೋಚನೆಗಳು,
ಬೆಕ್ಕುಗಳ ಕೊರಳಿಗೆ ಗಂಟೆ ಕಟ್ಟಬೇಕೆನ್ನುವ
ಇಲಿಗಳ ಆಲೋಚನೆ,
ತೋಳಗಳ ಬಾಯಿಗಳಿಗೆ ಬೀಗಮುದ್ರೆ ಜಡಿಯಬೇಕೆನ್ನುವ
ಕುರಿಗಳ ಆಲೋಚನೆ,
ಹುಲಿಗಳ ಹಲ್ಲು ಮುರಿಯಬೇಕೆಂಬ
ಹಸುಗಳ ಆಲೋಚನೆ
ಆಲೋಚನೆಗಳಾಗಿಯೇ ಉಳಿಯಬೇಕೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೩೫೨

ಜಾತೀಯತೆಯ ಭೂತಗನ್ನಡಿಯಲ್ಲೀಗ
ಎಲ್ಲರೂ ಒಬ್ಬರೊಬ್ಬರಿಗೆ
ವಿಕಾರವಾಗಿ ಕಾಣತೊಡಗಿದ್ದಾರೆ!
ಈ ಕರಾಳ ಕನ್ನಡಿಯ
ನುಚ್ಚು ನೂರು ಮಾಡಿ
ಪ್ರೀತಿಯ ಕನ್ನಡಿಯ
ಮುಂದೆ ನೀಡಿ
ಎಲ್ಲರೂ ಎಲ್ಲರಿಗೆ
ಮುನ್ನಿನಂತೆ ಕಾಣುವಂತೆ ಮಾಡಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೫೩

ದ್ವಿರಾಷ್ಟ್ರವಾದದ ದುಃಸ್ವಪ್ನ ದೂರಾಗುತ್ತಿದ್ದಂತೆ
ದ್ವಿಭಾರತದ ಭೂತಲೀಲೆ ಪ್ರಾರಂಭವಾಗಿದೆಯಯ್ಯ, ಇಲ್ಲಿ!
ಗಗನಾಭಿಮುಖಿಯಾಗಿ ಬೆಳೆಯುತ್ತಿರುವ ನಗರ-ಭಾರತ,

ರಸಾತಳಕ್ಕೆ ಇಳಿಯುತ್ತಿರುವ ಗ್ರಾಮ-ಭಾರತ,
ಸುಖೀರಾಜ್ಯದ ಹೆಸರಿನಲ್ಲಿ ಎಂಥ ಅಧಃಪಾತ!
ನಗರ ಪೆಡಂಭೂತ, ಗ್ರಾಮ ಬರಿ ಪ್ರೇತ!
ನಗರ ಭಾರತದ ಮೇಲೆ ಸುವರ್ಣವೃಷ್ಟಿ:
ಗ್ರಾಮಭಾರತದ ಮೇಲೆ ಸೂರೆಗಾರರ ಗೃಧ್ರ ದೃಷ್ಟಿ!
ನಗರ ಭಾರತದಲ್ಲಿಯೂ ಕೊಳೆಗೇರಿಗಳ ಬಂಪರ್ ಬೆಳೆ;
ಗ್ರಾಮ-ಭಾರತವಂತೂ ರೌರವ ನರಕ ಜ್ವಾಲೆ;
ರಕ್ತಮಾಂಸಗಳಳಿದ ಬರಿ ಮೂಳೆ;
ಹಳ್ಳಿಗಳು ಭಾರತದ ಬೆನ್ನು-ಮೂಳೆಯಂತೆ;
ಆ ಬೆನ್ನು-ಮೂಳೆ ಬರಿ ಮೂಳೆಯಾದರೇನಂತೆ!
ನಾಲ್ಕಾರು ನಗರಗಳು ಸಿರಿಯ ಸಿಂಹಪಾಲು ಪಡೆದರೆ ಸಾಲದೆ?
ನೂರು ಕುಟುಂಬಗಳು ಭೂರಿಧನರಾಶಿಯ ಮೇಲೆ?
ರಾಸಲೀಲೆ ಮಾಡುತ್ತಿದ್ದರೆ ಸಾಲದೆ?
ಅವರ ವಿಲಾಸ ನೋಡಿ ಹಳ್ಳಿಗರು ಕ್ಲೇಶ ಮರೆಯಬಹುದಲ್ಲ-
ಎನ್ನುವವರ ಸೊಲ್ಲು ಅಡಗಲಿ,
ಗ್ರಾಮಭಾರತಕ್ಕೂ ಕಾಲಬರಲಿ-
ಸ್ವತಂತ್ರಧೀರ ಸಿದ್ಧೇಶ್ವರಾ!

**೩೫೪**

ಈ ಹಳ್ಳಿಯ ಮುಗ್ಧರ ಮಾತು
ಎನಗೆ ಪಳವಾತು!
ಅವರಲ್ಲಿರುವ ಕೇಡಿಗಳು,
ಅನ್ನದಲ್ಲಿ ಸಿಕ್ಕುವ ಹರಳುಗಳು!
ಅವೇ ಉಜ್ಜಿದರಾದಾವು ವಜ್ರದ ಹರಳುಗಳು!
ಹಳ್ಳಿಗರ ಹುದುವಾಳಿಕೆ ಬತ್ತದಿರಲಿ,
ದುರ್ಬುದ್ಧಿ ದುರ್ವ್ಯಸನಗಳವರ ಮುತ್ತದಿರಲಿ,
ನಮ್ಮ ಭಾಗ್ಯ ಭಾಗೀರಥಿಯಾಗಿ
ಗ್ರಾಮಭಾರತ ಬೆಳೆಯುತ್ತಿರಲಿ-
ಸ್ವತಂತ್ರಧೀರ ಸಿದ್ಧೇಶ್ವರ!

೩೫೫

ನಮ್ಮ ಹಳ್ಳಿಗಳಲ್ಲೀಗ
        ಕಳ್ಳಿ ಕತ್ತಾಳೆಗಳೂ ಕಾಣದಾಗಿವೆ-
        ಮಾವಿನ ತೋಪುಗಳ ಮಾತೇಕೆ?
ನಮ್ಮಹಳ್ಳಿಗಳಲ್ಲೀಗ
        ಮಜ್ಜಿಗೆಗೂ ಬರ ಬಂದಿದೆ-
        ಹಾಲು ಮೊಸರುಗಳ ಮಾತೇಕೆ?
ನಮ್ಮಹಳ್ಳಿಗಳಲ್ಲೀಗ
        ರಾಗಿ ಜೋಳಗಳೇ ಸಾಕಷ್ಟಿಲ್ಲ-
        ಕಡಲೆ-ಹಗೇವುಗಳ ಮಾತೇಕೆ?
ನಮ್ಮಹಳ್ಳಿಗಳ
ಒಂದೊಂದು ಕುಟುಂಬವೂ
ಒಂದೊಂದು ಕುರುಕ್ಷೇತ್ರವೀಗ-
ಊರೆಲ್ಲ ಒಂದು ಕುಟುಂಬವೆಂಬ ಮಾತೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಡಿಳ್ಳಿ ಬೊಂಬಾಯಿಗಳ ಬಕಾಸುರರಿಗೆ
ಹಳ್ಳಿಗಳು ತುತ್ತಾಗುತ್ತಿವೆ-
ಈ ಬಕಾಸುರರನ್ನು ಬಗ್ಗುಬಡಿವ
ಬಲಭೀಮರನ್ನೆಂದು ಕಳಿಸುವಿಯಯ್ಯ?

೩೫೬

ಅವಕಾಶ ಪಡೆದು ಬೆಳೆದು ಬೆಳಗಿದವರ ಲೆಕ್ಕವಿಡಬಹುದು,
ಅವಕಾಶ ದೊರೆಯದೆ ಅಳಿದು ಹೋದವರ
                        ಲೆಕ್ಕವಿರಿಸಬಹುದೇನಯ್ಯ?
ಪ್ರಚಾರ ಸಿಕ್ಕು ಪ್ರಸಿದ್ಧರಾದವರ ಪಟ್ಟಿ ಮಾಡಬಹುದು,
ಪ್ರಚಾರಕ್ಕೆ ಎರವಾಗಿ ಮರೆತು ಹೋದವರ
                        ಪಟ್ಟಿಮಾಡಬಹುದೇನಯ್ಯ?
ಪಾಪದ ಧನವಿತ್ತು ಪುಣ್ಯಾತ್ಮರೆನಿಸಿಕೊಂಡವರ
                        ಯಾದಿ ಬರೆಯಬಹುದು,
ಗುಪ್ತ ಭಕ್ತಿಯ ಬಡಭಕ್ತರ ಯಾದಿ ಬರೆಯಬಹುದೇನಯ್ಯ?
                        ಸ್ವತಂತ್ರಧೀರ ಸಿದ್ಧೇಶ್ವರಾ,

ಬಿಡುಗಡೆಯ ಬಳಸಿಕೊಂಡು ಬೆಳೆದ ನಗರಗಳ ಸಂಖ್ಯೆ
ಹೇಳಬಹುದು,
ಬಿಡುಗಡೆ ಬಂದಮೇಲೂ ಕೊಳೆಯುತ್ತಿರುವ ಹಳ್ಳಿಗಳ ಸಂಖ್ಯೆ
ಹೇಳಬಹುದೇನಯ್ಯ?

## ೩೫೭

ಈ ಸಭ್ಯರ ಸಭೆಯಲ್ಲಿ
ಎಂತು ಪ್ರವೇಶಿಸುವುದೆಂದು
ಚಿಂತಿಸುತ್ತಿಹೆಯೇನಣ್ಣ–ಗ್ರಾಮಬಂಧು?
ನೀನಾವ ಪರೀಕ್ಷೆ ಪಾಸು ಮಾಡಿಹೆಯೆಂದು
ಕೇಳಿದರೇನು ಈ ಕೋವಿದರು?
ಪ್ರಮಾಣಿಕತೆಯ ಪರೀಕ್ಷೆಯನ್ನು
ಪ್ರಥಮ ತರಗತಿಯಲ್ಲಿ ಪಾಸು ಮಾಡಿಹೆನೆಂದು ಹೇಳು;
ರಿಣಗೂಳುಣಿಯಲ್ಲವೆಂಬ
ಪ್ರಶಸ್ತಿ ಪಡೆದಿಹೆನೆಂದು ಹೇಳು;
'ನಡೆನುಡಿಯಲ್ಲಿ ಶುಚಿ' ಎಂಬ
ಪದವಿ ಪಡೆದಿಹೆನೆಂದು ಹೇಳು;
ಬೇಡದ ಬಾಯಿ, ನೀಡುವ ಕೈ,
ಕೇಡಿಗೆಳಸದ ಮನ, ನಾಡಿಗೊದಗುವ ತನು,
ಸಣ್ಣತನ ಸುಳಿಯದ ಎದೆಯವನೆಂಬ
ಬಿರುದ ಗಳಿಸಿಹೆನೆಂದು ಹೇಳು!
ನಿನ್ನನ್ನು ಒಳಗೆ ಬಿಡುವುದಿರಲಿ–
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ತಾವೇ ಎದ್ದು ಹೋಗುವರವರು!

## ೩೫೮

ಹಳ್ಳಿ ಹಳ್ಳೆಯೆಂದು ಹಲುಬುವ
ನನ್ನಂಥವವೂ
ಹಳ್ಳಿಗಳಲ್ಲಿರಲು ಹೆದರುವಷ್ಟು
ಹಳ್ಳಿಗಳ ಸ್ಥಿತಿ ಕೆಟ್ಟಿದೆ–
ಸ್ವತಂತ್ರಧೀರ ಸಿದ್ಧೇಶ್ವರ!

### ೩೫೯

ಕನ್ನಡನಾಡಿನ ಚಂದನವನ
ಯಾವ ನಂದನವನಕ್ಕೆ ಕಡಮೆಯಯ್ಯ?
ನನ್ನ ನಾಡಿನ ನಾಗರ-ಹೊಳೆಯ ಆನೆ
ಯಾವ ಐರಾವತಕ್ಕೆ ಕಡಮೆಯಯ್ಯ?
ನನ್ನ ನಾಡಿನ ರೇಷ್ಮೆ ವಸನ
ಯಾವ ಚೀನಾಂಬರಕ್ಕೆ ಕಡಮೆಯಯ್ಯ?
ನನ್ನ ನಾಡಿನ ಕಡಲ ಕರೆ
ಯಾವ ಕಡಲಂಚಿಗೆ ಕಡಮೆಯಯ್ಯ?
ನನ್ನ ನಾಡಿನ ಕಡು ಬೆಡಗಿಯರು
ಯಾವ ಅಪ್ಸರೆಗೆ ಕಡಮೆಯಯ್ಯ?
ನನ್ನ ನಾಡಿನ ನವ ಯುವಕರು
ಯಾವ ದೇವತೆಗಳಿಗೆ ಕಡಮೆಯಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಕನ್ನಡನಾಡಿನ ನೆನಪಾದರೆ ಸಾಕು-
ರೋಮ ರೋಮಗಳೆಲ್ಲ ವದನಗಳಾಗಿ
ವರ್ಣಿಸತೊಡಗುವುವಯ್ಯ!

### ೩೬೦

ನೀನು ಸೃಷ್ಟಿಸುವ ನೃತ್ಯವಿಲಾಸಗಳ ನೋಡುತ್ತಲೇ ಇದ್ದೇವೆ-
ನಮ್ಮ ಅರಳಗುಪ್ಪೆಯ ನಟರಾಜ ಪ್ರತಿಮೆಗೊಮ್ಮೆ
ಪ್ರಾಣವಿತ್ತು ನೋಡಯ್ಯ!
ನೀನು ಸೃಜಿಸುವ ಸುಂದರಾಕಾರಗಳ ನೋಡುತ್ತಲೇ ಇದ್ದೇವೆ-
ನಮ್ಮ ಅಜಂತೆಯ ಚಿತ್ರಗಳಿಗೊಮ್ಮೆ ಚೇತನವಿತ್ತು ನೋಡಯ್ಯ!
ನೀನು ಹುಟ್ಟಿಸುವ ಮಧುರ ಸ್ವರಗಳ ಕೇಳುತ್ತಲೇ ಇದ್ದೇವೆ-
ನಮ್ಮ ವೈಣಿಕರು ಹೊಮ್ಮಿಸುವ ಝೇಂಕಾರಗಳಿಗೆ
ಕೊರಳಿತ್ತು ನೋಡಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಕನ್ನಡ ಕಲಾವಿದರ ಕಲಾಶ್ರೀ ನಿನ್ನ ಸೃಜನಶ್ರೀಗೆ ಸೇರಿದರೆ
ಎಂಥ ಬೆರಗುಗೊಳಿಸುವ ಬೆಡಗಯ್ಯ ಭುವಿಗೆ!

## ೩೬೧

ಬೇಲಿಯಿಲ್ಲದ ಹೊಲ, ಬೆದರು ಇಲ್ಲದ ಕೆಯ್
ಆಗಿದೆಯಯ್ಯ ಕನ್ನಡನಾಡು ಇಂದು!
ಮಂಚಿಕೆಯಿದೆ,
ಮೇಲೆ ಕಾಯ್ವ ಮನುಷ್ಯನಿದ್ದಾನೆ,
ಕೈಯಲ್ಲಿ ಕವಣೆಯಿದೆ-
ಆದರೆ ಕವಣೆಯಲ್ಲಿ ಕಲ್ಲಿಲ್ಲ!
ಕಲ್ಲಿತ್ತರೂ ಕೈಯಲ್ಲಿ ಬಲವಿಲ್ಲ-
ಕಾಯ್ವ ಹುಮ್ಮಸ್ಸಿಲ್ಲ!
ಕನ್ನಡನಾಡಿಗೆ ಕನ್ನಡವೇ ಬೇಲಿ,
ಕನ್ನಡಿಗರ ಕೆಚ್ಚೇ ಕವಣೆಗಲ್ಲು,
ಬತ್ತಳಿಕೆ, ಬಿಲ್ಲು!
ಈ ಬೇಲಿ ಭದ್ರವಾಗಲಯ್ಯ;
ಯಾವ ತುಡುಗು ದನವೂ ಒಳನುಗ್ಗದಷ್ಟು
ಸುಭದ್ರವಾಗಲಯ್ಯ;
ಕಾಯುವ ಕೈ, ಕೈಯ ಕವಣೆ,
ಕವಣೆಯ ಕಲ್ಲು ಜೋರಾಗಿರಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೬೨

ಪಂಚನದಿಗಳ ವಿಜಾಪುರ ಜಿಲ್ಲೆಯಲ್ಲಿಯೇ
ಬರಗಾಲದ ಭೂತಲೀಲೆ;
ತೆಂಗಿನ ತವರು ತಿಪಟೂರಿನಲ್ಲಿಯೂ
ಎಣ್ಣೆ ಕಾಣದ ತಲೆ;
ವಿಶ್ವವಿದ್ಯಾಲಯಗಳಲ್ಲಿಯೇ
ಸಂಸ್ಕೃತಿಯ ಕೊಲೆ;
ಜಾತ್ಯಾತೀತ ಸರಕಾರದ ಕಾರ್ಯಾಲಯಗಳಲ್ಲಿಯೇ
ಜಾತೀಯತೆಯ ಬೃಹದ್-ಬಲೆ;
ಎಲ್ಲೆಲ್ಲಿಯೂ ಹಿಂಸೆಯ ಅಲೆ,
ಭ್ರಷ್ಟಾಚಾರದ ಸೆಲೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸಜ್ಜನರಿಗಿನ್ನೆಲ್ಲಿ ನೆಲೆ?

### ೩೬೩

ಮೇಲಿನಿಂದ ನೋಡಿದರೆ ಅಲೆಕ್ಸಾಂಡರನ ಸೇನೆ ಕಬ್ಬಿನ ತೋಟ;
ಕೆಳಗಿನಿಂದ ನೋಡಿದರೆ ಪುರೂರವನ ಸೇನೆ ಹಲಸಿನ ವನ!
        ಕಬ್ಬಿನ ಕೈ ಮೇಲಾಗಿ ಹಲಸು ಸೋತುದ ಕಂಡೆ;
ಸಿರಿವಂತರ ಸಕ್ಕರೆಯಾಗಿ ಬಡತನ ಹಲಸಿನ ಮರಕ್ಕೆ ಖಂಡೆ!
        ಅಲೆಮನೆಗಳನ್ನು ಹಾಳುಗೆಡವಿದ ಸಕ್ಕರೆಯ ಪಿಡುಗು!
ಮಲೆನಾಡಿನಲ್ಲಿಯೂ ಸಕ್ಕರೆ ಕಾರಖಾನೆಗಳ ಗುಡುಗು!
ಅತ್ತ ಕಾಫಿ ಬೆಳೆಯಲೆಂದು ಕಾಡಿನ ಸಂಹಾರ;
ಇತ್ತ ಕಬ್ಬು ಬೆಳೆಯಲೆಂದು ವನವಿಧ್ವಂಸನ!
ಬರುವುದೇನೋ, ಹಾಲಿಲ್ಲದ ಕಾಫಿ ಕುಡಿದು ಬದುಕುವ ದಿನ!
ಸ್ವತಂತ್ರಧೀರ ಸಿದ್ಧೇಶ್ವರ ಎಚ್ಚರಿಸಿದ; ಸಾವಧಾನ ಸಾವಧಾನ!

### ೩೬೪

ನಮ್ಮದು ಚಿನ್ನದ ನಾಡು,
        ಆದರೆ ನಮಗೆ ಇಡಲು ಹಿತ್ತಾಳೆಯೂ ಲಭ್ಯವಿಲ್ಲ;
ನಮ್ಮದು ರೇಷ್ಮೆಯ ನಾಡು,
        ಆದರೆ ಉಡಲು ಉರುಟು ಬಟ್ಟೆಗೂ ಬರವಿಲ್ಲಿ;
ನಮ್ಮದು ಶರಣ-ದಾಸರ ನಾಡು,
                ಆದರೆ ಆಂಗ್ಲಮಾಧ್ಯಮಕ್ಕೆ ಪೈಪೋಟಿಯಿಲ್ಲಿ;
ನಮ್ಮದು ಗಾಂಧೀನಾಡು,
ಆದರೆ ಗಾಂಧೀವಾದ ಸಮಾಧಿಗೊಂಡುದಿಲ್ಲಿ!
                        ಸ್ವತಂತ್ರಧೀರ ಸಿದ್ಧೇಶ್ವರಾ,
'ಎಂಥ ನಾಡಿದು' ಎಂಥ ಕಾಡಾಯಿತಯ್ಯ!

### ೩೬೫

ಇದು ನಗರದ ಉಪವನ,
ಇಂದು ರಜಾದಿನ!
ಇಲ್ಲಿಗೆ ಬಂದವರು ನಾಗರಿಕ ಜನ;
ಇವರು ಬಂದು ಹೋದರೆಂದು
ನಗುತ್ತಿಲ್ಲ ಅಳುತ್ತಿದೆ ಉಪವನ!
ಬೆಡಗಿನ ಬಳ್ಳಿಗಳ ಕೆಳಗೆ

ಇವರು ತಿಂದೊಗೆದ ಕಡಲೆಕಾಯಿಗಳ ಸಿಪ್ಪೆ;
ಮನಸೆಳೆವ ಮರಗಳ ಕೆಳಗೆ
ಇವರೆಸೆದ ಎಂಜಲೆಲೆ ಕಾಗದಗಳ ಕುಪ್ಪೆ;
ಇವರು ಬಂದಾಗ ಇದು ಉಪವನ,
ಹೋದಾಗ ತಿಪ್ಪೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸ್ವಚ್ಛತೆಯ ವೈರಿಯೆ ಸ್ವೇಚ್ಛಾಚಾರಿ ನಾಗರಿಕತೆ?
ಸ್ವೈರ ಸಭ್ಯತೆಗಿಂತ ಲೇಸೆ ಅನಾಗರಿಕತೆ?

**೩೬೬**

ನಗರದಲ್ಲಿ ಅತ್ತಿತ್ತ ಸುತ್ತಿ ಬಂದೆ–
ಹಳೆಯ ಗಾಯಗಳೊಡನೆ
ಹೊಸ ಗಾಯಗಳನ್ನು ತಂದೆ!
ಹಳೆಯ ಗಾಯಗಳ ಹಕ್ಕಳಿ ಕಿತ್ತವರಾರೋ,
ಹೊಸ ಹೊಸ ಬಿಸಿಗಾಯಗಳನ್ನು ಇತ್ತವರಾರೋ,
ಉರಿವ ಗಾಯಗಳಿಗೆ ಉಪ್ಪು ಮೆತ್ತಿದವರಾರೋ,
ನಾನು ನೋವಿನಿಂದ ನರಳಲು ಅಣಕಿಸಿ ನಕ್ಕವರಾರೋ!
ನಕ್ಕು ನಗಿಸಲಾಗದಿದ್ದರೂ
ನೋವಿನಿಂದಾದರೂ ನಗಿಸಿದೆನಲ್ಲ–
ಈ ಪರದುಃಖಪಾನಪ್ರಮತ್ತಚಿತ್ತರನ್ನು!
ಯಾರೇ ನನ್ನ ಗಾಯಗಳಿಗಾಗಿ ಮರುಗಲಿ, ಬಿಡಲಿ–
ನೀನು ಮರುಗುವಿಯೆಂಬ ಆಸೆಯೇ ಉಸಿರಾಗಿ
ಬದುಕಿಹೆನಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ!

**೩೬೭**

ಹಳೆಯ ಪಿಡುಗುಗಳ ಮೇಲೆ ಹತೋಟಿ ಪಡೆವಷ್ಟರಲ್ಲಿ
ಹೊಸ ಪಿಡುಗಗಳ ಹುಟ್ಟು–
ಸಭ್ಯ ರೂಪ ವೇಷಗಳ ತೊಟ್ಟು!
ಸದ್ದಿನ ಪಿಡುಗು ಬಂದಿದೆಯೀಗ
ನಿದ್ದೆಗೆ ಕೊಳ್ಳಿ ಕೊಟ್ಟು
ಇದೊಂದು ಪ್ರಗತಿ ತಂದ ಬಿಕ್ಕಟ್ಟು!
ವಾಹನಗಳ ಸದ್ದು, ವಾಹನ ಚಾಲಕರ ಸದ್ದು,

ಕಾರ್ಯಾಲಯ, ಕಾರ್ಯಾಗಾರಗಳ ಸದ್ದು,
ಮೈಕುಗಳ, ಸೀಟಿಗಳ, ಸೈರೆನ್ನುಗಳ ಸದ್ದು,
ಭಿಕ್ಷುಕರ, ಘೇರಾವುಗಳ, ಘೋಷಣೆಗಳ
ಸದ್ದು ಸದ್ದೋ ಸದ್ದು-
ಕುಣಿಯುತಿವೆ ಹುಚ್ಚೆದ್ದು,
ಹೊರಟು ಹೋಯಿತು ನೆಮ್ಮದಿ ಎದ್ದು!
ಯಾವ ಪುರುಷಾರ್ಥಕ್ಕೀ ಪಿಡುಗು-
ಸ್ವತಂತ್ರಧೀರ ಸಿದ್ಧೇಶ್ವರ?

**೩೬೮**

ಅಗ್ನಿಶಾಮಕ ದಳಗಳು ಬಂದಿವೆ ನಗರಗಳಿಗೆ;
ದ್ವೇಷಾಗ್ನಿಶಾಮಕ ದಳಗಳು ಎಂದು ಬರುವುವಯ್ಯ?
ಸರಕಾರವೇ ದ್ವೇಷಾಗ್ನಿಯನ್ನು ಹೊತ್ತಿಸುತ್ತಿರುವಾಗ,
ಮಠಾಧಿಪತಿಗಳೇ ಮಾತ್ಸರ್ಯಾಗ್ನಿಯನ್ನು ಹೆಚ್ಚಿಸುತ್ತಿರುವಾಗ,
ಸಾಹಿತಿಗಳೇ ಸ್ವಾರ್ಥಾಗ್ನಿಯನ್ನು ಹಸರಿಸುತ್ತಿರುವಾಗ,
ಪತ್ರಿಕೆಗಳೂ ಜಾತಾಗ್ನಿಯನ್ನು ಹೊಮ್ಮಿಸುತ್ತಿರುವಾಗ,
ಅಂತರಗ್ನಿಶಾಮಕದಳಗಳನ್ನು ಕಳಿಸದಿದ್ದರೆ ಹೇಗಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

**೩೬೯**

ನಿನ್ನ ನೆರೆಯವರನ್ನು
ನಿನ್ನಂತೆಯೇ ಪ್ರೀತಿಸು ಎಂದೆ-ಏಸು ತಂದೆ;
ಪ್ರೀತಿಸುವುದಿರಲಿ,
ಮಾತನಾಡಲೂ ಸಿದ್ಧರಿಲ್ಲ ನಗರಗಳ ನೆರೆಯವರು!
ಒಲಿದಾದರೂ ಒಲಿಸಿಕೊಳ್ಳೋಣವೆಂದರೆ
ಅವರಾದರೂ ಬೇರೆ ಬಾಡಿಗೆ ಮನೆಗೆ-
ಇಲ್ಲವೆ ನಾನೇ ಮತ್ತೊಂದು ಮನೆಗೆ!
ಮಾತನಾಡಿದರೆ ತಾನೆ ಪರಿಚಯ,
ಪರಿಚಯವಾದರೆ ತಾನೆ ಸ್ನೇಹ,
ಸ್ನೇಹ ಬೆಳೆದರೆ ತಾನೆ ನೆರೆಹೊರೆಯ
ಸಂಬಂಧ-ಜ್ಯೋತಿಗೆ ಸ್ನೇಹ?
ಮಾತಾಡುವ ಮುನ್ನವೇ ಮನೆಯ ಬದಲಾವಣೆ,

ನೆರೆಹೊರೆಯ ಸುಖ ಹೇಗೆ ಸಾಧ್ಯವೋ ಕಾಣೆ!
ಅರಿಯದ ಮನಸ್ಸುಗಳು,
ಅರಳದ ಮುಖಗಳು–
ಹೇಗೆ ಸಾಧ್ಯ ಹೇಳು,
ನೆರೆಹೊರೆಯ ಸುಖಗಳು–
ಸ್ವತಂತ್ರಧೀರ ಸಿದ್ಧೇಶ್ವರಾ?

### ೩೭೦

ರಾತ್ರಿ ಮಲಗಿ ಹಗಲು ಎಚ್ಚರಿರುವ
ಪ್ರಾಣಿಗಳನ್ನು ಕಂಡಿದ್ದೆ;
ಹಗಲು ಮಲಗಿ ರಾತ್ರಿ ಎಚ್ಚರಿರುವ
ಪ್ರಾಣಿಗಳನ್ನು ಕಂಡಿದ್ದೆ;
ನಗರಕ್ಕೆ ಬಂದು
ಹಗಲೂ ಮಲಗುವ, ರಾತ್ರಿಯೂ ಮಲಗುವ,
ಹಗಲೂ ಎಚ್ಚರಿರುವ, ರಾತ್ರಿಯೂ ಎಚ್ಚರಿರುವ
ವಿಚಿತ್ರ ಪ್ರಾಣಿಗಳ ಕಾಣುತ್ತಲಿಹೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೭೧

ನಿಮಗೆ ಹಾಸಿಗೆ ಹೊದಿಕೆಗಳು ಬೇಕಿಲ್ಲ,
ಸೊಳ್ಳೆಪರದೆಗಳೂ, ನಿದ್ದೆಗುಳಿಗೆಗಳೂ ಬೇಕಿಲ್ಲ–ಪಶುಪಕ್ಷಿಗಳೆ;
ನಿಮಗಂತೂ ಮಲಗುವುದೇ ಬೇಕಿಲ್ಲ–ಸಸ್ಯವೃಕ್ಷಗಳೆ!
ನಮಗೆಲ್ಲ ಇದ್ದೂ ನಿದ್ದೆ ಸರಿಯಾಗಿ ಹತ್ತುವುದಿಲ್ಲ;
ಮೆತ್ತೆಯ ಮೇಲೊರಗಿ ರೆಪ್ಪೆ ಬಡಿಯುವುದು ತಪ್ಪುವುದಿಲ್ಲ!
ಸುಪ್ತ ಚಿತ್ತದಲ್ಲಿ
ಅತೃಪ್ತ ಅಭಿಲಾಷೆಗಳ ವಿತಂಡತಾಂಡವ!
ಸ್ವಪ್ನ ಸ್ವಪ್ನದಲ್ಲಿ
ವಿಕೃತ ಕಾಮನೆಗಳ ಕೋಡಂಗಿಯಾಟ!
ಹಾಸಿಗೆಯ ಮೇಲೆ ಹೊರಳುತ್ತ ಹೊರಳುತ್ತಲೇ
ಉರುಳುತ್ತದೆ ಇರುಳು,
ನಿದ್ದೆಗಿಲ್ಲ ಕರುಳು!
ಸ್ವತಂತ್ರಧೀರ ಸಿದ್ಧೇಶ್ವರಾ,

ಸಭ್ಯತೆಯ ಸ್ವಾಸ್ಥ್ಯದ ವೈರಿಯೆ?
ದುಡಿಮೆಯ ದಣಿವು, ಧ್ಯಾನದ ಶಾಂತಿಯೇ ದಾರಿಯೆ?

೩೭೨

ನಗರವಾಸಿಗಳು ಬಯಸುವುದನ್ನೆಲ್ಲ ಈಡೇರಿಸುವುದಿಲ್ಲ ನೀನು;
ಕಾರಣವೇನಿರಬಹುದೆಂದು ಗೇನಿಸಿದೆ ನಾನು.
ವೈದ್ಯ ಬಯಸುವುದು ರೋಗಿಗಳು ಹೆಚ್ಚಲೆಂದು;
ನ್ಯಾಯವಾದಿ ಬಯಸುವುದು ಅಪರಾಧಗಳು ಹೆಚ್ಚಲೆಂದು;
ವ್ಯಾಪಾರಿ ಬಯಸುವುದು ಕೊರತೆಗಳು ಹೆಚ್ಚಲೆಂದು
ರಾಜಕಾರಣಿ ಬಯಸುವುದು ನಿರಕ್ಷರಕುಕ್ಷಿಗಳು ಹೆಚ್ಚಲೆಂದು;
ಸರಕಾರದ ಸೂತ್ರಧಾರರು ಬಯಸುವುದು ಸಂಬಳ–ಗಿಂಬಳ
ಹೆಚ್ಚಲೆಂದು;
ಇನ್ನೂ ಬಗೆಬಗೆಯ ಬಯಕೆಗಳು!
ಇಂಥ ಬಯಕೆಗಳ ಈಡೇರಿಸೆಂದು
ಯಾವ ಬಾಯಿಂದ ಬೇಡಿಕೊಳ್ಳಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

೩೭೩

'ಯಾರು ನೀನು? ಯಾರು ನೀನು? ಯಾರು ನೀನು?'
ಯಾರು ನನ್ನವರೆನ್ನುವರೋ ಅವರವನೇ ನಾನು!
ಯಾರೆ ನನ್ನವನೆನ್ನಲಿ, ಬಿಡಲಿ–
ಎಲ್ಲರೂ ನಿನ್ನವರೆಂದು ನೀನು ನಂಬಿಸಿದ ಕಾರಣ–
ಎಲ್ಲರವ ನಾನು!
ಎಲ್ಲರೂ ಒಪ್ಪಲಿ, ಬಿಡಲಿ–
ಎಲ್ಲರವ ನಾನು!
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ಎಲ್ಲರೂ ನನ್ನವರು–
ಎಲ್ಲರವ ನಾನು!

೩೭೪

ಸಕಲ ಮತದವರಲ್ಲಿ ನನಗೆ ಹಿತವರ ಕೊಟ್ಟೆ–
ಎಂಥ ದಯೆ ನಿನ್ನದಯ್ಯ!

ನಿಜದ ನೇರಕೆ ನಡೆಯೆ ಬಸವಪಥವನು ಕೊಟ್ಟೆ-
ಎಂಥ ವರ ನಿನ್ನದಯ್ಯ!
ನನ್ನ ಉನ್ನತಿಗಳಿಸೆ ಕನ್ನಡದ ನುಡಿಯಿತ್ತೆ-
ಎಂಥ ಕೃಪೆ ನಿನ್ನದಯ್ಯ!
ಭಾರತ ಪರಂಪರೆಯ ಭಾಗ್ಯನಿಧಿಯನ್ನಿತ್ತೆ-
ಎಂಥ ಕರುಣೆ ನಿನ್ನದಯ್ಯ!
ಬಾಳ ಬೆಳಕಾಗಿಸುವ
ಎಲ್ಲವನೂ ಇತ್ತರೂ
ಕತ್ತಲಲಿ ಕೊಳೆಯೆ
ನಾನೆ-ನಿರ್ಭಾಗ್ಯನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೭೫

ಮಡಕೆ ಮಾಡುವವರೆಲ್ಲ
ಕುಂಬಾರ ಗುಂಡಯ್ಯರಾಗಿ ಕಾಣಲಯ್ಯ ನನಗೆ;
ಕಟ್ಟಿಗೆ ಹೊರೆ ಹೊತ್ತವರೆಲ್ಲ
ಮೋಳಿಗೆ ಮಾರಯ್ಯರಾಗಿ ತೋರಲಯ್ಯ ನನಗೆ;
ಚರ್ಮ ಹದಗೊಳಿಸುವವರೆಲ್ಲ
ಡೋಹರ ಕಕ್ಕಯ್ಯರಾಗಿ ಕಾಣಿಸಲಯ್ಯ ನನಗೆ;
ಮೆಟ್ಟು ಹೊಲಿಯುವವರೆಲ್ಲ
ಹರಳಯ್ಯಗಳಾಗಿ ಕಾಣಿಸಲಯ್ಯ ನನಗೆ;
ಹುಲ್ಲು ಮಾರುವವರೆಲ್ಲ
ಮಾದಾರ ಚೆನ್ನಯ್ಯಗಳಾಗಿ ಕಾಣಿಸಲಯ್ಯ ನನಗೆ;
ಮೇಳಿ ಮುರಿಯುವವರೆಲ್ಲ
ಇಳಿಹಾಳ ಬೊಮ್ಮಯ್ಯರಾಗಿ ಕಾಣಿಸಲಯ್ಯ ನನಗೆ;
ದನಗಾಹಿಗಳೆಲ್ಲರೂ
ತುರುಗಾಹಿ ರಾಮಣ್ಣರಾಗಿ ಕಾಣಿಸಲಯ್ಯ ನನಗೆ;
ಹರಿಗೋಲನಿಟ್ಟವರೆಲ್ಲ
ಅಂಬಿಗರ ಚೌಡಯ್ಯರಾಗಿ ಕಾಣಿಸಲಯ್ಯ ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾವ ಕಾಯಕದವರೇ ಕಾಣಿಸಲಿ,
ಕಲ್ಯಾಣದ ಆಯಾ ಶರಣರಾಗಿ ತೋರಲಯ್ಯ ನನಗೆ!

೩೭೬

ಯಾರು ಹೇಗಿರುವರೋ
ಹಾಗೆಯೇ ಪ್ರಿಯರೆನಗೆ;
ಯಾರ ಅಭಿರುಚಿ ಏನಿದೆಯೋ,
ಅವರ ಮಟ್ಟಿಗೆ ಅದೇ ಇಷ್ಟ ನನಗೆ;
ಯಾರ ಮತವೇನಿದೆಯೋ,
ಅವರ ಮಟ್ಟಿಗೆ ಅದೇ ಸಮ್ಮತವೆನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರೇ ನನ್ನನ್ನು ಒಪ್ಪಲಿ, ಬಿಡಲಿ–
ಎಲ್ಲರನ್ನು ಒಪ್ಪುವಾಸೆ ನನಗೆ!

೩೭೭

ನನ್ನ ಧರ್ಮ ಭಾರತ ಧರ್ಮ,
ನನ್ನ ಕುಲ ಕನ್ನಡ ಕುಲ,
ನನ್ನ ಗೋತ್ರ ಬಸವ ಗೋತ್ರ,
ನನ್ನ ಸೂತ್ರ ಸಮನ್ವಯ ಸೂತ್ರ,
ನನ್ನ ಯೋಗ ಕಾಯಕ ಯೋಗ,
ನನ್ನ ಯಾಗ ಸೇವಾ ಯಾಗ,
ನನ್ನ ಪಕ್ಷ ಭಕ್ತಿ ಪಕ್ಷ,
ನನ್ನ ಬಾವುಟ ಪ್ರೇಮ ಬಾವುಟ,
ನನ್ನ ವೇದಿಕೆ ವಿವೇಕ ವೇದಿಕೆ,
ನನ್ನ ಜಯಕಾರ ಮಾನವತೆಯ ಜಯಕಾರ,
ನನ್ನ ಈಶ್ವರ ಸ್ವತಂತ್ರಧೀರ ಸಿದ್ಧೇಶ್ವರ!

೩೭೮

ರಸ ಸವಿಯುವ ಹಕ್ಕು ಯಾರಿಗಾದರೂ ಇರಲಿ,
ಕಸವ ರಸವಾಗಿಸುವ ಕಾಯಕ ನನ್ನದಾಗಿರಲಯ್ಯ!
ಹೂ ಮುಡಿಯುವ ಹಕ್ಕು ಯಾರಾದರೂ ಇರಲಿ,
ಬಳ್ಳಿಗೆ ನೀರೆರೆವ ಕಾಯಕ ನನ್ನದಾಗಿರಲಯ್ಯ!
ಬಡವರ ದುಡಿಸಿಕೊಳ್ಳುವ ಅಧಿಕಾರ ಯಾರದೇ ಇರಲಿ,
ಅವರ ಕಂಬನಿ ತೊಡೆವ ಭಾಗ್ಯ ನನ್ನದಾಗಿರಲಯ್ಯ!

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಶರಣರ ನುಡಿ ವಿಮರ್ಶಿಸುವ ಎಂಟೆರ್ದೆ ಯಾರಿಗೇ ಇರಲಿ,
ಅವರು ನುಡಿದಂತೆ ನಡೆವ ಛಲ ನನ್ನದಾಗಿರಲಯ್ಯ!

೩೭೯

ಜನವನದಲ್ಲಿ ಜೇನುಪೆಟ್ಟಿಗೆಯಾಗಿ ಕುಳಿತುದೇ
ನನ್ನ ಪರಮ ಭಾಗ್ಯವಯ್ಯ!
ಹಲವು ಹೂ-ಮರಗಳಿಂದ,
ಹಲವು ಹೂ-ಬಳ್ಳಿಗಳಿಂದ
ಮರಂದ ಮಕರಂದಗಳನ್ನು ತಿರಿದು ತಂದು
ಪ್ರೇರಣೆ-ಪ್ರತಿಕ್ರಿಯೆಗಳ ಜೇನ್ನೊಣಗಳು
ಜೇನಿಟ್ಟುವು ಈ ಜೇನುಗೂಡಿನಲ್ಲಿ!
ಇದು ಒಳ್ಳೆಯ ಜೇನಾಗಿದ್ದರೆ,
ಜನರಿಂದ ಬಂದ ಇದು
ಜನರಿಗೆ ಅರ್ಪಿತ-
ವಾಗಲೆಂಬುದೆನ್ನ ಈಪ್ಸಿತ,
ಸ್ವತಂತ್ರಧೀರ ಸಿದ್ಧೇಶ್ವರ!

೩೮೦

ಬದುಕಿನ ಹೊಲದಲ್ಲಿ ಬೆಳೆದ ತೆನೆಗಳನ್ನು
ಅನುಭವದ ಕಣದಲ್ಲಿ ಹರವಿ,
ವಿವೇಚನೆಯ ಎತ್ತುಗಳಿಂದ ತುಳಿಸಿದೆ;
ಸ್ವವಿಮರ್ಶೆಯ ಬುಟ್ಟಿಯಲ್ಲಿ ತುಂಬಿ,
ನೇರ್ಪಿನ ಮೆಟ್ಟಲನ್ನೇರಿ,
ವಿವೇಕದ ಗಾಳಿಗೆ ತೂರಿದೆ;
ಸುಂಕ ಕಂಕಿಗಳ ಬೇರ್ಪಡಿಸಿ,
ಹೊಳ್ಳು ಜಳ್ಳುಗಳ ಹಾರಿಸಿ,
ಇದ್ದುದರಲ್ಲಿಯೇ ಗಟ್ಟಿಕಾಳ ಆರಿಸಿ,
ಮೂಟೆಕಟ್ಟಿ ಮುಂದಿರಿಸಿದ್ದೇನೆ!
ಯಾರಿಗಾದರೂ ಹಂಚು;
ಕಾಲದ ಹಗೇವಿಗಾದರೂ ಹಾಕು-
ಸ್ವತಂತ್ರಧೀರ ಸಿದ್ಧೇಶ್ವರ!

೩೮೧

ಮಾತೆ, ಕೊನೆಗೂ ನಾನು ಸೋತೆ !
        ನೀನಾಗಲಿಲ್ಲ ಮಾತೆ !
ನಿನ್ನೆದೆಯ ಹಾಲಿಗಾಗಿ ಹಾತೊರೆದೆ ;
ಸಿಕ್ಕುದು ಸೀಸೆಯ ಹಾಲು !
ನಿನ್ನ ಸವಿಲಾಲಿಗಾಗಿ ಹಂಬಲಿಸಿದೆ,
ದೊರೆತುದು ವಾಗರ್ಥಗಳ ಸೋಲು !
ಮನದೊಳಿದ್ದುದ
ಮಾತಾಗಿ ಮಾರ್ಪಡಿಸುವಲ್ಲಿ
        ಕೊನೆಗೂ ಸೋತೆ !
        ನೀನಾಗಲಿಲ್ಲ ಮಾತೆ !
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಿದರೆ ಮಾತ್ರ
ಮಾತೆ ಆದೀತು ಮಾತೆ !

೩೮೨

ಕವನ ಕಥೆ ಕಾದಂಬರಿಗಳ ಕನ್ನಡಕ ಧರಿಸಿ
        ಜೀವನವನ್ನು ನೋಡಿದೆ ಇದುವರೆಗೆ–
ಈಗ ಜೀವನದ ಕಣ್ಣಿನಿಂದಲೇ
        ಕವನ ಕಥೆ ಕಾದಂಬರಿಗಳ ನೋಡತೊಡಗಿಹೆನಯ್ಯ!
ಅನುಭವದ ಕ್ಷೇತ್ರ ಕ್ಷಿತಿಜಗಳನ್ನು
        ಯಥಾಶಕ್ತಿ ವಿಸ್ತರಿಸಿಕೊಂಡೆ ಇದುವರೆಗೆ–
ಈಗ ಅದರ ಪದರು, ಮಡಿಕೆ, ನೆರಿಗೆಗಳನ್ನು
        ಬಿಚ್ಚಿ ಬಿಚ್ಚಿ ನೋಡುತ್ತಲಿಹೆನಯ್ಯ!
ಅರಿವು ಎಲೆದೊಯ್ದನಿತು ಎತ್ತರಕ್ಕೆ ಏರಿದೆ,
        ಬಿತ್ತರಕ್ಕೆ ಹರಡಿದೆ ಇದುವರೆಗೆ–
ಈಗದರ ಎಲ್ಲೆ ಬೋಳು ಬೊಬ್ಬುಳಿಗಳನ್ನು
        ಅರಸುತ್ತಲಿಹೆನಯ್ಯ–
            ಸ್ವತಂತ್ರಧೀರ ಸಿದ್ಧೇಶ್ವರಾ!

೩೮೩

ಸಾಮಯಿಕತೆಯಲ್ಲಿ ಮುಳುಗಿ
        ಸಾರ್ವಕಾಲಿಕತೆಯಲ್ಲಿ ತೇಲದಿದ್ದರೆ,

ವ್ಯಷ್ಟಿಯಲ್ಲಿ ಬೇರೂರಿ
        ಸಮಷ್ಟಿಯಲ್ಲಿ ಹಬ್ಬಿ ಹರಡದಿದ್ದರೆ,
ವ್ಯಕ್ತಿತ್ವದಲ್ಲಿ ಈಸಿ
        ವ್ಯಕ್ತಿತ್ವವಿಲಯನ ತೀರವ ಸೇರದಿದ್ದರೆ,
ಮಾತಿನಲ್ಲಿ ಮೈದೋರಿ
        ಮಾತನ್ನೇ ಮೀರದಿದ್ದರೆ,
ಕಡಲಿನಲ್ಲಿ ಹನಿಯನ್ನು
        ಹನಿಯಲ್ಲಿ ಕಡಲನ್ನು ತೋರದಿದ್ದರೆ
        ಸಾರ್ಥಕತೆ ಯಾವುದಯ್ಯ, ಸಾಹಿತ್ಯಕ್ಕೆ?
          ಸ್ವತಂತ್ರಧೀರ ಸಿದ್ಧೇಶ್ವರಾ,
                    ನನ್ನಲ್ಲಿ ನಿನ್ನನ್ನೂ
ನಿನ್ನಲ್ಲಿ ನನ್ನನ್ನೂ ಗುರುತಿಸದಿದ್ದರೆ
ಧನ್ಯತೆ ಯಾವುದಯ್ಯ, ದೇವರತಿಗೆ?

**೩೮೪**

ನನ್ನ ವಚನಬಂಧ ಸಡಿಲಾದುದೆನ್ನುವರಯ್ಯ
ವಿಮರ್ಶನ ವಿಚಕ್ಷಣರು–
ಇದು ಒಪ್ಪಬೇಕಾದ ಮಾತು,
ಇಲ್ಲಿಲ್ಲ ಬಂಧುರ ಬಂಧದ ಜೀವಾತು!
ಸಡಿಲು ಜಡೆ, ಜೋಲು ಜಡೆ;
        ಕುದುರೆ ಬಾಲ ಜಡೆ,
ಉಲ್ಲೋಲ ಕಲ್ಲೋಲ ಜಡೆ,
ಜಡೆಯೇ ಬೇಕಾಗದ ಬಾಬ್‌ಕಟ್ಟು
                ಪ್ರಿಯವಾಗಿರುವಾಗ
ಯಾವುದು ಸಡಿಲಗೊಂಡಿಲ್ಲ ಈಗ?
        ಮನ ಸಡಿಲು,
        ತನು ಸಡಿಲು,
        ವರ್ತನ ಸಡಿಲು,
        ಜೀವನ ಸಡಿಲು
ಎಲ್ಲೆಲ್ಲಿಯೂ ಸಡಿಲುತನದ ಸಂಕೀರ್ತನ,
                ಶೈಥಿಲ್ಯದ ಶ್ಲಾಘನ!
ಸ್ವತಂತ್ರಧೀರ ಸಿದ್ಧೇಶ್ವರ
ಸಡಿಲಾಯಿತು ನಿನ್ನ ಪೂಜನ!

೩೮೫

ಮಾವಿನ ಚಿಗುರ ಮುರಿದಾಗ
        ಕೋಗಿಲೆಯೊಂದರ ತುತ್ತ ಕಸಿದ ಅನುಭವ;
ಹೂವಿನ ಗೊಂಚಲವೊಂದ ತರಿದಾಗ
        ದುಂಬಿಯೊಂದರ ಅನ್ನ ದೋಚಿದ ಅನುಭವ;
ಹಣ್ಣೊಂದನು ಹರಿದಾಗ
        ಹಕ್ಕಿಯೊಂದರ ಹೊಟ್ಟೆಯ ಮೇಲೆ ಹೊಡೆದ ಅನುಭವ;
ಹಸುವೊಂದರ ಹಾಲ ಕರೆದಾಗ
        ಕರುವಿನ ಪಾಲ ಕಿತ್ತುಕೊಂಡ ಅನುಭವ!
ಎನಿತು ಪಕ್ಷಿಗಳ ಪಾಲು ನನ್ನ ಪಾಲು,
ಎನಿತು ಪ್ರಾಣಿಗಳ ಭಾಗ ನನ್ನ ಭಾಗ!
ಎಲ್ಲರ ಪಾಲನೂ ಪೋಲು ಮಾಡುತ್ತ,
ಪಾಲುಮಾರಿಕೆಯಲ್ಲಿಯೇ ಲೋಲಾಡುತ್ತ
        ಬಾಳುವುದೊಂದು ಬಾಳೇನಯ್ಯ!
ಅನ್ಯರ ಪಾಲನ್ನು ಅಪಹರಿಸುವುದ ಬಿಡಿಸಿ
ಅನ್ಯರಿಗೆ ಪಾಲುಕೊಡುವ ಬುದ್ಧಿಯ ಬರಿಸಯ್ಯ–
                ಸ್ವತಂತ್ರಧೀರ ಸಿದ್ಧೇಶ್ವರ!

೩೮೬

ಕೆಟ್ಟದ್ದನ್ನು ಮಾಡುವುದು ಎಷ್ಟು ಸುಲಭ,
        ಬಿಡುವುದು ಎಷ್ಟು ಕಷ್ಟ!
ಒಳ್ಳೆಯದನ್ನು ಮಾಡುವುದು ಎಷ್ಟು ಕಷ್ಟ,
        ಬಿಡುವುದು ಎಷ್ಟು ಸುಲಭ!
        ಏನಿದರ ಮರ್ಮ,
                ಸ್ವತಂತ್ರಧೀರ ಸಿದ್ಧೇಶ್ವರ?

೩೮೭

ಮಳೆ ಬರಲಿ, ಬರದಿರಲಿ,
ಮಳೆಬಿಲ್ಲು ಮೂಡಿದರೆ ಸಾಕು–
ಎಂದೆನ್ನುವವರೆನ್ನಲಿ,
ನಾನು ಮಾತ್ರ

ಮಳೆ ಬರಲಿ, ಮಳೆಯ ಉಪಉತ್ಪನ್ನವಾಗಿ
ಮಳೆಬಿಲ್ಲು ಬರಲೆನ್ನುವೆನಯ್ಯ!
ಹೊಲಗದ್ದೆಗಳು ಬೆಳೆಯಲಿ, ಬೆಳೆಯದಿರಲಿ–
ಉಪವನಗಳು ನಳನಳಿಸಿದರೆ ಸಾಕು–
ಎಂದೆನ್ನುವವರೆನ್ನಲಿ,
ನಾನು ಮಾತ್ರ
ಹೊಲಗದ್ದೆಗಳು ಹುಲುಸಾಗಿ ಬೆಳೆಯಲಿ,
ಜೊತೆಗೆ ಉಪವನಗಳೂ ಇರಲೆನ್ನುವೆನಯ್ಯ!
ವಿದ್ಯುತ್ತು ಉತ್ಪಾದನೆಗೆ ಒದಗಲಿ ಒದಗದಿರಲಿ,
ಮನೆದೀಪವಾಗಿ ಬೆಳಗಿದರೆ ಸಾಕು–
ಎಂದೆನ್ನುವವರೆನ್ನಲಿ,
ನಾನು ಮಾತ್ರ
ಉತ್ಪಾದನೆಗೇ ಆದ್ಯತೆಯಿರಲಿ,
ಜೊತೆಗೆ, ಅಲಂಕಾರಕ್ಕೂ ದೊರೆಯಲೆನುವೆನಯ್ಯ!
ಬಾಳು ಅರಳಲಿ, ಬಿಡಲಿ,
ಬಣ್ಣಬೆಡಗುಗಳಿದ್ದರೆ ಸಾಕು
ಎಂದೆನ್ನುವವರೆನ್ನಲಿ,
ನಾನು ಮಾತ್ರ
ಬಾಳು ಅರಳಲಿ; ಅದರ ಅರಳಿಕೆಗೆ ನೆರವಾಗಲು
ಬಣ್ಣ ಬೆಡಗುಗಳೂ ಬರಲೆನ್ನುವೆನಯ್ಯ!

**೩೮೮**

‘ಬಾಳು’ ‘ಬದುಕು’ ಎಂಬ ನಾಮಪದಗಳಲ್ಲಿಯೇ
ಕ್ರಿಯಾಪದಗಳನ್ನು ಇರಿಸಿ
ಕನ್ನಡನುಡಿಯ ಅರ್ಥವಂತಿಕೆಯ ಮೆರೆಸಿಹರಯ್ಯ–
ನಮ್ಮ ನುಡಿಯ ಮೂಲಿಗರು!
ಬಾಳು ಸಿಹಿಯಿದ್ದರೂ ಬಾಳು,
ಕಹಿಯಿದ್ದರೂ ಬಾಳು!
ಬದುಕು ಹೂವಿನ ಹಾಸಿಗೆಯಾದರೂ ಬದುಕು,
ಮುಳ್ಳಿನ ಹಾಸಿಗೆಯಾದರೂ ಬದುಕು!
ನಾನ್ಯಃ ಪಂಥಾ ಅಯನಾಯ ವಿದ್ಯತೇ!
ಸ್ವತಂತ್ರಧೀರ ಸಿದ್ಧೇಶ್ವರನಿತ್ತ ಬಾಳು

ಹೇಗಿದ್ದರೂ ಬಾಳು;
ಅವನಿತ್ತ ಬದುಕು
ಹೇಗಿದ್ದರೂ ಬದುಕು!

**೩೮೯**

ಇದುವರೆಗೆ ಮದಕರಿಯಂತೆ
ಮರ ಮುರಿಯುತ್ತ ತಿರುಗಿ
ಈಗಲೀಗ ಇರುವೆಯಾಗಿ
ಮರಮರದ ಮಧುರವನರಿಯತೊಡಗಿಹೆನಯ್ಯ;
ಇದುವರೆಗೆ ಕೆರೆಯ ಕೋಣ ಕೋಣದಲ್ಲಿ ಕೋಣದಂತೆ
ಕೋಲಾಹಲಿಸಿ
ಈಗಲೀಗ ಆಮೆಯಂತೆ ನಿಧಾನವಾಗಿ;
ಸಲಿಲಶುದ್ಧಿ ನಡೆಸಿಹೆನಯ್ಯ!
ಇದುವರೆಗೆ ಅಂಬರದ ಗುಡುಗು ಸಿಡಿಲಿನಂತೆ ಘುಡಘುಡಿಸಿ
ಈಗಲೀಗ ಮಳೆಯಾಗಿ ಇಳಿವ ಬಯಕೆಯಾಗಿಹೆನಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಇದುವರೆಗೆ ಸದ್ದಾಗಿ, ಗದ್ದಲವಾಗಿ,
ಗುದ್ದಾಟವಾಗಿ ಒದ್ದಾಡಿ ಒದ್ದಾಡಿ
ಈಗಲೀಗ ಅರ್ಥಪೂರ್ಣ ಜೀವನವಾಗಿ
ಅರಳಬಯಸಿಹೆನಯ್ಯ!

**೩೯೦**

ಬಾಳಿನ ಬ್ಯಾಂಕಿನ ಬಡ್ಡಿಯಿಂದ
ಬದುಕಿದ ದಿನಗಳು ಮುಗಿದವು!
ಈಗ ಅಸಲಿಗೇ ಕೈಹಚ್ಚಿದ್ದೇನೆ;
ಅದೂ ಕರಗುತ್ತ ನಡೆದಿದೆ!
ದಿವಾಳಿದೆಗೆವ ಮುನ್ನ
ನಿನ್ನೆಡೆಗೆ, ನಿನ್ನಡಿಗೆ ಕರೆದುಕೊಳ್ಳಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

**೩೯೧**

ಏರಿದ್ದ ಎತ್ತರಕ್ಕೆ ಸಮ ಬಿದ್ದ ಪೆಟ್ಟು;
ಪ್ರೇಮದ ತೀವ್ರತೆಗೆ ಸಮ ಸಂಶಯದ ಸಿಟ್ಟು;

ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಪತನಕ್ಕೆ ಸಮವಿರಲಿ ನಿನ್ನ ಅನುಗ್ರಹ!

**೩೯೨**

ನಿನಗಾಗಿ ಒಡೆದ ತೆಂಗಿನಕಾಯಿ ಕೆಟ್ಟಿದ್ದರೆ
ನಿನಗೆ ಪ್ರೀತಿಯಂತೆ;
ಒಂದು ಕೆಟ್ಟ ತೆಂಗಿನಕಾಯಿ ಕಡಮೆಯಾಯಿತೆಂಬ
ಹಿಗ್ಗಿನಿಂದಿರಬಹುದು!
ನಾನೂ ನಿನಗೆ ಅರ್ಪಿತವಾದ
ಕೆಟ್ಟ ಕಾಯೊಂದು!
ಇದನ್ನು ಸ್ವೀಕರಿಸಿ
ಸಂಪ್ರೀತನಾಗಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

**೩೯೩**

ನಿದ್ದೆ ಹತ್ತಿದಾಗ
ಕೈಯಿಂದ ಕಳಚಿ ಬಿದ್ದ ಆಟಿಕೆಯನ್ನು
ಎದ್ದ ಕೂಡಲೇ
ಹುಡುಕ ತೊಡಗುವ ಮಗುವಿನಂತೆ
ಅರಸುತ್ತಲಿಹೆನಯ್ಯ
ಮರಹಿನ ಮಳಲಿನ ಮೇಲೆ
ನಿನ್ನ ಹೆಜ್ಜೆಗುರುತುಗಳನ್ನು!
ನಿನ್ನ ಒಂದೇ ಒಂದು ಹೆಜ್ಜೆಗುರುತು ತೋರಾ,
ಸ್ವತಂತ್ರಧೀರ ಸಿದ್ಧೇಶ್ವರಾ–
ಅದರ ಧೂಳಿ ಧರಿಸುವೆ ತಲೆಯ ಮೇಲೆ,
ಎಲ್ಲ ಮರೆಯುವೆ ಆಮೇಲೆ!

**೩೯೪**

ನಿನ್ನಲ್ಲಿ ನಾನಿರಿಸಿದ ಭಕ್ತಿ
ಸರ್ವಸಹನ ಶಕ್ತಿಯಾಗಿ
ನನಗೇ ಹಿಂದಿರುಗಿದಾಗ
ನನ್ನ ಭಕ್ತಿ ಬೆಸಲಾದ ಅನುಭವ!
ನಿನ್ನಲ್ಲಿ ನಾನಿರಿಸಿದ ವಿಶ್ವಾಸ

ನನ್ನಲ್ಲಿ ನನಗೆ ವಿಶ್ವಾಸವಾಗಿ
ನನಗೇ ಹಿಂದಿರುಗಿದಾಗ
ನನ್ನ ವಿಶ್ವಾಸ ಹಣ್ಣಾದ ಅನುಭವ!
ಇನ್ನೆಲ್ಲಿಯೋ ಇರಿಸಿದ
ಭಕ್ತಿವಿಶ್ವಾಸಗಳು ಬರಿದಾಗಬಹುದು–
ನಿನ್ನಲ್ಲಿ ಇರಿಸಿದುವು
ವ್ಯರ್ಥವಾಗಬಲ್ಲುವೇನಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ?

೩೯೫

ನನ್ನ ಮೊರೆ ನಿನಗೆ ಕೇಳಿಸಲೆಂದು
ನಾನು ಬಯಸುವಂತೆ
ನಿನ್ನ ಕರೆ ನನಗೆ ಕೇಳಿಸಲೆಂದು
ನೀನೂ ಬಯಸುತ್ತಿರಬಹುದಯ್ಯ!
ನನ್ನ ಮೊರೆ ನಿನಗೆ ಕೇಳಿಸಲಿಲ್ಲವೆಂದು
ಕಳವಳಿಸಿ ಕಂಗೆಟ್ಟೆನಾಗಲಿ
ನಿನ್ನ ಕರೆಯನ್ನು ಕೇಳಲು
ನಾನು ಯತ್ನವನ್ನೇ ಮಾಡಲಿಲ್ಲವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೯೬

ನೂಲಿನ ಉದ್ದಕ್ಕೆ ಸರಿಯಾಗಿ
ಪಟದ ಎತ್ತರ,
ಕಡ್ಡಿಯ ಉದ್ದಕ್ಕೆ ಸರಿಯಾಗಿ
ಛತ್ರಿಯ ಬಿತ್ತರ;
ಬುನಾದಿಯ ಆಳಕ್ಕೆ ತಕ್ಕಂತೆ
ಕಟ್ಟಡದ ಎತ್ತರ,
ಹಂದರದ ಅಗಲಕ್ಕೆ ತಕ್ಕಂತೆ
ಬಳ್ಳಿಯ ಬಿತ್ತರ!
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಭಕ್ತಿಯ ನೈಜತೆಗೆ ತಕ್ಕಂತೆ
ನಿನ್ನ ಕರುಣ ಪ್ರಸಾದ!

## ೩೯೭

ಜೀವನದ ಜಟಿಲತನಕ್ಕೆ ಮಂಕಾಗಬೇಕೋ,
ಜೀವಿಗಳ ಕುಟಿಲತನಕ್ಕೆ ಬೆಪ್ಪಾಗಬೇಕೋ
ತಿಳಿಯದಯ್ಯ!
ಪ್ರೀತಿಯ ಮಾತಿನ ಹಿಂದೆ
ಘಾತದ ಹೊಂಚು,
ಹುಸು ಸುಸಿಲಿನ ನಸುನಗೆಯ ಹಿಂದೆ
ಮೋಸದ ಸಂಚು!
ಮುಖಸ್ತುತಿಯಲ್ಲಿ ಶಕುನಿ ಅವಿತಿರಬಹುದು,
ದೀರ್ಘದಂಡ ಪ್ರಣಾಮದಲ್ಲಿ ಶಾಕಿನಿ ಅಡಗಿರಬಹುದು!
ಯಾವ ನಿಮಿಷದಲ್ಲಿ ಯಾವ ವಿಷವಿದೆಯೋ,
ಯಾವ ಹುತ್ತದಲ್ಲಿ ಯಾವ ಹಾವಿಹುದೋ
ಯಾರು ಬಲ್ಲರಯ್ಯ?
ಆದರೂ ಸಡ್ಡು ಹೊಡೆದು ನಿಂತಿದ್ದೇನೆ;
ನುಗ್ಗಾದರೂ ಬಗ್ಗದೆ ಹೋರಾಡುತ್ತಿದ್ದೇನೆ!
ಕಾದಿ ಮಡಿದವರಿಗಿಂತ
ಓಡಿ ಮಡಿದವರು ಹೆಚ್ಚಂತೆ;
ಓಡಿ ಮಡಿವುದಕ್ಕಿಂತ
ಕಾದಿ ಮಡಿವೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೯೮

ಶಿಷ್ಯನಿಂದ ಗುರುವಿಗೆ ಒದಗಿದ ಸೋಲು ಸೋಲೆ?
ಒಲಿದವರಿಂದ ಒಲಿದವರಿಗೆ ಒದಗಿದ ಸೋಲು ಸೋಲೆ?
ಸ್ವತಂತ್ರಧೀರ ಸಿದ್ಧೇಶ್ವರನಿಂದ ಸಿದ್ಧಯ್ಯನಿಗೆ ಒದಗಿದ ಸೋಲು
ಸೋಲೆ?
ಗುರುಬಸವನ ಗೆಲುವೆನೆಂಬ ಭಾಷೆ ತೊಟ್ಟೂ
ಸೋಲಲು ಸಿದ್ಧನಿಹೆನಯ್ಯ!
ಸೋಲಿಸಿದ ನಿನಗೇ ಪಶ್ಚಾತ್ತಾಪವಾಗುವಂತೆ
ಸೋತು ಗೆಲ್ಲುವೆನಯ್ಯ!

## ೩೯೯

ವೇದಾಂತಿಗಳೇ ಕೇಳಿ,
ಸಿದ್ಧಾಂತಿಗಳೇ ಕೇಳಿ,
ಘನ ತಂತ್ರಿಗಳೇ ಕೇಳಿ–
ನಿಮ್ಮ ದುರ್ಜ್ಞೇಯ ದರ್ಶನಗಳಿಗಿಂತ
ಕಂದನ ಮಂದಹಾಸ ಮನೋಜ್ಞವೆನಗೆ;
ನಿಮ್ಮ ದುರವಗಾಹ್ಯ ಬೋಧನೆಗಳಿಗಿಂತ
ಮಾತೆಯ ಮಾತುಗಳು ಮನೋಹರವೆನಗೆ;
ನಿಮ್ಮ ಅಮೂರ್ತ ಚಿಂತನೆಗಳಿಗಿಂತ
ದಾದಿಯ ನಲ್ನುಡಿಗಳು ಮೋಹಕವೆನಗೆ!
        ಬದುಕಿನ ಬದಿಗೆ ನಿಲ್ಲಲು ಬೆದರುವ,
        ಜನತೆಗೆ ಹತ್ತಿರವಿರಲು ಹೆದರುವ
        ನಿಮ್ಮಮುಗಿಲ ಮಾತುಗಳಿಗಿಂತ
ಸ್ವತಂತ್ರಧೀರ ಸಿದ್ಧೇಶ್ವರನಿಗೆ ಪ್ರಿಯವಾದ
        ಸರ್ವಾನುಕಂಪೆಯ
        ಕಂಪಿನ ಕರೆಗೆ ಓಗೊಡುವೆ!

## ೪೦೦

ಎಚ್ಚರದ ಉಸಿರು ತಟ್ಟುತ್ತಲೇ
ಕರಗಿ ಹೋಗುವ ಕನಸುಗಳಂತೆ
ಬದುಕಿನ ಬಿಸಿ ಮುಟ್ಟುತ್ತಲೇ
ಓಡಿ ಹೋದ ಆದರ್ಶಗಳ ಕಂಡೆ;
ವ್ಯಾವಹಾರಿಕತೆಯ ಒರೆಗಲ್ಲಿಗೆ ಉಜ್ಜುತ್ತಲೇ
ಸವೆದುಹೋದ ಯೋಜನೆಗಳ ಕಂಡೆ;
ಈಡೇರಿಕೆಯ ಬೇಡಿಕೆ ಮೂಡುತ್ತಲೇ
ಉಡುಗಿ ಹೋದ ಘೋಷಣೆಗಳ ಕೇಳಿದೆ;
ವಾಸ್ತವತೆಯ ಹಸ್ತ ಸೋಂಕುತ್ತಲೇ
ಬೆದರಿ, ಚೆದುರಿ ಹೋದ ವಾದಗಳನ್ನು ಆಲಿಸಿದೆ!
        ಇವಾವೂ ನೆಮ್ಮದಿಯ ನೀಡದಿರಲು
        ಕಾಯಕ–ದಾಸೋಹಗಳ ಮೂಲಕ

ನಿನ್ನ ಮಕ್ಕಳಿಗಾಗುವುದೇ
ನಿನ್ನವನಾಗುವ ನೇರದಾರಿಯೆಂದರಿತೆ-
ಸ್ವತಂತ್ರಧೀರ ಸಿದ್ಧೇಶ್ವರ!

## ೪೦೧

ಮನದ ಅಂಗಣದ ಕಸ ಗುಡಿಸುವ
ಝಾಡಮಾಲಿಗಳ ಮುಷ್ಕರವಿಂದು-
ನೀನೇ ಗಾಳಿಯಾಗಿ ಸುಳಿದು ಸ್ವಚ್ಛಗೊಳಿಸಯ್ಯ!
ಮತಿಯ ಮೋರಿಗಳ ಹೊಲಸೊಯ್ವ
ಭಂಗಿಗಳು ಸಂಪು ಹೂಡಿದ್ದಾರೆ,
ನೀನೇ ನೀರಾಗಿ ಹರಿದು ಹಸನಗೊಳಿಸಯ್ಯ!
ಯಾರು ತಮ್ಮ ಕೆಲಸಕ್ಕೆ ಕೈಕೊಟ್ಟರೂ
ನಿಮಿಷ ಮಾತ್ರವೂ ನಿನ್ನ ಕೆಲಸ ನಿರ್ಲಕ್ಷಿಸದ
ಕಾಯಕ ನಿಷ್ಠ ನೀನು-
ಕಾಯಕವೇ ನೀನು!
ನಿನ್ನ ಕಾಯಕ ನಿಷ್ಠೆ ನೋಡಿಯಾದರೂ
ನನ್ನಲ್ಲಿ ಕಾಯಕ ನಿರತಿ ಮೂಡಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

## ೪೦೨

ನಮ್ಮ ಉಸಿರಿನ, ನಮ್ಮ ವಾಹನಗಳ ಹೊಗೆಯ
ಹೊಲಸನ್ನು ಹೀರಿ ಶುಚಿಗೊಳಿಸುತ್ತದೆ ಅನಿಲ:
ಕಸದ ಕುಪ್ಪೆಗಳ, ರೋಗಾಣುಮಯ ಶವಗಳ
ಸುಟ್ಟು ಶುದ್ಧಗೊಳಿಸುತ್ತದೆ ಅನಲ;
ನಮ್ಮ ಬೆವರಿನ, ನಮ್ಮ ಮೋರಿ ಚರಂಡಿಗಳ
ಕೊಳೆಯ ತೊಳೆಯುತ್ತದೆ ಜಲ;
ನಾವೆಸೆವ ಕಸಕಡ್ಡಿಗಳ, ರದ್ದಿಗಳ ಗೊಬ್ಬರ ನುಂಗಿ
ಬೆಳೆವ ಮಣ್ಣಾಗಿಸುತ್ತದೆ ನೆಲ!
ನನ್ನನೇಕೆ ಕೇವಲ ಕೊಳೆಗೊಳಿಸುವ
ಜೀವಿಯನ್ನಾಗಿಸಿಹೆಯಯ್ಯ?
ಕೊಳೆ ತೊಳೆಯುವಲ್ಲಿ

ಇವೆಲ್ಲವನ್ನೂ ಮೀರುವಂತೆ ಮಾಡಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

ದ೦೩

ಬಹು ಪ್ರಯೋಗ ಪ್ರಭೂತ ವೈಜ್ಞಾನಿಕ ಸೂತ್ರವೊಂದು
ಅನಿರೀಕ್ಷಿತ ಅಂಶವೊಂದರ ಆವಿಷ್ಕಾರದಿಂದ ಬಿದ್ದು ಹೋದಾಗ
ವಿಜ್ಞಾನಿಗಾಗುವ ನಿರಾಶೆಗಿಂತ,
ಬಹು ಸಂಶೋಧನ ಪ್ರಸೂತ ಐತಿಹಾಸಿಕ ನಿರ್ಣಯವೊಂದು
ಅಜ್ಞಾತ ಶಾಸನವೊಂದರ ಪ್ರಕಟನೆಯಿಂದ ಗೋತ ಹೊಡೆದಾಗ
ಇತಿಹಾಸಕಾರನಿಗಾಗುವ ನಿರಾಶೆಗಿಂತ,
ಬಹು ಚಿಕಿತ್ಸಾ ಸಂಜಾತ ಗರ್ಭಧಾರಣೆಯ ಶಿಶು
ಹೆರಿಗೆಯ ಹೊತ್ತಿನಲ್ಲಿ ಸತ್ತುಹೋದಾಗ
ಆ ತಾಯಿ ಅನುಭವಿಸುವ ಶೋಕರಾಶಿಗಿಂತ
ಹೆಚ್ಚಿನವೇನಲ್ಲ ನನ್ನ ನಿರಾಶೆ, ಹತಾಶೆ, ದುಃಖಾವೇಶಗಳು!
ಅಂತೆಯೇ, ನೀನಿತ್ತ ಶೋಕಗಳ ಅಶೋಕವನದಲ್ಲಿಯೇ
ನನ್ನ ಚೇತನದ ಸೀತೆ ನಿನ್ನ ಕೃಪಾರಾಮನಿಗಾಗಿ ಕಾದಿಹಳಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

ದ೦ಳ

ನೀನಿತ್ತ ಕ್ಲೇಶಗಳೆನ್ನ ಕಂಗೆಡಿಸಿಲ್ಲ;
ನನ್ನ ಸಹನೆ ನಿನ್ನನ್ನು ಖಂಡಿತ
ಕಂಗೆಡಿಸುವುದಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

ದ೦೫

ನನ್ನ ಬದುಕನ್ನು ಚೆಲುವಾಗಿಸೆಂದು ನಿನ್ನ ಬೇಡಿ
ಬದುಕಿಗೇ ಅಪಮಾನ ಮಾಡೆನಯ್ಯ ನಾನು!
ನನಗೆ ಅದನ್ನು ನೀಡು, ಇದನ್ನು ನೀಡು ಎಂದು ಕಾಡಿ
ನಿನ್ನ ಅನುಗ್ರಹದ ಅವಹೇಳನ ಮಾಡೆನಯ್ಯ ನಾನು-
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೦೬

ಮುನ್ನಿನಂತೆ ಮತ್ತೆ ದ್ವಿತೀಯ ತರಗತಿಯಲ್ಲಿ
ಓಡಾಡುತ್ತಲಿದ್ದೇನೆ,
ಶ್ರೀ ಸಾಮಾನ್ಯರೊಡನೆ
ಒಡನಾಡುತ್ತಲಿದ್ದೇನೆ!
ಇದು ನನ್ನ ಭಾಗ್ಯ!
ಜನರ ಬದುಕಿನೊಡನೆ ನೇರ ಸಂಪರ್ಕ
ಎನಿತು ಉದ್ಬೋಧಕ, ಎನಿತು ರೋಮಾಂಚಕ!
ಯಾರೇ ಕೇಳಲಿ, ಕೇಳದಿರಲಿ–
ತನ್ನ ಆತ್ಮಚರಿತ್ರೆಯ ಬಿತ್ತರಣೆಯಲ್ಲಿ ಮಗ್ನ ಆ ವೃದ್ಧ;
ಕುಡಿದು ಬಂದು ಬಡಬಡಿಸುತ್ತಿಹನಾ ಕುಪ್ರಸಿದ್ಧ;
ತನ್ನ ತವರಿನ ವರ್ಣನೆಯಲ್ಲಿ ತಲ್ಲೀನ ಆ ತಂಗಿ;
ಮದುವೆಯ ಕನಸು ಕಾಣುತ್ತಿಹಳೇನೋ ಈ ಲತಾಂಗಿ;
ರಾಜಕಾರಣದ ಮುಚ್ಚುಮರೆಯಿಲ್ಲದ ಚರ್ಚೆ ಅತ್ತ;
ಬೆಲೆಯೇರಿಕೆಯಿಂದ ರೊಚ್ಚಿಗೆದ್ದ ನೌಕರರಿತ್ತ:
ಹೊಸ ಲೇವಿನೀತಿಯ ಖಂಡನೆ ಅಲ್ಲಿ;
ಭಾರತಬಂದಿನ ಮಂಡನೆ ಇಲ್ಲಿ!
ಜೀವನದ ಸಮಗ್ರತೆಯ ಸೂರೆಯಿಲ್ಲಿ!
ಇಂಥ ನೈಜ ಜೀವನ ಚಿತ್ರ ಬೇರೆ ಎಲ್ಲಿ?
ಮತ್ತೆ ನನಗಿದನಿತ್ತೆ;
ಇದು ನೇರ ಪ್ರಜಾಸತ್ತೆ!
ಇದಕಾಗಿ ನಿನಗೆ ಕೋಟಿ ಕೋಟಿ ನಮನ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೦೭

ಕಾಗೆಗಳದೇ ಆಗಲಿ–
ಸಮೂಹಗಾನದಲ್ಲೊಂದು
ಸ್ವಾರಸ್ಯವಿದೆಯಯ್ಯ;
ಕತ್ತೆಗಳದೇ ಆಗಲಿ–
ಸಮೂಹ ದೃಶ್ಯದಲ್ಲೊಂದು
ಸುವಿಲಾಸವಿದೆಯಯ್ಯ;
ಕೋಗಿಲೆಯಂತೆ ಏಕಾಕಿಯಾಗಿ ಹಾಡಿ,

ವನರಾಜನಂತೆ ಒಂಟಿಯಾಗಿ ಗರ್ಜಿಸಿ
ಗಮನ ಸೆಳೆವ ಗರಿಮೆ ನನ್ನದಲ್ಲ;
ಸರ್ವರಲ್ಲಿ ಓರ್ವನಾಗಿ,
ಸಮೂಹ ಗಾನದಲ್ಲೊಂದು ಸ್ವರವಾಗಿ
ಧನ್ಯನಾಗುವೆನಯ್ಯ-ಸ್ವತಂತ್ರಧೀರ ಸಿದ್ಧೇಶ್ವರಾ!

**೪೦೮**

ವಿಶ್ವಜೀವನದ ವಿರಾಟ್ ವಾಹಿನಿಯಲ್ಲಿ
ಒಂದು ಹುಲ್ಲು ಕಡ್ಡಿ ನಾನಯ್ಯ!
ಈ ಮಹಾಪ್ರವಾಹವೆನ್ನನೆಳೆದೊಯ್ಯಬಲ್ಲುದಾಗಲಿ
ಮುಳುಗಿಸಲಾರದಯ್ಯ!
ತೆರೆಗಳಿಗೆ ತೆಕ್ಕೆಬಿದ್ದು,
ತಿರುಗುಣಿಗಳಲ್ಲಿ ತಿರ್ರನೆ ತಿರುಗಿ ಎದ್ದು,
ಸೆಳೆವು ಎಳೆದತ್ತ ಸಾಗಿ,
ಸಾಗರದವರೆಗೂ ಮುಳುಗದೆ ಉಳಿಯಬಲ್ಲೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

**೪೦೯**

ನದಿಯ ದಂಡೆಯ ಮೇಲೆ ಮಲಗಿದ್ದೆ ಒಮ್ಮೆ.
ನಾನು ಮಲಗಿದ್ದರೂ ನದಿ ಹರಿಯುತ್ತಲೇ ಇತ್ತು.
ಸಾಗರವನ್ನು ಸೇರುತ್ತಲೇ ಇತ್ತು!
ಎಷ್ಟು ಸುಲಭವಾಗಿಬಿಟ್ಟಿದೆ!
ಅದಕ್ಕೆ ಗುರಿಮುಟ್ಟುವುದು
ಯಾಕೆ?
ಉಗಮದಲ್ಲಿ ಸೆಲೆಯಾಗಿದ್ದುದು
ಬೆಳೆದು ಹೊಳೆಯಾಗಿದೆಯೀಗ!
ನಿನ್ನಲ್ಲಿಯೂ ಸ್ವತ್ವದ ಸೆಲೆಯಿದೆ,
ಅದೂ ಹೊಳೆಯಾಗಲಿ ಬೇಗ!
ಹೊಳೆಯಾಗದ ಸೆಲೆಗೆ ಬಲ ಎಲ್ಲಿಯದು?
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಿಸಿ
ಕಲಿ ಸೆಲೆಯ ಹೊಳೆಯಾಗಿಸುವ ಕಲೆ!

## ೪೧೦

ಅಲ್ಲವಾದುದು ನುಡಿಯಲೆಳಸಿದಾಗ
ಸೇದಿಹೋಗಲಯ್ಯ ನನ್ನ ನಾಲಗೆ;
ಹೊಲ್ಲವಾದುದ ನೋಡ ಬಯಸಿದಾಗ
ಕುರುಡು ಬೀಳಲಯ್ಯ ನನ್ನ ಕಣ್ಣು;
ಹೊಳ್ಳು ನುಡಿಗಳ ಕೇಳಲಿಚ್ಛಿಸಿದಾಗ
ಕಿವುಡಾಗಲಯ್ಯ ನನ್ನ ಕಿವಿ;
ಸಲ್ಲದವರ ಬಳಿಗೆ ಹೋಗಲಾಶಿಸಿದಾಗ
ಕುಂಟಾಗಲಯ್ಯ ನನ್ನ ಕಾಲು;
ಖುಲ್ಲ ಕೃತ್ಯಗಳ ಮಾಡಲು ಮುಂದಾದಾಗ
ಮೋಟಾಗಲಯ್ಯ ನನ್ನ ಕೈ–
ಸ್ವತಂತ್ರಧೀರ ಸಿದ್ಧೇಶ್ವರ!

## ೪೧೧

ಇಂದ್ರಿಯ ದಮನವೇ ದಾರಿಯೆನ್ನುವವರಿಗೆ
ಕೇಳುವೆನೀ ಪ್ರಶ್ನೆಯನ್ನು–
ಕೇಳಲಮ್ಮ!
ಕಣ್ಣಿನ ದಮನ ಮಾಡಿ ಚೆಲುವಿನ ಸೃಷ್ಟಿ ಸಾಧ್ಯವೆ?
ಕಿವಿಯ ದಮನ ಮಾಡಿ ಸಂಗೀತದ ಹುಟ್ಟು ಸಾಧ್ಯವೆ?
ಕಾಲಿನ ದಮನ ಮಾಡಿ ನೃತ್ಯದ ಪ್ರತಿಪತ್ತಿ ಸಾಧ್ಯವೆ?
ರಸನೆಯ ದಮನ ಮಾಡಿ ಸೂಪದ ಸಂಪತ್ತಿ ಸಾಧ್ಯವೆ?
ತ್ವಚದ ದಮನ ಮಾಡಿ ಸ್ಪರ್ಶದ ರಮ್ಯತ್ವ ಸಾಧ್ಯವೆ?
ಬಾಳು ಬರಡಾಗದೆ, ಕೊರಡಾಗದೆ ಇದರಿಂದ?
ದಮನವಲ್ಲ, ಶಮನ–
ನಿಗ್ರಹವಲ್ಲ, ಮಿತ ಪರಿಗ್ರಹ
ಉಪಾಯ ನೋಡಾ,
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೨

ಸರ್ವರಕ್ಷಕನು ನೀನು ಎಂಬುದ ತಿಳಿದೂ ತಿಳಿದೂ
ನನ್ನ ಅಕ್ಕರೆಯವರ ರಕ್ಷಕ ನಾನೆಂದು ಭ್ರಮಿಸಿ ಬೆಂದಿದ್ದೇನೆ,
ನಾನೇ ರಕ್ಷಿಸಲಾಗದೆ ಬೆಂಡಾಗಿದ್ದೇನೆ!

ನನ್ನ ಮೂಲಕವೇ ರಕ್ಷಿಸುವುದು
ನಿನ್ನ ಉದ್ದೇಶವಾಗಿದ್ದರೆ
ನನ್ನನ್ನೇ ನಿಮಿತ್ತ ಮಾಡಿ ರಕ್ಷಿಸುತ್ತಿದ್ದಿ;
ಇನ್ನಾರಿಂದಲೋ ರಕ್ಷಿಸುವುದು
ನಿನ್ನ ಇಚ್ಛೆಯಾಗಿರುವಾಗ
ನಾನು ರಕ್ಷಿಸದಾದೆನೆಂದು
ಸುಮ್ಮನೆ ತಳಮಳಿಸುತ್ತಲಿಹೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೪೧೩

ಅಕ್ಕಿ ಅನ್ನವಾಗಿದೆಯೆ, ಇಲ್ಲವೆ–
ಎಂಬುದನರಿಯಲು
ಒಂದೆ ಅಗುಳು ಹಿಸುಕಿ ನೋಡಿದರೆ
ಸಾಲದೆ, ಅಯ್ಯ?
ಎಲ್ಲ ಅಗುಳುಗಳನ್ನು ಹಿಸುಕಿಬಿಟ್ಟರೆ
ಉಣ್ಣುವುದೇನನ್ನು?
ನಿನ್ನ ಈ ಅಣುಗನನ್ನು
ಒಮ್ಮೆ ಏಕೆ, ಹತ್ತು ಸಲ ಪರೀಕ್ಷಿಸು,
ಆಮೇಲಾದರೂ ಪರಿರಕ್ಷಿಸು,
ಸ್ವತಂತ್ರಧೀರ ಸಿದ್ಧೇಶ್ವರ!

೪೧೪

ನನ್ನನ್ನು ನಗಿಸಿದವರೇ ಅಳಿಸಿದರು ನನ್ನನ್ನು;
ನನ್ನನ್ನು ಅಳಿಸಿದವರೇ ನಗಿಸಿದರು ನನ್ನನ್ನು;
ಅಳಿಸಿದವರು ಸ್ಮರಿಸುವಂತೆ ಮಾಡಿದರು ನಿನ್ನನ್ನು;
ನಗಿಸಿದವರು ಮರೆಯುವಂತೆ ಮಾಡಿದರು ನಿನ್ನನ್ನು!
ಇದು ಕಾರಣ,
ನಗಿಸಿದವರಿಗೆ ನಮೋ ಎಂದರೆ
ಅಳಿಸಿದವರಿಗೆ ನಮೋ ನಮೋ ಎಂಬೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ!

## ೪೧೫

ದುಃಖಿಸಬಾರದುದಕ್ಕಾಗಿ ದುಃಖಿಸಿ
ಬೆಪ್ಪಾಗಿದ್ದೇನೆ;
ದುಃಖಿಸಬೇಕಾದುದಕ್ಕಾಗಿ ದುಃಖಿಸದೆ
ಪೆಚ್ಚಾಗಿದ್ದೇನೆ;
ಸುಖಿಸಬಾರದುದಕ್ಕಾಗಿ ಸುಖಿಸಿ
ಸುಸ್ತಾಗಿದ್ದೇನೆ;
ಸುಖಿಸಬೇಕಾದುದಕ್ಕಾಗಿ ಸುಖಿಸದೆ
ಮಂಕಾಗಿದ್ದೇನೆ!
ನಾನು ಗೈದ ಒಪ್ಪುಗಳಿಗಿಂತ ತಪ್ಪುಗಳೇ ಹೆಚ್ಚು;
ಆದರೂ ನನಗೆ ನಾನು ಜಾಣನೆಂಬ ಹುಚ್ಚು
ಇನ್ನು ಒಪ್ಪುಗಳು ನನ್ನವೆಂದು ಅಹಂಕರಿಸೆ,
ತಪ್ಪುಗಳ ನಿನ್ನ ತಲೆಯ ಮೇಲೆ ಹೊರಿಸೆ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೬

ಬೇರುಗಳ ತಿಂದು ಬದುಕುತ್ತಿರುವವರಾರೋ,
ದನತಿನ್ನದ ಎಲೆಗಳ ತಿಂದು ಬದುಕುತ್ತಿರುವವರಾರೋ,
ಈಚಲ ಬೊಡ್ಡೆಯ ದಿಂಡು ತಿಂದು ಬದುಕುತ್ತಿರುವವರಾರೋ,
ತಮ್ಮನೇ ತಿನ್ನುತ್ತಿರುವ ಬನ್ನವನೇ ತಿಂದು
ಬದುಕುತ್ತಿರುವವರಾರೋ,
ಈ ಬಡವರೇ ಹೆಚ್ಚಿರುವ ಸಿರಿವಂತ ಭಾರತದಲ್ಲಿ!
ಈ ಕರುಳ ಹಿಂಡುವ ಕರಾಳ ದೃಶ್ಯಕ್ಕಿಂತ
ತಮ್ಮನ್ನು ಬಡವರಾಗಿಸಿದವರೇ
ತಮ್ಮ ಭಾಗ್ಯವಿಧಾತರೆಂದು ನಂಬಿರುವ
ಬಡವರ ಬುದ್ಧಿಯ ಬಡತನವೆನ್ನ
ಕರುಳ ಕಿವಿಚುತ್ತಿದೆಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ!

## ೪೧೭

ಹಳ್ಳಿಯಲ್ಲಿ ಹುಟ್ಟಿ ನಗರ ಸೇರಿದವರು
ಎಷ್ಟು ಬೇಗ ಹಳ್ಳಿಯನ್ನೇ ಮರೆತು ಬಿಡುತ್ತಾರೆ!

ಬಡವರಾಗಿ ಹುಟ್ಟಿ ಒಡೆಯರಾದವರು!
ಎಷ್ಟು ಬೇಗ ಬಡವರನ್ನೇ ಮರೆತು ಬಿಡುತ್ತಾರೆ!
ಹರಿಜನರಾಗಿ ಹುಟ್ಟಿ ಹಿರಿಜನರಾದವರು
ಎಷ್ಟು ಬೇಗ ಹರಿಜನರನ್ನೇ ಮರೆತು ಬಿಡುತ್ತಾರೆ!
ಕನ್ನಡಿಗರಾಗಿ ಹುಟ್ಟಿ ಇಂಗ್ಲೀಷು ಕಲಿತವರು
ಎಷ್ಟೇ ಬೇಗ ಕನ್ನಡವನ್ನೇ ಮರೆತು ಬಿಡುತ್ತಾರೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ದಯೆಯಿಂದಲೇ ಉನ್ನತಿ ಪಡೆದವರು
ಎಷ್ಟು ಬೇಗ ನಿನ್ನನ್ನೇ ಮರೆತು ಬಿಡುತ್ತಾರೆ!

## ೪೧೮

ಬಡವರ ಒಡೆಯರ ನಡುವಣ ಅಂತರವ
ಇನ್ನಷ್ಟು ಹೆಚ್ಚಿಸುತ್ತ
ಸಮಾಜವಾದವ ತರುವ ಭರವ ನೋಡಾ!
ಕನಿಷ್ಠ ಗರಿಷ್ಠ ವೇತನ ಶ್ರೇಣಿಗಳ
ಅಂತರವ ಇನ್ನೂ ಹೆಚ್ಚಿಸುತ್ತ
ಸಾಮಾಜಿಕ ನ್ಯಾಯ ಸಾಧಿಸುವ ಹದನ ನೋಡಾ!
ಕಲಿಯುವ ವೆಚ್ಚವನ್ನು
ಸಿಕ್ಕಾಪಟ್ಟೆ ಹೆಚ್ಚಿಸಿ
ಸಮಾನತೆಯ ಬರಿಸುವ ಬಗೆಯ ನೋಡಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸತ್ತ ಜಾತಿಗಳನ್ನು ಮತ್ತೆ ಬದುಕಿಸಿ
ಜಾತ್ಯತೀತ ರಾಷ್ಟ್ರ ಕಟ್ಟುವ ಭರವ ನೋಡಾ!

## ೪೧೯

‘ಅಲಸಂದೆಯ ಗಿಡ; ಜೋಳದ ಬಳ್ಳಿ’ ಎನ್ನುವವರು
ನಮ್ಮ ಕೃಷಿಯೋಜನೆಯ ರೂಪಿಸುತ್ತಿಹರಯ್ಯ;
‘ಕಮ್ಮಾರನ ತ್ರಾಸು, ಅಕ್ಕಸಾಲಿಗನ ಕೊಡತಿ’ ಎನ್ನುವವರು
ನಮ್ಮ ಉದ್ಯಮಯೋಜನೆಯ ರೂಪಿಸುತ್ತಿಹರಯ್ಯ;
‘ಕುಂಬಾರನ ತಕಲಿ, ನೇಕಾರನ ತಿಗರಿ’ ಎನ್ನುವವರು
ನಮ್ಮ ಗ್ರಾಮೋದ್ಯೋಗ ಯೋಜನೆಯ ರಚಿಸುತ್ತಿಹರಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,

'ಎತ್ತು ಈಯಿತು' ಎಂದರೆ
'ಹತ್ತಿಯ ಕಾಳಿಡು' ಎನ್ನುವವರು
ನಮ್ಮ ಪಶುಸಂಗೋಪನಾ ಯೋಜನೆಯ ರಚಿಸುತ್ತಿಹರಯ್ಯ!

**೪೨೦**

ತಿರಿದು ತಂದುದರಲ್ಲಿ
ಅರ್ಧ ಭೀಮನಿಗೆ
ಅರ್ಧ ಉಳಿದವರಿಗೆ
ಹಂಚುತ್ತಿದ್ದಳು ಕುಂತಿ-
ತಿರಿದು ತಂದುದರಲ್ಲಿ
ಅರ್ಧ ಡಿಳ್ಳಿಗೆ
ಅರ್ಧ ಉಳಿದ ದೇಶಕ್ಕೆ
ಹಂಚುತ್ತಲಿಹಳು ಅಭಿನವ ಕುಂತಿ!
ಅರ್ಧ ಪಾಲು ತಿಂದೂ
ಉಳಿದ ದೇಶವ ಮರೆತ
ಡಿಳ್ಳಿಯ ಡೊಳ್ಳು ಹೊಟ್ಟೆಯ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

**೪೨೧**

ಸವದತ್ತಿಯ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ನಿಲ್ಲಿಸಬೇಕೆನ್ನುವವರು
ದಿಲ್ಲಿಯ ಎಲ್ಲಮ್ಮನಿಗೆ
ಜೋಗಿತಿಯರಾಗುವುದ
ಮೊದಲು ನಿಲ್ಲಿಸಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

**೪೨೨**

ನಮ್ಮ ಆಳುವ ಪಕ್ಷ
ಮತ್ತೆ ಚುನಾವಣಾ ಚಿಹ್ನೆಯನ್ನು
ಬದಲಿಸಿದರೂ ಬದಲಿಸಬಹುದಂತೆ!
ನೀನಾವ ಚಿಹ್ನೆಯ ಸೂಚಿಸುವಿಯಯ್ಯ

ಎಂದು ಸ್ವತಂತ್ರಧೀರ ಸಿದ್ಧೇಶ್ವರನ ಕೇಳಿದರೆ
'ಭಿಕ್ಷಾಪಾತ್ರೆಯ ಚಿಹ್ನೆ' ಎಂದು ಹೇಳಬೇಕೆ?

೪೨೩

ಕತ್ತಲೆಯನ್ನು ಕತ್ತಲೆಯಿಂದ ಎದುರಿಸಿದರೆ
ದೊರೆವುದು ಕಗ್ಗತ್ತಲೆಯಯ್ಯ;
ದ್ವೇಷವನ್ನು ದ್ವೇಷದಿಂದ ಎದುರಿಸಿದರೆ
ದೊರೆವುದು ವಿದ್ವೇಷವಯ್ಯ;
ಅನೀತಿಯನ್ನು ಅನೀತಿಯಿಂದ ಎದುರಿಸಿದರೆ
ದೊರೆವುದು ದುರ್ನೀತಿಯಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕತ್ತಲೆಯ ಬೆಳಕಿನಿಂದ, ದ್ವೇಷವ ಪ್ರೀತಿಯಿಂದ,
ಅನೀತಿಯ ಸುನೀತಿಯಿಂದ ಗೆಲ್ಲುವ ಗುಟ್ಟು ತೋರಾ!

೪೨೪

ಹೆರವರಿಗೆ ನೆರವಾಗಬಹುದಾಗಿದ್ದ
ಸುಸಂಧಿಗಳನ್ನು ಕಳೆದುಕೊಂಡಿದ್ದೇನೆ;
ಒಳ್ಳೆಯದನ್ನು ಮಾಡಬಹುದಾಗಿದ್ದ
ಅವಕಾಶಗಳನ್ನು ಕಳೆದುಕೊಂಡಿದ್ದೇನೆ;
ಇನ್ನೂ ಮೇಲಾಗಬಹುದಾಗಿದ್ದ
ಸಾಧ್ಯತೆಗಳನ್ನು ಕಳೆದುಕೊಂಡಿದ್ದೇನೆ!
ಓಪರನ್ನು, ಕೂರ್ಪರನ್ನು
ಕಳೆದುಕೊಂಡ ಕನಲ್ಕೆಗಿಂತ,
ಸಿರಿಸಂಪದಗಳ
ಕಳೆದುಕೊಂಡ ಕೊರಗಿಗಿಂತ
ಹೆಚ್ಚು ಕಳವಳ ಕೊಡುವ ಹಾನಿಗಳಿವು ನನಗೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಇನ್ನೇನ ಕಳೆದುಕೊಂಡರೂ
ಇನ್ನಿವನು ಕಳೆದುಕೊಳ್ಳದಂತೆ ಕರುಣಿಸಾ!

೪೨೫

ಒರತೆಯಂತೆ ನನ್ನ ಒಂಡು ನನಗಿರಲಿ–
ಮೇಲಿನ ತಿಳಿನೀರು ಮಂದಿಗಿರಲಯ್ಯ!

ಸ್ಫಟಿಕ ಕ್ಲೋರಿನುಗಳ ಹಾಕಿ ತಿಳಿಗೊಳಿಸಲು
ಕುಡಿಯುವ ನೀರಿನ ಖಜಾನೆಯೇನಲ್ಲ ನಾನು;
ನಾಲ್ವರು ನೀರು ಕೊಳ್ಳಬಲ್ಲ ಕಿರು ಒರತೆ ನಾನು!
ಬಿಟ್ಟುಬಿಡಿ ನನ್ನನ್ನು ನನ್ನ ಪಾಡಿಗೆ ಸ್ವಲ್ಪ ಹೊತ್ತು-
ಪದೇ ಪದೇ ಕದಡದಿರಿ ನನ್ನ ಚಿತ್ತು!
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ,
ನಿರ್ಮಲವಾದೀತು ನನ್ನ ಮನಸ್ಸು-
ಬೆಳಕಾದೀತು ತಮಸ್ಸು!

### ೪೨೬

ಬದುಕಿನ ಬಿರುಬಿಸಿಲಿನಿಂದ ಹುರುಪಳಿಸಿದಾಗ
ನಿನ್ನ ನಾಮವೆ ತಣ್ಣೆಳಲು,
ನಿನ್ನ ನೆನಹೆ ತಣ್ಣೀರು ನನಗೆ;
ಅವರಿವರ ಬಿರುನುಡಿಗಳಿಂದ ಹೌಹಾರಿದಾಗ
ನಿನ್ನ ಶರಣರ ವಚನಗಳೆ
ವ್ಯಥೆಯ ಕಳೆವ ಸ್ನೇಹಿತರೆನಗೆ;
ನಂಬಿದವರ ವಿಶ್ವಾಸಘಾತದಿಂದ ಬಸವಳಿದಾಗ
ಕನ್ನಡದ ಮಹೋನ್ನತ ಕೃತಿಗಳೆ
ಸಾಂತ್ವನದ ಶಶಿಕಿರಣ ನನಗೆ-
ಸ್ವತಂತ್ರಧೀರ ಸಿದ್ಧೇಶ್ವರ!

### ೪೨೭

ತನ್ನ ದೋಣಿಯ ಪರಿವಹನ ಸಾಮರ್ಥ್ಯಕ್ಕಿಂತ
ಹೆಚ್ಚಿನ ಜನರನ್ನು ಕೂರಿಸಿಕೊಂಡ
ಅಂಬಿಗನಂತಾಗಿದೆಯಯ್ಯ ನನ್ನ ಅವಸ್ಥೆ!
ಪಡೆದ ಶಕ್ತಿ ಸ್ವಲ್ಪ,
ಇರುವ ಸಮಯ ಸ್ವಲ್ಪ,
ದೊರೆತ ಆರೋಗ್ಯ ಅಲ್ಪ,
ಆಸಕ್ತಿಗಳೋ, ಅನೇಕ!
ಯಾವುದನ್ನೂ ಬಿಡುವಂತಿಲ್ಲ,
ಯಾವುದೂ ಈಡೇರುವಂತಿಲ್ಲ!
ನೀನು ಕರುಣಿಸಿದರೆ ಮಾತ್ರ

ಒಂದಲ್ಲಾದರೂ ಸಫಲತೆ,
ಇಲ್ಲದಿರೆ, ಉದ್ದಕ್ಕೂ ವಿಫಲತೆ-
ಸ್ವತಂತ್ರಧೀರ ಸಿದ್ಧೇಶ್ವರ!

೪೨೮

ರಂಗನ ತಿಟ್ಟಿನಲ್ಲಿಂದು ಪಕ್ಷಿಗಳ ಜಂಗೀ ಜಾತ್ರೆ,
ಬಹಿರಂಗ ಸಭೆ!
ಹೋದವರ್ಷ ಬಂದಿದ್ದ
ಎಲ್ಲ ಪಕ್ಷಿಗಳೂ ಬಂದಿರಲಾರವು,
ಬರದಿದ್ದರೇನಂತೆ?
ಪುಟಿಯುತ್ತಿದೆ
ಹಿಗ್ಗಿನ ಬುಗ್ಗೆ ಎಂದಿನಂತೆ!
ಮೇಲೆ ಹೋಗಿ ಹೋಗಿ ಬರುವ ಈ ಪಕ್ಷಿಗಳು,
ಕೆಳಗೆ ಹೋಗಿ ಮತ್ತೆ ಬರದ ಕಾವೇರಿಯ ತೆರೆಗಳು,
ನಡುವೆ ಹೋಗದ ಹಾಗೂ ಬರದ ತಿಟ್ಟು ತರುಮರಗಳು,
ನನ್ನೊಳಗೆ
ಹಕ್ಕಿಗಳೊಡನೆ ಹಾರುವ,
ನೀರಿನೊಡನೆ ಹರಿವ,
ನಡುಗಡ್ಡೆಯಲ್ಲಿ ನಿಲ್ಲುವ,
ಒಮ್ಮೆಗೆ ಒಳಸೇರಿ
ಎಲ್ಲವನ್ನು ಮರೆವ ಮನ-
ಸ್ವತಂತ್ರಧೀರ ಸಿದ್ಧೇಶ್ವರರಾಯತನ!

೪೨೯

ರಂಗನ ತಿಟ್ಟಿನ ಲಕ್ಷಪಕ್ಷಿಗಳ ಗಜಿಬಜಿಯಲ್ಲಿಯೇ
ಆನಂದ ಸಂವಿತ್ತನ್ನು ಅನುಭವಿಸಿದೆ;
ನಗರ ಜೀವನದ ಅನಿವಾರ್ಯ ಏಕಾಕಿತನದಲ್ಲಿಯೂ
ಮಬ್ಬು ಕವಿದ ಮನದ ಗಲಿಬಿಲಿಯನ್ನು ಕೇಳಿದೆನಯ್ಯ!
ಜನಜಂಗುಳಿಯ ನೂಕು ನುಗ್ಗಲಿನಲ್ಲಿಯೂ,
ಮಾರುಕಟ್ಟೆಗಳ ಗದ್ದಲ ಗೊಂದಲಗಳಲ್ಲಿಯೂ,
ರೈಲು-ಬಸ್ಸು-ವಿಮಾನ ನಿಲ್ದಾಣಗಳಲ್ಲಿಯೂ
ಶಾಂತಿಶ್ರೀ ಮನೋವಲ್ಲಭನಾಗಿ ಮೆರೆವ

ವರವ ಕರುಣಿಸಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

**೪೩೦**

ಮಂಜರನ ಪಂಜಕ್ಕಂಜಿ
ಪಂಜರವ ಬಯಸುವುದೆ ಗಿಳಿ!
ಕಮಲದಲ್ಲಿ ಬಂದಿಯಾಗುವ ಭಯದಿಂದ
ಎಲೆಯ ನೆಕ್ಕುವುದೆ ಅಳಿ?
ದೀಪವು ಸುಡುವುದೆಂದು ತಿಳಿದು
ಮಂಕಿಗೆ ಮುತ್ತಿಡುವುದೆ ಶಲಭ?
ಕಾಡಿನಲ್ಲಿ ಬೇಡನ ಭಯವೆಂದು
ಬೀಡ ಬಯಸುವುದೆ ಕಲಭ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸತ್ಯದ ದಾರಿ ದುರ್ಗಮವೆಂದು
ಮಿಥ್ಯಾಮಾರ್ಗಿಯಾಗುವನೆ ನಿನ್ನ ನಿಜಭಕ್ತ?

**೪೩೧**

ಮನದ ನಿಬಿಡ ನಿರ್ಜನ ವನದಲ್ಲಿ
ದಾರಿತಪ್ಪಿ ಅಲೆದಲೆದು ಅಳಲಿದೆ!
ಬುದ್ಧಿಯ ವಿಂಧ್ಯಕಂದರಗಳ ಕವಲುದಾರಿಗಳಲ್ಲಿ
ದಾರಿ ತಪ್ಪಿ ತಿರುಗಿ ತಿರುಗಿ ತೊಳಲಿದೆ!
ಹಮ್ಮಿನ ಹುಮಾಯೂನ ಗೋರಿಯಲ್ಲಿ
ದಾರಿತಪ್ಪಿ ಅಂಡಲೆದು ಬಳಲಿದೆ!
ಚಿತ್ತದ ಹುತ್ತದ ಸುರುಳಿ–ದಾರಿಗಳಲ್ಲಿ
ಸುತ್ತಿ ಸುತ್ತಿ ಸುಸ್ತಾದೆ!
ಮುಂದುಗಾಣದೆ ಕೂಗಿದೆ :
"ಯಾವುದು ದಾರಿ,
ಯಾವುದು ದಾರಿ,
ಯಾವುದು ದಾರಿ?"
ಸ್ವತಂತ್ರಧೀರ ಸಿದ್ಧೇಶ್ವರನೆಂದ:
"ಜವಾಬದಾರಿ?"

## ೪೩೨

ಬೇರೆಯವರು ಬಂಧಿಸಿದ್ದರೆ
ದೂರಬಹುದಾಗಿದ್ದಿತವರನ್ನು-
ನನ್ನನ್ನು ನಾನೇ ಬಂಧಿಸಿಕೊಂಡು
ಗೋಳಿಡುತ್ತಲಿಹೆನಯ್ಯ!
ರಕ್ತ ಸಂಬಂಧದಿಂದ, ಜಾತಿ ಸಂಬಂಧದಿಂದ,
ವೃತ್ತಿ ಸಂಬಂಧದಿಂದ, ಆಸ್ತಿ ಸಂಬಂಧದಿಂದ,
ದುರ್ವ್ಯಸನ ದುಶ್ಚಟಗಳ ಸಂಬಂಧದಿಂದ,
ಹಲವು ಹನ್ನೆರಡು ಸಂಬಂಧಗಳಿಂದ
ನನ್ನ ನಾನೇ ಬಂಧಿಸಿಕೊಂಡು
ಅನ್ಯರ ಮೇಲೆ ಹರಿಹಾಯುತ್ತಿಹೆನಯ್ಯ!
ನಿನ್ನಡಿಗೆ ಬಂಧಿಸಿಕೊಂಡಿದ್ದರೆ
ನನಗದೇ ಬಿಡುಗಡೆಯಾಗುತ್ತಿತ್ತು!
ಈ ಭಕ್ತಿಯ ಬಂಧನ ಬಯಸದೆ
ರಕ್ತಿಯ ಬಂಧನಗಳನ್ನು ಬಯಸಿ
ರಿಕ್ತನಾಗಿಹೆನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೩೩

ಮನೆ ಬಿಟ್ಟು ಮಠ ಕಟ್ಟಿಕೊಂಡೆ-
ಇದು ಸಂಸಾರದ ಸ್ವರೂಪಾಂತರವಲ್ಲವೆ?
ತನುವಿನ ಸಂಕಲೆಗಳ ಕಡಿದುಕೊಂಡು
ಮನದ ಸಂಕಲೆಗಳ ಹುಟ್ಟಿಸಿಕೊಂಡೆ-
ಇದು ದಾಸ್ಯದ ಪ್ರಗಾಢೀಕರಣವಲ್ಲವೆ?
ಕಾಯಕ ಜೀವನ್ಮುಕ್ತಿಪ್ರದಾಯಕವೆಂಬುದ ಮರೆತು
ಭಿಕ್ಷಾನ್ನವೇ ಮೋಕ್ಷಕ್ಕೆ ಸಾಧನವೆಂದೆ-
ಇದು ತುಡುಗುಣಿತನದ ನವೀಕರಣವಲ್ಲವೆ!
ಸರ್ವ ಮುಖವಾಡಗಳನ್ನೂ ಕಳಚಿ
ಸ್ವತಂತ್ರಧೀರ ಸಿದ್ಧೇಶ್ವರನ ಮುಂದೆ
ಬಚ್ಚ ಬರಿಯ ಭಕ್ತನಾಗಿ ನಿಲ್ಲು ಗೆಳೆಯ!

## ೪೩೪

ವಜ್ರದೇಹವ ಪಡೆಯುವವನೂ
ಚರ್ಮಚಕ್ಷುಗಳನ್ನು ಉಳಿಸಿಕೊಳ್ಳುವನಯ್ಯ
ಮುತ್ತು ರತ್ನಗಳನ್ನು ಮಾರುವವನೂ
ಅಕ್ಕಿ ಬೇಳೆಗಳನ್ನು ಗಳಿಸಿಕೊಳ್ಳುವನಯ್ಯ;
ನಿತ್ಯ ಕಾಯಗಳನ್ನು ಕೊಯ್ಯುವವನೂ
ತನ್ನ ಕಾಯವನ್ನು ಕಾಪಾಡಿಕೊಳ್ಳುವನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸರ್ವರ ಸ್ವಾತಂತ್ರ್ಯ ಹರಣ ಮಾಡುವವನೂ
ತನ್ನ ಸ್ವಾತಂತ್ರ್ಯವ ಕಾಯ್ದುಕೊಳ್ಳುವನಯ್ಯ!

## ೪೩೫

ಓ ಸ್ವಾತಂತ್ರ್ಯಾಪಹಾರಕ,
ಎತ್ತರಿಸು, ಎತ್ತರಿಸು ನಿನ್ನ
ಸೆರೆಮನೆಯ ಗೋಡೆಗಳನ್ನು!
ಅವುಗಳಿಗಿಂತಲೂ ಎತ್ತರದಲ್ಲಿ ವಿಹರಿಸುವುದು–
ನನ್ನ ಅದಮ್ಯ ಸ್ವಾತಂತ್ರ್ಯಾಪೇಕ್ಷೆ!
ಇಲ್ಲ ಇದನ್ನು ಕೊಲ್ಲ ಬಲ್ಲ ಅಗ್ನಿಪರೀಕ್ಷೆ, ಕ್ರೂರಶಿಕ್ಷೆ!
ದಾಸ್ಯ–ದೀಪಕ್ಕೆರಗಿ ಸುಡುವ ಶಲಭವಲ್ಲ,
ದಾಸ್ಯದೈತ್ಯನ ತಲೆಕುಕ್ಕುವ ಶರಭ ನಾನು!
ಪಂಜರದ ಪಕ್ಷಿಯಲ್ಲ,
ಸಿಡಿಲ ಹಕ್ಕಿ ನನ್ನ ಮುಕ್ತಮನ!
ಸ್ವಾತಂತ್ರ್ಯ ದಾಹ ಚಿರಂತನ!
ಸೆರೆಮನೆಯ ಭಯ, ಶೂಲ ಶಿಲುಬೆಗಳ ಭಯ,
ವಿಷದ ಬಟ್ಟಲದ ಭಯ, ಗುಂಡು ಫಿರಂಗಿಗಳ ಭಯ–
ಯಾವ ಭಯಕ್ಕೂ ಬಗ್ಗದು ಬಿಡುಗಡೆಯ ಬಯಕೆ–
ಕೆಳಗಿಳಿಯದು ಸ್ವಾತಂತ್ರ್ಯ ಪತಾಕೆ!
ಸ್ವತಂತ್ರಧೀರ ಸಿದ್ಧೇಶ್ವರನಿಗೂ ಬಿಟ್ಟು ಕೊಡದ
ನನ್ನ ಸ್ವಾತ್ರಂತ್ರ್ಯದ ಹಕ್ಕ
ನಿನಗೆ ಬಿಟ್ಟು ಕೊಡುವೆನೆ
ಸ್ವಾತಂತ್ರ್ಯ ಹಂತಕ?

### ೪೩೬

ಶತ್ರುಗಳಾರೋ ಮಿತ್ರರಾರೋ, ನಾನರಿಯೆನಯ್ಯ!
ಸೂತ್ರವೊಂದನು ನಂಬಿ ನಡೆದಿಹೆನಯ್ಯ;
ಒಳಿತಿನತ್ತ ಎಳೆಯುವವರು,
ಕೆಡುಕಿಗೆಳಸಗೊಡದವರು ಮಿತ್ರರು;
ಒಳಿತನೆಸಗಗೊಡದವರು,
ಕೆಡುಕಿಗೆ ಪುಟ ಕೊಡುವವರು ಶತ್ರುಗಳು!
ಒಳಿತಾವುದೋ ಕೆಡುಕಾವುದೋ, ನಾನರಿಯೆನಯ್ಯ!
ಒರೆಗಲ್ಲೊಂದನು ನೆಚ್ಚಿ ನಡೆದಿಹೆನಯ್ಯ;
ನಿನ್ನತ್ತ ಎಳೆಯುವುದು,
ನಿನ್ನ ಮಕ್ಕಳತ್ತ ಸೆಳೆಯುವುದು ಒಳಿತು;
ನಿನ್ನ ಮರೆಸುವುದು
ನಿನ್ನ ಮಕ್ಕಳ ಜರೆಸುವುದು ಕೆಡುಕು!
ಇದರಲ್ಲಿ ತಪ್ಪಿದ್ದರೆ ತಿದ್ದಿ ಉದ್ಧರಿಸಾ-
ಸ್ವತಂತ್ರಧೀರ ಸಿದ್ಧೇಶ್ವರ!

### ೪೩೭

ಎಲ್ಲವೂ ಎನಗಾಗಿ ಎನ್ನುವುದೇ ಕೆಡುಕು,
ಇದ್ದುದೆಲ್ಲ ಎಲ್ಲರಿಗಾಗಿ ಎನ್ನುವುದೇ ಒಳಿತು;
ತನ್ನಿಂದ ಅನ್ಯರಿಗೆ ಕೇಡಾಗದಂತೆ ಬದುಕುವುದೇ ಧರ್ಮ,
ಅನ್ಯರ ಅಳಲಿಸಿ ತನ್ನ ಬೊಜ್ಜು ಬೆಳೆಸುವುದೇ ಅಧರ್ಮ;
ಆತ್ಮಸಾಕ್ಷಿಯಾಗಿ ಪ್ರೇಮ ಕರುಣೆಗಳ ಅನುಸರಿಸುವುದೇ ನೀತಿ,
ಜೀವಿಗಳ ಘನತೆಯನ್ನು ಘಾತಿಸುವುದೇ ಅನೀತಿ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಅಪ್ರಿಯರಾರೂ ಇಲ್ಲವಾಗಿ,
ಎಲ್ಲರೂ ಎನಗೆ ಪ್ರಿಯರೆನ್ನುವುದೇ ಸೈಪು,
ಪ್ರಿಯರು ಅಪ್ರಿಯರೆಂಬ ಭೇದ ಪಾಪ!

### ೪೩೮

ಮಾನವ ಕುಲದಲ್ಲಿ ಮಾನವತೆಯೇ ವಿರಳವಸ್ತು!
ಆದರೂ, ಅಲ್ಲೊಂದು ಇಲ್ಲೊಂದು, ಆಗೊಂದು ಈಗೊಂದು
ಸವಿನುಡಿ, ಸವಿನೋಟ, ಸರಿನಗೆಗಳು

ಬದುಕುವಾಸೆ ಬಳ್ಳಿಗೆ ನೀರೆರೆದಿವೆ-
ಅದು ಒಣಗದಂತೆ ಪೊರೆದಿವೆ!
ಒಂದೇ ಒಂದು ಒಳ್ನುಡಿ ಸಾವಿರ ದಿನಗಳಿಗೆ ಸವಿನೀಡಿದೆ;
ಒಂದೇ ಒಂದು ನಲ್ನೋಟ ಸಾವಿರ ರಾತ್ರಿಗಳ ಸುರಭಿತ ಗೊಳಿಸಿದೆ;
ಒಂದೇ ಒಂದು ನಲ್ನಗೆ ಸಾವಿರ ದುಕ್ಕಬಿಕ್ಕುಗಳ ಸಹ್ಯಗೊಳಿಸಿದೆ!
ಒಂದು ಸವಿಗನಸೊ, ಒಂದು ಸಕ್ಕರೆ ನಿದ್ದೆಯೊ,
ಒಂದು ಅನಿಮಿತ್ತ ಸಖ್ಯವೊ, ಒಂದು ಅನಿರೀಕ್ಷಿತ ಸೌಖ್ಯವೊ
ಬಾಳುವಾಸೆಯ ಬಾವಿಗೆ ಸೊದೆಯ ಸೆಲೆಯಾಗಿದೆ!
ಸ್ವತಂತ್ರಧೀರ ಸಿದ್ಧೇಶ್ವರನ ವಾತ್ಸಲ್ಯ
ಈ ವಿವಿಧ ವಿಭಿನ್ನರೂಪಗಳಲ್ಲಿ ದೊರೆವುದೆಂದೇ
ಬದುಕುವ ಬಯಕೆಯನಿನ್ನೂ ತೊರೆಯದಿದ್ದೇನೆ!

### ೪೩೯

ಸಾಮು ತೆಗೆಯುತ್ತಲೇ ಕುಸ್ತಿ ಆಡುತ್ತ ಹೊರಟಿದ್ದೇನೆ!
ಸೋಲಿನ ಭಯದಿಂದ ಸಾಯುವವರೆಗೆ ಸಾಮು ತೆಗೆದು
ಕುಸ್ತಿಯನ್ನೇ ಆಡದೆ ಹೋಗಲಾರೆ!
ಸೋಲು ಸೋಲೆಂದು ಏಕೆ ಹಳಹಳಿಸಲಿ?
ಗೆಲವು ಗೆಲವು ಎಂದೇಕೆ ತಳಮಳಿಸಲಿ?
ಗೆಲವು ತರುವ ಗರ್ವ ಮೇಲೆ?
ಸೋಲು ತರುವ ವಿನಯ ಕೀಳೆ?
ಗೆದ್ದು ಸೋತವರುಂಟು,
ಗೆದ್ದು ರುಸ್ತುಮನಂತೆ ಶೋಕಿಸಿದವರುಂಟು!
ಗೆಲವು-ಸೋಲುಗಳೆರಡರ
ಗೀಳು-ಗೋಳುಗಳ ಗೆಲ್ಲುವ
ಛಲವಿತ್ತು ಸಲಹು-
ಸ್ವತಂತ್ರಧೀರ ಸಿದ್ಧೇಶ್ವರ!

### ೪೪೦

ನಿನಗೆ ಬೇಕೆನಿಸಿದಾಗ ಹುಟ್ಟಿಸುವುದು,
ನಿನ್ನಿಷ್ಟ ಬಂದಾಗ ಸಾಯಿಸುವುದು-
ನಿನ್ನ ವಿಶೇಷ ಹಕ್ಕು:

ನನಗೆ ಬೇಕಾದಂತೆ ಬದುಕುವುದು,
ನನಗೆ ಸಮ್ಮತ ಮೌಲ್ಯಗಳೊಡನೆ ಬಾಳುವುದು
ನನ್ನ ವಿಶೇಷ ಹಕ್ಕು ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೪೧

ನಿರ್ದೋಷಿಗಳಿಗಂಟುವ
ಕೆಟ್ಟಹೆಸರಿನ ಕೆಸರು ತೊಳೆಯಲು
ನನ್ನ ಕಣ್ಣೀರಿನ ಉಪಯೋಗವಾಗಲಯ್ಯ!
ನಿರ್ಗತಿಕರಿಗೆ ಮುಸುಕುವ
ನಿರಾಶೆ ಕಾವಳವನ್ನು ಕರಗಿಸಲು
ನನ್ನ ನಿಟ್ಟುಸಿರುಗಳ ಉಪಯೋಗವಾಗಲಯ್ಯ!
ಅನಾಥರ, ಅಂಗವಿಕಲರ ಶುಶ್ರೂಷೆ ಮಾಡಲು
ನನ್ನ ಕೈಗಳ ಉಪಯೋಗವಾಗಲಯ್ಯ!
ಸ್ವತಂತ್ರಧೀರ ಸಿದ್ಧೇಶ್ವರ,
ಯಾವ ಕಾರಣದಿಂದಲೇ ಯಾರಿಗೇ ಬಂದಿರಲಿ
ಕಂಡ ಕೂಡಲೆ ಕಂಬನಿ ಒರೆಸಲು
ನನ್ನ ಕರವಸ್ತ್ರದ ಉಪಯೋಗವಾಗಲಯ್ಯ!

## ೪೪೨

ಒಂದು ಒಳ್ಳೆಯ ಮಾತು,
ಒಂದಿಷ್ಟು ಪ್ರೀತಿಯ ಸ್ವಾಗತ,
ಒಂದು ಸದ್ಭಾವದ ಸ್ಮಿತ–
ಆಗತರಿಗೆ ಎಷ್ಟು ಹಿತ!
ವೆಚ್ಚವಿಲ್ಲದ ಹಿಗ್ಗು ಹೆಚ್ಚಿಸುವ ಸಾಧನಗಳಿವು,
ಜೀವನೋನ್ನತಿಯ ಸೋಪಾನಗಳಿವು!
ಇವಕ್ಕೂ ಅಭಾವ ಬಂದಿತಲ್ಲ–
ಇವನ್ನೂ ದುರ್ಭಾವ ತಿಂದು ತೇಗಿತಲ್ಲ,
ಸ್ವತಂತ್ರಧೀರ ಸಿದ್ಧೇಶ್ವರ?

### ೪೪೩

ಜೇಡವೇ,
        ನಿನ್ನ ಹೊಕ್ಕುಳ ಮೇಣದಿಂದಲೇ ಬಲೆಯ ನೆಯ್ದು
        ಬಲೆಯಲ್ಲಿ ಸಿಲುಕದೆ ಹೊರಗುಳಿದ ಜಾಣ್ಮೆ ನಿನ್ನದು!
ನಾನಾದರೋ,
        ಬುದ್ಧಿಯ ತಂತುಗಳಿಂದ ಬಲೆಯ ನೆಯ್ದು
        ನಾನೇ ಅದರಲ್ಲಿ ಬಿದ್ದು ಒದ್ದಾಡುತ್ತೇನೆ!
        ನಿನ್ನಂತೆ ಹೊರಗುಳಿವ ಗತ್ತೂ ಗೊತ್ತಿಲ್ಲ
        ರೇಷ್ಮೆಹುಳದಂತೆ ಗೂಡು ಸೀಳಿ ಹೊರಬರುವ ಹಿಕ್ಮತ್ತೂ
                ಗೊತ್ತಿಲ್ಲ!
        ಸ್ವತಂತ್ರಧೀರ ಸಿದ್ಧೇಶ್ವರನೆನಗೆ ಕರುಣಿಸದಿದ್ದರೂ
                ನೀವು ಕಲಿಸಿರಿ ನನಗೀ ಕೌಶಲ್ಯವನ್ನು!

### ೪೪೪

ಏನಾದರೂ ಹೊಳೆಯ ಬಹುದೆಂದು
ಹೊಳೆಯ ದಂಡೆಯ ಮೇಲೆ ಕುಳಿತೆ-
ಹಾಡುತ್ತಲೇ ಹರಿವ ಹೊಳೆಯಂತೆ
ಹಾಡುತ್ತಲೇ ದುಡಿವುದೆಂಬ ಪಾಠ ಕಲಿತೆ!
        ಯಾರು ಪಾಠ ಕಲಿಸಿದರೇನು,
        ಸರಿಯಾದ ನೋಟ ನೀಡಿದರೇನು
ಸ್ವತಂತ್ರಧೀರ ಸಿದ್ಧೇಶ್ವರನೇ ಕಲಿಸಿದಂತೆ, ನೀಡಿದಂತೆ!

### ೪೪೫

ಈ ಪೇಟೆಯಲ್ಲಿ ನನ್ನ ಸರಕನ್ನೂ ಜೋಡಿಸಿ
ಎಡಗೈಯಲ್ಲಿ ತಕ್ಕಡಿ,
ಬಲಗೈಯಲ್ಲಿ ಕಲ್ಲು ಹಿಡಿದು
        ಎಂದಿನಿಂದಲೂ ಕುಳಿತಿದ್ದೇನೆ!
ಬೋಣಿಗೆಯೂ ಆಗಬಾರದೆ ಇದುವರೆಗೂ?
ಏನೇನೋ ಮಾರುತಿದೆ ಈ ಪೇಟೆಯಲ್ಲಿ
        ಬಿಕರಿಯಾಗದಷ್ಟು ಬೀಕಲಾಗಿದೆಯೆ ನನ್ನ ಮಾಲಿಲ್ಲಿ?
ಕೊಳ್ಳುವ ಬದಲು ಕೊಸರು ಕೇಳುವವರೇ ಬಂದರೆ

ನನಗೆ ವ್ಯಾಪಾರ ಹೇಗಾಗ ಬೇಕಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೪೪೬

ಈ ಮನೆಗೆ ಇರುವುದೊಂದೇ ಕಿಟಕಿ;
ಆ ಕಿಟಕಿಯ ಕಡೆಗೇ ಬೆನ್ನು ಮಾಡಿ ಕುಳಿತಿದ್ದೇನೆ-
ಸ್ವತಂತ್ರಧೀರ ಸಿದ್ಧೇಶ್ವರ!

೪೪೭

ಮಡುವಿರುವಲ್ಲೆಲ್ಲ
ಮೊಸಳೆ ಇರಲೇ ಬೇಕಿಲ್ಲ;
ಆದರೆ, ಅರಿಯದ ಮಡುವಿನಲ್ಲಿ
ಅರಸದೆ ಇಳಿಯ ಬಹುದೇನಯ್ಯ?
ಮುಂಜಾಗ್ರತೆ ಭೀರುತನವೇನಲ್ಲ,
ಅಜಾಗ್ರತೆ ವೀರತನವೇನಲ್ಲ;
ಎಚ್ಚರಿಕೆ ಅರುಹಿನ ಕುರುಹಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೪೪೮

ಬೇರೆ ದೇಶಗಳ ಮಾದರಿಗಳನ್ನು ಮುಂದಿರಿಸಿಕೊಂಡು
ನನ್ನ ಬಟ್ಟೆ ಹೊಲಿಯ ಹೊರಟ ಸಿಂಪಿಗ,
ಯಾರ ಮಾದರಿಯನ್ನೇ ಅನುಕರಿಸು-
ನನ್ನ ಮೈಯಳತೆಯನ್ನು ಮಾತ್ರ ಅನುಸರಿಸು!
ಸ್ಟ್ಯಾಂಡರ್ಡ್ ಅಳತೆಗಳನ್ನೇ ಅನುಸರಿಸಿ ಹೊಲೆವುದಾದರೆ
ನನ್ನ ಮೈಗೆ ತಕ್ಕುದ ಆಯ್ದುಕೊಳ್ಳುವ ಅವಕಾಶ ನೀಡು!
ಸ್ವತಂತ್ರಧೀರ ಸಿದ್ಧೇಶ್ವರ
ನನಗೇ ವಿಶಿಷ್ಟ ಶರೀರವೊಂದನ್ನು
ಕರುಣಿಸಿರುವನೆಂಬುದ ಮರೆಯಬೇಡ!

೪೪೯

ನೀನು ಸುಖಿಸುವ ರೀತಿಯಲ್ಲಿಯೇ
ನಾನೂ ಸುಖಿಸಬೇಕೆಂಬ

ಹಟವೇಕೆ ನಿನಗೆ, ಗೆಳೆಯ?
ನೀನು ಮೆಚ್ಚಿದುದನ್ನೇ
ನಾನೂ ಮೆಚ್ಚಬೇಕೆಂಬ
ಛಲವೇಕೆ ನಿನಗೆ, ಕೆಳೆಯ?
ನಿನಗೆ ಬೇಡವಾದುದು
ನನಗೂ ಬೇಡವಾಗಬೇಕೆಂದು
ಕಾಡುವಿಯೇಕೆ, ಸಹೃದಯ?
ನನಗೂ ಒಂದು ರುಚಿ, ರೀತಿ, ನೋಟವನ್ನಿತ್ತಿರುವ
ಸ್ವತಂತ್ರಧೀರ ಸಿದ್ಧೇಶ್ವರ!

## ೪೫೦

ಎಲ್ಲರಂತೆ ನಾನೂ
ದುಃಖ ಬಂದಾಗ ಅಳುತ್ತೇನೆ,
ಸುಖ ಬಂದಾಗ ನಗುತ್ತೇನೆ,
ಹೊಗಳಿಕೆ ಬಂದಾಗ ಹಿಗ್ಗುತ್ತೇನೆ,
ತೆಗಳಿಕೆ ಬಂದಾಗ ಕುಗ್ಗುತ್ತೇನೆ,
ಮನದಿಚ್ಛೆಯ ನುಡಿದಾಗ ಮೆಚ್ಚುತ್ತೇನೆ
ಇದಿರಿಚ್ಛೆಯ ನುಡಿದಾಗ ರೊಚ್ಚಿಗೇಳುತ್ತೇನೆ,
ಸಿರಿ ಬಂದಾಗ ಹೆಚ್ಚುತ್ತೇನೆ-
ನನಗೇ ವಿಶಿಷ್ಟವಾದ ವಿವರಗಳೇನಲ್ಲ ಇವು!
ನನಗೆ ವಿಶಿಷ್ಟವಾದುದ ಕರುಣಿಸಬೇಕು ನೀನು!
ಎಲ್ಲರೊಳಗೊಂದಾಗಿಯೂ
ಎಲ್ಲರಿಗೆ ವಿಶಿಷ್ಟವಾಗಿ ತೋರುವ
ಏನನ್ನಾದರೂ ಕರುಣಿಸಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೫೧

ಏನೂ ಇಲ್ಲದಿದ್ದ ನಾನು
ಏನೋ ಇಷ್ಟು ಪಡೆದೆನೆಂಬ ಹಿಗ್ಗು ಒಕ್ಕಾಲು,
ಪಡೆಯಬಹುದಾಗಿದ್ದುದರ ರವೆಯಷ್ಟನ್ನೂ
ಪಡೆಯಲಿಲ್ಲವೆಂಬ ಕೊರಗು ಮುಕ್ಕಾಲು!
ಈಗ ಪಡೆದುದಕ್ಕಿಂತ ಹೆಚ್ಚಿನ

ಮನಸ್ಸಿನ ವಿಸ್ತಾರವನ್ನು,
ಬುದ್ಧಿ ಭಾವಗಳ ಎತ್ತರವನ್ನು,
ಅನುಭವಕ್ಕಿತ್ತ ಆಕಾರವನ್ನು
ಪಡೆಯಬಹುದಾಗಿತ್ತೆಂಬ ಕೊರಗು,
ಇನ್ನು ಪಡೆಯಲಾರೆನೆಂಬ ಮರುಗು
ಕೀಟವಾಗಿ ಕೊರೆಯುತ್ತಿವೆ ಒಳಗೆ!
ಪುಣ್ಯಕ್ಕೆ ಇವು ಮಿಡತೆಗಳಲ್ಲ,
ಎರೆಹುಳುಗಳು ಬದುಕಿನ ಬೆಳೆಗೆ-
ಸ್ವತಂತ್ರಧೀರ ಸಿದ್ಧೇಶ್ವರ!

೪೫೨

ನೀನೆನಗೆ ಆರು ವರ್ಷಗಳಲ್ಲಿ ನಾಲ್ಕು ಮಕ್ಕಳ ಕೊಟ್ಟಾಗ
ಸಿಡಿಮಿಡಿಗೊಂಡಿದ್ದೆ, ಸೆಟಗೊಂಡಿದ್ದೆ!
ನೀನೆನಗೆ ಒಳ್ಳೆಯದನ್ನೇ ಮಾಡಿದ್ದರೂ
ನಾನದನ್ನರಿಯದೆ ರೇಗಿ ಹೋಗಿದ್ದೆ!
ನಾನು ನಿವೃತ್ತನಾಗುವ ಮುನ್ನವೆ
ನನ್ನ ನಾಲ್ಕೂ ಮಕ್ಕಳು ದಾರಿಗೆ ಹತ್ತಿದಾಗ
ನೀನೆನಗೆ ನೀಡಿದ ನ್ಯಾಯ ಅರ್ಥವಾಗಿ ಬೆರಗಾದೆ!
ತುತ್ತು ಹಾಕುವ
ವಿತ್ತದ ಕತ್ತೆಗಳ ಪರವಾಗಿ ಬೊಗಳುವ,
ಬಲದ ಮುಂದೆ
ಬಾಲ ಅಲ್ಲಾಡಿಸಿ ಕುಂಯ್‌ಗುಡುವ
ನಾಯಿಗಳಂಥವರು ನಡಸುವ
ನ್ಯಾಯಾಲಯಗಳನ್ನೇ ನೋಡಿದ್ದ ನನಗೆ
ನಿನ್ನ ನ್ಯಾಯ ಅರ್ಥವಾಗಿರಲಿಲ್ಲವಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

೪೫೩

ನನಗೆ ಮರವು ಹೆಚ್ಚು ಕೊಟ್ಟಿಹೆಯೆಂದು
ಸಿಟ್ಟಿಗೆದ್ದಿದ್ದೆ, ಹಿಂದೆ!
ತಪ್ಪಾಯಿತು, ಕ್ಷಮಿಸು ತಂದೆ!
ನೀನಿಹೆ, ಮರಣವಿದೆಯೆಂಬುದು
ನೆನಪಿದ್ದರೆ ಸಾಲದೆ?

ಅನ್ಯರೆನಗೆ ಮಾಡಿದ ಉಪಕಾರ
ನೆನಪಿದ್ದರೆ ಸಾಲದೆ?
ಇನ್ನೂ ಮಾಡಬೇಕಿರುವ ಕೆಲಸ
ನೆನಪಿದ್ದರೆ ಸಾಲದೆ?
ಆದ್ಯರ ವಚನಗಳೂ ವೇದ್ಯರ ಉಕ್ತಿಗಳೂ
ನೆನಪಿದ್ದರೆ ಸಾಲದೆ?
ಏನೆಲ್ಲವನ್ನೂ ನೆನಪಿಡುವುದೊಂದು ಶಿಕ್ಷೆ,
ಈ ಶಿಕ್ಷೆ ತಪ್ಪಲು ಮರವೆಯೇ ರಕ್ಷೆ!
ರಕ್ತವಾಗುವುದ ಉಳಿಸಿಕೊಂಡು
ಉಳಿದುದ ಹೊರದೂಡುವ ಉದರದಂತೆ
ಬೆಲೆಯುಳ್ಳುದ ಉಳಿಸಿ
ಉಳಿದುದ ಅಳಿಸುವ ಉಪಕಾರಿಯಾಗಲಯ್ಯ
ನನಗೆ ನೀನಿತ್ತ ಮರವು–
ಸ್ವತಂತ್ರಧೀರ ಸಿದ್ಧೇಶ್ವರಾ!

**೪೫೪**

ಹೊಸ ವರ್ಷ ಬಂತೆಂದು
ಹಳೆಯ ಕ್ಯಾಲೆಂಡರಿನ
ಕೊನೆಯ ಪುಟ ಹರಿದು ಹಾಕಿದೆ;
ಹೊಸ ಕ್ಯಾಲೆಂಡರ್ ಕೊಂಡಿಲ್ಲವೆಂಬುದು
ಆಮೇಲೆ ನೆನಪಾಗಿ ಬೆಪ್ಪಾದೆ!
ವರ್ಷ ವರ್ಷವೂ ಈ ಪೇಚಿಗೆ ಸಿಕ್ಕುವುದಕ್ಕಿಂತ
ಎಂದಿಗೂ ಬದಲಾಗದ
ಸ್ಥಾಯೀಕ್ಯಾಲೆಂಡರನ್ನು ಕೊಂಡು ಬಿಡಬಾರದೇಕೆ?
ಛೀ, ನೋಡಿದ್ದನ್ನೇ ಮತ್ತೆ ಮತ್ತೆ
ಎಷ್ಟು ವರ್ಷ ನೋಡಲಾದೀತು?
ಜಿಗುಪ್ಸೆ ಹುಟ್ಟಿ
ಕ್ಯಾಲೆಂಡರ್ ನೋಡುವುದೇ ನಿಂತುಹೋದೀತು!
ವರ್ಷ ವರ್ಷವೂ
ಹೊಸ ಗಾತ್ರ, ಹೊಸ ಚಿತ್ರ,
ಹೊಸ ಹಿಗ್ಗು ನೀಡುವ
ಆಸ್ಥಾಯೀ ಕ್ಯಾಲೆಂಡರನ್ನೇ

ಕೊಳ್ಳುತ್ತ ಹೋಗುವೆನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೪೫೫

ಭೂಮಿಯ ಒಂದೊಂದು ನೋಟವನ್ನೂ
ನೋಡಿ ಬೆರಗಾಗುತ್ತೇನೆ,
ಬೆರಗಾದಾಗೊಮ್ಮೆ
ಉದ್ಗಾರ ವಾಚಕವಾಗುತ್ತೇನೆ!
ನೋಟದ ಆಚೆಯ ಅರ್ಥವೇನೆಂದು
ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ-
ಕೇಳಿಕೊಂಡಾಗೊಮ್ಮೆ
ಪ್ರಶ್ನಾರ್ಥಕವಾಗುತ್ತೇನೆ!
ಮುಂದೆ
ಮರಣ ಬಂದು ಮುಂದೆ ನಿಂತಾಗ
ಪೂರ್ಣವಿರಾಮವಾಗುವೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೪೫೬

ನಿನ್ನ ಬಗ್ಗೆ ಬರೆವಾಗ
ಮೈ ಉಬ್ಬುತ್ತಿತ್ತು,
ಮನ ಕೊಬ್ಬುತ್ತಿತ್ತು
ಇದುವರೆಗೆ;
ಈಗ ನಿನ್ನ ಬಗ್ಗೆ ಬರೆದರೆ
ನನ್ನ ಬಗ್ಗೆಯೇ ಬರೆದಂತೆನಿಸುತ್ತಿದೆ!
ನಿನ್ನನ್ನು ಕುರಿತು ಹಾಡಿದರೆ
ನನ್ನನ್ನು ಕುರಿತೇ ಹಾಡಿದಂತೆನಿಸುತ್ತಿದೆ!
ಭಿನ್ನಭಿನ್ನವಳಿದು ಅಭಿನ್ನತೆ ಅಳವಟ್ಟಾಗ
ನೀನಾರು, ನಾನಾರು-
ಸ್ವತಂತ್ರಧೀರ ಸಿದ್ಧೇಶ್ವರಾ?

೪೫೭

ಈ ಗಾನದೋಸೆಯ ಒಂದು ಬದಿಗೆ
ನಿನ್ನ ಹಾಡಿದೆ,

ಇನ್ನೊಂದು ಬದಿಗೆ
ನನ್ನ ಹಾಡಿದೆ;
ನಿನ್ನ ಹಾಡೆಂದು ಹಾಕಿದಾಗ
ಅದು ನನ್ನ ಹಾಡಾಗಿ ಕೇಳಿಸುತ್ತದೆ;
ನನ್ನ ಹಾಡೆಂದು ಹಾಕಿದಾಗ
ಅದು ನಿನ್ನ ಹಾಡಾಗಿ ಕೇಳಿಸುತ್ತದೆ!
ಏನಿದು ಚೋದ್ಯ, ಜಗದಾರಾಧ್ಯ
ಸ್ವತಂತ್ರಧೀರ ಸಿದ್ಧೇಶ್ವರ?

೪೫೮

ಇಂದು ಶಿವರಾತ್ರಿ, ಸ್ವತಂತ್ರಧೀರ ಸಿದ್ಧೇಶ್ವರ!
ಯಾರಾರ ನೆನೆಯಲಿಂದು?
ನಿನ್ನ ನೆನೆವುದಂತೂ ಸರಿಯೆ,
ಇನ್ನಾರ ನೆನೆಯಲಿ?
ಈಗ ಜನ್ಮಿಸಿರುವ, ಮುಂದೆ ಜನಿಸಲಿರುವ
ಜೀವಿಗಳನೆಲ್ಲ ನೆನೆವೆ!
"ಓಂ ಮಾನವಾಯ ನಮಃ,
ಮನುಷ್ಯರೂಪೀ ಮಹೇಶ್ವರಾಯ ನಮಃ"
ಎಂದು ವಂದಿಸುವೆ!
ಓಂ ಚರ್ಮಕಾರೇಭ್ಯೋ ನಮಃ,
ವಸ್ತ್ರಕಾರೇಭ್ಯೋ ನಮಃ,
ಕುಲಾಲೇಭ್ಯೋ ನಮಃ,
ಸರ್ವಕಾಯಕ ಯೋಗಿನೇ ನಮಃ
ಎಂದು ನೆನೆದು ನಮಿಪೆ!
ಶಿವರಾತ್ರಿಯನ್ನಿಂತು ಸಮಾಚರಿಪೆ!

೪೫೯

ನಿನ್ನ ಭಕ್ತರ ಪಾದರಕ್ಷೆ ಒರೆಸುವುದೇ
ದೀಕ್ಷೆ ನನಗೆ;
ನಿನ್ನ ಭಕ್ತರ ಮಾತು ಕೇಳುವುದೇ
ಮಂತ್ರೋಪದೇಶ ನನಗೆ;
ನಿನ್ನ ಭಕ್ತರ ಮುಖ ನೋಡುವುದೇ

ಮುಕ್ತಿ ನನಗೆ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೪೬೦

ಯಾರನ್ನೂ ನೋಡಿದರೂ
ಯಾರನ್ನೋ ನೋಡಿದಂತೆ
ಎನಿಸುವುದಿಲ್ಲ ಈಗ–
ಎಲ್ಲರೂ ಸ್ವತಂತ್ರಧೀರ ಸಿದ್ಧೇಶ್ವರನ
ಸಂತಾನವಾಗಿ
ತೋರುತ್ತಿರುವರಾಗಿ!

೪೬೧

ಸ್ವದೇಶದ ಹೂಗಳೂ ಅರಳಿವೆ,
ವಿದೇಶಗಳ ಹೂಗಳೂ ಅರಳಿವೆ
ಅಂಗಳ ಅಂಗಳದಲ್ಲಿ;
ತಿಂಗಳ ಬೆಳಕೂ ಇದೆ,
ರಂಗು ರಂಗಿನ ಬೆಳಕೂ ಇದೆ
ಅಂಗಳ ಅಂಗಳದಲ್ಲಿ;
ಮಂಗಲಕರವಾದುದೆಲ್ಲಿಂದಲೇ ಬರಲಿ–
ರಂಗ ಸಿದ್ಧವಾಗಲದಕೆ
ಬದುಕಿನ ಅಂಗುಲ ಅಂಗುಲದಲ್ಲಿ;
ಸ್ವತಂತ್ರಧೀರ ಸಿದ್ಧೇಶ್ವರ ಭೇದವೆಣಿಸ
ಮಂಗಲಮಂಗಲದಲ್ಲಿ!

೪೬೨

ಒಳಗಿನ ಬೆಳಕು ತುಳುಕಿ
ಹೊರಗಿನ ಕತ್ತಲೆಯೂ
ಬೆಳಕಾದುದ ಅನುಭವಿಸಿದೆ;
ಒಳಗಿನ ಕತ್ತಲೆ ಹೊರಹೊಮ್ಮಿ
ಹೊರಗಿನ ಬೆಳಕು
ಕತ್ತಲೆಯಾದುದನ್ನೂ ಅನುಭವಿಸಿದೆ!
ನಿನ್ನ ಬೆಳಕು ದೊರೆವನ್ನಕ್ಕರ

ಈ ಬೆಳಕು ಕತ್ತಲೆಯ ಕಣ್ಣು ಮುಚ್ಚಾಲೆ
ಮುಗಿಯದಯ್ಯ–ಸ್ವತಂತ್ರಧೀರ ಸಿದ್ಧೇಶ್ವರ!

**೪೬೩**

ಕಾಫಿರನಲ್ಲ, ಫಕೀರನಲ್ಲ, ಜೋಗಿಯಲ್ಲ, ಜಂಗಮನಲ್ಲ,
ಸಂನ್ಯಾಸಿಯಲ್ಲ, ಸವಣನಲ್ಲ, ಬಾನವನಲ್ಲ, ದಾನವನಲ್ಲ–
ನಾನು ಬರಿಯ ಮಾನವ ನೋಡಯ್ಯ!
ಕರಿಯನಲ್ಲ, ಬಿಳಿಯನಲ್ಲ, ಸವರ್ಣನಲ್ಲ, ಶ್ವಪಚನಲ್ಲ–
ನಾನು ನಿರುಪಾಧಿಕ ನರನು ನೋಡಯ್ಯ!
ಹೀಗಿದ್ದೂ ಬಿಳಿಯರ ದೃಷ್ಟಿಯಲ್ಲಿ ಕರಿಯ ನಾನು,
ಕರಿಯರ ದೃಷ್ಟಿಯಲ್ಲಿ ಭಾರತೀಯ ನಾನು,
ಉತ್ತರ ಭಾರತೀಯರ ದೃಷ್ಟಿಯಲ್ಲಿ 'ಮದ್ರಾಸಿ' ನಾನು,
ಕ್ರಿಶ್ಚಿಯನ್ನರ ದೃಷ್ಟಿಯಲ್ಲಿ ಇಸ್ಪಿಡೆಲ್ ನಾನು,
ಮುಸ್ಲಿಮರ ದೃಷ್ಟಿಯಲ್ಲಿ ಕಾಫಿರ ನಾನು,
ಬ್ರಾಹ್ಮಣರ ದೃಷ್ಟಿಯಲ್ಲಿ ಶೂದ್ರ ನಾನು,
ಲಿಂಗಾಯತೇತರ ದೃಷ್ಟಿಯಲ್ಲಿ ಲಿಂಗಾಯತ ನಾನು,
ಲಿಂಗಾಯತರ ದೃಷ್ಟಿಯಲ್ಲಿ ಜಂಗಮ ನಾನು,
ಜಂಗಮರ ದೃಷ್ಟಿಯಲ್ಲಿ 'ಸಾಹೇಬ' ನಾನು!
ನಿನ್ನ ದೃಷ್ಟಿಯಲ್ಲಾದರೂ ನಾನು ಬಚ್ಚ ಬರಿಯ ಭಕ್ತನಾಗಿ
ತೋರಲಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೪**

ಆಕಾಶದಲ್ಲಿ ಚಂದ್ರನಿದ್ದೊಡೇನಯ್ಯ–
ನನ್ನ ಮನೆಯೊಳಗೆ ಲಾಂದ್ರವೂ ಇಲ್ಲದಿರೆ?
ನನ್ನ ಮನೆಯ ಕೆಳಗೇ ನಿಕ್ಷೇಪವಿದ್ದೊಡೇನಯ್ಯ–
ನನ್ನ ಮನೆಯೊಳಗೆ ಒಡಕು ಗಡಿಗೆಯೂ ಇಲ್ಲದಿದ್ದರೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನಲ್ಲಿ ಅನಂತ ಶಕ್ತಿಯಿದ್ದೊಡೇನಯ್ಯ–
ನನ್ನಲ್ಲಿ ಮಿಸುಕು ಕೂಡ ಇರದಿರೆ?

**೪೬೫**

ಗುಡಿಯ ಮುಂದೆ ಮಡಿ ಪಂಚೆ ಹರಡಿ
ಮೂರ್ತಿ ಭಂಜಕರ ತಡೆವ ಭರವ ನೋಡಾ!

ಬಡವರಿಗೆ ಬೋಧಾಮೃತ ಕುಡಿಸಿ
ಬಡವ ವಡಬನಾಗುವುದ ತಡೆವ ಭರವ ನೋಡಾ!
ಬೆಟ್ಟಕ್ಕೆ ಬಟ್ಟೆ ಕಟ್ಟಿ
ಜ್ವಾಲಾಮುಖಿಯ ತಡೆವ ಭರವ ನೋಡಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ಭ್ರಾಂತಿಯ ಚೀಣಾ ಗೋಡೆ ಕಟ್ಟಿ
ವಿಚಾರ ಕ್ರಾಂತಿಯ ತಡೆವ ಭರವ ನೋಡಾ!

**೪೬೬**

ಗಾಳಿಯನ್ನು ಬಿತ್ತಿ
ಬಿರುಗಾಳಿಯನ್ನು ಒಕ್ಕಿಕೊಂಡೆವಯ್ಯ!
ಹಿಂಸೆಯನ್ನು ಬಿತ್ತಿ
ವಿಧ್ವಂಸಕತೆಯನ್ನು ಹೆಕ್ಕಿಕೊಂಡೆವಯ್ಯ!
ವಿಕಾರಗಳ ಬಿತ್ತಿ
ವಿನಾಶದ ತೆಕ್ಕೆಗೊಳಗಾದೆವಯ್ಯ!
ಅಶಿಸ್ತನ್ನು ಬಿತ್ತಿ
ಅರಾಜಕತೆಯ ಚಕ್ರತೀರ್ಥಕ್ಕೆ ಸಿಲುಕಿದೆವಯ್ಯ!
ಇತಿಹಾಸದಿಂದ ಏನೂ ಕಲಿಯಲಿಲ್ಲವೆಂಬುದೇ
ಇತಿಹಾಸದಿಂದ ನಾವು ಕಲಿತ ಪಾಠವಯ್ಯಾ,
ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೭**

ಹಲ್ಲು ಅಗಿದೊಡೇನು–
ರುಚಿ ನೋಡುವುದು ನಾಲಗೆ;
ನಾಲಗೆ ರುಚಿ ನೋಡಿದರೇನು–
ಉಂಡು ತೇಗುವುದು ಹೊಟ್ಟೆ;
ಹೊಟ್ಟೆ ನುಂಗಿದೊಡೇನು–
ಹೃದಯ ಪಡೆವುದು ರಕ್ತ;
ಹೃದಯ ಪಡೆದೊಡೇನು–
ಅಂಗಾಂಗಗಳಿಗೆ ಹಂಚುವುದು ಸ್ನಾಯು–ಜಾಲ;
ಸ್ನಾಯು ಜಾಲ ಹಂಚಿದರೇನು
ಸರ್ವವ ನಿಯಂತ್ರಿಸುವುದು ಮಿದುಳು;

ಮಿದುಳು ಸರ್ವವ ನಿಯಂತ್ರಿಸಿದೊಡೇನು-
ಮಿದುಳನ್ನು ನಿಯಂತ್ರಿಸುವವ
ಸ್ವತಂತ್ರಧೀರ ಸಿದ್ಧೇಶ್ವರ!

**೪೬೮**

ಒಂದು ರಥಕ್ಕೆ
ಐದು ಕುದುರೆಗಳನ್ನೇಕೆ ಕಟ್ಟಿಹೆಯಯ್ಯಾ?
ಒಂದು ಮನೆಗೆ
ಒಂಬತ್ತು ಬಾಗಿಲುಗಳನ್ನೇಕೆ ಇಟ್ಟಿಹೆಯಯ್ಯಾ?
ಒಂದು ಹಕ್ಕಿಗೆ
ನೂರು ನೂರು ರೆಕ್ಕೆಗಳನ್ನೇಕೆ ಕೊಟ್ಟಿಹೆಯಯ್ಯಾ?
ಒಂದು ಹೂವಿನಲ್ಲಿ
ಸಾವಿರ ದಳಗಳನ್ನೇಕೆ ಹುಟ್ಟಿಸಿಹೆಯಯ್ಯಾ?
ಇದರ ಗುಟ್ಟು ತಿಳಿಸಿ
ತಿಳಿವ ತಿಳಿಗೊಳಿಸಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೯**

ಜ್ಞಾನೇಂದ್ರಿಯಗಳ ಜಟಿಲ ಜಾಲದಲ್ಲಿ ಸಿಲುಕಿದ
ಅರಿವು ಮರೆವಿನ ಎರಳೆಗಳು
ಅರಳೆಲೆಗಳಂತೆ ಅದಿರುತ್ತಿವೆಯಯ್ಯ!
ನಿಶ್ಚಿತತೆಯ ನೆಲೆ ಹುಡುಕ ಹೊರಟು
ಅನಿಶ್ಚಿತತೆಯ ಬಲೆಗೆ ಸಿಲುಕ ಬೇಕೆ?
ಎಳೆದೊಯ್ದು ಸಾಕುವರೊ,
ಸುಲಿದು ತಿಂದು ಹಾಕುವರೊ-
ಎಂದು ಮುಂದುಗಾಣದಿವೆಯಯ್ಯ!
ತಂದೆ ನೀನು ಬಂಧನ ಬಿಡಿಸಿ
ಸಲಹಯ್ಯ-ಸ್ವತಂತ್ರಧೀರ ಸಿದ್ಧೇಶ್ವರಾ!

**೪೭೦**

ಕಡಲಿಗೆ ಉಪ್ಪು ಕಳಿಸುವವರಿಗೆ,
ಡಾರ್ಜಿಲಿಂಗಿಗೆ ಚಹದ ಸೊಪ್ಪು ಕಳಿಸುವವರಿಗೆ,

ವಿಂಧ್ಯಾದ್ರಿಗೆ ಕಲ್ಲು ಕಳಿಸುವವರಿಗೆ,
ಮಲೆನಾಡಿಗೆ ಹುಲ್ಲು ಕಳಿಸುವವರಿಗೆ,
ತಿಪಟೂರಿಗೆ ತೆಂಗು ಕಳಿಸುವವರಿಗೆ,
ನಾಗಪುರಕ್ಕೆ ನಾರಂಗ ಕಳಿಸುವವರಿಗೆ,
ಮೈಸೂರಿಗೆ ಮಲ್ಲಿಗೆ ಕಳಿಸುವವರಿಗೆ
ನಿನಗೆ ನೈವೇದ್ಯ ಕಳಿಸುವವರಿಗೆ
ಏನೆನ್ನ ಬೇಕಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ?

೪೭೧

ನನ್ನಿಚ್ಛೆ ನಿನ್ನಿಚ್ಛೆಯಾಗಲೆಂಬ
ಹುಚ್ಚು ನನಗಿಲ್ಲ;
ನನ್ನ ಅರಿವು ನಿನ್ನ ಅರಿವಾಗಲೆಂಬ
ಕೆಚ್ಚು ನನ್ನಲ್ಲಿಲ್ಲ;
ನನ್ನ ಇರವು ನಿನ್ನ ಇರವಾಗಲೆಂಬ
ನಚ್ಚು ನನದಲ್ಲ;
ನನ್ನ ಕ್ರಿಯೆಗಳೆಲ್ಲ ನಿನ್ನ ಕ್ರಿಯೆಗಳಾಗಲೆಂಬ
ಅಚ್ಚೆ ನನಗಿಲ್ಲ;
ನಾನು ನಿನ್ನವನಾಗಬೇಕೆಂಬ
ಅಚ್ಚ ಬಯಕೆಯೇ ನಾನಾಗಿಹೆನಯ್ಯ!
ನಾನು ನಿನ್ನವನೆಂದು
ಒಮ್ಮೆಯಾದರೂ ಒಪ್ಪಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ!

೪೭೨

ನಿನ್ನ ಕರಿಮಣ್ಣು ಕಸ್ತೂರಿ,
ನಿನ್ನ ಕೆಮ್ಮಣ್ಣು ಕೇಶರ
ಕರ್ನಾಟಕ ಮಾತೆ!
ಈ ಮಣ್ಣಿನಲ್ಲಿ ಬೆಳೆಯದುದು
ಏನಾದರೂ ಇದೆಯೆ
ಯತಿತತಿವಿನುತೆ?
ಈ ಮಣ್ಣಿನ ಕೆಳಗೆ ಚಿನ್ನ, ತಾಮ್ರ, ಕಾರ್ಬೊನ್ನು,
ಅಭ್ರಕಾದಿಗಳು;

ಈ ಮಣ್ಣಿನ ಮೇಲೆ ತೆಂಗು, ಕೌಂಗು, ಶಾಲಿ, ಬಾಳೆ, ಕಬ್ಬುಗಳು;
ಕೆರೆ, ತೊರೆ, ಗಿರಿ, ದರಿ, ವನ, ತೋಟ, ಗದ್ದೆಗಳು;
ಸಾಸಿರ ತೆರದ ಹೂವುಗಳು,
ಸಾಸಿರ ತೆರದ ಹಣ್ಣುಗಳು,
ಸಾಸಿರ ಸಾಸಿರ ತೆರದ ಪಶುಪಕ್ಷಿಗಳು!
ಭೂಲೋಕದ ನಂದನವನವಾಗಬಲ್ಲ ಈ ನಾಡು
ಬಡತನದಲ್ಲಿ ನರಳುತ್ತಿರುವುದು,
ಕಂಗಾಲತನದಲ್ಲಿ ಕೊಳೆಯುತ್ತಿರುವುದು
ಎಂಥ ಅನ್ಯಾಯ-
ಸ್ವತಂತ್ರಧೀರ ಸಿದ್ಧೇಶ್ವರ!

## ೪೭೩

ಇಂಗ್ಲೆಂಡಿನಲ್ಲಿ ಅರಳಿದ ಪ್ರತಿಭಾ ಪುಷ್ಪಗಳ ಪರಿಮಳ
ಇಂಡಿಯಾದಲ್ಲಿ ಹರಡಿದೆ;
ಇಂಡಿಯಾದಲ್ಲಿ ವಿಕಸಿಸಿದ ಪ್ರತಿಭಾ ಕುಸುಮಗಳ ಸೌರಭ
ಖಂಡ ಖಂಡಗಳಲ್ಲಿ ಪಸರಿಸುತ್ತಿದೆ!
ಬೆಳಕಿನ ವೇಗದಲ್ಲಿ ಚಲಿಸುವ
ಪರಿಮಳವೇನಲ್ಲ ಇದು;
ಆದರೆ ಬೆಳಕನ್ನು ತಡೆವಂತೆ
ಇದ ತಡೆಯಲಾಗದು!
ಇದರ ಯಾತ್ರೆಯೇ ಸಂಸ್ಕೃತಿಯ ಚರಿತ್ರೆ;
ಇದರ ವೈಫಲ್ಯ ಮನುಕುಲದ ಸಾಫಲ್ಯ;
ಇದರ ಕೊರತೆ ನರಕುಲದ ವಿಫಲತೆ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೭೪

ಸಂಜೆ ಮುಂಜಾವುಗಳ ತಂಪೊತ್ತಿನಲ್ಲಿ
ಇಂಪಾಗಿ ಹಾಡುವ ಹಕ್ಕಿಗಳಿಗಿಂತ
ನಡುಹಗಲಿನ ಉರಿಬಿಸಿಲಿನಲ್ಲಿಯೂ
ಕೂಗಿ ಹಾಡುವ ಕಾಗೆ ಪ್ರಿಯವಯ್ಯ ನನಗೆ!
ಸಿರಿ ಶಿಕ್ಷಣಗಳ ಬಲದಿಂದ ಸುಖಾಸೀನರಾಗಿ
ಶಿಷ್ಟಸಾಹಿತ್ಯ ಸೃಷ್ಟಿಸುವ ಪುಷ್ಟಲೇಖಕರಿಗಿಂತ

ಸುಡುವ ಬಡತನದಲ್ಲಿ ಸುಟ್ಟು ಸುಣ್ಣವಾಗಿ
ಗುಡಿಸಲುಗಳಿಗೆ ಬಣ್ಣವಾಗುವ ಬರಹ ನೀಡುವ
ಬಡ ಬರಹಗಾರರೇ ಪ್ರಿಯರಯ್ಯ ನನಗೆ!
ಇವರ ತಳಿಯನೇ ಬೆಳೆಸು, ಬೆಳಗಿಸು–
ಸ್ವತಂತ್ರಧೀರ ಸಿದ್ಧೇಶ್ವರ!

೪೭೫

ಮನೆ ಮನೆಯ ವನಗಳಲ್ಲಿ
ಮನ–ಸುಮಗಳು ಅರಳಲಿ;
ಮನ–ಸುಮಗಳ ಎದೆಗಳಿಂದ
ಸ್ನೇಹ ಬಿಂದು ಉರುಳಲಿ;
ಸ್ನೇಹವೆ ಸಹಕಾರವಾಗಿ
ಸ್ವ–ಪರ ಸುಗತಿ ಮರಳಲಿ;
ಸುಗತಿಯು ಸಂಸ್ಕೃತಿಯ ಗಳಿಸಿ
ಕಾಡುತನವು ತೆರಳಲಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರರ ಚಿತ್ತವೃತ್ತಿಯಾಗಿ,
ನರರು ನರರಿಗೆ ನೆರವಾಗಿ,
ನರೋತ್ತಮ ಕುಲವು ಅಲರಲಿ!

# ವಚನಾರಾಮ

# ವಚನಾರಾಮ

## ೧

ಮನವನರಳಿಸು ತಂದೆ,
ನನ್ನ ಮನವನರಳಿಸು!
ಶಿಷ್ಯನ ಗೆಲವ ಕೇಳಿದ
ನಿಜಗುರುವಿನ ಮುಖ ಅರಳುವಂತೆ ಅರಳಿಸು;
ಮಗನ ಕೀರ್ತಿ ಕೇಳಿದ
ಮಾತೆಯ ಮುಖ ಅರಳುವಂತೆ ಅರಳಿಸು;
ಇನಿಯನ ಬರವ ಕಂಡ
ವನಿತೆಯ ಮುಖ ಅರಳುವಂತೆ ಅರಳಿಸು;
ಬಣ್ಣದ ಆಟಿಕೆಯ ಪಡೆದ
ಮಗುವಿನ ಮೊಗ ಅರಳುವಂತೆ ಅರಳಿಸು;
ರಾಷ್ಟ್ರಧ್ವಜ ಕಂಡ, ರಾಷ್ಟ್ರಗೀತೆ ಕೇಳಿದ
ರಾಷ್ಟ್ರಭಕ್ತನ ಮುಖ ಅರಳುವಂತೆ ಅರಳಿಸು;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಚರಾಚರದಲ್ಲಿ ನಿನ್ನ ಕಂಡ
ಸದ್ಭಕ್ತನ ಮುಖ ಅರಳುವಂತೆ ಅರಳಿಸು!

## ೨

ಬದುಕಿನ ಹಲಸಿನ ತೊಳೆಗಳನ್ನು ಬಿಡಿಸಲು
ನಿನ್ನ ನೆನಹಿನ ನೆಯ್ ಕರುಣಿಸಯ್ಯ;
ಮನದ ಗಳಿಗೆಗಳಲ್ಲಿರಿಸಲು
ನಿನ್ನ ಧ್ಯಾನದ ಕೇದಗೆಗರಿ ಕರುಣಿಸಯ್ಯಾ;
ಸಂಸಾರದ ಉಸಿರನಲ್ಲಿರಿಸಲು
ನಿನ್ನ ಅರಿವಿನ ಪರಿಮಳವ ಕರುಣಿಸಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ.

ನನ್ನ ಜೀವನದ ಜಿಹ್ವೆಯಲ್ಲಿರಿಸಲು
ನಿನ್ನ ನಾಮದ ಸುಧೆಯ ಕರುಣಿಸಯ್ಯಾ!

೩

ನಿನ್ನ ನೂರು ನೆನಪಿನೋಲೆಗಳು ಬಂದಿವೆ ನಲ್ಲ,
ಆದರೆ ಮೂಲಪತ್ರವೇ ಮುಟ್ಟಿಲ್ಲವಲ್ಲ!
ಉತ್ತರ ಬರೆ, ಉತ್ತರ ಬರೆಯೆಂದು ಒತ್ತಾಯಿಸಿದರೆ
ಏನುತ್ತರ ಬರೆಯಲಿ, ಚೆನ್ನ?
ಮೂಲ ಪತ್ರದ ಪ್ರತಿ ಕಳಿಸು ರನ್ನ,
ಅದನ್ನೋದಿ, ಅರ್ಥವಾದರೆ
ಉತ್ತರಿಸುವೆನು ಮನದನ್ನ
ಸ್ವತಂತ್ರಧೀರ ಸಿದ್ಧೇಶ್ವರಾ.

೪

ಬಿಸಿಲಿಗೆ ಕೆರೆ ಬತ್ತುವುದೆಂದು
ಶರಧಿ ಬತ್ತುವುದೆ, ಅಯ್ಯ?
ಗಾಳಿಗೆ ಕಡ್ಡಿ ಅಲುಗುವುದೆಂದು
ಗುಡ್ಡ ಅಲುಗುವುದೆ, ಅಯ್ಯ?
ಬೆಂಕಿಗೆ ಬನವು ಸುಡುವುದೆಂದು
ಬಯಲು ಸುಡುವುದೆ, ಅಯ್ಯ?
ನೀರಿಗೆ ಮಣ್ಣು ಕರಗುವುದೆಂದು
ಕಲ್ಲು ಕರಗುವುದೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ.
ನನ್ನ ಮತಿಯು ಮುಗ್ಗರಿಸುವುದೆಂದು
ನಿನ್ನ ದಯೆಯು ಎಡಹುವುದೆ, ಅಯ್ಯ?

೫

ವ್ಯಥೆಯು ವೆಜ್ಜಿಸಿಹ ಮನದ ರಂಧ್ರಗಳಲ್ಲಿ
ನಿನ್ನ ನೆನಹಿನ ಜೇನು ತುಂಬಲಯ್ಯ;
ಚಿಂತೆಯ ಗೆದ್ದಲು ಕಟ್ಟಿದ ಚಿತ್ತದ ಹುತ್ತದಲ್ಲಿ
ಸುಪ್ತಚೇತನಸರ್ಪದ ಫಣಾರತ್ನ ಬೆಳಗಲಯ್ಯ;
ಕುವಿಚಾರ ಮರಕುಟಕ ಕೊರೆದ ಬುದ್ಧಿಯ ಪೊಟರೆಯಲ್ಲಿ

ನಿನ್ನರಿವಿನ ಅರಗಿಳಿ ಮನೆ ಮಾಡಲಯ್ಯ;
ಮದ್ದಾನೆ ಹೊರಳಾಡಿ ಹುಟ್ಟಿದ ಮದದ ಮಡುವಿನಲ್ಲಿ
ನಿನ್ನ ಒಲವಿನ ಅಮೃತಸಲಿಲ ತುಂಬಿಕೊಳ್ಳಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ.
ಕಂಕಾಳವಾಗಿರುವ ಈ ಕಂಗಾಲ ಬದುಕಿನಲ್ಲಿ
ನಿನ್ನ ಹಸಾದವೇ ರಕ್ತ ಮಾಂಸ ಪ್ರಾಣವಾಗಿ
ತುಂಬಿಕೊಳ್ಳಲಯ್ಯ.

೬

ನೀನು ಆಗಾಗ ಹನಿಸಿದ
ಆನಂದ ಬಿಂದುಗಳನ್ನೀಂಟಿ
ಏನೆಂಥ ದುಕ್ಕ ಬಿಕ್ಕುಗಳನ್ನು ಮರೆದೆನಯ್ಯ!
ನೀನು ಅಲ್ಲಲ್ಲಿ ಹರಡಿದ್ದ
ಸ್ನೇಹ ಸುಗಂಧವ ವಾಸಿಸಿ
ಎಂಥೆಂಥ ತಳಮಳಗಳ ತೊರೆದೆನಯ್ಯ;
ನೀನು ಕ್ವಚಿತ್ತಾಗಿ ಕಳಿಸಿದ
ಒಳ್ನುಡಿಗಳ ಕೇಳಿ
ಅದೆಷ್ಟು ದುಗುಡಗಳ ಓಡಿಸಿದೆನಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೆನೆಯುತ್ತ, ನೆನೆಯುತ್ತ
ಬಾಳ ಗೋಳುಗಳಿಂದಲೇ ಸವಿಲಾಲಿಗಳ ಹಾಡಿಸಿದೆನಯ್ಯ!

೭

ನೂರು ಕೊಡಲಿಗಳು ಕಡಿದ
ದಾರಿಮರ ನಾನಯ್ಯ!
ರೆಂಬೆಗಳೆಲ್ಲ ಮಾಯವಾಗಿ
ಬೊಡ್ಡೆ ಮಾತ್ರ ಉಳಿದಿದೆ!
ತಳಿರು, ಅಲರು, ಕಾಯಿ, ಹಣ್ಣುಗಳ
ಕಾಲ ಕಳೆದಿದೆ!
ಹೊಸ ರೆಂಬೆಗಳನ್ನು ಬೆಳೆಯಲಾರೆನೆ, ನಾನು?
ಹೊಸ ಹೂವು ಹಣ್ಣುಗಳನ್ನು ತಳೆಯಲಾರೆನೆ, ನಾನು?
ಇದಾವುದೂ ಸಾಧಿಸದಿದ್ದರೆ

ಕಡಿದ ರೆಂಬೆಗಳ ಬದಿಗೆ
ಚಿಗುರಾಗಿ ನಗಬಲ್ಲೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಗಬಲ್ಲೆ, ನಕ್ಕು ತೋರಿಸುವೆ!

೮

ಹಸಿನೆಲಕ್ಕೆ ಹಸುರಾಗುವ ಕನಸು,
ಹಸುರಾದರೆ ಸಸಿಯಾಗುವ ಕನಸು,
ಸಸಿಯಾದರೆ ಗಿಡವಾಗುವ ಕನಸು,
ಗಿಡವಾದರೆ ಕುಸುಮಿಸಿ ಫಲಿಸುವ ಕನಸು,
ಫಲಿಸಿದ ಮೇಲೂ ಬೀಜ ಭೂಮಿ ಸೇರಿ
ಮತ್ತೆ ಮೊಳೆವ ಕನಸು!
ನನಗಿರುವುದೊಂದೇ ಕನಸು:
ನಿನ್ನ ಹೆಸರೇ ನನ್ನ ಉಸಿರಾಗುವ ಕನಸು,
ಸ್ವತಂತ್ರಧೀರ ಸಿದ್ಧೇಶ್ವರಾ.

೯

ದೂರದೂರಕ್ಕೆ ಹಾರುವುದೇ ಗುರಿಯಂತೆ
ನಕ್ಷತ್ರಮಂಡಲಗಳಿಗೆ
ದೂರದೂರಕ್ಕೆ ಹಾರಿದಷ್ಟೂ ವೇಗ ವರ್ಧಿಸುವುದಂತೆ
ಅವುಗಳಿಗೆ
ನಾನೂ ನಿನ್ನಿಂದ ದೂರವಾಗುತ್ತಿದ್ದೇನೆ!
ದೂರ ಸರಿದಷ್ಟೂ ವೇಗ ವರ್ಧಿಸದಿರಲಯ್ಯ!
ನಿನ್ನ ಕರುಣೆಯ ಗುರುತ್ವಾಕರ್ಷಣಶಕ್ತಿ
ನಿನ್ನತ್ತ ಎಳೆಯಲಯ್ಯ, ಸೆಳೆಯಲಯ್ಯ ನನ್ನನ್ನು
ಸ್ವತಂತ್ರಧೀರ ಸಿದ್ಧೇಶ್ವರಾ

೧೦

ನಿನ್ನ ಸೃಷ್ಟಿಸಂಪುಟದ ಪುಟಗಳ ಸಂಖ್ಯೆಯ
ಕಂಡು ಹಿಡಿದವರಾರಯ್ಯ?
ಪ್ರತಿದಿನವೂ ಪುಟವೊಂದು–
ಒಂದೊಂದು ಪುಟದಲ್ಲಿಯೂ
ಕೋಟಿ ಕೋಟಿ ಜನನಗಳ ಕೋಟಿ ಕೋಟಿ ಮರಣಗಳ
ಕೋಟಿ ಕೋಟಿ ಜೀವಿಗಳ ಕ್ರಿಯೆ ಪ್ರತಿಕ್ರಿಯೆಗಳ ದಾಖಲೆ!

ಒಂದು ಪುಟವನ್ನೂ ಓದಲಾಗದ ನರ
ಸಮಗ್ರ ಸಂಪುಟದ ಬಗ್ಗೆ ಮಾತನಾಡುವುದು
ಮೌಢ್ಯವಲ್ಲವೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

೧೧

ಇಂದ್ರಿಯಗಳ ಜಟಿಲ ಜಾಲದಲ್ಲಿ ಸಿಲುಕಿದ
ಅರಿವು ಮರವಿನ ಹರಿಣಗಳು
ಅರಳಿಯೆಲೆಗಳಂತೆ ಅದುರುತ್ತಿವೆಯಯ್ಯ!
ನಿಶ್ಚಿತತೆಯ ನೆಲೆ ಹುಡುಕ ಹೊರಟು
ಅನಿಶ್ಚಿತತೆಯ ಬಲೆಗೆ ಸಿಲುಕ ಬೇಕೆ?
ಎಳೆದೊಯ್ದು ಸಾಕುವರೋ,
ಸುಲಿದು ತಿಂದು ಹಾಕುವರೋ-
ಎಂದು ಮುಂದುಗಾಣದಿವೆಯಯ್ಯ!
ತಂದೆ ನೀನು ಬಂಧನ ಬಿಡಿಸಿ ಸಲಹಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೨

ವಿಶ್ವದಲ್ಲಿ ಸಹಸ್ರ ಸಹಸ್ರ ರಹಸ್ಯಗಳನ್ನಿರಿಸಿರುವ ನಿನಗೆ
ನೀನೇ ರಹಸ್ಯನಾಗಿ ಉಳಿವುದು ಸಾಧ್ಯವಾಗಲಿಲ್ಲವಯ್ಯ!
ಮುಗಿಲ ಮರೆಯ ಚಂದಿರ ರಹಸ್ಯವಾಗಿರಬಲ್ಲನೆ?
ಮಂಟಪದ ಮರೆಯ ಮಲ್ಲಿಗೆ ರಹಸ್ಯವಾಗಿರಬಲ್ಲುದೆ?
ತೋರ್ಕೆಗಳಾಚೆಯ ನೀನು ರಹಸ್ಯವಾಗಿ ಉಳಿಯಬಲ್ಲೆಯಾ?
ಕಾಲಾನುಕಾಲದ ಕಣ್ಣು ಮುಚ್ಚಾಲೆಯಲ್ಲಿ
ನಿನ್ನ ಅಡಗುದಾಣಗಳೆಲ್ಲ ಬಯಲಿಗೆ ಬಂದಿವೆ;
ನಿನ್ನ ಗುಟ್ಟನ್ನು ರಟ್ಟು ಮಾಡಿವೆ,
ನಿನ್ನ ಗುಟ್ಟು ರಟ್ಟಾದಾಗ ಎಲ್ಲ ಗುಟ್ಟುಗಳೂ ರಟ್ಟಾದಂತೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೩

ಎಂಥ ಯಂತ್ರಕ್ಕೂ ಬಿಡಿಭಾಗಗಳು ಬೇಕು, ಆಗಾಗ
ನಿನ್ನ ಈ ಅನಂತ ವಿಶ್ವಯಂತ್ರಕ್ಕೆ

ಬೇಡವೆ ಬಿಡಿಭಾಗಗಳು?
ಬೇಕೆನಿಸಿದಾಗ
ಬಿಡಿಭಾಗ ಮಾಡಿಕೊಳ್ಳಯ್ಯ ನನ್ನನ್ನು
ಸ್ವತಂತ್ರಧೀರ ಸಿದ್ಧೇಶ್ವರಾ!

೧೪

ಎಲ್ಲಕ್ಕೂ ಯಾವುದೋ ತೆರೆ,
ಎಂಥದೋ ಮರೆ!
ಅರಿವಿಗೆ ಮರವೆಯ ತೆರೆ,
ಗರುವದ ಮರೆ;
ದಿಟಕೆ ಸಟೆಯ ತೆರೆ,
ಚಿನ್ನದ ಘಟದ ಮರೆ;
ಪ್ರೇಮಕ್ಕೆ ಪ್ರೇಮ ಸಂಶಯದ ತೆರೆ,
ಜಾತಿಯ ಮರೆ;
ನಿನ್ನ ನನ್ನ ನಡುವೆ
ನಾನೇ ತೆರೆ, ನಾನೇ ಮರೆ–
ಸ್ವತಂತ್ರಧೀರ ಸಿದ್ಧೇಶ್ವರ!

೧೫

ನಭದ ನೀಲಿಮೈಯಲ್ಲಿ ಚಿಕ್ಕೆ ಹೊಳೆದಾಗ
ಎಂಥ ಉಲ್ಲಾಸ!
ನಿಶೆಯ ಕಾಳಿಮೆಯಲ್ಲಿ ಜ್ಯೋತಿ ಉರಿದಾಗ
ಎಂಥ ಸಂತಸ!
ಸ್ವತಂತ್ರ ಧೀರ ಸಿದ್ಧೇಶ್ವರಾ,
ನನ್ನ ಕೀಳಿಮೆಯಲ್ಲಿ ನೀನು ತೊಳಗಿದಾಗ
ಎಂಥ ಸಂತೋಷ ವಿಲಾಸ!

೧೬

ನಿನ್ನ ಮಾತು ಬಂದಾಗ
ಮಾತು ಸೋಲುತ್ತದೆ;
ನಿನ್ನ ಬಗ್ಗೆ ಬರೆವಾಗಲೆಲ್ಲ

ಭಾಷೆ ಸೋಲುತ್ತದೆ;
ನಿನ್ನ ಕುರಿತು ಯಾರೇ ಹಾಡಲಿ,
ಹಾಡು ಸೋಲುತ್ತದೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೭

ಹೊರಗೆ ಬದುಕಿನ ಹೋರಾಟ,
ಒಳಗೆ ಬಯಕೆಗಳ ಹೋರಾಟ!
ಅಂತೂ ಹೋರಾಟ, ಹಾರಾಟ, ಏರಾಟ, ಚೀರಾಟಗಳ
ಚಲನಚಿತ್ರ ಬದುಕು!
ಇಂಥ ಎಷ್ಟು ಅಬ್ಬ ಚಲನ ಚಿತ್ರಗಳಿಗೆ
ನೋಟಕ ನೀನು- ಸ್ವತಂತ್ರಧೀರ ಸಿದ್ಧೇಶ್ವರಾ?

೧೮

ಕನಸಿನ ಕೆಳದಿ ಸಿಕ್ಕಲಿಲ್ಲವೆಂದು
ಕೈ ಹಿಡಿದ ಮಡದಿಯನ್ನು ಜರೆವುದೆ ಅಯ್ಯ?
ಸ್ವಂತ ಮನೆ ಕಟ್ಟಲಾಗಲಿಲ್ಲೆಂದು
ಇದ್ದ ಬಾಡಿಗೆಯ ಮನೆ ತೊರೆವುದೆ, ಅಯ್ಯ?
ಆದರ್ಶಗಳು ಎಟುಕಲಿಲ್ಲವೆಂದು
'ಬದುಕೇ ಬೇಡ' ಎನ್ನುವುದೆ, ಅಯ್ಯ?
ಸ್ವತಂತ್ರ ಧೀರ ಸಿದ್ಧೇಶ್ವರಾ,
ನೀನು ತೋರಲಿಲ್ಲವೆಂದು
ನಿನ್ನನ್ನೇ ತ್ಯಜಿಸುವದೆ, ಅಯ್ಯ?

೧೯

ಮಿಲನದ ಕನಸು ಒಂದು ತೆರ,
ವಿರಹದ ಕನಸು ಒಂದು ತೆರ
ಒಂದೊಂದು ಚೇತೋಹರ!
ಕನಸಿನ ಮೂಲವೇನೇ ಇರಲಿ,
ಕನಸು ನಿದ್ದೆಯ ಸಹಚರ
ನನಗೆ ನೀನು ಕೈಸಾರು, ಬಿಡು-

ನಿನ್ನ ಸವಿಗನಸುಗಳನ್ನು ಕೊಡು, ಪ್ರಿಯಕರ
ಸ್ವತಂತ್ರಧೀರ ಸಿದ್ಧೇಶ್ವರ.

೨೦

ಅವೇ ಕಣ್ಣುಗಳಿಂದ ಆನಂದ ಬಾಷ್ಪಗಳು ಒಮ್ಮೊಮ್ಮೆ,
ದುಃಖಾಶ್ರುಗಳು ಒಮ್ಮೊಮ್ಮೆ;
ಅವೇ ಕಣ್ಣು ಮುಚ್ಚಿದಾಗ ಸುಂದರ ಸ್ವಪ್ನಗಳು ಒಮ್ಮೊಮ್ಮೆ,
ಕರಾಳ ಕನಸುಗಳು ಒಮ್ಮೊಮ್ಮೆ.
ಅವೇ ಕಣ್ಣು ಅರಸಿದಾಗ ಹಳೆಯ ಕೆಳೆಯ ಮುಖಗಳು ಒಮ್ಮೊಮ್ಮೆ,
ಹಗೆಯ ಹೊಗೆಯಾಡುವ ಮೊಗಗಳು ಒಮ್ಮೊಮ್ಮೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಅವೇ ಕಣ್ಣುಗಳು ಹಂಬಲಿಸಿದಾಗ
ಶಿವಶಂಕರ ಒಮ್ಮೊಮ್ಮೆ, ರುದ್ರ ಭಯಂಕರ ಒಮ್ಮೊಮ್ಮೆ!

೨೧

ನಿನ್ನ ಗಾನದ ಲಯದಿ
ಲಯವಾಯ್ತು ಮನವು,
ರಕ್ತ ಮಾಂಸದಿ ರಚಿತ
ಕೊಳಲಾಯ್ತು ತನುವು,
ಸ್ವತಂತ್ರಧೀರ ಸಿದ್ಧೇಶ್ವರಾ.
ಹೊರಡಲಿದರಿಂದಲೇ
ನಿನ್ನಮೃತ ಸ್ವನವು!

೨೨

ಮಲ್ಲಿಗೆಯನ್ನು ಬಿಡಿಯಾಗಿ ಮುಡಿಯಲಾಗದು;
ಕೇದಗೆಯನ್ನು ಇಡಿಯಾಗಿ ಮುಡಿಯಲಾಗದು;
ನಿನ್ನನ್ನು ಮಾತ್ರ ಬಿಡಿಯಾಗಿಯೂ ಮುಡಿಯಬಹುದು–
ಜೀವಾತ್ಮನಾಗಿ;
ಇಡಿಯಾಗಿಯೂ ಮುಡಿಯಬಹುದು– ಮುಕ್ತಾತ್ಮನಾಗಿ
ಸ್ವತಂತ್ರಧೀರ ಸಿದ್ಧೇಶ್ವರಾ.

## ೨೩

ಸ್ವತಂತ್ರಧೀರ ಸಿದ್ಧೇಶ್ವರಾ,
ಗಾಳಿಯ ಹೆಗಲನ್ನೇರಿ ಗಂಧ ಬಂದಾಗ,
ಮೋಡದ ಹೆಗಲನ್ನೇರಿ ಮಿಂಚು ಬಂದಾಗ,
ತುಂತುರು ಮಳೆಯ ಬೆನ್ನೇರಿ ಕಾಮನಬಿಲ್ಲು ಬಂದಾಗ,
ಪ್ರತಿಭೆಯ ಬೆನ್ನನ್ನೇರಿ ಕಲೆ ಬಂದಾಗ
ನನ್ನ ಮನವನ್ನೇರಿ ನೀನು ಬಂದಾಗ
ಎಂಥ ಹರ್ಷೋಲ್ಲಾಸವಯ್ಯ,
ಧನ್ಯತೆಯದರ ಹಾಸವಯ್ಯ!

## ೨೪

ಹಸುರಿಗೆ ಇಬ್ಬನಿಯ ಸ್ನಾನ
ದುಂಬಿಗೆ ಮಕರಂದದ ಸ್ನಾನ,
ಬನಕ್ಕೆ ಬೆಳ್ದಿಂಗಳ ಸ್ನಾನ,
ಕುಲೂ ಕಣಿವೆಗೆ ಪುಷ್ಪ ಸ್ನಾನ,
ಮಲಯ ಮಾರುತಕ್ಕೆ ಶ್ರೀಗಂಧ ಸ್ನಾನ,
ನನಗೆ ನಿನ್ನ ಕೃಪಾಕಿರಣಗಳ ಸ್ನಾನ–
ಸ್ವತಂತ್ರಧೀರ ಸಿದ್ಧೇಶ್ವರ!

## ೨೫

ರಾತ್ರಿಯೆಲ್ಲ ಇಬ್ಬನಿ ಕಂಬನಿಗರೆಯಿತೆಂದು
ಬೆಳಗಿನ ಹೂ ನಗುತ್ತಲಿದೆ!
ನಾನೂ ನಿನಗಾಗಿ ಇರುಳೆಲ್ಲ ಕಣ್ಣೀರು ಸುರಿಸಿದೆ,
ನನ್ನ ಮೊಗದಲ್ಲೇಕೆ ಹೊಗೆ, ನಲ್ಲ?
ಮಾಗಿಯಲ್ಲಿ ಮಾತ್ರ ತಪಿಸಿ
ಸುಗ್ಗಿಯಲ್ಲಿ ಚಿಗುರಿ ನಿಂತಿದೆ ವನ;
ಆಯುಷ್ಯವೆಲ್ಲ ತಪಿಸಿದರೂ
ನನ್ನ ಇರವು ಉರಿಯಾಗಿಯೇ ಉಳಿಯಬೇಕೆ, ನಲ್ಲ?
ಅಚ್ಚಿಗವೇ ಅಚ್ಚೆಯೇ ನನಗೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೨೬

ಹುಲ್ಲಿನ ಮಕಮಲ್ಲಿನ ಮೇಲೆ
ಹಾಯಾಗಿ ಮಲಗಿರುವ ಹೊಂಬಿಸಿಲು,
ನಿಸ್ತರಂಗ ಸರಸಿಯ ಶಯ್ಯೆಯ ಮೇಲೆ
ನೆಮ್ಮದಿಯಿಂದ ನಿದ್ರಿಸುತ್ತಿರುವ ಬೆಳುದಿಂಗಳ,
ಹಿಮದ ಹಾಸಿಗೆಯ ಮೇಲೆ
ನಿರಾಳವಾಗಿ ಪವಡಿಸಿದ ಮೇಘಜಾಲ,
ನಭದ ನೀಲಿಮೆಯ ನಲ್ವಾಸಿನಲ್ಲಿ
ಕನಸು ಕಾಣುತ್ತಿರುವ ನಕ್ಷತ್ರ ಮಾಲೆ-
ನಿನ್ನ ಆನಂದ ಸಿಂಧುವಿನ ಬಿಂದುಗಳು,
ಸ್ವತಂತ್ರಧೀರ ಸಿದ್ಧೇಶ್ವರ!

## ೨೭

ನಿನ್ನ ಮೊಗವನ್ನು ನೋಡಲಿಲ್ಲೆಂಬ
ದುಗುಡವೆನಗಿಲ್ಲವಯ್ಯ;
ಎಲ್ಲ ಮೊಗಗಳಲ್ಲಿಯೂ
ನಿನ್ನ ಮೊಗವನ್ನೇ ನೋಡುತ್ತಿದ್ದೇನೆ!
ನಿನ್ನ ದನಿಯನ್ನು ಕೇಳಲಿಲ್ಲೆಂಬ
ಕೊರಗು ನನಗಿಲ್ಲವಯ್ಯ,
ಎಲ್ಲ ದನಿಗಳಲ್ಲಿಯೂ ನಿನ್ನ ದನಿಯನ್ನೇ
ಕೇಳುತ್ತಿದ್ದೇನೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕೃಪೆ ನನಗಾಗಲಿಲ್ಲವೆಂಬ
ಖಿನ್ನತೆ ನನಗಿಲ್ಲವಯ್ಯ,
ನಿನ್ನ ಕೃಪೆಗೆ ಪಾತ್ರರಾದವರ ಕೃಪೆ ನನಗಿದೆ!

## ೨೮

ನಿನ್ನ ನಿರ್ದಯತೆ
ನನ್ನ ಗೆಳತಿಯರಿಗೆ ಗೊತ್ತಾಗದಿರಲೆಂದು
ಒತ್ತಿ ಬರುವ ಕಂಬನಿಗಳನ್ನು ಹತ್ತಿಹಿಡಿದಿರುವೆ, ನಲ್ಲ!
ನಿನ್ನ ನಿರ್ಲಕ್ಷ್ಯದ ಸುಳಿವು
ನನ್ನ ನೆರೆಯವರಿಗೆ ತಿಳಿಯದಿರಲೆಂದು

ನನ್ನ ನಿಟ್ಟುಸಿರುಗಳ ಬಿಗಿಹಿಡಿದಿರುವೆ, ನಲ್ಲ!
ನಿನ್ನ ನಲ್ಮೆ ನನಗೆ ಸಿಕ್ಕದಿದ್ದರೂ
ಸಿಕ್ಕಿದಂತೆ ನಟಿಸಲು ನನ್ನಿಂದಾಗದೆ,
ಸಿಕ್ಕದಿದ್ದುದ ದಕ್ಕಿಸಿಕೊಳ್ಳಲೂ ಆಗದೆ
    ಪರಿತಪಿಸುತ್ತಿಹೆ ಪ್ರಿಯಕರ
    ಸ್ವತಂತ್ರಧೀರ ಸಿದ್ಧೇಶ್ವರ!

೨೯

ಅವರಿವರು ಕೇಡು ಮಾಡಿದರೆಂದು
ಮಾನವ ದ್ವೇಷಿಯಾಗದಿರು ಮನವೆ:
ಅವರಿವರು ಮೋಸಗೊಳಿಸಿದರೆಂದು
ಸಂಶಯ ಪಿಶಾಚಿಯಾಗದಿರು, ಮನವೆ;
ಅವರಿವರು ಆಡಿಕೊಂಡರೆಂದು
ನಿಂದಕ, ದೂಷಕನಾಗದಿರು, ಮನವೆ:
ಸ್ವತಂತ್ರಧೀರ ಸಿದ್ಧೇಶ್ವರನ
ಕಳ್ಳ ಭಕ್ತರೇ ಸುತ್ತುವರಿದರೆಂದು
ಅವನನ್ನೇ ತೊರೆಯಬೇಡ, ಮನವೆ!

೩೦

ಅಗಲಿದವರ ಚಿತ್ರವನ್ನು ನೋಡುತ್ತ ನೋಡುತ್ತ
ಇನಿಸಿನಿಸು ಮುದದಾಳುವವರಂತೆ
ನಿನ್ನ ಅದ್ಭುತ ವಿಶ್ವ ಚಿತ್ರವನ್ನು ನೋಡುತ್ತ ನೋಡುತ್ತ
ವಿಯೋಗ ವ್ಯಥೆಯನ್ನು ಮರೆಯಲೆಳಸಿಹೆ.
ಚಿತ್ರಕ್ಕೆ ಚೈತನ್ಯ ಚಿಮ್ಮಿದಂತೆ
ವಿಶ್ವತೋಮುಖನಾಗಿ ಮೊಗದೋರಾ–
    ಸ್ವತಂತ್ರಧೀರ ಸಿದ್ಧೇಶ್ವರಾ!

೩೧

ನನ್ನ ಸತಿಯೇ ನನಗೆ ಸವತಿ–
ಶರಣಸತಿ ಲಿಂಗಪತಿ ಭಾವದಲ್ಲಿ!
ನಾನೇ ನನ್ನ ಸತಿಗೆ ಸವತಿ–
ಅದೇ ಶಿವಾನುಭಾವದಲ್ಲಿ!

ನಮ್ಮಿಬ್ಬರಲ್ಲಿ ಸ್ಪರ್ಧೆ ನಡೆದೀತೇ
ಸ್ವತಂತ್ರಧೀರ ಸಿದ್ಧೇಶ್ವರನನ್ನು
ಮೊದಲು ಮೆಚ್ಚಿಸುವಲ್ಲಿ?

೩೨

ನಲ್ಲ ಬರುವನೆಂಬ ಸಿಹಿಸುದ್ದಿ ಬಂದಿದೆ ಗೆಳತಿ,
ನಂಬಲೆ, ನಂಬದಿರಲೆ?
ಹೊರಗಿನಿಂದ ಬರುವನೆಂದರೆ ನಂಬಲಾರೆ,
ಒಳಗೇ ಐತರುವನೆಂದರೆ ನಂಬದಿರಲಾರೆ!
ಮನದೊಳಗಣ ನಲ್ಲ
ಹೊರಗಿನಿಂದ ಬರುವನೆಂದರೆ
ಹೇಗೆ ನಂಬಲಿ ಸಖಿ?
ಸ್ವತಂತ್ರಧೀರ ಸಿದ್ಧೇಶ್ವರನ
ಒಳಗೇ ಎಚ್ಚರಿಸಿ ಬೆರೆವೆ ಗೆಳತಿ!

೩೩

ನಿನ್ನ ದಾರಿ ನೋಡಿ ನೋಡಿ ಕಣ್ಣು ನೋಯುತ್ತಿವೆ;
ಹೊರಗನಾಲಿಸಿ ಆಲಿಸಿ ಕಿವಿ ನೋಯುತ್ತಿವೆ;
ನಿನ್ನ ಕರೆದು ಕರೆದು ಬಾಯಿ ನೋಯುತ್ತಿದೆ;
ನಿನಗಾಗಿ ತಿರುಗಿ ತಿರುಗಿ ಕಾಲು ನೋಯುತ್ತಿವೆ;
ನಿನಗೆ ಕೈ ಬೀಸಿ ಬೀಸಿ ಕೈ ನೋಯುತ್ತಿದೆ;
ಮೈ ನೋಯುತ್ತಿದೆ, ಮನನೋಯುತ್ತಿದೆ.
ಪ್ರಾಣ-ಭಾವ-ಬುದ್ಧಿಗಳು ನೋಯುತ್ತಿವೆ;
ಇನ್ನಾದರೂ ಒಲಿ, ನನ್ನೊಳಗೆ ನಲಿ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೪

ದೂರ ಹೆಚ್ಚಿದಷ್ಟೂ
ಗುರುತ್ವಾಕರ್ಷಣದ
ಜೋರು ಕಡಮೆಯಾಗುವುದಂತೆ:
ನೀನು ದೂರವಾದಷ್ಟೂ
ವಿರಹವೇದನೆಯೇಕೆ ಹೆಚ್ಚಬೇಕಯ್ಯ-
ಸ್ವತಂತ್ರಧೀರ ಸಿದ್ಧೇಶ್ವರ?

೩೫

ಮನೆಯ ಬಾಗಿಲಿಗೆ ಮಾಂದಳಿರ ತೋರಣ,
ಮನೆಯ ಮುಂದಿನ ಮಾಮರಕ್ಕೆ ಗಿಳಿಗಳ ತೋರಣ,
ಗುಡಿಯ ಗೋಪುರಕ್ಕೆ ಪಾರಿವಾಳಗಳ ತೋರಣ,
ಬತ್ತದ ಗದ್ದೆಗಳಿಗೆ ಬೆಳ್ಳಕ್ಕಿಗಳ ತೋರಣ,
ಗಿರಿಶಿಖರಗಳಿಗೆ ಕಿರುಮೋಡಗಳ ತೋರಣ,
ನಭದ ಗೊಮ್ಮಟನಿಗೆ ನಕ್ಷತ್ರಗಳ ತೋರಣ,
ಸ್ವತಂತ್ರಧೀರ ಸಿದ್ಧೇಶ್ವರನಿಗೆ
ಅನಂತಕೋಟಿ ಬ್ರಹ್ಮಾಂಡಗಳ ತೋರಣ!

೩೬

ನನ್ನ ಸ್ಮರಣೆಯ ಭರಣಿಗಳಲ್ಲಿ
ನಿನ್ನ ನಾಮದ ಜೇನು ತುಂಬಲಯ್ಯ;
ನನ್ನ ತೊದಲ್ನುಡಿಗಳ ತತ್ರಾಣಿಗಳಲ್ಲಿ
ನಿನ್ನ ಗುಣಗಾನದ ಗಂಗಾಜಲ ತುಂಬಲಯ್ಯ;
ನನ್ನ ಕನಸುಗಳ ಕುಸುಮಗಳಲ್ಲಿ
ನಿನ್ನ ಕೀರ್ತಿಯ ಕಂಪು ತುಂಬಲಯ್ಯ;
ನನ್ನ ಸುಷುಪ್ತಿಯ ಕಸುಗಾಯಿಗಳಲ್ಲಿ
ನಿನ್ನ ಅರಿವಿನ ಅಮೃತ ತುಂಬಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ರೋಮ–ರಂಧ್ರಾಕ್ಷಿಗಳಲ್ಲಿ
ನಿನ್ನ ತ್ರಿವಿಧರೂಪ ತುಂಬಲಯ್ಯ!

೩೭

ಸೂರ್ಯ ಕಿರಣಗಳು ತಲುಪದ ತಾಣಗಳಲ್ಲಿಯೇ
ಕ್ರಿಮಿಕೀಟಗಳ ಆವಾಸ;
ನೀರು ಹರಿಯದ ಮೋರಿಗಳಲ್ಲಿಯೇ
ದುರ್ವಾಸನೆಯ ನಿವಾಸ;
ಜನ ಬಳಸದ ಬಾವಿಗಳಲ್ಲಿಯೇ
ಹಾವಸೆಯ ಅಟ್ಟಹಾಸ;
ಸುವಿಚಾರಗಳು ಹೊಗದ ಬಗೆಗಳಲ್ಲಿಯೇ
ಕುವಿಚಾರಗಳ ಕಶ್ಮಲ ವೇಷ;

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಬದಿಗೊತ್ತಿದ ಬದುಕಿನಲ್ಲಿಯೇ,
ಕಾಮ- ಕಾಲ- ಕರ್ಮ- ವಿಧಿವಿಲಾಸ!

## ೩೮

ಎಲ್ಲಿಹವೋ ಹಾರುವ ತಟ್ಟೆಗಳು.
ಹಾರುವ ಹೂಗಳಿವು ಚಿಟ್ಟೆಗಳು;
ಹಾಡುವ ಹೂಗಳಿವು ಕೋಗಿಲೆಗಳು;
ಕುಣಿಯುವ ಹೂಗಳಿವು ನವಿಲುಗಳು:
ಗಳಪುವ ಹೂಗಳಿವು ಗಿಳಿಗಳು,
ಉಲಿವ ಹೂಗಳಿವು ಅಳಿಗಳು,
ನಗುವ ಹೂಗಳಿವು ಮಲರುಗಳು!
ನನ್ನ ಮನವೂ ಅರಳಿ ಹೂವಾಗುವಂತೆ ಹರಸಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೯

ಹಗಲು ಬಿಳಿ, ಇರುಳು ಕರಿದು,
ಎರಡೂ ಸೇರಿ ಒಂದು ದಿನವಾಯಿತ್ತು;
ಗುಡ್ಡೆ ಕಪ್ಪು, ಸುತ್ತು ಬಿಳಿದು,
ಎರಡೂ ಸೇರಿ ನಯನವಾಯಿತ್ತು;
ಕೆಲವರು ಕರಿಯರು, ಕೆಲವರು ಬಿಳಿಯರು,
ಇಬ್ಬರೂ ಸೇರಿ ಮನುಕುಲವಾಯಿತ್ತು;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮನ ಕಪ್ಪು, ನಿನ್ನ ಕರುಣೆ ಧವಳ,
ಎರಡೂ ಸೇರೆ ಶಿವಮಂಗಲವಾದೀತು.

## ೪೦

ಹೆಮ್ಮರಕ್ಕೆ ಹೆಜ್ಜೇನುಗಳ ಹಾರ,
ಹೆದ್ದಾರಿಗೆ ವಾಹನಗಳ ಹಾರ,
ಹೆದ್ದೊರೆಗೆ ನೊರೆ ತೆರೆಗಳ ಹಾರ,
ಹೆಜ್ಜೊಡರಿಗೆ ಶಲಭಗಳ ಹಾರ,
ಬಯಲ ಭಾಮಿನಿಗೆ ಕಾಮನಬಿಲ್ಲಿನ ಹಾರ,
ಸ್ವತಂತ್ರಧೀರ ಸಿದ್ಧೇಶ್ವರನಿಗೆ

ಸ್ಥಲ-ಕಾಲ-ಸೃಷ್ಟಿ-ಸ್ಥಿತಿ-ಲಯಗಳ ಹಾರ!

## ೪೧

ತಾವು ಕಾಯುತ್ತಿರುವ ಬೆಳೆಗಳ ಬಗ್ಗೆ
ಹಿಗ್ಗಿ ಬಾಗಿರುವ ಬೇಲಿಗಳು,
ಮುಳ್ಳೆ ಮೊಲ್ಲೆಯ ಹಾಸಿಗೆಯೆಂದು
ಬೇಲಿಗೆ ಹಬ್ಬಿರುವ ಬಳ್ಳಿಗಳು,
ಬಳ್ಳಿಯ ಸೀರೆಗಳಿಗೆ ಕಸೂತಿಗಳಂತೆ
ಮೂಡಿ ಪರಿಮಳಿಸುತ್ತಿಹ ಹೂವುಗಳು,
ಯಾವ ಹೂವಾದರೇನು
ಸವಿಸಿಕ್ಕರಾಯಿತೆಂದು ಮುತ್ತಿರುವ ದುಂಬಿಗಳು,
ನಿಮ್ಮ ಕಪ್ಪು ಹೆಚ್ಚೋ, ನಮ್ಮ ಕೂದಲ ಕಪ್ಪು ಹೆಚ್ಚೋ
ಎಂದು ಸ್ಪರ್ಧೆಗೆ ನಿಂತಂತಿರುವ ಕುಸುಮಬಾಲೆಯರು,
ಅವರ ರೂಪ-ದೀಪಗಳಿಗೆ ಶಲಭವಾಗ ಬಯಸಿ
ಬಾಯ್ಬಿಡುತ್ತಿರುವ ದಾರಿಕಾರರು,
ಎಲ್ಲವನ್ನೂ ನೋಡಿ ನಸುನಗುತ್ತಿರುವ
ಸ್ವತಂತ್ರಧೀರ ಸಿದ್ಧೇಶ್ವರ!

## ೪೨

ನೀನು ಎಷ್ಟು ಹತ್ತಿರ ನನಗೆ?
ಹತ್ತಿರಕ್ಕಿಂತ ಹತ್ತಿರ!
ನೀನು ಎಷ್ಟು ದೂರ ನನಗೆ?
ದೂರಕ್ಕಿಂತ ದೂರ!
ನಾನೇ ಹತ್ತಿರ ಇರಗೊಡಲಿಲ್ಲವೋ,
ನೀನೇ ಮುನಿದು ದೂರ ಹೋದೆಯೋ?
ನನ್ನ ತಪ್ಪಿದ್ದರೆ ಕ್ಷಮೆ ಕೋರುತ್ತೇನೆ,
ಕಾಲಿಗೆ ಬೀಳುತ್ತೇನೆ, ದಿಂಡುರುಳುತ್ತೇನೆ-
ಕ್ಷಮಿಸಿ ಬಿಡು ಕೃಪಾಕರ,
ಮತ್ತೆ ಹತ್ತಿರವಾಗು ಕರುಣಾಕರ-
ಸ್ವತಂತ್ರಧೀರ ಸಿದ್ಧೇಶ್ವರ!

ೞ೩

ಈ ಜವನಿಕೆ ಹೀಗೆಯೇ ಉಳಿಯಬೇಕೆ
ನನ್ನ ನಿನ್ನ ನಡುವೆ?
ಈ ಮೌನ ಹೀಗೆಯೇ ಮುಂದುವರೆಯಬೇಕೆ
ನನ್ನ ನಿನ್ನ ನಡುವೆ?
ಈ ವಿರಹ ಹೀಗೆಯೇ ಸಾಗಬೇಕೆ
ನನ್ನ ನಿನ್ನ ನಡುವೆ?
ಸ್ವತಂತ್ರಧೀರ ಸಿದ್ಧೇಶ್ವರಾ.
ಈ ಸಮಾನಾಂತರ ರೇಖೆಗಳು
ಸಮಾನ ತರಂಗಾಂತರಗಳಾಗವೆ
ನನ್ನ ನಿನ್ನ ನಡುವೆ?

ೞೞ

ನಿನಗಾವ ಹೆಸರೂ ಇಲ್ಲವೆಂದು ಗೊತ್ತಿದ್ದೂ
ಯಾವುದೋ ಒಂದು ಹೆಸರಿನಿಂದ ಕರೆದಾಗಲೇ ತೃಪ್ತಿ ನನಗೆ;
ನಿನಗೆ ಯಾವ ರೂಪವೂ ಇಲ್ಲವೆಂದು ಗೊತ್ತಿದ್ದೂ
ಯಾವುದೋ ಒಂದು ರೂಪವನ್ನು ನೆನೆದಾಗಲೇ ಹರ್ಷ ನನಗೆ;
ನಿನಗಾವ ಭಾಷೆಯೂ ಇಲ್ಲವೆಂದು ಗೊತ್ತಿದ್ದೂ
ನನ್ನ ಭಾಷೆಯೇ ನಿನ್ನ ಭಾಷೆಯೆಂದುಕೊಂಡಾಗಲೇ ಹಿಗ್ಗು ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆನ್ನ ತನುವನ್ನೇ ಮನೆ ಮಾಡಿಕೊಂಡಿದ್ದರೂ
ನಿನ್ನನೆನ್ನ ಕರದಲಿಟ್ಟು ಪೂಜಿಸಿದಾಗಲೇ ಶಾಂತಿ ನನಗೆ!

ೞ೫

ಪಾತೆಗಳು ಪುನೀತವಾಗಿವೆ
ಪುಷ್ಪಲತೆಗಳನ್ನು ಪೋಷಿಸಿ;
ಪುಷ್ಪಗಳು ಪರಿಪೂತವಾಗಿವೆ
ಮಧುಬಿಂದುಗಳನ್ನು ಧರಿಸಿ;
ಮಧುಬಿಂದುಗಳು ಪವಿತ್ರವಾಗಿವೆ
ಹೊಂಗಿರಣಗಳನ್ನು ಆಲಿಂಗಿಸಿ:
ಹೊಂಗಿರಣಗಳು ಮಡಿಯಾಗಿವೆ
ಮಧುವಾತವನ್ನು ಸ್ಪರ್ಶಿಸಿ;

ನೀನೇಕೆ ಪಾವನವಾಗಲೊಲ್ಲೆ
ಸ್ವತಂತ್ರಧೀರ ಸಿದ್ಧೇಶ್ವರನನ್ನು ಸ್ಮರಿಸಿ?

೪೬

ಕೊಳಲು ನುಡಿಸುವುದನ್ನು ನಿಲ್ಲಿಸಿದಾಗ
ಕೊಳಲಿನ ಇಂಚರ ಎಲ್ಲಿಗೆ ಹೋಗುವುದಯ್ಯ?
ಮೋಡ ಮಿಂಚಿ ಅದು ಮರೆಯಾದಾಗ
ಮೋಡದ ಮಿಂಚು ಎಲ್ಲಿಗೆ ಹೋಗುವುದಯ್ಯ?
ನೆನಪಿನ ತಂತಿ ಮೀಟುವುದು ನಿಂತಾಗ
ನೆನಪಿಗೆ ನೆನಪೇ ಎಲ್ಲಿಗೆ ಹೋಗುವುದಯ್ಯ?
ಕನಸಿಗೆ ಬೆಚ್ಚಿಬಿದ್ದು ಎದ್ದು ಕುಳಿತಾಗ
ಕನಸಿಗೆ ಕನಸೇ ಎಲ್ಲಿಗೆ ಹೋಗುವುದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
'ನಾನು, ನಾನು' ಎಂದು ನನ್ನಿಂದ ಅನ್ನಿಸುವ ನೀನು ತೊರೆದಾಗ
'ನಾನು' ಎಂಬುದು ಎಲ್ಲಿಗೆ ಹೋಗುವುದಯ್ಯ?

೪೭

ಹೂಬಿಟ್ಟ ಕೌಂಗು, ಕಾಯಿಬಿಟ್ಟ ತೆಂಗು,
ಹಣ್ಣು ಬಿಟ್ಟ ಕಿತ್ತಲೆ-ಸೇಬು ಕಣ್ಣಿಗೆ ಹಬ್ಬವಯ್ಯ,
ಕೋಗಿಲೆಯ ಕೂಗು, ಭೃಂಗದ ರಾಗ,
ಪಂಡಿತವಕ್ಕಿಯ ಮಾತು ಕಿವಿಗೆ ಹಬ್ಬವಯ್ಯ;
ಮಲ್ಲಿಗೆಯ ಕಂಪು, ಪಾರಿಜಾತದ ಪರಿಮಳ,
ಸಂಪಿಗೆಯ ಸೌರಭ ನಾಸಿಕಕ್ಕೆ ಹಬ್ಬವಯ್ಯ;
ಇನಿಯಳ ಸೋಂಕು, ತಾಯ್ತಂದೆಗಳ ಪಾದಸ್ಪರ್ಶ,
ಪಾಪಾನ ಉಪ್ಪಾ ಮೈಗೆಲ್ಲ ಹಬ್ಬವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ನನ್ನ ಮನಕ್ಕೆ ಹಬ್ಬವಯ್ಯ!

೪೮

ಹಡಗಿಗೆ ತೂತು ಬೀಳದಿದ್ದರೆ
ಕಡಲ ನೀರೆಲ್ಲ ಕೂಡಿ ಮುಳುಗಿಸಲಾರದಯ್ಯ ಅದನ್ನು;
ಸೊಡರ ಎಣ್ಣೆ ತೀರದಿದ್ದರೆ
ಪೊಡವಿಯ ಕತ್ತಲೆಯೆಲ್ಲ ಕೂಡಿ ಆರಿಸಲಾರದಯ್ಯ ಅದನ್ನು;

ಸ್ವತಂತ್ರಧೀರ ಸಿದ್ಧೇಶ್ವರಾ,
ಮನ ನಿನ್ನನ್ನು ನಿಜಭಕ್ತಿಯಿಂದ ನೆನೆಯುತ್ತಿದ್ದರೆ
ವಿಷಯ ಸಂದೋಹವೇ ಅಲುಗಿಸಲಾರದಯ್ಯ ಅದನ್ನು!

೪೯

ಹಿಮಗಿರಿಯ ಮೇಘ ಮೇಖಲೆಯಲ್ಲಿ
ಕೋಲ್ಮಿಂಚು ಹೊಡೆದಾಗ
ಹಿಮಶಿಖರ ಝಗ್ಗೆನ್ನುವಂತೆ
ಭಗ್ಗೆಂದು ಥಳಥಳಿಸಿತು, ಒಳಗು ಇಂದು!
ನಯಾಗಾರಾದ ನೆತ್ತಿಯ ಮೇಲೆ
ಕಾಮನ ಬಿಲ್ಲುಗಳು ಕುಣಿವಂತೆ
ಸಾವಿರ ಸೋಗೆಗಳು ನರ್ತಿಸಿದವಲ್ಲಿ–
ವರ್ಣಜ್ಯೋತಿಗಳ ಚೆಲ್ಲಿ!
ಕಂಡದನು ನವಿರಿನ ಪಯಿರು
ಮುರಿದೆದ್ದಿತು ಮೈಯಲ್ಲಿ!
ಹುಣ್ಣಿಮೆಯ ರಾತ್ರಿಯಲ್ಲಿ
ತಾಜಮಹಲನು ಕಂಡಂಥ ಅನುಭವ–
ಸ್ವತಂತ್ರಧೀರ ಸಿದ್ಧೇಶ್ವರ!

೫೦

ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ
ಪಕ್ಷಿಧಾಮವಿದರ ಯಾತ್ರಿಕ ಪಕ್ಷಿಗಳು?
ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ
ಶರನ್ನಭದ ನೀರದ–ಪಕ್ಷಿಗಳು?
ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ
ವ್ಯೋಮಾತೀತದ ನಕ್ಷತ್ರದ ಪಕ್ಷಿಗಳು?
ಸ್ವತಂತ್ರಧೀರ ಸಿದ್ಧೇಶ್ವರಾ,
ಎತ್ತಣಿಂದ ಬಂದು ಎತ್ತ ಹೊರಟಿವೆ
ಶೂನ್ಯಾಶೂನ್ಯದಿಂದ ಬಂದು ಶೂನ್ಯ ಪಕ್ಷಿಗಳು?

೫೧

ಬುದ್ಧಿ ಏರಬಲ್ಲ ಎತ್ತರಕ್ಕೆ ಸೀಮೆ ಯಾವುದಯ್ಯಾ?
ಹೃದಯ ವ್ಯಾಪಿಸಬಲ್ಲ ವಿಸ್ತಾರಕ್ಕೆ ಸೀಮೆ ಯಾವುದಯ್ಯ?

ಮನ ಇಳಿಯ ಬಲ್ಲ ಆಳಕ್ಕೆ ಸೀಮೆ ಯಾವುದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮರವೆಗೆ, ನಿನ್ನ ಕರುಣೆಗೆ ಸೀಮೆ ಯಾವುದಯ್ಯ?

೫೨

ಯಾವುದಿದು ಹೆಸರಿಲ್ಲದ ವ್ಯಸನ,
ಮುಖವಿಲ್ಲದ ದುಃಖ ಗುರುತುಸಿಕ್ಕದ ಕೊರಗು-
ಕೊರೆಯುತಿದೆ ಕೀಟದಂತೆ ಒಳಗೆ?
ಈ ಕೀಟವನ್ನೇ ಭ್ರಮರವಾಗಿಸುವ
ನಿನ್ನ ನೆನಹಿನ ಭ್ರಮರ ಬರದೆ ಬಳಿಗೆ?
ಈ ಕೀಟದ ಕೊರೆತ ಭೃಂಗ ಸಂಗೀತವಾಗಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೫೩

ನೀನೆನ್ನನೆಷ್ಟು ಕಾಡಿದರೂ,
ಪೀಡಿಸಿದರೂ, ಬಾಡಿಸಿದರೂ
ನಿನ್ನ ಕರುಣೆಯಲ್ಲಿ ನನಗೆ ನಿಶ್ಚಲ ನಂಬಿಕೆಯಯ್ಯಾ!
ನೀನೆನ್ನ ಗಾಣದಲ್ಲಿ ಹಾಕಿ ತಿರುವಿದರೂ,
ಬೆಂಕಿಯಲ್ಲಿ ಹಾಕಿ ಹುರಿದರೂ,
ತರಿದರೂ, ತುರಿದರೂ, ಕೊರೆದರೂ
ನಿನ್ನ ಕ್ಷಮೆಯಲ್ಲಿ ನನ್ನ ವಿಶ್ವಾಸ ಅಚಲವಯ್ಯ!
ಎಷ್ಟು ಸಲ ಸುಡುವಿ ಈ ಬೂದಿಯನ್ನು?
ನಗುನಗುತಲೇ ತುಳಿವೆ ಬೆಂಕಿಯ ಹಾದಿಯನ್ನು!
ಕೊನೆಗೆ ನಿನಗೇ ಸೋಲು-
ನನಗೇ ಗೆಲವು,
ಸ್ವತಂತ್ರಧೀರ ಸಿದ್ಧೇಶ್ವರಾ.

೫೪

ಪಶುಪಕ್ಷಿಗಳ ಭಾಷೆಗಳ ಬಲ್ಲವರುಂಟು
ಸಂಕೇತ ಲಿಪಿಗಳ ಭಾಷೆಗಳ ಬಲ್ಲವರುಂಟು;
ಪಳೆಯುಳಿಕೆಗಳ ಭಾಷೆಗಳ ಬಲ್ಲವರುಂಟು;

ನಯನ–ಭೂ–ಭಾಷೆಗಳ ಬಲ್ಲವರುಂಟು
ಸಚರಾಚರದಲ್ಲಿ ಸೂರೆಯಾಗಿರುವ
ನಿನ್ನ ಭಾಷೆಯ ಬಲ್ಲವರ ತೋರಾ,
ಸ್ವತಂತ್ರಧೀರ ಸಿದ್ಧೇಶ್ವರಾ!

೫೫

ಈ ಪುಟ್ಟ ದೋಣಿಗೆ
ಹಾಯಿ ಕಟ್ಟಿ
ಹುಟ್ಟು ಹಿಡಿದು
ಕಾದಿರುವೆನಯ್ಯ ನಿನ್ನ ಕೃಪಾನಿಲಕ್ಕಾಗಿ;
ಸಾವಿರ ಸಾವಿರ ಪ್ರಯಾಣಿಕರನ್ನು,
ಸಾವಿರ ಸಾವಿರ ಟನ್ನು ಸರಕುಗಳನ್ನು,
ಹೊತ್ತ ಹೇರೊಡಲ ಹಡಗಗಳು ಹೊರಟಿವೆ
ಎಡಬದಿಗೆ, ಬಲಬದಿಗೆ;
ಬರುತ್ತಿವೆ ದೂರದೇಶಗಳಿಂದ.
ಈ ಮಿನಿದೋಣಿಯೋ
ಸ್ವಶಕ್ತಿಯಿಂದ ನಡೆವ ಭಾಗ್ಯವಿಲ್ಲದೆ,
ಎಳೆದೊಯ್ವ ಯಂತ್ರಗಳ ಸಹಾಯವಿಲ್ಲದೆ
ಕಾದಿದೆ ನಿನ್ನ ಕೃಪಾನಿಲಕ್ಕಾಗಿ!
ಕೃಪೆದೋರು ಕೃಪಾಕರ,
ಸ್ವತಂತ್ರಧೀರ ಸಿದ್ಧೇಶ್ವರ!

೫೬

ಎಷ್ಟು ಸಾವಿರ ಶಬ್ದಗಳನ್ನು ಕಲಿತೆ!
ಕಲಿತೆ, ಬಳಸಿದೆ, ಬಳಸಿದೆ–
ಹಳಸುವವರೆಗೆ ಬಳಸಿದೆ!
ಆಗ ಕಲಿತೆ, ಈಗ ಮರೆತೆ!
ಒಂದೇ ಶಬ್ದ ಸ್ಮರಣೆಯಲ್ಲೀಗ–
ಅದು 'ನೀನು –
ಸ್ವತಂತ್ರಧೀರ ಸಿದ್ಧೇಶ್ವರಾ!

## ೫೭

ಎನಿತು ಸಲ ಮಂಜು ಮುಸುಕಿದರೇನು,
ನೆನೆದು ಮಯಣವಾಗುವುದೆ ಗಿರಿ?
ಎನಿತು ಸಲ ಮಣ್ಣು ಜರಿದರೇನು
ಮುಚ್ಚಿ ಹೋಗುವುದೆ ದರಿ?
ಎನಿತು ಸಲ ನೆರೆ ಬಂದರೇನು,
ಬೆಚ್ಚಿ ಬೀಳುವುದೆ ತೊರೆ?
ಎಷ್ಟು ಸಲ ಸ್ವತಂತ್ರಧೀರ ಸಿದ್ಧೇಶ್ವರ ನಿರಾಕರಿಸಿದರೇನು,
ನಚ್ಚು ತೊರೆವನೆ ನಿಜಭಕ್ತ?

## ೫೮

ಬಾಳೆಯ ಸುಳಿ ಮೆತ್ತಗೆ ಬಿಚ್ಚಿಕೊಳ್ಳುತ್ತದೆ;
ಕೇದಗೆ ಹೊಡೆ ಮೆಲ್ಲನೆ ಬಿಚ್ಚಿಕೊಳ್ಳುತ್ತದೆ;
ಮಗುವಿನ ಮುಚ್ಚಿದ ಮುಷ್ಟಿಗೆ
ನವುರಾಗಿ ಬಿಚ್ಚಿಕೊಳ್ಳುತ್ತದೆ-
ನನ್ನ ಮನದ ಮೊಗ್ಗೇಕೆ ಬಿಚ್ಚಿಕೊಳ್ಳದಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೫೯

ಯಾವ ಕಡಲಿನ ತಳದಲ್ಲಿ
ಯಾವ ಮುತ್ತಿದೆಯೋ, ನಿನಗೆ ಗೊತ್ತು;
ಯಾವ ಗಿರಿಯ ಗರ್ಭದಲ್ಲಿ
ಯಾವ ವಜ್ರ ಅಡಗಿದೆಯೋ, ನಿನಗೆ ಗೊತ್ತು;
ಯಾವ ಅಗೆಯದ ಗಣಿಯಲ್ಲಿ
ಯಾವ ರನ್ನ ಮಡಗಿದೆಯೋ ನಿನಗೆ ಗೊತ್ತು;
ಎಲ್ಲ ಗೊತ್ತು ನಿನಗೆ, ಎಲ್ಲ ಬಲ್ಲೆ ನೀನು-
ಎನ್ನ ಅಂತರಂಗದ ಆಸೆಯ ಅರಿಯೆಯೇನಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೬೦

ನೀನೇನೋ ನಮ್ಮನ್ನು
ನಿನ್ನ ಪ್ರತಿರೂಪವಾಗಿ ಸೃಷ್ಟಿಸಿದೆ-
ಆದರೆ ನಾವು ನಿನ್ನನ್ನು

ನಮ್ಮ ಪ್ರತಿರೂಪವಾಗಿ ಸೃಜಿಸಿದೆವಯ್ಯ!
ನಮ್ಮ ಮೇಲು ಕೀಳಿನ ಕೀಳು ಕಲ್ಪನೆಗಳನ್ನು
ನಿನ್ನ ತಲೆಗೆ ಕಟ್ಟಿದೆವು;
ನಾವೇ ಹುಟ್ಟು ಹಾಕಿದ
ಅಸಮತೆ ವಿಷಮತೆಗಳನ್ನು
ನಿನ್ನ ಕೊರಳಿಗೆ ಸುತ್ತಿದೆವು;
ನಿನ್ನ ಮಕ್ಕಳ ಮೇಲೆಯೇ
ಗೈದ ಅನ್ಯಾಯ ಅತ್ಯಾಚಾರಗಳಿಗೆ
ನಿನ್ನನ್ನೇ ಸಾಕ್ಷಿಯಾಗಿ ನಿಲ್ಲಿಸಿದೆವು!
ನಮ್ಮ ಅಪರಾಧಗಳಿಗೆ
ಮೂಕ ಸಾಕ್ಷಿಯಾಗಿ ನಿಂತಿರುವ
ನಿನ್ನ ಕಂಡು ಕನಿಕರಿಸುತ್ತಿಹೆನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೬೧

ಧ್ಯಾನಧೇನುವಿನ ಕ್ಷೀರದಿಂದ ಅಭಿಷೇಕ ಮಾಡುವೆ;
ಜ್ಞಾನದ ಶ್ರೀವಿಭೂತಿಯಿಂದ ತ್ರಿಪುಂಡ್ರವನಿಡುವೆ;
ಮೌನಮಂತ್ರ ಜಪಿಸುತ್ತ ಪೂಜೆ ಮಾಡುವೆ;
ನಾನೆಂಬುದನ್ನೇ ನೈವೇದ್ಯ ಮಾಡಿ ನಿವೇದಿಸುವೆ:
ಇನ್ನೇನ ಮಾಡಲಯ್ಯ!?
ಏನ ಮಾಡಿದರೆ ನೀನೊಲಿವೆಯಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

೬೨

ನಿನ್ನ ಪಾಪಹರಶಕ್ತಿಗೆ ಸವಾಲು ನಾನು;
ನಿನ್ನ ಸಮುದ್ಧರಣಶಕ್ತಿಗೆ ಆಹ್ವಾನ ನಾನು;
ನಿನ್ನ ನಿರ್ವ್ಯಾಜ ಕರುಣೆಗೆ ನಿಮಂತ್ರಣ ನಾನು;
ನಿನ್ನ ಭಕ್ತವಾತ್ಸಲ್ಯಕ್ಕೆ ಔತಣ ನಾನು;
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ಕ್ಷಮಾಗುಣಕ್ಕೆ ಕರೆಯೋಲೆ ನಾನು!

೬೩

ಹನಿಯಿದ್ದಲ್ಲಿ ಹಸುರು
ಗದ್ದೆಯಿದ್ದಲ್ಲಿ ಕೆಸರು
ಹೆಪ್ಪಿದ್ದಲ್ಲಿ ಮೊಸರು
ಅಸುವಿದ್ದಲ್ಲಿ ಉಸಿರು
ಸುಸಿಲಿದ್ದಲ್ಲಿ ಬಸಿರು
ಹಸರವಿದ್ದಲ್ಲಿ ಕೊಸರು
ಗುಣವಿದ್ದಲ್ಲಿ ಹೆಸರು
ಬಣ್ಣವಿದ್ದಲ್ಲಿ ಕುಸುರು
ಸ್ವತಂತ್ರಧೀರ ಸಿದ್ಧೇಶ್ವರನಿದ್ದಲ್ಲಿ
ನನ್ನಿಯ ನೇಸರು!

೬೪

ದಿನಗಳೆದಂತೆ ದಹಿಸುತ್ತಿದೆ ನಿನ್ನ ಕೂಡುವಾಸೆ;
ಆದರೆ, ನಿತ್ಯ ನೂರು ನಿರಾಶೆಗಳು, ಸಾವಿರಾರು ಹತಾಶೆ!
ನೋವುಂಡೇ ಬೆಳೆದ ಮನಕೆ ನೋವಿನದೇ ಪಿಪಾಸೆ!
ನೋವಿನದೇ ಹಸೆಯು ಇರಲಿ, ನೋವಿನದೇ ಸೇಸೆ!
ಅಗ್ನಿಯಾಗಿ ಅಗ್ನಿಯೊಡನೆ ಬೆರೆಯೆ ತೊಟ್ಟೆ ಭಾಷೆ-
ಕ್ಲೇಶದಲ್ಲಿಯೇ ಸ್ವತಂತ್ರಧೀರ ಸಿದ್ಧೇಶ್ವರನ ಜೈಸುವ ಭಾಷೆ!

೬೫

ಯಾರಿಗಾಗಿ ಮಿಂದು ಮಡಿಯುಡಲಿ?
ಯಾರಿಗಾಗಿ ಸಿರಿಗಂಧವನ್ನು ಸವರಿಕೊಳ್ಳಲಿ?
ಯಾರಿಗಾಗಿ ಷೋಡಶ ಸಿಂಗಾರ ಮಾಡಿಕೊಳ್ಳಲಿ?
ಯಾರಿಗಾಗಿ ಹೂವಿನ ಹಾಸಿಗೆ ರಚಿಸಲಿ?
ಸ್ವತಂತ್ರಧೀರ ಸಿದ್ಧೇಶ್ವರ ಮುನಿದು ಹೋದಮೇಲೆ
ಯಾರಿಗಾಗಿ ಬದುಕಿರಲಿ, ಗೆಳತಿ?

೬೬

ನಿನ್ನ ಹೆಜ್ಜೆಯ ಸಪ್ಪಳ ಹಂಸೆಯ ತುಪ್ಪಳದ ಸಪ್ಪಳ,
ನನ್ನ ನಿದ್ದೆಯೋ ಕುಂಭಕರ್ಣನ ನಿದ್ದೆ!
ಹೇಗೆ ಎಚ್ಚರಿಯಲಿ ನಲ್ಲ ನಿನ್ನ ಹೆಜ್ಜೆ ಸಪ್ಪಳ ಕೇಳಿ?

ಹೊದ್ದುದ ಸೆಳೆ, ಕೈ ಹಿಡಿದೆಳೆ, ನಿದ್ದೆಯಕಳೆ,
ಕರೆ ಮೈಮೇಲೆಲ್ಲ ಮುದ್ದಿನ ಮಳೆ!
ನಿನ್ನ ನಿಡಿದೋಳುಗಳಲ್ಲಿ ನನ್ನನ್ನು ತಳೆ,
ಆಗು ನನ್ನ ಜೀವ ಜೀವಾಳದಲ್ಲಿ ಪ್ರಣಯ ಕಲೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೭

ಇನ್ನು ನನ್ನ ಕನಸಿನಲ್ಲಿಯೂ ಬರಬೇಡ ನೀನು!
ಉರಿವ ಗಾಯಕ್ಕೆ ಉಪ್ಪೆರಚಬೇಡ;
ಗಾಯದ ಮೇಲೆ ಬರೆ ಎಳೆಯ ಬೇಡ!
ನನ್ನನ್ನು ಬಿಟ್ಟಿರಲು
ನಿನಗೂ ಕಷ್ಟವೆನಿಸಿದರೆ
ನಿಜವಾಗಿ ಬಾ–
ಶರಣಸತಿಗೊಲಿದ ಲಿಂಗಪತಿಯಾಗಿ ಬಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೮

ತಾರೆಗಳಲ್ಲಿ ಕಣ್ಣು ಮಿಟುಕಿಸುವಿ,
ಮಿಂಚುಗಳಲ್ಲಿ ಹುಬ್ಬು ಹಾರಿಸುವಿ,
ಮಂದಾನಿಲನಾಗಿ ಮೈದಡವುವಿ,
ಸಲಿಲದಲೆಗಳಾಗಿ ಮುದ್ದಿಸುವಿ,
ಕಾಮನ ಬಿಲ್ಲಾಗಿ ಆಲಂಗಿಸುವಿ,
ಸ್ವತಂತ್ರಧೀರ ಸಿದ್ಧೇಶ್ವರನಾಗಿ
ರಮಿಸಲೊಲ್ಲೆಯಾ ಒಮ್ಮೆಯೂ?

೬೯

ನಿಮಿಷದ ಬೆನ್ನೇರಿ ನಿಮಿಷ ಬರುತ್ತಿದೆ–
ಯಾವ ನಿಮಿಷ ತರಲಿದೆಯೋ ನಿನ್ನ ಒಲವಿನ ಕರೆಯ!
ತೆರೆಯ ಹೆಗಲನ್ನೇರಿ ತೆರೆ ಮರೆಯಾಗುತ್ತದೆ.
ಯಾವ ತೆರೆ ತೆರೆಯಲಿದೆಯೋ ನನ್ನ ನಿನ್ನ ನಡುವಣ ತೆರೆ!
ಈ ಚಿರ ನಿರೀಕ್ಷೆಯ
ಕಠೋರ ಶಿಕ್ಷೆಯ

ನಿನ್ನ ಕ್ಷಮಾದಾನವೆ ಕೊನೆಗಾಣಿಸಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೮೦

ಮರುಗದಂತೆ ಮೈಯೆಲ್ಲ ಪರಿಮಳ
ನನ್ನ ನಲ್ಲನಿಗೆ;
ಕಮಲದಂತೆ ತನುವೆಲ್ಲ ಗೌರವರ್ಣ
ನನ್ನ ನಲ್ಲನಿಗೆ;
ಮಲ್ಲಿಗೆಯಂತೆ ಮಗಮಗಿದ ಮಂದಹಾಸ
ನನ್ನ ನಲ್ಲನಿಗೆ
ಸುಂದರಕೆ ಸುಂದರ, ಮಧುರಕ್ಕೆ ಮಧುರ
ಶಿವಕ್ಕೆ ಶಿವತರ ಪರಾತ್ಪರ
ಸ್ವತಂತ್ರಧೀರ ಸಿದ್ಧೇಶ್ವರ!

೮೧

ನಿನ್ನ ಏರ್ಪಾಡಿಗೆ
ನೇರ್ಪಡುವುದೆನ್ನ ಹೊಣೆ,
ನೇರ್ಪು ನೀಡುವುದು ನಿನ್ನ ಹೊಣೆಯಯ್ಯ;
ನಿನ್ನ ಇಂಗಿತಕ್ಕೆ ನನ್ನ ಇಂಗಿತವ
ಸಂಗತಗೊಳಿಸುವುದೆನ್ನ ಹೊಣೆ,
ಸಫಲಗೊಳಿಸುವುದು ನಿನ್ನ ಹೊಣೆಯಯ್ಯ;
ನಿನ್ನ ನೌಕೆಯಲ್ಲಿ ತುಂಬ ಜೋಕೆಯಿಂದ
ನನ್ನನಿರಿಸುವುದು ನನ್ನ ಹೊಣೆ,
ನಿನ್ನಲ್ಲಿ ಸೇರಿಸುವುದು ನಿನ್ನ ಹೊಣೆಯಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ!

೮೨

ಪದ ಕಾಣುತ್ತದೆ, ಅರ್ಥಕಾಣುವದೆ?
ಪದಾರ್ಥ ಕಾಣುತ್ತದೆ, ಗುಣಧರ್ಮ ಕಾಣುವುದೆ?
ದೇಹ ಕಾಣುತ್ತದೆ, ಪ್ರಾಣ ಕಾಣುವುದೆ?
ಕೊರಳು ಕಾಣುತ್ತದೆ, ಸ್ವರ ಕಾಣುವುದೆ?
ನಿನ್ನ ಸೃಷ್ಟಿ ಕಾಣುತ್ತದೆ, ನೀ ಕಾಣುವಿಯಾ
ಸ್ವತಂತ್ರಧೀರ ಸಿದ್ಧೇಶ್ವರಾ?

## ೭೩

ನೀನು ವಿಶ್ವತೋಮುಖನಿರುವೆಯಾಗಿ
ನಾನು ನೋಡುವ ಎಲ್ಲ ಮುಖಗಳೂ ನಿನ್ನ ಮುಖಗಳೇ;
ನೀನು ಭಕ್ತದೇಹಿಕ ದೇವನಾಗಿ
ನನಗೆ ಕಾಣುವ ಎಲ್ಲ ದೇಹಗಳೂ ನಿನ್ನ ದೇಹಗಳೇ,
ಜಗದ ಜೀವವೇ ನೀನಾಗಿರುವೆಯಾಗಿ
ಜಗದ ಜೀವಿಗಳೆಲ್ಲ ನಿನ್ನ ಜೀವಂಶಗಳೇ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಸರ್ವಭರಿತ; ಅರಿತರೆ ನಾನೂ ನಿನ್ನಿಂದ ಭರಿತ!

## ೭೪

ಯಾಜ್ಞಿಕರಿಗೆ ಸೋಮರಸ,
ಕಾವ್ಯರಸಿಕರಿಗೆ ನವರಸ,
ಸಂತರಿಗೆ ಶಾಂತರಸ,
ಸ್ವತಂತ್ರಧೀರ ಸಿದ್ಧೇಶ್ವರನಿಗೆ ವಾತ್ಸಲ್ಯರಸ,
ನನಗೆ ಸಮರಸ!

## ೭೫

ಮಗುವಿಗೆ ತಾಯಿಯ ಮನಸ್ಸು,
ತಾಯಿಗೆ ಮಗುವಿನ ಮನಸ್ಸು ಅರ್ಥವಾಗುವಂತೆ
ಇನ್ನಾರಿಗೆ ಆದೀತಯ್ಯ?
ಪ್ರಿಯನಿಗೆ ಪ್ರಿಯಳ ನೇತ್ರಭಾಷೆ,
ಪ್ರಿಯಳಿಗೆ ಪ್ರಿಯನ ನಯನಭಾಷೆ ಅರ್ಥವಾಗುವಂತೆ
ಇನ್ನಾರಿಗೆ ಆದೀತಯ್ಯ?
ಗುರುವಿಗೆ ಶಿಷ್ಯನ ಮನದ ಸಂಶಯ,
ಶಿಷ್ಯನಿಗೆ ಗುರುವಿನ ಮೌನವ್ಯಾಖ್ಯಾನ ಅರ್ಥವಾಗುವಂತೆ
ಇನ್ನಾರಿಗೆ ಆದೀತಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ನಿನ್ನ ಪ್ರಣಯ ಚೇಷ್ಟೆ
ನಿನಗೆ ನನ್ನ ಮನದ ಅಭೀಷ್ಟೆ ಅರ್ಥವಾಗುವಂತೆ
ಇನ್ನಾರಿಗೆ ಆದೀತಯ್ಯ?

೭೬

ಬೇ ಚಿರಾಗ್ ಹಳ್ಳಿಗಳನ್ನು ಹೆಗ್ಗಣಗಳು ತೊರೆಯುತ್ತವೆ;
ಮುಳುಗುವ ಹಡಗನ್ನು ಇಲಿಗಳು ತೊರೆಯುತ್ತವೆ;
ಸುಟ್ಟ ಕಾಡನ್ನು ಕಪಿಗಳು ತೊರೆಯುತ್ತವೆ,
ಸೋತ ಚುನಾವಣಾ ಕ್ಷೇತ್ರವನ್ನು ರಾಜಕಾರಣಿ ತೊರೆಯುತ್ತಾನೆ;
ಆದಾಯ ಕರಗಿದ ಗುಡಿಗಳನ್ನು ಅರ್ಚಕರು ತೊರೆಯುತ್ತಾರೆ;
ದುಡಿದು ಹಾಕದವರನ್ನು ಮಡದಿ ಮಕ್ಕಳು ತೊರೆಯುತ್ತಾರೆ;
ನಿವೃತ್ತ ಅಧಿಕಾರಿಗಳನ್ನು ಉಪಕೃತರು ತೊರೆಯುತ್ತಾರೆ;
ಕಪಟ ಭಕ್ತಿಯ ಕದೀಮರನ್ನು
ಸ್ವತಂತ್ರಧೀರ ಸಿದ್ಧೇಶ್ವರ ತೊರೆಯುತ್ತಾನೆ!

೭೭

ನೀ ಸೆರಗು ಹಿಡಿವ ಮುನ್ನವೆ ನಿರಿ ಜಾರಿದೆ!
ನೀ ಮೇಲುದ ಸೆಳೆವ ಮುನ್ನವೆ ಕಂಚುಕದ ಕಟ್ಟೊಡೆದಿದೆ!
ನೀ ಮುದ್ದಿಸುವ ಮುನ್ನವೆ ಭುಲ್ಲವಿಸಿವೆ ಅಂಗಾಂಗಗಳೆಲ್ಲ!
ನೀ ಕೂಡುವ ಮುನ್ನವೆ ಎಚ್ಚರದಪ್ಪಿದರೆ
ಕೂಡಿಕೆಯ ಸುಖವನೆಂತರಿವೆ–
ಸ್ವತಂತ್ರಧೀರ ಸಿದ್ಧೇಶ್ವರ?

೭೮

ಹಸಿದಾಗ ಹಣ್ಣು, ಖುಷಿಗಾಗಿ ಹೂವು–
ಎರಡೂ ನಿಸರ್ಗ–ಸ್ವರ್ಗದ ಕೊಡುಗೆಗಳೇ;
ಅನ್ನ ಹಸಿವೆಗೆ, ಮಲಗಲು ಹಾಸಿಗೆ–
ಎರಡೂ ಮನೆ–ಬಾಳ್ವೆಯ ಕೊಡುಗೆಗಳೇ;
ನೇಹ ಬಳಗದವರಲ್ಲಿ; ಸ್ನೇಹ ಗೆಳೆಯರಲ್ಲಿರ–
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ನನ್ನಲ್ಲಿ, ನಾನು ನಿನ್ನಲ್ಲಿ–
ಎರಡೂ ನಿನ್ನ ಕೊಡುಗೆಗಳೇ!

೭೯

ನನಸಿನ ಬಾಗಿಲಿಗೆ ಕಟ್ಟಿದ್ದ
ಕನಸಿನ ತೋರಣ ಒಣಗಿ ಹೋಗಿದೆ!

ಹೊಸ ತೋರಣ ಕಟ್ಟಬೇಕೆಂದರೆ
ಕನಸುಗಳೇ ಇಲ್ಲವಾಗಿವೆ!
ಕನಸುಗಳು ಇಲ್ಲವಾದರೂ
ಕನಸುಗಳು ಕೊಟ್ಟ ಸವಿ
ಸಿಹಿಗೊಳಿಸುತ್ತಿದ್ದ ಸ್ಮೃತಿಗಳನ್ನು ಆಗಾಗ!
ನನಸಿನ ಕೆನ್ನೆಗಳ ಮೇಲೆ
ಕನಸುಗಳ ಅರುಣರಾಗ ಆಗಾಗ!
ನೀನು ಬರಿ ಕನಸಾಗದಿರಯ್ಯ;
ನನಸಾಗು, ನನಸಾಗು,
ನನ್ನ ಮನಸೇ ಆಗು–
ಸ್ವತಂತ್ರಧೀರ ಸಿದ್ಧೇಶ್ವರಾ!

೮೦

ಮಾವು ಮಲ್ಲಿಗೆಗಳನ್ನು ಕಂಡಾಗಲೆಲ್ಲ
ಪಂಪನನ್ನು ನೆನೆಯುತ್ತೇನೆ;
ಸಂಪಿಗೆ ಸೇವಂತಿಗೆಗಳನ್ನು ಕಂಡಾಗಲೆಲ್ಲ
ಹರಿಹರನನ್ನು ನೆನೆಯುತ್ತೇನೆ;
ಗುಲಾಬಿಗಳನ್ನು ಕಂಡಾಗಲೆಲ್ಲ
ಉಮರ್ ಹಫೀಜರನ್ನು ನೆನೆಯುತ್ತೇನೆ;
ಕಲಕೀರವಾಣಿಯರನ್ನು ಕಂಡಾಗಲೆಲ್ಲ
ಲಕ್ಷ್ಮೀಶನನ್ನು ನೆನೆಯುತ್ತೇನೆ;
ಮಲೆನಾಡನ್ನು ಕಂಡಾಗಲೆಲ್ಲ
ಕುವೆಂಪು ಅವರನ್ನು ನೆನೆಯುತ್ತೇನೆ;
ಶ್ರಾವಣ ಬಂದಾಗಲೆಲ್ಲ
ಬೇಂದ್ರೆಯವರನ್ನು ನೆನೆಯುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನನ್ನೇ, ಯಾರನ್ನೇ ನೆನೆದರೂ ನಿನ್ನನ್ನೇ ನೆನೆಯುತ್ತೇನೆ.

೮೧

ಅಣು ಸಣ್ಣದು, ಅಣುಶಕ್ತಿ ಸಣ್ಣದೇನಯ್ಯ?
ಸೋಂಕುರೋಗ ಕ್ರಿಮಿ ಸಣ್ಣದು, ಅದರ ಸಾಂಕ್ರಮಿಕತೆ ಸಣ್ಣದೇನಯ್ಯ?
ಬಾಹ್ಯಕಾಶ ಯಾತ್ರಿಯ ಬುತ್ತಿ ಸಣ್ಣದು,
ಅದರ ಆಹಾರ ಸತ್ವ ಸಣ್ಣದೇನಯ್ಯ?

ವಿಚಾರಿಸುವ ಮಿದುಳು ಸಣ್ಣದು, ಆದರೆ ವಿಚಾರಶಕ್ತಿ
ಸಣ್ಣದೇನಯ್ಯ?
ಮನುಜನ ದೇಹಶಕ್ತಿ ಸಣ್ಣದು,
ಅವನ ನಿಜಭಕ್ತಿ ಸಣ್ಣದೇನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ?

## ೮೨

ಕಡೆದ ಕಡಲಲ್ಲಿ ಮಾತ್ರ
ಹುಟ್ಟಲಿಲ್ಲ ಹಾಲಾಹಲ–
ನನ್ನ ಒಡಲಲ್ಲಿಯೂ ಇದೆ!
ಕುಡಿವ ಧೈರ್ಯವಿದ್ದರೆ ಕುಡಿದು ತೋರಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೮೩

ನಾನು ನಡೆಯದ ನಾಣ್ಯವಾದರೆ
ನಿನ್ನ ಕಮ್ಮಟಕ್ಕೇ ಕಲಂಕವಯ್ಯ!
ಇದನ್ನು ಇದ್ದಂತಾದರೂ ಸ್ವೀಕರಿಸು
ಇಲ್ಲವೆ ಮರಳಿ ಕರಗಿಸಿ ಸೋಸಿ ಟಂಕಿಸು–
ಸ್ವತಂತ್ರಧೀರ ಸಿದ್ಧೇಶ್ವರಾ!

## ೮೪

ತೆಂಗಿನಲ್ಲಿ ತೆಪ್ಪಗೆ ಕೊಬ್ಬರಿ ಮೂಡಿ ಬೆಳೆಯುತ್ತದೆ;
ಹಲಸಿನಲ್ಲಿ ಸದ್ದಿಲ್ಲದೆ ತೊಳೆಗಳು ತುಂಬಿಕೊಳ್ಳುತ್ತವೆ;
ಹೂವಿನಲ್ಲಿ ಗದ್ದಲವಿಲ್ಲದೆ ಮಧುಬಿಂದುಗಳು ಮೈದೋರುತ್ತವೆ;
ನನ್ನ ಕಣಕಣದಲ್ಲಿ ತುಂಬಿರುವ
ನೀನೇಕೆ ಬೆಳಕಾಗಿ ತುಳುಕದಿಹೆಯಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ?

## ೮೫

ಜ್ಞಾನವಾರಾಶಿಯಲ್ಲಿ ಈಸುವ
ಮೀನನ್ನಾದರೂ ಮಾಡಯ್ಯ ನನ್ನನ್ನು;
ಸ್ವಾತಂತ್ರ್ಯಗಗನದಲ್ಲಿ ಹಾರುವ

ಹಕ್ಕಿಯನ್ನಾದರೂ ಮಾಡಯ್ಯ ನನ್ನನ್ನು;
ಶಿವದ ಹಿಮಗಿರಿಯನ್ನೇರುವ
ಪರ್ವತಾರೋಹಿಯನ್ನಾದರೂ ಮಾಡಯ್ಯ ನನ್ನನ್ನು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನವರ ಚರಣಾರವಿಂದಗಳ ಮಕರಂದ ಸುರಿವ
ಮರಿದುಂಬಿಯನ್ನಾದರೂ ಮಾಡಯ್ಯ ನನ್ನನ್ನು!

### ೮೬

ಹಿಡಿದ ದಾರಿ ಸರಿಯಿದ್ದರೆ
ಗುರಿ ಮುಟ್ಟಬಹುದು
ಒಮ್ಮಿಲ್ಲೊಮ್ಮೆ;
ರೋಗನಿದಾನ ಸರಿಯಿದ್ದರೆ
ರೋಗ ವಾಸಿಯಾಗಬಹುದು
ಒಂದಿಲ್ಲೊಂದು ಔಷಧದಿಂದ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನಿಷ್ಠೆ ನಿಜವಿದ್ದರೆ
ನೀನು ಒಲಿಯಬಹುದು
ಒಂದಿಲ್ಲೊಂದು ದಿನ!

### ೮೭

ಈ ಬೀಸು ಕಲ್ಲಿಗೆ ಬಿದ್ದ
ಮುಕ್ಕುಗಳ ಲೆಕ್ಕವಿಲ್ಲ!
ನಾನೊಂದು ಮುಕ್ಕು.
ಹರಳುಗೊಂಡು ಹೊಕ್ಕು
ಹಿಟ್ಟು ಕೆಡಿಸದಿದ್ದರೆ ಸಾಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

### ೮೮

ಬಸವನ ಹೆಸರು ನನ್ನ ಉಸಿರು;
ಅಲ್ಲಮನ ಹೆಸರು ನನ್ನ ಬಸಿರು,
ಅಕ್ಕನ ಹೆಸರು ನನ್ನ ನೇತ್ರ,
ಸಿದ್ಧರಾಮನ ಹೆಸರು ನನ್ನ ಶ್ರೋತ್ರ,
ಕ್ರಿಸ್ತನ ಹೆಸರು ನನ್ನ ನಾಸಿಕ,

ಬುದ್ಧನ ಹೆಸರು ನನ್ನ ಮಸ್ತಕ,
ಕೃಷ್ಣನ ಹೆಸರು ನನ್ನ ಬಾಯಿ,
ಬಾಪುವಿನ ಹೆಸರು ನನ್ನ ರಸನೆ
ಸಿದ್ಧಲಿಂಗನ ಹೆಸರು ನನ್ನ ಅಸು,
ನಿನ್ನ ಹೆಸರು ನನ್ನ ಗತಿ ಮತಿ ಚೈತನ್ಯವಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೮೯

ಒಂದು ಕ್ಷಣ ತಪ್ಪು ಮಾಡುತ್ತದೆ
ಶತಮಾನಗಳು ಶಿಕ್ಷೆ ಅನುಭವಿಸುತ್ತವೆ!
ಒಂದು ಕ್ಷಣ ಒಪ್ಪು ನುಡಿಯುತ್ತದೆ
ಶತಮಾನಗಳು ಅರ್ಥವಿಸುತ್ತ ಹೋಗುತ್ತವೆ;
ಹಿಂದಣ ಯುಗವ ಮುಂದಣ ಯುಗವ
ಸಂಧಿಸುವುದು ಒಂದು ಕ್ಷಣ!
ಉಪೇಕ್ಷಣೀಯವಲ್ಲ ಕ್ಷಣ,
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಿಸು ಈ ಕ್ಷಣ!

೯೦

ಒಂದು ಹೊಸ ವಿಚಾರ ದೊರೆತ ದಿನವೇ
ದೀಪಾವಳಿಯಯ್ಯ, ನನಗೆ;
ಒಂದು ಕುವಿಚಾರವನ್ನು ಗೆದ್ದ ದಿನವೇ
ವಿಜಯದಶಮಿಯಯ್ಯ ನನಗೆ;
ಒಂದು ಅರಿಯದ ವಿಷಯ ಅರ್ಥವಾದ ದಿನವೇ
ಗಣೇಶ ಚತುರ್ಥಿಯಯ್ಯ ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಭಕ್ತಿಯ ಹೊಸ ನೆಲೆ
ನಿನ್ನ ನಿಷ್ಠೆಯ ಹೊಸಸೆಲೆ
ದೊರೆತ ದಿನವೇ ಯುಗಾದಿಯಯ್ಯ, ನನಗೆ!

೯೧

ಪ್ರೀತಿಯುಳ್ಳ ಒಂದೇ ಒಂದು ಕ್ಷಣ
ಪ್ರೀತಿಯಿಲ್ಲದ ಒಂದು ಆಯುರ್ಮಾನಕ್ಕೆ ಸಮಾನ;
ಪ್ರೀತಿಸಿ ಪಡೆದ ಬಡತನ

ಪ್ರೀತಿಸದೆ ದೊರೆತ ದೊರೆತನಕ್ಕೆ ದೊರೆ;
ಪ್ರೀತಿ ತಂದ ಸೋಲು
ಅಪ್ರೀತಿ ತಂದ ಗೆಲವಿಗಿಂತ ಘನ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪ್ರೀತಿಸುತ್ತ,
ನಿನ್ನವರ ಪ್ರೀತಿಸುತ್ತ
ಪ್ರೀತಿಯೇ ನಾನಾಗುವಂತೆ ಮಾಡಯ್ಯಾ!

೯೨

ನಗೆಯ ನೂರೆಲೆಯಲ್ಲಿ ದುಂಬಿಯಾಗುವಾಸೆ;
ಕಾಳಕತ್ತಲೆಯಲ್ಲಿ ದೊಂದಿಯಾಗುವಾಸೆ;
ತಪ್ತ ಹೃದಯಗಳಲ್ಲಿ ತಂಪಾಗುವಾಸೆ;
ಕೊಳೆಗೇರಿಗಳಲ್ಲಿ ಕಂಪಾಗುವಾಸೆ;
ಮುರುಕು ಗುಡಿಸಲು ನುಂಗಿ ಮನೆಯಾಗುವಾಸೆ;
ಒಣ ದಂಟನೇ ಚಿಗಿಸಿ ತೆನೆಯಾಗುವಾಸೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನೇ ನೆನೆನೆನೆದು ನೀನಾಗುವಾಸೆ!

೯೩

ಬಣ್ಣದ ಹೂವಿನ ಮೇಲೆ
ಬಣ್ಣದ ಚಿಟ್ಟೆ ಕುಳಿತಾಗ
ಹೂವಾವುದೋ, ಚಿಟ್ಟೆ ಯಾವುದೋ!
ಅಸುಗೆಯ ಎಲೆಗಳಲ್ಲಿ
ಹಸುರುಗಿಳಿ ಕುಳಿತಾಗ
ಎಲೆ ಯಾವುದೋ, ಗಿಳಿ ಯಾವುದೋ!
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮನದ ವನಜದಲ್ಲಿ
ನೀನು ಕುಳಿತಾಗ
ನೀನಾರೋ, ನಾನಾರೋ!

೯೪

ಆಟಿಕೆಗಳೇ ಐಶ್ವರ್ಯ ಮಗುವಿಗೆ;
ಮಾತೃವಾತ್ಸಲ್ಯವೇ ಐಶ್ವರ್ಯ ಬಾಲಕ-ಬಾಲಕಿಯರಿಗೆ;

ಪ್ರಣಯವೇ ಪರಮೈಶ್ವರ್ಯ ಯುವಕ-ಯುವತಿಯರಿಗೆ,
ಬಳಗವೇ ಐಶ್ವರ್ಯ ಇಳಿವಯದವರಿಗೆ;
ಮರುಕವೇ ಐಶ್ವರ್ಯ ಮುದುಕರಿಗೆ;
ನಿಷ್ಕಾಮ ಭಕ್ತಿಯೇ ಐಶ್ವರ್ಯ
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತರಿಗೆ!

೯೫

ನಿನ್ನ ಮೇಲೆ ಭಾರ ಹಾಕಿ ಬದುಕೆಂದು
ಹೇಳುತ್ತಿದ್ದಾರೆ ಗುರುಹಿರಿಯರು;
ನಾನಿದನೊಪ್ಪೆನಯ್ಯ!
ನಿನ್ನ ಮೇಲೆ ನಾನು ಭಾರ ಹಾಕುವುದೂ ಬೇಡ,
ನನ್ನ ಮೇಲೆ ನೀನು ಭಾರ ಹಾಕುವುದೂ ಬೇಡ,
ಒಬ್ಬರೊಬ್ಬರಿಗೆ ಭಾರವಲ್ಲ, ಹಾರವಾಗೋಣ-
ಸ್ವತಂತ್ರಧೀರ ಸಿದ್ಧೇಶ್ವರಾ!

೯೬

ಹಾವಿಗೆ ಪುಂಗಿಯ ಸ್ವರ ಮೆಚ್ಚು,
ಹೂವಿಗೆ ದುಂಬಿಯ ಸ್ವರ ಮೆಚ್ಚು,
ಮಗುವಿಗೆ ಲಾಲಿಯ ಸ್ವರ ಮೆಚ್ಚು
ಪ್ರೇಮಿಗೆ ಪ್ರೇಯಸಿಯ ಸ್ವರ ಮೆಚ್ಚು,
ಬಾಲರಿಗೆ ಶಾಲೆ ಬಿಡುವ ಘಂಟೆಯ ಸ್ವರ ಮೆಚ್ಚು,
ಸ್ವತಂತ್ರಧೀರ ಸಿದ್ಧೇಶ್ವರನಿಗೆ
ನಿಜಭಕ್ತರ ಮೌನಗಾನದ ನೀರವ ಸ್ವರ ಮೆಚ್ಚು!

೯೭

ಅನುಭವದ ನಸುಕು ನಿಜದ ಬಾಲರವಿಯ ಬಸಿರೆ,
ಭಾವದ ಹೂವು ರಸದ ಫಲದ ಬಸಿರೆ,
ಬಾಳಿನ ಹಗಲು ಸಾವಿನ ಇರುಳಿನ ಬಸಿರೆ,
ಭವದ ಭವಣೆ ಶಿವದ ಶಿಶುವಿನ ಬಸಿರೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನುಡಿಯಾಗಲಿ ನಿನ್ನ ನನ್ನಿಯ ಬಸಿರೆ!

೯೮

ನೀರಿನ ನೀರೆಯ ನೊರೆ-ನಗೆಯ ಸೊಬಗು,
ಮುಳ್ಳ ಮಾನಿನಿಯ ಕೇದಗೆ-ನಗೆಯ ಸೊಬಗು,
ಇಬ್ಬನಿಯ ಅಪ್ಸರೆಯ ಕಿರಣ-ನಗೆಯ ಸೊಬಗು,
ಮೇಘ ಮೋಹಿನಿಯ ಮಿಂಚು-ನೆಗೆಯ ಸೊಬಗು,
ಸ್ವತಂತ್ರಧೀರ ಸಿದ್ಧೇಶ್ವರನ
ಚರಣಾರುಣಾಂಬುಜದ ಸೊಬಗು!

೯೯

ಕಲಿಯದೆ ನಿನ್ನ ನೆಲೆಯ ಕಂಡವರುಂಟು,
ಕಲಿತೂ ಕೂಚಂಭಟ್ಟರಾದವರೂ ಉಂಟು-
ಸ್ವತಂತ್ರಧೀರ ಸಿದ್ಧೇಶ್ವರಾ!

೧೦೦

ಗಂಗಾಜಲವಾದೊಡೇನು-
ಹಿಂಗಿಸುವುದು ತೃಷೆಯ ಒಂದೇ ಸಲ;
ರಾಜಾನ್ನವಾದೊಡೇನು-
ಹಿಂಗಿಸುವುದು ಹಸಿವ ಒಂದೇ ಸಲ;
ನನ್ನ ಯುಗಯುಗದ
ಹಸಿವು ತೃಷೆಗಳ ಹಿಂಗಿಸಲು
ನಿನ್ನ ನಾಮಾಮೃತವಿದೆ-
ನನ್ನ ಚಿತ್ತವೇ ಅತ್ತ ಹೊರಳದಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ!

೧೦೧

ನಾವೆ ರೇವು ಮುಟ್ಟಿದ ಮೇಲೆ
ನಾವಿಕನ ತಪ್ಪನೆಣಿಸಲೇಕೆ?
ಕುದುರೆ ಜಿದ್ದು ಗೆದ್ದ ಮೇಲೆ
ಕುದುರೆಯ ಕುಂದ ಹುಡುಕಲೇಕೆ?
ಗಿನ್ನಿಸ್ ಪುಸ್ತಕದಲ್ಲಿ ಪ್ರವೇಶ ಪಡೆದ ಮೇಲೆ
ಮುನ್ನಿನ ಸೋಲುಗಳ ಸ್ಮರಿಸಲೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ.

ನಿನ್ನ ಹೇರ ನಿನಗೊಪ್ಪಿಸಿದ ಮೇಲೆ
ನಿನ್ನ ಕೃಪೆಯ ಸುಂಕ ಕೇಳಲೇಕೆ?

೧೦೨

ಅನುಮಾನಿಸುತ್ತಲೇ ಬರುತ್ತಿರುವ ಇವರು ಯಾರು?
ಬುದ್ಧಿಯ ಗಣಿಯಲ್ಲಿ ಅನುಮಾನವೇ ಸಿಕ್ಕಿತೆ ಇವರಿಗೆ?
ನಿಶ್ಚಿತತೆಯ ಅಗೆದಾಗ ಅನಿಶ್ಚಿತತೆಯೇ ದಕ್ಕಿತೆ ಇವರಿಗೆ?
ಪಾಪ, ಹೃದಯವನ್ನು ಕಡೆಗಣಿಸಿ
ಬುದ್ಧಿ ಮಾತ್ರಕ್ಕೆ ಜೋತು ಬಿದ್ದಿರುವವರ ಗತಿ
ದೇವರಿಗೇ ಪ್ರೀತಿ!
ಇವರಿಗೆ ದೊರೆವುದು ನೀತಿ, ನೇತಿ–
ಸ್ವತಂತ್ರಧೀರ ಸಿದ್ಧೇಶ್ವರ ಬಯಸುವುದು ಪ್ರೀತಿ!

೧೦೩

ಕರ್ತವ್ಯ ಬೇಡಾದವರಿಗೆ
ಹಕ್ಕು ಕೇಳುವ ಹಕ್ಕು ಇದೆಯೆ?
ಅನ್ಯಾಯಗಳ ತವರಾದವರಿಗೆ
ನ್ಯಾಯ ಬೇಡುವ ಹಕ್ಕು ಇದೆಯೆ?
ತಿಲಮಾತ್ರವೂ ತ್ಯಾಗ ಮಾಡದವನಿಗೆ
ಭೋಗ ಬೇಡುವ ಅಧಿಕಾರವಿದೆಯೆ?
ರಾಷ್ಟ್ರಪತನಕ್ಕೆ ಕಾರಣರಾದವರಿಗೆ
ಮತ ಬೇಡುವ ಅಧಿಕಾರವಿದೆಯೆ?
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ಮಕ್ಕಳ ಕರುಳು ಕೊಯ್ಯುವವರಿಗೆ
ನಿನ್ನ ಪೂಜಿಸುವ ಅಧಿಕಾರವಿದೆಯೆ?

೧೦೪

ಇನ್ನೊಬ್ಬರ ಧನವ ದಾನಮಾಡಿ
ಮಾನಪತ್ರ ಪಡೆದವರುಂಟು;
ಇನ್ನೊಬ್ಬರ ವಸ್ತುವನ್ನು ಕೃತಿಮಾಡಿ
ಕೀರ್ತಿಪಡೆದವರುಂಟು;
ಇನ್ನೊಬ್ಬರ ಶೋಧ ತಮ್ಮದೆಂದು ವಾದಿಸಿ

ಪುರಸ್ಕಾರ ಪಡೆದವರುಂಟು;
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ನಿನ್ನ ಬಂಟ ಇನ್ನೊಬ್ಬರ ಬೆಳಕಿನಲ್ಲಿ
ಬದುಕದಂತೆ ಮಾಡು, ತಂದೆ!

೧೦೫

ರೂಪದಿಂದ ಅರೂಪದತ್ತ ಪಯಣ,
ಸೀಮದಿಂದ ನಿಸ್ಸೀಮದತ್ತ ಪಯಣ,
ಶಬ್ದದಿಂದ ನಿಶ್ಶಬ್ದದತ್ತ ಪಯಣ
ಜ್ಞಾತದಿಂದ ಅಜ್ಞಾತದತ್ತ ಪಯಣ,
ಸಿದ್ಧಯ್ಯ ಪುರಾಣಿಕನಿಂದ
ಸ್ವತಂತ್ರಧೀರ ಸಿದ್ಧೇಶ್ವರನತ್ತ ಪಯಣ!

೧೦೬

ನನ್ನ ಮರೆದೆ, ನಿನ್ನ ಮರೆದೆ,
ಎಲ್ಲವನ್ನೂ ಮರೆದೆ,
ಎಲ್ಲದರ ಮೂಲದಲ್ಲಿ ಬೆರೆದೆ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೦೭

ಮನೆಯ ಮುಂದೆ ಮಲ್ಲಿಗೆಯ ಬಳ್ಳಿಯೇನೋ ಹಬ್ಬಿತು,
ಆದರೆ ಮನೆಯ ಒಳಗೆ ಕರುಳಿನ ಬಳ್ಳಿ ಹಬ್ಬಲಿಲ್ಲವಯ್ಯ;
ಅಲ್ಲಿ ವನದ ಮಾಮರವೇನೋ ಪಲ್ಲವಿಸಿತು,
ಇಲ್ಲಿ ಮನದ ಮಾಮರ ಪಲ್ಲವಿಸಲಿಲ್ಲವಯ್ಯ;
ಅಲ್ಲಿ ಗಿರಿಯ ನವಿಲೇನೋ ನರ್ತಿಸಿತು,
ಇಲ್ಲಿ ಅರಿವಿನ ನವಿಲು ನರ್ತಿಸಲಿಲ್ಲವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ
ನಿನ್ನ ಜಗದ ಸಿರಿ ನನ್ನ ಬಗೆಯ ಐಸಿರಿ ಆಗದೇನಯ್ಯ?

೧೦೮

ತಾಯಿ ಮಗುವಿನ ಮೋರೆ ತೊಳೆಯುತ್ತಾಳೆ;
ಇಬ್ಬನಿ ಹುಲ್ಲಿನ ಮೋರೆ ತೊಳೆಯುತ್ತದೆ;

ಸರಿ ಗಿರಿಯ ಮೋರೆ ತೊಳೆಯುತ್ತದೆ;
ಗಾಳಿ ಬಯಲ ಮೋರೆ ತೊಳೆಯುತ್ತದೆ;
ನನ್ನ ಮನದ ಮೋರೆ ನೀನೆ ತೊಳೆಯಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೧೯

ಅಧರದಲ್ಲಿ ಸರ್ಪ, ಮನದಲ್ಲಿ ಸರ್ಪ,
ಬಾಯಲ್ಲಿ ಸರ್ಪ-
ಮೂರು ಸರ್ಪಗಳು ಒಂದೇ ಹೇಳಿಗೆಯಲ್ಲಿ!
ಹಲವು ಜಿಗಣೆಗಳು ಹಲವು ಚೇಳುಗಳಲ್ಲಿ!
ನಿನ್ನ ನಾಮವೇ ಗರುಡ
ಈ ಎಲ್ಲ ವಿಷಜಂತುಗಳಿಗೆ,
ನಿನ್ನ ನೆನಹೇ ಗಾರುಡ
ಈ ಎಲ್ಲ ವಿಷಗಳಿಗೆ-
ಸ್ವತಂತ್ರಧೀರ ಸಿದ್ಧೇಶ್ವರ!

೧೧೦

ಟಿಸಿಲೊಡೆಯದಿದ್ದರೆ ಗಿಡವೆಂಥದಯ್ಯ?
ವಂಶ ಬೆಳೆಯದಿದ್ದರೆ ಮನೆ ಎಂಥದಯ್ಯ?
ಭಾವನೆಗಳು ಪಳಗದಿರೆ ಜೀವನವೆಂಥದಯ್ಯ?
ಸಹೃದಯರು ಹೆಚ್ಚದಿರೆ ಕಾವ್ಯವೆಂಥದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚದಿರೆ ಜಪ ತಪಗಳೆಂಥವಯ್ಯ?

೧೧೧

ಮತಿಯ ಬೆಳಗುವುದು, ಮನವ ಬೆಳಗುವುದು,
ಎದೆಯ ಬೆಳೆಗುವುದು ಎಲ್ಲಿದ್ದರೂ ಗ್ರಾಹ್ಯ;
ಇವುಗಳ ಕಾವಳಿಸುವುದು ಎಲ್ಲಿದ್ದರೂ ಅಗ್ರಾಹ್ಯ!
ಬೊಟ್ಟು-ಭೂತಿ-ಗಡ್ಡ-ಶಿಲುಬೆಗಳನ್ನು ನೋಡದೆ
ಅವರ ಬದುಕನ್ನು ಬೆಳಗುವುದೇನಿದ್ದರೂ
ಅದ ಗ್ರಹಿಸುವ ಗುಣವ ಅನುಗ್ರಹಿಸು-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೧೨

ನೀನು ಅವ್ಯಕ್ತನಾದರೂ
ನಿನ್ನ ಸನ್ನೆಗಳು ಸುವ್ಯಕ್ತ;
ನೀನು ನಿಸ್ವನನಾದರೂ
ನಿನ್ನ ಸೃಷ್ಟಿಯೆಲ್ಲ ಸಸ್ವನ;
ನೀನು ನಿಶ್ಚಲನಾದರೂ
ನಿನ್ನ ಸೃಷ್ಟಿಯೆಲ್ಲ ಚಂಚಲ;
ನೀನು ಅರೂಪನಾದರೂ
ನಿನ್ನ ಸೃಷ್ಟಿಯೆಲ್ಲ ರೂಪಮಯ;
ಬಲು ವಿಚಿತ್ರ ನಿನ್ನ ಇರವು,
ಬಹು ಕಠಿನ ನಿನ್ನ ಅರಿವು-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೧೩

ಒಂದು ಶ್ರೇಷ್ಠತಮ ಚಿತ್ರ ಧರಿಸಿದರೆ
ಆ ಕಾಗದದ ಬೆಲೆ ಕೋಟಿ ರೂಪಾಯಿ;
ಒಂದು ಶ್ರೇಷ್ಠತಮ ಶಿಲ್ಪವಾದರೆ
ಆ ಕಲ್ಲಿನ ಬೆಲೆ ಕೋಟಿ ರೂಪಾಯಿ;
ನಿನ್ನ ಕುರುಹು ಧರಿಸಿ
ನಿನ್ನ ಅರುಹು ಪಡೆಯದಿದ್ದರೆ
ಆ ಕಾಗದ ಕಲ್ಲುಗಳಿಗಿಂತಲೂ ಕಡೆ ಕಾಣಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೧೪

ಅರಿಯದವನ ಕಣ್ಣಿಗೆ ರತ್ನ ಬರಿ ಕಲ್ಲು,
ದವನ ಬರಿ ಹುಲ್ಲು;
ಅರಿಯದವನ ಕಿವಿಗೆ ವಚನ ಬರಿ ಸೊಲ್ಲು,
ಕೀರ್ತನ ಬರಿ ಗುಲ್ಲು;
ಅರಿಯದವನ ಮೂಗಿಗೆ ಕತ್ತುರಿ ಕರಿಯಣ್ಣು,
ಕೇಶರ ಕೆಮ್ಮಣ್ಣು;
ಸ್ವತಂತ್ರಧೀರ ಸಿದ್ಧೇಶ್ವರಾ,
ಅರಿಯದವರಿಗೆ ಲಿಂಗ ಕಲ್ಲು,

ಪ್ರಸಾದ ಕೂಳು, ಪಾದೋದಕ ನೀರು,
ಕಾಯಕ ಕಸಬು!

## ೧೧೫

ನನ್ನಿಂದ 'ನಾನು' ಎನ್ನಿಸುವವ ನೀನು,
ಹೀಗಿದ್ದೂ 'ನೀನಿಲ್ಲ' ಎನ್ನುವವ ನಾನು!
ಎಲ್ಲ 'ನಾನು'ಗಳ ಒಳಗಿದ್ದು ನುಡಿಸುವನೆ
ಇಲ್ಲವಾಗಿಸು 'ನಾನ'ನ್ನು;
ಉಲಿಸು ಕೇವಲ 'ನೀನ'ನ್ನು–ನನ್ನಲ್ಲಿ,
ಸ್ವತಂತ್ರಧೀರ ಸಿದ್ಧೇಶ್ವರಾ;

## ೧೧೬

ನನ್ನಿಚ್ಛೆಯಂತೆ ಬದುಕಲು
ನನ್ನ ಬಾಳೇನು ನನ್ನ ಆಳೆ?
ಅತ್ತ ಹೋಗಲೆಳಸಿದರೆ ಇತ್ತ ಎಳೆವುದು,
ಇತ್ತ ಹೋಗಲೆಳಸಿದರೆ ಅತ್ತ ಎಳೆವುದು,
ಹತ್ತು ಕೇಳಿದರೆ ಒಂದು ಕೊಡುವುದು,
ಅದೂ ಅಕಾಲದ ಕೊಡುಗೆ,
ಸಕಾಲದ ದೇಣಿಗೆಯಲ್ಲ!
ಬಾಳಿನಿಂದ ಬಹಳ ಬಹಳ ಬಯಸದೆ
ನಿನ್ನೊಲಿಸಲು ಸಿಕ್ಕ ಸುಯೋಗವೆಂಬ
ಭಾವನೆಯೊಡನೆ ಬದುಕಿಸಾ–
        ಸ್ವತಂತ್ರಧೀರ ಸಿದ್ಧೇಶ್ವರಾ!

## ೧೧೭

ಮೊದಲು ಸೆಳೆಯುವುದು ಮೈಯ ಚೆಲುವು,
ಕೊನೆಗೆ ಉಳಿಯುವುದು ಮನದ ಚೆಲುವು;
ಮೊದಲು ಎಳೆಯುವುದು ಎತ್ತೆತ್ತಲೋ ಜಗವು,
ಕೊನೆಗೆ ದೊರೆಯುವುದು ಮನೆಯಲ್ಲಿಯೇ ಸೊಗವು;
ಮೊದಲು ಜಗ್ಗುವುವು ಗುಡಿ ಗುಂಡಾರ ಮಠಗಳು,
ಸ್ವತಂತ್ರಧೀರ ಸಿದ್ಧೇಶ್ವರನ ತಮ್ಮೊಳಗೇ ಕಂಡರೆ
        ಮಠಗಳಾಗುವುವು ಮಾನವರ ಘಟಗಳು.

## ೧೧೮

ನಿನ್ನನ್ನೇ ನೆನೆಯುತ್ತಿದೆ ಮನ,
ಕಂಬನಿಯಿಂದ ನೆನೆಯುತ್ತಿದೆ ತನು,
ತಳ್ಳಂಕದಿಂದ ತೊನೆಯುತ್ತಿದೆ ಪ್ರಾಣ,
ಗರಗಸವಾಗುತ್ತಿದೆ ನಿನ್ನ ಧ್ಯಾನ!
ಬರದಿದ್ದರೂ
ಬರುವನೆಂಬ ಭರವಸೆಯ ನೀಡಬೇಡವೆ ನಲ್ಲ,
ಸ್ವತಂತ್ರಧೀರ ಸಿದ್ಧೇಶ್ವರಾ?

## ೧೧೯

ನೀನು ಮುದ್ದಿಸಿದರೆ
ನಭದ ನೀಲಿಕೆನ್ನೆಯೂ ಕೆಂಪಾಗುತ್ತದೆ-
ಬಾಲ ದಿನೇಶ;
ನೀನು ಚುಂಬಿಸಿದರೆ
ಸಂಧ್ಯೆಯ ಕೆಂಪುಕೆನ್ನೆ ಬೆಳುದಿಂಗಳಾಗುತ್ತದೆ-
ಪೂರ್ಣ ರಜನೀಶ;
ನನ್ನ ಕಣ ಕಣಕ್ಕೂ
ಮುತ್ತಿಟ್ಟು ರಂಗೇರಿಸನೇಕೆ
ಸ್ವತಂತ್ರಧೀರ ಸಿದ್ಧೇಶ್ವರ?

## ೧೨೦

ಆತುರದ ಬಲೆಯಲ್ಲಿ
ಕಾತರದ ಹಕ್ಕಿಯಾಗಿ
ರೆಕ್ಕೆ ಬಡಿಯುತ್ತಿಹೆ, ನಲ್ಲ!
ಒಂಟಿತನದ ಒಲೆಯಲ್ಲಿ
ವಿರಹದ ವಹ್ನಿಯಲ್ಲಿ
ಅಟಕಟಿಸುತ್ತಿಹೆ, ನಲ್ಲ!
ನಿದ್ರಾಹೀನತೆಯ ಕಾಕೋಲದಲ್ಲಿ
ಕನವರಿಕೆಯ ಚಿಗರಿಮರಿಯಾಗಿ
ಬೆದಬೆದನೆ ಬೇಯುತ್ತಿಹೆ, ನಲ್ಲ!
ಮಿಲನದ ಚಂದ್ರಿಕೆಯಾಗಿ
ಈ ಬಾಡಿದ ಬಳ್ಳಿಯನ್ನಪ್ಪು ನಲ್ಲ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೨೧

ತದಕಿದಷ್ಟೂ ಹೊಳೆವ ಬದುಕೆ,
ಬೆದಕಿದಷ್ಟೂ ಬೆಳೆವ ಬದುಕೆ,
ಬಾ ನೀನೊಂದು ಹದಕೆ–
ಎದೆ ಮಿದುಳುಗಳ
ಸರಿ ಬೆರಕೆಯ ಹದಕೆ,
ಸಲ್ಲಲು ಸ್ವತಂತ್ರಧೀರ ಸಿದ್ಧೇಶ್ವರನ ಪದಕೆ.

## ೧೨೨

ನನ್ನ ರಾಷ್ಟ್ರಧ್ವಜವನ್ನು ನೋಡಿದಾಗಲೆಲ್ಲ ಮೈಯುಬ್ಬುತ್ತದೆ;
ನನ್ನ ರಾಷ್ಟ್ರಗೀತೆಯನ್ನು ಕೇಳಿದಾಗಲೆಲ್ಲ ರೋಮಾಂಚನವಾಗುತ್ತದೆ;
ನನ್ನ ರಾಷ್ಟ್ರಪಕ್ಷಿಯನ್ನು ನೋಡಿದಾಗಲೆಲ್ಲ ಹಿಗ್ಗು ಹೊಮ್ಮುತ್ತದೆ;
ನನ್ನ ರಾಷ್ಟ್ರದ ಯಾವ ಭಾಗವನ್ನು ನೋಡಿದರೂ
ನಲವು ಚಿಮ್ಮುತ್ತದೆ?
ಅಹಂ ರಾಷ್ಟ್ರೀ ಸಂಗಮನೀ ವಸೂನಾಂ
ಚಿಕಿತುಷೀ ಪ್ರಥಮಾ ಯಜ್ಞಿಯಾ ನಾಂ।
ತಾಂ ಮಾ ದೇವಾ ವ್ಯದಧುಃ ಪುರುತ್ರಾ
ಭೂರಿ ಸ್ಥಾತ್ರಾಂ ಭೂರ್ಯಾವೇಶ ಯಂತೀಮ್"
ಎಂಬ ಮಂತ್ರ ನರ್ತಿಸತೊಡಗುತ್ತದೆ ಕಣ ಕಣಗಳಲ್ಲಿ!
ನನ್ನನೀ ರಾಷ್ಟ್ರದ ರಾಷ್ಟ್ರಕನನ್ನಾಗಿ ಹುಟ್ಟಿಸಿದ ನಿನಗೆ
ನಮೋ ನಮೋ ಎಂಬೆನಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ!

## ೧೨೩

'ಭಕ್ತಿ, ಭಕ್ತಿ, ಭಕ್ತಿ' ಯೆಂದು
ಬಾಯಿ ಬಡಬಡಿಸುತ್ತಿದ್ದರೂ
'ಪ್ರೀತಿ, ಪ್ರೀತಿ, ಪ್ರೀತಿ'ಯೆಂದು
ಹೃದಯ ಹಂಬಲಿಸುತ್ತಿದೆ, ನಲ್ಲ!
ನೀನು ಒಪ್ಪಲಿ, ಬಿಡಲಿ–
ನಾನು ಅಪ್ಪದಿರಲಾರೆ, ನಲ್ಲ!
ಕ್ಲಿಯೊಪಟ್ರಾಳಂತೆ ಅಲ್ಲ–
ಅಕ್ಕನಂತೆ, ರಾಬಿಯಾ, ಮೀರಾ, ಅಂಡಾಳರಂತೆ
ಪ್ರೀತಿಸಿ ತೋರುವೆ, ನಲ್ಲ!

ನೀನು ಸಿಕ್ಕಲಿ, ಬಿಡಲಿ–
ನಿನ್ನನ್ನು ಪ್ರೀತಿಸಿದುದೇ ನನ್ನ ಧನ್ಯತೆ, ನಲ್ಲ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೨೪

ತೆಂಗಿನಕಾಯಿಯಲ್ಲಿ ತಲೆದೋರುವ ನೀರು
ಅಲ್ಲಿಯೇ ಬತ್ತಿ ಬರಿದಾಗುವಂತೆ
ನನ್ನೊಳೇ ಮೂಡಿ ಈಡೇರದ ಬಯಕೆಗಳು
ನನ್ನೊಳೇ ಬತ್ತಿಬಿಡಲಯ್ಯ!
ಚಿಂತೆಯ ಚಿತೆಯ ಜ್ವಾಲೆಗಳಾಗಿ ಸುತ್ತದಿರಲಯ್ಯ!
ಸೆಲೆ ನಿಂತರೆ ಬಾವಿಯ ಜಲ ಬತ್ತುವಂತೆ
ಬಾಡಿ ಬತ್ತಲಯ್ಯ ಕೀಳು ಬಯಕೆಯ ಬಳ್ಳಿ!
ಅಲ್ಲಿ ಬೆಳೆಯಲಯ್ಯ ನಿನ್ನ ಬಯಕೆಯ ಬಳ್ಳಿ
ಸ್ವತಂತ್ರಧೀರ ಸಿದ್ಧೇಶ್ವರಾ!

೧೨೫

ಪ್ರೀತಿಯ ಸಾಧ್ಯತೆಗಳನ್ನೆಲ್ಲ ಸೂರೆಗೊಂಡರೆ
ಜೀವಿತದ ಶಕ್ಯತೆಗಳನ್ನೆಲ್ಲ ಸೂರೆಗೊಂಡಂತೆ !
ಪ್ರೀತಿಗೂ ಕೊಡು ಸ್ವನಿರ್ಣಯಾಧಿಕಾರವನ್ನು!
ಸುತ್ತಲೂ ಗೋಡೆ ಕಟ್ಟಿ ಮಾಡದಿರು ಬಂದಿಕಾರನನ್ನು!
ಮಾಡು ಪ್ರೀತಿಗಾಗಿ, ಮಡಿ ಪ್ರೀತಿಗಾಗಿ.
ಪ್ರೀತಿಸದೆ ಉಸಿರಾಡಿಸುವ ತಿದಿಯಾಗುವುದಕ್ಕಿಂತ
ಪ್ರೀತಿಸಿ ಮಡಿವುದು ಮೇಲೆಂದ
ಸ್ವತಂತ್ರಧೀರ ಸಿದ್ಧೇಶ್ವರ.

೧೨೬

ಗೆಳೆಯರು ಕೆಲವರು ಕೈಕೊಟ್ಟರೆಂದು
ಗೆಳೆತನವನ್ನೇ ಹಳಿಯುವುದೆ?
ಭಕ್ತರು ಕೆಲವರು ಭ್ರಷ್ಟರಾದರೆಂದು
ಭಕ್ತಿಯನ್ನೇ ಹಳಿಯುವುದೆ?
ಪ್ರೀತಿಸಿದವರು ಕೆಲವರು ಕೆಟ್ಟರೆಂದು

ಪ್ರೀತಿಯನ್ನೇ ಹಳಿಯುವುದೆ?
ಮಾನವರು ಕೆಲವರು ದಾನವರಾದರೆಂದು
ಮಾನವತೆಯನ್ನೇ ಹಳಿಯುವುದೆ?
ಸ್ವತಂತ್ರಧೀರ ಸಿದ್ಧೇಶ್ವರನ ಹೆಸರನ್ನು
ಶೋಷಕರು ಕೆಲರು ಬಳಸಿಕೊಂಡರೆಂದು
ಸ್ವತಂತ್ರಧೀರ ಸಿದ್ಧೇಶ್ವರನನ್ನೇ ಹಳಿಯುವುದೆ?

## ೧೨೭

ನನ್ನ ಮನಸ್ಸು ಮಾಗದಿದ್ದಾಗ
ಹಲವು ಮನಸ್ಸುಗಳ ನೋಯಿಸಿರಬಹುದು,
ಇನ್ನು ನೋಯಿಸೆನಯ್ಯ!
ಅರ್ಥವಿಸುವ ಶಕ್ತಿ ಅರಳದಿದ್ದಾಗ
ಹಲವರನ್ನು ಅಪಾರ್ಥ ಮಾಡಿಕೊಂಡಿರಬಹುದು ನಾನು,
ಇನ್ನು ಮಾಡಿಕೊಳ್ಳೆನಯ್ಯ!
ಗುಣಗ್ರಹಣಶಕ್ತಿ ಬೆಳೆಯದಿದ್ದಾಗ
ಹಲವರ ಗುಣಗಳನ್ನೇ ಅವಗುಣಗಳೆಂದು ಗ್ರಹಿಸಿರಬಹುದು ನಾನು,
ಇನ್ನು ಗೌರವಿಸದಿರೆನಯ್ಯ ಪರಗುಣವ ನಾನು;
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ತನದಾಸೆ ಹಣ್ಣಾಗದಿದ್ದಾಗ
ನನ್ನತನವನ್ನೇ ಕಾಮಿಸಿ ಕಂಗೆಟ್ಟಿರಬಹುದು ನಾನು,
ಇನ್ನು ನಿನ್ನತನವೇ ನನ್ನ ಗುರಿ, ಗಮ್ಯವಯ್ಯ!

## ೧೨೮

ಮೊದಲಿನ ಗೆಳೆಯರಲ್ಲಿ ಅನೇಕರು ಉಳಿದಿಲ್ಲ;
ಹೇವರಿಸಿದರೂ ಹೊಸ ಗೆಳೆಯರ ಸಂಖ್ಯೆ ಬೆಳೆದಿಲ್ಲ;
ಗೆಳೆಯರು ಬೇಕೆಂಬಾಸೆ ಅಳಿದಿಲ್ಲ;
ಹೊಗೆಯನ್ನೇ ನಗೆಯಾಗಿಸುವ ಬಗೆ ಹೊಳೆದಿಲ್ಲ;
'ಈಗಲೋ, ಇನ್ನಾವಾಗಲೋ', ಎಂಬ ಭೀತಿ ಅಳಿದಿಲ್ಲ;
ಒಳ್ಳೆಯ ದಿನಗಳು ಬಂದಾವೆಂಬ ನಂಬಿಕೆ ಮೊಳೆದಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಂತೂ ಸನಿಹಕ್ಕೇ ಸುಳಿದಿಲ್ಲ!

## ೧೨೯

ಮುಗಿಲು ನೆಲವನ್ನು ಮುದ್ದಿಸಿತೋ
ನೆಲವು ಮುಗಿಲನ್ನು ಮುದ್ದಿಸಿತೊ?
ಮೋಡ ಗಿರಿಯನ್ನು ಮುದ್ದಿಸಿತೋ
ಗಿರಿಮೋಡವನ್ನು ಮುದ್ದಿಸಿತೋ
ಮೆಲ್ಲೆಲರು ಮೊಗ್ಗನ್ನು ಮುದ್ದಿಸಿತೋ
ಮೊಗ್ಗು ಮೆಲ್ಲೆಲರನ್ನು ಮುದ್ದಿಸಿತೊ?
ನಾನು ನಿನ್ನನ್ನು ಮುದ್ದಿಸಿದೆನೋ
ನೀನು ನನ್ನನ್ನು ಮುದ್ದಿಸಿದೆಯೊ?
ಯಾರು ಯಾರನ್ನೇ ಮುದ್ದಿಸಲಿ,
ಮುದ್ದಿಸುವುದು ಮುಖ್ಯ.
ಮುದ್ದಿನಲ್ಲಿ ಇಬ್ಬರ ಭಾವೈಕ್ಯ, ಜೀವೈಕ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೩೦

ನಿನ್ನ ಕರುಣೆಯ ಬಯಲಿನಲ್ಲಿ
ಪುಟ್ಟ ಪಟವಾಗುವಾಸೆ;
ನಿನ್ನ ವಾತ್ಸಲ್ಯದ ವಾರಿಧಿಯಲ್ಲಿ
ಮರಿ ಮೀನಾಗುವಾಸೆ;
ನಿನ್ನ ಕೃಪೆಯ ಆಗಸದಲ್ಲಿ
ಚಿಕ್ಕ ನಕ್ಷತ್ರವಾಗುವಾಸೆ;
ಸ್ವತಂತ್ರಧೀರ ಸಿದ್ಧೇಶ್ವರಾ
ನಿನ್ನ ನಲ್ಮೆಯ ಮುನ್ನೀರಣುಗನ
ತಣ್ಗದಿರಾಗುವಾಸೆ!

## ೧೩೧

ಕುಣಿಯಲು ಬರದವಳು
ನೆಲ ಸೊಟ್ಟು ಎಂದರೆ ಏನು ಫಲ?
ಬರೆಯಲು ಬರದವ
ವಿಮರ್ಶಕನನ್ನು ದೂರಿದರೆ ಏನು ಫಲ?
ಆಡಳಿತ ಅರಿಯದವ
ಸಿಬ್ಬಂದಿಯನ್ನು ಬೈದರೆ ಏನು ಫಲ?

ಪ್ರೀತಿಸಲು ಒಲ್ಲದವ
ದಾಂಪತ್ಯವನ್ನು ದೂಷಿಸಿದರೆ ಏನು ಫಲ?
ಬದುಕಲು ಬರದವ
ಬದುಕನ್ನು ಜರೆದರೆ ಏನು ಫಲ?
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ಇರವನ್ನೇ ಅನುಭವಿಸದವ
ನಿನ್ನನ್ನು ನಿರಾಕರಿಸಿ ಏನು ಫಲ?

೧೩೨

ಜ್ಯೋತಿ ಕತ್ತಲೆಯನ್ನು  ಕೊಲ್ಲುತ್ತದೆಯೆ?
ಇಲ್ಲಿಲ್ಲ, ಕತ್ತಲೆಯನ್ನೇ ಬೆಳಗಿಸುತ್ತದೆ;
ಪ್ರೀತಿ ದ್ವೇಷಿಸುವವರ ಕೊಲ್ಲುತ್ತದೆಯೆ?
ಇಲ್ಲಿಲ್ಲ, ದ್ವೇಷವನ್ನೇ ಪ್ರೀತಿಯಾಗಿಸುತ್ತದೆ:
ನಿಜ ಕ್ರಾಂತಿ ಅಮಾಯಕರನ್ನು ಕೊಲ್ಲುತ್ತದೆಯೆ?
ಇಲ್ಲಿಲ್ಲ, ಜನರ ಜಡತನವನ್ನೇ ಚೇತನ, ಚಿಂತನವಾಗಿಸುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರ ಭಕ್ತಿ ಭವನವನ್ನು ಅಳಿಯುತ್ತದೆಯೆ?
ಇಲ್ಲಿಲ್ಲ, ಭವವವನ್ನೇ ಶಿವವಾಗಿಸುತ್ತದೆ!

೧೩೩

ಜಾರಿ ಬಿದ್ದವರ ನೋಡಿ ನಗುವವರೇ ಹೆಚ್ಚು.
ಬಂದು ಎಬ್ಬಿಸುವವರು ಯಾರೋ ಒಬ್ಬರು;
ಹಸಿದವರ ನೋಡಿ ಮುಖ ತಿರುಗಿಸುವವರೇ ಹೆಚ್ಚು,
ಅಶನವೀಯುವವರು ಯಾರೋ ಒಬ್ಬರು;
ನಿರಕ್ಷರಿಗಳ ಗೇಲಿ ಮಾಡುವವರೇ ಹೆಚ್ಚು.
ಅಕ್ಷರ ಕಲಿಸುವವರು ಯಾರೋ ಒಬ್ಬರು;
ಸ್ವತಂತ್ರಧೀರ ಸಿದ್ಧೇಶ್ವರಾ.
ನಿನ್ನ ನಾಮಾವಳಿ ಜಪಿಸುವವರೇ ಹೆಚ್ಚು,
ನಿನ್ನ ಮಕ್ಕಳಿಗಾಗುವವರು ಯಾರೋ ಒಬ್ಬರು.

೧೩೪

ನಿನ್ನ ಬಂಧನಕೆ ಒಳಗಾಗಿ
ಬಂಧ ಮುಕ್ತನಾದೆ;
ನಿನ್ನಲ್ಲಿ ಅನುರಕ್ತನಾಗಿ

ವಿರಕ್ತನಾದೆ–
ಸ್ವತಂತ್ರಧೀರ ಸಿದ್ಧೇಶ್ವರಾ.

೧೩೫

ಯಾವಾಗ ಯಾವ ಗಾಳಿಯ ತೆರೆಯನ್ನೇರಿ
ಯಾವ ಗಂಧದ ಉಸಿರು ಬರುವುದೋ,
ಯಾವಾಗ ಯಾವ ಅನುಭವದ ಹೆಗಲನ್ನೇರಿ
ಯಾವ ಚಿಂತನ ರಶ್ಮಿ ಮೂಡುವುದೋ,
ಯಾವಾಗ ಯಾವ ಪ್ರಯೋಗ–ಪಲ್ಲವದ ಮೂಗುತಿಯಾಗಿ
ಯಾವ ಶೋಧ–ಸುಮನ ಅರಳುವುದೋ,
ಯಾವಾಗ ನನ್ನ ವಿರಹದಗ್ಧ ಜೀವನ ವನದಲ್ಲಿ
ಮಿಲನ ಮಾಧವಿ ಚಿಗಿವುದೋ
ಯಾರು ಹೇಳಬೇಕು,
ಸ್ವತಂತ್ರಧೀರ ಸಿದ್ಧೇಶ್ವರ?

೧೩೬

ಕಣ ಕಣವೂ ಕಣ್ಣಾಗಿರುವ
ನಿನ್ನ ಕಣ್ಣುಗಳಿಗೇ ಮಂಕುಬೂದಿಯೆರಚಲು
ಅದೆಷ್ಟು ಕೈಗಳು ಬೇಕಯ್ಯ?
ಚಣ ಚಣವೂ ಕಿವಿಯಾಗಿರುವ
ನಿನ್ನ ಕಿವಿಯೂದಲು
ಅದೆಷ್ಟು ಬಾಯಿಗಳು ಬೇಕಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅನಾದಿ ಅನಂತವಾಗಿರುವ ನಿನ್ನ
ಆಯುಷ್ಯದ ಲೆಕ್ಕಮಾಡಲು
ಅದೆಷ್ಟು ಆಯುಷ್ಯಗಳು ಬೇಕಯ್ಯ?

೧೩೭

ಅದೇ ಅರಳಿದ ಹೂವಿನಲ್ಲಿ ಮಲಗಿರುವ ಹನಿ,
ಅದೇ ಮೊಲೆ ಕುಡಿದ ಮಗುವಿನ ತುಟಿಯ ಹಾಲ ಹನಿ,
ಬಹುದಿನಗಳಾದ ಮೇಲೆ ಬಂದ ಪತಿಯ ಮುಖ ಕಂಡ
ನಿಜ ಸತಿಯ ಕಣ್ಗಳ ಹಿಗ್ಗಿನ ಹನಿ,
ನಿನಗಾಗಿ ಹಂಬಲಿಸಿ ಹಲುಬುವ ನಿಜಭಕ್ತನ

ಭಕ್ತಿ ವಿಕಳತೆಯ ಹನಿ–
ಈ ಹನಿಗಳೂ ವನಧಿಗೆ ಸಮ–
ಸ್ವತಂತ್ರಧೀರ ಸಿದ್ಧೇಶ್ವರ.

೧೩೮

ನಿರಭ್ರ ನೀಲ ನಭದಲ್ಲಿ ಒಮ್ಮೊಮ್ಮೆ
ಒಮ್ಮೆಗೇ ಸಜಲ ನೀರದಗಳು ನೆರೆವಂತೆ
ಈ ಬಗೆಯ ಬಾನಿನಲ್ಲೂ ನೆರೆದಿವೆ
ಮನನ–ಮೇಘಗಳು;
ಕುಣಿಯಲೊಲ್ಲವೇಕೆ
ವಚನಗಳ ಸೋಗೆಗಳು?
ಒಣಗಿದ್ದ ವನದಲ್ಲಿ ಒಮ್ಮೆಗೇ ಹಸುರಿನ ಹಸರ,
ಕಿಸಲಯ, ಕುಸುಮಗಳ ಕುಸುರು;
ಕಂಪಿನ ಉಸಿರು;
ಕೊನರಲಿಲ್ಲೇಕೆ ಮನದ ಕೊರಡು,
ಹಯನಿಸದೇಕೆ ಭಾವದ ಬರಡು–
ಸ್ವತಂತ್ರ ಧೀರ ಸಿದ್ಧೇಶ್ವರ?

೧೩೯

ನಿನ್ನನ್ನು ಹೊಗಳಿದರೆ ಅದು ಸ್ತುತಿ,
ಮನುಷ್ಯರನ್ನು ಹೊಗಳಿದರೆ ಮುಖಸ್ತುತಿ;
ನಿನ್ನನ್ನು ಬೇಡಿದರೆ ಅದು ಪ್ರಾರ್ಥನೆ,
ಮನುಷ್ಯರನ್ನು ಬೇಡಿದರೆ ಯಾಚನೆ;
ನಿನ್ನ ಭಕ್ತರಿಗಿತ್ತರೆ ಅದು ದಾಸೋಹ,
ಬಲಾಢ್ಯರಿಗಿತ್ತರೆ ಅದೇ ಲಂಚ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಸೇವಿಸಿದರೆ ಅದು ಸೇವೆ,
ನಿನ್ನ ಮಕ್ಕಳನ್ನು ಸೇವಿಸಿದರೆ ಅದೇ ಪೂಜೆ!

೧೪೦

ದುಡಿವುದು, ಬಾರಿಸುವುದು, ಬರೆವುದು ಕೈ,
ಹಾರ ಹಾಕಿಸಿಕೊಳ್ಳುವುದು ಕೊರಳು!

ಬಗ್ಗಿಸಿಕೊಳ್ಳುವುದು, ಬಿಗಿಸಿಕೊಳ್ಳುವುದು ಬಿಲ್ಲು,
ಗುರಿ ಹೊಡೆದು ಕೈವಾರಿಸಿಕೊಳ್ಳುವುದು ಸರಳು!
ಹೊನ್ನಗಳಿಸಲು ಹಣ್ಣಾಗುವುದು ಮೈ,
ಉಂಗುರ ಧರಿಸಿಕೊಳ್ಳುವುದು ಬೆರಳು!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಯಜಿಸುವುದು, ಭಜಿಸುವುದು, ಪೂಜಿಸುವುದು ಮೈ,
ನಿನ್ನನೊಲಿಸುವುದು ಕೊನೆಗೆ ಕರುಳು!

೧೪೧

ನಾಗಲಿಂಗನ ಬೊಡ್ಡೆ ಹೂತಾಗ,
ಹಲಸಿನ ಬೊಡ್ಡೆ ಕಾತಾಗ,
ಅತ್ತಿಯ ಬೊಡ್ಡೆ ಪಣ್ತಾಗ
ನನ್ನ ಬಾಳಿನ ಬೊಡ್ಡೆಯೂ ಫಲಿಸೀತೆ-
ಎಂದು ಕೇಳಿಕೊಳ್ಳುತ್ತೇನೆ-ಸ್ವತಂತ್ರಧೀರ ಸಿದ್ಧೇಶ್ವರಾ!

೧೪೨

ಮತಿ ಕಡಮೆಯಿದ್ದಷ್ಟೂ ಮಾತು ಹೆಚ್ಚು;
ಮಾಲು ಖೊಟ್ಟಿಯಿದ್ದಷ್ಟೂ ಜಾಹೀರಾತು ಹೆಚ್ಚು;
ಕುರೂಪ ಹೆಚ್ಚಿರುವಷ್ಟೂ ಕನ್ನಡಿಯ ಕಾಂಕ್ಷೆ ಹೆಚ್ಚು;
ಪೌರುಷ ಕಡಮೆಯಾದಷ್ಟೂ ಕಾಮದ ಆಕಾಂಕ್ಷೆ ಹೆಚ್ಚು;
ಬೊಕ್ಕಣ ಬರಿದಾದಷ್ಟೂ ಸಿರಿವಂತಿಕೆಯ ಬಡಾಯಿ ಹೆಚ್ಚು;
ನಾಯಕ ದುಷ್ಟನಿದ್ದಷ್ಟೂ ಹಾರ ತುರಾಯಿ ಹೆಚ್ಚು;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಕ್ತಿ ಕಡಮೆಯಿದ್ದಷ್ಟೂ ಭಕ್ತಿಯ ನಟನೆ ಹೆಚ್ಚು!

೧೪೩

ಬತ್ತಳಿಕೆಗೆ ಬೆಲೆ ಬರುವುದು ಬಾಣಗಳಿಂದ,
ಒರೆಗೆ ಬೆಲೆ ಬರುವುದು ಕರವಾಳದಿಂದ,
ಬಟ್ಟೆಗೆ ಬೆಲೆ ಬರುವುದು ತೊಟ್ಟವರಿಂದ,
ಮುಖಕ್ಕೆ ಬೆಲೆ ಬರುವುದು ಮಸ್ತಿಷ್ಕದಿಂದ,

ಮಸ್ತಿಷ್ಕಕ್ಕೆ ಬೆಲೆ ಬರುವುದು ವಿವೇಕದಿಂದ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಬೆಲೆ ಬರುವುದು ನಿಜಭಕ್ತರಿಂದ!

೧೪೪

ಕ್ರೀಡೆಯಂತೆ ಕ್ರೀಡಾಂಗಣ,
ರೂಢಿಯಂತೆ ವಿವಾಹ-ಬಂಧನ,
ಹಾದಿಯಂತೆ ವಾಹನ,
ಮಾಧ್ಯಮದಂತೆ ಕಲಾನಿರ್ಮಾಣ,
ಪಕ್ಷಿಯಂತೆ ಕೂಜನ,
ಬಯಸಿದಂತೆ ಜೀವನ,
ಮನಸ್ಸಿನಂತೆ ಸ್ವತಂತ್ರಧೀರ ಸಿದ್ಧೇಶ್ವರ!

೧೪೫

ಓದಿ ನೆನಪಿಟ್ಟವ ವಿದ್ವಾಂಸ,
ಅಳವಡಿಸಿಕೊಂಡವ ಜ್ಞಾನಿ;
ಇಲ್ಲದ ಗುಣ ಹೊಗಳುವವ ಗಿಲೀಟಿ,
ಇದ್ದ ತಪ್ಪು ತಿದ್ದುವವ ಗೆಳೆಯ;
ಸುತ್ತಿ ಬಳಸಿ ಹೇಳುವವ ಮೇಧಾವಿ,
ಸನ್ನೆಯಿಂದ ಹೇಳುವವ ಅನುಭಾವಿ,
ಸ್ವತಂತ್ರಧೀರ ಸಿದ್ಧೇಶ್ವರನ ಪೂಜಿಸುವವ ಆಸ್ತಿಕ,
ಅವನ ಮಕ್ಕಳನ್ನು ಪ್ರೀತಿಸುವವ ಭಕ್ತ!

೧೪೬

ಚಕ್ರವಾಕಗಳ ವಾಸ್ತವತೆಯೇನೇ ಇರಲಿ,
ಅವುಗಳ ಕಲ್ಪನೆ ರಮ್ಯ;
ಗಂಡಭೇರುಂಡದ ಯಥಾರ್ಥತೆಯೇನೆ ಇರಲಿ,
ಅದರ ಕಲ್ಪನೆ ಕಾಮ್ಯ;
ಗಂಗಾವತರಣದ ನಿಜತೆ ಏನೇ ಇರಲಿ,
ಅದರ ಕಲ್ಪನೆ ಭವ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಾಮ ರೂಪಗಳ ಸತ್ಯತೆ ಏನೇ ಇರಲಿ,
ಅವುಗಳ ಕಲ್ಪನೆ ದಿವ್ಯ.

## ೧೪೭

ಪ್ರತಿಬಿಂಬ ಬಿಂಬದಂತೆ,
ಪ್ರತಿಬಿಂಬವೇ ಬಿಂಬವಲ್ಲ;
ಛಾಯೆ ವಸ್ತುವಿನಂತೆ,
ಛಾಯೆಯೇ ವಸ್ತುವಲ್ಲ;
ಸರಕಾರ ಜನರಂತೆ,
ಸರಕಾರವೇ ಜನರಲ್ಲ;
ಮನೆ ನಕ್ಷೆಯಂತೆ,
ನಕ್ಷೆಯೇ ಮನೆಯಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ,
ಹನಿ ವನಧಿಯಂತೆ,
ಹನಿಯೇ ವನಧಿಯಲ್ಲ.

## ೧೪೮

ಯಾರೋ ಎಲ್ಲಿಯೋ ಹಾಡಿದರೆ
ಇದ್ದಲ್ಲಿಯೇ ಕೇಳಿ ಸಂತೋಷಿಸುತ್ತೇನೆ;
ಎಲ್ಲಿಂದಲೊ ಯಾವುದೋ ಹೂವಿನ ಕಂಪು ಬಂದಾಗ
ಇದ್ದಲ್ಲಿಯೇ ವಾಸಿಸಿ ಸುಖಿಸುತ್ತೇನೆ;
ಕೋಟಿ ಮೈಲಿಗಳಾಚೆಯಿಂದ ಬೆಳ್ದಿಂಗಳು ಬಂದಾಗ
ಇದ್ದಲ್ಲಿಯೇ ಸ್ಪರ್ಶಿಸಿ ಹರ್ಷಿಸುತ್ತೇನೆ;
ಕಾಣದ ಸ್ವತಂತ್ರಧೀರ ಸಿದ್ಧೇಶ್ವರನನ್ನು,
ಕಂಡುದರಲ್ಲಿ ಕಂಡು ಆನಂದಿಸುತ್ತೇನೆ.

## ೧೪೯

ಮಂದಮಾರುತ ತನುವಿಗೆ ಹಿತ,
ಮಂದಹಾಸ ಮನಕ್ಕೆ ಹಿತ;
ಮಂದ ಪ್ರಕಾಶ ಭೋಜನಕ್ಕೆ ಹಿತ;
ಮಂದಾಗ್ನಿ ಮರಗಳಿಗೆ ಹಿತ;
ಮಂದಾಸನ ಮನೆ ದೇವರಿಗೆ ಹಿತ:
ಮಂದಮತಿ ನಾನು
ನಿನಗೆ ಹಿತವನಾಗೆನೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

೧೫೦

ಒಂದೇ ಬೊಡ್ಡೆಯಿಂದ ಒಡೆದ ಶಾಖೆಗಳು
ಒಂದೊಂದೂ ಒಂದೊಂದು ದಿಕ್ಕಿಗೆ–
ಮರದ ಹರಹಿಗಿದು ಅನಿವಾರ್ಯ;
ಒಂದೇ ಉಪವನದಲ್ಲಿ ಅರಳಿದ ಹೂಗಳಿಗೆ
ಒಂದೊಂದು ಬಣ್ಣ, ಒಂದೊಂದು ಅಂದ ಒಂದೊಂದು ಗಂಧ–
ಉಪವನದ ಒಟ್ಟಂದದ ವರ್ಧನೆಗೆ ಇದು ಅನಿವಾರ್ಯ;
ಒಂದೇ ಮನೆಯಲ್ಲಿ ಹುಟ್ಟಿ ಬೆಳದವರ
ಒಲವು ನಿಲುವುಗಳು ಒಂದೊಂದು ಕಡೆಗೆ–
ಮನೆತನದ ಮೇಲ್ಮೆಗಿದು ಅನಿವಾರ್ಯ;
ಒಬ್ಬನೇ ಸ್ವತಂತ್ರಧೀರ ಸಿದ್ಧೇಶ್ವರನಿಂದ ಸೆಲೆಯೊಡೆದ
ಹಲವು ಹನ್ನೆರಡು ಮತಗಳೂ ದರ್ಶನಗಳು,
ಮಾನವನ ಮತಿಸಮೃದ್ಧಿಗೆ ಇದು ಅನಿವಾರ್ಯ.

೧೫೧

ಅಭಾವ ವೈರಾಗ್ಯಕ್ಕಿಂತ
ಸ್ವಯಾರ್ಜಿತ ಸುಖ ವಿಲಾಸ ಮೇಲು;
ಕನ್ನಡಿಯೊಳಗಣ ಗಂಟಿಗಿಂತ
ಕೈಗೆ ಬರುವ ಕಾಸು ಮೇಲು;
ತನಗೇ ತಿಳಿಯದ ಶಾಸ್ತ್ರ ಬೋಧೆಗಿಂತ
ಮನೆಗೆಲಸವೇ ಮೇಲು;
ಹಾವಿನ ಹೆಡೆಯ ರತ್ನಕ್ಕಿಂತ
ಹೊಲ ಕಾಯುವ ಕತ್ತಾಳೆ ಮೇಲು;
ಚಂದ್ರನೊಳಗಣ ಅಮೃತಕ್ಕಿಂತ
ಬಡವನ ಗಡಿಗೆಯ ಅಂಬಲಿ ಮೇಲು;
ಸ್ವತಂತ್ರಧೀರ ಸಿದ್ಧೇಶ್ವರನ ಪಡೆವುದಕ್ಕಿಂತ
ಅವನ ಮಕ್ಕಳಿಗಾಗಿ ದುಡಿವುದು ಮೇಲು!

೧೫೨

ನೀರೆಂದರೆ ಮೂಗು ಮುರಿಯುತ್ತದೆ ಹಾಲು,
ಹಾಲು ಬೆಣ್ಣೆಯಾದಾಗ ನೀರಲ್ಲಿಯೆ ತೇಲುತ್ತದೆ;
ನೀರಿನಿಂದಾದ ಉಪ್ಪು ನೀರಲ್ಲಿಯೇ ಕರಗುತ್ತದೆ,

ನೀರಿನಿಂದಾದ ಮುತ್ತು ನೀರಧಿಯಲ್ಲಿದ್ದು ಕರಗದಿರುತ್ತದೆ;
ನೀರಿನಿಂದಾದ ಹಿಮ ನೀರಲ್ಲಿಯೇ ತೇಲುತ್ತದೆ,
ನೀರಿನಿಂದಾದ ಉಗಿ ಗಗನಕ್ಕೆ ನೆಗೆಯುತ್ತದೆ;
ನೀರಿನಲ್ಲಿಯೇ ಬೆಳೆದ ಪದ್ಮಪತ್ರ
ನೀರು ಅಂಟದಂತೆ ಬದುಕುತ್ತದೆ,
ನೀರಿನಲ್ಲಿಯೇ ಹುಟ್ಟುವ ಮೀನು
ನೀರು ತಪ್ಪಿದರೆ ವಿಲಿವಿಲಿ ಒದ್ದಾಡುತ್ತದೆ;
ನೀರಿನ ಹಿರಿಮೆಯೆಷ್ಟು, ಮಹಿಮೆ ಎಷ್ಟು!
ನನ್ನೆದೆಯೂ ಕರಗಿ ನೀರಾಗಿದೆ,
ನೀನದರಲ್ಲಿ ಏನಾದರೂ ಆಗಿ ಮೈದೋರಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೩

ಕನಸಿನ ಕೂಟ ಸುಳ್ಳಾದರೂ
ಅದರ ಫಲಿತ ಸುಳ್ಳಲ್ಲ;
ಬಿಸಿಲುಗುದುರೆ ಸುಳ್ಳಾದರೂ
ಅದರ ಹೊಳಪು ಸುಳ್ಳಲ್ಲ;
ಕವಿಸಮಯ ಸುಳ್ಳಾದರೂ
ಅದರ ಕಾವ್ಯಗುಣ ಸುಳ್ಳಲ್ಲ;
ನಾನು ಸ್ವತಂತ್ರಧೀರ ಸಿದ್ಧೇಶ್ವರನ
ಕಾಣುವ ನಿರೀಕ್ಷೆ ಸುಳ್ಳಾದರೂ
ಆ ನಿರೀಕ್ಷೆ ನೀಡಿದ ನಿಜಾನಂದ ಸುಳ್ಳಲ್ಲ!

೧೫೪

ಎಲೆ ಹಸುರು, ಅಡಕೆ ಕಂದು, ಸುಣ್ಣ ಬಿಳಿ-
ಮೂರೂ ಸೇರಿ ಬಾಯಿ ಕೆಂಪಾಗುವ ಭರವ ನೋಡಿರೆ;
ಪ್ರಣತಿ ಕಪ್ಪು, ಎಣ್ಣೆ ಹಳದಿ, ಬತ್ತಿ ಬಿಳಿದು-
ಮೂರು ಸೇರಿ ಬೆಳಕಾಗುವ ಬೆರಗ ನೋಡಿರೆ;
ವದನ ಗೌರ, ಅಧರ ಕೆಂಪು, ರದನ ಬೆಳ್ಪಗೆ-
ಮೂರು ಸೇರಿ ನಗೆಮಲ್ಲಿಗೆಯಾಗುವ ಬೆಡಗ ನೋಡಿರೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ಬಿಂದು, ನೀನು ಸಿಂಧು, ಭಕ್ತಿ ಭಾಗೀರಥಿ-
ಮೂರು ಸೇರಿ ಒಂದಾಗುವ ನಿಬ್ಬೆರಗ ನೋಡಾ!

## ೧೫೫

ಹುಲ್ಲು ಇಬ್ಬನಿಯ ಮುಡಿದುಕೊಂಡಿತು;
ಇಬ್ಬನಿ ಹೂಬಿಸಿಲ ಮುಡಿದುಕೊಂಡಿತು;
ತೆರೆ ನೊರೆಯನ್ನು ಮುಡಿದುಕೊಂಡಿತು;
ಹೂವು ಚಿಟ್ಟೆಯನ್ನು ಮುಡಿದುಕೊಂಡಿತು;
ಬೆಟ್ಟ ಮೋಡವನ್ನು ಮುಡಿದುಕೊಂಡಿತು;
ಮೋಡ ಮಿಂಚನ್ನು ಮುಡಿದುಕೊಂಡಿತು;
ಸ್ವತಂತ್ರಧೀರ ಸಿದ್ಧೇಶ್ವರ
ಬ್ರಹ್ಮಾಂಡಗಳನ್ನು ಮುಡಿದುಕೊಂಡ!

## ೧೫೬

ಗೂಡನ್ನಗಲಿದ ಹಕ್ಕಿಮರಿ ನಾನು;
ತಾಯಿಯನ್ನಗಲಿದ ಕರು ನಾನು;
ತೋಯವನ್ನಗಲಿದ ಮೀನು ನಾನು;
ಹಿಂಡನ್ನಗಲಿದ ಆನೆಯ ಸೂನು ನಾನು;
ಜೋಡನ್ನಗಲಿದ ಜಕ್ಕವಕ್ಕಿ ನಾನು;
ಜ್ಯೋತ್ಸ್ನೆಯನ್ನಗಲಿದ ಜೊನ್ನವಕ್ಕಿ ನಾನು;
ಬೇಗ ಬಂದು ಬಾಗಿ ಎತ್ತಿಕೊಳ್ಳಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೫೭

ಹೂಗಳೆ, ನಿಮಗೂ ನಿಮ್ಮ ಚೆಲುವನ್ನು
ಅನ್ಯರು ಮೆಚ್ಚಬೇಕೆಂಬ ಇಚ್ಛೆ ಇರುತ್ತದೆಯೆ?
ಹಕ್ಕಿಗಳೆ, ನಿಮಗೂ ನಿಮ್ಮ ಹಾಡುಗಳನ್ನು
ನಾವು ಮೆಚ್ಚಬೇಕೆಂಬ ಇಚ್ಛೆ ಇರುತ್ತದೆಯೆ?
ನವಿಲುಗಳೆ, ನಿಮಗೂ ನಿಮ್ಮ ನರ್ತನವನ್ನು
ರಸಿಕರು ಮೆಚ್ಚಬೇಕೆಂಬ ಇಚ್ಛೆ ಇರುತ್ತದೆಯೆ?
ಸ್ವತಂತ್ರಧೀರ ಸಿದ್ಧೇಶ್ವರಾ, ನಿನಗೂ ನಿನ್ನ ಭಕ್ತರು
ನಿನಗೆ ಒಲಿಯಲೆಂಬ ಇಚ್ಛೆ ಇರುತ್ತದೆಯೆ?

## ೧೫೮

ದೈವದವರೆಲ್ಲಿಯೋ ಅಲ್ಲಿಯೇ ದೈವ;
ಪಂಚರೆಲ್ಲಿಯೋ ಅಲ್ಲಿಯೇ ಪರಮೇಶ್ವರ;
ಭಕ್ತರೆಲ್ಲಿಯೋ ಅಲ್ಲಿಯೇ ಭಗವಂತ;
ಕಲೆಗಾರರೆಲ್ಲಿಯೋ ಅಲ್ಲಿಯೇ ಕಲಾಗೌರಿ;
ಹಸು ಮಕ್ಕಳೆಲ್ಲಿಯೋ
ಅಲ್ಲಿಯೇ ಸ್ವತಂತ್ರಧೀರ ಸಿದ್ಧೇಶ್ವರ!

## ೧೫೯

ಪರಿಷ್ಕೃತ ಮುದ್ರಣದಲ್ಲಿ
ಮೊದಲಿಗಿಂತ ಹೆಚ್ಚು ಮುದ್ರಾರಾಕ್ಷಸರು!
ಪುನರ್ರಚಿತ ಸಚಿವ ಸಂಪುಟ, ಸಮಿತಿಗಳಲ್ಲಿ
ಮೊದಲಿಗಿಂತ ಹೆಚ್ಚು ಸ್ವಾಹಾಪತಿಗಳು!
ಪುನರ್ವಿವಾಹವಾದವರಲ್ಲಿ
ಮುನ್ನಿಗಿಂತ ಹೆಚ್ಚು ಕಲಹಗಳು!
ಸ್ವತಂತ್ರಧೀರ ಸಿದ್ಧೇಶ್ವರಾ.
ಪುನರ್ಜನ್ಮವಿದ್ದರದರಲ್ಲಿ
ಏನೇನು ಕಾಟಗಳು ಕಾದಿವೆಯೋ,
ಇದೇ ಜನ್ಮದಲ್ಲಿ ಸಮ್ಯಕ್ತ್ವ ನೀಡಯ್ಯಾ!

## ೧೬೦

ಓಕುಳಿಯನ್ನಾಡಿದಂತಿದೆ
ಮುತ್ತುಗದ ಮರ;
ಹಿಮಾನಿಯಿಂದಾಡಿದಂತಿದೆ
ನಂದಿಬಟ್ಟಲ ಮರ;
ಗುಲಾಲಿನಿಂದಾಡಿದಂತಿದೆ
ಗುಲ್-ಮೊಹರ್ ಮರ;
ಸಂಜೆಯೊಡನೆ ಆಡಿದಂತಿದೆ
ಪಾರಿಜಾತ ತರು;
ಬೆಳ್ದಿಂಗಳೊಡನೆ ಆಡಿದಂತಿದೆ
ಮಲ್ಲಿಗೆಯ ಬಳ್ಳಿ;
ಶರಣಸತಿಯೊಡನೆ ಆಡಿದಂತಿದ್ದಾನೆ

ಸ್ವತಂತ್ರಧೀರ ಸಿದ್ಧೇಶ್ವರ!

೧೬೧

ಮಂಡೂರವನ್ನೂ ಸೆಳೆಯದಿರೆ
ಅಯಸ್ಕಾಂತಕ್ಕಾವ ಅಪಮಾನ?
ಗರಸನ್ನು ಪರಿವರ್ತಿಸದಿರೆ
ಪರುಷಕ್ಕಾವ ಪರಾಭವ?
ಅಕ್ಷಿದೋಷಿಗೆ ಸೂಕ್ಷ್ಮಾಣು ಕಾಣದಿರೆ
ಸೂಕ್ಷ್ಮದರ್ಶನಕ್ಕಾವ ಅವಹೇಳನ?
ದುಂಬಿಯನ್ನು ಆಕರ್ಷಿಸದಿರೆ
ಸಂಪಿಗೆಗೆ ಯಾವ ಪರಾಜಯ?
ಗಜನವಿ ಮಾತು ಮುರಿದರೆ
ಫಿರ್ದೋಸಿಗಾವ ಮಾನ ಹಾನಿ?
ಸಿದ್ಧಯ್ಯ ಪುರಾಣಿಕ ಸಿದ್ಧಯ್ಯಪುರಾಣಿಕನಾಗಿಯೇ ಉಳಿದರೆ
ಸ್ವತಂತ್ರಧೀರ ಸಿದ್ಧೇಶ್ವರನಿಗಾವ ಸೋಲು?

೧೬೨

ಬಿರಿವ ಮುಗುಳುಗಳಲ್ಲಿ ನಿನ್ನ ಪಿಸುಮಾತುಗಳು,
ಹರಿವ ತೊರೆಗಳಲ್ಲಿ ನಿನ್ನ ಕಿವಿ ಮಾತುಗಳು,
ಪಕ್ಷಿ ಕೂಜನಗಳಲ್ಲಿ ನಿನ್ನ ಸವಿಮಾತುಗಳು
ಎಲ್ಲೆಲ್ಲೂ ನಿನ್ನ ಇನಿವಾತುಗಳು!
ಪಡಿನುಡಿಯಲೆನಗೆ ಎಡೆಯೇ ಇಲ್ಲ–
ಕೇಳುತ್ತಿರುವುದೇ ಸಾಕು ನಿನ್ನ ನಲ್ಮೆಯ ಸೊಲ್ಲ!
ನಲ್ಲರ ನಲ್ಲ ಸ್ವತಂತ್ರಧೀರ ಸಿದ್ಧೇಶ್ವರನ
ಸೊಲ್ಲಿನ ಬೆಲ್ಲ ಸಾಕೆನಿಸದಲ್ಲ!

೧೬೩

ನೂತ ನೂಲು ಬಟ್ಟೆಯಾದರೆ ಸರಿ,
ಬಲೆಯಾದರೆ ಹೇಗಯ್ಯ
ಉರುಳಾದರೆ ಹೇಗಯ್ಯ?
ಹೆಣ್ಣು ಕುಟುಂಬ ಕಣ್ಣಾದರೆ ಸರಿ
ಎದೆಯ ಹುಣ್ಣಾದರೆ ಹೇಗಯ್ಯ,

ಕಣ್ಣಿಗೆ ಮಣ್ಣಾದರೆ ಹೇಗಯ್ಯ?
ಹೊನ್ನು ಮಣ್ಣು ಉಣ್ಣಿಸುವ ಕೈಯಾದರೆ ಸರಿ,
ತಲೆಯೊಡೆವ ದೊಣ್ಣೆಯಾದರೆ ಹೇಗಯ್ಯ
ಬಂಧಿಸುವ ಕಣ್ಣಿಯಾದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಪೂಜೆ ಆತ್ಮನ ಓಜೆಯದರೆ ಸರಿ,
ಲೋಗರ ಸುಲಿಗೆಯಾದರೆ ಹೇಗಯ್ಯ,
ಮುಗ್ಧರ ಶೋಷಣೆಯಾದರೆ ಹೇಗಯ್ಯ?

## ೧೬೪

ಜನರಿಂದ ಜನರಿಗಾಗಿ
ಜನರು ನಡೆಸುವ ಸರಕಾರಿಗಳು ವಿರಳ;
ಬದುಕಿನಿಂದ ಬದುಕಿಗಾಗಿ ಉದಿಸಿ
ಬದುಕಿಸಬಲ್ಲ ಸಾಹಿತ್ಯ ವಿರಳ;
ಎಲ್ಲರಂತೆ ಹುಟ್ಟಿ, ಎಲ್ಲರೊಡನೆ ಬೆಳೆದು,
ಎಲ್ಲರಿಗೂ ಆಗುವ ಮಹಾಮಾನವರು ವಿರಳ;
ಮೊದಲು ನಡೆದೇ ಆಮೇಲೆ ನುಡಿವ,
ನಡೆಯೇ ನುಡಿಯಾದ ಬೋಧಕರು ವಿರಳ;
ಸುಳ್ಳು ಆಶ್ವಾಸನೆಗಳನ್ನೇ ಕೊಡದ
ಶಕ್ತಿ ರಾಜಕಾರಣಿಗಳು ವಿರಳ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪ್ರೀತಿಸಿ ನಿನ್ನನ್ನು ಯಾಚಿಸದ
ನಿಜಭಕ್ತರೂ ವಿರಳರಯ್ಯ!

## ೧೬೫

ಹಿಮಗಿರಿಯ ಗಾಳಿಗಳು ಸಾಗರ ತರಂಗಗಳು
ಆಗಸದ ಅರಿಲುಗಳು ಸೊಗವಿತ್ತಿವೆ;
ಹಳ್ಳಿಗರ ಮುಗ್ಧತೆಯು, ಪುರಜನ ವಿದಗ್ಧತೆಯು,
ನಟ್ಟಿರುಳ ಸ್ತಬ್ಧತೆಯು ಮುದವಿತ್ತಿದೆ;
ಖಗನಿಚಯ ಸಂಗೀತ, ಮೃಗನಿಕರ ರಂಗೀತ,
ಮಗು ಮೊಗದ ದರಹಸಿತ ಹರ್ಷವಿತ್ತಿವೆ;

ಒಮ್ಮೊಮ್ಮೆ ಅನಿಸುತ್ತದೆ-ಸರಿಯಾಗಿಯೇ ಅನಿಸುತ್ತದೆ
ನಿನ್ನ ಸೃಷ್ಟಿಯೇ ಸೊಗದ ಉಗಮ,
        ಸಾವಿರ ಸ್ವರಗಳ ಸರಿಗಮ,
ಅಮರ ಸೌಂದರ್ಯದಾರಾಮ-
ಸ್ವತಂತ್ರಧೀರ ಸಿದ್ಧೇಶ್ವರಾಯತನ!

೧೬೬

ತೊಂಡೆಗೆ ಹೋಲಿಸಿಕೊಂಡ
ತುಟಿಗಳ ಚೆಲುವು ಹೆಚ್ಚೋ-
ಅವುಗಳಿಗೆ ಹೋಲಿಕೆಯಾದ
ತೊಂಡೆಯ ಬೆಡಗು ಹೆಚ್ಚೊ?
ಗುಲಾಬಿಗೆ ಹೋಲಿಸಿಕೊಂಡ
ಕೆನ್ನೆಗಳ ಕಮನೀಯತೆ ಹೆಚ್ಚೋ-
ಅವಕ್ಕೆ ಹೋಲಿಕೆಯಾದ
ಗುಲಾಬಿಯ ಗಾಡಿ ಹೆಚ್ಚೊ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಹೋಲಿಸಿಕೊಂಡ
ನನ್ನ ಕೆಚ್ಚು ಹೆಚ್ಚೋ,
ನನಗೆ ಹೋಲಿಸಗೊಟ್ಟ
ನಿನ್ನ ನೆಚ್ಚು ಹೆಚ್ಚೊ?

೧೬೭

ನಿತ್ಯ ನೋಡಿದರೂ ಬೇಸರ ಬರಿಸದಂಥ
ನಿತ್ಯ ನವವಾಗಿ ತೋರುವ ತಿರೆಯನಿತ್ತಿಹೆಯಯ್ಯ, ನಮಗೆ;
ಮತ್ತೆ ಮತ್ತೆ ಪೆಟ್ಟು ಬಿದ್ದರೂ ಮತ್ತೆ ಮತ್ತೆ ಹುರಿದುಂಬುವ
ಚಿತ್ತವನ್ನಿತ್ತಿರುವೆಯಯ್ಯ, ನಮಗೆ;
'ಈಗಲೋ, ಇನ್ನಾವಾಗಲೋ! ಎನ್ನುವಂಥ ಬಾಳಿನಲ್ಲಿಯೂ
ಸಾಧಿಸುವ ಹಟವನ್ನಿತ್ತಿಹೆಯಯ್ಯ, ನಮಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಊಹಿಸುವುದೂ ಸಾಧ್ಯವಿರದಿದ್ದರೂ
ನಿನ್ನನ್ನು ಸೋಲಿಸಬೇಕೆಂಬ ಛಲವನ್ನಿತ್ತಿಹೆಯಯ್ಯ, ನಮಗೆ!

## ೧೬೮

ಕನಸಿನ ಗಂಟಿಗಾಗಿ ಕಚ್ಚಾಟ ತರವೇನಯ್ಯ?
ಗಗನ ಕುಸುಮಕ್ಕಾಗಿ ಗುದ್ದಾಟ ತರವೇನಯ್ಯ?
ಕಾಣದ ನಿಕ್ಷೇಪಕ್ಕಾಗಿ ಕಾದಾಟ ಸರಿಯೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇರುವ ಜಗ ಮರೆತು ಇರದ ಸ್ವರ್ಗಕ್ಕಾಗಿ
ಹೋರಾಟ ತರವೇನಯ್ಯ?

## ೧೬೯

ನಿನ್ನ ಸಂಗವ ಮಾಡಿ
ಎಲ್ಲ ಸಂಗ(ಘ)ಗಳ ತೊರೆದೆನಯ್ಯ;
ನಿನ್ನವರ ಸಂಗದಿ ಸೇರಿ
ಎಲ್ಲ ರಂಗಗಳ ತೊರೆದೆನಯ್ಯ;
ನಿನ್ನ ಸಂಗ ಸುಖದಿ
ಎಲ್ಲ ಭಂಗಗಳ ಮರೆದೆನಯ್ಯ;
ನಿನ್ನ ಸಂಗದಲ್ಲಿದ್ದೇ
ನಿಸ್ಸಂಗನಾದೆನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೭೦

ಶುಷ್ಕ ವೈದುಷ್ಯಕ್ಕಿಂತ ರಸಾರ್ದ್ರ ಅಜ್ಞತೆ ಮೇಲಯ್ಯ;
ರೂಪವಿಲ್ಲದ ಸಿಂಗಾರಕ್ಕಿಂತ ಸಿಂಗಾರವಿಲ್ಲದ ರೂಪ ಮೇಲಯ್ಯ;
ಅರವಿಲ್ಲದ ಅರಮನೆಗಿಂತ ಅರುಳಿರುವ ಕುಟೀರ ಮೇಲಯ್ಯ;
ಸುಗಂಧವಿಲ್ಲದ ಕುಸುಮಕ್ಕಿಂತ ಸುಗಂಧವಿರುವ ಬೇರು ಮೇಲಯ್ಯ
ಕಲಿಸದ ಸರ್ವಜ್ಞನಿಗಿಂತ ಕಲಿಸುವ ಅಲ್ಪಜ್ಞ ಮೇಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಅನ್ಯರಿಂದ ಪೂಜೆ ಮಾಡಿಸುವ ಧನಪತಿಗಿಂತ
ತಾನೇ ಪೂಜಿಸುವ ದೀನ ಭಕ್ತ ಮೇಲಯ್ಯ!

## ೧೭೧

ಮೀನಿನ ನಾತಕ್ಕೆ ಒಗ್ಗಿದ ಮೂಗು
ಮಲ್ಲಿಗೆಯ ಸೌರಭವ ಸಹಿಸದಯ್ಯ;

ಮಾರುಕಟ್ಟೆಯ ಸದ್ದಿಗೆ ಒಗ್ಗಿದ ಕಿವಿಗಳು
ವೀಣೆಯ ಸುಸ್ವರ ಮೆಚ್ಚವಯ್ಯ;
ಹೆಂಡದ ಹುಳಿಗೆ ಒಗ್ಗಿದ ನಾಲಗೆ
ಹಾಲಿನ ಸವಿಗೆ ಎಳಸದಯ್ಯ;
ಹಂದಿಯ ಕುರೂಪಕ್ಕೆ ಒಗ್ಗಿದ ಕಣ್ಣುಗಳು
ಪದ್ಮಿನಿಯ ಸೊಬಗ ಬಯಸವಯ್ಯ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಮತದ ಕಚ್ಚಾಟಗಳಿಗೆ ಒಗ್ಗಿದ ಮನುಜರು
ಧರ್ಮದ ಔದಾರ್ಯ ಒಲಿಯರಯ್ಯ!

೧೭೨

'ಕತ್ತಲೆಯನ್ನೋಡಿಸಲು
ಬಂದೂಕು ಏಕಣ್ಣ?
ಒಂದು ದೀಪ ಸಾಕಣ್ಣ,
'ಜ್ಯೋತಿಷಾಂ ಜ್ಯೋತಿ'
ಎಂದ ಸ್ವತಂತ್ರಧೀರ ಸಿದ್ಧೇಶ್ವರ

೧೭೩

ಮುಟ್ಟುವುದಿರಲಿ, ದಿಟ್ಟಿಸಿದರೆ ಬಾಡುವ ಪಾರಿಜಾತಗಳೆ,
ಮುಡಿವುದಿರಲಿ, ಹಿಡಿದರೆ ಮುದುಡುವ ಮಲ್ಲಿಗೆಗಳೆ,
ಬಿಡಿಸುವುದಿರಲಿ, ಮೂಸಿದರೆ ಮಾಸುವ ಗುಲಾಬಿಗಳೆ,
ಬಗೆಬಗೆಯ ಬಣ್ಣಗಳ ತರತರದ ಹೂವುಗಳೆ,
ಕೋಮಲತೆ, ಕಮನೀಯತೆ, ಕಂಪುಗಳ ಸಂಗಮಗಳೆ,
ಬಣ್ಣಗಳ ಬಯಲಾಟಕ್ಕೆ ಸಿರಿರಂಗಗಳೆ,
ಇಳೆಯ ಎದೆಯ ಆನಂದದ ತರಂಗಗಳೆ,
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯ
        ಗೆಲವಿನ ಬಾವುಟಗಳೆ,
        ಚೆಲುವಿನ ದೀವಟಿಗಳೆ!

೧೭೪

ಯಾವುದರ ಬಗೆಗೂ
ಕೊನೆಯ ಮಾತನ್ನು

ಇನ್ನು ಯಾರೂ ಹೇಳಿಲ್ಲ;
ವಿಶ್ವದ ಎಲ್ಲ ರಹಸ್ಯಗಳನ್ನು
ಇನ್ನೂ ಯಾರೂ ತಿಳಿದಿಲ್ಲ:
ವಿಶ್ವದ ಕೊನೆಯ ಅಂಚನ್ನು
ಇನ್ನೂ ಯಾರೂ ಕಂಡಿಲ್ಲ,
ಸ್ವತಂತ್ರಧೀರ ಸಿದ್ಧೇಶ್ವರನ
ಆದಿ ಮಧ್ಯಾಂತಗಳ
ಅರಿಯುವಂತಿಲ್ಲ!

೧೭೫

ಸುರೂಪ ಮೇಲೋ ಸದ್ಗುಣ ಮೇಲೋ?
ಪ್ರತಿಭೆ ಮೇಲೋ ಚಾರಿತ್ರ್ಯ ಮೇಲೋ?
ಕುಲ ಮೇಲೋ ಒಲವು ಮೇಲೋ
ಸಿರಿ ಮೇಲೋ ಶೀಲ ಮೇಲೋ?
ಗುರು ಮೇಲೋ ಶಿಷ್ಯ ಮೇಲೋ?
ಸ್ವತಂತ್ರಧೀರ ಸಿದ್ಧೇಶ್ವರ ಮೇಲೋ?
ಅವನ ನಿಜ ಭಕ್ತ ಮೇಲೋ?

೧೭೬

ಯಾರಿಗೂ ಅಡ್ಡ ಬರದೆ
ಎಲ್ಲರಿಗೂ ಉಸಿರಾಗುವುದು ಗಾಳಿ;
ತುಳಿದರೂ ತಳಮಳಿಸದೆ
ಎಲ್ಲರನ್ನೂ ಹೊತ್ತು, ಎತ್ತಿ ಹಿಡಿವುದು ನೆಲ;
ಒಳ್ಳಿದ ಕೆಡುಕರೆನ್ನದೆ ಎಲ್ಲರ ನೀರಡಿಕೆ ಕಳೆವುದು ನೀರು;
ಬಲ್ಲಿದ-ಬಡವರೆನ್ನದೆ ಎಲ್ಲರ ಅನ್ನ ಬೇಯಿಸುವುದು ಬೆಂಕಿ,
ಅರುಂಧತಿಯಿರಲಿ, ಧೂಮಕೇತುವಿರಲಿ
ಎಲ್ಲರಿಗೂ ಆಶ್ರಯ ನೀಡುವುದು ಆಕಾಶ,
ನೀನೇಕೆ ನಿಜಭಕ್ತರನ್ನೇ ಬೇಡುವೆ
ಸ್ವತಂತ್ರಧೀರ ಸಿದ್ಧೇಶ್ವರ?

೧೭೭

ಹಿಡಿಹೂ ಮುಡಿದ ಬೆಡಗಿ ಬೀಗುತ್ತಾಳೆ
ಹೊರಲಾರದಷ್ಟು ಹೂ ಮುಡಿದ ಬಳ್ಳಿ ಬೀಗುವುದಿಲ್ಲ;
ಎರಡು ಹಣ್ಣು ತಂದ, ತಿಂದ ಭೋಗಿ ಬೀಗುತ್ತಾನೆ,

ಮೈತುಂಬ ಹಣ್ಣು ಹೊತ್ತ ಮರ ಬೀಗುವುದಿಲ್ಲ
ಹಣೆಗೆ ಬೊಟ್ಟೊಂದನಿಟ್ಟ ಆಸ್ತಿಕ ಬೀಗುತ್ತಾನೆ,
ಮೈಯೆಲ್ಲ ಗಂಧವಾದ ಚಂದನ ಬೀಗುವುದಿಲ್ಲ;
ಮನೆಗಿಷ್ಟು ಬೆಳಕು ಕೊಟ್ಟ ಹಣತೆ ಬೀಗುತ್ತದೆ,
ಭುವಿಗೆಲ್ಲ ಬೆಳಕು ಕೊಡುವ ಭಾಸ್ಕರ ಬೀಗುವುದಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೊಂದು ಗುಡಿ ಕಟ್ಟಿಸಿದ ಶ್ರೀಮಂತ ಬೀಗುತ್ತಾನೆ,
ಒಡಲೇ ಗುಡಿಯಾದ ಭಕ್ತ ಬೀಗುವುದಿಲ್ಲ!

೧೭೮

ಪ್ರೀತಿಯಿದ್ದರೆ ಬೈಗುಳಗಳೂ ಬಾವನ್ನ,
ಇಲ್ಲದಿರೆ ಸವಿ ಮಾತುಗಳೂ ತುರುಚೆಯಯ್ಯಾ:
ನಡೆ ಶುದ್ಧವಿದ್ದರೆ ನಡೆಯೇ ನಿಜೋಪದೇಶ,
ಇಲ್ಲದಿರೆ ನುಡಿಯು ದೇವರಿಲ್ಲದ ಗುಡಿಯಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಕ್ತಿಯಿರೆ ಹುಲ್ಲಿನದಳವೂ ತ್ರಿದಳ ನಿನಗೆ,
ಇಲ್ಲದಿರೆ ವಜ್ರಕಿರೀಟವೂ ಕಂಟಕಕಿರೀಟವಯ್ಯ!

೧೭೯

ನೀನೇನೋ ನಿನ್ನ ಸಕಲ ಸೃಷ್ಟಿಗೆ
ವಾರಸದಾರನನ್ನಾಗಿ ಮಾಡಿದೆ ನನ್ನನ್ನು,
ನಾನೇ ಅಲ್ಪನಾಗ ಬಯಸಿ
ಮನೆಯೊಂದಕ್ಕೆ ಸೀಮಿತನಾದೆನಯ್ಯ;
ನೀನೇನೋ ನಿನ್ನನ್ನೇ ಮಡಗಿಕೊಳ್ಳಬಲ್ಲ ಮನವನಿತ್ತೆ,
ನಾನೇ ವಿಷಯಗಳ ಹಸಬಿ ಮಾಡಿಕೊಂಡೆನಯ್ಯ ಅದನ್ನು;
ನನಗೆ ದೊರೆತ ಸಿರಿಯ ಗುರುತಿಸಲಾಗದೆ
ನಿನ್ನ ಮೇಲೆ ಹರಿಹಾಯುತ್ತಿಹೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೧೮೦

ಎಂದೂ ತೃಪ್ತನಾಗದ ಆಶೆಬುರುಕ
ಸಾಮ್ರಾಜ್ಯನಿದ್ದೂ ದರಿದ್ರ!

ಶಿವ ಕೊಟ್ಟಷ್ಟರಲ್ಲಿ ಸಂತುಷ್ಟ
ಕಡು ಬಡವನಿದ್ದೂ ಸಿರಿಯ ಸಮುದ್ರ;
ಏನನ್ನಾದರೂ ಯಾಚಿಸಿದೆಯೋ
ನಿನ್ನಂಥ ಬಡವ ನೀನೇ!
ಏನನ್ನೂ ಆಶಿಸದಿದ್ದರೆ
ನಿನ್ನಂಥ ಸಿರಿವಂತ ನೀನೇ!
ಸ್ವತಂತ್ರಧೀರ ಸಿದ್ಧೇಶ್ವರನಿಗೆ ಪ್ರಿಯ ನೀನೇ!

೧೮೧

ಎಲೆಯುದುರಿ ಬರಿಮೈಯಾಗಿದ್ದರೂ
ಮತ್ತೆ ಚಿಗುರುವ ವಿಶ್ವಾಸ ಬೋಳುಮರಗಳಿಗೆ;
ಬಿಸಿಲಿನ ಬೇಗೆಯಿಂದ ಬತ್ತಿ ಹೋಗಿದ್ದರೂ
ಮತ್ತೆ ತುಂಬಿ ಹರಿವ ಆಸೆ ತೊರೆಗಳಿಗೆ;
ರೆಕ್ಕೆಗಳು ಉದುರುತ್ತಿದ್ದರೂ
ಮತ್ತೆ ಪಕ್ಕ ಪಡೆವ ನಂಬಿಕೆ ಪಕ್ಷಿಗಳಿಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಇದುವರೆಗೆ ನಿನ್ನ ಕಾಣದಿದ್ದರೂ
ಒಮ್ಮೆಲ್ಲೊಮ್ಮೆ ಕಾಣುವಾಸೆ ಈ ಅಕ್ಷಿಗಳಿಗೆ!

೧೮೨

ಬಳ್ಳಿಗಳೆ, ಕುಸುಮಗಳೇ ನಿಮ್ಮ ಕನಸುಗಳೆ?
ಮರಗಳೆ, ಸುಫಲಗಳೇ ನಿಮ್ಮ ಸ್ವಪ್ನಗಳೆ?
ನಕ್ಷತ್ರಗಳೆ, ಕಿರಣಗಳೇ ನಿಮ್ಮ ಕನಸುಗಳೆ?
ತೊರೆಗಳೆ, ತೆರೆಗಳೇ ನಿಮ್ಮ ತರಳರೆ?
ಗಿರಿಗಳೆ, ಶಿಖರಗಳೇ ನಿಮ್ಮ ಸಂತಾನವೆ?
ನೋಡಿದಷ್ಟೂ ನವೋನವ
ಏನಿದೈಸಿರಿ ಶಿವ ಶಿವ!
ಸ್ವತಂತ್ರಧೀರ ಸಿದ್ಧೇಶ್ವರನೆಂದ
ಪುನರ್ನವ ಪುನರ್ನವ.

೧೮೩

ಯಾರೋ ಇದ್ದಾಗ
ಯಾರೂ ಇಲ್ಲವೆಂದೆನಿಸುತ್ತದೆ,
ಯಾರೂ ಇಲ್ಲದಾಗ

ಯಾರೋ ಇದ್ದಂತೆನಿಸುತ್ತದೆ,
ಹೌದು, ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರಿಲ್ಲದಿದ್ದರೂ ನೀನಿಲ್ಲವೆ ನನಗೆ?

### ೧೮೪

ಧರ್ಮಗುರುಗಳ ಆಜ್ಞೆಗಳೆಲ್ಲ
ಧರ್ಮಪರವಾಗಿರುವುದಿಲ್ಲ;
ನ್ಯಾಯಮೂರ್ತಿಗಳ ತೀರ್ಪುಗಳೆಲ್ಲ
ನ್ಯಾಯಪರವಾಗಿರುವುದಿಲ್ಲ;
ಜನನಾಯಕರ ಕೃತಿಗಳೆಲ್ಲ
ಜನಪರವಾಗಿರುವುದಿಲ್ಲ;
ಸಾಹಿತಿಗಳ ರಚನೆಗಳೆಲ್ಲ
ಹಿತಕರವಾಗಿರುವುದಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬೊಗಳೆ ಭಕ್ತರ ದಾನಪೂಜೆಗಳೆಲ್ಲ
ಭಕ್ತಿಪರವಾಗಿರುವುದಿಲ್ಲ!

### ೧೮೫

ದೇಶ ವಿದೇಶಗಳ ವಿವಾಹ ವಿಧಿಗಳು ವಿವಿಧ-
ವಿವಾಹೋದ್ದೇಶ ಒಂದೇ;
ಪೂಜಾ ಪದ್ಧತಿಗಳು ಭಿನ್ನ ಭಿನ್ನ-
ಪೂಜೋದ್ದೇಶ ಒಂದೇ;
ನಾನಾ ಕಲೆ-ವಿದ್ಯೆ-ವಾದ್ಯಗಳು-
ಉದ್ದೇಶ ಮಾತ್ರ ಒಂದೇ;
ನಿನಗೆ ದೇಶಕ್ಕೊಂದು ಭಾಷೆಗೊಂದು ಹೆಸರು-
ನೀನು ಮಾತ್ರ ಒಬ್ಬನೇ,
ಸ್ವತಂತ್ರಧೀರ ಸಿದ್ಧೇಶ್ವರಾ!

### ೧೮೬

ಅಂಬಾರಿಯಲ್ಲಿ ಕುಳಿತವನು
ಆನೆಯನ್ನು ರೇಗಿಸಲಾಗದು;
ಸ್ವತಂತ್ರಧೀರ ಸಿದ್ಧೇಶ್ವರನಿತ್ತ
ಒಡಲ ಹಡಗ ಕುಳಿತವರು
ಅವನ ಕಡೆಗಣಿಸಲಾಗದು!

## ೧೮೭

ಕಾಯಕ ಮಾಡುವ ಕೈಗಳೇ
ಕಾಮಧೇನು ಕಲ್ಪ ವೃಕ್ಷಗಳು;
ಕಾಯಕ ಮಗ್ನ ಮನವೇ
ಕಾಶಿ ರಾಮೇಶ್ವರ!
ಕಾಯಕದ ಅರಿವೇ ಗುರು,
ಕಾಯಕರತಿಯೇ ಲಿಂಗ,
ಕಾಯಕದ ಧಾವತಿಯೇ ಜಂಗಮ!
ಸ್ವತಂತ್ರಧೀರ ಸಿದ್ಧೇಶ್ವರನಿಗೆ
ಕಾಯಕದ ಉಪಕರಣಗಳೇ ಪೂಜಾಪರಿಕರಗಳು,
ಕಾಯಕ ನಿರ್ವಹಣೆಯೇ ಅರ್ಚನೆ!

## ೧೮೮

ಮೃಗನಾಭಿಯಲ್ಲಿ ಕಸ್ತೂರಿ-
ನಿನ್ನ ನಾಭಿಯಲ್ಲಿ?
ದನಗಳ ಹೊಟ್ಟೆಯಲ್ಲಿ ಗೋರೋಚನ,
ನಿನ್ನ ಹೊಟ್ಟೆಯಲ್ಲಿ?
ಹಾವಿನ ತಲೆಯಲ್ಲಿ ಹೊಳೆವ ರತ್ನ,
ನಿನ್ನ ತಲೆಯಲ್ಲಿ?
ಕುಂಭಿಯ ಕುಂಭದಲ್ಲಿ ಮುತ್ತುಗಳು-
ನಿನ್ನ ಕುಂಭದಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರನ
ಕಿಂಕರರಲ್ಲಿ ಶಂಕರ-
ನಿನ್ನಲ್ಲಿ?

## ೧೮೯

ಮಾರಯ್ಯನ ಆಯ್ದಕ್ಕಿಗೆ
ಸರಿಯೆ ಬಸುಮತಿ ಅಕ್ಕಿ?
ಮಾರಯ್ಯನ ಮೋಳಿಗೆಗೆ
ಸರಿಯೆ ಶ್ರೀಗಂಧದ ಹೊರೆ?
ಹರಳಯ್ಯನ ಚೆಮ್ಮಾವುಗೆಗೆ
ಸರಿಯೆ ಹೊನ್ನಾವುಗೆ?

ಕೇತಯ್ಯನ ಬಿದಿರ ಬುಟ್ಟಿಗೆ
ಸರಿಯೆ ಬಂಗಾರದ ಗಟ್ಟಿ?
ರೆಮ್ಮವ್ವೆಯ ರಾಟಿ ನೂಲಿಗೆ
ಸರಿಯೆ ರೇಷ್ಮೆ ನೂಲು?
ಸ್ವತಂತ್ರಧೀರ ಸಿದ್ಧೇಶ್ವರಾ,
ಶರಣರ ಸತ್ಯಶುದ್ಧ ಕಾಯಕಕ್ಕೆ
ಸರಿಯೆ ಗಿಯ್ಲಾಲಾಸ ಕೈಲಾಸ?

೧೯೦

ಶಬ್ದಗಳಿಂದಲೇ ತುಂಬಿದ ನಿಘಂಟು
ಸ್ವಯಂ ಮಾತಾಡ ಬಲ್ಲುದೇನಯ್ಯ?
ಗ್ರಂಥ ರತ್ನಗಳಿಂದಲೇ ತುಂಬಿದ ಬೀರು
ಸ್ವತಃ ಬೋಧೆ ಬೀರ ಬಲ್ಲುದೇನಯ್ಯ?
ಪ್ರಸ್ಥಾನತ್ರಯಿಯಿಂದ ತುಂಬಿದ ತಲೆ
ತನಗೆ ತಾನೇ ತಾರಿಸ ಬಲ್ಲುದೇನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ?

೧೯೧

ದೇಶಕ್ಕಾಗಿ ದುಡಿಯುವವರು ಯಾರೇ ಇರಲಿ
ವಂದ್ಯರೆನಗೆ;
ದುಡಿಯದೆ ಪಡೆಯುವವರು ಯಾರೇ ಇರಲಿ,
ವಂಧ್ಯರೆನಗೆ;
ನಿನ್ನ ಮಕ್ಕಳಲ್ಲಿ ನಿನ್ನನ್ನು ಕಾಣುವವರಾರೇ ಇರಲಿ–
ಪರಮಾರಾಧ್ಯರೆನಗೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೯೨

ಈ ನಾಗಲಿಂಗ ವೃಕ್ಷದ
ಬೊಡ್ಡೆಯೇ ಗುಡಿ–
ಕಣ್ಗೆಡ್ಡವಾದ ಗುಡಿ!
ನೂರು ನೂರು ಹೂವುಗಳು,
ಒಳಗೆ ಲಿಂಗಗಳು, ಹಾವುಗಳು!

ಒಂದೊಂದು ಹೂವಿನಲ್ಲಿಯೂ ಲಿಂಗಾರ್ಚನೆ-
ನನಗೆ ಸಹಸ್ರಲಿಂಗ ದರ್ಶನ!
ಗುಡಿಯ ಒಳಗೆ ಅಲ್ಲ,
ಹೊರಗೆ ನಡೆದ ಪೂಜೆ ನೋಡಿ
ಹೊಂಪುಳಿಗೊಂಡೆನಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೧೯೩

ಯಾರ ಉದ್ಧಾರಕ್ಕಾಗಿ
ಯಾರಿಗೆ ನಿರವಿಸುವಿಯೋ,
ನೀನೇ ಬಲ್ಲೆ;
ಯಾವ ಭಾವಪರಿಪಾಕಕ್ಕಾಗಿ
ಯಾವ ನೋವು ನೀಡುವಿಯೋ,
ನೀನೇ ಬಲ್ಲೆ;
ಯಾವ ಒಳಿತಿನ ಅರಳಿಕೆಗಾಗಿ
ಯಾವ ಕೆಡುಕು ಕಳಿಸುವಿಯೋ,
ನೀನೇ ಬಲ್ಲೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೆಡುಕು ಒಳಿತಾಗುವ,
ಒಳಿತು ಕೆಡುಕಾಗುವ
ಆಟದ ಅಂತರಾರ್ಥವೇನು?
ನೀನೇ ಬಲ್ಲೆ!

೧೯೪

ಅಂಬಿಗರು ಅಂಬುಧಿಯಲ್ಲಿ ಸತ್ತರೆ
ಉಂಬಳಿದಾರರು ಮೆತ್ತೆಯ ಮೇಲೆ ಸಾಯುತ್ತಾರೆ
ಸಾವು ಒಂದೇ!
ಬಡವರು ದುಡಿ ದುಡಿದು ನೊಂದರೆ
ಒಡೆಯರು ಹಣ ಗಿಡಿ ಗಿಡಿದು ನೋಯುತ್ತಾರೆ
ನೋವು ಒಂದೇ!
ಹಳ್ಳಿಗರು ಕೈಪರೆಗೆ ಕುಣಿದರೆ
ನಗರ ನಿವಾಸಿಗಳು ವಾದ್ಯವೃಂದಕ್ಕೆ ಕುಣಿಯುತ್ತಾರೆ
ಆಸಕ್ತಿ ಒಂದೇ!

ಸಿರಿವಂತರು ಮುತ್ತುರತ್ನಗಳೊಡನೆ ಅರ್ಚಿಸಿದರೆ
ಸ್ವತಂತ್ರಧೀರ ಸಿದ್ಧೇಶ್ವರನ ಬಡಭಕ್ತರು
ಪತ್ರ ತೋಯಗಳಿಂದೆ ಪೂಜಿಸುತ್ತಾರೆ
ಭಕ್ತಿ ಒಂದೇಯೆ?

೧೯೫

ಹಳ್ಳಿಯಲ್ಲಿ ಹುಟ್ಟಿ ಬೆಳೆದೂ
ಹಳ್ಳಿಯಲ್ಲಿ ಉಳಿಯಲಿಲ್ಲ;
ನಗರದಲ್ಲಿ ನೆಲೆಸಿಯೂ
ನಗರ ಯುಕ್ತಿಗಳ ಕಲಿಯಲಿಲ್ಲ!
ಅತ್ತ ಇಲ್ಲ ಇತ್ತ ಇಲ್ಲ,
ಎತ್ತಲೂ ಸಲ್ಲಲಿಲ್ಲವಯ್ಯ!
ಎತ್ತಿಕೋ ನೀನೆ.
ಕರ್ತೃ ಸ್ವತಂತ್ರಧೀರ ಸಿದ್ಧೇಶ್ವರಾ!

೧೯೬

ಬಂಧನಗಳಲ್ಲಿ ಪ್ರೇಮ ಬಂಧನ ಗಟ್ಟಿ
ಇಂಧನಗಳಲ್ಲಿ ಸೌರ ಇಂಧನ ಗಟ್ಟಿ;
ಬಂಧುಗಳಲ್ಲಿ ಆಪದ್ಬಂಧುಗಳು ಗಟ್ಟಿ;
ಸಂವಾದಗಳಲ್ಲಿ ಹೃದಯ ಸಂವಾದ ಗಟ್ಟಿ.
ಸಂವಿತ್ಪ್ರದರಲ್ಲಿ ಸ್ವತಂತ್ರಧೀರ ಸಿದ್ಧೇಶ್ವರ ಗಟ್ಟಿ!

೧೯೭

ರಂಟೆ ಹೊಡೆದ ಹೊಲದ ಹೆಂಟೆಗಳ ಮೇಲೆ ಮಲಗಿ
ನಡು ಹಗಲಲ್ಲಿಯೇ ಗಡದ್ದಾಗಿ ನಿದ್ರಿಸುತ್ತಾನೆ ರೈತಕುಮಾರ;
ಹವಾನಿಯಂತ್ರಿತ ಕೋಣೆಯಲ್ಲಿ ಹತ್ತಂಗುಲ ಮೆತ್ತೆಯ ಮೇಲೆ
ಮಲಗಿ
'ನಿದ್ರೆ' ನಿದ್ರೆ, ಎನ್ನುತ್ತಾನೆ ಸಾಹುಕಾರರ ಕುಮಾರ!
ಎಡಗೈಯನ್ನೇ ತಟ್ಟೆ ಮಾಡಿ, ಒಣರೊಟ್ಟಿ ಚಟ್ನಿ ತಿಂದು
ತತ್ರಾಣಿಯ ನೀರು ಕುಡಿದು ತೃಪ್ತಳಾಗುತ್ತಾಳೆ ಕೃಷಿಕಕುಮಾರಿ;
ಬೆಣ್ಣೆ ಬ್ರೆಡ್ಡು ತಿಂದು ಬಾದಾಮಿ ಹಾಲು ಕುಡಿದು
ಮಂಜುಕನೆ, ಹಲ್ವಾನುಂಗಿ ಹೊಟ್ಟೆ ನೋವೆನ್ನುತ್ತಾಳೆ
ಶ್ರೀಮಂತಕುಮಾರಿ!

ಅಮೃತದ ಆರೋಗಣೆ ಮಾಡುವ ಕಳ್ಳಭಕ್ತರ ಕಡೆಗಣಿಸಿ
ಬೀದಿಪಾಲಾಗಿರಲಿ, ಮೋಸ ವಂಚನೆಯಿಲ್ಲದ
ನಿಜಭಕ್ತಿಯ ಬಡವಗೊಲಿಯುತ್ತಾನೆ-
ಸ್ವತಂತ್ರಧೀರ ಸಿದ್ಧೇಶ್ವರ !

## ೧೯೮

ಹುಳುಕುಗಳನ್ನೇ ಹುಡುಕುವ ಕೊಳಕು ಮನವೆ,
ಹುಳುಕುಗಳ ಹಿಂದಿರುವ ಬೆಳಕು ಕಾಣಲು ಕಲಿ;
ಒಡಕುಗಳನ್ನೇ ಬಿತ್ತುವ ಕೆಡುಕು ಮನವೆ,
ಒಲವಿನ ಸಸಿಗಳನ್ನು ನೆಡುವ ಕಲೆಯ ಕಲಿ;
ಸೇಡಿನ ಸುಡುಗಾಡನ್ನೇ ಹುಡುಕುವ ಮನವೆ,
ಕ್ಷಮೆಯ ಶಮಿಪತ್ರಿ ಹಂಚುವುದನ್ನು ಕಲಿ;
ಸ್ವತಂತ್ರಧೀರ ಸಿದ್ಧೇಶ್ವರ ಕೊಡದಿದ್ದುದ್ದನ್ನೇ ಯಾದಿಸುವ
ಕೃತಘ್ನ ಮನವೆ,
ಅವನು ಕೊಟ್ಟಿರುವುದನ್ನೂ ಪಟ್ಟಿ ಮಾಡಲು ಕಲಿ !

## ೧೯೯

ಮುರುಕು ಮನೆಯಲ್ಲಿ ಮಿಂಚುವ
ಮುಗ್ಧ ಮಂದಹಾಸ
ನಿನ್ನ ನಿಜ ನಿವಾಸವಯ್ಯ!
ಸಿರಿಮನೆಗಳಲ್ಲಿ ಸುಳಿವ
ಸುಳ್ಳುನಗೆ
ನಗೆಯ ಆಭಾಸವಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೦೦

ಕಂದರ ಕನಸುಗಳಲ್ಲಿ
ಕಾಮನ ಬಿಲ್ಲುಗಳು ಕುಣಿಯವೇನಯ್ಯ?
ಅಗಲಿದವರ ಕನಸುಗಳಲ್ಲಿ
ಜಕ್ಕವಕ್ಕಿಗಳು ನಲಿಯವೇನಯ್ಯ?
ಜಿಪುಣರ ಕನಸುಗಳಲ್ಲಿ
ಸಾಲೋಮನ್ನನ ಬೊಕ್ಕಸಗಳು ನರ್ತಿಸವೇನಯ್ಯ?
ಯುದ್ಧ ಲಾಲಸಿಗಳ ಕನಸುಗಳಲ್ಲಿ

ರಕ್ತ ಸಮುದ್ರಗಳು ಭೋರ್ಗರೆಯವೇನಯ್ಯ?
ನಿನ್ನವರ ಕನಸುಗಳಲ್ಲಿ
ನಿನ್ನ ಆಸ್ಯಲಾಸ್ಯವಾಡದೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೦೧

ಹೂತ ಮಾಮರದ ಚೆಲುವು,
ಕಾತ ಹಲಸಿನ ಮರದ ಚೆಲುವು,
ಫಲಿತ ಕಿತ್ತಳೆಮರದ ಚೆಲುವು,
ಕೆರೆ ತೊರೆ ಗಿರಿದರಿ ರವಿ ಶಶಿ ತಾರೆಗಳ ಚೆಲುವು
ತುಂಬುತ್ತಲೇ ಇವೆ ಈ ಕಣ್ಣುಗಳನ್ನು!
ಇನ್ನೂ ತುಂಬಿಲ್ಲವಯ್ಯ ಈ ಕಣ್ಣುಗಳು!
ಎಷ್ಟು ತುಂಬಿದರೂ ತುಂಬದ
ಈ ಅಂಬಕಗಳನ್ನಿತ್ತ ನಿನಗೆ
ತುಂಬಿದೆದೆಯಿಂದ ತಲೆಬಾಗುವೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೦೨

ಕುರುಡುತನಗಳಲ್ಲೆಲ್ಲ
ಎದೆಗುರುಡತನ ಅಸಹ್ಯವಯ್ಯ,
ಕಿವುಡುತನಗಳಲ್ಲೆಲ್ಲ
ಎದೆಗಿವುಡುತನ ಅಸಡ್ಡಾಳವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬರಡುತನಗಳಲ್ಲೆಲ್ಲ
ಬಗೆಯ ಬರಡುತನ ಘೋರವಯ್ಯ!

## ೨೦೩

ಅರಣ್ಯಗಳೇ ಉಳಿದಿಲ್ಲ,
ಗುರುಕುಲಗಳ ಮಾತೇಕೆ?
ಮಾನಸವೇ ಉಳಿದಿಲ್ಲ,
ಸುಪ್ರಮಾನಸದ ಮಾತೇಕೆ?
ರಸಿಕತೆಯೇ ಉಳಿದಿಲ್ಲ,

ರಸ ಮೀಮಾಂಸೆಯ ಮಾತೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ.
ನನ್ನಿಗರೇ ಉಳಿದಿಲ್ಲ,
ನಿನ್ನವರ ಮಾತೇಕೆ?

೨೦೪

ಗಡಿಯಾರದ ಕಾರಖಾನೆಯಲ್ಲಿದ್ದು ಫಲವೇನು–
ಸಮಯನಿಷ್ಠೆ ಸಾಧಿಸದನ್ನಕ್ಕ?
ಪುಸ್ತಕ ಭಂಡಾರಿಯಾಗಿದ್ದು ಫಲವೇನು–
ಮಸ್ತಕದಲ್ಲಿ ಗ್ರಂಥಸಾರ ಸೇರದನ್ನಕ್ಕ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಅಂಗದ ಮೇಲೆ ಧರಿಸಿ ಫಲವೇನು,
ಮನ ಲಿಂಗವಾಗದನ್ನಕ್ಕ?

೨೦೫

ಸರಿಯಿದ್ದರೆ
ಸಿಹಿಯೆಷ್ಟು ಸಂಸಾರದಲ್ಲಿ?
ಸರಿಯಿರದಿದ್ದರೆ
ಕಹಿಯೆಷ್ಟು ಸಂಸಾರದಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸರಿಯೊಮ್ಮೆ, ಬಿರಿಯೊಮ್ಮೆ–
ಸಿಹಿ–ಕಹಿಯೆಷ್ಟು ಸಂಸಾರದಲ್ಲಿ?

೨೦೬

ಕಡಲು ತಡಿಯನ್ನೇ ಒಡೆದು ಮೇಲ್ವಾಯ್ದರೆ
ತಡೆವರಾರಯ್ಯ?
ಹಿಮಾದ್ರಿ ಹೊರಳಿ ಬಿದ್ದುಬಿಟ್ಟರೆ
ಎತ್ತಿ ನಿಲ್ಲಿಸುವವರಾರಯ್ಯ?
ಸೌರವ್ಯೂಹವೇ ಕಳಚಿ ಬಿದ್ದರೆ
ಉಳಿಸಿಕೊಳ್ಳುವರಾರಯ್ಯ?
ಸ್ವತಂತ್ರಧೀರ ಸಿದ್ಧೇಶ್ವರನೇ ಕೋಪಿಸಿದರೆ
ಕಾಪಾಡುವರಾರಯ್ಯ?

## ೨೦೭

ನಿನ್ನನ್ನು ಬೆರೆವ ಪರಿ ತಿಳಿಸುವ
ಅಧ್ಯಾತ್ಮ ವಿದ್ಯೆಗಿಂತ
ನಿನ್ನವರ ಬೆರೆಯಲು ಕಲಿಸುವ
ಜೀವನಕಲೆ ಪ್ರಿಯನಯ್ಯ, ನನಗೆ;
ನಿನ್ನ ಗುಣಗಾನ ಕಲಿಸುವ
ಮತ ಸಂಹಿತೆಗಳಿಗಿಂತ
ನಿನ್ನವರ ಗುಣಗ್ರಹಣ ಕಲಿಸುವ
ಸ್ನೇಹಸಂಹಿತೆ ಪ್ರಿಯವಯ್ಯ, ನನಗೆ;
ಅಸೀಮನಾದ ನಿನಗೆ ಸೀಮೆ ಕಲ್ಪಿಸುವ
ಸ್ತೋತ್ರ ಸೂತ್ರಗಳಿಗಿಂತ
ಸೀಮಿತರ ಅಸೀಮತೆ ತೋರುವ
ಪ್ರೀತಿ-ಸೂತ್ರ ಪ್ರಿಯವಯ್ಯ, ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಿವಾಸಗಳೆನಿಸಿರುವ
ಕಲ್ಲ ಗುಡಿಗಳಿಗಿಂತ
ನಡೆವ ಗುಡಿಗಳೆನಿಸಿದ
ಜೀವಿಗಳೇ ಪ್ರಿಯವಯ್ಯ, ನನಗೆ!

## ೨೦೮

ಚೆಲುವೆಯರು ಕಣ್ಣಿಗೆ ಬಿದ್ದಾಗ
ಎರಡು ಕಣ್ಣು ಇನ್ನೂರಾಗುತ್ತವೆ;
ದುಃಖಿತರು ದಲಿತರು ಕಂಡರೋ-
ಅವೇ ಕಣ್ಣು ಕುರುಡಾಗಿ ಬಿಡುತ್ತವೆ!
ಬಳೆಗಳ ಇಂಚರ ಕೇಳಿದಾಗ
ಎರಡು ಕಿವಿ ಇನ್ನೂರು ಕಿವಿಗಳಾಗುತ್ತವೆ;
ಅನಾಥರ ಆಕ್ರಂದನ ಕೇಳಿದಾಗ
ಅವೇ ಕಿವಿಗಳು ಕಿವುಡಾಗಿ ಬಿಡುತ್ತವೆ;
ಆತ್ಮಸ್ತುತಿ ಆರಂಭಿಸಿದಾಗ
ಒಂದು ನಾಲಗೆ ನೂರು ನಾಲಗೆಗಳಾಗುತ್ತವೆ,
ಅನ್ಯರ ಗುಣ ಮನ್ನಿಸಬೇಕಾಗಿ ಬಂದಾಗ
ಅದೇ ಮೂಕವಾಗಿಬಿಡುತ್ತದೆ ನೋಡಾ.
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೦೯

ಎಲ್ಲರನ್ನೂ ಕಿರಿಯರನ್ನಾಗಿಸಿ
ತಾವು ಹಿರಿಯರಾದವರುಂಟು;
ಎಲ್ಲರನ್ನೂ ಹಿರಿಯರಾಗಿಸುತ್ತ
ತಾವೂ ಹಿರಿಯರಾದವರೂ ಉಂಟು.
ಆದರೆ,
ಎಲ್ಲರನ್ನೂ ಹಿರಿಯರನ್ನಾಗಿಸಿ,
ತನ್ನನ್ನು ಕಿರಿಯನನ್ನಾಗಿಸಿಕೊಂಡ
ಬಸವಣ್ಣನಂಥವರು ಎಲ್ಲಿಹರು ತೋರಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೧೦

ಊಸರವಳ್ಳಿಯ ಬಣ್ಣಗಳನ್ನು ಎಣಿಸುವವನೆ–
ನಿನ್ನ ಮನದ ಬಣ್ಣಗಳನ್ನು ಮೊದಲು ಎಣಿಸು;
ಅನ್ಯರ ತಪ್ಪುಗಳ ಲೆಕ್ಕವಿಡುವವನೆ–
ನಿನ್ನ ತಪ್ಪುಗಳ ಲೆಕ್ಕ ಮೊದಲು ಮಾಡು;
ನೀನು ಮಾಡಿದ ಉಪಕಾರಗಳ ಯಾದಿ ಇಡುವವನೆ,
ನೀ ಮಾಡಿದ ಅಪಕಾರಗಳ ಪಟ್ಟಿ ಮೊದಲು ಮಾಡು;
ಸ್ವತಂತ್ರಧೀರ ಸಿದ್ಧೇಶ್ವರ ನಿನ್ನ ಪರುಕಿಸುವುದು
ನಿನ್ನ ಕೃತಿಗಳಿಂದ, ಅನ್ಯರ ನಿತ್ಯಕೃತಿಗಳಿಂದಲ್ಲ!

## ೨೧೧

ಒಂದು ಒಳ್ಳೆಯ ಮಾತು
ಒಂದು ಸೈನ್ಯ ಸಾಧಿಸಲಾಗದುದ ಸಾಧಿಸಬಹುದು;
ಆದರೆ ಒಳ್ಳೆಯ ಮಾತುಗಳಿಗೂ ಬರವೀಗ!
ಒಳ್ಳೆಯ ಕೃತಿಗಳ ಮಾತೇಕೆ?
ಕುಳ್ಳರ, ಸುಳ್ಳರ, ಕಳ್ಳರ ಕೈಯಲ್ಲಿ ಸಿಕ್ಕು
ಒಳ್ಳೆಯ ಮಾತುಗಳು ಒದ್ದಾಡುತ್ತಲಿವೆ!
ಒಳ್ಳೆಯರೇ ಒಳ್ಳೆಯ ಮಾತಗಳನ್ನಾಡುವಂತೆ
ಮಾಡಯ್ಯ,
ಖುಲ್ಲರ ಬಾಯಲ್ಲಿರಿಸಿ ಒಳ್ಳೆಯ ಮಾತುಗಳಿಂದಲೇ
ಅಮಾಯಕರ ಕೊಲ್ಲಿಸಬೇಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೧೨

ಒಂದುಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಬಳಿದರೆ
ಎರಡೂ ಕಣ್ಣುಗಳಿಂದ ಸುರಿವುದು ಕಣ್ಣೀರು!
ಭೇದ ಬುದ್ಧಿಯಿಂದ ಸಾಧ್ಯವೇ ಹಿತಸಿದ್ಧಿ?
ಸ್ವತಂತ್ರಧೀರ ಸಿದ್ಧೇಶ್ವರನೊಲಿವುದು
ಸಮದರ್ಶಿಗೆ, ಸಾಮ್ಯಾದರ್ಶಿಗೆ!

೨೧೩

ಮುಂಬೆಳಕು, ಚೆಂಬೆಳಕು, ಹೊಂಬೆಳಕು, ಹೂ-ಬೆಳಕು,
ತುಳುಕಿತೋ ತುಳುಕಿತು ಎಲ್ಲೆಡೆಗೆ ಬೆಳಕು!
ಎಂಥ ದೃಷ್ಟಿ ಸಂಜೀವಿನೀ ಬೆಳಕು,
ಚೈತನ್ಯದಾಯಿನೀ ಬೆಳಕು,
ಹರ್ಷೋತ್ಸಾಹ ಸಂವರ್ಧಿನೀ ಬೆಳಕು!
ನಿನ್ನ ಈ ಬಂಗಾರ ಬೆಳಕಿನಲ್ಲಿ
ನನ್ನ ಮೈಬಣ್ಣದ ಬಗ್ಗೆ ನನಗೇ ಕೌತುಕ,
ನನಗೆ ನಾನೇ ಮೋಹಕ
ಸ್ವತಂತ್ರಧೀರ ಸಿದ್ಧೇಶ್ವರ!

೨೧೪

ಹೂವು ಸುಂದರ- ಆದರೆ ಕಣ್ಣೊಳಗಿನ ಹೂವು!
ಸಕ್ಕರೆ ಸಿಹಿ- ಆದರೆ ಮೂತ್ರದ ಸಕ್ಕರೆ?
ಹುಲ್ಲು ಚೆಂದ- ಆದರೆ ಕಾಂಗ್ರೆಸ್ ಹುಲ್ಲು?
ಎಳೆಯ ಮುಳ್ಳು ಮೃದು, ಆದರೆ ಬಲಿತ ಮುಳ್ಳು?
ಸ್ವತಂತ್ರಧೀರ ಸಿದ್ಧೇಶ್ವರನ ಪೂಜೆಯೊಂದು ಮೋಜು,
ಆದರೆ ಅವನ ಮಕ್ಕಳ ಸೇವೆ?

೨೧೫

ನನ್ನ ಮನೆಯುಳಿದು ನನ್ನದೆಂಬುದೇನೂ ಇಲ್ಲ,
ಆದರೂ ನನ್ನದೇ ಎಂಬೆ ಈ ವಿಶ್ವವೆಲ್ಲ,
ವಿಶ್ವಂಭರ ನನ್ನ ನಲ್ಲ!
ಸ್ವತಂತ್ರಧೀರ ಸಿದ್ಧೇಶ್ವರನಿಗೆ ನನ್ನ ಮನ ಮನೆಯಾಗಿ
ವಿಶ್ವವೆಲ್ಲ ನನ್ನ ವಿಶ್ವ,

ನನ್ನದು ವಿಶ್ವನೀಡ,
ವಿಶ್ವಾಯತನ!

೨೧೬

ಗಂಡನನ್ನುಳಿಸಿದ ಸಾವಿತ್ರಿಯಾಗಿ ಅಭಿನಯಿಸಿ
ತನ್ನ ಗಂಡನನ್ನೇ ಸಾಯಿಸಿದವಳಿಗೇನೆನ್ನಬೇಕಯ್ಯ?
ಕಾಡಿಗೆ ಹೋದ ಸೀತೆಯಾಗಿ ನಟಿಸಿ
ತನ್ನ ಗಂಡನನ್ನೇ ಕಾಡಿಗಟ್ಟಿದವಳಿಗೇನೆನ್ನಬೇಕಯ್ಯ?
ವನವಾಸದಲ್ಲೂ ಪತಿಗಳೊಡನಿದ್ದ ದ್ರೌಪದಿಯ ಪಾತ್ರವಹಿಸಿ
ತನ್ನ ಗಂಡನನ್ನೇ ವನವಾಸಕ್ಕೆ ಕಳಿಸಿದವಳಿಗೇನೆನ್ನಬೇಕಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶರಣ ಸತಿಯೆಂದು ಕೊಚ್ಚಿಕೊಳ್ಳುತ್ತ
ಪರಸ್ತ್ರೀಗಳುಪುವವಗಾವ ಶಿಕ್ಷೆ ವಿಧಿಸಬೇಕಯ್ಯ?

೨೧೭

ಪದ್ಯವೆಂದರೆ ಪಂಪನ ಪದ್ಯವಯ್ಯ;
ಗದ್ಯವೆಂದರೆ ಬಸವಣ್ಣನ ಗದ್ಯವಯ್ಯ;
ರಗಳೆಗಳೆಂದರೆ ಹರಿಹರನ ರಗಳೆಗಳಯ್ಯ;
ಪದಗಳೆಂದರೆ ಪುರಂದರ ಕನಕರ ಪದಗಳಯ್ಯ;
ತ್ರಿಪದಿಗಳೆಂದರೆ ಸರ್ವಜ್ಞನ ತ್ರಿಪದಿಗಳಯ್ಯ;
ಹಾಡುಗಳೆಂದರೆ ಗರತಿಯ ಹಾಡುಗಳಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಕ್ತರೆಂದರೆ ದೀನ ಸೇವಾಸಕ್ತರಯ್ಯ!

೨೧೮

ತಾನುಣ್ಣುವಾಗ ಹಿಗ್ಗು ಹೆಚ್ಚೋ,
ತನ್ನ ಮಗುವಿಗೆ ಉಣ್ಣಿಸುವಾಗ ಹಿಗ್ಗು ಹೆಚ್ಚೋ–ತಾಯಿಗೆ?
ತಾನು ಗೆದ್ದಾಗಿನ ಹಿಗ್ಗು ಹೆಚ್ಚೋ,
ತನ್ನ ಶಿಷ್ಯ ಗೆದ್ದಾಗಿನ ಹಿಗ್ಗು ಹೆಚ್ಚೋ–ಗುರುವಿಗೆ?
ತನಗೆ ಗೌರವ ಬಂದಾಗ ಹಿಗ್ಗು ಹೆಚ್ಚೋ
ತನ್ನ ದೇಶಕ್ಕೆ ಗೌರವ ಬಂದಾಗ ಹೆಚ್ಚೋ– ದೇಶ ಪ್ರೇಮಿಗೆ?
ತಾನು ಜಯಿಸಿದಾಗ ಹಿಗ್ಗು ಹೆಚ್ಚೋ

ತನ್ನ ಭಕ್ತ ಜಯಿಸಿದಾಗ ಹೆಚ್ಚೋ
ಸ್ವತಂತ್ರಧೀರ ಸಿದ್ಧೇಶ್ವರನಿಗೆ?

೨೧೯

ಆ ಯೋಗ ಈ ಯೋಗವೆಂದು
ಯಾಕೆ ಗೋಗರೆವೆ, ಜೀವಿ?
ಜೀವನಯೋಗ ಸಾಲದೆ ನಿನಗೆ?
ಕಷ್ಟ ನಷ್ಟಗಳೊಡನೆಯೇ ಬದುಕುವ ಹಠಯೋಗ
ಪಾಲಿಗೆ ಬಂದ ಕಸಬನ್ನೇ ಕಾಯಕವಾಗಿಸುವ ಕಾಯಕ ಯೋಗ,
ನಿತ್ಯಸತ್ವಸ್ಥನಾಗಿ ಸತ್ಯಶರಣನಾಗುವ ರಾಜಯೋಗ,
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲೆಲ್ಲ
ಶಿವನನ್ನೇ ಕಾಣುವ ಶಿವಯೋಗ ಸಾಲವೆ ನಿನಗೆ?

೨೨೦

ಮನೆಯ ಅಂದವನ್ನು ಮೆಚ್ಚುವವರೇ,
ಬುನಾದಿಯ ಕಲ್ಲುಗಳನ್ನು ಮರೆಯದಿರಿ!
ಮರದ ಹಣ್ಣುಗಳನ್ನು ತಿನ್ನುವವರೇ
ಬುಡದ ಬೇರುಗಳನ್ನು ಮರೆಯದಿರಿ!
ನಟ ನಟಿಯರ ನಟನೆಯನ್ನು ಹೊಗಳುವವರೆ,
ನಾಟಕಕಾರನನ್ನೇ ಮರೆಯದಿರಿ!
ಕವನಗಾಯನಕ್ಕೆ ತಲೆದೂಗುವವರೇ,
ಕವಿಯನ್ನೇ ಮರೆಯದಿರಿ!
ಮಂತ್ರಿ ಪ್ರಧಾನಿಗಳ ವಂದಿ ಮಾಗಧರೆ,
ಅವರನ್ನು ಆರಿಸಿದವರನ್ನು ಮರೆಯದಿರಿ!
ಸ್ವತಂತ್ರಧೀರ ಸಿದ್ಧೇಶ್ವರನ ಹಾಡಿ ಕುಣಿವವರೇ,
ಅವನ ಅನಾಥ ಮಕ್ಕಳನ್ನು ಮರೆಯದಿರಿ!

೨೨೧

ಹಸಿದ ಹೊಟ್ಟೆಯೇ ಹೋಮಕುಂಡ, ಗೆಳೆಯ!
ಅದಕ್ಕೆ ಅಶನ ನೀಡಿದರೆ ಅದೇ ಹವ್ಯ.
ನೀಡುವವನೇ ಹವ್ಯಕ;
ಅದಕ್ಕೆ ನೀರು ನೀಡಿದರೆ
ಅದು ಆಜ್ಯಾಹುತಿ!

ಇಂಥ ಹೋಮ ಮಾಡುವವರಿಗೆ ಹತ್ತಿರ
ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ.

### ೨೨೨

ದಾಸ್ಯದ ಅಮರಜೀವನಕ್ಕಿಂತ
ಸ್ವಾತಂತ್ರ್ಯದ ಒಂದು ಕ್ಷಣ ಮೇಲಯ್ಯ;
ದುಷ್ಟರ ವಿಶಾಲ ಸಾಮ್ರಾಜ್ಯಕ್ಕಿಂತ
ಷೇಕ್ಸ್‌ಪಿಯರ್‌ನ ಸಮಾಧಿಯ ಒಂದಕಣ ಮೇಲಯ್ಯ;
ಕೃಪಣ ಕೋಟ್ಯಾಧೀಶರ ವಜ್ರವೈಢೂರ್ಯಗಳಿಗಿಂತ
ಗಾಂಧೀ ಗುಡಿಸಲಿನ ಗದ್ಯಾಣ ಮೇಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ.
ಜರತಾರೀ ಜಗದ್ಗುರುಗಳ ಆನೆಗಿಂತ
ನಿಜಭಕ್ತರ ಮನೆಯ ಶ್ವಾನ ಮೇಲಯ್ಯ!

### ೨೨೩

ಈ ಘಟದ ಘಟಮ್ ಬಾರಿಸಲು ಬಾರಯ್ಯ;
ಈ ಪ್ರಾಣದ ವೀಣೆ ನುಡಿಸಲು ಬಾರಯ್ಯ;
ಈ ಮನದ ವೇಣು ಊದಲು ಬಾರಯ್ಯ;
ಈ ರಕ್ತಕಣಗಳಲ್ಲಿ ನರ್ತಿಸಲು ಬಾರಯ್ಯ;
ಒಳಗಿರುವವನೇ ಹೊರಗೆದ್ದು ಬಾರಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೨೨೪

ಸ್ಪರ್ಧೆಗಿಳಿಯುವುದೇ ಆದರೆ
ಸತ್ಕಾರ್ಯಗಳ ಸ್ಪರ್ಧೆಗಿಳಿಯಿರೆಂದ
ಪ್ರವಾದಿ ಮಹಮ್ಮದ;
ದುಷ್ಕಾರ್ಯಗಳಿಂದ ಬಿಡುವು ದೊರೆತರೆ ತಾನೆ
ಸತ್ಕಾರ್ಯಗಳತ್ತ ಗಮನ ಹರಿವುದು!
ದುಷ್ಕರ್ಮಗಳ ಬಿಡುವಲ್ಲಿ ಸ್ಪರ್ಧೆ,
ಸತ್ಕಾರ್ಯಗಳ ಹಿಡಿವಲ್ಲಿ ಸ್ಪರ್ಧೆ
ನಡೆಯಲೆಂದಾತ ನಮ್ಮ ಸ್ವತಂತ್ರಧೀರ ಸಿದ್ಧೇಶ್ವರ!

## ೨೨೫

ಮದಹಸ್ತಿ ಕುಸ್ತಿಯಾಡುವುದೆ
        ಕುರಿಯ ಕೂಡ?
ಮೃಗರಾಜ ಮುಷ್ಟಿಯುದ್ಧ ಮಾಡುವನೆ
        ನರಿಯ ಕೂಡ?
ಗರುಡ ಗುದ್ದಾಡುವುದೆ
        ಗರಿಯ ಕೂಡ?
ತೊರೆ ಕಾಳಗಕ್ಕಿಳಿವುದೆ
        ತೆರೆಯ ಕೂಡ?
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತ
ಜಗಳಾಡುವನೆ ಜರೆವರ ಕೂಡ?

## ೨೨೬

ತನ್ನವರು ಅನ್ಯರಾಗುತ್ತಾರೆ,
ಅನ್ಯರು ತನ್ನವರಾಗುತ್ತಾರೆ,
ಮಿತ್ರರು ಶತ್ರುಗಳಾಗುತ್ತಾರೆ,
ಶತ್ರುಗಳು ಮಿತ್ರರಾಗುತ್ತಾರೆ,
ದಾಸರು ಸ್ವತಂತ್ರರಾಗುತ್ತಾರೆ,
ಸ್ವತಂತ್ರರು ದಾಸರಾಗುತ್ತಾರೆ,
ದುಷ್ಟರು ಶಿಷ್ಟರಾಗುತ್ತಾರೆ,
ಶಿಷ್ಟರು ದುಷ್ಟರಾಗುತ್ತಾರೆ,
ಎಂಥ ಚಿತ್ರವಿಚಿತ್ರ ಮಾನವ ಸೃಷ್ಟಿ ನಿನ್ನದಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೨೭

ಚಂದ್ರಮಂಚವಿದ್ದೊಡೇನು–
ಚಂದ್ರಮುಖಿ ಇಲ್ಲದಿದ್ದರೆ?
ಚಂದ್ರಮುಖಿ ಇದ್ದರೇನು–
ಕಾಣಲು ಕಣ್ಣಿಲ್ಲದಿದ್ದರೆ?
ಗಂಧರ್ವಗಾನವಿದ್ದೊಡೇನು–
ಕೇಳಲು ಕಿವಿ ಇಲ್ಲದಿದ್ದರೆ?
ದೇವಾನ್ನವಿದ್ದರೇನು–
ಉಣ್ಣಲು ಹಸಿವೆಯಿಲ್ಲದಿದ್ದರೆ?

ಕರುಣಾಸಾಗರ ಸ್ವತಂತ್ರಧೀರ
ಸಿದ್ಧೇಶ್ವರನಿದ್ದೊಡೇನು–
ಕೃಪೆ ಕೋರುವ ಮನವಿಲ್ಲದಿದ್ದರೆ?

### ೨೨೮

ಒಂದು ಕ್ಷಣ ಹೆಣವಾಗುವಷ್ಟರಲ್ಲಿ
ಇನ್ನೊಂದು ಕ್ಷಣದ ಜ್ಯೋತಿ ಹೊತ್ತಿಕೊಳ್ಳುತ್ತದೆ;
ಒಂದು ಎದೆಯ ಪ್ರೀತಿಯಿಂದ
ಇನ್ನೊಂದು ಎದೆಯಲ್ಲಿ ಪ್ರೀತಿ ಹುಟ್ಟಿಕೊಳ್ಳುತ್ತದೆ;
ಒಂದು ಮುಖದ ಮಂದಹಾಸದಿಂದ
ಇನ್ನೊಂದು ಮುಖದಲ್ಲಿ ಮಂದಹಾಸ ಮೂಡುತ್ತದೆ;
ಒಬ್ಬ ಭಕ್ತನ ದೀನಧ್ವನಿ
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿ ಪ್ರತಿಧ್ವನಿಸುತ್ತದೆ.

### ೨೨೯

ಮನೆಮನೆಗೆ ಒಂದಾದರೂ
ಪ್ರೀತಿಯ ಸೆಲೆ ಇರುವುದೆಂದೇ
ಹೇಗೋ ಸಾಗುತ್ತದೆ ಸಂಸಾರರಥ;
ಕಾರ್ಯಾಲಯಗಳಲ್ಲಿ ಕೆಲವರಾದರೂ
ಕರ್ತವ್ಯನಿಷ್ಠರಿರುವರೆಂದೇ
ಹೇಗೋ ಉರುಳುತ್ತದೆ ಆಡಳಿತದ ಯಂತ್ರ;
ವ್ಯಾಪಾರ ಉದ್ಯಮಗಳಲ್ಲಿ ಕೆಲವರಾದರೂ
ಪ್ರಾಮಾಣಿಕರಿರುವರೆಂದೇ
ತಿರುಗುತ್ತದೆ ವ್ಯವಹಾರಚಕ್ರ!
ಈ ಕೆಲವರಾದರೂ ಉಳಿದಿರಲಿ,
ಇವರ ತಳಿ ಬೆಳೆಯುತ್ತಿರಲಿ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೨೩೦

ಮನೆಗೆ ಹಬ್ಬುವ ಕರುಳಿನ ಬಳ್ಳಿ
ಬೆಳೆಸಿದರೆ ಹಬ್ಬೀತು ಜಗದಗಲ–
ತಬ್ಬೀತು ವಿಶ್ವವನ್ನೇ!
ಬೆಳೆಯಗೊಡಬೇಕಲ್ಲ

ಬೆಳವಣಿಗೆಯ ಹಗೆಗಳು!
ಬೆಳೆಸುವುದೇನಿದೆಯೋ
        ಅದೇ ಒಳಿತು;
ಬೆಳೆಯಗೊಡದುದು
        ಕೆಡುಕು;
ಒಳಿತಿಗೆ ಹತ್ತಿರವಾಗಿ
ಕೆಡುಕಿಗೆ ದೂರವಾಗುವ
ಕಲೆಯ ಕಲಿಸಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ!

೨೩೧

ನಳಿನವನ್ನು ನೋಡುತ್ತಲೆ
ನಳಿನದಳನಯನೆಯ ನೆನಪು;
ಗುಲಾಬಿಯನ್ನು ನೋಡುತ್ತಲೆ
ಗುಲಾಬಿಗೆನ್ನೆಯ ಕನ್ನೆಯ ನೆನಪು;
ಸಂಪಿಗೆಯನ್ನು ನೋಡುತ್ತಲೆ
ಸಂಪಿಗೆ ಮೂಗಿನ ಸುಂದರಿಯ ನೆನಪು;
ಶಂಖವನ್ನು ನೋಡುತ್ತಲೆ
ಸಂಕುಗೊರಳಿನ ಬಿಂಕಕಾರ್ತಿಯ ನೆನಪು;
ಚಂದ್ರನನ್ನು ನೋಡುತ್ತಲೆ
ಚಂದ್ರಮುಖಿಯ ನೆನಪು!
ಏನ ನೋಡಿದರೂ ನೀರೆಯರ ನೆನಪೇ!
        ನಿನ್ನ ನೆನಪಾಗಲು
ಏನ ನೋಡಬೇಕಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೩೨

ಶಿಖರಕ್ಕೆ ಇನ್ನೂ ಎತ್ತರಕ್ಕೆ ಏರುವಾಸೆ,
ಜಲಪಾತಕ್ಕೆ ಇನ್ನೂ ಕೆಳಗೆ ಇಳಿಯುವಾಸೆ,
ಎರಡೂ ಏಕಕಾಲಕ್ಕೆ, ಏಕಸ್ಥಳದಲ್ಲಿಯೇ!
ನಿನಗೂ ಏರುವಾಸೆಯಷ್ಟೇ ಇಳಿಯುವಾಸೆ!
ಏರಿಕೆಯ ಹಮ್ಮಿಗೆ ಇಳಿಕೆಯ ಮದ್ದು!
        ನೀನೀಗ ಇಳಿ–
ಸ್ವತಂತ್ರಧೀರ ಸಿದ್ಧೇಶ್ವರನ ಅಡಿಗಳ ಮೇಲೆ!

## ೨೩೩

ಹಾರ ಬಲ್ಲುದೆ ರೆಕ್ಕೆ ಮುರಿದ ಹಕ್ಕಿ?
ಹಾಡಬಲ್ಲುದೆ ಮಾಗಿಯ ಕೋಗಿಲೆ?
ನರ್ತಿಸಬಲ್ಲುದೆ ನಿರ್ಮೇಘ ನವಿಲು?
ಕುಕ್ಕಬಲ್ಲುದೆ ಕೊಕ್ಕು ಮುರಿದ ಮರಕುಟುಕ?
ಸ್ವತಂತ್ರಧೀರ ಸಿದ್ಧೇಶ್ವರಾ,
ಊರ್ಧ್ವಗಾಮಿಯಾಗಬಲ್ಲನೆ
ವಿಷಯದ ಕೆಸರಲ್ಲಿ ಹೂತ ನರ?

## ೨೩೪

ಏನ ಮಾಡಲೆಂದು
ಜಲವನ್ನು ಕೇಳಿದೆ –
‘ಹರಿ’ ಎಂದಿತು;
ಅಗ್ನಿಯನ್ನು ಕೇಳಿದೆ –
‘ಉರಿ’ ಎಂದಿತ್ತು,
ಮುಗಿಲನ್ನು ಕೇಳಿದೆ–
‘ಸುರಿ’ ಎಂದಿತು.
ವಾಯುವನ್ನು ಕೇಳಿದೆ.
‘ಚಲಿಸು’ ಎಂದಿತು;
ಪೃಥ್ವಿಯನ್ನು ಕೇಳಿದೆ –
‘ಫಲಿಸು’ ಎಂದಿತು.
ಸ್ವತಂತ್ರಧೀರ ಸಿದ್ಧೇಶ್ವರನ ಕೇಳಿದೆ
‘ಒಲಿಸು’ ಎಂದ!

## ೨೩೫

ಒಳಗಿನ ಸಿರಿವಂತಿಕೆಯ ಬೆಳೆಸಲು ನೆರವಾದರೆ
ಹೊರಗಿನ ಸಿರಿವಂತಿಕೆಗೆ ಬೆಲೆ;
ಆಗದಿರಲಿ ಹೊರಗಿನ ಸಿರಿವಂತಿಕೆಯಿಂದ
ಒಳಗಿನ ಸಿರಿವಂತಿಕೆಯ ಕೊಲೆ!
ಒಳಗಿನ ಸಿರಿಯೇ ಸೊಗದ ಸೆಲೆ;
ಅದೇ ಸಂಸ್ಕೃತಿಯ ನೆಲೆ;
ಸ್ವತಂತ್ರಧೀರ ಸಿದ್ಧೇಶ್ವರ ಒಲಿಯುವುದು
ಒಳಗಿನ ಸಿರಿಯಿಂದಲೆ!

## ೨೩೬

ಕರಣಗಳು ಕಾಡುತ್ತವೆ;
ನೆನಪುಗಳು ಕಾಡುತ್ತವೆ;
ವಾದಗಳು ಕಾಡುತ್ತವೆ;

ವಿಚಾರಗಳು ಕಾಡುತ್ತವೆ;
ಜನರು ಕಾಡುತ್ತಾರೆ;
ಸರಕಾರಗಳು ಕಾಡುತ್ತವೆ;
ಸಂಘ, ಸಂಸ್ಥೆ, ಪಕ್ಷ, ಪಂಥಗಳು ಕಾಡುತ್ತವೆ;
ನೀನೂ ಕಾಡುತ್ತೀ!
ಕಾಡಿಗೆ ಹೋದರೂ
ಕಾಡಿಸಿಕೊಳ್ಳುವುದು ತಪ್ಪದಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೩೭

ಸುಳ್ಳಿಗೆ ಬೇಕು ಸಕಲ ಸಿಂಗಾರಗಳು,
ಸತ್ಯ ನಿರಾಭರಣಸುಂದರಿ!
ಕುರೂಪಿಗೆ ಬೇಕು ಪ್ರಸಾಧನ, ಆಭರಣ;
ಸುರೂಪಕ್ಕೆ ತಳೆದುದೇ ತೊಡವು!
ನನ್ನ ವಚನಕ್ಕೆ ಬೇಕು ಎಲ್ಲ ಅಲಂಕಾರ,
ನಿನ್ನ ವಚನಕ್ಕೆ ಸತ್ಯವೇ ಶೃಂಗಾರ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೩೮

ವರ್ಷಾರಂಭದ ದಿನವೇ ದರ್ಶನವಿತ್ತು
ಧನ್ಯನಾಗಿಸಿದೆ ಶಿವಯೋಗೀಶ್ವರಾ-
ಅನುಗ್ರಹರತ್ನಾಕರಾ!
ನಿನ್ನ ಕೃಪೆ ಕಾಣದ ಕೈಯಾಗಿ
ಕಾಪಾಡಿದೆ ಬದುಕಿನುದ್ದಕ್ಕೂ!
ಅಮೃತಕಲಶ ನಿನ್ನ ವಾಕ್ಕು!
ಕೇಳಿ ಹೊನ್ನಾಗಲಿ ಈ ತುಕ್ಕು!
ಸ್ವತಂತ್ರಧೀರ ಸಿದ್ಧೇಶ್ವರನ ಸನ್ನಿಧಾನದಲ್ಲಿ
ಬರಲಿ ಬರವಣಿಗೆಗೆ ಉಕ್ಕು!

೨೩೯

ಕಳೆದು ಹೋದ ದಿನಗಳು
ನಿನ್ನ ಪೂರ್ವಜನ್ಮ;
ಉಳಿದ ದಿನಗಳಲ್ಲಿ ಸಾಧ್ಯ

ನಿನ್ನ ಪುನರ್ಜನ್ಮ;
ಯಾವ ಕ್ಷಣದಲ್ಲೂ ಶಕ್ಯ
ನಿನಗೆ ನವ ಜನ್ಮ;
ಹಳಸಿದುದೆಲ್ಲ
ಹಿಂದಣ ಜನ್ಮ;
ಹೊಸ ಅರಿವಿನಿಂದ
ಹೊಸ ಜನ್ಮ;
ಸ್ವತಂತ್ರಧೀರ ಸಿದ್ಧೇಶ್ವರನ
ತಿಳಿವಿನಲ್ಲಿ ತಳೆದರೆ
ದೇವಜನ್ಮ!

## ೨೪೦

ಪಾಂಡವರ ಸುಡುಲು ಕಟ್ಟಿದ್ದ ಅರಗಿನ ಮನೆಗೆ
'ಮಂಗಲ ಮಂದಿರ' ಎಂಬ ಹೆಸರು;
ಸಾವಿರ ಜನರ ಸುಲಿದು ಕಟ್ಟಿದ ಬೆಟ್ಟದೆತ್ತರದ ಮನೆಗೆ
'ಗಾಂಧೀ ಕುಟೀರ' ಎಂಬ ಹೆಸರು!
ಮೂಢ ಭಕ್ತಿಯಲ್ಲಿ ಬಂಧಿತರಾದ ಬಕರಾಗಳ ಬಂದೀಖಾನೆಗೆ
'ಮೋಕ್ಷ ಮಂದಿರ' ಎಂಬ ಹೆಸರು!
ಸ್ವತಂತ್ರಧೀರ ಸಿದ್ಧೇಶ್ವರನ ದರ್ಶನಕ್ಕೆ ದುಡ್ಡುಕೇಳವ ಅಂಗಡಿಗೆ
'ದೇವನ ಮಂದಿರ' ಎಂಬ ಹೆಸರು!

## ೨೪೧

ಇಂದು ಹಿರಣ್ಮಯ ಪಾತ್ರೆ
ನಿಜವಾಗಿಯೂ ನಿಜವನ್ನು ಮುಚ್ಚಿದೆ!
ಮುಚ್ಚಿದರೆ ಮುಚ್ಚಲಿ,
ಸತ್ಯದ ಕತ್ತು ಹಿಸುಕದಿರಲಿ.
ಪ್ರಾಣ ಹೊಸಕದಿರಲಿ!
ಸತ್ಯದ ಸೋಗು ಹಾಕಿ ಬದುಕಿರುವ ಅಸತ್ಯವೆ,
ನೀನು ಬದುಕುವ ಭರದಲ್ಲಿ
ನಿನ್ನ ಬದುಕಿಸಿದ್ದನ್ನೇ ಕೊಲ್ಲದಿರು!
ಸ್ವತಂತ್ರಧೀರ ಸಿದ್ಧೇಶ್ವರನಿದ್ದೂ
ಸತ್ಯವೇ ಜಯಿಸದಿದ್ದರೆ ಹೋಗಲಿ–
        ಸತ್ಯಕ್ಕೇ ಸಾವು ಬರದಿರಲಿ!

## ೨೪೨

ಬಡವರ ಬೆವರು ಮಡುಗಟ್ಟಿದಾಗ
ಅಲ್ಲಿ ಮೊಸಳೆ ಸೇರುತ್ತದೆ!
ದುಡಿವರ ಮೈಮಣ್ಣು ಹುತ್ತ ಕಟ್ಟಿದಾಗ
ಅಲ್ಲಿ ಹಾವು ಸೇರುತ್ತದೆ!
ಸಾಮಾನ್ಯರು ಬಲಿಯಾಗಿ ಕ್ರಾಂತಿ ತಂದಾಗ
ಅದರ ಫಲ ಕುಟಿಲರ ಕೈ ಸೇರುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನವರು ನಿನ್ನ ನಿಜ ಧರ್ಮಸಾರಲು
ಅದು ಕಪಟ ಗುರುಗಳ ಕೈ ಸೇರುತ್ತದೆ!

## ೨೪೩

ಏನೇನೋ ಮನವನ್ನು ತುಂಬಿಕೊಳ್ಳಲು ಮೊದಲೇ
ಸುವಿಚಾರಗಳನ್ನು ತುಂಬು,
ಸದ್ಭಾವಗಳನ್ನು ತುಂಬು ಅದರಲ್ಲಿ;
ಏನೇನೋ ಬೆಳೆದು ಎದೆಯ ಹೊಲ ಹಾಳಾಗುವ ಮುನ್ನವೇ
ಪವಿತ್ರ ಸಂಕಲ್ಪಗಳ
ಪಯಿರು ಬೆಳೆಸು ಅಲ್ಲಿ!
ಸ್ವತಂತ್ರಧೀರ ಸಿದ್ಧೇಶ್ವರಾ ,
ಈ ಕಾಯದ ಕೊಳಲಿನಲ್ಲಿ
ಅಪಸ್ವರಗಳು ಸೇರುವ ಮುನ್ನವೇ
ನಿನ್ನ ದಿವ್ಯ ಸಂಗೀತವ ತುಂಬು ಅದರಲ್ಲಿ!

## ೨೪೪

ಮನೆಗಳನ್ನು ಕಾಯಲು
ಸಿಂಹಗಳನ್ನು ಸಾಕಿದರೆ ಹೇಗಯ್ಯ?
ಮನಗಳನ್ನು ಕಾಯಲು
ಶಾಸನಗಳನ್ನು ರಚಿಸಿದರೆ ಹೇಗಯ್ಯ?
ವಿಚಾರಗಳನ್ನು ಕಾಯಲು
ಸೆರೆಮನೆಗಳನ್ನು ಕಟ್ಟಿದರೆ ಹೇಗೆಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಕಾಯಲು
ಮಠ ಮಂದಿರಗಳನ್ನು ಕಟ್ಟಿದರೆ ಹೇಗಯ್ಯ?

## ೨೪೫

ಕಿನ್ನಾಳಿನ ಬಣ್ಣದ ಹಣ್ಣುಗಳು ಎಷ್ಟು ಚೆಂದ,
ಆ ಕಟ್ಟಿಗೆಯ ಹಣ್ಣುಗಳ ತಿನ್ನಲಾದೀತೇನಯ್ಯ?
ಸೀರೆ ಅಂಗಡಿಗಳ ಕಪ್ಪುರದ ಕನ್ನಿಕೆಯರದೆಷ್ಟು ಚೆಂದ–
ಅವರನ್ನೇ ವರಿಸಲಾದೀತೇನಯ್ಯ?
ಮೃಗಜಲದ ತರಲ ತರಂಗಗಳು ಎಷ್ಟು ಚೆಂದ–
ಆ ನೀರನ್ನೇ ಕುಡಿಯಲಾದೀತೇನಯ್ಯ?
ವೈಕುಂಠ ಕೈಲಾಸಗಳ ವರ್ಣನೆಗಳೆಷ್ಟು ಚೆಂದ–
ಅವುಗಳನ್ನು ನಂಬಲಾದೀತೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೪೬

ಅಡಿಗೆರಗುವರಲ್ಲದೆ ಮುಡಿಗೆರಗುವರೇನಯ್ಯ?
ಪಾದಪೂಜೆ ಮಾಡುವರಲ್ಲದೆ ತಲೆಯ ಪೂಜೆ ಮಾಡುವರೇನಯ್ಯ?
ಪಾದೋದಕ ಬೇಡುವರಲ್ಲದೆ ಶಿರೋದಕ ಬೇಡುವರೇನಯ್ಯ?
ಶೂದ್ರರು ನಿನ್ನ ಪಾದದಿಂದ ಹುಟ್ಟಿದವರೆಂದು ವೇದಸಾರುತ್ತಿದೆ.
ಅಂತೆಯೇ ಅವರು ಪರಮ ಪವಿತ್ರರಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೪೭

ನಿರಾಶೆ ಹುಟ್ಟಿದಲ್ಲಿಯೇ ಆಸೆ ಹುಟ್ಟಬೇಕು;
ಹಿಂಸೆ ಹೂಂಕರಿಸಿದಲ್ಲಿಯೇ ಅಹಿಂಸೆ ಉದಿಸಬೇಕು;
ದ್ವೇಷ ಧಗಧಗಿಸಿದಲ್ಲಿಯೇ ಪ್ರೀತಿ ಜಾತವಾಗಬೇಕು;
ವಿನಾಶ ಪೂತ್ಕರಿಸಿದಲ್ಲಿಯೇ ವಿಕಾಸ ವಿಕಸಿಸಬೇಕು;
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನಿಲ್ಲವೆಂಬ ಸೊಲ್ಲಿನಲ್ಲಿಯೇ
ನೀನಿರುವಿಯೆಂಬ ಅರಿವು ಮೂಡಬೇಕು.

## ೨೪೮

ಈ ಬುದ್ಧಿಯ ಬೆಂಗಾಡಿನಲ್ಲಿ
ಹೃದಯದ ಹಸು ತಪ್ಪಿಸಿಕೊಂಡಿದೆ–
ಹುಡುಕಿ ಕೊಡುವಿರಾ?

ಈ ತರ್ಕದ ಚಕ್ರತೀರ್ಥದಲ್ಲಿ
ಮತಿಯ ಮೀನು ಮಾಯವಾಗಿದೆ–
ಹುಡುಕಿ ಕೊಡುವಿರಾ?
ಜಾತಿಮತ ಪಂಥಗಳ ಸಂತೆಯಲ್ಲಿ
ಸ್ವತಂತ್ರಧೀರ ಸಿದ್ಧೇಶ್ವರ ಕಳೆದು ಹೋಗಿದ್ದಾನೆ
ಹುಡುಕಿ ಕೊಡುವಿರಾ?

೨೪೯

ಇರುವುದು, ಅರಿಯುವುದು,
ಕಾಯದಲ್ಲಿ ನುರಿಯುವುದು,
ಉಳಿಕೆಯ ದಾಸೋಹಕ್ಕೆ ಸುರಿಯುವುದು,
ಪ್ರಸಾದಕಾಯನಾಗಿ
ಸ್ವತಂತ್ರಧೀರ ಸಿದ್ಧೇಶ್ವರನ ಬೆರೆಯುವುದು!

೨೫೦

ಇಲಿಗೆ ಬೆಕ್ಕಿನ ಅಂಜಿಕೆ, ಆದರೆ
ಇಲಿಗೆ ಇಲಿಯ ಅಂಜಿಕೆ ಇಲ್ಲವಯ್ಯ;
ಹುಲ್ಲೆಗೆ ಹುಲಿಯ ಅಂಜಿಕೆ, ಅದರೆ
ಹುಲ್ಲೆಗೆ ಹುಲ್ಲೆಯ ಅಂಜಿಕೆ ಇಲ್ಲವಯ್ಯ;
ಹಕ್ಕಿಗೆ ಗಿಡಗನ ಅಂಜಿಕೆ; ಆದರೆ
ಹಕ್ಕಿಗೆ ಹಕ್ಕಿಯ ಅಂಜಿಕೆ ಇಲ್ಲವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರನಿಗೆ ಮಾತ್ರ ನರನ ಅಂಜಿಕೆ ಬಹಳವಯ್ಯ.

೨೫೧

ಈರ್ಷ್ಯೆ ಸೋಂಕದ
ಸ್ಪರ್ಧೆಗಳಿಗೆ ಸ್ವಾಗತ;
ಪಕ್ಷಪಾತ ಅಂಟದ
ಪುರಸ್ಕಾರಗಳಿಗೆ ಸ್ವಾಗತ;
ಜಾತಿ ತಗುಲದ
ಪ್ರೀತಿಗೆ ಸ್ವಾಗತ;
ಫಲಾಪೇಕ್ಷೆ ತಟ್ಟದ
ಕಾಯಕಕ್ಕೆ ಸ್ವಾಗತ;

ಸ್ವತಂತ್ರಧೀರ ಸಿದ್ಧೇಶ್ವರನ
ಮಕ್ಕಳ ಅಕ್ಕರೆಯೆಂಬ ಭಕ್ತಿಗೆ ಸ್ವಾಗತ!

೨೫೨

ಕೊನೆಯ ಮನೆ ಕುಣಿ, ಚಿತೆ;
ಕೊನೆಯ ಗಳಿಕೆ ಮಣ್ಣು, ಜ್ವಾಲೆ;
ಕೊನೆಯ ಉಳಿಕೆ ಮೂಳೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲ ನಿನ್ನ ಲೀಲೆ!

೨೫೩

ಹೂವಿಲ್ಲದ ಬಳ್ಳಿಯ ಬಳಿಗೆ
ಸುಳಿಯುವುದೆ ಅಳಿ?
ಫಲವಿಲ್ಲದ ಮರದ ಬಳಿಗೆ
ಸುಳಿಯುವುದೆ ಗಿಳಿ?
ಮೀನಿಲ್ಲದ ಕೆರೆಯ ಬಳಿಗೆ
ಸುಳಿಯುವುದೆ ಬಕ?
ಚಿಗುರಿಲ್ಲದ ಮಾಮರದ ಬಳಿಗೆ
ಸುಳಿಯುವುದೆ ಕೋಗಿಲೆ?
ಮಾನವ ಪ್ರೇಮವಿಲ್ಲದ ನರನ ಬಳಿಗೆ
ಸುಳಿಯುವನೆ ಸ್ವತಂತ್ರಧೀರ ಸಿದ್ಧೇಶ್ವರ?

೨೫೪

ಸಾವಿನ ಸುದ್ದಿ ಕೇಳಿ ಕೇಳಿ ಸಾಕಾಗಿದೆ ತಂದೆ,
ಜೀವಿಸುವ ಹದನನರಿತವರ ಸುದ್ದಿ ಕೇಳಿಸು;
ರಕ್ತದ ದೃಶ್ಯಗಳ ನೋಡಿ ನೋಡಿ ಸಾಕಾಗಿದೆ ತಂದೆ,
ಹೊಲಗಳಿಗೆ ಹರಿವ ಸಲಿಲದ ಸವಿನೋಟಗಳ ಕಾಣಿಸು;
ಅಶ್ರುವಾಯು, ಸಿಡಿಮದ್ದುಗಳ ದುರ್ಗಂಧ ಸಾಕಾಗಿದೆ ತಂದೆ,
ಪ್ರೀತಿ ಪಾರಿಜಾತದ ಪರಿಮಳವ ಕರುಣಿಸು;
ಕುಟಿಲರ ಕರಾಂದೋಲನಗಳು ಸಾಕಾಗಿವೆ ತಂದೆ,
ಕೂರ್ಪರ ಅಕೃತ್ರಿಮ ಅಪ್ಪುಗೆಗಳ ಅನುಗ್ರಹಿಸು;
ಸ್ವತಂತ್ರಧೀರ ಸಿದ್ಧೇಶ್ವರಾ,

ದಾರಿ ತಪ್ಪಿಸುವ ಧ್ಯೇಯಗಳು ಸಾಕಾಗಿವೆ ತಂದೆ
ದೇಶವೇ ಧ್ಯೇಯವಾಗಿ
ಉಪದೇಶ ನಿಲ್ಲುವಂತೆ ಮಾಡು!

೨೫೫

ಮದರ್ ತೆರೇಸಾ, ಮದರ್ ತೆರೇಸಾ
ನಿನ್ನ ಹೃದಯಕ್ಕೆ ಹೋಲಿಸ ಹೊರಟರೆ
ಆಗಸವೂ ಒಳಮುಚುಗವಾಗುವುದು, ತಾಯೆ!
ನಿನ್ನ ವಾತ್ಸಲ್ಯದ ವಿಸ್ತಾರದ ಮುಂದೆ
ಸಾಗರಗಳೇ ಸಣ್ಣವು, ತಾಯೆ;
ನಿನ್ನ ಒಲವಿನ ಹೊನಲು ಮಡಿ ಮಾಡಿದ
ಗುಡಿಸಲುಗಳಿಗೆ ನಮೋ, ನಮೋ-
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ

೨೫೬

ಅಮಾಯಕರ ಕೆನ್ನೀರಿನಲ್ಲಿಯೇ ಬೆಳೆಯಬೇಕೆ
ಕಾಶ್ಮೀರದ ಕೇಶರದ ಹೊಲಗಳು?
ನಿರ್ದೋಷಿಗಳ ನೆತ್ತರಿನಲ್ಲಿ ಬೆಳೆಯಲೇಬೇಕೆ
ಪಂಜಾಬದ ಹೊಂಗೋದಿಯ ಹೊಲಗಳು?
ಪಾಪಭೀರುಗಳ ರಕ್ತದಲ್ಲಿಯೇ ಬೆಳೆಯಬೇಕೆ
ಆಸಾಮಿನ ಚಹಾ ತೋಟಗಳು?
ಸಜ್ಜನರ ಶೋಣಿತದಲ್ಲಿ ಬೆಳೆಯಲೇಬೇಕೆ
ಆಂಧ್ರದ ಬತ್ತದ ಗದ್ದೆಗಳು?
ಇದೆಂಥ ಕರ್ಮಕಾಂಡ ಕೃಪಾಕರಾ,
ನಿಲ್ಲಿಸಿದನ ಕರುಣಾಕರಾ
ಸ್ವತಂತ್ರಧೀರ ಸಿದ್ಧೇಶ್ವರಾ,

೨೫೭

ನಿನ್ನ ಸೃಷ್ಟಿ ಸೌಂದರ್ಯವನ್ನು ನೋಡಿ ನೋಡಿ
ನನ್ನ ಕಣ್ಣುಗಳು ಕೃತಾರ್ಥವಾದುವು;
ಈ ಸೃಷ್ಟಿಯ ವಿವಿಧ ಮಧುರ ಸ್ವರಗಳನ್ನು ಕೇಳಿ ಕೇಳಿ
ನನ್ನ ಕರ್ಣಗಳು ಕೃತಾರ್ಥವಾದುವು;
ಇದರ ಪರಿಪರಿಯ ಪರಿಮಳಗಳನ್ನು ವಾಸಿಸಿ ವಾಸಿಸಿ

ನನ್ನ ನಾಸಿಕ ಕೃತಕೃತ್ಯವಾಯಿತು;
ಮಾತೆ ಮೈದಡವಿ, ಮಡದಿ ಅಪ್ಪಿ, ಮಗು ಅವಚಿ,
ಗೆಳೆಯರು ತಬ್ಬಿ ನನ್ನ ತ್ವಚ ಧನ್ಯವಾಯಿತು;
ನಿನ್ನ ನಾಮವನ್ನು ನುಡಿನುಡಿದು
ನನ್ನ ನಾಲಗೆ ಧನ್ಯನಾಗುವಂತೆ ಮಾಡಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೨೫೮

ಕಟ್ಟಿದ ನೌಕೆಗೆ ಹುಟ್ಟು ಹಾಕಿದರೆ
ಜಲಯಾನ ಸಾಧ್ಯವೇನಯ್ಯ?
ಕೆಟ್ಟ ವಿಮಾನಕ್ಕೆ ಇಂಧನ ಹಾಕಿದರೆ
ವಾಯುಯಾನ ಸಾಧ್ಯವೇನಯ್ಯ;
ಎಳೆಯುವ ಯಂತ್ರವಿಲ್ಲದೆ ಡಬ್ಬಿಗಳ ಜೋಡಿಸಿದರೆ
ಉಗಿಬಂಡಿ ಪಯಣ ಸಾಧ್ಯವೇನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮದ ಬಾಹ್ಯಾಚರಣೆಗಳಿದ್ದು
ತತ್ವಾನುಸರಣೆ ಇಲ್ಲದಿರೆ ಉದ್ಧಾರ ಸಾಧ್ಯವೇನಯ್ಯಾ?

೨೫೯

ಈ ಮಸಣದ ಹೂವುಗಳು
ಸಾವಿನ ಗೆಲುವಿನ ಸಂಕೇತಗಳೋ,
ಜೀವನದ ಜಯಕಾರದ ಪ್ರತೀಕಗಳೋ
ಸ್ವತಂತ್ರಧೀರ ಸಿದ್ಧೇಶ್ವರಾ?

೨೬೦

ಇಲ್ಲಿ ಎಲ್ಲರೂ, ಎಲ್ಲವೂ
ಅರಸುತ್ತಿರುವುದು ಆಹಾರವನ್ನು,
ನಿದ್ರೆ ಮೈಥುನಗಳನ್ನು,
ನೀವೇನನರಸುತ್ತಿಹಿರಿ
ಇನ ಶಶಿ ಗ್ರಹ ತಾರೆ ಗೋಲಗಳೆ?
ನಿತ್ಯ ಯಾತ್ರಿಕರೇನು ನೀವು?
ಎಲ್ಲಿಗೆ ನಿಮ್ಮ ಯಾತ್ರೆ?
ನಿಮ್ಮಿಂದ ಸಿಡಿದು ಒಡೆದುಹೋದ

ಒಡನಾಡಿಗಳ ಅರಸುತ್ತಿಹಿರೇನು?
ದಾರಿಯೇನೋ ಇದೆ,
ಗುರಿಯಿದೆಯೆ ನಿಮಗೆ?
ಪರಿಭ್ರಮಣವೇ ಪರಮಾರ್ಥವೇನು ನಿಮಗೆ
ಸ್ವತಂತ್ರಧೀರ ಸಿದ್ಧೇಶ್ವರನನ್ನೇ ಕೇಳು
ಎಂದು ಹೇಳುವಿರೇನು!

೨೬೧

ಎತ್ತರಕ್ಕೆ ಬೆಳೆದರೆ ಹಿಮಕಿರೀಟ,
ಕುಬ್ಜವಾದರೆ ಕೋತಿಗಳ ಕಾಟ ಗಿರಿಗೆ;
ಹಿರಿದಾಗಿ ಹರಿದರೆ ಕಡಲೊಡನೆ ಕೂಟ
ಕಿರಿದಾಗಿ ಹರಿದರೆ ಬರಿಯ ಪರದಾಟ ತೊರೆಗೆ;
ಜಗದಗಲ ಮನ ಮಾಡೆ
ಸ್ವತಂತ್ರಧೀರ ಸಿದ್ಧೇಶ್ವರನೊಡನೆ ಬೇಟ,
ಮನೆಗೆ ಸೀಮಿತವಾಗೆ
ಮಡದಿ ಮಕ್ಕಳ ಬೊಬ್ಬಾಟ ನರಗೆ!

೨೬೨

ಕಡಲಿನಲ್ಲಿ ಹಡಗ ಮುಳುಗೀತು,
ಹುಲ್ಲುಕಡ್ಡಿ ತೇಲುವುದಯ್ಯ;
ಖೆಡ್ಡಾದಲ್ಲಿ ಆನೆ ಬಿದ್ದೀತು,
ಇರುವೆ ಬೀಳದಯ್ಯ;
ಉಳ್ಳವರು ಆಸ್ಪತ್ರೆಗಳಲ್ಲಿಯೇ ಸತ್ತಾರು,
ಇಲ್ಲದವರು ಬರದಲ್ಲಿಯೂ ಬದುಕುವರಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೨೬೩

ನದಿಯ ಮುಖಾಂತರ
ಸಮುದ್ರವ ಸೇರುವರು ಸಾಹಸಿಗರು;
ದ್ವಾರಪಾಲನ ಮುಖಾಂತರ
ದೊರೆಯ ಸೇರುವರು ಗರಜಿಗರು;
ಏಣಿಯ ಮುಖಾಂತರ
ಶಿಖರ ಸೇರುವರು ಪರ್ವತಾರೋಹಿಗಳು;

ಮಕ್ಕಳ ಮುಖಾಂತರ
ಮಾತಾಪಿತರ ಸೇರುವರು ಶಿಕ್ಷಕರು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನವರ ಸೇವೆಯ ಮೂಲಕ
ನಿನ್ನ ಸೇರುವರು ನಿಜಭಕ್ತರು.

**೨೬೪**

ಒಂಡನ್ನು ಒಳಗಿರಿಸಿಕೊಂಡು
ತಿಳಿ ನೀರು ನೀಡುತ್ತವೆ ಬಾವಿಗಳು;
ಓಟೆಯನ್ನು ಒಳಗಿರಿಸಿಕೊಂಡು
ತನಿರಸವ ಕೊಡುತ್ತವೆ ಮಾವುಗಳು;
ಕಹಿಯನ್ನು ಒಳಗಿರಿಸಿಕೊಂಡು
ಹೂವಿನ ಕಂಪು ಹರಡುತ್ತವೆ ಬೇವುಗಳು;
ಉಮ್ಮಳವ ಒಳಗಿರಿಸಿಕೊಂಡು
ನಗೆಯ ನೀಡುತ್ತಾರೆ ಪುಣ್ಯಜೀವಿಗಳು;
ನಿನ್ನನ್ನು ಒಳಗಿರಿಸಿಕೊಂಡು
ಅನ್ಯಾಯಗೈವ ಕುನ್ನಿಗಳನೇನೆಂಬೆನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ?

**೨೬೫**

ಸ್ವತಂತ್ರಧೀರ ಸಿದ್ಧೇಶ್ವರಾ,
ವಾಚಾನಾಲಯಗಳಲ್ಲಿ ಎಂಥ ಗ್ರಂಥಗಳಿದ್ದರೇನು,
ಕೀಳು ವಾಚಕರ ಕಣ್ಣು ಕೊಳಕು ಕಾದಂಬರಿಗಳ ಮೇಲೆ!
ಸತ್ಕಾರ್ಯಗಳಿಗಾವ ಕೊರತೆ ನಿನ್ನ ಸೃಷ್ಟಿಯಲ್ಲಿ?
ಖೂಳರ ಕಣ್ಣು ಮಾತ್ರ ಕುಕರ್ಮಗಳ ಮೇಲೆ!

**೨೬೬**

ಯಾವುದನ್ನೂ ಒರೆದು ನೋಡದೆ
ಎಲ್ಲದರ ಬಗ್ಗೆ ತೀರ್ಪು ನೀಡುವ ಎಲ್ಲಪ್ಪರಿದ್ದಾರೆ;
ಏನನ್ನೂ ನೋಡದೆ
ನೋಡಿದವರಂತೆ ಸೊರಹುವ ಹರಟೆಮಲ್ಲಪ್ಪರಿದ್ದಾರೆ;
ಏನನ್ನೂ ಓದದೆ

ಓದಿದವರಂತೆ ವಾದಿಸುವ ಸೊಲ್ಲಪ್ಪರಿದ್ದಾರೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ನಾಲ್ಕು ನಿಮಿಷವೂ ನೆನೆಯದೆ
ನಿನ್ನನ್ನು ಕಂಡವರಂತೆ ಗಳಹುವ ಗುಲ್ಲಪ್ಪರಿದ್ದಾರೆ!

## ೨೬೭

ರಾಮ ಬಳಸಿದ ಬಿಲ್ಲು ಎಲ್ಲಿ ಹೋಯಿತು?
ಕೃಷ್ಣನೂದಿದ ಕೊಳಲು ಎಲ್ಲಿ ಹೋಯಿತು?
ಬುದ್ಧನ ಭಿಕ್ಷಾ ಪಾತ್ರೆ ಎಲ್ಲಿ ಹೋಯಿತು?
ಮಹಾವೀರನ ಪಿಂಛ ಎಲ್ಲಿ ಹೋಯಿತು?
ಬಸವ ಬರೆದ ವಚನ ಪ್ರತಿ ಎಲ್ಲಿ ಹೋಯಿತು?
ಪುರಂದರರ ತಂಬೂರಿ ಎಲ್ಲಿ ಹೋಯಿತು?
ಸರ್ವಜ್ಞನ ಗಂಡುಗಂಬಳಿ ಎಲ್ಲಿ ಹೋಯಿತು?
ಎಲ್ಲವನ್ನೂ ಕಳೆದುಕೊಂಡು
ಕಲ್ಲು ಮಣ್ಣುಗಳಿಗಾಗಿ ಕಡಿದಾಡುತ್ತಿದ್ದೇವೆ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೬೮

ಜಿಹ್ವೆಗೆ ಸವಿ ನೀಡುವ ಜೇನಿನ ಪಾತ್ರ ಹಿರಿದೋ,
ಬತ್ತಿಯಾಗಿ ಬೆಳಕು ನೀಡುವ ಮೇಣದ ಪಾತ್ರ ಹಿರಿದೊ?
ಸವಿ ಬೆಳಕುಗಳನ್ನು ಒಂದೇ ಗೂಡಿನಲ್ಲಿ ಸೇರಿಸಿದ
ಮಧು ಮಕ್ಷಿಕಗಳ ಪಾತ್ರ ಹಿರಿದು ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೬೯

ನವಗ್ರಹಗಳೆ,
ನನಗೆ ನಿಮ್ಮ ಬೆಳಕು-ಚೆಲುವು ನೀಡಿರಿ,
ಶುಭಾಶುಭ ಫಲಗಳನ್ನಲ್ಲ;
ಜೋಯ್ಸರೆ,
ನೀವು ನಿಮ್ಮ ಭವಿಷ್ಯ ಮೊದಲು ನೋಡಿಕೊಳ್ಳಿರಿ,
ನನ್ನ ಭವಿಷ್ಯಕ್ಕಾಗಿ ಚಿಂತಿಸಬೇಕಿಲ್ಲ;
ಗುರುಗಳೆ, ಬಾಬಾಗಳೆ,

ನೀವು ಮೊದಲು ನಿಮ್ಮ ವಿಕಾರಗಳ ಜಯಿಸಿರಿ,
ನನ್ನ ದೌರ್ಬಲ್ಯಗಳಿಗಾಗಿ ತಲೆಕೆಡಿಸಕೊಳ್ಳಬೇಕಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ನನ್ನ ದೋಷಗಳ ದೂಡುವ ಬುದ್ಧಿ ಕೊಡು,
ಅನ್ಯರ ದೋಷಾನ್ವೇಷಕ ಬುದ್ಧಿಯನ್ನಲ್ಲ!

## ೨೭೦

ನೋಡಿದಷ್ಟೂ ನೋಡುವುದು ಉಳಿವುದೆಂದೇ
ನೋಡುವಾಸೆಯೂ ಉಳಿಯುತ್ತದೆ;
ಮಾಡಿದಷ್ಟೂ ಮಾಡುವುದು ಉಳಿವುದೆಂದೇ
ಮಾಡುವಾಸೆಯೂ ಉಳಿಯುತ್ತದೆ;
ತಿಳಿದಷ್ಟೂ ತಿಳಿವುದು ಉಳಿವುದೆಂದೇ
ತಿಳಿಯುವಾಸೆಯೂ ಉಳಿದಿರುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕೂಡ ಬಯಸಿದಷ್ಟೂ
ಕೂಡಿಕೆ ಕೈಗೂಡದೆಂದೇ
ಕೂಡುವಾಸೆಯೂ ಉಳಿದಿದೆ.

## ೨೭೧

ಹೇ ಮನ,
ಕಟ್ಟಿ ಸಂತೋಷಿಸಲು ಕಲಿ,
ಕೆಡವಿ ಅಲ್ಲ;
ಕಯ್ಗೂಡಿ ನಲಿಯಲು ಕಲಿ,
ಕಾಲೆಳೆದು ಅಲ್ಲ;
ಹಂಚಿ ಉಂಡು ಹಿಗ್ಗಲು ಕಲಿ,
ಹರಿದು ತಿಂದು ಅಲ್ಲ;
ಕಲಿಸಿ ಹರ್ಷಿಸಲು ಕಲಿ,
ಮೌಢ್ಯ ಬಲಿಸಿ ಅಲ್ಲ;
ಸ್ವತಂತ್ರಧೀರ ಸಿದ್ಧೇಶ್ವರನ ಸಂತತಿಯ
ಉಳಿಸಿ ಆನಂದಿಸಲು ಕಲಿ,
ಅಳಿಸಿ ಅಲ್ಲ!

## ೨೭೨

ಸನಾದಿ ಊದುವವರ ಮುಂದೆ
ಮಾವಿನ ಕಾಯಿ ತಿನ್ನುತ್ತ ನಿಂತರೆ ಹೇಗಯ್ಯ–
ಅತ್ತ ಹೋಗಯ್ಯ!
ವಿಶ್ವಾಮಿತ್ರನ ಮುಂದೆ ಮೇನಕೆ,
ಅಹಲ್ಯೆಯ ಮುಂದೆ ಇಂದ್ರ,
ಜಾನಕಿಯ ಮುಂದೆ ಮಾಯಾಮೃಗ–
ಸಾಧನೆಯ ಹಾದಿಯಲ್ಲಿ
ಬಾಧೆಗಳು ಎನಿತು!
ಏನಿದೆಲ್ಲ–ಸ್ವತಂತ್ರಧೀರ ಸಿದ್ಧೇಶ್ವರಾ?

## ೨೭೩

ಬೋಧೆ ಹಾದಿ,
ಸಾಧನೆ ಕಾಲು,
ಆರಾಧನೆ ಪಯಣವಯ್ಯ!
ಹೃದಯ ಕಣ್ಣು,
ಜ್ಞಾನ ಬೆಳಕು,
ನೀನೆ ಕಾಂಬ ವಸ್ತುವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೭೪

ನಗರಗಳನ್ನು ಬೆಳೆಸಲು
ಹೊಲಗಳ ಬಲಿ, ತೋಟಗಳ ಆಹುತಿ, ಸ್ಮಶಾನಗಳ ನೈವೇದ್ಯ!
ಹಳ್ಳಿಗಳ ಬೆಳೆಸಲು?
ಛೇ, ಹಳ್ಳಿಗಳ ಬೆಳೆಸುವುದೆ?
ತಿಳಿಯದೆ, ಹಳ್ಳಿಗಳಿರುವುದು
ನಗರ ಪತ್ತನಗಳ ಹೊಟ್ಟೆ ತುಂಬಲೆಂದು?
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಣೆಯ ಮರಗಳಿಗೆ ಹಳ್ಳಿಗಳ ಬಳ್ಳಿಗಳು!

## ೨೭೫

ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತದಲ್ಲಿ ನಿಜವಾದ ಸ್ವಾತಂತ್ರ್ಯ ಯಾವಾಗ?
ಜಾತಿಯ ಭೂತವನ್ನು ಹೂತಾಗ,
ಅಸ್ಪೃಶ್ಯತೆಗೆ ಅಗ್ನಿ ಸಂಸ್ಕಾರವಾದಾಗ,
ಒಂದೇ ಸೂರಿನಡಿಯಲ್ಲಿ ಹಲವು ಮತದವರು ವಾಸಿಸಿದಾಗ,
ಗುಡಿಸಲುಗಳು, ಕೊಳೆಗೇರಿಗಳು ಕಾಣದಾದಾಗ,
ಅನಾಥರ, ಅಂಗವಿಕಲರ, ಅಬಲೆಯರ ಸುಗತಿಯಾದಾಗ,
ದುಡಿಯ ಬಯಸುವವರಿಗೆ ಸತ್ಕಾಯಕ ಸಿಕ್ಕಾಗ,
ಬೇಡುವವರೇ ನೀಡುವವರಾದಾಗ,
ಅಂಧಶ್ರದ್ಧೆಗಳು ಅಳಿದು ಬುದ್ಧಿ ವಿಜ್ಞಾನಗಳು ಬೆಳೆದಾಗ!

## ೨೭೬

ಮರುಚಿಂತನೆಯೇ ಮರುಹುಟ್ಟು!
ನಿನ್ನ ಮರುಹುಟ್ಟು ನಿನ್ನ ಕೈಯಲ್ಲಿ;
ಮರವೆಯ ತೆರೆ ಸರಿದಾಗ ಮರುಹುಟ್ಟು;
ಅಂಧಶ್ರದ್ಧೆಗಳ ತೊರೆದಾಗ ಮರುಹುಟ್ಟು;
ಹೊಸ ಬಾಳಿನ ಬಾಗಿಲ ತೆರೆದಾಗ ಮರುಹುಟ್ಟು;
ಸ್ವತಂತ್ರಧೀರ ಸಿದ್ಧೇಶ್ವರನನರಿದಾಗ ಹೊಸಹುಟ್ಟು!

## ೨೭೭

ಮೀನಿಗೆ ಬಲೆಯ ಬೀಸುವ ಬೆಸ್ತ
ಸಾಗರಕ್ಕೇ ಬಲೆಯ ಬೀಸ ಬಲ್ಲನೇನಯ್ಯ?
ಮರದ ಪಕ್ಷಿಗೆ ಬಲೆಯ ಬೀಸುವ ಬೇಟೆಗಾರ
ಕಾಡಿಗೇ ಬಲೆಯ ಬೀಸಬಲ್ಲನೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರನ ಸದ್ಭಕ್ತ ಮಾತ್ರ
ಬ್ರಹ್ಮಾಂಡಕ್ಕೆ ಮನದ ಬಲೆಯ ಬೀಸಬಲ್ಲನಯ್ಯ!

## ೨೭೮

ಎಲೆಯಂಥ ಹೂವುಗಳುಂಟು,
ಹೂವಿನಂಥ ಎಲೆಗಳುಂಟು,
ಬೀಜದಿಂದುದಿಸಿ ಬೀಜ ಕೊಡುವ ಮರಗಳುಂಟು,
ಬೀಜವಿರದೇ ಬೆಳೆವ ತರುಗಳುಂಟು,

ಶಾಕಾಹಾರಿ ಪ್ರಾಣಿಗಳುಂಟು,
ಮಾಂಸಾಹಾರಿ ಸಸ್ಯಗಳುಂಟು,
ಏನುಂಟು, ಏನಿಲ್ಲ ಸೃಷ್ಟಿಯಲ್ಲಿ?
ಇಷ್ಟಿದ್ದೂ ಹಲವರಿಗಿದು ಇಷ್ಟವಾಗದಿದ್ದರೆ
ಇರಲೇ ಬೇಕು ದೋಷ ಅವರ ದೃಷ್ಟಿಯಲ್ಲಿ–
ಸ್ವತಂತ್ರಧೀರ ಸಿದ್ಧೇಶ್ವರಾ!

೨೭೯

ನನ್ನ ಲೋಕಕ್ಕೆ ಯಾವ ಲೋಕ ಸರಿ?
ನನ್ನ ದೇಶಕ್ಕೆ ಯಾವ ದೇಶ ಸರಿ?
ನನ್ನ ಭಾಷೆಗೆ ಯಾವ ಭಾಷೆ ಸರಿ?
ನನ್ನ ತನಕ್ಕೆ ಇನ್ನಾರತನ ಸರಿ?
ಸ್ವಾತ್ಮೋನ್ನತಿಗೆ ಇನ್ನಾವ ಉನ್ನತಿ ಸರಿ?
ಸ್ವತಂತ್ರಧೀರ ಸಿದ್ಧೇಶ್ವರನಿಗೆ ಇನ್ನಾರು ಸರಿ?

೨೮೦

ಕಾಮಿಗೆ ಕಾಮಿನಿಯೇ ಸ್ವರ್ಗ;
ಜೀನನಿಗೆ ಕಾಂಚನವೇ ಸ್ವರ್ಗ;
ಹೊಟ್ಟೆಬಾಕನಿಗೆ ಮೃಷ್ಟಾನ್ನವೇ ಸ್ವರ್ಗ;
ನಿದ್ದೆಬಡಕನಿಗೆ ಹಾಸಿಗೆಯೇ ಸ್ವರ್ಗ;
ಕುಡುಕನಿಗೆ ಸುರೆಯೇ ಸ್ವರ್ಗ;
ಸ್ವತಂತ್ರಧೀರ ಸಿದ್ಧೇಶ್ವರನ ಶರಣರಿಗೆ
ಸತ್ಯವೇ ಸ್ವರ್ಗ, ಸತ್ಕಾಯಕವೇ ಸ್ವರ್ಗ!

೨೮೧

ಸ್ವಾಭಿಮಾನಿಗೆ ಸೇವಾಜೀವನವೇ ನರಕ;
ಪ್ರಾಮಾಣಿಕನಿಗೆ ಕಳ್ಳವ್ಯಾಪಾರವೇ ನರಕ;
ಅಂತಃಸಾಕ್ಷಿಯವನಿಗೆ ಶಕ್ತಿ ರಾಜಕಾರಣವೇ ನರಕ;
ಸದ್ಧಾಮನಂಥವರಿಗೆ ಶಾಂತಿಶಮೆಗಳೆ ನರಕ;
ಸ್ವಾತಂತ್ರ್ಯಪ್ರೇಮಿಗೆ ಪಾರತಂತ್ರ್ಯವೆ ನರಕ;
ಸೊಸೆಯೆ ವಿಷವಾದರೆ ಸ್ವಗೃಹವೇ ನರಕ;
ಸ್ವತಂತ್ರಧೀರ ಸಿದ್ಧೇಶ್ವರನ ಶರಣರಿಗೆ
ಕೀಳುಮೇಲುಗಳ ಕಲ್ಪನೆಯೆ ನರಕ!

## ೨೮೨

ಆ ದೇವತೆಗಳನ್ನು
ನಾನಂತೂ ನೋಡಿಲ್ಲ!
ಇಲ್ಲಿಯೇ ದೇವತೆಗಳಿದ್ದಾರೆ–
ಗುರುತಿಸುವೆನಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೮೩

ನಾನು ಪಿಶಾಚಿಗಳ ನೋಡಿಲ್ಲವಯ್ಯ;
ಆದರೆ ಧನ ಪಿಶಾಚಿಗಳನ್ನು ನೋಡಿದ್ದೇನೆ,
ಪೀತಪಿಶಾಚಿಗಳ ನೋಡಿದ್ದೇನೆ,
ಪದವಿ ಪಿಶಾಚಿಗಳ ನೋಡಿದ್ದೇನೆ,
ಶಾಸ್ತ್ರ ಪಿಶಾಚಿ, ಶಸ್ತ್ರಪಿಶಾಚಿಗಳ ನೋಡಿದ್ದೇನೆ,
ಸಂಶಯ ಪಿಶಾಚಿಗಳನ್ನು ನೋಡಿದ್ದೇನೆ!
ಆ ಪಿಶಾಚಿಗಳಿಂದ ನನ್ನನ್ನು ನಾನೇ ರಕ್ಷಿಸಿಕೊಳ್ಳಬಲ್ಲೆ–
ಈ ಪಿಶಾಚಿಗಳಿಂದ ನೀನೇ ರಕ್ಷಿಸಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೮೪

ಹಂದಿಯ ಮೆಚ್ಚಿದ ಕಣ್ಣಿಗೆ
ಇಂದುಮುಖಿಯೇ ಅಂದಗೇಡಿ;
ನಿಂದೆಯ ಮೆಚ್ಚಿದ ಕಿವಿಗೆ
ಸಂತವಾಣಿಯೇ ಭ್ರಾಂತವಾಣಿ;
ಮೀನಿನ ನಾತ ಮೆಚ್ಚಿದ ಮೂಗಿಗೆ
ಮಲ್ಲಿಗೆಯ ಸುಗಂಧವೇ ದುರ್ಗಂಧ;
ಹೆಂಡವ ಮೆಚ್ಚಿದ ಬಾಯಿಗೆ
ಹಸುವಿನ ಹಾಲೇ ಮಾರ್ಜಾಲದ ಹಾಲು;
ಸ್ವತಂತ್ರಧೀರ ಸಿದ್ಧೇಶ್ವರಾ,
ವಿಷಯಲೋಲುಪ ಮನಕ್ಕೆ
ನಿನ್ನ ಹೆಸರೇ ವಿಷ!

## ೨೮೫

ಕಿವಿಗೆ ಹಿತ ಪ್ರೀತಿಸುವವರ ಸ್ವರ;
ಕಣ್ಣಿಗೆ ಹಿತ ಪ್ರೀತಿಸುವವರ ಮುಖ;

ಮೂಗಿಗೆ ಹಿತ ಪ್ರೀತಿಸುವವರ ಮೈಗಂಪು;
ತ್ವಚಕ್ಕೆ ಹಿತ ಪ್ರೀತಿಸುವವರ ಸ್ಪರ್ಶ;
ರಸನೆಗೆ ಹಿತ ಪ್ರೀತಿಸುವವರ ಹೆಸರು;
ಪ್ರೀತಿಸು, ಪ್ರೀತಿಸುವವರ ಹೆಚ್ಚಿಸಿಕೋ–
ಇದೇ ಹಿತಗಳಲ್ಲಿ ಹಿತವೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ!

## ೨೮೬

ಅಗ್ನಿ ಶುದ್ಧಗೊಳಿಸುತ್ತದೆ;
ವಾಯು ಶುದ್ಧಗೊಳಿಸುತ್ತದೆ;
ಜಲ ಶುದ್ಧಗೊಳಿಸುತ್ತದೆ;
ಮಣ್ಣು ಶುದ್ಧಗೊಳಿಸುತ್ತದೆ–
ಆಕಾಶ ಶುದ್ಧಗೊಳಿಸುತ್ತದೆ–
'ನೀ ಶುದ್ಧಗೊಳಿಸಿಕೊಳ್ಳಲಾರೆಯ ನಿನ್ನನ್ನು?'
ಎಂದು ಕೇಳುತ್ತಲಿದ್ದಾನೆ
ಸ್ವತಂತ್ರಧೀರ ಸಿದ್ಧೇಶ್ವರ.

## ೨೮೭

ಶಾಸ್ತ್ರ ಹೇಳುವವರೆಲ್ಲ ಜನಕರೆ?
ಶಾಸನ ಬರೆಸಿದವರೆಲ್ಲ ಅಶೋಕರೆ?
ವಚನ ಬರೆದವರೆಲ್ಲ ದಣ್ಣಾಯಕರೆ?
ಕೀರ್ತನೆ ರಚಿಸಿದವರೆಲ್ಲ ಕನಕರೆ?
ಆರಿಸಿ ಬಂದವರೆಲ್ಲ ಶಾಸಕರೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ವಂಚಿಸಿ ಮಂಚವೇರಿದವರೆಲ್ಲ ನಾಯಕರೆ?

## ೨೮೮

ಮೋಡವೆ,
ಉಪ್ಪುನೀರಿನ ಉಗಿಯನ್ನು ನುಂಗಿ
ಸಿಹಿನೀರ ನೀಡುವ ಕಲೆಯ ಕಲಿಸು ನನಗೆ;
ಬಳ್ಳಿಯೆ,
ಗೊಬ್ಬರದ ಗಬ್ಬು ನಾತವನ್ನೇ
ಹೂವಿನ ನರುಗಂಪನಾಗಿಸುವ ಮೋಡಿ ಕಲಿಸು ನನಗೆ;

ದೀಪವೇ,
ಎಣ್ಣೆಕಾಳುಗಳ ಜಿಡ್ಡನ್ನು ಮೊಗೆದು
ಬೆಳಕನ್ನು ಬೀರುವ ಬೆಡಗು ಕಲಿಸು ನನಗೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನೂರು ನೋವುಗಳ ನಂಜಿನಿಂದಲೇ
ನಿನ್ನ ನೈವೇದ್ಯಕ್ಕೆ ಗಂಜಿ ಮಾಡುವ ಗುಟ್ಟು ಕಲಿಸು ನನಗೆ!

೨೮೯

ನೆಲ್ಲಿ ನೇರಿಳೆಗಳಲ್ಲಿ ದ್ರಾಕ್ಷಿಯ ಸಿಹಿಯಿಲ್ಲ–
ಆದರೆ ಅವು ನೀಡುವುದು ಆರೋಗ್ಯವನ್ನು, ಮದ್ಯವನ್ನಲ್ಲ;
ಹಳ್ಳಿಯ ಹಾಡುಗಳಲ್ಲಿ ಹದಿನೆಂಟು ವರ್ಣನೆಗಳಿಲ್ಲ–
ಆದರೆ ಅವು ನೀಡುವುದು ಬಾಳಿನ ತಿರುಳನ್ನೂ, ತಲೆನೋವನ್ನಲ್ಲ;
ಜೋಳ ರಾಗಿಗಳಲ್ಲಿ ಅಕ್ಕಿ ಗೋಧಿಗಳ ಸವಿ–ಸತ್ವಗಳಿಲ್ಲ,
ಆದರೆ ಅವು ನೀಡುವುದು ನಿರೋಗವನ್ನು, ರೋಗವನ್ನಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ
ಬಡ ಭಕ್ತರ ಬಿನ್ನಪಗಳಲ್ಲಿ ವೇದಮಂತ್ರಗಳಿಲ್ಲ,
ಆದರೆ ಅವು ನಿನಗೆ ನೀಡುವುದು ಸಂತಸವನ್ನು
ಉಬ್ಬಸವನ್ನಲ್ಲ!

೨೯೦

ಚಿಟ್ಟೆಗಳ ರಸಿಕತೆಯನ್ನು ಮೆಚ್ಚುವುದೆ?
ದುಂಬಿಗಳ ರಸಾಸ್ವಾದನೆಯನ್ನು ಮೆಚ್ಚುವುದೆ,
ಜೇನ್ನೊಣಗಳ ಜೀವನಶ್ರದ್ಧೆಯನ್ನು ಮೆಚ್ಚುವುದೆ?
ಅಷ್ಟಿಷ್ಟು ಎಲ್ಲವೂ ಬೇಕು,
ದುರುದುಂಬಿಯಾಗದಿದ್ದರೆ ಸಾಕು.
ಸ್ವತಂತ್ರಧೀರ ಸಿದ್ಧೇಶ್ವರ.

೨೯೧

ಮನೆಯನ್ನು ಬೆಳಗುವ ದೀಪಕ್ಕೆ
ಬೀದಿಯನ್ನು ಬೆಳಗುವ ಭಾಗ್ಯವಿಲ್ಲ;
ಬೀದಿಯನ್ನು ಬೆಳಗುವ ದೀಪಕ್ಕೆ
ಮನೆಯನ್ನು ಬೆಳಗುವ ಭಾಗ್ಯವಿಲ್ಲ!

ಆದರೇನು,
ಬೆಳಕನ್ನು ಯಾರು ಬೀರಿದರೂ
ಎಲ್ಲಿ ಬೀರಿದರೂ ಸೈಪು;
ಬೆಳಕ ಬೀರುವವರಿಗಿರಲಿ
ಸ್ವತಂತ್ರಧೀರ ಸಿದ್ಧೇಶ್ವರನ ಕಾಪು!

೨೯೨

ಗುಡುಗು ಸಿಡಿಲುಗಳೊಡನೆ ಬಂದು
ಮಳೆಗರೆವ ಮೋಡಗಳು ಕೆಲವು,
ಗಾಳಿಯ ಗರಿಗಳಂತೆ ಮೆತ್ತಗೆ ಬಂದು
ಮಳೆಗರೆವ ಮೋಡಗಳು ಹಲವು.
ಮೋಡಗಳು ಹೇಗೇ ಬರಲಿ–
ಮಳೆ ಬಂದರೆ ಸಾಕಯ್ಯ!
ಗುಡುಗುವ ಗುರುವಿರಲಿ,
ಮೌನವ್ಯಾಖ್ಯಾನದ ಗುರುವಿರಲಿ
ಹೃತ್ತಾಪಹಾರಕ ಗುರು ದೊರೆತರೆ ಸಾಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೨೯೩

ಜನಸಮೂಹಗಳನ್ನು ಎದುರಿಸಿದ್ದೇನೆ.
ಜಟಿಲ ಪ್ರಶ್ನೆಗಳನ್ನು ಎದುರಿಸಿದ್ದೇನೆ;
ಕಠಿನ ಸಮಸ್ಯೆಗಳನ್ನು ಎದುರಿಸಿದ್ದೇನೆ.
ನನ್ನನ್ನೇ ನಾನು ಎದುರಿಸಲಾಗಲಿಲ್ಲವಯ್ಯ ಇನ್ನೂ!
ಮಂದಿಗೆ ಮಂಕು ಬೂದಿ ಎರಚಿದಂತೆ
ನನಗೆ ನಾನೇ ಎರಚಲಾರದೆ ಹೋದೆನಯ್ಯ!
ಲೋಕಾಂತದಲ್ಲಿ ಏನೇ ಇರಲಿ,
ಏಕಾಂತದಲ್ಲಿ ಬಿಚ್ಚಿಕೊಳ್ಳುವ
ನನ್ನ ಕರಾಳ ಸ್ವರೂಪವನ್ನು
ನಾನೆಂತು ಎದುರಿಸಲಯ್ಯ?
ನೀನೇ ಎದುರಿಗೆ ನಿಂತರೆ
ಎದುರಿಸಲಾರೆನೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೨೯೪

ಕುಲಪರ್ವತಗಳು, ಹೆಮ್ಮರಗಳು ಇರುವಾಗ
ನನ್ನ ಪುಟ್ಟಗೂಡಿನ ಮೇಲೇಕಯ್ಯ
ನಿನ್ನ ಸಿಡಿಲಿನ ದಾಳಿ?
ಘೋರ ಪಾತಕಿಗಳು, ಕ್ರೂರ ಕರ್ಮಿಗಳು ಇರುವಾಗ
ನಿನ್ನ ದಿವ್ಯಾಸ್ತ್ರಕ್ಕೇಕಯ್ಯ
ನನ್ನ ಪಾಳಿ?
ಲೋಕಕಂಟಕರ ಸವಾಲನ್ನು ಮೊದಲು ಸ್ವೀಕರಿಸು,
ನನ್ನನ್ನು ಸ್ವೀಕರಿಸು ಇಲ್ಲವೆ ಧಿಕ್ಕರಿಸು
ಸ್ವತಂತ್ರಧೀರ ಸಿದ್ಧೇಶ್ವರಾ!

## ೨೯೫

ಅಲಂಕರಿಸಿಕೊಳ್ಳಲು ರನ್ನವಿದ್ದರೂ
ಉಣ್ಣಲು ಅನ್ನವೇ ಬೇಕು;
ಇಡಲು ಚಿನ್ನವಿದ್ದರೂ
ಕುಡಿಯಲು ನೀರೇ ಬೇಕು;
ತೊಡೆಯಲು ಚಂದನವಿದ್ದರೂ
ಉಡಲು ಬಟ್ಟೆಯೇ ಬೇಕು;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂತತಿ ವೃದ್ಧಿಗೆ ಕಾಮವಿದ್ದರೂ
ಸಂಸ್ಕೃತಿ ಸಮೃದ್ಧಿಗೆ ಪ್ರೇಮವೇ ಬೇಕು.

## ೨೯೬

ಬಿಸಿನೀರಿನ ಸ್ನಾನ ನನಗೆ,
ಬಿಸಿಲಿನ ಸ್ನಾನ ಸಚರಾಚರಕ್ಕೆ;
ಸುರಿವ ಷೌಅರ್* ಸ್ನಾನ ನನಗೆ
ಸುರಿಮಳೆಯ ಸ್ನಾನ ಸಚರಾಚರಕ್ಕೆ;
ನಲ್ಲಿಯ ನೀರಿನ ಸ್ನಾನ ನನಗೆ,
ಸಾಂದ್ರ ಚಂದ್ರಿಕೆಯ ಸ್ನಾನ ಸಚರಾಚರಕ್ಕೆ;
ಪಂಚಾಮೃತದ ಸ್ನಾನ ಮಂದಿರದ ಮೂರ್ತಿಗೆ,
ಪಂಚಭೂತಗಳ ಸ್ನಾನ ಸ್ವತಂತ್ರಧೀರ ಸಿದ್ಧೇಶ್ವರನಿಗೆ!

## ೨೯೭

ಎಲ್ಲವೂ
ಅರಿತ ಮೇಲೆ, ಅತಿ ಸುಲಭ,
ಅರಿಯದ ಮುನ್ನ?
ದೊರೆತ ಮೇಲೆ ಅತಿ ಸಾಮಾನ್ಯ,
ದೊರೆಯುವ ಮುನ್ನ?
ಮರೆತ ಮೇಲೆ ಅತಿ ನಿಶ್ಚಿಂತೆ,
ಮರೆಯುವ ಮುನ್ನ?
ಸ್ವತಂತ್ರಧೀರ ಸಿದ್ಧೇಶ್ವರ ಒಲಿದ ಮೇಲೆ ಸುಲಭ,
ಒಲಿಯುವ ಮುನ್ನ?

## ೨೯೮

ಕಾಲಾಶ್ರಿತ ಕಲೆಗಳನ್ನು
ಸ್ಥಲಾಶ್ರಿತ ಕಲೆಗಳನ್ನಾಗಿಸಿದ
ವಿಜ್ಞಾನಿಗೆ ನಮೋ;
ಸ್ಥಲಾಶ್ರಿತ ಕಲೆಗಳನ್ನು
ಸರ್ವಸ್ಥರೀಯ ಕಲೆಗಳನ್ನಾಗಿಸಿದ
ತಂತ್ರಜ್ಞಾನಿಗೆ ನಮೋ;
ಸಿರಿವಂತರ ಸೊತ್ತಾಗಿದ್ದ ಕಲೆಗಳನ್ನು
ಸಾಮಾನ್ಯರ ತುತ್ತಾಗಿಸಿದ
ಯಂತ್ರಜ್ಞಾನಿಗೆ ನಮೋ;
ಅಗಮ್ಯ ಸ್ವತಂತ್ರಧೀರ ಸಿದ್ಧೇಶ್ವರನನ್ನು
ಅನುಭಾವಗಮ್ಯಗೊಳಿಸಿದ ಆತ್ಮಜ್ಞಾನಿಗೆ ನಮೋ!

## ೨೯೯

ಝುಗ ಝುಗಿಸುವ ಹಗಲಿನಲ್ಲಿ ಕತ್ತಲೆಯ ಆಭಾಸ.
ಕುರುಡುಗೊಳಿಸುವ ಕತ್ತಲೆಯಲ್ಲಿ ಬೆಳಕಿನ ಭಾಸ!
ಜನಜಂಗುಳಿಯ ಗಜಬಜೆಯಲ್ಲಿ ಶಾಂತಿಯ ಅನುಭವ.
ನಿರ್ಜನ ನೀಡದಲ್ಲಿ ಅದರ ಅಪ್ಪಟ ಅಭಾವ!
ಪತಿತರಲ್ಲಿ ಪ್ರತಿಭೆಯ ಪ್ರಾದುರ್ಭಾವ,
ಪಂಡಿತಪುತ್ರರಲ್ಲಿ ಸಾಮಾನ್ಯಜ್ಞಾನದ ಅಭಾವ!
ಸ್ವತಂತ್ರಧೀರ ಸಿದ್ಧೇಶ್ವರಾ.

ಆಮ್ರಪಾಲಿಯ ಅಂತರಂಗದಲ್ಲಿ ಅಧ್ಯಾತ್ಮದ ಪ್ರಭೆ,
ಹೆಲೆನಳ ಹೃದಯದಲ್ಲಿ ಕಾಮದ ಕ್ಷೋಭೆ!

೩೦೦

ನಿನ್ನ ನೀನೇ ಗೆಲ್ಲು,
ನೀನು ನೀನಾಗಿ ನಿಲ್ಲು!
ಅನ್ಯರ ನಿನ್ನಂತೆ ತಿಳಿ,
ಮನವಾಗಲಿ ತಿಳಿ!
ನಿನಗೆ ನೀನೇ ಗೆಳೆಯ, ಅರಿ-
ಇನ್ನಾದರೂ ಅರಿ!
ಸ್ವತಂತ್ರಧೀರ ಸಿದ್ಧೇಶ್ವರನ ನಂಬು,
ಬಾಳಿಗರ್ಥವ ತುಂಬು!

೩೦೧

ಬಾಯ ಮೈಲಿಗೆ ಕಳೆಯುವುದು
ಸತ್ಯವಚನ;
ಕಿವಿಯ ಮೈಲಿಗೆ ಕಳೆಯುವುದು
ಸತ್ಯ ಶ್ರವಣ;
ಕಣ್ಣಿನ ಮೈಲಿಗೆ ಕಳೆಯುವುದು
ಸತ್ಯರ ದರ್ಶನ;
ಮೂಗಿನ ಮೈಲಿಗೆ ಕಳೆಯುವುದು
ಸತ್ಯಸುಮದ ಆಘ್ರಾಣ;
ತ್ವಚದ ಮೈಲಿಗೆ ಕಳೆಯುವುದು
ಸತ್ಯಸಿಂಚನ;
ಸ್ವತಂತ್ರಧೀರ ಸಿದ್ಧೇಶ್ವರಾ.
ಭವದ ಮೈಲಿಗೆ ಕಳೆಯುವುದು
ನಿನ್ನ ಶರಣರ ಸತ್ಯಚಿಂತನ!

೩೦೨

ಒಬ್ಬನಿಗೆ ಗುರಿ ಗೊತ್ತಿಲ್ಲ.
ಒಬ್ಬನಿಗೆ ದಾರಿ ಗೊತ್ತಿಲ್ಲ,
ಇಬ್ಬರೂ ವ್ಯರ್ಥ ಅಲೆಯುವವರೆ!
ಒಬ್ಬನಿಗೆ ನಿಧಾನ ಗೊತ್ತಿಲ್ಲ,

ಒಬ್ಬನಿಗೆ ಔಷಧ ಗೊತ್ತಿಲ್ಲ,
ಇಬ್ಬರೂ ವೈದ್ಯ ವಿದ್ಯೆಗೆ ಕಲಂಕ ತರುವವರೆ!
ಒಬ್ಬನಿಗೆ ಸಿರಿ ಇದೆ, ಪರಹಿತ ರತಿಯಿಲ್ಲ,
ಒಬ್ಬನಿಗೆ ಪರಹಿತ ರತಿಯಿದೆ, ಸಿರಿಯಿಲ್ಲ-
ಇಬ್ಬರೂ ಕೃತಾರ್ಥತೆಯಿಂದ ವಂಚಿತರೆ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೦೩

ಜನವನದಲ್ಲಿ ಅರಳಿರುವ
ಹೂವು ನನ್ನ ಬಾಳು;
ಹಡೆದವರು, ಒಡಹುಟ್ಟಿದವರು,
ಮಡದಿ ಮಕ್ಕಳು, ಗೆಳೆಯರು
ಅದರ ದಳಗಳು;
ಪ್ರೀತಿಯೇ ಪರಿಮಳ!
ಈ ಪರಿಮಳದ ಹರಡಿಕೆಗೆ
ಹದ್ದುಬಸ್ತುಗಳಿರದಿರಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೦೪

ಜಾತ್ರೆಗಳಲ್ಲಿ ಎಷ್ಟು ಅಂಗಡಿಗಳಿದ್ದರೇನು,
ಮಕ್ಕಳ ಕಣ್ಣು ಮಿಠಾಯಿ ಅಂಗಡಿಗಳ ಮೇಲೆ;
ಪತ್ರಿಕೆಗಳಲ್ಲಿ ಎಷ್ಟು ಪುಟಗಳಿದ್ದರೇನು,
ಯುವಕರ ಕಣ್ಣು ಸಿನಿಮ ಪುಟಗಳ ಮೇಲೆ;
ಪೇಟೆಯಲ್ಲಿ ಎಷ್ಟು ಮಳಿಗೆಗಳಿದ್ದರೇನು,
ಸತಿಯರ ಕಣ್ಣು ಸೀರೆ ಅಂಗಡಿಗಳ ಮೇಲೆ,
ಸಭೆಯಲ್ಲಿ ಎಂಥ ವಿದ್ವನ್ಮಣಿಗಳಿದ್ದರೇನು,
ಸಭಿಕರ ಕಣ್ಣು ಮಂತ್ರಿ, ಅಭಿನೇತ್ರಿಯರ ಮೇಲೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಎಂಥ ಸಿರಿವಂತರು ಸುತ್ತಿದ್ದರೇನು,
ನಿನ್ನ ಕಣ್ಣು ಬಡ ಭಕ್ತರ ಮೇಲೆ!

೩೦೫

ಒಂದು ಅತಿರೇಕದಿಂದ ಇನ್ನೊಂದು ಅತಿರೇಕಕ್ಕೆ
ನೆಗೆಯುವಲ್ಲಿಯೇ ಹಿಗ್ಗು ಹಿಂದೀಯರಿಗೆ;
'ಅತಿ ಸರ್ವತ್ರ ವರ್ಜಯೇತ್' ಎಂದ ದೇಶದಲ್ಲಿಯೇ
'ಅತಿ ಸರ್ವತ್ರ ಆಚರೇತ್' ಎನ್ನುವರ ಪ್ರಾಬಲ್ಯ,
ಎಲ್ಲದರ ವೈಫಲ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೦೬

ಮಾಸ್ತಿಕಲ್ಲು ಒಗೆವ ಕಲ್ಲಾದುದ ಕಂಡೆ;
ವೀರಗಲ್ಲು ಕಣಜದ ಕಲ್ಲಾದುದ ಕಂಡೆ;
ಶಿಲಾಶಾಸನ ಮೆಟ್ಟಿಲಾದುದ
ಶಿಲಾಲತೆ ತೊಟ್ಟಿಲಾದುದ
ಶಿಲಾಮೂರ್ತಿಗಳು ಒಟ್ಟಿಲಾದುದ ಕಂಡೆ;
ಶಿಲಾಭಿತ್ತಿಗಳು ಅವಾಚ್ಯ ಶಬ್ದಗಳಿಗೆ
ಫಲಕವಾದುದ ಕಂಡೆ!
ನಮ್ಮ ಶಿಲ್ಪ ಸಂಪತ್ತೇ
ನಮ್ಮ ಅಸಂಸ್ಕೃತಿಯ ಡಂಗುರಿಗನಾಗಬೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಂಥ ಶ್ರೀಮಂತ ದರಿದ್ರರು,
ಕಾಡುನಾಗರಿಕರು ಮೂಢ ಸುಶಿಕ್ಷಿತರು
ಇನ್ನೆಲ್ಲಿ?

೩೦೭

ಮತ್ತೆ ಪ್ರಬಲಿಸುತ್ತಿದೆ ಪುರೋಹಿತಶಾಹಿ, ಭಾರತದಲ್ಲಿ!
ಮತ್ತೆ ಮತ್ತೇರಿದೆ ಮುಲ್ಲಾಶಾಹಿಗೆ ಭಾರತದಲ್ಲಿ!
ತಾಂತ್ರಿಕರು, ಮಾಂತ್ರಿಕರು, ಜೋಯ್ಸರು, ಅರ್ಚಕರು-
ಎಷ್ಟು ಪರೋಪಜೀವಿಗಳಿಲ್ಲಿ,
ಡಕ್ಕರಿಲ್ಲಿ, ಕೂಳಬಕ್ಕರಿಲ್ಲಿ,
ಇವರನೆಳೆದೊಯ್ದು
ಬಂಜರುಭೂಮಿ ಸಾಗುವಳಿ ಯೋಜನೆಗೆ ಸೇರಿಸಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೦೮

ಸೂಳೆಯರ ಆಣೆ, ಚುನಾವಣೆಗಳ ಆಶ್ವಾಸನೆ–
ಯಾರು ನಂಬಬೇಕಯ್ಯ?
ರಾಜಕಾರಣಿಗಳ ಮುಖವಾಡ, ಪುರೋಹಿತಶಾಹಿಯ ಕೈವಾಡ–
ಯಾರು ಗುರುತಿಸಬೇಕಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ
ಶೋಷಕರ ಮಾಯಾಜಾಲ, ಶಾಸಕರ ಇಂದ್ರಜಾಲ–
ಯಾರು ನಿವಾರಿಸಬೇಕಯ್ಯ?

## ೩೦೯

ಈ ಕಾಡಿನ ಎಲ್ಲ ಜಾತಿಯ ಗಿಡಬಳ್ಳಿಗಳೆ, ಗುಲ್ಮ ಕಳ್ಳಿಗಳೆ.......
ಕ್ಷಮಿಸಿ 'ಜಾತಿಯ ಸೋಂಕೇ ಇಲ್ಲದ ನಿಮಗೂ
'ಜಾತಿ' ಶಬ್ದ ಬಳಸಿ ಬಿಟ್ಟೆ'–
ಜಾತೀಯತೆಯ ವಾತಾವರಣದಲ್ಲಿಯೇ ಜೀವಿಸಿಹ ನಾನು!
ನನ್ನನ್ನು ಕ್ಷಮಿಸಿರಿ,
ಜೀವಿಗಳಿಗೆ ಜಾತಿಯಿಲ್ಲೆಂಬುದ ಕಲಿಸಿರಿ;
ಜಾತಿಯಿಲ್ಲದೆಯೇ ಜೀವಿಸಬಹುದೆಂಬುದ ತಿಳಿಸಿರಿ;
ಅಜಾತ ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
'ಜಾತಿ, ಜಾತಿ' ಎನ್ನುವವರೇ
ಕುಜಾತರೆಂದು ಘೋಷಿಸಿರಿ !

## ೩೧೦

ಜನರನ್ನು ನರಳಿಸಿ
ನಿಯಮಗಳನ್ನುಳಿಸಿಕೊಂಡ ನೌಕರಷಾಹಿಯಿದೆ;
ಜನತೆಯನ್ನು ಒರಲಿಸಿ
ಜಾತಿಯನ್ನುಳಿಸಿಕೊಂಡ ಪುರೋಹಿತಷಾಹಿಯಿದೆ;
ದೇಶವನ್ನು ಒತ್ತೆಯಿರಿಸಿ
ಪಕ್ಷವನ್ನುಳಿಸಿಕೊಂಡ ಪುಢಾರಿಷಾಹಿಯಿದೆ;
ಬಡವರ ಹೊಟ್ಟೆ ಉರಿಸಿ
ಧರ್ಮರಕ್ಷಕರೆನಿಸಿಕೊಂಡವರ ಶ್ರೀಮಂತಷಾಹಿಯಿದೆ;
ಕಾಳುಗಳಲ್ಲಿ ಕಲ್ಲು ಬೆರಸಿ

ದಾನವೀರರೆನಿಸಿಕೊಂಡವರ ವರ್ತಕಷಾಹಿಯಿದೆ;
ಮನುಷ್ಯಷಾಹಿ ಎಂದು ಬರುವುದಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೧೧

ಎಲ್ಲರಿಗಿಂತ ಬುದ್ಧಿವಂತರನ್ನೂ
ಎಲ್ಲರಿಗಿಂತ ಬುದ್ಧಿಗೇಡಿಗಳನ್ನೂ
ಬ್ರಾಹ್ಮಣರಲ್ಲಿಯೇ ನೋಡಿದ್ದೇನೆ;
ಎಲ್ಲರಿಗಿಂತ ಶೂರರನ್ನೂ
ಎಲ್ಲರಿಗಿಂತ ಭೀರುಗಳನ್ನೂ
ಕ್ಷತ್ರಿಯರಲ್ಲಿಯೇ ನೋಡಿದ್ದೇನೆ;
ಎಲ್ಲರಿಗಿಂತ ಉದಾರಿಗಳನ್ನೂ
ಎಲ್ಲರಿಗಿಂತ ಕ್ರೂರಿಗಳನ್ನೂ
ವೈಶ್ಯರಲ್ಲಿಯೇ ನೋಡಿದ್ದೇನೆ;
ಎಲ್ಲರಿಗಿಂತ ಅಜ್ಞರನ್ನೂ
ಎಲ್ಲರಿಗಿಂತ ತಜ್ಞರನ್ನೂ
ಶೂದ್ರರಲ್ಲಿಯೇ ನೋಡಿದ್ದೇನೆ;
ಎಲ್ಲರಿಗಿಂತ ಪುಣ್ಯವಂತರನ್ನೂ
ಎಲ್ಲರಿಗಿಂತ ಪಾಪಿಷ್ಠರನ್ನೂ
ಆಸ್ತಿಕರಲ್ಲಿಯೇ ನೋಡಿದ್ದೇನೆ;
ಸ್ವತಂತ್ರಧೀರ ಸಿದ್ಧೇಶ್ವರಾ
ಅವರಿವರೆನ್ನದೆ
ಎಲ್ಲರಲ್ಲಿಯೂ ನಿನ್ನನ್ನೇ ನೋಡಿದ್ದೇನೆ!

೩೧೨

ಬ್ರಾಹ್ಮಣರ ಹೊಟ್ಟೆಗಳಲ್ಲಿ
ವೇದಗಳಿರುವುವೆ?
ಕ್ಷತ್ರಿಯರ ಹೊಟ್ಟೆಗಳಲ್ಲಿ
ಶಸ್ತ್ರಾಸ್ತ್ರಗಳಿರುವುವೆ?
ವೈಶ್ಯರ ಹೊಟ್ಟೆಗಳಲ್ಲಿ
ಬಂಗಾರದ ಗಟ್ಟಿಗಳಿವೆಯೆ?
ಶೂದ್ರ ದಲಿತರ ಹೊಟ್ಟೆಗಳಲ್ಲಿ ಮಾತ್ರ

ಮೂತ್ರ ಮಲಗಳೆ?
ನಿನ್ನ ಮಕ್ಕಳಲ್ಲಿ ಮೇಲು ಕೀಳೆಣಿಸುವವರ
ಸೊಕ್ಕಡಗಿಸು ಸ್ವತಂತ್ರಧೀರ ಸಿದ್ಧೇಶ್ವರ!

೩೧೩

ಏಕಕಾಲಕ್ಕೆ ಅನೇಕ ಶತಮಾನಗಳಲ್ಲಿ
ಬದುಕುತ್ತಿರುವವರ ಭೂಮಿಯಿದು ಭಾರತ!
ಆದಿಮಾನವರಿದ್ದಾರೆ, ವೇದಪಾರಗರಿದ್ದಾರೆ,
ನಿರ್ಗುಣೋಪಾಸಕರಿದ್ದಾರೆ, ನಾಗಪೂಜಕರಿದ್ದಾರೆ,
ಸತಿ ಹೋಗುವರಿದ್ದಾರೆ, ಕ್ಯಾಬರೇ ನರ್ತಕಿಯರಿದ್ದಾರೆ.
ಯಾರುಂಟು, ಯಾರಿಲ್ಲ ಇಲ್ಲಿ?
ದೇವ ದಾನವರ ಯುದ್ಧಭೂಮಿ,
ಭೂಸುರ-ಬನಿಯಾಗಳ ಭೋಗ ಭೂಮಿ,
ದಲಿತ ಪಂಚಮರ ಪಾಲಿಗೆ ಮರುಭೂಮಿ,
ಅಬಲೆಯರ ಅಂಗವಿಕಲರ ಶೋಕಭೂಮಿ,
ಪಾಶ್ಚಾತ್ಯೀಕರಣ ಸಂಸ್ಕೃತೀಕರಣಗಳ ಸಂಘರ್ಷ ಭೂಮಿ,
ಸ್ವತಂತ್ರಧೀರ ಸಿದ್ಧೇಶ್ವರಾ,
ಇದೆಂದಿಗಾಗುವುದು ನ್ಯಾಯಭೂಮಿ?

೩೧೪

ಸ್ವತಂತ್ರತೆ ಬಂದಾಕ್ಷಣ
ಸಮಾನತೆ ಬರುವುದೆಂಬುದು ಭ್ರಮೆಯಯ್ಯ!
ಸಿರಿವಂತರ ಸ್ವತಂತ್ರತೆ ದೀನರದಾಸ್ಯ!
ಹೋರಾಡಿ ಸಮಬಾಳು, ಸಮಪಾಲು ಪಡೆಯದಿರೆ
ಬಡವರಿಗೆ ಬಿಡುಗಡೆಯೇ ಪಾಶ!
ಸರ್ವರೂ ಸಮಾನರು,
ಆದರೆ ಹಲವರು ಹೆಚ್ಚು ಸಮಾನರು
ಎಂಬುದು ಹೋಗದೆ
ನಿಲ್ಲದು ಸಮಾನತೆಯ ವಿರೋಧಾಭಾಸ!
ಸರ್ವ ಸ್ವಾತಂತ್ರ್ಯ, ಸರ್ವಸಮಾನತೆ,
ಸಾಮಾಜಿಕ ನ್ಯಾಯಗಳ ತ್ರಿವೇಣಿ ಉದಿಸದೆ
ಸ್ವಾತಂತ್ರ್ಯ ಸಾಮಾನ್ಯರ ಪರಿಹಾಸ
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೧೫

ಸೂಳೆಕೆರೆಯ ನೀರನ್ನು
ಗರತಿಯರ ಗದ್ದೆಗಳು ಉಣ್ಣವೇನಯ್ಯ?
ಶೂದ್ರ ಕೆತ್ತಿದ ಮೂರ್ತಿಯನ್ನು
ದ್ವಿಜರು ಪೂಜಿಸರೇನಯ್ಯ?
ಪಂಚಮರು ಹೊಲಿದ ಮೆಟ್ಟುಗಳನ್ನು
ಆಚಾರ್ಯರು ಮೆಟ್ಟರೇನಯ್ಯ?
ಗೌಳಿಗ ಕರೆದ ಹಾಲನ್ನು
ದೇವ ಪ್ರತಿಮೆಗೆ ಎರೆಯರೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ.
ರೈದಾಸ-ಕನಕ-ಕಬೀರರ ಹಾಡುಗಳನ್ನು
ಗರ್ಭಗುಡಿಗಳಲ್ಲಿ ಹಾಡರೇನಯ್ಯ?

### ೩೧೬

ಅವಕಾಶ ಪಡೆದ ಅಂಗನೆಯರು
ದಂಗುಗೊಳಿಸುವ ಪ್ರತಿಭೆ ತೋರಿದ್ದಾರೆ;
ಅವಕಾಶ ಪಡೆದ ಅಂಗವಿಕಲರು
ಗುಂಗು ಹಿಡಿಸುವ ಪ್ರಾವೀಣ್ಯ ತೋರಿದ್ದಾರೆ;
ಅವಕಾಶ ಪಡೆದ ದಲಿತರು
ವರ್ಣಾಂಧರ ಗರ್ವ ಭಂಗಿಸುವ ಪರಿಣತಿ ತೋರಿದ್ದಾರೆ;
ಅವಕಾಶ ಪಡೆದ ಅನಾಥರು
ಡಂಗುರ ಹೊಯ್ಸುವ ಕೊಡುಗೆ ನೀಡಿದ್ದಾರೆ;
ಅವರಿವರಿಗೆ ಅವಕಾಶವಿತ್ತರೆ
ಅವನತಿ ಅನಿವಾರ್ಯವೆನ್ನುವ
ಅವಿಚಾರವಾದಿಗಳಿಗೆ
ಇವರೇ ಉತ್ತರವಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೧೭

ಬಳೆಗಾರ ಕೈಹಿಡಿವನೆಂದು
ಬೇಟಗಾರ ಕೈಹಿಡಿದರೆ ಬಿಡುವರೇನಯ್ಯ?
ಅಕ್ಕಸಾಲಿಗ ಕಿವಿ-ಮೂಗ ಮುಟ್ಟಿದನೆಂದು

ಅಕ್ಕಲಿಗ ಮುಟ್ಟಿದರೆ ಕುಟ್ಟರೇನಯ್ಯ?
ಸಿಂಪಿಗ ಅಳತೆ ಕೊಂಡನೆಂದು
ಸೊಂಪಿಗ ಕೊಳ್ಳಹೋದರೆ ಹೊಡೆಯರೇನಯ್ಯ?
ವೈದ್ಯ ಉದರ ಪರೀಕ್ಷಿಸಿದನೆಂದು
ಜೋಡ ಪರೀಕ್ಷಿಸ ಬಯಸಿದರೆ ಬಡಿಯರೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ತಕ್ಕವರು ಮಾಡುವ ಕೆಲಸವನ್ನು
ತಗದವರು ಮಾಡಿದರೆ ತದಕರೇನಯ್ಯ?

೩೧೮

ಗೂಡು ಕಟ್ಟುವ ಹಕ್ಕಿಯ ಕೆಲಸ
ನಾಡನಾಳುವನ ಕೆಲಸಕ್ಕಿಂತ ಕಡಮೆಯೇನಲ್ಲ;
ಜೇನುಗೂಡು ಕಟ್ಟುವ ಜೇನು ಹುಳುಗಳ ಕೆಲಸ
ಧ್ಯಾನ ಮಾಡುವ ಯತಿಯ ಕೆಲಸಕ್ಕಿಂತ ಕೀಳೇನಲ್ಲ;
ಸಕ್ಕರೆ ಆಯುವ ಇರುವೆಯ ಕೆಲಸ
ಕಬ್ಬು ತಿನ್ನುವ ಆನೆಯ ಕೆಲಸಕ್ಕಿಂತ ಕಿರಿದೇನಲ್ಲ;
ಸ್ವತಂತ್ರಧೀರ ಸಿದ್ಧೇಶ್ವರ
ಕೆಸರು ತುಳಿಯುವ ರೈತನ ಕೆಲಸ
ಮೊಸರು ಕುಡಿಯುವ ಮಂತ್ರಿಯ ಕೆಲಸಕ್ಕಿಂತ ಹೀನವೇನಲ್ಲ!

೩೧೯

ಮಗುವನ್ನಾಡಿಸುವ ದಾಯಿ
ತಾಯಿಗಿಂತ ಹೆಚ್ಚೆ?
ಕೆಲಸ ಕೊಡಿಸಿದ ಪರಭಾಷೆ
ತಾಯಿನುಡಿಗಿಂತ ಹೆಚ್ಚೆ
ಸ್ವತಂತ್ರಧೀರ ಸಿದ್ಧೇಶ್ವರಾ?

೩೨೦

ಒಂದೂ ತಪ್ಪು ಮಾಡದವರ ತೋರಾ,
ಒಂದೂ ಒಪ್ಪು ಮಾಡದವರ ತೋರಾ,
ಒಂದೂ ಪಾಪ ಮಾಡದವರ ತೋರಾ,
ಒಂದೂ ಪುಣ್ಯ ಮಾಡದವರ ತೋರಾ
ಸ್ವತಂತ್ರಧೀರ ಸಿದ್ಧೇಶ್ವರಾ!

೩೨೧

ಅನರ್ಹ ಸ್ತುತಿಗಿಂತ ನಿಂದೆ ಮೇಲು;
ಅಶುದ್ಧ ಹಾಲಿಗಿಂತ ನೀರು ಮೇಲು;
ಪೀಡಕ ಒಡೆತನಕ್ಕಿಂತ ಬಡತನ ಮೇಲು,
ಸ್ವತಂತ್ರಧೀರ ಸಿದ್ಧೇಶ್ವರಾ,
ವಂಚಕ ಮಿತ್ರನಿಗಿಂತ ಪ್ರಾಮಾಣಿಕ ಶತ್ರು ಮೇಲು!

೩೨೨

ಪೂಜಿಸಿಯೇ ಪಡೆಯಬೇಕಿಲ್ಲ
ಶಿವಸನ್ನಿಧಿಯನ್ನು-
ಪ್ರೀತಿಸಿಯೂ ಪಡೆಯಬಹುದು ಅದನ್ನು;
ಆತ್ಮವಿದನಿಗಿಂತ ಕಡಮೆಯೇನಲ್ಲ ವಾತ್ಸಲ್ಯವಿದ;
ಅವ ಗೌರವಾಸ್ಪದ, ಇವ ಪ್ರೀತ್ಯಾಸ್ಪದ:
ಸ್ವತಂತ್ರಧೀರ ಸಿದ್ಧೇಶ್ವರನನೊಲಿಸಲು
ಸರಿಯೇ ಸರಿ ಎರಡೂ ಹದನ!

೩೨೩

ಆರುವ ಮುನ್ನ ದೊಡ್ಡದಾಗುತ್ತದೆ ದೀಪ;
ಬರಿದಾಗುವ ಮುನ್ನ ಸೊರಹುತ್ತದೆ ಸೀಸೆ;
ಹೊತ್ತುವ ಮುನ್ನ ಚುಂಯ್‌ಗುಡುತ್ತದೆ ಹಸಿ ಸೌದೆ;
ಕುಸಿಯುವ ಮುನ್ನ ಕೇಕೆ ಹಾಕುತ್ತಿದೆಯೆ
ಕೆಡುಕಿನ ಕಟಕ-
ಸ್ವತಂತ್ರಧೀರ ಸಿದ್ಧೇಶ್ವರ?

೩೨೪

ಕೈತೊಳೆದು ಮುಟ್ಟಬೇಕಾದ ಗ್ರಂಥಗಳ ಕೊಡು ತಂದೆ,
ಮುಟ್ಟಿ ಕೈತೊಳೆಯಬೇಕಾದ ಕೃತಿಗಳನ್ನಲ್ಲ;
ಓದಿದಷ್ಟೂ ಓದಬೇಕೆನ್ನಿಸುವ ಹೊತ್ತಗೆಗಳ ಕೊಡು ತಂದೆ,
ಮೊದಲ ಓದಿಗೇ ವಾಕರಿಕೆ ಬರಿಸುವ ಪುಸ್ತಕಗಳನ್ನಲ್ಲ;
ಮನವ ಪಳಗಿಸುವ,
ಮತಿಯ ಬೆಳಗಿಸುವ
ಕೃತಿಗಳೆ ನನ್ನ ಸಂಗಾತಿಗಳಾಗಲಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೨೫

ಕುದುರೆ ಜೂಜಿಗೆ
ಕತ್ತೆಗಳ ಕಳಿಸಿದರೆ ಎಂತಯ್ಯ?
ಅಗಸನ ಬಟ್ಟೆ ಹೊರಲು
ಜೂಜಿನ ಕುದುರೆ ಕಳಿಸಿದರೆ ಹೇಗಯ್ಯ?
ಹಲ್ಲುಜ್ಜಲೆಂದು
ತಾಳದ ಬೊಡ್ಡೆ ತಂದರೆ ಎಂತಯ್ಯ?
ಮತ್ತೆ ದಿಂಬುಗಳ ಮಾಡಲು
ಹಣತೆ-ಬತ್ತಿ ಹೊಸೆದರೆ ಹೇಗಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

### ೩೨೬

ಬರೆಯಲಾರೆ, ಬರೆಯದಿರಲಾರೆ,
ಬರೆಯದೆ ಬದುಕಲಾರೆ!
ಬರೆಯಲು ವಿಷಯವೇ ಹೊಳೆಯದಾಗ
ನೀನಿರುವೆಯಲ್ಲ-
ಸ್ವತಂತ್ರಧೀರ ಸಿದ್ಧೇಶ್ವರ?

### ೩೨೭

ಕನಕಕುಂಭದಲ್ಲಿದೆಯೆಂದು
ಕುಡಿಯಬಹುದೆ ವಿಷವ?
ಒಡಕು ಮಡಕೆಯಲ್ಲಿದೆಯೆಂದು
ಬಿಸುಟಬಹುದೆ ರಸವ?
ಪ್ರಧಾನಿ ಮಾಡಿದುದೆಂದು
ಒಪ್ಪಬಹುದೆ ತಪ್ಪ?
ಜವಾನ ಮಾಡಿದುದೆಂದು
ತಳ್ಳಬಹುದೆ ಒಪ್ಪ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಿರಿವಂತನದೆಂದು ಪುರಸ್ಕರಿಸಬಹುದೆ ಸಟೆಯ?
ಬಡವ ನುಡಿದುದೆಂದು ತಿರಸ್ಕರಿಸಬಹುದೆ ದಿಟವ?

## ೩೨೮

ಹಾವ ತೋರಿ ಹವಿಯ ಬೇಡುತ್ತಿದ್ದರು ಅಂದು;
ಹೆಣವ ತೋರಿ ಮತ ಬೇಡುತ್ತಿಹರಯ್ಯ ಇಂದು!
ಈ ಮೋಸಗಾರಿಕೆಗೆ, ವೇಷಗಾರಿಕೆಗೆ ಕೊನೆ ಎಂದು–
ಸ್ವತಂತ್ರಧೀರ ಸಿದ್ಧೇಶ್ವರ?

## ೩೨೯

ಬದುಕಿಗೆ ಅರ್ಥವಿಲ್ಲವೆಂದವನೂ
ಬದುಕಲೇ ಬೇಕು;
ಅರ್ಥವಿದೆಯೆಂದವನೂ
ಬದುಕಲೇಬೇಕು!
ಬದುಕುವುದು ಅಪರಿಹಾರ್ಯವೆಂದಾಗ
ಅರ್ಥವಿಲ್ಲದ ಬದುಕಿಗೂ
ಅರ್ಥಬರುವಂತೆ ಬದುಕುವುದೆ
ಮೇಲಲ್ಲವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರ?

## ೩೩೦

ಹಿಮಾಲಯದ ಹಿಮಗುಹೆಗಳಲ್ಲಿರಬಹುದು;
ಎಸ್ಕಿಮೋ ಜನರ ಹಿಮಗೃಹಗಳಲ್ಲಿರಬಹುದು;
ಹಿರೋಶಿಮಾದ ದಗ್ಧ ಧಾಮಗಳಲ್ಲಿರಬಹುದು.
ಜ್ವಾಲಾಮುಖಿಯ ಬಳಿಯ ಅಪಾಯದ ಆಲಯಗಳಲ್ಲಿರಬಹುದು.
ಹಿಸುಣರ ಹೊರೆಯ ಅರಮನೆಯಲ್ಲಿಯೂ
ಇರಲಾಗದಯ್ಯಾ–ಸ್ವತಂತ್ರಧೀರ ಸಿದ್ಧೇಶ್ವರ!

## ೩೩೧

ಮನುಜ,
ನೀನು ಪಶುವಾದರೆ
ನಿನ್ನಂಥ ಪಶು ಇನ್ನೊಂದಿಲ್ಲ;
ನೀನು ಋಷಿಯಾದರೆ
ನಿನ್ನಂಥ ವಿಶ್ವಕುಟುಂಬಿ ಬೇರಿಲ್ಲ!
ನೀನು ನಿಜ ಮನುಜನಾದೆಯೋ
ಈ ಲೋಕವೇ ನಾಕ;

ನೀನೇ ಕೆಟ್ಟುಬಿಟ್ಟರೆ
ಈ ಲೋಕವೇ ನರಕ!
ಸ್ವತಂತ್ರಧೀರ ಸಿದ್ಧೇಶ್ವರ ನೀಡಲಿ ನಿನಗೆ
ಈ ಲೋಕವ ನಾಕವನ್ನಾಗಿಸುವ ಕಾಯಕ!

೩೩೨

ಕೋಗಿಲೆಗೆ ರಾಗಯೋಗ,
ದುಂಬಿಗೆ ಪರಾಗಯೋಗ,
ನವಿಲಿಗೆ ನೃತ್ಯಯೋಗ,
ಸರ್ಪಕ್ಕೆ ಪವನಯೋಗ,
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೆ ಇವರೆಲ್ಲರ ಸಹಯೋಗ!

೩೩೩

ನೀರೊಳಗಣ ಕಿಚ್ಚೇ ನೀರು ಸುಟ್ಟರೆ ದಾರಿ ಯಾವುದಯ್ಯ?
ಮರದೊಳಗಣ ಕಿಚ್ಚೇ ಮರನ ಸುಟ್ಟರೆ ಗತಿ ಯಾವುದಯ್ಯ?
ಮನೆಯೊಳಗಣ ದೀಪವೇ ಮನೆಯ ಸುಟ್ಟರೆ ದಿಕ್ಕಾವುದಯ್ಯ?
ಮನದೊಳಗಣ ಕಿಚ್ಚು ಅನ್ಯರನೂ ಸುಟ್ಟರೆ ರಕ್ಷಿಪರಾರಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ?

೩೩೪

ಜೀವಿಗಳು ಜೀವಿಗಳ ತಿನ್ನುತ್ತಲೇ ಬದುಕಿವೆ,
ಆದರೂ ಜೀವ ಸೃಷ್ಟಿ ಉಳಿದಿದೆ;
ಭೂಕಂಪ ಜ್ವಾಲಾಮುಖಿಗಳು ಬಾಯಿ ತೆರೆಯುತ್ತಲೇ ಬಂದಿವೆ,
ಆದರೂ ಭೂಲೋಕ ಉಳಿದಿದೆ;
ಅನಂತ ರೂಪಿ ಮಾರಣ ಯಜ್ಞ ನಡೆದೇ ಇದೆ
ಆದರೂ ಜೀವನದ ಜಯಕಾರ ನಡೆದೇ ಇದೆ;
ಸ್ವತಂತ್ರಧೀರ ಸಿದ್ಧೇಶ್ವರ ಸುಳ್ಳೆಂಬ ಸೊಲ್ಲು ಇದ್ದೇ ಇದೆ,
ಆದರೂ ಅವನ ಭಕ್ತರು ಬೆಳೆಯುತ್ತಲೇ ಇದ್ದಾರೆ!

೩೩೫

ಇತಿಹಾಸ ಉಲ್ಲೇಖಿಸದ ಜನರಲ್ಲಿಯೂ
ಮಹಾಮಾನವರೆಷ್ಟಿಲ್ಲ?

ಆಕಾಶವಾಣಿ ಅಲಕ್ಷಿಸಿದವರಲ್ಲಿಯೂ
ಪರಿಣತರು ಎಷ್ಟಿಲ್ಲ?
ದೂರದರ್ಶನ ದೂರವಿರಿಸಿದವರಲ್ಲಿಯೂ
ಪಾರಂಗತರು ಎಷ್ಟಿಲ್ಲ?
ಬಿರುದು ಬಾವಲಿಗಳ ಪಡೆಯದವರಲ್ಲಿಯೂ
ಸುಯೋಗ್ಯರು ಎಷ್ಟಿಲ್ಲ?
ಸ್ವತಂತ್ರಧೀರ ಸಿದ್ಧೇಶ್ವರಾ,
ಧರ್ಮಗುರುಗಳು ಬಹಿಷ್ಕರಿಸಿದವರಲ್ಲಿಯೂ
ಧರ್ಮಾತ್ಮರು ಎಷ್ಟಿಲ್ಲ?

**೩೩೬**

ಇಲ್ಲೊಂದು ಹಳ್ಳಿ,
ಹಳ್ಳಿಗಿಷ್ಟು ಮನೆಗಳು,
ಮನೆಗೊಂದು ಕುಟುಂಬ,
ಕುಟುಂಬಕ್ಕೊಂದು ಸುಖಾಂತ ದುಃಖಾಂತ ನಾಟಕ!
ಮನೆಗೊಂದು ರಾಮಾಯಣ,
ಮನೆಗೊಂದು ಮಹಾಭಾರತ!
ಎಷ್ಟು ಕೋಟಿ ಕವಿಗಳು ಹುಟ್ಟಿದರೆ
ಈ ಎಲ್ಲ ರಾಮಾಯಣ-ಮಹಾಭಾರತಗಳ
ಬರೆಯಬಲ್ಲರಯ್ಯಾ-ಸ್ವತಂತ್ರಧೀರ ಸಿದ್ಧೇಶ್ವರಾ?

**೩೩೭**

ಇನ್ನೇನೇ ಖಾಸಗಿ ಆಸ್ತಿಗಳಾಗಿ ಉಳಿದರೂ
ವಿದ್ಯೆ ಕಲೆ ವಿಜ್ಞಾನಗಳೂ ಖಾಸಗಿ ಆಸ್ತಿಗಳಾಗದಿರಲಯ್ಯ;
ಯಾವುದೇ ಗಡಿ-ಗೆರೆ ಉಳಿದರೂ
ಪ್ರೀತಿಗೆ ಗಡಿ-ಗೆರೆಗಳು ಇರದಿರಲಯ್ಯ;
ನೆಲ-ಜಲ-ಮುಗಿಲುಗಳು ವಿಭಕ್ತವಾದರೂ
ಮನುಜಕುಲ ವಿಭಕ್ತವಾಗದಿರಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ರಕ್ತರು ಜಾತಿ ಕುಲಗಳನ್ನುಳಿಸಿಕೊಂಡರೂ
ಭಕ್ತರು ಏಕೈಕ ಸಮಾಜವಾಗಿ ಒಡಮೂಡಲಯ್ಯ!

## ೩೩೮

ಪ್ರಾಚೀನ ಗ್ರೀಕರ ಹಿರಿಮೆ ಗರಿಮೆಗಳು
ಬೆರಗುಗೊಳಿಸಿವೆಯಯ್ಯ, ನನ್ನನ್ನು;
ಗ್ರೀಕ್ ಗುಲಾಬಿಗಳಲ್ಲಿ ಕೊಕ್ಕಿಟ್ಟ
ಬುಲಬುಲವಾಗಿಸಿ ಹಾಡಿಸಯ್ಯ ನನ್ನಿಂದ!
ನಾನು ಉಸಿರಾಡಿಸುವ ಗಾಳಿಯಲ್ಲಿ
ಗ್ರೀಕ್ ಗ್ರಂಥ ಮಕರಂದಗಳ ಅಲೆಗಳು!
ಗ್ರೀಕ್ ದೇಹದಲ್ಲಿ
ಭಾರತೀಯ ಆತ್ಮ ಬೆರೆಯೆ
ಮಹಾಮಾನವ ಜನಾಂಗ ದೂರ ಉಳಿಯದು–
ಸ್ವತಂತ್ರಧೀರ ಸಿದ್ಧೇಶ್ವರ!

## ೩೩೯

ವ್ಯಾಘ್ರಗಳು ಕಡಿಮೆಯಾಗುತ್ತ
ಗೋಮುಖ ವ್ಯಾಘ್ರಗಳು ಹೆಚ್ಚುತ್ತಿವೆಯಯ್ಯ!
ಕ್ಷೀರ ಕುಂಭಗಳು ಕಡಮೆಯಾಗುತ್ತ
ಪಯೋಮುಖವಿಷಕುಂಭಗಳು ಹೆಚ್ಚುತ್ತಿವೆಯಯ್ಯ!
ಕಾಲಿಲ್ಲದ ಹಾವುಗಳು ಕಡಮೆಯಾಗುತ್ತ
ಎರಡು ಕಾಲಿನ ಹಾವುಗಳು ಹೆಚ್ಚುತ್ತಿವೆಯಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ರಕ್ಷಿಸುವ ಭೀಮರು ಇಲ್ಲವೇ ಇಲ್ಲ–
ಭಕ್ಷಿಸುವ ಬಕಾಸುರರು ಹೆಚ್ಚುತ್ತಿಹರಯ್ಯ!

## ೩೪೦

ಕರಗಕ್ಕೆ ಕರೆಯೋಲೆ ಕಳಿಸಿದವರುಂಟೆ?
ಜಾತ್ರೆಗಳಿಗೆ ಬಿನ್ನಹಪತ್ರ ಕಳಿಸುವುದುಂಟೆ?
ಸಂತೆಗೆ ನಿಮಂತ್ರಣ ಕಳಿಸುವವರುಂಟೆ?
ಬಾಪೂ–ಜೆಪಿ ಸಭೆಗಳಿಗೆ
ಲಾರಿಗಳಲ್ಲಿ ಜನರ ತಂದುದುಂಟೆ?
ಇವೆಲ್ಲ ನಮ್ಮ ನಕಲಿ ನಾಯಕರಿಗೆ ಮೀಸಲು–
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೪೧

ಭುಜಬಲಕ್ಕೆ ಬುದ್ಧಿಬಲ ಕೂಡಿದಾಗ,
ಜನಬಲಕ್ಕೆ ಧನಬಲ ಸೇರಿದಾಗ,
ವಿಚಾರಶಕ್ತಿಗೆ ವಿವೇಕ ಸೇರಿದಾಗ,
ಕ್ರತುಶಕ್ತಿಗೆ ಕಾಣ್ಕೆ ಸೇರಿದಾಗ
ಶಿವಕ್ಕೆ ಶಕ್ತಿ ಸೇರಿದಾಗ
ಏನಾಗಲಾರದು–
ಸ್ವತಂತ್ರಧೀರ ಸಿದ್ಧೇಶ್ವರಾ?

### ೩೪೨

ಕವಿಯ ಅವಸಾನದೊಡನೆ
ಅವನು ಬರೆಯ ಬಯಸಿದ್ದ ಕಾವ್ಯಗಳ ಅವಸಾನ;
ಚಿತ್ರಕನ ಅವಸಾನದೊಡನೆ
ಅವನು ಚಿತ್ರಿಸ ಬಯಸಿದ್ದ ಚಿತ್ರಗಳ ಅವಸಾನ;
ಶಿಲ್ಪಿಯ ಅವಸಾನದೊಡನೆ
ಅವನು ಕಂಡರಿಸ ಬಯಸಿದ್ದ ಶಿಲ್ಪಗಳ ಅವಸಾನ;
ಎಂಥ ನಷ್ಟ ಮನುಕುಲಕ್ಕೆ!
ನೀನು ನೆಡುವ ಗಿಡ
ಫಲ ಬಿಡುವ ಮುನ್ನವೆ
ಕೆಡೆದರೆ ಹೇಗಯ್ಯಾ, ಸ್ವತಂತ್ರಧೀರ ಸಿದ್ಧೇಶ್ವರಾ!

### ೩೪೩

ಒದ್ದರೆ ಕಾಲಿಗೆ ಬೀಳುವರು,
ಮುದ್ದು ಮಾಡಿದರೆ ತಲೆಗೇರುವರಯ್ಯ!
ತೋಳವಾಗಿ ನಿಂತರೆ ಕುರಿಗಳಾಗುವರು.
ಹಸುವಾದರೆ ಕಟುಕರಾಗುವರಯ್ಯ!
ಕಚ್ಚುತ್ತಿದ್ದರೆ ಹಾವಿನ ಪೂಜೆ ಮಾಡುವರು.
ಕಚ್ಚದಿದ್ದರೆ ಎಳೆದಾಡುವರಯ್ಯ!
ಒಳ್ಳೆಯತನಕ್ಕೆ ಒದೆ,
ಕೆಟ್ಟತನಕ್ಕೆ ಪಾದಪೂಜೆ,
ಇದೆಂಥ ವಿಪರೀತ ಬುದ್ಧಿಯಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೪೪

ತಿಜೋರಿಯ ಬೀಗದ ಕೈ ಕೊಡದೆ
ಅಪ್ಪ ಕಾಲವಾದರೆ
ತಿಜೋರಿಯನ್ನೊಡೆಯರೆ, ಮಕ್ಕಳು?
ನಿನ್ನ ರಹಸ್ಯ ಪೇಟಿಕೆಗಳ ಬೀಗದ ಕೈ
ನೀ ಕೊಡದಿರೆ
ಒಡೆಯರೆ ಒಂದೊಂದನ್ನು ವಿಜ್ಞಾನಿಗಳು?
ಆದರೆ ತಂದೆ ಯಾವುದೋ ಪೆಟ್ಟಿಗೆ ಒಡೆದಾಗ
ಸಿಡಿಯದಿರಲಿ ಪ್ರಳಯದ ಬೀಜಗಳು–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೪೫

ಅಗಲಲೊಲ್ಲದವರನ್ನು ಅಗಲಿಸುವೆ
ಅಗಲಲು ತುದಿಗಾಲಮೇಲೆ ನಿಂತವರನ್ನು ಕಟ್ಟಿಹಾಕುವೆ;
ಕೂಡಲು ಹಾತೊರೆಯುವವರನ್ನು ಕೂಡಗೊಡದೆ
ಕೂಡೆವೆಂದು ಆಲ್ವರಿವರನ್ನು ಕೂಡಿಸುವೆ;
ಕೆಡಿಸಬಾರದುದನ್ನು ಕೆಡಿಸುವೆ,
ಉಳಿಸಬಾರದುದನ್ನು ಉಳಿಸುವೆ,
ಇದರಿಂದ ಏನ ಗಳಿಸುವೆ–
ಸ್ವತಂತ್ರಧೀರ ಸಿದ್ಧೇಶ್ವರ?

## ೩೪೬

ಅಜೀರ್ಣರೋಗಿಗೇತಕಯ್ಯ ಪಾಕಶಾಸ್ತ್ರದ ಗೊಡವೆ?
ನಪುಂಸಕನಿಗೇಕಯ್ಯ ಕಾಮಶಾಸ್ತ್ರದ ಗೊಡವೆ?
ಹೆಳವನಿಗೇಕಯ್ಯ ನಾಟ್ಯಶಾಸ್ತ್ರದ ಗೊಡವೆ?
ಅಂಧಕನಿಗೇಕಯ್ಯ ಸೌಂದರ್ಯಶಾಸ್ತ್ರದ ಗೊಡವೆ?
ಅಂಜುಗುಳಿಗೇಕಯ್ಯ ಯುದ್ಧಶಾಸ್ತ್ರದ ಗೊಡವೆ?
'ನಾನೆ ಎಲ್ಲ' ಎನ್ನುವವನಿಗೇಕಯ್ಯ
ಸ್ವತಂತ್ರಧೀರ ಸಿದ್ಧೇಶ್ವರನ ಗೊಡವೆ?

## ೩೪೭

‘ಒಳಿತು’ ಮಾಡಿದವನಿಗೂ ಲೇಸು,
ಮಾಡಿಸಿಕೊಂಡವನಿಗೂ ಲೇಸು,
ಹೀಗಿದ್ದೂ ಕೆಡುಕನ್ನೇ ಮಾಡುವವರ ಉದ್ದೇಶವಾವುದಯ್ಯ?
‘ಸತ್ಯ’ ಹೇಳುವವನಿಗೂ ಚೆನ್ನು,
ಕೇಳುವವನಿಗೂ ಚೆನ್ನು-
ಹೀಗಿದ್ದೂ ಅಸತ್ಯಕ್ಕೆ ಅಂಟಿಕೊಳ್ಳುವವರ ಗುರಿಯಾವುದಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
‘ಪ್ರೀತಿ’ ಮಾಡುವವರಿಗೂ ವರ,
ಮಾಡಿಸಿಕೊಂಡವರಿಗೂ ವರ-
ಹೀಗಿದ್ದೂ ದ್ವೇಷ ಸಾಧಿಸುವವರ ಗಂತವ್ಯವಾವುದಯ್ಯ?

## ೩೪೮

ಅಡಕೆ ನೀರಡಿಕೆಯ ತಡೆಯಬಲ್ಲುದು-
ಕಳೆಯ ಬಲ್ಲುದೇನಯ್ಯ?
ಪೇಯ ಹಸಿವನ್ನು ತಡೆಯಬಲ್ಲುದು,
ಕಳೆಯಬಲ್ಲುದೇನಯ್ಯ?
ನಾಟಕ ನಿದ್ರೆಯನ್ನು ತಡೆಯಬಲ್ಲುದು
ಕಳೆಯಬಲ್ಲುದೇನಯ್ಯ,
ಬಜ್ಜಣಿಗ ಸೆಕೆಯನ್ನು ತಗ್ಗಿಸಬಲ್ಲುದು-
ಕಳೆಯಬಲ್ಲುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಅವಜ್ಞೆ ನಮ್ಮ ಮಿಲನವ ತಳುವಬಲ್ಲುದು.
ಕಳೆಯಬಲ್ಲುದೇನಯ್ಯ?

## ೩೪೯

ಶೈಶವದಲ್ಲಿ ಲಾಲಿ, ಯೌವನದಲ್ಲಿ ಲಲ್ಲೆ,
ಈಗ ಲೋಕಾಭಿರಾಮ ಲೊಟಕು, ಲೊಳಲೊಟ್ಟೆ!
ಮಾತಿನ ಆಳಕ್ಕೆ ಇಳಿಯಲಿಲ್ಲ.
ಅಗಲಕ್ಕೆ ಹರಡಲಿಲ್ಲ.
ಎತ್ತರಕ್ಕೆ ಏರಲಿಲ್ಲ!
ಮಜ್ಜಿಗೆ ಮಟ್ಟಿಗೆ ರಾಮಾಯಣ,

ಬಿಕ್ಕೆಯ ಮಟ್ಟಿಗೆ ಭಾರತದಂತೆ
ಹೊಟ್ಟೆಯ ಮಟ್ಟಿಗೆ ಮಾತನ್ನು ಬಳಸಿಕೊಂಡೆ,
ಅದು ಗೀತ ಹೇಗಾದೀತು
ಜ್ಯೋತಿ ಹೇಗಾದೀತು,
ಜ್ಯೋತಿರ್ಲಿಂಗ ಹೇಗಾದೀತು-
ಸ್ವತಂತ್ರಧೀರ ಸಿದ್ಧೇಶ್ವರಾ?

೩೫೦

ಕಡಲ ಆವಿಗೆ ಕಾರ್ಖಾನೆಗಳ ಹೊಗೆಯ ಸ್ವಾಗತ;
ಸಂಪಿಗೆಯ ಕಂಪಿಗೆ ನಗರ ಸಭೆಯ ಕೊಳೆಲಾರಿಗಳ ಸ್ವಾಗತ;
ಪಂಜಾಬದ ಗೋಧಿ ಬೆಳೆಯ ಬಂಗಾರದುಸಿರಿಗೆ
ಉಗ್ರವಾದಿಗಳ ಕೋಪ ಕಾರುವ ಗುಂಡುಗಳ ಸ್ವಾಗತ;
ಕಾಶ್ಮೀರದ ಕಸ್ತೂರಿಯ ಸುವಾಸನೆಗೆ
ಪಾಕ್‌ವಾದಿಗಳ ನಾಪಾಕ್ ಸಿಡಿಮದ್ದುಗಳ ಸ್ವಾಗತ-
ಎಂಥ ಪಾವನತೆಗೆ ಎಂಥ ಕೊಳಕುಗಳ ಸ್ವಾಗತ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೫೧

ಅರಣ್ಯಗಳಲ್ಲಿಯೇ ಉದಿಸಿದ ನಮ್ಮ ಸಂಸ್ಕೃತಿ
ಅರಣ್ಯನಾಶದೊಡನೆ ಸೊರಗುತ್ತಿದೆ ನೋಡಾ!
ಹಿಮಗಿರಿಯಿಂದಲೇ ಹರಿದ ನಮ್ಮ ಅಧ್ಯಾತ್ಮಶ್ರೀ
ಕೈಲಾಸ ಮಾನಸ ಸರಸಿಗಳ ಕಳೆದುಕೊಂಡು
ಕೊರಗುತ್ತಿದೆ ನೋಡಾ!
ನಿನ್ನನ್ನು ನಂಬಿ ನಡೆಯುತ್ತಿದ್ದ ನಮ್ಮ ನಲ್ಬಾಳು
ಏನೇನನ್ನೋ ನಂಬಿ ನರಳುತ್ತಿದೆ ನೋಡಾ-
ಸ್ವತಂತ್ರಧೀರ ಸಿದ್ಧೇಶ್ವರಾ.

೩೫೨

ತೆರೆ ಕುಣಿವುದೆಂದು ನೊರೆ ಕುಣಿವುದಯ್ಯ;
ಮರ ಚಲಿಸುವುದೆಂದು ನೆರಳು ಚಲಿಸುವುದಯ್ಯ
ನೀನು ಪ್ರೇರಿಸುವಿಯೆಂದು ನಾನು ಬರೆದೆನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೫೩

ಲಂಚ ಲಂಚವೆಂದು ಬೊಬ್ಬಿಡದಿರಿ ಭೋ,
ಎಲ್ಲಿ ಲಂಚವಿಲ್ಲ, ಯಾವುದು ಲಂಚವಲ್ಲ ಹೇಳಿ ಭೋ!
ಪೂಜೆ ಪ್ರಾರ್ಥನೆ ದೇವರಿಗೆ ಲಂಚ,
ಆರತಿ ರೊಕ್ಕ ಪೂಜಾರಿಗೆ ಲಂಚ,
ದಾನ ದಕ್ಷಿಣೆ ಸ್ವಾಮಿಗಳಿಗೆ ಲಂಚ,
ಮಾನಪತ್ರ, ಪಾರ್ಟಿ ಫಂಡು ಮಂತ್ರಿಗಳಿಗೆ ಲಂಚ,
ಸನ್ಮಾನ ಸತ್ಕಾರ ಸಾಹಿತಿ ಕಲಾವಿದರಿಗೆ ಲಂಚ,
ಮುಖಸ್ತುತಿ ಮೇಲಿನವರಿಗೆ ಲಂಚ,
ಪ್ರವೇಶ ಶುಲ್ಕ ಶಿಕ್ಷಣ ಸಂಸ್ಥೆಗಳಿಗೆ ಲಂಚ,
ವರದಕ್ಷಿಣೆ ವರನಿಗೆ ಲಂಚ!
ಎಲ್ಲಿಲ್ಲ ಲಂಚ? ಯಾವುದಲ್ಲ ಲಂಚ?
ಈ ಲಂಚ ಪ್ರಪಂಚದ ವಿಸ್ತಾರವ ನೋಡಿ
ಬೆರಗಾದೆನಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ!

### ೩೫೪

ಹೆಸರರಿಯದಿದ್ದರೂ ಖುಷಿ ಕೊಡದೆ ಕುಸುಮ?
ಬಸಿರರಿಯದಿದ್ದರೂ ಮುದ ನೀಡದೆ ಮುದ್ದು ಮಗು?
ಭಾಷೆ ತಿಳಿಯದಿದ್ದರೂ ತೋಷವೀಯದೆ ಸಂಗೀತ?
ಅರ್ಥವಾಗದಿದ್ದರೂ ಚಿತ್ತವರಳಿಸದೆ ನೃತ್ಯ?
ವೇದವರಿಯದಿದ್ದರೂ ಭಕ್ತಿಗೊಲಿಯನೆ
ಸ್ವತಂತ್ರಧೀರ ಸಿದ್ಧೇಶ್ವರ?

### ೩೫೫

ವಸ್ತುಗಳ ಒಳಹೊಕ್ಕು ನೋಡು, ಗೆಳೆಯ:
ವಸ್ತುಗಳ ಹತ್ತುಗಡೆ ಹುಡುಕಿನೋಡು, ಗೆಳೆಯ:
ವಸ್ತು ಸ್ವಭಾವಗಳ ಪ್ರಖ್ಯೆ ತಿಳಿದು ನೋಡು ಗೆಳೆಯ,
ವಸ್ತು ಛಾಯೆಗಳ ಕಣ್ಣುಮುಚ್ಚಾಲೆ ನೋಡು, ಗೆಳೆಯ,
ವಸ್ತುಗಳಿಗೆಲ್ಲ ಮೂಲವಸ್ತುವಾದ
ಸ್ವತಂತ್ರಧೀರ ಸಿದ್ಧೇಶ್ವರನ ಅರಿತು ನೋಡು, ಗೆಳೆಯ!

## ೩೫೬

ನನ್ನ ವಿಚಾರಗಳನ್ನು
ನಿನ್ನ ಮೇಲೆ ಹೇರೆ, ಗೆಳೆಯ;
ನೀನೂ ನಿನ್ನ ವಿಚಾರಗಳ
ನನ್ನ ಮೇಲೆ ಹೇರಬೇಡ!
ವಿಚಾರಗಳ ಅಡ್ಡಪರಾಗಾಧಾನ ನಡೆಯಲಿ,
ಚಿಂತನೆಗಳ ಮಂಥನ ನಡೆಯಲಿ!
ಎಲ್ಲರೂ ತಮಗಿಷ್ಟವಾದುವುಗಳ ಆಯ್ದುಕೊಳ್ಳಲಿ,
ತಂತಮ್ಮ ಚಿಂತನಮಾಲೆ ನೆಯ್ದುಕೊಳ್ಳಲಿ!
ಲೋಕದ ಎಲ್ಲರೂ ಒಪ್ಪುವ ವಿಚಾರಗಳೆಲ್ಲಿ?
ಎಲ್ಲರೂ ಎಲ್ಲವನ್ನೂ ಒಪ್ಪಬೇಕೆಂಬ ಹಟವೇಕೆ?
ಸ್ವತಂತ್ರಧೀರ ಸಿದ್ಧೇಶ್ವರನನ್ನೂ
ಒಪ್ಪದವರಿಲ್ಲವೆ?
ಅವರಿಗೆ ಆ ಅಧಿಕಾರ ಇಲ್ಲವೆ?

## ೩೫೭

ತೊಂಚವಂಚರಿಂದ ತುಂಬಿತು ದೇಶ:
ಎಲ್ಲರಲ್ಲೂ ಹುಳುಕು ಹುಡುಕುವುದೇ ಇವರ ಹವ್ಯಾಸ!
ಹುಳುಕು ತೋರುವಂತೆ ಹಳಕು ತೋರುವರೆ,
ಬೆಳಕು ತೋರುವರೆ ಇವರು?
ತಾವು ಕತ್ತಲೆ ಮನೆಯಲ್ಲಿದ್ದು
ನೆರೆಮನೆಯ ಹಣತೆ ಮಿಣುಕೆನ್ನುವ
ಈ ಹೆಡ್ಡರ ಮಡ್ಡನಿಳಿಸಾ
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೫೮

ಬುಲಬುಲಗಳ ನಾಲಗೆಗಳ
ಮೇಜವಾನಿ ಮಾಡಿಸಿದನೊಬ್ಬ;
ಎತ್ತಿನ ನಾಲಗೆಗಳ
ಭೋಜನ ಕೂಟ ಏರ್ಪಡಿಸಿದನೊಬ್ಬ;
ಜೇನು ಹುಳುಗಳ, ಜಿರ್ಲೆಗಳ, ಹಾವುಗಳ
ಆರೋಗಣೆ ಆಯೋಜಿಸಿದರು ಇತರರು!

ನರಮಾಂಸದ ಸರದಿಯೇನು ಈಗ?
ರಕ್ತಿಯನ್ನು ಬೇಡುವ ಜನರು,
ರಕ್ತವನ್ನು ಬೇಡುವ ಜನನಾಯಕರು;
ಮುಕ್ತಿಯೆಂದಯ್ಯ
ನರಮೇಧದಿಂದ ನರಕುಲಕ್ಕೆ
ಸ್ವತಂತ್ರಧೀರ ಸಿದ್ಧೇಶ್ವರಾ?

೩೫೯

ಇದೇ ಕೊನೆಯ ಯುದ್ಧವೆಂದು ಸಾರಿದರು ರಣನಾಯಕರು,
ಯುದ್ಧಗಳು ನಡೆದೇ ಇವೆ!
ಇದೇ ಕೊನೆಯ ವಿಭಜನೆಯೆಂದರು ರಾಷ್ಟ್ರನಾಯಕರು,
ವಿಭಜನೆಗಳು ನಡೆದೇ ಇವೆ!
ಜನಸಂಖ್ಯೆಗೆ ಇದೇ ಕೊನೆಯೆಂದರು ಮಂತ್ರಿಮಹೋದಯರು,
ಜನಸಂಖ್ಯೆ ಸ್ಫೋಟಿಸುತ್ತಲೇ ಇದೆ!
ಬಡತನ ಹೋಗಿ ಬಿಡುವುದೆಂದರು ಬಡಾಯಿಖೋರರು,
ಬಡತನ ಬೆಳೆಯುತ್ತಲೇ ಇದೆ!
ಎಲ್ಲರ ಹಸಿಬಿಸಿ ಕನಸುಗಳು ಹುಸಿಯಾದುವು,
ನೀನು ಕರುಣಿಸುವಿಯೆಂಬ ಕನಸು
ಹುಸಿಯಾಗದಿರಲಯ್ಯ–ಸ್ವತಂತ್ರಧೀರ ಸಿದ್ಧೇಶ್ವರಾ!

೩೬೦

ಅಕಸ್ಮಾತ್, ರಾಜಕಾರಣಿಗಳಲ್ಲಿ ಸಜ್ಜನರಿದ್ದರೆ
ಅವರಿಗೆ ನನ್ನ ನಮಸ್ಕಾರ!
ಅಕಸ್ಮಾತ್, ಸಚಿವರಲ್ಲಿ ಪ್ರಾಮಾಣಿಕರಿದ್ದರೆ
ಅವರಿಗೆ ನನ್ನ ನಮಸ್ಕಾರ!
ಅಕಸ್ಮಾತ್, ನೌಕರರಲ್ಲಿ ಕರ್ತವ್ಯನಿಷ್ಠರಿದ್ದರೆ
ಅವರಿಗೆ ನನ್ನ ನಮಸ್ಕಾರ!
ಅಕಸ್ಮಾತ್ ಸಂನ್ಯಾಸಿಗಳಲ್ಲಿ ಜಿತೇಂದ್ರಿಯರಿದ್ದರೆ
ಅವರಿಗೆ ನನ್ನ ನಮಸ್ಕಾರ!
ಅಕಸ್ಮಾತ್, ಸ್ವತಂತ್ರಧೀರ ಸಿದ್ಧೇಶ್ವರನ ಭಜಕರಲ್ಲಿ
ನಿಜಮಾನವರಿದ್ದರೆ
ಅವರಿಗೆ ನನ್ನ ನಮಸ್ಕಾರ!

## ೩೬೧

ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲವೆಂದು
ಎಲ್ಲ ಸಮಸ್ಯೆಗಳಿಗೆ ಪರಿಹಾರ ದಕ್ಕಿಲ್ಲವೆಂದು
ಮಾನವ ಜೀವನ ನಿಂತು ಬಿಟ್ಟಿಲ್ಲ ತಂದೆ;
ಹೇಗೋ ಸಾಗಿದೆ: ಹೀಗೇ ಸಾಗಲೇ ಬೇಕು;
'ಅಪರಿಮಿತ ಕತ್ತಲೆ'ಯಿದ್ದರೇನು?
'ವಿಪರೀತದ ಬೆಳಗು' ಇಲ್ಲದಿದ್ದರೇನು?
ಚಿಕ್ಕೆಗಳ ಮಿಣುಕು ಬೆಳಕಿದೆ,
ಮಿಂಚು ಹುಳುಗಳ ಇಣುಕು ಬೆಳಕಿದೆ;
ಹಣತೆ ಹಿಲಾಲುಗಳ ಬೆಳಕಿದೆ
ಕತ್ತಲೆ ಘನವಾದರೂ ಪಯಣ ನಿಲ್ಲುವುದಿಲ್ಲ!
ಈ ಪಯಣಿಗ ಇಲ್ಲವಾದರೂ ಪಯಣ ನಿಲ್ಲುವುದಿಲ್ಲ!
ಸ್ವತಂತ್ರಧೀರ ಸಿದ್ಧೇಶ್ವರ ಶಾಶ್ವತನಾಗಿ
ಜೀವನ ನಿಲ್ಲುವುದಿಲ್ಲ!

## ೩೬೨

ಲೋಕದಾಟ ಸಾಕಾಗಿದೆ, ಲೋಕದಾಟ ಸಾಕಾಗಿಲ್ಲ!
ಅದರಲ್ಲಿ ಭಾಗಿಯಾಗುವುದು ಸಾಕಾಗಿದೆ,
ಅದನ್ನು ಅರ್ಥವಿಸಿಕೊಳ್ಳುವ ಯತ್ನ ಸಾಕಾಗಿಲ್ಲ!
ಇದುವರೆಗೆ ಅದರ ವಾಹಿನಿಯಲ್ಲಿ ಅವಗಾಹನ ಮಾಡಿ
ಅದರ ದಂಡೆಯ ಮೇಲೆ ಕುಳಿತಿರುವೆನೀಗ.
ವೀಕ್ಷಿಸುತ್ತಿದ್ದೇನೆ ಅದರ ಹರಿವನ್ನು, ಹರಹನ್ನು-
ಅದರ ಅರ್ಥವಾಗದಿದ್ದರೂ
ಎಲ್ಲ ಅರ್ಥಗಳಿಗೆ ಅರ್ಥವಾದ
ನೀನು ಪ್ರತೀತನಾದರೆ ಸಾಕು-
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೬೩

ಹೊಂದಾಣಿಕೆಯೊಂದೇ ಹಾದಿ ನಮಗೆ
ವ್ಯಷ್ಟಿ ಸಮಷ್ಟಿಗಳ ಹೊಂದಾಣಿಕೆ,
ನಡೆನುಡಿಗಳ ಹೊಂದಾಣಿಕೆ,
ಸ್ವಾತಂತ್ರ್ಯ ಸಂಯಮಗಳ ಹೊಂದಾಣಿಕೆ,

ಭಾವ ಬುದ್ಧಿಗಳ ಹೊಂದಾಣಿಕೆ,
ಪ್ರಾಂತೀಯತೆ ರಾಷ್ಟ್ರೀಯತೆಗಳ ಹೊಂದಾಣಿಕೆ,
ರಾಷ್ಟ್ರೀಯತೆ ಅಂತರರಾಷ್ಟ್ರೀಯತೆಗಳ ಹೊಂದಾಣಿಕೆ,
ಸ್ವತಂತ್ರಧೀರ ಸಿದ್ಧೇಶ್ವರನ ಹೆಜ್ಜೆ
ಅವನ ಮಕ್ಕಳ ಹೆಜ್ಜೆಗಳ ಹೊಂದಾಣಿಕೆ!

**೩೬೪**

ಬರ್ಕನ್‌ಹೆಡ್ ಹಡಗ ಮುಳುಗುತ್ತಲಿದ್ದಾಗ
ಹದಿ ಹರೆಯದ ರಸೆಲ್ ಸಮುದ್ರಕ್ಕೆ ಹಾರಿ
ಸತಿಯೊಬ್ಬಳ ಪತಿಯನ್ನುಳಿಸಿದ!
ಟೈಟಾನಿಕ್ ಹಡಗ ಮುಳುಗುತ್ತಲಿದ್ದಾಗ
ಸಜ್ಜನನೊಬ್ಬ ಮಗುವನ್ನೆತ್ತಿಕೊಂಡಿದ್ದ ಮಾತೆಗೆ
ಸ್ಥಳ ಬಿಟ್ಟುಕೊಟ್ಟ ಬಾಳ ದೋಣಿಯಲ್ಲಿ!*
ಚೀಣಾದ ಜ್ಞಾನ ಭಿಕ್ಷುಗಳಲ್ಲೊಬ್ಬ
ಸಿಂಧು ನದಿಗೆ ಹಾರಿ
ಬೌದ್ಧ ಗ್ರಂಥಗಳನ್ನುಳಿಸಿದ ತನ್ನ ದೇಶ ಬಾಂಧವರಿಗೆ.
ಎಂಥೆಂಥ ತ್ಯಾಗಿಗಳು ಲೋಕಚರಿತ್ರೆಯಲ್ಲಿ!
ಇಂಥವರಿದ್ದೂ ತಮ್ಮ ಬಿನುಗು ತ್ಯಾಗಗಳ
ಬಡಾಯಿ ಕೊಚ್ಚುವವರಿಗೇನೆನ್ನಬೇಕಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ?

**೩೬೫**

ಯಾರೋ ಹುರಿದುಂಬಿಸಿದರೆಂದು
ಡೆಮೋಸ್ಥೆನಿಸ್ ಸಿಕ್ಕ ನಮಗೆ,
ಗುರು ಹುರಿದುಂಬಿಸಿದನೆಂದು
ಲಿಯೊನಾರ್ಡೋಡವಿಂಚಿ ಸಿಕ್ಕ ನಮಗೆ;
ಬೆಂಜಾಮಿನ್ ಫ್ರಾಂಕ್ಲಿನ್ ಆಸಕ್ತಿವಹಿಸಿದನೆಂದು
ರಾಬರ್ಟ ಫಲಟನ್ ಸಿಕ್ಕ ನಮಗೆ;
ಗಾಯಕವಾಡರು ಉತ್ತೇಜಿಸಿದರೆಂದು
ಅಂಬೇಡಕರ್ ಸಿಕ್ಕ ನಮಗೆ;

---

ಬಾಳ ದೋಣಿ Life Boat

ಹರಿದುಂಬಿಸುವರನೆಲ್ಲರಿಗೂ ಕೊಡು ತಂದೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೬೬

ಆಳುವವರ ಕಾಲೊರೆಸಬೇಡ,
ಅಳುವವರ ಕಣ್ಣೊರೆಸು;
ಉಳ್ಳವರ ಓಲೈಸಬೇಡ,
ಇಲ್ಲದವರ ಪಾಲಿಸು;
ಆಸ್ಥಾನವನ್ನು ಆಶಿಸಬೇಡ,
ಸ್ವಸ್ಥಾನದಲ್ಲಿ ಪ್ರಕಾಶಿಸು;
ದೊಡ್ಡತನಕ್ಕಾಗಿ ರಂಪಬೇಡ,
ದೊಡ್ಡಮನ ಸಂಪಾದಿಸು.
ಸ್ವತಂತ್ರಧೀರ ಸಿದ್ಧೇಶ್ವರನ
ಹೊರಗೆ ಹುಡುಕಬೇಡ,
ಒಳಗೆ ಅನುಭವಿಸು!

೩೬೭

ಮನದೊಡನೆ ದಿನವೆಲ್ಲ ಇರುವೆ,
ಮನಬಿಟ್ಟು ಕ್ಷಣವಾದರೂ ಇರಲು ಕಲಿ–
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ!

೩೬೮

ಯಾವ ಹಕ್ಕು ಎಲ್ಲರಿಗೂ ಸಿಕ್ಕಿದೆಯಯ್ಯ–
ಸಿಕ್ಕರೂ ದಕ್ಕಿದೆಯಯ್ಯ;
ಬಯಸಿದಲ್ಲಿ ಹುಟ್ಟುವ ಹಕ್ಕು,
ಬಯಸಿದಂತೆ ಬೆಳೆಯುವ ಹಕ್ಕು,
ಬಯಸಿದುದನ್ನು ಕಲಿವ ಹಕ್ಕು,
ಬಯಸಿದ ಕೆಲಸ ಮಾಡುವ ಹಕ್ಕು–
ಕೊನೆಗೆ ಪ್ರೀತಿಸುವ ಹಕ್ಕಾದರೂ
ಎಲ್ಲರಿಗೆ ಸಿಕ್ಕಿದೆಯೇನಯ್ಯ?
ಹಾಳೆಯ ಮೇಲಿನ ಹಕ್ಕುಗಳು
ಬಾಳಿನ ಸಹಜ ಹಕ್ಕುಗಳಾಗುವುದು

ಇನ್ನಾವಾಗ ತಂದೆ-
ಸ್ವತಂತ್ರಧೀರ ಸಿದ್ಧೇಶ್ವರಾ?

೩೬೯

ಬುದ್ಧಿ ಶ್ರೀಮಂತವಾಗುತ್ತ ಹೋದಂತೆ
ಹೃದಯ ಬಡವಾಗಲೇಬೇಕೆ?
ನಾಗರಿಕತೆ ಬೆಳೆಯುತ್ತ ಹೋದಂತೆ
ಸಂಸ್ಕೃತಿ ಸೊರಗಲೇಬೇಕೆ?
ಸ್ತ್ರೀ ಶಿಕ್ಷಣ ಹೆಚ್ಚುತ್ತ ಹೋದಂತೆ
ಗೃಹಸ್ಥ ಜೀವನ ಕರಗಲೇಬೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸ್ವ ಘೋಷಿತ ಗುರುಗಳು ಹೆಚ್ಚುತ್ತ ಹೋದಂತೆ
ಧಾರ್ಮಿಕ ಜೀವನ ಬಡವಾಗಲೇಬೇಕೆ?

೩೭೦

ಹೆಣದ ಮುಂದೆ ಅಳುವವರೆಲ್ಲ
ನಿಜವಾದ ಶೋಕ ಸಂತಪ್ತರಲ್ಲವಯ್ಯ;
ಮಂತ್ರಿಗಳ ಮೆರವಣಿಗೆಯಲ್ಲಿರುವರೆಲ್ಲ
ನಿಜವಾದ ಅಭಿಮಾನಿಗಳಲ್ಲವಯ್ಯ;
ಬಾಬಾಗಳ ಬಳಿಗೆ ಹೋಗುವರೆಲ್ಲ
ನಿಜವಾದ ಶಿಷ್ಯರಲ್ಲವಯ್ಯ;
ಹಣ ಹೆಂಡಗಳಿಗಾಗಿ ಮತಕೊಡುವವರು
ನಿಜವಾದ ಮತದಾರರಲ್ಲವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ.
ಎಲ್ಲರಿಗೂ ಸಲ್ಲದುದ
ತಾವು ಭೋಗಿಸುವವರು ನಿಜಗುರುಗಳಲ್ಲವಯ್ಯ!

೩೭೧

ಪೀಠ ಎತ್ತರವಾದಷ್ಟೂ
ಅನುಯಾಯಿಗಳಿಗೆ ದೂರ
ಪೀಠಾಧಿಪತಿ;
ಮಠ ದೊಡ್ಡದಾದಷ್ಟೂ
ಭಕ್ತರಿಗೆ ದೂರ

ಮಠಾಧಿಪತಿ;
ಜನರಿಂದ ದೂರಮಾಡುವ
ಪೀಠ ಶನಿಕಾಟ!
ಭಕ್ತರಿಂದ ದೂರಾಗಿಸುವ
ಮಠ ಸಂಕಟ!
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚಬೇಕೆ?
ಮಣಿಪೀಠ ಬಿಟ್ಟು
ಜನಮನ ಪೀಠ ಪಡೆಯಿರಿ ಗುರುಗಳೆ!

## ೩೭೨

ಅವಿವಾಹಿತರೆಲ್ಲ ಬ್ರಹ್ಮಚಾರಿಗಳಲ್ಲ;
ವಿವಾಹಿತರೆಲ್ಲ ಗೃಹಸ್ಥ ಧರ್ಮಿಗಳಲ್ಲ;
ಶಾಲೆಗೆ ಹೋಗುವರೆಲ್ಲ ವಿದ್ಯಾರ್ಥಿಗಳಲ್ಲ;
ಗುಡಿಗೆ ಹೋಗುವರೆಲ್ಲ ಭಕ್ತರಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ಭಾರತದಲ್ಲಿ ವಾಸಿಸುತ್ತಿರುವರೆಲ್ಲ ಭಾರತ ನಿಷ್ಠರಲ್ಲ.

## ೩೭೩

ಸಮುದ್ರ ಎಂಬ ಶಬ್ದ ಕಿರಿದು.
ಅದರ ಅರ್ಥ ಮಾತ್ರ
ಸಮುದ್ರದಷ್ಟೇ ಹಿರಿದು;
ಪ್ರೀತಿ ಹುಟ್ಟುವವಿದೆ ಕಿರಿದು.
ಪ್ರೀತಿಯೋ, ವಿಶ್ವದಷ್ಟೇ ಹಿರಿದು;
ಸ್ವತಂತ್ರಧೀರ ಸಿದ್ಧೇಶ್ವರನ
ಕುರುಹು ಕಿರಿದು,
ಅದರ ಸಾಂಕೇತಿಕತೆಯೋ
ಅನಂತಕೋಟಿ ಬ್ರಹ್ಮಾಂಡಗಳಿಗೂ ಹಿರಿದು!

## ೩೭೪

ಬಡವರಿಗೆ ನೆರವಾದ ಒಂದು ದಿನ
ಒಂದು ಆಯುಷ್ಯಕ್ಕೆ ಸಮಾನ:
ಬಡವರ ಪೀಡಿಸುತ್ತ ಕಳೆದ ಆಯುಷ್ಯ

ದಯದ ಶವಕ್ಕೆ ಸಮಾನ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೭೫

ಗರ್ಭಗುಡಿಯ ಗೋಡೆಗಳೇ
ಅಲ್ಲಿ ನಡೆವ ಭಕ್ತ ವಂಚನೆಯ ಸಂಚುಗಳಿಗೆ ಸಾಕ್ಷಿ;
ಪೂಜೆಯ ಕೋಣೆಯ ಗೋಡೆಗಳೇ
ಶ್ರೀಗಳ ಕಳ್ಳ ತಾನು ಕೇಳಿಗಳಿಗೆ ಸಾಕ್ಷಿ;
ಅರಮನೆಯ ಅಂತಃಪುರದ ಗೋಡೆಗಳೇ
ಅಪವಿತ್ರ ಲಂಪಟತ್ವದ ಲೋಲುಪತೆಗಳಿಗೆ ಸಾಕ್ಷಿ;
ಸಚಿವ ಸಂಪುಟ ಸಭಾ ಭವನದ ಗೋಡೆಗಳೇ
ಜನ ವಿರೋಧಿ ಕ್ರಮಗಳ ಹೊಲೆ ಹೆರಿಗೆಗಳಿಗೆ ಸಾಕ್ಷಿ;
ಸ್ವತಂತ್ರಧೀರ ಸಿದ್ಧೇಶ್ವರಾ.
ನನಗೆ ಮಂತ್ರ ಗೊತ್ತಿರುವ
ನನ್ನ ಮನದ ವಿಕಾರಗಳಿಗೆ ನೀನೆ ಸಾಕ್ಷಿ!

೩೭೬

ಅನ್ಯರ ಕಷ್ಟವ ಕಳೆದು ಹಿಗ್ಗುವವರೂ ಇದ್ದಾರೆ,
ಹೆರವರ ಕಷ್ಟವ ಕಂಡು ಹಿಗ್ಗುವವರೂ ಇದ್ದಾರೆ:
ಅನ್ಯರಿಗಿಲ್ಲೆನಿಸಿ ನುಂಗುವವರಿದ್ದಾರೆ.
ತಮಗೇ ಇಲ್ಲೆನಿಸಿ ಅನ್ಯರಿಗೆ ಉಣಿಸುವವರೂ ಇದ್ದಾರೆ;
ತಮ್ಮ ದೋಷಗಳ ಅನ್ಯರ ತಲೆಗೆ ಕಟ್ಟುವವರಿದ್ದಾರೆ.
ಅನ್ಯರ ದೋಷಗಳೂ ತಮ್ಮವೆಂದು ಸಾರುವವರಿದ್ದಾರೆ;
ಅವರ ಪ್ರತಿಭಟಿಸಲಾಗದೆ
ಇವರ ಪುರಸ್ಕರಿಸಲಾಗದೆ
ಕೈಲಾಗದವನಂತೆ ಕಾಲಕಳೆಯುತ್ತಿಹೆನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೭೭

ಬಹು ಪ್ರಯಾಸದಿಂದ
ಮಾನವ ಪ್ರೇಮವನ್ನು ಉಳಿಸಿಕೊಂಡಿದ್ದೇನೆ
ಅದು ಮಚ್ಚರದಿಂದ ನುಚ್ಚುನುರಿಯಾಗದಿರಲಯ್ಯಾ!
ಮತ್ತೆ ಮತ್ತೆ ಮೋಸ ಹೋಗಿದ್ದೇನೆ,

ಮತ್ತೆ ಮತ್ತೆ ಗಾಸಿಯಾಗಿದ್ದೇನೆ!
ಆದರೂ, ಎಂಥ ವಿಮಲ ಸರಿಸಿನಲ್ಲಿಯೂ
ನಕ್ರ ಮಕರಗಳಿರುವಂತೆ
ಮನುಜಕುಲದಲ್ಲಿಯೂ ಕುಲಕಂಟಕರಿಹರೆಂದು ನಂಬಿ
ಮಾನವ ಪ್ರೇಮಿಯಾಗಿಯೇ ಮುಂದುವರೆದಿದ್ದೇನೆ!
ಈ ಪ್ರೇಮವನ್ನು ಕಡಿಯದೆ ಕಡೆಹಾಯಿಸು–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೭೮

ಶರೀರ ಮುಖ್ಯವೋ ಶೃಂಗಾರ ಮುಖ್ಯವೋ?
ಕಾವ್ಯ ಮುಖ್ಯವೋ ಅಲಂಕಾರ ಮುಖ್ಯವೋ?
ಮಾತು ಮುಖ್ಯವೋ ಕೃತಿ ಮುಖ್ಯವೋ?
ಜಾತಿ ಮುಖ್ಯವೋ ಪ್ರೀತಿ ಮುಖ್ಯವೋ?
ಸ್ವತಂತ್ರಧೀರ ಸಿದ್ಧೇಶ್ವರ ಮುಖ್ಯರೋ
ಅವನ ಮಕ್ಕಳು ಮುಖ್ಯರೋ?

## ೩೭೯

ಹೊರಗೆ ಬಣ್ಣ ಬಣ್ಣದ ಹೂವುಗಳು,
ಒಳಗೆ ಬಣ್ಣ ಬಣ್ಣದ ಭಾವಗಳು,
ಇರುಳು ಬಣ್ಣಬಣ್ಣದ ಕನಸುಗಳು,
ಹಗಲು ಬಣ್ಣ ಬಣ್ಣದ ನನಸುಗಳು
ಬದುಕೇಕೆ ಬಣ್ಣಗೇಡಾಗಿ ಬನ್ನಗೂಡಬೇಕಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ?

## ೩೮೦

ಕುವಿಚಾರ ಅಪಾಯಕಾರಿ ಚೋರ,
ಸುವಿಚಾರ ಅಗೋಚರ ಭಂಡಾರ,
ಸ್ವಾತಂತ್ರ್ಯಾಪಹಾರ ಅಪಾಯಕಾರಿ ಅಪಹಾರ,
ಸರ್ವರ ಸ್ವಾತಂತ್ರ್ಯ ದೇಶದ ಸತ್ವಸಾರ,
ಕೃತಘ್ನತೆ ಅಪಾಯಕಾರಿ ಅನಾಚಾರ,
ಕೃತಜ್ಞತೆ ಸಜ್ಜನಿಕೆಯ ಸದಾಚಾರ,
ಹೃದಯಹೀನ ಸಂಪತ್ತು ಬರಿ ಹೆಣಭಾರ,
ಹೃದಯಸಹಿತ ವಿಪತ್ತೂ ರತ್ನಹಾರ,

ಸ್ವತಂತ್ರಧೀರ ಸಿದ್ಧೇಶ್ವರಾ,
ಅನ್ಯರನು ಗೆಲ್ಲುವುದು ಅಹಂಕಾರ,
ತನ್ನನೇ ಗೆಲ್ಲುವುದು ಆತ್ಮೋದ್ಧಾರ ನೋಡಾ!

## ೩೮೧

ಮಾತನ್ನು ಕಲಿತಾಗಲೇ
ಮೋಸ ಮಾಡುವುದನ್ನೂ ಕಲಿತನೇನೋ, ಮಾನವ;
ವಿಚಾರಿಸಲು ಕಲಿತಾಗಲೇ
ಸಂಶಯಿಸಲು ಕಲಿತನೇನೋ, ಮಾನವ;
ಆಸ್ತಿ ಮಾಡಲು ಕಲಿತಾಗಲೇ
ಶಸ್ತ್ರ ನಿರ್ಮಿಸಲು ಕಲಿತನೇನೋ, ಮಾನವ;
ಮುಖ್ಯನನ್ನು ಆರಿಸಿಕೊಂಡಾಗಲೇ
ಸ್ವಂತ ಚಿಂತನೆಯನ್ನು ಕಳೆದುಕೊಂಡನೇನೋ, ಮಾನವ;
ಜನಸಂಖ್ಯೆಯನ್ನು ಬೆಳೆಸಿಕೊಂಡಾಗಲೇ
ಅಸಂಖ್ಯ ಕಷ್ಟಗಳ ಕೊಂಡು ಕೊಂಡನೇನೋ, ಮಾನವ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮುಂದೆಲ್ಲಿಗೆ ಮುಟ್ಟಲಿರುವನು ಈ ಮಾನವ?

## ೩೮೨

ಬಡವ ಸತ್ತರೆ ಹುಗಿಯಲು ಸ್ಥಳವಿಲ್ಲ,
ಸುಡಲು ಸೌದೆಯಿಲ್ಲ–
ಒಡೆಯ ಸತ್ತರೆ ಚಂದನದ ಚಿತೆ,
ವಿಶಾಲ ವನದಲ್ಲಿ ಸಮಾಧಿಯಯ್ಯ!
ಸಾಕಿದ ನಾಯಿಗೆ ಕಾರಿನಲ್ಲಿ ಸ್ಥಳ,
ದುಡಿವ ದಲಿತನಿಗೆ ಬಾಗಿಲಾಚೆ ಎಡೆಯಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಗುಡಿಗೆ ಬರುವ ಬಡ ಭಕ್ತರಿಗೆ
ಗಿಡದಡಿಯೇ ಆಶ್ರಯ,
ಸಿರಿವಂತರಿಗೆ ಸೌಧಗಳಲ್ಲಿ
ಆವಾಸವಯ್ಯ!

### ೩೮೩

ಎಲುವು ಕಡಿವ ನಾಯಿ ಮುಟ್ಟಿದರೆ ಮುಟ್ಟು ಚಿಟ್ಟು,
ಇಲಿ ತಿನ್ನುವ ಬೆಕ್ಕು ಮುಟ್ಟಿದರೆ ಮೈಲಿಗೆಯಿಲ್ಲವಯ್ಯ!
ಸತ್ತುದ ತಿನ್ನುವ ಸಾಯಾ ಮುಟ್ಟಿದರೆ ಮುಟ್ಟು ಚಿಟ್ಟು,
ಕೊಂದು ತಿನ್ನುವ ಸಾಲೋಮನ್ ಮುಟ್ಟಿದರೆ ಮೈಲಿಗೆಯಿಲ್ಲವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಕೈಹಿಡಿದ ಮಡದಿ ಪುಷ್ಪವತಿಯಾದರೆ ಮುಟ್ಟು ಚಿಟ್ಟು,
ಬೆಲೆವೆಣ್ಣು ಎಂಜಲನಿಕ್ಕಿದರೂ ಮೈಲಿಗೆ ಇಲ್ಲವಯ್ಯ!

### ೩೮೪

ಸುಂದರವಿರುವಷ್ಟು ಸರಳವಿಲ್ಲವಯ್ಯ, ನಿನ್ನ ಸೃಷ್ಟಿ;
ಬಹು ದೂರ ಹರಿಯದಯ್ಯ ನನ್ನ ದೃಷ್ಟಿ;
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೮೫

ವರ್ಣ ವ್ಯವಸ್ಥೆಯಿದ್ದೂ
ತಡೆಯಲಾಗಲಿಲ್ಲ
ಕನಕ ಕಬೀರರಂಥವರ ಉದಯವನ್ನು;
ಅಸ್ಪೃಶ್ಯತೆಯ ಅಭಿಶಾಪವಿದ್ದೂ
ಅದುಮಲಾಗಲಿಲ್ಲ
ಅಂಬೇಡಕರರಂಥವರ
ಪ್ರತಿಭೆಯ ವಿಜಯವನ್ನು;
ಬ್ರಾಹ್ಮಣನಾಗಿ ಹುಟ್ಟಿಯೂ
ತೊಡಿಸಲಾಗಲಿಲ್ಲ
ಬಸವಣ್ಣನಿಗೆ ಜನಿವಾರವನ್ನು ;
ಇನ್ನಾರು ತಡೆಯುವರು
ದಲಿತೋದ್ಧಾರವನ್ನು–
ಸ್ವತಂತ್ರಧೀರ ಸಿದ್ಧೇಶ್ವರಾ?

### ೩೮೬

ಅಸಮಾನರ ಸಮಾನೀಕರಣ
ಅಸಮಾನತೆಯ ಸ್ಥಿರೀಕರಣವಯ್ಯ!

ಅಸಮಾನತೆಯ ಸ್ಥಿರೀಕರಣವೇ
ಮನುಜನ ಅಮಾನವೀಕರಣವಯ್ಯ;
ಮನುಕುಲದ ಅಮಾನವೀಕರಣವೇ
ಅಸ್ತಿತ್ವದ ಆಸುರೀಕರಣವಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೩೮೭

ದೇಗುಲಗಳ ದಾರಿಯುದ್ದಕ್ಕೂ
ಅಂಧ ಶ್ರದ್ಧೆಗಳ ಸೂರೆ;
ಮಠಗಳ ದಾರಿಯುದ್ದಕ್ಕೂ
ಮೂಢ ವಿಶ್ವಾಸಗಳ ಸೂರೆ;
ಕ್ಷೇತ್ರಗಳ ದಾರಿಯುದ್ದಕ್ಕೂ
ಮಂಕು ಬೂದಿಯ ಸೂರೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರಕದ ದಾರಿಯುದ್ದಕ್ಕೂ
ಸದುದ್ದೇಶಗಳ ಸೂರೆ!

## ೩೮೮

ಬದುಕುವ ದಾರಿ ಗೊತ್ತಿಲ್ಲದವರು
ಕೈಲಾಸದ ದಾರಿ ತೋರುತ್ತಿದ್ದಾರೆ!
ತಮಗೇ ಶಾಂತಿಯಿಲ್ಲದವರು
ವಿಶ್ವಶಾಂತಿಗಾಗಿ ಯಾಗ ಮಾಡುತ್ತಿದ್ದಾರೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಮಡದಿ ಮಕ್ಕಳನ್ನೇ ಸಲಹದವರು
ವಿಶ್ವಕುಟುಂಬಿಗಳೆಂದು ವಿಜೃಂಭಿಸುತ್ತಿದ್ದಾರೆ!

## ೩೮೯

ದನಕ್ಕೆ ಬೇಲಿಯ ಭಯ, ಬಳ್ಳಿಗಲ್ಲ;
ವನಕ್ಕೆ ಬೆಂಕಿಯ ಭಯ, ಸರಸಿಗಲ್ಲ;
ಮೋಡಕ್ಕೆ ಗಾಳಿಯ ಭಯ, ಪರ್ವತಕ್ಕಲ್ಲ;
ಮರಕ್ಕೆ ಸಿಡಿಲ ಭಯ, ಅಂಬರಕ್ಕಲ್ಲ;
ಕೆರೆಗೆ ಬತ್ತುವ ಭಯ, ಶರಧಿಗಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,

ಒಡೆತನಕ್ಕೆ ಬಡತನದ ಭಯ,
ಬಡತನಕ್ಕಲ್ಲ!

೩೯೦

ಮಾತೃವಾಣಿಗೆ ಮಣಿಯದವ ಪಾಷಾಣ;
ಕಾಂತಾ ಸಮ್ಮಿತಿಗೆ ಕರಗದವ ಕಠಿಣ;
ಮುಗುವಿನ ತೊದಲ ಮೆಚ್ಚದವ ಪೆಚ್ಚ;
ಗೆಳೆಯರ ಕೆಳೆನುಡಿಗೆ ಕಿವಿಗೊಡದವ ಹುಚ್ಚ;
ಸ್ವತಂತ್ರಧೀರ ಸಿದ್ಧೇಶ್ವರನ
ಶರಣರ ಸೂಳ್ನುಡಿಗಳ ಕಡೆಗಣಿಸುವವ ಕಚ್ಚಾ!

೩೯೧

ಧಾನ್ಯ ಸಂಗ್ರಹ ಮಾಡುವವರುಂಟು;
ಧನ ಸಂಗ್ರಹ ಮಾಡುವವರುಂಟು;
ಜನ ಸಂಗ್ರಹ, ವಸ್ತು ಸಂಗ್ರಹ ಶಸ್ತ್ರ ಸಂಗ್ರಹ ಮಾಡುವವರುಂಟು;
ಲೋಕ ಸಂಗ್ರಹ ಮಾಡುವವರ ಸಂಖ್ಯೆ ಹೆಚ್ಚಿಸಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

೩೯೨

ಮದುವೆಯಾದವರಿಗೆ
ಆಗೊಮ್ಮೆ ಈಗೊಮ್ಮೆ ಹೆಣ್ಣಿನ ಸ್ಮರಣ,
ನಕಲಿ ಸಂನ್ಯಾಸಿಗಳಿಗೋ
ಹಗಲಿರುಳು ಹೆಣ್ಣಿನದೇ ಧ್ಯಾನ!
ಸಂಸಾರಿಗೆ
ಯಾವಾಗಲೋ ಒಮ್ಮೆ ಸಿನಿಮಾ ವೀಕ್ಷಣ,
ಅವಿವಾಹಿತರಿಗೋ
ನಿತ್ಯ ಸಿನಿಮಾ, ಕ್ಯಾಬರೆ ದರ್ಶನ!
ಸದಾ ಕುಡಿವರಿಂದ
ನಿಯಮಿತ ಮದ್ಯಪಾನ,
ಹೊಸದಾಗಿ ಕುಡಿಯಲು ಕಲಿತವರಿಗೆ
ಸುರೆಯಲ್ಲಿಯೇ ಸ್ನಾನ!
ಸ್ವತಂತ್ರಧೀರ ಸಿದ್ಧೇಶ್ವರನ

ನಿಜಭಕ್ತರಿಂದ ಗುಪ್ತಪೂಜನ,
ನಕಲಿ ಭಕ್ತರಿಂದ
ಬಾಜಾ ಬಜಂತ್ರಿಯೊಡನೆ ಅರ್ಚನ!

೩೯೩

ಹಸುರಿನ ಹಿನ್ನೆಲೆಯಲ್ಲಿ
ಕುಸುಮಗಳು ಕುಲುಕುಲು ನಗಲು
ಪಸರಿಸುವುದಯ್ಯಾ ಹೊಗರು ಹುಲ್ಲಮೇಲೆ!
ಹಸುರಿನ ಹಿನ್ನೆಲೆಯಲ್ಲಿ
ಹಕ್ಕಿಗಳು ಚಿಲಿಪಿಲಿ ಹಾಡಲು
ಅಲೆಗಳೇಳುವುವಯ್ಯ ಎಲರ ಮೈಯ ಮೇಲೆ,
ನನ್ನೆದೆಯೂ ಹಸುರಾದರೆ
ಅಲರುವಿಯೇನೋ ಅಲ್ಲಿ,
ಉಲಿಯುವಿಯೇನೋ ಅಲ್ಲಿ,
ಹೇಳು, ಸ್ವತಂತ್ರಧೀರ ಸಿದ್ಧೇಶ್ವರ!

೩೯೪

ಮುಗಿಲ ಮಲ್ಲಿಗೆ ಸಿಕ್ಕಲಿಲ್ಲವೆಂಬ ಧಗೆಯು ನನಗಿಲ್ಲ–
ಮನೆಯ ಮಲ್ಲಿಗೆ ಸಾಕಯ್ಯ ನನಗೆ;
ನಕ್ಷತ್ರಗಾನ ಕೇಳಲಿಲ್ಲೆಂಬ ಕಳವಳ ನನಗಿಲ್ಲ–
ಬಾಲಕನ ಕಲಭಾಷೆಯ ಸಂಗೀತ ಸಾಕು ನನಗೆ;
ರಾಜಹಂಸವ ನೋಡಲಿಲ್ಲೆಂಬ ದುಗುಡ ನನಗಿಲ್ಲ–
ನನ್ನ ಚಪ್ಪರದ ಗೂಡಿನ ಗುಬ್ಬಿ ಸಾಕಯ್ಯ ನನಗೆ;
ಅವರಿವರು ಮೆಚ್ಚಲಿಲ್ಲವೆಂಬ ಎದೆಗಿಚ್ಚು ನನಗಿಲ್ಲ–
ನಿನ್ನವರು ಮೆಚ್ಚಿದರೆ ಸಾಕಯ್ಯ ನನಗೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೩೯೫

ಏಕಪತ್ನೀವ್ರತಸ್ಥನಾದರೆ
ಸವತಿ ಮತ್ಸರದ ಸಮಸ್ಯೆಯೆಲ್ಲಿ?
ಮಲಮಕ್ಕಳ ಪ್ರಶ್ನೆಯೆಲ್ಲಿ?
ಗಳಿಗೆಗೊಂದು ಜಗಳದ ಜಂಜಾಟವೆಲ್ಲಿ?
ಹಲವು ಹೆಂಡರಿರುವ ದೇವರುಗಳ ಕಲ್ಪಿಸಿ,

ಹಲವು ಹೆಂಡರ ಕಟ್ಟಿಕೊಂಡ
ವಿಲಿವಿಲಿ ಒದ್ದಾಡುವರೇ ಬೇಕೇನಯ್ಯ
ನಿನ್ನ ವಿನೋದ ಪ್ರಿಯತೆಗೆ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೯೬

ಹಳ್ಳಿಯ ಹುಲ್ಲಿನ ದಳಗಳು ಹಾರಿ ಹೋಗಿ
ನಗರಗಳ ಮಹಡಿಗಳ ಕೆಡವಿದ ಕನಸು ಕಂಡೆ!
ದಲಿತನ ನಿಟ್ಟುಸಿರುಗಳು ಏರಿ ಹೋಗಿ
ಅಸ್ಪೃಶ್ಯತಾವಾದಿಗಳ ಉಸಿರುಗಟ್ಟಿಸಿದ ಕನಸು ಕಂಡೆ!
ನೋವುಂಡವರ ನರಳಿಕೆ ಸರಳಾಗಿ ಸಿಡಿದು
ಸಿರಿಯ ರಕ್ಷಣಾ ಕೋಟೆಗಳ ಕೆಡಹಿದ ಕನಸು ಕಂಡೆ!
ವಿಧವೆಯರ, ವಿಕಲಾಂಗರ, ಅನಾಥರ, ಅಭಾಗ್ಯರ ಕಂಬನಿಗಳು
ಸಿಡಿಲಾಗಿ ಅಪ್ಪಳಿಸಿ ಶೋಷಣೆಯ ಸೈನ್ಯ ಸುಟ್ಟ ಕನಸು ಕಂಡೆ!
ಕನಸೊಡೆದು ಕಣ್ದೆರೆದಾಗ
ಶೋಷಣೆಯ ಶತಶತ ಚಕ್ರವ್ಯೂಹಗಳು
ಗಹಗಹಿಸಿ ನಗುತ್ತಿರುವುದ ಕಂಡೆ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೩೯೭

ರಾಮ ಜನ್ಮಭೂಮಿಯಲ್ಲಿ ರಕ್ತ ಹರಿದುದ ಕಂಡು
ರಾಮ ಬೊಂಬಡೆ ಹೊಡೆಯುತ್ತಿದ್ದಾನೆ!
ಬಾಬರಿ ಮಸೀದಿಗಾಗಿ ದೇಶ ಗಾಸಿಯಾದುದ ಕಂಡು
ಮಹಮ್ಮದ ಎದೆ ಎದೆ ಬಡಿದುಕೊಳ್ಳುತ್ತಿದ್ದಾನೆ!
ಇಬ್ಬರ ಭಕ್ತರಿಗೂ ತಾವು ಮಹಾಕಾರ್ಯ ಮಾಡಿದೆವೆಂಬ
ಪರಿತೋಷ,
ಸ್ವರ್ಗಕ್ಕೆ ಪರ್ಮಿಟ್ಟು ಗಿಟ್ಟಿಸಿದೆವೆಂಬ ಹರ್ಷ!
ಎಂಥ ವಿಪರ್ಯಾಸ,
ಧರ್ಮದ ದುರ್ವಿಲಾಸ–
ಸ್ವತಂತ್ರಧೀರ ಸಿದ್ಧೇಶ್ವರಾ!

೫೮

ಸಂವಿಧಾನ ಬಂದ ಮೇಲೂ
ಶಾಸ್ತ್ರಾಧಾರ ಹುಡುಕಲೇಕಯ್ಯ?
ಸಾರ್ವತ್ರಿಕ ಶಿಕ್ಷಣ ಬಂದ ಮೇಲೂ
ಕುಲ ಜಾತಿಗಳ ಹುಡುಕಲೇಕಯ್ಯ?
ವೃತ್ತಿ ಸ್ವಾತಂತ್ರ್ಯ ಬಂದ ಮೇಲೂ
ವರ್ಣಗಳ ಹುಡುಕಲೇಕಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ವಿಚಾರ ಸ್ವಾತಂತ್ರ್ಯ ಬಂದ ಮೇಲೂ
ಕಂದಾಚಾರಗಳಿಗೆ ಕಟ್ಟು ಬೀಳಲೇಕಯ್ಯ?

೫೯

ಬಂಜರು ಭೂಮಿಯ ಸಾಗುವಳಿಯ
ಯೋಜನೆ ಬಂದಿದೆ–
ಹೃದಯಭೂಮಿಯ
ಉಳಿಮೆಯ ಯೋಜನೆ ಬರಲಯ್ಯ;
ಜಗತಿ ಸಾಗುವಳಿ, ಜಗತಿ ತೋಟಗಾರಿಕೆ ಬಂದಿವೆ–
ಬುದ್ಧಿಯ ಸಾಗುವಳಿ ಬರಲಯ್ಯ;
ತರುಲತೆಗಳ ಕಸಿ ಮಾಡುವ ಕಸಬು ಬಂದಿದೆ–
ಮನಮನಗಳ ಕಸಿ ಮಾಡುವ ಕೌಶಲ ಬರಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಬಗೆಬಗೆಯ ನೀರಾವರಿಗಳು ಬಂದಿವೆ,
ಬಗೆಯ ನೀರಾವರಿ ಬರಲಯ್ಯ!

೬೦೦

ಬಾಳಿನ ಬೆಳಕನ್ನು ನುಂಗಲು
ಸದಾ ಸಜ್ಜಾಗಿ ನಿಂತ ಸಾವಿನ ಕತ್ತಲೆಯೆ,
ಬಾಳ ಬೆಳಕು ಬಲಹೀನವಾಗುವುದನ್ನೇ
ಕಾಯುತ್ತಲಿಹೆಯೇನು?
ಕತ್ತಲೆಯನ್ನೇ ಬೆಳಕಾಗಿಸುವ ಬಲ
ಬೆಳಕಿಗಿರುವತನಕ
ಬೆಳಕಿಗೆ ಕತ್ತಲೆಯ ಭಯವೆಲ್ಲಿ?

ಸಾವನ್ನೇ ಸ್ವಾಹಾಮಾಡುವ ಬಲ
ಬಾಳಿಗೆ ಬಂದಾಗ
ಬಾಳಿಗೆ ಸಾವಿನ ಭಯವೆಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರ
ಮನಸ್ಸು ಮಾಡದೆ
ಜೀವನವೆಲ್ಲಿ,
ಮರಣವೆಲ್ಲಿ?

## ೪೦೧

ಸನಾತನಿಗಳ
ಮೇಲು ಕೀಳಿನ ಬೃಹಜ್ವಾಲದಲ್ಲಿ
ಸಿಲುಕದೆ ಉಳಿಯುವುದಾ
ಸುಲಭವಲ್ಲವಯ್ಯ!
ಹುಟ್ಟಿನಿಂದ ಮೇಲು ಕೀಳು,
ವೃತ್ತಿಯಿಂದ ಮೇಲು ಕೀಳು,
ಸೊತ್ತಿನಿಂದ ಮೇಲು ಕೀಳು!
ಮೇಲಿನವರಲ್ಲಿಯೂ ಕಡಿಮೆ ಮೇಲಿನವರು,
ಕೀಳಿನವರಲ್ಲಿಯೂ ಕಡಿಮೆ ಕೀಳರು!
ಕೀಳು, ಕೀಳು, ಕೀಳು–
ಕೀಳು ಮೇಲೆಂಬುದರ ಮೂಲವನ್ನೇ ಕೀಳು!
ಸ್ವತಂತ್ರಧೀರ ಸಿದ್ಧೇಶ್ವರನ ಆದೇಶವಿದು
ಕೀಳು, ಕೀಳು!

## ೪೦೨

ತಾಯಿ ದೇವರೆನ್ನುವ ಬಾಯಿಯೇ
ಸತಿ ಶೂದ್ರಳೆನ್ನುವುದು
ಎಂಥ ವಿರೋಧಾಭಾಸ !
ಹೆಣ್ಣು ಮಾಯೆಯೆನ್ನುವವರೇ
ಹೆಣ್ಣಿನ ಹೊಟ್ಟೆಯಲ್ಲಿಯೇ ಹುಟ್ಟುವುದು
ಎಂಥ ವಿಪರ್ಯಾಸ!
ಹೆಣ್ಣು ಸಹ
ಹೆಣ್ಣು ಹುಟ್ಟಿದಾಗ ಅಳುವುದು
ಎಂಥ ವಿಧಿ ವಿಲಾಸ!

ಹೆಣ್ಣಿನ ಹಾಲಿಂದಲೇ ಬಲಿತು
ಹೆಣ್ಣನ್ನೇ ಅಬಲೆಯಾಗಿಸುವುದಾ
ಎಂಥ ಕಲ್ಮಷ!
ಸ್ವತಂತ್ರಧೀರ ಸಿದ್ಧೇಶ್ವರಾ,
ಹೆಣ್ಣಿನ ಹಿರಿಮೆಯ
ಗಂಡು ಅರಿಯುವಂತೆ ಮಾಡಾ,
ಹೆಣ್ಣಿಗೆ ವಿಮೋಚನೆಯ ನೀಡಾ!

## ೪೦೩

ಬರ್ಮಾ ಸಿಡಿದು ಹೋಯಿತು,
ಪಾಕಿಸ್ತಾನ ಒಡೆದು ಹೋಯಿತು,
ಈಗ ಪಂಜಾಬ ಕಾಶ್ಮೀರಗಳು ಕಡಿದು ಹೋಗುವುದೆ?
ಜಾತಿಪದ್ಧತಿಯ ಪಿಡುಗು ಹೋಗದೆ
ಶೋಷಣೆಯ ವ್ಯವಸ್ಥೆಯ ಸಿಡುಬು ಹೋಗದೆ
ಇಡಿಯಾಗಿ ಉಳಿದುದೇನಯ್ಯಾ ಭಾರತ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೦೪

ಮರದ ಬದುಕಿಗೆ
ತಾಯಿ ಬೇರೊಂದೇ ಸಾಕೇನಯ್ಯ?
ಅಕ್ಕಪಕ್ಕದ ಲೆಕ್ಕವಿಲ್ಲದ
ಚಿಕ್ಕ ಬೇರುಗಳು ಬೇಡವೇನಯ್ಯ?
ಸಬಲ ಕೇಂದ್ರ ಪ್ರಭುತ್ವಮಾತ್ರ
ಭಾರತದ ಭದ್ರತೆಗೆ ಸಾಕೇನಯ್ಯ?
ರಾಜ್ಯಗಳೂ ಸುಭದ್ರವಾಗಿರುವುದು
ಬೇಡವೇನಯ್ಯ?
ಕೇಂದ್ರ ಹೊಟ್ಟೆ,
ರಾಜ್ಯಗಳು ಅವಯವಗಳು;
ಹೊಟ್ಟೆಯಿರುವದೇ
ಅಂಗಾಂಗಳಿಗೆ ಪುಷ್ಟಿಯೀಯಲು!
ನಮ್ಮ ಕೇಂದ್ರ ಪ್ರಭೃತಿಗಳಿದನ್ನು
ಅದಷ್ಟು ಬೇಗ ಅರಿಯಲಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

### ೪೦೫

ಈ ದೇಶದ ಚೌಷಷ್ಟಿ ಕಲೆಗಳಲ್ಲಿ
ಎಲ್ಲ ಕಲೆಗಳೂ ಸೇರಿದುವು-
ಜೀವನ ಕಲೆ ಸೇರಲಿಲ್ಲವಯ್ಯ!
        ಈ ದೇಶದಲ್ಲಿ
ಎಲ್ಲ ಧರ್ಮಗಳೂ ಬೇರುಬಿಟ್ಟುವು-
ಜೀವನಧರ್ಮ ಅಂಕುರಿಸಲಿಲ್ಲವಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
        ಈ ದೇಶದಲ್ಲಿ
ಎಲ್ಲ ಯೋಗಗಳೂ ಬೆಳೆದುವು-
ಜೀವನಯೋಗ ಬೆಳೆಯಲಿಲ್ಲವಯ್ಯ!

### ೪೦೬

ಕಲಿಸುವದೊಂದನ್ನು ಬಿಟ್ಟು
ಉಳಿದೆಲ್ಲವನ್ನೂ ಮಾಡುತ್ತಿಹರಯ್ಯ ಉಪಾಧ್ಯಾಯರು;
ವಿದ್ಯಾಭ್ಯಾಸವೊಂದನ್ನು ಬಿಟ್ಟು
ಉಳಿದೆಲ್ಲವನ್ನೂ ಮಾಡುತ್ತಿಹರಯ್ಯ ವಿದ್ಯಾರ್ಥಿಗಳು;
ಕಾರ್ಯಾಲಯದ ಕೆಲಸವೊಂದನ್ನು ಬಿಟ್ಟು
ಉಳಿದೆಲ್ಲವನ್ನೂ ಮಾಡುತ್ತಿಹರಯ್ಯ ಸರಕಾರದ ನೌಕರರು;
ಉತ್ಪಾದಕತೆಯೊಂದನ್ನುಳಿದು
ಉಳಿದೆಲ್ಲವೆನ್ನೂ ಮಾಡುತ್ತಿಹರಯ್ಯ ಕಾರ್ಮಿಕರು;
ಜನಹಿತವೊಂದನ್ನುಳಿದು
ಉಳಿದೆಲ್ಲವನ್ನೂ ಮಾಡುತ್ತಿಹರಯ್ಯ ಸಚಿವ-ಶಾಸಕರು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳ ಸೇವೆಯೊಂದನ್ನುಳಿದು
ಉಳಿದೆಲ್ಲವನ್ನೂ ಮಾಡುತ್ತಿಹರಯ್ಯ ನಿನ್ನ ಆರಾಧಕರು!

### ೪೦೭

ಉಕ್ಕಿನ ಪರದೆ ಹರಿದಿದೆ,
ಬರ್ಲಿನ್ ಗೋಡೆ ಬಿರಿದಿದೆ,
ಯುದ್ಧ ಭಯ ಸರಿದಿದೆ,
ನಿರಂಕುಶ ಪ್ರಭುತ್ವ ಮುರಿದಿದೆ,
ಹೊಸ ದಶಕದ ಮುಖದ ಮೇಲೆ

ಹೊಸ ಆಸೆ ತೆರೆದಿದೆ!
ಅರಳಗೊಡು ಈ ಆಸೆಯ–
ಸ್ವತಂತ್ರಧೀರ ಸಿದ್ಧೇಶ್ವರ!

೪೦೮

ಹಣ್ಣಾಗಲು ಬಿಡದೆ
ಕಾಯಿ ಹುಳಿಯೆಂದರೆ ಹೇಗಯ್ಯ?
ನೀರು ಕೊಡದೆ ಸವರ್ಣಿಯು
ಶೂದ್ರ ನಾರುವನೆಂದರೆ ಹೇಗಯ್ಯ?
ಮೊಗ್ಗನ್ನು ಅರಳಗೊಡದೆ
ಅದು ನಿರ್ಗಂಧ ಕುಸುಮವೆಂದರೆ ಹೇಗಯ್ಯ?
ಕಲಿಯದವರಿಗೆ ಕಲಿಯಗೊಡದೆ
ಅವರು ನಿರಕ್ಷರಕುಕ್ಷಿಗಳೆಂದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರ?

೪೦೯

ಹೊಟ್ಟೆ ತುಂಬಿದವರ ಹವ್ಯಾಸಗಳೇ ಬೇರೆ,
ಹಸಿದ ಹೊಟ್ಟೆಯವರ ಅಭಿಲಾಷೆಗಳೇ ಬೇರೆ!
ಹೊಟ್ಟೆ ತುಂಬಿದವರಿಗೆ ಬೇಕು
ಕಾವ್ಯಶಾಸ್ತ್ರ ವಿನೋದ;
ಹಸಿದವರಿಗೆ ಬೇಕು
ಹಿಟ್ಟು ಹುಳಿಗಳ ಪ್ರಸಾದ!
ಹೊಟ್ಟೆ ತುಂಬಿದವರು
ಹುಟ್ಟುಹಾಕಿದ ಸಭ್ಯತೆ ಸಂಸ್ಕೃತಿಗಳು
ಹಸಿದವರಿಗೆ ಹಿಡಿಸಬಲ್ಲುವೇನಯ್ಯ?
ಹಸಿದ ಹೊಟ್ಟೆಯಿಂದಲೇ
ಹೊಸ ಸಂಸ್ಕೃತಿ ಹುಟ್ಟಲ್ಲಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೦

ಭಾರತದ ಮಣ್ಣಿನಿಂದ ಹುಟ್ಟಿದ ಯಾರೂ
ಭಾರತಕ್ಕಿಂತ ದೊಡ್ಡವರಲ್ಲವಯ್ಯ;
ಕರ್ನಾಟಕದ ಮಣ್ಣಿನಿಂದ ಹುಟ್ಟಿದ ಯಾರೂ
ಕರ್ನಾಟಕಕ್ಕಿಂತ ದೊಡ್ಡವರಲ್ಲವಯ್ಯ;
ಹುಟ್ಟಿದವರು ಹುಟ್ಟಿಸಿದ ದೇಶ ನಾಡುಗಳಿಗಾಗಿ
ಬದುಕ ಬೇಕಾಗಲಿ
ದೇಶ ನಾಡುಗಳು ಅವರಿಗಾಗಿ
ದೇಶ ಬೇಕಿಲ್ಲವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೧

ಅಂದು ಅಹಲ್ಯೆಯೊಬ್ಬಳೇ ಕಲ್ಲಾಗಿದ್ದಳು.
ಇಂದು ಬಹುತೇಕ ಭಾರತೀಯರ
ಎದೆಗಳು ಕಲ್ಲಾಗಿವೆ,
ಮನಗಳು ಕಲ್ಲಾಗಿವೆ,
ಕರುಳುಗಳು ಕಲ್ಲಾಗಿವೆ!
ಕಗ್ಗೊಲೆಗಳು ಕರಗಿಸವು ಇವುಗಳನ್ನು;
ಕ್ಷಾಮಡಾಮರ ಪೀಡಿತರು ಕರಗಿಸರು ಇವುಗಳನ್ನು;
ಕಂಬನಿಯ ಧಾರೆಗಳು ಕರಗಿಸವು ಇವುಗಳನ್ನು,
ಕಲ್ಲೆದೆಯರಾಗುವುದಕ್ಕಿಂತ ಅಹಲ್ಯೆಯಂತೆ
ಕಲ್ಲಾಗುವುದೇ ಲೇಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೨

ನೂಲುವವರಿಗೇ, ನೆಯ್ಯುವವರಿಗೇ
ಮೈತುಂಬ ಬಟ್ಟೆಯಿಲ್ಲ;
ಉಳುವವರಿಗೇ, ಒಕ್ಕುವವರಿಗೇ
ಹೊಟ್ಟೆ ತುಂಬ ಹಿಟ್ಟಿಲ್ಲ;
ಮನೆ ಕಟ್ಟುವವರಿಗೆ ಮನೆಯಿಲ್ಲ,
ಉಣ್ಣೆ ಉತ್ಪಾದಿಸುವವನಿಗೆ ಕಂಬಳಿಯಿಲ್ಲ,
ದುಡಿದಿಡುವವರಿಗೆ ಕುಂಬಳಿಯಿಲ್ಲ;

ಅಂತೂ ಇಂತೂ ಬಡವರಿಗೆ
ಬಡತನದಿಂದ ಬಿಡುಗಡೆಯಿಲ್ಲ;
ಈ ದುಷ್ಟ ವ್ಯವಸ್ಥೆಯನ್ನು
ಎಂದು ಕುಟ್ಟಿ ಪುಡಿ ಮಾಡಿ
ಇಷ್ಟ ವ್ಯವಸ್ಥೆಯ ರೂಪಿಸುವಿ ಸ್ವತಂತ್ರಧೀರ ಸಿದ್ಧೇಶ್ವರಾ!

## ೪೧೩

ಪಾಚಕ ಮಿಶ್ರಣವನ್ನು ಕುಡಿದೇ ಲೂಟ,
ಮಾದಕ ಪೇಯವನ್ನು ಕುಡಿದೇ ಓಡಾಟ,
ನಿದ್ದೆ ಗುಳಿಗೆಗಳನ್ನು ನುಂಗಿಯೇ ನಿದ್ದೆ,
ಉತ್ತೇಜಕಗಳನ್ನು ಕಬಳಿಸಿಯೇ ಕೂಟ;
ಇದು ಬದುಕಲ್ಲ, ಬಂಡಾಟ,
ಉಸಿರಿನ ಪರದಾಟ, ಬರಿ ಕಾಟ,
ಇದಕ್ಕೆಲ್ಲ ಸ್ವತಂತ್ರಧೀರ ಸಿದ್ಧೇಶ್ವರನ
ಮೆಚ್ಚಿಸುವ ಪರದಾಟ!

## ೪೧೪

ನಗರಗಳಲ್ಲಿ
ಗೋಡೆಗಳ ಪಾಡು ಯಾತಕ್ಕೂ ಬೇಡ–
ಏನೇನು ಬರೆಸಿಕೊಳ್ಳಬೇಕು,
ಏನೇನು ಅಂಟಿಸಿಕೊಳ್ಳಬೇಕು,
ನಗರಗಳಲ್ಲಿ
ರಸ್ತೆಗಳ ಪಾಡು ಯಾತಕ್ಕೂ ಬೇಡ
ಎಷ್ಟು ಸಲ ಅಗೆಸಿಕೊಳ್ಳಬೇಕು,
ಯಾರಾರಿಂದ ಉಗಿಸಿಕೊಳ್ಳಬೇಕು,
ನಗರಗಳಲ್ಲಿ
ಮಧ್ಯಮ ವರ್ಗದವರ ಪಾಡು ಯಾತಕ್ಕೂ ಬೇಡ
ಬಡವರಿಂದ ಛೇಡಿಸಿಕೊಳ್ಳಬೇಕು,
ಒಡೆಯರಿಂದ ಮೂದಲಿಸಿಕೊಳ್ಳಬೇಕು!
ಸ್ವತಂತ್ರಧೀರ ಸಿದ್ಧೇಶ್ವರಾ,
ನಗರಗಳಲ್ಲಿ
ನಿನ್ನ ಪಾಡು ಯಾತಕ್ಕೂ ಬೇಡ

ಕಳವಿನ ಹೂಗಳಿಂದ ಪೂಜಿಸಿಕೊಳ್ಳಬೇಕು
ಕಪ್ಪು ಹಣದಿಂದ ಆರೋಗಿಸಿಕೊಳ್ಳಬೇಕು!

### ೪೧೫

ರಾಮನಂತೆ ಚಂದ್ರನನ್ನು ಬೇಡಿ ಕಾಡಲೇಕೆ
ನಿಜ ಚಂದ್ರನನ್ನೇ ನೋಡಿ ನಂದಿಸು ಮಗು!
ಸೀತೆಯಂತೆ ಮಾಯ ಮೃಗವನ್ನು ಬೇಡಿ ಕಾಡಲೇಕೆ
ನಿಜ ಮೃಗವನ್ನೇ ಸಾಕಿ ಸಂತೋಷಿಸು ಸತಿ;
ರಾವಣನಂತೆ ಪರವಧುವಿಗಾಗಿ ವಧೆಗೊಳ್ಳಲೇಕೆ,
ಸ್ವವಧುವಿನಲ್ಲಿಯೇ ಸರ್ವಸ್ವ ಕಾಣು, ಪತಿ!
ಮಾರೀಚನಂತೆ ನೀಚ ಕಾರ್ಯಕ್ಕೆ ಬಲಿಯಾಗಲೇಕೆ.
ಸತ್ಕರ್ಮದಲ್ಲಿಯೇ ಸಂತುಷ್ಟಿ ಪಡೆ, ಮಾನವ!
ಸ್ವತಂತ್ರಧೀರ ಸಿದ್ಧೇಶ್ವರನ ಸಂದೇಶವಿದು;
ಸರ್ವಲೋಕ ಸರ್ವರಿಗೂ ಸೇರಿದುದು,
ಸರ್ವರೂ ಸತ್ಕರ್ಮ ಮಾಡಿ ಸುಖಿಸಲಿಲ್ಲ!

### ೪೧೬

ಸ್ವತಂತ್ರಧೀರ ಸಿದ್ಧೇಶ್ವರಾ,
ಇತ್ತಿತ್ತಲಾಗಿ ಕತ್ತಲೆಯತ್ತ ಹೊರಟಿದೆ
ಕತ್ತಲೆಯಲ್ಲಿ ಸ್ವತಂತ್ರವಾದ ಅತಂತ್ರ ಭಾರತ!
ದೇಶದ ತುಂಬೆಲ್ಲ ದುಸ್ಸಹ ದೃಶ್ಯಗಳು,
ಕರಾಳ ಕೃತ್ಯಗಳು, ಪಾಶವೀ ವೃತ್ತಿಗಳು;
ಏನೇ ಬರಲಿ, ದೇಶ ಸ್ವತಂತ್ರವಿರಲಿ;
ಮತ್ತೆ ಛಪ್ಪನ್ನಾರು ಭಾಗವಾಗದಿರಲಿ;
ಮತ್ತೆ ಗುಲಾಮರ ದೇಶವಾಗದಿರಲಿ;
ದೇಶದಲ್ಲಿಯೇ
ದೇಶವನ್ನುಳಿಸಿ ಬೆಳೆಸುವ
ಪುಣ್ಯ ಚೇತನಗಳ ಪ್ರಾದುರ್ಭಾವವಾಗುತ್ತಿರಲಿ!

### ೪೧೭

ದುಡಿಸಿಕೊಂಡವರಲ್ಲಿ ಕೈಕೊಟ್ಟವರೆಷ್ಟೋ,
ಕೆಳೆ ನಟಿಸಿದವರಲ್ಲಿ ಕೈಕೊಟ್ಟವರೆಷ್ಟೋ,
ಬೆನ್ನಿಗೆ ಬಿದ್ದವರಲ್ಲಿ ಕೈಕೊಟ್ಟವರೆಷ್ಟೋ

ನಾನು ಕೈಕೊಟ್ಟರೂ ಕೈಬಿಡದ
ಕೃಪಾ ಸಿಂಧು ನೀನೊಬ್ಬನೇ ಅಯ್ಯ,
ಸ್ವತಂತ್ರಧೀರ ಸಿದ್ಧೇಶ್ವರಾ!

೪೧೮

ತಂದೆ ತಾಯಿಗಳನ್ನೇ ಗೌರವಿಸದವನು
ಇನ್ನಾರನ್ನು ಗೌರವಿಸಬಲ್ಲನಯ್ಯ?
ಮಡದಿ ಮಕ್ಕಳನ್ನೇ ಪ್ರೀತಿಸದವನು
ಇನ್ನಾರನ್ನು ಪ್ರೀತಿಸಬಲ್ಲನಯ್ಯ?
ನೆರೆ ಹೊರೆಯವರಿಗೆ ನೆರವಾಗದವನು
ಇನ್ನಾರಿಗೆ ನೆರವಾಗಬಲ್ಲನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ .
ತನ್ನ ನಾಡಿನಲ್ಲಿಯೇ ನೆಮ್ಮದಿ ಕಾಣದವನು
ಇನ್ನಾವ ನಾಡಿನಲ್ಲಿ ಕಾಣಬಲ್ಲನಯ್ಯ?

೪೧೯

ಬದುಕು ಬಹಳ ಸಪ್ಪೆಯೀಗ;
ಕೋಳಿ ಕೆದರಿ ಹೋದ ತಿಪ್ಪೆಯೀಗ;
ಆನೆ ತಿಂದು ಬಿಸುಡಿದ ಸಿಪ್ಪೆಯೀಗ;
ನಗರ ಸಭೆಗಳ ಕೊಡುಗೆ-ಕಸದ ಕುಪ್ಪೆಯೀಗ;
ರಸ ಚೀಪಿ ಒಗೆದ ಹಣ್ಣಿನ ಹಿಪ್ಪೆಯೀಗ;
ಆದರೂ ಸೋಲನೊಪ್ಪೆಯೀಗ
ಸ್ವತಂತ್ರಧೀರ ಸಿದ್ಧೇಶ್ವರ!

೪೨೦

ಇಂದು ಪತ್ರಿಕೆ ಬರಲಿಲ್ಲ;
ಸಾವುಗಳ ಸುದ್ದಿಗಳನ್ನೋದದೆ
ಜೀವಕ್ಕೆ ಬೇಸರವಾಯಿತು-
ಸ್ವತಂತ್ರಧೀರ ಸಿದ್ಧೇಶ್ವರ!

೪೨೧

ತಾವು ಕತ್ತರಿಸಿಕೊಂಡು
ನಮಗೆ ಚೆಂದ ಕಾಣುವ

ಬೇಲಿ ವೇಲೆಗಳಿಗೆ ನಮೋ!
ತಾವು ನಷ್ಟವಾಗಿ
ನಮಗೆ ಪಿಷ್ಟಪುಷ್ಟಿ ಒದಗಿಸುವ
ಬೀಜಗೊಬ್ಬರಗಳಿಗೆ ನಮೋ!
ತಾವು ಸುಟ್ಟುಕೊಂಡು
ನಮಗೆ ಬೆಳಕನ್ನೀವ
ಎಣ್ಣೆಬತ್ತಿಗಳಿಗೆ ನಮೋ!
ಸ್ವತಂತ್ರಧೀರ ಸಿದ್ಧೇಶ್ವರಾ,
ತಾವು ಬೇಡಿಯನ್ನು ಧರಿಸಿ
ನಮ್ಮನ್ನು ಬಿಡುಗಡೆಯಲ್ಲಿರಿಸುವ
ಸ್ವಾತಂತ್ರ್ಯವೀರರಿಗೆ ನಮೋ!

## ೪೨೨

ಮರ್ಕಟಗಳು ವೃಕ್ಷಗಳ ಬದಲಿಸುವಂತೆ
ರಾಜಕಾರಣಿಗಳು ಪಕ್ಷಗಳ ಬದಲಿಸುತ್ತಿಹರಯ್ಯ;
ವೇಶ್ಯೆಯರು ವಿಟರನ್ನು ಬದಲಿಸುವಂತೆ
ಶಾಸಕರು ಮತಕ್ಷೇತ್ರಗಳನ್ನು ಬದಲಿಸುತ್ತಿಹರಯ್ಯ;
ವೇಷಗಾರರು ವೇಷಗಳನ್ನು ಬದಲಿಸುವಂತೆ
ಮೋಸಗಾರರು ಭಾಷೆಗಳನ್ನು ಬದಲಿಸುತ್ತಿಹರಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ತಮ್ಮ ಕುಸ್ವಭಾವ ಬದಲಿಸುವುದನ್ನು
ಇವರಿಗೆ ಕಲಿಸಯ್ಯ!

## ೪೨೩

'ಸಹಕಾರ ಸೋತಿದೆ ಆದರೆ ಸಹಕಾರ ಗೆಲ್ಲಲಿ'
ಎಂಬ ಘೋಷಣೆಯೊಂದಿದೆ
ಅಂತೆಯೇ, 'ಶಿಕ್ಷಣ ಸೋತಿದೆ, ಶಿಕ್ಷಣ ಗೆಲ್ಲಲಿ'
'ಪ್ರಜಾಸತ್ತೆ ಸೋತಿದೆ, ಪ್ರಜಾಸತ್ತೆ ಗೆಲ್ಲಲಿ,'
'ಸತ್ಯ ಸೋತಿದೆ, ಸತ್ಯ ಗೆಲ್ಲಲಿ,'
ಎಂಬೆನಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ!

## ೪೨೪

ಹೋಮಕುಂಡದ ಅಗ್ನಿಗಿಂತ
ಒಲೆಯ ಬೆಂಕಿ ಕೀಳೆ?
ಮಹಾಕ್ಷೇತ್ರಗಳ ತೀರ್ಥಕ್ಕಿಂತ
ಕುಡಿವ ನೀರು ಕೀಳೆ?
ತಾಜಮಹಲಿನ ಅಮೃತಶಿಲೆಗಿಂತ
ಗರತಿಯು ಒಗೆವ ಕಲ್ಲು ಕೀಳೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಾರ್ವಭೌಮರ ಶ್ವೇತ ಛತ್ರಕ್ಕಿಂತ
ಬಡವನ ಮುರುಕು ಕೊಡೆ ಕೀಳೆ?

## ೪೨೫

ಪಶು ಪಕ್ಷಿ ಕ್ರಿಮಿ ಕೀಟಗಳು
ಬಂಗ್ಲಾಬರವನ್ನು ಕಂಡಿಲ್ಲ,
ಮಹಾಯುದ್ಧಗಳ ಮಾಡಿಲ್ಲ,
ಮುಷ್ಕರಗಳ ಹೂಡಿಲ್ಲ,
ಮಾರಣ ಮಂತ್ರಗಳ ಹಾಡಿಲ್ಲ,
ಪಾಕಿಸ್ತಾನ ಖಾಲಿಸ್ತಾನ ಬೇಡಿಲ್ಲ!
ಇವೆಲ್ಲ ನಿನ್ನ ಹೆಮ್ಮೆಯ ಸೃಷ್ಟಿ
ಮಾನವ ಸಮಾಜದ ವೈಶಿಷ್ಟ್ಯಗಳಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೨೬

ಕಿತ್ತುತಿನ್ನುವ ಮನುಷ್ಯರಿಗಿಂತ
ಕೊಂದು ತಿನ್ನುವ ಮೃಗಗಳೇ ಮೇಲಯ್ಯ;
ಕೃತಘ್ನ ಮಾನವರಿಗಿಂತ
ಕೃತಜ್ಞನಾಯಿಗಳೇ ಮೇಲಯ್ಯ;
ತುಡುಗುಣಿಗಳಾದ ನರರಿಗಿಂತ
ತುಡುಗು ದನಗಳೇ ಮೇಲಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೃತಿಶೂನ್ಯರಾದ ಕಲಿತವರಿಗಿಂತ
ಕೃತಿವೀರ ನಿರಕ್ಷರಿಗಳೇ ಮೇಲಯ್ಯ!

## ೪೨೭

ಜೀವನದ ನಿರರ್ಥಕತೆಯನ್ನು ಒಪ್ಪಿಯೂ
ಜೀವನೋಜ್ವಲೀಕರಣ ಸಾಧಕರ ತೋರಾ!
ಕೆಡುಕಿನ ಅನಿವಾರ್ಯತೆಯನ್ನು ಒಪ್ಪಿಯೂ
ಒಳಿತಿನ ವಿಜಯಕ್ಕಾಗಿ ಹೋರುವವರ ತೋರಾ!
ಸ್ತ್ರೀ ಪುರುಷರ ಜೈವಿಕ ವ್ಯತ್ಯಾಸಗಳನೊಪ್ಪಿಯೂ
ಉಭಯಸಮಾನತೆಯನ್ನು ಆದರಿಸುವವರ ತೋರಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ದೇಶ ಮತ ಪಂಥಗಳ ಬಹುತ್ವವನ್ನೊಪ್ಪಿಯೂ
ಸರ್ವಮಾನವ ಸೋದರತೆಯನ್ನು ಆಚರಿಸುವವರ ತೋರಾ!

## ೪೨೮

ಯಾರೇ ಕೇಳಲಿ ಬಿಡಲಿ,
ಹಾಡುತ್ತವೆ ಹಕ್ಕಿಗಳು;
ಯಾರೇ ನೋಡಲಿ ಬಿಡಲಿ,
ಹೊಳೆಯುತ್ತವೆ ಚಿಕ್ಕೆಗಳು;
ಯಾರೇ ಆಘ್ರಾಣಿಸಲಿ ಬಿಡಲಿ
ಅರಳುತ್ತವೆ ಮೊಗ್ಗುಗಳು;
ಯಾರೇ ಕುಡಿಯಲಿ ಬಿಡಲಿ,
ಪುಟಿಯುತ್ತವೆ ಬುಗ್ಗೆಗಳು;
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರೇ ಮೆಚ್ಚಲಿ ಬಿಡಲಿ
ನನ್ನಿಯನ್ನೇ ನುಡಿಯುತ್ತಾನೆ,
ನನ್ನಿಯಂತೆ ನಡೆಯುತ್ತಾನೆ ನಿನ್ನ ಶರಣ!

## ೪೨೯

ನುಡಿಯ ಗುಡಿಯಲ್ಲಿ ಅರ್ಥ ಮೂರ್ತಿ,
ವ್ಯಾಕರಣಾದಿಗಳು ಪೂಜಾ ಪರಿಕರಗಳು,
ಸೊಳ್ನುಡಿಗಳೇ ಸುಪ್ರಸಾದ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೩೦

ಗಂಡ ತೊಡುವುದು ಖಾದಿಬಟ್ಟೆ,
ಹೆಂಡತಿ ಉಡುವುದು ಜರೀಸೀರೆ ನೋಡಾ!
ತಂದೆಗೆ ಈರುಳ್ಳಿ ಬೆಳ್ಳುಳ್ಳಿಯೂ ತ್ಯಾಜ್ಯ,
ಮಗನಿಗೆ ಕುರಿಕೋಳಿಗಳೇ ಭೋಜ್ಯ!
ಅತ್ತೆಗೆ ನಿತ್ಯ ದೇವತಾದರ್ಶನ,
ಸೊಸೆಗೆ ದಿನದಿನವೂ ಕ್ಯಾಬರೆ ವೀಕ್ಷಣ!
ಗುರುವಿನಿಂದ ಗೀತಾ ಪ್ರವಚನ,
ಶಿಷ್ಯನಿಂದ ಬ್ರ್ಯಾಂಡೀ ಪಾನ!
ಸ್ವತಂತ್ರಧೀರ ಸಿದ್ಧೇಶ್ವರನಿಂದ ಸೃಷ್ಟಿ ವಿಕಸನ,
ಅವನ ಮಕ್ಕಳಿಂದ ಧ್ವಸ್ತ ಪರ್ಯಾವರಣ!

## ೪೩೧

ಇತಿಹಾಸ ಓದುವುದು ಇತಿಹಾಸ ನಿರ್ಮಿಸಲೆಂದು,
ಇಸ್ವಿಗಳ ನೆನಪಿಡಲು ಅಲ್ಲ;
ವಿಜ್ಞಾನ ಕಲಿಯುವುದು ಜೀವಿಗಳ ವಿಕಾಸಕ್ಕಾಗಿ,
ಸರ್ವರ ವಿನಾಶಕ್ಕಾಗಿ ಅಲ್ಲ;
ಶಾಸನಗಳಿರುವುದು ದುರ್ಬಲರ ರಕ್ಷಣೆಗಾಗಿ,
ಸಬಲರ ಸೇವೆ ಮಾಡಲಲ್ಲ;
ಎಲ್ಲವೂ ಜೀವನಕ್ಕಾಗಿ
ಮಾನವತೆಯ ಮಾರಣಕ್ಕಾಗಿ ಅಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ.
ನೀನಿರುವುದು ಸಭ್ಯರ ರಕ್ಷಣೆಗಾಗಿ,
ನಿರಪರಾಧಿಗಳ ಶಿಕ್ಷೆಗಾಗಿ ಅಲ್ಲ!

## ೪೩೨

ಎನಿತೊಂದು ಆಸ್ಪತ್ರೆಗಳು ಇಲ್ಲಿ?
ಆದರೆ ನನ್ನ ಆಧಿಗೆ, ಮನೋವ್ಯಾಧಿಗೆ
ಮದ್ದನೀವ ವೈದ್ಯನಿರುವ ಆಸ್ಪತ್ರೆಯ ತೋರಾ!
ತಾವೇ ಧನಜ್ವರಕ್ಕೆ ಈಡಾದ ವೈದ್ಯರು
ಮನೋ ವ್ಯಾಕುಲ ಪೀಡಿತ ಮನಶ್ಶಾಸ್ತ್ರಜ್ಞರು
ನನಗಾವ ಮದ್ದನೀವರಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೩೩

ಆಫ್ರಿಕಾದಲ್ಲಿ ಹುಟ್ಟಿದನೋ,
ಇನ್ನೆಲ್ಲಿ ಹುಟ್ಟಿದನೋ,
ಅಂತೂ ಹುಟ್ಟಿದ ಮೊದಲ ಮಾನವ;
ಹಬ್ಬಿಸಿದ ತನ್ನ ಸಂತಾನವ;
ಗಳಿಸಿದ ಭುವಿಬಾನುಗಳಲ್ಲಿ ತನ್ನ ಸ್ಥಾನವ;
ಬೆಳೆಸಿದ ಜ್ಞಾನ ವಿಜ್ಞಾನವ;
ಅನುಭವಿಸಿದ ಪತನೋತ್ಥಾನವ.
ಹಾಡಿಸದಿರಯ್ಯ ಅವನಿಂದಲೇ
ಅವನ ಹಂಸಗಾನವ
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೩೪

ನಿನ್ನೊಳಗೆ ಆರು ಅರಿಗಳನ್ನಿರಿಸಿದವನೇ
ಅವನು ಜಯಿಸುವ ಅಸ್ತ್ರಗಳನ್ನು ಇರಿಸಿದ್ದಾನೆ, ಗೆಳೆಯ!
ಪ್ರೇಮದಿಂದ ಕಾಮವನ್ನು,
ಶಾಂತಿಯಿಂದ ಕ್ರೋಧವನ್ನು,
ನಿಸ್ಪೃಹತೆಯಿಂದ ಲೋಭವನ್ನು,
ನಿರ್ಮೋಹದಿಂದ ಮೋಹವನ್ನು,
ಸದುವಿನಯದಿಂದ ಮದವನ್ನು
ಅಮತ್ಸರತೆಯಿಂದ ಮತ್ಸರವನ್ನು
ಜಯಿಸುವ ದಾರಿ ತೋರಿದ್ದಾನೆ, ಗೆಳೆಯ!
ನೀನು ಜಯಿಸದಾದರೆ
ಸ್ವತಂತ್ರಧೀರ ಸಿದ್ಧೇಶ್ವರನ ತಪ್ಪೆ ಗೆಳೆಯ!

## ೪೩೫

ಅರಗದ ಅನ್ನ ಕೊಬ್ಬು;
ಅರಗದ ತಿಳಿವು ಮಬ್ಬು;
ಅರಗದ ಸೊಮ್ಮು ಹಮ್ಮು;
ಅರಗದ ಅಧಿಕಾರ ಬಿಮ್ಮು;
ಇವೆಲ್ಲವ ಅರಗಿಸಿಕೊಳ್ಳುವ
ಶಕ್ತಿನೀಡಾ–ಸ್ವತಂತ್ರಧೀರ ಸಿದ್ಧೇಶ್ವರಾ!

೪೩೬

ಕಾದ ನೆಲ ಮಳೆಯ ಹನಿಗಳನ್ನು ಹೀರುವಂತೆ,
ಹಸಿದ ದುಂಬಿ ಕುಸುಮ ರಸವನ್ನು ಹೀರುವಂತೆ,
ಮಲಗಿ ಎದ್ದ ಮಗು ತಾಯ ಹಾಲನ್ನು ಹೀರುವಂತೆ
ನಾನೂ ಹೀರುವೆ ಬದುಕಿನ ಸಾರವನ್ನು
ಸ್ವತಂತ್ರಧೀರ ಸಿದ್ಧೇಶ್ವರಾ!

೪೩೭

ಓದಿದುದೆಲ್ಲ ಉಪಯೋಗವಾಗಲಿಲ್ಲೆಂದು
ಓದುವುದನ್ನೇ ಬಿಡಲೆ?
ಮಾಡಿದುದೆಲ್ಲ ಸಫಲವಾಗಲಿಲ್ಲೆಂದು
ಮಾಡುವುದನ್ನೇ ಬಿಡಲೆ?
ಆಡಿದುದೆಲ್ಲ ಅರ್ಥಪೂರ್ಣವಲ್ಲವೆಂದು
ಆಡುವುದನ್ನೇ ಬಿಡಲೆ?
ಬರೆದುದೆಲ್ಲ ಸಾಹಿತ್ಯವಾಗಲಿಲ್ಲೆಂದು
ಬರೆವುದನ್ನೇ ಬಿಡಲೆ?
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಲಿಲ್ಲೆಂದು
ಸ್ವತಂತ್ರಧೀರ ಸಿದ್ಧೇಶ್ವರನನ್ನೇ ಬಿಡಲೆ?

೪೩೮

ಮಕ್ಕಳಿವೆ, ಹಕ್ಕಿಗಳಿವೆ, ಚಿಕ್ಕೆಗಳಿವೆ,
ದುಕ್ಕ ಮರೆಯಲು ಸಾಲವೆ ಇವು?
ಹಣ್ಣು ಹಾಲುಗಳಿವೆ, ಕಂದ ಮೂಲಗಳಿವೆ,
ನವ ಧಾನ್ಯಗಳಿವೆ,
ಹಸಿವೆ ಹಿಂಗಿಸಲು ಸಾಲವೆ ಇವು?
ಸ್ವತಂತ್ರಧೀರ ಸಿದ್ಧೇಶ್ವರನಿದ್ದಾನೆ.
ಅವನ ಭಕ್ತರಿದ್ದಾರೆ, ಜೀವನ್ಮುಕ್ತರಿದ್ದಾರೆ
ಅನಾಥ ಪ್ರಜ್ಞೆಯಳಿಸಲು ಸಾಲವೆ ಇವು?

೪೩೯

ಸಭ್ಯ ಸಮಾಜದ ಕಥಿತ ಸಾಧ್ವಿಯರಿಗಿಂತ
ಶುದ್ಧಜೀವಿ ಸಿಕ್ಕಬಹುದು ಸೂಳೆಯರಲ್ಲಿ;

ಶಿಷ್ಟಸಮಾಜದ ಸುಳ್ಳು ಸತ್ಯವಂತರಿಗಿಂತ
ನಿಜ ಹರಿಶ್ಚಂದ್ರರು ಸಿಕ್ಕಬಹುದು ಅಂತ್ಯಜರಲ್ಲಿ;
ಅಪ್ಪಟ ಶಾಕಾಹಾರಿಗಳಿಗಿಂತ
ಜೀವದಯಾಪಾರಿಗಳು ಸಿಕ್ಕಬಹುದು ಮಾಂಸಾಹಾರಿಗಳಲ್ಲಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ಮಠಮಂದಿರಗಳಲ್ಲಿ ಸಿಕ್ಕದ ನಿಜಭಕ್ತರು
ಸಿಕ್ಕಬಹುದು ಗೇಣಗಲದ ಗುಡಿಸಲುಗಳಲ್ಲಿ!

**೪೪೦**

ಜಾತ್ರೆಯಲ್ಲಿ ಸೇರಿದವರೆಲ್ಲ ಮಿತ್ರರಾಗುವರೆ, ಅಯ್ಯ?
ಕ್ಷೇತ್ರಗಳಲ್ಲಿ ಸಂಧಿಸಿದವರೆಲ್ಲ ಆಪ್ತರಾಗುವರೆ, ಅಯ್ಯ?
ಸ್ವಮತಕ್ಕೆ ಸೇರಿದವರೆಲ್ಲ ಸೋದರರಾಗುವರೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬುದ್ಧಿಜೀವಿಗಳೆಲ್ಲ ಶುದ್ಧಜೀವಿರಾಗುವರೆ, ಅಯ್ಯ?

**೪೪೧**

ನನ್ನ ಅನುಭವ ಹಳ್ಳಿಯದು,
ಅಭಿವ್ಯಕ್ತಿ ನಗರದ್ದು;
ಹೃದಯ ಹಳ್ಳಿಯದು,
ಬುದ್ಧಿ ನಗರದ್ದು;
ಅನ್ನ ಹಳ್ಳಿಯದು,
ವಸ್ತ್ರ ನಗರದ್ದು;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮನಸ್ಸು ಹಳ್ಳಿಯಲ್ಲಿ,
ಶರೀರ ನಗರದಲ್ಲಿ ನೋಡಾ!

**೪೪೨**

ಜಟ್ಟಿಯ ಮೈ ನೋಡಬೇಕು,
ಸೆಟ್ಟಿಯ ಕೈ ನೋಡಬೇಕು,
ಭಟ್ಟರ ಹೊಟ್ಟೆ ನೋಡಬೇಕು,
ರೈತರ ರಟ್ಟೆ ನೋಡಬೇಕು,
ಧನಿಕರ ಬಟ್ಟೆ ನೋಡಬೇಕು,
ಸ್ವತಂತ್ರಧೀರ ಸಿದ್ಧೇಶ್ವರನ ಶರಣರ
ಕಾಯಕನಿಷ್ಠೆ ನೋಡಬೇಕು!

೪೪೩

ತೊರೆಗೆ ತರಂಗಮಾಲೆ,
ಗಿರಿಗೆ ಮೇಘಮಾಲೆ,
ದರಿಗೆ ವೃಕ್ಷಮಾಲೆ,
ಮುಗಿಲಿಗೆ ನಕ್ಷತ್ರ ಮಾಲೆ,
ದಿಗಂತಕ್ಕೆ ಸುವರ್ಣರಶ್ಮಿ ಮಾಲೆ,
ನನಗೆ ದೊರೆಯಲಿ
ಸ್ವತಂತ್ರಧೀರ ಸಿದ್ಧೇಶ್ವರ ಕರುಣೆಯ ಕಿರಣಮಾಲೆ!

೪೪೪

ಮುಂದಿನ ಸಾಲಿನವರೇ
ಲಕ್ಷ್ಯಪೂರ್ವಕ ಲಾಲಿಸುವರೆಂದೇನಿಲ್ಲ–
ಕೊನೆಯ ಸಾಲಿನಲ್ಲಿಯೂ ಕಾಳಜಿಯಿಂದ ಕೇಳುವರಿರಬಹುದು;
ಮೇಲಧಿಕಾರಿಗಳೇ
ಮೇಧಾವಿತನದ ಗುತ್ತಿಗೆದಾರರೇನಲ್ಲ–
ಕೆಳಗಿನವರೂ
ಸ್ವೋಪಜ್ಞತೆಯಲ್ಲಿ ಸಿರಿವಂತರಾಗಿರಬಹುದು;
‘ಬ್ರಹ್ಮೋತ್ಸವ’ ಮಾಡಿಸುವವರೇ
ಭಕ್ತ ಶಿರೋಮಣಿಗಳೇನಲ್ಲ–
‘ಧರ್ಮದರ್ಶನ’ದವರೇ
ನಿಜಭಕ್ತರಾಗಿರಬಹುದು;
ಸ್ವತಂತ್ರಧೀರ ಸಿದ್ಧೇಶ್ವರಾ
ಅಡ್ಡಪಲ್ಲಕ್ಕಿಯಲ್ಲಿ ಮೆರೆದವರೇ
ದೊಡ್ಡ ಸ್ವಾಮಿಗಳೇನಲ್ಲ–
ಕಾಲುನಡಿಗೆಯವರಲ್ಲೂ
ಸಂತ ಮಹಾಂತರಿರಬಹುದು!

೪೪೫

ಬಡಿಸಿದ ತಟ್ಟೆ ಬಂಗಾರದ್ದಾದರೇನು,
ತಿನ್ನುವುದು ಅಕ್ಕಿಜೋಳದ ಅನ್ನವನ್ನೇ!
ಬಳಸುವ ಬಟ್ಟಲು ಬೆಳ್ಳಿಯದಾದರೇನು–
ಕುಡಿಯುವುದು ಸಿಹಿನೀರನ್ನೇ!

ಸ್ವತಂತ್ರಧೀರ ಸಿದ್ಧೇಶ್ವರಾ,
ಕರಡಿಗೆ ವಜ್ರದ್ದಾದರೇನು,
ಪೂಜಿಸುವುದು ಶಿಲೆಯ ಲಿಂಗವನ್ನೇ!

**೪೪೬**

ನಾನು ಎಂದಾದರೊಂದು ಸುಳ್ಳು ಹೇಳಿದರೆ
ಎಷ್ಟು ರಂಪ ಮಾಡುತ್ತಿರುವಿ, ತಂದೆ!
ಇದು ಮಂತ್ರಿಗಳ ಸುಳ್ಳಿಗಿಂತ ದೊಡ್ಡ ಸುಳ್ಳೆ?
ಕಪಟ ಸಂನ್ಯಾಸಿಗಳ ಸುಳ್ಳಿಗಿಂತ ದೊಡ್ಡ ಸುಳ್ಳೆ?
ಪೀತ ಪತ್ರಿಕೆಗಳ ಸುಳ್ಳಿಗಿಂತ ದೊಡ್ಡ ಸುಳ್ಳೆ?
ಸರಕಾರೀ ಸಮೂಹ ಮಾಧ್ಯಮಗಳ ಸುಳ್ಳಿಗಿಂತ ದೊಡ್ಡ ಸುಳ್ಳೆ?
ಎಲ್ಲಿಗೆ ಹೋದರೂ
ಸುಳ್ಳಿನ ಕಾರವಾನಗಳೇ ಎದುರಾಗುತ್ತಿರುವಾಗ
ಒಂದೂ ಸುಳ್ಳು ಹೇಳದೆ ಹೇಗೆ ಬದುಕುವುದಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

**೪೪೭**

ಇಂದೇಕೋ
ಹೃದಯ ಕ್ಷೇತ್ರದ ಮೇಲೆ ಹಸಿ ಮಳೆ ಬಿದ್ದಿದೆ,
ಸದ್ಭಾವಗಳ ಬೀಜಗಳ ಬಿತ್ತೋ, ಅಲ್ಲಿ?
ಸದ್ಭಕ್ತಿಯ ಬೆಳೆಯು ಬಂದೀತು!
ಎಂಥ ಬೆಳೆಯೆಂದೆ?
ಬಂಗಾರದ ಬೆಳೆ
ಮಂಗಳದ ಬೆಳೆ
ಸ್ವತಂತ್ರಧೀರ ಸಿದ್ಧೇಶ್ವರನ
ಆರೋಗಣೆಗೆ
ದೇವಾನ್ನ ಒದಗಿಸಬಲ್ಲ ಬೆಳೆ!

**೪೪೮**

ಒಳಿತಿನತ್ತ ಎಳೆಯುವವ ಗೆಳೆಯ,
ಕೆಡುಕಿನತ್ತ ಸೆಳೆಯುವವ ಶತ್ರು;
ಕರುಳಿನ ಬಳ್ಳಿಗೆ ನೀರೆರೆಯುವವ ಬಂಧು,
ಕರುಳಲ್ಲಿ ಕತ್ತರಿ ಹಾಕುವವ ದಾಯಾದಿ;

ಪತಿಗೆ ಹಿತಗೈವವಳು ಪತ್ನಿ;
ಪತಿಯ ಪಥಗೆಡಿಸುವವಳು ಸೂಳೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಮಕ್ಕಳಿಗಾಗುವವನು ಭಕ್ತ,
ನಿನ್ನ ಹೆಸರಿನ ಹೊಲೆಬಳಕೆ ಮಾಡುವವ ಭವಿ!

೪೪೯

ನಾನೊಬ್ಬನಿಗೆ ಆಗುವುದು ಅಲ್ಲ ಉಪಕಾರ-
ವಾಸ್ತವದಿ ಅದು ಋಣಪರಿಹಾರ!
ಋಣತ್ರಯಗಳ ಪಟ್ಟಿಗೆ
ಸೇರಬೇಕು ಹೊಸ ಋಣಗಳು!
ಉಳುವವರ ಋಣ, ದುಡಿವವರ ಋಣ,
ಅಜ್ಞಾತ ದಾತರ ಋಣ,
ಅಪರೋಕ್ಷ ಸಹಾಯಕರ ಋಣ,
ಪಶುಪಕ್ಷಿಗಳ ಋಣ,
ಸಸ್ಯ ವೃಕ್ಷಗಳ ಋಣ-
ನಾನು ತೀರಿಸಲಾಗದ ಇವೆಲ್ಲ ಋಣಗಳು
ಉಳಿದಿರುವಾಗ
ನಾನು ಪರೋಪಕಾರಿಯೆಂದರೆ
ನಗರೆ ನಿನ್ನವರು-
ಸ್ವತಂತ್ರಧೀರ ಸಿದ್ಧೇಶ್ವರಾ?

೪೫೦

ನಲ್ಲಿಯ ನೀರು ಕುಡಿದು ಕುಡಿದು
ಒರತೆಯ ನೀರಿಗಾಗಿ ಹಂಬಲಿಸುತಿಹೆನಯ್ಯ;
ಡೇರಿ ಹಾಲು ಕುಡಿದು ಕುಡಿದು
ಹಳ್ಳಿಯ ಹಾಲಿಗಾಗಿ ಹಪಹಪಿಸುತ್ತಿಹೆನಯ್ಯ;
ದೂಷಿತ ವಾಯು ಉಸಿರಾಡಿಸಿ ಉಸಿರಾಡಿಸಿ
ಹೊಲದ ಹವೆಗಾಗಿ ಹಾತೊರೆಯುತ್ತಿಹೆನಯ್ಯ;
ನಕಲಿ ಸಂಬಂಧಗಳ ಅನುಭವಿಸಿ ಅನುಭವಿಸಿ
ಅಸಲಿ ಸಂಬಂಧಗಳ ಆಶಿಸುತ್ತಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಹಳ್ಳಿಗಳು ನನ್ನಂಥವರ ಬಾಳ ಬಳ್ಳಿಗಳಿಗೂ
ಮಾವಿನ ಮರವಾಗುವ ಕಾಲ ಬಂದೀತೇನಯ್ಯ?

## ೪೫೧

ಆರಿಸಿ ಕೆಟ್ಟರು, ಆದರಿಸಿ ಕೆಟ್ಟರು, ಮೆರೆಸಿ ಕೆಟ್ಟರು,
ನಂಬಿ ಕೆಟ್ಟರು, ಬೆಂಬಲಿಸಿ ಕೆಟ್ಟರು, ಹಿಂಬಾಲಿಸಿ ಕೆಟ್ಟರು,
ನೀತಿಶೂನ್ಯ, ಕೃತಿಶೂನ್ಯ, ಹೃದಯಶೂನ್ಯ ನಾಯಕರ
ತಲೆಗೇರಿಸಿಕೊಂಡು ಕೆಟ್ಟರು ಶ್ರೀಸಾಮಾನ್ಯರು!
ಇಷ್ಟು ಸಲ, ಇಷ್ಟೊಂದು ಕೆಟ್ಟೂ
ಮತ್ತೆ ಮತ್ತೆ ಅವರನ್ನೇ ಆರಿಸುವ
ಬಡ ಜನರ ಭೋಳೆತನಕ್ಕೆ ಬೆರಗಾದೆನಯ್ಯ!
ದುಷ್ಟರನ್ನು ಸೋಲಿಸಿ, ಶಿಷ್ಟರನ್ನು ಗೆಲ್ಲಿಸುವ
ಧಾರ್ಷ್ಟ್ಯವನ್ನೀಯಯ್ಯಾ ನಮ್ಮಾ ಮತದಾರರಿಗೆ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೫೨

ಹೊಟ್ಟೆ ಬಲು ಕೆಟ್ಟುದೆಂದು ಹೇಳುತ್ತಾರೆ–
"ಯಹ ಪೇಟ್ ಪುರಾನಾ ಪಾಪೀ ಹೈ–
ಇಸ್ ಪೇಟ್ ಸೇ ಹುಷಿಯಾರ್!"* ಎನ್ನುತ್ತಾರೆ;
ನಾನೆನ್ನೆನಯ್ಯ–
ನನ್ನನ್ನು ದುಡಿಯ ಹಚ್ಚಿದ,
ಕಲಿಯ ಹಚ್ಚಿದ, ಗಳಿಸ ಹಚ್ಚಿದ, ಬಳಸ ಹಚ್ಚಿದ
ಈ ಹೊಟ್ಟೆ ಪಾಪಿಯೆಂದು
ಯಾವ ಬಾಯಿಂದ ಅನ್ನಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೫೩

ಪಾತ್ರೆಗಳ ಗಾತ್ರ, ಆಕಾರ ಬೇರೆ ಬೇರೆ,
ಆದರೆ ಪ್ರತಿಯೊಂದು ಪಾತ್ರೆಗೂ
ಪಾತ್ರವೊಂದಿದೆಯಯ್ಯ!
ಒಡೆವ ಮೊದಲೇ
ಅಪಾತ್ರವಾಗುವ ಪಾತ್ರೆಗಳು ವಿರಳ.
ಈ ಧರಿತ್ರಿಯಲ್ಲಿ ಲಕ್ಷ ಪಾತ್ರಗಳಿದ್ದೂ

* ಈ ಹೊಟ್ಟೆ ಹಳೆಯ; ಈ ಹೊಟ್ಟೆಯಿಂದ ಹುಷಾರಾಗಿರು

ಬದುಕಿರುವಾಗಲೇ ಅಪಾತ್ರರಾಗುವವರಿಗೆ
ಏನೆನ್ನಬೇಕಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

**೪೫೪**

ಗಡಿಯಾರ ಕೆಟ್ಟಿದೆಯೆಂದು
ಕಾಲ ನಿಲ್ಲುವುದೇನಯ್ಯ?
ಮೋಡ ಮುಸುಕಿದೆಯೆಂದು
ರವಿ ಮೂಡದಿಹನೇನಯ್ಯ?
ಪ್ರಾಣಿಗಳು ಮಲಗಿಹವೆಂದು
ಉಸಿರಾಟ ನಿಲ್ಲುವುದೇನಯ್ಯ?
ಬರ ಬಿದ್ದಿದೆಯೆಂದು
ಹಸಿವಾಗದಿಹುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಾವು ಮರೆತೆವೆಂದು
ನೀವು ಇಲ್ಲವಾಗುವಿಯೇನಯ್ಯ?

**೪೫೫**

ಕದ ಗಟ್ಟಿಯಾಗಿದ್ದರೇನಯ್ಯ–
ಅಗಳಿ ಅದ್ರವಾಗಿದ್ದರೆ?
ಬೀಸುಕಲ್ಲು ಭದ್ರವಾಗಿದ್ದರೇನಯ್ಯ–
ಗೂಟ ಅಲುಗುತ್ತಿದ್ದರೆ?
ಬಂಡಿಯ ಗಾಲಿ ಬಲವಾಗಿದ್ದರೇನಯ್ಯ–
ಕೀಲು ಕಳೆದು ಹೋಗಿದ್ದರೆ?
ತನು ವಜ್ರ ಕಠೋರವಾಗಿದ್ದರೇನಯ್ಯ–
ಮನ ಶಿಥಿಲೀಕೃತವಾಗಿದ್ದರೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸರಕಾರ ಸಬಲವಾಗಿದ್ದರೇನಯ್ಯ–
ಜನರ ಬಗ್ಗೆ ದರಕಾರವಿಲ್ಲದಿದ್ದರೆ?

## ೪೫೬

ಬೆಳೆಯುತ್ತ ಬೆಳೆಯುತ್ತ
ಬಯಲಾಗಲೇ ಬೇಕೆ–
ಶೈಶವದ ಮುಗ್ಧ ಮಂದಹಾಸಗಳು?
ಬೆಳೆಯುತ್ತ ಬೆಳೆಯುತ್ತ
ಮರೆಯಾಗಲೇ ಬೇಕೆ–
ಬಾಲ್ಯದ ನೈರ್ಮಲ್ಯ ಉಲ್ಲಾಸಗಳು?
ಬೆಳೆಯುತ್ತ ಬೆಳೆಯುತ್ತ
ಮಸುಕಾಗಲೇ ಬೇಕೆ–
ತಾರುಣ್ಯದ ಪ್ರಣಯ ವಿಲಾಸಗಳು?
ಬೆಳೆಯುತ್ತ ಬೆಳೆಯುತ್ತ
ಮಾಯವಾಗಲೇ ಬೇಕೆ
ವಾರ್ಧಕ್ಯದ ಅಭಿಲಾಷೆಗಳು?
ಸ್ವತಂತ್ರಧೀರ ಸಿದ್ಧೇಶ್ವರಾ,
ಬೆಳೆಯುತ್ತ ಬೆಳೆಯುತ್ತ
ಹುಸಿಯಾಗಲೇ ಬೇಕೆ
ವೃದ್ಧಾಪ್ಯದ ಬದುಕುವಾಸೆಗಳು?

## ೪೫೭

ಒಂದು ಪ್ರಶ್ನೆಗೂ ನಿಖರ ಉತ್ತರ ದೊರೆಯಲಿಲ್ಲ;
ಒಂದರ ಸ್ವರೂಪವನ್ನೂ ಖಚಿತವಾಗಿ ಅರಿಯಲಿಲ್ಲ;
ಹೀಗೆಯೇ ಸಾಗಬೇಕೆ ನೀನಿತ್ತ ಬದುಕು?
ಬದುಕು ಚಿರಂತನ ಪ್ರಶ್ನೆಯೇ?
ನಿರಂತರ ಜಿಜ್ಞಾಸೆಯೆ?
ಇದಕ್ಕೆ ಅರ್ಥ ಹುಡುಕುವುದೇ
ವ್ಯರ್ಥವೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

## ೪೫೮

ಕುರುಡನಿಗೆ
ಕಾಣುವ ಕಣ್ಣುಗಳೇ ಅತ್ಯಮೂಲ್ಯವೆನಿಸುತ್ತವೆ;
ಕಿವುಡನಿಗೆ

ಕೇಳುವ ಕಿವಿಗಳೇ ಅತ್ಯಮೂಲ್ಯವೆನಿಸುತ್ತವೆ;
ಮೂಕನಿಗೆ
ಮಾತನಾಡುವ ಬಾಯಿಯೇ ಅತ್ಯಮೂಲ್ಯವೆನಿಸುತ್ತವೆ;
ಹೆಳವನಿಗೆ
ನಡೆವ ಕಾಲುಗಳೇ ಅತ್ಯಮೂಲ್ಯವೆನಿಸುತ್ತವೆ;
ಚೊಂಚನಿಗೆ
ಒಳ್ಳೆಯ ಕೈಗಳೇ ಅತ್ಯಮೂಲ್ಯವೆನಿಸುತ್ತವೆ;
ಇವೆಲ್ಲ ಇದ್ದವನಿಗೆ
ಇವು ನಿನ್ನ ಕೃಪೆಯ ಕುರುಹುಗಳಲ್ಲ,
ಪುಕ್ಕಟೆ ಮಾಲು ಎನಿಸುತ್ತವೆ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೪೫೯

ಬೊಜ್ಜು ಸುಖದ ಪ್ರತೀಕವಾದೀತು–
ಸ್ವಾಸ್ಥ್ಯದ ಸಂಕೇತವಲ್ಲ;
ರೊಜ್ಜು ಅಸ್ವಚ್ಛತೆಯ ಗುರುತಾದೀತು–
ಪಂಕಜದ ಜನನಸ್ಥಾನವಲ್ಲ;
ಗೊಜ್ಜು ರುಚಿಯ ಕುರುಹೆನಿಸೀತು
ಪೌಷ್ಟಿಕತೆಯ ಪ್ರಮಾಣವಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಜ್ಜು ಹೊರಗಿನ ಸಿದ್ಧತೆಯೆನಿಸೀತು–
ಒಳಗಿನ ಬದ್ಧತೆಯಲ್ಲ!

೪೬೦

ಮಲೆನಾಡಿನ ಹುಲ್ಲಿನ ಮೇಲೆಲ್ಲ
ಒಂದೆ ಹಸುವಿನ ಹಕ್ಕು ಸಾಧ್ಯವೇನಯ್ಯ?
ವಿಂಧ್ಯಾದ್ರಿಯ ಕಾಡಿನ ಮೇಲೆಲ್ಲ
ಒಂದೆ ಹಕ್ಕಿಯ ಒಡೆತನ ಶಕ್ಯವೇನಯ್ಯ?
ಸಾಗರಸಂಗಮದ ನೀರೆಲ್ಲದರ ಮೇಲೆ
ಒಂದೆ ಮೀನಿನ ಸ್ವಾಮ್ಯ ಸಂಭವವೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಅನಂತ, ಅಚಿಂತ್ಯ ಕರುಣೆಯ ಮೇಲೆ
ಒಬ್ಬರ ಗುತ್ತಿಗೆಯಾದೀತೇನಯ್ಯ?

## ೪೬೧

ಸೃಷ್ಟಿಯ ಸುಗಂಧಕ್ಕೆ ಚಂದನವೆ ಮೈ,
ಕಮಲ ಮುಖ, ನೈದಿಲಗಳೇ ಕಣ್ಣು,
ಬಿರಿ ಮುಗುಳೆ ಬಾಯಿ,
ಸಂಪಿಗೆಯೆ ಮೂಗು,
ಮಲ್ಲಿಗೆಯೆ ಉಸಿರು,
ಕೇದಗೆಯೆ ಕೈ,
ಬಾಳದ ಬೇರುಗಳೇ ಕಾಲು ನೋಡಾ!
ಸೃಷ್ಟಿಯ ಬಣ್ಣಕ್ಕೆ ಸಂಜೆ ಮುಂಜಾವುಗಳೆ ಮೈ,
ಕೆಂದಾವರೆಯೆ ಮುಖ,
ಶಿರೀಷಗಳೆ ಕಣ್ಣು,
ಗುಲಾಬಿಯೇ ಬಾಯಿ,
ದಾಳಿಂಬೆ ಹೂವೇ ಮೂಗು
ಡೇಲಿಯಾ ಕೈ ಕಾಲು ನೋಡಾ!
ಸ್ವತಂತ್ರಧೀರ ಸಿದ್ಧೇಶ್ವರಾ,
ಗಂಧ ರಂಗುಗಳ ರಂಗ ನಿನ್ನ ಸೃಷ್ಟಿ,
ಚೆಂದದ ಚಿನ್ನಾಟ ನೋಡಾ!

## ೪೬೨

ತಿಳಿಯದೆಯೆ ಗಳಹಿದ್ದೆಷ್ಟೋ,
ಗೊತ್ತಿದ್ದುದಕ್ಕೂ ಹೆಚ್ಚು ಹರಟಿದ್ದೆಷ್ಟೋ,
ಅನ್ಯರ ವಿಚಾರಗಳ ತನ್ನವೆಂದು ಕೊಚ್ಚಿಕೊಂಡುದೆಷ್ಟೋ,
ನಾನೇ ನಂಬದುದನ್ನು ನಂಬಿಸಲು ಹಂಬಲಿಸಿದುದೆಷ್ಟೋ,
ಶಬ್ದಜಾಲದಲ್ಲಿ ಸಿಲುಕಿ ಇತರರ ಸಿಲುಕಿಸಿದುದೆಷ್ಟೋ,
ತರ್ಕಮರ್ಕಟನಿಂದ ತಿಪ್ಪರಲಾಗ ಹಾಕಿಸಿದುದೆಷ್ಟೋ,
ಅನರ್ಹ ಸ್ತುತಿಗಳ, ಶ್ಲಾಘನೆಗಳ ಸ್ವೀಕರಿಸಿದುದೆಷ್ಟೋ,
ಸ್ವತಂತ್ರಧೀರ ಸಿದ್ಧೇಶ್ವರಾ,
ಎಲ್ಲ ಬಲ್ಲವನಾದ ನಿನಗೇ ಎಂಗಿ ಹಚ್ಚಿದ್ದೆಷ್ಟೋ!

## ೪೬೩

ಇದ್ದಕ್ಕಿದ್ದಂತೆ
ಹಳೆಯ ನೆನಪುಗಳು ಮರುಕಳಿಸುವಂತೆ

ಹಳೆಯ ಗೆಳೆಯರು ಪ್ರತ್ಯಕ್ಷರಾಗುವರು-
ಮರೆತ ದಿನಗಳ ಮೇಲಿನ ಪರದೆ ಸರಿಸಿ
ನೆನಪಿಸುವರು ಕೂಡಿ ಕಳೆದ ದಿನಗಳನ್ನು;
ಮರೆವ, ನೆನಪಿಸುವ ಮತ್ತೆ ಮರೆವ, ಮತ್ತೆ ನೆನಪಿಸುವ,
ಮರೆದು ಸುಖಿಸುವ, ನೆನಪಿಸಿ ಸುಖಿಸುವ,
ನೆನಪಿನಲ್ಲಿ ನೋವನ್ನೂ ಸವಿಗೊಳಿಸುವ
ನೆರಳು ಬೆಳಕಿನಾಟ ಬದುಕು-
ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೪**

ಕಾಲಪ್ರವಾಹದಲ್ಲಿ ಹರಿದು ಬಂದ
ಮಣ್ಣು ಮರುಳನ್ನೇ ಬಳಿದು ಹರಡಿ,
ಯುಗಧರ್ಮದ್ರುಮದಡಿಯಲ್ಲಿ ಉದುರಿದ್ದ
ವಿಚಾರ ಬೀಜಗಳನ್ನೇ ಬಿತ್ತಿ ಬೆಳೆಸಿ,
ನನ್ನ ಹೃದಯರಸವನ್ನೇ ಸಿಂಪಡಿಸಿ,
ಬದುಕಿನ ಗೊಬ್ಬರವನ್ನೇ ಉಣಿಸಿ
ಮಿನಿ ಬನವಿದ ಬೆಳೆಸಿಕೊಂಡಿಹೆನಯ್ಯ!
'ಮಿನಿ'ಗಳ ಯುಗದ 'ಮಿನಿ' ಮಾನವ ನಾನು
ಇನ್ನೇನ ಗೈಯಬಲ್ಲೆನಯ್ಯ?
ಈ ಕೈತೋಪಿಗಿರಲಿ ನಿನ್ನ ಕಾಪು
ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೫**

ಸ್ವತಂತ್ರಧೀರ ಸಿದ್ಧೇಶ್ವರನನ್ನೇ
ಸಾಕ್ಷಿಯಾಗಿರಿಸಿಕೊಂಡು
ನನ್ನ ಒಳಗನ್ನು ತೋಡುತ್ತ ಹೊರಟಿದ್ದೇನೆ,
ನನ್ನ ಹೊರಗನ್ನು ನೋಡುತ್ತ ಹೊರಟಿದ್ದೇನೆ,
ಯಾವುದಕ್ಕೂ ಅರ್ಥ ಬೇಡುತ್ತ ಹೊರಟಿದ್ದೇನೆ,
ನನ್ನ ಹಂಬಲವನ್ನೇ ಹಾಡುತ್ತ ಹೊರಟಿದ್ದೇನೆ!

**೪೬೬**

ಮಳೆಯಾಗಿ ಇಳಿಯಲಿಲ್ಲ,
ಮಿಂಚಾಗಿ ಹೊಳೆಯಲಿಲ್ಲ-

ಬರಿದೆ ಕರಗಿದುದಯ್ಯ
ಬಿಳಿಮೋಡಗಳ ನಿಕರ!
ಕಂಪಾಗಿ ಹರಡಲಿಲ್ಲ,
ಇಂಪಾಗಿ ಫಲಿಸಲಿಲ್ಲ.
ಬರಿದೆ ಉದುರಿದುದಯ್ಯ
ಪಲಾಶಪುಷ್ಪಪ್ರಕರ!
ರಂಜನೆಯ ನೀಡಲಿಲ್ಲ,
ಮೌಢ್ಯ ಪ್ರಭಂಜನೆಯ ಮಾಡಲಿಲ್ಲ
ಬರಿದೆ ತೋರಿ ಅಡಗಿದುದಯ್ಯ
ನನ್ನ ಕೃತಿವಿಸರ–
ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೭**

ಏನನ್ನೇ ಆಡಲಿ,
ಆಕ್ಷೇಪಿಸುವವರುಂಟು;
ಏನನ್ನೇ ಮಾಡಲಿ
ಟೀಕಿಸುವವರುಂಟು;
ಏನನ್ನೇ ಬರೆಯಲಿ,
ಜರೆಯುವವರುಂಟು!
ಇರಲಿ ತಂದೆ,
ನಾನಾಡಿದುದರಲ್ಲಿ
ಮಾಡಿದುದರಲ್ಲಿ
ಬರೆದುದರಲ್ಲಿ ಕಿಂಚಿತ್ತಾದರೂ
ನಿನಗಿಷ್ಟವಾದರೆ
ನಾನದರಲ್ಲಿಯೇ ತುಷ್ಟ ಸ್ವತಂತ್ರಧೀರ ಸಿದ್ಧೇಶ್ವರಾ!

**೪೬೮**

ಒಳ್ಳೆಯದನ್ನು ಸಾವಿರ ಸಲ ಹೇಳಿದರೂ ನಂಬದವರು
ಕೆಟ್ಟುದನ್ನು ಹೇಳುತ್ತಲೇ ನಂಬಿ ಬಿಡುವರಯ್ಯ!
ಒಳ್ಳೆಯದನ್ನು ನೂರು ಸಲ ಕಳಿಸಿದರೂ ಪ್ರಕಟಿಸದ ಪತ್ರಿಕೆಗಳು
ಕೆಟ್ಟುದನ್ನು ಕೂಡಲೇ ಪ್ರಕಟಿಸುವುವಯ್ಯ!
ಒಳ್ಳೆಯ ಹಾಡುಗಳು ಮೇಲ್ವಾಯ್ದು ಬಂದರೂ
ಸಾಮಾನ್ಯ ಹಾಡುಗಳನ್ನೇ ಪ್ರಸಾರಿಸುವುವಯ್ಯ

ಆಕಾಶವಾಣಿ ದೂರದರ್ಶನಗಳು!
ಸ್ವತಂತ್ರಧೀರ ಸಿದ್ಧೇಶ್ವರಾ,
ಒಳ್ಳೆಯ ಕೃತಿಗಳು ಉಪಲಬ್ಧವಿದ್ದರೂ
ಸಾಮಾನ್ಯ ಕೃತಿಗಳ ತುತ್ತೂರಿ ಊದುವರಯ್ಯ–
ಕೆಲವು ವಿಮರ್ಶಕರು!

೪೭೯

ಶಬ್ದಮಾಧ್ಯಮವಿರಲಿ,
ಶಿಲಾಮಾಧ್ಯಮವಿರಲಿ,
ವರ್ಣಮಾಧ್ಯಮವಿರಲಿ, ಇನ್ನಾವುದೇ ಇರಲಿ–
ತತ್ಕಾಲ ಅನಂತಕಾಲವಾಗುವ
ಮೋಡಿ ಮೂಡಬೇಕಯ್ಯ,
ವ್ಯಕ್ತಿತ್ವ ವಿಶ್ವತ್ವ ಪಡೆವ
ಗಾರುಡ ಗರಿಗೆದರಬೇಕಯ್ಯ,
ಸ್ವತಂತ್ರಧೀರ ಸಿದ್ಧೇಶ್ವರ ಮೆಚ್ಚಿ
ತಲೆದೂಗಬೇಕಯ್ಯ!

೪೮೦

ಮನಸ್ಸಿನ ಮಸಿ ಕಾಗದದ ಮೇಲೆ
ಬರಹವಾಗಿ ಹರಡಿದರೆ ಅದು ಸಾಹಿತ್ಯವೆ?
ಹಣದ ಹಂಬಲ ತಂಬೂರಿ ಮೀಟಿ
ಹೊಲಸು ಪದ ಹಾಡಿದರೆ ಅದು ಸಂಗೀತವೆ?
ಮಂಕು ಬೂದಿ ಅಂಕು ಡೊಂಕಾಗಿ
ಪಟದ ಮೇಲೆ ಪಸರಿಸಿದರೆ ಅದು ಚಿತ್ರವೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಕುಂಬಳಕಾಯಿ ಉರುಳಿದಂತೆ
ಕೈಕಾಲು ಹೊರಳಿದರೆ ಅದು ನೃತ್ಯವೆ?

೪೮೧

ಶಬರಿಯ ಬೋರೆಗೆ
ಕಲ್ಪವೃಕ್ಷದ ಹಣ್ಣು ಸರಿಯೆ?
ಕುಚೇಲನ ಅವಲಿಗೆ
ಕುಬೇರನ ಸಂಪತ್ತು ಸರಿಯೆ?

ಧರ್ಮ ವ್ಯಾಧನಿಗೆ
ಧರ್ಮಾಧಿಕಾರಿಗಳು ಸರಿಯೆ?
ಚೆನ್ನಯ್ಯನ ಅಂಬಲಿಗೆ
ಚೋಳನ ರಾಜಾನ್ನ ಸರಿಯೆ!
ಕಣ್ಣಪ್ಪನ ಅಡಗಿಗೆ
ಅರ್ಚಕನ ಮೃಷ್ಟಾನ್ನ ಸರಿಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆದ್ಯರ ವಚನಗಳಿಗೆ ಆಧುನಿಕ ವಚನಗಳು ಸರಿಯೆ?

**೪೭೨**

ಜೀವನದಲ್ಲಿರುವುದು ಸಾಹಿತ್ಯದಲ್ಲಿರಬಹುದು.
ಆದರೆ, ಸಾಹಿತ್ಯದಲ್ಲಿರುವುದೆಲ್ಲ ಜೀವನದಲ್ಲಿರುವುದೆ?
ಕಣ್ಣುಗಳು ಕಂಡುದೆಲ್ಲ ಮನದಲ್ಲಿ ಇಳಿಯಬಹುದು.
ಆದರೆ, ಮನದಲ್ಲಿ ಮೂಡುವುದೆಲ್ಲ ಕಣ್ಣಿಗೆ ಕಾಣುವುದೆ?
ಸ್ವತಂತ್ರಧೀರ ಸಿದ್ಧೇಶ್ವರಾ
ಮತಿಗೆ ತಿಳಿದುದೆಲ್ಲ ಮಾತಿನಲ್ಲಿ ಮೈದಾಳಬಹುದು,
ಆದರೆ, ಮತಿಗೆ ಹೊಳೆಯದಿದ್ದುದೂ ಶಬ್ದಕ್ಕೆ ಸಿಲುಕಬಲ್ಲುದೆ?

**೪೭೩**

ಇದ್ದುದರ ವಿರುದ್ಧ ಹೇಳುವುದೇ ಹೊಸತನವಲ್ಲ;
ಇದ್ದುದ ವಿದ್ರೂಪಗೊಳಿಸುವುದೂ ಹೊಸತನವಲ್ಲ;
ಇದ್ದುದ ಇದ್ದಂತೆ ಸಾಧಿಸುವುದೂ ಹೊಸತನವಲ್ಲ;
ಹೊಸ ನೋಟದಿಂದ ಹೊಸತನ;
ಹೊಸ ಕಾಣ್ಕೆಯಿಂದ ಹೊಸತನ;
ಹೊಸ ಹುರುಳಿನಿಂದ ಹೊಸತನ
ಸ್ವತಂತ್ರಧೀರ ಸಿದ್ಧೇಶ್ವರನ
ಹೊಸ ಸಂಜ್ಞೆಯಿಂದ ಹೊಸತನ!

**೪೭೪**

ಹುಸಿಯೊಡನೆ ಒಪ್ಪಂದ,
ಹೊಲಸಿನೊಡನೆ ಒಪ್ಪಂದ,
ಭ್ರಷ್ಟಾಚಾರದೊಡನೆ ಒಪ್ಪಂದ;

ಬದುಕೀಗ
ಇಂಥ ಕೀಳು ಒಪ್ಪಂದಗಳ ಮಾಲೆ;
ಸಲ್ಲದುದನ್ನೇ ಕಲಿಸುವ ಶಾಲೆ;
ಹೊಣೆ ಹೊರಿಸುವುದು ಮಾತ್ರ
ಸ್ವತಂತ್ರಧೀರ ಸಿದ್ಧೇಶ್ವರನ ಮಾಲೆ!

**೪೭೫**

ಎಲ್ಲರೊಡನೆ ಕಲೆತೆ, ಎಲ್ಲರಿಂದ ಕಲಿತೆ,
ಅಂತೆಯೇ ಸರ್ವಜ್ಞನಾದೆ ನೀ ನಾಡಕವಿ!
ಆಗ ಕಲೆಯಲು ಸಜ್ಜನರಿದ್ದರು,
ಕಲಿಯಲು ವಿದ್ವಜ್ಜನರಿದ್ದರು-
ಈಗ ಹಾಗಿಲ್ಲ ಕರ್ನಾಟಕದ ಕ್ರಾಂತಿಪುರುಷ;
ಈಗ ಕಲೆತರೆ ಕಪಟ ನಾಟಕ,
ಕಲಿತರೆ ಕುಟಿಲ ಕುಹಕ!
ಇಂತಾಗಿ ನೀನು ನಿನ್ನ ಕಾಲಕ್ಕೆ ಮುಂದಾದೆ,
ನಾವು ನಮ್ಮ ಕಾಲಕ್ಕೆ ಹಿಂದಾದೆವು;
ಸ್ವತಂತ್ರಧೀರ ಸಿದ್ಧೇಶ್ವರನೇ ಸಾಕ್ಷಿ!

**೪೭೬**

ಬೆಣ್ಣೆಕದ್ದ, ಕದಿಯುವ ಮಕ್ಕಳೆಷ್ಟಿಲ್ಲ?
ಆದರೂ ನವನೀತಚೋರನೆಂದರೆ ಕೃಷ್ಣ!
ಕೊಳಲನೂದಿದ, ಊದುವ ಹೈದರೆಷ್ಟಿಲ್ಲ?
ಆದರೂ ಕೊಳಲೆಂದರೆ ಕೃಷ್ಣ, ಕೃಷ್ಣನೆಂದರೆ ಕೊಳಲು!
ಗೋವುಗಳ ಕಾದ, ಕಾಯುವ ಮಕ್ಕಳೆಷ್ಟಿಲ್ಲ?
ಆದರೂ ಗೋಪಾಲನೆಂದರೆ ಕೇವಲ ಕೃಷ್ಣ!
ಎಲ್ಲ ಮಕ್ಕಳ ಪ್ರತೀಕ,
ಎಲ್ಲ ಬಾಲಲೀಲೆಗಳ ಸಂಕೇತ ಕೃಷ್ಣ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನಗೂ ಇಷ್ಟ ಕೃಷ್ಣ!

## ೪೭೭

ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಗೋಚರ ವಿಶ್ವ
ಎಷ್ಟು ಸಮೃದ್ಧ, ಸುಂದರ;
ಅಗೋಚರ ವಿಶ್ವ
ಅದೆಷ್ಟು ವಿಸ್ಮಯಕರ!

## ೪೭೮

ನಾನೇಳುವ ಮುನ್ನವೇ
ನಿನಗೆ ಇಬ್ಬನಿಯ ಅಭಿಷೇಕ;
ನಾನೇಳುವ ಮುನ್ನವೇ
ನಿನಗೆ ಮರುಗ ದವನದ ಧೂಪ;
ನಾನೇಳುವ ಮುನ್ನವೇ
ನಿನಗೆ ಖದ್ಯೋತಗಳ ದೀಪಾರತಿ;
ನಾನೇಳುವ ಮುನ್ನವೇ
ನಿನಗೆ ಪಕ್ಷಿಗಳ ಮಂತ್ರಘೋಷ;
ನಾನೇಳುವ ಮುನ್ನವೇ
ನಿನಗೆ ತರುಲತೆಗಳ ಪುಷ್ಪಾಂಜಲಿ,
ಸ್ವತಂತ್ರಧೀರ ಸಿದ್ಧೇಶ್ವರ ಸಂಜಾತೆ, ಭೂಮಾತೆ,
ನನಗೂ ನಿನ್ನ ಪ್ರಭಾತ ಪೂಜೆಯಲ್ಲಿ
ಪಾಲು ನೀಡು ಪೂತೆ, ತ್ರಾತೆ!

## ೪೭೯

ಹಾಗೆ ಬದುಕಬೇಕು,
ಹೀಗೆ ಬದುಕಬೇಕು ಎನ್ನುತ್ತ
ಹಾಗೆಯೇ ಹೋಗಬೇಕೆ ದಿನಗಳು?
ಇದನು ಬರೆಯಬೇಕು,
ಅದನು ಬರೆಯಬೇಕು ಎನ್ನುತ್ತ
ಹಾಗೆಯೇ ಉಳಿಯಬೇಕೆ ಬರಿ ಹಾಳೆಗಳು?
ಹಾಗೆ ಚಿತ್ರಿಸಬೇಕು,
ಹೀಗೆ ಚಿತ್ರಿಸಬೇಕು ಎನ್ನುತ್ತ
ಹಾಗೆಯೇ ಉಳಿಯಬೇಕೆ ಬಣ್ಣ ಕುಂಚಗಳು?

ಸ್ವತಂತ್ರಧೀರ ಸಿದ್ಧೇಶ್ವರಾ,
ಅದನ್ನು ನೋಡಬೇಕು,
ಇದನ್ನು ನೋಡಬೇಕು ಎನ್ನುತ್ತೆ
ಹಾಗೆಯೇ ಮುಚ್ಚಬೇಕೆ ಕಣ್ಣುಗಳು?

೪೮೦

ಹುಟ್ಟು ಹಬ್ಬಗಳು ಬಂದುವು, ಹೋದುವು-
ಹೊಸ ಹುಟ್ಟು ಬರಲಿಲ್ಲವಯ್ಯ;
ಸ್ವಾತಂತ್ರ್ಯ ದಿನಗಳು ಬಂದುವು, ಹೋದುವು-
ಸ್ವತಂತ್ರ ಮತ್ತಿತ್ತ ಬರಲಿಲ್ಲವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ದೀಪೋತ್ಸವಗಳು ಬಂದುವು, ಹೋದುವು-
ದೀಪ್ತಿಮಂತತೆ ಬರಲಿಲ್ಲವಯ್ಯ!

೪೮೧

ಸಾವಿರ ಭಕ್ತರ ತಲೆ ಬೋಳಿಸಿ
ಪೂಜಾರಿ ಕಾಶೀಯಾತ್ರೆಗೆ ಹೊರಟಿರುವನಂತೆ;
ಸಾವಿರ ಸಂಸಾರಗಳ ಸುಲಿಗೆ ಮಾಡಿ
ಪುರೋಹಿತ ರಾಮೇಶ್ವರ ಯಾತ್ರೆಗೆ ಹೊರಟಿರುವನಂತೆ;
ಸಾವಿರ ಇಲಿಗಳ ತಿಂದ ಬೆಕ್ಕು
ಮಕ್ಕಾಯಾತ್ರೆಗೆ ಹೊರಟಿರುವುದಂತೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಾವಿರ ವಿಮಾನಗಳಲ್ಲಿ ಹಾರಾಡಿ ಹಾರಾಡಿ
ಜನನಾಯಕ ಪಾದಯಾತ್ರೆಗೆ ಹೊರಟಿರುವನಂತೆ!

೪೮೨

ಮದುವೆಯಾಗುವವರೆಗೆ
ಮಾತೃದೇವೋಭವ;
ಮದುವೆಯಾಗುತ್ತಲೇ
ಪತ್ನೀದೇವೋಭವ;
ಅವಳೂ ಬೇಸರಾದರೆ
ಉಪಪತ್ನಿ ದೇವೋಭವ;
ಕಾಮ ಕಣ್ಣಲ್ಲಿ ಮಾತ್ರ ಉಳಿದಾಗ

ಅಭಿನೇತ್ರಿ ದೇವೋಭವ!
ಸ್ವತಂತ್ರಧೀರ ಸಿದ್ಧೇಶ್ವರಾ,
ಪ್ರೇಮ ಒಕ್ಕಾಲು, ಕಾಮ ಮುಕ್ಕಾಲು!

**೪೮೩**

ಗೀಟು ಹಾಕಿದರೂ ದಾಟಿ ಸೆರೆಯಾದಳು ಸೀತೆ;
ನಾಲಗೆಯ ಚಪಲಕ್ಕೊಳಗಾಗಿ ಕಾಡಿಗೆ ತೆರಳಿದಳು ದ್ರೌಪದಿ;
ಹೊಲ್ಲದುದ ಒಪ್ಪಿ ಕಲ್ಲಾಗಿ ಹೋದಳು ಅಹಲ್ಯೆ;
ನಿಮಿಷದ ದೃಷ್ಟಿಲೋಲುಪತೆಗಾಗಿ
ತಲೆ ಹೊಯ್ಸಿಕೊಂಡಳು ರೇಣುಕೆ;
ಅಮೃತಮತಿಯ ಕತೆಯನ್ನೇನು ಹೇಳುವುದು?
ನಾರಿಗೆ ಸಂಯಮವೇ ದಾರಿ,
ನರನಿಗೆ ನಾರಿಯೇ ದಾರಿ–
ಸ್ವತಂತ್ರಧೀರ ಸಿದ್ಧೇಶ್ವರಾ!

**೪೮೪**

ಎಲ್ಲೋ, ಎಂದೋ ಉಲ್ಕಾಪಾತಗಳು,
ಅಕಸ್ಮಾತ್ತಾಗಿ ಝಂಝೂವಾತಗಳು;
ಆದರೆ, ಹೆಜ್ಜೆ ಹೆಜ್ಜೆಗೆ ಅಪಘಾತಗಳು,
ಊರೂರಿಗೂ ಪ್ರೀತಿಯ ಪ್ರೇತಗಳು,
ಜಾತೀಯತೆಯ ಭೂತಗಳು;
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ
ಮನುಷ್ಯರಾದರೇ ಮತ್ತೇ ಕೋತಿಗಳು?

**೪೮೫**

ತರಳರ ಮನಮುಕುಳ ಅರಳಲು
ತಾಯ್ತಂದೆಗಳ ಪ್ರೀತಿ ತಂಗಾಳಿ;
ಯುವಕರ ಮನದ ಮೊಗ್ಗು ಅರಳಲು
ಯುವತಿಯರ ಒಲವು ತಂಗಾಳಿ;
ತಾಯ್ತಂದೆಗಳ ಮನದ ಕುಟ್ಮಲ ಅರಳಲು
ಮಕ್ಕಳ ಮಮತೆ ತಂಗಾಳಿ;
ಸ್ವತಂತ್ರಧೀರ ಸಿದ್ಧೇಶ್ವರನ ಮನ ಅರಳಲು
ನಂಬಿದವರ ನಿಜಭಕ್ತಿ ತಂಗಾಳಿ!

## ೪೮೬

ಇರಾಕ್-ಇರಾಣಗಳಲ್ಲಿ ಮದ್ದು ಸಿಡಿದರೆ
ಇಲ್ಲಿ ನಮ್ಮ ಉಸಿರುಗಟ್ಟುತ್ತದೆ!
ಜರ್ಮನಿಯಲ್ಲಿ ಬರ್ಲಿನ್‌ಗೋಡೆ ಬಿದ್ದರೆ
ಇಲ್ಲಿ ಸದ್ದಿಲ್ಲದೆ ಬುದ್ಧಿ ಬದಲಾಗುತ್ತದೆ!
ಬೀಜಿಂಗಿನಲ್ಲಿ ಸರಕಾರ ಬದಲಾದರೆ
ದೇಶದೇಶಗಳ ಸಂಬಂಧಗಳೇ ಮಾರ್ಪಡುತ್ತವೆ;
ಎಷ್ಟು ಸ್ಪಂದನಶೀಲ ಜಗತ್ತು ಇಂದು!
ನಿನ್ನ ಹೃದಯವೂ ಸ್ಪಂದನಶೀಲವಾಗಲೆಂದ-
ಸ್ವತಂತ್ರಧೀರ ಸಿದ್ಧೇಶ್ವರ!

## ೪೮೭

ಮತ್ತೆ ಮತ್ತೆ ತುಂಬುವುದು,
ಮತ್ತೆ ಮತ್ತೆ ತೆರವು ಮಾಡುವುದು-
ಈ ಕ್ರಿಯೆ ನಡೆಯದ ಸ್ಥಳವೆಲ್ಲಿ?
ಮತ್ತೆ ಮತ್ತೆ ಬಿತ್ತುವುದು,
ಮತ್ತೆ ಮತ್ತೆ ಕುಯ್ಯುವುದು-
ಈ ಕ್ರಿಯೆ ನಡೆಯದ ಹೊಲವೆಲ್ಲಿ?
ಮತ್ತೆ ಮತ್ತೆ ಹುಟ್ಟುವುದು,
ಮತ್ತೆ ಮತ್ತೆ ಸಾಯುವುದು,
ಈ ಕ್ರಿಯೆ ನಡೆಯದ ಮನೆಯೆಲ್ಲಿ?
ಮತ್ತೆ ಮತ್ತೆ ನಂಬುವುದು,
ಮತ್ತೆ ಮತ್ತೆ ಮೋಸ ಹೋಗುವುದು
ಈ ಕ್ರಿಯೆ ನಡೆಯದ ಜನವೆಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮತ್ತೆ ಮತ್ತೆ ತಪ್ಪುವುದು,
ಮತ್ತೆ ಮತ್ತೆ ಕ್ಷಮೆ ಕೋರುವುದು-
ಈ ಕ್ರಿಯೆ ನಡೆಯದ ಮನವೆಲ್ಲಿ?

## ೪೮೮

ಯುರೋಪು ಶಾಂತವಾಯಿತೋ-
ಮಧ್ಯ ಏಷ್ಯಾ ಧಗಧಗಿಸುತ್ತದೆ;

ಏಷ್ಯಾ ಶಾಂತವಾದಾಗ
ಆಫ್ರಿಕಾ ಉರಿದೇಳಬಹುದು;
ಆಫ್ರಿಕಾ ಶಾಂತವಾಗುತ್ತಲೆ
ಲ್ಯಾಟಿನ್ ಅಮೇರಿಕಾ ಭುಗಿಲೆನ್ನಬಹುದು!
ವಿಶ್ವಶಾಂತಿಯೆನ್ನುವುದು
ಮನುಕುಲದ ಮರೀಚಿಕೆಯೇನಯ್ಯ?
ಅರ್ಧಮರ್ಧ ಶಾಂತಿಯಾದರೂ ನೆಲೆಸಿರಲಿ-
ಲೋಕಕ್ಕೆಲ್ಲ ಸ್ಮಶಾನಶಾಂತಿ ಬಾರದಿರಲಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

### ೪೮೯

ಇದು ಅನಾಥ ಮಗುವಿನ ಅಳು, ಗೆಳೆಯ-
ಇದರ ರಾಗವಾವುದೆಂದು ಕೇಳಬೇಡ!
ಇವು ಪರಿತ್ಯಕ್ತ ಪತ್ನಿಯ ಬಿಕ್ಕುಗಳು, ಗೆಳೆಯ-
ಇವುಗಳ ತಾಳವಾವುದೆಂದು ಕೇಳಬೇಡ!
ಇವು ದೀನನೊಬ್ಬನ ಕಂಬನಿಗಳು, ಗೆಳೆಯ-
ಇವುಗಳ ಕಾರಣವಾವುದೆಂದು ಕೇಳಬೇಡ!
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿನಗೆ-
ಈ ಶೋಕಸನಾದಿಯನ್ನು
ಊದುವವರಾರೆಂದು ಕೇಳಬೇಡ!

### ೪೯೦

ಚೆಲುವು ಒಲವುಗಳ ಬಗ್ಗೆ
ನನ್ನ ನಿಲುವು ನನಗೇ ಗೊತ್ತಿಲ್ಲ!
ಆದರೂ, ಎಲ್ಲೆಲ್ಲೂ ಚೆಲುವ ಕಾಣುವ ಹಂಬಲ,
ಎಲ್ಲರಿಗೂ ಒಲವ ನೀಡುವ ತವಕ!
'ಸಣ್ಣಬಾಯಿ, ದೊಡ್ಡಮಾತು' ಎಂಬೆಯಾ?-
ಸ್ವತಂತ್ರಧೀರ ಸಿದ್ಧೇಶ್ವರಾ?

### ೪೯೧

ಬಹುದೇವತಾವಾದದಲ್ಲಿ ವಿಶ್ವಾಸವಿಲ್ಲದಿದ್ದರೂ
ಸರಸ್ವತಿ ಗಣಪತಿಯರ ಮುಂದೆ ಅಡ್ಡಬೀಳುತ್ತೇನೆ;
ಶಕುನ ಗಿಕುನಗಳಲ್ಲಿ ವಿಶ್ವಾಸವಿಲ್ಲದಿದ್ದರೂ

ಕಾಗೆ ಎಡಕಟ್ಟಿದಾಗ ಕಂಗಾಲಾಗುತ್ತೇನೆ;
ಕಾಲದ ಕೀಳು ಮೇಲುಗಳಲ್ಲಿ ವಿಶ್ವಾಸವಿಲ್ಲದಿದ್ದರೂ
ರಾಹುಕಾಲ ನೋಡಿಯೇ ಕಾರ್ಯಕ್ಕೆ ಕೈಯಿಕ್ಕುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಈ ದ್ವಿಪಾತ್ರಾಭಿನಯವನ್ನು ನೋಡಿ
ನಗುತ್ತಿರುವಿಯೇನಯ್ಯ?

೪೯೨

ಅವರೆನ್ನ ಮೋಸಗೊಳಿಸಿದರು,
ಇವರೆನ್ನ ಮೋಸಗೊಳಿಸಿದರು
ಎಂದು ತಹತಹಿಸುತಿರುವ ಜೀವಿಯೆ–
ನಿನ್ನನ್ನು ನೀನೇ ಮೋಸಗೊಳಿಸಿಕೊಂಡಿಲ್ಲವೆ
ಒಮ್ಮೆಯಾದರೂ?
ಅವರೆನ್ನ ಹಗೆಯಾದರು
ಇವರೆನ್ನ ಹಗೆಯಾದರು–
ಎಂದು ದೂರುವ ಜೀವಿಯೇ–
ನಿನಗೆ ನೀನೇ ಹಗೆಯಾಗಿಲ್ಲವೆ
ಒಮ್ಮೆಯಾದರೂ?
ನಿನಗೆ ನೀನೇ ಮೋಸಗೊಳಿಸದಿರೆ,
ನಿನಗೆ ನೀನೇ ಹಗೆಯಾಗದಿರೆ
ನಿನ್ನನ್ನು ಹಿಡಿವರಾರೆಂದ
ಸ್ವತಂತ್ರಧೀರ ಸಿದ್ಧೇಶ್ವರ!

೪೯೩

ಮೊದ ಮೊದಲು
ಮಡದಿಯ ಸಿಡುಕು ಸೆಡಕುಗಳನ್ನು ಪ್ರೀತಿಸುತ್ತೇವೆ,
ಬರಬರುತ್ತ ಸಹಿಸಿಕೊಳ್ಳುತ್ತೇವೆ;
ಮೊದ ಮೊದಲು
ಕಂದ ಒಂದಾ ಮಾಡಿದರೂ ಆನಂದಿಸುತ್ತೇವೆ–
ಬರಬರುತ್ತ ಆಟದಲ್ಲಿ ಬಿದ್ದುಬಂದರೂ
ದಂಡಿಸುತ್ತೇವೆ;
ಮೊದ ಮೊದಲು

ಸೊಸೆ ಎಂಟಕ್ಕೆ ಎದ್ದರೂ ಹಿಗ್ಗುತ್ತೇವೆ–
ಬರಬರುತ್ತ ಆರಕ್ಕೆ ಎದ್ದರೂ ರೇಗುತ್ತೇವೆ;
ಮೊದ ಮೊದಲು
ಸ್ವತಂತ್ರಧೀರ ಸಿದ್ಧೇಶ್ವರನ ಪೂಜೆಯೆಂದರೆ
ಕುಂಟು ನೆವ ಹೇಳಿ ಕಂಬಿ ಕೀಳುತ್ತೇವೆ.
ಬರಬರುತ್ತ ಹಾರೈಸಿ ಪೂಜಿಸುತ್ತೇವೆ!

೪೯೪

ಒಂದು ಕಪ್ಪು ಚಹಾಕ್ಕಾಗಿ ಹೆಪ್ಪು ಮುರಿಯದಿರು ತಾಯೆ,
ಚಹಾ ತಪ್ಪಿದರೆ ತಪ್ಪಲಿ, ಮೊಸರು ಬೆಣ್ಣೆ ತಪ್ಪದಿರಲಿ.
ಮಗನ ತಪ್ಪನ್ನು ಮನ್ನಿಸುತ್ತಲೇ ಹೋಗದಿರು ತಾಯೆ,
ಕೊನೆಗೆ ಮಗನೇ ನಿನ್ನ ಕೈಬಿಡದಿರಲಿ!
ಸತಿ ಮಾತ ಕೇಳುವನೆಂದು ವಿಪರೀತ ಬೇಡದಿರು ಸತಿಯೆ,
ಅವನ ಚಿತ್ತ ಮತ್ತೆಲ್ಲೋ ಹರಿದು ಹೋಗದಿರಲಿ!
ನಿನ್ನ ಕರುಣೆಯ ಕೋರುವೆನೆಂದು ಬೇಸರಿಸದಿರು
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೂ ನಾಸ್ತಿಕನಾಗದಿರಲಿ!

೪೯೫

ಅಪರಿಚಿತರ ಮಧ್ಯದಲ್ಲಿ
ಅನಾಥಪ್ರಜ್ಞೆ ಕಾಡುತ್ತಲಿದ್ದಾಗ
ಯಾರೋ 'ನೀವು ಕಾವ್ಯಾನಂದರಲ್ಲವೆ?'
ಎಂದು ಕೇಳುತ್ತಾರೆ–
ಅನಾಥಪ್ರಜ್ಞೆ ಮಾಯವಾಗುತ್ತದೆ!
ಏಕಾಕಿಯಾಗಿ ವ್ಯಾಕುಲದೊಡನೆ
ಹಾದಿಯಲ್ಲಿ ಹೊರಟಾಗ
ಯಾವುದೋ ನಾಯಿಮರಿ ಕಾಲು ನೆಕ್ಕುತ್ತದೆ–
ಏಕಾಕಿತನ ಮಾಯವಾಗುತ್ತದೆ!
ಮನೆಯಲ್ಲಿ ಯಾರೂ ಇಲ್ಲದಾಗ
ಫಕ್ಕನೆ ನೀನು ನೆನಪಾಗುತ್ತೀ–
ಒಂಟಿತನ ಓಡಿ ಹೋಗುತ್ತದೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೪೯೬

ಯೋಗಗಳಲ್ಲಿ ಶಿವಯೋಗ,
ರಾಗಗಳಲ್ಲಿ ಭೈರವಿ,
ಭೋಗಗಳಲ್ಲಿ ಇಂದ್ರಭೋಗವೆನ್ನುತ್ತಾರೆ.
ನಿನ್ನ ಈ ಭಕ್ತನಿಗೋ
ನಲ್ಬಾಳುವುದೆ ಯೋಗ,
ಎದೆಯ ರಾಗವೆ ರಾಗ
ಲಿಂಗೋಪಭೋಗವೆ ಭೋಗ ನೋಡಾ–
ಸ್ವತಂತ್ರಧೀರ ಸಿದ್ಧೇಶ್ವರಾ!

೪೯೭

ನಿಮ್ಮ ಮತವಾವುದೆಂದು ಕೇಳಬಂದಿಲ್ಲ;
ನಿಮ್ಮ ಮತ ನೀಡಿರೆಂದು ಕೇಳಬಂದಿಲ್ಲ;
ನನಗೆ ಹಿತಮಾಡಿರೆಂದು ಹಲುಬ ಬಂದಿಲ್ಲ;
ನನ್ನ ಸ್ತುತಿಗೈಯಿರೆಂದು ಕೋರ ಬಂದಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರನೇ ಸಾಕ್ಷಿ–
ನಿಮ್ಮ ಹರಕೆ ಹಸಾದಗಳ ಬೇಡ ಬಂದಿದ್ದೇನೆ!

೪೯೮

ನೀನು ಧಾರಾಳವಾಗಿ ಧಾರೆಯೆರೆದೆ–
ಹಲವು ಶಕ್ತಿಗಳನ್ನು–
ನಾನೇ ಪೂರ್ಣ ಬಳಸಿಕೊಳ್ಳಲಿಲ್ಲ
ಅವುಗಳನ್ನು!
ಮೇಲೆ ಮೇಲೆ ತೇಲಿದೆನಾಗಲಿ
ಒಳಕ್ಕೆ ಇಳಿಯಲಿಲ್ಲ!
ಮರವೇರಿ ಮಂಗನಾಟವಾಡಿದೆನಾಗಲಿ
ಎತ್ತರಕ್ಕೆ ಏರಲಿಲ್ಲ!
ಮನೆಯಲ್ಲೇ ರಂಪಮಾಡಿದೆನಾಗಲಿ
ಜಗದಗಲಕ್ಕೆ ಹಬ್ಬಲಿಲ್ಲ!
ನನ್ನ ತಪ್ಪನ್ನು ನಿನ್ನ ತಲೆಗೆ ಕಟ್ಟೆ
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೯೯

ಇನ್ನೇನು, ಇಲ್ಲಿಯ ಅವಧಿ ಮುಗಿಯಲಿದೆ,
ಇನ್ನಾದರೂ ನನ್ನನಿಲ್ಲಿಗೆ ಕಳಿಸಿದ ಉದ್ದೇಶ ತಿಳಿಸು ತಂದೆ!
ಒಡೆಯ ಒಡೆದು ಹೇಳದಿದ್ದರೂ
ಊಹಿಸಿಕೊಳ್ಳುವ ಸೂಕ್ಷ್ಮಮತಿ ನನಗಿಲ್ಲ!
ಕೇಳಿದರೆ ಒಂದೊಂದು ತೆರ ಹೇಳುವವರೇ ಎಲ್ಲ!
ಈ ಮಂಕು ಮರಿ
ನೀನು ಉದ್ದೇಶಿಸಿದ್ದನ್ನು
ಮಾಡದೇ ಹಿಂದಿರುಗಿದರೆ
ಹರಿಹಾಯ ಬೇಡಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೫೦೦

ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಇಹಲೋಕಯಾತ್ರೆ ಮುಗಿದ ಬಳಿಕ
ನನ್ನನ್ನು ಎಲ್ಲಿಯಾದರೂ ಇರಿಸು–
ಆದರೆ, ನನ್ನ ದೇಶ, ನನ್ನ ನಾಡು ಕಾಣುವಂತಿರಿಸು;
ಪಂಪನಿಂದ ಕುವೆಂಪುವರೆಗಿನ
ಕನ್ನಡ ಕಾವ್ಯವಾಣಿ ಕೇಳುವಂತೆ ಇರಿಸು,
ಆದ್ಯರ ವಚನಗಳು,
ದಾಸರ ದೇವರನಾಮಗಳು,
ಗರತಿಯರ ಹಾಡುಗಳು
ಮರೆಯದಂತೆ ಇರಿಸು!

## ೫೦೧

ಈ ವನಕ್ಕೂ ವಸಂತ ಬಂದೀತು
ಒಮ್ಮಿಲ್ಲೊಮ್ಮೆ;
ಈ ಕಡಲಿಗೂ ಉಕ್ಕು ಬಂದೀತು
ಒಮ್ಮಿಲ್ಲೊಮ್ಮೆ;
ಈ ಕಣದಲ್ಲಿಯೂ ರಾಶಿ ಏರೀತು
ಒಮ್ಮಿಲ್ಲೊಮ್ಮೆ:
ಈ ಮನೆಯಲ್ಲಿಯೂ ದೀಪೋತ್ಸವ ನಡೆದೀತು
ಒಮ್ಮಿಲ್ಲೊಮ್ಮೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಈ ವ್ಯರ್ಥಾಲಾಪಕ್ಕೂ ಅರ್ಥ ಬಂದೀತು
ಒಮ್ಮಿಲ್ಲೊಮ್ಮೆ!

# ಹೊಸ ವಚನಗಳು

ವಚನೋದ್ಯಾನದ ಮೂರನೇ ಮುದ್ರಣದ ಕೊನೆಯ ಹಂತದ ಸಿದ್ಧತೆಯಲ್ಲಿದ್ದಾಗ ಯೋಗಾಯೋಗವೋ ಎನ್ನುವಂತೆ ನನ್ನ ಹಿರಿಯ ಅಕ್ಕ ಶ್ರೀಮತಿ ವಿಜಯಾ ನಂದೀಶ್ವರ ಅವರು ೧೯೯೪ರಲ್ಲಿ-ನಮ್ಮ ತಂದೆಯವರು ಲಿಂಗೈಕ್ಯರಾಗುವ ಪೂರ್ವದಲ್ಲಿ-ಕೆಲವು ವಚನಗಳನ್ನು ಯಾವುದೋ ಡೈರಿಯಲ್ಲಿ ಬರೆಯುತ್ತಿದ್ದರೆಂದು ನೆನಪಿಸಿಕೊಂಡು ನನ್ನೊಂದಿಗೆ ಮಾತಿನ ನಡುವೆ ಹೇಳಿದರು. ನನ್ನ ತಂದೆಯವರ 'ವಚನಾರಾಮ' ಕೃತಿ ಪ್ರಕಟವಾದುದು ೧೯೯೨ರಲ್ಲಿ. ನಮ್ಮ ಮನೆಯಲ್ಲಿ ತೀವ್ರ ಶೋಧ ನಡೆಸಿದಾಗ ನನಗೆ ೧೯೯೪ರ ಡೈರಿಯೊಂದು ದೊರೆಯಿತು. ಅದು ಹಲವೆಡೆ ತಿದ್ದಿದ ೧೫೮ ವಚನಗಳ ಕರಡುಪ್ರತಿ. ಮತ್ತೆ ನಾನು ನಮ್ಮ ಮನೆಯಲ್ಲಿ ಹುಡುಕಿದಾಗ ೧೯೯೦ನೇ ಇಸವಿಯ ಡೈರಿಯೊಂದು ದೊರೆಯಿತು. ಅದರಲ್ಲಿ ಮೇಲೆ ತಿಳಿಸಿದ ೧೫೮ ವಚನಗಳ ಶುದ್ಧ ಪ್ರತಿ ಸಿಕ್ಕಿತು. ತುಲನೆಮಾಡಿ ನೋಡಿದಾಗ ಈ ವಚನಗಳು ನಮ್ಮ ತಂದೆಯವರ ವಚನೋದ್ಯಾನ, ವಚನನಂದನ, ವಚನಾರಾಮಗಳಲ್ಲಿ ಸೇರ್ಪಡೆಯಾಗಿರಲಿಲ್ಲ. ಈ ಕಾರ್ಯದಲ್ಲಿ ನನ್ನೊಂದಿಗೆ ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕ ಅವರು ಸಮನಾಗಿ ದುಡಿದಿರುವರು.

ದೈವದ ಇಚ್ಛೆ ಈ ೧೫೮ ಹೊಸ ವಚನಗಳು ವಚನೋದ್ಯಾನದಲ್ಲಿ ಸೇರ್ಪಡೆಯಾಗಬೇಕೆಂದಿತ್ತೋ ಏನೋ ! ಸಕಾಲಕ್ಕೆ ಈ ವಚನಗಳು ಬೆಳಕಿಗೆ ಬಂದವು. ನಾವು ವಚನೋದ್ಯಾನದ ಮೂರನೆ ಮುದ್ರಣದಲ್ಲಿ ಅನುಬಂಧ ರೂಪದಲ್ಲಿ ಈ ೧೫೮ ಹೊಸ ವಚನಗಳನ್ನು ಕೊಡುತ್ತಿರುವೆವು. ಇದು ನಮಗಷ್ಟೇ ಅಲ್ಲ, ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಾಭಿಮಾನಿಗಳಿಗೂ ಸಂತೋಷವಾಗುತ್ತದೆಂದು ನಾವು ನಂಬಿರುವೆವು.

(ಮೂರನೆ ಮುದ್ರಣಕ್ಕೆ ಪ್ರಕಾಶಕರ ಮಾತುಗಳಿಂದ)

೨೦.೭.೨೦೧೧ **– ಪ್ರಸನ್ನ ಕುಮಾರ್ ಪುರಾಣಿಕ**

# ಹೊಸ ವಚನಗಳು

## ೧

ನಕ್ಷತ್ರ ಮಂಡಲವೇ ತೊಂಡಿಲ ಬಾಸಿಗ ನನ್ನ ನಲ್ಲನಿಗೆ:
ಆಕಾಶ ಕೇಶ, ರವಿ ಶಶಿಗಳು ಲೋಚನ,
ಮೇಘ, ಅಂಬರ, ದಿಶೆಗಳು ಬಾಹುಗಳು,
ಪರ್ವತ ಪಾದಗಳು, ಪೃಥ್ವಿ ಪೀಠ,
ಸಮುದ್ರ ಪಾದೋದಕ, ಪ್ರಪಂಚ ಪ್ರಸಾದ
ಎಂಥ ಅದ್ಭುತ ಇನಿಯ ನಿನಗೆ;
ಈ ಮಹತೋಮಹಿಮ
ಅಣೋರಣೀಯನೆನ್ನ ಮನದ ಕೊನೆಯಲ್ಲಿ!
ಸ್ವತಂತ್ರಧೀರ ಸಿದ್ಧೇಶ್ವರ ಅನ್ವೇಷಿಯಲ್ಲಿ!

## ೨

ಬಾನಿನಲ್ಲಿ ಮೂಡುವ ಚಿತ್ರಗಳಿಗೆ
ಬಾನೇ ಭಿತ್ತಿ;
ಭೂಮಿಯಲ್ಲಿ ಮೂಡುವ ಚಿತ್ರಗಳಿಗೆ
ಭೂಮಿಯೇ ಭಿತ್ತಿ;
ಮನದಲ್ಲಿ ಮೂಡುವ ಚಿತ್ರಗಳಿಗೆ
ಮನವೇ ಭಿತ್ತಿ;
ಕನಸಿನಲ್ಲಿ ಮೂಡುವ ಚಿತ್ರಗಳಿಗೆ
ಸುಪ್ತಿಯೇ ಭಿತ್ತಿ;
ಅನಂತಕೋಟಿ ಬ್ರಹ್ಮಾಂಡಗಳಿಗೆ
ಸ್ವತಂತ್ರಧೀರ ಸಿದ್ಧೇಶ್ವರನೇ ಭಿತ್ತಿ.

೨

ಮಳೆಗಾಲವೂ ಮಿಲನವಿಲ್ಲದೆಯೆ ಮುಗಿಯಿತು
ಚಳಿಗಾಲವನ್ನೆಂತು ಕಳೆಯಲಿ?
ನಲ್ಲನೊಲ್ಲದ ನಲ್ಲೆ ನಾನು,
ಗೆಳತಿಯರ ಮುಂದೆಂತು ಸುಳಿಯಲಿ?
ಈ ಪ್ರೇಮ ಸಂಬಂಧಕ್ಕೆ
ಯಾವ ಬಣ್ಣ ಬಳಿಯಲಿ?
ಸ್ವತಂತ್ರಧೀರ ಸಿದ್ಧೇಶ್ವರ ಬೇಡಾದ ಮೇಲೆ
ಯಾಕಾದರೂ ಉಳಿಯಲಿ?

೪

ಮಾಡದಲ್ಲಿ ಮಿಣುಕಿ ಮಿಣುಕಿ ಹಣತೆ ಕೇಳುತ್ತಿದೆ–
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ಗೂಡಿನಿಂದ ಇಣುಕಿ ಇಣುಕಿ ಗುಬ್ಬಿ ಕೇಳುತ್ತಿದೆ–
'ನಿನ್ನ ನಲ್ಲ ಬಂದನೆ ಬಂದನೆ?' ಎಂದು;
ಪೊಟರೆಯಿಂದ ಹಣಿಕಿ ಹಣಿಕಿ ಗಿಳಿ ಕೇಳುತ್ತಿದೆ,
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ದೂರದ ತಾರೆಗೆ ಮಿನುಗಿ ಮಿನುಗಿ ಕೇಳುತ್ತಿದೆ–
'ನಿನ್ನ ನಲ್ಲ ಬಂದನೆ, ಬಂದನೆ?' ಎಂದು;
ಏನುತ್ತರ ಕೊಡಲಿ ಇವರಿಗೆ ಪ್ರಿಯಕರ–
ಸ್ವತಂತ್ರಧೀರ ಸಿದ್ಧೇಶ್ವರ?

೫

ಬೇಸಿಗೆ ಕಾಲ ಬಂದಿತು,
ವಿರಹದುರಿಗೆ ಬಿಸಿಲಿನುರಿ ಬೆರೆಸಿ
ಬೆವರು ಹರಿಸಿ ಹೋಯಿತು–
ಇಲ್ಲ, ನಲ್ಲ ಬರಲಿಲ್ಲ!

ಮಳೆಗಾಲ ಬಂದಿತು,
 ಮಿಲನದಾಸೆಗೆ ಪುಟವಿಟ್ಟು
  ಮೈಯೆಲ್ಲ ಮುತ್ತಿಟ್ಟು ಹೋಯಿತು-
        ಇಲ್ಲ, ನಲ್ಲ ಬರಲಿಲ್ಲ!
ಚಳಿಗಾಲ ಬಂದಿತು,
 ಪ್ರಣಯಕ್ಕೆ ಪ್ರಚೋದನೆಯಿತ್ತು
  ಮೈಮನಗಳಿಗೆ ಕಚಗುಳಿಯಿತ್ತು ಹೋಯಿತು
    ಇಲ್ಲ, ನಲ್ಲ ಬರಲಿಲ್ಲ!
ಬರುವನೆಂಬ ಭರವಸೆಯಿಲ್ಲ,
 ಬರನೆಂಬ ಶಂಕೆಯೂ ಇಲ್ಲ,
  ಬರುವನೋ ಬಾರನೋ-
    ಸ್ವತಂತ್ರ ಧೀರ ಸಿದ್ಧೇಶ್ವರ ಬಲ್ಲ!

೬

ಬರಲಿಲ್ಲ ಬರಲಿಲ್ಲವೆಂದು
 ಒರಲುತ್ತಿಹೆಯೇಕೆ?
  ಬರಲು ನಾನು ಹೊರಗಿನ ಗಂಡನೆ?
   ಇರುವೆ ನಿನ್ನೊಳಗೇ,
    ಅರಸು ಅಲ್ಲಿಯೇ,
     ಬೆರೆ ಅಲ್ಲಿಯೇ ಎಂದ
      ಸ್ವತಂತ್ರಧೀರ ಸಿದ್ಧೇಶ್ವರ

೭

ನೆನೆಪುಗಳು ಕಾಡುತ್ತಿವೆ ನಲ್ಲ.
    ನೀನಿಲ್ಲದಾಗ ನಿನ್ನ ನೆನಪುಗಳು ಕಾಡುತ್ತಿವೆ ನಲ್ಲ!
ಮೊದಲ ಸಲ ನಿನ್ನ ಬಯಸಿದ ನೆನಪು
        ನಿನ್ನ ನೋಡ ಬಯಸಿದ,
         ನಿನ್ನೊಡನೆ ಮಾತಾಡ ಬಯಸಿದ,

ನಿನ್ನ ಆಲಂಗಿಸ ಬಯಸಿದ, ಚುಂಬಿಸ
ಬಯಸಿದ ನೆನಪು,
ಮೊದಲ ಕನಸಿನ ನೆನಪು,
ಚಿರ ವಿರಹದ ನೆನಪು.
ಓ, ಎಷ್ಟು ಸಾವಿರ ನೆನಪುಗಳು–
ಬಾಳ ಹಣತೆಗೆ ಎಣ್ಣೆಯಾದ ನೆನಪುಗಳು,
ಬಗೆಯ ಬನಕೆ ಬಸಂತವಾದ ನೆನಪುಗಳು,
ಬುದ್ಧಿವಾಹಿನಿಗೆ ಬುಗ್ಗೆಗಳಾದ ನೆನಪುಗಳು,
ಸ್ವತಂತ್ರಧೀರ ಸಿದ್ಧೇಶ್ವರನನ್ನು
ಚಿತ್ತದಲ್ಲಿ ಚಿತ್ರಿಸಿದ ನೆನಪುಗಳು!

೮

ಬೆಳಗಾಗುತ್ತಲೆ ಜಗವಿದು ಚಿತ್ರಶಾಲೆ;
ಹಕ್ಕಿಗಳು ಹಾಡ ತೊಡಗಲು ಸಂಗೀತಶಾಲೆ;
ಮಕ್ಕಳು ಕುಣಿಯ ತೊಡಗಲು ನೃತ್ಯಶಾಲೆ;
ಹಗಲು ಮುಗಿವವರೆಗೆ ಕರ್ತವ್ಯಶಾಲೆ;
ಇರುಳೆಲ್ಲ ಒಲವಿನಲೀಲೆ,
ಸ್ವತಂತ್ರಧೀರ ಸಿದ್ಧೇಶ್ವರನೊಡನೆ ಕಣ್ಣುಮುಚ್ಚಾಲೆ!

೯

ಬುದ್ಧಿಯ ಅಂಗಳದಲ್ಲಿ ದಿನದಿನವೂ
ಭಾವದ ತಳಿ ಹಾಕುತ್ತಲೇ ಹೊರಟಿದ್ದೇನೆ,
ಕಲೆಯ ರಂಗದಲ್ಲಿ ಹಾರುತ್ತಲೇ ಹೊರಟಿದ್ದೇನೆ;
ಬೇಸತ್ತರೆ ಹೇಗವ್ವಾ!
ಬೇಸರ ಕಳೆಯಲೆಂದೇ ಬೇಕು ನನಗಿವು!
ಇವುಗಳಿಂದ ಸಂತೋಷ ಹುಟ್ಟಿಸಬೇಕು,
ಸಂತೋಷ ಹಂಚಬೇಕು
ಇದರಿಂದ ಸ್ವತಂತ್ರಧೀರ ಸಿದ್ಧೇಶ್ವರನಿಗೂ ಸಂತೋಷ.

## ೧೦

ತನು ತನುಗಳ ಅಪ್ಪುಗೆಯ ನಿಜ ಸುಖಕ್ಕೆ
　　　ಮನ ಮನಗಳ ಒಪ್ಪಿಗೆಯೇ ಮೂಲ;
ಕಾವ್ಯ, ಕಲೆಗಳ ಸವಿ ಬೆಳಕಿಗೆ
　　　ಎದೆ ಮಿದುಳುಗಳ ತಳುಕೇ ಮೂಲ,
ಮನುಜ ಶರೀರದ ಸಫಲತೆಗೆ
　　　ಕರಣಗಳು ದಿವ್ಯಜೀವನದ ಉಪಕರಣಗಳಾಗುವುದೇ ಮೂಲ
ಸ್ವತಂತ್ರಧೀರ ಸಿದ್ಧೇಶ್ವರನೊಲಿಯಲು
ಸರ್ವಭೂತಹಿತ ರತಿಯೇ ಮೂಲ.

## ೧೧

ಒಳಗಿನ ಒಳಗೆ, ಬೆಳಗೆನ್ನನು;
ಅರ್ಥದ ಅರ್ಥವೆ, ಸಾರ್ಥಕಗೊಳಿಸೆನ್ನನು
ನಿಜದ ನಿಜವೆ, ನಿಜಸುಖ ನೀಡೆನಗೆ;
ರಹಸ್ಯಗಳ ರಹಸ್ಯವೆ, ಸಾಮರಸ್ಯ ಕೊಡು ನನಗೆ;
ಆದಿಗಳ ಆದಿಯೆ, ಹಾದಿ ತೋರೆನಗೆ;
　　　　ಸ್ವತಂತ್ರಧೀರ ಸಿದ್ಧೇಶ್ವರನೆ,
　　　　ಸ್ವತಂತ್ರತ್ವ ಧೀರತ್ವ ನೀಡೆನಗೆ!

## ೧೨

ಹೊಲಬಿಗಾಗಿ ಹಲುಬುತ್ತಲೇ ಇದ್ದೇನೆ;
ಹದುಳಿಗಾಗಿ ಬೆದಕುತ್ತಲೇ ಇದ್ದೇನೆ;
ಸೈಪಿಗಾಗಿ ಆಲ್ಪರಿಯುತ್ತಲೇ ಇದ್ದೇನೆ;
　　　　　ಎದುರಾಗುವುವು
　　　　　　　　　　ಹೊಲಬಲ್ಲ, ಕಿಲುಬು;
　　　　　　　　　　ಹದುಳವಲ್ಲ ಬಗದಳ;
　　　　　　　　　　ಸೈಪಲ್ಲ, ಅಂಧ ಕೂಪ!

ಸ್ವತಂತ್ರಧೀರ ಸಿದ್ಧೇಶ್ವರಾ,
ನೀನು ಕರುಣಿಸಿದರೆ ಇವೆಲ್ಲ ಏನು ಮಹಾ?

೧೩

ಪ್ರೀತಿಯ ಸೋಂಕಿಗೂ ಕರಗದೆದೆಯೇ ಕಲ್ಲೆದೆ;
ಕಂದನ ಕ್ರಂದನವನ್ನು ಕೇಳದ ಕಿವಿಯೆ ಮರಗಿವಿ;
ಹಸಿದವರ ಕೊರಗನ್ನು ಕಾಣದ ಕಣ್ಣೆ ಕೀವುಗಣ್ಣು;
ಅನ್ಯಾಯ ಅತ್ಯಾಚಾರಗಳ ಸಹಿಸುವ ಮನವೇ ಪ್ರೇತವನ;
ಸ್ವತಂತ್ರಧೀರ ಸಿದ್ಧೇಶ್ವರನ
ಮಕ್ಕಳ ಧಿಕ್ಕರಿಸುವ ಚಿತ್ತವೇ ಹಾವಿನ ಹುತ್ತ!

೧೪

ನಿನ್ನ ಅಪ್ರೀತಿಯ ತಾಳಿಕೊಳ್ಳಬಲ್ಲೆ,
ನಿನ್ನ ಅವಜ್ಞೆಯ ತಾಳಲಾರೆ, ನಲ್ಲ!
ನಿನ್ನ ವಿಯೋಗವ ಸಹಿಸಬಲ್ಲೆ,
ನಿನ್ನ ನಿರಾಸಕ್ತ ಸಾಮೀಪ್ಯವ
ಸಹಿಸಲಾರೆ, ನಲ್ಲ!
ನಿನ್ನ ಸೆಡವು ಸಿಟ್ಟು ಸೈರಿಸಬಲ್ಲೆ,
ನಿನ್ನ ನಿರ್ಮಮತೆಯ ತಾಳಲಾರೆ, ನಲ್ಲ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಣ್ಣುಮುಚ್ಚಾಲೆ ತಾಳಬಲ್ಲೆ,
ನಿನ್ನ ಕಣ್-ಕಟ್ಟು ತಾಳಲಾರೆ ನಲ್ಲ!

೧೫

ನಿನ್ನ ನೆನಪಿನ ನಾವೆ ಸಾಗರದತ್ತ ಸೆಳೆದರೆ
ನಿನ್ನ ಕನಸಿನ ವಿಮಾನ ಬಾನಿನತ್ತ ಎಳೆಯುತ್ತಿದೆ!
ನಾನಾದರೋ,

ಭೂಮಿತಾಯಿಯನ್ನು ಬಿಟ್ಟಿರಲಾರೆ!
ವಿನೋದಕ್ಕೆ ಮಾತ್ರ ಕಡಲ ಕರೆ, ಬಾನ ತಾರೆ–
ಸ್ವತಂತ್ರಧೀರ ಸಿದ್ಧೇಶ್ವರಾ!

೧೬

ಬಿಸಿಲುಗುದುರೆಗಳಲ್ಲ ಬಯಕೆಗಳು;
ನೀರ ಬುದ್ಬುದಗಳಲ್ಲ ಬಯಕೆಗಳು;
ತಿರುಕನ ಕನಸುಗಳಲ್ಲ ಬಯಕೆಗಳು–
ಬದುಕಿನ ಮರದ ಬೇರುಗಳಿವು
ಬದುಕುವ ಬಯಕೆ ತಾಯಿ ಬೇರು
ಸುಖದ ಬಯಕೆ ತೊಡಬೇಕು
ಬಯಕೆ ಈಡೇರಿದರೆ ಸುಖ,
ಬಯಕೆ ಈಡೇರದಿರೆ ದುಃಖ
ನಿನ್ನನ್ನೇ ಬಯಸಿ ಬಿಟ್ಟರೆ
ಸುಖವಾವುದು, ದುಃಖವಾವುದು–
ಸ್ವತಂತ್ರಧೀರ ಸಿದ್ಧೇಶ್ವರಾ?

೧೭

ಸಾವಿರ ರೆಕ್ಕೆಗಳ ಸೇರಿಸಿದಾಕ್ಷಣ
ಹಕ್ಕಿಯೊಂದು ಹುಟ್ಟುವುದೇನಯ್ಯ?
ಸಾವಿರ ಸ್ವರಗಳ ಸೇರಿಸಿಬಿಟ್ಟರೆ
ವೃಂದಗಾನ ಉದಿಸುವುದೇನಯ್ಯ?
ಸಾವಿರ ಶಬ್ದಗಳ ಸಾಲಾಗಿರಿಸಿದರೆ
ಕಬ್ಬ ಕೊನರುವುದೇನಯ್ಯ?
ಸಾವಿರ ಮಣಿಗಳ ಎಣಿಸಿದರಾಯಿತು
ನೀನು ಒಲಿವೆಯೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ.

## ೧೮

ಮಗಳ ಚೆಲುವಿಕೆಯನ್ನು ಅಳಿಯ ಒಪ್ಪಬೇಕು;
ಮಗನ ಗಾಡಿಯನ್ನು ಸೊಸೆ ಒಪ್ಪಬೇಕು;
ಗುರುವಿನ ಅರಿವನ್ನು ಶಿಷ್ಯ ಒಪ್ಪಬೇಕು;
ಯೋಧನ ಶೌರ್ಯವನ್ನು ವೈರಿ ಒಪ್ಪಬೇಕು;
ಭಕ್ತನ ಭಕ್ತಿಯನ್ನು
ಸ್ವತಂತ್ರಧೀರ ಸಿದ್ಧೇಶ್ವರ ಒಪ್ಪಬೇಕು.

## ೧೯

ಕತ್ತಲೆಯನ್ನು ಓಡಿಸಲು ಬಂದೂಕ ಏಕಣ್ಣ
ಒಂದು ದೀಪ ಸಾಕಣ್ಣ;
ಚಳಿಯನ್ನು ಓಡಿಸಲು ಸಿಡಿಬಾಂಬು ಏಕಣ್ಣ
ಅಗ್ಗಿಷ್ಟಿಗೆ ಸಾಕಣ್ಣ;
ವೈರಿಗಳನ್ನು ಗೆಲ್ಲಲು ಶಸ್ತ್ರಾಸ್ತ್ರಗಳೇಕಣ್ಣ–
ನಿರ್ವೈರ ಸಾಕಣ್ಣ;
ಸ್ವತಂತ್ರಧೀರ ಸಿದ್ಧೇಶ್ವರನನೊಲಿಸಲು ಜಾತಿಮತಗಳೇಕಣ್ಣ–
ಮಾನವ ಪ್ರೀತಿ ಸಾಕಣ್ಣ.

## ೨೦

ಜ್ಞಾನವನ್ನು ಪ್ರೀತಿಸುತ್ತೇನೆ, ಪಾಂಡಿತ್ಯಕ್ಕೆ ಅಂಜುತ್ತೇನೆ;
ಅಧ್ಯಾತ್ಮವನ್ನು ಪ್ರೀತಿಸುತ್ತೇನೆ, ಮತಕ್ಕೆ ಅಂಜುತ್ತೇನೆ;
ಪರಂಪರೆಯನ್ನು ಪ್ರೀತಿಸುತ್ತೇನೆ, ಸಂಪ್ರದಾಯಕ್ಕೆ ಅಂಜುತ್ತೇನೆ;
ಮಾನವರನ್ನು ಪ್ರೀತಿಸುತ್ತೇನೆ, ಅಮಾನುಷರಿಗೆ ಅಂಜುತ್ತೇನೆ;
ಮಡದಿ ಮಕ್ಕಳ ಪ್ರೀತಿಸುತ್ತೇನೆ, ಮೋಹಕ್ಕೆ ಅಂಜುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನನ್ನು ಪ್ರೀತಿಸುತ್ತೇನೆ,
ನಿನ್ನ ದಳ್ಳಾಳಿಗಳಿಗೆ ಅಂಜುತ್ತೇನೆ.

## ೨೧

ಮನುಜ ಮಾನವನಾಗದಿರೆ
ಮನುಷ್ಯಜನ್ಮ ವ್ಯರ್ಥ ಕಾಣಿರೋ,
ಒಡಲೇ ಗುಡಿಯಾಗದಿರೆ
ಗುಡಿ ಗುಂಡಾರಗಳು ವ್ಯರ್ಥ ಕಾಣಿರೋ;
ಹಿತವೇ ವ್ರತವಾಗದಿರೆ
ಮತಗಳು ವ್ಯರ್ಥ ಕಾಣಿರೋ,
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ ಸಾರುವೆ
ಬದುಕಿನ ಬೆಳಗೆ ಹಾಯಿಸು ನೀಡರಿಕೆ
ಜ್ಞಾನ-ವಿಜ್ಞಾನಗಳೆಲ್ಲ ವ್ಯರ್ಥ ಕಾಣಿರೋ.

## ೨೨

ಮಲ್ಲಿಗೆಯ ನಲ್ಲುಸಿರಿಗೂ
ಸುಗಂಧ ಚೂರ್ಣದ ಸಹಾಯ ಬೇಕೆ,
ಮಾವಿನ ಹೂಗೊಂಚಲಿಗೂ
ಇಕೆಬಾನಾದ ನೆರವುಬೇಕೆ,
ಕುಸುಮ ಖಚಿತ ತೃಣಾಂಬರಕ್ಕೂ
ಕಸೀದೆಯ ಕುಸುರು ಬೇಕೆ,
ಸ್ವತಂತ್ರಧೀರ ಸಿದ್ಧೇಶ್ವರಾ,
ಶುದ್ಧ ಭಕ್ತಿಯ ನೊರೆವಾಲಿಗೂ
ಬೂಟಾಟಿಕೆಯ ಬೂಸ್ಟ್ ಬೇಕೆ?

## ೨೩

ಮಕ್ಕಳ ಪ್ರೀತಿಯ ಪರೀಕ್ಷೆ
ತಂದೆ ತಾಯಿಗಳು ಮುದುಕರಾದಾಗ;
ಸತಿ ಪತಿಗಳ ಪ್ರೀತಿಯ ಪರೀಕ್ಷೆ
ಮುಪ್ಪು ಸುತ್ತಿಕೊಂಡಾಗ;

ಜೀವನ ಪ್ರೀತಿಯ ಪರೀಕ್ಷೆ,
ಮುಪ್ಪು ಅಪ್ಪಿದಾಗ;
ಎಲ್ಲ ಪ್ರೀತಿಗಳ ಒರೆಗಲ್ಲೆ,
ಎಲ್ಲ ಬನ್ನಗಳ ಸಾಣೆಕಲ್ಲೆ,
ಸೊಕ್ಕನ್ನಿಳಿಸಿ ಸುಕ್ಕುಗಳ ಸರ ಹಾಕುವ ಮುಪ್ಪೆ,
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ಸ್ವಾಗತ ನಿನಗೆ!

೨೪

ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವಲ್ಲಿಯೇ
ಕಾಲವೆಲ್ಲ ಕಳೆದರೆ
ಉತ್ತರ ಬರೆವುದು ಯಾವಾಗ?
ಉತ್ತರಿಸಲು ಹೊತ್ತೆಲ್ಲಿದೆ-
ಪುರಸೊತ್ತೆಲ್ಲಿದೆ?
ನಿಜ ಪ್ರಶ್ನೆಗಳು ತಿಳಿದ ಕಣವೇ ಸಾಕು-
ಸ್ವತಂತ್ರಧೀರ ಸಿದ್ಧೇಶ್ವರಾ.

೨೫

ಸೊಬಗೆಲ್ಲಿಯೊ
ಸೊಗವಲ್ಲಿಯೆ;
ಕವಿ ಎಲ್ಲಿಯೊ
ಸವಿ ಅಲ್ಲಿಯೆ;
ಶಿಶುವೆಲ್ಲಿಯೊ
ಋಷಿ ಅಲ್ಲಿಯೆ;
ಒಲವೆಲ್ಲಿಯೊ
ಗೆಲವಲ್ಲಿಯೆ;
ಶುದ್ಧ ಹೃದಯವೆಲ್ಲಿಯೊ
ಸ್ವತಂತ್ರಧೀರ ಸಿದ್ಧೇಶ್ವರನಲ್ಲಿಯೆ!

## ೨೬

ನಿನ್ನ ವಾಯುಮಂಡಲದಲ್ಲಿ
ಸಾವಿರ ಪ್ರಸರಣ ಕೇಂದ್ರಗಳ
ಧ್ವನಿತರಂಗಗಳು
ರಿಸೀವ್ವರ್ ಇಲ್ಲದಿರೆ ಏನು ಫಲ?
ನಿನ್ನ ವ್ಯೋಮಾತೀತದಲ್ಲಿ ಕೋಟಿ ಕೋಟಿ ಆಕಾಶಕಾಯಗಳು–
ಪ್ರಬಲ ದೂರದರ್ಶಕವಿರದಿರೆ ಏನು ಫಲ?
ನಿನ್ನ ಸೃಷ್ಟಿಯಲ್ಲಿ ನಿನ್ನ ಅನೇಕ ಅಶ್ರುತ ಸಂದೇಹಗಳು,
ಅಪರೋಕ್ಷ ಜ್ಞಾನವಿಲ್ಲದಿರೆ ಏನು ಫಲ?

## ೨೭

ಅಂಬಾರಿಯಲ್ಲಿ ಕುಳಿತವ
ಆನೆಯನ್ನು ರೇಗಿಸಬಾರದು;
ಅಂದಣದಲ್ಲಿ ಕುಳಿತವ
ಬೋವಿಗಳ ರೇಗಿಸಬಾರದು;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕರುಣೆಯನ್ನು ಬಯಸುವವರು
ನಿನ್ನ ಶರಣರನ್ನು ರೇಗಿಸಬಾರದು.

## ೨೮

ರಕ್ತ ಕೆಂಪಾಗಿದ್ದೂ ಕಪ್ಪು ಮೈಗಳು ಕೋಟಿ ಕೋಟಿ;
ತನು ಬೆಳ್ಳಗಿದ್ದೂ ಕಪ್ಪು ಮನಗಳು ಕೋಟಿ ಕೋಟಿ;
ಉಚ್ಚಕುಲದಲ್ಲಿ ಹುಟ್ಟಿಯೂ ತುಚ್ಛ ಹೃದಯಿಗಳು ಕೋಟಿ ಕೋಟಿ;
ದಲಿತ ಕುಲದಲ್ಲಿ ಜನಿಸಿಯೂ
ಸಾಚಾ ಮಾನವರು ಕೋಟಿ ಕೋಟಿ;
ಸ್ವತಂತ್ರಧೀರ ಸಿದ್ಧೇಶ್ವರನ ನಂಬದೆಯೂ
ನಿಜ ಮಾನವರಾದವರು ಕೋಟಿ ಕೋಟಿ.

೨೯

ವ್ಯರ್ಥವಾಯಿತು ಜೀವನ–
ಅರ್ಥವಾಗದ ಜೀವನ!
ಸಾರ್ಥಕವಾದುದೊಂದೇ–
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಣ.

೩೦

ಬುದ್ಧ ಪೂರ್ಣಿಮೆಯ ದಿನ ಮಾತ್ರವಲ್ಲ–
ಉದ್ವಿಗ್ನನಾದಾಗಲೆಲ್ಲ ನೆನೆವೆ ಬುದ್ಧದೇವನನ್ನು!
ಮೈತ್ರಿ, ಕರುಣೆ, ಮುದಿತ, ಉಪೇಕ್ಷೆಗಳನ್ನು
ನೆನಪಿಸಿಕೊಳ್ಳುತ್ತೇನೆ;
ಆಚರಿಸಲಾಗದಿದ್ದರೂ
ವಿಚಾರಿಸಿ ಹಿಗ್ಗುತ್ತೇನೆ,
ಬಾಳನ್ನು ಹಿಗ್ಗಿಸುತ್ತೇನೆ.
ತಳಮಳವನ್ನು ತಗ್ಗಿಸುತ್ತೇನೆ,
ಕಳವಳವನ್ನು ಜಗ್ಗಿಸುತ್ತೇನೆ.
ಬನ್ನವನ್ನು ಬಗ್ಗಿಸುತ್ತೇನೆ;
ಸ್ವತಂತ್ರಧೀರ ಸಿದ್ಧೇಶ್ವರನ ಸ್ಮರಿಸಿ
ವೀತರಾಗನಾಗಲು ಹೆಣಗುತ್ತೇನೆ!

೩೧

ಸುಲಭವಾಗಿ ಬದುಕಲು
ಢೋಂಗಿ ಸ್ವಾಮಿಯಾಗು;
ಸುಲಭವಾಗಿ ಸಂಪಾದಿಸಲು
ಕುಟಿಲ ರಾಜಕಾರಣಿಯಾಗು;
ಸುಲಭವಾಗಿ ಮೋಸಗೊಳಿಸಲು
ಬೂದಿ ಕೊಡುವ ಬಾಬಾ ಆಗು;

ಸುಲಭವಾಗಿ ದೋಚಲು
ಕಾಳಸಂತೆಯ ಕದೀಮನಾಗು;
ಸುಲಭವಾಗಿ ಹೆಸರು ಪಡೆಯಲು
ಸ್ವತಂತ್ರಧೀರ ಸಿದ್ಧೇಶ್ವರನ
ನಕಲಿ ಭಕ್ತನಾಗು!

೩೨

ಮನಕ್ಕೆ ದೂರಾದವರು ಮನೆಯೊಳಗಿದ್ದರೆ
ಆ ಮನೆ ಕೆಮ್ಮನೆ
ಅಲ್ಲಿ ಬದುಕುವುದು ಸುಮ್ಮನೆ!
ಮನಸ್ಸಿಲ್ಲದ ಪೂಜೆ ನಡೆಯುತ್ತಿದ್ದರೆ
ಆ ಗುಡಿ ಹಾಳು ಗುಡಿ
ಆ ಪೂಜೆ ಬರಿ ಗಡಿಬಿಡಿ
ಮನಸ್ಸಿಲ್ಲದ ಕಲಿಕೆ ನಡೆಯುತ್ತಿದ್ದರೆ
ಆ ಶಾಲೆ ಪಡಪೋಸಿ ಶಾಲೆ,
ಆ ಕಲಿಕೆ ತಲೆಶೂಲೆ;
ಸ್ವತಂತ್ರಧೀರ ಸಿದ್ಧೇಶ್ವರಾ.

೩೩

ನನ್ನೊಡನೆ ನಾನು ದಶಕಗಳನ್ನೇ ಕಳೆದೆ-
ಆದರೆ ನನ್ನ ಬಗ್ಗೆ ನಾನೆಷ್ಟು ತಿಳಿದೆ?
ತಿಳಿದಷ್ಟಾದರೂ ತಿಳಿಯಾಗಿದೆಯೆ?
ಇನ್ನು ಅನ್ಯರೆಂತು ತಿಳಿದಾರು?
ತಿಳಿದುದಕ್ಕೆ ತಮ್ಮ ಬಣ್ಣ ಬಳಿದಾರು!
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಿದರೆ ತಿಳಿವಳಿಕೆ,
ಇಲ್ಲದಿರೆ ಕಳವಳಿಕೆ!

### ೩೪

ಪಾಪದ ದೀಪಕ್ಕೆ
ಎಣ್ಣೆ ಎರೆಯುವವರೇ
ಅದನ್ನು ನಿಂದಿಸಿದರೆ ನಗೆಗೇಡು
ಲಂಚದ ಸೂಳೆಗೆ
ಮಂಚ ಹಾಕುವವರೇ
ಅದನ್ನು ಹಳಿದರೆ ನಾಚಿಕೆಗೇಡು;
ಸ್ವತಂತ್ರಧೀರ ಸಿದ್ಧೇಶ್ವರಾ,
ಶೋಷಣೆಯ ಬಲೆಯ
ಬೀಸುವವರೇ
ಅದನ್ನು ಖಂಡಿಸಿದರೆ ಮಾನಗೇಡು!

### ೩೫

ಈ ತನು ನಿನ್ನದೆಂದಾಕ್ಷಣ
ಅದು ರೋಗ ದೂರವಾಗುವುದೇನಯ್ಯ?
ಈ ಮನ ನಿನ್ನದೆಂದಾಕ್ಷಣ
ಅದು ವಿಕಾರದೂರವಾಗುವುದೇನಯ್ಯ?
ಈ ಜೀವನ ನಿನ್ನದೆಂದಾಕ್ಷಣ
ಅದು ಮರಣದೂರವಾಗುವುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆ ಗತಿಯೆಂದರೆ ಸಾಲದು
ನೀನೆ ಮತಿಯಾಗುವಂತೆ ಕರುಣಿಸಯ್ಯ.

## ೩೬

ಸುಳಿಗಾಳಿಯ ಹಾಳೆಯಲ್ಲಿ
 ಕಂಪಿನ ಕರ ಬರೆಯುತ್ತಿದೆ
  ನಿಃಸ್ವರ ಕವನವನ್ನು
ಬಿಳಿ ಜೋಳದ ಹಾಲ್ದೆನೆಯಲ್ಲಿ
ಹಕ್ಕಿಯ ಕೊಕ್ಕು ಬರೆಯುತ್ತಿದೆ
  ನಿರ್ವರ್ಣ ಚಿತ್ರವನ್ನು,
ಕಾಳ್ಪುರದ ತರಳ ತೆರೆಗಳು
ನೊರೆ ನೂಪುರ ಕಟ್ಟಿ ಯಾಡುತ್ತಿವೆ
  ನಿರ್ನೇಮ ನೃತ್ಯವನ್ನು;
ಸ್ವತಂತ್ರಧೀರ ಸಿದ್ಧೇಶ್ವರನ ಮುಂದೆ
 ಸಿದ್ಧಯ್ಯ ಪುರಾಣಿಕ ನಡೆಸಿದ್ದಾನೆ
  ದಂದಣ ದತ್ತಣವನ್ನು.

## ೩೭

ವೃತ್ತಿಯಂತೆ ವಿತ್ತ,
 ವಿತ್ತದಂತೆ ಚಿತ್ತ,
 ಚಿತ್ತದಂತೆ ಕೃತ್ಯ,
 ಕೃತ್ಯದಂತೆ ಪ್ರಾಪ್ತಿ.
 ವೃತ್ತಿ ಪವಿತ್ರವಾಗಲಿ,
 ವಿತ್ತ ಪವಿತ್ರವಾಗಲಿ,
 ಚಿತ್ತ ಪವಿತ್ರವಾಗಲಿ,
 ಕೃತ್ಯ ಪವಿತ್ರವಾಗಲಿ,
 ಪ್ರಾಪ್ತಿ ನಾನೇ ಎಂದ–
 ಸ್ವತಂತ್ರಧೀರ ಸಿದ್ಧೇಶ್ವರ.

೩೮

ಆದಿ ಮಾನವನಿಗೆ
ಹೊಟ್ಟೆ ಹೊರೆವ ಹೋರೆಯೊಂದೇ ಇದ್ದಿತು;
ಆಧುನಿಕ ಮಾನವನಿಗೆ
ಎಷ್ಟು ಹೋರೆಗಳು,
ಎಷ್ಟು ಹೊರೆಗಳು,
ಎಷ್ಟು ಬಿರಿಗಳು!
ಆದಿ ಮಾನವನಿಗೆ
ಎಲೆ ತೊಗಟೆ ತೊವಲುಗಳ ಒಂದೇ ಉಡುಪಿತ್ತು;
ಆಧುನಿಕ ಮಾನವನಿಗೆ
ಉಡಿಗೆಗಳೆಷ್ಟು,
ತೊಡಿಗೆಗಳೆಷ್ಟು
ತೊಡಹುಗಳೆಷ್ಟು?
ಇವರಿಬ್ಬರಲ್ಲಿ ಯಾರು ಸುಖಿ?
ನೀನೇ ಹೇಳು, ಸ್ವತಂತ್ರಧೀರ ಸಿದ್ಧೇಶ್ವರಾ!

೩೯

ನನ್ನನ್ನು ಎಚ್ಚರಿಸುವುದು ಅದಂತಿರಲಿ,
ನನ್ನೊಳಗಿನ ನಿನ್ನನ್ನು ಎಬ್ಬಿಸು, ತಂದೆ;
ತನುವಿನ ನಿದ್ದೆಯಿಂದ ನಾನೇ ಎದ್ದೇಳುವೆ,
ಮನದ ನಿದ್ದೆಯಿಂದ ಎಚ್ಚರಿಸು ತಂದೆ
ಸ್ವತಂತ್ರಧೀರ ಸಿದ್ಧೇಶ್ವರಾ!

೪೦

ಕಮಲದಲ್ಲಿ ಮಧುವಾಗಿ ಸಿಗುವುದಾದರೆ
ಭ್ರಮರವಾಗಿಸಯ್ಯ ನನ್ನನ್ನು;
ಮಾಮರದಲ್ಲಿ ಚಿಗುರಾಗಿ ಸಿಗುವುದಾದರೆ

ಕೋಗಿಲೆಯಾಗಿಸಯ್ಯ ನನ್ನನ್ನು;
ಹಾದಿ ಬದಿಯ ಹಲ್ಲಾಗಿ ಸಿಗುವುದಾದರೆ
ಹಸುವನ್ನಾಗಿಸಯ್ಯ ನನ್ನನ್ನು;
ಸ್ವತಂತ್ರಧೀರ ಸಿದ್ಧೇಶ್ವರಾ,
ಲಿಂಗ ಪತಿಯಾಗಿ ಸಿಗುವುದಾದರೆ
ಶರಣಸತಿಯನ್ನಾಗಿಸಯ್ಯ ನನ್ನನ್ನು!

೪೧

ನನ್ನ ನಾಡಿನ ಶರಣರೆ, ದಾಸರೆ, ಕಲೆಗಳೆ, ಕವಿ ಕಲಾವಿದರೆ
ನಿಜವಾಗಿ ಬದುಕಿದವರು ನೀವು–
ನಿಮ್ಮ ಹೆಸರು ಹೇಳಿಕೊಂಡು ಬದುಕುತ್ತಿರುವವರು ನಾವು;
ಬಾನೆ ಗುರಿಯಾಗಿ ಬೆಳೆದವರು ನೀವು–
ಕುಬ್ಜರಾಗಿ ಬೆಳೆಯುತ್ತಿರುವವರು ನಾವು;
ಸಾವಿರ ಸಾವಿರ ಜನರಿಗೆ ಸಹಾಯಕರಾದವರು ನೀವು–
ನಮ್ಮನ್ನೇ ಹೊರೆದುಕೊಳ್ಳಲಾಗದ ಹೇಡಿಗಳು ನಾವು;
ಸ್ವತಂತ್ರಧೀರ ಸಿದ್ಧೇಶ್ವರನಿಗೇ ಸವಾಲು ಹಾಕಿದವರು ನೀವು
ನಮಗೆ ನಾವೇ ಸವಾಗಲಾಗಿರುವವರು ನಾವು.

೪೨

ರೆಪ್ಪೆ ಭಾರವಾಗಲು ನಿದ್ದೆ ಕಾರಣ,
ಮನ ಭಾರವಾಗಲು?
ಮೈ ಭಾರವಾಗಲು ಕೊಬ್ಬು ಕಾರಣ,
ಬದುಕು ಭಾರವಾಗಲು?
ಹೊತ್ತು ಭಾರವಾಗಲು ಚಿಂತೆ ಕಾರಣ,
ಹತ್ತುಗಡೆ ಭಾರವಾಗಲು
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ದೂರವಿರಿಸಿದರೆ ಎಲ್ಲ ಭಾರ ನೋಡಾ!

೪೩

ನನ್ನ ದುಃಖವನ್ನು ಸಹಿಸುವುದಿರಲಿ,
ಇನ್ನೊಬ್ಬರ ದುಃಖವನ್ನೂ ಸಹಿಸುವ ಶಕ್ತಿ
ಉಳಿದಿಲ್ಲವಯ್ಯ!
ಇನ್ನೊಬ್ಬರನ್ನೂ ನಿಯಂತ್ರಿಸುವುದಿರಲಿ,
ನನ್ನನ್ನೇ ನಾನು ನಿಯಂತ್ರಿಸಲಾರೆನಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನೇ ಮುಳುಗುತ್ತಲಿರುವಾಗ
ಬೇರೆಯವರನ್ನೆಂತು ತೇಲಿಸಲಯ್ಯ!

೪೪

ಹಣಕ್ಕೆ ಮಣಿಯೆನಯ್ಯ;
ನೆಣಕ್ಕೆ ಮಣಿಯೆನಯ್ಯ;
ಅಧಿಕಾರದ ಅಕ್ಟೋಪಸ್ಸಿಗೆ ಮಣಿಯೆನಯ್ಯ;
ದರ್ಪ ಸರ್ಪಕ್ಕೆ ಮಣಿಯೆನಯ್ಯ–
ನಿನಗೆ ಮಣಿವೆ– ಸ್ವತಂತ್ರಧೀರ ಸಿದ್ಧೇಶ್ವರಾ!

೪೫

'ಇನ್ನೂ ಬರೆಯುತ್ತಲೇ ಇರುವಿಯಾ?'
ಎಂದು ಕೇಳುವರಯ್ಯ ಕರುಳಿನವರು ಕೆಲರು
ಅವರಿಗೇನ ಹೇಳಲಿ? ನಿನಗೆ ಹೇಳುವೆ:
ಬರೆಯುತ್ತಲೇ ಎಣ್ಣೆತೀರಿ ದೀಪವಿದು ಆರಿಹೋಗಲಯ್ಯ!
ಯಾರಿಗೇ ಸರಿಬರಲಿ, ಬರದಿರಲಿ,
ಬರವಣಿಗೆ ನನ್ನ ನಿನ್ನ
ಮುಖಾಮುಖಿ ಮಾಡಿದೆಯಯ್ಯ,
ಕೆಥಾರ್ಸಿಸ್ ನೀಡಿದೆಯಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೪೬

ಹಕ್ಕಿ ತೊರೆದ ಗೂಡಿನಂತಾಗಿಹೆನಯ್ಯ;
ಸಂತಾನಶೂನ್ಯ ಬೀಡಿನಂತಾಗಿಹೆನಯ್ಯ;
ಬಳ್ಳಿ ಒಣಗಿದ ಬಳ್ಳಿಮಾಡದಂತಾಗಿಹೆನಯ್ಯ
ಅರ್ಥ-ನಾದಗಳಿಗೆ ಸಿಲುಕದ ಹಾಡಿನಂತಾಗಿಹೆನಯ್ಯ;
ಪರಭಾಷಾ ಯೋಗಿಗಳೇ ತುಂಬಿದ ನಾಡಿನಂತಾಗಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಏನೇನನ್ನೋ ಆಡಿತು, ನಿನ್ನನ್ನೇ ಮರೆತು
ಒಕ್ಕಿದ ಹೊಲದ ಬೆದರಿನಂತಾಗಿಹೆನಯ್ಯ.

## ೪೭

ಹೂವು ಯಾವ ಬಣ್ಣದ್ದಾದರೇನು,
ಹಿನ್ನೆಲೆ ಮಾತ್ರ ಹಸುರಿನದೆ
ಮೋಡ ಯಾವ ಬಣ್ಣದ್ದಾದರೇನು,
ಹಿನ್ನೆಲೆ ಮಾತ್ರ ಹಸುರಿನದೆ;
ಸ್ವತಂತ್ರಧೀರ ಸಿದ್ಧೇಶ್ವರ ಮಕ್ಕಳು ಯಾವ ಮತದವರಾದರೇನು,
ಹಿನ್ನೆಲೆ ಮಾತ್ರ ಮನುಕುಲದ್ದೇ.

## ೪೮

ದುರ್ಗುಣಗಳ ಉಗ್ರಾಣವಾಗಿದ್ದರೂ
ಅಧಿಕಾರ ಐಶ್ವರ್ಯಗಳಿದ್ದವನಿಗೆಷ್ಟು ಸನ್ಮಾನ!
ಸದ್ಗುಣಗಳ ಸದನವಾಗಿದ್ದರೂ
ಇಲ್ಲದವರಿಗೆಷ್ಟು ಅವಮಾನ!
ಗಿಳಿ ಕೋಗಿಲೆಗಳ ವನವೀಗ
ಗಿಡಗ ರಣಹದ್ದುಗಳ ಕಾನನ!
ಎಲ್ಲಿಗೆ ಬಂದಿತಪ್ಪ ಈ ದೇಶ!

ಶ್ರೇಷ್ಠರ ದೇಶವಿಂದು ಭ್ರಷ್ಟರ ಆವಾಸ!
ಮತದಾರರೇ ತಪ್ಪಿಸಬಲ್ಲರು ಸರ್ವನಾಶ!
ಅವರಿಗೆ ಸನ್ಮತಿಯ ನೀಡು ತಂದೆ
ಸ್ವತಂತ್ರಧೀರ ಸಿದ್ಧೇಶ್ವರಾ!

೪೯

ಅಧಿಕಾರಧಾಮ ದೊರೆತ ಮೇಲೆ
ಸೇವಾಗ್ರಾಮವನ್ನು ಯಾರು ಕೇಳುವರಯ್ಯ?
ಮುತ್ತು ಕೊಡುವವಳು ಸಿಕ್ಕ ಮೇಲೆ
ತುತ್ತು ಕೊಟ್ಟವಳನ್ನಾರು ಕೇಳುವರಯ್ಯ?
ಹೊಳೆಯನ್ನು ದಾಟಿದ ಮೇಲೆ
ಅಂಬಿಗನನ್ನಾರು ಕೇಳುವರಯ್ಯ?
ಸಿರಿ ಪದವಿಗಳಲ್ಲಿ ಮೆರೆಯುವಾಗ
ಸ್ವತಂತ್ರಧೀರ ಸಿದ್ಧೇಶ್ವರನನ್ನು
ಯಾರು ಕೇಳುವರಯ್ಯ?

೫೦

ಕೀವು ತುಂಬಿದ ಹುಣ್ಣು ಒಡೆಯಲೇಬೇಕು
ಒಮ್ಮಿಲ್ಲೊಮ್ಮೆ;
ಗರ್ವ ತುಂಬಿದ ಶಿರ ಸಿಡಿಯಲೇಬೇಕು
ಒಮ್ಮಿಲ್ಲೊಮ್ಮೆ;
ಹುಳು ತಿಂದ ಮರ ಕೆಡೆಯಲೇಬೇಕು
ಒಮ್ಮಿಲ್ಲೊಮ್ಮೆ;
ಸೊಕ್ಕಿ ಮೆರೆದವನೂ ಮಡಿಯಲೇಬೇಕು
ಒಮ್ಮಿಲ್ಲೊಮ್ಮೆ;
ಸ್ವತಂತ್ರಧೀರ ಸಿದ್ಧೇಶ್ವರನ ಹಾದಿ ಹಿಡಿಯಲೇಬೇಕು
ಒಮ್ಮಿಲ್ಲೊಮ್ಮೆ!

## ೫೧

ಹಾಲು ಹೆಪ್ಪುಗಟ್ಟಿದಾಗ ಕಡೆಯಲೇಬೇಕು
ಬೆಣ್ಣೆ ಬೇಕಾದರೆ;
ಎಳ್ಳನ್ನು ಗಾಣದಲ್ಲಿ ಹಿಳಿಯಲೇಬೇಕು
ಎಣ್ಣೆ ಬೇಕಾದರೆ;
ಕಪ್ಪೆಚಿಪ್ಪನ್ನು ಸುಡಲೇಬೇಕು
ಸುಣ್ಣ ಬೇಕಾದರೆ
ಗೋರಂಟಿಯನ್ನು ಜಜ್ಜಲೇಬೇಕು
ಬಣ್ಣ ಬೇಕಾದರೆ
ವಿಷಯ ನಿರ್ವಿಷಯವಾಗಲೇಬೇಕು
ಸ್ವತಂತ್ರಧೀರ ಸಿದ್ಧೇಶ್ವರ ಬೇಕಾದರೆ.

## ೫೨

ಗೆದ್ದ ಯುದ್ಧಗಳ ಸಂಖ್ಯೆಯಿಂದ ಅಳೆಯದಿರು
ಅರಸರ ಹಿರಿಮೆಯನ್ನು;
ಅಮಾಯಕ ಶಿಷ್ಯರ ಸಂಖ್ಯೆಯಿಂದ ಅಳೆಯದಿರು
ಗುರುಗಳ ಗರಿಮೆಯನ್ನು;
ಶಾಸಕರ ಸಂಖ್ಯೆಯಿಂದ ಅಳೆಯದಿರು
ಪ್ರಜಾ ಸರಕಾರಗಳ ಸಾರ್ಥಕತೆಯನ್ನು;
ಗಿಟ್ಟಿಸಿದ ಪದವಿ ಪುರಸ್ಕಾರಗಳಿಂದ ಅಳೆಯದಿರು
ಸಾಹಿತಿ ಕಲಾವಿದರ ಶ್ರೇಷ್ಠತೆಯನ್ನು;
ಕೈಲಾಸ ವೈಕುಂಠಗಳ ವರ್ಣನೆಗಳಿಂದ ಅಳೆಯದಿರು
ಸ್ವತಂತ್ರಧೀರ ಸಿದ್ಧೇಶ್ವರನ ಘನತೆಯನ್ನು!

೫೩

ಉಳಿದ ಮೌಲ್ಯಗಳು ಇರಲಿ, ಇರದಿರಲಿ,
ಒಂದು ಮೌಲ್ಯವಿದ್ದರೆ, ಸಾಕಯ್ಯ;
ಅದೇ ಮಾರುಕಟ್ಟೆಯ ಮೌಲ್ಯ
ಪದವಿ, ಪ್ರಚಾರ, ಪಕ್ಷಪಾತ ಒಳಸಂಚುಗಳ ಸೃಷ್ಟಿಸುವ ಮಹಾಮೌಲ್ಯ;
ಇದೊಂದಿದ್ದರೆ
ಎಲ್ಲ ಮೌಲ್ಯಗಳೂ ಇದ್ದಂತೆ,
ಇದಿಲ್ಲದಿರೆ
ಎಲ್ಲ ಮೌಲ್ಯಗಳೂ ಸತ್ತಂತೆ;
ನೀನಾದರೂ ಇದಕ್ಕೆ ಮರುಳಾಗದಿರಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ !

೫೪

ಕೂಸುಗಳು ಕಂಡ ಕನಸುಗಳನ್ನು
ಬರೆದಿಟ್ಟವರಾರಯ್ಯ?
ಮೂಕರ ಮನಗಳಲ್ಲಿ ಇಂಗಿಹೋದ ಅನಿಸಿಕೆಗಳನ್ನು
ದಾಖಲಿಸಿದವರಾರಯ್ಯ?
ಬಡವರು ನುಂಗಿಕೊಂಡ ಸಿಟ್ಟುಗಳ
ಲೆಕ್ಕವಿಟ್ಟವರಾರಯ್ಯ?
ಪ್ರಸಿದ್ಧಿಗೆ ಬರದ ಪ್ರತಿಭೆಗಳ ಗುರುತಿಸಿ
ಗೌರವಿಸಿದವರಾರಯ್ಯ?
ಸ್ವತಂತ್ರಧೀರ ಸಿದ್ಧೇಶ್ವರನ
ಗುಪ್ತ ಭಕ್ತರ ಅರಸಿ ಆದರಿಸಿದವರಾರಯ್ಯ?

೫೫

ಒಳನೋಟ, ಒಳನೋಟವೆಂದು
ಪ್ರಲಾಪಿಸುತ್ತಿಹಿರೇಕೆ?
ಒಳನೋಟವೇನು, ಹೊರನೋಟವೇನು,
ಒಳ್ನೋಟ ಮುಖ್ಯ.
ನಲ್ನೋಟ ಮುಖ್ಯ,
ಸರ್ವತ್ರ ಸ್ವತಂತ್ರಧೀರ ಸಿದ್ಧೇಶ್ವರನನ್ನೆ ಕಾಣುವ
ಸಿವ ನೋಟ ಮುಖ್ಯ.

೫೬

ತನುವಿನ ಒಳಗನ್ನು ಶಿಖರವಾಗಿ ತೋರುವ ಯಂತ್ರಗಳಿವೆ,
ಮನದ ಒಳಗನ್ನು ಕರಾರುವಾಕ್ಕಾಗಿ ತೋರಲು ಏನಿದೆ?
ಕಡಲುಗಳ ಆಳವನ್ನು ಸರಿಯಾಗಿ ತೋರುವ ಸಾಧನಗಳಿವೆ,
ಮನದ ಆಳವನ್ನು ತಪ್ಪಿಲ್ಲದೆ ತೋರಲು ಏನಿದೆ?
ಪ್ರಕಾಶದ ವೇಗ, ಧ್ವನಿ ವೇಗಗಳ ಗುರುತಿಸಲಾಗಿದೆ,
ಮನೋವೇಗವನ್ನು ಅರಿಯಲಾಗಿದೆಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನೀನೆ ಕೊಟ್ಟ ಮನ ನಿನಗೂ ಮೀರಿ ನಿಂತಿದೆ ನೋಡಾ!

೫೭

ಪ್ರಜಾತಂತ್ರ ತನ್ನ ವಿಶ್ವಸನೀಯತೆಯನ್ನು
ಕಳೆದುಕೊಂಡಿದೆ;
ಶಾಸನಾಂಗ, ನ್ಯಾಯಾಂಗ, ಕಾರ್ಯಾಂಗಗಳು
ತಮ್ಮ ವಿಶ್ವಸನೀಯತೆಯನ್ನು ಕಳೆದುಕೊಂಡಿವೆ;
ಸರಕಾರ, ಸಹಕಾರ, ಶಿಕ್ಷಣ, ಚುನಾವಣೆ, ಆಡಳಿತ–
ಎಲ್ಲವೂ ವಿಶ್ವಸನೀಯತೆಯನ್ನು ಕಳೆದುಕೊಂಡಿವೆ!

ನೀನೂ ಕಳೆದುಕೊಂಡರೆ ಹೇಗಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

೫೮

ವೈರ ಸಾಧಿಸಲು ಬೇಕು ಸೇನೆ, ಶಸ್ತ್ರಾಸ್ತ್ರಗಳು
ಪ್ರೀತಿಸಲು ಯಾವ ಸಾಧನವೂ ಬೇಕಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರಾ.

೫೯

ಶೈಶವ ಮಾಯವಾಯಿತೆಂದು
ಅಳುತ್ತ ಕೂಡ್ರುವೆವೆ?
ಬಾಲ್ಯ ಹೋಯಿತೆಂದು ಅಳುತ್ತ ಕೂಡ್ರುವೆವೆ?
ತಾರುಣ್ಯ ತೆರಳಿತೆಂದು ಅಳುತ್ತ ಕೂಡ್ರುವೆವೆ?
ವಾರ್ಧಕ್ಯ ಉರುಳಿತೆಂದು ಅಳುತ್ತ ಕೂಡ್ರುವೆವೆ?
ವೃದ್ಧಾಪ್ಯ ಕರಗಿ ಸಾವು ಸಮನಿಸಿತೆಂದು
ಅಳುವುದೇಕೆಂದ, ಸ್ವತಂತ್ರಧೀರ ಸಿದ್ಧೇಶ್ವರ.

೬೦

ಉಳ್ಳವರ ಸ್ವಾತಂತ್ರ್ಯ
ಇಲ್ಲದವರ ಪಾರತಂತ್ರ್ಯ;
ಉಳ್ಳವರ ಸಮಾನತೆ
ಇಲ್ಲದವರ ಅಸಮಾನತೆ;
ಉಳ್ಳವರ ಸಂಸ್ಕೃತಿ
ಇಲ್ಲದವರ ಅಸಂಸ್ಕೃತಿ;
ಉಳ್ಳವರ ದೇವಾಲಯ
ಇಲ್ಲದವರ ಅವಮಾನಾಲಯ
ಎಲ್ಲರಿಗೂ ಸಲ್ಲದುದೇನೇ ಇರಲಿ

ಇಲ್ಲದವರಿಗೆ ಅದೇ ಅಭಿಶಾಪವೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ.

೬೧

ತಾಯಿ ಮಗುವಿನ ಬಾಯಿಗೆ ಮೊಲೆಯಿಕ್ಕುವಾಗ,
ಹಸು ತನ್ನ ಕರುವಿನ ಮೈ ನೆಕ್ಕುವಾಗ
ನಾಯಿ ಒಡೆಯನ ಮುಂಗಾಲಿಗೆ ಮೈ ತಿಕ್ಕುವಾಗ,
ಹಕ್ಕಿ ಬಿಳಿ ಜೋಳದ ತೆನೆ ಮುಕ್ಕುವಾಗ
ಅನುಭವಿಸುವ ಆನಂದವೇ
ನಿನ್ನ ನೆನಹಿನಲ್ಲಿ ನನಗೆ ಸಿಕ್ಕುತ್ತಿರಲಿ–
ಸ್ವತಂತ್ರಧೀರ ಸಿದ್ಧೇಶ್ವರಾ!

೬೨

ಇತಿಹಾಸದ ಪುನರಾವೃತ್ತಿ ಆಗುತ್ತಲೇ ಬಂದಿದೆ;
ಆಗುತ್ತಲೇ ಹೋಗಬೇಕೆ?
ನಾವು ಮೂಕ ಪ್ರೇಕ್ಷಕರಾಗಬೇಕೆ?
ಇತಿಹಾಸದ ಅಧ್ಯಯನ ಮಾತ್ರ ಬೇಕೆ?
ಇದ್ದಂತೆಯೇ ಇದು ಮುಂದುವರೆದರೆ ಸಾಕೆ?
ಇತಿಹಾಸದ ಸ್ಥಾವರೀಕರಣ ಬೇಡವೆಂದಾತ,
ಜಂಗಮಲಿಂಗ ಸ್ವತಂತ್ರಧೀರ ಸಿದ್ಧೇಶ್ವರ.

೬೩

ದುಷ್ಟ ಶಿಕ್ಷಕ ಶಿಷ್ಟ ರಕ್ಷಕರ ಕಾಲವೆ ಇದು?
ದುಷ್ಟ ರಕ್ಷಕ ಶಿಷ್ಟ ಶಿಕ್ಷಕರ ಕಾಲ!
ಶಿಷ್ಟರೆಲ್ಲ ಸಂಘಟಿತರಾಗದೆ

ದುಷ್ಟರಿಂದ ರಕ್ಷಣೆಯಿಲ್ಲವೆಂದ-
ಸ್ವತಂತ್ರಧೀರ ಸಿದ್ಧೇಶ್ವರ!

೬೪

ಅತ್ತ ಹೂವಿನ ಗೊಂಚಲು
ಇತ್ತ ಕಾಯಿಯ ಗೊಂಚಲು,
ಅಲ್ಲಿ ಹಣ್ಣಿನ ಗೊಂಚಲು
ಮೇಲೆ ಮಿಂಚಿನ ಗೊಂಚಲು!
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಮೈ ರೋಮಾಂಚನಗಳ ಗೊಂಚಲು!

೬೫

ಹಸಿವೆ ಜೋರಾಗಿದ್ದರೆ
ಅಶನ ಸುಮಾರಾಗಿದ್ದರೂ ನಡೆಯುತ್ತದೆ;
ವೇಷ ಜೋರಾಗಿದ್ದರೆ
ವಿದ್ಯೆ ಸುಮಾರಾಗಿದ್ದರೂ ನಡೆಯುತ್ತದೆ.
ವರದಕ್ಷಿಣೆ ಜೋರಾಗಿದ್ದರೆ
ವಧು ಸುಮಾರಾಗಿದ್ದರೂ ನಡೆಯುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಗುರುದಕ್ಷಿಣೆ ಜೋರಾಗಿದ್ದರೆ
ಶಿಷ್ಯ ಸುಮಾರಾಗಿದ್ದರೂ ನಡೆಯುತ್ತದೆ!

೬೬

ಸ್ವತಂತ್ರಧೀರ ಸಿದ್ಧೇಶ್ವರಾ,
ಮುಕ್ತಿಯ ನೀಡು ಬಿಡು-
ಮುಕ್ತ ಮನವ ನೀಡಯ್ಯ!
ರಾಗದ್ವೇಷ, ಕೀಳರಿಮೆ ಮೇಲರಿಮೆ,

ಸೋಲರಿಮೆ ಗೆಲ್ಲರಿಮೆಗಳಿಂದ
ಮುಕ್ತ ಮನವ ನೀಡಯ್ಯ!

## ೬೭

ದುಡಿವ ಅಡುವ ಕೈಗಳಿಗಿಂತ
ತಿನ್ನುವ ಬಾಯಿಗಳೇ ಹೆಚ್ಚಾದರೆ ಹೇಗಯ್ಯ?
ಮಾಡುವವರಿಗಿಂತ ಆಡುವವರು,
ಕೇಳುವವರಿಗಿಂತ ಹೇಳುವವರು
ಮನುಷ್ಯರಿಗಿಂತ ದೇವತೆಗಳು,
ಹಿಂಬಾಲಕರಿಗಿಂತ ನಾಯಕರು ಹೆಚ್ಚಿದರೆ ಹೇಗಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಶಿಷ್ಯರಿಗಿಂತ ಗುರುಗಳೇ ಹೆಚ್ಚಾದರೆ ಹೇಗಯ್ಯ!

## ೬೮

ಮಿತವ್ಯಯವನ್ನು ಕಡೆಗಣಿಸಿ
ಅಭ್ಯುದಯ ಸಾಧನೆ ಅಸಾಧ್ಯ;
ವೇತನದಾತರನ್ನು ದುರ್ಬಲಗೊಳಿಸಿ
ವೇತನ ಪಡೆವವರ ಬಲವರ್ಧನೆ ಅಸಾಧ್ಯ;
ಕಡ ತಂದ ಹಣದಿಂದ
ರಾಷ್ಟ್ರ ರಕ್ಷಣೆ ಅಸಾಧ್ಯ;
ಮಾನವನ ಸ್ವಾತಂತ್ರ್ಯವನ್ನು ಅಪಹರಿಸಿ
ಅವನ ಶೀಲ ಧೈರ್ಯ ಸಂವರ್ಧನೆ ಅಸಾಧ್ಯ;
ಅವರೇ ಮಾಡಿಕೊಳ್ಳಬಹುದಾದ,
ಮಾಡಿಕೊಳ್ಳಬೇಕಾದ ಕೆಲಸಗಳ ಮಾಡಿಕೊಟ್ಟು
ಅವರಿಗೆ ಶಾಶ್ವತ ಸಹಾಯ ನೀಡುವುದು ಅಸಾಧ್ಯ-
ಅಧ್ಯಕ್ಷ ಅಬ್ರಹಮ್ ಲಿಂಕನ್ನರ ಈ ಮಾತುಗಳು
ಇಂದಿಗೂ ಮನನೀಯ ಸ್ವತಂತ್ರಧೀರ ಸಿದ್ಧೇಶ್ವರಾ!

## ೬೯

ಇದುವರೆಗೆ ನಿನ್ನ ಕರೆಗೆ ಕಿವುಡಾದೆನೆಂದು
ಈಗ ನನ್ನ ಮೊರೆಯನ್ನು ಕೇಳದಿರಬೇಡ–
ಸ್ವತಂತ್ರಧೀರ ಸಿದ್ಧೇಶ್ವರಾ!

## ೭೦

ಇದು ಧರ್ಮಾಧಿಕಾರಿಗಳ ಪರಿಷತ್ತಲ್ಲ,
ಜಾತಿ ವ್ಯವಸ್ಥೆಯ ಕಾವಲು ಸಮಿತಿ,
ಅಸ್ಪೃಶ್ಯತೆಯ ಆರಕ್ಷಣ ಸಮಿತಿ,
ಮಹಿಳಾ ದಾಸ್ಯದ ದೃಢೀಕರಣ ಸಮಿತಿ!
ಇಂಥ ಧರ್ಮಾಧಿಕಾರಿಗಳಿಂದ
ಧರ್ಮವನ್ನು ರಕ್ಷಿಸಾ
ಸ್ವತಂತ್ರಧೀರ ಸಿದ್ಧೇಶ್ವರ!

## ೭೧

ಹೂವು ಚೆಲ್ಲಿದ ಹಾದಿಯಲ್ಲಿಯೇ
ಮುಳ್ಳು ಹಾಸುವವರ ಕಂಡೆ;
ಹಾಲು ತುಂಬಿದ ಹರವಿಯಲ್ಲಿಯೇ
ನಂಜು ಬೆರೆಸುವವರ ಕಂಡೆ;
ಊರಿಗೆ ನೀರು ಕೊಡುವ ಕೆರೆಗೇ
ಹೊಲಸು ಹರಿಸುವವರ ಕಂಡೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಕೆಡಿಸುವವರನ್ನು ಬಿಡಿಸುವವರೇ ಇಲ್ಲವೆ?
ನೀನೂ ಇಲ್ಲವೆ?

## ೭೨

ಸ್ವಾರ್ಥವನ್ನು ಸಮರ್ಥಿಸುವ ಸಿದ್ಧಾಂತಗಳಿಗೆ ಧಿಕ್ಕಾರ,
ಮೇಲು ಕೀಳುಗಳನ್ನು ಎತ್ತಿ ಹಿಡಿವ ಹಸ್ತಗಳಿಗೆ ಧಿಕ್ಕಾರ,
ಶೋಷಣೆಯನ್ನು ಸ್ಥಿರೀಕರಿಸುವ ವ್ಯವಸ್ಥೆಗಳಿಗೆ ಧಿಕ್ಕಾರ,
ಸುಲಿಗೆಯೇ ಉಸಿರಾಗುವ ಸರಕಾರಗಳಿಗೆ ಧಿಕ್ಕಾರ,
ಜಾತಿ ವ್ಯವಸ್ಥೆಯನ್ನು ಬೆಂಬಲಿಸುವ ಧರ್ಮಗುರುಗಳಿಗೆ ಧಿಕ್ಕಾರ,
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಹೆಸರಿನಲ್ಲಿ ಅನ್ಯಾಯಗಳ ಗೈವ ಆಸ್ತಿಕರಿಗೆ ಧಿಕ್ಕಾರ!

## ೭೩

ಅನುಭವಿಸಿದ್ದನ್ನೆಲ್ಲ ಅರ್ಥವಿಸಲಾಗುವುದೆ, ಅಯ್ಯ?
ಅರ್ಥವಿಸಿದ್ದನ್ನೆಲ್ಲ ಅಭಿವ್ಯಕ್ತಿಸಲಾಗುವುದೆ, ಅಯ್ಯ?
ಅಭಿವ್ಯಕ್ತಿಸಿದ್ದನ್ನೆಲ್ಲ ಆಚರಿಸಲಾಗುವುದೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಅನುಭವಗಮ್ಯನೆನ್ನುತ್ತಾರೆ ನಿನ್ನನ್ನು
ನಿನ್ನ ಅನುಭವಕ್ಕೆ ನನ್ನ ಆಚಾರಕ್ಕೆ ಎಷ್ಟುದೂರ!

## ೭೪

ಜೀವನವ ಗೌರವಿಸು, ಜೀವಿಗಳ ಪ್ರೀತಿಸು,
ಕಾಯಕವನಾಚರಿಸು, ದಾಸೋಹವನು ನಡೆಸು,
ಒಳ್ಳೆಯದನೇ ಆಡು, ಒಳ್ಳೆಯದನೇ ಮಾಡು,
ದುಃಖಿಗಳ ಸಂತೈಸು, ರೋಗಿಗಳ ಉಪಚರಿಸು
ನಾಡನ್ನು ಸೇವಿಸು, ನುಡಿಯನ್ನು ವರ್ಧಿಸು,
ದುಡಿವವರ ಮನ್ನಿಸು, ಬಡವರನು ಆಧರಿಸು,
ಸತ್ಯವನು ಎತ್ತಿಹಿಡಿ, ಸಕಲಹಿತ ಪಥವ ಹಿಡಿ–
ಜೀವನವ ಸಾಗಿಸೈ ನೀನೀ ತೆರ
ಮೆಚ್ಚುವಂತೆ ಸ್ವತಂತ್ರಧೀರ ಸಿದ್ಧೇಶ್ವರ!

## ೭೫

ನಿನಗೆ ನಾಮ ರೂಪಗಳು ಬೇಡವಾಗಿರಬಹುದು-
ನಮಗೆ ಬೇಕಲ್ಲ ತಂದೆ.
ನೋಡಲೊಂದು ರೂಪಬೇಕು,
ನೆನೆಯಲೊಂದು ನಾಮಬೇಕು!
ಆದರೆ ನಾ ಮುಂದೆ ನೀ ಮುಂದೆಯೆಂದು
ಕೊಟ್ಟುಬಿಟ್ಟೆವು ನಿನಗೆ ಸಾವಿರನಾಮಗಳು
ಸಾವಿರ ರೂಪಗಳನ್ನು!
ನಾವು ಕೊಟ್ಟ ನಾಮರೂಪಗಳೇ ಸರಿ
ಎಂದು ನಾವು ಕಚ್ಚಾಡುತ್ತಿರುವುದನ್ನು ಕಂಡು
ಗಹಗಹಿಸಿ ನಗುತ್ತಿಹೆಯೇನಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ?

## ೭೬

ವಿಚಾರ ಜಡ್ಡುಗಟ್ಟಿ ರೂಢಿಯಾಗುತ್ತದೆ;
ಧರ್ಮ ಜಡ್ಡುಗಟ್ಟಿ ಅಂಧವಿಶ್ವಾಸವಾಗುತ್ತದೆ;
ಸಾಕ್ಷರತೆ ಹದ ತಪ್ಪಿ ರಾಕ್ಷಸತೆಯಾಗುತ್ತದೆ;
ಸಮಾಜ ಹಳಿ ತಪ್ಪಿ ಸಮಜವಾಗುತ್ತದೆ;
ಸರಕಾರ ಕೆಟ್ಟರೆ ದನುಜವಾಗುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಅಧ್ಯಾತ್ಮ ಹಾದಿ ತಪ್ಪಿ ದುರುಳ ವೇದಾಂತವಾಗುತ್ತದೆ.

## ೭೭

ಕಣ್ಣೀರು ಬರಿಸುವವರೇ
ಕಣ್ಣೊರೆಸುವ ನಾಟಕವಾಡುತ್ತಾರೆ;
ಬೆನ್ನಿಗೆ ಚೂರಿ ಹಾಕುವವರೇ
ಬೆನ್ನು ತಟ್ಟುವ ನಾಟಕವಾಡುತ್ತಾರೆ.

ಎಷ್ಟೊಂದು ಕಪಟ ನಾಟಕಗಳು ನಿನ್ನ ಸೃಷ್ಟಿಯಲ್ಲಿ?
ಈ ಕಪಟ ನಾಟಕಗಳ ನಡುವೆಯೂ
ನಿಜ ನಾಟಕ ಬದುಕಿರುವುದೇ ಚೋದ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೭೮

ತೆಂಬೆಲರಾಗಿ ಬಂದು ಚುಂಬಿಸಿದರೆ ಸಾಕೆ?
ತೊರೆಯಲೆಯಾಗಿ ಬಂದು ಆಲಂಗಿಸಿದರೆ ಸಾಕೆ?
ಆಲಿಂಗನ ಚುಂಬನಗಳ ಗುರಿ ಅನಂಗಸಂಗ
ನನ್ನ ಭಕ್ತಿಯ ಗುರಿ ಲಿಂಗಸಂಗ, ನಿನ್ನ ಸಂಗ
ಸ್ವತಂತ್ರಧೀರ ಸಿದ್ಧೇಶ್ವರಾ.

೭೯

ಕುಂದಣವ ಕೊಂಡವ ಉಂಗುರ ಮಾಡಿಸಲೇಬೇಕು
ಅದನ್ನು ಬಳಸಲು;
ಕಂದನನ್ನು ಪಡೆದವ ತೊಟ್ಟಿಲ ಕಟ್ಟಲೇಬೇಕು
ಅದನ್ನು ಬೆಳೆಸಲು;
ಮನುಷ್ಯ ಜನ್ಮವನ್ನು ಪಡೆದವ ಸುಖ ದುಃಖಗಳ ಅನುಭವಿಸಲೇಬೇಕು
ಅದನ್ನು ಕಳಿಸಲು;
ಸ್ವತಂತ್ರಧೀರ ಸಿದ್ಧೇಶ್ವರನ ಸ್ವೀಕರಿಸಿದವ ಸರ್ವಜೀವ-
ದಯಾಪಾರಿಯಾಗಿರಬೇಕು
ಅವನನ್ನು ಒಲಿಸಲು

೮೦

ಬಾಲರವಿಯ ಬಂಗಾರ ಕಿರಣಗಳು
ಹಿಮಶೃಂಗಗಳ ಆಲಿಂಗಿಸುವಲ್ಲಿ ನಿನ್ನ ಕಂಡೆ;
ತಪ್ಪಲಿನ ದೇವದಾರು ದ್ರುಮಗಳ

ಮೋಡಗಳು ಮುತ್ತಿಡುವಲ್ಲಿ ನಿನ್ನ ಕಂಡೆ;
ಎಳೆ ಹುಲ್ಲಿನ ಉಯ್ಯಾಲೆಯಲ್ಲಿ ಇಬ್ಬನಿಗಳನ್ನು
ಸುಳಿಗಾಳಿ ತೂಗುವಲ್ಲಿ ನಿನ್ನ ಕಂಡೆ;
ಕಿಟಕಿಯಿಂದ ನುಸುಳಿ ಬೆಳ್ದಿಂಗಳು
ಹಸುಗೂಸಿನ ಹಾಲಗೆನ್ನೆ ಸವರುವಲ್ಲಿ ನಿನ್ನ ಕಂಡೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನೋಡಲಿಲ್ಲವೆಂಬ ವ್ಯಥೆ ಕಾಡುತ್ತಿಲ್ಲ ಈಗ!

## ೮೧

ಹೊಲಸು ಸ್ವೀಕರಿಸುವ ಕಕ್ಕಸ
ಸ್ವಚ್ಛವಿದ್ದಷ್ಟೂ ಲೇಸು;
ಅನ್ನ ಅಡಗು ಸ್ವೀಕರಿಸುವ ಉದರ
ಸ್ವಚ್ಛವಿದ್ದಷ್ಟೂ ಲೇಸು;
ಭ್ರೂಣ ಸ್ವೀಕರಿಸುವ ಗರ್ಭಕೋಶ
ಸ್ವಚ್ಛವಿದ್ದಷ್ಟೂ ಲೇಸು;
ವಿದ್ಯೆ ಸ್ವೀಕರಿಸುವ ವಿದ್ಯಾರ್ಥಿ
ಸ್ವಚ್ಛವಿದ್ದಷ್ಟೂ ಲೇಸು;
ಸ್ವತಂತ್ರಧೀರ ಸಿದ್ಧೇಶ್ವರನ ಮಕ್ಕಳನ್ನಾಳುವ ಸರಕಾರ
ಸ್ವಚ್ಛವಿದ್ದಷ್ಟೂ ಲೇಸು!

## ೮೨

ನಾನು ನಿನ್ನ ಮಮತೆಯ ಬಾಳ
ಜೀತದಾಳು ಅಲ್ಲವಯ್ಯ
ನಿನ್ನ ವಿಶ್ವಯೋಜನೆಯ ಅಂಗ
ಬತ್ತಿದ ಕೆರೆಯ ತರಂಗವಲ್ಲವಯ್ಯ.
ನನ್ನ ನೀ ಕಡೆಗಣಿಸಿದರೆ
ನಿನ್ನ ನೀ ಕಡೆಗಣಿಸಿಕೊಂಡಂತೆ
ಸ್ವತಂತ್ರಧೀರ ಸಿದ್ಧೇಶ್ವರ!

೮೩

ಪಶು ಪಕ್ಷಿಗಳೆ,
ನೀವೆಷ್ಟು ಭಾಗ್ಯವಂತರು;
ನಿಮಗೆ ಬಾಲಸಂಗೋಪನ ಸಮಸ್ಯೆಯಿಲ್ಲ;
ಮಕ್ಕಳಿಗೆ ಶಾಲೆ ಕಾಲೇಜುಗಳಲ್ಲಿ ಪ್ರವೇಶ ಪಡೆವ ಸಂಕಷ್ಟವಿಲ್ಲ;
ಅವರಿಗಾಗಿ ವಧೂವರರನ್ನು ಶೋಧಿಸುವ ಸಂಭ್ರಾಂತಿಯಿಲ್ಲ;
ಬರ ಕೊರತೆಗಳ, ಮೇಲು ಕೀಳುಗಳ,
ಯುದ್ಧ ಶಾಂತಿಗಳ ಸಂತಾಪವಿಲ್ಲ.
ಇವೆಲ್ಲ, ಮಾನವಜನ್ಮವೇ ಶ್ರೇಷ್ಠವೆಂದು ಕೊಚ್ಚಿಕೊಳ್ಳುವ
ಮನುಷ್ಯರಿಗೆ ಮಾತ್ರ ಮೀಸಲೇನಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

೮೪

ಕಡಲು ತನ್ನ ಉಪ್ಪನ್ನು ಕಳೆದುಕೊಂಡರೆ
ಅದನ್ನು ಉಪ್ಪಿಸುವವರಾರಯ್ಯ?
ಭೂಮಿ ತನ್ನ ಮಣ್ಣನ್ನು ಕಳೆದುಕೊಂಡರೆ
ಅದನ್ನು ಮಣ್ಣಿಸುವವರಾರಯ್ಯ?
ಬಯಲು ತನ್ನ ಗಾಳಿಯನ್ನು ಕಳೆದುಕೊಂಡರೆ
ಅದನ್ನು ಗಾಳಿಸುವವರಾರಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಮನುಕುಲವೇ ಮಾನವತ್ವವ ಕಳೆದುಕೊಂಡರೆ
ಅವರ ಮಾನವೀಕರಣ ಮಾಡುವವರಾರಯ್ಯ?

೮೫

ಯಾರಾದರೂ ಕೊರಕಲು ಕೊರೆದುಕೊಡಲೆಂದು
ದಾರಿ ಕಾಯುವುದೆ ಹೊನಲು?
ಯಾರಾದರೂ ಮೆಟ್ಟಿಲ ಕಟ್ಟಿಕೊಡಲೆಂದು

ದಾರಿ ಕಾಯುವುದೇ ಆವಿಯ ಸುಯಿಲು?
ಸ್ವತಂತ್ರಧೀರ ಸಿದ್ಧೇಶ್ವರಾ,
ಯಾರಾದರೂ ಸಾಧನೆಯ ಸನದು ನೀಡಲೆಂದು
ದಾರಿ ಕಾಯುವನೆ ಸಾಧಕ?

## ೮೬

ಅನ್ಯರನ್ನು ಬಾಧಿಸದ ಬಾಳಿಗೆ ಬೆಲೆಯೆಲ್ಲಿ?
ಪರಸ್ಪರ ಪ್ರೀತಿಸದ ದಾಂಪತ್ಯಕ್ಕೆ ಬೆಲೆಯೆಲ್ಲಿ?
ಸೇವೆಯಾಗಿ ಪ್ರಕಟವಾಗದ ಪ್ರೀತಿಗೆ ಬೆಲೆಯೆಲ್ಲಿ?
ಅರ್ತಿನಾಶನ ಮಾಡದ ಅರ್ಥಕ್ಕೆ ಬೆಲೆಯೆಲ್ಲಿ?
ದಯವಿಲ್ಲದ ಧರ್ಮಕ್ಕೆ ಬೆಲೆಯೆಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರಾ,
ಇಲ್ಲಿ ಗೆಲ್ಲಿಸದ ದರ್ಶನಗಳಿಗೆ ಬೆಲೆಯೆಲ್ಲಿ?

## ೮೭

ಹೆಣ್ಣಿನ ಹೆಣ ಕೊಯ್ದ ವೈದ್ಯನ ಕಣ್ಣನ್ನೂ
ಹೆಣ್ಣಿನ ರೂಪ ಸೆಳೆಯುತ್ತದೆ
ಕಂದಮೂಲ ಜೀವಿ ಜಿತೇಂದ್ರಿಯನ ಜಿಹ್ವೆಯನ್ನೂ
ರಾಜಾನ್ನದ ರುಚಿ ಸೆಳೆಯುತ್ತದೆ;
ಹಾಲುಂಡು ವಿಷವೀವ ಹಾವಿನ ಕಿವಿಯನ್ನೂ
ಸಂಗೀತ ಮಾಧುರ್ಯ ಸೆಳೆಯುತ್ತದೆ;
ವನವಾಸಿ ದ್ರೌಪದಿಯ ನಾಸಿಕವನ್ನೂ
ಸೌಗಂಧಿಕಾ ಸುಗಂಧ ಸೆಳೆಯುತ್ತದೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ಪಂಚೇಂದ್ರಿಯಗಳನ್ನು ನಿನ್ನ ಧ್ಯಾನ
ಸೆಳೆದು ನಿಲ್ಲಿಸಲಯ್ಯ!

## ೮೮

ಹಸುಗೂಸುಗಳ ತೊದಲ್ನುಡಿಯ ಮುಂದೆ ಸುಧೆಯೆ?
ಮಕ್ಕಳ ಮಂದಹಾಸದ ಮುಂದೆ ಮಧುವೆ?
ಮಕ್ಕಳ ಆಟಿಕೆಗಳ ಮುಂದೆ ನಿಧಿಯೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಮಕ್ಕಳಿಗೆ ಮಿಗಿಲಾದ ಮಾಣಿಕ್ಯವೆಲ್ಲಿ?

## ೮೯

ಮೂರ್ತೀಕರಣವೊಂದು ದೊಡ್ಡಕಲೆ,
ಆದರೆ ಅದಕ್ಕೂ ದೊಡ್ಡಕಲೆ ಅಮೂರ್ತದ ಮೂರ್ತೀಕರಣ.
ಕಂಡುದ ಚಿತ್ರಿಸುವುದೊಂದು ಗಣ್ಯಕಲೆ,
ಆದರೆ ಅದಕ್ಕೂ ಗಣ್ಯಕಲೆ ಕಾಣದುದ ಚಿತ್ರೀಕರಿಸುವುದು.
ಕಿವಿಗೆ ಇಂಪಾಗುವಂತೆ ಹಾಡುವುದು ಹೃದ್ಯಕಲೆ,
ಆದರೆ ಅದಕ್ಕೂ ಹೃದ್ಯಕಲೆ ಆತ್ಮಕ್ಕೆ ಇಂಪಾಗುವಂತೆ ಹಾಡುವುದು.
ರಂಗದ ಮೇಲೆ ನರ್ತಿಸುವುದು ರಮ್ಯಕಲೆ,
ಆದರೆ ಅಂತರಂಗದ ಮೇಲೆ ನರ್ತಿಸುವುದು ಅದಕ್ಕೂ ರಮ್ಯಕಲೆ.
ಸ್ವತಂತ್ರಧೀರ ಸಿದ್ಧೇಶ್ವರಾ,
ಮೂರ್ತವನ್ನು ಅಮೂರ್ತೀಕರಿಸುವುದು,
ಅಮೂರ್ತವನ್ನು ಮೂರ್ತೀಕರಿಸುವುದು ಕಲೆಗಳಲ್ಲಿ ಕಲೆ.

## ೯೦

ಒಮ್ಮೊಮ್ಮೆ
ಪ್ರಶ್ನೆಯೊಂದಕ್ಕೆ
ಇನ್ನೊಂದು ಪ್ರಶ್ನೆ ಉತ್ತರವಾಗಬಹುದು;
ಮಗುದೊಮ್ಮೆ
ಉತ್ತರವೇ
ಮತ್ತೊಂದು ಪ್ರಶ್ನೆಯಾಗಿ ಪರಿಣಮಿಸಬಹುದು;

ಒಮ್ಮೊಮ್ಮೆ
ಸಂಶಯವೇ
ಸುನಿಶ್ಚಿತತೆಯೇ ದಾರಿ ತೋರಬಹುದು;
ಮಗುದೊಮ್ಮೆ
ಸುನಿಶ್ಚಿತತೆಯೇ
ಸಂಶಯವಾಗಿ ಸುಳಿದೆಗೆಯಬಹುದು.
ಸ್ವತಂತ್ರಧೀರ ಸಿದ್ಧೇಶ್ವರಾ
ಹಲವರ ಸ್ವೀಕರಣ ನಿನ್ನ ನಿರಾಕರಣವಾಗಿ ಹೊಮ್ಮಬಹುದು
ಕೆಲವರ ನಿರಾಕರಣ ನಿನ್ನ ಸ್ವೀಕರಣವಾಗಿ ಚಿಮ್ಮಬಹುದು.

೯೧

ವ್ಯಭಿಚಾರಗಳಲ್ಲಿ ಬೌದ್ಧಿಕ ವ್ಯಭಿಚಾರ ಹೇಯವಾದುದು;
ಗೊಂದಲಗಳಲ್ಲಿ ವೈಚಾರಿಕ ಗೊಂದಲ ಅಪಾಯಕಾರಿ,
ಮುಖವಾಡಗಳಲ್ಲಿ ಪವಾಡದ ಮುಖವಾಡ ಭಯಕಾರಿ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರಾ!

೯೨

ಸುವರ್ಣವೃಷ್ಟಿಯ ಕತೆ ಕೇಳಿದ್ದೆವು
ಈಗ ಆಮ್ಲವೃಷ್ಟಿಯ ಸುದ್ದಿ ಓದುತ್ತಿಹೆವಯ್ಯ;
ಗಂಗಾವತರಣದ ಕತೆ ಕೇಳಿದ್ದೆವು,
ಈಗ ಆಧ್ಯಾತ್ಮೀಕರಣದ ಸುದ್ದಿ ಓದುತ್ತಲಿಹೆನಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ಒಬ್ಬ ಕುಂಭಕರ್ಣನ ನಿದ್ರೆಯ ಕತೆ ಕೇಳಿದ್ದೆವು
ಈಗ ಸಮಗ್ರ ಸಮೂಹಗಳ ನಿದ್ದೆಯನ್ನು ನೋಡುತ್ತಿಹೆನಯ್ಯ!

೯೩

ನಾನಾರೆಂದು ನನಗೆ ನಾನೇ ಕೇಳಿಕೊಂಡೆ
ಆ ಕೇಳಿಕೆಯ ಮಧ್ಯದಿಂದಲೇ ಎದ್ದು ನಿಂತೆ
ಕಂಡೂ ಕಾಣದಂತೆ,
ಕಾಣದೆಯೂ ಕಂಡಂತೆ!
ಅಂದಿನಿಂದ ಇಂದಿನವರೆಗೆ
ಅದೇ ಕಣ್ಣುಮುಚ್ಚಾಲೆ,
ನೆಳಲು ಬೆಳಕುಗಳ ಉಯ್ಯಾಲೆ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸಿಕ್ಕ ಸಿಕ್ಕೆನೆಂದು ದಿಕ್ಕುಗೆಡಿಸದಿರಯ್ಯ
ಒಳ ಹೊರಗನ್ನು ವ್ಯಾಪಿಸಯ್ಯ!

೯೪

ಈ ಬೆಳ್ಳಿತೆರೆಯ ಮೇಲೆ
ತೋರುವುವೆಲ್ಲ ಬರಿ ನೆರಳುಗಳು
ಆದರೆ ಅವುಗಳನ್ನು ಕೊಟ್ಟವರು ನಿಜವಾದವರು!
ತಿರೆಯೆಲ್ಲ ಬರಿ ನೆರಳೆನ್ನುವವನೆ,
ಈ ನೆರಳ ಹಿಂದಿನ ನಿಜವನ್ನರಿ!
ನಿಜವಿಲ್ಲದೆ ನೆರಳಿಲ್ಲವೆಂದಾತ
ಸ್ವತಂತ್ರಧೀರ ಸಿದ್ಧೇಶ್ವರ.

೯೫

ಯಾರನ್ನೂ ಪ್ರೀತಿಸಿದವನೂ
ತನ್ನನ್ನಂತೂ ಖಂಡಿತ ಪ್ರೀತಿಸುತ್ತಾನೆ;
ಅನ್ಯರ ಸ್ವಾತಂತ್ರ್ಯಹರಣ ಬಯಸದವನೂ
ತನ್ನ ಸ್ವಾತಂತ್ರ್ಯವನ್ನಂತೂ ಖಂಡಿತ ಬಯಸುತ್ತಾನೆ;
ಪರಸ್ತ್ರೀ ಪರಧನಗಳ ಆಶಿಸುವವನೂ

ಸ್ವಸ್ತ್ರೀ ಸ್ವಶ್ರೀಗಳ ರಕ್ಷಿಸಿಕೊಳ್ಳುತ್ತಾನೆ;
ತನ್ನಂತೆ ಪರರ ಬಗೆಯುವವರೆಷ್ಟು ಜನ
ಸ್ವತಂತ್ರಧೀರ ಸಿದ್ಧೇಶ್ವರ?

೯೬

ಆಕಾಶದ ಅದ್ಭುತಗಳೂ ಅದ್ಭುತಗಳೇ,
ವಿಜ್ಞಾನ ತಂತ್ರಜ್ಞಾನಗಳ ಅದ್ಭುತಗಳೂ ಅದ್ಭುತಗಳೆ.
ಆದರೆ ನಮ್ಮ ಹಳ್ಳಿಗಳಲ್ಲಿ ಏನೇನೂ ಇಲ್ಲದವರು
ಬದುಕಿರುವುದು ಮಾತ್ರ
ಅದ್ಭುತಗಳಲ್ಲಿ ಅದ್ಭುತವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

೯೭

ಯಾವುದರಲ್ಲೂ ವಿಶ್ವಾಸವಿಲ್ಲದವನ
ಆತ್ಮವಿಶ್ವಾಸಕ್ಕೆ ಆವ ಅರ್ಥವಯ್ಯ?
ಏನನ್ನೂ ಮಾಡದ ಪಂಡಿತನ ಪಾಂಡಿತ್ಯಕ್ಕೆ
ಅದಾವ ಸಾರ್ಥಕತೆಯಯ್ಯ?
ಮನೆಯವರನ್ನೇ ಪ್ರೀತಿಸದವನ
ವಿಶ್ವಕುಟುಂಬಿತ್ವಕ್ಕೆ ಯಾವ ಬೆಲೆಯಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಆರಿಸಿ ಬರುತ್ತಲೇ ರಾಜಧಾನಿಯಲ್ಲಿ ಮನೆ ಕಟ್ಟುವ
ಶಾಸಕನ ಗ್ರಾಮಪ್ರೇಮಕ್ಕೆ ಅದಾವ ಮೌಲ್ಯವಯ್ಯ?

೯೮

ಎಲ್ಲ ದ್ರೋಹಗಳಲ್ಲಿ ದೇಶದ್ರೋಹ ಘೋರವಾದುದು;
ಎಲ್ಲ ವಂಚನೆಗಳಲ್ಲಿ ಆತ್ಮವಂಚನೆ ಅಪಾಯಕಾರಿಯಾದುದು
ಸಹಕಾರಗಳಲ್ಲಿ ಶೋಷಣೆಗೆ ಸಹಕಾರ ನಿಂದ್ಯ

ಸ್ವೈರಣೆಗಳಲ್ಲಿ ಅಸ್ಪೃಶ್ಯತೆಯ ಸ್ವೈರಣೆ ಹೇಯ;
        ಸ್ವತಂತ್ರಧೀರ ಸಿದ್ಧೇಶ್ವರಾ,
ಸಹನೆಗಳಲ್ಲಿ ಅನ್ಯಾಯದ ಸಹನೆ ಅಸಹ್ಯ!

## ೯೯

ಉಳ್ಳವರ ಇಲ್ಲದವರ ನಡುವಣ ಅಂತರ
        ಇಲ್ಲವಾಗದಿದ್ದರೂ ತೆಳ್ಳಗಾಗಲಯ್ಯ;
ಸಂಸ್ಕೃತಿಯು ಉಳ್ಳವರ ಸರಕಾಗದೆ
        ಶ್ರೀಸಾಮಾನ್ಯರ ಸುರುಕಾಗಲಯ್ಯ;
ಉಳ್ಳವರಿಗೆ ಎಲ್ಲ ಕಾಲವೂ ವಿರಾಮಕಾಲ,
        ಇಲ್ಲದವರಿಗೆ ಸಾಯಂಕಾಲವಾದರೂ ವಿಶ್ರಾಮಕಾಲವಾಗಲಯ್ಯಾ;
ಸ್ವತಂತ್ರಧೀರ ಸಿದ್ಧೇಶ್ವರಾ,
        ಉಳ್ಳವರಿಗೆ ಗರಿಷ್ಠ ಸೌಕರ್ಯಗಳು,
ಇಲ್ಲದವರಿಗೆ ಕನಿಷ್ಠ ಸೌಕರ್ಯಗಳಾದರೂ ದೊರೆಯಲಯ್ಯ!

## ೧೦೦

ನಿನ್ನ ವಚನಗಳನ್ನು ಓದುವಾಗ
ಅಣ್ಣನಂತೆ ಎದುರಿಗೆ ಕುಳಿತು
ನೀನೇ ಮಾತಾಡಿದಂತೆನಿಸುತ್ತದೆ, ಬಸವಣ್ಣ!
ಏನನ್ನೂ ಮುಚ್ಚಿಟ್ಟುಕೊಳ್ಳದೆ, ಬಚ್ಚಿಟ್ಟುಕೊಳ್ಳದೆ,
ಬಿಚ್ಚಿಡುತ್ತ ಹೋಗುವ ನಿನ್ನ ಬಗ್ಗೆ
ವಿಸ್ಮಯ, ಅಭಿಮಾನ, ಆದರ, ಭಕ್ತಿಗಳು ಉಕ್ಕುತ್ತವೆ
ಬಗೆಯ ಭೂಮಿಯ ಬುಗ್ಗೆಗಳಾಗಿ,
ಕತ್ತಲೆಗೆ ಬೆಳಕಿನ ಲಗ್ಗೆಗಳಾಗಿ!
ಎಂಥ ಸ್ಫಟಿಕ ಸನ್ನಿಭ ಪಾರದರ್ಶಕತೆ ನಿನ್ನದು
ನನಗೆ ನೀನು ಬೇರಲ್ಲ ಸ್ವತಂತ್ರಧೀರ ಸಿದ್ಧೇಶ್ವರ ಬೇರಲ್ಲ!

## ೧೦೧

ಅಮೇರಿಕಾ ಹುಡುಕಿದವನಿಗೇ ಸಿಕ್ಕಿತೆ?
ಕೋಹಿನೂರು ಹುಡುಕಿದವನಿಗೇ ದಕ್ಕಿತೆ?
        ಹುಡುಕುವವನೊಬ್ಬ
        ಪಡೆದುಕೊಳ್ಳುವವನು ಬೇರೊಬ್ಬ!
ಏನಿದರ ಗುಟ್ಟು, ಸ್ವತಂತ್ರಧೀರ ಸಿದ್ಧೇಶ್ವರ?

## ೧೦೨

ನಿಜವಾದ ಮುತ್ತು ಥಳಥಳಿಸುವುದಿಲ್ಲ;
ನಿಜವಾದ ಸುಂದರ ಮುಖ ಫಳಫಳಿಸುವುದಿಲ್ಲ;
ನಿಜವಾದ ನೀಲಮಣಿ ಝುಗಝುಗಿಸುವುದಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತ ಧಗಧಗಿಸುವುದಿಲ್ಲ.

## ೧೦೩

ವಿಜ್ಞಾನಕ್ಕೆ ಶಾಖೆಗಳು, ತತ್ತ್ವಜ್ಞಾನಕ್ಕೆ ಶಾಖೆಗಳು.
ಧರ್ಮಕ್ಕೆ ಶಾಖೆಗಳು, ದರ್ಶನ  ಶಾಖೆಗಳು!
ಈ ಶಾಖೆಗಳನ್ನಾಶ್ರಯಿಸಿದವ
ಬೊಡ್ಡೆಯನ್ನೇ ಮರೆತ - ಸ್ವತಂತ್ರಧೀರ ಸಿದ್ಧೇಶ್ವರಾ.

## ೧೦೪

ನಿನ್ನ ಅಂತರಂಗದಲ್ಲಿಯೂ
  ಅಜಂತೆಯ ಚಿತ್ರಗಳಿವೆ-
                ಹುಡುಕಿಕೋ;
ನಿನ್ನ ಮಾನಸದಲ್ಲಿಯೂ
  ಲುರೇ ಗುಹೆಯ ವಿಚಿತ್ರಗಳಿವೆ-
                ಶೋಧಿಸಿಕೋ;

ನಿನ್ನ ಸುಪ್ತ ಚೇತನದಲ್ಲಿ
ಅಮೃತಪುತ್ರರ ಪತ್ರಗಳಿವೆ–
ಆರಿಸಿಕೋ;
ನಿನ್ನ ಮನದ ಕೊನೆಯಲ್ಲಿಯೇ
ಸ್ವತಂತ್ರಧೀರ ಸಿದ್ಧೇಶ್ವರನಿದ್ದಾನೆ–
ಆರಿಸಿಕೋ!

## ೧೦೫

ಸಮೀಪದ ನೆನಪುಗಳಿಗಿಂತ
ದೂರದ ನೆನಪುಗಳು
ಕಡಿಮೆ ರೋಚಕವೇನಲ್ಲ;
ಈಚಿನ ರಚನೆಗಳಿಗಿಂತ
ಪ್ರಾಚೀನ ರಚನೆಗಳು
ಕಡಿಮೆ ಉದ್ಬೋಧಕವೇನಲ್ಲ;
ನೂತನ ಶರಣರಿಗಿಂತ
ಪ್ರಾಕ್ತನ ಶರಣರು
ಕಡಿಮೆ ಪ್ರಸ್ತುತರೇನಲ್ಲ;
ಸ್ವತಂತ್ರಧೀರ ಸಿದ್ಧೇಶ್ವರಾ,
ವರ್ತಮಾನದ ಉಪಲಬ್ಧಿಗಳಿಗಿಂತ
ಭೂತದ ಸಾಧನೆ ಸಿದ್ಧಿ
ಕಡಿಮೆ ಪ್ರಯೋಜಕವೇನಲ್ಲ.

## ೧೦೬

`Cognito ergo sum'
'ಯುರೇಕಾ ಯುರೇಕಾ' ಎಂದು ಒಮ್ಮೆಯೂ ಉದ್ಗರಿಸದಾದೆ;
'ಕಾಗ್ನಿಟೋ ಎರ್ಗೋಸಂ' ಎಂದು ಒಮ್ಮೆಯೂ ಉದ್ಘೋಷಿಸದಾದೆ;
'ಸರ್ವಭೂತಾನಿಜಾತ್ಮನಿ' ಎಂದು ಒಮ್ಮೆಯೂ ಸಾರದಾದೆ;
ಸ್ವತಂತ್ರಧೀರ ಸಿದ್ಧೇಶ್ವರನ ನಿಜಭಕ್ತನೆಂದು ಒಮ್ಮೆಯೂ ತೋರದಾದೆ!

## ೧೦೭

ನನ್ನ ತಾಯಿ ಭೂಮಾತೆಯೆ,
 ನನ್ನ ತಂದೆ ಸೂರ್ಯದೇವನೆ,
  ನೀವಿಬ್ಬರೂ ಅಂಗಸಂಗ ಮಾಡದೆ,
   ಹುಟ್ಟಿಸಿದಿರಿ ನನ್ನನ್ನು!
    ಕಿರಣಸಂಗದಿಂದಾದ ಈ ಅಂಗ
    ಸ್ವತಂತ್ರಧೀರ ಸಿದ್ಧೇಶ್ವರನ ಕರುಣೆಯಿಂದ ಲಿಂಗವಾಗಲೆಂಬೆ!

## ೧೦೮

ಕಾಯಕ ಮಾಡದೆ ತಿನ್ನುವವರೂ ಕಳ್ಳರು;
    ಸತ್ಯ ನುಡಿಯಲು ಹಿಂಜರಿಯುವವರೂ ಸುಳ್ಳರು;
ಕೊಡುವ ಶಕ್ತಿಯದ್ದೂ ಬೇಡುವವರು ಕುಳ್ಳರು;
ತಿಳಿದೂ ತಿಳಿದೂ ತಪ್ಪು ಮಾಡುವವರು ಮಳ್ಳರು;
ಒಳ್ಳೆಯದ ಮಾಡಬಲ್ಲವರಾಗಿದ್ದೂ ಕೆಟ್ಟದನ್ನು
            ಮಾಡುವವರು ಖುಲ್ಲರು;
ಅನ್ಯರ ತುತ್ತನ್ನು ಕಸಿದು ತಿನ್ನುವವರು ಹೊಲ್ಲರು;
        ಸ್ವತಂತ್ರಧೀರ ಸಿದ್ಧೇಶ್ವರಾ!

## ೧೦೯

ಯಾವುದರಲ್ಲಿಯೂ ವಿಶ್ವಾಸವಿಲ್ಲದವನ
    ಆತ್ಮವಿಶ್ವಾಸಕ್ಕೆ ಅದಾವ ಅರ್ಥವಯ್ಯ?
ಏನನ್ನೂ ಮಾಡದ ಪಂಡಿತನ ಪಾಂಡಿತ್ಯಕ್ಕೆ
    ಅದಾವ ಸಾರ್ಥಕತೆಯಯ್ಯ?
ಮನೆಯವರನ್ನೇ ಪ್ರೀತಿಸದವನ
    ವಿಶ್ವ ಕುಟುಂಬ ಘೋಷಣೆಗೆ ಅದಾವ ಬೆಲೆಯಯ್ಯ?
    ಸ್ವತಂತ್ರಧೀರ ಸಿದ್ಧೇಶ್ವರಾ,
ಆರಿಸಿ ಬರುತ್ತಲೇ ರಾಜಧಾನಿಯಲ್ಲಿ ಮನೆಕಟ್ಟುವ
    ಶಾಸಕನ ಗ್ರಾಮಪ್ರೇಮಕ್ಕೆ ಅದಾವ ಮೌಲ್ಯವಯ್ಯ?

## ೧೧೦

ಬುಲೆಟ್ ರಾಕೆಟ್ಟುಗಳು ಮಾತ್ರ ಬೇಕೆ?
ಲೇಖನಿ, ಕುಂಚ, ಗೆಜ್ಜೆ, ಉಳಿಗಳು ಬೇಡವೆ?
ದೈತ್ಯ ಯಂತ್ರಗಳು ಮಾತ್ರ ಬೇಕೆ?
ರಂಟೆ, ರಾಟೆ, ಮಗ್ಗ, ಗಾಣಗಳು ಬೇಡವೆ?
ಪಂಚತಾರಾ ಹೋಟೆಲುಗಳು ಮಾತ್ರ ಬೇಕೆ?
ಊರೂರಿಗೆ ದಾಸೋಹ ಮನೆಗಳು ಬೇಡವೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನಗೆ ಗುಡಿ ಕಟ್ಟಿಸುವವರು ಮಾತ್ರ ಬೇಕೆ?
ಗುಡಿಸಲಿಗೂ ಗತಿಯಿಲ್ಲದವರು ಬೇಡವೆ?

## ೧೧೧

ಅಮಾವಾಸ್ಯೆಯ ಉದರದಲ್ಲಿ ಬಿದಿಗೆ ಚಂದ್ರನ ಪೋಷಣೆ;
ನಿಶೆಯ ಬಸಿರಿನಲ್ಲಿ ಉಷೆಯ ಲಾಲನೆ ಪಾಲನೆ;
ಮಾಗಿಯ ಹೊಟ್ಟೆಯಲ್ಲಿ ಸುಗ್ಗಿಯ ಸಂಗೋಪನೆ;
ಶೂನ್ಯದ ಗರ್ಭದಲ್ಲಿ ಸೃಷ್ಟಿಯ ಸಂಯೋಜನೆ;
ಸ್ವತಂತ್ರಧೀರ ಸಿದ್ಧೇಶ್ವರನ ಕುಕ್ಷಿಯಲ್ಲಿ
ಲಕ್ಷ ಲಕ್ಷ ಲಕ್ಷ ಜ್ಯೋತಿರ್ಲೋಕಗಳ ಸಂಭ್ರಮವೊ.

## ೧೧೨

ಬೇಡುವುದು ಬೆಳಕನ್ನು,
ಬೆಂಬತ್ತಿರುವುದು ಕತ್ತಲೆಯನ್ನು,
ಬಯಸುವುದು ಒಲವನ್ನು,
ಅವಲಂಬಿಸಿರುವುದು ಕೊಲೆಯನ್ನು
ಗುರಿ ಸರ್ವೋದಯದ್ದು,
ದಾರಿ ಗರ್ವೋದಯದ್ದು;
ಸ್ವತಂತ್ರಧೀರ ಸಿದ್ಧೇಶ್ವರ,
ಕೈ ನಿನ್ನ ಅರ್ಚನೆಯಲ್ಲಿ
ಮನ ಸ್ವಾರ್ಥ ಚಿಂತನೆಯಲ್ಲಿ!

೧೧೩

ಹೂವಿನ ಕೋಮಲತೆ
ಇಬ್ಬನಿಯ ನಿರ್ಮಲತೆ
ಜೇನಿನ ಮಧುರತೆ
ನಿಸರ್ಗದ ಸುಂದರತೆ
ಹಿಮಗಿರಿಯ ಬಂಧುರತೆ
ಇವೆಲ್ಲ ಸೇರಿ
ಸ್ವತಂತ್ರಧೀರ ಸಿದ್ಧೇಶ್ವರನ
ನಿಜಭಕ್ತರ ನಡತೆ.

೧೧೪

ಕೃಷ್ಣ ಬಲರಾಮರ ಕೈಗಳಲ್ಲಿದ್ದಾಗಲೂ
ಚಕ್ರ ಹಲಗಳು ಸಹಕರಿಸಲಿಲ್ಲ;
ಈಗ ಉದ್ಯಮಿ ಕೃಷಿಕರ ಕೈಗಳಲ್ಲಿದ್ದು
ಸಹಕರಿಸಿಯಾವೇನಯ್ಯ?
ಸಹಕರಿಸಿದ್ದರೆ
ಆಗ ಹದಿನೆಂಟು ಅಕ್ಷೋಹಿಣೀ ಸೈನ್ಯ ಸಂಹಾರ
ಈಗ ಶೋಷಣೆಯ ರಕ್ಕಸ ವ್ಯವಹಾರ
ತಪ್ಪುತ್ತಿರಲಿಲ್ಲವೆ, ಸ್ವತಂತ್ರಧೀರ ಸಿದ್ಧೇಶ್ವರಾ?

೧೧೫

ಇಲ್ಲದ ಚೆಲುವ ಹುಟ್ಟಿಸಬಲ್ಲುದೆ ಪ್ರಸಾಧನ?
ಇಲ್ಲದುದನ್ನು ಪ್ರಕಟಿಸಬಲ್ಲುದೆ ಸಂಶೋಧನ?
ಇಲ್ಲದುದನ್ನು ಬಿಂಬಿಸಬಲ್ಲುದೆ ಛಾಯಾಗ್ರಹಣ?
ಇಲ್ಲವಾಗಿ ಎಲ್ಲವಾಗಬಲ್ಲನೆ ಸ್ವತಂತ್ರಧೀರ ಸಿದ್ಧೇಶ್ವರ?

## ೧೧೬

ಒಳಗಿನ ಬಾನಿನಲ್ಲಿ
ಬೆಳಕಿನ ಹಂಸ ಹಾರಿದಂತೆನಿಸಿತಲ್ಲ?
ಹೊರಗಿನ ಜೊನ್ನಕ್ಕೆ
ಒಳಗಿನ ಚಕೋರ ಹಾತೊರೆದಂತೆನಿಸಿತಲ್ಲ?
ಬಗೆಯ ಬನದಲ್ಲಿ
ಮಲೆನಾಡಿನ ನವಿಲು ನರ್ತಿಸಿದಂತೆನಿಸಿತಲ್ಲ?
ಸ್ವತಂತ್ರಧೀರ ಸಿದ್ಧೇಶ್ವರಾ,
ಬಹಿರಂಗದ ರಂಗದಲ್ಲಿ
ಅಂತರಂಗ ಅಭಿನಯಿಸಿದಂತೆನಿಸಿತಲ್ಲ?

## ೧೧೭

ಬಡವನೆಂದು ಬೇಯುತ್ತಿಹೆಯಾ?
ನಿನಗಿಂತ ಬಡವರು ಎಷ್ಟಿಲ್ಲ?
ಸಿರಿವಂತನೆಂದು ಬೀಗುತ್ತಿಹೆಯಾ?
ನಿನಗಿಂತ ಸಿರಿವಂತರು ಎಷ್ಟಿಲ್ಲ?
ಬೇನೆಯೆಂದು ಬಿಕ್ಕುತ್ತಿಹೆಯಾ
ನಿನಗಿಂತ ಬೇನಿಗರು ಎಷ್ಟಿಲ್ಲ?
ಬಲವಂತನೆಂದು ಸೊಕ್ಕುತ್ತಿಹೆಯಾ?
ನಿನಗಿಂತ ಬಲವಂತರು ಎಷ್ಟಿಲ್ಲ
ಸ್ವತಂತ್ರಧೀರ ಸಿದ್ಧೇಶ್ವರನ ಸೃಷ್ಟಿಯಲ್ಲಿ?

## ೧೧೮

ವಿಶ್ವವಲ್ಲಕಿಯ ಸ್ವರ ನಾನು
ಯಾರೋ ನುಡಿಸಿದರು ಬಂದು
ಅವಧಿ ತೀರಲು ಹೊರಟೆ
ಎಲ್ಲಿಗೆ?
ವಿಶ್ವಭಿತ್ತಿಯ ಚಿತ್ತ ನಾನು

ಯಾರೋ ಬರೆದರು ಮೂಡಿದೆ,
ಸಾವು ಒರೆಸಲು ಹೊರಟೆ!
ಎಲ್ಲಿಗೆ?
ವಿಶ್ವವನಧಿಯ ಬಿಂದು ನಾನು
ಯಾರೋ ಸಿಡಿಸಲು ಬಂದೆ;
ಸಾವು ಆದಿಯಾಗಿಸಲು ಹೊರಟೆ!
ಎಲ್ಲಿಗೆ!
ಎಲ್ಲಿಂದ, ಎಲ್ಲಿಗೆ ಎಂಬುದ ನೀನೇ ಬಲ್ಲೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೧೯

ಹಗಲು ಧಗೆಯಾದರೂ ಸರಿಯೆ
ರಾತ್ರಿ ಶಿವರಾತ್ರಿಯಾಗಿರಲಿ.
ಪ್ರೇಮ ಪೀಯೂಷ ಪಾತ್ರೆಯಾಗಿರಲಿ,
ಸವಿಗನಸುಗಳ ಯಾತ್ರೆಯಾಗಿರಲಿ,
ಶುಭ ಮಂಗಲ ಗಾತ್ರೆಯಾಗಿರಲಿ,
ಸ್ವತಂತ್ರಧೀರ ಸಿದ್ಧೇಶ್ವರ ಶಶಾಂಕ ನೇತ್ರೆಯಾಗಿರಲಿ!

೧೨೦

ಬೀಡಿನಲ್ಲಿ ತೊಟ್ಟಿಲ ಕಟ್ಟುವರೆಂದು
ಗೂಡಿನಲ್ಲಿ ಕಟ್ಟಲಾದೀತೆ, ಅಯ್ಯ?
ಹಗ್ಗದಿಂದ ಪಶುವ ಕಟ್ಟುವರೆಂದು
ಗಾಳಿಯಿಂದ ಕಟ್ಟಲಾದೀತೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕುರುಹ ಕೊರಳಲ್ಲಿ ಕಟ್ಟುವರೆಂದು
ನಿನ್ನ ಅರುಹ ಕಟ್ಟಲಾದೀತೆ, ಅಯ್ಯ?

## ೧೨೧

ಹೃದಯ ಕೊಟ್ಟವನೂ ನೀನೇ,
ಹೊಟ್ಟೆ ಕೊಟ್ಟವನೂ ನೀನೇ;
ಹೊಟ್ಟೆಯ ಹೋರಾಟದಲ್ಲಿ
ಹೃದಯ ಹಾಳಾಗದಂತೆ ಕರುಣಿಸಯ್ಯ.
ಬುದ್ಧಿ ಕೊಟ್ಟವನೂ ನೀನೇ,
ಶ್ರದ್ಧೆ ಕೊಟ್ಟವನೂ ನೀನೇ;
ಶ್ರದ್ಧೆಯ ನೆರೆ ಬಂದು
ಬುದ್ಧಿಯ ಹೊಲ ಹಾಳಾಗದಂತೆ ಕರುಣಿಸಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೨೨

ನಿಲುಗಡೆಯಿಲ್ಲದ, ಸಂಗತಗೊಳ್ಳದ ಸ್ವಾನುಭವ,
ಒಂದೇ ತೆಕ್ಕೆಗೊಗ್ಗದ ಲೋಕಾನುಭವ,
ಪೂರ್ಣ ಅರ್ಥವಾಗದ ಪೂರ್ವಜರ ಅನುಭವ
ಎಲ್ಲ ಚೌ ಚೌ ಬೆಳಕು!
ಈ ಬೆಳಕಿನಲ್ಲಿಯೇ
ಹೊಸ ಅನುಭವ!
ಪುನರ್ಭವವಲ್ಲ, ಪುನರ್ನವ!
ಇದರಿಂದಲೇ ಬದುಕು ನವೋನವ!
ಸ್ವತಂತ್ರಧೀರ ಸಿದ್ಧೇಶ್ವರಗ್ರೀವೆಗೆ
ಇವೇ ಅನುಭವಗಳ ಮಾಲಾರ್ಪಣ!

## ೧೨೩

ಅಳಿಸುವವರು ಹೇರಳ,
ನಗಿಸುವವರೇ ವಿರಳ;
ಅಲಕ್ಷಿಸುವವರು ಹೇರಳ,
ಲಕ್ಷಿಸುವವರೇ ವಿರಳ;

ಹಂಗಿಸುವವರೇ ಹೇರಳ,
ಉಪಕಾರ ಸ್ಮರಿಸುವವರೇ ವಿರಳ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಾನು ನನ್ನದೆನ್ನುವವರು ಹೇರಳ,
ನೀನು, ನಿನ್ನವೆನ್ನುವವರು ವಿರಳ!

## ೧೨೪

ಬಿದಿರ ಮೆಳೆಗಳನ್ನು ಅಳಿದು
ಕಳಿಲೆ ಉಪ್ಪಿನಕಾಯಿ ಬಯಸುತ್ತಿಹೆಯಾ ಬಂಧು?
ಕೆರೆ ಹೂಳಿ ಕಾಲೊನಿ ಕಟ್ಟಿ
ನೌಕಾವಿಹಾರ ಬಯಸುತ್ತಿಹೆಯಾ, ಬಂಧು?
ಮಡಿ ಹೊಲವ ಸವುಳುಗೊಳಿಸಿ
ಉಮ್ಮಿಗೆ ಬಯಸುತ್ತಿಹೆಯಾ, ಬಂಧು?
ಸ್ವತಂತ್ರಧೀರ ಸಿದ್ಧೇಶ್ವರನೇ ಸುಳ್ಳೆಂದು ಸಾಧಿಸಿ
ಅವನ ಕೃಪೆ ಬಯಸುತ್ತಿಹೆಯಾ, ಬಂಧು?

## ೧೨೫

ಹೊರಗಿನ ಮೃಗಜಲಗಳ ಲೆಕ್ಕವಿರಿಸಬಲ್ಲೆ,
ಒಳಗಿನ ಮೃಗಜಲಗಳ ಲೆಕ್ಕಮಾಡಬಲ್ಲೆಯಾ ಜೀವಿ?
ಹೊರಗಿನ ತಿರುಗಣಿಗಳ ಯಾದಿ ಮಾಡಬಲ್ಲೆ,
ಒಳಗಿನ ಸುಳಿಗಳ ಪಟ್ಟಿ ಮಾಡಬಲ್ಲೆಯಾ, ಜೀವಿ?
ಕೆರೆಯ ತೆರೆಗಳನ್ನು ಎಣಿಸಬಲ್ಲೆ,
ಮನದ ಅಲೆಗಳನ್ನು ಎಣಿಸಬಲ್ಲೆಯಾ, ಜೀವಿ?
ಸ್ವತಂತ್ರಧೀರ ಸಿದ್ಧೇಶ್ವರನ ಅಕೃಪೆಗಳ ಗುಣಿಸಬಲ್ಲೆ,
ಅವನ ಕೃಪೆಗಳ ಎಣಿಸಬಲ್ಲೆಯಾ, ಜೀವಿ?

## ೧೨೬

ಒಂದೆ ಬಳ್ಳಿಯಿಂದ ಉಪವನವಾಗುವುದೆ, ಅಯ್ಯ?
ಒಂದೆ ಇಟ್ಟಿಗೆಯಿಂದ ಕಟ್ಟಡವಾಗುವುದೆ, ಅಯ್ಯ?
ಒಂದೆ ತೆನೆಯಿಂದ ರಾಶಿಯಾಗುವುದೆ, ಅಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ಒಂದೆ ಜಪದಿಂದ ತಪವಾಗುವುದೆ, ಅಯ್ಯ?

## ೧೨೭

ಹೊರಗೆ ಸಾವಿರ ಸಾವಿರ ಮುಖಗಳನ್ನು ನೋಡಿದರೇನು,
ಒಲಿದ ಮುಖ ನೋಡಲು ಕಣ್ಣು ಹಾತೊರೆಯುತ್ತವೆ;
ಹೊರಗೆ ಸಾವಿರ ಸಾವಿರ ಸ್ವರಗಳನ್ನು ಕೇಳಿದರೇನು,
ಒಲಿದ ಸ್ವರ ಕೇಳಲು ಕಿವಿಗಳು ಹಂಬಲಿಸುತ್ತವೆ;
ಹೊರಗೆ ಸಾವಿರ ಸಾವಿರ ತೀರ್ಥ ಪ್ರಸಾದಗಳ ಸೇವಿಸಿದರೇನು,
ಸ್ವತಂತ್ರಧೀರ ಸಿದ್ಧೇಶ್ವರನ ಕರುಣಪ್ರಸಾದಕ್ಕಾಗಿ
ಹೃದಯ ಹಸಿದಿರುತ್ತದೆ!

## ೧೨೮

'ಎಂಜಲು, ಎಂಜಲು' ಎಂದು
ವಟಗುಟ್ಟುವ ಮಹಾರಾಯಾ,
ಎಂಜಲಿಸಬಲ್ಲೆಯಾ ಹೊಳೆಯ ನೀರನ್ನು?
'ಮಡಿ, ಮಡಿ' ಎಂದು
ಬಡಬಡಿಸುವ ಮಹಾರಾಯಾ,
ತಂದು ತೋರಿಸುವಿಯಾ
ಕಪ್ಪೆ ಮೀನು ಕುಡಿಯದ ನೀರನ್ನು?
'ಹೊಲೆ, ಹೊಲೆ' ಎಂದು
ಹಲುಬುವ ಮಹಾರಾಯಾ,
ತಂದು ತೋರುವಿಯಾ ಮಲರಹಿತ ಮೈಯನ್ನು?

ಎಲ್ಲ ಹುಟ್ಟಿಸಿದ ಸ್ವತಂತ್ರಧೀರ ಸಿದ್ಧೇಶ್ವರನೊಬ್ಬನೇ ಇರುವಾಗ
ಹೊಲ್ಲ ಈ ಸೊಲ್ಲುಗಳೆಲ್ಲ! ಅಲ್ಲವೆ?

೧೨೯

'ಆಶೆಯನ್ನು ತೊರೆ, ಆಶೆಯನ್ನು ತೊರೆ'
ಎಂದು ಬೋಧಿಸುತ್ತಿದ್ದರು ಹಿರಿಯರು;
'ನಿರಾಶೆಯನ್ನು ತೊರೆ, ನಿರಾಶೆಯನ್ನು ತೊರೆ'
ಎನ್ನುತ್ತಿದ್ದಾನೆ ಸ್ವತಂತ್ರಧೀರ ಸಿದ್ಧೇಶ್ವರ!

೧೩೦

ಅಗಲಲೆಂದೆ ಕೂಡಿದೆವು
ಕೂಡಲೆಂದೆ ಅಗಲಿದೆವು
ಸ್ವತಂತ್ರಧೀರ ಸಿದ್ಧೇಶ್ವರನೂ ನಾನೂ!

೧೩೧

ಸುಖದ ಸಾಧನಗಳು ಹೆಚ್ಚಿದಂತೆ
ದುಃಖದ ಸಂದರ್ಭಗಳೂ ಹೆಚ್ಚಲೇಬೇಕೆ?
ಜೀವನದಾಯಿನೀ ಔಷಧಗಳು ಹೆಚ್ಚಿದಂತೆ
ಜೀವಹಾರಕ ರೋಗಗಳೂ ಹೆಚ್ಚಲೇಬೇಕೆ?
ಶಿಕ್ಷಣವು ಹೆಚ್ಚಿದಂತೆ
ರಾಕ್ಷಸತೆಯೂ ಹೆಚ್ಚಲೇಬೇಕೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಚಿವರ ಸಂಖ್ಯೆ ಹೆಚ್ಚಿದಂತೆ
ಅವರ ಸಂಬಳ ಭತ್ಯಗಳೂ ಹೆಚ್ಚಲೇಬೇಕೆ?

೧೩೨

ನಕ್ಷತ್ರಗಳ ಈ ಲಕ್ಷ ಲಕ್ಷ ಅಕ್ಷೋಹಿಣೀ ಸೇನೆ
ಯಾವ ಸಮರಕ್ಕಾಗಿ?
ಬಾನ ಬಳ್ಳಿಯ ಈ ಕೋಟಿ ಕುಸುಮಗಳು
ಯಾವ ಭ್ರಮರಕ್ಕಾಗಿ?
ಸ್ವತಂತ್ರಧೀರ ಸಿದ್ಧೇಶ್ವರಾ,
ಸಂಖ್ಯಾ ಶಾಸ್ತ್ರಕ್ಕೆ ಮೂರ್ಛೆ ಬರಿಸುವ ಈ ಅಸಂಖ್ಯಾತ ಸೋಹೆಗಳು
ಯಾವ ಅಕ್ಷಯಾಂಬರಕ್ಕಾಗಿ?

೧೩೩

ಏನೊಂದೂ ಸರಿಯಾಗಿ ಗೊತ್ತಿಲ್ಲದೆ
ಎಷ್ಟೊಂದು ಬರೆದುಬಿಟ್ಟೆ?
ಇವನ್ನೆಲ್ಲ ನಾನೇ ಬರೆದೆನೆ?
ಏಕೆ ಬರೆದೆ?
ಯಾವುದೋ ಶಕ್ತಿ ಬರೆಸಿತೆ?
ಏಕೆ ಬರೆಸಿತು?
ಇಂಥ ಪ್ರಶ್ನೆಗಳಿಗೆ
ನನ್ನ ಹತ್ತಿರ ಉತ್ತರವಿಲ್ಲ;
ಸ್ವತಂತ್ರಧೀರ ಸಿದ್ಧೇಶ್ವರನೇ ಬಲ್ಲ!

೧೩೪

ಬದುಕಿಗೆ ಬದಲಿಯಿಲ್ಲ
ಸಾವಿಗೆ ವಿನಾಯತಿಯಿಲ್ಲ
ದುಃಖ ಸ್ಥಿರವಲ್ಲ
ಸುಖವೂ ಸ್ಥಿರವಲ್ಲ,
ನೆನಪುಗಳು ಕಹಿಯಲ್ಲ,
ಸ್ವತಂತ್ರಧೀರ ಸಿದ್ಧೇಶ್ವರ ಕರುಣಿಸಿದರೆ
ಸಿಹಿಯೇ ಎಲ್ಲ!

## ೧೩೪

ಈ ಹಗಲಿರುಳುಗಳ ಹಾದಿಯಲ್ಲಿ
ಎಂದಿನಿಂದ ನಡೆಯುತ್ತಲಿದ್ದೇನೆ!
ಆದರೂ ಇದ್ದಲ್ಲಿಯೇ ಇದ್ದೇನೆ-
ಗಾಣ ಸುತ್ತಿದ ಕೋಣನಂತೆ!
ಎಣ್ಣೆ ತೆಗೆದ ಧನ್ಯತೆಯಾದರೂ ಇದೆ ಕೋಣಕ್ಕೆ
ನನಗಾವ ಧನ್ಯತೆ ಸ್ವತಂತ್ರಧೀರ ಸಿದ್ಧೇಶ್ವರಾ?

## ೧೩೫

ಮಗನಿಗೆ ಧೈರ್ಯ ಬರಲೆಂದು
ಕತ್ತಲೆ ರಾತ್ರಿಯಲ್ಲಿ ಒಬ್ಬನನ್ನೇ ಕಳಿಸಿ
ಬೆನ್ನ ಹಿಂದೆಯೇ ಬರುವ ತಂದೆಯಂತೆ
ಸ್ವತಂತ್ರಧೀರ ಸಿದ್ಧೇಶ್ವರ.

## ೧೩೬

ಊಟಕ್ಕೆ ಕರೆವ ಮಾತೃಸ್ವರ;
ಕೂಟಕ್ಕೆ ಕರೆವ ಕಳತ್ರಸ್ವರ;
ಆಟಕ್ಕೆ ಕರೆವ ಭ್ರಾತೃಸ್ವರ;
ನೋಟಕ್ಕೆ ಕರೆವ ಮಿತ್ರಸ್ವರ-
ಎಂಥ ಸಂತಸಕರ ಸ್ವರಸಂಗಮ ಈ ಜೀವನ!
ಹಸಿದ ನಂದನ ಕ್ರಂದನಸ್ವರ,
ಪತಿಯಳಿದ ಸತಿಯ ರೋದನಸ್ವರ,
ಮರಣೋನ್ಮುಖ ರೋಗಿಯ ನರಳುವಸ್ವರ,
ಒರಲುವ, ಕೆರಳುವ, ಕನಲುವ ಸ್ವರ-
ಎಂಥ ದಾರುಣ ಸ್ವರಗಳ ಸಂದಣಿ ಈ ಜೀವನ-
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೩೮

ಕತ್ತಲೆ ಮೆತ್ತಗೆ ಬೆಳಕಾಗುವುದನ್ನು
ಬೆಳಕು ಮೆಲ್ಲನೆ ಕತ್ತಲೆಯಾಗುವುದನ್ನು
ಯಾರು ಕಂಡಿಲ್ಲ?
ನೀರು ಆವಿಯಾಗಿ, ಆವಿ ಮೋಡವಾಗಿ,
ಮೋಡ ಮಳೆಯಾಗಿ ಸುರಿಯುವುದನ್ನು
ಯಾರು ಕಂಡಿಲ್ಲ?
ಮಣ್ಣು ಬೆಳೆದು ಅನ್ನವಾಗುವುದನ್ನು
ಅನ್ನ ಅರಗಿ ಮಣ್ಣಾಗುವುದನ್ನು
ಯಾರು ಕಂಡಿಲ್ಲ?
ಸ್ವತಂತ್ರಧೀರ ಸಿದ್ಧೇಶ್ವರ
ಕನಲಿ ರುದ್ರನಾಗುವುದನ್ನು,
ಒಲಿದು ಶಿವನಾಗುವುದನ್ನು
ಕಂಡಿಹರೆ ಎಲ್ಲ?

## ೧೩೯

ನನ್ನೆದೆಯ ಛಾಯಾಗ್ರಾಹಕ ಯಂತ್ರ
ಎಂದಿನಿಂದ ಕ್ಲಿಕ್ಕಿಸುತ್ತಲಿದೆ–
ನಿನ್ನ ಚಿತ್ರವೇ ಮೂದಲಿಲ್ಲವಲ್ಲ!
ಕೊರತೆ ಯಾವುದನಿರಿಸಿ ಕಳಿಸಿಹೆ ಇದನ್ನು?
ಈಗಲಾದರೂ ತಿಳಿಸುವೆಯಾ?
ಸಾಧ್ಯವಿದ್ದರೆ ಸರಿಪಡಿಸಿಕೊಳ್ಳುವೆ
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೪೦

ಈಗಲೇ ಹೋಗದಿರು ನಲ್ಲ–
ನನ್ನ ಬಯಕೆಯ ಏಕ ಅಲ್ಪಾಂಶವೂ ತೀರಿಲ್ಲ!
ನಯನಗಳ ನೀರಡಿಕೆ ಇನ್ನಷ್ಟು ಹೆಚ್ಚಿದೆ;
ಅಧರಗಳ ಮುದ್ದಿನಾಶೆ ಇನ್ನಷ್ಟು ವರ್ಧಿಸಿದೆ;
ಕರ್ಣಗಳ ಕೇಳುವಾಸೆ ಇನ್ನೆಷ್ಟೋ ಬೆಳೆದಿದೆ;
ಅಂಗದ ಆಲಿಂಗನದಾಸೆ ಏನಿತೆನಿತೋ ಘನವಾಗಿದೆ
ಹೋಗದಿರು, ಹೋಗದಿರು
ನಿನ್ನ ಶರಣರಾಣೆ ನಿನಗೆ
ಹೋಗದಿರು, ಹೋಗದಿರು
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೪೧

ಯಾರೋ ಸೋಲುವರೆಂದೇ
ಯಾರೋ ಗೆಲ್ಲುತ್ತಾರೆ
ಯಾರೋ ಬೆಳೆಯುವರೆಂದೇ
ಯಾರೋ ಮೆಲ್ಲುತ್ತಾರೆ
ಸ್ವತಂತ್ರಧೀರ ಸಿದ್ಧೇಶ್ವರ ಕೊಡುವನೆಂದೇ
ಎಲ್ಲರೂ ಪಡೆಯುತ್ತಾರೆ.

## ೧೪೨

ಅರಿಯುವಾಗಿನ ಆನಂದಕ್ಕಿಂತ
ಮರೆಯುವಾಗಿನ ಆನಂದವೇ ಮಿಗಿಲೆ?
ಓದಿದ್ದನ್ನೂ, ನೋಡಿದ್ದನ್ನು
ಕೇಳಿದ್ದನ್ನು, ಹೇಳಿದ್ದನ್ನು ಮರೆತು
ನಿನ್ನ ಹೊರತು
ಬೇರೇನೂ ಬೇಡವೆನ್ನುತ್ತಿಹೆನಯ್ಯ ಸ್ವತಂತ್ರಧೀರ ಸಿದ್ಧೇಶ್ವರ.

## ೧೪೩

ಚೆನ್ನಾಗಿ ಬೆಳೆದು ತೆನೆ ಬಿಟ್ಟಾಗಲೂ ಕುಯ್ಯುವನು
ಮಳೆ ಕಡಿಮೆಯಾಗಿ, ಅರ್ಧಕ್ಕೆ ಬೆಳೆದರೂ ಕುಯ್ಯುವನು
ಬಿತ್ತಿದ ಬೇಸಾಯಗಾರ!
ಮತ್ತೆ ಬಿತ್ತಲು ಕುಯ್ಯಲೇಬೇಕಲ್ಲವೆ!
ಆ ಬೇಸಾಯಗಾರನಂತೆ ಸ್ವತಂತ್ರಧೀರ ಸಿದ್ಧೇಶ್ವರ!

## ೧೪೪

ಈ ಮುನ್ನ ಹೋದವರ ಲೆಕ್ಕವಿಡಬಲ್ಲೆಯಾ?
ಇನ್ನು ಮೇಲೆ ಬರುವವರ ಲೆಕ್ಕ ಮಾಡಬಲ್ಲೆಯಾ?
ಎರಡೂ ಅನೂಹ್ಯ, ಎರಡೂ ಅಗಮ್ಯ.
ಈಗಿರುವವರ ಪ್ರೀತಿಸುವುದೇ ಗುರಿ, ಗಮ್ಯ!
ಸ್ವತಂತ್ರಧೀರ ಸಿದ್ಧೇಶ್ವರನ ಮಕ್ಕಳ
ಪ್ರೀತಿಸಲು ಬೇಕಿಲ್ಲ ಸಿರಿಸಂಪದಗಳ ಸ್ವಾಮ್ಯ!

## ೧೪೫

ಒಲ್ಲದ ಗಂಡನ ವಲ್ಲಭೆಯೆಂದು
ಗೇಲಿ ಮಾಡುತ್ತಿದ್ದಾರೆ ಗೆಳತಿಯರು.
ಒಲ್ಲದ ಸತಿಯ ಸರಿಯೆಂದು
ಲೇವಡಿ ಮಾಡಲೇನು ನಾನು!
ನಾನಿಲ್ಲದೆ ನಿನ್ನೆದೆ ಭಣಭಣ
ನೀನಿಲ್ಲದೆ ನನ್ನೆದೆ ರಣರಂಗ!
ಇಬ್ಬರೂ ಕೂಡಿದರೆ
ಚಿನ್ಮಯ ಕಣಕಣ
ಅಮೃತಮಯ ಚಣಚಣ
ಕೂಡಿಸಿಕೋ ಸ್ವತಂತ್ರಧೀರ ಸಿದ್ಧೇಶ್ವರಾ
ಪುಚ್ಚಸ್ತ ಚಕೋರ ಸುಧಾಕರಾ!

## ೧೪೭

ಕರುಣೆಯ ಒಂದು ಕಂಬನಿ ಕಡಲಿಗೆ ಸಮ;
ಕಕ್ಕುಲತೆಯ ಕಿರು ಕಾಣಿಕೆ ಪೊಡವಿಗೆ ಸಮ;
ಬಡವನ ಶ್ರಮದಾನ ಕಡವರಕ್ಕೆ ಸಮ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ನಿಜಭಕ್ತನ ನೀರವ ಪ್ರಾರ್ಥನೆ
ಸಾವಿರ ಬ್ರಹ್ಮೋತ್ಸವಗಳಿಗೆ ಸಮ!

## ೧೪೮

ಸಾವಿರ ಸಾವಿರ ವಿಚಾರ ವಿಹಂಗಗಳು
ಗೂಡುಕಟ್ಟುವ ವನ ನನ್ನ ಮನ.
ಸಾವಿರ ಸಾವಿರವಾದ ವಾಹಿನಿಗಳ
ಒಳಗೊಳ್ಳುವ ಕಡಲು ನನ್ನ ಬುದ್ಧಿ.
ಸಾವಿರ ಸಾವಿರ ಹಮ್ಮುಗಳ ನಿರ್ಜಲ ನೀರವಗಳ
ಹುಟ್ಟು ಹಾಕುವ ಮುಗಿಲು ನನ್ನ ಅಹಂಕಾರ.
ಸಾವಿರ ಸಾವಿರ ನಿರ್ಜನ ಶೃಂಗಗಳ
ಅನಂತ ಪರ್ವತ ನನ್ನ ಚಿತ್ತ!
ಇವುಗಳಲ್ಲಿ ನೀನಿರಲಾರೆಯೆಂಬುದ ಬಲ್ಲೆ
ನನ್ನ ಹೃದಯಕಮಲದಲ್ಲಾದರೂ ಇರು–
ಸ್ವತಂತ್ರಧೀರ ಸಿದ್ಧೇಶ್ವರಾ!

## ೧೪೯

ಧ್ವಂಸನಾದ ಆಕಾಶಕಾಯಗಳಿಗೂ ಅಂಟಿತೆ?
ಪ್ರೀತಿ ಸ್ಪಂದನ ಸಾಕಾಗಿ ಮೃತ್ಯುಚುಂಬನ ಬೇಕೆನಿಸಿತೆ!
ನಂದನ ಕೊನೆಗೆ ಮಸಣವಾಗಲೇ ಬೇಕೆ?

ಶಿವಶರಣನಾದ ಸ್ವತಂತ್ರಧೀರ ಸಿದ್ಧೇಶ್ವರ
ಪ್ರಳಯಂಕರನಾಗುತ್ತಲಿಹನೆ?

೧೪೯

ಯಾವುದಕ್ಕೆ ಮೇರೆಯಿದ್ದರೂ
ಪ್ರೀತಿಗೆ ಮೇರೆಯಿರದಿರಲಿ
ಯಾವುದಕ್ಕೆ ಕೊರತೆ ಬಂದರೂ
ಪ್ರೀತಿಗೆ ಕೊರತೆ ಬರದಿರಲಿ
ಏನೇ ಅಪಮೌಲ್ಯಗೊಂಡರೂ
ಪ್ರೀತಿ ಮಾತ್ರ ಅಪಮೌಲ್ಯಗೊಳ್ಳದಿರಲಿ.
ಸ್ವತಂತ್ರಧೀರ ಸಿದ್ಧೇಶ್ವರನ
ಪ್ರೀತಿಯಲ್ಲಿ ಜಾತನಾದ ಜೀವಕೋಟಿಗೆ
ಪ್ರೀತಿಯೇ ಧಾರಣ, ತಾರಕಶಕ್ತಿ ಕೇಳಿ ಭೋ.

೧೫೦

ನೀನೇ ಬಂದೆಯೆಂದು ಬಾಗಿಲ ತೆರೆದರೆ
ಸವತಿಯ ಗಂಟುಮೋರೆ ಎದುರಾಗಬೇಕೆ?
ಅದೂ ಸಹನೆಯಿಲ್ಲದ ಸವತಿಯ ಮುಖ!
ಹಂಗಿಸುವ, ಭಂಗಿಸುವ, ಮಂಗಿಸುವ ಮುಖ!
ನೀನು ಬರದಿದ್ದರೆ ಹೋಗಲಿ,
ಇಂಥ ಸವತಿಯ ಮೂಲಕ ಅಭಯಗೇಡು ಮಾಡದಿರು
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೧

ನದಿಗಳ ನಿರ್ಮಲೀಕರಣ ನಡೆದಿದೆ
ಎದೆಗಳ ನಿರ್ಮಲೀಕರಣ ನಡೆದೀತೆ?
ಆರ್ಥಿಕ ಉದಾರೀಕರಣ ನಡೆದಿದೆ
ಚಿತ್ತದ ಉದಾರೀಕರಣ ನಡೆದೀತೆ?
ಸಂತಾನ ನಿಯಂತ್ರಣ ನಡೆದಿದೆ
ಮನದ ನಿಯಂತ್ರಣ ನಡೆದೀತೆ?
ಸ್ವತಂತ್ರಧೀರ ಸಿದ್ಧೇಶ್ವರಾ,
ಉಗ್ರವಾದದ ದಮನ ನಡೆದಿದೆ-
ಅಹಂಕಾರದ ದಮನ ನಡೆದೀತೆ?

೧೫೨

ನಾನು ಮೊಟ್ಟಮೊದಲು ನೋಡಿದುದು
ಹಡೆದ ತಾಯಿಯ ಮುಖವನ್ನು;
ಕಟ್ಟ ಕಡೆಗೆ ನೋಡಬಯಸಿದ್ದೇನೆ
ನಿನ್ನ ಮುಖವನ್ನಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೩

ಆಳದಲ್ಲಿ ಕಡಲನ್ನು ಮೀರಬಲ್ಲೆ-
ಮೀರು ಮನವೆ!
ಅಗಲದಲ್ಲಿ ಮುಗಿಲನ್ನು ಮೀರಬಲ್ಲೆ-
ಮೀರು ಮನವೆ!
ಎತ್ತರದಲ್ಲಿ ಮೇರುವನ್ನು ಮೀರಬಲ್ಲೆ-
ಮೀರು ಮನವೆ!

ಮೀರುತ್ತ, ಮೀರುತ್ತ, ಮೀರುತ್ತ
ಸ್ವತಂತ್ರಧೀರ ಸಿದ್ಧೇಶ್ವರನೇ ನೀನಾಗು
ಮನವೆ!

## ೧೫೪

ಕಲ್ಲು ಕರಗಬಹುದು,
ಕಲ್ಲೆದೆ ಕರಗುವುದು ಕಠಿಣವಯ್ಯ.
ಅಣ್ವಗ್ನಿ ಆರಬಹುದು,
ದ್ವೇಷಾಗ್ನಿ ಆರುವುದು ದುಷ್ಕರವಯ್ಯ.
ಅಂಬುಧಿಯು ಬತ್ತಬಹುದು
ಅದಾನದಿ ಬತ್ತುವುದು ದುಸ್ಸಾಧ್ಯವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ-ನಿನ್ನ ನೆಮ್ಮದ ನದಿಗೆ!

## ೧೫೫

ದೇಶದಲ್ಲೆಲ್ಲ ನಮ್ಮ ಮೂರ್ತಿಗಳೆ ನಿಲ್ಲಲಿ
ಪ್ರತಿಯೊಂದಕ್ಕೂ ನಮ್ಮ ಹೆಸರನ್ನಿಡಲಿ
ಸಮೂಹ ಮಾಧ್ಯಮಗಳಲ್ಲೆಲ್ಲ ನಮ್ಮ ಗುಣಗಾನ ನಡೆಯಲಿ
ಎಂದು ಹಪಹಪಿಸುತ್ತಿರುವ ನಮ್ಮ ನಿರ್ಲಜ್ಜ ನಾಯಕರು
ನನ್ನ ಮೂರ್ತಿಯನ್ನು ನಿಲ್ಲಿಸದಿರಿ,
ನನ್ನ ಚಿತ್ರವನ್ನು ಪ್ರಕಟಿಸದಿರಿ,
ಎಂದ ಪ್ರವಾದಿ ವರ ಮಹಮ್ಮದ ಪೈಗಂಬರರ
ಸಿರಿನುಡಿಗೆ ಕಿವಿಗೊಡುವರೇನಯ್ಯ-
ಸ್ವತಂತ್ರಧೀರ ಸಿದ್ಧೇಶ್ವರಾ?

## ೧೫೬

ಮಹಾವೀರರ ಅಹಿಂಸೆ
ಬುದ್ಧನ ನೀತಿ
ಕೃಷ್ಣನ ಗೀತೆ

ಬಸವನ ಕಾಯಕ
ಬಾಪು-ಬಾಬಾ ಸಾಹೇಬರ ಅಂತ್ಯೋದಯ
ಭಾರತೀಯರ ಪಂಚಪ್ರಾಣಗಳಾಗಲಯ್ಯಾ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೭

ಆಕೃತಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ
ಶಕ್ತಿಯಲ್ಲಿ ಭೂಮಾತಿಭೂಮ
ನಿನ್ನ ಪರಮಾಣು!
ಈ ಎಂಟು ಗೇಣಿನ ದೇಹದಲ್ಲಿ
ಈ ಅದ್ಭುತಶಕ್ತಿ ಸುತ್ತವೇಕೆ
ಸ್ವತಂತ್ರಧೀರ ಸಿದ್ಧೇಶ್ವರಾ!

೧೫೮

ಪ್ರತಿಬಿಂಬ ಹುಸಿಯೆಂದು
ಮೂಲ ಬಿಂಬವೇ ಹುಸಿಯೆನ್ನಬಹುದೇನಯ್ಯ?
ಪ್ರತಿಧ್ವನಿ ಹುಸಿಯೆಂದು
ಮೂಲಧ್ವನಿಯೇ ಹುಸಿಯೆನ್ನಬಹುದೇನಯ್ಯ?
ಬಿಸಿಲುಗುದುರೆ ಹುಸಿಯೆಂದು
ಬಿಸಿಲೇ ಹುಸಿಯೆನ್ನಬಹುದೇನಯ್ಯ?
ಕನಸುಗಳು ಹುಸಿಯೆಂದು
ಕನಸು ಕಂಡವನೇ ಹುಸಿಯೆನ್ನಬಹುದೇನಯ್ಯ?
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನ ಕಪಟ ಭಕ್ತರ ಭಕ್ತಿ ಹುಸಿಯೆಂದು
ನೀನೇ ಹುಸಿಯೆನ್ನಬಹುದೇನಯ್ಯ?

# ಟಿಪ್ಪಣಿಗಳು – ವಚನೋದ್ಯಾನ

| | |
|---|---|
| ವಚನ ೮೧ | ಫೀನಿಕ್ಸ್ ಐದಾರು ಶತಮಾನಗಳ ಕಾಲ ಅರೇಬಿಯಾದ ಮರಳುಗಾಡಿನಲ್ಲಿ ಜೀವಿಸಿದ್ದು ಸುಟ್ಟು ಹೋಗಿ ತನ್ನ ಬೂದಿಯಿಂದಲೇ ಮತ್ತೆ ಹುಟ್ಟುತ್ತಿದ್ದಿತೆಂದು ಹೇಳುವ ಏಕಮಾತ್ರ ಪಕ್ಷಿ. |
| ವಚನ ೧೧೯ | ಓರಫಿಯಸ್ ಗ್ರೀಕ್ ಪುರಾಣದ ಕವಿಗಾಯಕ. ಅವನು 'ಲಯರ್' ಎಂಬ ತಂತ್ರೀವಾದ್ಯದ ವಾದನದಿಂದ ಮೃಗಗಳು ಪರವಶಗೊಳ್ಳುವಂತೆಯೂ, ವೃಕ್ಷಗಳೂ ಶಿಲೆಗಳೂ ಚಲಿಸುವಂತೆಯೂ ಮಾಡುತ್ತಿದ್ದನಂತೆ. |
| ವಚನ ೨೧೩ | ಸಂಸ್ಕೃತ ಅವತರಣಿಕೆಯ ಅರ್ಥ "ಅಗ್ನಿಯೇ, ಎಲ್ಲವನ್ನೂ ಬಲ್ಲ ನೀನು ನಮ್ಮನ್ನು ಒಳ್ಳೆಯ ದಾರಿಯಿಂದ ಸಿದ್ಧಿಗೆ ಮುಟ್ಟಿಸು; ಅನಿಷ್ಟವನ್ನೂ ಅಸಹ್ಯವನ್ನೂ ನಮ್ಮಿಂದ ದೂರವಿಡು; ನಿನ್ನನ್ನು ಬಹುವಾಗಿ ಮೆಚ್ಚಿ ಸ್ತುತಿಸುವೆವು". |
| ವಚನ ೨೭೯ | ಫಾರಸೀ ದ್ವಿಪದಿಯ ಅರ್ಥ "ಬುದ್ಧಿ, ಉಪಾಯ, ಜ್ಞಾನಗಳು ನಿನ್ನ ದಾಸರಾಗಿರುವಾಗ ನೀನೇಕೆ ನಿನ್ನನ್ನು ಇಷ್ಟು ಅಗ್ಗವಾಗಿ ಮಾರಿಕೊಳ್ಳುವೆ?" |
| ವಚನ ೨೮೧ | ಪಾಪಿಕೊಂಡ ಭದ್ರಾಚಲಂ ದಾಟಿದ ಮೇಲೆ ಗೋದಾವರೀ ನದಿಯಲ್ಲಿ ಗೋಚರಿಸುವ ಭೀಕರ ಸ್ಥಳ, ಇಲ್ಲಿ ಗೋದಾವರಿಯು ಒಮ್ಮೆಗೆ ಬಲಕ್ಕೆ ಹೊರಳುವುದರಿಂದ ಇಲ್ಲಿ ಅನೇಕ ನೌಕೆಗಳು ಎದುರು ಬಂಡೆಗೆ ಅಪ್ಪಳಿಸಿ ಅಳಿದ ಕಾರಣ ಇದಕ್ಕೆ ಪಾಪಿಕೊಂಡವೆಂಬ ಹೆಸರು ಬಂದಿದೆ. |
| ವಚನ " | ಪ್ಯಾಂಡೋರಳ ಪೆಟ್ಟಿಗೆ ಜ್ಯೂಪಿಟರನು ಪ್ಯಾಂಡೋರಾಳಿಗೆ ಬಹುಮಾನವಾಗಿ ಕೊಟ್ಟ ಪೆಟ್ಟಿಗೆ. ಅದರಲ್ಲಿ ಅನಿಷ್ಟಗಳೆಲ್ಲ ಇದ್ದುವೆಂದೂ, ಅವಳ ಗಂಡ ಅದನ್ನು ತೆರೆಯಲು ಅವೆಲ್ಲ ಹೊರಬಿದ್ದು ಪ್ರಪಂಚದಲ್ಲೆಲ್ಲ ಹರಡಿದುವೆಂದೂ ಕಥೆ. |

ವಚನ ೩೨೪ ತುಲಸೀದಾಸರ ಈ ಹಿಂದೀ ಚೌಪದಿಯ ಅರ್ಥ "ನೌಕೆಯಲ್ಲಿ ಏರುತ್ತಿದೆ ನೀರು; ಮನೆಯಲ್ಲಿ ಹೆಚ್ಚುತಿದೆ ಸಿರಿ. ಎರಡೂ ಕೈಗಳಿಂದ ಇವುಗಳನ್ನು ಹೊರಕ್ಕೆ ಉಗ್ಗುವುದೇ ಜಾಣ ಕೆಲಸ."

ವಚನ ೪೦೧ ಹ್ಯಾನಿಬಾಲ ಕಾರ್ಥೋಜಿಯಾದ ಕ್ರೂರ ದಂಡನಾಯಕ.

ವಚನ ೪೨೦ ಸಂಸ್ಕೃತ ಶ್ಲೋಕದ ಅರ್ಥ "ಹೃದಯದ ಹುಲ್ಲಿನ ಕುಟೀರದಲ್ಲಿ ಕಾಮ ಅಗ್ನಿ ಕಿಡಿಗೆದರಿತೆಂದರೆ ಪಂಡಿತರಾದವರಿಗೂ ಉಚಿತಾನುಚಿತ ವಿವೇಕ ಇಲ್ಲವಾಗುತ್ತದೆ."

ವಚನ ೪೬೪ ಬಿಟ್ಟುಹೋದ ಭಾಗ 'ನೇದಮಮೂಲಂ; ತಸ್ಯಕ್ವಮೂಲ?' "ಇದಕ್ಕೆ ಬೇರಿಲ್ಲದಿರದು. ಯಾವುದಿದರ ಬೇರು?"

ವಚನ ೪೭೦ ಮೋರೋಪಂತನ ಮರಾಠೀ ಚೌಪದಿಯ ಅರ್ಥ "ಮಹಾಪುರುಷರು ಯಾವುದನ್ನೂ ನಿಷ್ಪ್ರಯೋಜಕವೆಂದು ಎಸೆಯದೆ ಎಲ್ಲ ವಸ್ತುಗಳನ್ನೂ ತಮ್ಮ ಬಳಿ ಇರಿಸಿಕೊಳ್ಳುತ್ತಾರೆ."

ವಚನ ೪೭೨ ತಮಿಳು ತಿರುಕ್ಕುರುಳಿನ ದ್ವಿಪದಿಯ ಅರ್ಥ "ಒಂದು ಮೈಯಲಿ ಆಮೆಯಂತೆ ಐದನಡಗಿಸಲಾಪರೆ ಏಳು ಮೈಯಲೂ ಕಾಪು ಕೊಡುವುದು ಅಡಕ ತಾನದು ತಪ್ಪದೆ". ಅನುವಾದ : ಎಲ್. ಗುಂಡಪ್ಪ.

ವಚನ ೪೮೦ ಮನಸೋಲ (Mansoul)ನ ಮನೆ D house divided against itself.

ವಚನ ೪೯೨ ಇಕಾರಸ ಪ್ರಾಚೀನ ಕಥೆಯೊಂದರಲ್ಲಿ ಬರುವ ವ್ಯಕ್ತಿ. ಇವನು ಹಾರಲೆಂದು ರೆಕ್ಕೆಗಳನ್ನು ನಿರ್ಮಿಸಿಕೊಂಡನಂತೆ.

ವಚನ ೪೯೪ ಫ್ರೆಂಚ್ ಪದ್ಯದ ಅರ್ಥ 'ಓ ನನ್ನ ಪ್ರಿಯ ಪ್ರಭುವೆ, ನಿನ್ನ ನಲ್ಮೆಯ ಉಪಕರಣವಾಗುವುದನ್ನು ನನಗೆ ಕಲಿಸು!'

# ವಚನಾನುಕ್ರಮಣಿಕೆ

## ವಚನೋದ್ಯಾನ


### ಅ

ಅಕ್ಷರಗಳಿಗೆ ಅರ್ಥ ಬರುವುದು ೩೬೯
ಅಚ್ಚುಕಟ್ಟನ್ನು ಉಳುವವರು ೧೩೬
ಅಜೀರ್ಣಕ್ಕೆ ಕಾರಣ ೩೭೧
ಅಜ್ಞಯುಗ ಹೋಯ್ತು ೧೩೨
ಅಡಕಿಲ ಗಡಿಗೆಗಳ ಬುಡಕ್ಕೇ ೪೯೯
ಅದಿರಿನಲ್ಲಿ ಚಿನ್ನದೊಡನೆ ೧೦೭
ಅಧಿಕಾರದ ಅಂತಸ್ತು ೩೫೧
ಅನ್ಯಾಯವು
ಸಿಂಹಾಸನವೇರಿರುವಲ್ಲಿ ೩೫೮
ಅಪರಾಧೀ ಅಂತಃಸಾಕ್ಷಿಯಿರೆ ೯೬
ಅಪ್ರಮಾಣಿಕ ವಿಶ್ವಾಸಕ್ಕಿಂತ ೧೭೫
ಅಬಲೆಯರ ಆಶ್ರುಗಳಲ್ಲಿಯೇ ೪೫೦
ಅರ್ಧ ರಾತ್ರಿಯಲ್ಲಿ ಎದ್ದು ೪೮೮
ಅರ್ಥ ಅಕ್ಷರಗಳ ಬೆಳಗುವಂತೆ ೪೩೪
ಅರಬ್ಬೀ ಸಮುದ್ರದಿಂದ ೨೯೫
ಅರಮನೆಯಲ್ಲಿದ್ದೊಡೇನು ೩೫೬
ಅರಿಯದೆ ಮಾಡಿದ ೩೮೦
ಅರಿವು ಮರೆವುಗಳ ೨೫೦
ಅರೆಮತ್ತಿನಲ್ಲಿಯೇ ಅರುವತ್ತು ೫೦೭
ಅಲ್ಲಿ ಬರ, ಇಲ್ಲಿ ಬರ ೨೮೫
ಅಲೆಮಾರಿ ಮನಕ್ಕೆ ೧೯೪
ಅವರಿವರು ಪ್ರೀತರಾಗಲೆಂದು ೧೫೨
ಅಸ್ತಿತ್ವದ ಅಭ್ರಕಕ್ಕೆ ೧೨೮
ಅಂಗುಲಿಮಾಲಾನಲ್ಲಿ
ಮೃತವಾಗಿರದಿದ್ದ ೩೯೫
ಅಂತರಿಕ್ಷದ ಇಂಕ್ಯುಬೇಟರಿನಲ್ಲಿ ೨೮
ಅಂದವು ಇನ್ನೂ ಅಂದವಾಗಲಿ ೧೫೬

### ಆ

ಆಗ, 'ಅಹಿಂಸಾ
ಪರಮೋಧರ್ಮಃ' ೩೦೩
ಆಗಬೇಕು, ಆಗಬೇಕು ೫೧
ಆತ್ಮೌಪಮ್ಯವನ್ನು ಅನ್ವೇಷಿಸಿದ ೪೮೩
ಆದಮ್–ಈವ್ಗರಿಗೆ ೩೬೦
ಆ ದಾರಿ ಈ ದಾರಿಯಲ್ಲಿ ೬೯
ಆದಿಯಿದ್ದರೆ ತಾನೆ ೧೮೯
ಆಯುಷ್ಯವೆಲ್ಲ
ಅನಾರೋಗ್ಯವನ್ನು ೫೦೮
ಆಸ್ಥಾನದ ಆಸೆ ೪೮೭
ಆ ಹಾದಿ ಈ ಹಾದಿಯೆಂದು ೯೮
ಆರೋಗ್ಯ ಬೇಕು ೧೨೪
ಆಲದ ಮರದಂತೆ ೩೮೭
ಆಶೆಯ ನೆರಳು ನಿರಾಶೆ ೧೯೨
ಆಸ್ಥಾನದ ಆಸೆ ೪೮೭
ಆ ಹಾದಿ ಈ ಹಾದಿಯೆಂದು ೬೮

### ಇ

ಇಕಾರಸನ ಕನಸು ೪೯೩
ಇಟ್ಟಿಗೆ ಕಟ್ಟಿಗೆಗಳನ್ನು ೩೮೨
ಇತಿಹಾಸವೆ ೪೩೫
ಇದ್ದಲಿನ ಎದೆಯಲ್ಲಿ ೪೮೬
ಇದಿರು ಕಾಣುವವರಿಗೆ ೯೪
ಇದುವರೆಗಿನ ಬಾಳು ೨೨೯
ಇದುವರೆಗೆ ಯಾಂತ್ರಿಕವಾಗಿ ೫೨೨
'ಇದೆ, ಇದೆ' ೪೪
ಇದೆಂಥ ಮನೆಯಲ್ಲಿ ೪೮೦
ಇನ್ನೂ ಎರಡು ತುತ್ತು ೫೦೪

ಇನ್ನೇನ ಮಾಡದಿದ್ದರೂ ೪೭೨
ಇನ್ನೇನೋ ಇಲ್ಲದೆ ೨೫೨
ಇನ್ನೊಬ್ಬರ ಕೈಯ ತುತ್ತ ೨೯೨
ಇಪ್ಪುದರ ಕಪ್ಪೆಚಿಪ್ಪಿನಲ್ಲಿ ೨೬
ಇಲ್ಲಿ ಗುಡಿಗೆ ಬರುವವರೆಲ್ಲ ೪೧೩
ಇಳೆಯ ಕಾಳವೆಲ್ಲ ೪೫೫
ಇಂದು ಬಂದು ಮುಂದೆ ೨೩೪
ಇಂದು ಯುಗಾದಿಯೋ ೪೩೦
ಇಂದು ಹುಟ್ಟಿಹ ೪೮೪

**ಈ**

ಈ ಕಾಯಿ ನೆಟ್ಟಗಿದೆಯೇ ೨೬೨
ಈ ದೇಶದಲ್ಲಿ ೪೫೩
ಈ ಬಗೆಯ ಬಾನುಲಿಯಲ್ಲಿ ೫೪೯
ಈ ಮಣ್ಣಿನ ೩೧
ಈ ವನವನ್ನು ೫೨೫
ಈ ವಿಶಾಲ ವಿಶ್ವದಲ್ಲಿ ೨೯೩
ಈ ಶರೀರದಲ್ಲಿ ೨೨೨
ಈ ಹೊತ್ತಗೆ ೨೬೫

**ಉ**

ಉಣಿಸಿ ತಿನಿಸಿ ೨೭೫
ಉಪ್ಪಿನಕಾಯಿ ರುಚಿಯೆಂದು ೪೭೫
ಉರಿವ ಜಲಜನಕ ೫೧೩
ಉಸುಕಿನ ಹಳುಕುಗಳನ್ನು ೧೪೦
ಉಂಡುದಕ್ಕಿಂತ ಉಳಿಸಿದ ೩೧೮

**ಊ**

ಊರಮುಂದೆ ೨೯

**ಋ**

ಋತವ ತೋರುವ ೪೩
ಋಷಿ ಪ್ರತಿಭೆ ೩೯೩

**ಎ**

ಎಗ್ಗ ಉರುಲು ೨೦೪
ಎಣ್ಣೆಯಿಲ್ಲದೆ ದೀಪ ೨೩
ಎತ್ತರಕ್ಕೆ ಏರಿದಂತೆ ೧೩೯
ಎದೆಯ ಹಿಗ್ಗು ೨೮೬
ಎನಗಾರೂ ಇಲ್ಲವೆಂದಾಗ ೧೫೩
ಎನಿತು ಸುಂದರ ೩೨
ಎಲುವಿನ ಗೂಡುಗಳಲ್ಲಿ ೩೪೪
ಎಲ್ಲ ತನುಗಳ ೫೨೪
ಎಲ್ಲ ತೋರ್ಕೆಗಳ ೫
ಎಲ್ಲ ನಿನ್ನ ದಾನ ೨೯
ಎಲ್ಲ ನಿನ್ನನ್ನು ೨೩೧
ಎಲ್ಲ ಪ್ರಾಣಿಗಳಿಗೂ ೨೭೨
ಎಲ್ಲರೂ ಎಲ್ಲರ ಮೇಲೆ ೩೮೯
ಎಲ್ಲವೂ ಸರಿಯೆಂದು ೪೧೦
ಎಲ್ಲಲ್ಲಿ, ಎಲ್ಲೆಲ್ಲೂ ೧೬
ಎವರೆಷ್ಟನು ಏರುವ ೨೦೨
ಎಷ್ಟೆಂದರೂ ನೀನು ೨೪೦
ಎಂಥ ಶ್ರೇಷ್ಠ ೩೧೩

**ಏ**

ಏನಿದೇನಿದೇನಿದಯ್ಯ ೩೭೯, ೪೨೯
ಏನು ಪಡೆದೆವೆಂಬುದು ೨೩೮
ಏನೋ ಅನುಭವವಾಗುತ್ತದೆ ೯೨
ಏಸು ಕಾಲ ಕಳೆದರೇನು ೪೦೦

**ಐ**

ಐದು ಹೆಡೆಗಳ ಹಾವ ೪೭೭

**ಒ**

ಒಲವೇ ಬೆಳಕು ೩೫೪
ಒಳಿತನ್ನು ಮಾಡಿದವರಿಗೆ ೩೬೪

ಒಳಿತನೆಸಗುವ ಒಬ್ಬನಿಗೆದುರಾಗಿ ೩೮೧
ಒಳ್ಳೆಯ ಜೀವನಕ್ಕಿಂತ ೨೩೬
ಒಳ್ಳೆಯ ಹೊಲದಲ್ಲಿ ೩೭೫
ಒಂದು ಕೋಹಿನೂರಿಗಾಗಿ ೭೩
ಒಂದೆ ದಾರಿಯಲಿ ೭೧
ಒಂಬತ್ತು ಬಾಗಿಲುಗಳಿಗೂ ೧೭೨

## ಓ

ಓಟುಗಳ ಬೆಲೆ ೪೪೩
ಓ ಸ್ವಾತಂತ್ರ್ಯವೆ ೪೫೬

## ಕ

ಕಡು ಹಸಿದು ೧೧೫
ಕಡೆದರೆ ಬೆಣ್ಣೆ ೩೬೩
ಕಣ್ಣು ಕಾಣಬಲ್ಲುದಲ್ಲದೆ ೧೮೦
ಕಣ್ಣು ತೆರೆಯೆ ೧೪
ಕತ್ತಲೆ ಗಾಢವಾದಷ್ಟೂ ೧೦೮
ಕತ್ತಲೆಯನ್ನು ಕಡೆದರೆ ೪೪೪
ಕದ್ದು ಹೂಗಳ ತಂದು ೩೬೧
ಕನಸಿನ ವೈರಿಯೊಡನೆ ೪೯
ಕನ್ನಡನಾಡಿನ
ಕೋಡುಗಲ್ಲುಗಳು ೪೬೫
ಕನ್ನಡಿಗರ ಕಂಡರೆ ೪೬೬
ಕರವೀರ, ಮುತ್ತಲ ೩೬೬
ಕರುಣೆಯೇ ಕಾಶಿ ೪೪೦
ಕರೆದರೆ ಬರುವುದೇನಯ್ಯಾ ೨೬೭
ಕಲ್ಲು ದೋಣಿಯಲ್ಲಿ ೩೫೨
ಕವನಕ್ಕೆ ಕಾರಣ ೧೦೪
ಕಳಚಲಯ್ಯ ಹಾವಿನ
ಪರೆಯಂತೆ ೧೪೧
ಕಳೆದುಕೊಂಡಿರುವುದು ೩೯೭
ಕಾಯಕದಲ್ಲಿ ಕೈಗಳು ೨೪೨
ಕಾಲದ ಕಡಲಿನ ಮೇಲೆ ೭೨
ಕಾಶ್ಮೀರದಿಂದ
ಕನ್ಯಾಕುಮಾರಿಯವರೆಗಿನ ೩೯
ಕಿರಿಯ ನದಿ ೧೦೫
ಕುಕ್ಕದಿರೆ ಕಡಿಯದಿರೆ ೨೩೯
ಕುಗ್ಗೆನ್ನ ಹೃದಯವ ೨೫೩
ಕುಳಿತವರಿಂದ ಕುರ್ಚಿಗೆ ೪೦೮
ಕೆರದ ಖರ್ಚು ಉಳಿಸಲು ೧೨೧
ಕೆಲವರು ಸ್ವತಂತ್ರರಾಗಿರಲೆಂದು ೩೧೭
ಕೈಮುಚ್ಚಿ ಒಳಗೇನಿದೆಯೆಂದು ೧೫೦
ಕೊಟ್ಟ ಹಣ ಕರಗಿತು ೪೫೮
ಕೊಬ್ಬರಿಯನ್ನು ಕಳೆದುಕೊಂಡು ೩೩೦
ಕೊಯ್ಯುವರೆಂದು ತೆನೆ ಬಿಡದೆ ೪೨೨
ಕೊಲೆ ತಪ್ಪಿಸಲು ೩೭೮
ಕಂಪ್ಯೂಟರ್ ಮಾನವನೊಂದು ೩೭೭
ಕಂಬನಿಯ ಕಂಡು ೩೫೫
ಕ್ರೀಡೆಯಿಲ್ಲದ ಜೀವನ ೧೧೮

## ಖ

ಖಂಡಾಂತರ ಯಾತ್ರೆ ೧೮೨

## ಗ

ಗತಕಾಲವೆ, ನಿನ್ನನ್ನು
ಪ್ರೀತಿಸಬಲ್ಲೆ ೪೮೧
ಗರಿ ನನಗೆ ಹೊರೆಯೆಂದರೆ ೨೧೪
ಗಾಳಿ ಬೀಸಿದತ್ತ ೭೦
ಗುಡ್ಡದಷ್ಟು ಪುಸ್ತಕಗಳನ್ನು ೩೩೯
ಗುರಿಯ ಹಕ್ಕಿಯ ೧೬೯
ಗುರುತ್ವಾಕರ್ಷಣ ಶಕ್ತಿ ೧೭೭
ಗೋಲ ಗುಮ್ಮಟವೂ ಅಲ್ಲ ೧೬೬
ಗಂಡ ಬಯಸಿದುದನ್ನೇ ೧೧೦
ಗಾಂಪರೂ

ಮಾರಿಕೊಳ್ಳುವುದಿಲ್ಲ ೨೭೯
ಗುಂಪು ಗುಂಪಾಗಿ ३೭೮
ಗ್ರಹ ಗೋಲಗಳಿಂದಾಚೆ ೧೦

ಚ

ಚಂದನದ ಅಂದಣದಲ್ಲಿ ೨೨೮
ಚಂದನವಾದರೆ
ತೆಯ್ಯಿಸಿಕೊಂಬ ३೪೭
ಚಂದ್ರನ ಮೇಲೆ ಕಾಲು ೨೭೬
ಚಂದ್ರನೊಲು ನನ್ನ ೨೪೬

ಜ

ಜಗಜ್ಜನನಿಯ ಉಜ್ವಲ
ತನಯೆ ३೮
ಜಗತ್ತಿನಲ್ಲಿ ಜಾತಿಗಳು ३೦೬
ಜಡವು ಅಜಡತೆಯನ್ನು ೧೦೬
ಜಲದಲ್ಲಿ ಮೀನು ೨೦೫
ಜೀವನ ಮರಣಗಳ ೯೯
ಜೀವನದ ವನದಲ್ಲಿ ೨೧೫
ಜೇನಿನ ತಾಣವನ್ನು ೪೪೨
ಜೋಳಿಗೆಯ
ಹಿಡಿದುಕೊಂಡೇ ೨೧೬
ಜ್ವರದಿಂದ ನಾಲಗೆ ३೮೪

ಟ

ಟಿಪ್ಪಣಿ ಪುಸ್ತಕ ೪೬೦

ಡ

ಡಾಕ್ಟರರೇ ಅಸಾಧ್ಯವೆಂದ ೪೯೮

ತ

ತಜ್ಞತೆಯ ಬೆಳೆಯುತ್ತಿರುವಂತೆಯೇ
३೦೯
ತತ್ವರಹಿತ ರಾಜಕಾರಣ ೪೪೫
ತಮ್ಮ ವಿಲಾಸಕ್ಕಾಗಿ ३೯೬
ತಲೆಯಲ್ಲಿರುವಾಗ
ಸುಗಂಧದೆಣ್ಣೆ ೮೮
ತಾನಿದ್ದರೆ ತಾನೆ ೫೦
ತಾಪವನ್ನು ತಾಳಿಕೊಳ್ಳುವುದೇ ३೯೧
ತಾನು ಮಧು ಹೀರಿದ ೨೨೭
ತಾನು ಸುಟ್ಟುಕೊಟ್ಟ ೫೦೧
ತಾಯಿಯಾಗಿ ಕಂಡೆ ೨೨
ತಿಳಿವಿನ ಹೊಳಲಿನ ೫೦३
ತುಕ್ಕು ಹಿಡಿದು ೨३३
ತೂಗಿ ಕಟ್ಟುವುದೆ ೪३೬
ತೆರೆಯೊಂದರಿಂದ
ತೊರೆಯಾಗದು ೯೮
ತೊಟ್ಟಿಲಲ್ಲಿರುವ ಹಸುಗೂಸಿಗೂ ೧३೫
ತೋಳ ನಿರ್ಧರಿಸಿದ ನೀತಿ ३೪೧
ತಂತಿಗಳಲ್ಲಿ ಸುನಾದವಿದೆ ೭೬
ತಂದೆ ೧೮
ತೆಂಗಿನ ಜುಬ್ಬರದಂಥ ೨೯೮

ದ

ದಿನ ದಿನ ಗುಡಿಸಿಯೂ ೧೬೧
ದಿನದಿನವೂ ಹಲವು ೨३೨
ದುರಾಚಾರಿಯಾದ
ಪಂಡಿತನಿಗಿಂತ ३೨೧
ದುಷ್ಟರ ಭ್ರಷ್ಟರ ३೪೮
ದೇಶವನ್ನು ಛಿದ್ರಿಸುವ ३३३

ದೊಡ್ಡದನ್ನು ಮಾಡಲು ೩೨೯
ದೊಡ್ಡ ದೊಡ್ಡ
ಮಾತುಗಳನ್ನಾಡಿ ೪೭೬

## ನ

ನಗೆಯ ಉಗಮದ ೩೦೦
ನಟನಟಿಯರ ದಾಂಪತ್ಯ ೩೯
ನಡೆಯದ ಹಾದಿಯಲ್ಲಿ ೨೦
ನದಿಯೆ ಬತ್ತಿರುವಾಗ ೪೦೭
ನನಗಾಗಿ ಏನನೂ ೨೯೦
ನನಗಿಷ್ಟು ದುಃಖವಿತ್ತೆಯೆಂದು ೨೫೫
ನನಗೆ ಬೇಕಾದುದ ೬೨
ನನಗೆ ಬಯಸದೆ ೫೧೧
ನನ್ನ ಅಸ್ತಿತ್ವದ ೧೪೬
ನನ್ನ ನನಸಿನ ನೌಕೆಗೆ ೫೭
ನನ್ನ ತಪ್ಪುಗಳ ತೊರೆ ೬೪
ನನ್ನ ತಾಯಿ ಭೂಮಿ ೧೧
ನನ್ನ ತಂತಿಗಳ ೧೪೨
ನನ್ನ ದೋಷ
ದುರ್ಗುಣಗಳನ್ನು ೪೭೧
ನನ್ನ ನಯನಗಳು ೫೧೮
ನನ್ನ ನಿನ್ನ ನಡುವೆ ೧೮೩
ನನ್ನ ನುಡಿ ನನ್ನಿಗೆ ೨೮೭
ನನ್ನ ನೋವಿನ ಕೆನೆಯನ್ನು ೨೪೯
ನನ್ನ ಬಾಳಿನ ೯೧, ೧೪೩
ನಭದ ನೀಲಿಯಲ್ಲಿ ೩೪
ನರರಿಗೆ ಶರಣು ೮೭
ನರೆಗೂದಲಿಗೆ ಕಪ್ಪು ೪೧೨
ನಲ್ಲನ ನಲ್ಮೆಯನ್ನೆಂತು ೫೨೦
ನವಿಲುತೀರ್ಥದ ೧೭೧
'ನವೀಕರಣ, ನವೀಕರಣ' ೨೦೩
ನಾಟಕದ ಸೀತೆಯೇ ೨೧೭
ನಾಣ್ಯವಿಲ್ಲದೆ
ಮಾನ್ಯರಾದವರಿರಬಹುದು ೨೫೭
ನಾನಿರುವ ತನಕ ೫೫
ನಾನು ಆಡುವುದೇ ೨೫೮
ನಾನು ಎಚ್ಚರಿದ್ದಾಗ ೬೧
ನಾನು ಕಳೆದ ೧೪೭
ನಾನು ನಿನ್ನಲ್ಲಿ ೪೭
ನಾನು ನೆಯ್ದ ೧೧೭
ನಾನು ನೀನಾಗುವುದು ೧೫
ನಾನು ಹುಟ್ಟುವ ಮುನ್ನ ೩
ನಾಮಪದದ ವೈರಿ ೨೭೦
ನಾ ಮಾಡುವ ಕೆಲಸದಲ್ಲಿ ೭೭
ನಾಲ್ಕು ನೂರು ಕೋಟಿ ೧೪೫
ನಿಜದ ಗುಡಿಯಲ್ಲಿ ೩೦೭
ನಿತ್ಯ ಹಲವು ೧೪೮
ನಿನಗೆ ನಾನು ೨೫೯
ನಿನಗೆ ನಾಮವಿಲ್ಲ ೬
ನಿನಗೆ ವಿಧುರನಾಗುವ ೫೨೧
ನಿನಗೆ ಸೃಷ್ಟಿಕಾವ್ಯ ೪೯೪
ನಿನ್ನ ಅನುಗ್ರಹಕ್ಕೆ ೬೩
ನಿನ್ನ ಉದ್ದರಿ ಖಾತೆಯಲ್ಲಿ ೨೬೧
ನಿನ್ನ ಕರೆ ನನಗೆ ೫೩
ನಿನ್ನ ಜ್ಞಾನ ೧೯೧
ನಿನ್ನ ತಿಗರಿಗೆ ಮಣ್ಣು ೧೭೯
ನಿನ್ನದು ಅಗಮ್ಯಶಕ್ತಿ ೫೯
ನಿನ್ನನರಿಯುವುದಿರಲಿ ೪೯
ನಿನ್ನ ನಾಮಕರಣೋತ್ಸವಕ್ಕೆ ೨
ನಿನ್ನ ನೆರಳಿನಲ್ಲಿಯೇ ೨೪೫
ನಿನ್ನ ನಂಬದಿರೆ ೪೬
ನಿನ್ನ ಪ್ರೇರಣೆಯ ೪೯೭
ನಿನ್ನ ಬರವಿನ ೧೮೧
ನಿನ್ನ ಮಗ್ಗದ ೧೬೦

ನಿನ್ನನರಿವುದೇ ಸ್ವರ್ಗ ೮೫
ನಿನ್ನ ವಿಶ್ವ ಚಿತ್ರವನ್ನು ೩೩
ನಿನ್ನ ಶಕ್ತಿ ಹಿರಿದೋ ೬೦
ನಿನ್ನ ಶರಣರ ೪೯೫
'ನಿನ್ನ ಹಕ್ಕು ಬಿಟ್ಟುಕೊಡು' ೪೭೪
ನಿನ್ನ ಮೊನ್ನೆಯವರೆಗೆ ೧೮೮
ನಿನ್ನೊಡನೆ ಮುನ್ನಡೆಯಬಲ್ಲೆ ೪೮೨
ನಿಮಿಷ ನಿಮಿಷವೂ ೨೨೪
ನಿಯಮಗಳಂತೆ ಆಡದ ೧೭೮
ನಿಷ್ಠೆ ಪ್ರಬಲಿಸದೆ ೪೮೯
ನೀತಿಯಲ್ಲಿ ಕಾತ ೧೭೯
ನೀನಿಲ್ಲದ ಮುನ್ನ ೧
ನೀನು ಕರುಣಿಸಿದರೆ ೪೮
ನೀನು ಕೊಡಲಿಚ್ಛಿಸಿದಾಗ ೧೧೧
ನೀನು ಬಡವರ ೩೧೯
ನೀನು ಹರಿ ನೀನು ಹರ: ೮
ನೀನೆನ್ನ ಕರೆಯಿಲಿಲ್ಲವೆನ್ನಲೆ ೫೪
ನೀನೇನೋ ಹಿರಿದಪ್ಪ ೨೬೦
ನೀರಿನಲ್ಲಿ ಈಸುವುದು ೫೧೫
ನೀರಿಲ್ಲದ ಮೋಡ ೨೬೮
ನೀರೆರೆದವನಿಗೂ ೪೭೩
ನುಡಿಸಲು ಬಾರದ ೧೬೪
ನೆಟ್ಟು ಕಡಿದಂತೆ ೧೯೫
ನೆನಪಿನ ನೆಲದಲ್ಲಿ ೯೩
ನೆನೆವವರಿಗೆ ನೀನು ೨೧
ನೆಲದಲ್ಲಿ ಹೋಗದ ೭೫
ನಂಬಲಾರೆ, ನಂಬದಿರಲಾರೆ ೪೫


## ಪ


ಪದವೀದಾನ ಸಮಾರಂಭಕ್ಕೆ ೫೧೪
ಪರಿಪೂರ್ಣ ನಾನಾಗಬಲ್ಲೆನೆ? ೨೩೦
ಪರಿವರ್ತನೆ, ಪರಿವರ್ತನೆ ೩೩೯
ಪಾಪಿ ನಡೆದನೆಂದು ೨೦೬
ಪಾರ್ಥೇನಿಯಂ
ಪಾಥೇಯವಾಗಬಲ್ಲುದೆ ೨೬೯
ಪುರುಷತ್ವಹೀನನ ಬ್ರಹ್ಮಚರ್ಯ ೪೧೯
ಪುಷ್ಪ ಸುಂದರವೋ ೩೧೨
ಪಂಜರದಲ್ಲಿರುವ ೨೭೭
ಪಂಜರದಲ್ಲಿದ್ದೇ ಹತ್ತೂನಿಟ್ಟಿಗೆ ೨೮೮
ಪ್ರಕಾಶದ ಗಂಡನಿಗೆ ೧೩೦
ಪ್ರಕೃತಿಮಾತೆ, ಪರಾಶಕ್ತಿ ಸ್ವರೂಪ
೩೦
ಪ್ರಪಂಚದ ಆಹಾರವನ್ನೆಲ್ಲ ೧೧೩
ಪ್ರವೀಣನ ಕೈಯಲ್ಲಿ ೧೨೭
ಪ್ರೀತಿಮಾರ್ಗ, ನೀತಿಮಾರ್ಗ ೪೪೬
ಪ್ರೀತಿಸುವವರನ್ನು
ಪಡೆಯುವುದು ೪೩೭
ಪ್ರೀತಿಸುವ
ಹೃದಯವೊಂದಿದ್ದರೆ ೨೯೭


## ಬ


ಬಣ್ಣ ಒಂದೇ ಇದ್ದರೆ ೩೭೪
ಬಗೆ ನಗರಿಯ ೮೦
ಬದನಿಕೆಯು ಶೋಷಕ ೪೨೧
ಬದುಕಿನ ಬೆಲೆಯನ್ನು ೧೭೦
ಬದುಕಿಸಲಾರದುದು ೫೦೫
ಬದುಕು, ಜೀವಿ, ಬದುಕು! ೨೩೫
ಬದುಕುವಾಸೆಯನಿತೇ ಘನ ೯೫
ಬದುಕುವುದು ಬಹು ಸುಲಭ ೨೬೬
ಬಯಸುವುದು ಜೀವಗುಣ ೨೮೯
ಬರ್ಲಿನ್-ಗೋಡೆಯನ್ನು ೧೯೭
ಬಲೆ ಚೆಲುವಾದುದೆಂದು ೧೨೦
ಬಲೆಯಲ್ಲಿ ಸಿಲುಕಿದ ೯೦
ಬಹುಪಾಲು ಸಭೆ ೩೯೪

ಬಾ ದುಃಖವೆ ೨೫೪
ಬಾನವರನ್ನಾಗಿ ಮಾಡಿ ೩೧೧
ಬಾಲ್ಯದ ನಿರ್ಮಾಲ್ಯ ೪೪೧
ಬಾಳ ಬಂಡಿಗೆ ೧೬೭
ಬಿಡಿಯು ಇಡಿಯ ೨೯೧
ಬಿತ್ತುವಾಗೊಂದು ಹಿಗ್ಗು ೧೬೮
ಬಿದ್ದುದು ತಪ್ಪಲ್ಲ ೩೪೦
ಬಿರುಗಾಳಿ ಬಿಟ್ಟಾಗ ೧೨೨
ಬಿಳಿ ಬಣ್ಣ ಭಯಕಾರಿ ೧೯
ಬಿಳಿಯ ಬಟ್ಟೆಗೇ ಕಪ್ಪು ಕಲೆಯ ೩೭೬
ಬೀಜದ ಬಸಿರಿನ ೪
ಬೀಜವನ್ನೊಡೆದು ೨೫
ಬುದ್ಧಿಜೀವಿಗಳು ನಿರಾಶಾ ನಿಬದ್ಧ ೪೪೯
ಬುದ್ಧಿಯ ಬಳ್ಳಿ ೪೨೬
ಬುದ್ಧಿಯ ಬದರಿಯ ೬೬
ಬೆಟ್ಟಕ್ಕೆ ಬೇಗೆ ೨೮೪
ಬೆಟ್ಟದ ಮುಡಿಯ ಮೇಲೆ ೩೨೦
ಬೆಳಕಿನ ಸಾಸಿರ ಸಾಸಿರ ವರುಷ ೧೨
ಬೆಳೆ ಒಕ್ಕಾಲು ೧೪೯
ಬೆಳೆದಂತೆ ಕೂದಲುಗಳ ೪೦೩
ಬೇರುಳಿಸಿ ಕಡಿದ ೩೦೧
ಬೇಲಿ ಮುಳ್ಳಿನ ೩೬೮
ಬಂದು ಬಾಗಿಲ ೫೧೬


### ಭ


ಭಕ್ತಹಿತಾರ್ಥವಾಗಿ ೩೪೩
ಭಕ್ತಾಗ್ರೇಸರಾ, ಕವೀಶ್ವರಾ ೫೦೬
ಭಸ್ಮ ಬಳಿದೊಡಿಲ್ಲ ೨೮೦
ಭಾರತ ಕರ್ನಾಟಕ ೪೨
ಭಾರತಕ್ಕೆ ಬಹಳಷ್ಟು ೪೪೮
ಭಾರತದ ಭವಿತವ್ಯವನ್ನು ೪೫೧
ಭಾರತವು ಸಂಕ್ಷಿಪ್ತ ಬ್ರಹ್ಮಾಂಡ ೪೦
ಭಾರತೀಯರು ಮನಸ್ಸು ಮಾಡಿದರೆ ೪೬೨
ಭುವಿಯ ಸಪ್ತ ಸೋಜಿಗ ೪೩
ಭೂಮಿ ಬೇಕಾದಷ್ಟು ೩೧೪
ಭ್ರಷ್ಟಾಚಾರವೇ ಶಿಷ್ಟಾಚಾರದ ೪೪೭


### ಮ


ಮಗು ಮಗುವಾಗಿಯೇ ೨೨೩
ಮಗು ಮೈ ಮಣ್ಣು ೧೦೯
ಮಣ್ಣಿನ ವಾಸನೆ ೧೨೫
ಮತ್ತವಾರಣ ಕೆಣಕಿದರೆ ೪೨೪
ಮತ್ತೇರಿಸುವ ಮದವೂ ೩೬೭
ಮದ್ದಿನ ಮನೆಯನ್ನು ೩೨೫
ಮಧುವಾತದಲ್ಲಿ ನೀನೇ ೧೩
ಮನದ ಮಗುವನ್ನು ೨೮೨
ಮನದಲಿ ಹುಟ್ಟುವ ೨೭೩
ಮನದ ಸರಸಿಯ ೨೭೪
ಮನುಜನ ಕಣ್ಣಿಗೆ ೩೧೦
ಮನೆ ಕಾಯುವ ನಾಯಿಯನ್ನು ೩೪೬
ಮನೆ ತುಂಬ ಮುಸುರೆ ಚೆಲ್ಲಿ ೩೯೮
ಮನೆಯ ಸಿರಿವಂತಿಕೆ ೩೯೦
ಮರ ಮೇಲಕ್ಕೆ ೨೭೮
ಮರುಹುಟ್ಟನಳಿಪ ಮೋಕ್ಷ ೨೪೮
ಮಹಾನಗರದಲ್ಲಿ ನೋಡಲು ೩೭೩
ಮಹಿಮೆ ಮಹಿಮೆಗೆ ೩೫೭
ಮಾಡುವವರಿಂದ ಕೆಲಸಕ್ಕೆ ೩೮೩
ಮಾತಿನ ಬಸಿರೆ ೪೯೬
ಮಾತುಮಾತಿಗೆ ನಿನ್ನ ೨೬೩
ಮಾತು ಸೋತಾಗ ಮೌನ ೪೧೪

ಮಾನವರ ಹೊಟ್ಟೆ ೩೨೨
ಮಾನವೇತಿಹಾಸದಲ್ಲಿ ೧೫೪


**ಮು**


ಮುಖಂಡರೆ ಶಿಖಂಡಿಗಳಾದರೆ ೩೫೦
ಮುಗಿದ ಮೊಗ್ಗೆ ೫೬
ಮೂಗು ಚುಚ್ಚಿಸಿಕೊಳ್ಳಲು ೩೦೫
ಮುಟ್ಟಿದರೆ ಮೃತ್ಯುವನೆ ೪೨೩
ಮುತ್ತು ಅರಸಿಯ ಕೊರಳ ೩೨೬
ಮುನಿವವನು ಮುನಿಯಾಗ–
ಬಲ್ಲನೇ? ೧೨೩
ಮುನ್ನುಡಿ ಓದಿ ೪೧೮
ಮೂರು ಮೂರು ತಾಸು ೩೩೪
ಮೂರೇ ಮೂರು ೫೧೨
ಮೃಗಜಲದಲ್ಲಿ ಮೀನು ೨೫೬
ಮೇಣದ ಹುಟ್ಟು ೩೩೭
ಮೇಲೆ ಕುಳಿತವರನ್ನು ೪೧೭
ಮೈದಾಸನ ಹಸ್ತದಿಂದ ೨೪೭
ಮೈಯ ರಾಟಿಯ ತಿರುಹಿ ೮೪
ಮೈಲಿಗಲ್ಲು ಮಾರ್ಗದರ್ಶನ ೨೦೦
ಮೋಹದ ದಾಹ ೧೨೬
ಮೌನದ ವೀಣೆಗೆ ೧೬೫
ಮಂತ್ರಿಗಳ ಮನೆಗೆ ೪೫೪
ಮುಂದುವರಿವುದೆಂದರೇನಯ್ಯ?
೪೩೮


**ಯ**


ಯಾರಿಗೆ ಬೇಕಾಗಿ ೫೮
'ಯಾರು ಬಂದವರು?' ೫೨೩
ಯಾರು ನನ್ನಿಂದ ೫೨
ಯಾರು ನಿನ್ನ ನಾಯಕ ೧೬೩
ಯಾವ ಕಲ್ಲನು ೨೩೭
ಯಾವ ಕಲ್ಲಾದರೂ ೩೩೬
ಯಾವ ವಿಶ್ವಾಸ ೪೬೮
ಯಾವುದರಿಂದ ಬೇಸತ್ತರೂ ೩೭


**ರ**


ರಸನಿಮಿಷ ವಿಷನಿಮಿಷ ೧೫೧
ರಾಗ–ದ್ವೇಷಗಳ ನಡುವೆ ೧೯೦


**ಲ**


ಲಾಭದ ಲೋಭಿಗಳಿಂದ ೧೭೩
ಲೇಸೆನಿಸಿಕೊಂಡು ಒಂದು ದಿನ
೫೧೧
ಲೋಕದಲ್ಲಿ ಜ್ಞಾನ ೨೧೨
ಲೋಕ ನನ್ನನ್ನು ೮೩
ಲೋಕಸಭೆಯಿಂದ ೪೫೭


**ವ**


ವಸ್ತುಗಳ ಸೊಟ್ಟು ಡೊಂಕು ೪೦೫
ವಾರಾಂಗನೆಯ ಕೊರಳ ೧೭೪
ವಿಕೃತಿಗೆ ಕಲೆಯ
ಆಕೃತಿಯಿತ್ತರೆ ೨೪೪
ವಿಜಯಗಳಲ್ಲಿ ವಿಜಯ ೩೦೪
ವಿಜ್ಞಾನವನ್ನೇ ಅಧಾರಣಿ
ಮಾಡಿ ೨೧೩
ವಿಜ್ಞಾನಿಯ ಬುದ್ಧಿ ೧೫೭
ವಿಜ್ಞಾನಿಯೆ, ನೀನು ೪೩೧
ವಿದ್ಯೆ ಬಂತು ೧೦೦
ವಿದ್ಯೆಯನ್ನು ಮುಚ್ಚಿಟ್ಟು ೩೩೧
ವಿಭಕ್ತದಲ್ಲಿಯೂ ಅವಿಭಕ್ತವನ್ನು ೨೨೧
ವಿಲಾಯಿತಿಯ ಎಮ್ಮೆ–
ಯಾದೊಡೇನು ೨೭೧
ವಿಷಯವ ಬಿತ್ತಿ ೪೭೮
ವೀತರಾಗತೆಯ
ಬಾಹುಬಲಿಯ ೪೬೧

ವೃಕ್ಷ ಫಲಭರಿತವಾಗಿದ್ದರೆ ೧೩೪
ವೈದುಷ್ಯ ವಣಿಕ ೧೯೯
ವ್ಯಾಧಿ ಪ್ರಬಲವಿದ್ದಷ್ಟೂ ೧೩೭
ವ್ಯಾಸಂಗಕ್ಕೆ ಸಮಯವಿಲ್ಲ ೨೧೯

**ಶ**

ಶಬ್ದ ಪಡೆದುದು ಸ್ವಲ್ಪ ೮೬
ಶಾಖೋಪಶಾಖೆಗಳಾಗಿ ಹಬ್ಬಿ ೪೬೪
ಶಿಕ್ಷಣದ ಸಾರ್ವತ್ರೀಕರಣ–
ವಾಗಲಿ ೪೬೩
ಶಿಖರಗಳ ಸಾಲುಗಳನ್ನೊಮ್ಮೆ ೧೬೨
ಶೇಷಣ್ಣನವರ ವೀಣಾ ವಿತಾನ ೪೬೭
ಶೈಶವ ಬಾಲ್ಯಗಳ ೪೯೨

**ಷ**

ಷಡ್ರಸಗಳ ರುಚಿಭೇದ ೭೯

**ಸ**

ಸತ್ತ ಸಿಂಹಕ್ಕಿಂತ ೩೫೩
ಸತ್ಯಾನ್ವೇಷಣೆಯ ಹಾದಿಯಲ್ಲಿ ೬೭
ಸತ್ಕಾರ್ಯಕ್ಕೆ ಪ್ರೇರಣೆ ೩೯೨
ಸದ್ಯಸ್ತೃಪ್ತಿಯೇ ಗುರಿಯಾದರೆ ೨೨೬
ಸಭೆ, ಸಮಿತಿ, ಸಂಘ ೨೨೦
ಸಮವಸ್ತ್ರಗಳಲ್ಲೊಂದು
ಸೊಗಸಿದ್ದರೆ ೫೦೦
ಸಮಯವಿದ್ದಾಗ ಸಾಧನ ೧೩೮
ಸಮಯ ಸಾಧಕರಿಗೆ ೪೦೧
ಸಮುದ್ರವೇ ನೀರಡಿಕೆ ೪೧೫
ಸರಕಾರ ದರೋಡೆಕಾರನಾದರೆ ೩೩೨
ಸರಪಳಿಯ ಬಲ ೩೨೩
ಸರ್ವೋದ್ಧಾರದ ವಿಚಾರಗಳ ೩೨೮
ಸವೆದುಹೋದ ನಾಣ್ಯ ೭೪
ಸಹನಶೀಲತೆಗೊಮ್ಮೆ,
ಸೃಜನಶೀಲತೆಗೊಮ್ಮೆ ೮೨
ಸಾಯುವವರೆಗೂ ಶಾಸ್ತ್ರ ೨೬೪
ಸಾವಿರ ಸಾವಿರ ಸಿಹಿ ನೀರಿನ ೧೧೪
ಸಾಹಿತ್ಯದಲ್ಲಿ ಶಾಸ್ತ್ರವಿರಬಹುದು ೪೦೪
ಸಿರಿಯ ಸರಿಹಸುಗೆ ೩೦೨
ಸುಖದೊಡನೆ ಸರಸ–
ವಾಡುವಾಗಿನ ೪೯೧
ಸುರಿವ ಮಳೆ ೧೯೮
ಸುಳ್ಳಿನಿಂದ ದೊರೆವುದು ೪೦೨
ಸೂರ್ಯ ಬರುವಾಗ ಸದ್ದಿಲ್ಲ ೪೨೫
ಸೃಷ್ಟಿ ಸೌಂದರ್ಯಕ್ಕೆ ೩೫
ಸೆರೆ ಕುಡಿವುದನ್ನು ೪೨೦
ಸೋಲನ್ನೇ ಗೆಲವನ್ನಾಗಿ ೩೭೨
ಸೌರವ್ಯೂಹದಲ್ಲಿ ಗ್ರಹ ೨೯
ಸಂಗ್ರಹಿಸಿದೆ, ಸಂಗ್ರಹಿಸಿದೆ ೩೨೪
ಸಂಶಯಗಳ ಸಂತೆಯಲ್ಲಿ ೧೩೧
ಸಂಶಯದ ಹೊಲದಿ ೧೩೩
ಸಂಸ್ಕರಿಸಿದಂತೆ ಬುದ್ಧಿ ೯೭
ಸಂಶಯ ಸಮುದ್ರದಲ್ಲಿ ೩೭೦
ಸಿಂಗರಿಸಿಕೊಂಡುದೇನೋ
ಸರಿ ೫೧೯
ಸಿಂಹಾಸನದ ಮೇಲಿನ ೩೩೫
ಸ್ಥಲದ ತೊಟ್ಟಿಲಲ್ಲಿ ೨೪
ಸ್ಥಲದ ಧಾರಾಪಾತ್ರೆಯಿಂದ ೨೭
ಸ್ಥಿತಪ್ರಜ್ಞನಾಗಲು
ಶತಪಥವನ್ನೇನೂ ೮೧
ಸ್ವತಂತ್ರಧೀರ ಸಿದ್ಧೇಶ್ವರಾ
೪೧, ೨೪೩, ೨೮೧, ೩೨೭, ೫೧೭
ಸ್ವಂತ ಚಿಂತನೆಗಂಜಿ ೪೫೨
ಸ್ಫುರಿಸಿದಾಗ ಲಿಖಿಸಲಾಗದೆ ೫೦೨

## ಹ


ಹಕ್ಕಿಯ ಹಾರಾಟ ೨೧೧
ಹಕ್ಕಿಯ ಗೂಡೊಂದು ೪೭೯
ಹಣಕೊಳ್ಳಲಾಗದುದೂ ೧೯೩
ಹಣಕೊಂಡ ಅನರ್ಹ
ಕೀರ್ತಿಗಿಂತ ೪೧೬
ಹಣದುಬ್ಬರದ ಅಬ್ಬರದಲ್ಲಿ ೪೫೯
ಹಣ ಹರಟುತ್ತಿರುವಾಗ ೩೮೫
ಹಣ್ಣು ಸಿಹಿಯಾಗಿದ್ದರೆ ೩೮೬
ಹಲವು ಗೆಳೆಯರನ್ನು ೪೧೧
ಹಲವು ಕಸಿಗಳ ಹೊಂದಿ ೧೧೬
ಹಲವು ಮಸಿಗಳ ಹೀರಿ ೧೦೨
ಹಸಿ ಬಿಸಿಯ ಗಣಿಸುವುದೆ ೧೭೬
ಹಸಿರಿಲ್ಲದಲ್ಲಿ ಹಸಿರು ೩೬೨
ಹಸಿವೆಯೆತ್ತ, ಅಶನವೆತ್ತ ೧೭
ಹಸುಗೂಸುಗಳ ನಸು ನಗೆ ೧೧೯
ಹಸುವಿಗೆ ಹತ್ತಿಯ ಕಾಳು ೨೦೭
ಹಳ ರೆಕ್ಕೆ ಕಳಚಿದುವು ೨೦೧
ಹಳೆಮರದ ಚಿಗುರು ೪೨೮
ಹಾಜರಿ ಹಾಕುತ್ತಲೆ ೨೫೧
ಹಾವಿಗೂ ದೇವತ್ವವನಿತ್ತ ೩೬೫
ಹಿಂದಿನ ಹಿರಿಯ ೪೯೦
ಹಿಂದೆ ಪ್ರಾಯದ ಪೆಂಪೆ ೨೧೮
ಹೆಂಡದ ಹರವಿಯನ್ನು ೩೪೫
ಹಿತ್ತಾಳೆ ಕಿಲುಬು
ಬಿಡುವುದೆಂದು ೩೧೬
ಹುಟ್ಟಿ ಬೆಳೆದ ಹಳ್ಳಿ ೪೬೯
ಹುಲಿಯ ಚರ್ಮದ ಮೇಲೆ ೩೩೮
ಹೂಗಳ ಹಾಸವನ್ನು ೨೨೫
ಹೂತ ಕಾಫಿಯ ತೋಟ ೩೬
ಹೂವನೂ ಬಿಡದ ೪೭೦
ಹೂವಿಗೆ ಬಣ್ಣವಲ್ಲದೆ ೯
ಹೂವಿನ ಗಂಧ ೪೩೩
ಹೂವಿನಲ್ಲಿ ಮಧುವಾಗುವ ೧೪೪
ಹೂವು ತಮ್ಮೆದೆಯ ೧೫೮
ಹೂ ಹೆತ್ತ ಬಳ್ಳಿಯ ೨೯೪
ಹೃದಯದ ಹೆದ್ದಾರಿಯಲ್ಲಿ ೬೫
ಹೃದಯರಸ ಬತ್ತಿದರೆ ೨೯೬
ಹೆಣವಾದಮೇಲೆ ೧೦೧
ಹೆಣೆದ ಹೂವುಗಳು ೮೯
ಹೆಣ್ಣೆ ನೀನು ೪೩೨
ಹೆಪ್ಪಿನ ಮಜ್ಜಿಗೆಗೆ ೧೯೬
ಹೆಸರಿಲ್ಲದ ನೀನು ೭
ಹೊಗಳಿದವರು ಹಲವರೆಂದು ೪೮೫
ಹೊತ್ತಿನ ಹುತ್ತದ ೧೫೯
ಹೊಯ್ದ ಕೈ ೨೦೮
ಹೊರಗಿನ ಕತ್ತಲೆ ೨೧೦
ಹೊರಗು ಪದೇ ಪದೇ ೧೫೫
ಹೊರಲಾಗದ ಕಲ್ಲನಿಳಿಸಿ ೩೪೨
ಹೊರುವವರು ಗಟ್ಟಿಯಿದ್ದರೆ ೩೪೯
ಹೊಸ ಮಾವಿನ ೨೮೩
ಹೊಸರಾಜ್ಯಸ್ಥಾಪಕ ೪೨೭
ಹೊಳೆಗಟ್ಟು ಮುಟ್ಟುವವರೆಗೆ ೩೦೮
ಹೋಳಿಯ ಹಾಡುಗಳಲ್ಲಿ ೩೧೫

# ವಚನಾನುಕ್ರಮಣಿಕೆ

## ವಚನ ನಂದನ


### ಅ

ಅಂಗೈಯಗಲದ ೧೧೦
ಅಂತುಳೆ ೨೯೮
ಅಕ್ಷರಗಳಲ್ಲಿ ೨೯೬
ಅಕ್ಕಿ ಅನ್ನವಾಗಿದೆಯೆ ೪೧೩
ಅಗಸನ ಕತ್ತೆಗಳ ೧೫೩
ಅಗ್ನಿಶಾಮಕದಳ ೩೬೮
ಅಣುಪರಮಾಣುಗಳು ೯೭
ಅತ್ಯಾಚಾರಗಳ ೩೩೬
ಅದರ ಆಯುಮಾನದಲ್ಲಿ ೧೨೨
ಅದು ಇದು ನನ್ನದು ೫೨
ಅದು ನಿಜ ಇದು ನಿ ೨೪
ಅದ್ವಿತೀಯ ನೀನೊಬ್ಬನೆ ೩
ಅನುಗ್ರಹಿಸುವ ೨೯
ಅಯ್ಯೋ ಪಾಪಿ ಎಂಬುದೇ ೧೪೮
ಅರ್ಥ ಕಾಮಗಳೇ ೩೨೦
ಅರ್ಥ ಕೈಯೊಳಗಿಲ್ಲ ೧೮೮
ಅರ್ಬುದ ೨೦೯
ಅರಗಿನ ಮನೆ ೧೮೭
ಅರಮನೆಗಳಿವೆ ೩೨೩
ಅಲಸಂದೆಯ ಗಿಡ ೪೧೯
ಅಲ್ಲವಾದುದ ೪೧೦
ಅಲ್ಲಿ ಕ್ಷಿಪಣಿ ೨೭೬
ಅಲ್ಲಿ ನೀನು ಇಲ್ಲಿ ನೀನು ೬
ಅವಕಾಶ ಪಡೆದು ೩೫೬

### ಆ

ಆಕಾಶದಲ್ಲಿ ೪೬೪
ಆಡಲು ಬಳಸುವುದುಂಟೆ ೧೦೭
ಆಡಿ ಹಿಗ್ಗುವವರು ೨೪೭
ಆಣೆ ಕಲ್ಲುಗಳು ೭೬
ಆದಿಮೌನದ ೬೨
ಆನೆಗೆ ತಿನ್ನುವ ೩೩೩
ಆರ್ಥಿಕ ಕ್ಷೇತ್ರದ ೨೯೧

### ಇ

ಇದೀಗ ನನ್ನ ಕಲ್ಪನೆ ೭೦
ಇದು ನಗರದ ೩೬೫
ಇದುವರೆಗೆ ಮದಕರಿ ೩೮೯
ಇದು ಹಗಲೆನ್ನಲೆ ೨೫೫
ಇದು ಹಾಳು ಬಾವಿ ೨೩೯
ಇದೇನು ಪಸರಿಸುತ್ತಿದೆ ೯೯
ಇದೊ ಚೋರ ೩೪೭
ಇನ್ನಾರಿಗೂ ೭೧
ಇನ್ನೊಂದು ಕ್ಷಣಕ್ಕೆ ೩೪೨
ಇಲ್ಲಿ ಆದ್ಯತೆ ೧೩೯
ಇಲ್ಲಿ ಕಾಳಸಂತೆಯೇ ೩೧೯
ಇಲ್ಲಿ ಚತುರಂಗಬಲ ೩೪೪
ಇಲ್ಲಿ ಪ್ರಜೆಗಳ ೩೦೭
ಇಲ್ಲಿ ಯಾರಾರ ೩೧೧
ಇಲ್ಲಿ ಸಿದ್ಧಲಿಂಗನಿಗೆ ೧೦೧
ಇಲ್ಲಿ ಹೊಲಸಿನ ೨೪೫
ಇಲ್ಲಿ ಹುಟ್ಟುವವರ ೧೬೮
ಇಷ್ಟಲಿಂಗವಾಗಿ ೨೧
ಇಂಗ್ಲೆಂಡಿನಲ್ಲಿ ೪೭೩
ಇಂದು ಶಿವರಾತ್ರಿ ೪೫೮
ಇಂದು ಸಮಸ್ತ ೨೯೩
ಇಂದೆನ್ನ ಬಿಸಿಬಿಸಿ ೮೦

ಇಂದೆನ್ನ ಮನದಲ್ಲಿ ೪೪
ಇಂದ್ರಿಯ ದಮನವೇ ೪೧೧

## ಈ

ಈ ಇಂದ್ರಿಯಗಳ ೯೧
ಈ ಉಪವನದ ೨೪೧
ಈ ಕಾಲಕ್ಕಿಂತ ೨೫೮
ಈ ಗಾನ ದೋಸೆಯ ೪೫೭
ಈಗ ವಿದ್ಯಾಲಯಗಳೇ ೩೨೮
ಈ ಜೀವನದ ನಾವೆಯ ೯೫
ಈ ಪೇಟೆಯಲ್ಲಿ ೪೪೫
ಈ ಬದುಕಿನ ದೋಣಿ ೭೭
ಈ ದೇಶದ ೩೦೮
ಈ ದೇಶದಲ್ಲಿ ಕಲ್ಲಾಗಿ ೩೧೪
ಈ ದೇಶದ ಭವಿತವ್ಯ ೨೮೭
ಈ ದೇಶದ ಹಸು ೨೬೩
ಈ ನಿನ್ನ ಸಾಗರ ೧೩೫
ಈ ನೆಲ ನಿಶ್ಚಲ ೪೭
ಈ ಮನೆ ಹಾಳಾಗಿದೆ ನಿಜ ೫೬
ಈ ಮನೆಗೆ ೪೪೬
ಈ ಮಾನವ ೧೦೫
ಈ ಮಂತ್ರಿ ೨೯೭
ಈ ಸಭ್ಯರ ಸಭೆ ೩೫೭
ಈ ಹಸುವಿನ ಹಾಲು ೧೧೫
ಈ ಹಳ್ಳಿಯ ೩೫೪

## ಉ

ಉತ್ಸಾಹವೇ ೪೩
ಉಪವನದ ೪೯

## ಎ

ಎಂಜಲಾಗುವುದೆಂದು ೧೯೯
ಎಂದಿನಿಂದಲೂ ೧೨
ಎಂದಿಲ್ಲದಷ್ಟು ೩೧೫
ಎಂದೋ ಕೇಳಿದ ೧೦೩
ಎಚ್ಚರದ ೪೦೦
ಎಣ್ಣೆಬತ್ತಿಗಳ ೨೬೨
ಎತ್ತರಕ್ಕೆ ಬೆಳೆಯಲಾರದ ೧೫೭
ಎತ್ತೆತ್ತಲೋ ೧೮೦
ಎಲ್ಲ ದೊರೆಯುತ್ತಿದ್ದಾಗ ೩೧೮
ಎಲ್ಲರ ಕನಿಷ್ಠತಮ ೩೨೨
ಎಲ್ಲರ ವಿಶ್ವಾಸ ೨೮೯
ಎಲ್ಲರೂ ೨೨೦
ಎಲ್ಲವು ಎನಗಾಗಿ ೪೩೭
ಎಲ್ಲರಂತೆ ೪೫೦
ಎಲ್ಲೆಲ್ಲಿಯೂ ೨
ಎಸೆದ ಪತ್ರಾವಳಿ ೩೩೧

## ಏ

ಏನನೊ ಕಳೆದು ೯೩
ಏನಾಗಬೇಕೆಂದಿದ್ದೆ ೧೩೦
ಏನಾದರೂ ೪೪೪
ಏನೂ ಇಲ್ಲದಿದ್ದ ೪೫೧
ಏನೇನೋ ೧೭
ಏನೊಂದೂ ೨೧೩
ಏಪ್ರಿಲಿನ ೬೭
ಏರಿದ್ದ ಎತ್ತರಕ್ಕೆ ೩೯೧

## ಐ

ಐದುನೂರು ೨೬೪

## ಒ

ಒಂದರಿಂದ ೪೧
ಒಂದಿಲ್ಲೊಂದು ೨೧೬
ಒಂದು ಒಳ್ಳೆಯ ೪೪೨

ಒಂದು ಕಿಚ್ಚಿನ ೩೨೫
ಒಂದು ರಥಕ್ಕೆ ೪೬೮
ಒಂದೆ ಕವಿತೆಯನ್ನು ೨೩
ಒಂದೇ ಬಳ್ಳಿಯಲ್ಲಿ ೩೭
ಒಂದೊಂದು ಆವಿಷ್ಕಾರ ೧೨೭
ಒಂದೊಂದು ಜೀವಿಗೂ ೧೮೧
ಒಂದೊಂದು ತರದ ೧೧೨
ಒಂದೊಂದು ಬೆಟ್ಟಕ್ಕೂ ೧೩
ಒಡೆಯರ ಲಾಭದ ೩೫೧
ಒಡೆಯರಿಗೆ ೨೩೬
ಒಬ್ಬ ನೀರೋನಿಂದ ೨೮೪
ಒಮ್ಮೆ ಹಾಲಾಹಲವ ೩೬
ಒಮ್ಮೆ ಹುಟ್ಟಿನ ೨೭೩
ಒರತೆಯಂತೆ ೪೨೫
ಒಲವಿದ್ದಾಗ ೨೨
ಒಳಗಿನ ಬೆಳಕು ೪೬೨
ಒಳಗೆ ನೀರಿದ್ದೂ ೨೦೩
ಒಳಿತು ಉರಿವ ೨೨೬

## ಓ

ಓ ಕಾಲ ೨೫೪
ಓ ಸ್ವಾತಂತ್ರ್ಯಾಪಹಾರಕ ೪೩೫

## ಕ

ಕಂಬನಿಗಳು ೨೧೯
ಕಂಬನಿಗಳೆ ೮೧
ಕಚ್ಚಿ ವಿಷವೇರಿಸುವ ೧೯೦
ಕಟ್ಟಿರುವೆಗಳು ೨೮೫
ಕಡಲಿಗೆ ಉಪ್ಪು ೪೭೦
ಕಡಲಿನ ೨೦
ಕತ್ತಲೆಯನ್ನು ೪೨೩
ಕತ್ತಲೆಯಲ್ಲಿ ೭೩
ಕನ್ನಡ ನಾಡಿನ ೩೩೯
ಕಪ್ಪೆ ನೊಣವನ್ನು ೩೩೫
ಕರು ಮರೆತರೂ ೧೫
ಕವನ ಕಥೆ ೩೮೨
ಕಾಗದವು ಒಂದೇ ೧೪೦
ಕಾಗೆಗಳದೇ ೪೦೭
ಕಾಣುವುದನ್ನು ಮಾತ್ರ ೧೭೬
ಕಾಫಿರನಲ್ಲ ೪೬೩
ಕಾಮ ಜೀವನ ೧೬೨
ಕಾಮನನ್ನೇ ಸುಡುವ ೧೨೬
ಕಾಮವೆ, ಮಿತಿಯಲ್ಲಿ ೧೪೫
ಕಾಯಿಲೆ ೨೨೭
ಕಾಯಿ ಹೆತ್ತ ಮರಕ್ಕೆ ೨೪೬
ಕಾರಣದಿಂದ ೧೫೦
ಕಾಲಕ್ರಮದಲ್ಲಿ ೨೯೫
ಕಾಲ ತಿದ್ದಿದವರ ೨೬೦
ಕಾಲ ನೂಲುತ್ತಿದೆ ೭೫
ಕಾಲವೆ ನಿನ್ನ ಚಣಗಳು ೬೩
ಕಾಲ ತೊಳೆಸಿ ೩೪೬
ಕೂಡಿ ನಡೆ ಕೂಡಿ ನುಡಿ ೧೩೩
ಕೆಟ್ಟದ್ದನ್ನು ೩೮೬
ಕೆಳಗೆ ೨೦೭
ಕೊನೆಗೊಮ್ಮೆ ೬೫

## ಗ

ಗಂಡಿನೆದೆಯಲ್ಲಿರದೆ ೪೫
ಗಾಳಿ ಮೊದಲ ೧೯೭
ಗಾಳಿಯನ್ನು ಬಿತ್ತಿ ೪೬೬
ಗುಡಿಯ ಮುಂದೆ ೪೬೫
ಗುಡಿಸಲುಗಳಿಗೆ ೩೧೦

ಗುರುವಿಲ್ಲದೆ ೧೩೪
ಗೋಪುರದ ೩೫
ಗೋವಿನ ಪೂಜೆ ೩೦೧
ಗೋವಿನ ಮುಖದ ೨೪೨
ಗೌಳಿಗನ ೩೧೨

## ಚ

ಚಿತ್ತಕ್ಕೆ ೧೪೯
ಚೆಲುವಿನ ೨೩೦

## ಜ

ಜನಪ್ರಿಯತೆ ೩೪
ಜನವನದಲ್ಲಿ ೩೭೯
ಜನ್ಮದಿಂದ ೩೩೦
ಜಾತೀಯತೆಯ ೩೫೨
ಜೀವನದ ಜಟಿಲ ೩೯೭
ಜೀವ ಹಾರಿದ ೧೮೪
ಜೇಡವೆ ೪೪೩
ಜೇನುಹುಳುಗಳೆ ೧೭೮
ಜ್ಞಾನೇಂದ್ರಿಯ ೪೬೯

## ಡ

ಡ್ಯಾಂಟೇಯ ನರಕಕ್ಕೂ ೧೧೪

## ತ

ತಂದೆಯನ್ನಾದರೂ ೩೧
ತಂದೆಯೇ ೬೪
ತಂದೆ ಸಿಟ್ಟಿಗೆದ್ದರೆ ೫
ತಕ್ಕ ನೆಲ ೩೨೯
ತತ್ತ್ವಮಸಿ ೨೮೩
ತನ್ನ ದೋಣಿಯ ೪೨೭
ತಲೆಗೊಮ್ಮೆ ೧೫೪
ತಲೆಮಾರಿಗೊಮ್ಮೆ ೨೫೭
ತಾನೆ ಗುರು ೧೬
ತಾನೇ ವೈದ್ಯ ೫೫
ತಾರೆಗಳಿಂದ ೧೧೩
ತಿನ್ನುವ ಬಾಯಿ ೨೪೮
ತಿರಿದು ತಂದುದರಲ್ಲಿ ೪೨೦
ತಿಳಿಯಲೆಂದು ೧೮೫
ತಿಳಿವಿನ ಬಿರುಬಿಸಿಲು ೨೬
ತೋರುವುದೆಲ್ಲ ೧೦
ತ್ರಿದೋಷ ೩೨೪

## ದ

ದಾರಿತಪ್ಪಿದ ೮
ದಾರಿ ಹುಡುಕುವ ೧೯೩
ದಾಸ್ಯಕೂಪಕ್ಕೆ ೨೮೬
ದುಮ್ಮಾನವನ್ನೂ ೩೪೩
ದೇವಾಜ್ಞೆಯಿದೆಂದು ೩೩೨
ದೇಶ ವಿದೇಶಗಳಲ್ಲಿ ೪೦
ದೊಡ್ಡವರೆನ್ನಿಸಿ ೨೨೩
ದೊರೆಯ ದರ್ಪವನ್ನು ೧೬೬
ದ್ವಿರಾಷ್ಟ್ರವಾದದ ೩೫೩
ದುಃಖಿಸಬಾರದು ೪೧೫

## ಧ

ಧರ್ಮಯುದ್ಧ ೨೨೮
ಧರ್ಮವನ್ನು ೧೫೧

## ನ

ನಂಬಿ ಕರೆದರೆ ೧೧
ನಂಬಿ ಕರೆದರೆ ಓ ಎನ್ನ ೧೪
ನಂಬಿದವರು ೫೦
ನಗರದಲ್ಲಿ ಅತ್ತಿತ್ತ ೩೬೬

ನಗರ ವಾಸಿಗಳು ೩೭೨
ನಗರ ವೀಥಿಗಳಲ್ಲಿ ೯೪
ನಗರೋದ್ಯಾನದಲ್ಲಿದ್ದರೆ ೪೬
ನಗೆಗೆ ಕಚಗುಳಿ ೨೨೪
ನಡೆವ ಭೂಮಿ ೧೬೧
ನದಿಯ ದಂಡೆಯ ೪೦೯
ನನಗೆ ಮರವು ೪೫೩
ನನ್ನ ಆತ್ಮ ೧೫೫
ನನ್ನ ಇರುವಿನ ೭
ನನ್ನ ಒಳಗನ್ನು ೧೦೮
ನನ್ನ ಅಂತರಂಗದ ೧೦೨
ನನ್ನ ಕಣ್ಣೀರ ೮೨
ನನ್ನ ಕೊಡಲಿ ೩೨೭
ನನ್ನ ಗುಂಡಿಗೆಯ ೮೬
ನನ್ನ ತನು ೨೫೯
ನನ್ನ ಧರ್ಮದ ೨೬೯
ನನ್ನನ್ನು ೪೧೪
ನನ್ನ ಪ್ರಶ್ನೆ ೫೪
ನನ್ನ ಬನ್ನದ ೮೩
ನನ್ನ ಬದುಕನ್ನು ೪೦೫
ನನ್ನ ಮೊರೆ ೩೯೫
ನನ್ನ ವಚನ ೩೮೪
ನನ್ನಿಯನೇ ೧೭೫
ನನ್ನಿಚ್ಚೆ ೪೭೧
ನಮ್ಮ ಆಳುವ ೪೨೨
ನಮ್ಮ ಉಸಿರಿನ ೪೦೨
ನಮ್ಮ ಖಾಸಗಿ ಜೀವನ ೨೯೦
ನಮ್ಮದು ಚಿನ್ನದ ೩೬೪
ನಮ್ಮ ಧರ್ಮದಂತೆ ೨೭೦
ನಮ್ಮ ಹಳ್ಳಿಗಳಲ್ಲೀಗ ೩೫೫
ನಾನೀಗ ಬರೆಯುತ್ತಿರುವಂತೆ ೨೪೪
ನಾನು ಕೆಡಿಸಿದುದನ್ನು ೧೨೦
ನಾನು ಬರೆದುದರಲ್ಲಿ ೭೨
ನಾನು ಮಗುವಾಗಿದ್ದಾಗ ೧೧೮
ನಾನು ಈ ದೇಹ ೨೧೦
ನಾನೇನೂ ನಿನ್ನನ್ನು ೭೯
ನಾಲಗೆಯ ತುದಿಯಲ್ಲಿದ್ದೂ ೨೫
ನಾಲ್ಕು ಗೋಡೆ ೨೩೫
ನಿದ್ದೆ ಹತ್ತಿದಾಗ ೩೯೩
ನಿನಗಾಗಿ ಒಡೆದ ೩೯೨
ನಿನಗೆ ಬೇಕೆನಿಸಿದಾಗ ೪೪೦
ನಿರಾಶೆಯ ಬೆನ್ನೇರಿ ೮೪
ನಿನ್ನ ಉದ್ದೇಶ ೧೨೯
ನಿನ್ನ ಕರಿ ಮಣ್ಣು ೪೭೨
ನಿನ್ನ ಧ್ಯಾನದ ದಿವ್ಯೌಷಧ ೯೦
ನಿನ್ನ ನಂಬಿಕೆಯ ೯೨
ನಿನ್ನ ನರಳಿಕೆಗಳಿಂದಲೇ ೮೮
ನಿನ್ನ ನೀ ತಿಳಿ ೨೭
ನಿನ್ನ ನೆರೆಯವರನ್ನು ೩೬೯
ನಿನ್ನ ನೋಡದ ಮುನ್ನ ೪೨
ನಿನ್ನ ಬಗ್ಗೆ ಬರೆವಾಗ ೪೫೬
ನಿನ್ನನ್ನೂ ಕೂಡಿ ಇರುವುದೂ ೭೪
ನಿನ್ನನ್ನು ನೆಚ್ಚಿ ೩೦
ನಿನ್ನಲ್ಲಿ ನಾನಿರಿಸಿದ ೩೯೪
ನಿನ್ನ ಸಕಲ ಸಂಪದ್ಭರಿತ ೧೨೩
ನಿನ್ನ ಹೆಸರಿನಲ್ಲಿ ೩೨
ನಿನ್ನೆ ಕಡೆದ ೨೫೩
ನಿನ್ನೆ ಮಾಗಿದ ೨೫೬
ನಿನ್ನೊಳಗೆ ನನ್ನನ್ನಾದರೂ ೨೮
ನಿನ್ನ ಭಕ್ತರ ೪೫೯
ನಿಮಗೆ ಹಾಸಿಗೆ ೩೭೧
ನಿರ್ದೋಷಿಗಳಿಗಂಟಿದ ೪೪೧

ನೀರ ಕ್ಷೀರ ವಿವೇಕ ೧೬೩
ನೀರುಗಳಲ್ಲೆಲ್ಲ ೧೫೬
ನೀನಿತ್ತ ೪೦೪
ನೀನು ಗಂಧವತಿಯೆಂದೇ ೧೧೧
ನೀನು ಸುಖಿಸುವ ೪೪೯
ನೀನು ಸೃಷ್ಟಿಸುವ ೩೬೦
ನೀನೆನಗೆ ಆರು ವರ್ಷಗಳಲ್ಲಿ ೪೫೨
ನೂರು ನೌಕೆಗಳಿವೆ ೧೯೮
ನೂಲಿನ ಉದ್ದಕ್ಕೆ ೩೯೬
ನೋಟವೊಂದರಿಂದ ೬೦
ನೋಡ ನೋಡುತ್ತ ೧೧೬
ನೋಡಿ ಹಿಗ್ಗಬೇಕಾದ ೧೯೫

## ಪ

ಪಂಚನದಿಗಳ ೩೬೨
ಪಂಥವೊಂದಕ್ಕೆ ೩೪೮
ಪಂಪನ ಬಗ್ಗೆ ೧೩೧
ಪರಿಮಳ ಸುರಿವ ೩೮
ಪೆಟ್ಟಿನ ಮೇಲೆ ಪೆಟ್ಟು ೭೮
ಪ್ರಜನಿತ ಶಿಶು ೨೧೭
ಪ್ರಜಾತಂತ್ರದ ೨೭೫
ಪ್ರಜಾಪ್ರಭುತ್ವ ೨೭೮
ಪ್ರಜಾಸತ್ತೆಯ ೨೯೪
ಪ್ರತಿನಿತ್ಯ ೨೩೮
ಪ್ರತಿಯೊಂದು ೨೬೭
ಪ್ರಪಂಚದ ಪ್ರಾಣಿ ೨೪೩

## ಬ

ಬಡವರ ಒಡೆಯರ ೪೧೮
ಬಣ್ಣ ಪರಿಮಳಗಳ ೧೨೪
ಬದುಕಬೇಕೆಂಬುದು ೧೭೦
ಬದುಕಿನ ಬಿರುಬಿಸಿಲು ೪೨೬
ಬದುಕಿನ ಹೊಲ ೩೮೦
ಬದುಕಿಸಬಲ್ಲ ೧೩೯
ಬರ್ಬರರು ೩೧೭
ಬರಹಗಾರ ೧೫೨
ಬಹು ಪ್ರಯೋಗ ೪೦೩
ಬಾಗಿಲಿಗೆ ಬಂದ ೩೪೧
ಬಾನೆ ಬರಿದಾಗಿರುವಾಗ ೨೦೦
ಬಾ ಬಾ ಬದಲಾವಣೆ ೨೪೯
ಬಾಯಿಯಿಂದಲೂ ೧೯೬
ಬಾಳಿನ ಬ್ಯಾಂಕಿನ ೩೯೦
ಬಾಳು ಬದುಕು ೩೮೮
ಬಿಟ್ಟ ಬಾಣಕ್ಕೆ ೫೩
ಬಿತ್ತಿನಂತೆಯೇ ೧೭೪
ಬಿತ್ತುವ ೧೨೮
ಬಿದಿಯ ಬೀಸುಕಲ್ಲಿನಲ್ಲಿ ೧೦೪
ಬಿದಿರಿಗೆ ೯
ಬಿದ್ದಕನಸು ೧೩೭
ಬೀಜ ಪರಿವರ್ತನೆ ೧೭೭
ಬದ್ಧಬಸವರು ೨೫೨
ಬೆಕ್ಕಿನ ಕನಸಿನ ೩೩
ಬೆಳಕಿನ ೯೬
ಬೆಳಗಾಗುತ್ತಲೇ ಬೇರುಗಳ ತಿಂದು ೪೧೬
ಬೇರುಗಳು ೨೦೫
ಬೇರೆ ದೇಶಗಳ ೪೪೮
ಬೇರೆಯವರು ೪೩೨
ಬೇಲಿ ಬೆಳೆಯ ೨೭೨
ಬೇಲಿಯಿಲ್ಲದ ೩೬೧
ಬೇಸಿಗೆಗೆ ೨೨೫

## ಭ


ಭಕ್ತಕಾಯ ೪
ಭಾರತದ ೨೬೧
ಭಿಕ್ಷೆಬೇಡಿ ೩೦೨
ಭೂತದ ೨೫೧
ಭೂಮಿಯ ೪೫೫


## ಮ


ಮಂಜರನ ೪೩೦
ಮುಂದಾಗುವುದು ೩೪೫
ಮುಂಬೆಳಕಿನಲ್ಲಿ ೪೮
ಮಗನಿಗೆ ೧೮
ಮತಮಂದಿರ ೨೧೫
ಮತವಿರಲಿ ೬೬
ಮಡಕೆ ೩೭೫
ಮಡಿಮೈಲಿಗೆ ೧೯೧
ಮಡುವಿರುವಲ್ಲೆಲ್ಲ ೪೪೭
ಮಣ್ಣಿಲ್ಲದೆ ೨೦೧
ಮತ್ತೆ ಬರುತ್ತಿಹಳು ೩೪೯
ಮದುವೆಯಾಗುವ ೨೩೪
ಮದುವೆಯಾದವರಿಗಿಂತ ೧೪೪
ಮದ್ಯದಲ್ಲಿ ೧೬೭
ಮನೆ ಒಡೆಯದ ೨೦೮
ಮನದ ಅಂಗಣದ ೪೦೧
ಮನದ ನಿಬಿಡ ೪೩೧
ಮನದ ಮೇಲೆ ೫೮
ಮನಸ್ಸಿನ ೨೦೬
ಮನೆ ಬಿಟ್ಟು ೪೩೩
ಮನೆ ಮನೆಯ ೪೭೫
ಮನೆಯ ೩೩೮
ಮರ ಕಡಿದ ತಪ್ಪ ೫೭
ಮರಕ್ಕೆ ೧೯
ಮರಗಳನ್ನು ೩೨೬
ಮರದ ಮೇಲೆ ೬೧
ಮಳೆ ಬರಲಿ ೩೮೭
ಮಾತೆ ಕೊನೆಗೂ ೩೮೧
ಮಾನವ ಕುಲ ೪೩೮
ಮಾನವ ಜೀವನ ೨೧೨
ಮಾವಿನ ಚಿಗುರ ೩೮೫
ಮಾವಿನ ಬೀಜ ೨೨೧
ಮುಕ್ತಿಮುಕ್ತಿ ೨೬೫
ಮುಗ್ಧರು ೨೫೦
ಮುನ್ನಿನಂತೆ ೪೦೬
ಮೂಗನ್ನೇ ೧೭೧
ಮೂಗಿನ ತುಂಬ ೧೭೩
ಮೂರ್ತಿಯಾಗುವುದು ೧೮೬
ಮೇಲಿನಿಂದ ೩೬೩
ಮೇಲೆ ಬಾನಿನಲ್ಲಿ ೧೦೦
ಮೊಗ್ಗೆ ಮೊಗ್ಗೆಯಾಗಿ ೧೯೯
ಮೊದಲಿಲ್ಲದ ೧
ಮೊದಲು ಜ್ಞಾನಕ್ಕೆ ೩೩೯
ಮೊದಲು ಹುಟ್ಟಿದುದು ೧೭೨
ಮೊದಲು ಸಂಸ್ಥನಗಳ ೩೦೪
ಮೊನ್ನೆ ಮೊನ್ನೆ ೨೮೦


## ಯ


ಯಶಸ್ಸಿನ ಮಾತ್ರೆಗಳು ೩೨೧
ಯಾರನ್ನು ೪೬೦
ಯಾರಿಂದಲೋ ಕಾಡಿಸಿದೆ ೫೯
ಯಾರು ನೀನು ೩೭೩
ಯಾರು ಹೇಗಿರುವರೋ ೩೭೬
ಯಾರು ಕಾರಮುಗಿಲಿನ ೯೮

ಯಾವ ಸ್ವರ ೨೩೭
ಯಾವುದನ್ನೂ ೨೯೯

## ರ

ರಂಗನತಿಟ್ಟಿನ ೪೨೯
ರಂಗನತಿಟ್ಟಿನಲ್ಲಿಂದು ೪೨೮
ರಕ್ತ ಶೋಷಣೆಯ ೩೦೩
ರಸ ಸವಿಯುವ ೩೭೮
ರಾಜಕಾರಣಕ್ಕೂ ೧೪೬
ರಾತ್ರಿ ಮಲಗಿ ೩೭೦
ರಾಷ್ಟ್ರದ ೨೭೭
ರೂಕ್ಷ ೨೭೭
ರೂಕ್ಷ ೨೧೮
ರೋಗ ನಿಧಾನ ೧೬೫
ರೋಗ ನಿವಾರಕ ೩೦೦
ರೋಗಿಯಾಗಿ ೨೧೪

## ಲ

ಲಂಚ ೨೮೨
ಲೆಕ್ಕವಿಲ್ಲ ೫೧
ಲೋಉದಲ್ಲಿ ೧೮೨

## ವ

ವಜ್ರದೇಹವ ೪೩೪
ವರ್ತುಳ ಪಥ ೧೭೯
ವಾಚನಾಲಯ ೩೦೫
ವಿಭಕ್ತ ೧೩೬
ವಿವಿಧ ತಜ್ಞರ ೧೬೪
ವಿಶ್ವ ಜೀವನದ ೪೦೮
ವಿಷದ ಗುಳಿಗೆಗೆ ೨೧೧
ವೃಂದಾವನ ೮೯
ವೇದಾಂತಿಗಳೇ ೩೯
ವೈರಿಗಳ ೧೦೬
ವ್ಯಸನವೇ ೧೯೨

## ಶ

ಶತ್ರುಗಳರೋ ೪೩೬
ಶಾಸನ ರಚಿಸು ೨೮೧
ಶಿಷ್ಯನಿಂದ ೩೯೮
ಶೋಷಣೆಗೆ ೩೧೬
ಶೋಷಿತರೆ ೩೦೯

## ಸ

ಸಂಜೆ ೪೭೪
ಸಂಪಿಗೆಯ ೧೦೯
ಸಂಸ್ಕೃತಕ್ಕೆ ೨೬೮
ಸಕಲ ಮತ ೩೭೪
‘ಸತಿ’ ತಪ್ಪಿದರೂ ೨೩೨
ಸತ್ಕಾರ್ಯಕ್ಕೆ ೩೦೬
ಸಪ್ತ ಮಹಾಪಾತಕ ೧೪೭
ಸರ್ವರಕ್ಷಕ ೪೧೨
ಸರ್ವರಿಗೂ ೩೫೦
ಸರಸಿ ೩೯
ಸವದತ್ತಿಯ ೪೨೧
ಸಸ್ಯಾಹಾರಿ ೪೨೦
ಸಹಗಮನ ೨೩೩
ಸಾಧನ ೩೩೭
ಸಾಮಯಿಕತೆ ೩೮೩
ಸಾವಿರ ಸಾವಿರ ೧೩೮
ಸಾಮು ತೆಗೆಯು ೪೩೯
ಸಿನಿಕತನಕ್ಕೆ ೩೧೩
ಸಿಪ್ಪೆತೆಗೆದು ೨೦೪
ಸುತ್ತಲೂ ೨೮೮
ಸೆರೆಮನೆಯಲ್ಲಿಯೂ ೧೪೧

ಸ್ವತಂತ್ರಧೀರ ೮೭
ಸ್ವದೇಶ ೨೬೬
ಸ್ವದೇಶದ ಹೂಗಳೂ ೪೬೧
ಸ್ವಾತಂತ್ರ್ಯಯೋಧ ೨೭೪

## ಹ

ಹಿಂದು ಹಿಂದಾಗಿ ೧೨೫
ಹಿಂದಿನ ಬೆಲೆಗಳ ೧೮೯
ಹಿಂದಿನ ಭವ್ಯ ೨೨೨
ಹಿಂದೆ ಜನಾಧಿಪರ ೨೭೯
ಹಿಂದೆ ನನ್ನದೆನ್ನುವ ೮೫
ಹಣವಿದೆ ೨೯೨
ಹತ್ತಿಯ ೨೭೧
ಹಲವೆಡೆಯ ೨೨೯
ಹಲ್ಲು ಅಗಿದೊಡೇನು ೪೬೭
ಹಸುಗೂಸು ೧೧೭
ಹಳ್ಳಿಯಲ್ಲಿ ೪೧೭
ಹಳ್ಳಿ ಹಳ್ಳಿ ೩೫೮
ಹಳೆಯ ಕಾಲದ ೧೬೦
ಹಳೆಯ ಪಿಡುಗು ೩೬೭
ಹಾಗೆ ಬದುಕಬೇಕು ೧೩೨
ಹಾಗೆ ಹಾರಿದರೆ ೧೫೯
ಹಾಳೂರ ಮನೆಗಳಲ್ಲಿ ೩೪೦
ಹಾರಾಡುವ ಹೂವು ೨೩೧
ಹುಲಿ ತಾನು ೧೮೩
ಹುಸಿಯ ೩೩೪
ಹೂವಿನ ಪಕಳೆಗಳ ೧೯೪
ಹೂವಿಲ್ಲದೆ ೧೨೧
ಹೆಣ್ಣುಬಿಡು ೧೪೩
ಹೆರವರಿಗೆ ೪೨೪
ಹೊನ್ನೊಂದಿದ್ದರೆ ೧೪೨
ಹೊಸವರ್ಷ ೪೫೪
ಹೊಸ ಹೊಸ ವಾಹನ ೧೫೮
ಹೊಳೆಯ ಬದಿಗೆ ೬೮

# ವಚನಾನುಕ್ರಮಣಿಕೆ
## ವಚನಾರಾಮ

### ಅ


ಅಂದು ಅಹಲ್ಯೆಯೊಬ್ಬಳೇ ೪೧೧
ಅಂಬಾರಿಯಲ್ಲಿ ಕುಳಿತವನು ೧೮೬
ಅಂಬಿಗರು ಅಂಬುಧಿಯಲ್ಲಿ ೧೯೪
ಅಕಸ್ಮಾತ್ ರಾಜಕಾರಣಿಗಳಲ್ಲಿ ೩೬೦
ಅಗಲಲೊಲ್ಲದವರನ್ನು ಅಗಲಿಸುವೆ ೩೪೫
ಅಗಲಿದವರ ಚಿತ್ರವನ್ನು ೩೦
ಅಗ್ನಿ ಶುದ್ಧಗೊಳಿಸುತ್ತದೆ ೨೮೬
ಅಜೀರ್ಣರೋಗಿಗೇತಕಯ್ಯ ೩೪೬
ಅಡಕೆ ನೀರಡಿಕೆಯ ತಡೆಯಬಲ್ಲುದು ೩೪೮
ಅಡಿಗೆರಗುವರಲ್ಲದೆ ೨೪೬
ಅಣು ಸಣ್ಣದು ಅಣುಶಕ್ತಿ ೮೧
ಅದೇ ಅರಳಿದ ಹೂವಿನಲ್ಲಿ ೧೩೭
ಅನರ್ಹ ಸ್ತುತಿಗಿಂತ ನಿಂದೆ ಮೇಲು ೩೨೧
ಅನ್ಯರ ಕಷ್ಟವ ಕಳೆದು ೩೨೬
ಅನುಭವದ ನಸುಕು ೯೭
ಅನುಮಾನಿಸುತ್ತಲೇ ಬರುತ್ತಿರುವ ೧೦೨
ಅಪರಿಚಿತರ ಮಧ್ಯದಲ್ಲಿ ೪೯೫
ಅಭಾವ ವೈರಾಗ್ಯಕ್ಕಿಂತ ೧೫೧
ಅಮಾಯಕರ ಕೆನ್ನೀರಿನಲ್ಲಿಯೇ ೨೫೬
ಅರಗದ ಅನ್ನ ಕೊಬ್ಬು ೪೩೫
ಅರಣ್ಯಗಳಲ್ಲಿಯೇ ಉದಿಸಿದ ೩೫೧
ಅರಣ್ಯಗಳೇ ಉಳಿದಿಲ್ಲ ೨೦೩
ಅರಿಯದವರ ಕಣ್ಣೀಗೆ ೧೧೪
ಅವರಿವರು ಕೇಡು ಮಾಡಿದರೆಂದು ೨೯
ಅವರೆನ್ನ ಮೋಸಗೊಳಿಸಿದರು ೪೯೨
ಅವಿವಾಹಿತರೆಲ್ಲ ಬ್ರಹ್ಮಚಾರಿಗಳಲ್ಲ ೩೭೨
ಅವೇ ಕಣ್ಣುಗಳಿಂದ ಆನಂದಭಾಷ್ಪಗಳು ೨೦
ಅಲಂಕರಿಸಿಕೊಳ್ಳಲು ರನ್ನವಿದ್ದರೂ ೨೯೫
ಅವಕಾಶ ಪಡೆದ ಅಂಗನೆಯರು ೩೧೬
ಅಸಮಾನರ ಸಮಾನೀಕರಣ ೩೮೬


### ಆ


ಆಟಿಕೆಗಳೇ ಐಶ್ವರ್ಯ ಮಗುವಿಗೆ ೯೪
ಆತುರದ ಬಲೆಯಲ್ಲಿ ೧೨೦
ಆ ದೇವತೆಗಳನ್ನು ನಾನಂತೂ ೨೮೨
ಆಧಾರದಲ್ಲಿ ಸರ್ಪ ೧೦೯
ಆಫ್ರಿಕದಲ್ಲಿ ಹುಟ್ಟಿದನೋ ೪೩೩
ಆ ಯೋಗ ಈ ಯೋಗವೆಂದು ೨೧೯
ಆರುವ ಮುನ್ನ ದೊಡ್ಡದಾಗುತ್ತದೆ ೩೨೩
ಆಳುವವರ ಕಾಲೊರೆಸಬೇಡ ೩೬೬
ಆರಿಸಿ ಕೆಟ್ಟರು, ಆದರಿಸಿ ಕೆಟ್ಟರು ೪೫೧


### ಇ


ಇಂದ್ರಿಯಗಳ ಜಟಿಲ ೧೧

ಇಂದು ಪತ್ರಿಕೆ ಬರಲಿಲ್ಲ ೪೨೦
ಇಂದೇಕೋ ಹೃದಯಕ್ಷೇತ್ರದ
ಮೇಲೆ ೪೪೭
ಇತಿಹಾಸ ಓದುವುದು ಇತಿಹಾಸ ೪೩೧
ಇದ್ದಕ್ಕಿದ್ದಂತೆ ಹಳೆಯನೆನಪುಗಳು ೪೬೩
ಇದು ಅನಾಥಮಗುವಿನ ಅಳು ೪೮೯
ಇದು ಹಿರಣ್ಮಯ ಪಾತ್ರೆ ೨೪೧
ಇದ್ದುದರ ವಿರುದ್ಧ ಹೇಳುವುದೇ ೪೭೩
ಇದೇ ಕೊನೆಯ ಯುದ್ಧವೆಂದು ೩೫೯
ಇದು ನನ್ನ ಕನಸಿನಲ್ಲಿಯೂ ೬೭
ಇನ್ನೇನು, ಇಲ್ಲಿಯ ಅವಧಿ ೪೯೯
ಇನ್ನೇನು ಖಾಸಗಿ ಆಸ್ತಿಗಳಾಗಿ ೩೩೭
ಇನ್ನೊಬ್ಬರ ಧನವ ೧೦೪
ಇರಾಕ್ ಇರಾಣಗಳಲ್ಲಿ ಮದ್ದು ೪೮೬
ಇರುವುದು, ಅರಿಯುವುದು ೨೮೯
ಇಲಿಗೆ ಬೆಕ್ಕಿನ ಅಂಜಿಕೆ ೨೫೧
ಇಲ್ಲಿ ಎಲ್ಲರೂ, ಎಲ್ಲವೂ ೨೬೦
ಇಲ್ಲೊಂದು ಹಳ್ಳಿ ಹಳ್ಳಿಗಿಷ್ಟು ೩೩೬

## ಈ

ಈ ಕಾಡಿನ ಎಲ್ಲ ಜಾತಿಯ ೩೦೯
ಈ ಘಟದ ಘಟಮ್ ಬಾರಿಸಲು ೨೨೩
ಈ ಜವನಿಕೆ ಹೀಗೆಯೇ ೪೩
ಈ ದೇಶದ ಚೌಷಷ್ಟಿ ಕಲೆಗಳಲ್ಲಿ ೪೦೫
ಈ ನಾಗಲಿಂಗ ವೃಕ್ಷದ ೧೯೨
ಈ ಪುಟ್ಟ ದೋಣಿಗೆ ೫೫
ಈ ಬೀಸುಕಲ್ಲಿಗೆ ಬಿದ್ದ ೮೭
ಈ ಬುದ್ಧಿಯ ಬೆಂಗಾಡಿನಲ್ಲಿ ೨೪೮
ಈ ಮಸಣದ ಹೂವುಗಳು ೨೫೯
ಈ ವನಕ್ಕೂ ವಸಂತ ಬಂದೀತು ೫೦೧
ಈರ್ಷ್ಯೆ ಸೋಂಕದ ೨೫೧

## ಉ, ಊ

ಉಕ್ಕಿನ ಪರದೆ ಹರಿದಿದೆ ೪೦೭
ಊಸರವಳ್ಳಿಯ ಬಣ್ಣಗಳನ್ನು ೨೧೦

## ಎ

ಎಂಥ ಯಂತ್ರಕ್ಕೂ ೧೩
ಎಂದೂ ತೃಪ್ತನಾಗದ ಆಶೆಬುರುಕ ೧೮೦
ಎತ್ತರಕ್ಕೆ ಬೆಳೆದರೆ ಹಿಮಕಿರೀಟ ೨೬೧
ಎನಿತು ಸಲ ಮಂಜು ೫೭
ಎನಿತೊಂದು ಆಸ್ಪತ್ರೆಗಳು ಇಲ್ಲಿ? ೪೩೨
ಎಲ್ಲಕ್ಕೂ ಯಾವುದೋ ತೆರೆ ೧೪
ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ ೩೬೧
ಎಲ್ಲರನ್ನೂ ಕಿರಿಯನ್ನಾಗಿಸಿ ೨೦೯
ಎಲ್ಲರಿಗಿಂತ ಬುದ್ಧಿವಂತರನ್ನೂ ೩೧೧
ಎಲ್ಲರೊಡನೆ ಕಲೆತೆ ೪೭೫
ಎಲ್ಲವೂ ಅರಿತ ಮೇಲೆ ೨೯೭
ಎಲ್ಲಿಂದ ಬಂದುವು ಎಲ್ಲಿಗೆ ೫೦
ಎಲ್ಲಿಹವೋ ಹಾರುವ ತಟ್ಟೆಗಳು ೩೮
ಎಲುವು ಕಡಿವ ನಾಯಿ ೩೮೩
ಎಲೆಯಂಥ ಹೂವುಗಳುಂಟು ೨೭೮
ಎಲೆಯುದುರಿ ಬರಿಮೈ
ಯಾಗಿದ್ದರೂ ೧೮೧
ಎಲೆ ಹಸುರು, ಅಡಕೆ ಕಂದು ೧೫೪
ಎಲ್ಲೋ, ಎಂದೋ
ಉಲ್ಕಾಪಾತಗಳು ೪೮೪
ಎಷ್ಟು ಸಾವಿರ ಶಬ್ದಗಳನ್ನು ಕಲಿತೆ! ೫೬

## ಏ


ಏಕಕಾಲಕ್ಕೆ ಅನೇಕ ೩೧೩
ಏಕಪತ್ನೀವ್ರತಸ್ಥನಾದರೆ ೩೯೫
ಏನನ್ನೇ ಆಗಲಿ, ಆಕ್ಷೇಪಿಸುವವರು ೪೬೭
ಏನಮಾಡಲೆಂದು ಜಲವನ್ನು ೨೩೪
ಏನೇನೋ ಮನವನ್ನು ೨೪೩


## ಒ


ಒಂದನ್ನು ಒಳಗಿರಿಸಿಕೊಂಡು ೨೬೪
ಒಂದು ಅತಿರೇಕದಿಂದ ಇನ್ನೊಂದು ೩೦೫
ಒಂದು ಒಳ್ಳೆಯ ಮಾತು ೨೧೧
ಒಂದು ಕಣ್ಣಿಗೆ ಬೆಣ್ಣೆ ೨೧೨
ಒಂದು ಕ್ಷಣ ತಪ್ಪು ಮಾಡುತ್ತದೆ ೮೯
ಒಂದು ಕ್ಷಣ ಹೆಣವಾಗುವಷ್ಟರಲ್ಲಿ ೨೨೮
ಒಂದು ಶ್ರೇಷ್ಠತಮ ಚಿತ್ರ ೧೧೩
ಒಂದು ಹೊಸ ವಿಚಾರ ದೊರೆತ ೯೦
ಒಂದೂ ತಪ್ಪು ಮಾಡದವರ ತೋರಾ ೩೨೦
ಒಂದೇ ಬೊಡ್ಡೆಯಿಂದ ೧೫೦
ಒಬ್ಬನಿಗೆ ಗುರಿ ಗೊತ್ತಿಲ್ಲ ೩೦೨
ಒಳಗಿನ ಸಿರಿವಂತಿಕೆಯ ಬೆಳೆಸಲು ೨೩೫
ಒಂದು ಕಪ್ಪು ಚಹಾಕ್ಕಾಗಿ ೪೯೪
ಒಂದು ಪ್ರಶ್ನೆಗೂ ನಿಖರ ಉತ್ತರ ೪೫೭
ಒದ್ದರೆ ಕಾಲಿಗೆ ಬೀಳುವರು ೩೪೩
ಒಳಿತಿನಿತ್ತ ಎಳೆಯುವವ ಗೆಳೆಯ ೪೪೮
ಒಳಿತು ಮಾಡಿದವನಿಗೂ ಲೇಸು ೩೪೭
ಒಳ್ಳೆಯದನ್ನು ಸಾವಿರಸಲ ೪೬೮


## ಓ


ಓಕುಳಿಯನ್ನಾಡಿದಂತಿದೆ ೧೬೦
ಓದಿದುದೆಲ್ಲ ಉಪಯೋಗವಾಗುವ ೪೩೭
ಓದಿ ನೆನಪಿಟ್ಟವ ವಿದ್ವಾಂಸ ೧೪೫


## ಕ


ಕಂದರ ಕನಸುಗಳಲ್ಲಿ ೨೦೦
ಕಟ್ಟಿದ ನೌಕೆಗೆ ಹುಟ್ಟು ಹಾಕಿದರೆ ೨೫೮
ಕಡಲ ಆವಿಗೆ ಕಾರ್ಖಾನೆಗಳ ೩೫೦
ಕಡಲಿನಲ್ಲಿ ಹಡಗ ಮುಳುಗೀತು ೨೬೨
ಕಡಲು ತಡಿಯನ್ನೇ ಒಡೆದು ೨೦೬
ಕಡೆದ ಕಡಲಲ್ಲಿ ಮಾತ್ರ ೮೨
ಕಣಕಣವೂ ಕಣ್ಣಾಗಿರುವ ೧೩೬
ಕತ್ತಲೆಯನ್ನೋಡಿಸಲು ೧೭೨
ಕರ್ತವ್ಯ ಬೇಡಾದವರಿಗೆ ೧೦೩
ಕದ ಗಟ್ಟಿಯಾಗಿದ್ದರೇನಯ್ಯ ೪೫೫
ಕನಕಕುಂಭದಲ್ಲಿದೆಯೆಂದು ೩೨೭
ಕನಸಿನ ಕೂಟ ಸುಳ್ಳಾದರೂ ೧೫೩
ಕನಸಿನ ಕೆಳದಿ ಸಿಕ್ಕಲಿಲ್ಲವೆಂದು ೧೮
ಕನಸಿನ ಗಂಟಿಗಾಗಿ ೧೬೮
ಕರಗಕ್ಕೆ ಕರೆಯೋಲೆ ೩೪೦
ಕರಣಗಳು ಕಾಡುತ್ತವೆ ೨೩೬
ಕಲಿಯದೆ ನಿನ್ನ ನೆಲೆಯ ೯೯
ಕಲಿಸುವುದೊಂದನ್ನು ಬಿಟ್ಟು ೪೦೬
ಕವಿಯ ಅವಸಾನದೊಡನೆ ೩೪೨
ಕಳೆದುಹೋದ ದಿನಗಳು ೨೩೯
ಕಾದ ನೆಲ ಮಳೆಯ ಹನಿಗಳನ್ನು ೪೩೬
ಕಾಮಿನಿಗೆ ಕಾಮಿನಿಯೇ ಸ್ವರ್ಗ ೨೮೦

ಕಾಯಕ ಮಾಡುವ ಕೈಗಳೇ ೧೮೭
ಕಾಲಪ್ರವಾಹದಲ್ಲಿ ಹರಿದು ಬಂದ ೪೬೪
ಕಾಲಾಶ್ರಿತ ಕಲೆಗಳನ್ನು ೨೯೮
ಕಿತ್ತುತಿನ್ನುವ ಮನುಷ್ಯರಿಗಿಂತ ೪೨೬
ಕಿನ್ನಾಳಿನ ಬಣ್ಣದ ಹಣ್ಣುಗಳು ೨೪೫
ಕಿವಿಗೆ ಹಿತ ಪ್ರೀತಿಸುವವರ ಸ್ವರ ೨೮೫
ಕ್ರೀಡೆಯಂತೆ ಕ್ರೀಡಾಂಗಣ ೧೪೪
ಕುಣಿಯಲು ಬರದವಳು ೧೩೧
ಕುದುರೆ ಜೂಜಿಗೆ ಕತ್ತೆಗಳ ೩೨೫
ಕುರುಡನಿಗೆ ಕಾಣುವ ಕಣ್ಣುಗಳೇ ೪೫೮
ಕುರುಡುತನಗಳಲ್ಲೆಲ್ಲ ೨೦೨
ಕುಲಪರ್ವತಗಳು, ಹೆಮ್ಮರಗಳು ೨೯೪
ಕುವಿಚಾರ ಅಪಾಯಕಾರಿ ಚೋರ ೩೮೦
ಕೈತೊಳೆದು ಮುಟ್ಟಬೇಕಾದ ೩೨೪
ಕೊನೆಯ ಮನೆ ಕುಣಿ, ಚಿತೆ ೨೫೨
ಕೊಳಲು ನುಡಿಸುವುದನ್ನು ೪೬
ಕೋಗಿಲೆಗೆ ರಾಜಯೋಗ ೩೩೨


## ಗ


ಗಂಗಾಜಲವಾದೊಡೇನು ೧೦೦
ಗಂಡ ತೊಡುವುದು ಖಾದಿಬಟ್ಟೆ ೪೩೦
ಗಂಡನನ್ನುಳಿಸಿದ ಸಾವಿತ್ರಿಯಾಗಿ ೨೧೬
ಗಡಿಯಾರದ ಕಾರ್ಖಾನೆಯಲ್ಲಿದ್ದು ೨೦೪
ಗಡಿಯಾರ ಕೆಟ್ಟಿದೆಯೆಂದು ೪೫೪
ಗರ್ಭಗುಡಿಯ ಗೋಡೆಗಳೇ ೩೭೫
ಗೀಟು ಹಾಕಿದರೂ ದಾಟಿ ೪೮೩
ಗುಡುಗು ಸಿಡಿಲುಗಳೊಡನೆ
ಬಂದು ೨೯೨
ಗೂಡನ್ನಗಲಿದ ಹಕ್ಕಿಮರಿ ೧೫೬
ಗೂಡುಕಟ್ಟುವ ಹಕ್ಕಿಯ ಕೆಲಸ ೩೧೮
ಗೆಳೆಯರು ಕೆಲವರು ೧೨೬


## ಚ


ಚಂದ್ರಮಂಚವಿದ್ದೊಡೇನು ೨೨೭
ಚಕ್ರವಾಕಗಳ ವಾಸ್ತವತೆ ೧೪೬
ಚಿಟ್ಟೆಗಳ ರಸಿಕತೆಯನ್ನು ೨೯೦
ಚೆಲುವು ಒಲವುಗಳ ಬಗ್ಗೆ ೪೯೦
ಚೆಲುವೆಯರು ಕಣ್ಣಿಗೆ ಬಿದ್ದಾಗ ೨೦೮


## ಜ


ಜಟ್ಟಿಯ ಮೈ ನೋಡಬೇಕು ೪೪೨
ಜನರನ್ನು ನರಳಿಸಿ ೩೧೦
ಜನರಿಂದ ಜನರಿಗಾಗಿ ೧೬೪
ಜನವನದಲ್ಲಿ ಅರಳಿಸುವ ೩೦೩
ಜನಸಮೂಹಗಳನ್ನು
ಎದುರಿಸಿದ್ದೇನೆ ೨೯೩
ಜಾತ್ರೆಗಳಲ್ಲಿ ಎಷ್ಟು ಅಂಗಡಿ ೩೦೪
ಜಾತ್ರೆಯಲ್ಲಿ ಸೇರಿದವರೆಲ್ಲ ಜಾರಿ
ಬಿದ್ದವರ ನೋಡಿ ೧೩೩
ಜ್ಞಾನವಾರಾಶಿಯಲ್ಲಿ ಈಸುವ ೮೫
ಜಿಹ್ವೆಗೆ ಸವಿ ನೀಡುವ ೨೬೮
ಜೀವನದ ನಿರರ್ಥಕತೆಯನ್ನು ೪೨೭
ಜೀವನದಲ್ಲಿರುವುದು
ಸಾಹಿತ್ಯದಲ್ಲಿ ೪೭೨
ಜೀವಿಗಳು ಜೀವಿಗಳ ತಿನ್ನುತ್ತಲೇ ೩೩೪
ಜ್ಯೋತಿ ಕತ್ತಲೆಯನ್ನು ೧೩೨

## ಝ

ಝುಗ ಝುಗಿಸುವ ಹಗಲಿನಲ್ಲಿ ೨೯೯

## ಟ

ಟಿಸಿಲೊಡೆಯದಿದ್ದರೆ ೧೧೦

## ತ

ತಂದೆ ತಾಯಿಗಳನ್ನೇ
ಗೌರವಿಸದವನು ೪೧೮
ತದಕಿದಷ್ಟೂ ಹೊಳೆವ ಬದುಕೆ ೧೨೧
ತನ್ನವರು ಅನ್ಯರಾಗುತ್ತಾರೆ ೨೨೬
ತರಳರ ಮನಮುಕುಳ ಅರಳಲು ೪೮೫
ತಾನುಣ್ಣುವಾಗ ಹಿಗ್ಗು ಹೆಚ್ಚೋ ೨೧೮
ತಾಯಿ ದೇವರೆನ್ನುವ ಬಾಯಿಯೇ ೪೦೨
ತಾಯಿ ಮಗುವಿನ ಮೋರೆ ೧೦೮
ತಾರೆಗಳಲ್ಲಿ ಕಣ್ಣು ಮಿಟುಕಿಸುವಿ ೬೮
ತಾವು ಕತ್ತರಿಸಿಕೊಂಡು ನಮಗೆ ೪೨೧
ತಾವು ಕಾಯುತ್ತಿರುವ ೪೧
ತಿಜೋರಿಯ ಬೀಗದ ಕೈ ೩೪೪
ತಿಳಿಯದೆಯೆ ಗಳಹಿದ್ದೆಷ್ಟೋ ೪೬೨

ತೆಂಗಿನಕಾಯಿಯಲ್ಲಿ
ತಲೆದೋರುವ ೧೨೪
ತೆಂಗಿನಲ್ಲಿ ತೆಪ್ಪಗೆ ಕೊಬ್ಬರಿ ೮೪
ತೆರೆ ಕುಣಿವುದೆಂದು ನೊರೆ ೩೫೨
ತೊಂಚವಂಚರಿಂದ ತುಂಬಿತು ೩೫೭
ತೊಂಡೆಗೆ ಹೋಲಿಸಿಕೊಂಡ ೧೬೬
ತೊರೆಗೆ ತರಂಗಮಾಲೆ ೪೪೩

## ದ

ದನಕ್ಕೆ ಬೇಲಿಯ ಭಯ ೩೮೯
ದಾಸ್ಯದ ಅಮರಜೀವನಕ್ಕಿಂತ ೨೨೨
ದಿನಗಳೆದಂತೆ ದಹಿಸುತ್ತಿದೆ ೬೪
ದುಡಿವುದು ಬಾರಿಸುವುದು ೧೪೦
ದುಡಿಸಿಕೊಂಡವರಲ್ಲಿ ೪೧೭
ದೂರದೂರಕ್ಕೆ ಹಾರುವುದೇ ೯
ದೂರ ಹೆಚ್ಚಿದಷ್ಟೂ ೩೪
ದೇಗುಲಗಳ ದಾರಿಯುದ್ದಕ್ಕೂ ೩೮೭
ದೇಶಕ್ಕಾಗಿ ದುಡಿಯುವವರು ೧೯೧
ದೇಶ ವಿದೇಶಗಳ ವಿವಾಹ ೧೮೫
ದೈವದವರೆಲ್ಲಿಯೋ ಅಲ್ಲಿಯೋ ೧೫೮

## ಧ

ಧರ್ಮಗುರುಗಳ ಆಜ್ಞೆಗ್ಗಳೆಲ್ಲ ೧೮೪
ಧ್ಯಾನಧೇನುವಿನ ಕ್ಷೀರದಿಂದ ೬೧
ಧಾನ್ಯಸಂಗ್ರಹ ಮಾಡುವವರುಂಟು ೩೯೧

## ನ

ನಗರಗಳನ್ನು ಬೆಳೆಸಲು ೨೭೪
ನಗರಗಳಲ್ಲಿ ಗೋಡೆಯ ೪೧೪
ನಗೆಯ ನೂರೆಲೆಯಲ್ಲಿ ೯೨
ನದಿಯ ಮುಖಾಂತರ ೨೬೩
ನನಸಿನ ಬಾಗಿಲಿಗೆ ಕಟ್ಟಿದ್ದ ೭೯
ನನ್ನ ಅನುಭವ ಹಳ್ಳಿಯದು ೪೪೧
ನನ್ನ ಮನಸ್ಸು ಮಾಗದಿದ್ದಾಗ ೧೨೭
ನನ್ನ ಮನೆಯುಳಿದು ೨೧೫
ನನ್ನ ಮರೆದೆ ನಿನ್ನ ಮರೆದೆ ೧೦೬

ನನ್ನ ರಾಷ್ಟ್ರಧ್ವಜವನ್ನು ೧೨೨
ನನ್ನ ಲೋಕಕ್ಕೆ ಯಾವ
ಲೋಕ ಸರಿ? ೨೭೯
ನನ್ನ ವಿಚಾರಗಳನ್ನು ನಿನ್ನ ಮೇಲೆ ೩೫೬
ನನ್ನ ಸತಿಯೇ ನನಗೆ ಸವತಿ ೩೧
ನನ್ನ ಸ್ಮರಣೆಯ ಭರಣಿಗಳಲ್ಲಿ ೩೬
ನನ್ನಿಚ್ಛೆಯಂತೆ ಬದುಕಲು ೧೧೬
ನನ್ನಿಂದ 'ನಾನು' ಎನ್ನಿಸುವವ
ನೀನು ೧೧೫
ನಭದ ನೀಲಿ ಮೈಯಲ್ಲಿ ೧೫
ನಲ್ಲ ಬರುವನೆಂಬ ಸಿಹಿಸುದ್ದಿ ೩೨
ನವಗ್ರಹಗಳೆ, ನನಗೆ ನಿಮ್ಮ ೨೭೯
ನಳಿನವನ್ನು ನೋಡುತ್ತಲೆ ೨೩೧
ನಾಗಲಿಂಗನ ಬೊಡ್ಡೆ ಹೂತಾಗ ೧೪೧
ನಾನು ಎಂದಾದರೊಂದು ಸುಳ್ಳು ೪೪೬
ನಾನು ನಡೆಯದ ನಾಣ್ಯವಾದರೆ ೮೩
ನಾನು ಪಿಶಾಚಿಗಳ ನೋಡಿಲ್ಲವಯ್ಯ ೨೮೩
ನಾನೊಬ್ಬನಿಗೆ ಆಗುವುದು ಅಲ್ಲ ೪೪೯
ನಲ್ಲಿಯ ನೀರು ಕುಡಿದು ಕುಡಿದು ೪೫೦
ನಾನೇಳುವ ಮುನ್ನವೇ ನಿನಗೆ ೪೭೮
ನಾವೆ ರೇವು ಮುಟ್ಟಿದ ಮೇಲೆ ೧೦೧
ನಿತ್ಯ ನೋಡಿದರೂ ಬೇಸರ ೧೬೭
ನಿನಗಾವ ಹೆಸರೂ ಇಲ್ಲವೆಂದು ೪೪
ನಿನ್ನ ಏರ್ಪಾಡಿಗೆ ೭೧
ನಿನ್ನ ಕರುಣೆಯ ಬಯಲಿನಲ್ಲಿ ೧೩೦
ನಿನ್ನ ಗಾನದಲಯದಿ ೨೧
ನಿನ್ನ ದಾರಿ ನೋಡಿ ನೋಡಿ ೩೩
ನಿನ್ನನ್ನು ಬೆರೆವ ಪರಿ ೨೦೭
ನಿನ್ನನ್ನು ಹೊಗಳಿದರೆ ಅದು
ಸ್ತುತಿ ೧೩೯
ನಿನ್ನ ನಿರ್ದಮತೆ ೨೮
ನಿನ್ನ ನೀನೇ ಗೆಲ್ಲು ೩೦೦
ನಿನ್ನ ನೂರು ನೆನಪಿನೋಲೆಗಳು ೩
ನಿನ್ನನ್ನೇ ನೆನೆಯುತ್ತಿದೆ ಮನ ೧೧೮
ನಿನ್ನ ಪಾಪಹರಶಕ್ತಿಗೆ ೬೨
ನಿನ್ನ ಬಂಧನಕೆ ಒಳಗಾಗಿ ೧೩೪
ನಿನ್ನ ಮಾತು ಬಂದಾಗ ೧೬
ನಿನ್ನ ಮೇಲೆ ಭಾರ ಹಾಕಿ ೯೫
ನಿನ್ ಮೊಗವನ್ನು ನೋಡಲಿಲ್ಲೆಂಬ ೨೭
ನಿನ್ನ ಸಂಗವ ಮಾಡಿ ೧೬೯
ನಿನ್ನ ಸೃಷ್ಟಿ ಸಂಪುಟದ ೧೦
ನಿನ್ನ ಸೃಷ್ಟಿ ಸೌಂದರ್ಯವನ್ನು ೨೫೭
ನಿನ್ನ ಹೆಜ್ಜೆಯ ಸಪ್ಪಳ ೬೬
ನಿನ್ನೊಳಗೆ ಆರು ಅರಿಗಳನ್ನು ೪೩೪
ನಿಮ್ಮ ಮತವಾವುದೆಂದು ೪೯೭
ನಿಮಿಷದ ಬೆನ್ನೇರಿ ನಿಮಿಷ ೬೯
ನಿರಭ್ರ ನೀಲ ನಭದಲ್ಲಿ ೧೩೮
ನಿರಾಶೆ ಹುಟ್ಟದಲ್ಲಿಯೇ ೨೪೭
ನೀನು ಅವ್ಯಕ್ತನಾದರೂ ೧೧೨
ನೀನು ಆಗಾಗ ಹನಿಸಿದ ೬
ನೀನು ಎಷ್ಟು ಹತ್ತಿರ ನನಗೆ ೪೨
ನೀನೂ ಮುದ್ದಿಸಿದರೆ ೧೧೯
ನೀನು ವಿಶ್ವತೋಮುಖನಿರುವೆ ೭೩
ನೀನು ಧಾರಾಳವಾಗಿ ಧಾರೆಯೆರದೆ ೪೯೮
ನೀನೆನ್ನನ್ನೆಷ್ಟು ಕಾಡಿದರೂ ೫೩
ನೀನೇನೋ ನಮ್ಮನ್ನು ೬೦
ನೀನೇನೋ ನಿನ್ನ ಸಕಲ ೧೭೯
ನೀರಿನ ಸೀರೆಯ ನೊರೆ ೯೮

ನೀರೆಂದರೆ ಮೂಗು ಹರಿಯುತ್ತದೆ ೧೫೨
ನೂತ ನೂಲು ಬಟ್ಟೆಯಾದರೆ ಸರಿ ೧೬೩
ನೀರೊಳಗಣ ಕಿಚ್ಚೇ ೩೩೩
ನೂರು ಕೊಡಲಿಗಳು ಕಡಿದ ೭
ನೂಲುವವರಿಗೇ ನೆಯ್ಯುವವರಿಗೇ ೪೧೨
ನೆಲ್ಲಿ ನೇರಿಳೆಗಳಲ್ಲಿ ದ್ರಾಕ್ಷಿಯ ೨೮೯
ನೋಡಿದಷ್ಟು ನೋಡುವುದು ೨೭೦

## ಪ

ಪದ ಕಾಣುತ್ತದೆ ೭೨
ಪದ್ಯವೆಂದರೆ ಪಂಪನ ಪದ್ಯವಯ್ಯ ೨೧೭
ಪರಿಷ್ಕೃತ ಮುದ್ರಣದಲ್ಲಿ ೧೫೫
ಪಶುಪಕ್ಷಿ ಕ್ರಿಮಿಕೀಟಗಳು ೪೨೫
ಪಶುಪಕ್ಷಿಗಳ ಭಾಷೆಗಳು ೫೪
ಪಾಂಡವರ ಸುಡಲು ಕಟ್ಟಿದ್ದ ೨೪೦
ಪಾಚಕ ಮಿಶ್ರಣವನ್ನು ೪೧೩
ಪಾತೆಗಳು ಪುನೀತವಾಗಿವೆ ೪೫
ಪಾತ್ರೆಗಳ ಗಾತ್ರ ಆಕಾರ
ಬೇರೆಬೇರೆ ೪೫೩
ಪೀಠ ಎತ್ತರವಾದಷ್ಟೂ ೩೭೧
ಪ್ರತಿಬಿಂಬ ಬಿಂಬದಂತೆ ೧೪೭
ನೀ ಸೆರಗು ಹಿಡಿವ ಮುನ್ನವೆ ೭೭
ನುಡಿಯ ಗುಡಿಯಲ್ಲಿ
ಅರ್ಥಮೂರ್ತಿ ೪೨೮
ಪ್ರೀತಿಯುಳ್ಳ ಒಂದೇ ಒಂದು ಕ್ಷಣ ೯೧
ಪೂಜಿಸಿಯೇ ಪಡೆಯಬೇಕಿಲ್ಲ ೩೨೨
ಪ್ರಾಚೀನ ಗ್ರೀಕರ ಹಿರಿಮೆ ೩೩೮
ಪ್ರೀತಿಯ ಸಾಧ್ಯತೆಗಳನ್ನೆಲ್ಲ ೧೨೫
ಪ್ರೀತಿಯಿದ್ದರೆ ಬೈಗುಳಗಳೂ ೧೭೮
ನೀರೆಂದರೆ ಮೂಗು ಮುರಿಯುತ್ತದೆ ೧೫೨

## ಬ

ಬಂಧನಗಳಲ್ಲಿ ಪ್ರೇಮಬಂಧನ ೧೯೬
ಬರ್ಕನ್‌ಹೆಡ್ ಹಡಗ ೩೬೪
ಬಡವರ ಬೆವರು ಮಡುಗಟ್ಟಿದಾಗ ೨೪೨
ಬಡವ ಸತ್ತರೆ ಹುಗಿಯಲು ಸ್ಥಳವಿಲ್ಲ ೩೮೨
ಬಡವರಿಗೆ ನೆರವಾದ ಒಂದು ದಿನ ೩೭೪
ಬಡಿಸಿದತಟ್ಟೆ ಬಂಗಾರದ್ದಾದರೇನು ೪೪೫
ಬಣ್ಣದ ಹೂವಿನ ಮೇಲೆ ೯೩
ಬತ್ತಳಿಕೆಗೆ ಬೆಲೆ ಬರುವುದು ೧೪೩
ಬದುಕಿಗೆ ಅರ್ಥವಿಲ್ಲವೆಂದವನೂ ೩೨೮
ಬದುಕಿನ ಹಲಸಿನ ತೊಳೆಗಳನ್ನು ೨
ಬದುಕು ಬಹಳ ಸಪ್ಪೆಯೀಗ ೪೮೧
ಬದುಕುವ ದಾರಿ ಗೊತ್ತಿಲ್ಲದವರು ೩೮೮
ಬರೆಯಲಾರೆ, ಬರೆಯದಿರಲಾರೆ ೩೨೬
ಬರ್ಮಾ ಸಿಡಿದು ಹೋಯಿತು ೪೦೩
ಬಸವನ ಹೆಸರು ನನ್ನ ಉಸಿರು ೮೮
ಬಳ್ಳಿಗಳೆ, ಕುಸುಮಗಳೇ ೧೮೨
ಬಹುದೇವತಾವಾದದಲ್ಲಿ ೪೯೧
ಬಹು ಪ್ರಯಾಸದಿಂದ ಮಾನವ ೩೭೭
ಬಳೆಗಾರ ಕೈಹಿಡಿವನೆಂದು ೩೧೭
ಬಾಯ ಮೈಲಿಗೆ ಕಳೆಯುವುದು ೩೦೧
ಬಾಳಿನ ಬೆಳಕನ್ನು ನುಂಗಲು ೪೦೦
ಬಾಳೆಯ ಸುಳಿ ಮೆತ್ತಗೆ ೫೮
ಬ್ರಾಹ್ಮಣರ ಹೊಟ್ಟೆಗಳಲ್ಲಿ ೩೧೨
ಬಿರಿವ ಮುಗುಳುಗಳಲ್ಲಿ ನಿನ್ನ ೧೬೨
ಬಿಸಿನೀರಿನ ಸ್ನಾನ ನನಗೆ ೨೯೬
ಬಿಸಿಲಿಗೆ ಕೆರೆ ಬತ್ತುವುದೆಂದು ೪
ಬುದ್ಧಿ ಏರಬಲ್ಲ ಎತ್ತರಕ್ಕೆ ೫೧
ಬುದ್ಧಿ ಶ್ರೀಮಂತವಾಗುತ್ತ
ಹೋದಂತೆ ೩೪೯
ಬುಲಬುಲಗಳ ನಾಲಗೆಗಳ ೩೫೮

ಬೆಣ್ಣೆ ಕದ್ದ ಕದಿಯುವ ಮಕ್ಕಳೆಷ್ಟಿಲ್ಲ? ೪೭೬
ಬೆಳೆಯುತ್ತ ಬೆಳೆಯುತ್ತ ೪೫೬
ಬೇ ಚಿರಾಗ್ ಹಳ್ಳಿಗಳನ್ನು ೭೬
ಬೊಜ್ಜು ಸುಖದ ಪ್ರತೀಕವಾದೀತು ೪೫೯


## ಭ


'ಭಕ್ತಿ, ಭಕ್ತಿ, ಭಕ್ತಿ'ಯೆಂದು ೧೨೩
ಭಾರತದ ಮಣ್ಣಿನಿಂದ ೪೧೦
ಭುಜಬಲಕ್ಕೆ ಬುದ್ಧಿಬಲ ೩೪೧
ಬೋಧೆ ಹಾದಿ, ಸಾಧನೆ ಕಾಲು ೨೭೩


## ಮ


ಮಂಡೂರವನ್ನೂ ಸೆಳೆಯದಿರೆ ೧೬೧
ಬಂಜರುಭೂಮಿಯ ಸಾಗುವಳಿಯ ೩೯
ಮಂದಮಾರುತ ತನುವಿಗೆ ಹಿತ ೧೪೯
ಮಕ್ಕಳಿವೆ ಹಕ್ಕಿಗಳಿವೆ ಚಿಕ್ಕೆಗಳಿವೆ ೪೩೮
ಮರ್ಕಟಗಳು ವೃಕ್ಷಗಳ ೪೨೨
ಮಗುವನ್ನಾಡಿಸುವ ದಾಯಿ ೩೧೯
ಮಗುವಿಗೆ ತಾಯಿಯ ಮನಸ್ಸು ೭೫
ಮತಿ ಕಡಿಮೆಯಿದ್ದಷ್ಟೂ ಮಾತು ೧೪೨
ಮತಿಯ ಬೆಳಗುವುದು ೧೧೧
ಮತ್ತೆ ಮತ್ತೆ ತುಂಬುವುದು ೪೮೭
ಮತ್ತೆ ಪ್ರಬಲಿಸುತ್ತಿದೆ ೩೦೭
ಮದರ್ ತೆರೇಸಾ ಮದರ್ ತೆರೇಸಾ ೨೫೫
ಮದಹಸ್ತಿ ಕುಸ್ತಿಯಾಡುವುದೆ ೨೨೫
ಮದುವೆಯಾಗುವವರೆಗೆ ೪೮೨
ಮದುವೆಯಾದವರಿಗೆ ಆಗೊಮ್ಮೆ ೩೯೨
ಮನದೊಡನೆ ದಿನವೆಲ್ಲ ೩೬೭
ಮನವನರಳಿಸು ತಂದೆ ೧
ಮನಸ್ಸಿನ ಮಸಿ ಕಾಗದದ ಮೇಲೆ ೪೭೦
ಮನುಜ ನೀನು ಪಶುವಾದರೆ ೩೩೧
ಮನೆಗಳನ್ನು ಕಾಯಲು ೨೪೪
ಮನೆಗೆ ಹಬ್ಬು ಕರುಳಿನ ಬಳ್ಳಿ ೨೩೦
ಮನೆಮನೆಗೆ ಒಂದಾದರೂ ೨೨೯
ಮನೆಯ ಅಂದವನ್ನು ಮೆಚ್ಚುವವರೇ ೨೨೦
ಮನೆಯನ್ನು ಬೆಳಗುವ ದೀಪಕ್ಕೆ ೨೯೧
ಮನೆಯ ಬಾಗಿಲಿಗೆ ಮಾಂದಳಿರ ೩೫
ಮನೆಯ ಮುಂದೆ ಮಲ್ಲಿಗೆಯ ೧೦೭
ಮರದ ಬದುಕಿಗೆ ತಾಯಿಬೇರು ೪೦೪
ಮರುಗದಂತೆ ಮೈಯೆಲ್ಲ ೭೦
ಮರುಚಿಂತನೆಯೇ ಮರುಹುಟ್ಟು! ೨೭೬
ಮಲ್ಲಿಗೆಯನ್ನು ಬಿಡಿಯಾಗಿ ೨೨
ಮಲೆನಾಡಿನ ಹುಲ್ಲಿನ ಮೇಲೆಲ್ಲ ೪೬೦
ಮಳೆಯಾಗಿ ಇಳಿಯಲಿಲ್ಲ
ಮಿಂಚಾಗಿ ೪೬೬
ಮಾತನ್ನು ಕಲಿತಾಗಲೇ ಮೋಸ ೩೮೧
ಮಾತೃವಾಣಿಗೆ ಮಣಿಯದವ ೩೯೦
ಮಾರಯ್ಯನ ಆಯ್ದಕ್ಕಿಗೆ ೧೮೯
ಮಾವು ಮಲ್ಲಿಗೆಗಳನ್ನು ೮೦
ಮಾಸ್ತಿಕಲ್ಲು ಒಗೆವ ಕಲ್ಲಾದುದ ಕಂಡೆ ೩೦೬
ಮಿಲನದ ಕನಸು ೧೯
ಮೀನಿಗೆ ಬಲೆಯ ಬೀಸುವ ಬೆಸ್ತ ೨೭೭
ಮೀನಿನ ನಾತಕ್ಕೆ ಒಗ್ಗಿದ ಮೂಗು ೧೭೧
ಮುಂಬೆಳಜಕು ಚೆಂಬೆಳಕು ೨೧೩
ಮುಗಿಲು ನೆಲವನ್ನು ೧೨೯
ಮುಟ್ಟುವುದಿರಲಿ ದಿಟ್ಟಿಸಿದರೆ ೧೭೩
ಮೃಗನಾಭಿಯಲ್ಲಿ ಕಸ್ತೂರಿ ೧೮೮
ಮುಂದಿನ ಸಾಲಿನವರೇ ೪೪೪
ಮುಗಿಲ ಮಲ್ಲಿಗೆ ಸಿಕ್ಕಲಿಲ್ಲವೆಂಬ ೩೯೪
ಮುರುಕುಮನೆಯಲ್ಲಿ ಮಿಂಚುವ ೧೯೯
ಮೊದಮೊದಲು ಮಡದಿಯ

ಸಿಡುಕು ೪೯೩
ಮೊದಲಿನ ಗೆಳೆಯರಲ್ಲಿ ೧೭೮
ಮೊದಲು ಸೆಳೆಯುವುದ ೧೧೭
ಮೋಡವೆ, ಉಪ್ಪುನೀರಿನ ೭೮೮

## ಯ

ಯಾಜ್ಞಿಕರಿಗೆ ಸೋಮರಸ ೭೪
ಯಾವುದನ್ನೂ ಒರೆದು ನೋಡದೆ ೨೬೬
ಯಾರ ಉದ್ಧಾರಕ್ಕಾಗಿ ೧೯೩
ಯಾರಿಗಾಗಿ ಮಿಂದು
ಮಡಿಯುಡಲಿ? ೬೫
ಯಾರಿಗೂ ಅಡ್ಡಬರದೆ ೧೭೬
ಯಾರೇ ಕೇಳಲಿ ಬಿಡಲಿ ೪೨೮
ಯಾರೋ ಎಲ್ಲಿಯೋ ಹಾಡಿದದರೆ ೧೪೮
ಯಾರೂ ಹುರಿದುಂಬಿಸಿದರೆಂದು ೩೬೫
ಯಾವ ಕಡಲಿನ ತಳದಲ್ಲಿ ೫೯
ಯಾವ ಹಕ್ಕು ಎಲ್ಲರಿಗೂ ೩೬೮
ಯಾವಾಗ ಯಾವ ಗಾಳಿಯ ೧೩೫
ಯಾವುದರ ಬಗೆಗೂ ೧೭೪
ಯಾವುದಿದು ಹೆಸರಿಲ್ಲದ ವ್ಯಸನ ೫೨
ಯುರೋಪು ಶಾಂತವಾಯಿತೋ ೪೮೮
ಯೋಗಗಳಲ್ಲಿ ಶಿವಯೋಗ ೪೯೬

## ರ

ರಂಟೆ ಹೊಡೆದ ಹೊಲದ ೧೯೭
ರಾತ್ರಿಯೆಲ್ಲಾ ಇಬ್ಬನಿ ೨೫
ರಾಮಜನ್ಮಭೂಮಿಯಲ್ಲಿ ರಕ್ತ ೩೯೭
ರಾಮನಂತೆ ಚಂದ್ರನನ್ನು ಬೇಡಿ ೪೧೫
ರಾಮ ಬಳಸಿದ ಬಿಲ್ಲು ೨೬೭
ರೂಪದಿಂದ ಅರೂಪದತ್ತ ೧೦೫

## ಲ

ಲಂಚ ಲಂಚವೆಂದು ದೊಬ್ಬಿಡದಿರಿ ೩೫೩
ಲೋಕದಾಟ ಸಾಕಾಗಿದೆ ೩೬೨

## ವ

ವರ್ಣವ್ಯವಸ್ಥೆಯಿದ್ದೂ ೩೮೫
ವರ್ಷಾರಂಭದ ದಿನವೇ
ದರ್ಶನವಿತ್ತು ೨೩೮
ವಸ್ತುಗಳ ಒಳಹೊಕ್ಕು ನೋಡು ೩೫೫
ವಿಶ್ವದಲ್ಲಿ ಸಹಸ್ರ ಸಹಸ್ರ ೧೨
ವ್ಯಥೆಯ ವೆಜ್ಜಿಸಿಹ ೫
ವ್ಯಾಪ್ರಗಳು ಕಡಿಮೆಯಾಗುತ್ತ ೩೫೯

## ಶ

ಶಬರಿಯ ಬೋರೆಗೆ ೪೭೧
ಶಬ್ದಗಳಿಂದಲೇ ತುಂಬಿದ
ನಿಘಂಟು ೧೯೦
ಶಬ್ದಮಾಧ್ಯಮವಿರಲಿ ೪೯೬
ಶರೀರ ಮುಖ್ಯವೋ ಶೃಂಗಾರ ೩೭೮
ಶಾಸ್ತ್ರ ಹೇಳುವವರೆಲ್ಲ ಜನಕರೆ? ೨೮೭
ಶಿಖರಕ್ಕೆ ಇನ್ನೂ ಎತ್ತರಕ್ಕೆ ೨೩೨
ಶುಷ್ಕ ವೈದುಷ್ಯಕ್ಕಿಂತ ೧೭೦
ಶೈಶವದಲ್ಲಿ ಲಾಲಿ ೩೪೯

## ಸ

ಸಂವಿಧಾನ ಬಂದ ಮೇಲೂ ೩೯೮
ಸನಾತನಿಗಳ ಮೇಲು ಕೀಳಿನ ೪೦೧
ಸನಾದಿ ಊದುವವರ ಮುಂದೆ ೨೭೨
ಸಭ್ಯ ಸಮಾಜದ ಕಥಿತ ೪೫೫
ಸಮುದ್ರ ಎಂಬ ಶಬ್ದ ಕಿರಿದು ೩೭೩
ಸರಿಯಿದ್ದರೆ ಸಿಹಿಯೆಷ್ಟು ೨೦೫
ಸರೂಪ ಮೇಲೋ ಸದ್ಗುಣ ೧೭೫
ಸಹಕಾರ ಸೋತಿದೆ ಆದರೆ ೪೨೩

ಸಾವಿನ ಸುದ್ದಿ ಕೇಳಿ ಕೇಳಿ ೨೫೪
ಸಾವಿರಭಕ್ತರ ತಲೆ ಬೋಳಿಸಿ ೪೮೧
ಸುಂದರವಿರುವಷ್ಟು ಸರಳವಿಲ್ಲವಯ್ಯ ೩೮೪
ಸುಳ್ಳಿಗೆ ಬೇಕು ಸಕಲ ಸಿಂಗಾರಗಳು ೨೩೭
ಸೂರ್ಯ ಕಿರಣಗಳು ತಲುಪದ ೩೭
ಸೂಳೆಕೆರೆಯ ನೀರನ್ನು ೩೧೫
ಸೂಳೆಯರ ಆಣೆ ೩೦೮
ಸೃಷ್ಟಿಯ ಸುಗಂಧಕ್ಕೆ ಚಂದನವೆ ಮೈ ೪೬೧
ಸ್ಪರ್ಧೆಗಿಳಿಯುವುದೇ ಆದರೆ ೨೨೪
ಸ್ವತಂತ್ರತೆ ಬಂದಾಕ್ಷಣ ೩೧೪
ಸ್ವತಂತ್ರಧೀರ ಸಿದ್ಧೇಶ್ವರಾ ೨೩
ಸ್ವತಂತ್ರಧೀರ ಸಿದ್ಧೇಶ್ವರಾ ೨೬೫
ಸ್ವತಂತ್ರಧೀರ ಸಿದ್ಧೇಶ್ವರಾ ೨೭೫
ಸ್ವತಂತ್ರಧೀರ ಸಿದ್ಧೇಶ್ವರನನ್ನೇ ೪೬೫
ಸ್ವತಂತ್ರಧೀರ ಸಿದ್ಧೇಶ್ವರಾ ೪೭೭
ಸ್ವತಂತ್ರಧೀರ ಸಿದ್ಧೇಶ್ವರಾ ೪೧೬
ಸ್ವತಂತ್ರಧೀರ ಸಿದ್ಧೇಶ್ವರಾ ೫೦೦
ಸ್ವಾಭಿಮಾನಿಗೆ ಸೇವಾಜೀವನವೆ ನರಕ ೨೮೧


## ಹ


ಹಂದಿಯ ಮೆಚ್ಚಿದ ಕಣ್ಣಿಗೆ ೨೮೪
ಹಗಲು ಬಿಳಿ ಇರುಳು ಕರಿದು ೩೯
ಹಡಗಿಗೆ ತೂತು ಬೀಳದಿದ್ದರೆ ೪೮
ಹಣ್ಣಾಗಲು ಬಿಡದೆ ಕಾಯಿ ೪೦೮
ಹನಿಯಿದ್ದಲ್ಲಿ ಹಸುರು ೬೩
ಹಸಿದ ಹೊಟ್ಟೆಯೇ ಹೋಮಕುಂಡ ೨೨೧
ಹಸಿದಾಗ ಹಣ್ಣು ೭೮
ಹಸಿನೆಲಕ್ಕೆ ಹಸುರಾಗುವ ೮
ಹಸುರಿಗೆ ಇಬ್ಬನಿಯ ಸ್ನಾನ ೨೪
ಹಸುರಿನ ಹಿನ್ನೆಲೆಯಲ್ಲಿ ೩೯೩
ಹಳ್ಳಿಯಲ್ಲಿ ಹುಟ್ಟಿ ಬೆಳೆದು ೧೯೫
ಹಳ್ಳಿಯ ಹುಲ್ಲಿನ ದಳಗಳು ೩೯೬
ಹಾಗೆ ಬದುಕಬೇಕು ಹೀಗೆ ೪೭೯
ಹಾರಬಲ್ಲುದೆ ರೆಕ್ಕೆಮುರಿದ ಹಕ್ಕಿ? ೨೩೩
ಹಾವ ತೋರಿ ಹವಿಯ ೩೨೮
ಹಾವಿಗೆ ಪುಂಗಿಯ ಸ್ವರ ಮೆಚ್ಚು ೯೬
ಹಿಡಿದ ದಾರಿ ಸರಿಯಿದ್ದರೆ ೮೬
ಹಿಡಿಹೂ ಮುಡಿದ ಬೆಡಗಿ ೧೭೭
ಹಿಮಗಿರಿಯ ಗಾಳಿಗಳು ೧೬೫
ಹಿಮಗಿರಿಯ ಮೇಘ ೪೯
ಹಿಮಾಲಯದ ಹಿಮಗುಹೆಗೆ ೩೩೦
ಹುಟ್ಟುಹಬ್ಬಗಳು ಬಂದುವು ೪೮೦
ಹುಲ್ಲಿನ ಮಕಮಲ್ಲಿನ ಮೇಲೆ ೨೬
ಹುಲ್ಲು ಇಬ್ಬನಿಯ ಮುಡಿದು ೧೫೫
ಹುಸಿಯೊಡನೆ ಒಪ್ಪಂದ ೪೭೪
ಹುಳುಕುಗಳನ್ನೇ ಹುಡುಕುವ ೧೯೮
ಹೂತ ಮಾಮರದ ಚೆಲುವು ೨೦೧
ಹೂಬಿಟ್ಟ ಕೌಂಗು ೪೭
ಹೂವಿಲ್ಲದ ಬಳ್ಳಿಯ ಬಳಿಗೆ ೨೫೩
ಹೂವು ಸುಂದರ ಆದರೆ ೨೧೪
ಹೆಣದ ಮುಂದೆ ಅಳುವವರೆಲ್ಲ ೩೭೦
ಹೆಮ್ಮರಕ್ಕೆ ಹೆಜ್ಜೇನುಗಳ ಹಾರ ೪೦
ಹೆಸರಿಯದಿದ್ದರೂ ಖುಷಿ ಕೊಡದೆ ೩೫೪
ಹೇ ಮನ, ಕಟ್ಟಿ ೨೭೧
ಹೊಂದಾಣಿಕೆಯೊಂದೇ ಹಾದಿ ೩೬೩
ಹೊಗಳೆ, ನಿಮಗೂ ನಿಮ್ಮ ೧೫೭
ಹೊಟ್ಟೆ ತುಂಬಿದವರ ೪೯೯
ಹೊಟ್ಟೆ ಬಲು ಕೆಟ್ಟುದೆಂದು ೪೫೨
ಹೊರಗೆ ಬಣ್ಣಬಣ್ಣದ ಹೂವುಗಳು ೩೭೯
ಹೊರಗೆ ಬದುಕಿನ ಹೋರಾಟ ೧೭
ಹೋಮಕುಂಡದ ಅಗ್ನಿಗಿಂತ ೪೨೪

# ಹೊಸ ವಚನಗಳ ವಚನಾನುಕ್ರಮಣಿಕೆ


**ಅ**

ಅಂಬಾರಿಯಲ್ಲಿ ಕುಳಿತವ ೨೭
ಅಗಲಲೆಂದೆ ಕೂಡಿದೆವು ೧೩೦
ಅತ್ತ ಹೂವಿನ ಗೊಂಚಲು ೬೪
ಅಧಿಕಾರಧಾಮ ದೊರೆತ ಮೇಲೆ ೪೯
ಅನ್ಯರನ್ನು ಬಾಧಿಸದ ಬಾಳಿಗೆ ೮೬
ಅನುಭವಿಸಿದ್ದನ್ನೆಲ್ಲ ೭೩
ಅಮಾವಾಸ್ಯೆಯ ಉದರದಲ್ಲಿ ೧೧೧
ಅಮೆರಿಕಾ ಹುಡುಕಿದವನಿಗೇ ೧೦೧
ಅರಿಯುವಾಗಿನ ಆನಂದಕ್ಕಿಂತ ೧೪೨
ಅಳಿಸುವವರು ಹೇರಳ ೧೨೩

**ಆ**

ಆಕೃತಿಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ೧೫೭
ಆಕಾಶದ ಅದ್ಭುತಗಳೂ ೯೬
ಆದಿಮಾನವನಿಗೆ ೩೮
ಆಶೆಯನ್ನು ತೊರೆ ೧೨೯
ಆಳದಲ್ಲಿ ಕಡಲನ್ನು ಮೀರಬಲ್ಲೆ ೧೫೩

**ಇ**

ಇತಿಹಾಸದ ಪುನರಾವೃತ್ತಿ ೬೨
ಇದು ಧರ್ಮಾಧಿಕಾರಿಗಳ
ಪರಿಷತ್ತಲ್ಲ ೭೦
ಇದುವರೆಗೆ ನಿನ್ನ ಕರೆಗೆ ೬೯
ಇನ್ನೂ ಬರೆಯುತ್ತಲೇ
ಇರುವಿಯಾ? ೪೫
ಇಲ್ಲದ ಚಲುವ ಹುಟ್ಟಿಸಬಲ್ಲುದೆ ೧೧೫

**ಈ**

ಈಗಲೇ ಹೋಗದಿರು ನಲ್ಲ ೧೪೦
ಈ ತನು ನಿನ್ನದೆಂದಾಕ್ಷಣ ೩೫
ಈ ಮುನ್ನ ಹೋದವರ ಲೆಕ್ಕ ೧೪೪
ಈ ಬೆಳ್ಳಿತೆರೆಯ ಮೇಲೆ ೯೪
ಈ ಹಗಲಿರುಳುಗಳ ೧೩೫

**ಉ**

ಉಳ್ಳವರ ಇಲ್ಲದವರ ೯೯
ಉಳ್ಳವರ ಸ್ವಾತಂತ್ರ್ಯ ೬೦
ಉಳಿದ ಮೌಲ್ಯಗಳು ಇರಲಿ ೫೩
ಊಟಕ್ಕೆ ಕರೆವ ಮಾತೃಸ್ವರ ೧೩೭

**ಎ**

ಎಂಜಲು ಎಂಜಲು ಎಂದು ೧೨೮
ಎಲ್ಲ ದ್ರೋಹಗಳಲ್ಲಿ ದೇಶದ್ರೋಹ
೯೮

**ಏ**

ಏನೊಂದೂ ಸರಿಯಾಗಿ ೧೩೩

**ಒ**

ಒಂದೆ ಬಳ್ಳಿಯಿಂದ
ಉಪವನವಾಗುವುದೆ ೧೨೬
ಒಮ್ಮೊಮ್ಮೆ ಪ್ರಶ್ನೆಯೊಂದಕ್ಕೆ ೯೦
ಒಲ್ಲದ ಗಂಡನ ವಲ್ಲಭೆಯೆಂದು ೧೪೫

ಒಳಗಿನ ಒಳಗೆ ಬೆಳಗೆನ್ನನು ೧೧
ಒಳಗಿನ ಬಾನಿನಲ್ಲಿ ೧೧೬
ಒಳನೋಟ ಒಳನೋಟವೆಂದು ೫೫

**ಕ**

ಕಡಲು ತನ್ನ ಉಪ್ಪನ್ನು ೮೪
ಕಣ್ಣೀರು ಬರಿಸುವವರೇ ೭೭
ಕತ್ತಲೆ ಮೆತ್ತಗೆ ಬೆಳಕಾಗುವುದನ್ನು ೧೩೮
ಕತ್ತಲೆಯನ್ನು ಓಡಿಸಲು ೧೯
ಕಮಲದಲ್ಲಿ ಮಧುವಾಗಿ ೪೦
ಕರುಣೆಯ ಒಂದು ಕಂಬನಿ ೧೪೬
ಕಲ್ಲು ಕರಗಬಹುದು ೧೫೪
ಕಾಯಕ ಮಾಡದೆ ತಿನ್ನುವವರೂ ೧೦೮
ಕೀವು ತುಂಬಿದ ಹುಣ್ಣು ೫೦
ಕುಂದಣವ ಕೊಂಡವ ೭೯
ಕೂಸುಗಳು ಕಂಡ ಕನಸುಗಳನ್ನು ೫೪
ಕೃಷ್ಣ ಬಲರಾಮರ ೧೧೪

**ಗ**

ಗೆದ್ದ ಯುದ್ಧಗಳ ಸಂಖ್ಯೆಯಿಂದ ೫೨

**ಚ**

ಚೆನ್ನಾಗಿ ಬೆಳೆದು ತೆನೆಬಿಟ್ಟಾಗ ೧೪೩

**ಜ**

ಜೀವನದ ಗೌರವಿಸು ೭೪
ಜ್ಞಾನವನ್ನು ಪ್ರೀತಿಸುತ್ತೇನೆ ೨೦

**ತ**

ತನು ತನುಗಲ ಅಪ್ಪುಗೆಯ ೧೦
ತನುವಿನ ಒಳಗನ್ನು ಶಿಖರವಾಗಿ ೫೬
ತಾಯಿ ಮಗುವಿನ ಹಾಲಿಗೆ ೬೧
ತಂಬೆಲರಾಗಿ ಬಂದು ೭೮

**ದ**

ದುರ್ಗುಣಗಳ ಉಗ್ರಾಮವಾಗಿದ್ದರು ೪೮
ದುಡಿವ ಅಡುವ ಕೈಗಳಿಗಿಂತ ೬೭
ದುಷ್ಟ ಶಿಕ್ಷಕ ಶಿಷ್ಟ ರಕ್ಷಕರ ೬೩
ದೇಶದಲ್ಲೆಲ್ಲ ನಮ್ಮ ಮೂರ್ತಿಗಳೆ ೧೫೫
ಧ್ವಂಸನಾದ ಆಕಾಶಕಾಯಗಳಿಗೂ ೧೪೮

**ನ**

ನಕ್ಷತ್ರಗಳ ಈ ಲಕ್ಷ ಲಕ್ಷ ೧೩೨
ನಕ್ಷತ್ರಮಂಡಲವೇ
ತೊಂಡಿಲ ಬಾಸಿಗ ೧
ನದಿಗಳ ನಿರ್ಮಲೀಕರಣ ನಡೆದಿದೆ ೧೫೧
ನನ್ನ ತಾಯಿ ಭೂಮಾತೆಯೆ ೧೦೭
ನನ್ನ ದುಃಖವನ್ನು ಸಹಿಸುವುದಿರಲಿ ೪೩
ನನ್ನನ್ನು ಎಚ್ಚರಿಸುವುದು ೩೯
ನನ್ನ ನಾಡಿನ ಶರಣರೆ, ದಾಸರೆ
೪೧
ನನ್ನೆದೆಯ ಛಾಯಾಗ್ರಾಹಕ
ಯಂತ್ರ ೧೩೯
ನನ್ನೊಡನೆ ನಾನು ದಶಕಗಳನ್ನೇ ೩೩
ನಾನಾರೆಂದು ನನಗೆ ನಾನೇ ೯೩

ನಾನು ನಿನ್ನ ಮಮತೆಯ ಬಾಳ ೮೨
ನಾನು ಮೊಟ್ಟಮೊದಲು
ನೋಡಿದುದು ೧೫೨
ನಿಜವಾದ ಮುತ್ತು ೧೦೨
ನಿನಗೆ ನಾಮ ರೂಪಗಳು ೭೫
ನಿನ್ನ ಅಂತರಂಗದಲ್ಲಿಯೂ ೧೦೪
ನಿನ್ನ ಅಪ್ರೀತಿಯ ತಾಳಿಕೊಳ್ಳಬಲ್ಲೆ ೧೪
ನಿನ್ನ ನೆನಪಿನ ನಾವೆ ೧೫
ನಿನ್ನ ವಚನಗಳನ್ನು ಓದುವಾಗ ೧೦೦
ನಿನ್ನ ವಾಯುಮಂಡಲದಲ್ಲಿ ೨೬
ನಿಲುಗಡೆಯಿಲ್ಲದ ಸಂಗತಗೊಳ್ಳದ ೧೨೨
ನೀನೆ ಬಂದೆಯೆಂದು ೧೫೦
ನೆನಪುಗಳು ಕಾಡುತ್ತಿವೆ ನಲ್ಲ ೭

**ಪ**

ಪಶು ಪಕ್ಷಿಗಳೆ ೮೩
ಪಾಪದ ದೀಪಕ್ಕೆ ೩೪
ಪ್ರಜಾತಂತ್ರ ತನ್ನ
ವಿಶ್ವಸನೀಯತೆಯನ್ನು ೫೭
ಪ್ರತಿಬಿಂಬ ಹುಸಿಯೆಂದು ೧೫೮
ಪ್ರಶ್ನಪತ್ರಿಕೆಯನ್ನು
ಸಿದ್ಧಪಡಿಸುವಲ್ಲಿಯೇ ೨೪
ಪ್ರೀತಿಯ ಸೋಂಕಿಗೂ
ಕರಗದೆದೆಯೇ ೧೩

**ಬ**

ಬಡವನೆಂದು ಬೇಯುತ್ತಿಹೆಯಾ? ೧೧೭
ಬದುಕಿಗೆ ಬದಲಿಯಿಲ್ಲ ೧೩೪
ಬರಲಿಲ್ಲ ಬರಲಿಲ್ಲವೆಂದು ೬
ಬಾನಿನಲ್ಲಿ ಮೂಡುವ ಚಿತ್ರಗಳಿಗೆ ೨
ಬಾಲರವಿಯ ಬಂಗಾರ ಕಿರಣಗಳು ೮೦
ಬಿದಿರ ಮೆಳೆಗಳನ್ನು ಅಳಿದು ೧೨೪
ಬಿಸಿಲುಗುದುರೆಗಳಲ್ಲ ಬಯಕೆಗಳು ೧೬
ಬೀಡಿನಲ್ಲಿ ತೊಟ್ಟಿಲ
ಕಟ್ಟುವರೆಂದು ೧೨೦
ಬುದ್ಧಪೂರ್ಣಿಮೆಯ ದಿನ ೩೦
ಬುದ್ಧಿಯ ಅಂಗಳದಲ್ಲಿ ದಿನದಿನವೂ ೯
ಬುಲೆಟ್ ರಾಕೆಟ್ಟುಗಳು ೧೧೦
ಬೆಳಗಾಗುತ್ತಲೆ ಜಗವಿದು ಚಿತ್ರಶಾಲೆ ೮
ಬೇಡುವುದು ಬೆಳಕನ್ನು ೧೧೨
ಬೇಸಿಗೆಕಾಲ ಬಂದಿತು ೫

**ಮ**

ಮಕ್ಕಳ ಪ್ರೀತಿಯ ಪರೀಕ್ಷೆ ೨೩
ಮಗನಿಗೆ ಧೈರ್ಯ ಬರಲೆಂದು ೧೩೬
ಮಗಳ ಚೆಲುವಿಕೆಯನ್ನು ೧೮
ಮನಕ್ಕೆ ದೂರಾದವರು ೩೨
ಮನುಜ ಮಾನವನಾಗದಿರೆ ೨೧
ಮಲ್ಲಿಗೆಯ ನಲ್ಲುಸಿರಿಗೂ ೨೨
ಮಹಾವೀರರ ಅಹಿಂಸೆ ೧೫೬
ಮಳೆಗಾಲವೂ ಮಿಲನವಿಲ್ಲದೆಯೆ ೩
ಮಾಡದಲ್ಲಿ ಮಿಣುಕಿ ಮಿಣುಕಿ ೪
ಮಿತ್ಯವ್ಯಯವನ್ನು ಕಡೆಗಣಿಸಿ ೬೮
ಮೂರ್ತೀಕರಣವೊಂದು ೮೯

**ಯ**

ಯಾರನ್ನೂ ಪ್ರೀತಿಸದವನೂ ೯೫
ಯಾರಾದರೂ ಕೊರಕಲು ೮೫
ಯಾರೋ ಸೋಲುವರೆಂದೇ ೧೪೧
ಯಾವುದಕ್ಕೆ ಮೇರೆಯಿದ್ದರೂ ೧೪೯
ಯಾವುದರಲ್ಲಿಯೂ
ವಿಶ್ವಾಸವಿಲ್ಲದವನ ೯೭
ಯಾವುದರಲ್ಲಿಯೂ
ವಿಶ್ವಾಸವಿಲ್ಲದವನ ೧೦೯
'ಯುರೇಕಾ ಯುರೇಕಾ' ಎಂದು ೧೦೬

**ರ**

ರಕ್ತ ಕೆಂಪಾಗಿದ್ದೂ ಕಪ್ಪು ೨೮
ರೆಪ್ಪೆ ಭಾರವಾಗಲು ನಿದ್ದೆ ೪೨

**ವ**

ವಿಚಾರ ಜಡ್ಡುಗಟ್ಟಿ ೭೬
ವಿಜ್ಞಾನಕ್ಕೆ ಶಾಖೆಗಳು ೧೦೩
ವಿಶ್ವವಲ್ಲಕಿಯ ಸ್ವರ ನಾನು ೧೧೮
ವೃತ್ತಿಯಂತೆ ವಿತ್ತ ೩೭
ವ್ಯರ್ಥವಾಯಿತು ಜೀವನ ೨೯
ವ್ಯಭಿಚಾರಗಳಲ್ಲಿ ಬೌದ್ಧಿಕ
ವ್ಯಭಿಚಾರ ೯೧
ವೈರ ಸಾಧಿಸಲು ಬೇಕು ಸೇನೆ ೫೮

**ಶ**

ಶೈಶವ ಮಾಯವಾಯಿತೆಂದು ೫೯

**ಸ**

ಸಮೀಪದ ನೆನಪುಗಳಿಗಿಂತ ೧೦೫
ಸಾವಿರ ರೆಕ್ಕೆಗಳ ೧೭
ಸಾವಿರ ಸಾವಿರ ವಿಚಾರ ೧೪೭
ಸುಖದ ಸಾಧನಗಳು ಹೆಚ್ಚಿದಂತೆ ೧೩೧
ಸುವರ್ಣವೃಷ್ಟಿಯ ಕತೆ ೯೨
ಸುಲಭವಾಗಿ ಬದುಕಲು ೩೧
ಸುಳಿಗಾಳಿಯ ಹಾಳೆಯಲ್ಲಿ ೩೬
ಸ್ವತಂತ್ರಧೀರ ಸಿದ್ಧೇಶ್ವರಾ ೬೬
ಸ್ವಾರ್ಥವನ್ನು ಸಮರ್ಥಿಸುವ ೭೨
ಸೊಬಗೆಲ್ಲಿಯೊ ೨೫

**ಹ**

ಹಕ್ಕಿ ತೊರೆದ
ಗೂಡಿನಂತಾಗಿಹೆನಯ್ಯ ೪೬
ಹಗಲು ಧಗೆಯಾದರೂ ಸರಿಯೆ ೧೧೯
ಹಣಕ್ಕೆ ಮಣಿಯೆನಯ್ಯ ೪೪
ಹಸಿವೆ ಜೋರಾಗಿದ್ದರೆ ೬೫
ಹಸುಗೂಸುಗಳ ತೊದಲ್ನುಡಿಯ ೮೮
ಹಾಲು ಹೆಪ್ಪುಗಟ್ಟಿದಾಗ ೫೧
ಹೂವಿನ ಕೋಮಲತೆ ೧೧೩
ಹೂವು ಚೆಲ್ಲಿದ ಹಾದಿಯಲ್ಲಿಯೇ ೭೧
ಹೂವು ಯಾವ ಬಣ್ಣದ್ದಾದರೇನು ೪೭
ಹೃದಯ ಕೊಟ್ಟವನೂ ನೀನೇ ೧೨೧
ಹೆಣ್ಣಿನ ಹೆಣ ಕೊಯ್ದು ೮೭
ಹೊರಗಿನ ಮೃಗಜಲಗಳ ೧೨೫
ಹೊರಗೆ ಸಾವಿರ ಸಾವಿರ ೧೨೭
ಹೊಲಬಿಗಾಗಿ ಹಲುಬುತ್ತಲೇ
ಇದ್ದೇನೆ ೧೨
ಹೊಲಸು ಸ್ವೀಕರಿಸುವ ಕಕ್ಕಸ ೮೧

# ಅನುಬಂಧಗಳು

# ಅನುಬಂಧ ೧

# ಪ್ರಕಾಶಕರ ಮಾತು

ಕಳೆದ ವರ್ಷ ನನ್ನ ತಂದೆಯವರಾದ ಡಾ. ಸಿದ್ಧಯ್ಯ ಪುರಾಣಿಕ ('ಕಾವ್ಯಾನಂದ')ರ ಸಮಗ್ರ ಕಾವ್ಯವನ್ನು ಪ್ರಕಟಿಸಿದೆವು. 'ವಚನೋದ್ಯಾನ'ದ ದ್ವಿತೀಯ ಮುದ್ರಣದಲ್ಲಿ ನನ್ನ ತಂದೆಯವರ 'ಸಮಗ್ರ ವಚನಗಳು' ಒಂದು ಸಂಪುಟದಲ್ಲಿ ದೊರೆಯುವಂತೆ ಮಾಡುವ ಆಶ್ವಾಸನೆ ನೀಡಿದ್ದೆವು. ಈ ವರ್ಷ ಅದು ಪೂರೈಸುತ್ತಿರುವುದು ನನಗೆ ಹಾಗೂ ನನ್ನ ಕುಟುಂಬದ ಎಲ್ಲ ಸದಸ್ಯರಿಗೆ ಹೆಚ್ಚಿನ ಸಂತೋಷ ತಂದಿದೆ. ಅವರ ಇನ್ನಿತರ ಕೃತಿಗಳನ್ನು ಹೀಗೆಯೇ ಹೊರತರುವ ಯೋಜನೆಯಿದೆ.

ನನ್ನ ತಂದೆಯವರ ಸಾಹಿತ್ಯಾಭಿವ್ಯಕ್ತಿಗೆ ಬಹಳ ಪ್ರಿಯವಾದ ಮಾಧ್ಯಮ ಆಧುನಿಕ ವಚನಗಳ ಶಿಲ್ಪ. ಅವರು 'ಸ್ವತಂತ್ರಧೀರ ಸಿದ್ಧೇಶ್ವರ' ಅಂಕಿತದಲ್ಲಿ ವಚನೋದ್ಯಾನ, ವಚನನಂದನ ಹಾಗೂ ವಚನಾರಾಮ ಎನ್ನುವ ಮೂರು ಮಹತ್ವದ ಸಂಕಲನಗಳನ್ನು ಹೊರತಂದರು. ಹನ್ನೆರಡನೇ ಶತಮಾನದ ಶಿವಶರಣರ ವಚನಗಳ ಆಕೃತಿ (mould) ಯಲ್ಲಿ ಆಧುನಿಕ ವಚನಗಳನ್ನು ರಚಿಸಿದರು. ಇವರಿಗಿಂತ ಹಿಂದೆ ಆಧುನಿಕ ವಚನಗಳು ಸೃಷ್ಟಿಯಾಗಿದ್ದರೂ ನನ್ನ ತಂದೆಯವರ ವಚನಗಳಲ್ಲಿ ಹಿಂದೆಂದೂ ಕಾಣದ ತಾಜಾತನವನ್ನು (freshness) ಆಧುನಿಕ ಸಾಹಿತ್ಯಲೋಕ ಗುರುತಿಸಿತು. ಅವರ ವಚನಗಳಲ್ಲಿ ಹರಳುಗಟ್ಟಿರುವ ಸ್ವತಂತ್ರ ಚಿಂತನಾಂಶಗಳು, ಉಪಮೆ- ಸಾದೃಶ್ಯಗಳು, ಶಬ್ದಚಿತ್ರಗಳು, ರಾಜಕೀಯ ಸಾಮಾಜಿಕ ವಿಡಂಬನೆಗಳು ಹಾಸುಹೊಕ್ಕಾಗಿ ಆಧುನಿಕ ವಚನಗಳಿಗೆ ಒಂದು ಸಿದ್ಧ ಮಾದರಿಯನ್ನು ಹಾಕಿಕೊಟ್ಟವು. ಅವರು ಬಳಸಿರುವ ವೈಜ್ಞಾನಿಕ ಸಾದೃಶ್ಯಗಳು (simile) ಬಹುವಾಗಿ ಹೊಸತಾದವು; ಶಬ್ದಚಿತ್ರ ನಿರ್ಮಾಣದಲ್ಲಿ ಪರಿಣಾಮ ಕಾರಿಯಾದವುಗಳು. ಅವರು ತಮ್ಮನ್ನು ತಾವೇ ವಿಡಂಬನೆಗೆ ಗುರಿಮಾಡಿಕೊಳ್ಳಬಲ್ಲ ಸ್ಥಿತಪ್ರಜ್ಞ, ರಾಜಕಾರಣಿಗಳ ಆಷಾಢಭೂತಿತನವನ್ನು ತಮ್ಮ ಕವಿತೆಗಳಲ್ಲಿ ಗೇಲಿಮಾಡಿದಂತೆ ಆಧುನಿಕ ವಚನಗಳಲ್ಲೂ ಪರಿಣಾಮಕಾರಿಯಾಗಿ ಗೇಲಿಮಾಡಿರುವರು.

ನನ್ನ ತಂದೆಯವರ 'ವಚನೋದ್ಯಾನ'ಕ್ಕೆ ದೇಶದ ಪ್ರತಿಷ್ಠಿತ ಗೌರವವಾದ ಬಿಲ್ವಾರಾ ಪ್ರಶಸ್ತಿ ಬಂದಿತು. ಇಂದಿಗೂ ಅವರ 'ಮೊದಲು ಮಾನವನಾಗು'

ಎನ್ನುವ ಕವಿತೆ ಅತ್ಯಂತ ಜನಪ್ರಿಯತೆಯನ್ನು ಗಳಿಸಿದೆ; ಜನತೆ ಆ ಮೂಲಕ ಅವರನ್ನು ಗುರುತಿಸಿದೆ. ಅವರ ಎಲ್ಲ ವಚನಗಳು ಒಂದು ಸಂಪುಟದಲ್ಲಿ ದೊರೆಯುವಂತೆ ಮಾಡಿರುವ ನಮ್ಮ ಪ್ರಯತ್ನ ಅವರ ವಚನಗಳೂ ಅಧ್ಯಯನಕ್ಕೆ ಯೋಗ್ಯ ವೇದಿಕೆ ನಿರ್ಮಾಣಮಾಡಿದೆ. ನಮ್ಮ ಈ ಯೋಜನೆಯ ವಿಷಯ ತಿಳಿದ ಕೂಡಲೇ ಅದಕ್ಕೊಂದು ಅರ್ಥಪೂರ್ಣವಾದ 'ಮುನ್ನುಡಿ' ಬರೆದುಕೊಡಲು ನನ್ನ ತಂದೆಯವರ ಪ್ರೀತಿಯ ಗೆಳೆಯರೂ, ಖ್ಯಾತ ಕವಿ-ವಿಮರ್ಶಕರೂ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯನವರು ಒಪ್ಪಿ, ಬರೆದುಕೊಟ್ಟು, ನಮ್ಮನ್ನು ಹರಸಿರುವರು. ಆ ಹಿರಿಯ ಚೇತನಕ್ಕೆ ನಮ್ಮ ಗೌರವಪೂರ್ವಕ ನಮನಗಳು. ನಮ್ಮ ತಂದೆಯವರ 'ಸಮಗ್ರ ಕಾವ್ಯ'ವನ್ನು ಹೊರತರುವಲ್ಲಿ ನಮಗೆ ಸಂಪೂರ್ಣ ಸಹಕಾರ ನೀಡಿದ ವರ್ಷಿಣಿ ಗ್ರಾಫಿಕ್ಸ್ ಹಾಗೂ ಸ್ನೇಹಾ ಪ್ರಿಂಟರ್ಸ್‌ರವರು ಈಗ 'ಸಮಗ್ರ ವಚನಗಳ ಸಂಪುಟ'ವನ್ನು ಹೊರತರುವಲ್ಲಿ ನಮಗೆ ನೆರವಾಗಿರುವರು. ಅವರಿಗೂ ಮುಖಪುಟ ವಿನ್ಯಾಸ ಮಾಡಿದ ಶ್ರೀ ಮೋನಪ್ಪನವರಿಗೂ ವಂದನೆಗಳು.

ಸಹೃದಯಲೋಕ ಈ ಸಂಪುಟವನ್ನೂ ತೆರೆದ ಮನಸ್ಸಿನಿಂದ ಸ್ವೀಕರಿಸಿ ನಮ್ಮನ್ನು ಪ್ರೋತ್ಸಾಹಿಸುವರೆಂದು ನಂಬಿರುವೆವು.

**– ಪ್ರಸನ್ನ ಕುಮಾರ ಪುರಾಣಿಕ**

# ಅನುಬಂಧ ೨

## ಮುನ್ನುಡಿಗಳು

## ‘ವಚನೋದ್ಯಾನ’ದಲ್ಲಿ

ಈ ಸಂಕಲನದ ಒಂದು ವಚನ ಇದು:

ವಿದ್ಯೆ ಬಂತು, ವಿನಯ ಹೋಯ್ತು;
ಬುದ್ಧಿ ಬಂತು, ಶ್ರದ್ಧೆ ಹೋಯ್ತು;
ಶ್ರದ್ಧೆ ಬಂತು, ವಿವೇಚನೆ ಹೋಯ್ತು;
ಸಮೃದ್ಧಿ ಬಂತು, ಸಂಸ್ಕೃತಿ ಹೋಯ್ತು;
ವಿಜ್ಞಾನ ಬಂತು, ಸಮಾಧಾನ ಹೋಯ್ತು;
ಶರೀರಸ್ವಾತ್ಥ್ಯ ಬಂತು, ಚಿತಸ್ವಾಸ್ಥ್ಯ ಹೋಯ್ತು;
ಧೀರ್ಘಾಯುಷ್ಯ ಬಂತು, ಜೀವನಸ್ವಾರಸ್ಯ ಹೋಯ್ತು;
ಬೋಧನೆ ಬಂತು, ಸಾಧನೆ ಹೋಯ್ತು;
ಮಾತು ಬಂತು, ಕೃತಿಯು ಹೋಯ್ತು;
ಜಾತಿ ಬಂತು, ಪ್ರೀತಿ ಹೋಯ್ತು;
ಸ್ವಾತಂತ್ರ್ಯ ಬಂತು. ಸೌಜನ್ಯ ಹೋಯ್ತು;
ಸಿದ್ಧಯ್ಯ ಪುರಾಣಿಕ ಬಂದ,
ಸ್ವತಂತ್ರ ಧೀರ ಸಿದ್ಧೇಶ್ವರ ಹೋದ! (೧೦೦)

ಇದನ್ನು ಓದುತ್ತಲೇ ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಮೊದಲು ಯಾವಾಗ ನೋಡಿದೆ ಎಂದುಕೊಂಡು ನೆನಪಿನ ಗಣಿಯೊಳಕ್ಕೆ ಇಳಿದೆ. 1955ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಗೆ ಅವರು ಅಧ್ಯಕ್ಷರಾಗಿದ್ದರು. ತುಂಬಿಕೊಂಡ ಕೆನ್ನೆಗಳ ಎತ್ತರದ ವ್ಯಕ್ತಿತ್ವ ಅವರದು. ತಾರುಣ್ಯ, ಉತ್ಸಾಹಗಳಿಂದ ಅವರು ಪುಟಿಯುತ್ತಿದ್ದರು. ಅವರ ಅಧ್ಯಕ್ಷ ಭಾಷಣ ಈಗಲೂ ನನಗೆ ನೆನಪಿಗೆ ಬರುತ್ತದೆ. ಆಗಿನ್ನೂ ವಿದ್ಯಾರ್ಥಿಯಾಗಿದ್ದ ನಾನು ಅವರಿಗೆ ನನ್ನ ಸಂತೋಷವನ್ನು ಸೂಚಿಸಿದ್ದೆ. ಪುರಾಣಿಕರು ತುಂಬ ಸ್ನೇಹಮಯಿಯಾಗಿ ಮಾತಾಡಿದ್ದರು. ಆದರೆ ಅದು ಹತ್ತರ ಕೂಡ ಹನ್ನೊಂದರ ಸಂದರ್ಭ.

ಮುಂದೆ 1964ರಲ್ಲಿ ಅವರನ್ನು ಮತ್ತೆ ನೋಡಿದೆ. ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿ ರಾಜ್ಯದ ವಯಸ್ಕರ ಶಿಕ್ಷಣ ಸಂಸ್ಥೆಯ ಅಟ್ಟದ ಮೇಲೆ ಸಂಸ್ಥೆ

ಪ್ರಕಟಿಸಿದ್ದ ಪುರಾಣಿಕರ "ಶರಣಚರಿತಾಮೃತ' ಪುಸ್ತಕದ ಬಿಡುಗಡೆ ಸಮಾರಂಭ. ಅದರಲ್ಲಿ ಪುರಾಣಿಕರೂ ಭಾಗಿಗಳು. ಒಂಭತ್ತು ವರ್ಷಗಳ ಅವಧಿಯಲ್ಲಿ ಅನೇಕ ಬದಲಾವಣೆಗಳಾಗಿ ಹೋಗಿದ್ದವು. ಕನ್ನಡನಾಡಿನ ಏಕೀಕರಣವಾಗಿತ್ತು. ಹೈದರಾಬಾದ್ ಸೇವೆಯಲ್ಲಿದ್ದ ಪುರಾಣಿಕರು ಮೈಸೂರು ಸರ್ಕಾರದ ಸೇವೆಗೆ ಬಂದಿದ್ದರು. ಬಹುಶಃ ಆಗ ಅವರು ಹಣಕಾಸಿನ ಇಲಾಖೆಯಲ್ಲಿ ಅಧಿಕಾರದಲ್ಲಿದ್ದರೆಂದು ತೋರುತ್ತದೆ. ಹಿರಿಯರೊಬ್ಬರು ನನ್ನನ್ನು ಪುರಾಣಿಕರಿಗೆ ಪರಿಚಯಿಸಿದರು. ಅದೇ ತಾನೆ ನಾನು ಅಮೆರಿಕೆಯಿಂದ ನನ್ನ ಶಿಕ್ಷಣ ಮುಗಿಸಿಕೊಂಡು ಬಂದಿದ್ದೆ. ಇದನ್ನು ತಿಳಿದು ಅವರು ಸಂತೋಷಪಟ್ಟರು. 'ಏನು, ನಿಮ್ಮನ್ನು ನೋಡಿದರೆ ಅಮೆರಿಕಾದಿಂದ ಬಂದವರ ಹಾಗೆ ಕಾಣುವುದಿಲ್ಲವಲ್ಲ' ಎಂದು ಅವರು ನಗೆಯಾಡಿದ್ದು ಕಣ್ಣೆದುರು ಕಟ್ಟಿದೆ.

ಮತ್ತೆ ಒಂದು ಒಂದೂವರೆ ವರ್ಷದ ಮೇಲೆ ಅವರನ್ನು ಮಡಕೇರಿಯಲ್ಲಿ ನೋಡಿದೆ. ಆಗ ಅವರು ಅಲ್ಲಿ ಜಿಲ್ಲಾಧಿಕಾರಿಯಾಗಿದ್ದರು. ಒಂದು ಸಂಜೆ ಒಂದು ಮುಂಜಾನೆ ಅವರ ಮನೆಯಲ್ಲಿ ಆಧುನಿಕ ಸಾಹಿತ್ಯ, ಕುವೆಂಪು ಮುಂತಾದ ವಿಷಯಗಳ ಮೇಲೆ ಏನೇನೋ ಮಾತಾಡಿದೆವು. ಅಲ್ಲಿಂದ ಕಳೆದ ಒಂದು ದಶಕದಲ್ಲಿ ನಾವು ಅನೇಕ ಸಲ ಸಂಧಿಸಿದ್ದೆವು. ಅಲ್ಲಿಂದ ಕಳೆದ ಒಂದು ರೈಲಿನಲ್ಲಿ ಒಟ್ಟಾಗಿ ಪ್ರಯಾಣ ಮಾಡಿದ್ದೇವೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕೋಶದ ಸಂಪಾದಕ ಮಂಡಲಿಯಲ್ಲಿ ನಾವು ಸದಸ್ಯರಾಗಿರುವುದರಿಂದ ಪರಿಚಯ ತಿರಸ್ಕಾರವನ್ನು ಮೂಡಿಸುತ್ತದೆ ಎನ್ನುವುದು ಪ್ರಸಿದ್ಧವಾದ ಮಾತು. ಆದರೆ ಸಿದ್ಧಯ್ಯ ಪುರಾಣಿಕರೊಂದಿಗೆ ನನ್ನ ಪರಿಚಯ ಗಾದೆಯನ್ನೂ ಸುಳ್ಳಾಗಿಸಿದೆ.

ಬೇಕಾದದ್ದು ಹೋಗಿ ಬೇಡವಾದದ್ದು ಬಂತು ; ಸಹಜವಾದದ್ದು ಹೋಗಿ ಕೃತಕವಾದದ್ದು ಬಂತು ಎಂಬುದನ್ನು ಹೇಳುವಾಗ "ಸಿದ್ಧಯ್ಯ ಪುರಾಣಿಕ ಬಂದ, ಸ್ವತಂತ್ರ ಧೀರೇಶ್ವರ ಹೋದ" ಎಂದು ಪುರಾಣಿಕರು ಉದ್ಗರಿಸಿದ್ದಾರೆ. ನನ್ನ ಅನುಭವದಲ್ಲಿ ಸ್ವತಂತ್ರಧೀರ ಸಿದ್ಧೇಶ್ವರ, ಸಿದ್ಧಯ್ಯ ಪುರಾಣಿಕರ ರೂಪದಲ್ಲಿ ಪ್ರತ್ಯಕ್ಷಗೊಂಡಿದ್ದಾನೆ. ಯಾವ ಮೌಲ್ಯಗಳು ಕಳೆದುಹೋದವೆಂದು ಪುರಾಣಿಕರು ಪರಿತಪಿಸುತ್ತಿದ್ದಾರೆಯೋ ಆ ಮೌಲ್ಯಗಳನ್ನೆಲ್ಲ – ವಿನಯ, ಶ್ರದ್ಧೆ, ವಿವೇಚನೆ, ಸಂಸ್ಕೃತಿ, ಸಮಾಧಾನ, ಸಾಧನೆ, ಪ್ರೀತಿ, ಸೌಜನ್ಯ – ನಾನು ಅವರಲ್ಲಿ ಮತ್ತೆ ಮತ್ತೆ ಕಾಣುತ್ತಿದ್ದೇನೆ. ಚಿತ್ತಸ್ವಾಸ್ಥ್ಯವನ್ನೂ, ಜೀವನ ಸ್ವಾರಸ್ಯವನ್ನೂ ಅವರು ಪೋಷಿಸಿಕೊಂಡು ಬಂದಿದ್ದಾರೆ. ಅಧಿಕಾರ ಲಾಲಸೆ ಮಹತ್ವಾಕಾಂಕ್ಷೆಗಳಿಗೆ ಬಲಿಯಾಗಿ ಈ ಗುಣಗಳನ್ನು ಕಳೆದುಕೊಂಡು, ತಮ್ಮ ಬದುಕನ್ನು ಮಾತ್ರವಲ್ಲ ಸಮಾಜ ಜೀವನವನವೇ ಕೆಡಿಸುವ ರಾಕ್ಷಸ ಪ್ರವೃತ್ತಿ ನಮ್ಮ ಸುತ್ತಲೂ ತುಂಬಿಕೊಂಡಿರುವಾಗ ಪುರಾಣಿಕರಂಥವರ ವ್ಯಕ್ತಿತ್ವ ಆಸೆಯ ಕಿಡಿಗಳನ್ನು ಉಳಿಸುತ್ತದೆ; ಬದುಕಿನಲ್ಲಿ ಭರವಸೆಯನ್ನು ಮೂಡಿಸುತ್ತದೆ.

ಸ್ವತಂತ್ರಧೀರ ಸಿದ್ಧೇಶ್ವರ ಎಲ್ಲ ಕಾಲಕ್ಕೆ ಎಲ್ಲರ ಪಾಲಿಗೆ ಲಭ್ಯನಲ್ಲ. ಆದರೆ

ಪುರಾಣಿಕರಂಥವರು ಬದುಕಿನ ಆ ಕೊರೆಯನ್ನು ತುಂಬಿಕೊಡುತ್ತಾರೆ. ಮಾತು–ಕೃತಿಗಳ ನಡುವಿನ ಅಂತರ ಮಹಾಕಂದರವಾಗಿ ಏರ್ಪಟ್ಟು ಮಾತು ಅರ್ಥವನ್ನು ಕಳೆದುಕೊಂಡಾಗ, ಅರ್ಥವತ್ತಾದ ಮಾತುಗಳನ್ನು ನಾವು ಹುಡುಕಬೇಕಾಗುತ್ತದೆ. ಆಗ ನಮ್ಮ ಅದೃಷ್ಟದಿಂದ ಒಮ್ಮೊಮ್ಮೆ 'ವಚನೋದ್ಯಾನ'ದ ಬಾಗಿಲು ತೆರೆಯುಯತ್ತದೆ.

ಸಿದ್ಧಯ್ಯ ಪುರಾಣಿಕರ ವಚನಗಳು ಕೆಲವು ವರ್ಷಗಳ ಹಿಂದೆ ಶಿಕ್ಷಣ ಇಲಾಖೆಯ 'ಜೀವನ ವಿಕಾಸ' ಮಾಸಪತ್ರಿಕೆಯಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಿದ್ದವು. ಅವನ್ನು ಓದಿ ಸಂತೋಷಿಸುತ್ತಿದವರಲ್ಲಿ ನಾನೊಬ್ಬ. ಪುರಾಣಿಕರು ಭೇಟಿಯಾದಾಗಲೆಲ್ಲ ನಾನು ನನ್ನ ಮೆಚ್ಚುಗೆ ಸೂಚಿಸುತ್ತಿದ್ದೆ. ಒಂದೆರಡು ಸಲ ಕಾಗದದಲ್ಲಿ ಬರೆದೂ ಹೇಳಿದ್ದೆ. ವಚನಗಳ ಸಂಗ್ರಹವೊಂದನ್ನು ಪ್ರಕಟಿಸಬೇಕೆಂದು ಒಮ್ಮೆ ಅವರಿಗೆ ಸಲಹೆ ಮಾಡಿದೆ, ತಾವೂ ಅದನ್ನು ಯೋಚಿಸುತ್ತಿರುವುದಾಗಿ ಹೇಳಿದ್ದರು. ಇದಾಗಿ ಆಗಲೇ ಎರಡು ಮೂರು ವರ್ಷಗಳು ಕಳೆದಿವೆ. ಈಗ ಈ ಸಂಗ್ರಹ 'ವಚನೋದ್ಯಾನ' ಪ್ರಕಟವಾಗುತ್ತಿದೆ. ಈ ಸಂದರ್ಭದಲ್ಲಿ ನಾಲ್ಕು ಕೆಳೆನುಡಿಗಳನ್ನಾಡುವುದಕ್ಕೆ ನನಗೆ ತುಂಬ ಸಂತೋಷವೆನಿಸುತ್ತದೆ. ಇಂಥದೊಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಿರಿಯರಾದ ಪುರಾಣಿಕರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಮೊದಲ ಮಾತುಗಳನ್ನು ಬರೆಯಲು ನನಗಿರುವ ಅರ್ಹತೆ ಎಂದರೆ ಅವರು ನನ್ನಲ್ಲಿಟ್ಟಿರುವ ಪ್ರೀತಿಯೊಂದೇ. ವಾಸ್ತವವಾಗಿ ಇಂಥ ಕೃತಿಗಳಿಗೆ ಪೀಠಿಕೆ ಮುನ್ನುಡಿಗಳ ಅಗತ್ಯವಿಲ್ಲ. ಅವು ಉದ್ಯಾನದ ಬಾಗಿಲಲ್ಲಿ ಕಾವಲುಗಾರನನ್ನು ನಿಲ್ಲಿಸಿದ ಹಾಗೆ. ಮೆಚ್ಚುಗೆಯ ಮಾತನ್ನಾಡುವ ಅವಕಾಶವೆಂದು ಭಾವಿಸಿದರೂ ತಪ್ಪಾಗುತ್ತದೇನೊ. ಪುರಾಣಿಕರದೇ ಮಾತು ನೆನಪಿಗೆ ಬರುತ್ತದೆ : "ಬೆಳಕಿತ್ತ ದೀಪಕ್ಕೆ ಮಾನಪತ್ರ ಕೊಡುವವರಾರಯ್ಯ?" (294). ಮಾನಪತ್ರ ಕೊಡುವ ಮೂರ್ಖರೂ ಇರಬಹುದು. ಆದರೆ ಜೀವನದಲ್ಲಿ ಜಾಣತನ ಎಂದರೆ ಬೆಳಕಿನಲ್ಲಿ ನಡೆಯುವುದಷ್ಟೇ. ಪುರಾಣಿಕರ ಪ್ರಕೃತ ಗ್ರಂಥ ಒಂದು ಬೆಳಕಿನ ಕುಡಿ.

* * *

ಎಂಟುನೂರು ವರ್ಷಗಳ ಹಿಂದೆಯೇ ಕನ್ನಡವನ್ನು ವಿಶ್ವಸಾಹಿತ್ಯದ ಔನ್ನತ್ಯಕ್ಕೇರಿಸಿದ ಸಾಹಿತ್ಯ ಪ್ರಕಾರ–ವಚನ. ಅಂಕಿತಗಳನ್ನೊಳಗೊಂಡ ಆ ಅನುಭಾವೀ ಗದ್ಯ ಗೀತೆಗಳು ಇಂದಿನ ನಮ್ಮ ಅನುಭವಗಳಿಗೂ ಹೊಳಪು ಕೊಟ್ಟು ಕಾಲ ದೇಶಗಳ ಕಟ್ಟನ್ನು ಒಡೆಯಬಲ್ಲ ಶಕ್ತಿಯ ಕಿಡಿಗಳು. ಈ ಸಾಹಿತ್ಯ ಪ್ರಕಾರವನ್ನು ನಮ್ಮ ಕಾಲದಲ್ಲೂ ಬಳಸಿಕೊಳ್ಳುವ ಬಗೆ ಬಗೆಯ ಪ್ರಯತ್ನಗಳು ನಡೆದಿವೆ. ಅದರ ವಿವರಗಳನ್ನು ನಾನು ಈಗಾಗಲೇ ಪ್ರೊಫೆಸರ್ ಎಸ್.ವಿ. ಪರಮೇಶ್ವರ ಭಟ್ಟರ 'ಉಪ್ಪು ಕಡಲು' ಎಂಬ ಏಳುನೂರು ವಚನಗಳ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದೇನೆ. ಆ ವಿಷಯಗಳನ್ನು ಮತ್ತೆ ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ.

ಬೇರೆ ಬೇರೆ ಮನೋಭಾವದ, ವಿವಿಧ ಉದ್ದೇಶಗಳ ಹಲವಾರು ಮಂದಿ ಇಂದು ವಚನಗಳನ್ನು ಬರೆಯುತ್ತಿದ್ದಾರೆ. ಡಾ॥ ಎಸ್.ವಿ. ರಂಗಣ್ಣ, ಡಾ॥ ಜಚನಿ ಮತ್ತು ಪ್ರೊ. ಪರಮೇಶ್ವರ ಭಟ್ಟರು ಈ ಕ್ಷೇತ್ರದಲ್ಲಿ ದೊಡ್ಡ ಹೆಸರು ಸಂಪಾದಿಸಿದ್ದಾರೆ. ಈಗ ಈ ಪಟ್ಟಿಗೆ ಡಾ. ಸಿದ್ಧಯ್ಯ ಪುರಾಣಿಕರೂ ಸೇರಿದ್ದಾರೆ. ತಾವು ಬರೆದ ದೊಡ್ಡ ಸಂಖ್ಯೆಯ ವಚನಗಳನ್ನು ಆಯ್ದು ಇಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಇದು ಕಾಡನ್ನು ಸೋಸಿ ಉದ್ಯಾನ ಮಾಡಿದ ಕಲಾಕಾಯಕ. ಅವರಿಗೆ ಸಂಖ್ಯೆಯಲ್ಲಿ ನಂಬಿಕೆ ಇಲ್ಲ. "ಗಾತ್ರಕ್ಕೆ ಪಾತ್ರತೆಯ ಬಲಿ, ಅಗಲಕ್ಕೆ ಆಳದ ಬಲಿ, ಆಳಕ್ಕೆ ಎತ್ತರದ ಬಲಿ, ಎತ್ತರಕ್ಕೆ ಬಿತ್ತರದ ಬಲಿ" ಎನ್ನುವ ಅವರು "ಮಾಹಿತಿಯು ಸಮೃದ್ಧವಾಗುತ್ತಿರುವಂತೆಯೇ ಸನ್ಮತಿಯು ಬಡವಾಗುತ್ತಿದೆಯಯ್ಯಾ" ಎಂದು ಕೊರಗುತ್ತಾರೆ (309). ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಬಿಡಿಬಿಡಿಯಾಗಿ ಪ್ರಕಟಗೊಂಡಿದ್ದ ಪುರಾಣಿಕರ ವಚನಗಳು ಓದುಗರ ಮೇಲೆ ಒಟ್ಟಂದದ ಪ್ರಭಾವ ಬೀರಲು ಸಾಧ್ಯವಿರಲಿಲ್ಲ. ಈಗ ಅವು ಒಟ್ಟಾಗಿ ಪ್ರಕಟಗೊಳ್ಳುತ್ತಿರುವುದರಿಂದ ಅವುಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ನಮಗೆ ಸಾಧ್ಯವಾಗುವುದಿಲ್ಲ. ಈ ಸಂಕಲನದ ಪ್ರಕಟಣೆಯಿಂದ ಪುರಾಣಿಕರು ನಮ್ಮ ಕಾಲದ ವಚನಕಾರರಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಾರೆ.

ಗದ್ಯಗೀತೆಗಳ ಈ ಆಧುನಿಕ ಸಾಹಿತ್ಯ ಪ್ರಕಾರವನ್ನು 'ವಚನ' ಪ್ರಕಾರವೆಂದು ಗುರುತಿಸಲು, ಅವುಗಳ ಲೇಖಕರನ್ನು 'ವಚನಕಾರ'ರೆಂದು ಕರೆಯಲು ಕೆಲವರಿಗೆ ಇಷ್ಟವಿಲ್ಲ. ಈ ಮಾತುಗಳನ್ನು ಅವುಗಳ ಮೂಲ ಸಂದರ್ಭಕ್ಕೇ ಮೀಸಲಿಡಬೇಕೆಂಬುದು ಅಂಥವರ ಅಭಿಪ್ರಾಯ. ಆದರೆ ವಚನ, ವಚನಕಾರ ಎಂಬ ಮಾತುಗಳನ್ನು ರಚನೆಯ ತಾಂತ್ರಿಕ ಸ್ವರೂಪಕ್ಕೆ ಸಂಬಂಧಿಸಿದ ಅರ್ಥದಲ್ಲಿ ಮಾತ್ರ ಬಳಸಲಾಗುತ್ತದೆಯೇ ಹೊರತು, ಹನ್ನೆರಡನೆಯ ಶತಮಾನದ ಶರಣ ಪರಂಪರೆಯ ಮುಂದುವರಿಕೆ ಎಂಬ ಅರ್ಥದಲ್ಲಿ ಅಲ್ಲ ಎಂಬುದನ್ನು ನಾವು ನೆನಪಿಡಬೇಕು. ಒಂದು ಕಾಲದ ಸಾಹಿತ್ಯ ಇನ್ನೊಂದು ಕಾಲದಲ್ಲಿ ಮೂಲ ಧ್ಯೇಯ ಧೋರಣೆಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಪುನರಾವರ್ತನೆಗೊಳ್ಳುವುದಿಲ್ಲ ಎಂಬುದು ಸ್ಪಷ್ಟ. ರಂಗಣ್ಣ, ಜಚನಿ, ಪರಮೇಶ್ವರ ಭಟ್ಟ ಮೊದಲಾದವರ 'ರಚನೆ'ಗಳು ಹನ್ನೆರಡನೆ ಶತಮಾನದ ವಚನಗಳ 'ರಚನೆ'ಗೆ ಹತ್ತಿರವಾದವು. ಅಭಿವ್ಯಕ್ತಿಯ ವಿಧಾನದಲ್ಲಿ ತಾಂತ್ರಿಕ ಅಪೇಕ್ಷೆಗಳನ್ನು ಅವು ಈಡೇರಿಸುತ್ತವೆ. ಆರಾಧ್ಯ ಅಥವಾ ಸಾಂಕೇತಿಕ ಅಂಕಿತವೊಂದು ಸೇರಿಕೊಂಡು ಪ್ರಾಚೀನ ರಚನೆಯ ಮಾದರಿಗೆ ದೃಢತೆಯನ್ನು ತರುತ್ತದೆ. ಇಂಥ ರಚನೆಗಳಲ್ಲಿ ನಾವು 'ವಚನ' ಎಂದು ಕರೆಯುವ ಹಾಗೆ ಕುವೆಂಪು ಅವರ 'ಕಿಂಕಿಣಿ'ಯ ರಚನೆಗಳನ್ನಾಗಲಿ ಆನಂದರ 'ಪಕ್ಷಿಗಾನ'ದ ರಚನೆಗಳನ್ನಾಗಲಿ 'ವಚನ'ಗಳೆಂದು ಕರೆಯಲು ಬರುವುದಿಲ್ಲ. ಅವು 'ವಚನ ಕವನಗಳು', ಎಂದರೆ 'ಗದ್ಯ ಗೀತೆಗಳು'. ಕೆಲವರ ರಚನೆಗಳನ್ನು ತಾಂತ್ರಿಕ ಅಗತ್ಯಗಳ

ಪೂರೈಕೆಯಾಗಿರಬಹುದು ; ಇನ್ನು ಕೆಲವರ ರಚನೆಗಳಲ್ಲಿ ಆಗದಿರಬಹುದು. ಆದರೆ ಸಾಮಾನ್ಯ ಸ್ವರೂಪದಲ್ಲಿ–ರೂಪಾಂಶದಲ್ಲಿ–ಇವು ವಚನಗಳೆ.

"20ನೇ ಶತಮಾನದಲ್ಲಿ ಕೂಡ ಜಚನಿ, ಜ॥ ಶಿವಕುಮಾರ ಸ್ವಾಮಿಗಳು, ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು, ಜ॥ ಮಾತೆ ಮಹಾದೇವಿಯವರು, ವಿಜಯಕುಮಾರ್, ಮಹಾದೇವ ಬಣಕಾರ್ ಇತ್ಯಾದಿಯಾಗಿ ಅನೇಕರು ವಚನಗಳನ್ನು ಬರೆದರು. ಸಾಹಿತ್ಯ ರಚನೆಯಲ್ಲಿಯೇ ತೊಡಗಿದ್ದ ಕುವೆಂಪು, ತೀನಂಶ್ರೀ, ಎಸ್.ವಿ. ರಂಗಣ್ಣ ಎಸ್.ವಿ. ಪರಮೇಶ್ವರ ಭಟ್ಟ ಇತ್ಯಾದಿಯಾಗಿ ಅನೇಕರು ವಚನಗಳನ್ನು ಬರೆದರು" ಎಂದು ಹೇಳಿ ಅಡಿ ಟಿಪ್ಪಣಿಯಲ್ಲಿ "ಈ ವಿಂಗಡಣೆ ಅನುಭಾವಿಗಳು, ಸಾಹಿತಿಗಳು ಎಂಬುದನ್ನು ಹೇಳುತ್ತದೆ" ಎನ್ನುತ್ತಾರೆ ಶ್ರೀ ವಿಜಯಕುಮಾರ್*. ಮೂಲಭೂತವಾಗಿ ಈ ವಿಂಗಡಣೆಯ ವಿಧಾನವೇ ತಪ್ಪು. ಅಲ್ಲದೆ ಒಂದು ಸಾಹಿತ್ಯ ಪ್ರಕಾರವಾದ 'ವಚನ'ಕ್ಕೂ ಈ ವಿಂಗಡಣೆಗೂ ಯಾವುದೇ ವಿಧವಾದ ಸಂಬಂಧವೂ ಇಲ್ಲ. ವಚನ ಕೇವಲ ಒಂದು ಪ್ರಕಾರ ; ಒಂದು ಅಭಿವ್ಯಕ್ತಿಯ ಕ್ರಮ. ಒಂದು ಪ್ರಕಾರವನ್ನು ಒಬ್ಬ ಲೇಖಕ ಹೇಗೆ ಬಳಸಿಕೊಳ್ಳುತ್ತಾನೆಂಬುದು ಅವನ ಶಕ್ತಿ ಸಾಮರ್ಥ್ಯಗಳಿಗೆ ಸಂಬಂಧಿಸಿದ್ದು.

ಇದೇ ಸಂದರ್ಭದಲ್ಲಿ ಮುಂದುವರಿದು ಶ್ರೀ ವಿಜಯಕುಮಾರ್ ಹೇಳುತ್ತಾರೆ : "ಇವರೆಲ್ಲಾ ವಚನಕಾರರ ಶೈಲಿಯನ್ನನುಸರಿಸುತ್ತಾರೆ, ಇಲ್ಲ ಧೋರಣೆಯನ್ನನುಸರಿಸುತ್ತಾರೆ. ವಚನಕಾರರು 12ನೇ ಶತಮಾನದ ಪ್ರಜ್ಞೆಯ ಮಿತಿಯನ್ನು ಸೂರೆ ಹೊಡೆದು ವಚನಸೃಷ್ಟಿ ಮಾಡಿದರು. ಈ ಶತಮಾನದ ವಚನಕಾರರಾದರೂ ಧೋರಣೆಯಲ್ಲಿ, ಲಯದಲ್ಲಿ ವಚನಕಾರರನ್ನೇ ಅನುಸರಿಸುತ್ತಾರಾದ್ದರಿಂದ, ಅನುಭವದ ತೀವ್ರ ತುಡಿತ ಮತ್ತು ವಚನಸೃಷ್ಟಿಯ ಅನಿವಾರ್ಯ ಇಲ್ಲವಾದ್ದರಿಂದ ಇವರ ವಚನಗಳೆಲ್ಲ ದುರ್ಬಲವಾದವು. ಅರ್ಥಾತ್ ವಚನಗಳ ದುರ್ಬಲ ಅನುಕರಣೆ ಎಂದು ಹೇಳಬೇಕಾಗುತ್ತದೆ. ಎಸ್.ವಿ. ಪರಮೇಶ್ವರ ಭಟ್ಟರಿಗಾಗಲಿ ಎಸ್.ವಿ. ರಂಗಣ್ಣನವರಿಗಾಗಲಿ ವಚನಸೃಷ್ಟಿಯಿಂದ ವೈಯಕ್ತಿಕ ತೃಪ್ತಿಯಿದೆಯೇ ವಿನಾ ಸಮಾಜ ಸುಧಾರಣೆಯ ಸಾಮೂಹಿಕ ಆಲೋಚನೆ ಇಲ್ಲ. ಅಭಿವ್ಯಕ್ತಿಯ ಅನಿವಾರ್ಯತೆ ವಚನಕಾರರಂತೆ ಇಲ್ಲ. ಒಟ್ಟಾರೆ ಹೇಳುವುದಾದರೆ ವಚನ ಶೈಲಿ ಏರಬಹುದಾದ ಸ್ತರ ಮತ್ತು ಮಾಡಬಹುದಾದ ಕಾರ್ಯವನ್ನು ಹನ್ನೆರಡನೆ ಶತಮಾನದಲ್ಲಿಯೇ ಸೂರೆ ಹೊಡೆಯಿತಾದ್ದರಿಂದ ಮತ್ತೆ ಅದು ಪುನರಾವರ್ತನೆಯಾಗುವುದಿಲ್ಲ."

ಈ ಅಭಿಪ್ರಾಯ ನಿಷ್ಪಕ್ಷಪಾತವಾದದ್ದಲ್ಲ ; ಹನ್ನೆರಡನೇ ಶತಮಾನದ ವಚನಗಳ ಬಗೆಗೆ ವಿಶೇಷ ಮೋಹವನ್ನು ತಾಳಿದ್ದು, ಮೈಸೂರು ವಿಶ್ವವಿದ್ಯಾನಿಲಯದ

* "ಹಾಲ ತೊರೆಗೆ ಬೆಲ್ಲದ ಕೆಸರು" ಪು.೧೯ (ಬೆಂಗಳೂರು, ೧೯೭೬).

ಕನ್ನಡ ಅಧ್ಯಯನ ಸಂಸ್ಥೆ ಈಚೆಗೆ ಪ್ರಕಟಿಸಿರುವ 'ಕನ್ನಡ ಸಾಹಿತ್ಯ ಚರಿತ್ರೆ'ಯ ನಾಲ್ಕನೆಯ ಸಂಪುಟದಲ್ಲಿ ಹನ್ನೆರಡು–ಹದಿಮೂರನೆಯ ಶತಮಾನದ ಸುಮಾರು ನೂರೈವತ್ತು ಜನ ವಚನಕಾರರನ್ನು ಪಟ್ಟಿ ಮಾಡಲಾಗಿದೆ. ಈ ಎಲ್ಲ ವಚನಕಾರರ ಸಾಧನೆ–ಸಿದ್ಧಿಗಳ ಸ್ವರೂಪ ಒಂದೇ ಬಗೆಯಾಗಿದೆಯೇ ಎಂಬುದನ್ನು ನಾವು ಪರಿಶೀಲಿಸಬೇಕು. ಸಾಹಿತ್ಯಕವಾಗಿ, ಆಧ್ಯಾತ್ಮಿಕವಾಗಿ ಏನೂ ಅಲ್ಲದ ತೀರ ಸಾಮಾನ್ಯ ವಚನಗಳನ್ನು ಬರೆದವರು ಅವರಲ್ಲಿ ಬಹು ಮಂದಿ ಇದ್ದಾರೆ. ಅವರಿಗೆಲ್ಲ ಅನುಭವದ ತೀವ್ರ ತುಡಿತ ಇರುವುದಕ್ಕಾಗಲಿ, ಅಭಿವ್ಯಕ್ತಿಯ ಅನಿವಾರ್ಯತೆ ಇರುವುದಕ್ಕಾಗಲಿ ಆಧಾರಗಳು ಕಾಣಿಸುವುದಿಲ್ಲ. ಆ ಕಾಲದ ಪರಂಪರೆಯಲ್ಲಿದ್ದರು ಎಂಬ ಕಾರಣಕ್ಕಾಗಿ ಮಾತ್ರ ಅವರನ್ನು ವಚನಕಾರರೆಂದು ಕರೆಯಲಾಗುತ್ತದೆ, ಅಷ್ಟೆ. ವಚನವನ್ನು ಒಂದು ಸಾಹಿತ್ಯ ಪ್ರಕಾರವಾಗಿ ಪರಿಗಣಿಸಿದಾಗ, ವಚನಗಳೆಲ್ಲ ಸಮಾಜ ಸುಧಾರಣೆಯ ಕೆಲಸವನ್ನೇ ಮಾಡಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಸಮಾಜ ಸುಧಾರಣೆಯಲ್ಲದೆ ಸಾಹಿತ್ಯ ಮಾಡುವ ಬೇರೆ ಕೆಲಸಗಳೂ ಇವೆಯಷ್ಟೆ? ಆಧುನಿಕರ ವಚನಗಳೆಲ್ಲ ಪ್ರಾಚೀನ ವಚನಗಳ ದುರ್ಬಲ ಅನುಕರಣೆ ಎನ್ನುವುದು ಸಲ್ಲದ ಸಾಧಾರಣೀಕರಣ. ರಂಗಣ್ಣ, ಪರಮೇಶ್ವರ ಭಟ್ಟರ ವಚನಗಳಲ್ಲಿ ಅತ್ಯುತ್ತಮ ವಚನಗಳ ಮಾದರಿಯನ್ನು ನೋಡಬಹುದು.

ಡಾ॥ ಆರ್.ಸಿ. ಹಿರೇಮಠ ಅವರು ವಚನ ಪ್ರಕಾರವನ್ನು ದೊಡ್ಡ ಸೀಮಿತದಲ್ಲಿ ಬಂಧಿಸುತ್ತಾರೆ. ಅವರೆನ್ನುತ್ತಾರೆ.* "ಇತ್ತೀಚೆಗೆ ಕೆಲವು ಜನ ಸಾಹಿತ್ಯಜ್ಞರು ವಚನ ರೂಪದಲ್ಲೇ ಬರೆದದ್ದನ್ನೆಲ್ಲ ವಚನಸಾಹಿತ್ಯವೆಂದು ಕರೆಯತೊಡಗಿರುವರು. ರಂಗಣ್ಣನವರ ವಚನಗಳು, ಸಾಮಾಜಿಕ ಸಂವಚನಗಳು ಮುಂತಾದವನ್ನು ವಚನ ಸಾಹಿತ್ಯ ಚರಿತ್ರೆಗೆ ಸೇರಿಸುವ ಸಾಹಸ ಕಾರ್ಯ ನಡೆದಿರುತ್ತದೆ.

ವಚನಸಾಹಿತ್ಯಕ್ಕೆ ಮೂಲನಿಧಿ ಅದರ ಬಾಹ್ಯ ರೂಪವಲ್ಲ, ಅದರ ಧಾರೆಯಲ್ಲ, ಅನುಭಾವವೇ ಅದರ ಅಂತರಂಗ. ಆ ಶಿವಾನುಭಾವ ತಂತಾನೆ ಅರಳಿ ವಚನಸಾಹಿತ್ಯವಾಗುತ್ತದೆ. ಆದುದರಿಂದ ಇದು ವಚನ ಎಂದು ಹೇಳಬೇಕಾದರೆ ಮೊದಲು ಅವರ ಸ್ಥಾಯಿ ಏನೆಂಬುದನ್ನು ನೋಡಬೇಕಾಗುತ್ತದೆ."

ವೀರಶೈವ ಧರ್ಮದ ತತ್ವ, ಆಚರಣೆಗಳ ಚಿತ್ರಣಕ್ಕೆ ಅನುಭಾವ ನಿರೂಪಣೆಗೆ ವಚನ ಸಾಹಿತ್ಯವನ್ನು ಮೀಸಲಿರಿಸುವುದು ಖಂಡಿತ ಉಚಿತವಲ್ಲ. ಇಪ್ಪತ್ತನೆಯ ಶತಮಾನದಲ್ಲಿ ವಚನ ಪ್ರಕಾರದ ವ್ಯಾಪ್ತಿ ವಿಸ್ತಾರಗೊಂಡಿರುವುದು ಸಂತೋಷದ ಸಂಗತಿ. ವಚನ ಒಂದು ಸಾರ್ವತ್ರಿಕ ಮಾಧ್ಯಮವಾಗಿ ಗರಿಗೆದರುತ್ತಿರುವುದು ಆ ಪ್ರಕಾರದ ಹೊಸ ಸಾಧ್ಯತೆಗಳಿಗೆ ಅನುವು ಮಾಡಿಕೊಟ್ಟಿದೆ. ಹೊಸಕಾಲದ ಲೇಖಕರು ತಮ್ಮ ________________

* ಶ್ರೀ ಮೂಜಗಂ ಅವರ "ಚಿತ್ಸುಮನ" ಗ್ರಂಥಕ್ಕೆ ಬರೆದ ಮುನ್ನುಡಿ, ಪು.೪.

(ಧಾರವಾಡ, ೧೯೭೩).

ಸಾಹಿತ್ಯಕ ಅಭಿವ್ಯಕ್ತಿಗೆ ವಚನ ಮಾಧ್ಯಮವನ್ನು ಇನ್ನೂ ಹೆಚ್ಚಾಗಿ ಬಳಸಿಕೊಳ್ಳಬೇಕು. ಅದು ಒಂದು ಮುಕ್ತ ಅವಕಾಶ.

* * *

ಡಾ॥ ಸಿದ್ಧಯ್ಯ ಪುರಾಣಿಕರ ಪ್ರಕೃತ ಕೃತಿ 'ವಚನೋದ್ಯಾನ'ದಲ್ಲಿ ೫೨೫ ವಚನಗಳಿವೆ. 'ಸ್ವತಂತ್ರ ಧೀರ ಸಿದ್ಧೇಶ್ವರ' ಅವರ ಅಂಕಿತ, ೫೨೩ನೆಯ ವಚನವೊಂದನ್ನು ಬಿಟ್ಟು ಮಿಕ್ಕ ಎಲ್ಲ ವಚನಗಳಲ್ಲೂ ಈ ಅಂಕಿತ ಕಾಣಿಸಿಕೊಳ್ಳುತ್ತದೆ. ಅಂಕಿತಗಳನ್ನು ಕೇವಲ ತಾಂತ್ರಿಕ ಅವಶ್ಯಕತೆ ಎಂದು ಪರಿಗಣಿಸಲಾಗದು. ಬಹು ಸಂದರ್ಭದಲ್ಲಿ ಅವು ವಚನಕಾರನ ಮನೋಧರ್ಮವನ್ನೋ, ವಚನಗಳ ರೂಪ ಸ್ವರೂಪಗಳನ್ನೋ ಧ್ವನಿಸುತ್ತವೆ. ಅಲ್ಲಮ, ಅಣ್ಣ, ಅಕ್ಕ ಅಂಥವರ ಅಂಕಿತಗಳನ್ನು ವಚನಗಳನ್ನು ಗಮನಿಸಿಯೂ ಈ ಮಾತನ್ನು ಹೇಳಬಹುದು. ಪುರಾಣಿಕರ 'ಸಿದ್ಧೇಶ್ವರ'ನ ಗುಣವಾಚಕ 'ಸ್ವತಂತ್ರಧೀರ' ನಮ್ಮ ಕಾಲದ ಮಹಾ ಲಕ್ಷಣವನ್ನು ಸೂಚಿಸುತ್ತದೆ. ಸ್ವತಂತ್ರ ಪ್ರವೃತ್ತಿ, ಧೀರಗುಣಗಳು ಆಧುನಿಕ ಬದುಕನ್ನು ಆಳುತ್ತಿವೆ. ಅವು ಹೊಸ ಕಾಲದ ಬದುಕಿನ ಸೂತ್ರಗಳಾಗಿವೆ. ರಾಷ್ಟ್ರಗಳಷ್ಟೆ ಸ್ವಾತಂತ್ರ್ಯ ಪಡೆಯುವುದಲ್ಲ, ವ್ಯಕ್ತಿಯ ಜೀವನ ವಿಧಾನವೇ ಇಂದು ಸ್ವತಂತ್ರ ಮಾರ್ಗದ್ದು. ಚಂದ್ರಲೋಕದ ಆಚೆಗೂ ಹೋಗುವ ಧೀರರು ನಮ್ಮ ಸಮಕಾಲೀನರು. ಈ ಜೀವನೋದ್ದೇಶಗಳಿಗೆ ಪುರಾಣಿಕರ ಸಿದ್ಧೇಶ್ವರ ಪ್ರೇರಕನೂ, ಪೋಷಕನೂ ಆಗಿದ್ದಾನೆ. ಅವನ ಸ್ಫೂರ್ತಿಯ ಫಲವೆ ಇಲ್ಲಿನ ವಚನಗಳು. "ನನಗೆ ತೋರಿದಂತೆ ಬರೆದರೆ ಅದು ರಚನೆ, ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ" (೮೭) ಎಂದು ಪುರಾಣಿಕರು ತಮ್ಮ ವಚನಗಳನ್ನು ವರ್ಣಿಸಿದ್ದಾರೆ.

ಹೊಸ ದಿಕ್ಕಿಗೆ ಮುಖಮಾಡಿರುವ ಸಾಹಿತ್ಯ ಬದುಕಿನ ವಾಸ್ತವಿಕತೆಯ ಹೆಸರಿನಲ್ಲಿ ಜೀವನದ ನಿಗೂಢ ರಹಸ್ಯಗಳನ್ನು ನಿರ್ಲಕ್ಷಿಸಿದೆ. ನಮ್ಮ ಅನುಭವಕ್ಕೆ ಬರುವುದಷ್ಟೇ ಸತ್ಯವಲ್ಲ. ಅದರಾಚೆಯ ಶಕ್ತಿಯೂ ಒಂದಿದೆ; ಅದರ ದರ್ಶನದ ಪ್ರಯತ್ನ ನಡೆದಿದೆ ಎಂಬುದನ್ನು ಅದು ಗಮನಿಸುವುದಿಲ್ಲ. ಬುದ್ಧಿಯ ಆಳ್ವಿಕೆಗೆ ಸಿಕ್ಕಿ ಹೃದಯ ಕುಗ್ಗಿದೆ. ವಿಜ್ಞಾನವೂ ಯಾವುದೋ ಒಂದು ಹಂತದಲ್ಲಿ ನಿಲ್ಲುತ್ತದೆ. ಅದರಾಚೆಯ ಸತ್ಯಗಳನ್ನು ಕಂಡುಕೊಳ್ಳುವುದರಲ್ಲಿಯೇ ಅಧ್ಯಾತ್ಮನಿರತವಾಗಿದೆ. ಆ ನಿಟ್ಟಿನ ಒಬ್ಬೊಬ್ಬರ ಅನುಭವವೂ ಅನುಭಾವದ ಬೇರೆ ಬೇರೆ ಹೆಜ್ಜೆಗಳಾಗಿವೆ. ಇಂಥ ಹೆಜ್ಜೆ ಗುರುತುಗಳನ್ನು ಪುರಾಣಿಕರ 'ವಚನೋದ್ಯಾನ'ದಲ್ಲಿ ನಾವು ಕಾಣುತ್ತೇವೆ. ಇಂದಿನ ಸಾಹಿತ್ಯಕ ಪರಿಸರದಲ್ಲಿ ಇದಕ್ಕೆ ಯಾವ ಬಗೆಯ ಸ್ವಾಗತ ಸಿಕ್ಕುತ್ತದೆ ಎಂಬುದು ಕುತೂಹಲದ ಮಾತು.

ಅಧ್ಯಾತ್ಮ ಅನುಭಾವಗಳು ಬದುಕಿನಿಂದ ಪ್ರತ್ಯೇಕಗೊಂಡಾಗ, ಕೈಗೆ ಎಟುಕದ ಅನುಭವವಾದಾಗ ಅವುಗಳಿಗೆ ಬೆಲೆ ಬರುವುದಿಲ್ಲ. ಆದರೆ ಅವು ಜೀವನದ ಅಂಗವೇ ಆದಾಗ, ನಿತ್ಯದ ನಡವಳಿಕೆಯಲ್ಲಿ ಕೂಡಿದಾಗ ಅರ್ಥವತ್ತಾಗುತ್ತವೆ. ಬೋಧನೆಯಾಗದೆ ಸಾಧನೆಯಾದಾಗ ಅವುಗಳಿಗೆ ಮಹತ್ವ ಬರುತ್ತದೆ. ಅನುಭವಕ್ಕೆ ಕಾವು ಕೂತಾಗ ಕಾವ್ಯ ಜೀವವೊಡೆಯುತ್ತದೆ. ಕವಿ ಈ ತಾಯ್ತನದ ಕೆಲಸ ಮಾಡುತ್ತಾನೆ. ಅನುಭಾವಿಯ

ಕೆಲಸವಾದರೂ ಇದೇ. ಆದರೆ ಅಲ್ಲಿ ಕಣ್ಣೊಡೆಯುವುದು ಸತ್ಯ. ಈ ಸತ್ಯ ಕಾವ್ಯವಾಗಿ ರೂಪುಗೊಂಡಾಗ ಅಪೂರ್ವವಾದದ್ದಾಗುತ್ತದೆ. ಎಲ್ಲ ಅನುಭಾವಿಗಳ ಸತ್ಯ ದರ್ಶನ ಕಾವ್ಯ ಸಾಕ್ಷಾತ್ಕಾರವಾಗುವುದಿಲ್ಲ. ಕವಿ ಅನುಭಾವಿಯಲ್ಲ: ಅನುಭಾವಿ ಕವಿಯಲ್ಲ. ಆದರೆ ಕಾವ್ಯಕ್ಕೆ ಅನುಭಾವದ ಹೊಳಪು, ಅನುಭಾವಿಯ ಉದ್ಗಾರಗಳಿಗೆ ಕಾವ್ಯದ ಮೆರುಗು ಕೂಡಿದಾಗ ವಿಶೇಷ ಸೃಷ್ಟಿಯಾಗುತ್ತದೆ. ಪರಿಣಾಮವಾಗಿ ನಮಗೆ ಅತ್ಯುತ್ತಮ ವಚನಗಳೋ, ಕೀರ್ತನೆಗಳೋ ದೊರೆಯಬಹುದು. ಬಂಗಾಳಿ ಭಾಷೆಯಲ್ಲಿ 'ಬಾಉಲ್' ಹಾಡುಗಳಾಗಿಯೋ, ಅಸ್ಸಾಮಿಯಲ್ಲಿ 'ವರಗೀತ'ಗಳಾಗಿಯೋ, ಈ ಸೃಷ್ಟಿ ರೂಪ ತಾಳಬಹುದು. ಇಂಥದೊಂದು ಪರಂಪರೆಯನ್ನು ಪುರಾಣಿಕರು ಮುಂದುವರಿಸಿದ್ದಾರೆಂಬುದು ಸಂತೋಷದ ಮಾತು. ಅವರ ವಚನಗಳಲ್ಲಿ ಸ್ವತಂತ್ರಧೀರ ಸಿದ್ಧೇಶ್ವರನಿಗೆ ಒಪ್ಪಿತವಾದ ಹೃದಯದ ಮೊರೆ ಕೇಳಿಸುತ್ತದೆ; ಸುತ್ತಲ ಪರಿಸರಕ್ಕೆ ಬದುಕಿನ ಅವ್ಯವಸ್ಥೆಗಳಿಗೆ ಪ್ರತಿಕ್ರಿಯೆ ತೋರುವ ಬುದ್ಧಿಯ ವಿಲಾಸವಿದೆ.

ಸ್ವತಂತ್ರಧೀರ ಸಿದ್ಧೇಶ್ವರನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವ ಚೇತನವೊಂದರ ಆತ್ಮಕಥೆ ಇಲ್ಲಿದೆ. ಸ್ವತಂತ್ರಧೀರ ಸಿದ್ಧೇಶ್ವರ ಒಂದು ಅಂಕಿತ, ಅಷ್ಟೆ. ಮಹಾ ಬೆಳಗಿನ ನೂರು ಸಹಸ್ರ ಹೆಸರುಗಳಲ್ಲಿ ಅದೂ ಒಂದು. ಆ ಬೆಳಗನ್ನು ಕಾಣುವ ಬಯಕೆಯ ಆತುರ ಕಾತರಗಳು ಇಲ್ಲಿ ವಚನಗಳಲ್ಲಿ ಅಭಿವ್ಯಕ್ತಗೊಂಡಿವೆ. ಎಂಥವನಿರಬೇಕು ಆ ಸಿದ್ಧೇಶ್ವರ ಎಂದು ಊಹಿಸುವ, ಕೇಳುವ ಒಂದು ವಚನ ಇದು.

ಬೀಜದ ಬಸಿರಿನ ಮೊಳೆಯದ ಬಳ್ಳಿಯ

ಮೂಡದ ಹೂವಿನ ಕಂಪಿನಂತಿಹೆಯೇನಯ್ಯ?

ನವಿಲಿನ ಮೊಟ್ಟೆಯ ಹೊಟ್ಟೆಯೊಳಡಗಿಹ

ಗರಿಗಳ ಕಣ್ಣಿನ ಬಣ್ಣದಂತಿಹೆಯೇನಯ್ಯ ?

ಅಳಿದ ಚಿತ್ರಕನ ಉದ್ದೇಶಿತ ಚಿತ್ರದ

ಚೆಲುವು ಚಿಮ್ಮಿಸುವ ನಲವಿನಂತಿಹೆಯೇನಯ್ಯ?

ಬಂಜೆಯ ಸ್ವಪ್ನದಿ ಸುಳಿಯುವ ಕಂದನ

ಮುದ್ದುಮೊಗದ ಮಂದಹಾಸದಂತಿಹೆಯೇನಯ್ಯ?

ಕಾಣದ ಕಾಮಧೇನುವಿನ ಕರೆಯದ ಹಾಲಿನ

ಕಡೆಯದ ಬೆಣ್ಣೆಯ ಸವಿಯಂತಿಹೆಯೇನಯ್ಯ?

ಸ್ವತಂತ್ರಧೀರ ಸಿದ್ಧೇಶ್ವರಾ,

ಈಡೇರದ ಆಸೆಗಳ ಚಿತಾಭಸ್ಮದಿ ಬೆಳೆದ

ಹೊಸ ಆಸೆಯ ಕಣ್ಣಿನ ಕಾಂತಿಯಂತಿಹೆಯೇನಯ್ಯ? (೪)

ಅತ್ಯಂತ ಸುಂದರವಾದ ಈ ವಚನ ನಮಗೆ ಪರಿಚಿತವಾದ ಅನುಭವಗಳನ್ನು ತಟ್ಟುತ್ತದೆ; ಜೊತೆಯಲ್ಲಿಯೇ ಅಪರಿಚಿತಾನುಭವಗಳಿಂದ ಕಂಗೆಡಿಸುತ್ತದೆ. ಭಗವಂತನನ್ನು ನೋಡಿರುವವರು ಯಾರು? ಅವನು ಹೇಗಿದ್ದಾನೆ? ಅವನು ಶಿವನೆ, ರಾಮನೆ, ಕೃಷ್ಣನೆ, ಮಾರಿಯೆ, ಮಸಣಿಯೆ? ಎಲ್ಲರಂತೆ ಅವನಿಗೆ ಸಾಮಾನ್ಯ ರೂಪವುಂಟೆ? ಇದ್ದರೆ ಅವನು ಸಾಮಾನ್ಯರಿಂದ ಬೇರೆ ಹೇಗೆ? ಅವರವರಿಗೆ ತೋರಿದಂತೆ ಅವರವರ ಭಗವಂತ. ಮೇಲಿನ ವಚನದಲ್ಲಿ ಚಿತ್ರಿತನಾಗಿರುವ ಭಗವಂತ ಸಿದ್ಧೇಶ್ವರ ಮೂರ್ತ ಸ್ವರೂಪನಲ್ಲ, ಅಮೂರ್ತ, ಕಂಪು, ಬಣ್ಣ, ನಲವು, ಮಂದಹಾಸ, ಸವಿ, ಕಣ್ಣಕಾಂತಿ ಇಲ್ಲಿ ಅವನ ರೂಪಗಳು. ಆದರೆ ಎಂಥ ಕಂಪು? ಮೊಳೆಯದ ಬಳ್ಳಿಯ ಮೂಡದ ಹೂವಿನ ಕಂಪು. ನಮಗೆ ಬಹಳಷ್ಟು ಹೂವುಗಳು ಗೊತ್ತು. ಅವುಗಳ ಕಂಪಿನನುಭವವೂ ಉಂಟು. ಬೀಜದೊಳಗಿರುವ ಹೂವಿನ ಕಂಪು ಎಂಥದೆಂದು ಹೇಳುವುದು? ಇದೇ ಮಾತು ಬೆಳೆಯುತ್ತಾ ಹೋಗುತ್ತದೆ ಮುಂದಿನ ಚರಣಗಳಲ್ಲಿ, ಎಲ್ಲವೂ ಅಸ್ತಿತ್ವದಲ್ಲಿರುವುದೇ; ಇಲ್ಲಿ ಮಾತ್ರ ಅವಕ್ಕೆ ಅಸ್ತಿತ್ವವಿಲ್ಲ. ನವಿಲಿನ ಗರಿ ಮೊಟ್ಟೆಯಲ್ಲಿಯೇ ಇದೆ. ಚಿತ್ರ ಉದ್ದೇಶಿತವಾದುದಷ್ಟೆ ಚಿತ್ರಕನೋ ಅಳಿದಿದ್ದಾನೆ. ಮಂದಹಾಸ ಬೀರುವ ಮುದ್ದು ಮೊಗದ ಕಂದ ಕಾಣಿಸಿಕೊಳ್ಳುವುದು ಬಂಜೆಯ ಸ್ವಪ್ನದಲ್ಲಿ, ಕಾಮಧೇನು ಕಾಣಸದು, ಹಾಲನ್ನು ಕರೆದಿಲ್ಲ, ಬೆಣ್ಣೆಯನ್ನು ಕಡೆದಿಲ್ಲ. ಕಣ್ಣ ಕಾಂತಿಯಾದರೂ ಆಸೆಯ ಕಣ್ಣಿನ ಕಾಂತಿ; ಆ ಆಸೆಯೋ ಈಡೇರದ ಆಸೆಗಳ ಚಿತಾಭಸ್ಮದಲ್ಲಿ ಬೆಳೆದ್ದು. ಹೆಜ್ಜೆಯಿಂದ ಹೆಜ್ಜೆಗೆ ಇಲ್ಲಿ ಅನುಭವ ಬೆಳೆಯುತ್ತದೆ. ಆ ಅನುಭವ ಕಾಣದ, ಕೇಳದ, ಕೈಗೆಟುಕದ ದಿವ್ಯಾನುಭವವಾಗುತ್ತದೆ.

ಈ ಸಿದ್ಧೇಶ್ವರನನ್ನು ಅರಿಯುವವನು ಮೊದಲು ತನ್ನನ್ನೇ ಅರಿತುಕೊಳ್ಳಬೇಕು. ಪುರಾಣಿಕರ ವಚನಗಳಲ್ಲಿ ತನ್ನನ್ನು ತಾನು ಅರಿತುಕೊಳ್ಳಬೇಕಾದ ಅಗತ್ಯದ ಮಾತು ಮತ್ತೆ ಮತ್ತೆ ಬರುತ್ತದೆ. "ನನ್ನನರಿತಿದ್ದರೆ ನಿನ್ನನರಿಯದಿರುತ್ತಿದ್ದೆನೆ?" (೪೯) ಎಂದೂ "ನನ್ನನರಿದು, ನನ್ನರಿವಿನಿಂದ ನಿನ್ನನರಿದು, ನಿನ್ನಿಂದ ಎಲ್ಲವನ್ನರಿದು, ಅರಿವಾಗಿ ಅರಿವ ಬೆರೆದು ಬಯಲಾಗುವುದನ್ನು ಕರುಣಿಸು" (೪೮) ಎಂದೂ, "ಯಾರು ನನ್ನನ್ನು ಅರಿಯದಿದ್ದರೂ ನಾನು ನನ್ನನ್ನು ಅರಿಯುವಂತೆ ಅನುಗ್ರಹಿಸಯ್ಯ" (೫೨) ಎಂದೂ ಅವರು ಕೇಳುತ್ತಾರೆ.

ತನ್ನನ್ನು ತಾನು ಅರಿಯಲು ತೊಡಗಿದಾಗ ಮಾನವನಿಗೆ ತಾನು ಏನು ಎಂಬುದರ ಪರಿಚಯವಾಗುತ್ತದೆ. ಬೇರೆಯವರ ಬಗೆಗೇ ಕುತೂಹಲ ತಾಳಿದ್ದ ಅವನಿಗೆ ತನ್ನ ಕುಂದುಗಳೇನೆಂಬುದೂ ಗೊತ್ತಾಗುತ್ತದೆ.

ನಾನು ಕಳೆದ ಐವತ್ತು ವತ್ಸರಗಳಲ್ಲಿ

ಹಸಿವೆ, ತೃಷೆ, ವಿಷಯ, ಆಸೆ

ಆಮಿಷಗಳಿಗಾಗಿ ವರುಷ ವರುಷ,

ವಿರಾಮ, ವಿನೋದ, ಆಮೋದ,

ವಿಲಾಸ, ವಿಹಾರಗಳಿಗಾಗಿ ವರುಷ, ವರುಷ,
ಮೋಜು, ಮೆರವಣಿಗೆ, ಹರಟೆ,
ಆತ್ಮಸ್ತುತಿ, ಪರನಿಂದೆಗಳಿಗಾಗಿ ಮಾಸ, ಮಾಸ,
ಸುವಿಚಾರ, ಸದಾಚಾರ, ಸತ್ಕೃತಿಗಳಿಗಾಗಿ ದಿವಸ, ದಿವಸ,
ನಿನಗಾಗಿ ಕಳೆದ ಕಾಲ ಮಾತ್ರ ನಿಮಿಷ, ನಿಮಿಷವಯ್ಯ (೧೪೭)
ಎಂದು ಅವನು ಗೋಳಿಡುತ್ತಾನೆ. ಮಾತ್ರವಲ್ಲ,

ಮಾನವೇತಿಹಾಸದಲ್ಲಿ
ನಡೆಯದಷ್ಟು ಯುದ್ಧಗಳು
ನನ್ನೊಳಗೆ ನಡೆದಿವೆಯಯ್ಯಾ !
ಸಹರಾದಲ್ಲಿ
ಬೀಸದಷ್ಟು ಬಿರುಗಾಳಿಗಳು
ನನ್ನೊಳಗೆ ಬೀಸಿವೆಯಯ್ಯಾ !
ಸಪ್ತಸಾಗರಗಳಲ್ಲಿ
ಘಟಿಸದಷ್ಟು ಅಪಘಾತಗಳು
ನನ್ನೊಳಗೆ ಘಟಿಸಿವೆಯಯ್ಯಾ !
ಅಂತರಿಕ್ಷದಲ್ಲಿ
ಆಗದಷ್ಟು ಉಲ್ಕಾಪಾತಗಳು
ನನ್ನೊಳಗೆ ಆಗಿವೆಯಯ್ಯಾ ! (೧೫೪)

ಎಂದು ಅವನಿಗೆ ಆಶ್ಚರ್ಯವಾಗುತ್ತದೆ. ಈ ಯುದ್ಧ ಬಿರುಗಾಳಿ, ಅಪಘಾತ, ಉಲ್ಕಾಪಾತಗಳ ಸರಮಾಲೆಯನ್ನು ಎದುರಿಸಿ ತಾನು ಉಳಿದು ಬಂದುದಕ್ಕೆ ಅವನು ಬೆರಗಾಗುತ್ತಾನೆ. "ಹೊರಗು ಪದೇ ಪದೇ ಬದಲಾಗುತ್ತಿದ್ದರೂ, ಬದಲಾಗದ ಒಳಗು ನನ್ನದಾಗಿರಲಯ್ಯ" (೧೫೫) ಎಂದು ಕಳಕಳಿಯಿಂದ ಹಂಬಲಿಸುತ್ತಾನೆ.

"ಓಲ್ಗಾ ಗಂಗಾ, ಮಿಸಿಸಿಪಿ, ಹೋ ಅಂಗ್ ಹೋಗಳಿಗೂ ಕಟ್ಟೆ ಕಟ್ಟಬಹುದು; ಆದರೆ ಕಣ್ಣೀರಿಗೆ ಕಟ್ಟೆ ಕಟ್ಟುವುದು ಸುಲಭ ಸಾಧ್ಯವೇನಯ್ಯ?" (೧೯೫) ಎಂದು ಒಂದು ವಚನದಲ್ಲಿ ಕೇಳಲಾಗಿದೆ. ಅದು ಸುಲಭಸಾಧ್ಯವಲ್ಲದಿರಬಹುದು. ಸಾಧ್ಯವಾಗಿಸಲು ಪ್ರಯತ್ನಿಸುವುದು ಮಾತ್ರ ಎಲ್ಲರ ಕರ್ತವ್ಯವಾಗಿದೆ. ಈ ಕರ್ತವ್ಯ ನಿರ್ವಹಣೆಯಲ್ಲಿ ಬಗೆ ಬಗೆಯ ಕಷ್ಟ ನಷ್ಟ ತ್ಯಾಗಗಳಿಗೆ ಮನುಷ್ಯ ಸಿದ್ಧನಾಗಿರಬೇಕು. ಅವನು ಭಗವಂತನ ಕೈಯ ಉಪಕರಣವಾಗಬೇಕು. ಇಲ್ಲಿ ಭಕ್ತನ ಕೋರಿಕೆ ಹೀಗಿದೆ:

ನಿನ್ನ ತಿಗರಿಗೆ ಮಣ್ಣು ಮಾಡಿಕೊಳ್ಳಯ್ಯ ನನ್ನನ್ನು

ನಿನ್ನ ಭಟ್ಟಿಗೆ ಅವಿರು ಮಾಡಿಕೊಳ್ಳಯ್ಯ ನನ್ನನ್ನು

ನಿನ್ನ ಗರಗಸಕ್ಕೆ ಮುಂಡಿಗೆ ಮಾಡಿಕೊಳ್ಳಯ್ಯ ನನ್ನನ್ನು

ನಿನ್ನ ಸಬಳಕ್ಕೆ ಸಾಣೆ ಮಾಡಿಕೊಳ್ಳಯ್ಯ ನನ್ನನ್ನು

ನಿನ್ನ ಗಾಣಕ್ಕೆ ಕಬ್ಬು ಮಾಡಿಕೊಳ್ಳಯ್ಯ ನನ್ನನ್ನು

ನಿನ್ನ ಹಂತಿಗೆ ತೆನೆ ಮಾಡಿಕೊಳ್ಳಯ್ಯ ನನ್ನನ್ನು (೧೭೯)

"ನಿನ್ನ ಪ್ರಯೋಗಶಾಲೆಯಲ್ಲೊಂದು ಟೆಸ್ಟ್ ಟ್ಯೂಬ್ ಆಗಲಯ್ಯ ನನ್ನ ಜೀವನ" ಎಂದೂ (೧೮೧) ಅವನು ಹೇಳುತ್ತಾನೆ.

ಪುರಾಣಿಕರು ಸ್ವತಂತ್ರಧೀರ ಸಿದ್ದೇಶ್ವರನ ಎದುರು ತಮ್ಮ ಅಂತರಂಗದ ಪದರುಗಳನ್ನು ಬಿಚ್ಚಿಡುವ ಹಾಗೆಯೇ, ಲೋಕದ, ಸಮಾಜದ ತೊಂದರೆ ತೊಡಕುಗಳನ್ನೂ ತೋಡಿಕೊಳ್ಳುತ್ತಾರೆ. ಈ ವಚನಗಳು ಆತ್ಮಗೀತೆಗಳೂ ಹೌದು ; ಸಾಮಾಜಿಕ ವಿವೇಚನೆ, ಲೋಕವಿಮರ್ಶೆಗಳೂ ಹೌದು. ಆತ್ಮನ ಕಾಳರಾತ್ರಿಯನ್ನು ಕಳೆಯಲು ತೋರುವ ತವಕವನ್ನೇ ಅವರು ಸುತ್ತಲ ಪರಿಸರವನ್ನು ಮುತ್ತಿರುವ ಕರಾಳ ಕತ್ತಲೆಯನ್ನು ತೊಳೆಯಲೂ ತೋರಿಸುತ್ತಾರೆ. ಒಂದು ದೃಷ್ಟಿಯಲ್ಲಿ ಪುರಾಣಿಕರ ವಚನಗಳು ಶುದ್ಧ ಜೀವನ ಸಂಹಿತೆಗಳಾಗಿವೆಯೆಂದರೆ ತಪ್ಪಲ್ಲ. ಮೌಲ್ಯಗಳಿಗೆ ಅವರು ಬೆಲೆ ಕೊಡುತ್ತಾರೆ ; ಆದರೆ ಮೌಢ್ಯವನ್ನೆಂದೂ ಪುರಸ್ಕರಿಸುವವರಲ್ಲ. ಹೊಸ ಕಾಲದ ಹರಿಕಾರರು ಅವರು. "ಸರ್ವರಿಗೆ ಸಮಾನಾವಕಾಶದ ಗುರಿಯ, ಸರ್ವೋದ್ಧಾರದ, ಸರ್ವಜನ ಸುಖದ ಗುರಿಯ ಮುಟ್ಟಿಯೇ ತೀರುವ" ಶಪಥ ಅವರದು (೩೨೭). ಈ ವಿಷಯದಲ್ಲಿ ಮಾತ್ರ ಅವರು ಸಿದ್ದೇಶ್ವರನ ಅಣತಿಯನ್ನು ಮೀರಲೂ ಸಿದ್ಧ. "ನೀನು ಒಪ್ಪು ಬಿಡು" ಎಂದು ಅವರು ಹೆದರಿಸುತ್ತಾರೆ. ಬಗೆ ಬಗೆಯಾದ ಸಾಮಾಜಿಕ ದುರವಸ್ಥೆಯ ಬಗೆಗೆ ಅವರಿಗೆ ತೀವ್ರ ಅಸಮಾಧಾನವಿದೆ. ವಿವಿಧ ಓರೆಕೋರೆಗಳು, ಅನ್ಯಾಯ, ಅಸಮತೆಗಳು ಅವರನ್ನು ಕೆರಳಿಸುತ್ತವೆ, ಕೊರಗಿಸುತ್ತವೆ.

ಹೋಮರನಂಥ ವಿಶ್ವಕವಿಗಳು ಭಿಕ್ಷೆ ಬೇಡಬೇಕು

ಹೆಂಡ ಮಾರುವವರು ಲಕ್ಷಾಧೀಶರಾಗಬೇಕು–

ಇದೇ ನಿನ್ನ ಸಾಮಾಜಿಕ ನ್ಯಾಯವೇನಯ್ಯಾ?

ದುಡಿದವರಿಗೆ ದುಗ್ಗಾಣಿ, ದುಡಿಸಿಕೊಳ್ವರಿಗೆ ಅಷ್ಟೈಶ್ವರ್ಯ

ಇದುವೆ ನಿನ್ನ ಆರ್ಥಿಕ ವ್ಯವಸ್ಥೆಯೇನಯ್ಯಾ? (೩೨೭)

ಎಂದು ಅವರು ಪ್ರಶ್ನಿಸುತ್ತಾರೆ. "ಮೂಕಜನತೆಯ ಆಗುಹೋಗುಗಳನ್ನು ಸುಲಿಗೆಗಾರರ ಕೈಗೆ ಕೊಡುವುದೆ ಅಯ್ಯ?" (೩೨೫). "ಸರ್ಕಾರ ದರೋಡೆಕಾರನಾದಾಗ ನೌಕರರು

ನರಭಕ್ಷಕರಾಗದಿರುವರೇನಯ್ಯ? ಸಚಿವರೇ ಸುಲಿಗೆಗಾರರಾದಾಗ ಆಪ್ತ ಸಹಾಯಕರು ಡಕಾಯತರಾಗರೇನಯ್ಯ?" (೩೩೨), "ಊರಿಗೊಂದು ವಾಗ್ದಾನ ಮಾಡಿ ನೂರಕ್ಕೊಂದನ್ನೂ ನೆರವೇರಿಸದಿದ್ದರೆ ಡಂಗುರ ಹೊಡೆದವನಿಗಿಂತ ಕಡೆಯಲ್ಲವೆ ಅವನು?" (೩೫೯), "ಈ ಕದ್ದುಣ್ಣುವ ಕದೀಮರ ಕಳ್ಳ ಭಕ್ತಿಯ ಕಂಡು ಕದ್ದು ನಗುತ್ತಿರುವಿಯೇನಯ್ಯಾ? ನಕ್ಕರೆ ಸಾಲದು, ಇಕ್ಕಯ್ಯಾ ಅವರನ್ನು ಇಕ್ಕುಳದೊಳಗೆ" (೩೬೧), "ತಮ್ಮ ಅಧಿಕಾರಕ್ಕೆ ವಯೋಮಿತಿಯೇ ಇರಕೂಡದೆನ್ನುವವರು ಬಡಶಿಕ್ಷಕರ ವಯೋಮಿತಿಯನ್ನೇಕೆ ಇಳಿಸುವರಯ್ಯಾ?" (೨೫೪), ಈ ಮೊದಲಾದ ಮಾತುಗಳಲ್ಲಿ ಸದ್ಯ ನಮ್ಮ ಸುತ್ತಮುತ್ತಲು ನಡೆಯುತ್ತಿರುವುದನ್ನೆಲ್ಲ ಪುರಾಣಿಕರು ಗಮನಿಸುತ್ತಾರೆ.

ಮನುಷ್ಯ ಯಾವ ಯಾವ ರೀತಿಯಿಂದ ಬಾಳುವುದನ್ನು ಕಲಿತರೂ ಸಾಲದು, ಮರಗಳೂ ಅವನಿಗೆ ಪಾಠ ಹೇಳುತ್ತವೆಂಬುದನ್ನು ಈ ವಚನ ಮನೋಹರವಾಗಿ ತಿಳಿಸುತ್ತದೆ :

ಗುಂಪುಗುಂಪಾಗಿ ಬೆಳೆದರೂ
ಗುಂಪುಗಾರಿಕೆಯ ಗಾಂಪತನವಲ್ಲ
ಗುಂಪುಮರಗಳಲ್ಲಿ;
ಒಂದರ ಬಾಹು ಇನ್ನೊಂದರ ಹೆಗಲ ಮೇಲೆ,
ಒಂದರ ಹಸ್ತ ಇನ್ನೊಂದರ ಹಸ್ತದಲ್ಲಿ,
ಒಂದರ ನೆರಳು ಇನ್ನೊಂದರ ನೆರಳಿನಲ್ಲಿ,
ಎಲ್ಲ ಸಮರಸ–ಇಲ್ಲ, ವಿರಸ !
ನರರಲ್ಲೇಕೆ ಗುಂಪುಗಾರಿಕೆ
ವಿರಸ ವಿರೋಧ ವಿಷಮತೆಗಳು
ಚಿಮ್ಮಿ ಹೊಮ್ಮುತ್ತಿರಬೇಕಯ್ಯಾ? (೩೮೮)

"ನೀನು ಸೃಷ್ಟಿಸಿದುದ ಕೆಡಿಸಬಲ್ಲವರಿಗೆ ಕೊರತೆಯಿಲ್ಲ. ಕೆಟ್ಟುದನ್ನು ಸರಿಪಡಿಸುವವರ ಹೆಚ್ಚಿಸಯ್ಯ" (೩೩೬), "ಸಂಹಾರಕ್ಕಾಗಿ ತೊಟ್ಟ ಅವತಾರಗಳು ಸಾಕು, ಸರ್ವೋದ್ಧಾರಕ್ಕಾಗಿ ಹೊಸ ಅವತಾರಗಳ ತಳೆಯಯ್ಯಾ" (೩೪೩), ಎನ್ನುವುದು ಈ ವಚನಗಳಲ್ಲಿನ ಸತತ ಕೋರಿಕೆ. "ಪ್ರೀತಿಸಿದವರನ್ನು ಪ್ರೀತಿಸುವ ಮಾನವ, ಪ್ರೀತಿಸದವರನ್ನೂ ಪ್ರೀತಿಸುವವ ಮಹಾಮಾನವ, ದ್ವೇಷಿಸುವವರನ್ನೂ ಪ್ರೀತಿಸುವವ ದೇವಮಾನವ" (೩೬೪), ಎನ್ನುವುದು ಇಲ್ಲಿನ ಸಂದೇಶ. ಮಾನವರೋ ದಾನವರೋ ಆಗಿ ಬಾನಿಗೇರಬೇಕೆಂದೋ ರಸಾತಳಕ್ಕೆ ಹೋಗಬೇಕೆಂದೋ ಬಯಸುವುದು ಇಲ್ಲಿನ ಗುರಿಯಲ್ಲ. "ಮಾನವರನ್ನಾಗಿ ಮಾಡಿ ಇದೇ ಸುಂದರ ಜಗತ್ತಿನಲ್ಲಿಯೇ ಉಳಿಸಿ ಬೆಳೆಸಿ ಬೆಳಗಿಸಯ್ಯ" ಎನ್ನುವುದು ಪ್ರಾರ್ಥನೆ (೩೧೧). "ಮನುಜನ ಕಣ್ಣಿಗೆ ಮನುಜ ಮನುಜನಾಗಿಯೇ ಕಾಣಿಸುವುದು ಅದೆಷ್ಟು ಕರಕಷ್ಟವಯ್ಯಾ!" ಎಂಬ ವಚನ (೩೧೦) ತುಂಬ ಸರಳವಾಗಿ ಪೂರ್ಣದೃಷ್ಟಿಯನ್ನು ಸಾರುತ್ತದೆ.

*　　　　*　　　　*

ಡಾ॥ ಸಿದ್ಧಯ್ಯ ಪುರಾಣಿಕರು ಶರಣ ಸಾಹಿತ್ಯ ಸಾಗರದಲ್ಲಿ ಬೇಕಾದಂತೆ ಈಜಾಡಿದವರು. 'ಶರಣಚರಿತಾಮೃತ' ಎಂಬ ಅವರ ಬೃಹತ್ ಗ್ರಂಥ ಹಾಗೂ ಬಸವಣ್ಣನವರ ಜೀವನ–ಸಂದೇಶಗಳನ್ನು ಕುರಿತ ಈಚಿನ ಉಪನ್ಯಾಸಗಳು ಅವರ ಈ ಅನುಭಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದರೆ, 'ವಚನೋದ್ಯಾನ' ಪರೋಕ್ಷ ಸಾಕ್ಷಿ. ಈ ಸಂಗ್ರಹದ ಪ್ರತಿಯೊಂದು ವಚನದ ರಚನೆಯ ವಿನ್ಯಾಸದಲ್ಲಿಯೂ ಅಂದಿನ ವಚನಕಾರರ ಎರಕವನ್ನು ಕಾಣಬಹುದು. ಸಂಕ್ಷಿಪ್ತ ನಿರೂಪಣೆ, ಮೊಟಕಾದ ವ್ಯಾಕರಣ, ಆರಂಭದ ಸಾಲನ್ನೋ ಸಾಲುಗಳನ್ನೋ ಮತ್ತೆ ಮತ್ತೆ ತರುವ ರಚನಾ ವಿಧಾನ, ರೂಪಕ–ಉಪಮಾನಗಳಲ್ಲಿಯೇ ಮಾತಾಡುವ ಸೊಗಸು, ವಿರೋಧಾಭಾಸದ ಹೇಳಿಕೆಗಳಿಂದ ರಸೋತ್ಕರ್ಷವನ್ನುಂಟು–ಮಾಡುವ ಜಾಣ್ಮೆ, ಸಾದೃಶ್ಯ ವೈದೃಶ್ಯಗಳ ಸ್ಥಾಪನೆಯಿಂದ ತೆರೆದು ತೋರುವ ಆಕರ್ಷಣೆ, ಮಾತಿನ ಅರ್ಥಗಳನ್ನು ಏರುಪೇರಾಗಿಸುವುದರಿಂದೊದಗುವ ಉಲ್ಲಾಸಗತಿ, ಆರಾಧ್ಯದೈವವನ್ನು ಸಂಬೋಧಿಸುವುದರಲ್ಲಿಯೇ ಏರ್ಪಡುವ ಹೃದಯ ಸಂವಾದ ಈ ಮುಂತಾದ ವಚನ ಲಕ್ಷಣಗಳೆಲ್ಲ ಇಲ್ಲಿನ ರಚನೆಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. ಒಂದು ಬಗೆಯ ಧ್ವನಿ–ಪ್ರತಿಧ್ವನಿಗಳ ಆಟವನ್ನು ಇಲ್ಲಿ ನೋಡಬಹುದಾಗಿದೆ. ಈ ಆಟ ಕೇವಲ ನಿಯಮಬದ್ಧವಾಗಿ ಆಡುವ ಆಟವಷ್ಟೇ ಅಲ್ಲ; ನಿಯಮಗಳ ಅನುಸರಣೆಯಲ್ಲಿಯೇ ಹೊಸತನ್ನು ತೋರುವುದಾಗಿದೆ.

ಈ ವಚನಗಳು ಷಟ್‌ಸ್ಥಲ ವಚನಗಳಲ್ಲ; ಸಪ್ತಮುಖ ವಚನಗಳು. ಈ ಮುಖಗಳು ಸಪ್ತಾಕ್ಷರಿಯಿಂದ ಏಕಾಕ್ಷರಿಯವರೆಗಿನ ಮಂತ್ರಗಳಾಗಿ ಕಾಣಿಸಿಕೊಳ್ಳುತ್ತವೆ. "ಭಾರತ–ಕರ್ನಾಟಕ, ಕನ್ನಡ–ಬಸವ, ಸತ್ಯ–ಸೌಂದಯ್ಯ, ಪ್ರೀತಿ–ನೀತಿ, ಜನತೆ, ಕಾವ್ಯ ಮತ್ತು ನೀ" ಎಂಬಿವೇ ಆ ಮಂತ್ರಗಳು (೪೨). 'ವಚನೋದ್ಯಾನ'ದ ವಚನಗಳೆಲ್ಲ ಈ ಮಂತ್ರಗಳಿಗೆ ಬರೆದ ಮಾನವೀಯತೆಯ ವ್ಯಾಖ್ಯಾನವಾಗಿವೆ. ವಚನಗಳನ್ನು ಹಾಗೆಯೇ ವರ್ಗೀಕರಿಸುವುದೂ ಸಾಧ್ಯ.

ಪುರಾಣಿಕರ ವಚನಗಳಲ್ಲಿ ಬಹುಧರ್ಮಗಳಿಲ್ಲ, ಒಂದೆ ಧರ್ಮ. ಅದು ಜೀವನ ಧರ್ಮ. ಬಹುಮತಗಳಿಲ್ಲ, ಒಂದೇ ಮತ, ಅದು ಮಾನವ ಮತ, ಬಹುಪಥಗಳಿಲ್ಲ. ಒಂದೇ ಪಥ, ಅದು ಶಿವಪಥ, ಕಾಣದ ಕೈಯೊಂದು ಕಾಯುತ್ತಿದೆ ಎಂಬ ಭಕ್ತನ ಪರಮ ಶ್ರದ್ಧೆ ಉದ್ದಕ್ಕೂ ಎದ್ದುತೋರುತ್ತದೆ. ಈ ಶ್ರದ್ಧೆ ಮುಗ್ಧತೆಯಾದರೂ ಬಲವಾದದ್ದು. ಅದು ಧರ್ಮಜಡವಾದದ್ದಲ್ಲ; ಜೀವನ ವಿವೇಕದ್ದು.

ತೊಟ್ಟಿಲಲ್ಲಿರುವ ಹಸುಗೂಸಿಗೂ
ತನ್ನ ತಾಯಿಯೊಬ್ಬಳಿಹಳೆಂಬ ತಿಳಿವಳಿಕೆಯಿರುವಂತೆ
ಹಟ್ಟಿಯೊಳಗಣ ಕುರಿಮರಿಗೂ
ಕಾಯ್ದ ಕುರುಬನೊಬ್ಬನಿಹನೆಂಬ ತಿಳಿವಳಿಕೆಯಿರುವಂತೆ
ನೀನು ನನಗಿರುವಿಯೆಂಬ ತಿಳಿವಳಿಕೆ ನನಗೆ !

ಕೈ ಕೆಲಸದಲ್ಲಿದ್ದರೂ

ತಾಯಿಯ ಮನ ತೊಟ್ಟಿಲದ ಕಂದನಲ್ಲಿರುವಂತೆ

ಸೃಷ್ಟಿಕಾರ್ಯನಿರತನಾಗಿಯೂ ನೀನು

ನನ್ನ ಯೋಗಕ್ಷೇಮರತನೆಂಬ ನಂಬಿಕೆ ನನಗೆ ! (೧೩೫)

ಆತ್ಮಚಿಂತನೆಯ ಈ ವಚನಗಳಲ್ಲಿ, ಒಂದೇ ಬಣ್ಣವನ್ನು ಬೇರೆ ಬೇರೆ ರೀತಿಯಲ್ಲಿ ಕದಡಿ ವಿವಿಧ ಛಾಯೆಗಳನ್ನಾಗಿಸುವ, ಆ ಛಾಯೆಗಳಿಂದಲೇ ವರ್ಣ ವೈಭವವನ್ನು ನಿರ್ಮಿಸುವ ಕುಶಲ ಕಲಾವಿದನ ಕೈವಾಡವನ್ನು ಕಾಣಬಹುದು. ಒಂದು ಭಾವ, ಒಂದು ಅಭಿಪ್ರಾಯ ಮತ್ತೆ ಮತ್ತೆ ಬರುತ್ತದೆ. ಆದರೆ ಒಂದೊಂದು ಸಲವೂ ಅದು ಒಂದೊಂದು ರೀತಿಯದಾಗಿರುತ್ತದೆ. ಇದು ಸುಲಭವಾಗಿ ಸಾಧಿಸುವಂಥದಲ್ಲ. ಪುರಾಣಿಕರು ಇದರಲ್ಲಿ ಪೂರ್ಣ ಯಶಸ್ಸು ಪಡೆದಿದ್ದಾರೆ.

ನಮ್ಮ ಹೃದಯದ ಕದ ತಟ್ಟುವ, ನೆನಪಿನಲ್ಲಿಟ್ಟುಕೊಳ್ಳಬೇಕೆನ್ನಿಸುವ ಆಕರ್ಷಕ ಹೇಳಿಕೆಯ ಅರ್ಥವತ್ತಾದ ಮಾತುಗಳು ಮತ್ತೆ ಮತ್ತೆ ಬರುತ್ತವೆ. ನೀತಿಕಾವ್ಯದ ಒಂದು ಸಹಜ ಗುಣ ಹೀಗೆ 'ವಚನೋದ್ಯಾನ'ದಲ್ಲಿ ಕಾಣಿಸಿಕೊಳ್ಳುತ್ತದೆ ;

ಎನಿತು ಕುರೂಪಗಳು ನರರು ನಿರ್ಮಿಸಿದ ನಾಗರಿಕತೆಯಲ್ಲಿ? (೩೬)
ಸುಲಭವಾದುದೆಲ್ಲ ಶುಭಕರವಲ್ಲ (೭೦)
ಹಿಂಡಿನಲ್ಲಿರುವಾಗ, ಕುಂಜರಕ್ಕೆ ಭೀಮಬಲ
ಹಿಂಡನಗಲಿದ ಹಸ್ತಿಗೆ ಬಲೆ, ಇಲ್ಲವೆ ಬಿಲವಯ್ಯಾ ! (೮೮)
ಪರಿಪೂರ್ಣನಾಗದಿದ್ದರೂ
ಪರಿಪಕ್ವನ ಮಾಡಯ್ಯ, ತಂದೆ ! (೨೩೦)
ಗುರಿ ಘನವಾದಷ್ಟೂ ಅದರ ಗರಿಮೆ ಹೆಚ್ಚುವುದಯ್ಯಾ! (೨೩೭)
ಬದುಕುವುದು ಬಹು ಸುಲಭ ; ಬಾಳುವುದೇ ಕಠಿಣವಯ್ಯಾ (೨೬೬)
ಗೃಹ ಕಟ್ಟುವುದು ಕಷ್ಟವೇನಲ್ಲ, ಗೃಹಸ್ಥನಾಗುವುದು ಕಷ್ಟಕರವಯ್ಯಾ (೨೬೬)
ನಿನ್ನನರಿಯುವ ಮೊದಲು ಹಲವು ಮತ, ಹಲವು ಪಥ,
ನಿನ್ನನರಿದ ಮೇಲೆ ಒಂದೆ ಮತ, ಒಂದೆ ಪಥವಯ್ಯಾ (೩೦೮)
ಅಟ್ಟರೆ ಅಡುಗೆ, ಸುಟ್ಟರೆ ಭಸ್ಮ (೩೬೩)

ಗಾಂಪರಿರುವಲ್ಲಿ ರಂಪ ಬಹಳವಯ್ಯಾ (೪೨೫)

ಜೀವಿಯಿದ್ದೆಡೆ ಕ್ಷೇತ್ರ, ಹೃದಯವಿದ್ದೆಡೆ ತೀರ್ಥ (೪೪೦)

ಅರ್ಧರಾತ್ರಿಯಲ್ಲಿ ಎದ್ದು ಹೋಗುವರೆಲ್ಲ ಗೌತಮ

ಬುದ್ಧರಾಗುವರೇನಯ್ಯಾ? (೪೮೮)

ಪುರಾಣಿಕರ ವಚನಗಳಲ್ಲಿ ವ್ಯಂಗ್ಯವಿಡಂಬನೆಗಳಿಲ್ಲ, ಬೇಡಿಕೆ ಪ್ರಾರ್ಥನೆಗಳಿವೆ; ಚುಚ್ಚುವುದೂ ತಿವಿಯುವುದೂ ಇಲ್ಲ, ಮೈದಡವುವ ಮಾತೃವಾತ್ಸಲ್ಯವಿದೆ; ಗಹಗಹಿಸುವ ನಗುವಿಲ್ಲ, ಮೃದು ಮಂದಹಾಸವಿದೆ; ವೈಭವಕ್ಕಾಗಿ ವರ್ಣನೆಯಿಲ್ಲ, ವಸ್ತುಸ್ಥಿತಿಗೆ ವಿಶೇಷಣಗಳಿವೆ; ಲೋಕವನ್ನು ತಿಳಿಯುವ ಹೆಚ್ಚುಗಾರಿಕೆಯಿಲ್ಲ, ತನ್ನನ್ನು ತಿಳಿಯುವ ಹುಚ್ಚಿದೆ. ಇದು ಚಮತ್ಕಾರದ ಕಾವ್ಯವಲ್ಲ; ಸಾಕ್ಷಾತ್ಕಾರದ ಭಾಷ್ಯ.

ವಿರಳವಾಗಿ ಪುರಾಣಿಕರು ಭಾಷೆಯೊಡನೆ ಆಡುತ್ತಾರೆ; ಆದರೆ ಆಟಕ್ಕಾಗಿ ಭಾಷೆಯನ್ನು ಬಳಸುವುದಿಲ್ಲ. ಈ ಉದಾಹರಣೆಗಳನ್ನು ನೋಡಿ

'ನವೀಕರಣ, ನವೀಕರಣ'ವೆಂದು
ನಲುಗುತ್ತಲಿಹರಯ್ಯ ನವಯುವಕರು;
'ಮಾ ನವೀಕರಣ, ಮಾ ನವೀಕರಣ'ವೆಂದು
ಯಾರೆನ್ನುವರು?
ನಾನಂತೂ ಎನ್ನಲಾರೆ!
ಆದರೆ 'ಮಾನವೀಕರಣ, ಮಾನವೀಕರಣ'ವೆಂದು ಎನ್ನದಿರಲಾರೆ (೨೦೩)
ಭಾರತಕ್ಕೆ ಬಹಳಷ್ಟು 'ಬಾಬಾ'ಗಳನ್ನು ಕೊಟ್ಟಿರುವೆ
ಈಗ ಸಾಕಷ್ಟು 'ಭಾಭಾ'ಗಳನ್ನು ಕೊಡಯ್ಯ (೪೪೮)
ಜಾರನ ಮನೆಯ
ಪಾರುಪತ್ಯಗಾರನಾಗುವುದಕ್ಕಿಂತ
ಲೆನಿನ್ನನ ಮನೆಯ
ಬಾಣಸಿಯಾಗುವುದು ವಿಹಿತವಯ್ಯಾ (೧೭೪)

ಇಂಥ ಉದಾಹರಣೆಗಳು ಹಲವು ನಮಗೆ ಹುಡುಕಿದರೂ ಸಿಕ್ಕುವುದಿಲ್ಲ. ಇದು ಪುರಾಣಿಕರು ಭಾಷೆಯ ಬಳಕೆಯಲ್ಲಿ ತೋರುವ ಗಾಂಭೀರ್ಯವನ್ನು ಸೂಚಿಸುತ್ತದೆ.

ಒಟ್ಟಿನಲ್ಲಿ ಪುರಾಣಿಕರ ವಚನಗಳು ನಮ್ಮ ಆಧುನಿಕ ಅನುಭಾವ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಈ ವಚನಗಳಲ್ಲಿ ಅಭಿವ್ಯಕ್ತವಾಗಿರುವ ದುಗುಡ ಕಳಕಳಿಗಳೇ ಬಸವಳಿದ ಬಾಳಿಗೆ ಆಸೆ ಭರವಸೆಗಳನ್ನೂ, ಸಾಂತ್ವನವನ್ನೂ ನೀಡುತ್ತವೆ. ಹೋಲಿಕೆಯನ್ನು ಹೆಚ್ಚು ಬೆಳಸದೆ ಹೇಳುವುದಾದರೆ ಮುಖ್ಯ ಆಧುನಿಕ ವಚನಕಾರರಾದ ಶ್ರೀ ಜಚನಿ ಅವರಲ್ಲಿ ಚನ್ನಬಸವಣ್ಣನ ಪಾರಿಭಾಷಿಕತೆಯಿದೆ; ರಂಗಣ್ಣನವರಲ್ಲಿ ಬಸವಣ್ಣನ ವ್ಯಾವಹಾರಿಕತೆಯಿದೆ; ಪರಮೇಶ್ವರ ಭಟ್ಟರಲ್ಲಿ ಮಹಾದೇವಿಯಕ್ಕನ ಕಲಾತ್ಮಕತೆಯಿದೆ; ಸಿದ್ದಯ್ಯ ಪುರಾಣಿಕರಲ್ಲಾದರೋ ಅಲ್ಲಮನ ಅನುಭಾವ ನಿಗೂಢತೆ ಸುಳಿಯುತ್ತದೆ.

* * *

ರವೀಂದ್ರನಾಥ ಠಾಕೂರರ ಜೀವನ ಚರಿತ್ರೆಯ ಒಂದು ಪ್ರಸಂಗ ನೆನಪಾಗುತ್ತದೆ. ತರುಣ ವಯಸ್ಸಿನ ಠಾಕೂರರು ಮೊದಲ ಬಾರಿಗೆ ಮಧ್ಯಕಾಲೀನ ಲೇಖಕರ ಅನುಭಾವ ಗೀತೆಗಳನ್ನು ನೋಡಿದಾಗ ತಾವೂ ಏಕೆ ಅಂಥವನ್ನು ಬರೆಯಬಾರದು ಎಂದುಕೊಂಡು ಆ ಬಗೆಯ ಕೃತಿ ರಚನೆ ಮಾಡಿದರು. ಗೀತೆಗಳ ಕೊನೆಯಲ್ಲಿ ಗುಪ್ತ ಅಂಕಿತವನ್ನಿಡುವುದು ಆ ಕಾವ್ಯದ ಒಂದು ಪದ್ಧತಿ. ಠಾಕೂರರು ತಮ್ಮ ಹೆಸರನ್ನು ಭಾನುಸಿಂಹ ಥಾಕೂರ್ ಎಂದು ರೂಪಾಂತರಿಸಿಕೊಂಡರು. ಆ ರಚನೆಗಳ ಸಂಗ್ರಹ 'ಭಾನುಸಿಂಹ ಥಾಕೋರರ ಪದಾವಲಿ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಇವನ್ನು ಬರೆದವರು ಯಾರು ಎಂಬ ಚರ್ಚೆಗೆ ಆರಂಭವಾಯಿತು. ತರುಣ ವಿದ್ವಾಂಸನೊಬ್ಬ ವಿಶ್ವವಿದ್ಯಾನಿಲಯವೊಂದಕ್ಕೆ ಹೋಗಿ ಈ ರಚನೆಗಳ ಕರ್ತೃತ್ವದ ಮೇಲೆ ಸಂಶೋಧನೆ ಮಾಡಿ, ಲೇಖಕ ಮಧ್ಯಕಾಲದವನೆಂದು ಸ್ಥಾಪಿಸಿ, ಪ್ರಬಂಧ ಬರೆದು ಪದವಿ ಪಡೆದು ಬಂದನಂತೆ! ಠಾಕೂರರ ತಂದೆ ಅವನ ಸಾಹಸವನ್ನು ಮೆಚ್ಚಿ ನಕ್ಕು ನೂರು ರೂಪಾಯಿಗಳ ಬಹುಮಾನ ನೀಡಿದರೆಂದು ಪ್ರತೀತಿ.

ಸಮಕಾಲೀನ ಉಲ್ಲೇಖಗಳನ್ನೊಳಗೊಂಡ ಪುರಾಣಿಕರ ವಚನಗಳನ್ನು ಬಿಟ್ಟರೆ ಮಿಕ್ಕವು ಹಳೆಯ ಯಾವನೋ ಒಬ್ಬ ವಚನಕಾರನ ಕಟ್ಟಿನಿಂದ ಕಳಚಿಕೊಂಡು ಬಂದವೆಂದು ಧಾರಾಳವಾಗಿ ಹೇಳಬಹುದು. ಆದರೆ ಇದನ್ನು ಸ್ಥಾಪಿಸಿ ಮಾನ್ಯತೆ ಪಡೆಯುವ ಅವಕಾಶ ಮಾತ್ರ ಈಗ ಇಲ್ಲವಾಗಿದೆ !

ಪುರಾಣಿಕರು ಒಂದು ವಚನದಲ್ಲಿ ಹೇಳುತ್ತಾರೆ –

ಮುನ್ನುಡಿ ಓದಿ ವಾದಿಸಿದವನೊಬ್ಬ,
ಸಾದರ ಸ್ವೀಕಾರವನ್ನೋದಿ ವಾದಿಸಿದನಿನ್ನೊಬ್ಬ,
ಇಬ್ಬರೂ ಮೂಲಗ್ರಂಥವನ್ನು ಓದದವರೇ ! (೪೧೮)

ಸ್ವತಂತ್ರಧೀರ ಸಿದ್ದೇಶ್ವರನಲ್ಲಿ ಸದ್ಯ ನನ್ನ ಪ್ರಾರ್ಥನೆ ಇಷ್ಟೆ :

"ಹಾಗಾಗದಿರಲಿ. ಪ್ರಭುವೆ"

"ಗೋಧೂಳಿ" **– ಹಾ.ಮಾ. ನಾಯಕ**

ಜಯಲಕ್ಷ್ಮೀಪುರಂ, ಮೈಸೂರು–೧೨

ಡಿಸೆಂಬರ್ ೨೩, ೧೯೭೭

# ವಚನ ನಂದನ

ಬಹಳ ದಿನಗಳ ಹಿಂದಿನ ಮಾತು; ಬಹುಶಃ ಒಂದು ವರ್ಷಕ್ಕಿಂತ ಹೆಚ್ಚೇ ಆಗಿರಬೇಕು. ಧಾರವಾಡದಲ್ಲಿ ನಡೆದ ಒಂದು ದೊಡ್ಡ ಸಮಾರಂಭದ ಸಂದರ್ಭದಲ್ಲಿ ಶ್ರೀ ಸಿದ್ದಯ್ಯ ಪುರಾಣಿಕರೂ ಇದ್ದು. ಸಮಾರಂಭದ ನಂತರ ರಾತ್ರಿ ಊಟದ ವೇಳೆಯಲ್ಲಿ ಅದೂ ಇದೂ ಮಾತನಾಡುತ್ತಾ ಶ್ರೀ ಪುರಾಣಿಕರು, ತಮ್ಮ 'ವಚನೋದ್ಯಾನ' ಪ್ರಕಟವಾದ ಮೇಲೆ ಇನ್ನೂ ಕೆಲವು ವಚನಗಳನ್ನು ಬರೆದಿರುವುದಾಗಿಯೂ, ಇನ್ನೊಂದು ಸಂಗ್ರಹವನ್ನು ಹೊರತರಲು ಉದ್ದೇಶಿಸಿರುವುದಾಗಿಯೂ ಹೇಳಿದರು. ಅದನ್ನು ತಿಳಿದು ನನ್ನ ಸಂತೋಷವನ್ನು ವ್ಯಕ್ತಪಡಿಸಿದೆ. ಅವರು ಅಷ್ಟಕ್ಕೇ ನಿಲ್ಲದೆ "ಅದಕ್ಕೆ ನೀವು ಮುನ್ನುಡಿ ಬರೆಯಬೇಕು" ಎಂದರು. ಅದು ಅವರ ಸೌಜನ್ಯ ಮಾತ್ರವೆಂದು ಭಾವಿಸಿ, ಮಾತನ್ನು ಬೇರೆಡೆಗೆ ತಿರುಗಿಸಿ ಸಂಭಾಷಣೆಯನ್ನು ಮುಂದುವರಿಸಿದೆ. ಆದರೆ ಆ ಮಾತು ಔಪಚಾರಿಕವಾಗಿರದೆ ಅವರ ನಿರ್ಧಾರವಾಗಿದೆಯೆಂಬುದು ಅನಂತರ ಅವರು ಬರೆದ ಒಂದೆರಡು ಪತ್ರಗಳಿಂದ ಸ್ಪಷ್ಟವಾಯಿತು. ಒಮ್ಮೆ ಅವರು ಭದ್ರಾವತಿಗೆ ಬಂದಾಗ ಬಿ.ಆರ್. ಪ್ರಾಜೆಕ್ಟ್‌ಗೂ ಬರುವ ಅವಕಾಶವಾಯಿತು. ಆಗ ವಚನಗಳ ಹಸ್ತಪ್ರತಿಯನ್ನೂ ಜೊತೆಯಲ್ಲಿ ತಂದಿದ್ದರು. ಅದನ್ನು ನನ್ನ ಕೈಗಿತ್ತು ಒಮ್ಮೆ ನೋಡಿಕೊಡುವಂತೆ ಕೇಳಿದರು. ಮರುದಿನ ಅದನ್ನು ನೋಡಿಕೊಟ್ಟ ಮೇಲೆ, ಹಸ್ತಪ್ರತಿಯನ್ನು ಪ್ರೆಸ್‌ಗೆ ಕಳಿಸುತ್ತಿರುವುದಾಗಿಯೂ, ಫಾರಂಗಳು ಅಚ್ಚಾದಂತೆಲ್ಲಾ ಕಳಿಸಿಕೊಡುವುದಾಗಿಯೂ, ಕೊನೆಯ ಫಾರಂ ಬಂದೊಡನೆ ಮುನ್ನುಡಿ ಕಳಿಸಬೇಕೆಂಬುದಾಗಿಯೂ ಹೇಳಿದರು. ನನ್ನ ಯಾವ ಮಾತೂ ಅವರ ಕಿವಿಯ ಮೇಲೆ ಬೀಳಲೇ ಇಲ್ಲ. ಮುಂದೆ ಕೆಲವು ತಿಂಗಳುಗಳ ನಂತರ ಅಚ್ಚಾದ 'ಫಾರಂ'ಗಳು ಬರತೊಡಗಿದವು.

ಶ್ರೀ ಸಿದ್ದಯ್ಯ ಪುರಾಣಿಕರ ಗ್ರಂಥಕ್ಕೆ, ಅದರಲ್ಲೂ ವಚನ ಗ್ರಂಥಕ್ಕೆ ಮುನ್ನುಡಿಯ ಅಗತ್ಯವಿದೆಯೆ? ಎಂಬ ಪ್ರಶ್ನೆ ಈಗಲೂ ನನ್ನ ಮುಂದಿದೆ. 'ಕಾವ್ಯಾನಂದ'ರಾಗಿ ಕನ್ನಡ ಕಾವ್ಯಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದ ಶ್ರೀ ಪುರಾಣಿಕರು ತಮ್ಮ ವಚನಗಳಿಂದ ನಾಡಗಡಿಯನ್ನು ದಾಟಿ ಹೋಗಿದ್ದಾರೆ. ಅವರ 'ವಚನೋದ್ಯಾನ'ಕ್ಕೆ ಬಂಗಾಳದ ಪ್ರಶಸ್ತಿಯೊಂದು ದೊರಕಿದೆ; ಆಧುನಿಕ ಯುಗದಲ್ಲಿಯ ವಚನಮಾಧ್ಯಮ ಪ್ರಭಾವಶಾಲಿಯಾಗಬಹುದೆಂಬುದನ್ನು ಸಾಬೀತುಗೊಳಿಸಿದೆ. ಅವರ ಇನ್ನೊಂದು ವಚನ ಗ್ರಂಥ ಬಂದರೆ, ಅದನ್ನು ಮುನ್ನುಡಿಯ ಮೂಲಕ ಪರಿಚಯಿಸುವ ಅಗತ್ಯವನ್ನು ಮೀರಿ ಅವರು ಬೆಳೆದಿದ್ದಾರೆ. ಆದರೂ ಇಂತಹ ಮುನ್ನುಡಿಯೊಂದನ್ನು ಅವರು ಬಯಸಿರುವುದೂ, ಅದಕ್ಕಾಗಿ ಕಿರಿಯನಾದ ನನ್ನನ್ನು ಕೇಳಿರುವುದೂ, ಅವರ ಸಹಜವಾದ ಸ್ನೇಹ ಸೌಜನ್ಯಗಳಿಗೆ ಸಾಕ್ಷಿಯಾಗಿದೆ ಎಂದಷ್ಟೇ ಭಾವಿಸಿದ್ದೇನೆ. ಅವುಗಳಿಗೆ ಒಳಗಾಗಿ ಅವರ ಮಾತನ್ನು ಮೀರಲಾರದೆ ಈ ಕೆಲವು ಮಾತುಗಳನ್ನು ಬರೆಯುತ್ತಿದ್ದೇನೆ.

ಇದು ಒಂದು ದೃಷ್ಟಿಯಿಂದ ಸಂಕೋಚದ ಕೆಲಸವಾದರೂ, ಇನ್ನೊಂದು ದೃಷ್ಟಿಯಿಂದ ಸಂತೋಷದಾಯಕವಾದುದೂ ಹೌದು. ಅವರ 'ವಚನೋದ್ಯಾನ'ದಲ್ಲಿ ಅಡ್ಡಾಡಿ, ಅದರ ಸೊಗಸು-ಸೌಂದರ್ಯ-ಸೌರಭಗಳನ್ನು ಸವಿದಿದ್ದ ನನಗೆ, ಈಗ ಹಾಗೇ ಮುಂದುವರಿದು "ವಚನ ನಂದನ"ವನ್ನು ಪ್ರವೇಶಿಸುವ ಮೊದಲ ಅವಕಾಶವನ್ನು ಶ್ರೀ ಪುರಾಣಿಕರು ತಂದುಕೊಟ್ಟಿದ್ದಾರೆ.

'ಉದ್ಯಾನ'ವನ್ನು ಬಲ್ಲವರಿಗೆ 'ನಂದನ'ವೂ ಪರಿಚಿತವೆಂದೇ ಮೊದಲ ನೋಟಕ್ಕೆ ಅನ್ನಿಸಬಹುದು. ಅವೇ ಮರಗಿಡಗಳು, ತರುಲತೆಗಳು, ಹೂವು-ಹಣ್ಣುಗಳು, ಹಕ್ಕಿ-ಪಕ್ಷಿಗಳು, ಬೆಳುತಿಂಗಳು, ತಂಗಾಳಿ ಇಲ್ಲಿಯೂ ನಮ್ಮನ್ನು ಎದುರುಗೊಳ್ಳುತ್ತವೆ. ಆದರೆ ಇಲ್ಲಿ ಅವುಗಳ ಹಿಂದೆ 'ಉದ್ಯಾನ'ದ ಅನುಭವದಿಂದ ಪರಿಣತಗೊಂಡ ಅಲೌಕಿಕ ಧ್ವನಿಯೊಂದು ಎಲ್ಲವನ್ನೂ ಸೂಕ್ಷ್ಮವಾಗಿ ವ್ಯಾಪಿಸಿರುವಂತೆ ತೋರುತ್ತದೆ.

"ಜೀವನದ ವನದಲ್ಲಿ ಪರಿಣತಿಯ ಪುಷ್ಪ ಅರಳಲಯ್ಯ;
ಪರಿಣತಿಯ ಪುಷ್ಪದಿಂದ ಪ್ರತಿಭೆಯ ಪರಿಮಳ ಹೊರಡಲಯ್ಯ
ಪ್ರತಿಭೆಯ ಸ್ಫಟಿಕದ ಘಟದಲ್ಲಿ ಚಾರಿತ್ರ್ಯ-ಜ್ಯೋತಿ ಪ್ರಕಾಶಿಸಲಯ್ಯ..."

(ವಚನೋದ್ಯಾನ, ೨೧೫)

ಎಂದು 'ವಚನೋದ್ಯಾನ'ದ ಸಂದರ್ಭದಲ್ಲಿಯೇ ಅವರು ಪ್ರಾರ್ಥಿಸಿದ್ದರು. ಆ ಪ್ರಾರ್ಥನೆ ಈಡೇರಿರುವುದರ ಕುರುಹುಗಳನ್ನು ಇಲ್ಲಿ ಅಧಿಕವಾಗಿ ಕಾಣುತ್ತೇವೆ. ಅವರ ಧ್ವನಿ ಇಲ್ಲಿ ಸುಲಭವಾಗಿ ಮೇಲೇರಿ ಅಲೌಕಿಕ ಸ್ತರವನ್ನು ಸ್ಪರ್ಶಿಸುತ್ತದೆ. ಆದರೆ ಅದು ಈ ಲೋಕವನ್ನು ಬಿಟ್ಟ ಅಲೌಕಿಕ ಧ್ವನಿಯಲ್ಲ. ಇಲ್ಲಿನ ಎಲ್ಲವನ್ನೂ ಶ್ರದ್ಧೆಯಿಂದ ಕಂಡು ಉಂಡದ್ದು; ಅದರ ಜೊತೆಯಲ್ಲಿಯೇ ಇದರಾಚೆಯ ಸತ್ಯವನ್ನು ಕಂಡುಕೊಳ್ಳುವ ಪೂರ್ಣ ದೃಷ್ಟಿಯಿಂದ ಪ್ರೇರಿತವಾದದ್ದು. ಇದನ್ನು ಬಿಡದೆ, ಅದನ್ನು ತನ್ನ ತೆಕ್ಕೆಗೊಗ್ಗಿಸಿಕೊಳ್ಳುವ ಸಾಹಸ ಚೇತನದ ಸಾಧಕ ದೃಷ್ಟಿಯನ್ನು 'ವಚನೋದ್ಯಾನ'ದಂತೆ ಇಲ್ಲಿಯೂ ಉದ್ದಕ್ಕೂ ಕಾಣುತ್ತೇವೆ. ಇಲ್ಲಿ ಆ ಸಾಧಕ ದೃಷ್ಟಿ ಇನ್ನೂ ಮುಂದುವರಿದು ದಾರ್ಶನಿಕ ಅನುಭವದತ್ತ ತಿರುಗುತ್ತಿರುವುದರ ಸೂಚನೆಗಳನ್ನು ಗುರುತಿಸಬಹುದು.

ಶ್ರೀ ಸಿದ್ದಯ್ಯ ಪುರಾಣಿಕರು ಲೌಕಿಕದಲ್ಲಿ ತುಂಬು ಜೀವನವನ್ನು ಬಾಳಿದವರು. ಅತ್ಯುನ್ನತ ಅಧಿಕಾರದಲ್ಲಿದ್ದು ಅದರ ಎಲ್ಲ ಭೋಗ ಭಾಗ್ಯಗಳನ್ನು ಕಂಡವರು. ಆದರೆ ಅದರ ಬಹುಮುಖ ಆಕರ್ಷಣೆ ಆಮಿಷಗಳ ಕಬಂಧ ಹಿಡಿತಕ್ಕೆ ಒಳಗಾಗದೆ ಬಿಡಿಸಿಕೊಂಡು ಎಡೆಬಿಡದೆ ಎಚ್ಚರಿಕೆಯಿಂದ ಮೇಲೇರುವ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದವರು. ಈ ಅಂತರಂಗದ ಸಂಸ್ಕಾರ ಅವರ ಎಲ್ಲ ಕೃತಿಗಳಲ್ಲಿಯೂ ಒಂದಲ್ಲ ಒಂದು ರೂಪದಲ್ಲಿ ಪ್ರಕಟವಾಗುತ್ತಲೇ ಬಂದಿದೆ. ಅವರ ವಚನಗಳಂತೂ ಈ ಆಂತರಿಕ ಅಭೀಪ್ಸೆಯ ಮೂರ್ತ ರೂಪಗಳು. 'ವಚನೋದ್ಯಾನ'ದಲ್ಲಿಯೇ ಮೈವೆತ್ತ ಈ ಮನೋಧರ್ಮ, 'ವಚನ ನಂದನ'ದಲ್ಲಿ ಇನ್ನೂ ಹೆಚ್ಚಾಗಿ ಮೈಗೂಡಿಸಿಕೊಂಡು ಬೆಳೆದು ಬಂದಿದೆ.

ಆಧುನಿಕ ಯುಗದಲ್ಲಿ ವಚನಗಳು ಒಂದು ಸಾಹಿತ್ಯ ಪ್ರಕಾರವಾಗಿ ಸಾಕಷ್ಟು ಸಮೃದ್ಧವಾಗಿಯೇ ಬೆಳೆದು ನಿಂತಿವೆ. ಬಹುಶಃ ೧೨ನೇ ಶತಮಾನದ ಮೇಲೆ ವಚನ ಸಾಹಿತ್ಯ ವಿಫುಲವಾಗಿ ಬೆಳೆದದ್ದು ಈ ೨೦ನೇ ಶತಮಾನದಲ್ಲಿಯೇ. ಆದರೆ ಈ ಎರಡು ಯುಗಗಳಿಗೂ ಇರುವ ಅಂತರವನ್ನು ಮರೆಯುವಂತಿಲ್ಲ. ಬಸವಾದಿ ಶರಣರ ಕೈಯಲ್ಲಿ ವಚನಗಳು ಕೇವಲ ಒಂದು ಸಾಹಿತ್ಯ ಪ್ರಕಾರವೆಂಬಂತೆ ಬೆಳೆದು ಬರಲಿಲ್ಲ. ಪೂರ್ಣಜೀವನ ವಿಧಾನವೊಂದನ್ನು ರೂಪಿಸುವ ಸಮಗ್ರ ಕ್ರಾಂತಿಯ ಅನಿವಾರವಾದ ಸಾಮೂಹಿಕ ಅಂಗಗಳಾಗಿ ಮೂಡಿಬಂದವು. ಎಲ್ಲಿ ಸಾಹಿತ್ಯ ಮಹೋದ್ದೇಶವೊಂದರ ಈಡೇರಿಕೆಯ ಸಾಧನವಾಗಿ ಉಪಸರಕಿನಂತೆ ಮೂಡಿಬರುತ್ತದೆಯೋ ಅಲ್ಲಿ ಅದು ಅತ್ಯಂತ ಸತ್ವಶಾಲಿಯಾಗಿ ಜೀವನವನ್ನು ರೂಪಿಸುವ ಶಕ್ತಿಯಾಗುತ್ತದೆಂಬ ಮಾತು ಆ ಕಾಲದ ವಚನಸಾಹಿತ್ಯಕ್ಕೆ ಸಂಪೂರ್ಣ ವಾಗಿ ಅನ್ವಯಿಸುತ್ತದೆ. ಮುಂದೆ ೧೫ ಮತ್ತು ೧೬ನೇ ಶತಮಾನಗಳಲ್ಲಿ ಆ ಆದರ್ಶವನ್ನೇ ಮುಂದಿಟ್ಟುಕೊಂಡು ವಚನಗಳು ರಚಿತವಾದುವು. ಆದರೆ ೧೨ನೇ ಶತಮಾನದಲ್ಲಿದ್ದ ಸಾಮಾಜಿಕ ಅನಿವಾರ್ಯತೆ ಈ ವಚನಗಳ ರಚನೆಯಲ್ಲಿರಲಿಲ್ಲ. ಆದ್ದರಿಂದಲೇ ಅವು ಸಾಮಾಜಿಕ ಪರಿವರ್ತನೆಯ ಸಮಷ್ಟಿ ಮಾಧ್ಯಮವಾಗಲಿಲ್ಲ. ಈ ಮಾತು ೧೬ನೇ ಶತಮಾನಕ್ಕೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಷಣ್ಮುಖ ಶಿವಯೋಗಿಗಳ ಕೈಲಿ ಅದೊಂದು ಸಾಹಿತ್ಯ ಪ್ರಕಾರವಾಗಿ ಮಾತ್ರ ಬೆಳೆಯಿತು. ಆದರೂ ಶರಣರ ಮಾರ್ಗದಲ್ಲಿ ನಡೆದು ಅವರ ಆದರ್ಶವನ್ನೇ, ಅನುಭವದ ನಿಲುವಿನಲ್ಲಿ ಪೂರ್ಣಗೊಳಿಸಿದುದರಿಂದ ಅದು ಶರಣ ಪರಂಪರೆಗೆ ಸೇರಿದ ಶರಣ ಸಾಹಿತ್ಯವೇ ಆಯಿತು.

ಈ ಶತಮಾನದ ವಚನ ಸಾಹಿತ್ಯವನ್ನು ಈ ಎರಡು ಘಟ್ಟಗಳಿಗಿಂತ ಬೇರೆಯಾದ ರೀತಿಯಲ್ಲಿ ನೋಡಬೇಕು. ೧೨ನೇ ಶತಮಾನದ ಆಂದೋಳನಕ್ಕಾಗಲೀ, ೧೫ ಮತ್ತು ೧೬ನೇ ಶತಮಾನಗಳ ಧಾರ್ಮಿಕ ಶ್ರದ್ಧೆಯ ಸಾಧನೆಗಾಗಲೀ ಮಾಧ್ಯಮವಾದಂತೆ ವಚನಗಳು ಇಂದು ಯಾವುದೇ ಸಾಮಾಜಿಕ ಹಾಗೂ ಧಾರ್ಮಿಕ ಶ್ರದ್ಧೆಗೆ ಬದ್ಧವಾಗಿಲ್ಲ. ಇಂದಿನ ಬದಲಾದ ಸಂದರ್ಭಕ್ಕನುಗುಣವಾಗಿ ಹಾಗಾಗಬಹುದಾದ ಸಾಧ್ಯತೆಯೇನೋ ಇತ್ತು. ಅದು ಆಗಲಿಲ್ಲ. ಅಂದಿನ ಆ ವಚನಗಳ ಅಭಿವ್ಯಕ್ತಿಯ ಸಾಧ್ಯತೆಗಳು ಮಾತ್ರ ಇಂದಿನ ವಿಚಾರವಂತರನ್ನು ಆಕರ್ಷಿಸಿದುವು. ಅವುಗಳನ್ನು ಬಳಸಿಕೊಳ್ಳುವ ವೈಯಕ್ತಿಕ ಪ್ರಯತ್ನಗಳೂ ನಡೆದುವು. ಶ್ರೀಗಳಾದ ಎಸ್.ವಿ. ರಂಗಣ್ಣ, ಜ.ಚ.ನಿ., ಮೂಜಗಂ, ಎಸ್.ವಿ. ಪರಮೇಶ್ವರಭಟ್ಟ, ಸಿದ್ಧಯ್ಯ ಪುರಾಣಿಕ, ಮಹದೇವ ಬಣಕಾರ ಮತ್ತು ಈಚೆಗೆ ಈ ಸಾಲಿಗೆ ಸೇರಿದ ಶ್ರೀ ಸಂಗಮೇಶ ಹೊಸಮನಿ ಈ ಮೊದಲಾದುವು ಇವುಗಳಲ್ಲಿ ಪ್ರಮುಖವಾದ ಕೆಲವು ಹೆಸರುಗಳು. ಇವರ ಮತ್ತು ಇನ್ನೂ ಅನೇಕರ ಪ್ರಯತ್ನದ ಫಲವಾಗಿ ಆಧುನಿಕ ವಚನ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. ಆದರೆ ಹೆಸರು ಅದೇ ಆದರೂ ಉಸಿರು ಬೇರೆಂಬುದನ್ನು ಗಮನಿಸಬೇಕು. ಅಂದಿನಂತೆ ಇಂದು ವಚನಗಳು ಸಾಮೂಹಿಕ ಜನಜಾಗೃತಿಗೆ ಕಾರಣವಾದ ಧಾರ್ಮಿಕ ಕಿಡಿಗಳಾಗಿ ಬೆಳಗದೆ, ವೈಯಕ್ತಿಕ ಸಾಧನೆಯ ಅಭಿವ್ಯಕ್ತಿ ಮಾಧ್ಯಮಗಳಾಗಿ ಬೆಳೆದುಬಂದಿವೆ. ಇದು ಆಧುನಿಕ ವಚನ ಸಾಹಿತ್ಯಕ್ಕೆಲ್ಲಾ ಒಟ್ಟಾಗಿ ಅನ್ವಯಿಸುವ ಮಾತು.

ಇದರಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರ ಸ್ಥಾನ ವಿಶಿಷ್ಟವಾದುದು. ಅಂದಿನ ವಚನ ಸಾಹಿತ್ಯದ ಸಾರವನ್ನು, ಸತ್ವವನ್ನು ಅರಗಿಸಿಕೊಂಡು ಶರಣ ಜೀವನದ ಪ್ರತಿಭೆಯನ್ನೂ, ಅಂತೆಯೇ

ಆಧುನಿಕ ಪರಿಸರಕ್ಕೆ ಒಡ್ಡಿಕೊಂಡ ವಿಚಾರಶೀಲ ಮನಸ್ಸಿನ ಪರಿಭಾವನೆಯ ಪ್ರಭಾವವನ್ನೂ ಇವರ ವಚನಗಳಲ್ಲಿ ಕಾಣುತ್ತೇವೆ. ಆದ್ದರಿಂದಲೇ ಇವು ಒಂದು ಕಡೆಯಲ್ಲಿ, ಆಂತರಿಕ ಸಾಧನೆಯ ಮಾರ್ಗದಲ್ಲಿ ಮುನ್ನಡೆವ ಆತ್ಮನ ನಿರಂತರ ಹಂಬಲವನ್ನೂ, ಇನ್ನೊಂದು ಕಡೆಯಲ್ಲಿ ಇಂದಿನ ಸಂಕೀರ್ಣ ಜಗತ್ತಿನ ಸಾಮಾಜಿಕ ಜಟಿಲತೆಯನ್ನು ವಿವೇಚಿಸುವ ಸಮಕಾಲೀನ ಪ್ರಜ್ಞೆಯನ್ನೂ ಪ್ರತಿಬಿಂಬಿಸುತ್ತವೆ. ಆದರೆ ಇವೆರಡೂ ಬೇರೆಬೇರೆಯಾಗಿ ಉಳಿಯದೆ ಒಳಗು ಹೊರಗುಗಳೂ ಒಂದರೊಡನೊಂದು ತಳುಕು ಹಾಕಿಕೊಂಡು ಪೂರ್ಣ ಜೀವನ ದೃಷ್ಟಿಯ ಊರ್ಧ್ವ ಗಮನಕ್ಕೆ ಪ್ರೇರಕವಾಗುತ್ತವೆ. ಇಲ್ಲಿನ ಅಧ್ಯಾತ್ಮಿಕ ಅಭೀಪ್ಸೆಯಲ್ಲಿ ಸಾಮಾಜಿಕ ಪ್ರಜ್ಞೆಯಿದೆ; ಸಮಕಾಲೀನ ಸಮಸ್ಯೆಗಳನ್ನೂ ದೌರ್ಬಲ್ಯಗಳನ್ನೂ ನೋಡುವ ವೈಚಾರಿಕ ದೃಷ್ಟಿಯಲ್ಲಿ ಸಾರ್ವಕಾಲಿಕ ಮೌಲ್ಯಗಳ ಅನುಸಂಧಾನವಿದೆ.

ಇದು ಇಲ್ಲಿನ ವಚನಗಳಲ್ಲಿ ಉದ್ದಕ್ಕೂ ಎದ್ದುಕಾಣುವ ಅಂಶ. ಆಂತರಿಕ ವೀಕ್ಷಣೆ, ಸಾಮಾಜಿಕ ವಿವೇಚನೆ ಈ ಎರಡು ಪ್ರಧಾನವಾದ ಪರಿಭಾವನೆ ಮತ್ತು ಪರಿಶೀಲನೆಗಳ ಮೇಲೆ ಹಲವಾರು ಭಾವಗಳು ಸಂಚರಿಸುತ್ತವೆ. ಪದರಪದರವಾಗಿ ಅವುಗಳನ್ನು ಬಿಡಿಸಿ ತೋರಿಸುತ್ತವೆ. ಈ ಎರಡು ಅವರ ಆಧ್ಯಾತ್ಮಿಕ ಸಾಧನೆಯ ಪರಸ್ಪರ ಪೂರಕವಾದ ಎರಡು ಚೈತನ್ಯ ಸ್ಪಂದನಗಳು. ಇದು 'ವಚನ ನಂದನ'ಕ್ಕೆ ಮಾತ್ರವಲ್ಲ, 'ವಚನೋದ್ಯಾನ'ಕ್ಕೂ ಅನ್ವಯಿಸುತ್ತದೆ. ಲೌಕಿಕ ಮತ್ತು ಆಧ್ಯಾತ್ಮಿಕ, ಇಹ ಮತ್ತು ಪರ ಈ ದಡಗಳೆರಡನ್ನೂ ಸ್ಪರ್ಶಿಸುತ್ತಾ ಅವರ ಅನುಭವ ವಚನಗಳಲ್ಲಿ ತುಂಬಿ ಹರಿಯುತ್ತದೆ.

ತಮ್ಮ ಅನುಭವಕ್ಕೆ ಎಟುಕದ ಏನನ್ನೂ ಶ್ರೀ ಪುರಾಣಿಕರು ಹೇಳಹೋಗು ವುದಿಲ್ಲ. ಇದೊಂದು ಬಹು ದೊಡ್ಡಗುಣ. ವಚನಸಾಹಿತ್ಯವನ್ನು ತಕ್ಕಮಟ್ಟಿಗೆ ಓದಿದವರಿಗೂ ಅಲ್ಲಿ ಬರುವ ಅನುಭಾವದ ನಿಲುವನ್ನು ಹೇಳುವ ಅನೇಕ ಮಾತುಗಳು ಬುದ್ಧಿಗತವಾಗುತ್ತವೆ. ಆ ಅನುಭವ ಇಲ್ಲದವರೂ ಆ ಮಾತುಗಳನ್ನು ಜಾಣ್ಮೆಯಿಂದ ಬಳಸಬಹುದು; ಅನುಭವದ ಮುಖವಾಡ ಹಾಕಬಹುದು. ಆದರೆ ಶ್ರೀ ಪುರಾಣಿಕರು ಎಲ್ಲಿಯೂ ಆ ಪ್ರಲೋಭನೆಗೆ ಒಳಗಾಗಿ ಪ್ರಾಮಾಣಿಕತೆಯನ್ನು ಕಳೆದುಕೊಂಡಿಲ್ಲ. 'ವಚನೋದ್ಯಾನ'ದಲ್ಲಿ ಪ್ರಾರಂಭದಲ್ಲಿಯೇ ಬರುವ ಒಂದು ವಚನವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು:

"ನಡೆಯದ ಹಾದಿಯಲ್ಲಿ ಎಡವಿದೆನೆಂದರೆ
ಒಪ್ಪುವುದೆ ಅಯ್ಯ?
ಕಾಣದ ಮುಖದ ಕುಂದನೆಣಿಸಿದರೆ
ಒಪ್ಪುವುದೆ ಅಯ್ಯ?
ಉಣ್ಣದ ಅಡಿಗೆಯ ರುಚಿಯ ಟೀಕಿಸಿದರೆ
ಒಪ್ಪುವುದೆ ಅಯ್ಯ?
ನೋಡದುದನ್ನು ನೋಡಿದಂತೆ ವರ್ಣಿಸಿದರೆ
ಒಪ್ಪುವುದೆ ಅಯ್ಯ?
ಸ್ವತಂತ್ರಧೀರ ಸಿದ್ದೇಶ್ವರಾ

ಕಾಣದ ನಿನ್ನ ಕಂಡಂತೆ ಬಣ್ಣಿಸಿದರೆ
ಒಪ್ಪುವುದೆ ಅಯ್ಯ?

(ವಚನೋದ್ಯಾನ, ೨೦)

ಈ ಮಾತು ಮನನೀಯವಾದುದು. ಕಾಣದುದನ್ನು ಕಂಡಂತೆ ವರ್ಣಿಸುವ ಬೌದ್ಧಿಕ ಚಮತ್ಕಾರಕ್ಕೆ ಸಿಲುಕದೆ, ತಾನು ಕಂಡುದನ್ನು ಮಾತ್ರ ಅನುಭವಪೂರ್ವಕವಾಗಿ ನಿರೂಪಿಸುವ ಪ್ರಾಮಾಣಿಕ ಅಭಿವ್ಯಕ್ತಿ ಇಲ್ಲಿ ಉದ್ದಕ್ಕೂ ಕಂಡುಬರುತ್ತದೆ. ಆದ್ದರಿಂದಲೇ ಅದು ಕೃತಕತೆಯನ್ನು, ಆಡಂಬರವನ್ನು ದೂರವಿಟ್ಟು ಪರಿಣಾಮಕಾರಿಯಾಗಿ ಮೂಡಿಬರುತ್ತದೆ.

ಆದರೆ ಕಾಣದ ಆತನನ್ನು ಕಾಣುವ ಆಧ್ಯಾತ್ಮಿಕ ಅಭೀಪ್ಸೆ ಇಲ್ಲಿ ಪರಿಪರಿಯಾಗಿ ಮೂಡಿಬಂದಿದೆ. ಅದೇ ಅವರ ಎಲ್ಲ ವಚನಪುಷ್ಪಗಳ ತಾಯಿಬೇರು; ಆ ಅನುಭವದ ಚಿತ್ರವನ್ನು ಬರೆಯುವುದಕ್ಕೆ ಆಧಾರವಾದ ಮೂಲಭಿತ್ತಿ. 'ವಚನೋದ್ಯಾನ'ದಲ್ಲಿ ಈ ಒಂದು ಮಾತು ಬರುತ್ತದೆ: "ನನ್ನ ಕನಸಿನ ನೌಕೆಗೆ ನೀನೇ ನಾವಿಕನಾಗಯ್ಯ; ನನ್ನ ನನಸಿನ ಪುಷ್ಪಕ್ಕೆ ನೀನೇ ಚಾಲಕನಾಗಯ್ಯ;" ಎಂದು ಮುಂತಾಗಿ ಬೆಳೆಯುವ ಆ ವಚನ ಹೀಗೆ ಕೊನೆಗೊಳ್ಳುತ್ತದೆ: "ನನ್ನ ತನು–ಮನ–ಪ್ರಾಣ–ಜೀವನ ಚಿಂತನ ಅಂತರ್ಮಂಥನಗಳಿಗೆ ನೀನೇ ಆಧಾರ, ಆಶ್ರಮವಾಗಿರಯ್ಯ, ಸ್ವತಂತ್ರಧೀರ ಸಿದ್ಧೇಶ್ವರಾ" (ವಚನ, ೫೭). ಇದು ಅವರ ಒಟ್ಟು ವಿಚಾರಧೋರಣೆಯ ಹಿನ್ನೆಲೆಯನ್ನು ಸೂಚಿಸುತ್ತದೆ. ವಚನ ನಂದನಕ್ಕೂ ಈ ಮಾತು ಅನ್ವಯಿಸುತ್ತದೆ. ಅವರ ಜೀವನ ಚಿಂತನ, ಅಂತರ್ ಮಂಥನಗಳಿಗೆಲ್ಲಾ ಸ್ವತಂತ್ರಧೀರ ಸಿದ್ಧೇಶ್ವರನೇ ಆಧಾರವಾಗಿ, ಆಶ್ರಯವಾಗಿ ನಿಂತಿದ್ದಾನೆ.

ಆತನನ್ನು ಕೇಂದ್ರಬಿಂದುವನ್ನಾಗಿಸಿಕೊಂಡು ಅದರ ಸುತ್ತ ಶ್ರೀ ಪುರಾಣಿಕರು ಅನುಭವದ ವಿವಿಧ ಪದರುಗಳನ್ನೂ, ವಿಚಾರ ಜಾಲಗಳನ್ನೂ ಹರಿಯಬಿಡುತ್ತಾರೆ. ಆತ ಯಾರು? ಎಂಬ ಪ್ರಶ್ನೆ ಅವರನ್ನು ಅಂತರಂಗದ ಕಡೆಗೆ ತಿರುಗಿಸುತ್ತದೆ. "ನಾನು–ನೀನು" ಇದನ್ನು ಕುರಿತ ಚಿಂತನದಿಂದಲೇ 'ವಚನೋದ್ಯಾನ' ಪ್ರಾರಂಭವಾಗುತ್ತದೆ. ಈ ಎರಡರ ಅಭೇದವನ್ನು ಕಂಡುಕೊಳ್ಳುವ ಸಾಧನೆಯ ಮಾರ್ಗದಲ್ಲಿ ದೈವಕೃಪೆ, ಸರ್ವಾರ್ಪಣೆ, ಆಂತರಿಕ ತೊಳಲಾಟ, ತಳಮಳ, ಪ್ರಾರ್ಥನೆ, ಏಕೈಕನಿಷ್ಠೆ ಈ ಮೊದಲಾದುವನ್ನು ಕಾಣುತ್ತೇವೆ. ಲೋಕದ ಏರುಪೇರುಗಳು, ಮಾನವ ಸ್ವಭಾವದ ಸಂಕೀರ್ಣತೆ, ಸಾಮಾಜಿಕ ವಿಷಮತೆ, ವಿರಸತೆಗಳು ಮತ್ತು ಅವುಗಳ ಮಧ್ಯದಲ್ಲಿದ್ದೇ ಅವುಗಳನ್ನು ಮೀರುವ ನೈತಿಕನಿಷ್ಠೆ, ಧೃತಿ, ಜಾಗೃತಿ, ಸಮನ್ವಯ, ಪೂರ್ಣ ಜೀವನದೃಷ್ಟಿ ಈ ಎಲ್ಲವೂ ಅವರ ಅನುಭವದ ಆಳ–ಅಗಲಗಳನ್ನೂ, ಎತ್ತರ–ಬಿತ್ತರಗಳನ್ನೂ ವಚನಭಾಷೆಯಲ್ಲಿ ಪಡಿಮೂಡಿಸುತ್ತಾ 'ವಚನೋದ್ಯಾನ' ಬೆಳೆಯುತ್ತದೆ. ಸ್ವಲ್ಪ ಹೆಚ್ಚುಕಡಿಮೆ ಇದೇ ವ್ಯವಸ್ಥೆಯನ್ನು ಇದರ ಮುಂದುವರಿದ ರೂಪದಲ್ಲಿ ಕಾಣಬಹುದು. ಇಲ್ಲಿ, ಈ 'ವಚನ ನಂದನ'ದಲ್ಲಿ.

ಅವ್ಯಕ್ತಶಕ್ತಿಯ ಅಚಿಂತ್ಯ ಅನುಭವದ ಪರಿಭಾವನೆಯಿಂದಲೇ 'ವಚನ ನಂದನ' ಪ್ರಾರಂಭವಾಗುತ್ತದೆ; ಭಕ್ತನಲ್ಲಿ ಆ ಶಕ್ತಿ ಆವಿರ್ಭವಿಸುವ ದೈವಕೃಪೆಯನ್ನು ಹಾರೈಸಿ ತಾನೇ ಅದಾಗುವ ಅನುಭಾವದ ಅಭೀಪ್ಸೆಯನ್ನು ಅನೇಕ ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತದೆ.

‘ನಾನೆನ್ನಲು ನಿನ್ನ ಕೊನೆ; ನೀನೆನ್ನಲು ನನ್ನ ಕೊನೆ’ (ವಚನ, ೯) ಎಂಬ ಸೂತ್ರಪ್ರಾಯವಾದ ಈ ಮಾತು ಅಹಂಕಾರ ನಿರಸನದ ಅನಿವಾರ್ಯತೆಯನ್ನು ಸೂಚಿಸುತ್ತದೆ. ತೀವ್ರವಾದ ಆಂತರಿಕ ಅಭೀಪ್ಸೆ, ಅತೃಪ್ತಿ, ಹೃದಯದ ಕರೆ–ಮೊರೆಗಳಿಂದ ಸರ್ವಾರ್ಪಣೆಯ ಮಾರ್ಗದಲ್ಲಿ ಸಾಧನೆ ಬೆಳೆಯುತ್ತದೆ. ಈ ಸಂದರ್ಭದಲ್ಲಿ ಬರುವ ಅನೇಕ ಮಾತುಗಳು ಶರಣರ ವಚನಗಳನ್ನು ನೆನಪಿಗೆ ತರುತ್ತವೆ. ಆದರೆ ಅವುಗಳ ಅನುಕರಣೆಯಾಗದೆ ಆ ಅನುಭವದ ನಿಧಿಯನ್ನು ಒಳಗೊಂಡ ಸಾಧನೆಯ ಪ್ರತಿನಿಧಿಗಳಾಗುತ್ತವೆ.

ಸರ್ವಾರ್ಪಣೆ, ಆತ್ಮವೀಕ್ಷಣೆ, ಏಕೈಕನಿಷ್ಠೆಗಳು ಇಲ್ಲಿ ಬರುವ ಸಾಧನೆಯ ಮುಖ್ಯವಾದ ಮೂರು ಮುಖಗಳು, ಅವುಗಳನ್ನು ಹಾಗೆ ಗುರುತಿಸಿ ಆ ವಿಭಾಗ ಕ್ರಮವನ್ನೇನೂ ಇಲ್ಲಿ ಅನುಸರಿಸಿಲ್ಲ. ಆದರೆ ಒಟ್ಟು ಧೋರಣೆಯಲ್ಲಿ ಇದನ್ನು ಗುರುತಿಸಬಹುದು. ‘ನನ್ನತನ’ವನ್ನು ಇನ್ನೊಂದು ದೊಡ್ಡದಕ್ಕೆ ಅರ್ಪಿಸಿಕೊಳ್ಳುವುದು ಸಾಧನೆಯಲ್ಲಿ ಮಹತ್ವಪೂರ್ಣವಾದ ಒಂದು ಹೆಜ್ಜೆ. ಒಳಹೊರಗುಗಳನ್ನು ವ್ಯಾಪಿಸಿರುವ ಅವ್ಯಕ್ತಶಕ್ತಿಯನ್ನು ನಂಬಿ ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಬೇಕೆಂಬುದನ್ನು ಶ್ರೀ ಪುರಾಣಿಕರು ಬೇರೆ ಬೇರೆ ರೀತಿಯಲ್ಲಿ ಮತ್ತೆ ಮತ್ತೆ ಹೇಳುತ್ತಾರೆ. ಈ ಕೆಳಗಿನ ಒಂದು ಪ್ರತಿಮೆ ಅದನ್ನು ಸಮರ್ಥವಾಗಿ ನಿರೂಪಿಸುತ್ತದೆ:

“ಈ ಬದುಕಿನ ದೋಣಿಯಲ್ಲಿ

ಕುಳಿತುಕೊಳ್ಳಬೇಕು;

ದುಡಿದುದನ್ನೆಲ್ಲಾ ಕೊಟ್ಟು

ಟಿಕೆಟ್ಟು ಕೊಳ್ಳಬೇಕು;

ಆದರೂ, ಇಂಥಲ್ಲಿಗೇ ಕೊಂಡೊಯ್ಯೆಂದು

ಕೇಳದಿರಬೇಕು!

ಪಾಪ, ಅದಕ್ಕೂ ಗೊತ್ತಿಲ್ಲ–

ಅದನು ನಡೆಸುವ ಅಂಬಿಗನಾರೆಂಬುದು!

ಸ್ವತಂತ್ರಧೀರ ಸಿದ್ಧೇಶ್ವರನೆ

ಅಂಬಿಗನೆಂದು ನಂಬಿಬಿಟ್ಟರೆ

ಉದ್ಭವಿಸುವುದೇ ಇಲ್ಲ ಪ್ರಶ್ನೆ

ಎಲ್ಲಿಗೆ ಹೋಗಬೇಕೆಂಬುದು!

(ವಚನ ೭೭)

ಈ ಬದುಕಿನ ದೋಣಿಯನ್ನು ನಡೆಸುವ ಅಂಬಿಗನನ್ನು ನಂಬಬೇಕು. ಆದರೆ ನಮ್ಮ ದುಡಿಮೆಯಿಲ್ಲದೆ ದೋಣಿ ಸಾಗುವಂತಿಲ್ಲ. “ದುಡಿದದ್ದನ್ನೆಲ್ಲಾ ಕೊಟ್ಟು ಟಿಕೆಟ್ಟು ಕೊಳ್ಳಬೇಕು”;

ಅನಂತರ ಅಂಬಿಗನಿಗೆ ಬಿಡಬೇಕು. ಇದು ಅರ್ಪಣೆಯ ಹಿಂದಿರುವ ರಹಸ್ಯ. ಇನ್ನೊಂದು ಕಡೆ ಹೇಳುತ್ತಾರೆ: "ನೀನಿತ್ತುದನ್ನೇ ನಿನಗರ್ಪಿಸುವೆ, ನೀನೀಯದುದನ್ನು ಎಲ್ಲಿಂದ ತರುವೆ?" (ವ.೮೦). ಇದನ್ನು ಅರಿತವರು ಲೌಕಿಕದಲ್ಲಿದ್ದೂ ಅದಕ್ಕೆ ಅತೀತರಾಗಬಲ್ಲರು. ಅವರು ಎಲ್ಲವನ್ನೂ ಬಿಟ್ಟು ಜೀವನ ವಿಮುಖರಾಗಬೇಕಾಗಿಲ್ಲ. "ನಿನ್ನ ಅಡಿಗಳನ್ನು ಬಿಡದಿದ್ದರೆ ಸಾಕು, ಇವಾವನೂ ಬಿಡಬೇಕಿಲ್ಲವಯ್ಯ" (ವ.೧೪೩) ಈ ಮೊದಲಾದ ಮಾತುಗಳಲ್ಲಿ ಸರ್ವಾರ್ಪಣೆಯಿಂದ ಸಾಧಿತವಾಗುವ ನಿರ್ಲಿಪ್ತತೆಯ ನಿಲುವನ್ನು ಹೇಳುತ್ತಾರೆ.

ಇದು ಸಹಜವಾಗಿಯೇ ಆತ್ಮವೀಕ್ಷಣೆಯತ್ತ ತಿರುಗುತ್ತದೆ. ಈ ಲೋಕದಿಂದ ಪಡೆದ ಸುಖ-ದುಃಖಗಳ ಅನುಭವವನ್ನು ಅಂತರಂಗದ ವೀಕ್ಷಣೆಯಿಂದ ವಿಶ್ಲೇಷಿಸುತ್ತಾನೆ. ತನ್ನ ದುಃಖವನ್ನು ತನ್ನಲ್ಲಿಯೇ ನುಂಗಿಕೊಂಡು ಅದಕ್ಕೇ ಕಾರಣವನ್ನು ಪರಿಭಾವಿಸುತ್ತಾನೆ ಮತ್ತು ಅದನ್ನು ಎದುರಿಸಲು ಸಾಧ್ಯವಾಗುವ ದೈವಕೃಪೆಯನ್ನೂ ಧೈರ್ಯವನ್ನೂ ಬೇಡುತ್ತಾನೆ.

"ನನ್ನ ಕಣ್ಣೀರನೊರೆಸಲು ಬೇರಾರೂ ಬೇಕಿಲ್ಲ

ನಾನೇ ಒರೆಸಿಕೊಳ್ಳುವೆನಯ್ಯ !

ದುಕ್ಕದ ಕಣ್ಣೀರು ಉಕ್ಕಿದಲ್ಲಿಯೇ

ಆನಂದದ ಅಶ್ರು ಹರಿದಾವು;

ಬೆಂಕಿಯ ಮಳೆ ಬಂದ ಸ್ಥಳದಿಂದಲೇ

ಜೇನಿನ ಮಳೆಗಳು ಸುರಿದಾವು!

ಸ್ವತಂತ್ರಧೀರ ಸಿದ್ಧೇಶ್ವರಾ,

ಒಮ್ಮೆಯೂ ಕಂಬನಿಗರೆಯದವರಾರಾದರೂ ಇದ್ದರೆ

ಅವರೆನ್ನ ಕಂಬನಿ ತೊಡೆಯಲಿ!

ಇಲ್ಲದಿದ್ದರೆ ಈ ಕೆಲಸ ನನಗೇ ಬಿಡಲಿ!"

(ವ.೮೨)

- ಎಂಬ ಈ ವಚನ ಎರಡು ಅಂಶಗಳನ್ನು ಪರಿಭಾವಿಸುತ್ತದೆ: ಸುಖ-ದುಃಖಗಳು ಜೀವನದ ಅವಿಭಾಜ್ಯ ಅಂಗಗಳು ಮತ್ತು ಅವು ಬಂದಾಗ ನಾವೇ ಅವನ್ನು ಎದುರುಗೊಳ್ಳಬೇಕು. ಇನ್ನೊಬ್ಬರು ನಮ್ಮ ಕಂಬನಿಯನ್ನು ಒರೆಸಲಾರರು. 'ಒಮ್ಮೆಯೂ ಕಂಬನಿಗರೆಯದವರಿದ್ದರೆ ಅವರು ನನ್ನ ಕಂಬನಿಯನ್ನು ಒರೆಸಲಿ' ಎಂಬ ಮಾತು, ದುಃಖ ಯಾರನ್ನೂ ಬಿಟ್ಟಿದ್ದಲ್ಲ, ಎಂಬುದನ್ನು ಧ್ವನಿಸುತ್ತದೆ. 'ಸಾವು ಕಾಣದ ಮನೆಯ ಸಾಸುವೆ'ಯನ್ನು ನೆನಪಿಸುತ್ತದೆ. ಹೀಗೆ ನನ್ನ ಕಣ್ಣೀರನ್ನು ನಾನೇ ಒರೆಸಿಕೊಳ್ಳುವ ದೃಢನಿಷ್ಠೆಯನ್ನು ಪರಿಣಾಮಕಾರಿಯಾಗಿ ಹೇಳುವ ಅನೇಕ ವಚನಗಳು ಇಲ್ಲಿ ಬರುತ್ತವೆ.

ಆತ್ಮವೀಕ್ಷಣೆ, ಆತ್ಮಾವಲಂಬನೆಗೆ ಕಾರಣವಾಗಬೇಕೆಂಬುದನ್ನು ಬಹಳ ಸುಂದರವಾಗಿ ಹೇಳಿದ್ದಾರೆ. "ನಗರವೀಥಿಗಳಲ್ಲಿ ಅಗಣಿತ ವಿದ್ಯುದ್ದೀಪಗಳಿದ್ದೇನಯ್ಯ, ನನ್ನ ಮನೆಯಲ್ಲಿ ಮೇಣದ ಬತ್ತಿಯೂ ಇರದಿದ್ದರೆ?" ಎಂದು ಪ್ರಾರಂಭವಾಗುವ ಈ ವಚನ (೯೪), "ಎಲ್ಲೆಲ್ಲಿಯೂ ನೀನು ಪ್ರೇಮ ಪ್ರಕಾಶವಾಗಿ ಪಸರಿಸಿ ಪ್ರಯೋಜನವೇನಯ್ಯ, ನಿನ್ನ ಕಿರಣವೊಂದು ನನ್ನೆದೆಯ ಕಗ್ಗವಿಯ ಬೆಳಗದಿದ್ದರೆ?" ಎಂಬ ಮಾತಿನೊಡನೆ ಮುಕ್ತಾಯವಾಗುತ್ತದೆ. ಎಲ್ಲೆಲ್ಲಿಯೂ ಇರುವ ದೈವೀ ಪ್ರಕಾಶ ನನ್ನೆದೆಯನ್ನು ಹೊಕ್ಕು ಬೆಳಗುವಂತಾಗಬೇಕು. ಇನ್ನೊಂದು ವಚನದಲ್ಲಿ ಮೇಲೆ ಬಾನಿನಲ್ಲಿ ನಡೆಯುವ ಕ್ರಿಯೆಗಳೆಲ್ಲಾ ಒಳಬಗೆಯ ಬಾನಿನಲ್ಲಿಯೂ ಹೇಗೆ ನಡೆಯುತ್ತವೆಂಬುದನ್ನು, ಅದರಿಂದ ಬೆಳೆದು ಹೇಗೆ ಮೇಲೇರಬೇಕೆಂಬುದನ್ನೂ ಸೂಚಿಸುತ್ತಾರೆ. ಮನಸ್ಸೇ ಎಲ್ಲಕ್ಕೂ ಕಾರಣವೆಂಬದನ್ನು ಹೇಳುವ ಅನೇಕ ವಚನಗಳು ಆತ್ಮವೀಕ್ಷಣೆಯ ನಾನಾ ಹಂತಗಳನ್ನು ಸೂಚಿಸುತ್ತವೆ. ಮನಸ್ಸು ಮುದುಡಿದಡೆ ಯಾವ ಸಾಧನೆಯೂ ಸಾಧ್ಯವಿಲ್ಲವೆಂಬುದನ್ನು ಹೀಗೆ ಹೇಳಿದ್ದಾರೆ:

"ಬಾನೆ ಬರಿದಾಗಿರುವಾಗ

ಮಳೆಯ ಬೇಡಿದರುಂಟೇನಯ್ಯ?

ಬನವೆ ಸುಟ್ಟು ಬೂದಿಯಾದಾಗ

ಜೇನು ಬಯಸಿದರುಂಟೇನಯ್ಯ?

ಕೆರೆಯೆ ಬತ್ತಿ ಒಣಗಿರುವಾಗ

ಮೀನ ಕೇಳಿದರುಂಟೇನಯ್ಯ?

ಸ್ವತಂತ್ರಧೀರ ಸಿದ್ಧೇಶ್ವರಾ,

ಮನವೆ ಹಳಸಿ ಹೋಗಿರುವಾಗ

ಘನವ ಬಯಸಿದರುಂಟೇನಯ್ಯ?

(ವ.೨೦೮)

ಇಂತಹ ಅನೇಕ ವಚನಗಳು ನೇರವಾಗಿ ಮನಮುಟ್ಟಿ ಮುದಗೊಳಿಸುತ್ತವೆ.

ಸರ್ವಾರ್ಪಣೆ ಮತ್ತು ಆತ್ಮವೀಕ್ಷಣೆಗಳಿಂದ ಮುಂದುವರಿದ ಸಾಧಕನಿಗೆ ಏಕೈಕನಿಷ್ಠ ಮತ್ತು ಅದಕ್ಕೆ ಸಹಾಯಕವಾದ ಆತ್ಮವಿಶ್ವಾಸಗಳೂ ಮೂಡುತ್ತವೆ. ಆತ್ಮ ವಿಶ್ವಾಸಕ್ಕೆ ಅತಿ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. "ಯಾವ ವಿಶ್ವಾಸ ಹೋದರೂ ಆತ್ಮವಿಶ್ವಾಸ ಹೋಗದಿರಲಯ್ಯ" (೪೬೮) ಎಂಬ ಮಾತು ಅವರ 'ವಚನೋದ್ಯಾನ'ದಲ್ಲಿ ಒಂದು ಕಡೆ ಬರುತ್ತದೆ. ಅಲ್ಲಿಯೇ ಇನ್ನೊಂದು ಕಡೆ

'ಸತ್ಯಾನ್ವೇಷಣೆಯ ಹಾದಿಯಲ್ಲಿ ತುಳಿದ

ಮುಳ್ಳೂ ಮಲ್ಲಿಗೆಯೇ

ಮಿಥ್ಯಾದರಣೆಯ ದಾರಿಯಲ್ಲಿ ತುಳಿದ

ಮಲ್ಲಿಗೆಯೂ ಮುಳ್ಳೇ'

(ವಚನೋದ್ಯಾನ ೬೭)

ಎಂಬ ಸತ್ಯನಿಷ್ಠೆಯ ಮಾತು ಬರುತ್ತದೆ. ಈ ನಿಷ್ಠೆಯ ಭಾವ ಇಲ್ಲಿ ಸ್ಪಷ್ಟವಾಗಿ ಮುಂದುವರಿದಿದೆ.

"ನನ್ನ ಗುಂಡಿಗೆಯ ಗಟ್ಟಿತನವನ್ನು ಪರೀಕ್ಷಿಸಲು

ಇಷ್ಟೊಂದು ಕಷ್ಟಗಳ ಅಗ್ಗಿಷ್ಟಿಕೆಯಲ್ಲಿ

ಮತ್ತೆ ಮತ್ತೆ ಸುಟ್ಟು ನೋಡುತ್ತಲಿಹೆಯಾ ಅದನ್ನು"

(ವ.೮೬)

ಎಂದು ಒಂದು ಕಡೆ ಕೇಳಿದರೆ, ಇನ್ನೊಂದು ವಚನದಲ್ಲಿ "ಕೊಡು ನರಳಿಸುವ ನೋವುಗಳ, ಬಿಕ್ಕು ತರಿಸುವ ಬೇನೆಗಳ" ಎಂದು ಪ್ರಾರ್ಥಿಸುತ್ತಾರೆ (ವ.೮೮). ಅಲ್ಲಿಯೇ "ಬರುವ ಬೇನೆಗಳ ದಾರ ಮಾಡಿ, ನೋವುಗಳ ಹೂವು ಪೋಣಿಸಿ, ನಿನ್ನ ಕೊರಳಿಗೆ ಹಾರ ಹೆಣೆಯುವೆ" ಎಂಬ ಮಾತು ದೃಢನಿಷ್ಠೆಯ ಪ್ರತೀಕವಾಗಿದೆ. ದೈವಕೃಪೆಯೊಂದಿದ್ದರೆ ಇದನ್ನೆಲ್ಲಾ ಎದುರಿಸಿ ಗೆಲ್ಲಬಲ್ಲೆನೆಂಬ ಆತ್ಮವಿಶ್ವಾಸ ಅವರದು. "ನಿನ್ನ ಚಾಲನೆಯ ಚುಕ್ಕಾಣಿಯಿರೆ ಒಡಲ ಹಡಗನ್ನೇರಿ ಬಾಳ ಕಡಲನ್ನು ದಾಟಬಲ್ಲೆನಯ್ಯಾ" (ವ.೯೦) "ನಿನ್ನ ನಂಬಿಕೆಯ ಸಿಂಬಿಯನ್ನು ತಲೆಗಿಟ್ಟುಕೊಂಡು ಬದುಕಿನ ಭಾರವನ್ನು ಹೊರಲು ಕಲಿತೆನಯ್ಯ" (ವ.೯೨) ಈ ಮೊದಲಾದ ಮಾತುಗಳಲ್ಲಿ ಇದು ವ್ಯಕ್ತವಾಗಿದೆ.

ಹೀಗೆ ಇದನ್ನು ಅಳವಡಿಸಿಕೊಂಡ ಸಾಧಕನಿಗೆ ಈ ಜೀವನವೇ ಸಾಧನೆಯ ರಂಗವಾಗುತ್ತದೆ. ಲೌಕಿಕ ಮತ್ತು ಆಧ್ಯಾತ್ಮಗಳು ಬೇರೆ ಬೇರೆಯಾಗಿ ಉಳಿಯುವುದಿಲ್ಲ. ಈ ಸೃಷ್ಟಿ ಬಂಧಕವಾಗುವುದಿಲ್ಲ; ತಾರಕವಾಗುತ್ತದೆ. ಇದರ ಮೂಲಕ ಸತ್ಯ ಸೌಂದರ್ಯಗಳನ್ನು ಕಾಣಲು ಸಮರ್ಥನಾಗುತ್ತಾನೆ. ಈ ಸೃಷ್ಟಿಯ ರಹಸ್ಯವನ್ನೂ, ಅದರ ಮಡಿಲಲ್ಲಿ ನಡೆಯುವ ಬದುಕಿನ ಬಹುಬಣ್ಣಗಳನ್ನೂ ಅನೇಕ ವಚನಗಳಲ್ಲಿ ಬಗೆಬಗೆಯಾಗಿ ಬಣ್ಣಿಸಿದ್ದಾರೆ. 'ಎನಿತು ಸುಂದರ ವಸುಂಧರೆಯ ಸೃಷ್ಟಿಸಿಹೆಯಯ್ಯಾ ನಮಗಾಗಿ!' ಎಂಬ ಉದ್ಗಾರವನ್ನು 'ವಚನೋದ್ಯಾನ'ದಲ್ಲಿ ತೆಗೆದಿದ್ದಾರೆ (೩೨). ಅಂತೆಯೇ ನಭದ ನೀಲಿಯಲ್ಲಿ ಬೆಳಕಿನಚಿತ್ರ. ಹೂತ ಕಾಫಿ ತೋಟದ ಸೊಬಗುಗಳನ್ನು ಅಲ್ಲಿ ವರ್ಣಿಸಿದ್ದಾರೆ. ಆದರೆ ಅದು ಕೇವಲ ಬಾಹ್ಯ ಸೌಂದಯ್ಯದಲ್ಲಷ್ಟೇ ನಿಲ್ಲದೆ, ಈ ವಿಶ್ವಚಿತ್ರದ ವರ್ಣವಿನ್ಯಾಸಕ್ಕೆ ಮಾರುಹೋಗಿ ಅನಂತರ ಚಿತ್ರದಿಂದ ಚಿತ್ರಕಾರನತ್ತ ತಿರುಗುತ್ತದೆ. ಭೂಮಿಯ ಸೋಜಿಗದ ಜೊತೆಗೆ ಭವದ ಸೋಜಿಗವನ್ನು ಪರಿಭಾವಿಸುತ್ತದೆ. ಆದರೆ ಇಲ್ಲಿ ಸೃಷ್ಟಿಯ ಬಾಹ್ಯ ಸೌಂದರ್ಯಕ್ಕಿಂತ ಇದರ ಆಂತರ್ಯದಲ್ಲಿರುವ ವೈವಿಧ್ಯ

ಮತ್ತು ಸರಸ ವಿರಸಗಳ ಏಕತ್ರ ಸಂಗಮದಿಂದುಂಟಾದ ಬೆರಗು ಪ್ರಧಾನವಾಗಿದೆ. "ಪರಿಮಳ ಸುರಿವ ಅರಳಿನಲ್ಲಿಯೂ, ಮೂಸಿದ ಮೂಗಿಗೆ ಪಿನಸಿಯ ಕಾಟ ತರುವ ಕೀಟವಿರಬಹುದು" ಎಂದು ಪ್ರಾರಂಭವಾಗುವ ವಚನ "ಎಲ್ಲೆಲ್ಲಿ ಏನೇನನಿರಿಸಿಹೆಯಯ್ಯ? ಯಾವ ಉದ್ದೇಶಕ್ಕಾಗಿ ಇರಿಸಿಹೆಯಯ್ಯ? ನೀನಿರಿಸಿಹ ಪರಿಗೆ ಬೆರಗಾದೆನಯ್ಯ" (ವ.೮೩) ಎಂದು ಉದ್ಗಾರ ತೆಗೆಯುತ್ತಾರೆ. ಈ ಸೃಷ್ಟಿಯಲ್ಲಿ ಕಾಣುವ ನಿಶ್ಚಲ ಚಂಚಲಗಳ ದ್ವಂದ್ವನ್ನು ಹೀಗೆ ಗುರುತಿಸಿದ್ದಾರೆ:

"ಈ ನೆಲ ನಿಶ್ಚಲ, ಜಲ ಚಂಚಲ;
ಈ ನಭ ನಿಶ್ಚಲ, ಅಭ್ರ ಚಂಚಲ;
ಈ ಬಯಲು ನಿಶ್ಚಲ, ಗಾಳಿ ಚಂಚಲ;
ಶಿಲೆ ನಿಶ್ಚಲ, ಅದು ಕೊಡುವ ಕಿಡಿ ಚಂಚಲ;
ಸ್ವತಂತ್ರಧೀರ ಸಿದ್ಧೇಶ್ವರಾ
ನೀನು ನಿಶ್ಚಲ
ನಾನು ಚಂಚಲ !

(ವ.೪೭)

ನಿರಂತರ ಚಲನಶೀಲವಾದ ಈ ಸೃಷ್ಟಿಯ ಹಿಂದಿರುವ ಅಚಲ ತತ್ವವನ್ನು ಸೂಚ್ಯವಾಗಿ ಈ ವಚನ ನಿರೂಪಿಸುತ್ತದೆ. ಮಾನವ ಸೃಷ್ಟಿಯ ನಶ್ವರತೆಯನ್ನು ಮೀರಿ ನಿಂತ ವಿಸ್ಮಯಕರವಾಗಿ ಈ ದೈವೀಸೃಷ್ಟಿಯನ್ನು ಕುರಿತ ಇನ್ನೂ ಅನೇಕ ವಚನಗಳು ಮನನೀಯವಾಗಿವೆ.

ಈ ಸೃಷ್ಟಿಯ ಮಡಿಲಿನಲ್ಲಿ ನಡೆಯುವ ಬದುಕಿನ ರಹಸ್ಯವನ್ನು ಕಂಡುಕೊಳ್ಳುವ ಅನುಭಾವಪೂರ್ವಕವಾದ ಪ್ರಯತ್ನ ಇಲ್ಲಿನ ವಚನಗಳಲ್ಲಿ ಕಾಣುವ ಇನ್ನೊಂದು ಮುಖ್ಯವಾದ ಅಂಶ. "ಒಳ್ಳೆಯ ಜೀವನಕ್ಕಿಂತ ಒಳ್ಳೆಯ ತತ್ವವನರಿಯೆನಯ್ಯ" (೨೩೬) ಎಂದು 'ವಚನೋದ್ಯಾನ'ದಲ್ಲಿ ಹೇಳಿದ ಜೀವನದೃಷ್ಟಿಯೇ ಇಲ್ಲಿ ಇನ್ನೂ ಗಟ್ಟಿಗೊಂಡು ಮುಂದುವರಿದಿದೆ.

"ಬದುಕಿನ ಬಗ್ಗೆ ಬರೆದವರಿಗಿಂತ
ಬದುಕು ದೊಡ್ಡದು ನೋಡಾ"

(ವ.೧೩೧)

ಎಂದು ಇಲ್ಲಿ ಹೇಳುವ ಮಾತು ಅವರ ಜೀವನಶ್ರದ್ಧೆಗೆ ಕನ್ನಡಿಯಾಗಿದೆ. "ತಾವು ಹೇಳಿದಂತೆ ತಾವೇ ಬದುಕುವವರ ತೋರಾ" (ವ.೧೩೨) ಎಂದು ಹೇಳುತ್ತಾರೆ. ಬದುಕಿನ ಬಗೆಗೆ ಅವರು ತಳೆದ ಧೋರಣೆ ಪೂರ್ಣಜೀವನದೃಷ್ಟಿಯನ್ನು ಪ್ರತಿಪಾದಿಸುತ್ತದೆ. 'ಅರಿಷಡ್ವರ್ಗಗಳೂ ಜೀವನಕ್ಕೆ ಸಹಕಾರಿಗಳಾಗಬಹುದು ಅರಿತು ಅನುಭವಿಸಿದರೆ' (ವಚನ, ೧೪೫), ಎಲ್ಲ ಸಾಧನಗಳೂ ಮಾನವ ಪ್ರಯತ್ನಗಳೂ ಇರುವುದು ಬದುಕಿಗಾಗಿಯೇ:

ಮೂಗನ್ನೇ ಹರಿಯುವಷ್ಟು
ಮೂಗುತಿ ಭಾರವಾಗಿದ್ದರೆ ಹೇಗಯ್ಯ?
ಮೂಗುತಿ ಇರುವುದು ಮೂಗಿಗಾಗಿ,
ಮೂಗು ಮೂಗುತಿಗಾಗಿ ಅಲ್ಲ!
ಎಲ್ಲ ಇರುವುದು ಬದುಕಿಗಾಗಿ,
ಬದುಕು ಅದಕ್ಕಾಗಿ, ಇದಕ್ಕಾಗಿ ಅಲ್ಲ!
ಬದುಕಿನ ಬೆನ್ನು ಮುರಿವ ಭಾರ
ಯಾವುದೇ ಇರಲಿ
ಅದು ತ್ಯಾಜ್ಯವಯ್ಯ
ಸ್ವತಂತ್ರಧೀರ ಸಿದ್ಧೇಶ್ವರಾ!

(ವ.೧೭೧)

ಎಂಬ ವಚನ ಬದುಕಿನ ಮಹೋನ್ನತಿಯನ್ನು ಎತ್ತಿಹಿಡಿಯುತ್ತದೆ. ಇದು ನಿಜವಾಗಿಯೂ ಈ ಮಹೋನ್ನತಿಯನ್ನು ಪಡೆಯಬೇಕಾದರೆ ಮುದ್ರೆಯಿಲ್ಲದ ಸುತ್ತೋಲೆಯಂತಾಗಿ ಗೊತ್ತುಗುರಿಯಿಲ್ಲದೆ ತಿರುಗಬಾರದು. "ಸ್ವತಂತ್ರಧೀರ ಸಿದ್ಧೇಶ್ವರನ ಮುದ್ರೆ ಬಿದ್ದಾಗ ಗೆದ್ದು ಬಂದೀತು ಮುಟ್ಟಿದವರೆದೆಗಳ" (ವ.೧೮೦). ಈ ಮುದ್ರೆಯನ್ನು ಪಡೆಯುವುದಕ್ಕೆ ಅಗತ್ಯವಾದ ನೈತಿಕನಿಷ್ಠೆ ಮೊದಲಾದ ಸಾಧನೆಗಳೆಲ್ಲಾ ಇಲ್ಲಿ ಸೇರುತ್ತವೆ. ಅವು ಜೀವನದಲ್ಲಿ ಬೆಳಕನ್ನೀಯುತ್ತವೆ.

ಬದುಕುವುದು ಅನ್ನ ನೀರಿನಿಂದಾದರೂ
ಬಾಳುವುದು ಬೆಳಕಿನಿಂದ;
ಬೆಳಕಿನ ಬಾಳೇ ಚೆಂದ!
ಬೆಳಕಾಗಿ ಬೆಳಕಿನ ಬೆಳಕು
ಸ್ವತಂತ್ರಧೀರ ಸಿದ್ಧೇಶ್ವರ ಅಪ್ಪಿರಯ್ಯ"
(ವ.೧೯೭)

ಎಂದು ಬೆಳಕಿನ ಬದುಕನ್ನು ಎತ್ತಿ ಹಿಡಿಯುತ್ತಾರೆ. ಅದನ್ನು ಸಾಧಿಸುವ ನಿಷ್ಠೆಯನ್ನೇ ಉದ್ದಕ್ಕೂ ಪ್ರತಿಪಾದಿಸುತ್ತಾರೆ.

ವಾಸ್ತವವಾಗಿ ಇಂತಹ ಬದುಕು ಬೋಧಿಸುವುದಕ್ಕಲ್ಲ. ಪ್ರತಿವಾದಿಸುವುದಕ್ಕಲ್ಲ; ಸಾಧಿಸಿ ತೋರುವುದರಲ್ಲಿ ಇದರ ಸಾರ್ಥಕತೆಯಿದೆ. ಸದ್ದುಗದ್ದಲಗಳಿಂದ, ಎತ್ತರವಾದ ಘೋಷಣೆಗಳಿಂದ, ಆಡಂಬರದ ಅಬ್ಬರಗಳಿಂದ ಇದು ಸಾಧ್ಯವಾಗುವುದಿಲ್ಲ. "ಬೇರುಗಳು ಸದ್ದಿಲ್ಲದೆ ಸಾರ ಹೀರಿ ಮರಕ್ಕೆ ಒದಗಿಸುವಂತೆ, ಮನೆಯ ದೀಪ "ಸದ್ದುಗದ್ದಲ ಗಡಿಬಿಡಿಗಳಿಲ್ಲದೆ" ಬೆಳಕು ಬೀರುವಂತೆ! ಹೃದಯ "ಏಕನಿಷ್ಠೆಯಿಂದ ಕರ್ತವ್ಯಪ್ರಜ್ಞೆಯೊಡನೆ" ಮಿಡಿಯುತ್ತಿರುವಂತೆ–

"ಜಗದ ಜಂಜಾಟಗಳಲ್ಲಿಯೂ
ನೀರವವಾಗಿ ನಿನ್ನ ನೆನೆಯುತ್ತ,
ನೀನಿತ್ತ ಕಾಯಕವ ನಿರ್ವಹಿಸುವ
ನಯಜ್ಞತೆಯ ನೀಡಾ–
ಸ್ವತಂತ್ರಧೀರ ಸಿದ್ಧೇಶ್ವರಾ"

(ವ.೬೧)

ಎಂಬ ಮಾತು ಬದುಕಿನ ದೃಷ್ಟಿಯನ್ನು ಕೊಡುತ್ತದೆ. "ದೃಷ್ಟಿಯಿಂತೆ ಸೃಷ್ಟಿ" ಎಂಬ ಮಾತಿನ ರಹಸ್ಯವನ್ನು ಇಲ್ಲಿ ಮನಗಾಣುತ್ತೇವೆ. ಕಾಯಕ ನಿಷ್ಠೆಯಲ್ಲಿಯೇ ದೇವನನ್ನು ಕಾಣುವ ವಚನ ಇದಕ್ಕೆ ಒಳ್ಳೆಯ ಉದಾಹರಣೆ:

ಕೊನೆಗೊಮ್ಮೆ ಕಂಡೆನಯ್ಯ ನಿನ್ನನ್ನು!
ಮಠ ಮಂದಿರಗಳಲ್ಲಿ ಅಲ್ಲ,
ಇಗರ್ಜಿ ಮಸೀದಿಗಳಲ್ಲಿ ಅಲ್ಲ,
ವಿಹಾರ ಬಸದಿಗಳಲ್ಲಿ ಅಲ್ಲ,
ಕ್ಷೇತ್ರ ತೀರ್ಥಗಳಲ್ಲಿ ಅಲ್ಲ–
ಬಡವನ ದೃಢಮನದ ದುಡಿಮೆಯಲ್ಲಿ,
ದುಃಖಿತರ ಕಂಬನಿ ತೊಡೆವರಲ್ಲಿ,
ನಿಜಭಕ್ತರ ನೀರವ ಪ್ರಾರ್ಥನೆಯಲ್ಲಿ,
ತಾಯಿಯ ಪರಿಶುದ್ಧ ಪ್ರೀತಿಯಲ್ಲಿ,
ಮಗುವಿನ ನಗೆ ನಯನ ದೀಧಿತಿಯಲ್ಲಿ

(ವ.೬೫)

ಎಂದು ಮುಂತಾಗಿ ಬೆಳೆಯುವ ಈ ವಚನ ಶ್ರೀ ಪುರಾಣಿಕರ ಬದುಕಿನ ಸಮಗ್ರ ಕಲ್ಪನೆಯನ್ನು ಪ್ರತಿಬಿಂಬಿಸಿದೆ. "ಏನನ್ನು ಕಂಡರೂ ಈ ಲೋಕದಲ್ಲಿಯೇ ಕಾಣಬೇಕು" (ವ.೧೧೪) ಎಂಬ ಮಾತಾಗಲೀ, "ನಿನ್ನ ಈ ವಸುಂಧರೆ ಸೌಂದರ್ಯದ ತೊರೆ, ಆದರೂ ಕಾಲ್ಪನಿಕ ಸ್ವರ್ಗಕ್ಕಾಗಿ ಹಪಹಪಿ ನನಗೆ" ಎಂಬ ಆತ್ಮವಿಶ್ಲೇಷಣೆಯಾಗಲೀ ಈ ಲೋಕಜೀವನವನ್ನು ಕುರಿತು ಶ್ರದ್ಧೆಯನ್ನು ಎತ್ತಿಹಿಡಿಯುತ್ತವೆ.

ಈ ಲೋಕವನ್ನು ತೆರೆದ ಕಣ್ಣಿಂದ ನೋಡಿದ ಲೋಕಾನುಭವ ಇಲ್ಲಿನ ವಚನಗಳಲ್ಲಿ ಉದ್ದಕ್ಕೂ ಕಂಡುಬರುತ್ತದೆ. ಮಾನವ ಸ್ವಭಾವ ಅದೆಷ್ಟು ವಿಚಿತ್ರವಾದುದೆಂಬುವನ್ನು ಅನೇಕ

ವಚನಗಳು ಚಿತ್ರಿಸುತ್ತವೆ. ಆತ ದೈವಿಕವಾದ ಶಕ್ತಿಯುಳ್ಳವನು; ತಾನೇ ಅದಾಗಬೇಕೆಂಬ ಆಂತರಿಕ ಅಭೀಪ್ಸೆಯುಳ್ಳವನು ನಿಜ. ಆದರೆ ಆ ಭಾವ ಎಚ್ಚರಗೊಳ್ಳುವ ಮುನ್ನಿನ ಮತ್ತು ಎಚ್ಚರಗೊಂಡ ಮೇಲೂ ಆತ ವರ್ತಿಸುವ ಡಾಂಭಿಕ ಬಗೆಗಳನ್ನು ಕಂಡು ಅಚ್ಚರಿಗೊಂಡಿದ್ದಾರೆ. ಒಮ್ಮೊಮ್ಮೆ ಇತರ ಪ್ರಾಣಿಗಳಿಗಿಂತಲೂ ಆತ ಕೆಳಮಟ್ಟಕ್ಕೆ ಇಳಿಯುತ್ತಾನೆ; ಈ ವಚನವನ್ನು ನೋಡಿ :

"ಹಲವೆಡೆಯ ಹಕ್ಕಿಗಳು ಹೆಮ್ಮರವೊಂದನ್ನು ಸೇರಿ

ತುಸುಹೊತ್ತು ಚಿಲಿಪಿಲಿ ಸ್ವರಗೈದು

ಮತ್ತೆ ಚೆದುರಿಹೋದಂತೆ ಈ ಸಂಸಾರ – ಎಂಬರಯ್ಯ !

ಹಕ್ಕಿಗಳ ಹೆಸರು ಕೆಡಿಸುವ ಹೋಲಿಕೆಯಿದು!

ಇರುವಷ್ಟು ಸಮಯ ಸವಿಯಾಗಿ ಹಾಡುತ್ತವೆ;

ಇದ್ದಷ್ಟು ಹಣ್ಣುಗಳ ಗುದ್ದಾಡದೆ ಸವಿಯುತ್ತವೆ;

ವಿರೋಧವಿಲ್ಲದೆ ಕೂಡಿ, ಕಲಹವಿಲ್ಲದೆ ಆಡಿ,

ಮಾದರಿ ಗೆಳೆತನ ಮಾಡಿ, ಹೋಗುತ್ತವೆ ಹಕ್ಕಿಗಳು!

ಇಂಥ ಹಕ್ಕಿಗಳಿಗೆ ಹೋಲಿಸುವುದೆ

ಕಾದಾಡುವ, ಕಚ್ಚಾಡುವ, ಕಿತ್ತುತಿನ್ನುವ ನರರ–

ಸ್ವತಂತ್ರಧೀರ ಸಿದ್ಧೇಶ್ವರ?"

(ವ.೨೨೯)

ಈ ಮಾತಿನ ಹಿಂದಿರುವ ಆಶಯವನ್ನು ಗಮನಿಸಲೇಬೇಕು. "ಸಂಪಿಗೆಯ ಕಂಪು ಮಾತ್ರ ಸೇರದಂತೆ ದುಂಬಿಗೆ! ಆದರೆ ಯಾವ ಕಂಪೂ ಸೇರದಯ್ಯ ಕೆಲವು ದುರ್ಗಂಧಪ್ರಿಯ ನರರಿಗೆ" (ವ.೧೮೯) ಎನ್ನುವ ಮಾತಿನಲ್ಲಿ ಒಳಿತನ್ನೆಲ್ಲಾ ನಿರಾಕರಿಸಿ ಕೆಡುಕನ್ನೇ ಹುಡುಕುವವರನ್ನು ಕಂಡು ಮರುಗುತ್ತಾರೆ. "ದೊರೆಯ ದರ್ಪವನ್ನು ಹೇಗೋ ಸೈರಿಸಬಹುದು, ದ್ವಾರಪಾಲಕನ ದರ್ಪವನ್ನು ಸಹಿಸುವುದೇ ಕಷ್ಟವಯ್ಯ" (ವ.೧೬೬), ಮತ್ತು "ನೆಪ ಹುಡುಕಿ ಹಣ್ಣಿನ ರಸ ಕುಡಿಸುವವರ ಕಟ್ಟಿಕೊಂಡೇ ಆಮರಣ ಉಪವಾಸ ಪ್ರಾರಂಭಿಸುವರು" (ವ.೧೬೭), ಈ ಮಾತುಗಳಲ್ಲಿ ಅಜ್ಞಾನಿಯ ಅಹಂಕಾರವನ್ನು, ಹಿಕ್ಮತ್ತುದಾರರ ಡಂಭಾಚಾರವನ್ನು ಬಯಲಿಗೆಳೆದಿದ್ದಾರೆ. ಇನ್ನೊಂದು ಕಡೆ ಸಿರಿಗರ ಹೊಡೆದವರನ್ನು ಕುರಿತು:

ಅರಗಿನ ಅರಮನೆಯಿಂದಲೂ ಪಾರಾದರು ಪಾಂಡವರು,

ಅರಮನೆಗಳಂಥ ಭವನಗಳಲ್ಲಿದ್ದೂ

ಉರಿಯಿಲ್ಲದೆ ಉರಿಯುತ್ತಿದ್ದಾರೆ ಇಂದಿನ ಸಿರಿವಂತರು!

ಸಿರಿಯು ಹೆಚ್ಚಿದಂತೆ ಉರಿಯೂ ಹೆಚ್ಚಿದೆ:

ಅಮೃತದ ತೇಗಿನಲ್ಲಿಯೇ ಅತೃಪ್ತಿಯ ರೊಚ್ಚೆಯಿದೆ"

(ವ.೧೮೭)

ಎಂದು ಮುಂತಾಗಿ ಹೇಳುವ ಮಾತುಗಳಲ್ಲಿ ತೀರದ ದಾಹ, ಬೆಂಕಿಯಾಗಿ ಉರಿಯುತ್ತಿರುವ ಚಿತ್ರವಿದೆ. "ದಕ್ಕಿದುದೆಲ್ಲ ಪುಣ್ಯ, ಕಕ್ಕಿದುದೇ ಪಾಪ; ಸ್ವಾರ್ಥವೇ ಪರಮಾರ್ಥ, ಪರಹಿತವೇ ಅನರ್ಥ" (ವ.೧೮೯) ಎಂಬಂತಹ ಮನೋಧರ್ಮ ಬೆಳೆಯುವುದು ಈ ದಾಹದಿಂದಲೇ. "ಕಚ್ಚಿ ವಿಷವೇರಿಸುವ ಹಾವೆ, ಕಚ್ಚದೆ ವಿಷವೇ–ರಿಸುವ ಮನುಜನ ಬಗ್ಗೆ ಎಚ್ಚರಿಕೆ!" (ವ.೧೯೦) ಎಂಬುದು ಈ ಮಾನವನಲ್ಲಿರುವ ದೈತ್ಯಸ್ವಭಾವಕ್ಕೆ ಕನ್ನಡಿ ಹಿಡಿಯುತ್ತದೆ. "ಗೋಮುಖ ವ್ಯಾಘ್ರಗಳಿವೆ. ಹುಲಿಯಾಗ ಬಯಸಿ ಮೈಸುಟ್ಟುಕೊಂಡ ನರಿಗಳಿವೆ" ಎಂದು ಮುಂತಾಗಿ ಹೇಸರಕತ್ತೆಗಳು, ಬೊಗಳೆ ನಾಯಿಗಳು, ಕುರಿ, ತೋಳ, ಕೋಣ, ಬಕ, ಮೊಸಳೆ ಮೊದಲಾದ ಪ್ರಾಣಿಗಳೆಲ್ಲಾ ಮಾನವ ಸ್ವಭಾವದಲ್ಲಿ ಮನೆಮಾಡಿರುವುದನ್ನು ಹೇಳುತ್ತ ಕೊನೆಯಲ್ಲಿ;

"ಎಂಥ ವಿಲಕ್ಷಣ ಪ್ರಾಣಿಶಾಲೆಯಯ್ಯ ಇದು?

ನೀನು ನಿರ್ಮಿಸಿದ ಈ ಪ್ರಾಣಿಶಾಲೆಯ ಮುಂದೆ

ನಾವು ನೆಲೆಗೊಳಿಸಿರುವುದು

ಜುಜುಬಿ ಪ್ರಾಣಿಶಾಲೆಗಳಲ್ಲವೇನಯ್ಯಾ

ಸ್ವತಂತ್ರಧೀರ ಸಿದ್ಧೇಶ್ವರಾ"

(ವ.೨೪೨)

ಎಂದು ಉದ್ಗಾರವನ್ನು ತೆಗೆಯುತ್ತಾರೆ. ಮಾನವ ಸ್ವಭಾವದ ಈ ಮುಖವನ್ನು ಕಂಡು ಮರುಗುತ್ತಾರೆ. ಇದರಿಂದ ಮೇಲೇರುವ ಎಚ್ಚರಿಕೆಯ ಧ್ವನಿ "ನರನಾಗಿಯೂ ಹಿತಾಹಿತ ವಿವೇಕ ಇಲ್ಲದವ ಪಶುಪಕ್ಷಿಗಿಂತ ಕಡೆಯಯ್ಯಾ" (ವ.೧೭೩) ಎಂಬಂತಹ ಮಾತುಗಳಲ್ಲಿ ಉದ್ದಕ್ಕೂ ಕಂಡುಬರುತ್ತದೆ.

ಹೀಗೆ ಲೋಕಜೀವನದ ಬಹುಮುಖವನ್ನೂ, ಮಾನವ ಸ್ವಭಾವದ ವೈಪರೀತ್ಯಗಳನ್ನೂ ಕಾಣುವ ಮನಸ್ಸು ಸಹಜವಾಗಿಯೇ ವಿಚಾರಶೀಲವಾಗುತ್ತದೆ. ಶ್ರೀ ಪುರಾಣಿಕರ ವಚನಗಳಲ್ಲಿ ಕಾಣುವ ಬಹಳ ಮುಖ್ಯವಾದ ಗುಣ ವೈಚಾರಿಕತೆ. ಕೇವಲ ಭಕ್ತಿಯ ಭಾವುಕತೆಯಲ್ಲಿ ಕರಗಿಹೋಗುವುದಿಲ್ಲ. ಅಂತೆಯೇ ಯಾವುದೋ ಆದರ್ಶದ ಪರಿಸರದಲ್ಲಿ ತನ್ಮಯವಾಗಿ ಇಲ್ಲಿನ ಕಟುಸತ್ಯಗಳನ್ನು ಕಡೆಗಣಿಸುವುದಿಲ್ಲ. ಸಮಕಾಲೀನ ಸಮಾಜದಲ್ಲಿ ವಿಚಾರದ ನೆಲೆಗಟ್ಟಿನ ಮೇಲೆ ನಿಂತು ತಮ್ಮ ಅನುಭವದ ಕ್ಷಕಿರಣಗಳನ್ನು ಬೀರುತ್ತಾರೆ. ಆದ್ದರಿಂದಲೇ ಇಲ್ಲಿ ವೈಚಾರಿಕ ಮತ್ತು ಸಾಮಾಜಿಕ ಪ್ರಜ್ಞೆಗಳು ದಟ್ಟವಾಗಿ ಮೈವೆತ್ತಿವೆ. ಈ ೨೦ನೇ ಶತಮಾನದ

ವೈಜ್ಞಾನಿಕ ಸಾಧನೆಗಳನ್ನು ಬಲ್ಲ ಮತ್ತು ತಾತ್ವಿಕ ಚಿಂತನದಿಂದ ಶ್ರೀಮಂತವಾದ ವಿಚಾರವಂತ ಮನಸ್ಸು ಪ್ರಾಚೀನ ವಚನ ಮಾಧ್ಯಮವನ್ನು ಹೇಗೆ ವಿಚಾರಶೀಲವಾಗಿಸಬಹುದೆಂಬುದಕ್ಕೆ ಅನೇಕ ಉದಾಹರಣೆಗಳು ಇಲ್ಲಿ ಸಿಕ್ಕುತ್ತವೆ. ಅದನ್ನು ದೀರ್ಘವಾಗಿ ಬೆಳಸದೆ ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಹೇಳಬಹುದು.

ವಿಚಾರವಂತಿಕೆಯ ಹೆಸರಿನಲ್ಲಿ ಪರಂಪರೆಯ ಸತ್ವವನ್ನೇ ನಿರಾಕರಿಸುವುದಿಲ್ಲ, ತಿರಸ್ಕರಿಸುವುದನ್ನು ಅವರು ಒಪ್ಪುವುದಿಲ್ಲ. ಅಂಧಸಂಪ್ರದಾಯಗಳು, ಅವಿಚಾರಿತ ಆಚಾರಗಳು ತಿರಸ್ಕರಣೀಯ. "ಮನಸ್ಸಿನ ದಾಸ್ಯ ಮಾಯವಾದಾಗ ಪರಿಸ್ಥಿತಿಯ ದಾಸ್ಯ ಮುಗಿದಂತೆ; ಅಂಧಾನುಸರಣೆ ಅಸ್ತವಾದಾಗ ವ್ಯವಸ್ಥೆಯ ಕೋಟೆ ಬಿರಿದಂತೆ, ಸ್ವತಂತ್ರ ವಿಚಾರಶಕ್ತಿ ವಿಕಸಿಸಿದಾಗ ಯಥಾಸ್ಥಿತಿವಾದ ಮೊಂಡೆಯೂರಿದಂತೆ" (ವ.೨೦೬) – ಮೊದಲಾದ ಮಾತುಗಳಲ್ಲಿ ಅವರ ವೈಚಾರಿಕ ನಿಲುವು ಸೂಚಿತವಾಗಿದೆ. ಆದರೆ ಅದು ಹಿಂದಿನದನ್ನು ಬಿಟ್ಟಿಲ್ಲ :

"ಬೇರುಗಳು ಭೂತಕಾಲ,<br>
ವೃಕ್ಷ ವರ್ತಮಾನ ಕಾಲ,<br>
ಬಿಡಲಿಹ ಹೂ–ಕಾಯಿ–ಹಣ್ಣುಗಳು<br>
ಭವಿಷ್ಯತ್ಕಾಲ ನೋಡಾ!<br>
ತನು ಭೌತವಾದಿ<br>
ಮನ ಪ್ರಜ್ಞಾವಾದಿ<br>
ಹೃದಯ ಮಾನವತಾವಾದಿ ನೋಡಾ!<br>
ಬಯಸಿದರೆ ಭೋಗ,<br>
ಬಯಸದಿರೆ ವಿರಾಗ,<br>
ತ್ಯಾಗಸಹಿತ ಭೋಗ ಯೋಗ ನೋಡಾ!<br>
ಸ್ವತಂತ್ರಧೀರ ಸಿದ್ಧೇಶ್ವರಾ,<br>
ನಿನ್ನನುಳಿದರೆ ರಕ್ತಿ,<br>
ನಿನ್ನನೊಲಿದರೆ ಭಕ್ತಿ<br>
ಭಕ್ತಿ ಕರಿಗೊಂಡುದೇ ಮುಕ್ತಿ ನೋಡಾ!"

(ವ.೨೦೫)

ಈ ವಚನ ಅವರ ವೈಚಾರಿಕ ದೃಷ್ಟಿಯನ್ನು ಅರ್ಥವತ್ತಾಗಿ ಸೂಚಿಸುತ್ತದೆ. ಭೂತ, ವರ್ತಮಾನ, ಭವಿಷ್ಯತ್ತುಗಳ, ತನು–ಮನ ಹೃದಯಗಳ, ರಕ್ತಿ ಭಕ್ತಿ ಮುಕ್ತಿಗಳ ವಿಚಾರಶೀಲ ಸಹಜ ಸ್ವರೂಪವನ್ನು ಧ್ವನಿಸುವ ಈ ವಚನ ಮನನೀಯವಾಗಿದೆ. "ಬದುಕಿನ ಬೇರುಗಳು ಅನೇಕ, ಬದುಕುವವರ ಕಾರುಬಾರುಗಳು ಅನೇಕ, ಬದುಕಿನ ಹೂರಣ ಒಂದೇ ಅಯ್ಯ ಒಟ್ಟು ನೋಟಕ್ಕೆ" (ವ.೨೦೭) ಎಂಬ ಮಾತೂ ಆ ಪರಿವರ್ತನೆಗೆ ಪೂರಕವಾಗುತ್ತದೆ. ವಿಚಾರ ಎನ್ನುವುದು "ವಿಷದ ಗುಳಿಗೆಗೆ ಸಕ್ಕರೆಯ ಒಪ್ಪಹಾಕಿ" ಕೊಡವಂತಾಗಬಾರದು (ವ.೨೧೧). ವಿವೇಕದಿಂದ ಒಳಿತು ಕೆಡಕುಗಳನ್ನು ಕಂಡುಕೊಳ್ಳುವುದೇ ವೈಚಾರಿಕತೆಯ ಲಕ್ಷಣ. ಈ ನಿಲುವಿನಲ್ಲಿ ಹಿಂದಿನ ಅನೇಕ ಅಂಧ ಸಂಪ್ರದಾಯಗಳನ್ನು ಖಂಡಿಸಿದ್ದಾರೆ. ಉದಾಹರಣೆಗೆ:

"ಹೋಮ ಹವನಗಳಿಗೆ ಸುರಿವ ತುಪ್ಪಕ್ಕಿಂತ
ಹಸಿದ ಹೊಟ್ಟೆಗಿತ್ತ ಹಳಸಿದನ್ನ ಪೂಜ್ಯ!
ಸ್ವತಂತ್ರಧೀರ ಸಿದ್ಧೇಶ್ವರನಾಣೆ ನಿಮಗೆ;
ಬೆಂಕಿಗೆ ಹೊಯ್ಯುವ ತುಪ್ಪವ
ಕಲ್ಲಿಗೆರೆಯುವ ಹಾಲ
ಕಾಗೆಗಿಕ್ಕುವ ಅನ್ನವ
ಹಸಿದವರಿಗೆ ನೀಡಿ ಧನ್ಯರಾಗಿರಯ್ಯ!"
(ವ.೨೩೬)

ಎಂದು ಕಳಕಳಿಯಿಂದ ಕೇಳಿಕೊಳ್ಳುವ ಈ ಮಾತಿನಲ್ಲಿ ಅರ್ಥರಹಿತ ಆಚಾರಗಳನ್ನು ತಿರಸ್ಕರಿಸುವ ದಿಟ್ಟತನವೂ ಇದೆ.

ಈ ವೈಚಾರಿಕ ಪ್ರಜ್ಞೆಯಂತೆ ಸಾಮಾಜಿಕ ಮತ್ತು ಮುಖ್ಯವಾಗಿ ಸಮಕಾಲೀನ ಸಮಸ್ಯೆಗಳನ್ನು ಅವರು ನೋಡುವ ದೃಷ್ಟಿಯೂ ಅಷ್ಟೇ ಹರಿತವಾಗಿದೆ, ಖಚಿತವಾಗಿದೆ. ಇದು ಇವರ ವಚನಗಳಲ್ಲಿ ಕಂಡುಬರುವ ಅನುಭವದ ಅಭೀಪ್ಸೆಯಂತೆಯೇ ಬಹಳ ಮುಖ್ಯವಾದ ಇನ್ನೊಂದು ಅಂಶ. ಅವರ ಆಧ್ಯಾತ್ಮಿಕ ದೃಷ್ಟಿ ಸಮಾಜಕ್ಕೆ ಅವರನ್ನು ಕುರುಡನ್ನಾಗಿಸಿಲ್ಲ. ಇಲ್ಲಿನ ಒಳಿತುಕೆಡಕುಗಳಿಗೆ, ಏರುಪೇರುಗಳಿಗೆ, ಅಸಮತೆ, ವಿಷಮತೆ, ವೈಪರೀತ್ಯಗಳಿಗೆ ಮಿಡಿದಿದೆ ಮತ್ತು ಅದನ್ನು ತೊಡೆಯುವ ಅನುಕಂಪೆಯ ಮಿಡಿತದಿಂದ ಕೂಡಿದೆ. ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ, ಆರ್ಥಿಕ, ಸಾಮಾಜಿಕ ಬದಲಾವಣೆಗಳು ಕವಿಪ್ರಜ್ಞೆಯ ಪರಿಭಾವನೆಗೆ ಒಳಗಾಗಿ ಹಲವಾರು ಸ್ವರಗಳಲ್ಲಿ ಪ್ರತಿಕ್ರಿಯೆಯನ್ನು ಪಡೆದಿವೆ. ನಮ್ಮ ಪ್ರಜಾಪ್ರಭುತ್ವದ ಸ್ವರೂಪವನ್ನು ಕುರಿತು "ಐದುನೂರು ಕಿರೀಟಧಾರಿ ಕಳ್ಳರ ಕೊನೆಗಾಣಿಸಿ, ಐದು ನೂರು ಸಾವಿರ ಕಳ್ಳರನ್ನು ಹುಟ್ಟಿಸಿಕೊಂಡೆವಯ್ಯ" ಎಂದು ಪ್ರಾರಂಭವಾಗುವ ವಚನ ಬಿಳಿಯ ಬ್ಯೂರಾಕ್ರೆಟರನ್ನು ತೊಲಗಿಸಿ ಕರಿಯ ಬ್ಯೂರಾಕ್ರೆಟರ ಶನಿಸಂತಾನವನ್ನು ಪಡೆದುಕೊಂಡುದನ್ನು ಹೇಳುತ್ತಾ ಕೊನೆಯಲ್ಲಿ;

"ಮನೆಯಲ್ಲಿ ಬಡತವನ್ನು ಕಳೆಯಹೋಗಿ
ಮನದ ಬಡತನವನ್ನು ತಂದುಕೊಂಡೆವಯ್ಯ;

ಬೆನಕನ ಮಾಡ ಹೋಗಿ ಬೇತಾಳವ,
ಹನುಮನ ಮಾಡಹೋಗಿ ಹಿಮಮಾನವನ
ಮಾಡಿಕೊಂಡೆವಯ್ಯ;
ಸ್ವತಂತ್ರಧೀರ ಸಿದ್ಧೇಶ್ವರಾ,
ನಿನ್ನುಳಿದು ಹೊನ್ನ ಬೆಳಸ ಹೊರಟು
ಬನ್ನಗಳನ್ನೇ ಬೆಳೆದುಕೊಂಡವಯ್ಯ!"

(ವ.೨೬೪)

ಎನ್ನುವ ಈ ಮಾತು ನಮ್ಮ ಇಂದಿನ ವ್ಯವಸ್ಥೆಯ ಮುಖಕ್ಕೆ ಕನ್ನಡಿ ಹಿಡಿದಿದೆ. "ಪ್ರಜಾಪ್ರಭುತ್ವ ಬಂದರೇನಂತೆ ಪ್ರಜಾಪ್ರಭುತ್ವ ಬರಲಿಲ್ಲವಯ್ಯ! ಕುರಿಗಾಹಿಗಳು ಬದಲಾದರೂ ಕುರಿಗಳು ಬದಲಾಗಲಿಲ್ಲ" (೨೭೮) ಎನ್ನುವ ಮಾತು ಮತ್ತೆ ಮತ್ತೆ ಮೆಲುಕುಹಾಕುವಂತಹುದು. ನಮ್ಮ ಬಹುಪಾಲು ಜನನಾಯಕರನ್ನು ಕುರಿತು ಹೀಗೆ ಹೇಳುತ್ತಾರೆ:

"ಹಿಂದೆ ಜನಾಧಿಪರ ಸುತ್ತ ವಂದಿ ಮಾಗಧರಿದ್ದರಂತೆ,
ಇಂದು ಜನನಾಯಕರ ಸುತ್ತಲೂ ಹೊಗಳುಭಟ್ಟರು ನೋಡಾ!
ಆಳಿಕೆ ಬದಲಾದರೂ ಆಳುತನ ತೊಲಗಲಿಲ್ಲ;
ಭಟ್ಟಂಗಿತನ ಬಾಲಬಡಿಕತನ ನಿಲ್ಲಲಿಲ್ಲ!"

(ವ.೨೭೯)

ಎಂದು ಮುಂತಾಗಿ ಮುಂದುವರಿದು ಹೆಂಡದ ತೀರ್ಥ, ಹಣದ ಪ್ರಸಾದ ಸಿಕ್ಕುವುದೆಂದರೆ "ಅಮೇಧ್ಯದ ಮೂರ್ತಿಗಳ ಮುಂದೂ ದಿಂಡುರುಳಲು ಹೇಸದ ಭಂಡ"ರನ್ನು ಬಯಲಿಗೆಳೆಯುತ್ತಾರೆ. ಯಾವ ನಿಯಮನಿಷ್ಠೆಗಳಿಗೂ ಬದ್ಧವಲ್ಲದ ಈ ಜನ "ಬೈದರೆ ತಮ್ಮ ಬೇಳೆ ಬೇಯುತ್ತಿದ್ದರೆ ಬೈಯುತ್ತಾರೆ, ಹೊಗಳಿದರೆ ಹೋಳಿಗೆ ತುಪ್ಪದಲ್ಲಿ ಬೀಳುತ್ತಿದ್ದರೆ ಹೊಗಳುತ್ತಾರೆ" (ವ.೨೮೦) ಎಂದು ಎರಡಕ್ಕೂ ಕಿಚ್ಚು ಹಚ್ಚಬೇಕೆಂದು ಕೆರಳಿ ನುಡಿಯುತ್ತಾರೆ. ಇಷ್ಟು ಜನ ಆಷಾಢಭೂತಿಗಳು, ಮುಖವಾಡಧಾರಿಗಳು, ಕುಟಿಲರು, ಕಪಟಿಗಳು, ಕಾರಸ್ಥಾನಿಗಳು, ಕಾಟುಗರು, ಕೆತ್ತುಗರು, ಇನ್ನಾವ ದೇಶದಲ್ಲಿದ್ದಾರೆಂದು ನೊಂದು ನುಡಿಯುತ್ತಾರೆ. ಲಂಚ, ಸಂಚು, ವಂಚನೆಗಳೇ ಇಂದಿನ ಮೌಲ್ಯಗಳಾಗಿರುವುದನ್ನು ಕಂಡು ನಿಟ್ಟುಸಿರಿಡುತ್ತಾರೆ.

"ಒಬ್ಬ ನಿರೋನಿಂದ ರೋಮನಗರದ ರೋಮ ರೋಮ ತಲ್ಲಣಿಸಿತು.
ಭಾರತದಲ್ಲಿಂದು ಊರೂರಿಗೂ ನೀರೋಗಳಯ್ಯ"

(ವ.೨೮೪)

ಅಷ್ಟೇ ಅಲ್ಲ, ಊರೂರಿಗೂ ಶಿಖಂಡಿಗಳು, ತೊಘಲಖರು, ದರೋಡೆಕಾರರು ಸಿಕ್ಕುತ್ತಾರೆ. ಆರ್ಥಿಕ ಕ್ಷೇತ್ರದ ರಣಹದ್ದುಗಳು ಸಿಕ್ಕುತ್ತವೆ (೨೯೨). ನೈತಿಕ ದಿವಾಳಿಯ ಶನಿಸಂತಾನ ಕಾಣುತ್ತದೆ (೨೯೪), ಲಂಚ ಸುಲಿಗೆ, ವ್ಯಭಿಚಾರ, ಕುಡಿತ ಮೊದಲಾದುವು ಗೌರವಾಸ್ಪದವಾಗುತ್ತ ನಡೆದಿರುವ ದುರಂತ ಕಾಣುತ್ತದೆ. (೨೯೫), ಜಾತಿಯ ಭೂತ ಹುಚ್ಚೆದ್ದು ಕುಣಿಯುತ್ತದೆ

(೨೭೩, ೨೮೩). ಇದರ ನಗ್ನ ಚಿತ್ರವನ್ನು ಸುಮಾರು ಮಾತುಗಳಲ್ಲಿ ಪಡಿಮೂಡಿಸಿದ್ದಾರೆ. ಅಲ್ಲಿ ಕಾಣುವುದು ಮಾತಿನ ಚಮತ್ಕಾರವಲ್ಲ. ಎಂತಹ ದೇಶ ಹೇಗಾಯಿತಲ್ಲ! ಎಂದು ನೊಂದು ಹೊರ ಹೊಮ್ಮಿಸುವ ನಿಟ್ಟುಸಿರಿನ ಬಿಸಿ ತಟ್ಟುತ್ತದೆ. ಇದನ್ನೇ ಸ್ವತಂತ್ರವಾಗಿ ವಿವೇಚಿಸುವಷ್ಟು ದಟ್ಟವಾಗಿ, ಸಾಂದ್ರವಾಗಿ, ತೀವ್ರವಾಗಿ ಇಲ್ಲಿ ಸಮಕಾಲೀನ ಪ್ರಜ್ಞೆಯ ಪ್ರಭೆ ಉರಿಯುತ್ತದೆ. ಕೃತಿಯ ಉತ್ತರಾರ್ಧದ ಬಹುಭಾಗವನ್ನು ಇದು ವ್ಯಾಪಿಸಿರುವುದನ್ನು ಕಾಣಬಹುದು. ಅದನ್ನೆಲ್ಲಾ ಉದಾಹರಿಸಲು ತೊಡಗದೆ ಈ ಒಂದು ಮಾತಿನಿಂದ ಇದನ್ನು ಮುಕ್ತಾಯಗೊಳಿಸಬಹುದು:

"ಇಂದು ಸಮಸ್ತ ಹಿಂದೂಸ್ಥಾನವೇ
ಹಿರಿಯ ಹರಾಜುಖಾನೆ!
ಎಲ್ಲವೂ ಎಲ್ಲರೂ ಹರಾಜಿಗಿಲ್ಲಿ
ಏನೂ ಸಿಕ್ಕದು ಮುಲಾಜಿಗಿಲ್ಲಿ !
ರಾಷ್ಟ್ರಪತಿಯ ಅಂತಃಸಾಕ್ಷಿ ಹರಾಜಿಗಿದೆ,
ಪ್ರಧಾನಿಯ ಪ್ರಸಾದ ಹರಾಜಿಗಿದೆ,
ಮಂತ್ರಿಗಳ ರುಜುವಾತುಗಳು ಹರಾಜಿಗಿವೆ,
ಶಾಸಕರ ಶಿಫಾರಸುಗಳು ಹರಾಜಿಗಿವೆ.
ಜನರ ಮಾನಪತ್ರಗಳು ಹರಾಜಿಗಿವೆ,
ಶಿಶುವಿಹಾರದಿಂದ ವಿಶ್ವವಿದ್ಯಾಲಯದವರೆಗೆ
ಪ್ರವೇಶಗಳು ಹರಾಜಿಗಿವೆ,
ಲೋಕಸೇವಾ ಆಯೋಗದ ನೇಮಕಾತಿಗಳು ಹರಾಜಿಗಿವೆ!
ಎಲ್ಲಕ್ಕೂ ಸರಕಾರಿ ಸವಾಲು,
ಇದು ಓಪೆನ್-ಟು ಆಲ್ ಲಿಲಾವು!
ಏಕ್ ಬಾರ್, ದೋ ಬಾರ್, ತೀನ್ ಬಾರ್ –
'ಬಿಡ್' ಬೆಸಸು,
ಸ್ವತಂತ್ರಧೀರ ಸಿದ್ಧೇಶ್ವರಾ!"

(ವ.೨೯೩)

ದೇಶದ ಎಲ್ಲ ರಂಗಗಳಲ್ಲಿ ನಡೆಯುವ ಹರಾಜುಖಾನೆಯ ನಗ್ನನರ್ತನದ ರುದ್ರ ದೃಶ್ಯ ಇಲ್ಲಿ ಮೂಡಿದೆ. ಇವುಗಳಲ್ಲಿ ಒಂದೊಂದನ್ನು ಬೇರೆ ಬೇರೆ ವಚನಗಳಲ್ಲಿ ಅನೇಕ ರೀತಿಯಲ್ಲಿ ತೋಡಿಕೊಂಡಿದ್ದಾರೆ. "ಇವುಗಳ ಮೇಲಾಟದಲ್ಲಿ ದೇಶವಾಯ್ತು ಹೆಣ"– ಎಂದು ಮರುಗಿದ್ದಾರೆ. ಇದರಿಂದ ದೇಶವನ್ನು ಪಾರುಮಾಡುವ ಶಕ್ತಿಗಾಗಿ ಹಾರೈಸಿದ್ದಾರೆ. ಅದಕ್ಕೆ ಕಾರಣವಾಗುವ ಮೂಲಭೂತ ಮಾನವೀಯ ಮೌಲ್ಯಗಳ ಕಡೆಗೆ ಸಮಷ್ಟಿ ಮನಸ್ಸನ್ನು ತಿರುಗಿಸಲು ಈ ವಚನಗಳ ಮೂಲಕ ಹೆಣಗಿದ್ದಾರೆ: ಕೃತಿಯ ಕೊನೆಯಲ್ಲಿ ಬರುವ ಪ್ರಾರ್ಥನೆ ಹೀಗಿದೆ:

"ಮನೆ ಮನೆಯ ವನಗಳಲ್ಲಿ
ಮನಸುಮಗಳು ಅರಳಲಿ;
ಮನಸುಮಗಳ ಎದೆಗಳಿಂದ
ಸ್ನೇಹಬಿಂದು ಉರುಳಲಿ;
ಸ್ನೇಹವೇ ಸಹಕಾರವಾಗಿ
ಸ್ವಪರ ಸುಗತಿ ಮರಳಲಿ;
ಸುಗತಿಯು ಸಂಸ್ಕೃತಿಯ ಗಳಿಸಿ
ಕಾಡುತನವು ತೆರಳಲಿ;
ಸ್ವತಂತ್ರಧೀರ ಸಿದ್ಧೇಶ್ವರಾ,
ನರರ ಚಿತ್ತವೃತ್ತಿ ಮಾಗಿ
ನರರು ನರರಿಗೆ ನೆರವಾಗಿ
ನರೋತ್ತಮ ಕುಲವು ಅಲರಲಿ!"

(ವ.೪೭೫)

ಈ ಪ್ರಾರ್ಥನೆಯೊಡನೆ ಅವರ 'ವಚನ ನಂದನ'ದ ಕೊನೆಯ ಫಲವನ್ನು ಸವಿದು ಹೊರಗೆ ಬರುತ್ತೇವೆ.

'ವಚನೋದ್ಯಾನ'ದಲ್ಲಿ ಪಡೆದ ಅನುಭವ ಇಲ್ಲಿ ಇನ್ನೂ ಮುಂದುವರಿದು ಆಂತರಿಕ ಪರಿಭಾವನೆಯ ನಿಲುವಿನ ಕಡೆಗೆ ನಡೆಯುತ್ತದೆ. ಬಹುಶಃ ಅಲ್ಲಿ ಸೇರಿಸದೇ ಇದ್ದ ವಚನಗಳನ್ನೆಲ್ಲ ಸೇರಿಸಿ ಇದನ್ನು ತಂದಿರಬಹುದೆಂಬ ಭಾವನೆಯೇನಾದರೂ ಸುಳಿದರೆ ಇದನ್ನು ಓದಲು ತೊಡಗುತ್ತಿದ್ದಂತೆಯೇ ಆ ಭಾವನೆ ಕರಗಿಹೋಗುತ್ತದೆ. ಇಲ್ಲಿನ ಒಟ್ಟು ವಿನ್ಯಾಸ ಅದೇ ಆದರೂ ಅವುಗಳ ಬೆಳವಣಿಗೆಯಲ್ಲಿ, ಪರಿಮಳದಲ್ಲಿ, ರುಚಿಯಲ್ಲಿ, ಹೊಸ ಹೊಸ ಸೊಗಸು, ಸೌಂದರ್ಯ, ಪುಷ್ಟಿತುಷ್ಟಿಗಳು ಗೋಚರವಾಗುತ್ತವೆ. ಅವು ಸಹೃದಯರ ಮನಸ್ಸನ್ನು ಮುಟ್ಟಿ ಹೃದಯವನ್ನು ಅರಳಿಸುತ್ತವೆ, ಮೂಲಭೂತವಾದ ಮೌಲ್ಯಗಳ ಅನುಭಾವಿಕ ಸ್ಪರ್ಶದಿಂದ. ಇಂದಿನ ಜೀವನದ ಓರೆಕೋರೆಗಳ ವಿಕೃತಿ ವೈಪರೀತ್ಯಗಳನ್ನು ಸನ್ಮಾರ್ಗದಿಂದ ಶಿವಪಥಕ್ಕೆ ತಿರುಗಿಸುವ ಈ 'ವಚನ ನಂದನ' ರಾಜೋದ್ಯಾನದಲ್ಲಿ ತಿರುಗಾಡಿದವರಿಗೆ ದೈವಿಕವಾದ 'ಇಂದ್ರ ನಂದನ'ದ ಅನುಭವವನ್ನು ತಂದುಕೊಡುತ್ತದೆ.

ಪುರಾಣಿಕರು ವಚನ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಅವರ ಸರಳ, ನೇರ ಮತ್ತು ಅನುಭವಪೂರ್ಣವಾದ ವಚನಶೈಲಿ ಈಗಾಗಲೇ ಸುಪರಿಚಿತವಾಗಿದೆ. ಅದು ಎಲ್ಲಿಯೂ ಆವೇಶದಿಂದ ಭೋರ್ಗರೆಯುವುದಿಲ್ಲ. ಚಮತ್ಕಾರದ ಪ್ರದರ್ಶನಕ್ಕಿಳಿಯುವುದಿಲ್ಲ. ಅನುಭವವಾಹಕವಾಗುವಂತೆ ಸಹಜವಾದ, ಧ್ವನಿಪೂರ್ಣವಾದ, ಉಕ್ತಿಗಳೂ ವಾಕ್ಯವಿನ್ಯಾಸಗಳೂ ಮೈವೆತ್ತು ವಚನಶಿಲ್ಪ ಸಹಜವಾಗಿ ರೂಪುಗೊಳ್ಳುತ್ತದೆ. ಆಗಾಗ ಬಂಧ ಸಡಿಲವಾಗಿ ನಿರೂಪಣೆ ಜಾಳು ಜಾಳಾದಂತೆ ಅನಿಸುವುದೂ ಉಂಟು. ಆದರೆ ಅನುಭವದ ತೀವ್ರತೆ ಕಳಕಳಿಗಳು

ಮನವನ್ನು ಮಿಡಿದಾಗ ಅದಕ್ಕನುಗುಣವಾಗಿ ಭಾಷೆಯು ಮಿಡಿದು ಆ ಕೊರತೆಯನ್ನು ಒರೆಸಿಹಾಕುತ್ತದೆ. ಅನುಭವ ತುಂಬಿಬಂದಾಗ ಆಡಿದ ಮಾತೆಲ್ಲಾ ಕಾವ್ಯವಾಗುತ್ತದೆಂಬುದನ್ನು ಪ್ರತ್ಯಕ್ಷವಾಗಿ ತೋರಿಸುವ ಅನೇಕ ವಚನಗಳಿಂದ 'ವಚನ ನಂದನ' ನಳನಳಿಸುತ್ತಿದೆ.

ಅಲ್ಲಲ್ಲಿ ಬರುವ ಕೆಲವು ಮಾತುಗಳಂತೂ ಥಟ್ಟನೆ ಮನಸೆಳೆಯುವ ಸೌಗಂಧಿಕಾ ಪುಷ್ಪಗಳಂತೆ ತಮ್ಮ ಪರಿಮಳದ ಪರಿಣಮವನ್ನು ಪ್ರಗಾಢವಾಗಿ ಬೀರುತ್ತವೆ. ಉದಾಹರಣೆಗೆ:

"ತಿಳಿವಿನ ಬಿರುಬಿಸಿಲು ಕಣ್ಣು ಕುಕ್ಕುತ್ತಿದೆ, ಒಲವಿನ ತಂಪು ಕನ್ನಡಕ ನೀಡಯ್ಯ" (೨೬)
"ಜನಪ್ರಿಯತೆಯೊಂದನ್ನೇ ಆಧರಿಸಿ ಹಾಲಿಗಿಂತ ಹೆಂಡವೇ ಮೇಲೆನ್ನಬಹು ದೇನಯ್ಯ" (೩೪)
"ಮಠದ ನಗಾರಿಯ ಸದ್ದು ಘಟದ ಅಂತರ್ವಾಣಿಗಿಂತ ಶ್ರೇಷ್ಠವೇನಯ್ಯ" (೩೫)
"ಬ್ರಹ್ಮಾಂಡದಲ್ಲಿರುವುದೆಲ್ಲ, ಪಿಂಡಾಂಡದಲ್ಲಿರದೇನಯ್ಯ" (೧೧೦)
"ಚಿತ್ತಕ್ಕೆ ದಾಸನಾಗುವುಗು ಭೋಗ; ಚಿತ್ತವನ್ನು ದಾಸನಾಗಿಸಿಕೊಳ್ಳುವುದು ಯೋಗ" (೧೪೯)
"ವಕ್ರತೆಗೆ ತ್ರಿವಿಕ್ರಮತೆ ಸಾಧ್ಯವೆ?" (೧೫೯)
"ಮೂರ್ತಿಯಾಗುವುದು ಉಳಿಯಿಂದ. ಕೊಡತಿಯಿಂದಲ್ಲ" (೧೮೬)
"ಸಿರಿಯು ಹೆಚ್ಚಿದಂತೆ ಉರಿಯೂ ಹೆಚ್ಚಿದೆ" (೧೮೭)
"ಎಳೆಯ ಮುಳ್ಳು ಮೃದುವೆಂದು ಮುದ್ದಿಸುವ ಪೆದ್ದರಂತಯ್ಯ" (೧೯೪)
"ಬಾಲ್ಯದ ವಕ್ರತೆಗಳ ತಿದ್ದದಿದ್ದರೆ ಮುಂದಿನ ವಿಕೃತಿಗಳಿಗೆ ಸಿದ್ಧರಿರಬೇಕಯ್ಯ" (೧೯೫)
"ಅಹಂಕಾರ ತಲೆದೋರದ ಮುನ್ನ ಅಧಃಪಾತ ಮೈದೋರಿದುದುಂಟೇನಯ್ಯ?" (೨೦೮)
"ಬದುಕು ಬೆದರಿಸಿದರೂ ನಕ್ಕುಬಿಡು, ಸಾವು ಹೆದರಿಸಿದರೂ ನಕ್ಕುಬಿಡು"(೨೨೪)
"ಕೆಡುಕಿನ ಕೈ ಮೇಲಾಗಿಸಿದೆಯೆಂದು ಒಳಿತಿನ ಅಸ್ತಿತ್ವವೇ ಭ್ರಮೆಯೆನ್ನಬಹುದೇನಯ್ಯ"(೨೨೭)
"ನಿನ್ನೆ ಕಡೆದ ಮಜ್ಜಿಗೆ ಇಂದು ಕಾಸಿದ ಹಾಲಿಗೆ ಹೆಪ್ಪು" (೨೫೭)
"ಸಿನಿಕತನಕೆ ಪಟ್ಟ ಕಟ್ಟಿರುವಲ್ಲಿ, ಮನುಜತೆಯ ಮಾತನಾಡುವುದೇ ಮೂಢತನವಯ್ಯ"(೩೧೩)
"ಬಾಳ ಬೆಲೆಗಳನ್ನೆಲ್ಲಾ ಕೊಂದು ತಿಂದು ಬದುಕನ್ನೇ ಬರಿದು ಮಾಡಿದೆವು" (೩೨೬)
"ಇಲ್ಲಿ ಓಣಿಗೊಬ್ಬ ಸಂನ್ಯಾಸಿ, ಸಂನ್ಯಾಸಿಗೊಬ್ಬ ಊರ್ವಶಿ" (೩೩೮)
"ಮೊದಲು ಜ್ಞಾನಕ್ಕೆ ಮಾನವಿದ್ದಿತು. ಈಗ ಪಾನಕ್ಕೆ ಮಾನ" (೩೩೯)
"ಅಗ್ನಿಶಾಮಕದಳಗಳು ಬಂದಿವೆ ನಗರಗಳಿಗೆ, ದ್ವೇಷಾಗ್ನಿಶಾಮಕ ದಳಗಳು ಎಂದು ಬರುವುವಯ್ಯ" (೩೬೮)
"ಕೆಟ್ಟದ್ದನ್ನು ಮಾಡುವುದು ಎಷ್ಟು ಸುಲಭ, ಬಿಡುವುದು ಎಷ್ಟು ಕಷ್ಟ" ( ೩೮೬)
"ನನ್ನ ನಾನೇ ಬಂಧಿಸಿಕೊಂಡು, ಅನ್ಯರ ಮೇಲೆ ಹರಿಹಾಯುತ್ತಿಹೆನಯ್ಯ" (೪೩೨)
"ಮಾನವಕುಲದಲ್ಲಿ ಮಾನವತೆಯೇ ವಿರಳ ವಸ್ತು" (೪೩೮)
"ಈ ಮನೆಗೆ ಇರುವುದೊಂದೇ ಕಿಟಕಿ, ಆ ಕಿಟಕಿಯ ಕಡೆಗೇ ಬೆನ್ನುಮಾಡಿ ಕುಳಿತಿದ್ದೇನೆ" (೪೪೬)

"ಎಚ್ಚರಿಕೆ ಅರುಹಿನ ಕುರುಹಯ್ಯ" (೪೪೭)

ಅನುಭವವನ್ನು ಘನೀಭೂತಗೊಳಿಸಿದ ಧ್ವನಿಪೂರ್ಣವಾದ ಇಂತಹ ನುಡಿ ಪುಷ್ಪಗಳು 'ವಚನ ನಂದನ'ದಲ್ಲಿ ತಿರುಗಾಡುವವರ ಮೇಲೆ ಪರಿಭಾವನೆಯ ಪರಿಮಳವನ್ನು ಸುರಿಸುತ್ತವೆ. ಒಂದನ್ನು ಆಯ್ದುಕೊಂಡು ಮುನ್ನಡೆಯುತ್ತಿದ್ದಂತೆ ಇನ್ನೊಂದು ಆ ವಿಚಾರದ ಗಾಳಿಯಲ್ಲಿ ಹಾರಿಬಂದು ನಮ್ಮ ಮೇಲೆ ಬೀಳುತ್ತದೆ; ಇನ್ನೊಂದು ಗಿಡದ ತುದಿಯಲ್ಲಿ ಕುಳಿತು ತಲೆಬಾಗಿ ಆಕರ್ಷಿಸುತ್ತದೆ. ಅವೆಲ್ಲವುಗಳ ಸ್ಪರ್ಶದಿಂದ ಹೃದಯ ಆನಂದದ ಸ್ಪಂದನಕ್ಕೆ ಒಳಗಾಗುತ್ತದೆ. ಅಲ್ಲಿಂದ ಹೊರಬರುವ ವೇಳೆಗೆ ತಾನೂ ಪರಿಮಳಿತವಾಗುತ್ತದೆ.

ತಮ್ಮ 'ವಚನೋದ್ಯಾನ'ದಿಂದಲೇ ಆಧುನಿಕ ವಚನ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದ ಶ್ರೀ ಸಿದ್ದಯ್ಯ ಪುರಾಣಿಕರು ಅದಕ್ಕೆ 'ನಂದನ'ವನ್ನು ಸೇರಿಸಿ ಆ ಪ್ರಾಂತವನ್ನು ಇನ್ನಷ್ಟು ವಿಸ್ತರಿಸಿದ್ದಾರೆ. ಅದು ಕಾಲಹಾರಕ ವಿಹಾರದ ವಿಶ್ರಾಂತಿ ಧಾಮವಲ್ಲ; ಕಾಲದ ರಹಸ್ಯವನ್ನರಿಯುವ ಜೀವನ ದರ್ಶನದ ಸಂಕ್ರಾಂತಿ ಸ್ಥಳ. ಅಂತರಂಗ ಬಹಿರಂಗಗಳ ಪರಸ್ಪರ ಸಂಕ್ರಮಣದಿಂದ ಉತ್ಕ್ರಾಂತಿಯನ್ನು ಸಾಧಿಸುವ ಪುಣ್ಯಪ್ರಭೆಯನ್ನು ಈ 'ನಂದನ'ದ ಮಂದಮಾರುತ ಹಿತಕರವಾಗಿ ಬೀಸುತ್ತಿದೆ. ಅದರ ಸ್ಪರ್ಶದಿಂದ ಉಂಟಾಗುವುದು ಜೀವನ ವಿಮುಖತೆಯನ್ನುಂಟುಮಾಡುವ ತನ್ಮಯತೆಯ ಮತ್ತಲ್ಲ; ಜಡತೆಯನ್ನು ಹೊಡೆದೋಡಿಸಿ ಜೀವನಶ್ರದ್ಧೆಯನ್ನು ಮೂಡಿಸುವ ಪ್ರಚೋದಕ ಶಕ್ತಿಯಾಗಿದೆ ಇಲ್ಲಿನ ಅಧ್ಯಾತ್ಮ. ಅಧ್ಯಾತ್ಮದ ಹೆಸರಿನಲ್ಲಿ ಅವಿವೇಕಗಳು ನಡೆದಿರಬಹುದು. ಅದಕ್ಕಾಗಿ ಅಧ್ಯಾತ್ಮವೇ ಅವಿವೇಕವೆನ್ನುವ ಅತಿರೇಕದ ತಪ್ಪನ್ನು ಮಾಡಬಾರದು. ಅದು ಹೊರಗಡೆ ಹುಡುಕುವ ವಸ್ತುವಲ್ಲ. ನಮ್ಮ ಅಂತರಂಗದಲ್ಲಿಯೇ ಅರಳಿ ಬಾಳನ್ನು ಪೂರ್ಣಗೊಳಿಸುವ ಶಕ್ತಿ. ಇಹಪರಗಳೆರಡರ ಈ ಸಮತೋಲನದಿಂದಲೇ ಬದುಕಿನ ಎತ್ತರವನ್ನು ಅಳೆಯುವ, ಆಳಕ್ಕೆ ಇಳಿಯುವ, ಆ ಮೂಲಕ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವ ಸಾಹಸ ಪೂರ್ಣಗೊಳ್ಳುತ್ತದೆ. ಈ ಪ್ರವೃತ್ತಿಪರ ಜೀವನ ಮೌಲ್ಯಗಳನ್ನು ಕಲಾತ್ಮಕವಾಗಿ ನಿರೂಪಿಸುವ ಈ ಕೃತಿ ಇಂದಿನ ವಿಚಾರವಂತ ಯುಗಕ್ಕೆ ಪ್ರಿಯವಾಗುತ್ತದೆಂದು ನಂಬಿದ್ದೇನೆ. ಎಲ್ಲ ಪರಿಮಿತಿಯನ್ನು ಮೀರಿ ಬೆಳೆದ ಇಲ್ಲಿನ ವಿಚಾರಗಳು ಸಾಮಾಜಿಕ ಪರಿವರ್ತನೆಯ ಈ ಘಟ್ಟದಲ್ಲಿ ಹೊಸ ಹುಟ್ಟಿಗೆ ಕಾರಣವಾಗಲಿ ಎಂದು ಹಾರೈಸುತ್ತೇನೆ. ಅದು ಸಾಧ್ಯವಾಗುವಂತಹ ವಚನ ಕೃತಿಗಳನ್ನು ಕೊಟ್ಟ ಶ್ರೀ ಸಿದ್ದಯ್ಯ ಪುರಾಣಿಕರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಬಿ.ಆರ್. ಪ್ರಾಜೆಕ್ಟ್ **– ಎಚ್. ತಿಪ್ಪೇರುದ್ರಸ್ವಾಮಿ**

೨–೫–೧೯೮೫

# ವಚನಾರಾಮ

"ಆಚೆಯ ನೀರ ಈಚೆಯಲ್ಲಿ ತೆಗೆವುದು ಚಿಲುಮೆಯಲ್ಲಿ" ಎಂಬುದು ಅಕ್ಕಮ್ಮ ಎಂಬ ವಚನಕಾರ್ತಿಯ ಅರ್ಥಪೂರ್ಣ ಉಕ್ತಿ; ಕಾವ್ಯ ತತ್ತ್ವದ ದೃಷ್ಟಿಯಿಂದಲೂ ಉಪಾಧೇಯವಾದುದು. ಇಲ್ಲಿ 'ಚಿಲುಮೆ' ಎಂಬ ಮಾತು ಸ್ವೋಪಜ್ಞತೆಯನ್ನು ಸಂಕೇತಿಸುತ್ತದೆ. ವಚನಸಾಹಿತ್ಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗೋಚರಿಸುವ ಒಂದು ದೊಡ್ಡ ಚಿಲುಮೆ; ಚೆಲುವಿನ ಮತ್ತು ಒಳಿತಿನ ಚಿಲುಮೆ. ವಚನಕಾರರು ಬರಿಯ ಕೊಳಾಯಿಗಳಲ್ಲ. ರೂಪ ಸ್ವರೂಪಗಳಲ್ಲಿ, ಧರ್ಮ ಸ್ವಧರ್ಮಗಳಲ್ಲಿ ಅತ್ಯಂತ ವಿಶಿಷ್ಟವಾದುದು ವಚನವಾಙ್ಮಯ. ಅದು ಕೇವಲ ರಚನೆಯಲ್ಲ, ಕುಶಲ ಕರ್ಮವಲ್ಲ; ಅನನ್ಯ ಸೃಷ್ಟಿ; ಜಗತ್ತಿಗೆ ಕನ್ನಡದ ಉನ್ನತ ಕೊಡುಗೆ.

ಹನ್ನೆರಡನೆಯ ಶತಮಾನದಲ್ಲಿ ಆತ್ಮಾನುಭೂತಿಯ ಅಭಿವ್ಯಕ್ತಿಯಾಗಿ ಮತ್ತು ಸಾಮಾಜಿಕ ಪ್ರಜ್ಞೆಯ ಪ್ರಣಾಳಿಕೆಯಾಗಿ ಮೈವೆತ್ತ ವಚನಸಾಹಿತ್ಯ ಒಂದು ರೂಪವಾಗಿ ಮತ್ತು ಸತ್ಯವಾಗಿ ಎಂಟು ಶತಮಾನಗಳ ಅಂತರವನ್ನು ಅನಾಯಾಸವಾಗಿ ಕ್ರಮಿಸಿ, ತನ್ನ ವಿದ್ಯುದ್ಬಾಹುಗಳನ್ನು ಈ ಇಪ್ಪತ್ತನೆಯ ಶತಮಾನಕ್ಕೂ ಚಾಚಿರುವುದೊಂದು ಸೋಜಿಗ. ಈ ಯಶಸ್ಸನ್ನು ಮತ್ತಾವುದೇ ಪ್ರಕಾರ ಪಡೆದಿಲ್ಲವೆಂಬುದೊಂದು ವಿಶೇಷ. ವಚನ ವಾಙ್ಮಯದ ಪುನರುತ್ಥಾನ ನಮ್ಮ ಆಧುನಿಕ ಸಾಹಿತ್ಯಕ್ಕೆ ಶ್ರೇಯಸ್ಕರವಾಗಿ ಪರಿಣಮಿಸಿದೆ; ಅದರಿಂದ ಒಂದು ಹೊಸ ಪ್ರಸ್ಥಾನವೇ ನಿರ್ಮಿತವಾಗಿದೆ. ಅದರಲ್ಲಿ ಸಿದ್ಧಯ್ಯ ಪುರಾಣಿಕರ ಸ್ಥಾನ ಎದ್ದು ಕಾಣುತ್ತದೆ. ಆಧುನಿಕ ವಚನಸಾಹಿತ್ಯ ಹಿಂದಿಲ್ಲದ ಕೆಲವು ಆಯಾಮಗಳನ್ನು ಅಳವಡಿಸಿಕೊಂಡು ಹೆಚ್ಚು ಸಂಕೀರ್ಣವಾಗಿ ಬೆಳೆದಿದೆ. ಆ ಸಂಕೀರ್ಣತೆಗೂ ಸಾಕ್ಷಿಯಾಗುತ್ತವೆ, ಪುರಾಣಿಕರ ವಚನಗಳು.

'ವಚನೋದ್ಯಾನ' (೧೯೭೭), 'ವಚನ ನಂದನ' (೧೯೮೩) ಎಂಬ ಎರಡು ವಚನ ಸಂಕಲನಗಳನ್ನು ಸಿದ್ಧಯ್ಯ ಪುರಾಣಿಕರು ಹಿಂದೆಯೆ ಪ್ರಕಟಿಸಿದ್ದಾರೆ; ಇದೀಗ 'ವಚನಾರಾಮ' ಹೊರಬರುತ್ತಿದೆ. ಇವು ಒಂದೇ ಮನಸ್ಸಿನ ಮೂರು ಮುಖಗಳು, ಒಂದೇ ವ್ಯಕ್ತಿತ್ವದ ಮೂರು ಶಾಖೆಗಳು, ಒಂದೇ ಶಕ್ತಿಯ ಮೂರು ಅಭಿವ್ಯಕ್ತಿಗಳು: ಸತ್ಯ, ಶಿವ, ಸೌಂದರ್ಯಗಳಂತೆ. ವಾಸ್ತವವಾಗಿ ಈ ಮೂರರ ಮುಪ್ಪುರಿಯನ್ನು ಕಾಣುತ್ತೇವೆ, ಪುರಾಣಿಕರ ವಚನಗಳಲ್ಲಿ 'ವಚನೋದ್ಯಾನ'ದಲ್ಲಿ ಪ್ರಖರವಾಗಿ ಬೆಳಗಿದ ಪ್ರತಿಭಾಶಿಖೆ, ನಡುವೆ 'ವಚನ ನಂದನ'ದಲ್ಲಿ ತುಸು ಅವನತವಾದಂತೆ ತೋರಿ, ಮತ್ತೆ ಈ 'ವಚನಾರಾಮ'ದಲ್ಲಿ ಊರ್ಧ್ವಮುಖಿಯಾಗಿ ಪ್ರಜ್ವಲಿಸಿದೆ.

'ವಚನೋದ್ಯಾನ'ಕ್ಕೆ ಹಾ.ಮಾ. ನಾಯಕರು, 'ವಚನ ನಂದನ'ಕ್ಕೆ ಎಚ್. ತಿಪ್ಪೇರುದ್ರಸ್ವಾಮಿಯವರು ಬರೆದಿರುವ ನಿಡುಮುನ್ನುಡಿಗಳಲ್ಲಿ ಸಿದ್ಧಯ್ಯ ಪುರಾಣಿಕರ ವಚನಗಳ ಬಗ್ಗೆ ಹೇಳಬೇಕಾದ್ದನ್ನೆಲ್ಲ ಸಮರ್ಥವಾಗಿ ಹೇಳಿಬಿಟ್ಟಿದ್ದಾರೆ. ಹೀಗಾಗಿ, ಈ 'ವಚನಾರಾಮ'ಕ್ಕೆ ಮುನ್ನುಡಿಯ ಅಗತ್ಯವಿಲ್ಲವೆನಿಸುತ್ತದೆ. ಅದರಲ್ಲೂ, ನಾನು ಹೇಳಬಹುದಾದ್ದು ಹೆಚ್ಚೇನೂ ಇಲ್ಲ

ಎಂದುಕೊಂಡಿದ್ದೇನೆ. ಆದರೂ ಹಿರಿಯರಾದ ಪುರಾಣಿಕರ ಮಾತನ್ನು ತೆಗೆದುಹಾಕಲಾರದೆ. ಈ ಕಾರ್ಯಕ್ಕೆ ವಿನಯದಿಂದ ಕೈ ಹಾಕಿದ್ದೇನೆ. ಅವರ ಮುಂದೆ ನಾನು ಚಿಕ್ಕವನು. ನನ್ನಂಥವರ ವಿಷಯದಲ್ಲೂ ಅವರಿಟ್ಟುಕೊಂಡಿರುವ ಪ್ರೀತ್ಯಾದರಗಳೇ ಹೇಳುತ್ತವೆ, ಅವರೆಷ್ಟು ದೊಡ್ಡ ಮನಸ್ಸಿನ ಮಹನೀಯರೆಂಬುದನ್ನು. ಅಂಥವರ ಸಾಹಿತ್ಯ ಉತ್ತಮವಾಗದಿರುವುದು ಹೇಗೆ?

ಸಿದ್ಧಯ್ಯ ಪುರಾಣಿಕರ ವಚನಗಳ ಮೇಲೆ ಪ್ರಾಚೀನ ವಚನಗಳ ಪ್ರಭಾವ ಮುದ್ರೆ ಸಾಂದ್ರವಾಗಿದೆ; ರೂಪ, ರಚನಾ ವಿನ್ಯಾಸಗಳಲ್ಲಿ ಮಾತ್ರವಲ್ಲ, ತಿರುಳಿನಲ್ಲಿ ಕೂಡ. ಶರಣ ಸಾಹಿತ್ಯ ಪುರಾಣಿಕರಿಗೆ ಬರಿಯ ಓದಿನ ವಿಷಯವಾಗಿಲ್ಲ, ಉಸಿರಾಗಿದೆ. ಆದರೆ ಇವು ಅವುಗಳ ಪ್ರತಿಕೃತಿಗಳಾಗಿಲ್ಲ, ಪ್ರತಿಧ್ವನಿಗಳಾಗಿಲ್ಲ. ಇವಕ್ಕೆ ಸ್ವಂತ ಧ್ವನಿಯಿದೆ; ಪುರಾಣಿಕರದೇ ಆದ ಒಳದನಿ ಇಲ್ಲಿ ಕೇಳಿ ಬರುತ್ತದೆ. ಸಮಕಾಲೀನ ಜೀವನದಂತೆ ಸಮಕಾಲೀನ ಸಾಹಿತ್ಯದ ಪ್ರಕಾರಗಳು ಮತ್ತು ಪ್ರಜ್ಞೆಗಳು ಈ ವಚನಕಲ್ಪದಲ್ಲಿ ಮತ್ತು ಶಿಲ್ಪದಲ್ಲಿ ಪಾಲ್ಗೊಂಡಿರುವುದು ಗಮನಾರ್ಹ. ಇದು ಅಗತ್ಯವಾದ ಕಸಿಯ ಕೆಲಸ; ಬೆಳವಣಿಗೆಯ ಪ್ರಕ್ರಿಯೆ.

ಪ್ರಕೃತ 'ವಚನಾರಾಮ'ದಲ್ಲಿ ಸಿದ್ದಯ್ಯ ಪುರಾಣಿಕರು ಆತ್ಮಾರಾಮರಾಗಿ ಕಂಡುಬರುತ್ತಾರೆ. ಅಷ್ಟೇ ಅಲ್ಲ, ಸಮಾಜದ ವ್ಯಾಪಕ 'ಪ್ಯಾನೊರಾಮ' (Panorama ದೃಶ್ಯಾವಳಿ) ಕೂಡ ಇಲ್ಲಿ ಲಭ್ಯವಾಗುತ್ತದೆ. ಇಲ್ಲಿ ಮೌಲ್ಯಗಳಿವೆ ಮತ್ತು ಮಾಧುರ್ಯವಿದೆ; ಎರಡೂ ಅನೇಕ ಕಡೆ ಒಂದರೊಡನೊಂದು ಹೊಂದಿಕೊಂಡು ಬಂದಿವೆ. ಎಂತಲೇ ಈ ವಚನವೃಂದ ಒಟ್ಟಿನ ಮೇಲೆ ಘನವಾದ ಕೃತಿಯಾಗಿದೆ. ಪುರಾಣಿಕರ ವಚನ ವ್ಯವಸಾಯದ ಸಮೃದ್ಧಿ ಮತ್ತು ನಿರರ್ಗಳತೆ ನಮ್ಮನ್ನು ಬೆರಗುಗೊಳಿಸುವಂತೆ, ಅದರ ಗುಣಸಂಪದ ನಮ್ಮ ಗೌರವಕ್ಕೆ ಮತ್ತು ಅಭಿನಂದನೆಗೆ ತಕ್ಕುದಾಗುತ್ತದೆ.

ಪುರಾಣಿಕರ ವಚನಗಳ ಅಂಕಿತವನ್ನು ಕುರಿತು 'ವಚನೋದ್ಯಾನ'ದ ಮುನ್ನುಡಿಯಲ್ಲಿ ಹಾ.ಮಾ. ನಾಯಕರು ಹೇಳುತ್ತಾರೆ: " 'ಸಿದ್ಧೇಶ್ವರ'ನ ಗುಣವಾಚಕ 'ಸ್ವತಂತ್ರಧೀರ'ನ ಗುಣವಾಚಕ 'ಸ್ವತಂತ್ರಧೀರ' ನಮ್ಮ ಕಾಲದ ಮಹಾಲಕ್ಷಣವನ್ನು ಸೂಚಿಸುತ್ತದೆ. ಸ್ವತಂತ್ರವು ವೃತ್ತಿ, ಧೀರಗುಣಗಳು ಆಧುನಿಕ ಬದುಕನ್ನು ಆಳುತ್ತಿವೆ." ೧

ಪ್ರಾಚೀನ ವಚನಗಳಲ್ಲಿ ಅಂಕಿತ ನಿಯತವಾಗಿ ಕಡೆಯಲ್ಲಿ ಬಂದರೆ, ಪುರಾಣಿಕರ ಅಂಕಿತ ಆದಿಯಲ್ಲಿ ಬರಲೂಬಹುದು. ಇದು ಕೂಡ ಸ್ವತಂತ್ರ ಪ್ರವೃತ್ತಿಯ ಒಂದು ಲಕ್ಷಣ.

ಪ್ರಾಚೀನ ವಚನಗಳಲ್ಲಿಲ್ಲದ ಅಂತ್ಯಪ್ರಾಸಗಳನ್ನು ಸಿದ್ಧಯ್ಯ ಪುರಾಣಿಕರು ತಮ್ಮ ವಚನಗಳಲ್ಲಿ ತರುವುದುಂಟು. ಕೆಲವೆಡೆ ಅವರ ವಚನಗಳು ವಚನೇತರ ಪದ್ಯಗಳಾಗುವುದೂ ಉಂಟು. ಉದಾಹರಣೆಗೆ :

---

೧ ಮುನ್ನುಡಿ ಪು.xi.

ನಿನ್ನ ಗಾನದ ಲಯದಿ
ಲಯವಾಯ್ತು ಮನವು ;
ರಕ್ತಮಾಂಸದಿ ರಚಿತ
ಕೊಳಲಾಯ್ತು ತನುವು ;
ಸ್ವತಂತ್ರಧೀರ ಸಿದೇಶ್ವರಾ,
ಹೊರಡಲಿದರಿಂದಲೇ
ನಿನ್ನಮೃತಸ್ವನವು !

ಹೀಗೆಯೇ ವಚನಲಯವನ್ನು ಹಲವೆಡೆ ಮುರಿದು, ವೈವಿಧ್ಯವನ್ನು ಸಾಧಿಸಲಾಗಿದೆ.

ಪುರಾಣಿಕರ ಕೆಲವು ವಚನಗಳು 'ಹನಿಗವನ' (ಅಥವಾ 'ಮಿನಿಗವನ') ಗಳಾಗಿರುವುದಕ್ಕೆ ಇದೊಂದು ನಿದರ್ಶನ :

ನನ್ನ ಮರೆದೆ, ನಿನ್ನ ಮರೆದೆ,
ಎಲ್ಲವನ್ನು ಮರೆದೆ,
ಎಲ್ಲದರ ಮೂಲದಲ್ಲಿ ಬೆರೆದೆ–
ಸ್ವತಂತ್ರಧೀರ ಸಿದ್ಧೇಶ್ವರಾ !

" ಮಿನಿ'ಗಳ ಯುಗದ 'ಮಿನಿ' ಮಾನವ ನಾನು" ಎಂದು ಪುರಾಣಿಕರು ಒಂದೆಡೆ ಹೇಳಿಕೊಂಡಿರುವುದನ್ನು ಗಮನಿಸಬಹುದು. ತಾನು ಬದುಕುತ್ತಿರುವ ಕಾಲದ ಅರಿವು ಕವಿಗೆ ಉದ್ದಕ್ಕೂ ಇದೆ.

'ವಚನೋದ್ಯಾನ'ವನ್ನು ಕುರಿತು ಜಿ.ಎಸ್.ಶಿವರುದ್ರಪ್ಪನವರು ಒಂದೆಡೆ ಹೀಗೆ ಹೇಳುತ್ತಾರೆ : "ಶರಣ ವಾಙ್ಮಯದಲ್ಲಿ ಮೊದಲಿನಿಂದಲೂ ತಮ್ಮನ್ನು ಬೇರೂರಿಸಿ ಕೊಂಡ ಪುರಾಣಿಕರು, ಆ ವಚನಮಾನಸದ ಸಾರಸರ್ವಸ್ವವನ್ನು ಹೀರಿಕೊಂಡು, ಅದನ್ನು ಅರಗಿಸಿಕೊಂಡು ತಮ್ಮ ಸ್ವಾನುಭವದ ಬೀಜಗಳನ್ನಾಗಿ ಮಾಡಿಕೊಂಡು, ತಮ್ಮ ಸಮಕಾಲೀನ ಪ್ರಜ್ಞೆಯನ್ನು ಬಿತ್ತಿ ಬೆಳೆದ ಉದ್ಯಾನವಾಗಿದೆ."[೨]

'ವಚನ ನಂದನ'ದ ಮುನ್ನುಡಿಯಲ್ಲಿ ತಿಪ್ಪೇರುದ್ರಸ್ವಾಮಿಯವರು ಹೀಗೆಂದಿದ್ದಾರೆ: "ಶರಣ ಜೀವನದ ಪ್ರತಿಭೆಯನ್ನೂ ಅಂತೆಯೇ ಆಧುನಿಕ ಪರಿಸರಕ್ಕೆ ಒಡ್ಡಿಕೊಂಡ ವಿಚಾರಶೀಲ ಮನಸ್ಸಿನ ಪರಿಭಾವನೆಯ ಪ್ರಭಾವವನ್ನೂ ಇವರ ವಚನಗಳಲ್ಲಿ ಕಾಣುತ್ತೇವೆ. ಆದ್ದರಿಂದಲೇ ಇವು ಒಂದು ಕಡೆಯಲ್ಲಿ ಆಂತ–ರಿಕ ಸಾಧನೆಯ ಮಾರ್ಗದಲ್ಲಿ ಮುನ್ನಡೆವ ಆತ್ಮನ ನಿರಂತರ ಹಂಬಲವನ್ನೂ, ಇನ್ನೊಂದು ಕಡೆಯಲ್ಲಿ ಇಂದಿನ ಸಂಕೀರ್ಣ ಜಗತ್ತಿನ ಸಾಮಾಜಿಕ ಜಟಿಲತೆಯನ್ನು

---

೨. 'ಸಾಹಿತ್ಯ ವಾರ್ಷಿಕ' (ಸಂ. ಜಿ. ಎಸ್. ಶಿವರುದ್ರಪ್ಪ), ಪು.೯೭೭.

ವಿವೇಚಿಸುವ ಸಮಕಾಲೀನ ಪ್ರಜ್ಞೆಯನ್ನೂ ಪ್ರತಿಬಿಂಬಿಸುತ್ತವೆ. ಆದರೆ ಇವೆರಡೂ ಬೇರೆ ಬೇರೆಯಾಗಿ ಉಳಿಯದೆ ಒಳಗು ಹೊರಗುಗಳು ಒಂದರೊಡನೊಂದು ತಳುಕು ಹಾಕಿಕೊಂಡು ಪೂರ್ಣಜೀವನ ದೃಷ್ಟಿಯ ಊರ್ಧ್ವಗಮನಕ್ಕೆ ಪ್ರೇರಕವಾಗುತ್ತವೆ."[೩]

ಈ ಹಿನ್ನೆಲೆಯಲ್ಲಿ ನೋಡಿದಾಗ, 'ವಚನರಾಮ'ದ ಸ್ವರೂಪ ಬೇರೆಯಾಗಿ ತೋರುವುದಿಲ್ಲ. ಇಲ್ಲಿನ ವಚನಗಳಲ್ಲು ಬಹಿರಂಗದಿಂದ ಅಂತರಂಗಕ್ಕೆ ಕೈಕೊಂಡ ಯಾತ್ರೆಯಿದೆ; ನೆಲದಿಂದ ಅಂತರಿಕ್ಷಕ್ಕೆ ಕೈಕೊಂಡ ಉಡ್ಡಾಣವಿದೆ; "ರೂಪದಿಂದ ಅರೂಪದತ್ತ ಪಯಣ"ವಿದೆ (ಇದು ಕವಿಯದೇ ಮಾತು).

ಹಾ.ಮಾ.ನಾಯಕರು 'ವಚನೋದ್ಯಾನ'ದ ಮುನ್ನುಡಿಯಲ್ಲಿ, ಪುರಾಣಿಕರ ವಚನಗಳನ್ನು "ಶುದ್ಧ ಜೀವನ ಸಂಹಿತೆಗಳು" ಎಂದು ಕರೆದಿದ್ದಾರೆ.[೪] ಇದಕ್ಕೆ ಪೂರಕವಾಗಿ ಪುರಾಣಿಕರ ವಚನಗಳು 'ಪ್ರೀತಿಸೂತ್ರ' ಬದ್ಧವಾಗಿವೆ ಎನ್ನಬಹುದು. ಇದು ಭಗವತ್ ಪ್ರೀತಿಯೂ ಹೌದು, 'ಮಾನವ ಪ್ರೀತಿಯೂ ಹೌದು. "ನಲ್ಬಾಳುವುದೆ ಯೋಗ" ಎಂದಿದ್ದಾರೆ ಸಿದ್ಧಯ್ಯ ಪುರಾಣಿಕರು, 'ವಚನಾರಾಮ'ದ ಒಂದು ವಚನದಲ್ಲಿ. ಆದ್ದರಿಂದ, ಅವರ ವಚನಗಳಲ್ಲಿ ಪ್ರತಿಪಾದಿತವಾಗಿರುವುದು ಪ್ರೀತಿಯೋಗ, ಜೀವನಯೋಗ, ಅದಕ್ಕೆ ಕಾವ್ಯ ಯೋಗದ ಸಹಯೋಗವೂ ಸಿಕ್ಕಿದೆ. ಇದು ನಮ್ಮ ಪುಣ್ಯ.

ಬಹುಶಃ ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯದ ಬಾಗಿಲು ತೆರೆಯುವ ಕೀಲಿ ಕೈಯನ್ನು ತಾನೆ ಕೊಡುತ್ತಾನೆ ; ಅಥವಾ ಸ್ವಸಮರ್ಥನೆ ಮಾಡಿಕೊಳ್ಳುತ್ತಾನೆ. ವಾಚ್ಯವಾಗಿ ಇಲ್ಲವೆ ಸೂಚ್ಯವಾಗಿ, ಸಿದ್ಧಯ್ಯ ಪುರಾಣಿಕರು ಇದಕ್ಕೆ ಹೊರತಲ್ಲ. 'ವಚನೋದ್ಯಾನ'ದ ಉಕ್ತಿ ಇಲ್ಲಿಯೂ ಗ್ರಾಹ್ಯ :

ವಿಜ್ಞಾನಿಯ ಬುದ್ಧಿ
ತತ್ತ್ವಜ್ಞಾನಿಯ ಮನ
ಕವಿಯ ಹೃದಯದ ಕರುಣಿಸಯ್ಯಾ.....

ಇವುಗಳ ತ್ರಿವೇಣೀ ಸಂಗಮವಿದೆ. 'ವಚನಾರಾಮ'ದ ವಚನಗಳಲ್ಲಿ, ಆದರೆ ಬುದ್ಧಿ, ಮನ, ಹೃದಯಗಳೆಲ್ಲ ಒಂದೊಂದಕ್ಕೂ ಉಬ್ಬರ ಇಳಿತಗಳುಂಟು.

ಪ್ರಸಕ್ತ ವಚನಗಳಲ್ಲಿ ಅನುಭವವಿದೆ. ಅನುಭಾವವಿದೆ, ಪ್ರಶ್ನೆಯಿದೆ, ವಿಸ್ಮಯವಿದೆ. ವಿಚಾರವಿದೆ, ವಿಡಂಬನೆಯಿದೆ – ಏನುಂಟು, ಏನಿಲ್ಲ? ಆದರೆ ಸುತ್ತಣ ಪರಿಸರದ ಡೊಂಕು, ಡೊಗರುಗಳನ್ನು ಟೀಕಿಸುವಲ್ಲಿ ಸಿದ್ಧಯ್ಯ ಪುರಾಣಿಕರು 'ಸಿನಿಕ'ರಾಗುವುದಿಲ್ಲ; ಸ್ವಸ್ಥತೆ ಕಳೆದುಕೊಳ್ಳುವುದಿಲ್ಲ; ಸ್ವಚ್ಛತೆ ಅವರ

---

೩. ಮುನ್ನುಡಿ ಪು.viii
೪. ಮುನ್ನುಡಿ ಪು.xv

ಗುರಿಯಾದುದರಿಂದ, ಮಾನವೀಯತೆಯ ನೆಲೆಯಿಂದ ಸರಿಯುವುದಿಲ್ಲ, ಅವರ ಆತ್ಮ ನಿವೇದನೆಯಲ್ಲಿ ಆರ್ತತೆಯಿದೆ ; ಸಮಾಜ ಸಂವಾದದಲ್ಲಿ ಆತ್ಮೀಯತೆಯಿದೆ.

ಇಲ್ಲಿನ ವಚನಗಳಲ್ಲಿ ಅಷ್ಟಾವರಣವಿಲ್ಲ; ಒಂದು ಕಡೆ ಅಂತರಂಗದ, ಇನ್ನೊಂದು ಕಡೆ ಬಾಹ್ಯದ ವಿಕೃತಿಗಳ ಅನಾವರಣವಿದೆ. ಬಹಿರಂಗ ಬಹಳ ಕಡೆ ಅಂತರಂಗಕ್ಕೆ ತನ್ನನ್ನು ಅರ್ಪಿಸಿಕೊಂಡು ಕೃತಾರ್ಥವಾಗುತ್ತದೆ. ಕವಿ ಹೇಳುತ್ತಾರೆ:

ಸ್ವತಂತ್ರಧೀರ ಸಿದ್ಧೇಶ್ವರನನ್ನೇ ಸಾಕ್ಷಿಯಾಗಿರಿಕೊಂಡು
ನನ್ನ ಒಳಗನ್ನು ತೋಡುತ್ತ ಹೊರಟಿದ್ದೇನೆ,
ನನ್ನ ಹೊರಗನ್ನು ನೋಡುತ್ತ ಹೊರಟಿದ್ದೇನೆ,
ಯಾವುದಕ್ಕೂ ಅರ್ಥ ಬೇಡುತ್ತ ಹೊರಟಿದ್ದೇನೆ,
ನನ್ನ ಹಂಬಲವನ್ನೇ ಹಾಡುತ್ತ ಹೊರಟಿದ್ದೇನೆ !

"ಹೊರಗೆ ಬದುಕಿನ ಹೋರಾಟ, ಒಳಗೆ ಬಯಕೆಗಳ ಹೋರಾಟ" ಎಂದು ಇನ್ನೊಂದು ಕಡೆ ನುಡಿಯುತ್ತಾರೆ. ಹೀಗಾಗಿ, ವಿವಿಧ ಸಂಘರ್ಷಣೆಯ, ಅಂತೆಯೆ ಸಾಮರಸ್ಯದ ಚಿತ್ರಗಳಿವೆ, 'ವಚನಾರಾಮ'ದಲ್ಲಿ ಅದು ಲಿಂಗಾಂಗ ಸಾಮರಸ್ಯ ಸಹ.

ಈಗ, ಪ್ರಕೃತ ಸಂಕಲನದ ಕೆಲವು ವಚನಗಳನ್ನು ಪ್ರಾತಿನಿಧಿಕವಾಗಿ ಲಕ್ಷಿಸಬಹುದು. ಅಂತರಂಗ ತರಂಗಗಳನ್ನು ಮೊದಲು ತೆಗೆದುಕೊಳ್ಳೋಣ. ಇವುಗಳಲ್ಲಿ ಸಮರ್ಪಣ, ಸಂದೇಹ, ಸವಾಲು, ಭರವಸೆ ಮುಂತಾದುವೆಲ್ಲ ಮುತ್ತಾಗಿವೆ. ಯಾವುದೂ ಅಸಹಜ ಎನಿಸುವುದಿಲ್ಲ.

ಪ್ರಾಯಃ ಹಿಂದಿನ ಎರಡು ಸಂಕಲನಗಳಲ್ಲಿ ತೆಳುವಾಗಿದ್ದ. ಸತಿ–ಪತಿ ಭಾವದ ಎಳೆ ಈ 'ವಚನಾರಾಮ'ದ ದೇವಾಂಗದಲ್ಲಿ ಗಟ್ಟಿಯಾಗಿದೆ. ಅದಕ್ಕೊಂದು ನಿದರ್ಶನ ಈ ವಚನ :

ನಿನ್ನ ನೂರು ನೆನಪಿನೋಲೆಗಳು ಬಂದಿವೆ, ನಲ್ಲ,
ಆದರೆ ಮೂಲಪತ್ರವೇ ಮುಟ್ಟಿಲ್ಲವಲ್ಲ!
ಉತ್ತರ ಬರೆ, ಉತ್ತರ ಬರೆ ಎಂದು ಒತ್ತಾಯಿಸಿದರೆ,
ಏನುತ್ತರ ಕೊಡಲಿ ಚೆನ್ನ !
ಮೂಲಪತ್ರದ ಪ್ರತಿ ಕಳಿಸು ರನ್ನ !
ಅದನ್ನೋದಿ ಅರ್ಥವಾದರೆ
ಉತ್ತರಿಸುವೆನು ಮನದನ್ನ–
ಸ್ವತಂತ್ರಧೀರ ಸಿದ್ಧೇಶ್ವರ !

ಪುಳಕಗೊಳಿಸುವ ದಿವ್ಯಾನುಭವವೊಂದು ಈ ವಚನದಲ್ಲಿ ಶಬ್ದಾವತಾರ ತಳೆದಿದೆ :

ಹಿಮಗಿರಿಯ ಮೇಘ ಮೇಖಲೆಯಲ್ಲಿ
ಕೋಲ್ಮಿಂಚು ಹೊಡೆದಾಗ
ಹಿಮಶಿಖರ ಝಗ್ಗೆನ್ನುವಂತೆ
ಭಗ್ಗೆಂದು ಥಳಥಳಿಸಿತು ಒಳಗು ಇಂದು !
ನಯಾಗಾರದ ನೆತ್ತಿಯ ಮೇಲೆ
ಕಾಮನ ಬಿಲ್ಲುಗಳು ಕುಣಿವಂತೆ
ಸಾವಿರ ಸೋಗೆಗಳು ನರ್ತಿಸಿದವಲ್ಲಿ–
ವರ್ಣಜ್ಯೋತಿಯ ಚೆಲ್ಲಿ !
ಕಂಡದನು ನವಿರಿನ ಪಯಿರು
ಮೈಮುರಿದೆದ್ದಿತು ಮೈಯಲ್ಲಿ !
ಹುಣ್ಣಿಮೆಯ ರಾತ್ರಿಯಲ್ಲಿ ತಾಜಮಹಲು ಕಂಡಂಥ
ಅನುಭವ–ಸ್ವತಂತ್ರಧೀರ ಸಿದ್ಧೇಶ್ವರ !

ತಾಜಮಹಲಿನ ಹೋಲಿಕೆ ಹೊಸದಾದರೂ, ಅನುಭವಕ್ಕೆ ಅಷ್ಟಾಗಿ ಸಂಗತವಾಗುವುದಿಲ್ಲ ಎನಿಸುತ್ತದೆ. ಉಳಿದಂತೆ ಇದೊಂದು ಜ್ಯೋತಿರ್ಲಿಂಗ.

ಸೌಂದರ್ಯದ ಸ್ತರ ಭವ್ಯತೆಯ ಸ್ತರದಲ್ಲಿ ಪರ್ಯವಸಾನಗೊಳ್ಳುವ ಅನುಭವವನ್ನು ಅಪೂರ್ವವಾಗಿ ಕಟ್ಟಿಕೊಡುತ್ತದೆ, ಈ ವಚನ :

ಮನೆಯ ಬಾಗಿಲಿಗೆ ಮಾಂದಳಿರ ತೋರಣ;
ಮನೆಯ ಮುಂದಿನ ಮಾಮರಕ್ಕೆ ಗಿಳಿಗಳ ತೋರಣ;
ಗುಡಿಯ ಗೋಪುರಕ್ಕೆ ಪಾರಿವಾಳಗಳ ತೋರಣ;
ಬತ್ತದ ಗದ್ದೆಗಳಿಗೆ ಬೆಳ್ಳಕ್ಕಿಗಳ ತೋರಣ;
ಗಿರಿಶಿಖರಗಳಿಗೆ ಕಿರು ಮೋಡಗಳ ತೋರಣ;
ನಭದ ಗೊಮ್ಮಟನಿಗೆ ನಕ್ಷತ್ರಗಳ ತೋರಣ;
ಸ್ವತಂತ್ರಧೀರ ಸಿದ್ಧೇಶ್ವರನಿಗೆ
ಅನಂತಕೋಟಿ ಬ್ರಹ್ಮಾಂಡಗಳ ತೋರಣ!

ಈಗ ಸಿದ್ಧಯ್ಯ ಪುರಾಣಿಕರ ವಚನಗಳ ಚಾರು ತೋರಣ ಕೂಡ !

ಇಂದ್ರಿಯಗಳ ಇಕ್ಕಟ್ಟನ್ನು ಮೀರಿದ ಅನುಭವವೊಂದು ಈ ಪಕ್ಷಿ ಪ್ರತಿಮೆಯಲ್ಲಿ ಮೈದೋರಿ ಬೆಳೆಬೆಳೆದು ನಮ್ಮನ್ನು ಮುಗ್ಧರನ್ನಾಗಿ ಮಾಡುತ್ತದೆ :

ಎಲ್ಲಿಂದ ಬಂದುವು ಎಲ್ಲಿಗೆ ಹೊರಟಿವೆ–
ಪಕ್ಷಿಧಾಮವಿರದ ಪಕ್ಷಿಗಳು?
ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ–
ಶರನ್ನಭದ ನೀರದ–ಪಕ್ಷಿಗಳು?
ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ–

ವ್ಯೋಮಾತೀತದ ನಕ್ಷತ್ರ-ಪಕ್ಷಿಗಳು?
ಸ್ವತಂತ್ರಧೀರ ಸಿದ್ಧೇಶ್ವರಾ,
ಎತ್ತಣಿಂದ ಬಂದುವು ಎತ್ತ ಹೊರಟಿವೆ
ಶೂನ್ಯಾಶೂನ್ಯದಿಂದ ಬಂದ ಶೂನ್ಯ ಪಕ್ಷಿಗಳು?

ಪ್ರಶ್ನೆಯ ರೂಪದಲ್ಲಿದ್ದರೂ ವಾಸ್ತವವಾಗಿ ಒಂದು ವಿಶೇಷಾನುಭೂತಿ ಅಭಿವ್ಯಕ್ತವಾಗಿದೆ, ಈ ವಚನದಲ್ಲಿ :

ತೆಂಗಿನಲ್ಲಿ ತೆಪ್ಪಗೆ ಕೊಬ್ಬರಿ ಮೂಡಿ ಬೆಳೆಯುತ್ತದೆ;
ಹಲಸಿನಲ್ಲಿ ಸದ್ದಿಲ್ಲದೆ ತೊಳೆಗಳು ತುಂಬಿಕೊಳ್ಳುತ್ತವೆ;
ಹೂವಿನಲ್ಲಿ ಗದ್ದಲವಿಲ್ಲದೆ ಮಧು ಬಿಂದುಗಳು ಮೈದೋರುತ್ತವೆ;
ನನ್ನ ಕಣಕಣದಲ್ಲಿ ತುಂಬಿರುವ
ನೀನೇಕೆ ಬೆಳಕಾಗಿ ತುಳುಕದಿಹೆಯಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರ!

ಇದೆಲ್ಲ ಬೆಳಕಿನ ಲೋಕ. ಇದಕ್ಕೊಂದು ಕತ್ತಲೆಯ ಅಂಚೂ ಉಂಟು. ತಮ್ಮ ಮನೋದೌರ್ಬಲ್ಯದ ಗಳಿಗೆಗಳನ್ನು ಕವಿ ಪ್ರಾಮಾಣಿಕವಾಗಿ ದಾಖಲಿಸುತ್ತಾರೆ; ದ್ವಂದ್ವಗಳನ್ನು ಬಿಚ್ಚಿಡುತ್ತಾರೆ. ಹುಲುಬಯಕೆಗಳು ಇಂಗಿ, ಉದಾತ್ತವಾದ ಅಭೀಪ್ಸೆಗಳಿಗೆ ಎಡೆಮಾಡಿಕೊಡಲೆಂಬ ಈ ಹಾರೈಕೆ ಅರ್ಥವತ್ತಾಗಿದೆ.

ತೆಂಗಿನಕಾಯಿಯಲ್ಲಿ ತಲೆದೋರುವ ನೀರು
ತೆಂಗಿನಕಾಯಿಯಲ್ಲಿಯೇ ಬತ್ತುವಂತೆ
ನನ್ನೊಳೇ ಮೂಡಿ ಈಡೇರದ ಬಯಕೆಗಳು
ನನ್ನೊಳಗೇ ಬತ್ತಿಬಿಡಲಯ್ಯ!
ಚಿಂತೆಯ ಚಿತೆಯ ಜ್ವಾಲಗಳಾಗಿ ಸುತ್ತದಿರಲಯ್ಯ!
ಸೆಲೆ ನಿಂತರೆ ಬಾವಿಯ ಜಲ ಬತ್ತುವಂತೆ
ಕೀಳು ಬಯಕೆಯ ಬಳ್ಳಿಯೂ ಬಾಡಿ ಬತ್ತಲಯ್ಯ!
ಅಲ್ಲಿ ನಿನ್ನ ಬಯಕೆಯ ಬಳ್ಳಿ ಬೆಳೆಯಲಯ್ಯಾ-
ಸ್ವತಂತ್ರಧೀರ ಸಿದ್ಧೇಶ್ವರಾ!

ಅಂಧಕಾರದ ನಡುವೆಯೂ ಶ್ರದ್ಧೆ ಉದ್ಬುದ್ಧವಾಗುತ್ತದೆ ; ಭಯ ತೊಲಗಿ ಭರವಸೆಯ ಹರೆ ಮೊಳಗುತ್ತದೆ :

ಬಾಳಿನ ಬೆಳಕನ್ನು ನುಂಗಲು
ಸದಾ ಸಜ್ಜಾಗಿ ನಿಂತ ಸಾವಿನ ಕತ್ತಲೆಯೆ,
ಬಾಳ ಬೆಳಕು ಬಲಹೀನವಾಗುವುದನ್ನೇ
ಕಾಯುತ್ತಲಿಹೆಯೇನು?
ಕತ್ತಲೆಯನ್ನೇ ಬೆಳಕಾಗಿಸುವ ಬಲ ಬೆಳಕಿಗಿರುವನಕ

ಬೆಳಕಿಗೆ ಕತ್ತಲೆಯ ಭಯವೆಲ್ಲಿ?
ಸಾವನ್ನೇ ಸ್ವಾಹಾ ಮಾಡುವ ಬಲ ಬಾಳಿಗೆ ಬಂದಾಗ
ಬಾಳಿಗೆ ಸಾವಿನ ಭಯವೆಲ್ಲಿ?
ಸ್ವತಂತ್ರಧೀರ ಸಿದ್ಧೇಶ್ವರ ಮನಸ್ಸು ಮಾಡದೆ
ಜೀವನವೆಲ್ಲಿ, ಮರಣವೆಲ್ಲಿ?

ಈ ಕವಿ ನಿಸರ್ಗದ ಚೆಲುವಿಗೆ ಕಣ್ಣು ತೆರೆದವರೆಂಬುದಕ್ಕೆ "ಗಂಧ ರಂಗುಗಳ ರಂಗ ನಿನ್ನ ಸೃಷ್ಟಿ" ಮುಂತಾದ ಉದ್ಗಾರಗಳೂ ಪ್ರಮಾಣ. ಅಂತೆಯೆ, ವರ್ತಮಾನಕ್ಕೆ ಕವಿ ಸ್ಪಂದಿಸಿದ್ದಾರೆ; ವಿಶ್ವಪ್ರಜ್ಞೆಯನ್ನು ಪ್ರಕಟಿಸಿದ್ದಾರೆ. ಆದ್ಯ ಶರಣರಿಗಿದ್ದ ಕಾಲದೇಶಗಳ ಹಿನ್ನೆಲೆಗಿಂತ ಭಿನ್ನವಾದುದು, ಪುರಾಣಿಕರಿಗಿರುವ ಹಿನ್ನೆಲೆ. ಈ ವಚನಗಳನ್ನು ನೋಡಿದರೆ ಸಾಕು :

ಇರಾಕ್ ಇರಾಣಗಳಲ್ಲಿ ಮದ್ದು ಸಿಡಿದರೆ
ಇಲ್ಲಿ ನಮ್ಮ ಉಸಿರುಗಟ್ಟುತ್ತದೆ;
ಜರ್ಮನಿಯಲ್ಲಿ ಬರ್ಲಿನ್ ಗೋಡೆ ಬಿದ್ದರೆ
ಇಲ್ಲಿ ಸದ್ದಿಲ್ಲದೆ ಬುದ್ಧಿ ಬದಲಾಗುತ್ತದೆ;
ಬೀಜಿಂಗಿನಲ್ಲಿ ಸರಕಾರ ಬದಲಾದರೆ
ದೇಶದೇಶಗಳ ಸಂಬಂಧಗಳೇ ಬದಲಾಗುತ್ತವೆ;
ಎಷ್ಟು ಸ್ಪಂದನಶೀಲ ಜಗತ್ತು ಇಂದು!
ಹೃದಯವೂ ಸ್ಪಂದನಶೀಲವಾಗಲೆಂದ–
ಸ್ವತಂತ್ರಧೀರ ಸಿದ್ಧೇಶ್ವರ!

ಇಂದು ಮನುಕುಲ ಅಳಿವಿನ ಅಂಚಿನಲ್ಲಿದೆ. ಅಂಥ ಸಂಭವ ತಪ್ಪಲೆಂದು ಕವಿ ಲೋಕಕಲ್ಯಾಣ ದೃಷ್ಟಿಯಿಂದ ಹಾರೈಸುವ ಬಗೆಯಿದು:

ಆಫ್ರಿಕಾದಲ್ಲಿ ಹುಟ್ಟಿದನೋ, ಇನ್ನೆಲ್ಲಿ ಹುಟ್ಟಿದನೋ–
ಅಂತೂ ಹುಟ್ಟಿದ ಮೊದಲ ಮಾನವ,
ಹಬ್ಬಿಸಿದ ತನ್ನ ಸಂತಾನವ,
ಗಳಿಸಿದ ಬುವಿ ಬಾನುಗಳಲ್ಲಿ ತನ್ನ ಸ್ಥಾನವ
ಬೆಳೆಸಿದ ಜ್ಞಾನ ವಿಜ್ಞಾನವ,
ಅನುಭವಿಸಿದ ಪತನೋತ್ಥಾನವ–
ಹಾಡಿಸದಿರಯ್ಯ ಅವನಿಂದಲೇ ಅವನ ಹಂಸಗಾನವ–
ಸ್ವತಂತ್ರಧೀರ ಸಿದ್ಧೇಶ್ವರ!

ಕವಿಯ ಹೃದಯ ಎಲ್ಲ ಎಲ್ಲೆಗಳನ್ನೂ ದಾಟಿ, ಉದಾರವಾದದ್ದು : ಒಳಿತು ಎಲ್ಲಿದ್ದರೂ ಗುರುತಿಸುವಂತದು. ಆ ಔದಾರ್ಯಕ್ಕೆ ಸಾಕ್ಷ್ಯ ನುಡಿಯುತ್ತಿದೆ, ಈ ವಚನ.

ಮದರ್ ತೆರೇಸಾ, ಮದರ್ ತೆರೇಸಾ,
ನಿನ್ನ ಹೃದಯಕ್ಕೆ ಹೋಲಿಸ ಹೊರಟರೆ
ಆಗಸವೂ ಒಳಮುಚುಗವಾಗುವುದು ತಾಯೆ!
ನಿನ್ನ ಪ್ರೀತಿಯ ಆಳ ಅಗಲಗಳ ಮುಂದೆ
ಸಾಗರಗಳೇ ಸಣ್ಣವು, ತಾಯೆ!
ನಿನ್ನ ಒಲವಿನ ಹೊನಲು ಮಡಿ ಮಾಡಿದ
ಗುಡಿಸಲುಗಳಿಗೆ ನಮೋ, ನಮೋ–
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ!

ಬಿಡುಗಣ್ಣನಾಗಿ ಎಲ್ಲವನ್ನೂ ಅವಲೋಕಿಸುವ ಕವಿಯ ಮನಸ್ಸನ್ನು ದೇಶದ ಇಂದಿನ ಪರಿಸ್ಥಿತಿ ತೀವ್ರವಾಗಿ ಕಲಕಿದೆ ಎಂಬುದಕ್ಕೆ ನಿದರ್ಶನ, ಈ ವಚನ :

ಅಮಾಯಕರ ಕೆನ್ನೀರಿನಲ್ಲಿ ಬೆಳೆಯಲೇಬೇಕೆ
ಕಾಶ್ಮೀರದ ಕೇಶರದ ಹೊಲಗಳು?
ನಿರ್ದೋಷಿಗಳ ನೆತ್ತರಿನಲ್ಲಿ ಬೆಳೆಯಲೇಬೇಕೆ
ಪಂಜಾಬದ ಹೊಂಗೋದಿಯ ಹೊಲಗಳು?
ಪಾಪಭೀರುಗಳ ರಕ್ತದಲ್ಲಿ ಬೆಳೆಯಲೇಬೇಕೆ
ಅಸಾಮಿನ ಚಹಾ ತೋಟಗಳು?
ಸಜ್ಜನರ ಶೋಣಿತದಲ್ಲಿ ಬೆಳೆಯಲೇಬೇಕೆ
ಆಂಧ್ರದ ಬತ್ತದ ಗದ್ದೆಗಳು?
ಇದೆಂಥ ಕರ್ಮಕಾಂಡ ಕೃಪಾಕರಾ,
ಸ್ವತಂತ್ರಧೀರ ಸಿದ್ಧೇಶ್ವರಾ!

ರಾಮ ಜನ್ಮಭೂಮಿ ವಿವಾದವನ್ನೂ ಒಂದು ವಚನ ಎತ್ತಿಯಾಡುತ್ತದೆ. "ಏಕ ಕಾಲಕ್ಕೆ ಅನೇಕ ಶತಮಾನಗಳಲ್ಲಿ ಬದುಕುತ್ತಿರುವ ಜನರ ಭೂಮಿಯಿದು ಭಾರತ" ಎಂಬುದು ಒಂದೆಡೆ ಕವಿಯ ಕಟಕಿ.

ರಾಜಕೀಯ ಚಿಂತನವೂ ಸುಳಿದಿದೆ, ಈ ವಚನದಲ್ಲಿ :

ಮರದ ಬದುಕಿಗೆ ತಾಯಿ ಬೇರೊಂದೇ ಸಾಕೇನಯ್ಯ?
ಅಕ್ಕಪಕ್ಕದ ಲೆಕ್ಕವಿಲ್ಲದ ಚಿಕ್ಕ ಬೇರುಗಳು ಬೇಡವೇನಯ್ಯ?
ಸಬಲ ಕೇಂದ್ರ ಪ್ರಭುತ್ವ ಮಾತ್ರ ದೇಶದ ಭದ್ರತೆಗೆ ಸಾಕೇನಯ್ಯ?
ರಾಜ್ಯಗಳೂ ಸುಭದ್ರವಾಗಿರುವುದು ಬೇಡವೇನಯ್ಯ?
ಕೇಂದ್ರ ಹೊಟ್ಟೆ, ರಾಜ್ಯಗಳು ಅವಯವಗಳು,
ಹೊಟ್ಟೆಯಿರುವುದೇ ಅಂಗಾಂಗಗಳಿಗೆ ಪುಷ್ಟಿ ನೀಡಲು.
ನಮ್ಮ ಕೇಂದ್ರ ಪ್ರಭೃತಿಗಳಿದನ್ನು ಆದಷ್ಟು ಬೇಗ ಅರಿಯಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ?

ಕವಿಯ ಮೃದುವಾದ, ಹದವಾದ, ಚಿಕಿತ್ಸಕ ಉದ್ದೇಶದ ವಿಡಂಬನ ಹಲವು ವಚನಗಳಲ್ಲಿ ಮುಖ ತೋರಿಸಿದೆ. ಇಲ್ಲಿದೆ ಎಲ್ಲ ಅರ್ಥಗಳಲ್ಲಿ ವ್ಯಂಗ್ಯ :

ಇಂದು ಪತ್ರಿಕೆ ಬರಲಿಲ್ಲ.
ಸಾವುಗಳ ಸುದ್ದಿಗಳನ್ನೋದದೆ
ಜೀವಕ್ಕೆ ಬೇಸರಾಯಿತು–
ಸ್ವತಂತ್ರಧೀರ ಸಿದ್ಧೇಶ್ವರ!

ವಿಡಂಬನದ ನಿಟ್ಟಿನಲ್ಲಿ ಈ ವಚನಗಳನ್ನೂ ಗಮನಿಸಬಹುದು:

ಸಾವಿರ ಭಕ್ತರ ತಲೆಬೋಳಿಸಿ
ಪೂಜಾರಿ ಕಾಶಿಯಾತ್ರೆಗೆ ಹೊರಟಿರುವನಂತೆ:
ಸಾವಿರ ಸಂಸಾರಗಳ ಸುಲಿಗೆ ಮಾಡಿ
ಪುರೋಹಿತ ರಾಮೇಶ್ವರ ಯಾತ್ರೆಗೆ ಹೊರಟಿಹನಂತೆ;
ಸಾವಿರ ಇಲಿಗಳ ತಿಂದ ಬೆಕ್ಕು
ಮಕ್ಕಾಯಾತ್ರೆಗೆ ಹೊರಟಿಹುದಂತೆ;
ಸ್ವತಂತ್ರಧೀರ ಸಿದ್ಧೇಶ್ವರಾ,
ಸಾವಿರ ವಿಮಾನಗಳಲ್ಲಿ ಹಾರಾಡಿ ಹಾರಾಡಿ
ಜನನಾಯಕ ಪಾದಯಾತ್ರೆಗೆ ಹೊರಟಿಹನಂತೆ!
ಗಡಿಯಾರದ ಕಾರ್ಖಾನೆಗಳಲ್ಲಿದ್ದು ಫಲವೇನಯ್ಯ,
ಸಮಯನಿಷ್ಠೆ ಸಾಧಿಸದನ್ನಕ್ಕ?
ಪುಸ್ತಕ ಭಂಡಾರಿಯಾಗಿದ್ದು ಫಲವೇನಯ್ಯ–
ಮಸ್ತಕದಲ್ಲಿ ಗ್ರಂಥಸಾರ ಸೇರದನ್ನಕ್ಕ?
ಸ್ವತಂತ್ರಧೀರ ಸಿದ್ಧೇಶ್ವರಾ
ನಿನ್ನನ್ನು ಅಂಗದ ಮೇಲೆ ಧರಿಸಿ ಫಲವೇನು–
ಮನ ಲಿಂಗವಾಗದನ್ನಕ್ಕ?

ಮುಖ್ಯವಾದ ಮಾತೆಂದರೆ ಸಿದ್ಧಯ್ಯ ಪುರಾಣಿಕರ ವಚನಗಳಲ್ಲಿ ಯುಗ ಧರ್ಮದ ಆವಿಷ್ಕಾರವಿದೆ. ಅವರು ಸ್ವಾತಂತ್ರ್ಯ, ಸಮಾನತೆ, ಸೋದರತೆಗಳ ಕೈವಾರಿ, ಸಮಾನತೆಯ ಉದ್ಘೋಷ ಶಬ್ದ ಚಮತ್ಕಾರಸಹಿತ ಇಲ್ಲಿದೆ :

ಸನಾತನಿಗಳ ಮೇಲೆ ಕೀಳಿನ ಬೃಹಜ್ಜಾಲದಲ್ಲಿ
ಸಿಲುಕದೆ ಉಳಿಯುವುದು ಸುಲಭವಲ್ಲವಯ್ಯ!
ಹುಟ್ಟಿನಿಂದ ಮೇಲು ಕೀಳು,
ವೃತ್ತಿಯಿಂದ ಮೇಲು ಕೀಳು,
ಸೊತ್ತಿನಿಂದ ಮೇಲು ಕೀಳು,
ಮೇಲಿನವರಲ್ಲಿಯೂ ಕಡಮೆ ಮೇಲಿನವರು!
ಕೀಳಿನವರಲ್ಲಿಯೂ, ಕಡಮೆ ಕೀಳರು!

ಕೀಳು, ಕೀಳು, ಕೀಳು–
ಕೀಳು ಮೇಲೆಂಬುದರ ಮೂಲವನ್ನೇ ಕೀಳು!
ಸ್ವತಂತ್ರಧೀರ ಸಿದ್ಧೇಶ್ವರ ಸಾಕ್ಷಿಯಾಗಿ
ಕೀಳು, ಕೀಳು!

ಹೀಗೆಯೇ ಹಿತವಾದ ಶಬ್ದ ಸಂಸ್ಕೃತಿಯನ್ನು ಮೆರೆಯುತ್ತವೆ, ಇನ್ನೆಷ್ಟೋ ವಚನಗಳು.

ಈ ವಚನದಲ್ಲಿ ಕವಿ ಉಜ್ವಲವಾದ ಬಂಡಾಯ ಪ್ರಜ್ಞೆಯನ್ನು ಅಭಿವ್ಯಕ್ತಿಸಿ, ಹೊಸ ಸಂಸ್ಕೃತಿಯ ಹರಿಕಾರರಾಗಿದ್ದಾರೆ; ಶೋಷಕ ಸಂಸ್ಕೃತಿಯನ್ನು ಹರಿದೊಗೆಯುವ ನಿಲುವನ್ನು ಸೂಚ್ಯವಾಗಿ ಸಾರಿದ್ದಾರೆ :

ಹೊಟ್ಟೆ ತುಂಬಿದವರ ಹವ್ಯಾಸಗಳೇ ಬೇರೆ.
ಹಸಿದ ಹೊಟ್ಟೆಯವರ ಅಭಿಲಾಷೆಗಳೇ ಬೇರೆ !
ಹೊಟ್ಟೆ ತುಂಬಿದವರಿಗೆ ಬೇಕು ಕಾವ್ಯಶಾಸ್ತ್ರ ವಿನೋದ.
ಹಸಿದವರಿಗೆ ಬೇಕು ಹಿಟ್ಟು–ಹಣಗಳ ಪ್ರಸಾದ;
ಹೊಟ್ಟೆ ತುಂಬಿದವರು ಹುಟ್ಟುಹಾಕಿದ ಸಭ್ಯತೆ ಸಂಸ್ಕೃತಿಗಳು
ಹಸಿದವರಿಗೆ ಹಿಡಿಸಬಲ್ಲುವೇನಯ್ಯ?
ಹಸಿದ ಹೊಟ್ಟೆಯಿಂದಲೀ ಹೊಸ ಸಂಸ್ಕೃತಿ ಹುಟ್ಟಲಯ್ಯ–
ಸ್ವತಂತ್ರಧೀರ ಸಿದ್ಧೇಶ್ವರಾ!

"ಬಡವರ ಬೆವರು ಮಡುಗಟ್ಟಿದಾಗ, ಅಲ್ಲಿ ಮೊಸಳೆ ಸೇರುತ್ತದೆ" ಮೊದಲಾದ ಪರಿಣಾಮಕಾರಿ ರೂಪಕೋಕ್ತಿಗಳನ್ನೂ ಈ ಸಂಬಂಧವಾಗಿ ಲಕ್ಷಿಸಬಹುದು. ಹೆಣ್ಣಿನ ವಿಮೋಚನೆಯತ್ತಲೂ ಕವಿಯ ಆಲೋಚನೆ ಹರಿದಿದೆ.

"ಹುಟ್ಟು ಹಬ್ಬಗಳು ಬಂದುವು, ಹೋದುವು ಹೊಸ ಹುಟ್ಟು ಬರಲಿಲ್ಲವಯ್ಯ!" ಎಂದು ಒಂದೆಡೆ ಕೊರಗಿದ್ದಾರೆ, ಕವಿ. ವ್ಯಥೆಗೆ ಆಸ್ಪದವಿಲ್ಲ. ಹೊಸ ಹುಟ್ಟು ಹೊಳೆಯುತ್ತಿದೆ, ಇಲ್ಲಿನ ವಚನಗಳಲ್ಲಿ, "ಈ ವ್ಯರ್ಥಾಲಾಪಕ್ಕೂ ಅರ್ಥ ಬಂದೀತೊಮ್ಮೆ" ಎಂದು ಕವಿಯೇ ಒಂದು ಕಡೆ ಸಮಾಧಾನಪಟ್ಟುಕೊಂಡಿದ್ದಾರೆ. 'ವಚನಾರಾಮ' ವ್ಯರ್ಥಾಲಾಪವಲ್ಲ. ಬಹಳಷ್ಟು ಕಾವ್ಯಾಲಾಪ ಇಲ್ಲಿದೆ; ಅದು ಭವಿಷ್ಯಕ್ಕಾಗಿ ಕಾಯಬೇಕಾಗಿಲ್ಲ. ಅದು ಕ್ರಿಯಾಭಿಮುಖಿಯೂ ಹೌದು.

ಕವಿ ಭವಿಷ್ಯದರ್ಶಿ. ಅವನ ದೃಷ್ಟಿ ಇಂದಿನ ಮಬ್ಬನ್ನು ಹಾದು, ನಾಳಿನ ಬೆಳಗನ್ನು ಕಾಣುತ್ತದೆ. "ಕುಸಿಯುವ ಮುನ್ನ ಕೇಕೆ ಹಾಕುತ್ತಿದೆಯೇ ಕೆಡುಕಿನ ಕಟಕ?" ಎಂದು ವರ್ಣಾವೃತ್ತಿಯುಕ್ತವಾಗಿ ಕೇಳುವ ಕವಿ, ನವೋದಯವನ್ನು ಮತ್ತು ಶಿವೋದಯವನ್ನು ಧ್ವನಿಸುತ್ತಾರೆ. ಅದಕ್ಕೆ ಬೇಕಾದ ಬೀಜಗಳನ್ನು ಸರಿಯಾದ ಹಣ್ಣಿನ ಸಹಿತ ಕೊಡುತ್ತದೆ, 'ವಚನಾರಾಮ'.

ಎಲ್ಲಿ ಕೈಹಾಕಿದರೂ ಸೂಕ್ತಿ ಸುಮಗಳು ಸಿಗುತ್ತವೆ, ಈ ತೋಟದಲ್ಲಿ. ಒಂದೇ ಒಂದು ಉದಾಹರಣೆ ಸಾಕು: "ಇತಿಹಾಸ ಓದುವುದು ಇತಿಹಾಸ ನಿರ್ಮಿಸಲೆಂದು, ಇಸ್ವಿಗಳ ನೆನಪಿಡಲು ಅಲ್ಲ". ಪರಂಪರೆಯ ಸಾರವನ್ನು ದೂರೀಕರಿಸದೆ ಗತ ಇತಿಹಾಸಕ್ಕೆ ವಿದಾಯ ಹೇಳಿ, ಹೊಸ ಇತಿಹಾಸವನ್ನು ನಿರ್ಮಿಸಲು ಕಳಕಳಿ 'ವಚನಾರಾಮ'ದ ರಚನೆಗಳಲ್ಲಿದೆ ಎಂಬುದು ಅದರ ಒಂದು ಮಹತ್ವ.

ಪ್ರತಿಭೆ, ಪಾಂಡಿತ್ಯ, ಪ್ರಪಂಚಾನುಭವಗಳ ಮುಕ್ಕೂಟವುಳ್ಳ 'ವಚನಾರಾಮ'ದ ಎಲ್ಲ ವಚನಗಳೂ ಒಂದೇ ಶ್ರೇಣಿಯವಲ್ಲ; ಅಂಥ ಸಮತೆ ಸಾಧ್ಯವೂ ಇಲ್ಲ. ಎಷ್ಟೋ ವಚನಗಳಲ್ಲಿ ವಿವಿಧ ದೌರ್ಬಲ್ಯಗಳಿವೆ; ವಾಚ್ಯತೆ, ಬುದ್ಧಿಪೂರ್ವಕ ಸಮೀಕರಣ, ವಿಶಿಷ್ಟ ಚಮತ್ಕಾರ, ಭಾವವಾಗದ ವಿಚಾರ, ಸಾವಯವ ಶಿಲ್ಪದ ಅಭಾವ ಇತ್ಯಾದಿ. ಈ ಮುಖದ ವಿಸ್ತರಣವನ್ನು ವಿಮರ್ಶಕರಿಗೆ ಇಡೋಣ. ಮುನ್ನುಡಿಕಾರ ಮುಖ್ಯವಾಗಿ ಒಬ್ಬ ಸಹೃದಯ; ಅವನ ದೃಷ್ಟಿ ಇಲ್ಲಿನ ಹಲವಾರು ವಚನಗಳಲ್ಲಿ ಶ್ರೇಷ್ಠತೆಯನ್ನು ಗುರುತಿಸುತ್ತದೆ. 'ವಚನೋದ್ಯಾನ', 'ವಚನನಂದನ'ಗಳಲ್ಲಿ ಸಿದ್ಧಯ್ಯ ಪುರಾಣಿಕರು ಮೆರೆದ ಸಾಧನೆ ಇಲ್ಲಿ ಸಿದ್ಧಿಯಾಗಿ ಮಾಗಿದೆ ಎನ್ನಬೇಕು.[೧]

ಹಾಗೆ ನೋಡಿದರೆ, ತಮ್ಮ ವಚನಗಳ ಪರಿಮಿತಿಗಳನ್ನು ಪುರಾಣಿಕರೇ ಚೆನ್ನಾಗಿ ಬಲ್ಲರು. ಒಂದೆಡೆ ಅವರು ಕೇಳುತ್ತಾರೆ "ಆದ್ಯರ ವಚನಗಳಿಗೆ ಆಧುನಿಕ ವಚನಗಳು ಸರಿಯೇ?" ಎಂದು. "ಎನ್ನ ವಚನಬಂಧ ಸಡಿಲಾದುದೆನ್ನುವರಯ್ಯ..... ಇದು ಒಪ್ಪಬೇಕಾದ ಮಾತು" ಎಂದು 'ವಚನ ನಂದನ'ದ ಕಡೆಯಲ್ಲಿ ಹೇಳುತ್ತಾರೆ. ಈ ಅರಿವು ಆರೋಗ್ಯಕರ. ಇಲ್ಲಿನ ವಚನಗಳು 'ವಚನೋದ್ಯಾನ'ದ ವಚನಗಳಷ್ಟು ಅಳ್ಳಕವಲ್ಲ ಎಂಬುದೂ ಗಮನಾರ್ಹ.

ಒಳ್ಳೆಯ ಸಾಹಿತ್ಯದ ಒಂದು ಮಾನದಂಡವನ್ನು ಸಿದ್ಧಯ್ಯ ಪುರಾಣಿಕರು ಸ್ವಾರಸ್ಯಯುತವಾಗಿ ಕೊಡುತ್ತಾರೆ, ಈ ಪ್ರಾರ್ಥನಾರೂಪದ ವಚನ ಪಂಕ್ತಿಗಳಲ್ಲಿ.

ಕೈತೊಳೆದು ಮುಟ್ಟಬೇಕಾದ ಗ್ರಂಥಗಳ ಕೊಡು ತಂದೆ–

ಮುಟ್ಟಿ ಕೈ ತೊಳೆಯಬೇಕಾದ ಕೃತಿಗಳನ್ನಲ್ಲ.............

ಕೈ ತೊಳೆದು ಮುಟ್ಟಬೇಕಾದ ಸಾಹಿತ್ಯವನ್ನು ಪುರಾಣಿಕರು ಭಗವತ್ಕೃಪೆಯಿಂದ ಕೊಟ್ಟಿದ್ದಾರೆ, ಪ್ರಸ್ತುತ 'ವಚನಾರಾಮ'ದಲ್ಲಿ. ಅದು ನಮ್ಮ ಮನದಾಳವನ್ನು ಮುಟ್ಟುವಂಥದು.

---

೧. "ಸಿದ್ಧಯ್ಯ ಪುರಾಣಿಕರ 'ವಚನೋದ್ಯಾನ'ವಂತು ಈ ಶತಮಾನದ ವಚನ ಸಾಹಿತ್ಯದಲ್ಲೊಂದು ಗೌರೀಶಂಕರವೆಂದು ಹೇಳಬಹುದಾಗಿದೆ" ಎಂದು ದೇಜಗೌ ಒಂದೆಡೆ ಬರೆಯುತ್ತಾರೆ. ('ಗದ್ಯ, ಶೈಲಿ'. ಪು. ೧೨೮ ಅ. ಟಿ) ಇಂಥ ಮಾತು 'ವಚನೋದ್ಯಾನ'ದ ಬಗೆಗಾಗಲಿ, 'ವಚನ ನಂದನ' 'ವಚನಾಮ'ಗಳ ಬಗೆಗಾಗಲಿ ಅತ್ಯುಕ್ತಿಯಾಗಬಹುದು; ಆದರೆ ಅಸತ್ಯವಲ್ಲ. ಅರ್ವಾಚೀನ ವಚನ ವಾಙ್ಮಯದ ಪರಿಧಿ ಪುರಾಣಿಕರಿಂದ ನಿಸ್ಸಂದೇಹವಾಗಿ ಹಿಗ್ಗಿದೆ. ಅದು ಒಟ್ಟಿನಲ್ಲಿ ನಮ್ಮ ಸಾಹಿತ್ಯದ ಹಿಗ್ಗು.

‘ವಚನಾರಾಮ’ಕ್ಕೆ ಪ್ರವೇಶ ರೂಪವಾಗಿ ಈ ನಾಲ್ಕು ನುಡಿಗಳನ್ನು ಬರೆಯುವ ಅವಕಾಶ ಮಾಡಿಕೊಟ್ಟ ಆಧುನಿಕ ಅನುಭಾವಿ ಸಿದ್ಧಯ್ಯ ಪುರಾಣಿಕರಿಗೆ ಮತ್ತು ಸ್ವತಂತ್ರಧೀರ ಸಿದ್ಧೇಶ್ವರನಿಗೆ ನಮಿಸಿ, ನನ್ನ ಒಂದು ವಚನದಿಂದಲೆ ಮುಕ್ತಾಯಗೊಳಿಸಬಯಸುತ್ತೇನೆ (ಅಂಕಿತಕ್ಕಾಗಿ ಪುರಾಣಿಕರ ಕ್ಷಮೆಯಿರಲಿ!):

ಸಕ್ಕರೆ ಇನಿದಯ್ಯ,
ಸಕ್ಕರೆಗಿಂತ ಜೇನುತುಪ್ಪ ಇನಿದಯ್ಯ
ಜೇನುತುಪ್ಪಕ್ಕಿಂತ ಕನ್ನೆಯೊಲವು ಇನಿದಯ್ಯ,
ಕನ್ನೆಯೊಲವಿಗಿಂತ ಕನ್ನಡ ಇನಿದಯ್ಯ,
ಎಲ್ಲಕ್ಕಿಂತ ಇನಿದು ಕಾಣಾ,
ಸ್ವತಂತ್ರಧೀರ ಸಿದ್ಧೇಶ್ವರ,
ನೀನು ತುಂಬಿದ ನಿನ್ನ ಸದ್ಭಕ್ತನ ಈ ವಚನನಿಚಯ !

**– ಸಿ.ಪಿ.ಕೆ.**

# ಅನುಬಂಧ ೩ – ನಿವೇದನೆಗಳು

## ವಚನೋದ್ಯಾನ

## ಬಾಗಿಲಲಿ ಕೈಮುಗಿವೆ

ಒಳಗೆ ಪ್ರವೇಶಿಸುವ ಮುನ್ನ ಬಾಗಿಲಲಿ ನಿನಗೆ ಕೈಮುಗಿವೆ ಓದುಗ! ನೀನು ಇಂದಿನವನಿರಬಹುದು, ನಾಳಿನವನಿರಬಹುದು, ನೂರು ವರ್ಷಗಳ ತರುವಾಯದವನಿರಬಹುದು– ಯಾರಾದರೂ ಸರಿಯೆ, ಈ ದ್ವಾರದಲ್ಲಿ ನಿನಗೆ ನನ್ನ ನಮಸ್ಕಾರ!

ಒಳಗೆ ವಿಚರಿಸಿ ಬಂದ ಮೇಲೆ ವ್ಯರ್ಥ ಸುತ್ತಿಸುಳಿದ ಅನುಭವ ನಿನಗಾಗುವುದೋ, ಸಾರ್ಥಕ ವಿಹಾರಗೈದ ಹಾಗೆನಿಸುವುದೋ ನಾನರಿಯೆ. ನೀನು ಸ್ವಲ್ಪವಾದರೂ ಸಂತೃಪ್ತನಾಗಿ ಹಿಂದಿರುಗಿದರೆ ನಾನು ಧನ್ಯ; ನೀನು ನಿರಾಶನಾಗಿ ಮರಳಿದರೆ ನಿನ್ನ ಕ್ಷಮಾಗುಣ ನನಗೆ ಶರಣ್ಯ! ಒಳಗೆ ಸುಳಿದಾಡಿದ ಮೇಲೆ ನಿನ್ನ ಅನುಭವವದಾವುದೇ ಇರಲಿ, ಈಗ ಬಾಗಿಲ ಬಳಿ ನಿನಗೆ ಈ ನತಮಸ್ತಕ ಲೇಖಕನ ನಮ್ರ ಸ್ವಾಗತ!

ನಂಬಿದರೆ ನಂಬು, ನಂಬದಿರೆ ಬಿಡು ಓದುಗ–ನನಗೆ ವಚನಗಳನ್ನು ರಚಿಸಬೇಕೆಂಬ ಚಪಲವೇ ಇರಲಿಲ್ಲ. ಆ ಬಾನೆತ್ತರದ ವ್ಯಕ್ತಿತ್ವದ, ಸಾಗರೋಪಮ ಅನುಭಾವಶ್ರೀಯ ಅಂದಿನ ವಚನಕಾರರರೆಲ್ಲಿ, ಈ 'ಮರವೆಯ ಮರುಳ'ನೆಲ್ಲಿ? ಹೀಗಿದ್ದೂ ಹವ್ಯಾಸವಿದು ಹಠಾತ್ತಾಗಿ ಹಾರಿಬಂದು ನನ್ನ ಹೆಗಲೇರಿ ಕುಳಿತಿತು! ಕಲಬುರಗಿ ವಿಭಾಗದ ಶಿಕ್ಷಕ ಮಿತ್ರರ ಮುಖಪತ್ರಿಕೆಯಾದ 'ಜೀವನ ವಿಕಾಸ'ಕ್ಕೆ ಆ ಭಾಗದವನಾದ ನಾನು ಪ್ರತಿ ತಿಂಗಳೂ ಏನಾದರೂ ಕಳಿಸಲೇಬೇಕೆಂದು ಹತ್ತುವರ್ಷಗಳ ಹಿಂದೆ ಹಟ ಹಿಡಿದರು ಹಲವು ಗೆಳೆಯರು. ತಿಂಗಳು ತಿಂಗಳೂ ಏನನ್ನು ಕಳಿಸಬಲ್ಲೆನೆಂದು ಯೋಚನೆಗೊಳಗಾಗಿದ್ದಾಗ ಎಡೆಯೂರಿನ ಶಿವಯೋಗೀಶ್ವರ ಸಿದ್ಧಲಿಂಗೇಶ್ವರರ ದೇವಾಲಯದಲ್ಲಿ ಇದ್ದಕ್ಕಿದ್ದಂತೆ ಎರಡು ವಚನಗಳು ಸ್ಫುರಿಸಿದುವು. ಸರಿ, ಪ್ರತಿತಿಂಗಳೂ ಐದೈದು ವಚನಗಳನ್ನೇ ಕಳಿಸುತ್ತ ಹೋಗುವುದೆಂದೆ ತೀರ್ಮಾನಿಸಿದೆ. ಶ್ರೀ ಸಿದ್ಧಲಿಂಗೇಶ್ವರರ ಅನುಗ್ರಹದಿಂದ, 'ಜೀವನ ವಿಕಾಸ'ದ ಗೆಳೆಯರ ವಿಶೇಷವಾಗಿ ಸರ್ವಶ್ರೀ ಎಸ್.ಪಿ. ಸತೀಶ, ಕೆ. ಶಾಂತಯ್ಯ, ಎ.ಕೆ. ರಾಮೇಶ್ವರರ ಎಡೆಬಿಡುವಿಲ್ಲದ ಓಲೆಗಳ, ನೆನಪೋಲೆಗಳ, ತಂತಿಗಳ ಪ್ರಭಾವದಿಂದ ಈ ನೋಂಪಿ ನಿರಾತಂಕವಾಗಿ ನಡೆದುಮ 'ವಚನೋದ್ಯಾನ'ವಾಗಿ ಬೆಳೆದು ನಿನ್ನೆದುರು ನಿಂತಿದೆ. ಇದರಲ್ಲಿ ಅರಳಿರುವ ಹಲವು ಬಗೆಯ ಹೂಗಳಿಗೆ ಪರಿಮಳವಿದೆಯೆ, ಇಲ್ಲವೆ ಎಂಬುದನ್ನು ನಿರ್ಧರಿಸುವವ ನೀನು. ಒಬ್ಬೊಬ್ಬರಿಗೆ ಒಂದೊಂದು ಪರಿಮಳ ಸೇರುತ್ತದೆ. ಇಲ್ಲಿರುವ ಹೂಗಳಲ್ಲಿ ಎಲ್ಲರಿಗೂ ಅವರವರಿಗೆ ಇಷ್ಟವಾದ ಪರಿಮಳದ ಒಂದು ಹೂವಾದರೂ ಸಿಕ್ಕೀತೆಂದು ಭಾವಿಸಿದ್ದೇನೆ. ಈ ಭಾವನೆಗೆ ಆಧಾರ ಇವುಗಳನ್ನು ಇದಾಗಲೇ ಓದಿ ಮೆಚ್ಚಿರುವ ಹಲವು ಹಿರಿಯರ ಹುರಿದುಂಬಿಸುವ ಮಾತುಗಳು.

ಈ ಹಿರಿಯರ ಹರಕೆನುಡಿಗಳಿಂದ ಉತ್ತೇಜಿತನಾಗಿ ನಾನೀ ವಚನಗಳನ್ನು ಪ್ರಕಟಿಸಲು ಮುಂದಾಗಿದ್ದರೂ ಒಂದು ಮಾತನ್ನಿಲ್ಲಿ ಒಪ್ಪಲೇಬೇಕು ನಾನು: ಈ ಹೊತ್ತಗೆಯನ್ನೆಲ್ಲ ಹುಡುಕಿದರೂ ಬಸವಾದಿ ಪ್ರಮಥರು ಉಸುರಿದಂಥ ಒಂದು ವಚನವೂ ದೊರೆಯಲಾರದು. ಈ ಕೊರತೆಯನ್ನು ಇಂದಿನ ಅನಿಸಿಕೆಗಳ, ಆಲೋಚನೆಗಳ, ಅನುಭವಗಳ ಅಭಿವ್ಯಕ್ತಿಯಿಂದ ತುಂಬಲೆಳಸಿದ ನನ್ನ ಆಸೆ ಎಷ್ಟರಮಟ್ಟಿಗೆ ಈಡೇರಿದೆಯೋ ಹೇಳಲಾರೆ.

ವಚನಗಳ ರಚನೆಯಲ್ಲಿ ಉಪಯೋಗಿಸಿರುವ ಭಾಷೆಯ ಬಗ್ಗೆ ನಾನು ನಿವೇದಿಸಿಕೊಳ್ಳುವುದಿಷ್ಟು; ಆದಷ್ಟು ಅಡಕವಾಗಿ, ಆದರೂ ಸ್ಪಷ್ಟವಾಗಿ, ಸಮುಚಿತಪದ ಭೂಯಿಷ್ಠವಾಗಿ, ಅಭಿವ್ಯಕ್ತಿ ವೈವಿಧ್ಯದಿಂದ ಸಂಪುಷ್ಟವಾಗಿ, ಹೃದ್ಯತೆಗೆ ಹತ್ತಿರವಾಗಿರಲೆಂದು ಹವಣಿಸಿದ್ದೇನೆ; ಇಲಿಯೆಟ್ಟನ ಈ ಅವಿಸ್ಮರಣೀಯ ಪಂಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಅಂತೆ ಬರೆಯಲು ಹೆಜ್ಜೆ ಹೆಜ್ಜೆಗೂ ಹೆಣಗಿದ್ದೇನೆ.

“every word is at home,
Taking its place to supports the others
The words neither difficult nor ostentatious,
An easy commerce of the old and the new,
The common word exact without vulgarity,
The formal word precise but not pedantic,
The complete consort dancing together.”

ಆದರೂ ನಾನು ಹಾರೈಸಿದ್ದ ಭಾಷೆ ಇಲ್ಲಿ ರೂಪುಗೊಂಡಿದೆಯೆಂದು ಹೇಳಲಾರೆ. ಇಷ್ಟು ಮಾತ್ರ ನಿಜ: ಕನ್ನಡ ನುಡಿಯ ಹೊಸ ಸಾಧ್ಯತೆಗಳನ್ನು ಸೂರೆಗೊಂಡಿರದಿದ್ದರೂ ಅದರ ಇದ್ದ ಬೆಡಗುಗಳನ್ನು ಬಳಸಿಕೊಳ್ಳಲು ಬಹಳಷ್ಟು ಸಾಹಸಗಳು ಆಗಾಗ ಅಲ್ಲಲ್ಲಿ ನಡೆದಿದ್ದರೂ ಹನ್ನೆರಡನೆಯ ಶತಮಾನದ ವಚನಸಾಹಿತ್ಯದ ಸತ್ವಗಳಾಗಲಿ, ಬೃಹತ್ತು ಮಹತ್ತುಗಳಾಗಲಿ ಮತ್ತೆ ಮೈದೋರಿಲ್ಲವೆಂಬ ಕಠೋರ ತಥ್ಯದ ನೆನಪೂ ನನಗಿಲ್ಲದಿಲ್ಲ. ಆದುದರಿಂದ, ಬಹಳ ಎಚ್ಚರಿಕೆಯಿಂದ ಒಂದೊಂದು ಸಾಲನ್ನೂ ತೀಕ್ಷ್ಣ ಪರೀಕ್ಷಣಕ್ಕೆ ಗುರಿಪಡಿಸುತ್ತ ಮುಂದುವರಿದಿದ್ದೇನೆ. ಹೀಗಿದ್ದೂ ಇವುಗಳಲ್ಲಿ ಬಯಸಿದ ಭಾಷೆ ಇಲ್ಲವೆಂಬ ಕೊರಗು ನನಗೆ.

ಈ ವಚನಗಳ ವಿಷಯಾನುಗುಣ ವರ್ಗೀಕರಣಕ್ಕೆ ಕೈಹಾಕಿಲ್ಲ ನಾನು. ಎಷ್ಟೇ ಕಟ್ಟುನಿಟ್ಟಾದ ವರ್ಗೀಕರಣ ಮಾಡಿದರೂ ವಿಷಯಗಳ ಮೇಲು–ಸೇರುವೆಯನ್ನು ತಪ್ಪಿಸಲಿಕ್ಕಾಗುವುದಿಲ್ಲ. ಅಲ್ಲದೆ, ಯಾವುದೊಂದು ವಿಚಾರಪ್ರಣಾಳಿಕೆಯನ್ನೋ, ದರ್ಶನವನ್ನೋ, ವಾದವನ್ನೋ ಮುಂದಿರಿಸಿಕೊಂಡು ಈ ವಚನಗಳ ರಚನೆಯಾಗಿಲ್ಲ. ಆದುದರಿಂದ ವರ್ಗೀಕರಣ ಅನಿವಾರ್ಯವೂ ಎನಿಸಲಿಲ್ಲ. ಆದರೂ ಸ್ಥೂಲವಾಗಿ ಸುಸಂಗತತೆ ಸಾಧಿಸುವಂತೆ ಯತ್ನಿಸಿದ್ದೇನೆ.

ರಚಿಸಿದ ವಚನಗಳನ್ನೆಲ್ಲ ಪ್ರಕಟಿಸುವ ಗೋಜಿಗೆ ಹೋಗಿಲ್ಲ. ನನ್ನ ನಿಕಷಕ್ಕೇ ಮತ್ತೆ ಮತ್ತೆ ತಿಕ್ಕಿ ಚೊಕ್ಕವೆನಿಸಿದುವುಗಳನ್ನು ಮಾತ್ರ ಈ ಸಂಗ್ರಹದಲ್ಲಿ ಸೇರಿಸಿದ್ದೇನೆ. ಆದರೂ ತೀರ ಸಾಮಾನ್ಯವೆನಿಸುವ ವಿಚಾರಗಳುಳ್ಳ ವಚನಗಳೂ ಇಲ್ಲಿ ಸೇರದಿಲ್ಲ. ಒಂದು ಜೀವ ನಂಬಿ ತನ್ನದಾಗಿಸಿಕೊಂಡ ಏನೆಲ್ಲವೂ ಒಂದೆಡೆಗಿರಲೆಂಬ ಹಂಬಲವಿದಕ್ಕೆ ಕಾರಣ. ಆದುದರಿಂದ ಇಲ್ಲಿ ಸಂಗ್ರಹಗೊಂಡ ವಚನಗಳೆಲ್ಲ ಕೊನೆಯವರೆಗೆ ಉಳಿದವೆಂಬ ಭ್ರಮೆ ನನಗಿಲ್ಲ, ಉಳಿಯದಿದ್ದರೂ ಕಳವಳವೇನಿಲ್ಲ. ನಾನು ಬದುಕಿರುವಾಗಲೇ ಕೆಲವು ಕೋವಿದರು ಸಾಹಿತ್ಯದ ಈ ಪ್ರಕಾರದಲ್ಲಿ ಕೃಷಿ ಮಾಡಿ ಕೃತಾರ್ಥರಾಗಿದ್ದಾರೆ. ಈ ಕೃಷಿ ನಿಲ್ಲದೆ ಮುಂದುವರಿಯಲು ಈ ಕೃತಿ ನೆರವಾದರೆ ನನಗದೇ ಸಾಕು.

ಈ ವಚನಗಳಲ್ಲಿ ಕೆಲವೆಡೆ ಸಂಸ್ಕೃತ, ಹಿಂದೀ, ಫಾರಸೀ, ಫ್ರೆಂಚ್, ತಮಿಳು, ಮರಾಠಿ ಸಾರೋಕ್ತಿಗಳು, ಸೂಚ್ಯುಕ್ತಿಗಳು, ಸೊಳ್ನುಡಿಗಳು ಉದಾಹೃತವಾಗಿವೆ. ಇದು ಅದೆಷ್ಟು ಆಕರಗಳಿಗೆ ನಾನು ಋಣಿ ಎಂಬುದನ್ನು ಎತ್ತಿತೋರಿಸುವ ಸಾಂಕೇತಿಕ ಋಣಸ್ಮರಣೆಯೇ ಹೊರತು ನನ್ನ ವೈದುಷ್ಯವನ್ನು ಒತ್ತಿಹೇಳುವ ಹಮ್ಮಲ್ಲವೆಂದು ಬಿನ್ನವಿಸಿಕೊಳ್ಳುತ್ತೇನೆ. ಟಿಪ್ಪಣಿ ವಿಭಾಗದಲ್ಲಿ ಇವುಗಳ ಅರ್ಥವನ್ನು ಕೊಡಲಾಗಿದೆ. ಆಯಾ ವಚನಗಳ ಕೆಳಗೇ ಅರ್ಥವನ್ನು ಅಚ್ಚಿಸಬಹುದಿತ್ತು. ಆದರೆ ಅಚ್ಚಿನ ಒಟ್ಟಂದಕ್ಕೆ ಕುಂದುಬರುವುದೆಂದು ಬಲ್ಲವರು ಹೇಳಿದುದರಿಂದ ಹೀಗೆ ಮಾಡಬೇಕಾಯಿತು. ಅಸೌಕರ್ಯವೆನಿಸಿದರೆ ಕ್ಷಮಿಸು ಒಲವಿನ ಓದುಗ!

ಈ ವಚನಗಳ ಅಂಕಿತದ ಬಗ್ಗೆ ಒಂದು ಮಾತು. 'ಕೂಡಲ ಸಂಗನ ಶರಣರು ಸ್ವತಂತ್ರರು, ಧೀರರು,' ಎಂದು ಸಾರಿದ್ದಾರೆ ಬಸವಣ್ಣನವರು. 'ಸ್ವತಂತ್ರ' 'ಧೀರ' ಈ ಎರಡೂ ಪದಗಳು ಪರಮಪ್ರಿಯವಾದುವುಗಳು ನನಗೆ. ಪರಮಾತ್ಮನನ್ನೇ 'ಸರ್ವತಂತ್ರ ಸ್ವತಂತ್ರ'ನೆಂದು ಕರೆಯಲಾಗಿದೆ. 'ಆಹ್ಲಾದ ಮಯಿತ್ವ, ಅನನ್ಯ ಪರತಂತ್ರತೆ'ಗಳು ಅಭಿವ್ಯಕ್ತಿಯ ಪ್ರಮುಖ ಲಕ್ಷಣಗಳೆಂದು ಪರಿಗಣಿತವಾಗಿವೆ. ವ್ಯಷ್ಟಿ ಸಮಷ್ಟಿಗಳ ಸಂಪೂರ್ಣ ವಿಕಾಸ ಸ್ವತಂತ್ರತೆಯ ಪರಿಸರದಲ್ಲಿ ಮಾತ್ರ ಸಾಧ್ಯವೆಂಬುದು ಸರ್ವತ್ರ ಸ್ವೀಕೃತವಾಗುತ್ತಿದೆ. ಭಾರತೀಯರಂತೂ ಇದೇ ವರ್ಷ ಇದನ್ನು ಮತ್ತೆ ಮನಗಂಡಿದ್ದಾರೆ. ಇನ್ನು 'ಧೀರ' ಶಬ್ದದ ಬಗ್ಗೆ ಉಪನಿಷತ್ತುಗಳಲ್ಲಿ ಪದೇಪದೇ ಪ್ರಯೋಗವಾಗುವ ಪದವಿದು. 'ಧಿಯಂ ಈರಯತೀತಿ' ಮತ್ತು 'ಧಿಯಂ ರಾತೀತಿ' ಎಂದಿದರ ವ್ಯುತ್ಪತ್ತಿಯನ್ನು ಹೇಳಲಾಗಿದೆ.

* "ಸ್ವತಂತ್ರಃ ಸ್ವಚ್ಛಾತ್ಮಾ
ಸ್ಫುರತಿ ಸತತಂ ಚೇತಸಿ ಶಿವಃ" – ಅಭಿನವಗುಪ್ತ
"ಆತ್ಮ ಪ್ರಕಾಶ ವಪುರೇಷ
ಶಿವಃ ಸ್ವತಂತ್ರಃ" – ತಂತ್ರಾಲೋಕ

'ತಥಾಪರೇಚಾತ್ಮಸಮಾಧಿ ಯೋಗಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್! ತ್ವಾಮೇವ ಧೀರಾಃ ಪುರುಷಂ ವಿಷಂತಿ' ಎಂದು ಭಾಗವತವು ಹೇಳಿದೆ (೩-೬-೪೫). ಆದುದರಿಂದ ಸ್ವತಂತ್ರರೂ, ಧೀರರೂ ಆಗಿರದವರು ಶರಣರಾಗಲಾರರೆಂಬುದೇ ಉಪರ್ಯುಕ್ತ ಬಸವೋಕ್ತಿಯ ಯತೀಶ್ವರರ ಹೆಸರು ಸೇರಿಸಿ ಅಂಕಿತವನ್ನು ರೂಪಿಸಿಕೊಳ್ಳಲಾಗಿದೆ. 'ಸಿದ್ಧೇಶ್ವರ' ಎಂಬುದು ಸಿದ್ಧರಾಮನಿಗೂ ಇನ್ನೂ ಅನೇಕ ಮಹಾನುಭಾವರಿಗೂ ಸಾಮಾನ್ಯವಾದ ಹೆಸರಷ್ಟೆ?

ಯಾವ ಜನ್ಮದ ಸುಕೃತವೋ, 'ವಿಶ್ವಕವಿ ಕುವೆಂಪು' ಅವರು ನನ್ನ 'ಶರಣ ಚರಿತಾಮೃತ'ಕ್ಕೆ ಮುನ್ನುಡಿ ನೀಡಿ ಹರಸಿದರು; ಪರಮಬಂಧು ಡಾ: ದೇ. ಜವರೇಗೌಡರು ತಮ್ಮ 'ಸಾಹಿತಿಗಳ ಸಂಗಮದಲ್ಲಿ' ನನ್ನನ್ನೂ ಸೇರಿಸಿಕೊಂಡು ಮೇಲೆತ್ತಿ ನಿಲ್ಲಿಸಿದರು; ಈಗ ಇನ್ನೊಬ್ಬ ಪರಮಬಂಧುಗಳಾದ ಡಾ. ಹಾ.ಮಾ. ನಾಯಕರು ತಮ್ಮ ಬಿಡುವಿಲ್ಲದ ಕಾರ್ಯಭಾರದಲ್ಲಿಯೂ ಬಿಡುವು ಮಾಡಿಕೊಂಡು ಈ 'ವಚನೋದ್ಯಾನ'ಕ್ಕೆ ಬಹುಬೆಲೆಯುಳ್ಳ ಮುನ್ನುಡಿಯನ್ನಿತ್ತು ಉಪಕರಿಸಿದ್ದಾರೆ. 'ಜೀವನ ವಿಕಾಸ'ದಲ್ಲಿ ಈ ವಚನಗಳು ಪ್ರಕಟವಾಗುತ್ತಿದ್ದಂತೆ ಇವುಗಳನ್ನು ಆಸಕ್ತಿಯಿಂದ ಓದಿ, ಕಂಡಾಗಲೆಲ್ಲ ಮೆಚ್ಚಿಕೆಯನ್ನು ಸೂಚಿಸುತ್ತ ಪ್ರೋತ್ಸಾಹಿಸುತ್ತಿದ್ದ ಇವರೇ ಇದಕ್ಕೆ ಮುನ್ನುಡಿ ಬರೆಯಬೇಕೆಂಬುದು ನನ್ನ ಬಯಕೆಯಾಗಿದ್ದಿತ್ತು. ಇದನ್ನು ಈಡೇರಿಸಿದ ಅವರಿಗೆ ಚಿರಋಣಿ ನಾನು.

ಇದೇ ಸಂದರ್ಭದಲ್ಲಿ ನನ್ನ ಮುನ್ನಿನ ಕೃತಿಗಳಿಗೆ ಮುನ್ನುಡಿಗಳನ್ನಿತ್ತು ಉಪಕರಿಸಿದ ಮಹಾಕವಿ ಡಾ: ದ.ರಾ. ಬೇಂದ್ರೆಯವರು, ವರಕವಿಗಳಾದ ಡಾ. ವಿ.ಕೃ. ಗೋಕಾಕ ಹಾಗೂ ಪು.ತಿ.ನ. ಅವರು, ಶ್ರೀ ಎಸ್.ಎಸ್. ಒಡೆಯರ್ ಅವರು. 'ನನ್ನ ಸಾಹಿತ್ಯ ಕೃಷಿಗೆ ನೀರೆರೆದ ವಿದ್ಯಾಗುರುಗಳಾದ ದಿವಂಗತ ಡಾ. ಪಾ.ಭೀ. ದೇಸಾಯಿ, ದಿ: ಪ್ರೊ. ಡಿ.ಕೆ. ಭೀಮಸೇನರಾವ್, ದಿ: ವಿದ್ವಾನ್ ಮಾನ್ವಿ ನರಸಿಂಗರಾವ್ ಹಾಗೂ ಪ್ರೊ. ತವಗ ಭೀಮಸೇನರಾಯರು, ಬೆನ್ನುತಟ್ಟಿ ಮುನ್ನಡೆಸಿದ ಮಹಾ ಸಾಹಿತಿಗಳಾದ ಮಾಸ್ತಿ ವೆಂಕಟೇಶ ಐಯಂಗಾರ್ಯರು, ಡಿ.ವಿ.ಜಿ. ಅವರು, ಪಂಡಿತಾಗ್ರಣಿಗಳಾದ ತೀ.ನಂ.ಶ್ರೀ., ಡಿ.ಎಲ್.ಎನ್. ಅವರು, ಡಾ. ಆರ್.ಸಿ. ಹೀರೇಮಠರು, ಡಾ. ರಂ.ಶ್ರೀ. ಮುಗಳಿ ಅವರು, ಪ್ರೊ. ಮಾಳವಾಡರು, ಡಾ. ಜಿ.ಎಸ್. ಶಿವರುದ್ರಪ್ಪನವರು, ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು, ಲಿಂ. ಪ್ರೊ. ಜಿ.ಎಸ್. ಹಾಲಪ್ಪನವರು, ಶ್ರೀ ಎಚ್.ಎಲ್. ನಾಗೇಗೌಡರು, ಪಾಟೀಲ ಪುಟ್ಟಪ್ಪನವರು, ಶ್ರೀ ಜಿ. ನಾರಾಯಣರು ಇನ್ನೂ ಅನೇಕರ ವಾತ್ಸಲ್ಯ ಪ್ರೋತ್ಸಾಹಗಳನ್ನು ಸಗೌರವ ಸ್ಮರಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಪರಿಚಿತ ಪ್ರಕಾಶಕರಾರೂ ಉತ್ಸಾಹ ತೋರಲಿಲ್ಲವಾಗಿ 'ಶ್ರೀಗಿರಿ ಪ್ರಕಾಶನ' ಲಾಂಛನದಡಿಯಲ್ಲಿ ನಾನೇ ಪ್ರಕಟಿಸಬೇಕಾಯಿತು. ಇದಕ್ಕೆ ಇನ್ನಾವ ಮಹತ್ವವೂ ಇಲ್ಲ. ನನಗೂ ಪ್ರಕಾಶಕರೊಡನೆ ವ್ಯವಹರಿಸುವ ಜಾಣ್ಮೆಯಿಲ್ಲ. ಗೆಳೆಯರೂ ಉತ್ತೇಜನವಿತ್ತರು. ಒಬ್ಬರಂತೂ ಹಣವಿತ್ತೂ ಹೆಸರು ಹೇಳಕೂಡದೆಂದು ಹಟಹಿಡಿದರು. ಹೀಗಾಗಿ ಬೇರೆ ದಾರಿಯೇ ಇಲ್ಲವಾಯಿತು. ಸಾಧ್ಯವಾದರೆ ನನ್ನೆಲ್ಲ ಕೃತಿಗಳನ್ನೂ ಕೆಲವು ಅಪ್ರಕಟಿತ ಪ್ರಾಚೀನ

ಕೃತಿಗಳನ್ನೂ ಪ್ರಕಟಿಸುವ ಹಂಬಲವಿದೆ ಈ ಲಾಂಛನದಡಿಯಲ್ಲಿ. 'ಲೋಟಸ್ ಪ್ರಿಂಟರ್ಸ್' ತಾಳ್ಮೆಯಿಂದ ಅಂದವಾಗಿ ಅಚ್ಚಿಸಿಕೊಟ್ಟರು. ತಪ್ಪುಳಿಯದಂತೆ ಅಚ್ಚು ಮಾಡುವುದಕ್ಕೆ ಹೆಸರಾದ ಅವರೂ, ನಾನು ಅಲಕ್ಷ್ಯದಿಂದಿದ್ದುದಕ್ಕೆ 'ಒಪ್ಪೋಲೆ' ಜೋಡಿಸುವಂತಾಯಿತು. ಅವರಿದನ್ನು ಗಮನಿಸದೆ ಸಹನೆಯಿಂದ ಸಹಕರಿಸಿದ್ದಾರೆ. ಅವರಿಗೆ ವಂದನೆಗಳು.

– ಸಿದ್ಧಯ್ಯ ಪುರಾಣಿಕ

'ಶ್ರೀಗಿರಿ'

೪/೫ಎ, ಅಲಿಆಸ್ಕರ್ ರಸ್ತೆ,

ಬೆಂಗಳೂರು – ೫೬೦ ೦೫೨.

## ವಚನ ನಂದನ

# ನನ್ನ ನಾಲ್ಕು ನುಡಿ

ಅಂಜುತ್ತ ಹಿಂಜರಿಯುತ್ತ ಪ್ರಕಟಿಸಿದ್ದ 'ವಚನೋದ್ಯಾನ'ಕ್ಕೆ ಮನ್ನಣೆ ಬೆಕ್ಕಸ ಬೆರಗುಗೊಳಿಸಿದೆ ನನ್ನನ್ನು. ಅದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪ್ರಶಸ್ತಿ, ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಪುರಸ್ಕಾರ, ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಮಾಳವಾಡ ಬಹುಮಾನಗಳು ಬಂದುದೂ, ಹಿಂದಿಯಲ್ಲಿ ಅದರ ಸಮಗ್ರ ಅನುವಾದ, ಮರಾಠಿಯಲ್ಲಿ ಅದರ ಸಂಗ್ರಹಾನುವಾದಗಳು ಅಪ್ರಯತ್ನಿತವಾಗಿ ಪ್ರಕಟವಾದುದೂ, ಇಂಗ್ಲೀಷ್, ಫ್ರೆಂಚ್ ಹಾಗೂ ಉರ್ದು ಭಾಷೆಗಳಲ್ಲಿ ಅದರ ಅನುವಾದ ಕಾರ್ಯದ ಆಯೋಜನೆ ರೂಪುಗೊಳ್ಳುತ್ತಿರುವುದೂ ನನಗೆ ಎಷ್ಟು ವಿಸ್ಮಯವನ್ನು ಉಂಟುಮಾಡಿರುವುವೋ ಅದಕ್ಕೂ ಹೆಚ್ಚು ಅಚ್ಚರಿಯನ್ನು ಅನೇಕ ಹಿರಿಯ ಸಾಹಿತಿಗಳ ಮೆಚ್ಚಿಗೆಯ ಮಾತುಗಳು ಮೂಡಿಸಿವೆ. ಇವರಲ್ಲಿ ಕೆಲವರ ಅಭಿಪ್ರಾಯಗಳು ಈ ಹೊತ್ತಿಗೆಯ ಬೆನ್ನು ಪುಟದ ಮೇಲೆ ಪ್ರಕಟವಾಗಿದೆ. ಉಳಿದುವು ಬೆಳಗಾವಿಯ ಗೆಳೆಯರು ಪ್ರಕಟಿಸಿರುವ ಅಭಿನಂದನ ಗ್ರಂಥ 'ಕಾವ್ಯಾನಂದ'ದಲ್ಲಿ ಡಾ. ದೇ.ಜವರೇಗೌಡರು ಸಂಪಾದಿಸಿ ಪ್ರಕಟಿಸಿರುವ 'ವಚನೋದ್ಯಾನ ದರ್ಶನ'ದಲ್ಲಿ ಬೆಂಗಳೂರಿನ 'ಡಾ. ಸಿದ್ಧಯ್ಯ ಪುರಾಣಿಕ ಅಭಿನಂದನ ಸಮಿತಿ'ಯವರು ಪ್ರಕಟಿಸಿರುವ 'ಕಾವ್ಯಾನಂದ' ಹಾಗೂ 'ಸಹೃದಯ' ಇತ್ಯಾದಿಗಳಲ್ಲಿ ಪ್ರಕಟವಾಗಿ ಅವೆಲ್ಲವನ್ನೂ ಇಲ್ಲಿ ಉದ್ಧರಿಸುವುದು ಸಾಧ್ಯವಿಲ್ಲ. ಎಲ್ಲ ಹಿರಿಯರಿಗೆ, ಹಿತೈಷಿಗಳಿಗೆ ನನ್ನ ಕೃತಜ್ಞತೆಯ ಕಾಣಿಕೆ.

ಡಾ. ಹಾ.ಮಾ. ನಾಯಕರ ಮುನ್ನುಡಿ ಮುಗ್ಧನನ್ನಾಗಿ ಮಾಡಿದ್ದಿತು ನನ್ನನ್ನು; ೧೯೭೭ರ ಡಿಸೆಂಬರ್ ಕೊನೆಯ ದಿನ, ರಾಷ್ಟ್ರಕವಿ ಕುವೆಂಪು ಅವರ ಹುಟ್ಟುಹಬ್ಬದ ಹಿಗ್ಗಿನ ವಾತಾವರಣದಲ್ಲಿ 'ವಚನೋದ್ಯಾನ'ದ ಬಿಡುಗಡೆಯನ್ನು ಮಾಡುತ್ತ ಡಾ. ದೇ. ಜವರೇಗೌಡರು ಅದು ರಾಷ್ಟ್ರಮಟ್ಟದ ಪುರಸ್ಕಾರಕ್ಕೆ ತಕ್ಕುದಾದ ಕೃತಿಯೆಂದು ಸಾರಿದಾಗ ಮಂಕು ಆವರಿಸಿತ್ತು ನನ್ನನ್ನು. ಧಾರವಾಡದ 'ವಿದ್ಯಾವರ್ಧಕ ಸಂಘ'ವು 'ವಚನೋದ್ಯಾನ'ದ ಬಗ್ಗೆ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿದಾಗ ನನ್ನಲ್ಲಿ ನನಗೇ ನಂಬಿಕೆ ಅಂಕುರಿಸಿದಂತೆನಿಸಿತು; ಪುರಸ್ಕಾರಗಳ ಮೇಲೆ ಪುರಸ್ಕಾರಗಳು ಬಂದಾಗ. ನಾಡಿನುದ್ದಕ್ಕೂ ಸನ್ಮಾನ-ಸತ್ಕಾರ ಸಭೆಗಳ ಸುರಿಮಳೆ ಸುರಿದಾಗ, ಶ್ರೀ ಜಿ. ನಾರಾಯಣರೂ ಅವರ ಸಂಗಡಿಗರೂ ರಾಜ್ಯ ಮಟ್ಟದ ಅಭಿನಂದನ ಸಭೆಯನ್ನು ವಿಜೃಂಭಣೆಯಿಂದ ಜರುಗಿಸಿದಾಗ ಆ ನಂಬಿಕೆಯ ನೌಕೆಯ ಹೊಯ್ದಾಟ ಮುಗಿದುಹೋದ ಹಾಗೆನಿಸಿತು. ಕನ್ನಡ ತಾಯಿಯ ಕೃಪೆ ಎಷ್ಟು ಅಸೀಮವಾದುದು; ಕನ್ನಡಿಗರ ಕಕ್ಕುಲತೆ ಅದೆಷ್ಟು ಅಪಾರವಾದುದು! ಕನ್ನಡ ತಾಯಿಗೆ ನಮಸ್ಕಾರ; ಕನ್ನಡ ಕುಲಬಾಂಧವರಿಗೆ ನಮಸ್ಕಾರ!

ಈ ಹಿನ್ನೆಯಲ್ಲಿ ನೋಡಿದಾಗ 'ವಚನೋದ್ಯಾನ'ದಲ್ಲಿ ಸೇರಲು ಯೋಗ್ಯವಿಲ್ಲವೆಂದು ನಾನು ತೀರ್ಮಾನಿಸಿದ್ದ ವಚನಗಳಲ್ಲಿ ಕೆಲವಾದರೂ ಪ್ರಕಟನಾರ್ಹವೆಂದು ತೋರಿದ್ದುವು. ಅವುಗಳನ್ನು ಪ್ರಕಟಿಸದಿರುವುದೆಂದರೆ ಭ್ರೂಣಹತ್ಯೆಗೈದಂತೆ ಎಂದೆನಿಸತು. ಆದರೆ ಆವಿಷ್ಟನ್ನೇ ಒಂದು ಸಂಗ್ರಹವಾಗಿ ಪ್ರಕಟಿಸುವುದು ಹೇಗೆ? ಇನ್ನಷ್ಟು ವಚನಗಳ ರಚನೆ ಅನಿವಾರ್ಯವಲ್ಲವೆ? ಪ್ರೇರಣೆಯ ಸ್ರೋತಸ್ವಿನಿ ಇನ್ನೂ ಬತ್ತಿಲ್ಲವೆಂಬ ಭಾವನೆ ಬಲವಾಗಿರುವಾಗ ಹೊಸವನ್ನು ಬರೆಯಲು ಏಕೆ ಹಿಂದೆಗೆಯಬೇಕು? 'ವಚನೋದ್ಯಾನ'ಕ್ಕೆ ಜೊತೆಗಾರ್ತಿ ಬೇಡವೆ? ಅಭಿವ್ಯಕ್ತಿಗಾಗಿ ಕಾದು ಕುಳಿತಿರುವಾಗ ಅನುಭವಗಳು, ಅನಿಸಿಕೆಗಳು, ಅಭಿಪ್ರಾಯಗಳು, ಆಲೋಚನೆಗಳು ಇನ್ನೂ ಇರುವಾಗ ಬೇಸರಪಟ್ಟುಕೊಂಡು ಬರೆಯದಿರುವುದು ಉಚಿತವೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವಾಗಿ 'ವಚನ ನಂದನ' ಚಿಗಿತು ನಿಂತಿದೆ. ಈ ಹೆಸರನ್ನು ಸೂಚಿಸಿ ವಚನ ರಚನೆಯ ಮುಂದುವರಿಕೆಗೆ ಪ್ರೋತ್ಸಾಹವನ್ನಿತ್ತ ವರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರನ್ನಿಲ್ಲಿ ನೆನೆಯಬೇಕು.

ಇನ್ನೊಬ್ಬ ಹಿತಬಂಧು ವಿದ್ವದ್ವರೇಣ್ಯ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳವರು ಅಚ್ಚಿನ ಮನೆಗೆ ಕಳಿಸುವ ಮುನ್ನ ಇದರ ಹಸ್ತಪ್ರತಿಯನ್ನು ಅವಲೋಕಿಸಿ ಸೂಕ್ತ ಮಾರ್ಪಾಟುಗಳನ್ನು ಸೂಚಿಸಿದುದಲ್ಲದೆ ಇದಕ್ಕೊಂದು ಅಮೂಲ್ಯವಾದ ಮುನ್ನುಡಿಯನ್ನು ನೀಡಿ ಇದರ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವನ್ನೋದಿದ ನನಗೆ ವಚನ ರಚನೆಯನ್ನು ಮುಂದುವರೆಸಿ 'ವಚನ ನಂದನ'ವನ್ನು ಪ್ರಕಟಿಸಿರದಿದ್ದರೆ ಈ ಹೊನ್ನಿನ ಮುನ್ನುಡಿಗೆ ಎರವಾಗುತ್ತಿದ್ದೆನೆಂಬ ಭಾವನೆ ಉಂಟಾಯಿತು! ಕನ್ನಡ ಸಾಹಿತ್ಯದ ಬಗ್ಗೆ ಸಾಮಾನ್ಯವಾಗಿ, ವಚನ ಸಾಹಿತ್ಯದ ಬಗ್ಗೆ ವಿಶೇಷವಾಗಿ ಅಧಿಕಾರವಾಣಿಯಿಂದ ಬರೆಯಬಲ್ಲ ಈ ಸುಹೃದ್ವರರು 'ವಚನ ನಂದನ'ವನ್ನು ಇಷ್ಟೊಂದು ಮೆಚ್ಚಿಕೊಂಡಿರುವುದು ನನ್ನ ಭಾಗ್ಯ ವಿಶೇಷವೆಂದೇ ಭಾವಿಸಿದ್ದೇನೆ. ಅವರಿಗೆ ನನ್ನ ನೂರುಕೋಟಿ ನೆನಕೆಗಳು.

ಅರ್ಧಶತಮಾನದಿಂದ ಏನೇನನ್ನೋ ಬರೆಯುತ್ತಲೇ ಬಂದಿದ್ದೇನೆ. ಅದರಲ್ಲಿ ಯಾವುದು ಉಳಿವುದೋ ಯಾವುದು ಅಳಿವುದೋ ಅದರ ಗೊಡವೆ ನನಗೇಕೆ?

ವಾಯು ಗುಣವ ಸರ್ಪ ಬಲ್ಲುದು;
ಮಧುರ ಗುಣವನಿರುಹೆ ಬಲ್ಲುದು;
ಗೋತ್ರದ ಗುಣವ ಕಾಗೆ ಬಲ್ಲುದು;
ವೇಳೆಯ ಗುಣವ ಕೋಳಿ ಬಲ್ಲುದು;

ಎಂದು ಮಡಿವಾಳ ಮಾಚಿದೇವತಂದೆ ಹೇಳಿದ್ದಾರೆ. ಇದಕ್ಕೆ 'ಕೃತಿಯ ಗುಣವ ಗುಣಜ್ಞ ಸಹೃದಯ ಬಲ್ಲ' ಎಂಬ ವಾಕ್ಯವನ್ನು ಸೇರಿಸಬಹುದೇನೋ! ಕೃತಿ ಹುಟ್ಟಿದ ಕಾಲದ ಸಮಾನಧರ್ಮಿಗಳು ಆ ಕೃತಿಯನ್ನು ಓದಿ ಮೆಚ್ಚಿದರೆ ಸಾಕು. ಹಾಗೆ ನನ್ನ ಹಿಂದಿನ ಕೃತಿಗಳನ್ನು ಹಲವರು ಮೆಚ್ಚಿದ್ದಾರೆ. ಈ ಕೃತಿಯನ್ನೂ ಕೆಲವರಾದರೂ ಮೆಚ್ಚಿದರೆ ನನಗದೇ ಸಾಕು. ಇಂದಿನ ವಾಯುಮಂಡಲದಲ್ಲಿ ಅನೇಕ ವಿಚಾರಧಾರೆಗಳು ಮಿಂಚುತ್ತಿವೆ. ಹೊಸ ವಿಚಾರ

ಪ್ರಣಾಲಿಯಿದೆಂದು ಗುರುತಿಸಿ ಹೇಳುವಷ್ಟರಲ್ಲಿಯೇ ಅದು ಹಳೆಯದಾಗಿ ಹೊಸದೊಂದು ಅದರ ಸ್ಥಳವನ್ನು ಆಕ್ರಮಿಸಿರುತ್ತದೆ. ಹೀಗಾಗಿ, ಯಾವುದೋ ಒಂದು ವಿಚಾರಧಾರೆಯನ್ನು ಆಧರಿಸಿ ಬರೆದ ಕೃತಿ ಅದು ಅಚ್ಚಾಗುತ್ತಿರುವಂತೆ ಹಳೆಯದೆನಿಸಿಬಿಡುವ ಸಂಭವವುಂಟು. ಆದರೂ, ಪಾತ್ರೆಯೊಂದರಲ್ಲಿ ಉಳಿದೇ ಸಸಿ ಬೆಳೆಯುವಂತೆ, ಜೀವನದರ್ಶನವೊಂದರಲ್ಲಿ ಬೇರುಬಿಟ್ಟೇ ಕೃತಿಯೊಂದು ಮೈದಾಳಬೇಕಾಗುತ್ತದೆ. ಅದನ್ನು ಆ ದರ್ಶನದ ತಕ್ಕಡಿಯಲ್ಲಿಟ್ಟೇ ತೂಗುವುದು ನ್ಯಾಯವಾದುದು.

ನವೀನ ದರ್ಶನಗಳು ಅವಾಂಛನೀಯವೆಂದು ಇದರ ಅರ್ಥವಲ್ಲ. ಅವು ಸ್ಪೃಹಣೀಯವೇ. ಆದರೆ, ಆ ದರ್ಶನ ಈ ದರ್ಶನವೆಂಬ ವಾದ ವಿವಾದದಲ್ಲಿ ಸೃಜನ ಕ್ರಿಯೆಗೇ ಸಂಚಕಾರ ಬರಬಾರದು. ಸಿದ್ಧರಾಮೇಶ್ವರರ ಸೂಕ್ತಿಯೊಂದಿದೆ: 'ಭಕ್ತಿಯ ಬೆಳೆಸಿ ಹೇಳಿದೆನಲ್ಲದೆ ಭಕ್ತಿಯ ಮಾಡಿ ಬೆಳೆಯಲಿಲ್ಲ ನಾನು!' ಹೀಗೆ ಕೃತಿಕಾರನೂ 'ಕೃತಿಯ ಉದ್ದೇಶದ ಬಗ್ಗೆ ಉದ್ದುದ್ದ ಬರೆದೆನಾಗಲಿ, ಕೃತಿಯನ್ನೇ ರಚಿಸಲಿಲ್ಲ ನಾನು!' ಎನ್ನುವಂತಾಗಬಾರದು. ತಂತಮ್ಮ ಗರಡಿಯಲ್ಲಿ ಕಲಿತಂತೆ ಎಲ್ಲರೂ ಕುಸ್ತಿಯಾಡಬೇಕು. ಸಾಯುವ ತನಕ ಸಾಮು ತೆಗೆದು ಕುಸ್ತಿಯನ್ನೇ ಆಡದೆ ಹೋಗಬಾರದು.

ಸಾಮು ತೆಗೆಯುತ್ತ ಕುಸ್ತಿಯಾಡುತ್ತ ಬಂದಿದ್ದೇನೆ. ಇದರಲ್ಲಿ ಗೆದ್ದುದಕ್ಕಿಂತ ಬಿದ್ದುದೇ 'ಹೆಚ್ಚೆಂಬ ಅರಿವು ನನಗಿದೆ. ಆದರೆ, ಕುಸ್ತಿಯಿರುವುದು ಕುಸ್ತಿಗಾಗಿ, ಕುಸ್ತಿ ಕೊಡುವ ಖುಷಿಗಾಗಿ, ಕುಸ್ತಿಯಾಡಿದೆನೆಂಬ ಖುಷಿ ಸಾಲದೆ? ಗೆಲ್ಲಲಿಲ್ಲವೆಂಬ ಹಳಹಳಿಯೇಕೆ? ಸರಿಯಾಗಿ ಕುಸ್ತಿ ಆಡಿದೆನೋ ಇಲ್ಲವೋ ಎಂಬುದನ್ನು ನೋಡಿದವರು ಹೇಳಬೇಕು. ಸರಿಯಾಗಿ ಆಡಿರುವೆನೆಂದು ಹಲವರು ಹೇಳಿದ್ದಾರೆ. ನನಗದು ಸಾಕು. ನನ್ನಂಥವನಿಗೆ ಇನ್ನೇನು ಬೇಕು?

'ವಚನೋದ್ಯಾನ'ದ ಹಾಗೂ 'ವಚನ ನಂದನ'ದ ವಚನಾನುಕ್ರಮಣಿಕೆಗಳನ್ನು ಒಬ್ಬರೇ–ಉದಿತೋದಿತ ವಿದ್ವಾಂಸ, ಸಂಶೋಧಕ ಶ್ರೀ. ಹ.ನಂ. ವಿಜಯಕುಮಾರರು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರಿಗೆ ಆಜನ್ಮ ಆಭಾರಿ ನಾನು.

ಸಿದ್ಧಗಂಗೆಯ ಅಧ್ಯಾತ್ಮಜ್ಯೋತಿ, ವೈರಾಗ್ಯ, ತಪಸ್ಸು, ಜ್ಞಾನ, ಕಾಯಕ, ದಾಸೋಹಗಳ ಬೃಹನ್‌ಮೂರ್ತಿ, ಕರ್ನಾಟಕದ ಕೀರ್ತಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರಿಗೆ ಈ ಕೃತಿಯನ್ನು ಅರ್ಪಿಸಿದ್ದೇನೆ. ಅರ್ಪಿಸಲು ಅನುಮತಿಯಿತ್ತ ಅವರಿಗೆ ಅನಂತ ಪ್ರಣಾಮಗಳು.

'ಲೋಟಸ್ ಪ್ರಿಂಟರ್ಸ್' ಮುದ್ರಣಾಲಯದ ಒಡೆಯರಾದ ಶ್ರೀ ಪಾಟೀಲರು ನಾನಿತ್ತ ತೊಂದರೆಗಳನ್ನೆಲ್ಲ ತಾಳಿಕೊಂಡು 'ವಚನೋದ್ಯಾನ'ದಂತೆ 'ವಚನ ನಂದನ'ವನ್ನೂ ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಅವರಿಗೆ ಕೃತಜ್ಞನಾಗಿದ್ದೇನೆ.

'ವಚನೋದ್ಯಾನ'ದ ಪ್ರಕಟಣೆಗಾಗಿಯೇ ಅವರಸದಲ್ಲಿ ಉದಿಸಿದ್ದ 'ಶ್ರೀಗಿರಿ ಪ್ರಕಾಶನ' ಅದು ಪ್ರಕಟವಾಗುತ್ತಲೇ ಅಸ್ತವಾಗಿಬಿಡಬಹುದೆಂದು ಭಾವಿಸಿದ್ದೆ. ಆ ಲಾಂಛನದಡಿಯಲ್ಲಿ 'ವಚನ ನಂದನ'ವೂ ಬೆಳಕು ಕಂಡಿದೆ. ಮುಂದೆ? ಗೊತ್ತಿಲ್ಲ! ಒಂದೆಡೆಗೆ ಮೂರು ದಿನಗಳಲ್ಲಿ ಹನ್ನೆರಡು ಸನ್ಮಾನ ಸಮಾರಂಭಗಳು ಜರುಗಿದುವು ನನಗಾಗಿ. ಆದರೆ ಅಲ್ಲಿ ಇದ್ದುದು 'ವಚನೋದ್ಯಾನ'ದ ನಾಲ್ಕೈದು ಪ್ರತಿಗಳು ಮಾತ್ರ! ಅಭಿಮಾನದ ಅಭಿವ್ಯಕ್ತಿ ಈ ರೂಪದಲ್ಲಾಗದೆ ಕೃತಿಗಳನ್ನು ಕೊಳ್ಳುವುದರ ಮೂಲಕ ಆದರೆ 'ಶ್ರೀಗಿರಿ ಪ್ರಕಾಶನ' ಮುಂದುವರಿದೀತು. 'ವಚನೋದ್ಯಾನ'ಕ್ಕೆ ಬಂದ ಹದಿನೈದು ಸಾವಿರ ರೂಪಾಯಿಗಳ ಬಹುಮಾನ ಧನವನ್ನು 'ಶ್ರೀಗಿರಿ ಪ್ರಕಾಶನ'ಕ್ಕೆ ಸೇರಿಸಿದ್ದರೆ ಅದು ಸುಭದ್ರವಾಗಿ ಮುಂದುವರಿಯುತ್ತಿತ್ತು. ಆದರೆ ಆ ಧನವನ್ನೆಲ್ಲ ಕನ್ನಡ ಸಂಸ್ಥೆಗಳಿಗೆ ಕೊಟ್ಟುಬಿಟ್ಟೆ. ಆದರೂ, ಕೊಂಡು ಓದುವ ಓದುಗರು ಹೆಚ್ಚಿ ಇದು ಮುಂದುವರಿದೀತೆಂಬ ಆಸೆ ಇನ್ನೂ ಉಳಿದಿದೆ.

**– ಸಿದ್ಧಯ್ಯ ಪುರಾಣಿಕ**

೧೪–೫–೧೯೮೩

ಬಸವ ಜಯಂತಿ

### ವಚನರಾಮ

# ನನ್ನ ನಾಲ್ಕು ಮಾತು

ಎರಡು ದಶಕಗಳ ಆಚೆಗೆ ನಾನು ಮನಸ್ಸಿನಿಂದ ವಚನಗಳನ್ನು ಬರೆಯಲು ಆರಂಭಿಸಿದಾಗ ನೂರು ವಚನಗಳ ಗಡುವನ್ನಾದರೂ ಮುಟ್ಟುವೆನೋ ಇಲ್ಲವೋ ಎಂಬ ಶಂಕೆ ನನಗಿದ್ದಿತು. ಈ ಮೂರನೆಯ ವಚನ ಸಂಗ್ರಹ 'ವಚನಾರಾಮ'ದ ಪ್ರಕಟನೆಯೊಡನೆ ೧೫೦೦ ವಚನಗಳನ್ನು ಕನ್ನಡ ತಾಯಿಗೆ, ಕನ್ನಡಿಗರಿಗೆ ಅರ್ಪಿಸುವ ಧನ್ಯತೆ ನನ್ನದಾಗಿದೆ ಎನಿಸಿ ಎನ್ನ ಅಚ್ಚರಿ!

ಇವುಗಳಲ್ಲಿ ಯಾವ ಯಾವ ಅನುಭವ ಚಿಂತನಗಳು ಆಕಾರ ಪಡೆದಿವೆಯೋ ಅವೆಲ್ಲ ನನ್ನವಷ್ಟೇ ಅಲ್ಲ; ನಿಮ್ಮದು ಕೂಡ. ಅವುಗಳಿಗೆ ತಕ್ಕ ರೂಪ ಕೊಟ್ಟಿರುವೆನೆಂಬ ನಂಬಿಕೆಯೂ ನನಗಿಲ್ಲ. ವಸ್ತು ವೈವಿಧ್ಯ ಸಾಧಿಸಿರುವಷ್ಟು ಅಭಿವ್ಯಕ್ತಿ ವೈಖರಿ ಸಾಧಿಸಿಲ್ಲ.

ಹೀಗಿದ್ದೂ ಹಿರಿಯ ಸಾಹಿತಿಗಳೂ, ಹೆಸರಾಂತ ವಿಮರ್ಶಕರೂ ಆದ ಡಾ. ಸಿ.ಪಿ.ಕೆ. ಅವರು ಇವುಗಳ ಬಗ್ಗೆ ತುಂಬ ಮೆಚ್ಚಿಗೆಯ ಮಾತುಗಳನ್ನು ಬರೆದಿದ್ದಾರೆ ಮುನ್ನುಡಿಯಲ್ಲಿ. ಈ ವಚನಗಳನ್ನು ಬರೆದು ನಾನು ಪಡೆದ ಭಾಗ್ಯವೆಂದರೆ 'ವಚನೋದ್ಯಾನ'ಕ್ಕೆ ಡಾ. ಹಾ.ಮಾ. ನಾಯಕರು ಬರೆದ ಮುನ್ನುಡಿ, 'ವಚನ ನಂದನ'ಕ್ಕೆ ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು ಬರೆದ ಮುನ್ನುಡಿ, ಈ ಸಂಗ್ರಹಕ್ಕೆ ಡಾ. ಸಿ.ಪಿ. ಕೃಷ್ಣಕುಮಾರರು ಬರೆದ ಮುನ್ನುಡಿ– ಈ ಮೂರು ಮುನ್ನುಡಿಗಳು. ಡಾ. ಸಿ.ಪಿ.ಕೆ. ಅವರು ಮುನ್ನುಡಿ ಕೊಟ್ಟು ತಿಂಗಳುಗಳೇ ಕಳೆದಿವೆ. 'ಶ್ರೀಗಿರಿ ಪ್ರಕಾಶನ'ದಲ್ಲಿ ಇದನ್ನು ಪ್ರಕಟಿಸಲು ಆಗದೆ ಪ್ರಕಟಣೆಯಲ್ಲಿ ತಡವಾಗಿದೆ. ಈ ವಿಲಂಬಕ್ಕಾಗಿ ಕ್ಷಮೆ ಕೋರುತ್ತೇನೆ.

ಪ್ರಕಟನೆಯ ಬಗ್ಗೆ ಏನು ಮಾಡುವುದೆಂಬ ಯೋಚನೆಯಲ್ಲಿದ್ದಾಗ ಡಾ. ಬಸವರಾಜ ಮಲಶೆಟ್ಟಿಯವರ ಆಗಮನವಾಯಿತು, 'ಶ್ರೀಗಿರಿ'ಗೆ. ಅವರೇ ಸ್ವಪ್ರೇರಣೆಯಿಂದ ಪ್ರಕಟನೆಗೆ ಕರ್ನಾಟಕ ಧಾರ್ಮಿಕ ಕ್ಷಿತಿಜದ ಹೊಸ ಉಜ್ವಲ ನಕ್ಷತ್ರ ಜಗದ್ಗುರು ಶ್ರೀ ಸಂಗನಬಸವ ಮಹಾಸ್ವಾಮಿಗಳು, ಕೊಟ್ಟೂರು–ಬಳ್ಳಾರಿ–ಹೇಮಕೂಟ ಪೀಠಾಧಿಪತಿಗಳು ಅವರನ್ನು ಒಪ್ಪಿಸುವುದಾಗಿ ಹೇಳಿ ಹೋದರು. ಈಚೆಗೆ ನನ್ನ ಮೊದಲ ಒಲವಿನ ಮಠ ಹಾಲಕೆರೆಯ ಅನ್ನದಾನೀಶ್ವರ ಮಠದ ಅಧಿಪತಿಗಳೂ ಆಗಿರುವ ಈ ಸಾಹಿತ್ಯ ಪ್ರೇಮಿ ಜಗದ್ಗುರುವರ್ಯರು ಇದನ್ನು ಪ್ರಕಟಿಸಲು ಒಪ್ಪಿದುದು ನನ್ನ ಭಾಗ್ಯ. ಅವರ ಅಡಿದಾವರೆಗಳಿಗೆ ನನ್ನ ಅನಂತ ಪ್ರಣಾಮಗಳು.

ಇದರ ಕರಡು ತಿದ್ದುವ ಕೆಲಸವನ್ನು ಸಂತೋಷದಿಂದ ಸ್ವೀಕರಿಸಿದ ಡಾ. ಬಸವರಾಜ ಮಲಶೆಟ್ಟಿ ಅವರಿಗೂ, ಹೆಸರಿಗೆ ತಕ್ಕಂತೆ ತ್ವರಿತಗತಿಯಲ್ಲಿ ಮುದ್ದಾಗಿ ಮುದ್ರಿಸಿಕೊಟ್ಟ ಗದುಗಿನ 'ತ್ವರಿತ ಮುದ್ರಣಾಲಯ'ದ ಒಡೆಯರಿಗೂ ವಂದನೆಗಳು. ನನ್ನ ವಚನಗಳನ್ನು ಮೆಚ್ಚಿರುವ ವಾಚಕರಿಗೆ, ವಿಮರ್ಶಕರಿಗೆ ನಮನಗಳು.

**– ಸಿದ್ಧಯ್ಯ ಪುರಾಣಿಕ**

೧೬–೬–೧೯೯೨

'ಶ್ರೀಗಿರಿ' ೪/೫ ಅ.

ಅಲಿಆಸ್ಕರ್ ರಸ್ತೆ

ಬೆಂಗಳೂರು – ೫೬೦ ೦೫೨

# ಅನುಬಂಧ ೪

# ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ

| ಇಸವಿ | ಘಟನೆಗಳು |
|---|---|
| ೧೯೧೮ | ಜನನ, ೧೮.೬.೧೯೧೮, ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕು, ದ್ಯಾಂಪುರದಲ್ಲಿ ತಂದೆ ಕಲ್ಲಿನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು. |
| ೧೯೩೨ | 'ಬೆಳಗು' ಕವನ ರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಅಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ್ |
| ೧೯೪೪ | ವಿವಾಹ (೧೧.೫.೧೯೪೪)ರಲ್ಲಿ ವಿವಾಹ, ಗಿರಿಜಾದೇವಿಯ ವರೊಡನೆ |
| ೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ್ ವಿಭಾಗ, ಗುಲಬರ್ಗಾ |
| ೧೯೪೮ | ಅಸಿಸ್ಟೆಂಟ್ ಕಮಿಷನರ್ (ಜಾಗೀರಾತ್) |
| ೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೧೯೫೩ | ಕೃಷಿ ಯೋಜನೆ ಹಾಗು ಪೂರೈಕೆ ಇಲಾಖೆಯ ಸಚಿವರ, ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರ |
| ೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.) |
| ೧೯೬೦ | ವಿದ್ಯಾಇಲಾಖೆಯ ಡೆಪ್ಯೂಟಿ ಸೆಕ್ರೆಟರಿ |
| ೧೯೬೨ | ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ |
| ೧೯೬೪ | ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ |

೧೯೬೫ ಡೆಪ್ಯೂಟಿ ಕಮಿಷನರ್, ಮಡಿಕೇರಿ

೧೯೬೭ ಸಾರಿಗೆ ಕಮಿಷನರ್, ಬೆಂಗಳೂರು

೧೯೭೦ ಡೆಪ್ಯೂಟಿ ಕಮಿಷನರ್, ಬೆಳಗಾವಿ

೧೯೭೨ ಲೇಬರ್ ಕಮಿಷನರ್, ಬೆಂಗಳೂರು

೧೯೭೪ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೫ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ

೧೯೭೬ ನಿವೃತ್ತಿ ಹಾಗೂ ವಿಶ್ರಾಂತಿ ಜೀವನ

೧೯೭೮ 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ
ಅತ್ಯುತ್ತಮ ಪುಸ್ತಕ ಪುರಸ್ಕಾರ

೧೯೭೯ ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ
ವಿಭಾಗದ ನಿರ್ದೇಶಕ; ಬಸವ ಪಥ (ಕನ್ನಡ ಮಾಸಿಕ),
ಬಸವ ಜರ್ನಲ್ (ಇಂಗ್ಲೀಷ್ ತ್ರೈಮಾಸಿಕ) ಪತ್ರಿಕೆಗಳ
ಪ್ರಧಾನ ಸಂಪಾದಕ.

೧೯೮೦ ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ)
'ವಚನೋದ್ಯಾನ' ಕೃತಿಗೆ

೧೯೮೧ ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ)

೧೯೮೧ ರಾಜ್ಯಮಟ್ಟದ ಅಭಿನಂದನಾ ಸಮಿತಿಯ ಸತ್ಕಾರ,
ಅಭಿನಂದನಾ ಗ್ರಂಥ, ನಿಧಿ ಸಮರ್ಪಣೆ

೧೯೮೩ 'ವಚನ ನಂದನ' ಪ್ರಕಟಣೆ

೧೯೮೫ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ)ದ
ಅಧ್ಯಕ್ಷರು

೧೯೮೭ ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ
ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

೧೯೯೪ 'ವಚನ ಬ್ರಹ್ಮ' ಬಿರುದು–ಕಲಾಜ್ಯೋಗಿ ಸ್ನೇಹಿತರ ಸಂಘ
ಹಾಗೂ ಸರ್ವಜ್ಞ ಕಲಾನಿಕೇತನ, ಬೆಂಗಳೂರು

೧೯೯೪ ಮರಣ (೫.೯.೧೯೯೪)

# ಅನುಬಂಧ ೫

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯಸೂಚಿ

**ಕವನ ಸಂಕಲನಗಳು**

| | | | |
|---|---|---|---|
| ೧. | ಜಲಪಾತ | ಸಂಗಡಿಗರ ಸಮಿತಿ, | |
| | | ರಾಯಚೂರು | ೧೯೫೩, ೬೪ |
| ೨. | ಕರುಣಾಶ್ರಾವಣ | ಸಹಜೀವನ ಪ್ರಕಾಶನ, | |
| | | ಕಾಚೀಗೂಡಾ | ೧೯೫೫, ೬೭ |
| | | ಹೈದರಾಬಾದ್ ದಕ್ಷಿಣ | |
| | | ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, | |
| | | ಕೃಷ್ಣಮೂರ್ತಿ ಪುರಂ, | |
| | | ಮೈಸೂರು–೪ | |
| ೩. | ಮಾನಸಸರೋವರ | ಶಾರದಾ ಪ್ರಕಟನಾಲಯ, | ೧೯೫೯ |
| | | ಬೆಂಗಳೂರು | |
| ೪. | ಕಲ್ಲೋಲ ಮಾಲೆ | ತಾರಾಗ್ರಂಥ ಪ್ರಕಾಶನ, | |
| | | ಧಾರವಾಡ | ೧೯೬೮ |
| ೫. | ಮೊದಲು | ತಾರಾಗ್ರಂಥ ಪ್ರಕಾಶನ, | |
| | ಮಾನವನಾಗು | ಧಾರವಾಡ | ೧೯೬೯ |
| ೬. | ಚರಗ | ಶ್ರೀಗಿರಿ ಪ್ರಕಾಶನ, ಕುಡಿ–೩ | ೧೯೮೭ |
| ೭. | ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. | ಮರುಳಸಿದ್ಧನ | ಶ್ರೀಗಿರಿ ಪ್ರಕಾಶನ | ೧೯೯೧ |
| | ಕಂತೆ | ಬೆಂಗಳೂರು, ಕುಡಿ–೭ | ೧೯೭೭ |
| ೯. | ಸಮಗ್ರ ಕಾವ್ಯ | ಶ್ರೀಗಿರಿ ಪ್ರಕಾಶನ, | ೨೦೦೮ |
| | | ಬೆಂಗಳೂರು | |

**ವಚನ ಸಂಗ್ರಹಗಳು:**

| | | | |
|---|---|---|---|
| ೧. | ವಚನೋದ್ಯಾನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೭೭, ೨೦೦೦ ೨೦೧೦, ೨೦೧೮ |
| ೨. | ವಚನ ನಂದನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೩, ೨೦೦೦ |
| ೩. | ವಚನಾರಾಮ | ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ | ೧೯೯೨ |
| ೪. | ಸಮಗ್ರ ವಚನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೦೯ |

**ನಾಟಕಗಳು:**

| | | | |
|---|---|---|---|
| ೧. | ಆತ್ಮಾರ್ಪಣ | ಹೈದರಾಬಾದು ವೀರಶೈವ ತರುಣ ಸಂಘ | ೧೯೪೨ |
| ೨. | ಭಾರತ ವೀರ | ನರೇಶ್ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು–೧೯ | ೧೯೬೩ ೬೪, ೬೭ |
| ೩. | ರಜತ ರೇಖೆ | ಶ್ರೀ ಎಂ. ಬಿ. ತರುಮರಿ ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ | ೧೯೬೨ ೬೫ |
| ೪. | ಭಗ್ನ ನೂಪುರ | ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ೨ನೇ ಹಂತ ಬೆಂಗಳೂರು–೭೦ | ೧೯೮೪ |
| ೫. | ಸಮಗ್ರ ನಾಟಕಗಳು | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೧೦ |

**ಕಥಾ ಸಂಕಲನಗಳು:**

| | | | |
|---|---|---|---|
| ೧. | ಕಥಾಮಂಜರಿ | ಸತ್ಯಾಶ್ರಯ ಪ್ರಕಾಶನ | |
| | | ಮಂದಿರ ಹೈದ್ರಾಬಾದ್ | ೧೯೫೧ |
| ೨. | ತುಷಾರ ಹಾರ | ಶ್ರೀಗಿರಿ ಪ್ರಕಾಶನ, ಬೆಂ. | ೧೯೮೭ |

**ಕಾದಂಬರಿ:**

| | | | |
|---|---|---|---|
| ೧. | ತ್ರಿಭುವನ ಮಲ್ಲ | ಗುರು ಕುಮಾರಿ ಪ್ರಕಾಶನ, | ೧೯೬೪ |
| | | ೨೨೨೪ ಬಸವೇಶ್ವರ, | ೧೯೮೧ |
| | | ನಾಲ್ಕನೇ ಅಡ್ಡರಸ್ತೆ | ೧೯೮೫ |
| | | ಮೈಸೂರು–೫೭೦ ೦೦೪ | |

**ಮಕ್ಕಳ ಸಾಹಿತ್ಯ:**

| | | | |
|---|---|---|---|
| ೧. | ತುಪ್ಪಾ ರೊಟ್ಟಿಕ | ’ರ್ನಾಟಕ ಸಹಕಾರಿ | |
| | ಗೇ ಗೇಗೇ | ಪ್ರಕಾಶನ ಮಂದಿರ | ೧೯೬೪, ೭೩ |
| ೨. | ಗಿಲ್ ಗಿಲ್ | ಭಾರತೀ ಸಾಹಿತ್ಯ | |
| | ಗಿಲಗಚ್ಚಿ | ಭಂಡಾರ, ವಿಜಾಪೂರ | ೧೯೭೮ |
| ೩. | ತಿರುಗೆಲೆತಿರುಗೆಲೆ | ಭಾರತೀ ಸಾಹಿತ್ಯ ಭಂಡಾರ, | |
| | ತಿರುಗುಯ್ಯಾಲೆ | ವಿಜಾಪೂರ | ೧೯೮೧, ೧೯೮೯ |
| ೪. | ಬಣ್ಣ ಬಣ್ಣದ | ನಿರ್ಮಲ ಪ್ರಕಾಶನ, | |
| | ಓಕುಳಿ | ರಾಮಲಕ್ಷ್ಮಣ ನಿಲಯ, | ೧೯೮೭ |
| | | ಕೆ.ಆರ್. ಬಡಾವಣೆ, ತಿಪಟೂರು | |
| ೫. | ಭಾರತವೆಲಕೆ | ಶ್ರೀಗಿರಿ ಪ್ರಕಾಶನ, | |
| | ಬಾವುಟವೊಂದೇ | ಬೆಂಗಳೂರು, ಕುಡಿ–೭ | ೧೯೯೧ |
| ೬. | ಸಮಗ್ರ ಮಕ್ಕಳ | ಶ್ರೀಗಿರಿ ಪ್ರಕಾಶನ | ೨೦೧೬ |
| | ಸಾಹಿತ್ಯ | ಬೆಂಗಳೂರು | |

| | | | |
|---|---|---|---|
| ೭. | ಮಕ್ಕಳ ಹಾಡುಗಳು | ಹೇಮಂತ ಸಾಹಿತ್ಯ ಬೆಂಗಳೂರು | ೨೦೧೮ |

**ಮಕ್ಕಳ ನಾಟಕ:**

| | | | |
|---|---|---|---|
| ೧. | ನ್ಯಾಯ ನಿರ್ಣಯ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೬ |

**ಮಕ್ಕಳ ಪ್ರವಾಸ ಸಾಹಿತ್ಯ**

| | | | |
|---|---|---|---|
| ೧. | ಮಕ್ಕಳ ಲೋಕ ಸಂಚಾರ | ಭಾರತೀ ಸಾಹಿತ್ಯ ಭಂಡಾರ ವಿಜಾಪುರ | ೧೯೮೯ |

**ಜೀವನ ಚರಿತ್ರೆಗಳು:**

| | | | |
|---|---|---|---|
| ೧. | ಶರಣ ಚರಿತಾಮೃತ | ವಯಸ್ಕರ ಶಿಕ್ಷಣ ಸಮಿತಿ, ಮೈಸೂರು | ೧೯೬೪ ೭೭, ೯೨ |
| | | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ೨೦೧೦ ೨೦೧೩ |
| ೨. | ಸಿದ್ಧರಾಮ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೪ |
| ೩. | ಬಸವಣ್ಣನವರ ಜೀವನ ಹಾಗೂ ಸಂದೇಶ | ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ೪. | ನಜೀರ್ ಅಕಬರಾಬಾದಿ | ಸಾಹಿತ್ಯ ಆಕಾಡೆಮಿ, ನವದೆಹಲಿ | ೧೯೭೮ |
| ೫. | ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |
| ೬. | ಮಿರ್ಜಾ ಗಾಲಿಬ್ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೯ |

| | | | |
|---|---|---|---|
| ೭. | ಮಹಾದೇವಿ | ಕರ್ನಾಟಕ ವಿಶ್ವವಿದ್ಯಾಲಯ,<br>ಧಾರವಾಡ | ೧೯೮೨<br>೨೦೦೩ |
| ೮. | ಅಲ್ಲಮ ಪ್ರಭು | ಬಸವ ಸಮಿತಿ, ಬೆಂಗಳೂರು–೧ | ೧೯೮೯ |

**ಸಂಪಾದಿತ ಕೃತಿಗಳು:**

| | | | |
|---|---|---|---|
| ೧. | ಸುಬೋಧ ಸಾರ | | ೧೯೩೬, ೫೧ |
| ೨. | ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ,<br>ಹೈದರಾಬಾದ್ | ೧೯೫೪ |
| ೩. | ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ<br>ಹೈದರಾಬಾದ್ | ೧೯೫೪ |
| ೪. | ಪದ್ಯ ರತ್ನಾಕರ | | |
| ೫. | ಮಹಾತ್ಮ ಕನಕದಾಸರ ಪ್ರಶಸ್ತಿ | ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. | ಶರಣ ಪ್ರಸಾದ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. | ಸಿದ್ಧಗಂಗಾ ಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನಾ ಗ್ರಂಥ ಸಮಿತಿ | ೧೯೮೧ |
| ೮. | ಮಣಿಹ | ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. | ಬಸವದರ್ಶನ (ಹಿಂದಿ) | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |
| ೧೦ | ಬಸವ ಮತ್ತು ದಲಿತೋದಯ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತಬೆಂಗಳೂರು. | ೧೯೮೩ |

| | | | |
|---|---|---|---|
| ೧೧ | ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು | ೧೯೮೪ |
| ೧೨ | ಮಳೆಯರಾಜ ಚಾರಿತ್ರ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೯ |

**ಇತರ ಕೃತಿಗಳು:**

| | | | |
|---|---|---|---|
| ೧. | ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ್ | ೧೯೫೫ |
| ೨. | ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ ೧೯೮೨ | |
| ೩. | ಚಿಂತನ ಲಹರಿ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ಕುಡಿ–೫ | ೧೯೮೯ |
| ೪. | ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | ೧೯೯೨ |

**ಆಯ್ದ ಕವನಗಳು**

| | | | |
|---|---|---|---|
| ೧ | ಕಾವ್ಯಾನಂದರ ಆಯ್ದ ಕವನಗಳು | ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು | ೧೯೮೨ |
| ೨. | ಆಯ್ದ ಕವನಗಳು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು) | ೧೯೮೨ |
| ೩. | ಕಾವ್ಯಾನಂದರ ಕವಿತೆಗಳು | ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು | ೨೦೦೧ |

# ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

| | | |
|---|---|---|
| ೧. ಕಾವ್ಯಶ್ರೀ ಕಾವ್ಯಾನಂದ | ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ ಬಿಜಾಪೂರ | ೧೯೬೯ |
| ೨. ಜೀವನ ವಿಕಾಸ ವಿಶೇಷ ಸಂಚಿಕೆ | ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ, ಕಲಬುರ್ಗಿ, ಸಂಪುಟ೬, ಸಂಚಿಕೆ ೮-೯ | ೧೯೭೩ |
| ೩. ಕಾವ್ಯಾನಂದ | ಮಿರ್ಜಿ ಅಣ್ಣಾರಾಯ, ಕೃಷ್ಣ ಕೊಲ್ಹಾರ ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ | ೧೯೭೩ |
| ೪. ಕಾವ್ಯಾನಂದ | ಸಾ.ಶಿ. ಮರುಳಯ್ಯ, ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ, ಬೆಂಗಳೂರು-೧೮ | ೧೯೮೧ |
| ೫. ಸಹೃದಯ | ಟಿ.ಆರ್. ಮಹದೇವಯ್ಯ, ಪುರಾಣಿಕರ ಅಭಿನಂದನಾ ಸಮಿತಿ, ಬೆಂಗಳೂರು-೧೮ | ೧೯೮೧ |
| ೬. ಸಾಹಿತಿಗಳ ಸಂಗದಲ್ಲಿ | ಲೇ : ದೇಜಗೌ | ೧೯೮೧ |
| ೭. ಕಾವ್ಯಾನಂದರ ಕಾವ್ಯ | ವೃಷಭೇಂದ್ರ ಅರ್ಕಸಾಲಿ, ಸಂಕ್ರಮಣ ಪ್ರಕಾಶನ, ಧಾರವಾಡ | ೧೯೮೭ |
| ೮. ಸಿದ್ಧಯ್ಯ ಪುರಾಣಿಕ | ಜಿ.ಎಸ್. ಸಿದ್ಧಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ | ೧೯೯೫ |
| ೯. ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು | ಎನ್.ಬಿ. ಬುಳ್ಳಾ, ಜ್ಯೋತಿಶ್ರೀ ಪ್ರಕಾಶನ, ಮಾಣಿಕೇಶ್ವರಿ ನಗರ, ಗುಲಬರ್ಗಾ | ೧೯೯೯ |
| ೧೦.ಕಾವ್ಯಾನಂದ | ಡಾ. ಚೆನ್ನಬಸವ ಹಿರೇಮಠ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬ | ೨೦೦೫ |
| ೧೧.ಕಾವ್ಯಾನಂದರ ಬದುಕು ಮತ್ತು ಕಾವ್ಯ | ಡಾ. ಪ್ರಕಾಶಗಿರಿ ಮಲ್ಲನವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು | ೨೦೧೮ |

# ಅನುಬಂಧ ೬

ಕಲ್ಕತ್ತಾದ ಭಾರತೀಯ ಭಾಷಾ ಪರಿಷದ್
ಅವರಿಂದ 'ವಚನೋದ್ಯಾನ' ಕೃತಿಗೆ ಗೌರವ ಪ್ರಶಸ್ತಿ

भारतीय भाषा परिषद
कलकत्ता

भारतीय भाषा परिषद

द्वारा

एम. ई. जी. पुरस्कार-१९८०

१९७७-७८ में प्रकाशित कन्नड़ की

श्रेष्ठ साहित्यिक कृति

'वचनोद्यान'

पर

श्री सिद्धैया पुराणिक

को

सादर प्रदत्त।

२६, दिसम्बर, १९८०



ಭಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು, ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ ೧೯೮೦ರಲ್ಲಿ.